ವಿಜ್ಞಾನಭಿಕ್ಷು ವಿರಚಿತ

ಸಾಂಖ್ಯಪ್ರವಚನಭಾಷ್ಯ

ಅನುವಾದಕರು

ಪ್ರೊ. ಸಿ. ರಾಮನಾಥನ್

ಪ್ರಸಾರಾಂಗ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಚಾಮರಾಜಪೇಟೆ, ಬೆಂಗಳೂರು–560018

ಪ್ರೊ. ಸಿ. ರಾಮನಾಥನ್

ಪ್ರೊ. ಸಿ. ರಾಮನಾಥನ್ ಅವರು ಮೈಸೂರು ವಿಶ್ವವಿದ್ಯಾಲಯದ ಎಂ.ಎ. (ಸಂಸ್ಕೃತ) ಪದವೀಧರರು. ಬೆಂಗಳೂರಿನ ಎ.ಪಿ.ಎಸ್. ಕಾಲೇಜಿನ ಸಂಸ್ಕೃತ ವಿಭಾಗದಲ್ಲಿ 32 ವರ್ಷ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. 1986–91ರ ವರೆಗೆ ಎ.ಪಿ.ಎಸ್. ಕಾಲೇಜಿನ ಹಾಗೂ 1991–93ರ ವರೆಗೆ ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದಾರೆ.

ಅವರು ಸಂಪಾದಿಸಿದ ಎರಡು ಗ್ರಂಥಗಳನ್ನು (ರಘುವಂಶ VIನೇ ಸರ್ಗ, ರಘುವಂಶ XIVನೇ ಸರ್ಗ) ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಿಸಿದೆ. ರಘುವಂಶ XIVನೇ ಸರ್ಗ ಬೆಂಗಳೂರು ವಿಶ್ವವಿದ್ಯಾಲಯದ ಪಠ್ಯಪುಸ್ತಕವಾಗಿತ್ತು.

ಭಾರತ ಸರ್ಕಾರದ 'ಭಾರತೀಯ ವಿಜ್ಞಾನ, ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿಯ ಇತಿಹಾಸ'ದ ಯೋಜನೆಯಲ್ಲಿ ಸಹಾಯಕ ಸಂಶೋಧಕರಾಗಿ ಏಳು ವರ್ಷ ಕಾರ್ಯ ಮಾಡಿದ್ದಾರೆ.

ತಿರುಪತಿ ಸಂಸ್ಕೃತ ವಿಶ್ವವಿದ್ಯಾಲಯವು ಕೈಗೊಂಡ 'ವಾಲ್ಮೀಕಿ ರಾಮಾಯಣ ಭಾಷಾಂತರ' ಯೋಜನೆಯಲ್ಲಿ 'ಕತಕ' ಎಂಬ ವ್ಯಾಖ್ಯಾನವನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಅವರು ಬರೆದಿರುವ ವಿದ್ವತ್ಪೂರ್ಣ ಲೇಖನಗಳು ಪ್ರತಿಷ್ಠಿತ ಗ್ರಂಥಗಳಲ್ಲಿ ಪ್ರಕಟವಾಗಿವೆ.

1984ರಲ್ಲಿ ಅಮೆರಿಕದಲ್ಲಿ ನಡೆದ 'ವಿಶ್ವ ಸಂಸ್ಕೃತ ಸಮ್ಮೇಳನ'ದಲ್ಲಿ ಇವರು ಪಾಲ್ಗೊಂಡಿದ್ದರು.

ವಿಜ್ಞಾನಭಿಕ್ಷು ವಿರಚಿತ

ಸಾಂಖ್ಯಪ್ರವಚನಭಾಷ್ಯ

ಅನುವಾದಕರು

ಪ್ರೊ. ಸಿ. ರಾಮನಾಥನ್

ಪ್ರಸಾರಾಂಗ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಚಾಮರಾಜಪೇಟೆ, ಬೆಂಗಳೂರು–560018

SAANKHYAPRAVACHANABHAASHYA of VIGNANABHIKSHU: Translated into Kannada by **Prof. C. Ramanathan,** # 1861, 32nd Cross, 10th Main, Banashankari 2nd Stage, Bengaluru - 560070. Ph: 080-26716053. First Impression: 2015; Pages: xxviii + 548 = **576**; Paper Used: 80 GSM Maplitho; Price: **425/-** ©: Publisher. ISBN: **978-81-929165-5-2.**

Published By: **PRASARANGA, KARNATAKA SAMSKRIT UNIVERSITY,**
Pampa Mahakavi Road, Chamarajapet,
Bengaluru-560018. Ph: 080-26701303
Website: www.ksu.ac.in;
email: karnatakasanskrituniversity@gmail.com

ವಿಜ್ಞಾನಭಿಕ್ಷು ವಿರಚಿತ ಸಾಂಖ್ಯಪ್ರವಚನ ಭಾಷ್ಯ

ಕನ್ನಡ ಅನುವಾದ: **ಪ್ರೊ. ಸಿ. ರಾಮನಾಥನ್,** # ೧೮೬೧, ೩೨ನೇ ಅಡ್ಡರಸ್ತೆ, ೧೦ನೇ ಮುಖ್ಯರಸ್ತೆ,
ಬನಶಂಕರಿ ೨ನೇ ಹಂತ, ಬೆಂಗಳೂರು – ೫೬೦೦೭೦.
ದೂ.: ೦೮೦–೨೬೭೧೬೦೫೩.

ಪ್ರಕಾಶಕರು: **ಪ್ರಸಾರಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮. ದೂ: ೦೮೦–೨೬೭೦೧೩೦೩.

ನಿರ್ವಹಣೆ: **ಡಾ. ಸಂತೋಷ ಸು. ಹಾನಗಲ್ಲ,** ಉಪ ನಿರ್ದೇಶಕರು
ಡಾ. ಬಿ. ಗೋವಿಂದ, ಸಹಾಯಕ ನಿರ್ದೇಶಕರು

ಮೊದಲ ಮುದ್ರಣ : ೨೦೧೫ ಪ್ರತಿಗಳು : ೫೦೦
ಹಕ್ಕುಗಳು : ಪ್ರಕಾಶಕರದ್ದು
ಪುಟ : xxviii + ೫೪೮ = **೫೭೬**
ಬೆಲೆ : **ರೂ. ೪೨೫/–**
ಐಎಸ್‌ಬಿಎನ್ : **978-81-929165-5-2**
ಕಾಗದ : ೮೦ ಜಿಎಸ್‌ಎಂ ಮ್ಯಾಪ್ಲಿಥೊ
ಮುಖಪುಟ ವಿನ್ಯಾಸ : ಸುನಿಲ್‌ಕುಮಾರ್
ಡಿ.ಟಿ.ಪಿ. : **ಶ್ರೀಮತಿ ಎಂ.ಡಿ. ಶೈಲಜಾ,** ಉದಯ ಗ್ರಾಫಿಕ್ಸ್, ಬೆಂಗಳೂರು–೧೦.
ಮುದ್ರಣ : **ಸತ್ಯಶ್ರೀ ಪ್ರಿಂಟರ್ಸ್ ಪ್ರೈ.ಲಿ.,** ಕಸ್ತೂರಬಾ ನಗರ, ಬೆಂಗಳೂರು–೨೬.

ಅಧಿಕೃತ ಮಾರಾಟಗಾರರು:

ದರೇಸ ಪಬ್ಲಿಕೇಷನ್ಸ್

೩೬, ೩ನೇ ಮಹಡಿ, ರೆವೆ ಪೊಬ್ಬತ್ತಿ ಬಿಲ್ಡಿಂಗ್, ಸೌತ್ ಎಂಡ್ ರಸ್ತೆ,
ಬಸವನಗುಡಿ, ಬೆಂಗಳೂರು – ೫೬೦೦೦೪. ದೂ: ೦೮೦–೪೩೯೭೦೦೦೦

ಕುಲಪತಿಗಳ ಮಾತು

ಜ್ಞಾನಧಾರೆಯ ರಕ್ಷಣೆ ಮಾತ್ರವಲ್ಲ; ಹೊಸ ಹೊಸ ಜ್ಞಾನಶಾಖೆಗಳ ಉತ್ಪಾದನೆಯೂ ವಿಶ್ವವಿದ್ಯಾಲಯಗಳ ಕರ್ತವ್ಯ. ಸಂಸ್ಕೃತ ಭಾಷೆಯ ಜ್ಞಾನಧಾರೆಯ ಸ್ರೋತದಲ್ಲಿ ಪ್ರಾಚೀನ ಜ್ಞಾನಶಾಖೆಗಳ ಜೊತೆಗೆ ಆಧುನಿಕ ಜ್ಞಾನ–ವಿಜ್ಞಾನಗಳ ಶಾಖೆಗಳನ್ನು ಬೆರೆಸಿ ಹೊಸ ಜ್ಞಾನ ಮಾರ್ಗಗಳನ್ನು ಕಂಡುಕೊಳ್ಳುವ ದಿಕ್ಕಿನತ್ತ ನಮ್ಮ ಪ್ರಯಾಸ. ಅಂತಃಶಾಸ್ತ್ರೀಯ ಅಧ್ಯಯನ–ಸಂಶೋಧನೆಗಳ ಮೂಲಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಕಾರ್ಯವನ್ನು ಮಾಡುತ್ತಿದೆ. ಅದರಲ್ಲೂ ಪ್ರಕಟಣೆಗಳ ಮೂಲಕ ಸಾಮಾನ್ಯ ಜನತೆ ಮತ್ತು ವಿದ್ವಲ್ಲೋಕಗಳಲ್ಲಿ ತನ್ನ ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಕನ್ನಡದಲ್ಲಿ ಶಾಸ್ತ್ರೀಯಗ್ರಂಥಗಳ ಅನುವಾದಗಳನ್ನು ಪ್ರಕಟಿಸುವ ಉದ್ದೇಶದಿಂದ ಒಂದು ಗ್ರಂಥಮಾಲೆಯನ್ನು ಆರಂಭಿಸಿದೆ.

ಕನ್ನಡ ಭಾಷೆ ಈ ನೆಲದ ಶ್ರೀಮಂತ ಭಾಷೆ. ಸಂಸ್ಕೃತದ ಪೋಷಣೆಯ ಜೊತೆಗೆ ತನ್ನದೇ ಆದ ಸತ್ವದೊಂದಿಗೆ ಬೆಳೆದ ಭಾಷೆ. ಇತ್ತೀಚೆಗೆ ಭಾರತ ಸರ್ಕಾರದಿಂದ ಶಾಸ್ತ್ರೀಯ ಭಾಷೆಯೆಂಬ ಮನ್ನಣೆಯನ್ನು ಪಡೆದಿದೆ. ಕನ್ನಡದಲ್ಲಿ ಎಲ್ಲ ಬಗೆಯ ಶಾಸ್ತ್ರ ಚಿಂತನೆ ಸಾಧ್ಯವಿದೆ ಎಂಬುದನ್ನು ಸಾಬೀತುಪಡಿಸಿದಾಗಲೇ ಶಾಸ್ತ್ರೀಯ ಭಾಷೆ ಎಂಬ ಮನ್ನಣೆಗೆ ಮಹತ್ವ. ಅದಕ್ಕಾಗಿ ಕನ್ನಡದಲ್ಲಿ ನಾನಾ ಬಗೆಯ ಪ್ರಾಚೀನ ಹಾಗೂ ಆಧುನಿಕ ಶಾಸ್ತ್ರಗಳ ಗ್ರಂಥಗಳ ಪ್ರಕಟಣೆಯಾಗಬೇಕು. ಜಿಜ್ಞಾಸುಗಳು ಕನ್ನಡದಲ್ಲೇ ಓದಬೇಕು. ಕನ್ನಡದಲ್ಲೇ ಚಿಂತಿಸಬೇಕು. ವಿದ್ವಜ್ಜನರು ಕನ್ನಡದಲ್ಲೇ ಬರೆಯಬೇಕು. ಆಗ ಕನ್ನಡ ಪರಿಪೂರ್ಣ ಶಾಸ್ತ್ರೀಯ ಭಾಷೆಯಾಗುತ್ತದೆ. ಈ ಕಾರಣಕ್ಕಾಗಿ ಪ್ರಾಚೀನ ಶಾಸ್ತ್ರ ಗ್ರಂಥಗಳನ್ನು ಕನ್ನಡಕ್ಕೆ ತರುವ ಪ್ರಯಾಸ ವಿಶ್ವವಿದ್ಯಾಲಯದ್ದು. ಈಗಾಗಲೇ ವ್ಯಾಕರಣದ ವಾಕ್ಯಪದೀಯ, ಅಲಂಕಾರಶಾಸ್ತ್ರದ ಧ್ವನ್ಯಾಲೋಕಲೋಚನ ಮತ್ತು ವಕ್ರೋಕ್ತಿಜೀವಿತ ಗಳನ್ನು ಕನ್ನಡ ಭಾಷೆಗೆ ಅರ್ಪಿಸಲಾಗಿದೆ. ಈಗ ಅತ್ಯಂತ ಪ್ರಾಚೀನದರ್ಶನವಾದ ಸಾಂಖ್ಯದರ್ಶನದ ಪ್ರಸಿದ್ಧ ಕೃತಿ 'ಸಾಂಖ್ಯಕಾರಿಕೆ'ಯನ್ನು ವಿಜ್ಞಾನಭಿಕ್ಷುವಿನ ವ್ಯಾಖ್ಯೆಯೊಂದಿಗೆ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲಾಗುತ್ತಿದೆ. ಈ ವ್ಯಾಖ್ಯೆಯನ್ನು ಸಾಂಖ್ಯಪ್ರವಚನಭಾಷ್ಯ ಎಂದು ಕರೆಯಲಾಗಿದೆ. ಈ ಕೃತಿಯು ದಾರ್ಶನಿಕ ಪರಂಪರೆಯಲ್ಲಿ ತುಂಬ ಮಹತ್ವವನ್ನು ಪಡೆದಿದ್ದು, ಮೊಟ್ಟಮೊದಲ ಬಾರಿಗೆ ಕನ್ನಡ ಭಾಷೆಗೆ ತರ್ಜುಮೆಯಾಗಿದೆ. ಈ ಅನುವಾದ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದವರು ಸಂಸ್ಕೃತದ ಹಿರಿಯ

ವಿದ್ವಾಂಸರೂ, ಸದಾ ತಮ್ಮನ್ನು ವಿದ್ವತ್ ಕಾರ್ಯಗಳಲ್ಲಿ ತೊಡಗಿಸಿಕೊಂಡವರೂ ಆದ ಪ್ರೊ. ಸಿ. ರಾಮನಾಥನ್ ಅವರು. ಅವರ ಈ ವಿದ್ವತ್ಶ್ರಮ ಅನುಪಮವಾದದ್ದು. ವಿಶ್ವವಿದ್ಯಾಲಯದ ಪ್ರಸಾರಾಂಗದ ಶಾಸ್ತ್ರೀಯಗ್ರಂಥಗಳ ಕನ್ನಡಾನುವಾದ ಮಾಲೆಯಲ್ಲಿ ಇದು ನಾಲ್ಕನೇ ಕುಸುಮ. ಈ ಕಾರ್ಯವನ್ನು ತುಂಬ ಕರ್ತವ್ಯಪರಾಯಣತೆಯ ಭಾವದಲ್ಲಿ ನಡೆಸಿದ ಪ್ರೊ. ಸಿ. ರಾಮನಾಥನ್‌ರವರ ಶ್ರಮವನ್ನು ಗೌರವಪೂರ್ವಕ ಅಭಿನಂದಿಸುತ್ತೇನೆ.

ಈ ಗ್ರಂಥಪ್ರಕಟಣೆಯ ಕಾರ್ಯದಲ್ಲಿ ನೆರವಾದ ಪ್ರಕಾಶನ ವಿಭಾಗದ ಉಪ ನಿರ್ದೇಶಕರಾದ ಡಾ. ಸಂತೋಷ ಸು. ಹಾನಗಲ್ಲ ಹಾಗೂ ಸಹಾಯಕ ನಿರ್ದೇಶಕರಾದ ಡಾ. ಬಿ. ಗೋವಿಂದ –ಇವರನ್ನೂ, ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಎಂ.ಕೆ. ಶ್ರೀಧರ್ ಇವರನ್ನೂ, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಕಾಶ ಪಾಗೋಜಿ ಇವರನ್ನೂ, ನಮ್ಮ ಪ್ರಕಾಶನಗಳ ಅಧಿಕೃತ ಮಾರಾಟಗಾರರಾದ ದರೇಸ ಪ್ರಕಾಶನದ ಅಧಿಕಾರಿಗಳನ್ನೂ, ಮುದ್ರಣಾಲಯದ ಶ್ರೀ ಲಿಂಗಪ್ಪ ಇವರನ್ನೂ, ಅಕ್ಷರ ಜೋಡಣೆಯನ್ನು ಮಾಡಿದ ಶ್ರೀಮತಿ ಶೈಲಜಾ ಅವರನ್ನೂ ಸ್ಮರಿಸುತ್ತೇನೆ.

ಮಕರ ಸಂಕ್ರಮಣ
ಉತ್ತರಾಯಣ
೧೫.೦೧.೨೦೧೫

ವಿದ್ವಜ್ಜನ ವಿಧೇಯ
ಪ್ರೊ. ಶ್ರೀನಿವಾಸ ವರಖೇಡಿ
ಕುಲಪತಿ (ಪ್ರ)

ಅನುವಾದಕರ ನುಡಿ

ಪ್ರಾಚೀನ ಭಾರತೀಯ ಸಾಹಿತ್ಯದ ಅನೇಕ ಅಮೂಲ್ಯ ಗ್ರಂಥಗಳ ಭಾಷಾಂತರ ಕನ್ನಡಿಗರಿಗೆ ದೊರೆಯದಿರುವುದು ಒಂದು ದೊಡ್ಡ ಕೊರತೆ. ಈ ದಿಕ್ಕಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕೈಗೊಂಡಿರುವ ಪ್ರಕಾಶನಗಳು ಬಹಳ ಪ್ರಯೋಜನಕಾರಿ. ಇಂತಹ ಅಮೂಲ್ಯ ಗ್ರಂಥಗಳಲ್ಲಿ ಒಂದಾದ ವಿಜ್ಞಾನಭಿಕ್ಷುವಿನ 'ಸಾಂಖ್ಯಪ್ರವಚನಭಾಷ್ಯ' ಪ್ರಕಟವಾಗುತ್ತಿದೆ. ಇದರ ಕನ್ನಡ ಅನುವಾದ ಮಾಡುವ ಅದೃಷ್ಟ ನನ್ನ ಪಾಲಿಗೆ ಬಂದಿದೆ.

ಈ ಗ್ರಂಥವನ್ನು ಅನುವಾದಿಸಲು ಅವಕಾಶ ಕಲ್ಪಿಸಿಕೊಟ್ಟವರು ಹಿಂದಿನ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು. ಅವರಿಗೆ ನನ್ನ ಮೊದಲ ಕೃತಜ್ಞತೆಗಳು ಸಲ್ಲಬೇಕು. ಈಗ (ಪ್ರಭಾರಿ) ಕುಲಪತಿಗಳಾಗಿರುವ ಪ್ರೊ. ಶ್ರೀನಿವಾಸ ವರಖೇಡಿಯವರು ನನ್ನ ಅನುವಾದ ಕಾರ್ಯದಲ್ಲಿ ಆಸಕ್ತಿ ವಹಿಸಿದರಲ್ಲದೆ, ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ಈ ಗ್ರಂಥದ ಪ್ರಕಟಣೆಯ ಕಾರ್ಯದಲ್ಲಿ ಶ್ರಮವಹಿಸಿದ ಡಾ. ಸಂತೋಷ ಸು. ಹಾನಗಲ್ಲ ಮತ್ತು ಡಾ. ಗೋವಿಂದ ಅವರಿಗೆ ನನ್ನ ಕೃತಜ್ಞತೆಗಳು.

ಪ್ರೊ. ಕೆ.ಟಿ. ಪಾಂಡುರಂಗಿಯವರು ನನ್ನ ಎಲ್ಲ ಕಾರ್ಯಗಳಲ್ಲಿಯೂ ಪ್ರೇರಕ ಶಕ್ತಿಯಾಗಿದ್ದಾರೆ. ಅವರಿಗೆ ನನ್ನ ವಂದನೆಗಳು ಸಲ್ಲಬೇಕು.

ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಲಿಂಗಪ್ಪ ಅವರಿಗೆ ನಾನು ಋಣಿ.

ಈ ಗ್ರಂಥದಲ್ಲಿರಬಹುದಾದ ಲೋಪ-ದೋಷಗಳನ್ನು ಮನ್ನಿಸಿ ವಿದ್ವಾಂಸರು ಇದನ್ನು ಅವಲೋಕಿಸಬೇಕಾಗಿ ವಿನಂತಿ.

ಪ್ರೊ. ಸಿ. ರಾಮನಾಥನ್

ಪೀಠಿಕೆ

1. ಸಾಂಖ್ಯಶಾಸ್ತ್ರದ ಮೂಲ

ಭಾರತೀಯ ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಸಾಂಖ್ಯದರ್ಶನವು ಅತ್ಯಂತ ಪ್ರಾಚೀನವಾದುದು. ಇತಿಹಾಸದ ಪ್ರಾರಂಭ ಕಾಲದಲ್ಲಿಯೇ ಮೂಡಿಬಂದ ಈ ಶಾಸ್ತ್ರ ದರ್ಶನಸಾಹಿತ್ಯದ ವಿಕಾಸದ ಕಾಲದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ಬೆಳೆಯಿತು. ಉಪನಿಷತ್ತುಗಳ ಕಾಲದಲ್ಲಿ ಸಾಂಖ್ಯದ ಜಾಡನ್ನು ಗುರುತಿಸುವುದು ಸುಲಭ. ಸಾಂಖ್ಯದ ಮೂಲಗಳನ್ನು ಕಠ, ಮುಂಡಕಗಳಲ್ಲಿಯೂ ಅದರ ತುಣುಕುಗಳನ್ನು ಶ್ವೇತಾಶ್ವತ–ರೋಪನಿಷತ್ತಿನಲ್ಲಿಯೂ ಕಾಣಬಹುದು. ಸಾಂಖ್ಯದ ಅಸ್ತಿತ್ವ ಶ್ವೇತಾಶ್ವತರೋಪನಿಷತ್ತಿನಲ್ಲಿ ವಿಶೇಷವಾಗಿ ಗೋಚರವಾಗುತ್ತದೆ. ಈ ಶಾಸ್ತ್ರದ ಅನೇಕ ಅಂಶಗಳನ್ನು ಇದರಲ್ಲಿ ಗುರುತಿಸಬಹುದು. ಇದರಲ್ಲಿ ಪ್ರಕೃತಿಯ ಗುಣಗಳ ಸಂಬಂಧದಿಂದ ಪುರುಷನು ಕರ್ಮಫಲ ಭೋಕ್ತೃವಾಗುವನು ಎಂದಿದೆ.(೫.೭) ಕಪಿಲ, ಸಾಂಖ್ಯ, ತ್ರಿಗುಣ, ಪ್ರಧಾನಜ್ಞಃ ಮುಂತಾದ ಪದಗಳ ಪ್ರಯೋಗವಿದೆ. ಪ್ರಕೃತಿಯ ಸಮಾನಾರ್ಥಕವಾಗಿ ಮಾಯಾ ಮುಂತಾದ ಪದಗಳ ಬಳಕೆಯಿದೆ. ಮೊದಲೇ ಪ್ರಚಾರದಲ್ಲಿದ್ದ ಈ ಶಾಸ್ತ್ರದ ಉಲ್ಲೇಖಗಳನ್ನು ಉಪನಿಷತ್ತುಗಳಲ್ಲಿ ಕಾಣುತ್ತೇವೆಯೆ ಅಥವಾ ಅದು ಉಪನಿಷತ್ತುಗಳ ತತ್ತ್ವಗಳನ್ನು ಅಳವಡಿಸಿಕೊಂಡು ಬೆಳೆಯಿತೆ ಎಂಬುದನ್ನು ನಿರ್ಧರಿಸುವುದು ಕಷ್ಟ.

2. ಸಾಂಖ್ಯ ಮತ್ತು ಮಹಾಭಾರತ

ಸಾಂಖ್ಯದರ್ಶನವು ಮಹಾಭಾರತದಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ. ವಿಶೇಷವಾಗಿ ಶಾಂತಿಪರ್ವದಲ್ಲಿ ನಿರೂಪಿಸಲ್ಪಟ್ಟ ಈ ಶಾಸ್ತ್ರ ಅದರಲ್ಲಿ ಪೂರ್ಣವಾಗಿ ರೂಪುಗೊಂಡಿರುವುದು ವ್ಯಕ್ತಪಡುತ್ತದೆ. ಈ ಪರ್ವದಲ್ಲಿ ಸಾಂಖ್ಯಕ್ಕಾಗಿಯೇ ಒಂದು ಅಧ್ಯಾಯವು ರಚಿತವಾಗಿದ್ದು ಈ ಬೃಹದ್ಗ್ರಂಥದ ಭಾಗವಾಗಿ ಬಿಟ್ಟಿದೆ. ಮಹಾಭಾರತದ ಸಾಂಖ್ಯಕ್ಕೂ ಸಾಂಖ್ಯಕಾರಿಕಾ ಮುಂತಾದ ಶಾಸ್ತ್ರಗ್ರಂಥಗಳಿಗೂ ಅಲ್ಲಲ್ಲಿ ವ್ಯತ್ಯಾಸಗಳು

ಕಂಡುಬರುತ್ತವೆ. ಕೆಲವೆಡೆ ಪ್ರಾಸಂಗಿಕವಾಗಿ ಉಲ್ಲೇಖಗೊಂಡ ಭಾಗಗಳಲ್ಲೂ ಈ ಅಂಶವನ್ನು ಗಮನಿಸಬಹುದು. ಶಾಂತಿಪರ್ವದಲ್ಲಿ (೩೧೯.೧೯) ಮಹಾಭೂತಗಳಿಗೆ ಮನಸ್ಸೇ ಕಾರಣವೆಂದು ಹೇಳಲಾಗಿದೆ. ಆದರೆ ಶಾಸ್ತ್ರದ ಪ್ರಕಾರ ಅವುಗಳಿಗೆ ಅಹಂಕಾರವೇ ಕಾರಣ. ಕೆಲವೆಡೆ ಮಹಾಭಾರತದಲ್ಲಿ ಪುರುಷನ ಏಕತ್ವವನ್ನು ನಿರೂಪಿಸಲಾಗಿದೆಯೇ ಹೊರತು ಪುರುಷನ ಬಹುತ್ವವನ್ನಲ್ಲ. ಹಾಗೆಯೇ ಸೃಷ್ಟಿಯಲ್ಲಿ ಪುರುಷನ ಪಾತ್ರವನ್ನೂ ತಿಳಿಸಲಾಗಿದೆ.(೩೦೫.೩೪) ಇದಲ್ಲದೆ ಅವ್ಯಕ್ತದಲ್ಲಿ ಗುಣಗಳಿವೆಯೆಂದೂ, ಅವ್ಯಕ್ತನು ಅಜ್ಞನೆಂದೂ, ಅಚೇತನನೆಂದೂ ಮತ್ತು ಪುರುಷನು 'ಜ್ಞ'ನೆಂದೂ ವಿವರಿಸುತ್ತದೆ.(೧೨–೩೧೫–೩–೫)

3. ಸಾಂಖ್ಯ ಮತ್ತು ಭಗವದ್ಗೀತೆ

ಭಗವದ್ಗೀತೆಯಲ್ಲಿ ಸಾಂಖ್ಯಶಬ್ದದ ಪ್ರಯೋಗ ಬಹಳ ಪ್ರಾಮುಖ್ಯವನ್ನು ಹೊಂದಿದೆ. 'ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಂಡಿತಃ' (೫–೫) ಎಂಬ ವಾಕ್ಯದಲ್ಲಿ ಸಾಂಖ್ಯವೆಂದರೆ ಜ್ಞಾನವೆಂದೂ ಯೋಗವೆಂದರೆ ಕರ್ಮವೆಂದೂ ಅರ್ಥ ಮಾಡಿದ್ದಾರೆ. ಈ ಮಾತು 'ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಂ' (ಗೀ ೩.೩) ಎಂಬುದರಿಂದ ಸ್ಪಷ್ಟಪಡುತ್ತದೆ. ಸಾಂಖ್ಯ ಯೋಗಗಳು ಒಂದೇ ಎಂಬ ಹೇಳಿಕೆ ಮಹಾಭಾರತದಲ್ಲಿದೆ.(೧೨–೩೧೬–೪) ಭಗವದ್ಗೀತೆಯು ವೇದಾಂತ ಗ್ರಂಥವಾದ್ದರಿಂದ ಸಾಂಖ್ಯ ಮತ್ತು ಯೋಗಶಾಸ್ತ್ರಗಳ ವಿವೇಚನೆ ಅದರಲ್ಲಿ ಕಂಡುಬರದು. ಗೀತೆಯಲ್ಲಿ ಕಪಿಲನ ಉಲ್ಲೇಖ ಬಂದಿರುವುದೂ ಗುಣಗಳ ನಿರೂಪಣೆಯಿರುವುದೂ ಗಮನಾರ್ಹವಾದರೂ ಸಾಂಖ್ಯಶಾಸ್ತ್ರದ ಹಿನ್ನೆಲೆಯಲ್ಲಿ ಅದಕ್ಕೆ ಮಹತ್ತ್ವ ನೀಡಲಾಗದು. ಗೀತೆಯಲ್ಲಿ ಉಕ್ತವಾದ ಗುಣಗಳು ಪ್ರಕೃತಿಯ ಅಂಗಗಳಲ್ಲ, ಪ್ರಕೃತಿಯಿಂದ ಹುಟ್ಟಿದವು. ಇನ್ನು ಬುದ್ಧಿ, ಅಹಂಕಾರ ಮುಂತಾದ ಗೀತೆಯ ತತ್ತ್ವಗಳು ಸಾಂಖ್ಯದರ್ಶನದ ಆವರಣದಲ್ಲಿ ಬರುವುದಿಲ್ಲ. ಭಗವದ್ಗೀತೆಗೂ ಸಾಂಖ್ಯಕ್ಕೂ ಇರಬಹುದಾದ ಸಂಬಂಧವನ್ನು ಸಾಂಖ್ಯದ 'ತತ್ತ್ವಸಮಾಸ'ವೆಂಬ ಗ್ರಂಥ ಚರ್ಚಿಸಿದೆ. ಹಾಗೆಯೇ ಗೀತೆಯಲ್ಲಿ ಪ್ರಕೃತಿ–ಪುರುಷರನ್ನು ಭಿನ್ನವೆಂದು ಪ್ರತಿಪಾದಿಸಿರುವುದು ಗಮನಾರ್ಹ.

4. ಸಾಂಖ್ಯ ಮತ್ತು ಭಾಗವತ

ಗೀತೆಯಲ್ಲದೆ ಭಾಗವತದಲ್ಲಿಯೂ ಸಾಂಖ್ಯತತ್ತ್ವಗಳ ಉಲ್ಲೇಖ ದೊರೆಯುತ್ತದೆ. (೩.೨೧, ೨೭ ಇತ್ಯಾದಿ) ಪುರುಷ–ಪ್ರಕೃತಿ ಮುಂತಾದವುಗಳ ವಿವರಣೆ ದೊರೆಯುತ್ತದೆ. ಆದರೆ ಈ ತತ್ತ್ವಗಳು ಅಲ್ಲಲ್ಲಿ ಮೂಲ ಸಾಂಖ್ಯಕ್ಕಿಂತ ಭಿನ್ನವಾಗಿವೆ.

5. ಸಾಂಖ್ಯ ಮತ್ತು ಚರಕ ಸಂಹಿತೆ

ಚರಕ ಸಂಹಿತೆಯ 'ಶರೀರಸ್ಥಾನ'ದಲ್ಲಿ ದೊರೆಯುವ ಸಾಂಖ್ಯವೂ ಉಲ್ಲೇಖನೀಯ. ಅದರಲ್ಲಿ ಪ್ರಕೃತಿ-ಪುರುಷರನ್ನು ಅವ್ಯಕ್ತವೆಂದು ಹೇಳಲಾಗಿದೆ. ಸೃಷ್ಟಿಯೆಂದರೆ ಅವ್ಯಕ್ತದಿಂದ ವ್ಯಕ್ತವಾಗುವುದು ಮತ್ತು ಪ್ರಲಯವೆಂದರೆ ಅವ್ಯಕ್ತದಲ್ಲಿ ಲೀನವಾಗುವುದು. ಕ್ಷೇತ್ರಜ್ಞನಾದ ಪುರುಷನನ್ನು 'ಜ್ಞ'ನೆಂದೂ ಸಾಕ್ಷಿಯೆಂದೂ ಕರೆದಿದ್ದಾರೆ. ಅಂತಿಮವಾಗಿ ಪುರುಷರೆಲ್ಲ ಒಂದೇ ಎಂದೂ, ಅವನನ್ನು ಕರ್ತಾ ಎಂದು ಕರೆದಿರುವುದೂ ಗಮನ ನೀಡಬಹುದಾದ ಅಂಶಗಳು.(೧-೮೩, ಶರೀರಸ್ಥಾನ)

6. ಸಾಂಖ್ಯಶಾಸ್ತ್ರದ ಆಚಾರ್ಯರು

ಸಾಂಖ್ಯಸೂತ್ರಗಳ ರಚನೆಯನ್ನು ಮಾಡಿದ ಕಪಿಲನ ಉಲ್ಲೇಖವನ್ನು ಶ್ವೇತಾಶ್ವತರೋಪನಿಷತ್ತು (೫-೨) ಮತ್ತು ಭಗವದ್ಗೀತೆಯಲ್ಲಿ (೧೦-೫೬) ಕಾಣಬಹುದು. ಮಹಾಭಾರತದಲ್ಲಿ 'ಪಂಚಶಿಖೋನಾಮ ಕಾಪಿಲೆಯೋ ಮಹಾಮುನಿಃ' ಎಂದು ಉಲ್ಲೇಖಿಸಲಾಗಿದೆ. (೧೨-೨೧೮-೬೦) ಸಾಂಖ್ಯಶಾಸ್ತ್ರದ ಆಚಾರ್ಯರಲ್ಲಿ ಪಂಚಶಿಖ ಬಹಳ ಮುಖ್ಯ ಹಾಗೂ ಪ್ರಾಚೀನನಾದವನು. ಮಹಾಭಾರತದ ಶಾಂತಿಪರ್ವದಲ್ಲಿ 'ಪಂಚಶಿಖ'ನ (೩೧೮-೬೦) ಉಲ್ಲೇಖವಿದೆ. ವಿಜ್ಞಾನಭಿಕ್ಷುವು ಪಂಚಶಿಖನದೆಂದು ಹೇಳಲಾದ ವಾಕ್ಯಗಳನ್ನು ಉಲ್ಲೇಖ ಮಾಡಿದ್ದಾನೆ. ಪಂಚಶಿಖನ ಹೆಸರು ಕೆಲವು ಬೌದ್ಧಗ್ರಂಥಗಳಲ್ಲಿ ದೊರೆಯುವುದು. ವಾರ್ಷಗಣ್ಯನೆಂಬ ಪ್ರಸಿದ್ಧ ಸಾಂಖ್ಯಾಚಾರ್ಯನೇ ಇವನಿರಬಹುದೆ, ಇವನೇ ಷಷ್ಟಿತಂತ್ರವನ್ನು ರಚಿಸಿದವನೆ ಮುಂತಾದ ವಿಷಯಗಳಲ್ಲಿ ಚರ್ಚೆ ನಡೆದಿದೆ. ವಾರ್ಷಗಣ್ಯನದೆಂದು ಹೇಳಲಾದ ಈ ಷಷ್ಟಿತಂತ್ರ ಸಾಂಖ್ಯಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಷ್ಟೇ ಅಲ್ಲದೆ ಮೂಲಗ್ರಂಥವೆನ್ನಲಾಗಿದೆ. ಪಂಚರಾತ್ರದ ಆಗಮಶಾಸ್ತ್ರದಲ್ಲಿ ಅಹಿರ್ಬುಧ್ನ್ಯ ಎಂಬ ಸಂಹಿತೆಯಲ್ಲಿ ಸಾಂಖ್ಯಶಾಸ್ತ್ರದ ತತ್ತ್ವಗಳನ್ನು ಹೇಳುವ ಷಷ್ಟಿತಂತ್ರ ಅಡಕವಾಗಿದೆ. ಈಶ್ವರಕೃಷ್ಣನ ಸಾಂಖ್ಯಕಾರಿಕೆಯಲ್ಲಿ ಉಲ್ಲೇಖವಿರುವುದಲ್ಲದೆ ಅವನ ಗ್ರಂಥದ ಚೀನೀ ಭಾಷಾಂತರದಲ್ಲಿಯೂ ಆ ಗ್ರಂಥದ ಉಲ್ಲೇಖವಿದೆ. ಷಷ್ಟಿತಂತ್ರದ ಕಾಲ ಸುಮಾರು ಕ್ರಿ.ಶ. ೧೦೦ ಎಂದು ಊಹಿಸಲಾಗಿದೆ.

ಈಶ್ವರಕೃಷ್ಣನ ಸಾಂಖ್ಯಕಾರಿಕಾ ಸಾಂಖ್ಯತತ್ವಗಳನ್ನು ಸಂಕ್ಷೇಪವಾಗಿಯೂ ಸಮಗ್ರವಾಗಿಯೂ ನೀಡುವ ಗ್ರಂಥ. ಈ ಗ್ರಂಥವನ್ನು ಪರಮಾರ್ಥನೆಂಬುವನು ಚೀನೀ ಭಾಷೆಗೆ ೫೫೭-೫೬೯ರ ಸಮಯದಲ್ಲಿ ಭಾಷಾಂತರಿಸಿದನೆಂದು ತಿಳಿದು ಬರುತ್ತದೆ. ಎಂದರೆ ಸುಮಾರು ಕ್ರಿ.ಶ. ೫೦೦ರ ವೇಳೆಗೆ ಈ ಗ್ರಂಥ ಪ್ರಚಾರದಲ್ಲಿತ್ತೆಂದು ತಿಳಿದುಬರುತ್ತದೆ. ಈ ಗ್ರಂಥದ ಮೇಲೆ ಗೌಡಪಾದರ 'ಸಾಂಖ್ಯಕಾರಿಕಾ ಭಾಷ್ಯ',

ಅಜ್ಞಾತ ಲೇಖಕನೊಬ್ಬನ ಯುಕ್ತಿದೀಪಿಕಾ, ವಾಚಸ್ಪತಿಮಿಶ್ರನ ತತ್ವಕೌಮುದೀ ಮುಖ್ಯವಾದ ವ್ಯಾಖ್ಯಾನಗಳು. ಇವನಲ್ಲದೆ ಇತಿಹಾಸದಲ್ಲಿ ಬರುವ ಇತರ ಸಾಂಖ್ಯಾಚಾರ್ಯರಲ್ಲಿ ವಾರ್ಷಗಣ್ಯ ಆಚಾರ್ಯನು ಸಾಂಖ್ಯರ ನಿರೀಶ್ವರವಾದದ ಸಂಪ್ರದಾಯಕ್ಕೆ ಕಾರಣನು ಎಂದು ಹೇಳುತ್ತಾರೆ.

7. ಸಾಂಖ್ಯಸೂತ್ರಗಳು ಮತ್ತು ವ್ಯಾಖ್ಯಾನಗಳು

ಆಧುನಿಕ ವಿದ್ವಾಂಸರು ಪ್ರಕೃತಿ–ಪುರುಷರು ಪ್ರತ್ಯೇಕವಾದ ಪದಾರ್ಥಗಳೆಂದು ಹೇಳಿರುವುದರಿಂದ ಈ ಶಾಸ್ತ್ರವನ್ನು ದ್ವಿತ್ವವಾದವೆಂದೂ (Dualism) ಮತ್ತು ಪುರುಷರು ಕೇವಲ ಚೇತನಗಳೆಂದೂ ಅವು ಅಸಂಖ್ಯವಾಗಿರುವುವೆಂದೂ ಹೇಳಿ ಅಚೇತನವಾದ ಪ್ರಕೃತಿಯು ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿರುವುದರಿಂದ ಇದನ್ನು ಅಸ್ತಿತ್ವವಾದವೆಂದೂ (Realism) ಹೇಳುವರು. ಈ ತತ್ತ್ವಗಳನ್ನೊಳಗೊಂಡ ತತ್ತ್ವಸಮಾಸ ಸೂತ್ರ ಸಾಂಖ್ಯದ ಮತ್ತೊಂದು ಗ್ರಂಥ.

ಸಾಂಖ್ಯಸೂತ್ರಗಳಿಗಿಂತ ಸ್ವಲ್ಪ ಹಿಂದೆ ರಚಿಸಿರಬಹುದಾದ ಈ ಗ್ರಂಥದ ಸೂತ್ರಗಳು ಸಾಂಖ್ಯಸೂತ್ರಗಳ ಲಘುರೂಪವೆನ್ನಬಹುದು. ಈ ಗ್ರಂಥವೂ ಸಾಂಖ್ಯಸೂತ್ರಗಳೂ ಸಾಂಖ್ಯದರ್ಶನದ ಪುನರುತ್ಥಾನದ ವೇಳೆಗೆ ಎಂದರೆ ಸುಮಾರು ಹದಿನಾಲ್ಕನೆ ಶತಮಾನದ ವೇಳೆಗೆ ಬೆಳಕು ಕಂಡಿರಬಹುದು ಎಂದು ವಿದ್ವಾಂಸರ ಊಹೆ. ಸಾಂಖ್ಯಸೂತ್ರಗಳು ನಮಗೆ ದೊರೆತಿರುವುದು ಅನಿರುದ್ಧನ ಸಾಂಖ್ಯಸೂತ್ರವೃತ್ತಿ ಮತ್ತು ವಿಜ್ಞಾನಭಿಕ್ಷುವಿನ ಸಾಂಖ್ಯಪ್ರವಚನದ ಭಾಷ್ಯ ಇವುಗಳ ಮೂಲಕ ಕಪಿಲನದೆಂದು ಹೇಳಲಾದ ಈ ಸೂತ್ರಗಳು ಇದಕ್ಕೆ ಮುಂಚೆ ದೊರೆತಿಲ್ಲ. ಬಹುಶಃ ಪ್ರಚಾರದಲ್ಲಿದ್ದ ಅತ್ಯಂತ ಪ್ರಾಚೀನ ಕಾಲದ ಸಾಂಖ್ಯಸೂತ್ರಗಳನ್ನು ಕಲೆಹಾಕಿ ಅನಿರುದ್ಧನು ವೃತ್ತಿಯನ್ನು ಬರೆದಿರಬಹುದೆಂದು ತೋರುತ್ತದೆ. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ವಿಜ್ಞಾನಭಿಕ್ಷುವು ಬರೆದಿರುವ ಈ ಸೂತ್ರಗಳ ಮೇಲಿನ ಭಾಷ್ಯ ಶತಮಾನಗಳಿಂದ ಕಣ್ಮರೆಯಾಗಿದ್ದ ಸಾಂಖ್ಯಸೂತ್ರಗಳು ಮತ್ತೆ ಬೆಳಕಿಗೆ ಬರುವಂತೆ ಮಾಡಿದ್ದಾನೆ. ಹೀಗೆ ವೃತ್ತಿ ಮತ್ತು ಭಾಷ್ಯಗಳು ಸಾಂಖ್ಯವು ತನ್ನ ಜಡತೆಯನ್ನು ಕೊಡವಿಕೊಂಡು ಸಮೃದ್ಧವಾಗಿ ಮೈದೋರಲು ಕಾರಣವಾದುವು.

8. ಸಾಂಖ್ಯಮತದ ಖಂಡನೆ

ಸಾಂಖ್ಯದರ್ಶನದ ತತ್ತ್ವಗಳನ್ನು ಅನೇಕ ತತ್ತ್ವಜ್ಞಾನಿಗಳು ಬಹಳ ಕಾಲದಿಂದ ವಿರೋಧಿಸುತ್ತ ಬಂದಿದ್ದಾರೆ. ಅವುಗಳಲ್ಲಿ ಆಚಾರ್ಯತ್ರಯರು ಅಲ್ಲಗಳೆದಿರುವ ವಿಷಯಗಳು ಹೆಚ್ಚು ಗಮನವನ್ನು ಸೆಳೆದಿವೆ. ಈ ಖಂಡನೆಗಳೆಲ್ಲ ಬ್ರಹ್ಮಸೂತ್ರ ವ್ಯಾಖ್ಯಾನದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಉದಾಹರಣೆಗೆ 'ಅಚೇತನವು ಸೃಷ್ಟಿಗೆ

ಹೇಗೆ ಕಾರಣವಾಗಬಲ್ಲದು' ಎಂದು ಶಂಕರಾಚಾರ್ಯರು ಪ್ರಶ್ನಿಸಿದ್ದಾರೆ. ಅಲ್ಲದೆ ನಿಮಿತ್ತ ಕಾರಣವಿಲ್ಲದೆ ಗುಣಗಳು ಹೇಗೆ ಕ್ಷೋಭೆಗೊಳಗಾಗುವುವು? ಎಂದು ಅಲ್ಲಗಳೆದಿದ್ದಾರೆ. ರಾಮಾನುಜಾಚಾರ್ಯರೂ ಚೇತನರಹಿತವಾದ ಪ್ರಧಾನವು ಸೃಷ್ಟಿಯಲ್ಲಿ ಹೇಗೆ ತೊಡಗೀತು? ಎಂದು ಖಂಡಿಸಿದ್ದಾರೆ. ಮಧ್ವಾಚಾರ್ಯರು ಸಾಂಖ್ಯರ ನಿರೀಶ್ವರವಾದವನ್ನು ತೀವ್ರವಾಗಿ ಖಂಡಿಸಿದ್ದಾರೆ. ಸಾಂಖ್ಯರು ಉಲ್ಲೇಖಿಸಿರುವ ಶ್ರುತಿಗಳ ಆಧಾರವನ್ನು ಅವರು ತಿರಸ್ಕರಿಸಿದ್ದಾರೆ.

9. ಸಾಂಖ್ಯಪ್ರವಚನ ಭಾಷ್ಯ

ಸಾಂಖ್ಯಪ್ರವಚನ ಭಾಷ್ಯವನ್ನು ಬರೆದ ವಿಜ್ಞಾನಭಿಕ್ಷುವು ಕ್ರಿ.ಶ. ಹದಿನಾರನೆಯ ಶತಮಾನದವನೆಂದು ವಿದ್ವಾಂಸರು ಸೂಚಿಸಿದ್ದಾರೆ. ವಿಜ್ಞಾನಭಿಕ್ಷುವು ಬೌದ್ಧನಾಗಿದ್ದನೆ ಎಂದು ಅನೇಕರ ಸಂದೇಹ. ಇವನು ರಚಿಸಿರುವ ಭಾಷ್ಯದ ಸೂತ್ರದ ಸಂಖ್ಯೆ ೫೨೭. ಈ ಸಾಂಖ್ಯಪ್ರವಚನ ಸೂತ್ರಗಳು ಆರು ಅಧ್ಯಾಯಗಳಲ್ಲಿವೆ. ಈ ಅಧ್ಯಾಯಗಳನ್ನು ವಿಷಯಾಧ್ಯಾಯ, ಪ್ರಧಾನ ಕಾರ್ಯಾಧ್ಯಾಯ, ವೈರಾಗ್ಯಾಧ್ಯಾಯ, ಆಖ್ಯಾಯಿಕಾಧ್ಯಾಯ, ಪರಪಕ್ಷನಿರ್ಣಯಾಧ್ಯಾಯ ಮತ್ತು ತಂತ್ರಾಧ್ಯಾಯಗಳೆಂದು ವಿಭಜಿಸಲಾಗಿದೆ. ವಿಜ್ಞಾನಭಿಕ್ಷುವು ಇವುಗಳ ಮೇಲೆ ಭಾಷ್ಯ ಬರೆಯುವುದರ ಜೊತೆಗೆ ಸಾಂಖ್ಯಸಾರ, ಯೋಗವಾರ್ತಿಕ ಮುಂತಾದ ಗ್ರಂಥಗಳನ್ನು ರಚಿಸಿದ್ದಾನೆಂದೂ ತಿಳಿದುಬರುತ್ತದೆ.

ವಿಜ್ಞಾನಭಿಕ್ಷುವು ರಚಿಸಿದನೆಂದು ಹೇಳಲಾದ ಗ್ರಂಥಗಳು: ೧. ಉಪದೇಶ ರತ್ನಮಾಲಾ (ವೇದಾಂತ ಗ್ರಂಥ); ೨. ವಿಜ್ಞಾನಾಮೃತಭಾಷ್ಯ (ಬ್ರಹ್ಮಸೂತ್ರಗಳ ಮೇಲಿನ ಭಾಷ್ಯ); ೩. ಎಂಟು ಉಪನಿಷತ್ತುಗಳ ಮೇಲಿನ ಭಾಷ್ಯಗಳು; ೪. ಈಶ್ವರಗೀತಾಭಾಷ್ಯ; ೫. ಬ್ರಹ್ಮಾದರ್ಶ (ವೇದಾಂತ ಗ್ರಂಥ); ೬. ಸಾಂಖ್ಯಪ್ರವಚನ ಭಾಷ್ಯ, ೭. ಸಾಂಖ್ಯಸಾರ; ೮. ಯೋಗಸಾರಸಂಗ್ರಹ

ಇವನಿಗೂ ಇವನ ಹಿಂದಿನವನಾದ ಅನಿರುದ್ಧನಿಗೂ ಅನೇಕ ಅಂಶಗಳಲ್ಲಿ ಭಿನ್ನಾಭಿಪ್ರಾಯಗಳಿರುವುದು ವ್ಯಕ್ತಪಡುವುದು. ಸಾಂಖ್ಯಸೂತ್ರಗಳ ಮೇಲೆ ಇವರಿಬ್ಬರಲ್ಲದೆ ಮಹದೇವ ವೇದಾಂತಿ ಎಂಬುವನು 'ವೃತ್ತಿಸಾರ' ಎಂಬ ವ್ಯಾಖ್ಯಾನವನ್ನೂ ನಾಗೋಜಿಭಟ್ಟ ಎಂಬುವನು 'ಸಾಂಖ್ಯಸೂತ್ರ ವೃತ್ತಿ' ಎಂಬ ವ್ಯಾಖ್ಯಾನವನ್ನೂ ಸಾಂಖ್ಯಸೂತ್ರಗಳನ್ನು ಕುರಿತು ಬರೆದಿದ್ದಾರೆ.

10. ವಿಜ್ಞಾನಭಿಕ್ಷುವಿನ ವೈಶಿಷ್ಟ್ಯ

ವಿಜ್ಞಾನಭಿಕ್ಷುವು ಸ್ವತಂತ್ರ ವಿಚಾರವುಳ್ಳವನೂ ದೃಢವಾದ ನಿಲುವುಗಳನ್ನು ಹೊಂದಿದ್ದವನೆಂಬುದೂ ಅವನ ಭಾಷ್ಯದಿಂದ ತಿಳಿದುಬರುತ್ತದೆ. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡುವುದು ಉಚಿತ.

(i) ಅನ್ಯೋನ್ಯ ಪ್ರತಿಬಿಂಬವಾದ

ವಿಜ್ಞಾನಭಿಕ್ಷುವು ಸೂತ್ರ ೧.೯೯ರ ಭಾಷ್ಯವನ್ನು ಬರೆಯುತ್ತಾ ಅನ್ಯೋನ್ಯ ಪ್ರತಿಬಿಂಬವಾದವನ್ನು ಮಂಡಿಸುತ್ತಾನೆ. ಈ ವಾದಕ್ಕೆ ಯೋಗಭಾಷ್ಯದ (೨.೨೦, ೪.೨೨) ಸಮರ್ಥನೆಯನ್ನು ನೀಡಿದ್ದಾನೆ. ಈ ವಾದದ ಪ್ರಕಾರ ಅಚೇತನವಾದ ಬುದ್ಧಿಯ ಮೇಲೆ ಚೇತನದ ಪ್ರತಿಬಿಂಬ ಬಿದ್ದಾಗ ಬುದ್ಧಿಯು ಚೈತನ್ಯ ಹೊಂದಿದಂತೆ ಭಾಸವಾಗುತ್ತದೆ. ಬುದ್ಧಿಯಿಂದ ದೊರೆತ 'ಅರ್ಥಾಕಾರ'ವು ಚೇತನ ಪುರುಷನಲ್ಲಿ ಮತ್ತೆ ಪ್ರತಿಬಿಂಬಿತವಾಗುತ್ತದೆ. ಇದನ್ನು 'ಯೋಗವಾರ್ತಿಕೇ ಚೈತದ್ವಿಸ್ತರೇಣ ಅಸ್ಮಾಭಿಃ ಪ್ರತಿಪಾದಿತಮ್' ಎಂದು ಹೇಳಿಕೊಂಡಿದ್ದಾನೆ.

(ii) ಗುಣವಿಮರ್ದ ವೈಚಿತ್ರ್ಯ

ಸೂತ್ರ ೧.೧೨೭ರ ಮೇಲೆ ಭಾಷ್ಯದಲ್ಲಿ 'ಗುಣವಿಮರ್ದ ವೈಚಿತ್ರ್ಯ'ವೆಂಬ ಸಿದ್ಧಾಂತವನ್ನು ಮಂಡಿಸುತ್ತಾ 'ಸತ್ತ್ವಾದಿತ್ರಯಮಪಿ ವ್ಯಕ್ತಿಭೇದಾತ್ ಆನನ್ತ್ಯಮ್', 'ಸತ್ವಾದಿಗಳು ವ್ಯಕ್ತಿಗಳಲ್ಲಿ ಭಿನ್ನವಾಗಿರುವುದರಿಂದ ಅನಂತವಾಗಿರುತ್ತದೆ' ಎಂದು ಹೇಳಿದ್ದಾನೆ. ಸತ್ತ್ವಾದಿಗಳು ದ್ರವ್ಯಗಳು ವಿಭುವೆಂದು ಭಾವಿಸಿದಲ್ಲಿ ಗುಣವಿಮರ್ದವಾಗುವುದಾದರೂ ಹೇಗೆ. ಆದ್ದರಿಂದ ವ್ಯಕ್ತಿ ವ್ಯಕ್ತಿಗೆ ಭಿನ್ನವಾಗಿರುವ ಈ ಗುಣಗಳನ್ನು ಮೂರು ಸಂಖ್ಯೆಗೆ ಅಳವಡಿಸಿ ಸಾಧರ್ಮ್ಯ ಮತ್ತು ವೈಧರ್ಮ್ಯಗಳ (ಅಸಂಖ್ಯಗುಣಗಳಿಂದ) ಈ ಮೂರರ ಏರುಪೇರುಗಳಲ್ಲಿ ನಮೂದಿಸಲಾಗಿದೆ. ಎಂದರೆ ಸತ್ತ್ವಪ್ರಧಾನವಾದ ಎಲ್ಲ ವ್ಯಕ್ತಿಗಳಲ್ಲೂ ಸತ್ತ್ವವಿದೆ ಎಂಬ ಸಾಧರ್ಮ್ಯವನ್ನೂ ಹಾಗೆಯೇ ರಜಸ್ಸು, ತಮಸ್ಸುಗಳಲ್ಲಿ ವೈಧರ್ಮ್ಯವನ್ನೂ ಕಾಣಬಹುದು. ಹಾಗೆಯೇ ಇತರ ಗುಣಗಳನ್ನೂ ಗುರುತಿಸಬಹುದು, ಎಂದಿದ್ದಾನೆ.

(iii) ಈಶ್ವರನ ಅಸ್ತಿತ್ವ

ವಿಜ್ಞಾನಭಿಕ್ಷುವು ಸೂತ್ರ ೧.೯೬ಅನ್ನು ವ್ಯಾಖ್ಯಾನ ಮಾಡುತ್ತಾ ಆದಿಪುರುಷನೆಂಬ ಪದವನ್ನು ಬಳಸಿದ್ದಾನೆ. ನಿತ್ಯಪುರುಷ ಬಹುತ್ವವನ್ನು ಪ್ರತಿಪಾದಿಸುವ ಸಾಂಖ್ಯರಲ್ಲಿ ಈ ಪದದ ಪ್ರಯೋಗ ವಿಜ್ಞಾನಭಿಕ್ಷುವಿನದು. ಈಶ್ವರನೇ ಪ್ರಕೃತಿಯು ಪ್ರವೃತ್ತವಾಗಲು ಅಧಿಷ್ಠಾತೃವೆಂದು ಹೇಳುತ್ತಾನೆ. 'ಅಯಸ್ಕಾಂತದಂತೆ ಅವನ ಸನ್ನಿಧಿ ಮಾತ್ರದಿಂದಲೇ ಪ್ರಕೃತಿಗೆ ಪ್ರೇರಣೆಯು ದೊರೆಯುತ್ತದೆ.' ಸಾಂಖ್ಯವು ನಿರೀಶ್ವರವಾದವನ್ನು ಪ್ರತಿಪಾದಿಸುವುದಾದರೂ ಈ ಸಂದರ್ಭದಲ್ಲಿ ವಿಜ್ಞಾನಭಿಕ್ಷುವು 'ಈದೃಶೇಶ್ವರಸಿದ್ಧಿಃ ಸಿದ್ಧಾ' (೩.೫೭) ಎಂಬ ಸೂತ್ರವನ್ನು ಆಧಾರವಾಗಿಟ್ಟುಕೊಂಡು ಈಶ್ವರನ ಅಸ್ತಿತ್ವವನ್ನು ಪ್ರತಿಪಾದಿಸಿರುವುದು ಗಮನಾರ್ಹ. ಮೂಲ ಸೂತ್ರಕಾರರೂ ಸಹ ಈಶ್ವರಾಸಿದ್ಧೇಃ(೧–೯೨) ಎಂದು ಹೇಳಿ ಈಶ್ವರನು ಪ್ರಮಾಣಾತೀತ ಎಂದಿದ್ದಾರೆ. ಅದನ್ನು ವಿವರಿಸುತ್ತಾ ಈಶ್ವರನ ವಿಷಯದಲ್ಲಿ ಪ್ರಮಾಣದ ಅಭಾವ ದೋಷವಲ್ಲ (ಈಶ್ವರೇ ಪ್ರಮಾಣಾಭಾವಾನ್ನ ದೋಷಃ) ಎಂದಿದ್ದಾನೆ.

11. ಸಾಂಖ್ಯ ಶಬ್ದದ ಪರಿಭಾಷೆ


ಭಾಷ್ಯದ ಪ್ರಾರಂಭದಲ್ಲಿ ವಿಜ್ಞಾನಭಿಕ್ಷುವು ಸಾಂಖ್ಯಶಬ್ದದ ಪರಿಭಾಷೆಯನ್ನು ನೀಡಿದ್ದಾನೆ. ಈ ಪರಿಭಾಷೆ ಮಹಾಭಾರತದಿಂದ ಉದ್ಧೃತವಾಗಿದೆ. (ಶಾಂತಿಪರ್ವ ೩೦೬–೪೩) 'ಸಂಖ್ಯೆಯನ್ನು ಪ್ರತಿಪಾದಿಸುವುದರಿಂದಲೂ, ಪ್ರಕೃತಿಯನ್ನೂ ಮತ್ತು ಇಪ್ಪತ್ತು ನಾಲ್ಕು ತತ್ತ್ವಗಳನ್ನು ಹೇಳಿರುವುದರಿಂದಲೂ ಈ ಶಾಸ್ತ್ರವನ್ನು ಸಾಂಖ್ಯವೆನ್ನುವರು' ಎಂದು ಉಲ್ಲೇಖಿಸಿದ್ದಾನೆ. ಈ ಪದ ಯೋಗರೂಢವಾದದ್ದು ಎಂದು ಅಭಿಪ್ರಾಯ ಪಡುತ್ತಾನೆ. ಸಾಂಖ್ಯಕ್ಕೂ ಬ್ರಹ್ಮಮೀಮಾಂಸಾ–ಯೋಗ ದರ್ಶನಗಳೊಡನೆ ಯಾವ ವಿರೋಧವೂ ಇಲ್ಲವೆಂದು ಸ್ಪಷ್ಟಪಡಿಸುತ್ತಾನೆ. ಪ್ರೌಢಿವಾದ ಮತ್ತು ಅಭ್ಯುಗಮವಾದಗಳು ಸಾಂಖ್ಯರ ಈಶ್ವರ ಪ್ರತಿಷೇಧವನ್ನು ಅಲ್ಲಗಳೆದಿವೆಯಷ್ಟೆ ಎಂದು ಸಾಂಖ್ಯರ ನಿರೀಶ್ವರವಾದದ ಬಗ್ಗೆ ಹೇಳುತ್ತಾನೆ.

12. ಪ್ರಕೃತಿ

ಪ್ರಕೃತಿ–ಪುರುಷರ ದ್ವಿತ್ವವಾದವನ್ನು ಸಾಂಖ್ಯಸೂತ್ರಗಳು ವಿವೇಚಿಸುತ್ತವೆ. ಸೂತ್ರ ೧.೬೧ರಲ್ಲಿ 'ಸತ್ತ್ವರಜಸ್ತಮಸಾಂ ಸಾಮ್ಯಾವಸ್ಥಾ ಪ್ರಕೃತಿಃ' ಎಂದು ಪ್ರಕೃತಿಯ ಪರಿಭಾಷೆ ನೀಡುತ್ತದೆ. ಅದನ್ನೇ ವಿಜ್ಞಾನಭಿಕ್ಷುವು 'ಅಕಾರ್ಯಾವಸ್ಥಾ ಗುಣಸಾಮಾನ್ಯಂ ಪ್ರಕೃತಿರಿತ್ಯರ್ಥಃ', ಕಾರ್ಯ ಉಂಟುಮಾಡದ ಸ್ಥಿತಿಯಲ್ಲಿ ಗುಣಗಳು ಸಮಾನವಾಗಿ ಇರುವುದೇ ಪ್ರಕೃತಿ ಎಂದಿದ್ದಾನೆ. ಪ್ರಕೃತಿಯನ್ನು ಪ್ರಧಾನವೆಂದೂ ಕರೆದಿದ್ದಾರೆ. 'ಪ್ರಧೀಯತೇ ಅಸ್ಮಿನ್ ಕಾರ್ಯಜಾತಮಿತಿ ಪ್ರಧಾನಮ್' ಯಾವುದರಲ್ಲಿ ಸಮಸ್ತ ಕಾರ್ಯಗಳೂ (ಉತ್ಪನ್ನ ವಸ್ತುಗಳು) ಧರಿಸಲ್ಪಟ್ಟಿವೆಯೋ ಅದನ್ನು ಪ್ರಧಾನವೆನ್ನುತ್ತಾರೆ ಎಂದಿದ್ದಾನೆ. ಪ್ರಕೃತಿಯು ಮೂಲಸ್ಥಿತಿಯಲ್ಲಿ ಅವ್ಯಕ್ತವಾಗಿರುವುದು. ಮೂಲರೂಪದಲ್ಲಿ ಅದು ಅವಿಕಾರಿಯೂ ನಿತ್ಯವೂ ಆಗಿರುವುದು. ಸತ್ತ್ವಾದಿಗುಣಗಳು ಪ್ರಕೃತಿಯ ಧರ್ಮವಲ್ಲ. ಅವುಗಳು ಪ್ರಕೃತಿಯ ಸ್ವರೂಪವೇ ಆಗಿವೆ. ಅವು ಭೂಮಿಯಲ್ಲಿ ದ್ವೀಪಗಳು ವ್ಯಕ್ತವಾಗುವಂತೆ ವ್ಯಕ್ತಪಡುವುವು. ಪ್ರಕೃತಿಯ ಮೂಲ ಉದ್ದೇಶ ತನ್ನ ಒಡೆಯನಾದ ಪುರುಷನ ಸಲುವಾಗಿ ಕಾರ್ಯದಲ್ಲಿ ತೊಡಗುವುದು. ಜಡವಾದ ಪ್ರಕೃತಿ ಚೇತನನಾದ ಪುರುಷನ ಮುಂದೆ ಅಭಿವ್ಯಕ್ತವಾಗುವುದು. ಪುರುಷನ ಸಾನ್ನಿಧ್ಯದಿಂದ ಅಚೇತನವಾದ ಪ್ರಕೃತಿಯು ಚೇತನವನ್ನು ಪಡೆದಂತೆ ಆಗಿ ಗುಣಗಳ ಕ್ಷೋಭೆಯಿಂದ ಸೃಷ್ಟಿಕಾರ್ಯದಲ್ಲಿ ತೊಡಗುವುದು. ಆದ್ದರಿಂದ ಸೃಷ್ಟಿಗೆಲ್ಲ ಪ್ರಕೃತಿಯೇ ಉಪಾದಾನ ಕಾರಣ. ಪ್ರಕೃತಿಯು ಪರಿಣಾಮಗೊಂಡಾಗ ಎರಡು ಬಗೆಯ ಸರ್ಗಗಳಾಗುವುವು. (೧) ಪ್ರತ್ಯಯ ಸರ್ಗ (೨) ಭೂತ ಸರ್ಗ. ನಿರವಯವ ದ್ರವ್ಯಗಳಾದ ಬುದ್ಧ್ಯಾದಿಗಳು ಸೂಕ್ಷ್ಮಸೃಷ್ಟಿಗಳು ಎಂದರೆ ಬುದ್ಧಿ, ಅಹಂಕಾರ, ಮನಸ್ಸು, ಹತ್ತು ಇಂದ್ರಿಯಗಳು ಮತ್ತು ಐದು ತನ್ಮಾತ್ರಗಳು. ಪಂಚಭೂತಗಳು ಭೂತಸರ್ಗ.

ಪ್ರಕೃತಿಯ ಸೃಷ್ಟಿಕ್ರಮ

೧. ಪ್ರಕೃತಿ (ಪರಿಣಾಮಿ)



೨. ಚೇತನನಾದ ಪುರುಷ (ಅಪರಿಣಾಮಿ)

ಒಟ್ಟು ೨೫ ತತ್ತ್ವಗಳನ್ನು ಸಾಂಖ್ಯಶಾಸ್ತ್ರದಲ್ಲಿ ಹೇಳಿದೆ.

(ಪಂಚವಿಂಶತಿರ್ಗಣಃ–ಸೂತ್ರ೧–೬೧)

ಪ್ರಕೃತಿಯು ಒಂದೇ ಮತ್ತು ಸರ್ವವ್ಯಾಪಿ. ಪ್ರಕೃತಿಗೆ ಮೂಲ ಯಾವುದೂ ಇಲ್ಲ. ಏಕೆಂದರೆ ಹಾಗೆ ಹುಡುಕುತ್ತಾ ಹೋದರೆ ಅನವಸ್ಥಾ ದೋಷ ಉಂಟಾಗುವುದು. ಪ್ರಕೃತಿ ಸತ್ತ್ವಾದಿಗುಣಗಳಿಂದ ಹೊರಗಿರಲಾರದು. ಒಂಟೆಯು ಸ್ವಾಮಿಯ ಸಲುವಾಗಿ ಕುಂಕುಮವನ್ನು ಹೊರುವಂತೆ ಪ್ರಕೃತಿಯ ಸೃಷ್ಟಿಯೆಲ್ಲ ಪರಾರ್ಥವಾಗಿ ಎಂದರೆ ಪುರುಷಾರ್ಥಕ್ಕಾಗಿ. ಹಾಗೆ ನೋಡಿದರೆ ಪ್ರಕೃತಿಯೂ ಸೃಷ್ಟಿಕರ್ತನಾದ ಬ್ರಹ್ಮನೂ ಒಂದೇ. ಹಾಗಾದರೆ ಪ್ರಕೃತಿಯ ಅಸ್ತಿತ್ವವನ್ನು ಹೇಗೆ ಅನುಮಾನಿಸುವುದು? 'ಅಂತಃಕರಣರೂಪಿಯಾದ ಬುದ್ಧಿಯ ಕಾರ್ಯತ್ವದಿಂದ ಪ್ರಕೃತಿಯನ್ನು ಅನುಮಾನಿಸಬಹುದು'. (ತತಃ ಮಹತ್ತತ್ತ್ವಾತ್ ಕಾರ್ಯಾತ್ ಕಾರಣತಯಾ ಪ್ರಕೃತೇಃ ಅನುಮಾನೇನ ಬೋಧಃ । ಸೂ. ೧.೬೫ರ ಮೇಲಿನ ಭಾಷ್ಯ)

ಪ್ರಕೃತಿಯಲ್ಲಿ ಕಾರ್ಯರೂಪ ಚಟುವಟಿಕೆ ಪ್ರಾರಂಭವಾಗಲು ಪುರುಷನ ಸಂಯೋಗ ಅಗತ್ಯ. ಅದು ಅಚೇತನವಾದ್ದರಿಂದ ಚೇತನನಾದ ಪುರುಷನ ಭೋಗಾಪವರ್ಗಗಳಿಗಾಗಿ ಕಾರ್ಯನಿರತವಾಗುವುದು. ಏಕೆಂದರೆ ಅದಕ್ಕೆ ತಾನಾಗಿಯೇ ಅವುಗಳನ್ನು ಅನುಭವಿಸುವ ಯೋಗ್ಯತೆಯಿಲ್ಲ. ಈ ಸಂದರ್ಭದಲ್ಲಿ ವಿಜ್ಞಾನಭಿಕ್ಷುವು ಸಾಂಖ್ಯಕಾರಿಕೆಯ 'ಪಂಗ್ವಂಧವತ್' ಎಂಬ ದೃಷ್ಟಾಂತವನ್ನು ಉಲ್ಲೇಖ ಮಾಡುತ್ತಾನೆ. (ಕಾರಿಕೆಯಲ್ಲಿ ಹೇಳಿರುವಂತೆ 'ಸಂಸರತಿ ಬಧ್ಯತೇ ಮುಚ್ಯತೇ ಚ ನಾನಾಶ್ರಯಾ ಪ್ರಕೃತಿಃ) ಕಾರಿಕೆಯ ಈ ವಾಕ್ಯವನ್ನು ಉಲ್ಲೇಖ ಮಾಡಿ (ಸೂ. ೩.೭೨) ಪ್ರಕೃತಿಯೇ ಸಂಸಾರಕ್ಕೆ ಕಾರಣ, ಬಂಧವಾಗಲಿ ಮುಕ್ತಿಯಾಗಲಿ ಪ್ರಕೃತಿಗೇ ಉಂಟಾಗುವುದು ಎಂದು ದೃಢಪಡಿಸುತ್ತಾನೆ. ಪುರುಷನಿಗಾದರೋ ಅವಿವೇಕದ ಕಾರಣ ಮಿಥ್ಯಾದುಃಖವುಂಟಾಗುವುದು. (ಪರಮಾರ್ಥತಸ್ತು ಬಂಧಮೋಕ್ಷೌ ಪ್ರಕೃತೇರೇವ ।) ವಸ್ತುತಃ ಬಂಧ–ಮೋಕ್ಷಗಳು ಪ್ರಕೃತಿಗೇ ಉಂಟಾಗುವುವು. ಪುರುಷನಿಗಾಗುವ ದುಃಖಾದಿಗಳು ಕೇವಲ ಪ್ರತಿಬಿಂಬರೂಪದಲ್ಲಿ ಎಂದು ನಿರೂಪಿಸಿದ್ದಾನೆ.

13. ಪುರುಷ

ಪುರುಷ ಸಾಂಖ್ಯಶಾಸ್ತ್ರದಲ್ಲಿ ಚೇತನವನ್ನು ಪ್ರತಿನಿಧಿಸುತ್ತಾನೆ. 'ನ ಪ್ರಕೃತಿರ್ನ ವಿಕೃತಿಃ ಪುರುಷಃ' ಎಂಬ ಕಾರಿಕೆಯ ಉಕ್ತಿಯಂತೆ ಪುರುಷನು ವಿಕಾರರಹಿತನು ಎಂಬ ಅಂಶವನ್ನು ವಿಜ್ಞಾನಭಿಕ್ಷುವು ವಿಸ್ತರಿಸಿದ್ದಾನೆ. ಪುರುಷನು ಶುದ್ಧನೂ ಬುದ್ಧನೂ ಆಗಿರುತ್ತಾನೆ. ಮತ್ತೆ ಅವನಿಗೆ ಬಂಧ ಉಂಟಾಗುವುದು ಹೇಗೆ? ಪುರುಷನಿಗೆ ಸ್ವತಃ ಯಾವ ಸಂಗವೂ ಇಲ್ಲ. ಆದರೆ ಬಂಧ ಉಂಟಾಗುವುದು ಚಿತ್ತದಲ್ಲಿಯೇ ಹೊರತು ಪುರುಷನಲ್ಲಲ್ಲ. ದುಃಖಾದಿಗಳಿಗೆ ಬುದ್ಧಿವೃತ್ತಿಯೇ ಕಾರಣ. ಸ್ಫಟಿಕದಲ್ಲಿ ಬಾಹ್ಯವಸ್ತುವಾದ ಕೆಂಪು ಪುಷ್ಪದ ಛಾಯೆಯು ಆವರಿಸಿರುವಂತೆ ಬುದ್ಧಿವೃತ್ತಿಯ

ಛಾಯೆಯು ಪುರುಷನಲ್ಲಿ ಆವರಿಸಿರುತ್ತದೆ. ಆದ್ದರಿಂದ ಪುರುಷನು ತಾನು ಬದ್ಧನೆಂದು ಭಾವಿಸುತ್ತಾನೆ. ಚೇತನದಲ್ಲಿ 'ಬುದ್ಧಿ ಪ್ರತಿಬಿಂಬದ ಕಾರಣ ಸಮಸ್ತ ವಸ್ತುಗಳೂ ಅದರಲ್ಲಿ ಗೋಚರವಾಗುವುದರಿಂದ ಅದರ ಸಂಬಂಧವು ಕಲ್ಪಿತವಾಗುತ್ತದೆ. ಪುರುಷನಲ್ಲಿ ಅದರ ಅನುಭವವಾಗುವುದೇ ಅದು ಅವನ ಭೋಗ.

ಚಿತ್ತದಲ್ಲಾಗುವ ಬದಲಾವಣೆಗೆ ಪುರುಷ ಕೇವಲ ಪ್ರಮಾ ಅಷ್ಟೇ ಹೊರತು ಪ್ರಮಾತೃವಲ್ಲ. (ಪುರುಷಃ ಪ್ರಮಾ ಸಾಕ್ಷೀ ಏವ ನ ಪ್ರಮಾತಾ ।) ಪುರುಷನು ಪರಿಣಾಮಿಯಲ್ಲದ ಕಾರಣ ತಾನಾಗಿಯೇ ಅರ್ಥದ ಆಕಾರವನ್ನು ಪಡೆಯಲಾರನು. ಅರ್ಥದ ಆಕಾರವನ್ನು ಪಡೆದ ಬುದ್ಧಿಯ ಪ್ರತಿಬಿಂಬದಿಂದ ಅದು ಅವನಲ್ಲಿ ಭಾಸವಾಗುವುದು.

ಪ್ರಕೃತಿತತ್ತ್ವವನ್ನು ಕಾರ್ಯಕಾರಣ ಭಾವದಿಂದ ತಿಳಿಯುವಂತೆ ಪುರುಷನನ್ನು ಕಾರ್ಯಕಾರಣದ ಅಭಾವದಿಂದ ಅನುಮಾನ ಮಾಡಬಹುದು. ಪುರುಷನು ಜೀವನಲ್ಲ. ಆದರೆ ಪುರುಷನು ಜೀವನೆನಿಸಿಕೊಳ್ಳಬೇಕಾದರೆ ಅವನು ಜೀವವಿಶಿಷ್ಟನಾಗಬೇಕು. (ಜೀವ ಬಲಪ್ರಾಣನಯೋಃ ಇತಿ ವ್ಯುತ್ಪತ್ತ್ಯಾ ಜೀವತ್ವಂ ಪ್ರಾಣಿತ್ವಂ ತಚ್ಚ ಅಹಂಕಾರವಿಶಿಷ್ಟ ಪುರುಷಸ್ಯ ಧರ್ಮಃ, ನ ತು ಕೇವಲ ಪುರುಷಸ್ಯ । ೬.೬೩). ಪುರುಷರು ಅಸಂಖ್ಯರು ಏಕೆಂದರೆ ಜನ್ಮ–ಮೃತ್ಯು ಪುರುಷರ ವಿನಾಶವಲ್ಲ. ಆ ಸ್ಥಿತಿಗಳು ಲಿಂಗಶರೀರಕ್ಕೆ ಸಂಬಂಧಿಸಿದ್ದು. ಲಿಂಗಶರೀರವು ಅಧಿಷ್ಠಾನವಿಲ್ಲದೆ ಸ್ವತಂತ್ರವಾಗಿ ನಿಲ್ಲದು. ಹೇಗೆ ಛಾಯೆಯು ನಿರಾಧಾರವಾಗಿ ನಿಲ್ಲದೋ, ಹೇಗೆ ಚಿತ್ರವು ಪಟವಿಲ್ಲದೆ ನಿಲ್ಲದೋ ಹಾಗೆ. ಪುರುಷ ಬಹುತ್ವವನ್ನು ಸಾಧಿಸುವಾಗ ವಿಜ್ಞಾನಭಿಕ್ಷುವು ಅದನ್ನು ಸಮರ್ಥಿಸಲು 'ಯೇ ತದ್ವಿದುರಮೃತಾಸ್ತೇ ಭವಂತ್ಯಥೇತರೇ ದುಃಖಮೇವಾಪಿಯಂತಿ' ಎಂಬ ಶ್ವೇತಾಶ್ವತರೋಪನಿಷತ್ತಿನ ವಾಕ್ಯವನ್ನು (೩.೧೦) ಉಲ್ಲೇಖ ಮಾಡುತ್ತಾನೆ.

ಬುದ್ಧಿಧರ್ಮವನ್ನು ಪುರುಷನ ಮೇಲೆ ಆರೋಪ ಮಾಡಿ ಸುಖ–ದುಃಖಾದಿಗಳಲ್ಲದೆ ಬ್ರಾಹ್ಮಣ–ಕ್ಷತ್ರಿಯ ಮುಂತಾದ ಶರೀರಧರ್ಮಗಳನ್ನೂ ಆರೋಪ ಮಾಡಲಾಗುತ್ತದೆ.(೧.೧೫೨) ಭೋಗಸಿದ್ಧಿಯೂ ಎಂದರೆ ಸುಖದುಃಖಾದಿಗಳ ಅನುಭವವೂ ಬುದ್ಧಿಯ ಮೂಲಕ ಆಗುತ್ತದೆ. ಆದರೆ ಅಪರಿಣಾಮಿಯಾದ ಚೇತನದಲ್ಲಿ ಪ್ರತಿಬಿಂಬಿತವಾದರೂ ಕೂಟಸ್ಥವಾದ ಅದರಲ್ಲಿ ಯಾವ ವಿಕಾರವೂ ಉಂಟಾಗದು. (ಚಿತೌ ಭೋಗಸ್ಯ ಸ್ವರೂಪೇ ಪರ್ಯವಸಿತತ್ವಾತ್ ನ ಕೌಟಸ್ಥ್ಯಾದಿಹಾನಿಃ ।). ಅಲ್ಲದೆ ಚಿತ್ತದ ಕರ್ಮಫಲಗಳನ್ನು ಅವಿವೇಕದ ಕಾರಣ ತನ್ನದೆಂದು ಭಾವಿಸಿ ಅನುಭವಿಸುತ್ತದೆ. (ಸುಖದುಃಖಾದೇಃ ಕರ್ಮಫಲತ್ವಂ ಅಭ್ಯುಪೇತ್ಯ ಬುದ್ಧಿ ಗತಂ ಕರ್ಮಫಲಂ ಪುರುಷಃ ಭುಂಕ್ತೇ । (೧.೧೦೪) ಇದನ್ನೇ ಚಿಚ್ಛಾಯಾಪತ್ತಿ, ಚೈತನ್ಯಾಧ್ಯಾಸ, ಚಿದಾವೇಶ ಮುಂತಾಗಿ ಕರೆಯುವರು.(೧.೯೧)

ಪುರುಷನು ಯಾವುದಕ್ಕೂ ಕರ್ತೃವಲ್ಲ. ಎಲ್ಲದಕ್ಕೂ ಅಹಂಕಾರವೇ ಕರ್ತೃ. ಜಾಗ್ರದಾದಿ ಅವಸ್ಥೆಗಳೂ ಬುದ್ಧಿಗೆ ಸೇರಿದ್ದು. ಎಲ್ಲ ಬುದ್ಧಿಗಳಿಗೂ ಒಂದೇ ಆತ್ಮನು ಸಾಕ್ಷಿಯಾದರೂ ಪ್ರತಿಯೊಂದು ಬುದ್ಧಿಗೂ ಅದರ ಅರ್ಥಾಕಾರವನ್ನು ಗ್ರಹಿಸಲು ಸಾಕ್ಷಿಯಾಗಿ ಅಸಂಖ್ಯ ಪುರುಷರ ಅಗತ್ಯವಿರುವುದು. ಪುಣ್ಯವಂತನು ಸ್ವರ್ಗಕ್ಕೆ ಹೋಗುವನು, ಪಾಪಿಯು ನರಕಕ್ಕೆ ಹೋಗುವನು. ಅಜ್ಞನು ಬಂಧಕ್ಕೆ ಗುರಿಯಾಗುವನು. ಜ್ಞಾನಿಯು ಬಿಡುಗಡೆ ಪಡೆಯುವನು. ಹೀಗೆ ವಿಭಾಗ ಮಾಡದೆ ಬೇರೆ ದಾರಿಯಿಲ್ಲ. ಆದ್ದರಿಂದ ಪುರುಷರು ಅನೇಕ.(೧.೧೪೯) ಪ್ರಕೃತಿ–ಪುರುಷರ ಸಂಯೋಗವೇ ಸೃಷ್ಟಿಗೆ ಕಾರಣ. ಪುರುಷರು ಅಸಂಖ್ಯವಾಗಿರುವ ಕಾರಣ ಪ್ರಕೃತಿಯು ಅವರ ವಿಮೋಚನೆಗೆ ನಿರಂತರವಾಗಿ ಸೃಷ್ಟಿಕಾರ್ಯದಲ್ಲಿ ತೊಡಗುತ್ತದೆ.(೧.೯೧) (೨.೧೧)

ಶುದ್ಧಚೇತನ ಪ್ರಮಾತೃ. ವೃತ್ತಿಯೇ ಪ್ರಮಾಣ. ಚೇತನದಲ್ಲಿ ಪ್ರತಿಬಿಂಬಿತ ವಾಗುವುದೇ ಪ್ರಮಾ. ಪ್ರತಿಬಿಂಬಿತವಾದ ವೃತ್ತಿಯೇ ಪ್ರಮೇಯ. ಕಾರಣವಿಲ್ಲದಿರು ವುದರಿಂದ ವೃತ್ತಿಗೆ ಸಾಕ್ಷಿ ಚೇತನನೇ. ವಿಷ್ಣು ಮುಂತಾದವರು ಸರ್ವಸಾಕ್ಷಿಯೆನ್ನುವರು. ಆದರೆ ಅದು ಗೌಣ. ಏಕೆಂದರೆ ಅದಕ್ಕೆ ಯಾವ ಲಿಂಗವೂ ಇಲ್ಲ.

ಸಾಂಖ್ಯಸೂತ್ರ 'ನಾದ್ವೈತಶ್ರುತಿವಿರೋಧೋ ಜಾತಿಪರತ್ವಾತ್' (೧.೧೫೪) 'ಜಾತಿಯ ಸೂಚಕವಾದ್ದರಿಂದ ಅದ್ವೈತಪರವಾದ ಶ್ರುತಿಗೆ ವಿರೋಧ ಇಲ್ಲ' ಎಂಬುದು ವಿಶಿಷ್ಟವಾದ ವಾದ. ಇಲ್ಲಿ ಪುರುಷರನ್ನು 'ಜಾತಿ' ಅಥವಾ 'ಸಾಮಾನ್ಯ'ದ ಗುಂಪಿಗೆ ಸೇರಿಸಲಾಗಿದೆ. ಈ ಸಂದರ್ಭದಲ್ಲಿ ವಿಜ್ಞಾನಭಿಕ್ಷುವು ಜಾತಿಯು ಸಾಮಾನ್ಯ ಅಥವಾ ಏಕತ್ವರೂಪತ್ವವನ್ನು ತಿಳಿಸುತ್ತದೆ. ಆತ್ಮದ ಅಖಂಡತೆಯನ್ನು ಬೋಧಿಸುವ ಶ್ರುತಿಗಳು ಅದರ ಜಾತಿಯನ್ನಷ್ಟೇ ಸೂಚಿಸುತ್ತವೆ. 'ಏಕಮೇವಾದ್ವಿತೀಯಮ್' ಎಂಬುದು ಜಾತಿಪರವಾದುದು, 'ಆತ್ಮೈಕ್ಯಶ್ರುತಿಗಳ ಏಕಾದಿ ಶಬ್ದಗಳು ಚೇತನದ ಏಕತ್ವವನ್ನು ನಿರೂಪಿಸುತ್ತವೆ' ಎಂದಿದ್ದಾನೆ. ಹೀಗೆ ಅದ್ವೈತವನ್ನು ಅಲ್ಲಗಳೆಯದೆ ಪುರುಷನಾನಾತ್ವವನ್ನು ಸಮರ್ಥನೆ ಮಾಡಿರುವುದು ಒಂದು ವೈಶಿಷ್ಟ್ಯ.

ಪುರುಷನಿಗೆ ಬಂಧವುಂಟಾಗುವುದು ಸ್ವಾಭಾವಿಕವಾಗಲಿ ನೈಮಿತ್ತಿಕವಾಗಿಯಾಗಲಿ ಆಗದು. ಅದು ಕೇವಲ ಉಪಾಧಿಯಷ್ಟೆ. ಪ್ರಕೃತಿವಿಯೋಗದಿಂದ ಬಂಧವು ಕಡಿದು ಹೋಗುವುದು. ಪ್ರಕೃತಿಸಂಯೋಗದಿಂದ ಬಂಧ ಉಂಟಾಗುವುದು.(೧.೧೯)

ಅಂಧಕಾರದಂತೆ ಅವಿವೇಕವು ಪುರುಷನನ್ನು ಆವರಿಸಿದಾಗ ಉಂಟಾಗುವುದೇ ಬಂಧ. ಈ ಅವಿವೇಕವು ವಿವೇಕದಿಂದಷ್ಟೇ ನಾಶವಾಗುವುದು. ಅದಕ್ಕೆ ಕರ್ಮಾದಿಗಳ ಅಗತ್ಯವಿಲ್ಲ.(೧.೫೬) ಏಕೆಂದರೆ ಕರ್ಮಾದಿಗಳು ಕೇವಲ ಜ್ಞಾನದ ಸಾಧನಗಳು.

ಯೋಗಸೂತ್ರದ ಉಲ್ಲೇಖ ಮಾಡಿ ವಿಜ್ಞಾನಭಿಕ್ಷುವು, 'ಸತ್ತ್ವಶುದ್ಧಿಯಿಂದ ಜ್ಞಾನಕ್ಕೆ ಮಾಡಿದ ಕರ್ಮ ಸಾಧನವಾಗುತ್ತದೆ' ಎಂದಿದ್ದಾನೆ.

14. ಬುದ್ಧಿ

'ಅಧ್ಯವಸಾಯೋ ಬುದ್ಧಿಃ' (೨.೧೩) ಎಂದು ಸೂತ್ರಕಾರನು ಬುದ್ಧಿಯ ಪರಿಭಾಷೆಯನ್ನು ನೀಡಿದ್ದಾನೆ. 'ಅಧ್ಯವಸಾಯ' ಎಂದರೆ 'ನಿರ್ಧಾರ ತೆಗೆದುಕೊಳ್ಳುವುದು'. 'ಮಹತ್ ತತ್ತ್ವ' ಬುದ್ಧಿಗೆ ಪರ್ಯಾಯವಾಚಕವಾದುದು. ಎಲ್ಲ ಕರಣಗಳಲ್ಲಿಯೂ ಬುದ್ಧಿಗೇ ಪ್ರಾಧಾನ್ಯ. ಅದಕ್ಕೆ ಕೊಟ್ಟಿರುವ ಅತ್ಯಂತ ಹಿರಿಯ ಸ್ಥಾನದ ಕಾರಣ ಅದನ್ನು ಮಹಾನ್ ಎಂದಿದ್ದಾರೆ. ಸೃಷ್ಟಿಯೆಲ್ಲ ಮಹದಾದಿಕ್ರಮೇಣ ಆಗುವುದು. ಬುದ್ಧಿಯಲ್ಲಾಗುವ ಬದಲಾವಣೆಗಳಿಗೆ ಪುರುಷನೇ ಸಾಕ್ಷಿ. ಎಲ್ಲ ಕರಣಗಳೂ ಪುರುಷನ ಸೇವೆಗಾಗಿಯೇ ಕಾರ್ಯನಿರತವಾದರೂ ಆ ಕರಣಗಳೆಲ್ಲ ಬುದ್ಧಿಯನ್ನೇ ಅವಲಂಬಿಸುತ್ತವೆ. ರಾಜನಿಗೆ ಗ್ರಾಮಾಧ್ಯಕ್ಷರೇ ಮೊದಲಾದವರಲ್ಲಿ ಮಂತ್ರಿಯೇ ಮುಖ್ಯವಾಗಿರುವಂತೆ ಬುದ್ಧಿಯ ಸ್ಥಾನ ಎಲ್ಲಕ್ಕಿಂತ ಮಿಗಿಲಾದುದು. (೨.೪೭) ಬುದ್ಧಿ ಎಲ್ಲ ಸಂಸ್ಕಾರಗಳಿಗೂ ಆಧಾರ, ಅಹಂಕಾರ ಅಥವಾ ಇತರ ಇಂದ್ರಿಯಗಳಲ್ಲ.(ಬುದ್ಧೇರೇವ ಅಖಿಲಸಂಸ್ಕಾರಾಧಾರತಾ, ನ ತು ಚಕ್ಷುರಾದೇಃ ಅಹಂಕಾರಮನಸೋರ್ವಾ । ೨.೪೧) ಸಾಂಖ್ಯಶಾಸ್ತ್ರದಲ್ಲಿ ಚಿಂತೆ ಮಾಡಬಲ್ಲ ವೃತ್ತಿಯುಳ್ಳ ಚಿತ್ತವು ಬುದ್ಧಿಯಲ್ಲಿಯೇ ಅಂತರ್ಭಾವವಾಗಿರುವುದು.(೧.೬೪)

ಬುದ್ಧಿಯ ಪ್ರತಿಬಿಂಬದ ಕಾರಣ ಪುರುಷನಲ್ಲಿ ಅವಿವೇಕವು ಮೂಡಿಬರುವುದು. ನಿರ್ಮಲನಾದ ಪುರುಷನಲ್ಲಿ ಸ್ಫಟಿಕದಲ್ಲಿ ದಾಸವಾಳ ಪುಷ್ಪದ ಕೆಂಪು ಛಾಯೆಯು ಮೂಡುವಂತೆ ಮೂಡಿಬರುವುದು.(೬.೨೮) ಅದು ಆಕಾಶದಂತೆ ನಿತ್ಯ ಮತ್ತು ಅನಿತ್ಯರೂಪವುಳ್ಳದ್ದಾಗಿರುತ್ತದೆ. ಬುದ್ಧಿಯಲ್ಲಿ ಸತ್ತ್ವವು ಉದ್ರೇಕಗೊಂಡಾಗ ಕರ್ಮವಾಸನೆಯು ಉಂಟಾಗುವುದು.(೨.೧೫) ಪುರುಷನ ಮೇಲೆ ವೃತ್ತಿರೂಪದ ಪ್ರತಿಬಿಂಬ ಬಿದ್ದಾಗಲೇ ಅವನಲ್ಲಿ ಅರ್ಥಾಕಾರದ ಭಾಸವಾಗುವುದು.(೧.೯೯) ಪುರುಷನು ಅಪರಿಣಾಮಿಯಾದ ಕಾರಣ ಅದನ್ನು ಕೇವಲ ಉಪಾಧಿಯಾಗಿ ಸ್ವೀಕರಿಸುತ್ತಾನೆ. (ಬುದ್ಧಿವತ್ ಸ್ವತಃ ಅರ್ಥಾಕಾರಸ್ಯಾಸಂಭವಾತ್ ಅರ್ಥಾಕಾರಣತಾಯಾಃ ಏವ ಚಾರ್ಥಗ್ರಹಣಾತ್ ।) ಬುದ್ಧಿಯು ಪುರುಷನನ್ನು ಪ್ರಕಟಗೊಳಿಸುವ ಒಂದು ಪ್ರಕೃತಿಯ ಸಾಧನ. ಪ್ರೊ. ಹಿರಿಯಣ್ಣನವರು, The Buddhi may therefore be viewed as a physical medium for the manifestation of spirit' (MH, OIP, P. 284) ಎಂದಿದ್ದಾರೆ.

ಧರ್ಮ ಅಧರ್ಮಗಳು ಚೇತನದ ಗುಣಗಳಲ್ಲ, ಅವುಗಳು ಬುದ್ಧಿಯ ರೂಪಗಳಷ್ಟೆ ಹಾಗೆಯೇ ಬುದ್ಧಿಯ ವೃತ್ತಿಯೂ ಅಷ್ಟೆ. ಚೇತನದಲ್ಲಿ ಬೀಳುವುದು ಅದರ ಪ್ರತಿಬಿಂಬ ಮಾತ್ರ. ನಾವು ಹಿಂದೆಯೇ ಹೇಳಿದಂತೆ ವಿಜ್ಞಾನಭಿಕ್ಷುವಿನ ಈ ನೂತನವಾದ ವಾದದಂತೆ ಚೇತನದಲ್ಲಿ ಬುದ್ಧಿಯ ವೃತ್ತಿಯು ಪ್ರತಿಬಿಂಬ ರೂಪದಲ್ಲಿ ಗೋಚರಕ್ಕೆ ಬರುವುದು. ವಾಚಸ್ಪತಿಮಿಶ್ರನು ಹೇಳಿರುವಂತೆ ಕೇವಲ ಪುರುಷನ ಪ್ರತಿಬಿಂಬ ಬುದ್ಧಿಯ ಮೇಲೆ ಬಿದ್ದರೆ ಬುದ್ಧಿವೃತ್ತಿಯು ಪುರುಷನಲ್ಲಿ ಗೋಚರವಾಗುವುದಾದರೂ ಹೇಗೆ?(೧.೮೭)

ಬುದ್ಧಿಯಲ್ಲಿ ಸತ್ತ್ವಗುಣ ಪ್ರಧಾನವಾಗಿರುವಾಗ ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳು ಉಂಟಾಗುವುವು. ಆದರೆ ರಜಸ್ತಮೋಗುಣಗಳು ಪ್ರಬಲವಾದಾಗ ಇವಕ್ಕೆ ವಿರುದ್ಧವಾದ ಕಾರ್ಯಗಳು ಉಂಟಾಗುವುವು, ಎಂದರೆ ಅಧರ್ಮ, ಅಜ್ಞಾನ, ಅವೈರಾಗ್ಯ ಮತ್ತು ಅನೈಶ್ವರ್ಯಗಳು ಉಂಟಾಗುವುವು. ಧರ್ಮಾದಿಗಳು ಬುದ್ಧಿವೃತ್ತಿಗಳೇ ಹೊರತು ಪುರುಷನ ಲಕ್ಷಣಗಳಲ್ಲ. ಅವಿದ್ಯೆಯು ಶರೀರದಲ್ಲಿ ಅಹಂಬುದ್ಧಿಯನ್ನು ಉಂಟುಮಾಡುವುದು. ಆತ್ಮನಿಗೆ ಶರೀರ ಅಥವಾ ಅಶರೀರರೂಪಗಳಿಲ್ಲದಿದ್ದರೂ ಆ ಕಲ್ಪನೆ ಉಂಟಾಗುವುದು.(೩.೩೭) ಪುರುಷ ಬಹುತ್ವವನ್ನು ಹೇಳುವ ಸಾಂಖ್ಯವು ಪ್ರತಿಯೊಬ್ಬನಿಗೂ ಅವನವನ ಬುದ್ಧಿ ವೃತ್ತಿಯು ಗ್ರಹಿಸುವಂತೆ ವಿಷಯಗ್ರಹಣವಾಗುವುದೆಂದು ಹೇಳುತ್ತದೆ. ಎಂದರೆ ಬಾಹ್ಯವಸ್ತುಗಳು ಬುದ್ಧಿಗಿಂತ ಬೇರೆಯಾಗಿ ಸ್ವತಂತ್ರವಾಗಿರುತ್ತವೆ.

15. ಅಹಂಕಾರ

ಅಹಂಕಾರ ಪ್ರಕೃತಿಯಿಂದ ಉಂಟಾಗುವ ಎರಡನೆಯ ಸೃಷ್ಟಿ. ಅಭಿಮಾನವನ್ನೇ ಅಹಂಕಾರವೆನ್ನುತ್ತಾರೆ.(೨.೧೬) 'ಅಹಂ ಕರೋತಿ ಇತಿ ಅಹಂಕಾರಃ, ಕುಂಭಕಾರವತ್' ಕುಂಭವನ್ನು ಮಾಡುವವನು ಕುಂಭಕಾರ ಎಂದು ಹೇಳುವಂತೆ ನಾನು ಎಂಬುದನ್ನು ಪ್ರಕಟಗೊಳಿಸುವುದೇ 'ಅಹಂಕಾರ'. ಇದು ಅಂತಃಕರಣ ಎಂದರೆ ಒಳಗಿರುವ ದ್ರವ್ಯ. (ಅಂತಃಕರಣದ್ರವ್ಯ).(೨.೧೬) ಅಥವಾ ಅಭಿಮಾನದ ವೃತ್ತಿಯನ್ನು ಸೂಚಿಸುವುದು. ಬಾಹ್ಯ ಮತ್ತು ಆಭ್ಯಂತರ ಇಂದ್ರಿಯಗಳು ಮತ್ತು ತನ್ಮಾತ್ರಗಳು ಇವುಗಳ ಕಾರಣರೂಪದಿಂದ ಅಹಂಕಾರವನ್ನು ಅನುಮಾನದಿಂದ ತಿಳಿಯಬಹುದು. 'ಸಾತ್ತ್ವಿಕ ಅಹಂಕಾರದ ಕಾರ್ಯಗಳು ಏಕಾದಶ ಇಂದ್ರಿಯಗಳು, ತಾಮಸ ಅಹಂಕಾರದ ಕಾರ್ಯಗಳು ಪಂಚತನ್ಮಾತ್ರಗಳು. ರಾಜಸ ಗುಣವು ಆಯಾ ಕಾರ್ಯಗಳಿಗೆ ಅಗತ್ಯವಾದ ಚಲನೆಯನ್ನು ನೀಡುವುದು' ಎಂಬುದು ಸಾಂಖ್ಯಕಾರಿಕೆಯ ಅಭಿಪ್ರಾಯ (ಕಾ.೨೫). ಆದರೆ ವಿಜ್ಞಾನಭಿಕ್ಷುವು ರಾಜಸ ಅಹಂಕಾರದಿಂದ ದಶೇಂದ್ರಿಯಗಳು ಉಂಟಾಗುತ್ತವೆ ಎಂದಿದ್ದಾನೆ (ರಾಜಸಾಹಂಕಾರಾದ್ದಶೇಂದ್ರಿಯಾಣಿ).

(೨.೧೮) ಧರ್ಮ, ಜ್ಞಾನ ಮುಂತಾದುವು ಬುದ್ಧಿಯನ್ನು ಉಪಾದಾನ ಕಾರಣವಾಗಿ ಹೊಂದಿರುತ್ತವೆ, ಅಹಂಕಾರವನ್ನಲ್ಲ. ಬುದ್ಧಿಯು ನಿರ್ಧರಿಸಿದ ವಸ್ತುವಿನಲ್ಲಿ ಅಹಂಕಾರ–ಮಮಕಾರಗಳು ಉಂಟಾಗುವುವು. ಅಹಂಕಾರವೇ ಕರ್ತೃವೇ ಹೊರತು ಪುರುಷನಲ್ಲ.(೬.೫೪)

16. ಮನಸ್ಸು

ಉಭಯಾತ್ಮಕಂ ಮನಃ (೨.೨೬) ಎಂಬ ಸೂತ್ರದಂತೆ ಮನಸ್ಸು ಜ್ಞಾನೇಂದ್ರಿಯವೂ ಹೌದು, ಕರ್ಮೇಂದ್ರಿಯವೂ ಹೌದು. ಸಂಗವಶದಿಂದ ನಾನಾತ್ವವನ್ನು ಪಡೆಯುತ್ತದೆ; ಅರ್ಥಾತ್ ಮನಸ್ಸಂಯೋಗದಿಂದ ಇಂದ್ರಿಯಗಳು ಕಾರ್ಯದಲ್ಲಿ ತೊಡಗುತ್ತವೆ. ವಿಜ್ಞಾನಭಿಕ್ಷುವು ಇಲ್ಲಿ ತತ್ತ್ವಕೌಮುದೀ ಮತ್ತು ವೃತ್ತಿಗಳಿಗೆ ಭಿನ್ನವಾದ ವ್ಯಾಖ್ಯಾನ ಮಾಡಿದ್ದಾನೆ.(೨.೨೭) ಮನಸ್ಸು ವಿಭುವಲ್ಲ, ಅದು ಅಣುಪರಿಮಾಣದ್ದು. ಇಂದ್ರಿಯಗಳಾದ ಕಣ್ಣೇ ಮೊದಲಾದುವುಗಳು ಮನಸ್ಸಿನ ಸಂಯೋಗದಿಂದ ಕಾರ್ಯಕ್ಷಮತೆ ಪಡೆಯುವುವು.

17. ಗುಣ

ಸಾಂಖ್ಯಶಾಸ್ತ್ರದಲ್ಲಿ ಗುಣ ಒಂದು ಪಾರಿಭಾಷಿಕ ಶಬ್ದ. ಪ್ರಕೃತಿಯ ಅಂಗಗಳಾದ ಗುಣಗಳನ್ನು ಮೂರು ಎಳೆಗಳನ್ನು ಬೆಸೆದು ಮಾಡಿದ ಗುಣಕ್ಕೆ ಹೋಲಿಸಲಾಗಿದೆ. ಪುರುಷನೆಂಬ ಪಶುವನ್ನು ಕಟ್ಟಿಹಾಕುವ ಹಗ್ಗವೆಂಬರ್ಥದಲ್ಲಿ 'ಗುಣ' ಪ್ರಯುಕ್ತವಾಗಿದೆ. (ಗುಣ ಎಂಬ ಪದಕ್ಕೆ ನಿಘಂಟುವಿನಲ್ಲಿ ೨೩ ಅರ್ಥಗಳನ್ನು ನೀಡಿದ್ದಾರೆ.) (ಪುರುಷಪಶು ಬಂಧಕತ್ರಿಗುಣಾತ್ಮಕ ಮಹದಾದಿ ರಜ್ಜು ನಿರ್ಮಾತೃತ್ವಾ ಚ್ಚ ಪ್ರಯುಜ್ಯತೇ । ೧.೬೧)

ಸತ್ತ್ವ, ರಜಸ್, ತಮೋಗುಣಗಳು ಸಾಮ್ಯಾವಸ್ಥೆಯಲ್ಲಿ ಇರುವಾಗ ಪ್ರಕೃತಿ ಮೂಲರೂಪದಲ್ಲಿರುತ್ತದೆ. ಆಗ ಪ್ರಕೃತಿಯಲ್ಲಿ ಯಾವ ಪರಿಣಾಮವೂ ಸಂಭವಿಸದು. ಸತ್ತ್ವಾದಿ ಗುಣಗಳು ವ್ಯಕ್ತಿಭೇದದಿಂದ ಅನಂತವಾಗಿರುತ್ತವೆ. ಗುಣಗಳು ಅಸಂಖ್ಯವಾಗಿರುವ ಕಾರಣ ಮೂರು ಬಗೆಯೆಂದು ಅವುಗಳನ್ನು ವಿಂಗಡಿಸಿ ಲಘ್ವಾದಿ ಭಾವಗಳನ್ನು ನಿರ್ದೇಶಿಸಿದೆ. ಸತ್ತ್ವ ವ್ಯಕ್ತಿಗಳಲ್ಲಿ ಸಾಮಾನ್ಯವಾಗಿ ಲಘುತ್ತ್ವ, ರಜೋ ವ್ಯಕ್ತಿಗಳಲ್ಲಿ ಚಂಚಲತ್ವ, ತಮೋ ವ್ಯಕ್ತಿಗಳಲ್ಲಿ ಗುರುತ್ವ ವಿಶೇಷವಾಗಿ ಕಂಡುಬರುತ್ತವೆ. ವಿಜ್ಞಾನಭಿಕ್ಷುವು 'ಪಂಚಶಿಖಾಚಾರ್ಯ'ರ ಉಲ್ಲೇಖ ಮಾಡಿ ಸತ್ತ್ವ ಸುಖಾತ್ಮಕವೆಂದೂ, ರಜಸ್ಸು ದುಃಖಾತ್ಮಕವೆಂದೂ ಮತ್ತು ತಮಸ್ಸು ಮೋಹಾತ್ಮಕವೆಂದೂ ಹೇಳುತ್ತಾನೆ.(೧.೧೨೭)

ಸತ್ತ್ವಾದಿ ಗುಣಗಳು ಪ್ರಕೃತಿಯ ಧರ್ಮವಲ್ಲ; ಪ್ರಕೃತಿಯ ಸ್ವರೂಪವೇ ಆಗಿವೆ. ಸತ್ತ್ವಪ್ರಧಾನವಾದ ಎಲ್ಲ ವ್ಯಕ್ತಿಗಳಲ್ಲೂ ಸತ್ತ್ವವಿದೆ ಎಂಬುದು ಸಾಧರ್ಮ್ಯ

ಎಂದರೆ ಲಘುತ್ವವಿದೆ ಎಂದರ್ಥ. ಹಾಗೆಯೇ ಇತರ ಎಂದರೆ ರಜಸ್ಸು, ತಮಸ್ಸುಗಳಲ್ಲಿ ವೈಧರ್ಮ್ಯವಿರುತ್ತದೆ.

18. ಪ್ರಮಾ

ಪ್ರಮಾ ಎಂದರೆ ಪ್ರಮಾತೃವಿಗೆ ಅಜ್ಞಾತವಾದ (೧.೧೨೭) ವಸ್ತುವಿನ ನಿಶ್ಚಯ ಮಾಡಿಕೊಳ್ಳುವುದು. ಬುದ್ಧಿ ಮತ್ತು ಆತ್ಮ ಎರಡಕ್ಕೂ ಧರ್ಮವಾಗಿರುವುದು. (ಅನಧಿಗತವಸ್ತುನಃ ಅವಧಾರಣಂ ಪ್ರಮಾ । ೧.೮೭) ವಿಜ್ಞಾನಭಿಕ್ಷುವು ಪ್ರಮಾದಿಗಳನ್ನು ಈ ಕೆಳಕಂಡಂತೆ ವಿವರಿಸಿದ್ದಾನೆ:

ಪ್ರಮಾತಾ ಚೇತನಃ ಶುದ್ಧಃ ಪ್ರಮಾಣಂ ವೃತ್ತಿರೇವ ನಃ ।
ಪ್ರಮಾರ್ಥಾಕಾರವೃತ್ತೀನಾಂ ಚೇತನೇ ಪ್ರತಿಬಿಂಬನಮ್ ॥
ಪ್ರತಿಬಿಂಬಿತವೃತ್ತೀನಾಂ ವಿಷಯೋ ಮೇಯ ಉಚ್ಯತೇ ।
ಸಾಕ್ಷಾದ್ದರ್ಶನರೂಪಂ ಚ ಸಾಕ್ಷಿತ್ವಂ ವಕ್ಷ್ಯತಿ ಸ್ವಯಮ್ ॥
ಅತಃ ಸ್ಯಾತ್ ಕಾರಣಾಭಾವಾತ್ ವೃತ್ತೇಃ ಸಾಕ್ಷ್ಯೇವ ಚೇತನಃ ।
ವಿಷ್ಣ್ವಾದೇಃ ಸರ್ವಸಾಕ್ಷಿತ್ವಂ ಗೌಣಂ ಲಿಂಗಾದ್ಯಭಾವತಃ ॥

19. ಪ್ರಮಾಣಾದಿಗಳು

ಶುದ್ಧವಾದ ಚೇತನವೇ ಪ್ರಮಾತೃ. ವೃತ್ತಿಯೇ ಪ್ರಮಾಣ. ಚೇತನದಲ್ಲಿ ಪ್ರತಿಬಿಂಬಿತವಾಗುವುದೇ ಪ್ರಮಾ. ಪ್ರತಿಬಿಂಬಿತವಾದ ವೃತ್ತಿಯ ವಿಷಯವೇ ಪ್ರಮೇಯ. ಕಾರಣವಿಲ್ಲದ್ದರಿಂದ ವೃತ್ತಿಗೆ ಸಾಕ್ಷಿ ಚೇತನವೇ. ವಿಷ್ಣು ಮುಂತಾದವರನ್ನು ಸರ್ವಸಾಕ್ಷಿ ಎನ್ನುವುದು ಕೇವಲ ಗೌಣವಾದುದು, ಏಕೆಂದರೆ ಅದಕ್ಕೆ ಯಾವ ಲಿಂಗವೂ ಇಲ್ಲ. ಪ್ರತ್ಯಕ್ಷಜ್ಞಾನವು ನಿರ್ವಿಕಲ್ಪಕ–ಸವಿಕಲ್ಪಕರೂಪವಾಗಿರುತ್ತದೆ. ಇದನ್ನು ಆಲೋಚನವೆನ್ನುತ್ತಾರೆ. ಇಂದ್ರಿಯ ಅರ್ಥ ಸನ್ನಿಕರ್ಷ ಜನ್ಯವಾದ ಜ್ಞಾನವೇ ಪ್ರತ್ಯಕ್ಷ.(೧.೮೯) ವ್ಯಾಪ್ತಿಯನ್ನು ಗಮನಿಸಿ ವ್ಯಾಪಕದ ಜ್ಞಾನವು ವೃತ್ತಿರೂಪವಾದುದನ್ನು ಅನುಮಾನ ಪ್ರಮಾಣವೆನ್ನುವರು. (ವ್ಯಾಪ್ತಿದರ್ಶನಾತ್ ವ್ಯಾಪಕಜ್ಞಾನಂ ವೃತ್ತಿರೂಪಮನುಮಾನಂ ಪ್ರಮಾಣಮಿತ್ಯರ್ಥಃ) ಪುರುಷನಲ್ಲಿ ಆಗುವ ಬೋಧವೇ ಅನುಮಿತಿ. (ಅನುಮಿತಿಸ್ತು ಪೌರುಷೇಯೋ ಬೋಧ ಇತಿ । ೧.೧೦೦) ಯೋಗ್ಯವಾದ ಶಬ್ದದಿಂದ ಉಂಟಾಗುವ ಜ್ಞಾನ 'ಶಬ್ದ'ವೆಂಬ ಪ್ರಮಾಣ.(೧.೧೦೧) ಇದರ ಫಲವೇ ಪುರುಷನಿಗೆ ಆಗುವ ಶಬ್ದದ ತಿಳುವಳಿಕೆ. ಪ್ರಮಾಣಗಳ ಮೂಲಕ ಪ್ರಕೃತಿ–ಪುರುಷರ ಯಥಾರ್ಥರೂಪದ ಸಾಕ್ಷಾತ್ಕಾರವಾದಾಗ ಸುಖದುಃಖಾದಿಗಳು ಇರುವುದಿಲ್ಲ.(ತತ್ತ್ವ ಸಾಕ್ಷಾತ್ಕಾರೇಸತಿ ಸುಖದುಃಖೇ ನ ಭವತಃ । ೧.೧೦೭)

20. ಸತ್ಕಾರ್ಯವಾದ

ಸತ್ಕಾರ್ಯವಾದ ಅಥವಾ ಪರಿಣಾಮವಾದವೆಂದರೆ ಕಾರಣ ಮತ್ತು ಕಾರ್ಯಗಳಲ್ಲಿ ಭಿನ್ನತೆಯನ್ನು ಕಾಣದಿರುವುದು. ಕಾರ್ಯದಲ್ಲಿ ಕಾರಣ ಅಗೋಚರವಾಗಿ ಉಳಿದಿರುತ್ತದೆ. ಅವೆರಡರಲ್ಲಿಯೂ ಇರುವ ಪದಾರ್ಥವೊಂದೇ ಆದ್ದರಿಂದ ಕಾರ್ಯವು ಮೊದಲಿಲ್ಲವೆಂದು ಹೇಳಲಾಗುವುದಿಲ್ಲ. ಇಲ್ಲದ ವಸ್ತುವಿನಿಂದ ಯಾವುದೂ ಉತ್ಪನ್ನವಾಗಲಾರದು. ಕಾರಣಗಳಲ್ಲಿ ಎರಡು ಬಗೆ, ಉಪಾದಾನ ಕಾರಣ ಮತ್ತು ನಿಮಿತ್ತ ಕಾರಣ. ಉಪಾದಾನ ಕಾರಣ ಕಾರ್ಯದ ಉತ್ಪನ್ನಕ್ಕೆ ಮೂಲಪದಾರ್ಥ. ಆದರೆ ನಿಮಿತ್ತಕಾರಣ ಕಾರ್ಯವು ರೂಪುಗೊಳ್ಳಲು ಅಗತ್ಯವಾದ ಬಾಹ್ಯನಿಮಿತ್ತ. ವೈಶೇಷಿಕದಲ್ಲಿ ವಸ್ತುಗಳು ಉಂಟಾಗುವುದು ಅಣುವಿನಿಂದಾದರೆ ಸಾಂಖ್ಯದಲ್ಲಿ ಪ್ರಕೃತಿಯ ಪರಿಣಾಮದಿಂದ ಪ್ರಕಾಶಕ್ಕೆ ಬರುವುವು. (ವೈಶೇಷಿಕಾದಿಭಿಃ ಅಸದುತ್ಪಾದವಾದಿಭಿಃ ಇಷ್ಯತೇ ಲಾಘವಾತ್ । ೧.೧೨೩) ಅಸತ್ಕಾರ್ಯವಾದಿಗಳು ಹೇಳುವ ಪ್ರಾಗಭಾವ, ಪ್ರಧ್ವಂಸಾಭಾವಗಳು ಸತ್ಕಾರ್ಯವಾದಿಗಳ ಪಾಲಿಗೆ ಅತೀತ ಮತ್ತು ಅನಾಗತ ಅವಸ್ಥೆಗಳಷ್ಟೆ. ಈ ಸಂದರ್ಭದಲ್ಲಿ ವಿಜ್ಞಾನಭಿಕ್ಷುವು ಭೇದಾಭೇದ ವಾದವನ್ನು ಮುಂದಿಡುತ್ತಾನೆ.(೧.೧೨೫) ಕಾರ್ಯವನ್ನು ಉಂಟುಮಾಡಬಲ್ಲ ಶಕ್ತಿಯುಳ್ಳದ್ದೇ ಉಪಾದಾನ ಕಾರಣವಾಗಬಲ್ಲುದು.(೧.೧೧೭) ಕಾರ್ಯದ ಅನಾಗತ ಅವಸ್ಥೆಯನ್ನು ವಿಶೇಷವೆಂದಿದ್ದಾರೆ. ಉತ್ಪತ್ತಿಗೆ ಮೊದಲು ಕಾರಣದಲ್ಲಿ ಕಾರ್ಯವು ಅಡಗಿರುವುದರಿಂದ ಅದರಲ್ಲಿ ಯಾವ ವಿಶೇಷವೂ ಕಂಡುಬರದು. (ಉತ್ಪತ್ತೇಃ ಪ್ರಾಕ್ ಕಾರಣೇ ಕಾರ್ಯಸತ್ತಾಯಾಂ ಹಿ ನ ಕೋಽಪಿ ವಿಶೇಷೋಽಸ್ತಿ । ೧.೧೧೫)

21. ಅಪವರ್ಗ

ಅಪವರ್ಗವೆಂದರೆ ಪ್ರಧಾನ, ಪುರುಷರಲ್ಲಿ ಪರಸ್ಪರ ವಿಯೋಗವಾಗುವುದು. ಆದರೆ ಯಾರಲ್ಲಿ ವಿವೇಕಜ್ಞಾನ ಉಂಟಾಗಿದೆಯೋ ಅವನಲ್ಲಿ ಪ್ರಕೃತಿಯು ಅನಾಸಕ್ತವಾದರೂ ಇತರ ಅವಿವೇಕಿಗಳಿಗಾಗಿ ಸೃಷ್ಟಿರಚನೆಯು ನಿರಂತರವಾಗಿ ಸಾಗುತ್ತಿರುತ್ತದೆ.(೩.೬೫, ೬೬) ವಿವೇಕಜ್ಞಾನ ಪಡೆದವನ ಮುಂದೆ ಕುಲವಧುವಿನಂತೆ ಪ್ರಕೃತಿಯು ಹಿಂದೆ ಸರಿಯುತ್ತದೆ. ಪ್ರಕೃತಿ–ಪುರುಷರ ಸಂಯೋಗ ಸಂಭವಿಸಿದಾಗ ಉಂಟಾಗುವ ದುಃಖವನ್ನು ಹೋಗಲಾಡಿಸುವುದೇ ಮೋಕ್ಷವೆಂಬ ಪುರುಷಾರ್ಥ. (೩.೭೪) ಜೀವನ್ಮುಕ್ತನಾದರೋ ಕುಂಬಾರನ ಚಕ್ರವು ಕಾರ್ಯ ಮುಗಿದ ನಂತರವೂ ಸ್ವಲ್ಪಕಾಲ ತಿರುಗುತ್ತಲೇ ಇರುವಂತೆ ಪ್ರಾರಬ್ಧಕರ್ಮದ ಕಾರಣ ವಿವೇಕೋದಯವಾದ ನಂತರವೂ ಜೀವಂತವಾಗಿರುತ್ತಾನೆ.(೩.೮೨) ತಮ್ಮನ್ನು ವೇದಾಂತಿಗಳೆಂದು ಹೇಳಿಕೊಳ್ಳುವವರು ಮಾತ್ರ (ಕೇಚಿದ್ ವೇದಾಂತಿಬ್ರುವಾಃ) ಪ್ರಕೃತಿಯನ್ನು ಮನಃಕಲ್ಪನೆ

ಮಾತ್ರವೆಂದು ಹೇಳಿಕೊಳ್ಳುವರು ಎಂದು ವಿಜ್ಞಾನಭಿಕ್ಷುವು ಟೀಕಿಸುತ್ತಾನೆ.(೩.೬೭) ಪ್ರಕೃತಿಯು (ರಜ್ಜುವಿನಂತೆ ಇರುವ) ಪುರುಷನನ್ನು ಆವರಿಸುವ ಮಾಯೆಯಲ್ಲ. ಅವರು ರಜ್ಜು ಸರ್ಪಾದಿ ದೃಷ್ಟಾಂತದಿಂದ ಮಾಡಿರುವ ಸಿದ್ಧಾಂತವು ಅಸಂಖ್ಯವಾದ ಪುರುಷರಿಗೆ ಅನ್ವಯಿಸುವುದು ಅಸಾಧ್ಯ ಎಂದು ಅವರ ಸಿದ್ಧಾಂತವನ್ನು ನಿರಾಕರಿಸುತ್ತಾನೆ.

❑

ವಿಷಯಸೂಚಿ

ವಿಜ್ಞಾನಭಿಕ್ಷು ವಿರಚಿತ

ಸಾಂಖ್ಯಪ್ರವಚನಭಾಷ್ಯ

ವಿಜ್ಞಾನಭಿಕ್ಷುವಿರಚಿತ ಸಾಂಖ್ಯಪ್ರವಚನಭಾಷ್ಯ

ವಿಷಯಾಧ್ಯಾಯವೆಂಬ ಪ್ರಥಮ ಅಧ್ಯಾಯ

ಏಕೋಽದ್ವಿತೀಯ ಇತಿ ವೇದವಚಾಂಸಿ ಪುಂಸಿ
ಸರ್ವಾಭಿಮಾನವಿನಿವರ್ತನತೋಽಸ್ಯ ಮುಕ್ತ್ಯೈ
ವೈಧರ್ಮ್ಯಲಕ್ಷಣಭಿದಾ ವಿರಹಂ ವದಂತಿ
ನಾಖಂಡತಾಂ ಖ ಇವ ಧರ್ಮಶತಾವಿರೋಧಾತ್ ॥ ೧ ॥

ಭಾವಾರ್ಥ: ವೇದಗಳು ಅನೇಕ ಉಕ್ತಿಗಳ ಮೂಲಕ ಪುರುಷನು ಒಬ್ಬನೇ ಎಂದೂ ಅದ್ವಿತೀಯನೆಂದೂ ಹೇಳುತ್ತವೆ. ಪುರುಷನು ತನ್ನ ಅಭಿಮಾನಗಳನ್ನು ತೊರೆದಿರುವುದು ಸಹಜವೇ. ಆದರೆ ವೈಧರ್ಮ್ಯಗಳ ಕಾರಣ ಪುರುಷನು ಪ್ರಕೃತಿಯಿಂದ ಭಿನ್ನನೆಂದೇ (ವೇದಗಳು) ಹೇಳುವುವು ಮತ್ತು ಅವನ ಹಾಗೆ ತಿಳಿಯುವುದೇ ಅವನ ಮುಕ್ತಿಗಾಗಿ. ನೂರಾರು ಬಗೆಯಲ್ಲಿ ಪ್ರಕೃತಿ ಪುರುಷರು ಒಂದೇ ಎಂದು ಭಾವಿಸಿ ಪುರುಷನು ಆಕಾಶದಂತೆ ಅಖಂಡನು ಎಂದು ಹೇಳುವುದು ಸರಿಯಲ್ಲ.

ವಿವರಣೆ: ಇಲ್ಲಿ ಸಾಂಖ್ಯಶಾಸ್ತ್ರದ ಮುಖ್ಯತತ್ವವಾದ ಪ್ರಕೃತಿ–ಪುರುಷರ ಭಿನ್ನತೆಯನ್ನು ಸಮರ್ಥಿಸುವುದೇ ವಿಜ್ಞಾನ ಭಿಕ್ಷುವಿನ ಗುರಿ. ಸಾಂಖ್ಯಸೂತ್ರ ೧.೧೫೪ರ ಭಾಷ್ಯದಲ್ಲಿ ಈ ಅಂಶವನ್ನು ವಿಜ್ಞಾನ ಭಿಕ್ಷುವು ಸ್ಪಷ್ಟಪಡಿಸಿದ್ದಾನೆ. ಅದ್ವೈತಿಗಳು ಹೇಳುವ ಆತ್ಮನ ಏಕತೆಯು ಅವನಿಗೆ ಒಪ್ಪಿಗೆಯಿಲ್ಲ. ಏಕೆಂದರೆ ಅವನ ಪ್ರಕಾರ ಪುರುಷ ಜಾತಿ (genus) ಸೂಚಕ. (ಆತ್ಮೈಕ್ಯಶ್ರುತಿಷು ಏಕಾದಿಶಬ್ದಾಃ ಚಿದೇಕರೂಪತಾಮಾತ್ರ ಪರಾಃ) 'ಆತ್ಮ ಒಂದೇ ಎಂಬ ಶ್ರುತಿ ವಾಕ್ಯಗಳಲ್ಲಿ ಏಕ ಎಂಬ ಶಬ್ದವು ಚಿತ್ತವನ್ನು ಮಾತ್ರ ಸೂಚಿಸುತ್ತವೆ' ಎಂದು ಮುಂತಾಗಿ ವಾದ ಮಾಡುತ್ತಾನೆ.

'ವೈಧರ್ಮ್ಯ' ಎಂದರೆ ಹೋಲಿಕೆಯಿಲ್ಲದಿರುವುದು. 'ಅಸ್ಯ ಮುಕ್ತ್ಯೈ' ಎಂದರೆ ಪುರುಷನ ಮುಕ್ತಿಗಾಗಿ.

ತಸ್ಯ ಶ್ರುತಸ್ಯ ಮನನಾರ್ಥಮಥೋಪದೇಷ್ಟುಮ್
ಸದ್ಯುಕ್ತಿಜಾಲಮಿಹ ಸಾಂಖ್ಯಕೃದಾವಿರಾಸೀತ್ ।

ನಾರಾಯಣಃ ಕಪಿಲಮೂರ್ತಿರಶೇಷದುಃಖ–
ಹಾನಾಯ ಜೀವನಿವಹಸ್ಯ ನಮೋಽಸ್ತು ತಸ್ಮೈ ॥ ೨ ॥

ಭಾವಾರ್ಥ: ಹೀಗೆ ಆಸಕ್ತಿಯಿಂದ ಕೇಳುವವನ ಮನನ ಮತ್ತು ಉಪದೇಶಗಳ ಸಲುವಾಗಿ ಸಾಂಖ್ಯಶಾಸ್ತ್ರಕಾರನು ಸದುಕ್ತಿಗಳನ್ನು ಹೆಣೆದಿದ್ದಾನೆ. ಸಮಸ್ತ ಜೀವಿಗಳ ಎಲ್ಲ ದುಃಖವನ್ನು ಹೋಗಲಾಡಿಸಲು ಕಪಿಲನ ರೂಪದಲ್ಲಿ ನಾರಾಯಣನು ಅವತರಿಸಿದ್ದಾನೆ. ಇದೋ ಅವನಿಗೆ ನಾನು ನಮಸ್ಕರಿಸುವೆ.

ವಿವರಣೆ: ಪುರಾಣಗಳಲ್ಲಿ ಕಪಿಲರು ವಿಷ್ಣುವಿನ ಅಂಶದಿಂದ ಜನಿಸಿದರೆಂದು ವರ್ಣಿಸಲಾಗಿದೆ. (ನೋಡಿ: ವಿಷ್ಣುಪುರಾಣ ೫.೧೪.೯)

ಮನನವೆಂದರೆ ಮನವರಿಕೆ ಮಾಡುವ ವಿಧಾನ (ಅವಗತಿಹೇತುತ್ವ)

ನಾನೋಪಾಧಿಷು ಯನ್ನಾನಾರೂಪಂ ಭಾತ್ಯನಲಾರ್ಕವತ್ ।
ತತ್ಸಮಂ ಸರ್ವಭೂತೇಷು ಚಿತ್ಸಾಮಾನ್ಯಮುಪಾಸ್ಮಹೇ ॥ ೩ ॥

ಭಾವಾರ್ಥ: ಅಗ್ನಿಯಾಗಲಿ ಸೂರ್ಯನಾಗಲಿ ಬೇರೆ ಬೇರೆ ವಸ್ತುಗಳಲ್ಲಿ ಬೇರೆ ಬೇರೆ ರೂಪಗಳನ್ನು ಹೇಗೆ ಪಡೆಯುವರೋ ಹಾಗೆ ಎಲ್ಲಾ ಭೂತಗಳಲ್ಲಿಯೂ ಸರ್ವ ಸಾಧಾರಣವಾದ ಚೈತನ್ಯನಾಗಿರುವನೋ ಅವನ ಉಪಾಸನೆ ಮಾಡೋಣ.

ವಿವರಣೆ: ಅಗ್ನಿ ಸುಡುವಾಗ ಅಥವಾ ಸೂರ್ಯನ ಪ್ರತಿಬಿಂಬ ಕಂಡಾಗ ನಾನಾ ಆಕಾರಗಳಲ್ಲಿರುವಂತೆ ಅವನು ಚೈತನ್ಯ ಸ್ವರೂಪನಾಗಿ ವಿವಿಧ ಪ್ರಾಣಿಗಳಲ್ಲಿರುವನು.

ಈಶ್ವರಾನೀಶ್ವರತ್ವಾದಿ ಚಿದೇಕರಸವಸ್ತುನಿ ।
ವಿಮೂಢಾ ಯತ್ರ ಪಶ್ಯಂತಿ ತದಸ್ಮಿ ಪರಮಂ ಮಹಃ ॥ ೪ ॥

ಭಾವಾರ್ಥ: ಮೂರ್ಖರು ಚೈತನ್ಯದಿಂದ ಕೂಡಿದ ಯಾವ ಚಿತ್ತೆಂಬ ಏಕರಸದ ವಸ್ತುವಿನಲ್ಲಿ ಈಶ್ವರನನ್ನೂ ಅನೀಶ್ವರನನ್ನೂ ಕಾಣುವರೋ ಆ ಪರಮತೇಜಸ್ಸೇ ನಾನು.

ಕಾಲಾರ್ಕಭಕ್ಷಿತಂ ಸಾಂಖ್ಯಶಾಸ್ತ್ರಂ ಜ್ಞಾನಸುಧಾಕರಮ್ ।
ಕಲಾವಿಶಿಷ್ಟಂ ಭೂಯೋಽಪಿ ಪೂರಯಿಷ್ಯೇ ವಚೋಽಮೃತೈಃ ॥ ೫ ॥

ಅನುವಾದ: ಕಾಲವೆಂಬ ಸೂರ್ಯನಲ್ಲಿ ಲೀನನಾಗಿ ಕೊನೆಯ ಕಲೆಯಷ್ಟೇ ಉಳಿದಿರುವ ಚಂದ್ರನಂತೆ ಉಳಿದಿರುವ ಸಾಂಖ್ಯಶಾಸ್ತ್ರವನ್ನು ನನ್ನ ವಚನಾಮೃತದಿಂದ ಮತ್ತೆ ಪೂರ್ಣಗೊಳಿಸಿ ಕಂಗೊಳಿಸುವಂತೆ ಮಾಡುವೆ.

ಚಿದಚಿದ್ಗ್ರಂಥಿಭೇದೇನ ಮೋಚಯಿಷ್ಯೇ ಚಿತೋಽಪಿ ಚ ।
ಸಾಂಖ್ಯಭಾಷ್ಯಮಿಷೇಣಾಸ್ಮಾತ್ ಪ್ರೀಯತಾಂ
ಮೋಕ್ಷದೋಹರಿಃ ॥ ೬ ॥

ಅನುವಾದ: ಈ ಸಾಂಖ್ಯ (ಪ್ರವಚನ) ಭಾಷ್ಯದ ನೆವದಲ್ಲಿ ಚೇತನ–ಅಚೇತನಗಳ ಗಂಟನ್ನು ಕಿತ್ತುಹಾಕಿ ಚೇತನಗಳನ್ನೆಲ್ಲ ಮುಕ್ತಗೊಳಿಸುವೆ. ಈ ಕಾರ್ಯದಿಂದ ಮೋಕ್ಷವನ್ನು ನೀಡುವ ಆ ಹರಿಯು ಪ್ರಸನ್ನನಾಗಲಿ.

ವಿವರಣೆ: ಇಲ್ಲಿ 'ಚಿತಃ ಅಪಿ' ಎಂದರೆ ಸಾಂಖ್ಯರ ಪುರುಷರನ್ನೂ ಎಂದರ್ಥ.

ತತ್ ತ್ವಮೇವ ತ್ವಮೇವೈತದೇವಂ ಶ್ರುತಿಶತೋದಿತಮ್ ।
ಸರ್ವಾತ್ಮನಾಮವೈಧರ್ಮ್ಯಂ ಶಾಸ್ತ್ರಸ್ಯಾಸ್ಯೈವ ಗೋಚರಃ ॥ ೭ ॥

ಅನುವಾದ: 'ಅದು ನೀನೇ', 'ಅದೇ ನೀನು' ಎಂದು ನೂರಾರು ಶ್ರುತಿಗಳಲ್ಲಿ ಹೇಳಿದ 'ಎಲ್ಲ ಆತ್ಮಗಳಲ್ಲಿಯೂ ಸಮಾನವಾದ ಧರ್ಮವಿದೆ' ಎಂಬುದೇ ಈ ಶಾಸ್ತ್ರದ ದೃಷ್ಟಿಯಲ್ಲಿರುವುದು.

ವಿವರಣೆ: (ಅತ ಏವ ತ್ವಮೇವೈತದ್ ಇತ್ಯಾದಿ ಶ್ರುತಯಃ ಪರಸ್ಪರಂ ಏವ ಅವೈಧರ್ಮ್ಯ ಲಕ್ಷಣಾಭೇದಂ ಪ್ರತಿಪಾದಯಂತಿ–ಯೋಗವಾರ್ತಿಕ ೧.೨೯) ಶ್ರುತಿಗಳು 'ಅದು ನೀನೇ' ಎಂಬುದನ್ನು ಪ್ರತಿಪಾದಿಸುತ್ತವೆ ಎಂದು ಯೋಗವಾರ್ತಿಕದಲ್ಲಿ ಉಕ್ತವಾಗಿದೆ.

ಭಾಷ್ಯ: *ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿ–ಧ್ಯಾಸಿತವ್ಯಃ' (ಬೃ.ಉ. ೨.೪.೫) ಇತ್ಯಾದಿ ಶ್ರುತಿಷು ಪರಮಪುರುಷಾರ್ಥಸಾಧನಸ್ಯ ಆತ್ಮಸಾಕ್ಷಾತ್ಕಾರಸ್ಯ ಹೇತುತಯಾ ಶ್ರವಣಾದಿತ್ರಯಂ ವಿಹಿತಮ್ । ತತ್ರ ಶ್ರವಣಾದಾವುಪಾಯಾ–ಕಾಂಕ್ಷಾಯಾಂ ಸ್ಮರ್ಯತೇ*

ಶ್ರೋತವ್ಯಃ ಶ್ರುತಿವಾಕ್ಯೇಭ್ಯೋ ಮಂತವ್ಯಶ್ಚೋಪಪತ್ತಿಭಿಃ ।
ಮತ್ವಾ ಚ ಸತತಂ ಧ್ಯೇಯ ಏತೇ ದರ್ಶನಹೇತವಃ ॥

'ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ' (ಅರೇ, ಆತ್ಮನನ್ನು ನೋಡಬೇಕು, ಅವನ (ಬಗ್ಗೆ) ಕೇಳಬೇಕು, ಅವನನ್ನು ಅರಿಯಬೇಕು, ಅವನನ್ನು ಕುರಿತು ಮತ್ತೆ ಮತ್ತೆ ಚಿಂತಿಸಬೇಕು) ಮುಂತಾದ ಶ್ರುತಿವಾಕ್ಯಗಳು ಪರಮಪುರುಷಾರ್ಥವಾದ (ಮೋಕ್ಷಕ್ಕೆ) ಸಾಧನವಾದ ಆತ್ಮಸಾಕ್ಷಾತ್ಕಾರದ ಕಾರಣಗಳಿಂದ 'ಕೇಳಬೇಕು' ಮುಂತಾದುವನ್ನು ವಿಧಿಸಿದ್ದಾರೆ. ಈ ವಿಷಯದಲ್ಲಿ ಉಪಾಯಗಳನ್ನು ತಿಳಿಸುವ ದಿಶೆಯಲ್ಲಿ ಹೀಗಿದೆ–

ಶ್ರುತಿವಾಕ್ಯಗಳಿಂದ ಕೇಳಬೇಕು, (ಅನಂತರ) ಯುಕ್ತಿಗಳ ಸಹಾಯದಿಂದ ಮನನ ಮಾಡಬೇಕು. ಹೀಗೆ ಮನನ ಮಾಡಿ ಸತತವಾಗಿ ಧ್ಯಾನ ಮಾಡಬೇಕು. ಇವು ಆತ್ಮಸಾಕ್ಷಾತ್ಕಾರಕ್ಕೆ ಕಾರಣಗಳು.

ಭಾಷ್ಯ: ಧ್ಯೇಯೋ ಯೋಗಶಾಸ್ತ್ರೇಣ ಇತಿ ಶೇಷಃ ।

ಅನುವಾದ: 'ಧ್ಯೇಯ' ಎಂಬುದಕ್ಕೆ ಯೋಗಶಾಸ್ತ್ರದ ಪ್ರಕಾರ ಎಂದು ಜೋಡಿಸಬೇಕು.

ಭಾಷ್ಯ: *ತತ್ರ ಶ್ರುತಿಭ್ಯಃ ಶ್ರುತೇಷು ಪುರುಷಾರ್ಥತದ್ಧೇತುಜ್ಞಾನ–ತದ್ವಿಷಯಾತ್ಮಸ್ವರೂಪಾದಿಷು ಶ್ರುತ್ಯವಿರೋಧಿನೀಃ ಉಪಪತ್ತೀಃ ಷಡಧ್ಯಾಯೀರೂಪೇಣ ವಿವೇಕಶಾಸ್ತ್ರೇಣ ಕಪಿಲಮೂರ್ತಿರ್ಭಗವಾನ್ ಉಪದಿದೇಶ ।*

ಅನುವಾದ: ಅಲ್ಲಿ ಶ್ರುತಿಗಳ ಮೂಲಕ ಪುರುಷಾರ್ಥವನ್ನುಂಟುಮಾಡುವ ಜ್ಞಾನಕ್ಕೆ ವಿಷಯವಾದ ಆತ್ಮಸ್ವರೂಪ ಮುಂತಾದುದರ ಸಂಬಂಧದಲ್ಲಿ ಶ್ರುತಿಗೆ ವಿರುದ್ಧವಲ್ಲದ ಯುಕ್ತಿಗಳನ್ನು, ಆರು ಅಧ್ಯಾಯಗಳನ್ನುಳ್ಳ ವಿವೇಕಶಾಸ್ತ್ರದಿಂದ ಭಗವಂತನೇ ಕಪಿಲನ ರೂಪದಲ್ಲಿ (ಅವತರಿಸಿ) ಉಪದೇಶಿಸಿದ್ದಾನೆ.

ವಿವರಣೆ: 'ಶ್ರುತ್ಯವಿರೋಧಿನೀಃ ಉಪಪತ್ತೀಃ' 'ಶ್ರುತಿಗಳಿಗೆ ವಿರುದ್ಧವಲ್ಲದ ಯುಕ್ತಿಗಳನ್ನು' ಎಂಬುದು ಗಮನಾರ್ಹ.

ಭಾಷ್ಯ: *ನನು ನ್ಯಾಯವೈಶೇಷಿಕಾಭ್ಯಾಮಪಿ ಏತೇಷು ಅರ್ಥೇಷು ನ್ಯಾಯಃ ಪ್ರದರ್ಶಿತ ಇತಿ ತಾಭ್ಯಾಮಸ್ಯ ಗತಾರ್ಥತ್ವಂ, ಸಗುಣ–ನಿರ್ಗುಣತ್ವಾದಿ ವಿರುದ್ಧ ರೂಪೈಃ ಆತ್ಮಸಾಧಕತಯಾ ತದುಕ್ತಿಭಿಃ ಅತ್ರತ್ಯಯುಕ್ತೀನಾಂ ವಿರೋಧೇನ ಉಭಯೋರಪಿ ದುರ್ಘಟಂ ಚ ಪ್ರಾಮಾಣ್ಯಮಿತಿ ।*

ಅನುವಾದ: ನ್ಯಾಯವೈಶೇಷಿಕಗಳಿಂದಲೂ ಇದಕ್ಕೆ (ಆತ್ಮಸ್ವರೂಪದ ಜ್ಞಾನ) ಸಂಬಂಧಿಸಿದಂತೆ ಚರ್ಚೆ ನಡೆದಿದೆಯಾದ್ದರಿಂದ ಸಾಂಖ್ಯಶಾಸ್ತ್ರದ ಉದ್ದೇಶ ಅನವಶ್ಯಕ. ಸಗುಣ ನಿರ್ಗುಣತ್ವಾದಿ ಪರಸ್ಪರ ವಿರುದ್ಧವಾದ ರೀತಿಗಳಿಂದಲೂ ಆತ್ಮನನ್ನು ತಿಳಿಯಪಡಿಸಿದರೂ ಸಾಂಖ್ಯಶಾಸ್ತ್ರದ ಯುಕ್ತಿಗಳು ಅವುಗಳಿಗೆ ವಿರುದ್ಧವಾಗಿ ಯುಕ್ತಿಗಳು ಕಂಡುಬರುತ್ತವೆ. ಹೀಗಿರುವಾಗ ಎರಡರ ಪ್ರಾಮಾಣ್ಯವು ಒಪ್ಪತಕ್ಕದ್ದಲ್ಲ.

ಭಾಷ್ಯ: *ಮೈವಮ್ ವ್ಯಾವಹಾರಿಕಪಾರಮಾರ್ಥಿಕರೂಪವಿಷಯ–ಭೇದೇನ ಗತಾರ್ಥತ್ವ ವಿರೋಧಯೋರಭಾವಾತ್ । ನ್ಯಾಯ–ವೈಶೇಷಿಕಾಭ್ಯಾಂ ಹಿ ಸುಖಿ ದುಃಖ್ಯಾದ್ಯನುವಾದತೋ ದೇಹಾದಿ–ಮಾತ್ರವಿವೇಕೇನ ಆತ್ಮಾ ಪ್ರಥಮಭೂಮಿಕಾಯಾಂ ಅನುಮಾಪಿತಃ ಏಕದಾ ಪರಸೂಕ್ಷ್ಮೇ ಪ್ರವೇಶಾಸಂಭವಾತ್ । ತದೀಯಂ ಚ ಜ್ಞಾನಂ ದೇಹಾದ್ಯಾತ್ಮತಾನಿರಸನೇನ ವ್ಯಾವಹಾರಿಕಂ ತತ್ತ್ವಜ್ಞಾನಂ ಭವತ್ಯೇವ । ಯಥಾ ಪುರುಷೇ ಸ್ಥಾಣುಭ್ರಮನಿರಾಸಕತಯಾ ಕರಚರಣಾದಿಮತ್ತ್ವಜ್ಞಾನಂ ವ್ಯವಹಾರತಸ್ತತ್ತ್ವಜ್ಞಾನಂ ತದ್ವತ್ ।*

ಅನುವಾದ: ವ್ಯಾವಹಾರಿಕ ಮತ್ತು ಪಾರಮಾರ್ಥಿಕ ರೂಪದ ವಿಷಯಗಳು ಭಿನ್ನವಾಗಿರುವುದರಿಂದ ಉದ್ದೇಶದ ವೈಫಲ್ಯವಾಗಲಿ ಪರಸ್ಪರ ವಿರೋಧವಾಗಲಿ ಇರುವುದು ಸಾಧ್ಯವಿಲ್ಲ. ನ್ಯಾಯ–ವೈಶೇಷಿಕಗಳಾದರೊ 'ಇವನು ಸುಖಿ'; 'ಇವನು ದುಃಖಿ' ಎಂದು ಚರ್ಚಿಸುತ್ತಾ ಕೇವಲ ದೇಹಾದಿಗಳನ್ನೇ ತೆಗೆದುಕೊಂಡು ಆತ್ಮವನ್ನು

ಬೇರೆಯೆಂದು ಭಾವಿಸಿ ಅದಕ್ಕೆ ಮೊದಲ ಸ್ಥಾನವನ್ನು ಕಲ್ಪಿಸಿದ್ದಾರೆ. ಏಕೆಂದರೆ ಒಮ್ಮೆಲೇ ಅತಿಸೂಕ್ಷ್ಮ ತತ್ತ್ವವನ್ನು ಪ್ರವೇಶಿಸುವುದು ಅಸಂಭವ. ಅದರ ಅರಿವು 'ದೇಹಾದಿಗಳು ಆತ್ಮ'ವೆಂಬುದನ್ನು ನಿರಾಕರಿಸಿ ಅದು ಬೇರೆಯೆಂಬ ಅವರ ಪಾಲಿನ ತತ್ತ್ವಜ್ಞಾನ ವ್ಯಾವಹಾರಿಕವಾದುದು. ಹೇಗೆಂದರೆ ಪುರುಷನಲ್ಲಿ ಮೋಟು ಮರವೆಂಬ ಭ್ರಮೆಯುಂಟಾದಾಗ ಕೈಕಾಲುಗಳನ್ನು ಕಂಡು ಭ್ರಮನಿರಸನವಾಗುವಂತೆ ಅವರು ಹೇಳುವ ಆತ್ಮಜ್ಞಾನ ಕೇವಲ ವ್ಯಾವಹಾರಿಕವಾದುದು.

ವಿವರಣೆ: ಮೇಲಿನ ವಾದದಲ್ಲಿ ಅಡಗಿರುವ ತತ್ತ್ವವೆಂದರೆ, ನೈಯ್ಯಾಯಿಕರ ದೃಷ್ಟಿಕೋನಗಳು ಕೇವಲ ವ್ಯಾವಹಾರಿಕ (ಸಾಂಖ್ಯರ ದೃಷ್ಟಿಕೋನದಂತೆ ಪಾರಮಾರ್ಥಿಕವಲ್ಲ). ಅವರು ಆತ್ಮಕ್ಕೆ ಮೊದಲ ಸ್ಥಾನ ನೀಡಿರುವರು; ಅಷ್ಟೆ.

ಭಾಷ್ಯ: *ಅತ ಏವ–*

ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು ।
ತಾನಕೃತ್ಸ್ನವಿದೋ ಮಂದಾನ್ ಕೃತ್ಸ್ನವಿನ್ನವಿಚಾಲಯೇತ್ ॥ (ಗೀತೆ ೩.೨೯)

ಅನುವಾದ: ಆದ್ದರಿಂದಲೇ ಪ್ರಕೃತಿಯ ಗುಣಗಳಿಂದ ಮೈಮರೆತಿರುವವರು ಗುಣ, ಕರ್ಮಗಳಲ್ಲಿ ಆಸಕ್ತರಾಗಿರುವರು. ಎಲ್ಲವನ್ನೂ ಅರಿಯದ ಮಂದಬುದ್ಧಿಯವರನ್ನು ಎಲ್ಲವನ್ನೂ ಅರಿತ ಜ್ಞಾನಿಯು (ಕರ್ಮದಿಂದ) ಸರಿಸಬಾರದು.

ಭಾಷ್ಯ: *ಇತಿ ಗೀತಾಯಾಂ ಕರ್ತೃತ್ವಾಭಿಮಾನಿನಃ ತಾರ್ಕಿಕಸ್ಯ ಅಕೃತ್ಸ್ನವಿತ್ತ್ವಮೇವ ಕೃತ್ಸ್ನವಿತ್ ಸಾಂಖ್ಯಾಪೇಕ್ಷಯೋಕ್ತಂ, ನ ತು ಸರ್ವಥಾ ಏವ ಅಜ್ಞತ್ವಮಿತಿ । ತಥಾ ತದೀಯಮಪಿ ಜ್ಞಾನಂ ಅಪರವೈರಾಗ್ಯದ್ವಾರಾ ಪರಂಪರಯಾ ಮೋಕ್ಷಸಾಧನಂ ಭವತ್ಯೇವ ಇತಿ ।*

ಅನುವಾದ: ಗೀತೆಯ ಈ ಶ್ಲೋಕದಲ್ಲಿ ಕರ್ತೃತ್ವಾಭಿಮಾನಿಯಾದ ತಾರ್ಕಿಕನು ಎಲ್ಲವನ್ನೂ ಬಲ್ಲವನಂತಲ್ಲ, ಎಂದರೆ ಎಲ್ಲವನ್ನೂ ಬಲ್ಲ ಸಾಂಖ್ಯನಂತೆ ಅಲ್ಲ ಎಂದರ್ಥ. ನೈಯಾಯಿಕನು ಸರ್ವಥಾ ಅಜ್ಞನೆಂದಲ್ಲ.

ಹಾಗೆಯೇ ಅವರು ತಿಳಿಸುವ ಜ್ಞಾನವು ಅಪರವೈರಾಗ್ಯವನ್ನು ನೀಡಿ ಅದರ ಮುಖಾಂತರ ಪರಂಪರೆಯಿಂದ ಮೋಕ್ಷಕ್ಕೆ ಸಾಧನವಾಗುವುದು.

ವಿವರಣೆ: ನ್ಯಾಯ ವೈಶೇಷಿಕಗಳು ನೇರವಾಗಿ ಮೋಕ್ಷ ಸಾಧನಗಳಲ್ಲದಿರಬಹುದು. ಆದರೆ ಪರಂಪರೆಯ ಮಾರ್ಗದಿಂದ ಮೋಕ್ಷ ಪಡೆಯುವುದು ಸಾಧ್ಯವಾದೀತು. ಅದಕ್ಕೆ ಅವರು ನೀಡುವ ಜ್ಞಾನ ಸಹಾಯಕವಾಗುವುದು.

ಭಾಷ್ಯ: *ತಜ್‌ಜ್ಞಾನಾಪೇಕ್ಷಯಾಪಿ ಚ ಸಾಂಖ್ಯ ಜ್ಞಾನಮೇವ ಪಾರಮಾರ್ಥಿಕಂ, ಪರವೈರಾಗ್ಯದ್ವಾರಾ ಸಾಕ್ಷಾನ್ಮೋಕ್ಷಸಾಧನಂ ಚ ಭವತಿ । ಉಕ್ತಗೀತವಾಕ್ಯೇನ ಆತ್ಮಕರ್ತೃತ್ವವಿತ್ತ್ವಸ್ಯೈವ ಕೃತ್ಸ್ನವಿತ್ತ್ವಸಿದ್ಧೇಃ । 'ತೀರ್ಣೋಹಿ ತದಾಭವತಿ ಹೃದಯಸ್ಯ*

ಶೋಕಾನ್ ಕಾಮಾದಿಕಂ ಮನ ಏವ ಮನ್ಯಮಾನಃ' (ಬೃ.ಉ. ೪.೩.೨೨), 'ಸನ್ನುಭೌ ಲೋಕಾವನುಸಂಚರತಿ ಧ್ಯಾಯತೀವ ಲೇಲಾಯತೀವ' (ಬೃ.ಉ. ೪.೩.೭), 'ಸಯತ್ತತ್ರ ಕಿಂಚಿತ್ ಪಶ್ಯತ್ಯನ್ವಾಗತಸ್ತೇನ ಭವತಿ' (ಬೃ.ಉ. ೪.೩.೧೬) ಇತ್ಯಾದಿ ತಾತ್ತ್ವಿಕಶ್ರುತಿಶತೈಃ ।

ಅನುವಾದ: ಆದರೆ ನ್ಯಾಯ ವೈಶೇಷಿಕ ಜ್ಞಾನಕ್ಕಿಂತ ಸಾಂಖ್ಯಜ್ಞಾನವು ಪಾರಮಾರ್ಥಿಕವಾದುದು. ಇದೇ ಅತ್ಯಧಿಕ ವೈರಾಗ್ಯವನ್ನುಂಟು ಮಾಡಿ ಸಾಕ್ಷಾತ್ ಮೋಕ್ಷಸಾಧನವಾಗುತ್ತದೆ. ಮೇಲೆ ಹೇಳಿದ ಗೀತಾ ವಾಕ್ಯದಿಂದ ಆತ್ಮನಲ್ಲಿ ಅಕರ್ತೃತ್ವ ಬುದ್ಧಿಯುಳ್ಳವನನ್ನೇ 'ಕೃತ್ಸ್ನವಿತ್' ಎಂದು ಹೇಳಿರುವುದು ಗೊತ್ತಾಗುವುದು. 'ಕಾಮಾದಿಗಳನ್ನು ಮನಸ್ಸಿನ ಬದಲಾವಣೆಯೆಂದಷ್ಟೇ ಅರಿತು ಹೃದಯದ ಎಲ್ಲ ಶೋಕಗಳನ್ನೂ ದಾಟುವನು'. 'ಪುರುಷನು ಎರಡು ಲೋಕಗಳಲ್ಲಿಯೂ ಸಂಚರಿಸುವನು. ಅವನು (ಬುದ್ಧಿವೃತ್ತಿಯಂತೆ) ಚಿಂತನೆ ಮಾಡುತ್ತಾ, ಚಂಚಲವಾಗಿರುವಂತೆ ತೋರುತ್ತಾನೆ'. ಪುರುಷನು ಏನನ್ನು ನೋಡುತ್ತಾನೊ ಅದರಿಂದ ಪ್ರಭಾವಿತನಾಗುವುದಿಲ್ಲ! ಎಂದು ನೂರಾರು ಶ್ರುತಿಗಳಿಂದ ತಿಳಿಯುವುದು.

ಭಾಷ್ಯ: *ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।*
ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥ ಗೀ. ೩.೨೭

ಅನುವಾದ: ಪ್ರಕೃತಿಯಿಂದುಂಟಾದ ಗುಣಗಳ ಮೂಲಕ ಮಾಡಿದ ಸಮಸ್ತಕರ್ಮಗಳಿಗೂ ನಾನೇ ಕರ್ತೃ ಎಂದು ಅಹಂಕಾರದಿಂದ ಮೈಮರೆತ ವ್ಯಕ್ತಿಯು ಭಾವಿಸುತ್ತಾನೆ.

ಭಾಷ್ಯ: *ನಿರ್ವಾಣಮಯ ಏವಾಯಮಾತ್ಮಾ ಜ್ಞಾನಮಯೋಽಮಲಃ ।*
ದುಃಖಾಜ್ಞಾನಮಯಾ ಧರ್ಮಾಃ ಪ್ರಕೃತೇಸ್ತೇತು ನಾತ್ಮನಃ ॥
ವಿಷ್ಣುಪುರಾಣ–೬.೭.೨೨

ಅನುವಾದ: ಈ ಆತ್ಮ ಪ್ರಶಾಂತವೂ, ಜ್ಞಾನಮಯವೂ, ನಿರ್ಮಲವೂ ಆಗಿರುತ್ತದೆ. ಅದರಲ್ಲಿ ವ್ಯಕ್ತಪಡುವ ದುಃಖ, ಅಜ್ಞಾನ ಮುಂತಾದ ಧರ್ಮಗಳು ಪ್ರಕೃತಿಯಲ್ಲಿರುವುದೇ ಹೊರತು ಆತ್ಮನದಲ್ಲ.

ಭಾಷ್ಯ: *ಇತ್ಯಾದಿ ತಾತ್ತ್ವಿಕಸ್ಮೃತಿಶತೈಶ್ಚ, ನ್ಯಾಯವೈಶೇಷಿಕೋಕ್ತ–ಜ್ಞಾನಸ್ಯ ಪರಮಾರ್ಥಭೂಮೌ ಬಾಧಿತತ್ವಾಚ್ಚ । ನ ಚ ಏತಾವತಾ ನ್ಯಾಯಾದ್ಯಪ್ರಾಮಾಣ್ಯಮ್, ವಿವಕ್ಷಿತಾರ್ಥೇ ದೇಹಾದ್ಯತಿರೇಕಾಂಶೇ ಬಾಧಾಭಾವಾತ್, 'ಯತ್ಪರಃ ಶಬ್ದಃ ಸ ಶಬ್ದಾರ್ಥಃ' । ಇತಿ ನ್ಯಾಯಾತ್ ಆತ್ಮನಿ ಸುಖಾದಿಮತ್ತ್ವಸ್ಯ ಲೋಕಸಿದ್ಧತಯಾ ತತ್ರ ಪ್ರಮಾಣಾಂತರಾನಪೇಕ್ಷಣೇನ ತದಂಶಸ್ಯಾನುವಾದತ್ವಾನ್ನ ಶಾಸ್ತ್ರತಾತ್ಪರ್ಯ ವಿಷಯತ್ವಮಿತಿ ।*

ಅನುವಾದ: ಹೀಗೆ ಇದೇ ಮುಂತಾಗಿ ನೂರಾರು ತತ್ತ್ವದಿಂದ ಕೂಡಿದ ಸ್ಮೃತಿಗಳನ್ನು ಉಲ್ಲೇಖಿಸಿ ನ್ಯಾಯ ವೈಶೇಷಿಕರು ಹೇಳಿರುವ ಜ್ಞಾನವು ಪಾರಮಾರ್ಥಿಕ ಸ್ಥಿತಿಯಲ್ಲಿ ಬಾಧವುಂಟಾಗುತ್ತದೆ. ಇಷ್ಟರಿಂದಲೇ ನ್ಯಾಯಾದಿಗಳು ಅಪ್ರಮಾಣವೆಂದಂತಲ್ಲ. 'ಯತ್‌ಪರಃ ಶಬ್ದಃ ಸ ಶಬ್ದಾರ್ಥಃ' ಎಂಬ ನ್ಯಾಯದಂತೆ ದೇಹವನ್ನು ಮೀರಿದ ಆತ್ಮನಿರುವನ್ನೆಂಬುದು ಪ್ರಮಾಣ ವಿರೋಧವಲ್ಲ. ಆತ್ಮನಲ್ಲಿ 'ಸುಖಿ' 'ದುಃಖಿ' ಎಂಬ ಜ್ಞಾನವು ಲೋಕವ್ಯವಹಾರದಲ್ಲಿರುವುದರಿಂದ ಅದಕ್ಕಾಗಿ ಬೇರೆ ಪ್ರಮಾಣದ ಅಗತ್ಯವಿಲ್ಲ. ಹೀಗೆ ಈ ಅಂಶವನ್ನು ಮಾತ್ರ ಶಾಸ್ತ್ರದಲ್ಲಿ ಸೇರಿಸಲಾಗಿದೆ.

ಭಾಷ್ಯ: *ಸ್ಯಾದೇತತ್ । ನ್ಯಾಯವೈಶೇಷಿಕಾಭ್ಯಾಂ ಅತ್ರ ಅವಿರೋಧೋ ಭವತು । ಬ್ರಹ್ಮ ಮೀಮಾಂಸಾಯೋಗಾಭ್ಯಾಂ ತು ವಿರೋಧಃ ಅಸ್ತ್ಯೇವ । ತಾಭ್ಯಾಂ ನಿತ್ಯೇಶ್ವರಸಾಧನಾತ್, ಅತ್ರ ಚೇಶ್ವರಸ್ಯ ಪ್ರತಿಷಿಧ್ಯಮಾನತ್ವಾತ್ ।*

ಅನುವಾದ: ನ್ಯಾಯ ವೈಶೇಷಿಕದೊಡನೆ ವಿರೋಧವಿಲ್ಲದಿರಬಹುದು. ಆದರೆ ಬ್ರಹ್ಮಮೀಮಾಂಸೆ (ವೇದಾಂತ) ಮತ್ತು ಯೋಗದೊಡನೆ ಮಾತ್ರ ವಿರೋಧವುಂಟು; ಏಕೆಂದರೆ ಅವರು ನಿತ್ಯನಾದ ಈಶ್ವರನನ್ನು ಒಪ್ಪಿದ್ದಾರೆ. ಇಲ್ಲಿ ಮಾತ್ರ (ಸಾಂಖ್ಯರು) ಅದನ್ನು ನಿರಾಕರಿಸಿದ್ದಾರೆ.

ಭಾಷ್ಯ: *ನ ಚ ಅತ್ರಾಪಿ ವ್ಯಾವಹಾರಿಕ-ಪಾರಮಾರ್ಥಿಕ ಭೇದೇನ ಸೇಶ್ವರ ನಿರೀಶ್ವರವಾದಯೋಃ ಅವಿರೋಧೋऽಸ್ತು; ಸೇಶ್ವರವಾದಸ್ಯ ಉಪಾಸನಾಪರತ್ವ-ಸಂಭವಾತ್ ಇತಿ ವಾಚ್ಯಮ್ ।*

ಅನುವಾದ: ಸೇಶ್ವರವಾದವು ಉಪಾಸನೆಗೆ ಇರುವ ಸಂಭವವಿದೆ. ಆದ್ದರಿಂದ ಇಲ್ಲಿಯೂ ಸಹ ವ್ಯಾವಹಾರಿಕ-ಪಾರಮಾರ್ಥಿಕ ಭೇದದಿಂದ ಸೇಶ್ವರ ಮತ್ತು ನಿರೀಶ್ವರ ವಾದಗಳಲ್ಲಿ ವಿರೋಧ ಒಪ್ಪದಿರಬಹುದು.

ಭಾಷ್ಯ: *ವಿನಿಗಮಕಭಾವಾತ್ । ಈಶ್ವರೋ ಹಿ ದುರ್ಜ್ಞೇಯಃ ಇತಿ ನಿರೀಶ್ವರತ್ವಮಪಿ ಲೋಕವ್ಯವಹಾರಸಿದ್ಧಂ ಐಶ್ವರ್ಯ-ವೈರಾಗ್ಯಾನುವದಿತುಂ ಶಕ್ಯತೇ; ಆತ್ಮನಃ ಸಗುಣತ್ವಮಿವ!*

ಅನುವಾದ: ಆದರೆ ಯಾವ ಪಕ್ಷದ ವಾದವೂ ಸಿದ್ಧವಾಗುವುದಿಲ್ಲ. ಈಶ್ವರನನ್ನು ತಿಳಿಯುವುದು ಬಹಳಕಷ್ಟ; ಹೀಗೆಂದು ಲೋಕದ ವ್ಯವಹಾರದಲ್ಲಿ ನಿರೀಶ್ವರತ್ವವೂ ಸಿದ್ಧವಾಗುತ್ತದೆ. ಅದೇ ಮಾತನ್ನು ಆತ್ಮನು ಸಗುಣನೆನ್ನುವಂತೆ ಹೇಳಿ ಐಶ್ವರ್ಯದಿಂದ ವಿರಕ್ತಿಯನ್ನು ಪಡೆಯಲೂ ಸಾಧ್ಯವಾಗುತ್ತದೆ.

ವಿವರಣೆ: ವಿನಿಗಮನ ಎಂದರೆ ಬೇರೆಯ ಪಕ್ಷವು ಸರಿಯೆಂದು ಯುಕ್ತಿಯಿಂದ ತಿಳಿಸುವುದು.

ಭಾಷ್ಯ: *ನ ತು ಕಾಽಪಿ ಶ್ರುತ್ಯಾದೌ ಈಶ್ವರಃ ಸ್ಫುಟಂ ಪ್ರತಿಷಿಧ್ಯತೇ ಯೇನ ಸೇಶ್ವರವಾದಸ್ಯೈವ ವ್ಯಾವಹಾರಿಕಂ ಅವಧಾರ್ಯೇತ ಇತಿ।*

ಅನುವಾದ: ಶ್ರುತಿಗಳಲ್ಲಿಯೂ ಸಹ ಈಶ್ವರನನ್ನು ಸ್ಪಷ್ಟವಾಗಿ ನಿಷೇಧ ಮಾಡಿಲ್ಲ. ಅದರಿಂದ ಸೇಶ್ವರವಾದವನ್ನು ವ್ಯಾವಹಾರಿಕವೆನ್ನಬಹುದು.

ಭಾಷ್ಯ: *ಅತ್ರಾಪಿ ವ್ಯಾವಹಾರಿಕಪಾರಮಾರ್ಥಿಕ ಭಾವೋ ಭವತಿ ।*

ಅನುವಾದ: ಇಲ್ಲಿಯೂ ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಭಾವ ಉಂಟಾಗುತ್ತದೆ.

ಭಾಷ್ಯ: *'ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್' । (ಗೀತಾ ೧೬.೮) ಇತ್ಯಾದಿ ಶಾಸ್ತ್ರೈರ್ನಿರೀಶ್ವರವಾದಸ್ಯ ನಿಂದಿತತ್ವಾತ್ । ಅಸ್ಮಿನ್ನೇವ ಶಾಸ್ತ್ರೇ ವ್ಯಾವಹಾರಿಕಸ್ಯೈವ ಈಶ್ವರ ಪ್ರತಿಷೇಧಸ್ಯ ಐಶ್ವರ್ಯ ವೈರಾಗ್ಯಾದ್ಯರ್ಥಂ ಅನುವಾದತ್ವೌಚಿತ್ಯಾತ್ । ಯದಿ ಹಿತಾಕಾಯತಿಕಮತಾನುಸಾರೇಣ ನಿತ್ಯೈಶ್ವರ್ಯಂ ನ ಪ್ರತಿಷಿಧ್ಯೇತ, ತದಾ ಪರಿಪೂರ್ಣನಿತ್ಯನಿರ್ದೋಷೈಶ್ವರ್ಯ-ದರ್ಶನೇನ ತತ್ರ ಚಿತ್ತಾವೇಶತೋ ವಿವೇಕಾಭ್ಯಾಸ ಪ್ರತಿಬಂಧಃ ಸ್ಯಾದಿತಿ ಸಾಂಖ್ಯಾಚಾರ್ಯಾಣಾಮಾಶಯಃ । ಸೇಶ್ವರವಾದಸ್ಯ ನ ಕ್ವಾಪಿ ನಿಂದಾದಿಕಮಸ್ತಿ, ಯೇನ ಉಪಾಸನಾದಿಪರತಯಾ ತಚ್ಛಾಸ್ತ್ರಂ ಸಂಕೋಚ್ಯೇತ ।*

(ಆಸುರೀ ಸ್ವಭಾವದವರು) 'ಈ ಜಗತ್ತು ಅಸತ್ಯ, ಆಧಾರವಿಲ್ಲದ್ದು, ಈಶ್ವರನಿಲ್ಲದ್ದು' ಎಂದಿದ್ದಾರೆ. ಈ ಶಾಸ್ತ್ರದಲ್ಲಿ ವ್ಯಾವಹಾರಿಕವಾದ ಈಶ್ವರನ ನಿರಾಕರಣೆಯಿದೆ. ಏಕೆಂದರೆ ಅಂತಹ ಈಶ್ವರ ಭಾವದಲ್ಲಿ ಮಾತ್ರ ನಿರ್ಲಕ್ಷ್ಯವಿರುವುದು ಉಚಿತವೇ. ಲೋಕಾಯತದವರ ಪ್ರಕಾರದಂತೆ ನಿತ್ಯ ಈಶ್ವರ ಭಾವದ ಪ್ರತಿಷೇಧವನ್ನೂ ಮಾಡುವುದಿಲ್ಲ. ಪರಿಪೂರ್ಣ, ನಿತ್ಯ ಮತ್ತು ನಿರ್ದೋಷ ಈಶ್ವರಭಾವವನ್ನು ಕಂಡಾಗ ಚಿತ್ತದ ಆಸಕ್ತಿಯಿಂದ ವಿವೇಕಾಭ್ಯಾಸದ ಅಡಚಣೆಯಾಗುವ ಸಂಭವಿದೆ. ಆದರೆ ಸೇಶ್ವರ ವಾದದ ನಿಂದೆಯನ್ನು ಎಲ್ಲೂ ಮಾಡಿಲ್ಲ. ಹಾಗಿಲ್ಲದಿದ್ದಲ್ಲಿ ಉಪಾಸನೆಯೇ ಮೊದಲಾದವುಗಳಷ್ಟನ್ನೇ ತಿಳಿಸಿ ಶಾಸ್ತ್ರವು ಸಂಕುಚಿತವಾಗುತ್ತಿತ್ತು.

ವಿವರಣೆ: ಆಸುರ ಭಾವಗಳಿಂದ ತುಂಬಿದವರಾದರೋ ವೇದಗಳನ್ನು ಪ್ರಮಾಣವೆಂದು ಒಪ್ಪುವುದಿಲ್ಲ. ಲೋಕಾಯತಿಕರಂತೆ ಈ ಶಾಸ್ತ್ರವು ಹಾಗೆಯೇ ನಿತ್ಯ ಈಶ್ವರತ್ವವನ್ನೂ ಅಲ್ಲಗಳೆಯುವುದಿಲ್ಲ. ಅದರ ಮುಖ್ಯ ಉದ್ದೇಶವೇನೆಂದರೆ ವ್ಯಾವಹಾರಿಕ ದೃಷ್ಟಿಯಿಂದ ಈಶ್ವರನನ್ನು ನಿರಾಕರಿಸುವುದು. ಸಾಂಖ್ಯಶಾಸ್ತ್ರವು ಈಶ್ವರನನ್ನು ಎಲ್ಲೂ ಅಲ್ಲಗಳೆದಿಲ್ಲ. ಹಾಗಿದ್ದಲ್ಲಿ ಶಾಸ್ತ್ರದ ವ್ಯಾಪ್ತಿಯು ಕೇವಲ ಉಪಾಸನಾದಿಗಳಿಗೆ ಸೀಮಿತವಾಗುತ್ತಿತ್ತು.

ಭಾಷ್ಯ: *ನಾಸ್ತಿ ಸಾಂಖ್ಯಸಮಂ ಜ್ಞಾನಂ ನಾಸ್ತಿ ಯೋಗಸಮಂ ಬಲಮ್ ।*

(ಮ.ಭಾ.ಶಾಂ.ಪ ३೧೬.२)

ಅತ್ರ ವಃ ಸಂಶಯೋ ಮಾ ಭೂತ್ ಜ್ಞಾನಂ ಸಾಂಖ್ಯಂ ಪರಂ ಮತಮ್॥
(ಮ.ಭಾ.ಶಾಂ.ಪ. ೩೦೧.೧೦೧)

ಇತ್ಯಾದಿ ವಾಕ್ಯಂ, ವಿವೇಕಾಂಶ ಏವ ಸಾಂಖ್ಯಜ್ಞಾನಸ್ಯ ದರ್ಶನಾನಂತರೇಭ್ಯ ಉತ್ಕರ್ಷಂ ಪ್ರತಿಪಾದಯತಿ, ನ ತು ಈಶ್ವರಪ್ರತಿಷೇಧಾಂಶೇಽಪಿ । ತಥಾ ಪರಾಶರಾದ್ಯಖಿಲಶಿಷ್ಟ- ಸಂವಾದಾದಪಿ ಸೇಶ್ವರವಾದಸ್ಯೈವ ಪಾರಮಾರ್ಥಿಕಮವಧಾರ್ಯತೇ ।

ಅನುವಾದ: ಸಾಂಖ್ಯಕ್ಕೆ ಸಮನಾದ ಜ್ಞಾನ ಮತ್ತೊಂದಿಲ್ಲ, ಯೋಗಕ್ಕೆ ಸಮನಾದ ಬಲವಿನ್ನೊಂದಿಲ್ಲ.

'ಸಾಂಖ್ಯಕ್ಕಿಂತ ಮಿಗಿಲಾದ ಜ್ಞಾನ ಮತ್ತೊಂದಿಲ್ಲ ಎಂಬ ವಿಷಯದಲ್ಲಿ ಸಂದೇಹಬೇಡ'.

ಮುಂತಾದ ವಾಕ್ಯಗಳು ಸಾಂಖ್ಯದರ್ಶನವು ಅನ್ಯದರ್ಶನಗಳಿಗಿಂತ ಹೆಚ್ಚು ವಿವೇಕಾಂಶಗಳಿಂದ ಕೂಡಿದೆ ಎಂದು ಹೇಳುತ್ತವೆ.

ಅದೇರೀತಿಯಾಗಿ ಪರಾಶರಾದಿ ಎಲ್ಲ ಶಿಷ್ಯರ ಸಂವಾದದಿಂದಲೂ ಸೇಶ್ವರವಾದದ ಪಾರಮಾರ್ಥಿಕತೆಯನ್ನು ದೃಢಪಡಿಸುತ್ತವೆ.

ವಿವರಣೆ: ವಿಜ್ಞಾನಭಿಕ್ಷು ಸಾಂಖ್ಯದಲ್ಲಿ ಸೇಶ್ವರವಾದವನ್ನು ದೃಢಪಡಿಸಲು ಮಹಾಭಾರತದ ವಾಕ್ಯಗಳನ್ನು ಉಲ್ಲೇಖಿಸಿರುವುದು ಗಮನಾರ್ಹವಾದುದು.

ಭಾಷ್ಯ: *ಅಪಿ ಚ, ಅಕ್ಷಪಾದಪ್ರಣೀತೇ ಚ ಕಾಣಾದೇ ಸಾಂಖ್ಯಯೋಗಯೋಃ ।*
ತ್ಯಾಜ್ಯಃ ಶ್ರುತಿವಿರುದ್ಧೋಽಂಶಃ ಶ್ರುತ್ಯೇಕಶರಣೈರ್ನೃಭಿಃ ॥
ಜೈಮಿನೀಯೇ ಚ ವಯ್ಯಾಸೇ ವಿರುದ್ಧಾಂಶೋ ನ ಕಶ್ಚನ ।
ಶ್ರುತ್ಯಾ ವೇದಾರ್ಥವಿಜ್ಞಾನೇ ಶ್ರುತಿಪಾರಂ ಗತೌಹಿ ತೌ ॥
ಇತಿ ಪಾರಾಶರೋಪಪುರಾಣಾದಿಭ್ಯಃ ಅಪಿ ಬ್ರಹ್ಮಮೀಮಾಂಸಾ- ಯಾಃ ಈಶ್ವರಾಂಶೇ ಬಲವತ್ತ್ವಮ್ ।

ಅನುವಾದ: ಇದಲ್ಲದೆ, 'ಅಕ್ಷಪಾದ (ಗೋತಮ)ರು ರಚಿಸಿದ (ನ್ಯಾಯಶಾಸ್ತ್ರದಲ್ಲಿ), ಕಣಾದರು ರಚಿಸಿದ (ವೈಶೇಷಿಕ)ದಲ್ಲಿ ಹಾಗೂ ಸಾಂಖ್ಯ ಯೋಗಗಳಲ್ಲಿ ಯಾವ ಅಂಶಗಳು ವೇದ ವಿರುದ್ಧವಾಗಿವೆಯೋ ಅವುಗಳನ್ನು ವೇದಪ್ರಮಾಣವಾದಿಗಳು ನಿರಾಕರಿಸಲಿ'.

ಜೈಮಿನಿಯ (ಮೀಮಾಂಸದಲ್ಲಿ) ವ್ಯಾಸರ (ಬ್ರಹ್ಮಸೂತ್ರಗಳಲ್ಲಿ) ಯಾವ ಅಂಶವೂ ವೇದವಿರುದ್ಧವಲ್ಲ. ಏಕೆಂದರೆ ಅವರಿಬ್ಬರೂ ಶ್ರುತಿಯ ಸಾರವನ್ನು ಕಂಡವರು.

ಹೀಗೆ ಪರಾಶರೋಪಪುರಾಣಾದಿಗಳಿಂದ ಬ್ರಹ್ಮಮೀಮಾಂಸೆಯ ಬಲವು ಅರಿವಾಗುವುದು.

ವಿವರಣೆ: ಕಾಣಾದೇ ಎಂದರೆ ಕಣಾದರು ರಚಿಸಿದ ವೈಶೇಷಿಕದಲ್ಲಿ, ವಯ್ಯಾಸೇ ಎಂದರೆ ವ್ಯಾಸರು ರಚಿಸಿದ ಬ್ರಹ್ಮಸೂತ್ರಗಳಲ್ಲಿ.

ಭಾಷ್ಯ: *ತಥಾ*

ನ್ಯಾಯತಂತ್ರಾಣ್ಯನೇಕಾನಿ ತೈಸ್ತೈಃ ಉಕ್ತಾನಿ ವಾದಿಭಿಃ ।
ಹೇತ್ವಾಗಮಸದಾಚಾರೈರ್ಯದ್ಯುಕ್ತಂ ತದುಪಾಸ್ಯತಾಮ್ ॥
(ಮ.ಭಾ.ಶಾಂ.ಪ. ೨೧೦-೨೨)

ಇತಿ ಮೋಕ್ಷಧರ್ಮ ವಾಕ್ಯಾದಪಿ ಪರಾಶರಾದ್ಯಖಿಲಶಿಷ್ಟವ್ಯವ-ಹಾರೇಣ ಬ್ರಹ್ಮಮೀಮಾಂಸಾನ್ಯಾಯ ವೈಶೇಷಿಕಾದ್ಯುಕ್ತ-ಈಶ್ವರಸಾಧಕನ್ಯಾಯ ಏವ ಗ್ರಾಹ್ಯೋ ಬಲವತ್ತ್ವಾತ್ ।

ಅನುವಾದ: ತಮ್ಮ ತಮ್ಮ ಸಿದ್ಧಾಂತಗಳಲ್ಲಿ ಪರಿಣತರಾದವರು ನ್ಯಾಯ ಮುಂತಾದ ತಂತ್ರಗಳನ್ನು ತಮ್ಮ ತಮ್ಮ ಅಭಿಪ್ರಾಯಗಳಿಗೆ ತಕ್ಕಂತೆ ಹೇಳಿದ್ದಾರೆ. ಅವುಗಳಲ್ಲಿ ಅಡಗಿರುವ ಹೇತು, ಆಗಮ ಮತ್ತು ಸದಾಚಾರಗಳನ್ನು ಮನಗಂಡು ಸ್ವೀಕರಿಸಬೇಕು. ಹೀಗೆ ಮೋಕ್ಷ ಧರ್ಮದ ಈ ವಾಕ್ಯದಿಂದ ಮತ್ತೂ ಪರಾಶರರೇ ಮೊದಲಾದ ಶಿಷ್ಟರ ವ್ಯವಹಾರದಿಂದ ಬ್ರಹ್ಮಮೀಮಾಂಸೆ, ನ್ಯಾಯ, ವೈಶೇಷಿಕಾದಿಗಳಲ್ಲಿ ಹೇಳಿರುವ ಈಶ್ವರನನ್ನು ಸಾಧಿಸಿರುವ ನ್ಯಾಯವೇ ಪ್ರಬಲವಾಗಿರುವುದರ ಕಾರಣ ಅದನ್ನು ಒಪ್ಪಬೇಕು.

ಭಾಷ್ಯ: *ಯಂ ನ ಪಶ್ಯಂತಿ ಯೋಗೀಂದ್ರಾಃ ಸಾಂಖ್ಯಾ ಅಪಿ ಮಹೇಶ್ವರಮ್ ।*
ಅನಾದಿನಿಧನಂ ಬ್ರಹ್ಮ ತಮೇವ ಶರಣಂ ವ್ರಜ ॥

ಇತ್ಯಾದಿ ಕೌರ್ಮಾದಿವಾಕ್ಯೈಃ ಸಾಂಖ್ಯಾನಾಮೀಶ್ವರಾಜ್ಞಾನಸ್ಯೈವ ನಾರಾಯಣಾದಿನಾ ಪ್ರೋಕ್ತತ್ವಾಚ್ಚ ।

ಅನುವಾದ: ಕೂರ್ಮ ಪುರಾಣದಲ್ಲಿ ಈ ವಾಕ್ಯಗಳಲ್ಲಿ ಈಶ್ವರನ ವಿಷಯದ ಬಗ್ಗೆ ಅಜ್ಞಾನವನ್ನು ಕುರಿತು ನಾರಾಯಣನು ಹೀಗೆ ಹೇಳಿದ್ದಾನೆ.

ಯೋಗೀಂದ್ರರಾಗಲಿ ಸಾಂಖ್ಯಬಲ್ಲವರಾಗಲಿ ಯಾವ ಮಹೇಶ್ವರನನ್ನು ಕಾಣಲಾರರೋ ಅಂತಹ ಅನಾದಿಯೂ ಅನಂತನೂ ಆದ ಬ್ರಹ್ಮನಲ್ಲಿ ಶರಣುವನ್ನು ಪಡೆ.

ಭಾಷ್ಯ: *ಕಿಂಚ ಬ್ರಹ್ಮಮೀಮಾಂಸಾಯಾ ಈಶ್ವರ ಏವ ಮುಖ್ಯೋ ವಿಷಯ ಉಪಕ್ರಮಾದಿಭಿರತ್ರ ಧೃತಃ । ತತ್ರಾಂಶೇ ತಸ್ಯ ಬಾಧೇ ಶಾಸ್ತ್ರಸ್ಯೈವಾಪ್ರಾಮಾಣ್ಯಂ ಸ್ಯಾತ್, 'ಯತ್ಪರಃ ಶಬ್ದಃ ಸ ಶಬ್ದಾರ್ಥ' ಇತಿ ನ್ಯಾಯಾತ್ । ಸಾಂಖ್ಯಶಾಸ್ತ್ರಸ್ಯ ತು ಪುರುಷಾರ್ಥತತ್ಸಾಧನ ಪ್ರಕೃತಿ ಪುರುಷವಿವೇಕಾವೇವ ಮುಖ್ಯೋ ವಿಷಯ ಇತಿ ಈಶ್ವರ ಪ್ರತಿಷೇಧಾಂಶಬಾಧೇ ಅಪಿ ನಾಪ್ರಾಮಾಣ್ಯಂ 'ಯತ್ಪರಃ ಶಬ್ದಃ ಸ ಶಬ್ದಾರ್ಥಃ' ಇತಿ ನ್ಯಾಯಾತ್ ।*

ಅನುವಾದ: ಅಲ್ಲದೆ ಬ್ರಹ್ಮಮೀಮಾಂಸೆಯ ಉಪಕ್ರಮಾದಿಗಳಲ್ಲಿ ಈಶ್ವರನೇ ಮುಖ್ಯ ವಿಷಯವಾಗಿ ನಿರ್ಧರಿಸಲ್ಪಟ್ಟಿದೆ. (ಈ ಸಂದರ್ಭದಲ್ಲಿ) ಆ ಅಂಶದಲ್ಲಿ ಏನಾದರೂ

ಬಾಧ ಉಂಟಾದರೆ ಶಾಸ್ತ್ರವೇ ಪ್ರಮಾಣರಹಿತವಾಗುವುದು. 'ಯಾವುದನ್ನು ಕುರಿತು ಶಬ್ದವು ಹೇಳಲ್ಪಟ್ಟಿದೆಯೋ ಅದೇ ಶಬ್ದದ ಅರ್ಥ' ಎಂಬ ನ್ಯಾಯದಂತೆ ಆಗುವುದು. ಸಾಂಖ್ಯಶಾಸ್ತ್ರದ ಮುಖ್ಯ ವಿಷಯವಾದರೋ ಪುರುಷಾರ್ಥ ಸಾಧನವಾದ ಪ್ರಕೃತಿ–ಪುರುಷರ ಬಗ್ಗೆ ತಿಳುವಳಿಕೆ. ಆದ್ದರಿಂದ ಈಶ್ವರನನ್ನು ಅಲ್ಲಗಳೆಯುವ ಅಂಶದಲ್ಲಿ ಬಾಧೆಯಿದ್ದರೂ 'ಯಾವುದನ್ನು ಕುರಿತು ಶಬ್ದವು ಹೇಳಲ್ಪಟ್ಟಿದೆಯೋ ಅದೇ ಶಬ್ದದ ಅರ್ಥ' ಎಂಬ ನ್ಯಾಯದಂತೆ ಇದು ಪ್ರಮಾಣವಲ್ಲ ಎನ್ನಲಾಗುವುದಿಲ್ಲ. ಆದ್ದರಿಂದ ಅದಕ್ಕೆ ಅವಕಾಶವಿರುವುದರಿಂದ ಸಾಂಖ್ಯವೇ ಈಶ್ವರನ ಪ್ರತಿಷೇಧಾಂಶದಲ್ಲಿ ದುರ್ಬಲವೆನ್ನಬಹುದು.

ಭಾಷ್ಯ: *ನ ಚ ಬ್ರಹ್ಮಮೀಮಾಂಸಾಯಾಂ ಅಪಿ ಈಶ್ವರ ಏವ ಮುಖ್ಯಃ, ನ ತು ನಿತ್ಯೈಶ್ವರ್ಯಮಿತಿ ವಕ್ತುಂ ಶಕ್ಯತೇ । ಸ್ಮೃತ್ಯನವಕಾಶ–ದೋಷಪ್ರಸಂಗರೂಪಪೂರ್ವಪಕ್ಷಸ್ಯ (ಬ್ರ.ಸೂ. ೨.೧.೧.) ಅನುಪಪತ್ತ್ಯಾ ನಿತ್ಯೈಶ್ವರ್ಯವಿಶಿಷ್ಟತ್ವೇನೈವ ಬ್ರಹ್ಮಮೀಮಾಂ–ಸಾವಿಷಯತ್ವಾವಧಾರಣಾತ್ । ಬ್ರಹ್ಮಶಬ್ದಸ್ಯ ಬ್ರಹ್ಮಣ್ಯೇವ ಮುಖ್ಯತಯಾ ತು 'ಅಥಾತಃ ಪರಬ್ರಹ್ಮಜಿಜ್ಞಾಸಾ' ಇತಿ ನ ಸೂತ್ರಿತಮಿತಿ ।*

ಅನುವಾದ: ಬ್ರಹ್ಮ ಮೀಮಾಂಸೆಯಲ್ಲಿಯೂ ಈಶ್ವರನೇ ಮುಖ್ಯ ಎನ್ನಲಾಗುವುದಿಲ್ಲ. ಆದರೆ ನಿತ್ಯ ಈಶ್ವರತ್ವವು ಹಾಗಲ್ಲ. ಏಕೆಂದರೆ ಸ್ಮೃತಿಗೆ ಅವಕಾಶವಿಲ್ಲವೆಂಬ ದೋಷಪ್ರಸಂಗದ ಪೂರ್ವಪಕ್ಷಕ್ಕೆ ಹೊಂದದ ಕಾರಣ ನಿತ್ಯೈಶ್ವರ್ಯ ವಿಶಿಷ್ಟರೂಪ ದಿಂದಲೇ ಬ್ರಹ್ಮಮೀಮಾಂಸೆಯ ವಿಷಯವನ್ನು ನಿರ್ಧರಿಸಲಾಗಿದೆ. ಬ್ರಹ್ಮಶಬ್ದವು ಪರಬ್ರಹ್ಮದ ಅರ್ಥದಲ್ಲಿ ಮುಖ್ಯವಾಗಿರುವ ಕಾರಣ ಸೂತ್ರಕಾರರು 'ಅಥಾತಃ ಪರಬ್ರಹ್ಮಜಿಜ್ಞಾಸಾ' ಎಂಬ ಸೂತ್ರವನ್ನು ರಚಿಸಲಿಲ್ಲ ಎಂದೂ ಹೇಳಲಾಗುವುದಿಲ್ಲ.

ಭಾಷ್ಯ: *ಏತೇನ ಸಾಂಖ್ಯವಿರೋಧಾತ್ ಬ್ರಹ್ಮಯೋಗ ದರ್ಶನಯೋಃ ಕಾರ್ಯೇಶ್ವರಪರತ್ವಮಪಿ ನ ಶಂಕನೀಯಮ್ । ಪ್ರಕೃತಿಸ್ವಾತಂತ್ರ್ಯಾ–ಪತ್ತ್ಯಾ 'ರಚನಾನುಪಪತ್ತೇಶ್ಚ, ನಾನುಮಾನಮ್' ಇತ್ಯಾದಿ ಬ್ರಹ್ಮಸೂತ್ರ (೨.೨.೧) ಪರಂಪರಾನುಪಪತ್ತೇಶ್ಚ । ತಥಾ 'ಸ. ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇಯತ್' (ಯೋಗಸೂತ್ರ ೧.೨.೬) ಯೋಗಸೂತ್ರ ತದೀಯ ವ್ಯಾಸಭಾಷ್ಯಾಭ್ಯಾಂ ಸ್ಫುಟಮೀಶನಿತ್ಯತಾಽವಗಮಾಚ್ಚೇತಿ । ತಸ್ಮಾದ್ ಅಭ್ಯುಗಮವಾದ–ಪ್ರೌಢಿವಾದಾದಿನೈವ ಸಾಂಖ್ಯಸ್ಯ ವ್ಯಾವಹಾರಿಕೇಶ್ವರಪ್ರತಿಷೇಧ–ಪರತಯಾ ಬ್ರಹ್ಮಮೀಮಾಸಾಯೋಗಾಭ್ಯಾಂ ಸಹ ನ ವಿರೋಧಃ । ಅಭ್ಯುಪಗಮವಾದಶ್ಚ ಶಾಸ್ತ್ರೇ ದೃಷ್ಟಃ ।*

ಹೀಗೆ ಸಾಂಖ್ಯವಿರೋಧದ ಕಾರಣ ಬ್ರಹ್ಮದರ್ಶನ ಮತ್ತು ಯೋಗದರ್ಶನಗಳಲ್ಲಿ ಈಶ್ವರನು ಕಾರ್ಯನೆಂಬುದು ಸಂದೇಹಪಡಬೇಕಾಗಿಲ್ಲ. ಇಲ್ಲದಿದ್ದರೆ ಪ್ರಕೃತಿಯು ಸ್ವತಂತ್ರವೆಂಬುದುಂಟಾಗಿ 'ರಚನಾನುಪಪತ್ತೇಃ' ನಾನುಮಾನಮ್ ಇತ್ಯಾದಿ

ಬ್ರಹ್ಮಸೂತ್ರಗಳು ಸೃಷ್ಟಿಯಿಲ್ಲದಂತಾಗುವುದು– 'ಅನುಮಾನವಿಲ್ಲ' ಎಂಬುವು ತಮ್ಮ ಉದ್ದೇಶವನ್ನು ಕಳೆದುಕೊಳ್ಳುವುವು. ಹಾಗೆಯೇ 'ಅವನು ಹಿಂದಿನವರಿಗೂ ಗುರುವಾಗಿರುವನು. ಏಕೆಂದರೆ ಅವನಿಗೆ ಕಾಲದ ಮಿತಿಯಿಲ್ಲ' ಎಂದು ಈ ಯೋಗಸೂತ್ರ ಮತ್ತು ವ್ಯಾಸಭಾಷ್ಯದ ಮೂಲಕ ಸ್ಪಷ್ಟವಾಗಿ ಈಶ್ವರನು ನಿತ್ಯನೆಂಬುದು (ಚರ್ಚೆಯ ಅಂಶವನ್ನು ಸ್ವೀಕರಿಸುವುದು) ಮತ್ತು 'ಪ್ರೌಢಿವಾದ' (ದೃಢವಾದ ನಿಲುವನ್ನು ತಳೆಯುವುದು) ಮುಂತಾದುವುಗಳಿಂದ ಸಾಂಖ್ಯವು ಹೇಳುವ ವ್ಯಾವಹಾರಿಕ ಈಶ್ವರನನ್ನು ಅಲ್ಲಗಳೆಯುವುದರಿಂದ ಬ್ರಹ್ಮಮೀಮಾಂಸಕ್ಕಾಗಲಿ ಯೋಗಶಾಸ್ತ್ರಕ್ಕಾಗಲಿ ಸಾಂಖ್ಯರ ವಿರೋಧವಿಲ್ಲ. ಶಾಸ್ತ್ರದಲ್ಲಿ ಅಭ್ಯುಪಗಮವಾದವನ್ನೂ ಕಂಡಿರುವೆವು.

ವಿವರಣೆ: ರಚನಾನುಪತ್ತೇಶ್ಚ ನಾನುಮಾನಮ್ (೨.೨.೧) ಎಂಬ ಸೂತ್ರದ ಮೇಲೆ ವ್ಯಾಖ್ಯಾನ ಮಾಡುತ್ತಾ ಶಂಕರರು ಸಾಂಖ್ಯರ ಅಚೇತನದಿಂದಾಗುವ ಸೃಷ್ಟಿಯ ತತ್ತ್ವಗಳನ್ನು ಖಂಡಿಸಿದ್ದಾರೆ.

ಭಾಷ್ಯ: *ಯಥಾ ವಿಷ್ಣುಪುರಾಣೇ–*

ಏತೇ ಭಿನ್ನದೃಶಾಂ ದೈತ್ಯ! ವಿಕಲ್ಪಾಃಕಥಿತಾ ಮಯಾ ।
ಕೃತ್ವಾಭ್ಯುಪಗಮಂ ತತ್ರ ಸಂಕ್ಷೇಪಃ ಶ್ರೂಯತಾಂ ಮಮ ॥

(ವಿಷ್ಣುಪುರಾಣ ೧.೧೭.೧೩)

ಅನುವಾದ: ಎಲೈ ದೈತ್ಯನೆ! ವಿವಿಧ ದೃಷ್ಟಿಗಳಿಂದ ನೋಡುವವರಿಗೆ ಆಯಾ ಸಿದ್ಧಾಂತಗಳನ್ನು ಸ್ವೀಕರಿಸುವ ವಿಕಲ್ಪವನ್ನು (ಭ್ರಮೆ) ನಾನು ಹೇಳಿದ್ದೇನೆ. ಅದನ್ನು ಸಂಕ್ಷೇಪವಾಗಿ ಕೇಳು.

ಭಾಷ್ಯ: *ಅಸ್ತು ವಾ ಪಾಪಿನಾಂ ಜ್ಞಾನಪ್ರತಿಬಂಧಾರ್ಥಂ ಆಸ್ತಿಕ–ದರ್ಶನೇಷು ಅಂಶತಃ ಶ್ರುತಿವಿರುದ್ಧಾರ್ಥವ್ಯವಸ್ಥಾಪನಮ್ ತೇಷು ತೇಷು ಅಂಶೇಷು ಅಪ್ರಾಮಾಣ್ಯಂ ಚ । ಶ್ರುತಿಸ್ಮೃತ್ಯ–ವಿರುದ್ಧೇಷು ತು ಮುಖ್ಯವಿಷಯೇಷು ಪ್ರಾಮಾಣ್ಯಮಸ್ತ್ಯೇವ । ಅತ ಏವ ಪದ್ಮಪುರಾಣೇ ಬ್ರಹ್ಮಯೋಗದರ್ಶನಾತಿರಿಕ್ತಾನಾಂ ದರ್ಶನಾನಾಂ ನಿಂದಾಪ್ಯುಪಪದ್ಯತೇ (ಪ.ಪು. ೬.೨೬೩.೬೬–೭೫)*

ಅನುವಾದ: ಇರಲಿ, ಪಾಪಿಗಳ ಜ್ಞಾನವನ್ನು ಅಡ್ಡಿಮಾಡಲು ಆಸ್ತಿಕದರ್ಶನಗಳಲ್ಲಿ ಶ್ರುತಿ ವಿರುದ್ಧಾರ್ಥದ ಅಂಶಗಳನ್ನು ತಿಳಿಸಿದ್ದಾರೆ. ಆದರೆ ಆಯಾ ಅಂಶಗಳಲ್ಲಿ ಅಪ್ರಾಮಾಣ್ಯವು ಇರುವುದೇ ಸರಿ. ಶ್ರುತಿಸ್ಮೃತಿಗಳಿಗೆ ವಿರುದ್ಧವಲ್ಲದ ಮುಖ್ಯವಿಷಯಗಳಲ್ಲಿ ಪ್ರಾಮಾಣ್ಯ ವಿರುತ್ತದೆಯಷ್ಟೆ. ಆದ್ದರಿಂದಲೇ ಪದ್ಮಪುರಾಣದಲ್ಲಿ ಬ್ರಹ್ಮದರ್ಶನ, ಯೋಗದರ್ಶನ ಗಳಲ್ಲದೆ ಇತರ ದರ್ಶನಗಳನ್ನೂ ದೂಷಿಸಿರುವುದು ಗಮನಕ್ಕೆ ಬರುವುದು.

ಭಾಷ್ಯ: *ಯಥಾ ತತ್ರ ಪಾರ್ವತೀಂ ಪ್ರತಿ ಈಶ್ವರವಾಕ್ಯಮ್–*

ಶ್ರುಣು ದೇವಿ! ಪ್ರವಕ್ಷ್ಯಾಮಿ ತಾಮಸಾನಿ ಯಥಾಕ್ರಮಮ್ ।
ಯೇಷಾಂ ಶ್ರವಣಮಾತ್ರೇಣ ಪಾತಿತ್ಯಂ ಜ್ಞಾನಿನಾಮಪಿ ॥

ಪ್ರಥಮಂ ಹಿ ಮಯೈವೋಕ್ತಂ ಶೈವಂ ಪಾಶುಪತಾದಿಕಮ್ ।
ಮಚ್ಛಕ್ತ್ಯಾವೇಶಿತೈರ್ವಿಪ್ರೈಃ ಸಂಪ್ರೋಕ್ತಾನಿ ತತಃ ಪರಮ್ ॥
ಕಣಾದೇನ ತು ಸಂಪ್ರೋಕ್ತಂ ಶಾಸ್ತ್ರಂ ವೈಶೇಷಿಕಂ ಮಹತ್ ।
ಗೌತಮೇನ ತಥಾ ನ್ಯಾಯಂ ಸಾಂಖ್ಯಂತು ಕಪಿಲೇನ ವೈ ॥
ದ್ವಿಜನ್ಮನಾ ಜೈಮಿನಿನಾ ಪೂರ್ವಂ ವೇದಮಥಾರ್ಥತಃ ।
ನಿರೀಶ್ವರೇಣ ವಾದೇನ ಕೃತಂ ಶಾಸ್ತ್ರಂ ಮಹತ್ತರಮ್ ॥
ಧಿಷಣೇನ ತಥಾ ಪ್ರೋಕ್ತಂ ಚಾರ್ವಾಕಮತಿಗರ್ಹಿತಮ್ ।
ದೈತ್ಯಾನಾಂ ನಾಶನಾರ್ಥಾಯ ವಿಷ್ಣುನಾ ಬುದ್ಧರೂಪಿಣಾ ॥
ಬೌದ್ಧಶಾಸ್ತ್ರಮಸತ್ಪ್ರೋಕ್ತಂ ನಗ್ನನೀಲಪಟಾದಿಕಮ್ ॥
ಮಾಯಾವಾದಮಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಮೇವ ಚ ।
ಮಯೈವ ಕಥಿತಂ ದೇವಿ! ಕಲೌ ಬ್ರಾಹ್ಮಣರೂಪಿಣಾ ॥
ಅಪಾರ್ಥಂ ಶ್ರುತಿವಾಕ್ಯಾನಾಂ ದರ್ಶಯನ್ ಲೋಕಗರ್ಹಿತಮ್ ।
ಕರ್ಮಸ್ವರೂಪತ್ಯಾಜ್ಯತ್ವಂ ಅತ್ರ ಚ ಪ್ರತಿಪಾದ್ಯತೇ ॥
ಸರ್ವಕರ್ಮಪರಿಭ್ರಂಶಾನ್ನೈಷ್ಕರ್ಮ್ಯಂ ತತ್ರ ಚೋಚ್ಯತೇ ।
ಪರಾತ್ಮಜೀವಯೋರೈಕ್ಯಂ ಮಯಾತ್ರ ಪ್ರತಿಪಾದ್ಯತೇ ॥
ಬ್ರಹ್ಮಣೋಽಸ್ಯ ಪರಂ ರೂಪಂ ನಿರ್ಗುಣಂ ದರ್ಶಿತಂ ಮಯಾ ।
ಸರ್ವಸ್ಯ ಜಗತೋಽಪ್ಯಸ್ಯ ನಾಶನಾರ್ಥಂ ಕಲೌ ಯುಗೇ ॥
ವೇದಾರ್ಥವನ್ಮಹಾಶಾಸ್ತ್ರಂ ಮಾಯಾವಾದಮವೈದಿಕಮ್ ।
ಮಯೈವ ಕಥಿತಂ ದೇವಿ! ಜಗತಾಂ ನಾಶಕಾರಣಾತ್ ॥ ಇತಿ

(ಪ.ಪು. ೬.೨೬೩.೬೬–೭೫)

ಅಧಿಕಂ ತು ಬ್ರಹ್ಮಮೀಮಾಂಸಾಭಾಷ್ಯೇ ಪ್ರಪಂಚಿತಮಸ್ಮಾಭಿರಿತಿ ।

ಅನುವಾದ: ಅದರಲ್ಲಿ ಪಾರ್ವತಿಯನ್ನು ಕುರಿತು ಶಿವನು ಆಡಿದ ಮಾತುಗಳು– ದೇವಿ! ತಾಮಸಶಾಸ್ತ್ರಗಳನ್ನು ಕ್ರಮವಾಗಿ ಹೇಳುವೆ. ಅದನ್ನು ಕೇಳುವುದರಿಂದಲೇ ಜ್ಞಾನಿಗಳೂ ಸಹ ಪತನವನ್ನು ಪಡೆಯುವರು. ಮೊದಲನೆಯದಾಗಿ ಪಾಶುಪತಾದಿ ಶೈವಶಾಸ್ತ್ರಗಳನ್ನು ಹೇಳಾಯಿತು. ಅನಂತರ ನನ್ನ ಶಕ್ತಿಯಿಂದ ಆವರಿಸಲ್ಪಟ್ಟ ಬ್ರಾಹ್ಮಣರು ಬೇರೆ ಬೇರೆ ಶಾಸ್ತ್ರಗಳನ್ನು ರಚಿಸಿದರು. ಕಣಾದರು ಮಹತ್ತಾದ ವೈಶೇಷಿಕ ಶಾಸ್ತ್ರವನ್ನು ಹೇಳಿದರು. ಅದರಂತೆಯೇ ಗೌತಮರು ನ್ಯಾಯವನ್ನೂ ಕಪಿಲರು ಸಾಂಖ್ಯವನ್ನೂ ಬರೆದರು. ಬ್ರಾಹ್ಮಣನಾದ ಜೈಮಿನಿಯು ವೇದಗಳ ಅರ್ಥಗಳಿಂದ ತುಂಬಿದ ಮತ್ತು ನಿರೀಶ್ವರವಾದದಿಂದ ಕೂಡಿದ ಪೂರ್ವಮೀಮಾಂಸಾ ಮಹಾಶಾಸ್ತ್ರವನ್ನು ರಚಿಸಿದರು. ಹಾಗೆಯೇ ಗುರುವಾದ ಬೃಹಸ್ಪತಿಯು ಬಹಳ ನಿಂದೆಗೊಳಗಾಗಿರುವ ಚಾರ್ವಾಕಶಾಸ್ತ್ರವನ್ನು ರಚಿಸಿದರು. ಅದರಂತೆ ದೈತ್ಯರೆಲ್ಲರ ನಾಶಕ್ಕಾಗಿ ಬುದ್ಧನ ರೂಪವನ್ನು ತಾಳಿ ನಗ್ನ, ನೀಲಿಬಟ್ಟೆ ಮುಂತಾದ ರೂಪಗಳಿಂದ ಕೂಡಿದ್ದ ಅಸತ್ (ವಾದದ) ಬೌದ್ಧಶಾಸ್ತ್ರವನ್ನು ಹೇಳಿದನು. ಕಲಿಯುಗದಲ್ಲಿ ಬ್ರಾಹ್ಮಣನ ರೂಪವನ್ನು

ತಾಳಿ ನಾನೇ ಪ್ರಚ್ಛನ್ನವಾಗಿರುವ ಮಾಯಾವಾದದ ಬೌದ್ಧಶಾಸ್ತ್ರವನ್ನು ಹೇಳಿದೆನು. ಅದರಲ್ಲಿ ಶ್ರುತಿವಾಕ್ಯಗಳ ತಪ್ಪು ಅರ್ಥಗಳನ್ನು ತೋರಿಸಿ ಲೋಕನಿಂದೆಗೆ ಗುರಿಯಾದ ಕರ್ಮಸ್ವರೂಪವನ್ನು ತಿಳಿದು ಅದನ್ನು ತ್ಯಾಗಮಾಡಿ ನೈಷ್ಕರ್ಮ್ಯವನ್ನು ಹೇಳಲಾಗಿದೆ. ಆದರೆ ಇಲ್ಲಿ ನಾನು ಜೀವಾತ್ಮ ಮತ್ತು ಪರಮಾತ್ಮರ ಐಕ್ಯವನ್ನು ಹೇಳಿದ್ದೇನೆ. ಕಲಿಯುಗದಲ್ಲಿ ಸಮಸ್ತ ಜಗತ್ತನ್ನು ನಾಶಮಾಡಲು ವೇದಾರ್ಥದಿಂದ ಕೂಡಿದ ಮಹಾಶಾಸ್ತ್ರವನ್ನೂ ಅವೈದಿಕವಾದ ಮಾಯಾವಾದವನ್ನು ನಾನೇ ಹೇಳಿದ್ದೇನೆ. ಇದಲ್ಲದೆ ಬ್ರಹ್ಮಮೀಮಾಂಸಾ ಭಾಷ್ಯದಲ್ಲಿ ಇದನ್ನು ನಾವು ವಿಸ್ತರಿಸಿ ಹೇಳಿದ್ದೇವೆ.

ಭಾಷ್ಯ: *ತಸ್ಮಾದಾಸ್ತಿಕಶಾಸ್ತ್ರಸ್ಯ ನ ಕಸ್ಯಾಪಿ ಅಪ್ರಾಮಾಣ್ಯಂ ವಿರೋಧೋ ವಾ ಸ್ವಸ್ವವಿಷಯೇಷು ಸರ್ವೇಷಾಂ ಅಬಾಧಾತ್ ಅವಿರೋಧಾಚ್ಚ ಇತಿ ।*

ಅನುವಾದ: ಆದ್ದರಿಂದ ಯಾವುದೇ ಆಸ್ತಿಕಶಾಸ್ತ್ರಕ್ಕೆ ಅಪ್ರಾಮಾಣ್ಯವಾಗಲಿ ವಿರೋಧವಾಗಲಿ ಇರುವುದಿಲ್ಲ. ತಮ್ಮ ತಮ್ಮ ವಿಷಯಗಳಲ್ಲಿ ಎಲ್ಲದಕ್ಕೂ ಬಾಧವಿರುವುದಿಲ್ಲ, ಯಾರಿಂದ ಯಾರಿಗೂ ವಿರೋಧವಿಲ್ಲ.

ವಿವರಣೆ: ವಿಜ್ಞಾನಭಿಕ್ಷುವಿನ ದೃಷ್ಟಿಯಲ್ಲಿ ಆಸ್ತಿಕಶಾಸ್ತ್ರಗಳು ತಮ್ಮ ತಮ್ಮ ತತ್ತ್ವಗಳನ್ನು ಪ್ರತಿಪಾದಿಸಿದರೂ ಪರಸ್ಪರ ವಿರೋಧ ಹೊಂದಿರಲಿಲ್ಲ. ಅವುಗಳು ಪಾರಂಪರಿಕವಾಗಿ ಬಂದ ಅನೇಕ ಸಾಮಾನ್ಯ ಅಂಶಗಳ ನೆಲೆಗಟ್ಟಿನ ಮೇಲೆ ಸ್ಥಾಪಿಸಲ್ಪಟ್ಟವು. ಆ ಪಂಗಡದಲ್ಲಿ ಸಾಂಖ್ಯವೂ ಒಂದು.

ಭಾಷ್ಯ: *ನನ್ವೇವಂ ಪುರುಷಬಹುತ್ವಾಂಶೇಽಪಿ ಶಾಸ್ತ್ರಸ್ಯ ಅಭ್ಯುಪಗಮ–ವಾದತ್ವಂ ಸ್ಯಾತ್ । ನ ಸ್ಯಾತ್ । ಅವಿರೋಧಾತ್ । ಬ್ರಹ್ಮಮೀಮಾಂಸಾಯಾಮಪಿ 'ಅಂಶೋ ನಾನಾ ವ್ಯಪದೇಶಾತ್' (ಬ್ರ.ಸೂ. ೨.೩.೪೩) ಇತ್ಯಾದಿ ನಾನಾಸೂತ್ರಜಾತೈಃ ಜೀವಾತ್ಮ–ಬಹುತ್ವಸ್ಯೈವ ನಿರ್ಣಯಾತ್ । ಸಾಂಖ್ಯಸಿದ್ಧಪುರುಷಾಣಾಂ ಆತ್ಮತ್ವ ತು ಬ್ರಹ್ಮಮೀಮಾಂಸಯಾ ಬಾಧ್ಯತ ಏವ । 'ಆತ್ಮೇತಿ ತೂಪಗಚ್ಛಂತಿ' (ಬ್ರ.ಸೂ. ೪.೧.೩) ತತ್ಸೂತ್ರೇಣ ಪರಮಾತ್ಮನ ಏವ ಪರಮಾರ್ಥಭೂಮೌ । ಆತ್ಮತ್ವಾವಧಾರಣಾತ್ । ತಥಾಪಿ ಸಾಂಖ್ಯಸ್ಯ ನಾಪ್ರಮಾಣ್ಯಮ್ । ವ್ಯಾವಹಾರಿಕಾತ್ಮಾನೋ ಜೀವಸ್ಯ ಇತರ–ವಿವೇಕಜ್ಞಾನಸ್ಯ ಮೋಕ್ಷಸಾಧನತ್ತ್ವೇ ವಿವಕ್ಷಿತಾರ್ಥೇ ಬಾಧಾಭಾವಾತ್ । ಏತೇನ ಶ್ರುತಿಸ್ಮೃತಿಪ್ರಸಿದ್ಧಯೋರ್ನಾನಾ–ಆತ್ಮೈಕಾತ್ಮತ್ವಯೋಃ ವ್ಯಾವಹಾರಿಕಪಾರಮಾರ್ಥಿಕ ಭೇದೇನ ಅವಿರೋಧ ಇತಿ ಬ್ರಹ್ಮಮೀಮಾಂಸಾಯಾಂ (೨.೩.೪.೩) ಪ್ರಪಂಚಿತಮಸ್ಮಾಭಿರಿತಿ ದಿಕ್ ।*

ಅನುವಾದ: ಹೀಗೆ ಶಾಸ್ತ್ರದಲ್ಲಿ ಪುರುಷರು ಅನೇಕರು ಎಂಬ ಅಂಶದಲ್ಲಿ ಅಭ್ಯುಪಗಮವೆಂದೇ ಹೇಳಬೇಕು. ಅಲ್ಲವೆ?

ಹಾಗಲ್ಲ. ವಿರೋಧವಿಲ್ಲದ ಕಾರಣದಿಂದ, ಬ್ರಹ್ಮಮೀಮಾಂಸೆಯಲ್ಲಿಯೂ 'ನಾನು ಹೆಸರುಗಳ ಕಾರಣ ಜೀವನು ಅಂಶನೇ' ಎಂಬ ವಾಕ್ಯದಂತೆ ಜೀವಾತ್ಮನು ಅನೇಕರು ಎಂಬ ನಿರ್ಣಯದಿಂದ ವಿರೋಧವಿಲ್ಲ. ಆದರೆ ಸಾಂಖ್ಯರು ಹೇಳುವ ಪುರುಷರು ಆತ್ಮನೆಂಬ ಅರ್ಥದಲ್ಲಿ ಗ್ರಹಿಸಿದರೆ, 'ಆತ್ಮನೆಂದೇ ತಿಳಿಯಬೇಕು' ಎಂಬ ಸೂತ್ರದ ಕಾರಣ ಆತ್ಮನನ್ನು ಪರಮಾತ್ಮನೆಂದೇ ತಿಳಿಯುವರು. ಆದ್ದರಿಂದ ಸಾಂಖ್ಯವು ಅಪ್ರಮಾಣವಾಗದು. ವ್ಯಾವಹಾರಿಕ ಆತ್ಮನು ಇತರ ಜಡಪದಾರ್ಥಗಳಿಂದ ಭಿನ್ನನು ಎಂಬ ಭೇದಜ್ಞಾನವು ಮೋಕ್ಷವು ದೊರೆಯಲು ಸಾಧನವು ಎಂಬ ವಿಷಯದಲ್ಲಿ ಯಾವ ಬಾಧವೂ ಇಲ್ಲ. ಇದರಿಂದ ಶ್ರುತಿ–ಸ್ಮೃತಿಗಳಲ್ಲಿ ಪ್ರಸಿದ್ಧವಾದ ನಾನಾತ್ಮತ್ವ ಮತ್ತು ಏಕಾತ್ಮತ್ವಗಳಲ್ಲಿ ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಭೇದಗಳ ದೃಷ್ಟಿಯಿಂದ ವಿರೋಧವಿಲ್ಲ ಎಂದು ಬ್ರಹ್ಮಮೀಮಾಂಸೆಯಲ್ಲಿ ನಾವು ಆಗಲೇ ತೋರ್ಪಡಿಸಿದ್ದೇವೆ.

ನನ್ವೇವಮಪಿ ತತ್ತ್ವಸಮಾಸಾಖ್ಯಸೂತ್ರೈಃ ಸಹಾಸ್ಯಾಃ ಷಡಧ್ಯಾಯ್ಯಾಯಾಃ ಪೌನರುಕ್ತ್ಯಮಿತಿ ಚೇತ್, ಮೈವಮ್ । ಸಂಕ್ಷೇಪವಿಸ್ತರರೂಪೇಣೋಭಯೋರಪಿ ಅಪೌನರುಕ್ತ್ಯಾತ್ । ಅತ ಏವ ಅಸ್ಯಾಃ ಷಡಧ್ಯಾಯ್ಯಾಃ ಯೋಗದರ್ಶನಸ್ಯೇವ ಸಾಂಖ್ಯ-ಪ್ರವಚನಸಂಜ್ಞಾಯುಕ್ತಾ । ತತ್ತ್ವಸಮಾಸಾಖ್ಯಂ ಹಿ ಯತ್ ಸಂಕ್ಷಿಪ್ತಂ ಸಾಂಖ್ಯದರ್ಶನಂ ತಸ್ಯೈವ ಪ್ರಕರ್ಷೇಣಾಸ್ಯಾಂ ನಿರ್ವಚನಂ ಇತಿ । ವಿಶೇಷಸ್ತ್ವಯಂ ಯತ್ ಷಡಧ್ಯಾಯ್ಯಾಂ ತತ್ತ್ವಸಮಾ-ಸಾಖ್ಯೋಕ್ತ ಅರ್ಥವಿಸ್ತರಮಾತ್ರಮ್ । ಯೋಗದರ್ಶನೇ ತ್ವಾಭ್ಯಾಮಭ್ಯುಪಗಮವಾದಪ್ರತಿಷಿದ್ಧಸ್ಯೈವೇಶ್ವರಸ್ಯ ನಿರೂಪಣೇನ ನ್ಯೂನತಾಪರಿಹಾರೋಽಪಿ ಇತಿ ।

ಅನುವಾದ: ಹಾಗಿದ್ದರೂ ತತ್ವಸಮಾಸವೆಂಬ ಗ್ರಂಥದ ಸೂತ್ರಗಳ ಪುನರುಕ್ತಿಯು ಆರು ಅಧ್ಯಾಯಗಳ ಸಾಂಖ್ಯಸೂತ್ರಗಳಲ್ಲಿ ಆದಂತಾಗುವುದಿಲ್ಲವೆ?

ಹಾಗಲ್ಲ ಸಂಕ್ಷೇಪವಾದ (ತತ್ತ್ವಸಮಾಸದ ಸೂತ್ರಗಳು) ಮತ್ತು ವಿಸ್ತರವಾದ (ಸಾಂಖ್ಯ ಸೂತ್ರಗಳ) ನಿರೂಪಣೆಗಳ ಕಾರಣ ಪುನರುಕ್ತಿಯಾಗುವುದಿಲ್ಲ. ಆದ್ದರಿಂದಲೇ ಯೋಗದರ್ಶನದಂತೆ ಈ ಆರು ಅಧ್ಯಾಯಗಳ ಗ್ರಂಥಕ್ಕೆ 'ಸಾಂಖ್ಯಪ್ರವಚನ' ಎಂಬ ಹೆಸರು ಸರಿಯಾಗಿಯೇ ಇದೆ. ತತ್ತ್ವಸಮಾಸವೆಂಬ ಸಂಕ್ಷಿಪ್ತ ಸಾಂಖ್ಯದರ್ಶನದಲ್ಲಿ ಹೇಳಿರುವುದನ್ನೇ ಇದರಲ್ಲಿ ವಿಸ್ತರವಾಗಿ ಹೇಳಲಾಗಿದೆ. ವಿಶೇಷವೆಂದರೆ ತತ್ತ್ವಸಮಾಸದಲ್ಲಿ ಹೇಳಿದ್ದನ್ನೇ ವಿವರವಾಗಿ ಹೇಳಲಾಗಿದೆ. ಯೋಗದರ್ಶನದಲ್ಲಿ ಇವೆರಡರ ಅಭ್ಯುಪಗಮ ಮತ್ತು ಪ್ರತಿಷೇಧಗಳಲ್ಲಿರುವ ಈಶ್ವರನ ನಿರೂಪಣೆಯಿಂದ ಸಾಂಖ್ಯದರ್ಶನದ ನ್ಯೂನತೆಯ ಪರಿಹಾರವನ್ನೂ ಮಾಡಲಾಗಿದೆ.

ವಿವರಣೆ: ವಿಜ್ಞಾನ ಭಿಕ್ಷುವು ತನ್ನ ಗ್ರಂಥಕ್ಕೆ 'ಸಾಂಖ್ಯಪ್ರವಚನ ಭಾಷ್ಯ' ಎಂಬ ಹೆಸರನ್ನಿಡಲು ಕಾರಣ ಈ ಗ್ರಂಥದಲ್ಲಿ ಸಾಂಖ್ಯಸೂತ್ರಗಳ ವಿವರಣೆಯನ್ನು ವಿಸ್ತಾರವಾಗಿ ಮಾಡಲಾಗಿದೆ ಎಂಬುದು.

ಭಾಷ್ಯ: *ಅಸ್ಯ ಚ ಸಾಂಖ್ಯಸಂಜ್ಞಾ ಸಾನ್ವಯಾ–*
ಸಂಖ್ಯಾಂ ಪ್ರಕುರ್ವತೇ ಚೈವ ಪ್ರಕೃತಿಂ ಚ ವಿಚಕ್ಷತೇ ।
ತತ್ತ್ವಾನಿ ಚ ಚತುರ್ವಿಂಶತ್ ತೇನ ಸಾಂಖ್ಯಾ ಪ್ರಕೀರ್ತಿತಾಃ ॥
(ಮ.ಭಾ.ಶಾಂ.ಪ. ೩೦೬.೪೩)

ಇತ್ಯಾದಯಃ ಭಾರತಾದಿ ವಾಕ್ಯೇಭ್ಯಃ । ಸಂಖ್ಯಾ ಸಂಯಗ್ ವಿವೇಕೇನ ಆತ್ಮಕಥನಂ ಇತ್ಯರ್ಥಃ । ಅತಃ ಸಾಂಖ್ಯಶಬ್ದಸ್ಯ–ಯೋಗರೂಢತಯಾ 'ತತ್ಕಾರಣಂ ಸಾಂಖ್ಯ–ಯೋಗಾಧಿ ಗಮ್ಯಮ್' (ಶ್ವೇ.ಉ. ೬.೧೩) ಇತ್ಯಾದಿ ಶ್ರುತಿಷು ।
ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂಶೃಣು ।
(ಗೀ. ೨.೩೯)

ಇತ್ಯಾದಿ ಸ್ಮೃತಿಷು ಚ ಸಾಂಖ್ಯ ಶಬ್ದೇನ ಸಾಂಖ್ಯಶಾಸ್ತ್ರಂ ಏವ ಗ್ರಾಹ್ಯಂ, ನ ಪುನರರ್ಥಾಂತರಂ ಕಲ್ಪನೀಯಮ್ । ಇತಿ

ಅನುವಾದ: ಈ ಶಾಸ್ತ್ರಕ್ಕೆ 'ಸಾಂಖ್ಯ' ಎಂಬ ಹೆಸರು ಅರ್ಥಪೂರ್ಣವಾಗಿದೆ. ಈ ಶಾಸ್ತ್ರದಲ್ಲಿ ಸಂಖ್ಯಾ ಎಂದರೆ ಆತ್ಮನನ್ನು ಸರಿಯಾಗಿ ಪ್ರತಿಪಾದಿಸಲಾಗಿರುವುದು. ಹಾಗೆಯೇ 'ಪ್ರಕೃತಿ'ಯನ್ನೂ ವಿವರಿಸಲಾಗಿರುವುದು ಇಪ್ಪತ್ತುನಾಲ್ಕು ತತ್ವಗಳಿಂದ ಕೂಡಿರುವ ಇದನ್ನು ಸಾಂಖ್ಯವೆನ್ನುವರು ಇತ್ಯಾದಿ ಮಹಾಭಾರತದ ವಾಕ್ಯಗಳಿಂದ ಸಂಖ್ಯಾ ಎಂಬ ಶಬ್ದಕ್ಕೆ 'ಚೆನ್ನಾಗಿ ವಿಚಾರಮಾಡಿ ಆತ್ಮನನ್ನು ಪ್ರತಿಪಾದಿಸುವುದು' ಎಂಬ ಅರ್ಥವು ಸ್ಪಷ್ಟವಾಗುವುದು.

ಸಾಂಖ್ಯ ಶಬ್ದವು ಯೋಗರೂಢವಾಗಿರುವುದರಿಂದಲೇ, 'ಆದ್ದರಿಂದ ಸಾಂಖ್ಯ–ಯೋಗಗಳಿಂದ ಅದನ್ನು ಪಡೆಯಬಹುದು' ಎಂಬ (ಶ್ವೇತಾಶ್ವತರೋಪನಿಷತ್ತಿನಂತಹ) ಶ್ರುತಿವಾಕ್ಯಗಳಿಂದ ತಿಳಿಯಬಹುದು. 'ಈ ಜ್ಞಾನವನ್ನು ಸಾಂಖ್ಯದಲ್ಲಿ ಹೇಳಿದ್ದಾಯಿತು. ಇದನ್ನು ಈಗ ಯೋಗದಲ್ಲಿ ಕೇಳು' ಮುಂತಾಗಿ (ಗೀತೆಯೇ ಮುಂತಾದ) ಸ್ಮೃತಿಗಳಲ್ಲಿರುವ ಕಾಣುವ ಸಾಂಖ್ಯಶಬ್ದವು ಸಾಂಖ್ಯಶಾಸ್ತ್ರವನ್ನೇ ಕುರಿತದ್ದಾಗಿದೆ. ಬೇರೆ ಅರ್ಥವನ್ನು ಕಲ್ಪಿಸಲಾಗದು.

ಭಾಷ್ಯ: *ತದಿದಂ ಮೋಕ್ಷಶಾಸ್ತ್ರಂ ಚಿಕಿತ್ಸಾಶಾಸ್ತ್ರವತ್ ಚತುರ್ವ್ಯೂಹಮ್ । ಯಥಾ ಹಿ ರೋಗ ಆರೋಗ್ಯಂ ರೋಗನಿದಾನಂ ಭೈಷಜ್ಯಂ ಇತಿ ಚತ್ವಾರೋವ್ಯೂಹಾಃ ಸಮೂಹಾಃ ಚಿಕಿತ್ಸಾಶಾಸ್ತ್ರಸ್ಯ ಪ್ರತಿಪಾದ್ಯಾಃ ತಥೈವ ಹೇಯಂ, ಹಾನಂ, ಹೇಯಹೇತುಃ ಪ್ರತಿಪಾದ್ಯಾಃ ಭವಂತಿ, ಮುಮುಕ್ಷುಭಿರ್ಜಿಜ್ಞಾಸಿತ್ವಾತ್ । ತತ್ರ ತ್ರಿವಿಧಂ ದುಃಖಂ ಹೇಯಮ್ ತದತ್ಯಂತ ನಿವೃತ್ತಿರ್ಹಾನಮ್ । ಪ್ರಕೃತಿ– ಪುರುಷ ಸಂಯೋಗದ್ವಾರಾ ಚ ಅವಿವೇಕೋ ಹೇಯಹೇತು ವಿವೇಕಖ್ಯಾತಿಸ್ತು ಹಾನೋಪಾಯ ಇತಿ । ವ್ಯೂಹಶಬ್ದೇನ ಚ ಏಷಾಮುಪಕರಣಸಂಗ್ರಹಃ ।*

ಅನುವಾದ: ಈ ಮೋಕ್ಷಶಾಸ್ತ್ರ ಚಿಕಿತ್ಸಾಶಾಸ್ತ್ರದಂತೆ ನಾಲ್ಕು ವ್ಯೂಹಗಳಿಂದ ಕೂಡಿದೆ. ಹೇಗೆಂದರೆ, ರೋಗ, ಆರೋಗ್ಯ, ರೋಗನಿದಾನ ಮತ್ತು ಭೈಷಜ್ಯ ಈ ನಾಲ್ಕು ವ್ಯೂಹಗಳು ಎಂದರೆ ಉಪಕರಣಗಳ ಸಮೂಹಗಳು ಚಿಕಿತ್ಸಾಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಹಾಗೆಯೇ ಹೇಯ, ಹಾನ, ಹೇತು ಮತ್ತು ಹಾನೋಪಾಯ ಈ ನಾಲ್ಕೂ ವ್ಯೂಹಗಳು ಮೋಕ್ಷಶಾಸ್ತ್ರದಲ್ಲಿ ಪ್ರತಿಪಾದಿಸಬೇಕಾಗುವುದು. ಏಕೆಂದರೆ ಇವುಗಳನ್ನೇ ಮೋಕ್ಷವನ್ನು ಸಾಧಿಸುವವರು ತಿಳಿಯಬಯಸುವರು. ಅವುಗಳಲ್ಲಿ ಮೂರು ಬಗೆಯ ದುಃಖಗಳು 'ಹೇಯ'ಗಳಲ್ಲಿ ಸೇರುತ್ತವೆ. ಅವುಗಳನ್ನು ಸಂಪೂರ್ಣವಾಗಿ ಹೋಗಲಾಡಿಸುವುದು 'ಹಾನ'. ಪ್ರಕೃತಿ–ಪುರುಷರ ಸಂಯೋಗದಿಂದ ಆಗುವ ಅವಿವೇಕ 'ಹೇಯಹೇತು'. ವಿವೇಕವನ್ನು ಪಡೆಯುವುದು 'ಹಾನೋಪಾಯ'. ವ್ಯೂಹ ಶಬ್ದವು ಅನೇಕ ಉಪಕರಣಗಳ ಸಂಗ್ರಹ.

ವಿವರಣೆ: ವಿಜ್ಞಾನಭಿಕ್ಷುವು ಇಲ್ಲಿಗೆ ತನ್ನ ಭಾಷ್ಯದ ಉಪೋದ್ಘಾತವನ್ನು ಮುಗಿಸುತ್ತಾನೆ.

ಸೂತ್ರ-ಭಾಷ್ಯದ ಪ್ರಾರಂಭ

ಭಾಷ್ಯ: *ತತ್ರ ಚಾದೌ ಫಲತ್ವೇನ ಅಭ್ಯರ್ಹಿತಂ ಹಾನಂ ತತ್ ಪ್ರತಿಯೋಗಿ–ವಿಧಯೈವ ಚ ಹೇಯಂ ಪ್ರತಿಪಾದಯಿಷ್ಯನ್ ಶಾಸ್ತ್ರಕಾರಃ ಶಿಷ್ಯಾವಧಾನಾಯ ಶಾಸ್ತ್ರಾರಂಭಂ ಪ್ರತಿಜಾನೀತೇ ।*

ಅನುವಾದ: ಅದರಲ್ಲಿ ಮೊದಲನೆಯದಾಗಿ ಶ್ರೇಷ್ಠವಾದ 'ಹಾನ'ವನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಹೇಯವನ್ನೂ ನಿರೂಪಿಸುತ್ತಾ ಶಾಸ್ತ್ರಕಾರರು ಶಿಷ್ಯರ ಗಮನ ಸೆಳೆಯಲು ಶಾಸ್ತ್ರಾರಂಭದ ಪ್ರತಿಜ್ಞೆಯನ್ನು ಮಾಡುತ್ತಾರೆ.

ಸೂತ್ರ: ಅಥ ತ್ರಿವಿಧದುಃಖಾತ್ಯಂತನಿವೃತ್ತಿರತ್ಯಂತ ಪುರುಷಾರ್ಥಃ ॥೧॥

ಅನುವಾದ: ಅಥ ಮೂರು ಬಗೆಯ ದುಃಖವನ್ನು ಸಂಪೂರ್ಣವಾಗಿ ಹೋಗಲಾಡಿಸುವುದೇ ಪರಮ ಪುರುಷಾರ್ಥವು.

ಭಾಷ್ಯ: *ಅಥಶಬ್ದೋಽಯಮುಚ್ಚಾರಣಮಾತ್ರೇಣ ಮಂಗಲರೂಪಃ । ಅತ ಏವ 'ಮಂಗಲಾಚರಣಂ ಶಿಷ್ಟಾಚಾರಾತ್' ಇತಿ ಸ್ವಯಮೇವ ಪಂಚಮಾಧ್ಯಾಯೇ (೫.೧) ವಕ್ಷ್ಯತಿ । ಅರ್ಥಸ್ತು ಅತ್ರ ಅಥ ಶಬ್ದಸ್ಯ ಅಧಿಕಾರಃ ಏವ । ಪ್ರಶ್ನಾನಂತರ್ಯಾದೀನಾಂ ಪುರುಷಾರ್ಥೇನ ಸಹ ಅನ್ವಯಾಸಂಭವಾತ್ । ಜ್ಞಾನಾದಿ ಆನಂತರ್ಯಸ್ಯ ಚ ಸೂತ್ರೈರೇವ ವಕ್ಷ್ಯಮಾಣತಯಾ ತತ್ ಪ್ರತಿಪಾದನವೈಯರ್ಥ್ಯಾತ್ । ಅಧಿಕಾರಭಿನ್ನಾರ್ಥತ್ವೇ ಶಾಸ್ತ್ರಾರಂಭ–ಪ್ರತಿಜ್ಞಾದಿ ಅಲಾಭಪ್ರಸಂಗಾಚ್ಚ । ತಸ್ಮಾತ್ ಪುರುಷಾರ್ಥಸ್ಯ ಉಪಕ್ರಮ ಉಪಸಂಹಾರ ದರ್ಶನಾತ್ ಅಧಿಕಾರಾರ್ಥತ್ವಮೇವ ಉಚಿತಮ್ । 'ತದುಚ್ಛಿತ್ತಿಃ ಪುರುಷಾರ್ಥ ಇತ್ಯುಪಸಂಹಾರೋ ಭವಿಷ್ಯತೀತಿ' ।*

ಅನುವಾದ: ಸೂತ್ರದಲ್ಲಿರುವ ಅಥಶಬ್ದವು ಉಚ್ಚಾರಣೆ ಮಂಗಳಕ್ಕಾಗಿಯೇ. ಆದ್ದರಿಂದ 'ಮಂಗಲಾಚರಣಂ ಶಿಷ್ಟಾಚಾರಾತ್' (ಸಾಂ.ಸೂ. ೫.೧) ಎಂದು (ಮಂಗಳಾಚರಣೆಯು ಶಿಷ್ಟಾಚಾರದ ಕಾರಣ) ಸೂತ್ರವನ್ನು ಸೂತ್ರಕಾರರೇ ಐದನೆಯ ಅಧ್ಯಾಯದಲ್ಲಿ ಹೇಳುವರು. ಇಲ್ಲಿ ಅಥಶಬ್ದದ ಅರ್ಥ 'ಪ್ರಾರಂಭದ ಸಮಯ'. ಅಥಶಬ್ದಕ್ಕೆ ಪ್ರಶ್ನೆ, ಅನಂತರ

ಮುಂತಾದ ಅರ್ಥಗಳೂ ಇವೆ. ಆದರೆ ಆ ಅರ್ಥಗಳಿಗೂ ಪುರುಷಾರ್ಥಗಳಿಗೂ ಯಾವ ಸಂಬಂಧವೂ ಅನ್ವಯಿಸುವುದಿಲ್ಲ. 'ಜ್ಞಾನದ ಅನಂತರ' ಎಂದು ಅರ್ಥ ಮಾಡಿದರೆ ಅದೂ ವ್ಯರ್ಥವಾದೀತು, ಏಕೆಂದರೆ ಮುಂದಿನ ಸೂತ್ರಗಳಲ್ಲಿ ಇದನ್ನು ತಿಳಿಸಲಾಗಿದೆ. ಅಧಿಕಾರಕ್ಕೆ ಭಿನ್ನವಾದ ಅರ್ಥವಿಟ್ಟುಕೊಂಡಲ್ಲಿ ಶಾಸ್ತ್ರಾರಂಭಕ್ಕೆ ನಿಶ್ಚಯ ಮಾಡಿರುವುದೂ ಉಪಯೋಗವಿಲ್ಲದಂತಾಗುವುದು. ಆದ್ದರಿಂದ ಉಪಕ್ರಮ ಮತ್ತು ಉಪಸಂಹಾರಗಳಲ್ಲಿ ಪುರುಷಾರ್ಥವು ಗೊತ್ತಾಗುವುದರಿಂದ 'ಅಧಿಕಾರ' ಅಥವಾ ಆರಂಭದ ಅರ್ಥವೇ ಉಚಿತವಾದುದು. ಏಕೆಂದರೆ ತದುಚ್ಛಿತ್ತಿಃ ಪುರುಷಾರ್ಥಃ (ಸಾಂ. ಸೂ. ೬.೭೦), ಅದನ್ನು 'ವಿನಾಶ ಮಾಡುವುದೇ ಪುರುಷಾರ್ಥವು' ಎಂದು ಉಪಸಂಹಾರವಾಗುತ್ತದೆ.

ಭಾಷ್ಯ: *ಅಧಿಕಾರಶ್ಚ ಆಧಿಕ್ಯೇನ ಪ್ರಾಧಾನ್ಯೇನಾರಂಭಣಮ್ । ಆರಂಭಶ್ಚ ಯದ್ಯಪಿ ಸಾಕ್ಷಾಚ್ಛಾಸ್ತ್ರಸ್ಯೈವ ತಥಾಪಿ ತದ್ದ್ವಾರಾ ಶಾಸ್ತ್ರಾರ್ಥ ತದ್ವಿಚಾರಯೋರಪಿ ಇತಿ । ತಥಾ ಚ ಸಾಧನಾದಿ ಉಪಕರಣಸಹಿತಃ ಯಥೋಕ್ತಪುರುಷಾರ್ಥೋऽಧಿಕೃತಃ ಪ್ರಾಧಾನ್ಯೇನ ನಿರೂಪಯಿತುಂ ಅಸ್ಮಾಭಿಃ ಪ್ರಾರಬ್ಧಃ ಇತಿ ಸೂತ್ರ ವಾಕ್ಯಾರ್ಥಃ ।*

ಅನುವಾದ: 'ಅಧಿಕಾರ'ವೆಂದರೆ ಅಧಿಕವಾಗಿ ಪ್ರಾಧಾನ್ಯವನ್ನು ನೀಡಿ ಪ್ರಾರಂಭ ಮಾಡುವುದು. ಪ್ರಾರಂಭವು ಸಾಕ್ಷಾತ್ ಶಾಸ್ತ್ರದ್ದೇ ಆದರೂ ಅದರ ಮುಖಾಂತರ ಶಾಸ್ತ್ರಾರ್ಥದೊಡನೆ ಅದರಲ್ಲಿ ಅಡಗಿರುವ ವಿಚಾರವನ್ನೂ ತಿಳಿಸುವುದು. ಹಾಗೆಯೇ ಸಾಧನೆಯೇ ಮೊದಲಾದ ಉಪಕರಣಗಳೊಂದಿಗೆ ಯಥೋಕ್ತವಾದ 'ಪುರುಷಾರ್ಥವು' ಪ್ರಾರಂಭಿಸಲ್ಪಟ್ಟಿದೆ ಎಂದರೆ 'ಪ್ರಧಾನವಾಗಿ ನಮ್ಮಿಂದ ನಿರೂಪಿಸಲ್ಪಟ್ಟಿದೆ'.

ವಿವರಣೆ: ಅಥ ಎಂಬ ಶಬ್ದಕ್ಕೆ 'ಅಧಿಕಾರ' ಎಂದು ಅರ್ಥ ಮಾಡಲಾಗಿದೆ. 'ಅಥ... ಪುರುಷಾರ್ಥಃ' ಎಂದರೆ 'ಪುರುಷಾರ್ಥಃ ಅಧಿಕೃತಃ' ಎಂದರ್ಥ. ಅಭಿಪ್ರಾಯ ವೇನೆಂದರೆ, 'ಪುರುಷಾರ್ಥವನ್ನು ಪ್ರಧಾನವಾಗಿ ನಿರೂಪಿಸಲು ನಾವು ಪ್ರಾರಂಭಿಸಿದ್ದೇವೆ' ಎಂದು.

ಭಾಷ್ಯ: *ತ್ರಿವಿಧಂ ಆಧ್ಯಾತ್ಮಿಕ ಆಧಿಭೌತಿಕ ಆಧಿದೈವಿಕಂ ಚ ದುಃಖಮ್ । ತತ್ರಾತ್ಮಾನಂ ಸ್ವಸಂಘಾತಮಧಿಕೃತ್ಯ ಪ್ರವೃತ್ತಮಿತ್ಯಾಧ್ಯಾತ್ಮಿಕಮ್– ಶಾರೀರಂ ಮಾನಸಂ ಚ । ತತ್ರ ಶಾರೀರಂ ವ್ಯಾಧ್ಯಾದ್ಯುತ್ಥಮ್ । ತಥಾ ಭೂತಾನಿ ಪ್ರಾಣಿನಃ ಅಧಿಕೃತ್ಯ ಪ್ರವೃತ್ತಂ ಇತ್ಯಾಧಿಭೌತಿಕಮ್ ವ್ಯಾಘ್ರಚೋರಾದುತ್ಥಮ್ । ದೇವಾನ್ ಅಗ್ನಿವಾಯ್ವಾದೀನಧಿಕೃತ್ಯ ಪ್ರವೃತ್ತಮಿತ್ಯಾಧಿದೈವಿಕಮ್ ದಾಹಶೀತಾದ್ಯುತ್ಥಮಿತಿ ಭಾವಃ । ಯದ್ಯಪಿ ಸರ್ವಮೇವ ದುಃಖಂ ಮಾನಸಂ ತಥಾಪಿ ಮನೋ ಮಾತ್ರ– ಜನ್ಯತ್ವ–ಅಜನ್ಯತ್ವಾಭ್ಯಾಂ ಮಾನಸತ್ವ ಅಮಾನಸತ್ವ ವಿಶೇಷಃ । ಏಷಾಂ ತ್ರಿವಿಧದುಃಖಾನಾಂ ಯಾऽತ್ಯಂತನಿವೃತ್ತಿಃ ಸ್ಥೂಲಸೂಕ್ಷ್ಮ– ಪುರುಷಾರ್ಥಃ ಪುರುಷಾಣಾಂ ಬುದ್ಧೇರಿಷ್ಟಃ ಇತ್ಯವಾಂತರವಾಕ್ಯಾರ್ಥಃ ।*

ಅನುವಾದ: ದುಃಖವು ಸಾಧಾರಣವಾಗಿ ಮೂರು ಬಗೆ, ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂದು. ಆಧ್ಯಾತ್ಮಿಕ ದುಃಖವು ತನ್ನ ಆಂತರಿಕ ಕಾರಣಗಳಿಂದ ಉಂಟಾದುದು– ಅದು ಶಾರೀರ ಮತ್ತು ಮಾನಸ ಎಂದು ಎರಡು ಬಗೆ. ಅದರಲ್ಲಿ ಶಾರೀರವು ವ್ಯಾಧಿಯೇ ಮುಂತಾದವುಗಳಿಂದ ಉಂಟಾದುದು ಮಾನಸ ದುಃಖವು. ಅದೇ ರೀತಿ ಪ್ರಾಣಿಗಳಿಂದ ಉಂಟಾಗುವ ದುಃಖ ಮುಂತಾದುವು ಅಧಿಭೌತಿಕ. ಉದಾಹರಣೆಗೆ ಹುಲಿ, ಕಳ್ಳ ಮುಂತಾದವುಗಳಿಂದ ಉಂಟಾಗುವ ದುಃಖ. ದೇವಾನ್ ಎಂದರೆ ದೇವತೆಗಳನ್ನು ಎಂದರೆ ಅಗ್ನಿ, ವಾಯು ಮುಂತಾದವರನ್ನು ಕುರಿತು ಹೇಳಿದ್ದು; ಅವರಿಂದ ದಾಹ, ಶೀತ ಮುಂತಾದವುಗಳಿಂದ ಉಂಟಾದ ದುಃಖ. ಎಲ್ಲ ದುಃಖಗಳೂ ಮನಸ್ಸಿನಲ್ಲಿ ಅನುಭವಕ್ಕೆ ಬಂದರೂ ಕೇವಲ ಮನಸ್ಸಿನಲ್ಲಿಯೇ ಹುಟ್ಟಿಕೊಳ್ಳುವ ಅಥವಾ ಹುಟ್ಟಿಕೊಳ್ಳದ ಕಾರಣ ಮಾನಸ ಅಥವಾ ಅಮಾನಸವಾಗಿ ಇರುವ ದುಃಖಗಳೂ ಉಂಟು. ಈ ಮೂರೂ ದುಃಖಗಳ ಸಂಪೂರ್ಣ ನಿವೃತ್ತಿಗೆ ಎಂದರೆ ಸ್ಥೂಲ ಹಾಗೂ ಸೂಕ್ಷ್ಮ ದುಃಖಗಳನ್ನು ನಿಃಶೇಷವಾಗಿ ಹೋಗಲಾಡಿಸುವುದೇ ಅತ್ಯಂತ ಪರಮಪುರುಷಾರ್ಥ. ಅದೇ ಬುದ್ಧಿಗೂ ಸಹ ಬಹಳ ಇಷ್ಟವಾದುದು ಎಂಬುದೇ ನಡುವೆ ಬರುವ ವಾಕ್ಯಗಳ ಅರ್ಥ.

ಭಾಷ್ಯ: *ತತ್ರ ಸ್ಥೂಲಂ ದುಃಖಂ ವರ್ತಮಾನಾವಸ್ಥಮ್ । ತತ್ರ ದ್ವಿತೀಯ ಕ್ಷಣಾದುಪರಿ ಸ್ವಯಮೇವ ನಂಕ್ಷ್ಯತಿ । ಅತೋ ನ ತತ್ರ ಜ್ಞಾನಾಪೇಕ್ಷಾ । ಅತೀತಂ ತು ಪ್ರಾಗೇವ ನಷ್ಟಮಿತಿ ನ ತತ್ರ ಸಾಧನಾಪೇಕ್ಷೇತಿ ಪರಿಶೇಷಾದನಾಗತಾವಸ್ಥಸೂಕ್ಷ್ಮದುಃಖನಿವೃತ್ತಿರೇವ ಪುರುಷಾರ್ಥತಯಾ ಪ್ರಕೃತೇ ಪರ್ಯವಸ್ಯತಿ । ತಥಾ ಚ ಯೋಗಸೂತ್ರಂ– 'ಹೇಯಂ ದುಃಖಮನಾಗತಮ್ (ಯೋ.ಸೂ. ೨/೧೬) ಇತಿ । ನಿವೃತ್ತಿಶ್ಚ ನ ನಾಶಃ ಅಪಿತ್ವತೀತಾವಸ್ಥಾ, ಧ್ವಂಸ–। ಪ್ರಾಗಭಾವಯೋರತೀತಾನಾಗತಾವಸ್ಥಾಸ್ವರೂಪತ್ವಾತ್, ಸತ್ಕಾರ್ಯವಾದಿಭಿಃ ಅಭಾವಾನಂಗೀಕಾರಾತ್ ।*

ಅನುವಾದ: ವರ್ತಮಾನದಲ್ಲಿ ಇರುವ ಸ್ಥೂಲ ದುಃಖವು ಮತ್ತೆ ಎರಡನೆಯ ಕ್ಷಣದಲ್ಲಿಯೇ ತಾನಾಗಿಯೇ ನಾಶವಾಗುವುದು. ಆದ್ದರಿಂದ ಅದರ ವಿಷಯದಲ್ಲಿ ಜ್ಞಾನದ ಅಪೇಕ್ಷೆಯಿಲ್ಲ– ಕಳೆದ ಸಮಯದ ಉಪಕರಣದ ಅಗತ್ಯವಿಲ್ಲ. ಇನ್ನು ಉಳಿದದ್ದು ಇನ್ನೂ ಬಾರದ ಸಮಯದ ಸೂಕ್ಷ್ಮದುಃಖ. ಇದನ್ನು ಹೋಗಲಾಡಿಸುವುದೇ ಪುರುಷಾರ್ಥವಾದ ಕಾರಣ. ಸದ್ಯದಲ್ಲಿ ಅದು ಉಳಿಯುತ್ತದೆ. ಇದನ್ನೇ ಯೋಗಸೂತ್ರದಲ್ಲಿ ಹೇಳಿದೆ– 'ಹೋಗಲಾಡಿಸಬೇಕಾದ ದುಃಖ ಇನ್ನೂ ಬಂದಿಲ್ಲ' ಎಂದು ಯೋಗಸೂತ್ರವು ಹೇಳುತ್ತದೆ. 'ನಿವೃತ್ತಿ' ಎಂದರೆ 'ನಾಶ' ಎಂಬರ್ಥವಲ್ಲ, ಆದರೆ ಅತೀತವಾದ ಅವಸ್ಥೆಯಷ್ಟೆ. ಏಕೆಂದರೆ ಪ್ರಧ್ವಂಸಾಭಾವ ಕಳೆದುಹೋದ ಸಮಯದ ಸ್ವರೂಪ. ಆದರೆ ಸತ್ಕಾರ್ಯ ವಾದಿಗಳು ಯಾವುದೇ ವಸ್ತುವಿನ ನಾಶ ಎಂದರೆ ಅಭಾವವನ್ನು ಅಂಗೀಕರಿಸುವುದಿಲ್ಲ.

ಭಾಷ್ಯ: *ನನು ಕದಾಚಿತ್ ಅಪಿ ಅನಾಗತಂ ದುಃಖಮಪ್ರಾಮಾಣಿಕಮ್ । ಅತಃ ಖಪುಷ್ಪನಿವೃತ್ತಿವತ್ ತನ್ನಿವೃತ್ತೇರ್ನ ಪುರುಷಾರ್ಥತ್ವಂ ಯುಕ್ತಮಿತಿ ।*

ಅನುವಾದ: ಯಾವಾಗಲಾದರೂ ಭವಿಷ್ಯದಲ್ಲಿ ಆಗಬಹುದಾದ ದುಃಖಕ್ಕೆ ಪ್ರಮಾಣವೇನು? ಆದ್ದರಿಂದ ಆಕಾಶ ಕುಸುಮವನ್ನು ಹೋಗಲಾಡಿಸುವಂತೆ ಅದನ್ನು ಹೋಗಲಾಡಿಸಲು ಇರುವುದನ್ನು ಹೇಗೆ ಪುರುಷಾರ್ಥವೆನ್ನಲಾದೀತು?

ಭಾಷ್ಯ: *ಮೈವಮ್ । ಸರ್ವತ್ರ ಹಿ ಸ್ವ ಸ್ವಕಾರ್ಯ ಜನನ ಶಕ್ತಿರ್ಯಾವದ್ ದ್ರವ್ಯಸ್ಥಾಯಿನೀತಿ ಪಾತಂಜಲೇ ಸಿದ್ಧಮ್ । ದಾಹಾದಿ ಶಕ್ತಿಮಾನ್ಯಸ್ಯ ಅಗ್ನ್ಯಾದೇಃ ಕ್ವಾಪ್ಯದರ್ಶನಾತ್ । ಸಾ ಚ ಶಕ್ತಿರನಾಗತಾವಸ್ಥತ್ತತ್ಕಾರ್ಯ–ರೂಪಾ । ಇಯಮೇವ ಚ ಉಪಾದಾನಕಾರಣಸ್ವರೂಪಯೋಗ್ಯತೇತ್ಯಪಿ ಗೀಯತೇ । ಅತಃ ಯಾವಚ್ಚಿತ್ತಸತ್ತಾ ತಾವದೇಮನಾಗತ ದುಃಖ–ಸತ್ತಾಽನುಮೀಯತೇ, ತನ್ನಿವೃತ್ತಿಶ್ಚ ಪುರುಷಾರ್ಥ ಇತಿ ।*

ಅನುವಾದ: ಹಾಗಲ್ಲ. ಪತಂಜಲಿಯ ಯೋಗದರ್ಶನದಲ್ಲಿ ಸಿದ್ಧಪಡಿಸಿರುವ ವಿಷಯ ವೆಂದರೆ ಎಲ್ಲೆಡೆಯಲ್ಲಿಯೂ ವಸ್ತುಗಳಲ್ಲಿ ಅಡಗಿರುವ ಶಕ್ತಿಯು ಆ ವಸ್ತುವಿರುವವರೆಗೆ ಇರುತ್ತದೆ. 'ಸುಡುವ ಶಕ್ತಿಯಿಲ್ಲದ ಅಗ್ನಿಯು ಎಲ್ಲೂ ಕಾಣಬರದು. ಆ ಶಕ್ತಿಯು ಭವಿಷ್ಯತ್ತಿನಲ್ಲಿಯೂ ವಸ್ತುಗಳಲ್ಲಿ ಆಯಾ ಕಾರ್ಯರೂಪದಲ್ಲಿ ಅಡಗಿರುತ್ತದೆ. ಈ ಶಕ್ತಿಯನ್ನೇ ಉಪದಾನಕಾರಣಸ್ವರೂಪಯೋಗ್ಯತಾ ಎಂದರೆ ಮೂಲದ್ರವ್ಯ ದಿಂದುಂಟಾದ ನೂತನ ರೂಪದ ಯೋಗ್ಯತೆ ಎನ್ನುತ್ತಾರೆ. ಆದ್ದರಿಂದ ಎಲ್ಲಿಯವರೆಗೆ ಮನಸ್ಸೆಂಬ ದ್ರವ್ಯವಿರುವುದೋ ಅಲ್ಲಿಯವರೆಗೆ ಅನಾಗತ ದುಃಖದ ಅನುಮಾನ ಮಾಡಲು ಸಾಧ್ಯ; ಅದರ ನಿವೃತ್ತಿಯೇ ಪುರುಷಾರ್ಥ ಎನ್ನುತ್ತಾರೆ.

ಭಾಷ್ಯ: *ಜೀವನ್ಮುಕ್ತಿದಶಾಯಾಂ ಚ ಪ್ರಾರಬ್ಧಕರ್ಮಫಲಾತಿರಿಕ್ತಾನಾಂ ದುಃಖಾನಾಮನಾಗತಾವಸ್ಥಾನಾಂ ಬೀಜಾಖ್ಯಾನಂ ದಾಹಃ, ವಿದೇಹಕೈವಲ್ಯೇ ತು ಚಿತ್ತೇನ ಸಹ ವಿನಾಶ ಇತ್ಯವಾಂತರ ವಿಶೇಷಃ । ಬೀಜದಾಹಶ್ಚ ಅವಿದ್ಯಾಸಹಕಾರ್ಯುಚ್ಛೇದಮಾತ್ರಮ್, ಜ್ಞಾನಸ್ಯಾವಿದ್ಯಾಮಾತ್ರೋಚ್ಛೇದಕತ್ವಸ್ಯ ಲೋಕೇ ಸಿದ್ಧತ್ವಾತ್ । ಅತ ಏವ ಚಿತ್ತೇನ ಸಹೈವ ದುಃಖಸ್ಯ ನಾಶಃ । ಜ್ಞಾನಸ್ಯ ಸಾಕ್ಷಾದ್ದುಃಖಾದಿನಾಶಕತ್ವೇ ಪ್ರಮಾಣಾಭಾವಾದಿತಿ ।*

ಅನುವಾದ: ಜೀವನ್ಮುಕ್ತಿಯ ಸ್ಥಿತಿಯಲ್ಲಿ ಪ್ರಾರಬ್ಧಕರ್ಮ ಫಲವನ್ನು ಮೀರಿ ಅನಾಗತಾವಸ್ಥೆಯ ದುಃಖಗಳನ್ನು, ಎಂದರೆ ಬೀಜಗಳೆಂದು ಕರೆಯಲ್ಪಡುವ ದುಃಖಗಳನ್ನು, ಸುಟ್ಟುಬಿಡುವುದು ಎಂದರೆ ನಾಶ ಮಾಡಿಬಿಡುವುದು. ಆದರೆ ವಿದೇಹ ಮುಕ್ತಿಯಲ್ಲಿ ಚಿತ್ತದೊಡನೆ (ದುಃಖವೂ) ನಾಶವಾಗುವುದು ಎಂಬ ನಡುವೆ ನಡೆಯುವ ವಿಶೇಷ ಬೀಜವನ್ನು ಸುಡುವುದು ಅವಿದ್ಯೆಯಿಂದ ಕೂಡಿದ ಸಹಕಾರಿ ಕಾರಣಗಳನ್ನು ಬುಡಮೇಲು ಮಾಡುವುದು. ಏಕೆಂದರೆ ಜ್ಞಾನ ಕೇವಲ ಅವಿದ್ಯೆಯನ್ನು

ಹೋಗಲಾಡಿಸುವುದು ಜಗತ್ಪ್ರಸಿದ್ಧವಾದುದು. ಆದ್ದರಿಂದ ಚಿತ್ತದೊಡನೆ ದುಃಖವೂ ನಾಶವಾಗಿ ಬಿಡುವುದು. ಏಕೆಂದರೆ ಜ್ಞಾನವು ಸಾಕ್ಷಾತ್ ದುಃಖವನ್ನು ನಾಶ ಮಾಡಬಲ್ಲದೆಂಬ ವಿಷಯದಲ್ಲಿ ಪ್ರಮಾಣವಿಲ್ಲ.

ಭಾಷ್ಯ: *ನನು ತಥಾಪಿ ದುಃಖನಿವೃತ್ತಿರ್ನ ಪುರುಷಾರ್ಥಃ ಸಂಭವತಿ, ದುಃಖಸ್ಯ ಚಿತ್ತಧರ್ಮತ್ವೇನ ಪುರುಷೇ ತನ್ನಿವೃತ್ತ್ಯಸಂಭವಾತ್, ದುಃಖ-ನಿವೃತ್ತಿಶಬ್ದಸ್ಯ ದುಃಖಾನುತ್ಪಾದಕತ್ವೇऽಪಿ ಪುರುಷೇ ತಸ್ಯ ನಿತ್ಯಸಿದ್ಧತ್ವಾತ್ ।*

ಅನುವಾದ: ಹಾಗಿದ್ದರೂ ದುಃಖವನ್ನು ಹೋಗಲಾಡಿಸುವುದಷ್ಟೇ ಪುರುಷಾರ್ಥ ವಾಗಲಾರದು. ದುಃಖ ಚಿತ್ತದ ಧರ್ಮವಾಗಿರುವುದರಿಂದ ಪುರುಷನಲ್ಲಿ ಅದನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. 'ದುಃಖ ನಿವೃತ್ತಿ' ಎಂದರೆ ದುಃಖವನ್ನು ಉಂಟುಮಾಡದಂತೆ ಮಾಡುವುದೂ ಸಾಧ್ಯವಿಲ್ಲ. ಏಕೆಂದರೆ ದುಃಖವನ್ನು ಉತ್ಪತ್ತಿ ಮಾಡದಿರುವುದು ಪುರುಷನಲ್ಲಿ ಯಾವಾಗಲೂ ಸಿದ್ಧವಾದುದೇ.

ವಿವರಣೆ: ದುಃಖ ಚಿತ್ತದ ಗುಣವಾದ್ದರಿಂದ ಅದರಿಂದ ಬೇರೆ ಮಾಡಲು ಸಾಧ್ಯವಿಲ್ಲ. ದುಃಖವನ್ನು ಉತ್ಪತ್ತಿ ಮಾಡದಿರುವುದು ಪುರುಷನಲ್ಲಿ ಯಾವಾಗಲೂ ಇರುವುದೇ ಇದಕ್ಕೆ ಮತ್ತೆ ಪ್ರಮಾಣಬೇಕಿಲ್ಲ.

ಭಾಷ್ಯ: *ಯತ್ತು ಕಂಠಚಾಮೀಕರವತ್ ಸಿದ್ಧೇऽಪಿ ಅಸಿದ್ಧತ್ವಾತ್ ಪುರುಷಾರ್ಥತಾ ಸ್ಯಾತ್ ।*

ಅನುವಾದ: ಕತ್ತಿಗೆ ತೊಟ್ಟ ಚಿನ್ನದ ಸರದಂತೆ ನಿತ್ಯ ಸಿದ್ದವಾದರೂ ನಿತ್ಯ ಸಿದ್ದವಲ್ಲವೆಂಬಂತೆ ಭ್ರಮೆಯಾಗಬಹುದು. ಹಾಗೆಯೇ ದುಃಖ ನಿವೃತ್ತಿಯೆಂಬ ಪುರುಷಾರ್ಥವಿರಲು ಸಾಧ್ಯ.

ವಿವರಣೆ: ಕತ್ತಿಗೆ ತೊಟ್ಟ ಸರವನ್ನು ಕಳೆದು ಹೋಯಿತೆಂದು ಭ್ರಮಿಸುವಂತೆ ದುಃಖ ನಿವೃತ್ತಿಯಾಗಿದ್ದರೂ ಆಗಿಲ್ಲವೆಂದು ಭಾವಿಸಬಹುದು.

ಭಾಷ್ಯ: *ತನ್ನ; ಏಮಮಪಿ ಪ್ರಮಾನ್ನಿರ್ದುಃಖ ಇತಿ ಶ್ರವಣಮನನೋತ್ತರಂ ದುಃಖಹಾನಾರ್ಥಂ ನಿದಿಧ್ಯಾಸನಾದೌ ಪ್ರವೃತ್ತ್ಯನುಪಪತ್ತೇಃ । ಬಹ್ವಾಯಾಸಸಾಧ್ಯೇ ಹ್ಯುಪಾಯೇ ಫಲನಿಶ್ಚಯಾದೇವ ಪ್ರವೃತ್ತಿಃ ಭವತಿ । ಪ್ರಕೃತೇ ತು ಶ್ರವಣಮನನಾಭ್ಯಾಂ ಸಿದ್ಧತ್ವಜ್ಞಾನಾತ್ ನ ಅಪ್ರಾಮಾಣ್ಯಜ್ಞಾನಾऽನಾಸ್ಕಂದಿತಃ ಫಲಸ್ಯ ಅಸಿದ್ಧತ್ವನಿಶ್ಚಯೋ ಅಸ್ತೀತಿ ।*

ಅನುವಾದ: ಇದು ಸರಿಯಲ್ಲ. ಹಾಗೆ 'ಪುರುಷನು ದುಃಖರಹಿತನು' ಎಂದು ಶ್ರವಣ, ಮನನಗಳ ನಂತರ ದುಃಖವನ್ನು ಕಳೆದುಕೊಳ್ಳಲು ನಿದಿಧ್ಯಾಸನವನ್ನೇನೂ ಮಾಡುವ ಪ್ರವೃತ್ತಿ ಬರಲಾರದು. ಯಾವುದರಲ್ಲಿಯಾದರೂ ಪ್ರವೃತ್ತಿಯುಂಟಾಗಬೇಕಾದರೆ ಬಹಳ ಕಷ್ಟಸಾಧ್ಯವಾದರೂ ಫಲ ದೊರೆಯುವುದೆಂಬ ನಂಬಿಕೆಯಿದ್ದರೆ ಮಾತ್ರ ಅದರಲ್ಲಿ ತೊಡಗುವರು. ಈ ವಿಷಯದಲ್ಲಿ ಶ್ರವಣ-ಮನನಗಳಿಂದ ಸಿದ್ಧಿಯ

ಜ್ಞಾನ ದೊರೆತಲ್ಲಿ ಫಲವು ಸಿದ್ಧಿಸಲಾರದೆಂಬ ನಿಶ್ಚಯವು ಪ್ರಮಾಣರಹಿತ ಜ್ಞಾನದಿಂದ ದೊರಕದೆ ಇರಲಾರದು.

ಭಾಷ್ಯ: *ಕಿಂಚ–ಭವತು ಕದಾಚಿದ್ಭ್ರಮಾದಿನಾ ಪುರುಷೇಚ್ಛಾ ವಿಷಯತ್ವಂ ದುಃಖಾಭಾವಸ್ಯ, ಶ್ರುತಿಸ್ತು ಮೋಹನಾಶಿನೀ ಕಥಂ ಸಿದ್ಧಸ್ಯ ಫಲಂ ಫಲತ್ವಂ ಪ್ರತಿಪಾದಯೇತ್ । 'ತರತಿ ಶೋಕಮಾತ್ಮವಿತ್' (ಛಾಂಉ ೭.೧.೩), 'ವಿದ್ವಾನ್ ಹರ್ಷಶೋಕೌ ಜಹಾತಿ' (ಕಠ ೧.೨.೧೨) ಇತ್ಯಾದಿರಿತಿ ।*

ಅನುವಾದ: ಅಲ್ಲದೆ– ದುಃಖಾಭಾವವು ಪುರುಷನ ಇಚ್ಛೆಗೆ ವಿಷಯವಾಗಿರಬಹುದೆಂದು ಇಟ್ಟುಕೊಂಡರೂ ಮೋಹವನ್ನು ತೊಲಗಿಸುವ ಶ್ರುತಿಯು ಸಿದ್ಧನಿಗೆ ಫಲತ್ವವನ್ನು ತಿಳಿಸೀತು. 'ಆತ್ಮವನ್ನು ಬಲ್ಲವನು ಶೋಕವನ್ನು ದಾಟುತ್ತಾನೆ', 'ವಿದ್ವಾಂಸನು ಹರ್ಷ ಶೋಕಗಳನ್ನು ಬಿಟ್ಟುಬಿಡುತ್ತಾನೆ' ಎಂದು ಶ್ರುತಿಯು ಏಕೆ ಹೇಳುತ್ತಿತ್ತು?

ಭಾಷ್ಯ: *ಅತ್ರೋಚ್ಯತೇ । 'ನ ನಿತ್ಯಶುದ್ಧಬುದ್ಧಮುಕ್ತಸ್ವಭಾವಸ್ಯ ತದ್ಯೋಗಸ್ತದ್ಯೋಗಾದೃತೇ' (ಸಾಂ.ಸೂ. ೧.೧೯) ಇತಿ ಹೇಯ–ಹೇತ್ವವಧಾರಣಕಸೂತ್ರೇಣೈಮಯಂ ಪೂರ್ವಪಕ್ಷಃ ಸಮಾಧಾಸ್ಯತೇ । ತಥಾ ಹಿ ಪ್ರತಿಬಿಂಬರೂಪೇಣ ಪುರುಷೇಽಪಿ ಸುಖದುಃಖೇ ಸ್ತಃ ಅನ್ಯಥಾ ತಯೋರ್ಭೋಗ್ಯತ್ವಾನುಪಪತ್ತೇಃ । ಸುಖಾದಿಗ್ರಹಣಂ ಭೋಗಃ, ಗ್ರಹಣಂ ಚ ತದಾಕಾರತಾ । ಸಾಚ ಕೂಟಸ್ಥಚಿತೌ ಬುದ್ಧೇರರ್ಥಾಕಾರವತ್ ಪರಿಣಾಮಃ ನ ಸಂಭವತೀತ್ಯಗತ್ಯಾ ಪ್ರತಿಬಿಂಬ ಸ್ವರೂಪತಾಯಾಂ ಏವ ಪರ್ಯವಸ್ಯತಿ ।*

ಅನುವಾದ: ಈ ವಿಷಯದಲ್ಲಿ ಹೇಳುತ್ತೇವೆ– ಸಾಂಖ್ಯ ಸೂತ್ರ (೧.೧೯) ಹೇಳುವಂತೆ ನಿತ್ಯ ಶುದ್ಧನೂ, ನಿತ್ಯಬುದ್ಧನೂ ಮತ್ತು ನಿತ್ಯ ಮುಕ್ತ ಸ್ವಭಾವದವನೂ ಆದ ಪುರುಷನು ಪ್ರಕೃತಿಯ ಸಂಬಂಧವಿಲ್ಲದೆ ಬಂಧನಕ್ಕೊಳಗಾಗುವುದಿಲ್ಲ.

ವಿವರಣೆ: ಸಾಧಾರಣವಾಗಿ ನಿತ್ಯ ಶುದ್ಧನೂ, ಬುದ್ಧನೂ ಮತ್ತು ಮುಕ್ತನೂ ಆದ ಪುರುಷನು ಪ್ರಕೃತಿಯ ಯೋಗವಿಲ್ಲದೆ ಬಂಧನಕ್ಕೊಳಗಾಗಲಾರ.

ಅನುವಾದ: ಈ ಬಿಡಬೇಕಾದ ಕಾರಣಸಹಿತವಾಗಿ ತಿಳಿಸುವ ಈ ಸೂತ್ರದ ಮುಖಾಂತರ ಸಮಾಧಾನವನ್ನು ಪೂರ್ವಪಕ್ಷಕ್ಕೆ ಹೇಳುತ್ತೇವೆ. ಹಾಗೆಯೇ ಪ್ರತಿಬಿಂಬದ ರೂಪದಲ್ಲಿ ಪುರುಷನಲ್ಲಿಯೂ ಸುಖ–ದುಃಖಗಳು ಉಂಟಾಗುತ್ತವೆ, ಹಾಗಿಲ್ಲದಿದ್ದಲ್ಲಿ ಅದನ್ನು ಅನುಭವಿಸುವವರು ಇಲ್ಲದಂತಾಗುತ್ತದೆ. ಸುಖಾದಿಗಳ ಗ್ರಹಣವೇ ಭೋಗವು, ಗ್ರಹಣವೆಂದರೆ (ಸುಖದುಃಖಗಳ) ಆಕಾರವನ್ನು ತಳೆಯುವುದು. ಹಾಗೆಯೇ ಕೂಟಸ್ಥಚಿತ್ತದಲ್ಲಿ, ಬುದ್ಧಿಯು ಆಕಾರವನ್ನು ತಳೆಯುವಂತೆ, ಬದಲಾವಣೆ ಸಾಧ್ಯವಿಲ್ಲ. ಆದ್ದರಿಂದ ಪ್ರವೇಶಕ್ಕೆ ಅವಕಾಶವಿಲ್ಲದೆ ಕೇವಲ ಪ್ರತಿಬಿಂಬ ಸ್ವರೂಪವನ್ನು ಪಡೆಯುವುದರಲ್ಲಿ ಮುಕ್ತಾಯಗೊಳ್ಳುತ್ತದೆ.

ವಿವರಣೆ: ಸಾಂಖ್ಯರ ಪ್ರಕಾರ ಪುರುಷನಲ್ಲಿ ಯಾವ ವಿಕಾರವೂ ಉಂಟಾಗದು. ಹೀಗೆ ಚಿನ್ಮಾತ್ರನಾದ ಪುರುಷನಲ್ಲಿ ಅರ್ಥಾಕಾರವೂ ಉಂಟಾಗದು. ಕೇವಲ ಪ್ರತಿಬಿಂಬ ರೂಪದಲ್ಲಿ ಸುಖದುಃಖಾದಿಗಳು ಪರ್ಯವಸಾನಗೊಳ್ಳುವುವು.

ಭಾಷ್ಯ: *ಅಯಮೇವ ಬುದ್ಧಿವೃತ್ತಿ ಪ್ರತಿಬಿಂಬೋ 'ವೃತ್ತಿಸಾರೂಪ್ಯಮಿತರತ್ರ (ಯೋ- ಸೂ. ೧.೪) ಇತಿ ಯೋಗಸೂತ್ರೇಣೋಕ್ತಃ । 'ಸತ್ತ್ವೇ ತು ತಪ್ಯಮಾನೇ ತದಾಕಾರಾನುರೋಧಾತ್ ಪುರುಷೋಽಪ್ಯನುತಪ್ಯತ ಇತಿ ದೃಶ್ಯತೇ' (೨.೨೭) ತದಾಕಾರಾನುರೋಧಶಬ್ದೇನ ವಿಶಿಷ್ಯೈವ ತಾಪಾದಿ ದುಃಖಸ್ಯ ಪ್ರತಿಬಿಂಬ ಉಕ್ತಃ । ಅತ ಏವ ಚ ಪುರುಷಸ್ಯ ಬುದ್ಧಿ ವೃತ್ತ್ಯುಪರಾಗೇ ಸ್ಫಟಿಕಂ ದೃಷ್ಟಾಂತಂ ಸೂತ್ರಕಾರೋ ವಕ್ಷ್ಯತಿ- 'ಕುಸುಮವಚ್ಚಮಣಿಃ' (ಸಾಂ.ಸೂ. ೨.೩೫) ಇತಿ ।*

ಅನುವಾದ: ಇದೇ ಬುದ್ಧಿವೃತ್ತಿಯ ಪ್ರತಿಬಿಂಬವನ್ನು ಯೋಗಸೂತ್ರದಲ್ಲಿ 'ಬೇರೆಯೆಡೆ ವೃತ್ತಿಯ ಸಾರೂಪ್ಯವಿರುವುದು' ಎಂದು ಹೇಳಿದೆ (ಇತರ ಅವಸ್ಥೆಗಳಲ್ಲಿ ಬುದ್ಧಿಯ ವೃತ್ತಿಯಂತೆ ಪುರುಷನಲ್ಲಿ ಅದೇ ರೂಪವಿರುವುದು). ಸತ್ತ್ವವು ಸುಡುತ್ತಿರಲು ಅದೇ ಆಕಾರವನ್ನು ತಳೆಯಬೇಕಾದ್ದರಿಂದ ಪುರುಷನೂ ಕೂಡ ಅದರೊಡನೆ ತಪಿಸುವಂತೆ ಕಾಣುತ್ತದೆ (೨.೧೭ ಯೋಗಸೂತ್ರದ ಭಾಷ್ಯ). ಇಲ್ಲಿ 'ತದಾಕಾರ ಅನುರೋಧೇನ' ಎಂಬ ಶಬ್ದದಿಂದ ವಿಶೇಷವಾಗಿ ತಾಪಾದಿ ದುಃಖದ ಪ್ರತಿಬಿಂಬ ಉಕ್ತವಾಗಿದೆ- ಆದ್ದರಿಂದಲೇ ಬುದ್ಧಿವೃತ್ತಿಯ ಗುಣವು ಪುರುಷನಲ್ಲಿ ಸೇರಿದಂತೆ ಎಂಬುದಕ್ಕೆ ಸೂತ್ರಕಾರರು ದೃಷ್ಟಾಂತವನ್ನು ಹೇಳುತ್ತಾರೆ- 'ಸ್ಫಟಿಕದ ಬಳಿ ಹೂವಿದ್ದಂತೆ' ಎಂದು

ಭಾಷ್ಯ: *ವೇದಾಂತಿಭಿರಪಿ ಚೇತನೇಽಧ್ಯಸ್ತತಯಾ ಏವ ದೃಶ್ಯಭಾವಂ ಉಚ್ಯತೇ, ಸ ಚಾಧ್ಯಾಸಃ ಪ್ರತಿಬಿಂಬಂ ವಿನಾ ನ ಘಟೇತ । ಜ್ಞಾನಮಾತ್ರಸ್ಯ ಅಧ್ಯಾಸತ್ವೇ, ಆತ್ಮಾಶ್ರಯಾತ್, ಅಧ್ಯಾಸಾಜ್- ಜ್ಞಾನಂ, ಜ್ಞಾನಂ ಏವ ಚಾಧ್ಯಾಸ ಇತಿ । ತದೇತತ್ ಸ್ಮರ್ಯತೇಽಪಿ-*

ಅನುವಾದ: ವೇದಾಂತಿಗಳೂ ಸಹ ಚೇತನದಲ್ಲಿ ದೃಶ್ಯದ ಪ್ರಕಾಶವು ತೋರುತ್ತದೆ ಎಂದರೂ ಆ ಅಧ್ಯಾಸವು ಪ್ರತಿಬಿಂಬವಿಲ್ಲದೆ ಸಂಭವಿಸಲಾರದು. ಜ್ಞಾನವೇ ಅಧ್ಯಾಸವಾಗಿರುವಾಗ ಅಧ್ಯಾಸವೇ ಜ್ಞಾನ, ಜ್ಞಾನವೇ ಅಧ್ಯಾಸ ಎಂಬ ಆತ್ಮಾಶ್ರಯ ದೋಷ ಉಂಟಾಗುವುದು. ಇದನ್ನೇ ಸ್ಮೃತಿಯು ಹೇಳಿದೆ.

ಭಾಷ್ಯ: *ತಸ್ಮಿಂಶ್ಚಿದ್ದರ್ಪಣೇ ಸ್ಫಾರೇ ಸಮಸ್ತಾ ವಸ್ತುದೃಷ್ಟಯಃ ।*
ಇಮಾಸ್ತಾಃ ಪ್ರತಿಬಿಂಬಂತಿ ಸರಸೀವ ತಟದ್ರುಮಾಃ ॥

(ಯೋ.ವಾ. ೯೧.೧೧೩)

ಅನುವಾದ: ಸರೋವರದಲ್ಲಿ ದಡದ ಮರಗಳು ಪ್ರತಿಬಿಂಬದಲ್ಲಿ ಗೋಚರವಾಗುವಂತೆ ಚಿತ್ತೆಂಬ ನಿರ್ಮಲವಾದ ಕನ್ನಡಿಯಲ್ಲಿ ಎಲ್ಲ ವಸ್ತುಗಳೂ ಪ್ರತಿಬಿಂಬಿತವಾಗುತ್ತವೆ.

ಭಾಷ್ಯ: *ಅತ್ರ ಹಿ ದೃಷ್ಟಿಶಬ್ದೋ ಬುದ್ಧಿವೃತ್ತಿಸಾಮಾನ್ಯಪರೋ ಯುಕ್ತಿಸಾಮ್ಯಾತ್ । ಪ್ರತಿಬಿಂಬಶ್ಚ ತತ್ತದುಪಾಧಿಷು ಬಿಂಬಾಕಾರಶ್ಚಿತ್ತಪರಿಣಾಮ ಇತಿ । ತಸ್ಮಾತ್ ಪ್ರತಿಬಿಂಬರೂಪೇಣ ಪುರುಷೇ ದುಃಖಸಂಬಂಧೋ ಭೋಗಾಖ್ಯೋಽಸ್ತಿ । ಅತಸ್ತೇನೈವ ರೂಪೇಣ ತನ್ನಿವೃತ್ತೇಃ ಪುರುಷಾರ್ಥತ್ವಂ ಯುಕ್ತಮ್ । ಅತಃ ಏವ 'ದುಃಖಂ ಮಾ ಭುಂಜೀಯ'*

ಇತಿ ಆಪಾಮರಂ ದೃಶ್ಯತೇ । ತಚ್ಚ ದುಃಖಭೋಗನಿವೃತ್ತೇಃ ಪುರುಷಾರ್ಥಃ । ದುಃಖನಿವೃತ್ತಿಸ್ತು ಕಂಟಕಾದಿ ನಿವೃತ್ತಿವತ್ ತಾದರ್ಥ್ಯೇನ ನ ಸ್ವತಃ ಪುರುಷಾರ್ಥಃ । ಕಿಂತು ತದ್ಭೋಗ ಏವ ಸ್ವತಃ ಪುರುಷಾರ್ಥತ್ವಂ ಯಾತೀತಿ ।

ಅನುವಾದ: ಇಲ್ಲಿ 'ದೃಷ್ಟಿ' ಶಬ್ದವು ಸಾಮಾನ್ಯ ತರ್ಕದಿಂದ ಸಾಮಾನ್ಯವಾದ ಬುದ್ಧಿವೃತ್ತಿಯನ್ನು ಸೂಚಿಸುತ್ತದೆ. 'ಪ್ರತಿಬಿಂಬ'ವೆಂದರೆ ಆಯಾ ಉಪಾಧಿಗಳಲ್ಲಿರುವಂತೆ ಪ್ರತಿಬಿಂಬದ ರೂಪದಲ್ಲಿ ಚಿತ್ತವು ರೂಪುಗೊಳ್ಳುವುದು. ಆದ್ದರಿಂದಲೇ ಪುರುಷನಲ್ಲಿ ಪ್ರತಿಬಿಂಬದ ರೂಪದಲ್ಲಿ ದುಃಖಕ್ಕೆ ಸಂಬಂಧಿಸಿರುವುದನ್ನು 'ಭೋಗ' ಎಂದು ಕರೆಯಲ್ಪಡುತ್ತದೆ. ಆದ್ದರಿಂದ ಅದೇ ರೂಪದಿಂದ ಅದನ್ನು ಹೋಗಲಾಡಿಸುವುದೇ ಪುರುಷಾರ್ಥವೆನ್ನುವುದು ಉಚಿತ. ಆದ್ದರಿಂದ 'ನಾನು ದುಃಖವನ್ನು ಭೋಗಿಸಲೊಲ್ಲೆ' ಎಂಬ ಪ್ರಾರ್ಥನೆ ಪಾಮರರೂ ಸಹ ಮಾಡುವುದನ್ನು ನೋಡಿದ್ದೇವೆ. ಅದೂ ಸಹ ದುಃಖವನ್ನು ಭೋಗಿಸುವುದರಿಂದ ನಿವೃತ್ತಿಯೆಂಬ ಪುರುಷಾರ್ಥತೆಯು ಬೇರೆಯದರ ಅಂಗವಾಗಿರುವುದೂ ಸಾಧ್ಯವಿಲ್ಲ. ಆದ್ದರಿಂದ (ದುಃಖನಿವೃತ್ತಿಯೆಂಬುದೇ) ಒಂದು ಪುರುಷಾರ್ಥವಾಗಿದೆ. ಮುಳ್ಳೇ ಮುಂತಾದುವನ್ನು ತೆಗೆದಂತೆ ದುಃಖನಿವೃತ್ತಿಯೂ (ದುಃಖಭೋಗ ನಿವೃತ್ತಿಯಂತೆ) ಪುರುಷಾರ್ಥವಲ್ಲ. ಹಾಗೆಯೇ ಸುಖವೂ ಪುರುಷಾರ್ಥವಲ್ಲ. ಆದರೆ ಅದರ ಅನುಭವವೇ ಪುರುಷಾರ್ಥ.

ಭಾಷ್ಯ: *ತದಿದಂ ದುಃಖಭೋಗನಿವೃತ್ತೇಃ ಪುರುಷಾರ್ಥತ್ವಂ ಯೋಗಭಾಷ್ಯೇ ವ್ಯಾಸದೇವೈರುಕ್ತಂ– 'ತಸ್ಮಿನ್ ಮುಕ್ತೇ ಪುರುಷಃ ಪುನರಿದಂ ತಾಪತ್ರಯಂ ನ ಭುಂಕ್ತೇ (ಯೋ.ಭಾ. ೩.೫೦)।' ಅತಃ ಶ್ರುತಾವಪಿ ದುಃಖನಿವೃತ್ತೇಃ ಪುರುಷಾರ್ಥತ್ವಂ ವಿಷಯತಾಸಂಬಂಧೇನ ಏವ ತದೇತದ್ಯೋಗವಾರ್ತಿಕೇ ಪ್ರಪಂಚಿತಂ ಅಸ್ಮಾಭಿರಿತಿ ದಿಕ್ ।*

ಅನುವಾದ: ಈ ದುಃಖಭೋಗ ನಿವೃತ್ತಿಯೆಂಬ ಪುರುಷಾರ್ಥತ್ವವನ್ನು ಯೋಗ ಭಾಷ್ಯದಲ್ಲಿ ವ್ಯಾಸದೇವರು ಹೀಗೆಂದಿರುವರು– 'ಅದು ಹೋಗಿರಲಾಗಿ ಪುರುಷನು ಮತ್ತೆ ಈ ತಾಪತ್ರಯವನ್ನು ಅನುಭವಿಸುವುದಿಲ್ಲ. ಆದ್ದರಿಂದ ಶ್ರುತಿಯಲ್ಲಿ ದುಃಖನಿವೃತ್ತಿಯ ಪುರುಷಾರ್ಥತ್ವವನ್ನು ಭೋಗದ ಅನುಭವದ ವಿಷಯದಲ್ಲಿಯೇ ತೆಗೆದುಕೊಳ್ಳಬೇಕು. ಈ ವಿಷಯವನ್ನು ನಾವು ಯೋಗವಾರ್ತಿಕದಲ್ಲಿ ಚರ್ಚಿಸಿ ನಿರೂಪಿಸಿದ್ದೇವೆ'.

ಭಾಷ್ಯ: *ತದೇವಮನೇನ ಸೂತ್ರೇಣ ಸಂಕ್ಷೇಪೇಣೋದ್ದಿಷ್ಟಮ್ ।*
ವಿಸ್ತರಸ್ತ್ವನಯೋಃ ಪಶ್ಚಾದ್ಭವಿತೇತಿ ।

ಅನುವಾದ: ಹೀಗೆ ಈ ಸೂತ್ರದಿಂದ (೧.೧) ಎರಡು ಭಾಗಗಳಲ್ಲಿ ಸಂಕ್ಷೇಪವಾಗಿ ಹೇಳಿದ್ದೇವೆ. ಇವುಗಳ ವಿವರ ಮುಂದೆ ನೀಡಲಾಗುವುದು.

ಭಾಷ್ಯ: *ಅತಃ ಪರಂ ವಕ್ಷ್ಯಮಾಣಸ್ಯ ಹಾನೋಪಾಯ ವ್ಯೂಹಸ್ಯ ಆಕಾಂಕ್ಷಾರ್ಥಂ ತದಿತರೇಷಾಂ ಹಾನೋಪಾಯತ್ವಂ ಪ್ರತ್ಯಾಚಷ್ಟೇ ಸೂತ್ರಜಾತೇನ ।*

ಅನುವಾದ: ಇನ್ನು ಮುಂದೆ ಹೇಳುವ ತ್ಯಜಿಸುವ ವಿಧಾನಗಳ ಸಮೂಹವನ್ನು ಪಡೆಯುವ ಆಕಾಂಕ್ಷೆಯಿಂದ ಇನ್ನಿತರ ತ್ಯಜಿಸುವ ವಿಧಾನಗಳನ್ನು ಕೆಲವು ಸೂತ್ರಗಳ ಸರಣಿಯಿಂದ ಖಂಡಿಸುತ್ತಾರೆ.

ಸೂತ್ರ: ನ ದೃಷ್ಟಾತ್ ತತ್ಸಿದ್ಧಿರ್ನಿವೃತ್ತೇಪ್ಯನುವೃತ್ತಿದರ್ಶನಾತ್ ॥ ೨ ॥

ಅನುವಾದ: ಕಂಡುಬರುವ (ಉಪಾಯಗಳಿಂದ) ಆ ಸಿದ್ಧಿಯು (ದುಃಖವು ಪೂರ್ಣವಾಗಿ ನಿವೃತ್ತಿ ಹೊಂದುವುದು) ಸಾಧ್ಯವಿಲ್ಲ. ಏಕೆಂದರೆ ಒಂದು ದುಃಖದಿಂದ (ನಿವೃತ್ತಿ ಪಡೆದರೂ) ಇನ್ನೊಂದು ದುಃಖವು ಸಿದ್ಧವಾಗಿರುತ್ತದೆ.

ಭಾಷ್ಯ: *ಲೌಕಿಕಾದುಪಾಯಾತ್ ಹಾನಾದೇರತ್ಯಂತದುಃಖ ನಿವೃತ್ತಿಸಿದ್ಧಿರ್ನಾಸ್ತಿ । ಕುತಃ ಧನಾದಿನಾ ದುಃಖೇ ನಿವೃತ್ತೇ ಪಶ್ಚಾದ್ಧನಾದಿಕ್ಷಯೇ ಪುನರಪಿ ಧನಾದಿಕ್ಷಯೇ ಪುನರಪಿ ದುಃಖಾನುವೃತ್ತಿ ದರ್ಶನಾದಿತ್ಯರ್ಥಃ । ತಥಾ ಚ ಶ್ರುತಿಃ 'ಅಮೃತತ್ವಸ್ಯ ತು ನಾಽಽಶಾಽಸ್ತಿ ವಿತ್ತೇನ (ಬೃ.ಉ. ೪.೫.೩)*

ಅನುವಾದ: ಹಣವೇ ಮುಂತಾದ ಉಪಾಯಗಳಿಂದ ದುಃಖವು ಸಂಪೂರ್ಣವಾಗಿ ನಿವೃತ್ತಿಯನ್ನು ಹೊಂದಲಾರದು. ಏಕೆಂದರೆ ಧನಾದಿಗಳಿಂದ ದುಃಖವು ನಿರ್ಮೂಲ ವಾದರೂ ಧನವು ಕ್ಷಯಿಸುವುದರಿಂದ ಮತ್ತೆ ದುಃಖವು ಕಾಣಿಸಿಕೊಳ್ಳುವುದು. ಶ್ರುತಿಯೂ ಕೂಡ ಹೀಗಿರುವುದು– 'ಹಣದಿಂದ ಅಮೃತತ್ವದ ಆಸೆಯನ್ನು ಪಡೆಯಲಾಗದು' ಮುಂತಾಗಿ

ಭಾಷ್ಯ: *ನನ್ವೇವಂ ಧನಾದ್ಯರ್ಜನಸ್ಯ ಕುಂಜರಶೌಚವತ್ ದುಃಖಾನಿವರ್ತ– ಕತ್ವೇ ಕಥಂ ತತ್ರ ಪ್ರವೃತ್ತಿಸ್ತತ್ರಾಹ ।*

ಅನುವಾದ: ಗಜಸ್ನಾನದಂತೆ ಧನಾದಿಗಳ ಸಂಪಾದನೆಯಿಂದ ದುಃಖದ ನಿವರ್ತನ ವಾಗದಿದ್ದರೆ ಹಣ ಸಂಪಾದನೆಯಲ್ಲಿ ಮನುಷ್ಯರು ಏಕೆ ತೊಡಗುವರು.

ಸೂತ್ರ: ಪ್ರಾತ್ಯಹಿಕಕ್ಷುತ್ ಪ್ರತೀಕಾರವತ್ ತತ್ ಪ್ರತೀಕಾರಚೇಷ್ಟನಾತ್ ಪುರುಷಾರ್ಥತ್ವಮ್ ॥ ೩ ॥

ಅನುವಾದ: ಪ್ರತಿದಿನ ಹಸಿವನ್ನು ಹೋಗಲಾಡಿಸುವಂತೆ ದುಃಖ ನಿವೃತ್ತಿಯೂ ಪುರುಷನ ಪುರುಷಾರ್ಥವು; ಏಕೆಂದರೆ ಇತರರೂ ತಮ್ಮ ದುಃಖವನ್ನು ಹೋಗಲಾಡಿಸಲು ಧನಾರ್ಜನೆ ಮುಂತಾದವುಗಳಲ್ಲಿ ತೊಡಗುವರು.

ಭಾಷ್ಯ: *ದೃಷ್ಟ ಸಾಧನಜನ್ಯಾಯಾಂ ದುಃಖನಿವೃತ್ತೌ ಅತ್ಯಂತಪುರುಷಾರ್ಥತ್ವಮೇವ ನಾಸ್ತಿ । ಯಥಾಕಥಂಚಿತ್ ಪುರುಷಾರ್ಥತ್ವಂ ತ್ವಸ್ತ್ಯೇವ । ಪ್ರಾತ್ಯಹಿಕಸ್ಯ ಕ್ಷುದ್ದುಃಖಸ್ಯ ನಿರಾಕರಣವದೇವ ತೇನ ಧನಾದಿನಾ ದುಃಖನಿರಾಕರಣಸ್ಯ ಚೇಷ್ಟನಾದನ್ವೇಷಣಾದಿತರ್ಥಃ । ಅತೋ ಧನಾದ್ಯರ್ಜನೇ ಪ್ರವೃತ್ತಿರುಪಪದ್ಯತ ಇತಿ ಭಾವಃ । ಕುಂಜರಶೌಚಾದಿಕಂ ಅಪಿ ಆಪಾದದುಃಖನಿವರ್ತಕಯಾ ಮಂದಪುರುಷಾರ್ಥೋ ಭವತ್ಯೇವ ಇತಿ ।*

ಅನುವಾದ: ಲೌಕಿಕ ಸಾಧನಗಳಿಂದ ಪಡೆಯುವ ದುಃಖನಿವೃತ್ತಿಯಲ್ಲಿ ಸಂಪೂರ್ಣ ಪುರುಷಾರ್ಥತೆಯೇ ಇಲ್ಲ– ಏಕೆಂದರೆ ಪ್ರತಿದಿನದ ಹಸಿವಿನ ನೋವು ಹೋಗಲಾಡಿಸುವಂತೆ ಹಣ ಮುಂತಾದವುಗಳಿಂದ ದುಃಖ ನಿವಾರಣೆಗೆ ಪ್ರಯತ್ನಗಳನ್ನು ಮಾಡುವುದು ಎಲ್ಲರಿಗೂ ತಿಳಿದದ್ದೆ. ಆದ್ದರಿಂದ ಹಣವೇ ಮುಂತಾದವುಗಳನ್ನು ಸಂಪಾದಿಸಲು ಪ್ರವೃತ್ತರಾಗುವುದೂ ಗೊತ್ತಿರುವ ವಿಷಯವೇ. ಆನೆಯ ಸ್ನಾನದಂತೆ ಆ ಸಮಯದಲ್ಲಿ ದುಃಖ ನಿವರ್ತಕವಾದರೂ ಇದು ಮಂದಪುರುಷಾರ್ಥವೇ.

ಭಾಷ್ಯ: *ಸ ಚ ದೃಷ್ಟಸಾಧನಜಃ ಮಂದಪುರುಷಾರ್ಥಃ ವಿಜ್ಞೈರ್ಹೇಯಃ ಇತ್ಯಾಹ–*

ಅನುವಾದ: ಈ ಲೌಕಿಕವಾದ ಸಾಧನಗಳಿಂದ ದೊರೆಯುವ ಮಂದಪುರುಷಾರ್ಥವನ್ನು ವಿದ್ವಾಂಸರು ತ್ಯಾಜ್ಯವೆಂದು ತಿಳಿಯಬೇಕು ಎಂದು (ಮುಂದಿನ ಸೂತ್ರದಲ್ಲಿ) ಹೇಳಿದೆ–

ಸೂತ್ರ: ಸರ್ವಾಸಂಭವಾತ್ ಸಂಭವೇಽಪಿ ಸತ್ತ್ವಾಸಂಭವಾತ್ ಹೇಯಃ ಪ್ರಮಾಣಕುಶಲ್ಯೈಃ ॥ ೪ ॥

ಅನುವಾದ: ಎಲ್ಲ ಕಾಲ ಮತ್ತು ಅವಸ್ಥೆಗಳಲ್ಲಿ ಸಂಭವಿಸದ, ಸಂಭವಿಸಿದರೂ ದುಃಖನಿವೃತ್ತಿಯಾಗದ ಕಾರಣ ಪ್ರಮಾಣಗಳಲ್ಲಿ ಕುಶಲರಾದ (ಮುಮುಕ್ಷು)ಗಳಿಂದ ತ್ಯಾಜ್ಯವಾದುದು.

ಭಾಷ್ಯ: *ಸ ಚ ದೃಷ್ಟಸಾಧನಜಃ ದುಃಖಪ್ರತೀಕಾರೋ ದುಃಖಾದುಃಖ–ವಿವೇಕಶಾಸ್ತ್ರಾಭಿಜ್ಞೈಃ ಹೇಯಃ ದುಃಖಪಕ್ಷೇ ನಿಕ್ಷೇಪಣೀಯಃ । ಕುತಃ? ಸರ್ವಾಸಂಭವಾತ್ ಸರ್ವದುಃಖೇಷು ದೃಷ್ಟಸಾಧನೈಃ ಪ್ರತೀಕಾರಾಸಂಭವಾತ್ ।*

ಅನುವಾದ: ಕಣ್ಣಿಗೆ ಕಾಣುವ (ಲೌಕಿಕ) ಸಾಧನಗಳಿಂದ ಉಂಟಾಗುವ ದುಃಖ – ಆ ದುಃಖಗಳ ನಿವೃತ್ತಿಯನ್ನು ವಿವೇಕವುಳ್ಳ, ಶಾಸ್ತ್ರಗಳನ್ನು ಚೆನ್ನಾಗಿ ಬಲ್ಲ ವಿದ್ವಾಂಸರು ತ್ಯಾಜ್ಯವಾದುದರ ಪಕ್ಷದಲ್ಲಿ ಇಟ್ಟರೆಂದುಕೊಳ್ಳೋಣ. ಏಕೆಂದರೆ ಎಲ್ಲಾ ದುಃಖಗಳ ಪ್ರತೀಕಾರವು ಕಣ್ಣಿಗೆ ಕಾಣುವ ಸಾಧನಗಳಿಂದ ಸಂಭವಿಸಲಾರದು.

ಭಾಷ್ಯ: *ಯತ್ರಾಪಿ ಸಂಭವಸ್ತತ್ರಾಪಿ ಪ್ರತಿಗ್ರಹಪಾಪಾದ್ಯುತ್ಥದುಃಖಾಽಽವಶ್ಯಕತ್ವಮಾಹ– ಸಂಭವೇಽಪೀತಿ । ಸಂಭವೇಽಪಿ ದೃಷ್ಟೋಪಾಯನಾಂತರೀಯಕಾದಿ ದುಃಖಸಂಪರ್ಕಾವಶ್ಯಂ ಭಾವಾತ್ ಇತ್ಯರ್ಥಃ । ತಥಾ ಚ ಯೋಗಸೂತ್ರಮ್– 'ಪರಿಣಾಮ ತಾಪ– ಸಂಸ್ಕಾರದುಃಖೈರ್ಗುಣವೃತ್ತಿವಿರೋಧಾಚ್ಚ ಸರ್ವಮೇವ ದುಃಖಂ ವಿವೇಕಿನಃ' ಇತಿ ।* *(ಯೋಗಸೂತ್ರ ೨–೧೫)*

ಅನುವಾದ: ಒಂದು ವೇಳೆ ಸಂಭವಿಸಿದರೂ ಪ್ರತಿಗ್ರಹ (ದಾನಸ್ವೀಕಾರ) ಮುಂತಾದ ಪಾಪಗಳಿಂದ ಉಂಟಾಗುವ ದುಃಖ ತಪ್ಪಿದ್ದಲ್ಲ. ಸಂಭವವಿದ್ದರೂ ಎಂದರೆ ಕಣ್ಣಿಗೆ ಕಾಣುವ ಉಪಾಯವಿರುವೆಡೆ ದುಃಖವದ ಸಂಪರ್ಕ ಅವಶ್ಯವಾಗಿ ಸಂಭವಿಸುವುದು. 'ಪರಿಣಾಮ ಮತ್ತು ಸಂತಾಪಗಳ ಸಂಸ್ಕಾರಗಳು (ಮನಸ್ಸಿನಲ್ಲಿ ನೆಲೆಯೂರಿ) ಅದರಿಂದ ಉಂಟಾಗುವ ದುಃಖಗಳಿಂದ ಸಂಭವಿಸುವ (ಸತ್ವ– ರಜಸ್–ತಮಸ್) ಗುಣಗಳ ಪರಸ್ಪರ ವಿರೋಧದಿಂದ ವಿವೇಕಿಗಳಾದವರಿಗೆ ಎಲ್ಲವೂ ದುಃಖವಾಗಿ ಕಾಣುತ್ತವೆ' (ಯೋಗಸೂತ್ರ ೨–೧೫) ಎಂದಿರುವುದು.

ಭಾಷ್ಯ: *ನನು ದೃಷ್ಟಸಾಧನಜನ್ಯೇ ಸರ್ವಸ್ಮಿನ್ನೇವ ದುಃಖಪ್ರತೀಕಾರೇ ದುಃಖಸಂಭೇದನಿಯಮೋಽಪ್ರಯೋಜಕಃ । ತಥಾ ಚ ಸ್ಮರ್ಯತೇ ।*

ಅನುವಾದ: ಕಣ್ಣಿಗೆ ಕಾಣುವ ಸಾಧನಗಳಿಂದ ಉಂಟಾಗುವ ಎಲ್ಲ ಬಗೆಯ ದುಃಖಪ್ರತೀಕಾರಗಳೂ ಇರಲಾಗಿ ದುಃಖವನ್ನು ಮಿಶ್ರಣ ಮಾಡಿಕೊಳ್ಳುವ ನಿಯಮವು ಅಪ್ರಯೋಜಕವಾದುದು. ಅದರ ಅಭಿಪ್ರಾಯ ಸ್ಮೃತಿಯಲ್ಲಿದೆ.

ಭಾಷ್ಯ: *ಯನ್ನ ದುಃಖೇನ ಸಂಭಿನ್ನಂ ಚ ಗ್ರಸ್ತಮವಂತರಮ್ ।*
ಅಭಿಲಾಷೋಪನೀತಂ ಚ ತತ್ ಸುಖಂ ಸ್ವಃ ಪದಾಸ್ಪದಮ್ ॥
(ಮ.ಭಾ. ನೀಲಕಂಠೀ ೧೧.೪)

ಅನುವಾದ: ಯಾವುದು ದುಃಖದೊಡನೆ ಮಿಶ್ರಗೊಳ್ಳದೊ ಅಥವಾ ದುಃಖದಿಂದ ಆವರಿಸಲ್ಪಡದೊ, ಬಯಸಿದಾಗ ಬಳಿಗೆ ಬರುವುದೋ ಆ ಸುಖವನ್ನು ಸ್ವರ್ಗವೆನ್ನುವರು.

ತತ್ರಾಹ–

ಸೂತ್ರ: ಉತ್ಕರ್ಷಾದಪಿ ಮೋಕ್ಷಸ್ಯ ಸರ್ವೋತ್ಕರ್ಷ ಶ್ರುತೇಃ ॥ ೫ ॥

ಮೋಕ್ಷದ ಉತ್ಕರ್ಷಕ್ಕಿಂತಲೂ ಅದರ ಉತ್ಕರ್ಷ ಇನ್ನೂ ಹೆಚ್ಚಿನದು. ವೇದವು ಅದರ ಉತ್ಕರ್ಷವನ್ನು ಎಲ್ಲಕ್ಕಿಂತ ಹೆಚ್ಚಿನದೆಂದು ಹೇಳಿದೆ.

ಭಾಷ್ಯ: *ದೃಷ್ಟಸಾಧನಾಽಸಾಧ್ಯಸ್ಯ ಮೋಕ್ಷಸ್ಯ ದೃಷ್ಟಸಾಧನ– ಸಾಧ್ಯರಾಜ್ಯಾದಿಭ್ಯ ಉತ್ಕರ್ಷಾತ್ ತೇಷು ದುಃಖಸತ್ತಾ ಅವಧಾರ್ಯತೇ । ಅಪಿಶಬ್ದಾತ್ ತ್ರಿಗುಣತ್ವಾದೇರಪಿ ।*

ಮೋಕ್ಷಸ್ಯ ಉತ್ಕರ್ಷೇ ಪ್ರಮಾಣಂ 'ಸರ್ವೋತ್ಕರ್ಷಶ್ರುತೇಃ' ಇತಿ । 'ನ ಹ ವ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋಃ ಅಪಹತಿರಸ್ತಿ, ಅಶರೀರಂ ವಾವ ಸಂತಂ ಪ್ರಿಯಾ ಪ್ರಿಯೇ ನ ಸ್ಪೃಶತ (ಛಾಯ ೮.೧೨.೧) ಇತ್ಯಾದಿನಾ ವಿದೇಹ ಕೈವಲ್ಯಸ್ಯ ಉತ್ಕರ್ಷ ಶ್ರುತೇರಿತ್ಯರ್ಥಃ ।

ಕಣ್ಣಿಗೆ ಗೋಚರವಾಗುವ ಸಾಧನಗಳಿಂದ ದೊರೆಯದ ಮೋಕ್ಷದ (ಉತ್ಕರ್ಷ), ಕಣ್ಣಿಗೆ ಕಾಣುವ ಸಾಧನಗಳಿಂದ ದೊರೆಯುವ ರಾಜ್ಯಾದಿಗಳ ಉತ್ಕರ್ಷಕ್ಕಿಂತ ಹೆಚ್ಚು. ಏಕೆಂದರೆ (ರಾಜ್ಯಾದಿಗಳಲ್ಲಿ) ದುಃಖದ ಸ್ಥಿತಿಯು ನಿಶ್ಚಿತವಾಗಿರುತ್ತದೆ. ಅವಿಶಬ್ದದಿಂದ (ರಾಜ್ಯಾದಿಗಳಲ್ಲಿ) ತ್ರಿಗುಣಗಳುಳ್ಳದ್ದು ಸೂಚಿತವಾಗಿದೆ. ಮೋಕ್ಷದ ಉತ್ಕರ್ಷಗಳಲ್ಲಿ ಪ್ರಮಾಣವು 'ನಿಜವಾಗಿಯೂ ಶರೀರವುಳ್ಳವರಿಗೆ ಪ್ರಿಯವಾದ ಅಪ್ರಿಯವಾದ ವಸ್ತುಗಳು ನಿರ್ಮೂಲವಾಗಲಾರವು. ಆದರೆ ಶರೀರವಿಲ್ಲದವನಿಗೆ ಅವು ಸ್ಪರ್ಶ ಮಾಡಲಾರವು' (ಛಾಂ.ಉ. ೮–೧೨–೧) ಇತ್ಯಾದಿಗಳಿಂದ ವಿದೇಹ ಕೈವಲ್ಯದ ಉತ್ಕರ್ಷ ಪ್ರತಿಪಾದಿಸಲ್ಪಟ್ಟಿದೆ.

ಭಾಷ್ಯ: *ನನು ಮಾ ಭವತು ದೃಷ್ಟಸಾಧನಾದತ್ಯಂತದುಃಖ ನಿವೃತ್ತಿಃ ಅದೃಷ್ಟಸಾಧನಾತ್ ತು ವೈದಿಕಕರ್ಮಣಃ ಸ್ಯಾತ್– 'ಅಪಾಮ ಸೋಮಮಮೃತಾ ಅಭೂಮಃ (ಋ.ವೇ. ೮.೪೮.೩) ಇತ್ಯಾದಿಶ್ರುತೇರಿತಿ, ತತ್ರಾಹ ।*

ಅನುವಾದ: ದೃಷ್ಟವಾದ ಸಾಧನದಿಂದ ಅತ್ಯಂತ ದುಃಖದ ನಿವೃತ್ತಿಯಾಗುವುದು. ಅದೃಷ್ಟ ಸಾಧನವಾದ ವೈದಿಕ ಕರ್ಮದಿಂದ ದುಃಖ ನಿವೃತ್ತಿಯಾಗುವುದು. ಅದಕ್ಕೆ ಆಧಾರವಾದ, 'ಸೋಮವನ್ನು ಸೇವಿಸಿದೆವು, ಅಮೃತರಾದೆವು' ಅದರ ಬಗ್ಗೆ ಹೇಳಿದೆ–

ಸೂತ್ರ: ಅವಿಶೇಷಶ್ಚೋಭಯೋಃ ॥ ೬ ॥

ಅನುವಾದ: ದುಃಖವನ್ನು ಸಂಪೂರ್ಣವಾಗಿ ಹೋಗಲಾಡಿಸಲು ಎರಡೂ ವಿಧಾನಗಳು ಒಂದೇ ರೀತಿ ಇವೆ.

ಭಾಷ್ಯ: *ಉಭಯೋರೇವ ದೃಷ್ಟಾದೃಷ್ಟಯೋಃ ಅತ್ಯಂತದುಃಖ–ನಿವೃತ್ತ್ಯಸಾಧಕತ್ತ್ವೇ ಯಥೋಕ್ತತದ್ಧೇತುತ್ವೇ ಚಾಽವಿಶೇಷ ಏವ ಮಂತವ್ಯ ಇತ್ಯರ್ಥಃ । ಏತದೇವ ಕಾರಿಕಾಯಾ ಮುಕ್ತಮ್ ।*

ಅನುವಾದ: ದುಃಖವನ್ನು ಸಂಪೂರ್ಣವಾಗಿ ನಿವೃತ್ತಿ ಮಾಡಲು (ದೃಷ್ಟಾಽದೃಷ್ಟ) ಲೌಕಿಕವಾದ ಮತ್ತು ವೈದಿಕ ಸಾಧನಗಳು ಸಮರ್ಥವಲ್ಲ. ಅದಕ್ಕೆ ಕಾರಣಗಳೂ ಸಮಾನವಾಗಿವೆ. ಅದನ್ನೇ ಕಾರಿಕೆಯಲ್ಲಿ ಹೇಳಿದೆ.

ವಿವರಣೆ: ಸಾಧನಗಳಲ್ಲದೆ ಅವುಗಳಿಗಿರುವ ಕಾರಣಗಳು ಶಾಶ್ವತ ನಿವೃತ್ತಿಯನ್ನುಂಟು ಮಾಡುವುದರಲ್ಲಿ ಅಸಮರ್ಥವಾಗಿವೆ. ಇದನ್ನೇ ಕಾರಿಕೆಯಲ್ಲಿ ಹೀಗೆ ಹೇಳಿದೆ–

ಭಾಷ್ಯ: *ದೃಷ್ಟವದಾನುಶ್ರವಿಕಃ ಸ ಹ್ಯವಿಶುದ್ಧಿಕ್ಷಯಾತಿಶಯ ಯುಕ್ತಃ । (ಸಾಂ.ಕಾ. ೭)*

ಅನುವಾದ: ಅಶುದ್ಧಿ, ಹಾಳಾಗುವುದು ಮತ್ತು ಹೆಚ್ಚಾಗುವುದು ಮುಂತಾದವುಗಳೊಡನೆ ಕೂಡಿ ಲೌಕಿಕ (ದೃಷ್ಟ) ಸಾಧನಗಳಂತೆ ವೈದಿಕ ಸಾಧನಗಳೂ ಇರುತ್ತವೆ.

ಭಾಷ್ಯ: *ಗುರೋರನುಶ್ರೂಯತ ಇತ್ಯನುಶ್ರಯೋ ವೇದಃ । ತದ್ವಿಹಿತ–ಯಾಗಾದಿಃ ಅನುಶ್ರವಿಕಃ । ಸ ದೃಷ್ಟೋಪಾಯವದೇವ ಅಶುದ್ಧ್ಯಾ ಹಿಂಸಾದಿ ಪಾಪೇನ ವಿನಾಶಿಸಾತಿಶಯ ಫಲಕತ್ವೇನ ಚ ಯುಕ್ತ ಇತ್ಯರ್ಥಃ ।*

ಅನುವಾದ: ವೇದವನ್ನು 'ಅನುಶ್ರಯ' ಎಂದು ಹೇಳಲು ಕಾರಣ ಗುರುಮುಖೇನ ಹೇಳುವುದರಿಂದ. ವೇದಗಳಲ್ಲಿ ವಿಧಿಸಿರುವಂತೆ ಆಚರಿಸುವುದರಿಂದ ಯಾಗಾದಿಗಳನ್ನು 'ಆನುಶ್ರವಿಕ' ಎನ್ನುತ್ತಾರೆ. ಅದೂ ಸಹ ಕಣ್ಣಿಗೆ ಕಾಣುವ ಸಾಧನಗಳಂತೆ ಹಿಂಸೆಯೇ ಮೊದಲಾದ ಪಾಪಗಳಿಂದ (ಅಶುದ್ಧಿಯ ಕಾರಣ) ವಿನಾಶಕರ ಮತ್ತು ಅಗತ್ಯ ಮೀರಿ ಫಲ ಕೊಡುವುದು.

ಭಾಷ್ಯ: *ನನು ವೈಧಹಿಂಸಾಯಾಃ ಪಾಪಜನಕತ್ವೇ ಬಲವದನಿಷ್ಟಾನನುಬಂಧೀಷ್ಟಸಾಧನತ್ವರೂಪಸ್ಯ ವಿಧ್ಯರ್ಥಸ್ಯಾನುಪಪತ್ತೇಃ ।*

ಅನುವಾದ: ವಿಧಿಪೂರ್ವಕವಾದ ಹಿಂಸೆಯು ಪಾಪವನ್ನುಂಟು ಮಾಡಿದರೆ ಪ್ರಬಲವಾದ ಅನಿಷ್ಟಕ್ಕೆ ಸಂಬಂಧವಿಲ್ಲದ ಇಷ್ಟಸಾಧನತ್ವ ರೂಪದ ವಿಧಿಗೆ ಅಡ್ಡಿಯಾಗುವುದಲ್ಲವೆ?

ವಿವರಣೆ: ವಿಧಿಗನುಸಾರವಾಗಿ ಪಶುಹಿಂಸೆ ಮಾಡಿದರೂ ಅದರಿಂದ ಪ್ರಬಲವಾದ ಅನಿಷ್ಟವೇನೂ ಆಗದು. ಅಲ್ಲದೆ ವಿಧ್ಯುಕ್ತವಾದುದನ್ನು ಪಶುಹಿಂಸೆಯು ಪಾಪವೆಂದು ಭಾವಿಸಿದರೆ ಇಷ್ಟಸಾಧನ ರೂಪವಾದ ವಿಧಿಯ ಉದ್ದೇಶವು ಫಲಕಾರಿಯಾಗದೆ ಇರಬಹುದು.

ಭಾಷ್ಯ: *ಇತಿ ಚೇತ್ ನ– ವೈಧಹಿಂಸಾಜನ್ಯಾನಿಷ್ಟಸ್ಯ ಇಷ್ಟೋತ್ಪತ್ತಿನಾಅಂತರೀಯತತ್ವೇನ ಇಷ್ಟೋತ್ಪತ್ತಿನಾಂತರೀಯಕ ದುಃಖಾ–ಧಿಕದುಃಖಾಽರಾಜನಕರೂಪಸ್ಯ ಬಲವದನಿಷ್ಟಾನನುಬಂಧಿತ್ವಸ್ಯ ವಿಧ್ಯಂಶಸ್ಯಾಕ್ಷತೇಃ ।*

ಅನುವಾದ: (ನೀನು ಹೇಳಿದ ಸಂದೇಹ) ಸರಿಯಲ್ಲ. ವಿಧಿಪೂರ್ವಕವಾಗಿ ಮಾಡಬೇಕಾದ ಯುಕ್ತಿಯೂ ಸಮಂಜಸವೇ. ಆದ್ದರಿಂದ ಇಲ್ಲಿ ಸಂದೇಹಕ್ಕೆಡೆಯಿಲ್ಲ. ವಿಧಿಪೂರ್ವಕವಾಗಿ ಮಾಡಿದ ಹಿಂಸೆಯು ಅನಿಷ್ಟವಾದರೂ ಇಷ್ಟೋತ್ಪತ್ತಿಯನ್ನು ಒಳಗೊಂಡಿರುವುದರಿಂದ ಇಷ್ಟೋತ್ಪತ್ತಿಗಾಗಿ ಅಗತ್ಯಕ್ಕಿಂತ ಹೆಚ್ಚಾಗಿ ದುಃಖವನ್ನುಂಟು ಮಾಡದೆ ಇರಬೇಕು. ಬಲವಾದ ಅನಿಷ್ಟದೊಡನೆ ಸಂಬಂಧವಿಲ್ಲದ ವಿಧಿಯ ಅಂಶ ರಕ್ಷಿತವಾಗಿರುವುದು.

ವಿವರಣೆ: ವಿಧಿಯು ಪ್ರಬಲವಾದ ಅನಿಷ್ಟವನ್ನು ಬೋಧಿಸುವುದಿಲ್ಲ– ಆದರೆ ಅದು ಹೇಳಿದಂತೆ, ಹೆಚ್ಚು ಕಡಿಮೆ ಮಾಡದಂತೆ, ವಿಧಿಯ ಸ್ವರೂಪವನ್ನು ಸಂರಕ್ಷಿಸಬೇಕು.

ಭಾಷ್ಯ: *ಯತ್ತು ವೈಧಹಿಂಸಾತಿರಿಕ್ತ ಹಿಂಸಾಯಾ ಏವ ಪಾಪಜನಕತ್ವಮಿತಿ । ತದಸತ್ । ಸಂಕೋಚೇ ಪ್ರಮಾಣಾಭಾವಾತ್ । ಯುಧಿಷ್ಠಿರಾದೀನಾಂ ಸ್ವಧರ್ಮೇಽಪಿ ಯುದ್ಧಾದೌ ಜ್ಞಾತಿವಧಾದಿಪ್ರತ್ಯವಾಯ ಪರಿಹಾರಾಯ ಪ್ರಾಯಶ್ಚಿತ್ತಶ್ರವಣಾಚ್ಚ ।*

ಅನುವಾದ: ವಿಧ್ಯುಕ್ತವಾದ ಹಿಂಸೆಯನ್ನು ಮೀರಿ ಮಾಡಿದ ಹಿಂಸೆಯು ಪಾಪವನ್ನುಂಟು ಮಾಡುತ್ತದೆ ಎಂಬುದು ಸರಿಯಲ್ಲ. ಏಕೆಂದರೆ ಹಾಗೆ ಅಷ್ಟಕ್ಕೇ ನಿಲ್ಲಿಸುವುದಕ್ಕೆ ಪ್ರಮಾಣವಿಲ್ಲ. ಯುಧಿಷ್ಠಿರಾದಿಗಳು ಸ್ವಧರ್ಮವಾದರೂ ಯುದ್ಧಾದಿಗಳಲ್ಲಿ ಜ್ಞಾತಿಗಳನ್ನು ವಧೆ ಮಾಡಿದ ಪಾಪದ ಪರಿಹಾರಾರ್ಥವಾಗಿ ಪ್ರಾಯಶ್ಚಿತ್ತವನ್ನು ಮಾಡಿದ್ದನ್ನು ಕೇಳಿದ್ದೇವೆ.

ಭಾಷ್ಯ: *ತಸ್ಮಾದ್ಯಾಸ್ಯಾಮ್ಯಹಂ ತಾತ ದೃಷ್ಟ್ವೇಮಂ ದುಃಖಸನ್ನಿಧಿಮ್ ।*
ತ್ರಯೀಧರ್ಮಮಧರ್ಮಾಢ್ಯಂ ಕಿಂಪಾಕಫಲ ಸನ್ನಿಭಮ್ ॥
(ಮಾರ್ಕ ಪು. ೧೦.೩೧)

ಇತಿ ಮಾರ್ಕಂಡೇಯ ವಚನಾಚ್ಚ ।

ಅನುವಾದ: 'ಇದು ದುಃಖಕ್ಕೆ ಸಮೀಪ ಎಂಬುದನ್ನು ಕಂಡು, ಎಲೈ ಮಗನೆ, ನಾನು ಇಲ್ಲಿಂದ ಹೊರಟು ಹೋಗುವೆ. ವೈಧಿಕ ಧರ್ಮಗಳು ಅರಗಿಸಿಕೊಳ್ಳಲಾಗದ ಹಣ್ಣಿನಂತೆ ಅಧರ್ಮದಿಂದ ತುಂಬಿವೆ' ಎಂದು ಮಾರ್ಕಂಡೇಯ ಪುರಾಣದಲ್ಲಿ ಹೇಳಿರುವಂತೆ–

ಭಾಷ್ಯ: *'ಅಹಿಂಸನ್ ಸರ್ವಭೂತಾನಿ ಅನ್ಯತ್ರ ತೀರ್ಥೇಭ್ಯಃ' (ಛಾಂ.ಉ. ೮.೧೫.೧) ಇತಿ ಶ್ರುತಿಸ್ತು ವೈಧಾತಿರಿಕ್ತ ಹಿಂಸಾನಿವೃತ್ತೇಃ ಇಷ್ಟಸಾಧನತ್ವಮೇವ ವಕ್ತಿ, ನ ತು ವೈಧಹಿಂಸಾಯಾ ಅನಿಷ್ಟಸಾಧನತ್ವಾಭಾವಮಪಿ ಇತ್ಯಾದಿಕಂ ಯೋಗವಾರ್ತಿಕೇ (೨–೩೪) ದ್ರಷ್ಟವ್ಯಮಿತಿ ದಿಕ್ ।*

ಅನುವಾದ: 'ತೀರ್ಥಸ್ಥಳಗಳನ್ನು (ಪವಿತ್ರವಾದ ಯಜ್ಞಭೂಮಿಯನ್ನು) ಹೊರತಾಗಿ ಬೇರೆ ಎಡೆ ಯಾವ ಪ್ರಾಣಿಯನ್ನೂ ಹಿಂಸೆ ಮಾಡದೆ ಇದ್ದು' ಎಂಬ ಶ್ರುತಿ ವಾಕ್ಯವಾದರೋ ವಿಧಿಪೂರ್ವಕವಾಗಿ ಮಾಡುವ ಹಿಂಸೆಯನ್ನು ಬಿಟ್ಟು ಹಿಂಸೆಯಿಲ್ಲದೆ ಇಷ್ಟಸಾಧನದ ಪ್ರತಿಪಾದನೆಯನ್ನು ಮಾಡುತ್ತದೆ. ವಿಧಿಪೂರ್ವಕವಾದ ಹಿಂಸೆಯಲ್ಲಿ ಅನಿಷ್ಟವನ್ನು ಹೋಗಲಾಡಿಸುವುದರ ಅಭಾವವನ್ನೂ ಹೇಳಿಲ್ಲ. ಇದಕ್ಕೆ ಸಂಬಂಧಿಸಿದಂತೆ ಯೋಗವಾರ್ತಿಕದಲ್ಲಿ (೨–೩೪) ನೋಡಬೇಕಾಗಿದೆ.

ಭಾಷ್ಯ: *'ನ ಕರ್ಮಣಾ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ । (ತೈ. ಆ. ೧೦/೧೦) ಇತಿ 'ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯನಾಯ' (ಶ್ವೇ.ಉ. ೩.೮, ಯಜು ೩೧–೧೮) ಇತ್ಯಾದಿ ಶ್ರುತಿವಿರೋಧೇನ ತು ಸೋಮಪಾನಾದಿಭಿರಮೃತತ್ವಂ ಗೌಣಮೇವ ಮಂತವ್ಯಮ್ ।*

'ಅಭೂತಸಂಪ್ಲವಂ ಸ್ಥಾನಂ ಅಮೃತತ್ವಂ ಹಿ ಭಾಷ್ಯತೇ (೩.೮.೯೦)' ಇತಿ ವಿಷ್ಣುಪುರಾಣಮ್ ।

ಅನುವಾದ: 'ಕೆಲವರು ಕರ್ಮದಿಂದಾಗಲಿ, ಸಂತತಿಯಿಂದಾಗಲಿ, ಹಣದಿಂದಾಗಲಿ ಪಡೆಯದ ಅಮೃತತ್ವವನ್ನು ತ್ಯಾಗದಿಂದ ಪಡೆದರು'. 'ಅವನನ್ನು ಅರಿತೇ ಮೃತ್ಯುವನ್ನು ದಾಟಿ (ಅಮೃತತ್ವವನ್ನು) ಪಡೆದಾನು. (ಅಮೃತತ್ವದೆಡೆಗೆ) ಹೋಗಲು ಬೇರೆ ದಾರಿಯಿಲ್ಲ'. ಇಂತಹ ಶ್ರುತಿಗಳಿಗೆ ವಿರುದ್ಧವಾದ ವಾಕ್ಯಗಳಾದ 'ಸೋಮಪಾನ ಮುಂತಾದುವುಗಳಿಂದ ಅಮೃತತ್ವವನ್ನು ಪಡೆಯುವರು ಎಂಬುದು ಗೌಣವೆಂದು ತಿಳಿಯಬೇಕು'. 'ಪ್ರಳಯವಾಗುವವರೆಗೆ ಇರುವ ಸ್ಥಿತಿಯು ಅಮೃತತ್ವವೆಂದು ಹೇಳಲ್ಪಡುತ್ತದೆ' ಎಂದು ವಿಷ್ಣುಪುರಾಣದಲ್ಲಿ ಉಕ್ತವಾಗಿರುವುದರಿಂದ.

ವಿವರಣೆ: ಅಮೃತತ್ವ ನಿತ್ಯವೆನಿಸಿಕೊಳ್ಳಬೇಕಾದರೆ ವಿಧಿನಿಯಮದಂತೆ ಸೋಮಪಾನ ಮಾಡುವುದಷ್ಟೇ ಅಲ್ಲ. ಅದಕ್ಕೆ ವಿವೇಕ ಜ್ಞಾನವೊಂದೇ ಮಾರ್ಗ ಎಂದು ಅಭಿಪ್ರಾಯ.

ಭಾಷ್ಯ: *ತದೇವಂ ದೃಷ್ಟಾದೃಷ್ಟೋಪಾಯಯೋಃ ಸಾಕ್ಷಾತ್ಪರಮ–ಪುರುಷಾರ್ಥಾऽಸಾಧನತ್ವೇ ಸಾಧಿತೇ ತದುಪಾಯಕಾಂಕ್ಷಾಯಾಂ ವಿವೇಕ ಜ್ಞಾನಮುಪಾಯೋ ವಕ್ತವ್ಯಃ । ತತ್ರ ವಿವೇಕಜ್ಞಾನಂ ಅವಿವೇಕಾಖ್ಯದುಃಖಹೇತೂಚ್ಛೇದದ್ವಾರೈವ ಹಾನೋಪಾಯ ಇತ್ಯಾಶಯೇನ ಆದಾವಪಿ ವಿವೇಕಮೇವ ಇತರಪ್ರತಿಷೇಧೇನ ಹೇಯ ಹೇತುತಯಾ ಪರಿಶೇಷಯತಿ ಪ್ರಘಟ್ಟಕೇನ ।*

ಅನುವಾದ: ಹೀಗೆ ದೃಷ್ಟವಾದ ಮತ್ತು ಅದೃಷ್ಟವಾದ ಸಾಧನೆಗಳಿಂದ ಸಾಕ್ಷಾತ್ ಪರಮ ಪುರುಷಾರ್ಥವನ್ನು ಗಳಿಸುವುದು ಸಾಧ್ಯವಿಲ್ಲ. ಹೀಗಿರುವಾಗ ಆ ಪರಮಪುರುಷಾರ್ಥ ವನ್ನು ಸಾಧಿಸುವುದು ಹೇಗೆ ಎಂಬ ಜಿಜ್ಞಾಸೆಯುಂಟಾಗುವುದು; ಅದಕ್ಕೆ ವಿವೇಕಜ್ಞಾನವು ಅವಿವೇಕವೆಂದು ಕರೆಯಲ್ಪಡುವ ದುಃಖದ ಕಾರಣವನ್ನು ನಿರ್ಮೂಲ ಮಾಡುವುದ ರಿಂದಲೇ ದುಃಖನಿವೃತ್ತಿಯಾಗುವ ಉಪಾಯ ಎಂಬ ಆಶಯದಿಂದ ಪ್ರಾರಂಭದಲ್ಲಿಯೇ ವಿವೇಕವೇ ಇತರ ಉಪಾಯಗಳನ್ನು ಒತ್ತಿಗಿಟ್ಟು ದುಃಖನಿವೃತ್ತಿಗೆ ಅನುಸರಿಸಬೇಕಾದ ಉಪಾಯ ಎಂದು ಉಪದೇಶವನ್ನು ಅಂತಿಮವಾಗಿ ತಿಳಿಸಿದ್ದಾರೆ–

ಸೂತ್ರ: ನ ಸ್ವಭಾವತೋ ಬದ್ಧಸ್ಯ ಮೋಕ್ಷಸಾಧನೋಪದೇಶವಿಧಿಃ ॥೭॥

ಅನುವಾದ: ಸ್ವಭಾವದಿಂದಲೇ ಬದ್ಧನಾದವನಿಗೆ ಮೋಕ್ಷಕ್ಕೆ ಸಾಧನವಾದ ಉಪದೇಶದ ವಿಧಾನವು ಸಲ್ಲದು.

ಭಾಷ್ಯ: *ದುಃಖಾತ್ಯಂತನಿವೃತ್ತೇಃ ಮೋಕ್ಷತ್ವಸ್ಯ ಉಕ್ತತಯಾ ಬಂಧೋऽತ್ರ ದುಃಖಯೋಗ ಏವ । ತಸ್ಯ ಬಂಧಸ್ಯ ಪುರುಷೇ ನ ಸ್ವಾಭಾವಿಕತ್ವಂ ವಕ್ಷ್ಯಮಾಣಲಕ್ಷಣಮಸ್ತಿ ಯತೋ ನ ಸ್ವಭಾವತೋ ಬದ್ಧಸ್ಯ ಮೋಕ್ಷಾಯ ಸಾಧನೋಪದೇಶಸ್ಯ–*

ಶ್ರೌತಸ್ಯ ವಿಧೇರನುಷ್ಠಾನಂ ನಿಯೋಜ್ಯಾನಾಂ ಘಟತೇ ।
ನ ಹ್ಯಗ್ನೇಃ ಸ್ವಾಭಾವಿಕಾದೌಷ್ಣ್ಯಾತ್ ಮೋಕ್ಷಃ ಸಂಭವತಿ
ಸ್ವಾಭಾವಿಕಸ್ಯ ಯಾವದ್ ದ್ರವ್ಯಭಾವಿತ್ವಾತ್ ಇತ್ಯರ್ಥಃ ।
ತದುಕ್ತಮೀಶ್ವರಗೀತಾಯಾಂ–

ಅನುವಾದ: ದುಃಖವನ್ನು ಸಂಪೂರ್ಣವಾಗಿ ಹೋಗಲಾಡಿಸುವುದೇ ಮೋಕ್ಷವೆಂದು ಹೇಳಿರುವುದರಿಂದ ಇಲ್ಲಿ ಬಂಧ ಎಂದರೆ ದುಃಖದೊಡನಿರುವುದೇ. ಆ ವಿಷಯದಲ್ಲಿ ಬಂಧವು ಪುರುಷನಿಗೆ ಸ್ವಾಭಾವಿಕವಾದುದು ಮತ್ತು ಅದರ ಲಕ್ಷಣ ಮುಂದೆ ಹೇಳಲಾಗುತ್ತದೆ. ಸ್ವಭಾವತಃ ಬಂಧಕ್ಕೆ ಕಟ್ಟುಬಿದ್ದ ಪುರುಷನ ಮೋಕ್ಷಕ್ಕಾಗಿ ಶ್ರುತಿಯ ಮುಖಾಂತರ ತಿಳಿಸುವ ಸಾಧನದ ಉಪದೇಶವನ್ನು ಆಚರಿಸುವುದು ಸಾಧ್ಯವಾಗಲಾರದು. ಅಗ್ನಿಗೆ ಸ್ವಾಭಾವಿಕವಾದ ಉಷ್ಣತೆಯನ್ನು ಅದರಿಂದ ಬೇರೆ ಮಾಡುವುದು ಸಾಧ್ಯವಿಲ್ಲ. ಏಕೆಂದರೆ ದ್ರವ್ಯವಿರುವವರೆಗೆ ಅದರ ಗುಣ ಅದರಿಂದ ಬೇರೆಯಾಗಲಾರದು. ಈ ವಿಷಯವನ್ನು ಈಶ್ವರಗೀತೆಯಲ್ಲಿ ಹೇಳಲಾಗಿದೆ.

'ಯದ್ಯಾತ್ಮಾ ಮಲಿನೋಽಸ್ವಚ್ಛೋ ವಿಕಾರೀ ಸ್ಯಾತ್ ಸ್ವಭಾವತಃ ।
ನ ಹಿ ತಸ್ಯ ಭವೇನ್ಮುಕ್ತಿರ್ಜನ್ಮಾಂತರಶತೈರಪಿ ॥
(ಕೂ.ಪು. ೨.೨.೧೨–೧೩) ಇತಿ

ಅನುವಾದ: ಒಂದು ವೇಳೆ ಆತ್ಮವೇ (ಪುರುಷ) ಮಲಿನವೂ ಅಸ್ವಚ್ಛವೂ, ವಿಕಾರಿಯೂ ಆಗಿದ್ದರೆ ನೂರಾರು ಜನ್ಮಗಳನ್ನೆತ್ತಿದರೂ ಅದಕ್ಕೆ ಮುಕ್ತಿ ದೊರೆಯದು.

ವಿವರಣೆ: ವಿಕಾರಿ ಎಂದರೆ ಬದಲಾಗುತ್ತಿರುವುದು.

ಭಾಷ್ಯ: *ಯಸ್ಮಿನ್ ಸತಿ ಕಾರಣವಿಲಂಬಾತ್ ವಿಲಂಬಃ ಯಸ್ಯ ಉತ್ಪತ್ತೌ*
ನ ಭವತಿ ತಸ್ಯ ತತ್ ಸ್ವಾಭಾವಿಕಮ್, ಇತಿ ಸ್ವಾಭಾವಿಕತ್ವ ಲಕ್ಷಣಮ್ ।

ಅನುವಾದ: ಸ್ವಾಭಾವಿಕತೆಯ ಲಕ್ಷಣವೆಂದರೆ ಯಾವುದು ಇರುವಾಗ ಕಾರಣದ ವಿಲಂಬದಿಂದ ಅದರ ಉತ್ಪತ್ತಿಗೆ ವಿಲಂಬವಾಗುವುದಿಲ್ಲವೋ ಅದನ್ನು ಆ ವಸ್ತುವಿನ ಸ್ವಾಭಾವಿಕ ಲಕ್ಷಣವೆನ್ನುವರು.

ಭಾಷ್ಯ: *ನನು ಸರ್ವೋಪಲಂಭಾಪತ್ತೇಃ ದುಃಖಸ್ಯ ಸ್ವಾಭಾವಿಕತ್ವಶಂಕಾ ಏವ ನಾಸ್ತಿ ।*

ಅನುವಾದ: ದುಃಖವು ಯಾವಾಗಲೂ ಇರುವುದರಿಂದ ಅದರ ಸ್ವಾಭಾವಿಕತೆಯ ಬಗ್ಗೆ ಶಂಕೆಯೇ ಬೇಕಿಲ್ಲ.

ಭಾಷ್ಯ: *ಇತಿ ಚೇತ್ ನ । ತ್ರಿಗುಣಾತ್ಮಕತ್ವೇನ ಚಿತ್ತಸ್ಯ ದುಃಖ ಸ್ವಭಾವತ್ವೇಽಪಿ*
ಸತ್ತ್ವಾಧಿಕ್ಯೇನ ಅಭಿಭವಾತ್ ಸದಾ ದುಃಖಾನುಪಲಬ್ಧಿವತ್ ಆತ್ಮನೋ
ಅಪಿ ತದನುಪಲಬ್ಧಿಸಂಭವಾತ್ । ದುಃಖಸ್ವಾಭಾವಿಕತ್ವವಾದಿಭಿಃ
ಬೌದ್ಧೈಃ ಚಿತ್ತಸ್ಯೈವಾತ್ಮತಾಽಭ್ಯುಗಮಾಚ್ಚ । ಅಥೈವಂ ಆತ್ಮನಾಶಾದೇವ

ಮೋಕ್ಷೋಽಸ್ತ್ವಿತಿ ಚೇತ್, ನ ಅಹಂ ಬದ್ಧೋ ವಿಮುಕ್ತಃ ಸ್ಯಾಮಿತಿ ಬಂಧಸಾಮಾನಾಧಿಕರಣ್ಯೇನೈವ ಮೋಕ್ಷಸ್ಯ ಪುರುಷಾರ್ಥತ್ವಾದಿತಿ।

ಅನುವಾದ: ಹಾಗಲ್ಲ. ಚಿತ್ತವು ತ್ರಿಗುಣಾತ್ಮಕವಾದ್ದರಿಂದ ದುಃಖವು ಸ್ವಾಭಾವಿಕವಾದರೂ ಸತ್ತ್ವವು ಹೆಚ್ಚಾದ ಕಾರಣ ದುಃಖವು ಕುಗ್ಗಿ ಯಾವಾಗಲೂ ದುಃಖವು ಇರದಂತೆ ಆಗುವುದು. ಆದ್ದರಿಂದ ಆತ್ಮನಲ್ಲಿಯೂ ದುಃಖವು ಇರದಂತೆ ಆಗುವುದು ಸಂಭವಿಸುವುದು. ಬೌದ್ಧರಾದರೋ ದುಃಖ ಸ್ವಾಭಾವಿಕವೆಂದು ವಾದಿಸಿ ಚಿತ್ತವನ್ನೇ ಆತ್ಮವೆಂದು ಭಾವಿಸುವರು. ಹೀಗೆ ಆತ್ಮದ ನಾಶವೇ ಮೋಕ್ಷವೆನಿಸಿದಲ್ಲಿ ಆ ವಾದವೂ ತಪ್ಪಾಗುವುದು. ಏಕೆಂದರೆ, 'ಬದ್ಧನಾದ ನಾನು ಬಿಡುಗಡೆ ಪಡೆದೇನು' ಎಂಬ ಸಾಮಾನಾಧಿಕರಣ್ಯದಿಂದಲೇ ಮೋಕ್ಷದ ಪುರುಷಾರ್ಥ ಉಳಿಯುವುದು.

ವಿವರಣೆ: ಇಲ್ಲಿ ಸಾಮಾನಾಧಿಕರಣ್ಯವೆಂದರೆ 'ಬಂಧನವನ್ನೂ ಮೋಕ್ಷವನ್ನೂ ಒಂದೇ ಆಶ್ರಯದಲ್ಲಿ ಕಾಣುವುದು'. 'ಬದ್ಧನಾಗಿದ್ದೇನೆ, ಇದರಿಂದ ಬಿಡುಗಡೆ ಪಡೆಯಬೇಕು' ಎಂದು ಆತ್ಮನ ಕಾತರ. ಆದ್ದರಿಂದ ಮೋಕ್ಷ ಪುರುಷಾರ್ಥವೆನಿಸುವುದು.

ಭಾಷ್ಯ: *ಭವತ್ವನನುಷ್ಠಾನಂ, ತೇನ ಕಿಮಿತ್ಯತ ಆಹ–*

ಅನುವಾದ: (ಶ್ರುತಿ ಹೇಳಿದ) ಸಾಧನಗಳನ್ನು ಮಾಡದಿದ್ದರೆ ಏನಾದೀತು? ಹೇಳಿದೆ.

ಸೂತ್ರ: ಸ್ವಭಾವಸ್ಯ ಅನಪಾಯಿತ್ವಾತ್ ಅನನುಷ್ಠಾನಲಕ್ಷಣಮಪ್ರಾಮಾಣ್ಯಮ್ ॥ ೯ ॥

ಅನುವಾದ: ಸ್ವಭಾವವನ್ನು ನಾಶಮಾಡುವುದು ಸಾಧ್ಯವಿಲ್ಲದಿರುವಾಗ ಅನುಷ್ಠಾನವನ್ನು ಮಾಡದಿರುವುದು ಅಪ್ರಾಮಾಣ್ಯವೆನಿಸುವುದು.

ಭಾಷ್ಯ: *ಸ್ವಭಾವಸ್ಯ ಯಾವದ್ದ್ರವ್ಯಭಾವಿತ್ವಾತ್ ಮೋಕ್ಷಾಸಂಭವೇನ ತತ್ಸಾಧನೋಪದೇಶಶ್ರುತೇಃ ಅನನುಷ್ಠಾನಲಕ್ಷಣಂ ಅಪ್ರಾಮಾಣ್ಯಂ ಸ್ಯಾದಿತ್ಯರ್ಥಃ ।*

ಅನುವಾದ: ಸ್ವಭಾವವು ದ್ರವ್ಯವಿರುವವರೆಗೆ ಇರುವ ಕಾರಣ ಅದರ ಮೋಕ್ಷವಾಗುವುದು ಸಾಧ್ಯವಿಲ್ಲ. ಆದ್ದರಿಂದ ಅದನ್ನು ಸಾಧಿಸಬೇಕಾದ ಮಾರ್ಗವನ್ನು ಬೋಧಿಸುವ ಶ್ರುತಿಯೂ ಸಹ ಅನುಷ್ಠಾನದ ಅಗತ್ಯವಿಲ್ಲದೆ ಅಪ್ರಾಮಾಣ್ಯವಾಗಿ ಬಿಡುವುದು.

ಭಾಷ್ಯ: *ನನು ಶ್ರುತಿಬಲಾದೇವಾನುಷ್ಠಾನಮ್ ಸ್ಯಾತ್ ಅನುವಾದ ತತ್ರಾಹ–*

ಶ್ರುತಿಬಲದಿಂದಲೇ ಅನುಷ್ಠಾನ ಸಾಧ್ಯವಾದೀತು ಅಲ್ಲವೆ? ಅದರ ಬಗ್ಗೆ ಹೀಗಿದೆ–

ಸೂತ್ರ: ನಾಶಕ್ಯೋಪದೇಶವಿಧಿರುಪದಿಷ್ಟೇಽಪ್ಯನುಪದೇಶಃ ॥ ೯ ॥

ಅನುವಾದ: ಹಾಗಲ್ಲ. ಆಚರಿಸಲಸಾಧ್ಯವಾದ ಉಪದೇಶದ ವಿಧಿಯು ಉಪದೇಶ ಮಾಡಿದರೂ ಉಪದೇಶವಾಗಲಾರದು.

ಭಾಷ್ಯ: *ನಾಽಶಕ್ಯಾಯ ಫಲಾಯ ಉಪದೇಶಸ್ಯಾನುಷ್ಠಾನಂ ಸಂಭವತಿ ಯತ ಉಪದಿಷ್ಟೇಽಪಿ ವಿಹಿತೇಽಪ್ಯ ಶಕ್ಯಸ್ಯೋಪಾಯೇ ಸ ಉಪದೇಶಃ ನ ಭವತಿ । ಕಿಂತು ಉಪದೇಶಾಭಾಸ ಏವ । 'ಬಾಧಿತಮರ್ಥಂ ವೇದೋಽಪಿ ನ ಬೋಧಯತೀತಿ ನ್ಯಾಯಾದಿತ್ಯರ್ಥಃ'।*

ಅನುವಾದ: ದೊರೆಯದ ಫಲಕ್ಕಾಗಿ ಉಪದೇಶ ಮಾಡಿದರೆ ಅದರ ಅನುಷ್ಠಾನ ಮಾಡುವ ಸಂಭವವಿಲ್ಲ. ಉಪದೇಶ ಮಾಡಿದರೂ ವಿಧಿಯಾದರೂ ಅಶಕ್ಯವಾದ ಫಲಕ್ಕಾಗಿ ಮಾಡಿದ ಉಪದೇಶ ಉಪದೇಶವಿಲ್ಲದಂತಾಗುವುದು. ಮತ್ತೆ ಅದು ಭ್ರಾಂತಿಯಾಗಿ ಉಳಿಯುವುದು. 'ಬಾಧಿತವಾದ ಅರ್ಥವನ್ನು ವೇದವೂ ಬೋಧಿಸುವುದಿಲ್ಲ' ಎಂಬ ನ್ಯಾಯದಂತೆ ಪ್ರಯೋಜನವಿಲ್ಲ.

ಭಾಷ್ಯ: *ಅತ್ರ ಶಂಕತೇ (ಅನುವಾದ ಇಲ್ಲಿ ಶಂಕೆ ಮೂಡಿದೆ–)*

ಸೂತ್ರ: ಶುಕ್ಲಪಟವತ್ ಬೀಜವಚ್ಚೇತ್ ॥ ೧೦ ॥

ಅನುವಾದ: ಬಿಳಿಯ ಬಟ್ಟೆಯಂತಾಗಲಿ ಬೀಜದಂತಾಗಲಿ (ತೆಗೆದುಕೊಂಡರೆ)?

ಭಾಷ್ಯ: *ನನು ಸ್ವಾಭಾವಿಕಸ್ಯಾಪ್ಯಪಾಯೋ ದೃಶ್ಯತೇ । ಯಥಾ ಶುಕ್ಲಪಟಸ್ಯ ಸ್ವಾಭಾವಿಕಂ ಶೌಕ್ಲ್ಯಂ ರಾಗೇಣಾಪನೀಯತೇ । ಯಥಾ ಚ ಬೀಜಸ್ಯ ಸ್ವಾಭಾವಿಕ್ಯಪಿ ಅಂಕುರಶಕ್ತಿಃ ಅಗ್ನಿನಾ ಅಪನೀಯತೇ । ಅತಃ ಶುಕ್ಲಪಟವತ್ ಬೀಜವತ್ ಚ ಸ್ವಾಭಾವಿಕಸ್ಯ ಬಂಧಸ್ಯ ಅಪಿ ಅಪಾಯಃ ಪುರುಷೇ ಸಂಭವತೀತಿ, ತದ್ವದೇವ ತತ್ಸಾಧನೋಪದೇಶಃ ಸ್ಯಾದಿತಿ ಚೇದಿತ್ಯರ್ಥಃ ।*

ಅನುವಾದ: ಸ್ವಾಭಾವಿಕವಾದ (ಗುಣವೂ) ಕಣ್ಮರೆಯಾಗುವುದನ್ನು ಕಂಡಿದ್ದೇವಲ್ಲವೆ? ಬಿಳಿಯ ಬಣ್ಣದ ಬಟ್ಟೆಯ ಬಿಳುಪು ಸ್ವಾಭಾವಿಕವಾದರೂ ಬಣ್ಣದಿಂದ ದೂರವಾಗು ವುದಿಲ್ಲವೆ? ಹೇಗೆ ಬೀಜದ ಮೊಳಕೆಯ ಶಕ್ತಿ ಸ್ವಾಭಾವಿಕವಾದರೂ ಬೆಂಕಿಯಿಂದ ದೂರವಾಗುವುದಿಲ್ಲವೆ? ಹಾಗೆಯೇ? ಬಿಳಿಯಬಟ್ಟೆ ಅಥವಾ ಬೀಜದಂತೆ ಪುರುಷನ ಸ್ವಾಭಾವಿಕ ಬಂಧನವೂ (ವಿವೇಕ ಜ್ಞಾನದಿಂದ) ಪುರುಷನಲ್ಲಿ ಸಂಭವಿಸುವುದು; ಹಾಗೆಯೇ ಅದನ್ನು ಸಾಧಿಸುವ ಉಪದೇಶ ಶಾಸ್ತ್ರದಿಂದ ಆಗಬೇಕಲ್ಲವೆ?

ಭಾಷ್ಯ: *ಸಮಾಧತ್ತೇ ।*

ಅನುವಾದ: ಸಮಾಧಾನ ಹೇಳುವ ಸೂತ್ರ–

ಸೂತ್ರ: ಶಕ್ತ್ಯುದ್ಭವಾನುದ್ಭವಾಭ್ಯಾಂ ನಾಽಶಕ್ಯೋಪದೇಶಃ ॥ ೧೧ ॥

ಶಕ್ತಿಯು ಹೆಚ್ಚುವುದರಿಂದಲೂ ಮತ್ತು ತೋರದಿರುವುದರಿಂದಲೂ ಉಪದೇಶವು ಅಶಕ್ಯವಾದುದೇನಲ್ಲ.

ಭಾಷ್ಯ: *ಉಕ್ತದೃಷ್ಟಾಂತಯೋರಪಿ ನ ಅಶಕ್ಯಾಯ ಸ್ವಾಭಾವಿಕಾಯ ಅಪಾಯೋಪದೇಶೋ ಲೋಕಾನಾಂ*

*ಭವತಿ । ಕುತಃ? ಶಕ್ತ್ಯುದ್ಭವಾನುದ್ಭವಾಭ್ಯಾಮ್ ।
ದೃಷ್ಟಾಂತದ್ವಯೇ ಹಿ ಶೌಕ್ಲ್ಯಾದೇರಾವಿರ್ಭಾವತಿರೋಭಾವೌ
ಏವ ಭವತಃ । ನ ತು ಶೌಕ್ಲ್ಯಾಂಕುರಶಕ್ತ್ಯೋಃ ಅಭಾವಃ
ಭವತಿ । ರಜಕಾದಿ ವ್ಯಾಪಾರೈಃ ಯೋಗಿಸಂಕಲ್ಪಾದಿಭಿಶ್ಚ
ರಕ್ತಪಟಭೃಷ್ಟ ಬೀಜಯೋಃ ಪುನಃ ಶೌಕ್ಲ್ಯಾಂಕುರ–
ಶಕ್ತ್ಯಾವಿರ್ಭಾವಾತ್ ಇತ್ಯರ್ಥಃ ।*

ಅನುವಾದ: ಮೇಲೆ ಹೇಳಿದ ದೃಷ್ಟಾಂತಗಳಲ್ಲಿಯೂ ಸ್ವಾಭಾವಿಕ ಗುಣಗಳನ್ನು ಹೋಗಲಾಡಿಸುವ ವಿಧಾನವನ್ನು ಜನರು ಹೇಳುವುದಿಲ್ಲ– ಏಕೆಂದರೆ ಅದು ಅಶಕ್ಯವಾದುದು. ಏಕೆ? ಅಲ್ಲಿ ಶಕ್ತಿಯ ಉದ್ಭವ ಮತ್ತು ಅನುದ್ಭವಗಳು ಉಕ್ತವಾಗಿವೆ. ಈ ಎರಡು ದೃಷ್ಟಾಂತಗಳಲ್ಲಿಯೂ ಬಿಳುಪು ಗೋಚರಿಸುತ್ತವೆ ಮತ್ತು ಕಣ್ಮರೆಯಾಗುತ್ತವೆ. ಆದರೆ ಶುಕ್ಲವರ್ಣದ ಅಥವಾ ಮೊಳಕೆಯಾಗುವ ಶಕ್ತಿಯ ಅಭಾವವನ್ನು ಮಾತ್ರ ಕಾಣಲಾರೆವು.

ಅಗಸನು ಒಗೆಯುವುದರಿಂದಾಗಲಿ ಯೋಗಿ ಸಂಕಲ್ಪಾದಿಗಳಿಂದಾಗಲಿ ಬಟ್ಟೆಯ ಬಿಳುಪು ಮತ್ತು ಬೀಜಗಳಲ್ಲಿ ಮತ್ತು ಅಂಕುರದ ಶಕ್ತಿ ಮತ್ತೆ ತೋರುತ್ತವೆ.

ವಿವರಣೆ: ಯಾವುದಾದರೂ ವಸ್ತುವಿನ ಗುಣಗಳನ್ನು ಮರೆಮಾಡಲು ಸಾಧ್ಯವೇ ಹೊರತು ಆ ಗುಣವನ್ನು ನಾಶಮಾಡುವುದು ಅಸಾಧ್ಯ. ಬಟ್ಟೆಯ ಬಿಳಿಯ ಬಣ್ಣವನ್ನು ಬೇರೆ ಬಣ್ಣದಿಂದ ಮರೆಮಾಡಬಹುದೇ ಹೊರತು ಆ ಬಣ್ಣದಲ್ಲಿ ಅಡಗಿರುವ ಶಕ್ತಿಯನ್ನೇ ಹೋಗಲಾಡಿಸಲಾಗದು ಎಂದು ಅಭಿಪ್ರಾಯ.

ಭಾಷ್ಯ: *ನನ್ವೇವಂ ಪುರುಷೇಽಪಿ ದುಃಖಶಕ್ತಿತಿರೋಭಾವ ಏವ ಮೋಕ್ಷೋಽಸ್ತು ।*

ಅನುವಾದ: ಹಾಗಾದರೆ ಪುರುಷನಲ್ಲಿರುವ ದುಃಖಶಕ್ತಿಯೇ ಕಣ್ಮರೆಯಾಗುವುದು. 'ಮೋಕ್ಷ' ಏಕಾಗಬಾರದು?

ಭಾಷ್ಯ: *ಇತಿ ಚೇನ್ನ । ದುಃಖಾತ್ಯಂತನಿವೃತ್ತೇರೇವ
ಲೋಕೇ ಪುರುಷಾರ್ಥತ್ವಾನುಭವಾತ್ ಶ್ರುತಿಸ್ಮೃತ್ಯೋಃ
ಪುರುಷಾರ್ಥತ್ವಸಿದ್ಧೇಶ್ಚ । ನ ತು ದೃಷ್ಟಾಂತಯೋರಿವ ತಿರೋಭಾವಮಾತ್ರಸ್ಯೇತಿ ।
ಕಿಂಚ ದುಃಖಶಕ್ತಿ ತಿರೋಭಾವಮಾತ್ರಸ್ಯ ಮೋಕ್ಷತ್ವೇ ಕದಾಚಿದ್ಯೋಗೀಶ್ವರ–
ಸಂಕಲ್ಪಾದಿನಾ ಶಕ್ತ್ಯುದ್ಭವಸ್ಯ ಭ್ರಷ್ಟಬೀಜೇಷ್ವಿವ ಮುಕ್ತೇಷು
ಅಪಿ ಸಂಭವೇನಾನಿರ್ಮೋಕ್ಷಾಪತ್ತಿರಿತಿ ।*

ಅನುವಾದ: ಅತ್ಯಂತ ದುಃಖವನ್ನು ಹೋಗಲಾಡಿಸುವುದೇ ಲೋಕದಲ್ಲಿ ಪುರುಷಾರ್ಥತ್ವ ಎಂದು ಅನುಭವದ ಮಾತಿದೆ. ಆ ಪುರುಷಾರ್ಥತ್ವವು ಸಿದ್ಧಿಸಲು ಶ್ರುತಿಸ್ಮೃತಿಗಳು ಬೇಕು. ದೃಷ್ಟಾಂತದಂತೆ ಕೇವಲ ಆವಿರ್ಭಾವ ಮತ್ತು ತಿರೋಭಾವ (ಕಣ್ಮರೆಯಾಗುವುದು) ಮಾತ್ರ ತಿಳಿಸುವುದಿಲ್ಲ. ಅಷ್ಟೇ ಅಲ್ಲದೆ ದುಃಖಶಕ್ತಿಯನ್ನು ಹೋಗಲಾಡಿಸುವದಷ್ಟೇ ಮೋಕ್ಷವೆನಿಸಿದರೆ ಯಾವಾಗಲಾದರೂ ಯೋಗೀಶ್ವರನ

ಸಂಕಲ್ಪ ಸಿದ್ಧಿಯಿಂದ ಹುರಿದು ಸುಟ್ಟುಹೋದ ಬೀಜದಲ್ಲಿ ಶಕ್ತಿಯುಂಟಾಗಬಹುದಾದ್ದರಿಂದ ಮೋಕ್ಷದೊರೆತರೂ ಸಂಪೂರ್ಣ ಮೋಕ್ಷ ಸಂಭವಿಸಲಾರದು.

ವಿವರಣೆ: *ಪುರುಷನಿಗೆ ತಾತ್ಕಾಲಿಕವಾಗಿ ದುಃಖನಿವೃತ್ತಿಯಾಗುವ ಸಂಭವವುಂಟು. ಆದರೆ ಮತ್ತೆ ದುಃಖಕ್ಕೆ ಗುರಿಯಾಗುವನು.*

ಭಾಷ್ಯ: *ಸ್ವಭಾವತೋ ಬಂಧಂ ನಿರಾಕೃತ್ಯ ನಿಮಿತ್ತೇಭ್ಯೋಽಪಿ ಬಂಧಮಪಾಕರೋತಿ ಸೂತ್ರಜಾತೇನ (೧೨–೫೫) ಪುರುಷೇ ದುಃಖಸ್ಯ ನೈಮಿತ್ತಿಕತ್ವೇಽಪಿ ಜ್ಞಾನಾದ್ಯುಪಾಯೋ–। ಚ್ಛೇದತ್ವಂ ನ ಘಟತೇ, ಅನಾಗತಾವಸ್ಥಸೂಕ್ಷ್ಮದುಃಖಸ್ಯ ಯಾವದ್ದ್ರವ್ಯಭಾವಿತ್ವಾತ್ ಇತಿ ಆಶಯೇನ ನೈಮಿತ್ತಿಕತ್ವಂ ನಿರಾಕ್ರಿಯತೇ ।*

ಅನುವಾದ: ಪುರುಷನ ಬಂಧನ ಸ್ವಾಭಾವಿಕವಾದುದಲ್ಲ ಎಂದು ಹೇಳಿ ನಿಮಿತ್ತಗಳಿಂದಲೂ ಪುರುಷನು ದುಃಖಕ್ಕೆ ಗುರಿಯಾಗಬಹುದು ಎಂಬುದನ್ನು ಸೂತ್ರಗಳ ಸರಣಿಯಲ್ಲಿ ನಿರಾಕರಿಸಲಾಗಿದೆ. ಜ್ಞಾನಾದಿ ಉಪಾಯಗಳಿಂದ ದುಃಖವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವುದು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಏಕೆಂದರೆ ಇನ್ನೂ ಬಾರದ ಸ್ಥಿತಿಯಲ್ಲಿರುವ ದುಃಖವು ಆ ದ್ರವ್ಯವಿರುವವರೆಗೆ ಯಾವಾಗಲಾದರೂ ಬರುವುದು ಸಾಧ್ಯ. ಹೀಗೆ ದ್ರವ್ಯವಿರುವವರೆಗೆ ಅದೂ ಇರುವುದು ಸಾಧ್ಯ ಎಂಬ ಉದ್ದೇಶದಿಂದ ನೈಮಿತ್ತಿಕ ದುಃಖವನ್ನು ನಿರಾಕರಿಸಿದ್ದಾರೆ.

ವಿವರಣೆ: ಸೂತ್ರಗಳ ಸರಣಿಯೆಂದರೆ ೧೨ ರಿಂದ ೫೫ ಸೂತ್ರಗಳವರೆಗೆ, 'ನೈಮಿತ್ತಿಕ' ವೆಂದರೆ ಅಯಾ ಸಂದರ್ಭಗಳಲ್ಲಿ ಉದ್ಭವಿಸುವ.

ಸೂತ್ರ: ನ ಕಾಲಯೋಗತೋ ವ್ಯಾಪಿನೋ ನಿತ್ಯಸ್ಯ ಸರ್ವಸಂಬಂಧಾತ್ ॥ ೧೨ ॥

ಅನುವಾದ: ಕಾಲದ ಸಂಬಂಧದಿಂದಲೂ (ಪುರುಷ ಬಂಧನದಲ್ಲಿಲ್ಲ). ಸರ್ವವ್ಯಾಪಿಯಾದ, ಶಾಶ್ವತವಾದ ಮತ್ತು ಎಲ್ಲಕ್ಕೂ ಕಾಲ ಸಂಬಂಧಪಟ್ಟಿರುವುದರಿಂದ (ಅದರ ಸಂಬಂಧವಿಲ್ಲ).

ಭಾಷ್ಯ: *ನಾಪಿ ಕಾಲಸಂಬಂಧನಿಮಿತ್ತತಃ ಪುರುಷಸ್ಯ ಬಂಧಃ । ಕುತಃ? ವ್ಯಾಪಿನೋ ನಿತ್ಯಸ್ಯ ಸರ್ವಾವಚ್ಛೇದೇನ ಸರ್ವದಾ ಮುಕ್ತಾಮುಕ್ತ ಸಕಲಪುರುಷಸಂಬಂಧಾತ್, ಸರ್ವಾವಚ್ಛೇದೇನ ಸದಾ ಸಕಲಪುರುಷಾಣಾಂ ಬಂಧಾಪತ್ತೇಃ ।*

ಅನುವಾದ: ಕಾಲಸಂಬಂಧದ ನಿಮಿತ್ತದಿಂದಲೂ ಪುರುಷನಿಗೆ ಬಂಧವಿರುವುದಿಲ್ಲ. ಏಕೆ? ವ್ಯಾಪಿಯೂ, ನಿತ್ಯವೂ ಆದ ಕಾಲವು ಎಲ್ಲವನ್ನೂ ತನ್ನ ಮಿತಿಗೆ ಒಳಪಡಿಸುವುದರಿಂದ ಯಾವಾಗಲೂ ಮುಕ್ತರ ಮತ್ತು ಅಮುಕ್ತರ ಸಂಬಂಧ ಹೊಂದಿರುತ್ತದೆ; ಎಂದರೆ ಎಲ್ಲವನ್ನೂ ಮಿತಿಗೊಳಿಸಿ ಯಾವಾಗಲೂ ಮುಕ್ತರೂ ಅಮುಕ್ತರೂ ಸೇರಿ ಎಲ್ಲ ಪುರುಷರೂ ಬಂಧನಕ್ಕೆ ಒಳಗಾಗುವರು.

ವಿವರಣೆ: ಕಾಲದ ಮಿತಿಯಲ್ಲಿ ಮೋಕ್ಷ ಪಡೆದವರೊಡನೆ ಮೋಕ್ಷ ಪಡೆಯದವರೂ ಸೇರಿ ಹೋಗುವರು. ಇದು ಹೇಗೆ ಸಾಧ್ಯ?

ಭಾಷ್ಯ: *ಅತ್ರ ಚ ಪ್ರಕರಣೇ ಕಾಲದೇಶಕರ್ಮಾದೀನಾಂ ನಿಮಿತ್ತತ್ವ-।*
ಸಾಮಾನ್ಯಂ ನಾಪಲಪ್ಯತೇ, ಶ್ರುತಿಸ್ಮೃತಿಯುಕ್ತಿಭಿಃ ಸಿದ್ಧತ್ವಾತ್ ।

ಅನುವಾದ: ಈ ಪ್ರಕರಣದಲ್ಲಿ ಕಾಲ, ದೇಶ, ಕರ್ಮ ಮುಂತಾದುವುಗಳ ಸಾಮಾನ್ಯ ರೂಪದ ನಿಮಿತ್ತತೆಯನ್ನು ಅಲ್ಲಗಳೆಯುವಂತಿಲ್ಲ. ಏಕೆಂದರೆ ಶ್ರುತಿ, ಸ್ಮೃತಿ ಮತ್ತು ಯುಕ್ತಿಗಳಿಂದ ಅದನ್ನು ಸಿದ್ಧಗೊಳಿಸಲಾಗಿದೆ.

ಭಾಷ್ಯ: *ಕಿಂತು ಯನ್ನೈಮಿತ್ತಿಕತ್ವಂ ಪಾಕಜರೂಪಾದಿವತ್ ನಿಮಿತ್ತ-*
ಜನ್ಯತ್ವಂ ತದೇವ ಬಂಧೇ ಪ್ರತಿಪದ್ಯತೇ ।

ಅನುವಾದ: ಆದರೆ ಪಾಕದಿಂದುಂಟಾದ ರೂಪದಂತೆ ಯಾವುದಾದರೂ ನಿಮಿತ್ತದಿಂದ ಆದರೆ ಅದನ್ನೇ ನಿಷೇಧಿಸಲಾಗಿದೆ. ಪುರುಷನಲ್ಲಿ ಆಗುವ ಬಂಧವು ಉಪಾಧಿಯಿಂದ ಎಂದು ಒಪ್ಪಿದಂತಾಗುವುದು.

ಭಾಷ್ಯ: *ನನು ಕಾಲಾದಿನಿಮಿತ್ತತ್ವೇಽಪಿ ಸಹಕಾರ್ಯಂತರಸಂಭವಾ-*
ಸಂಭವಾಭ್ಯಾಂ ವ್ಯವಸ್ಥಾ ಸ್ಯಾದಿತಿ ಚೇತ್ ನ ।

ಅನುವಾದ: ಕಾಲಾದಿ ನಿಮಿತ್ತಗಳು ಇದ್ದರೂ ಸಹ ಸಹಕಾರಿಯಾದ ಕಾರಣಗಳು ಸಂಭವ ಅಥವಾ ಅಸಂಭವವಿರುವಾಗ ಅದರ ವ್ಯವಸ್ಥೆ ಉಂಟಾಗುವುದಿಲ್ಲವೆ?

ವಿವರಣೆ: 'ವ್ಯವಸ್ಥೆ' ಎಂದರೆ ಸಂದರ್ಭಕ್ಕೆ ತಕ್ಕಂತೆ ಪುರುಷನ ಸ್ತಿತಿ ಉತ್ತಮವಾಗುವುದಲ್ಲವೆ ಅಥವಾ ಕೆಡುವುದಿಲ್ಲವೆ?

ಭಾಷ್ಯ: *ಏವಂ ಸತಿ ಯತ್ಸಂಯೋಗೇ ಸತ್ಯವಶ್ಯಂ ಬಂಧಃ*
ತತ್ರೈವ ಸಹಕಾರಿಣಿ ಲಾಘವಾತ್ ಬಂಧೋ ಯುಕ್ತಃ ।
ಪುರುಷೇ ಬಂಧವ್ಯವಹಾರಸ್ಯ ಔಪಾಧಿಕತ್ವೇನ ಅಪಿ ಉಪಪತ್ತೇಃ
ಇತಿ ಕೃತಂ ನೈಮಿತ್ತಿಕತ್ವೇನೇತಿ ।

ಅನುವಾದ: ಹೀಗೆ ಇರುವಾಗ, ಯಾವುದರ ಸಂಯೋಗದಿಂದ 'ಬಂಧ' ಖಂಡಿತವಾಗಿ ಆಗುವುದೋ ಆಗ ಸಹಕಾರಿಯು ಇರುವಾಗ ಬಂಧವನ್ನು ಲಘುವೆಂದೆಣಿಸ ಬಹುದು. ಆದರೆ ಪುರುಷನಲ್ಲಿ ಬಂಧವ್ಯವಹಾರವು ಉಪಾಧಿಯು ಇರುವುದ ರಿಂದಲೂ ಸಮಂಜಸವೆನಿಸಬಹುದು. ಆದ್ದರಿಂದ ಅದು ನೈಮಿತ್ತಿಕವೆಂದು ಹೇಳಲಾಗದು.

ವಿವರಣೆ: ಕಾಲಾದಿಗಳನ್ನು ನಿಮಿತ್ತವೆಂದು ಬಂಧವ್ಯವಹಾರದಲ್ಲಿ ಹೇಳಿದರೂ ಇತರ ಕಾರಣಗಳು ಬಂಧವನ್ನುಂಟು ಮಾಡುವುದನ್ನು ಲಘುವೆಂದು ಪರಿಗಣಿಸಬಹುದು. ಬಂಧ ಉಪಾಧಿಯಿಂದಲೂ ಆಗಬಹುದಾದ ಕಾರಣ ಅದನ್ನು ಬಟ್ಟೆಯ ಬಣ್ಣದಂತೆ, ಹುರಿದ ಬೀಜದಂತೆ ನೈಮಿತ್ತಿಕವೆನ್ನಲಾಗದು.

ಸೂತ್ರ: ನ ದೇಶಯೋಗತೋಽಪ್ಯಸ್ಮಾತ್ ॥ ೧೩ ॥

ಅನುವಾದ: ಈ ಕಾರಣದಿಂದ ದೇಶದ (ಯಾವುದೇ ಪ್ರದೇಶದ) ಸಂಬಂಧದಿಂದಲೂ ಪುರುಷನಿಗೆ 'ಬಂಧ'ವಿರದು.

ಭಾಷ್ಯ: *ದೇಶಯೋಗತೋಽಪಿ ನ ಬಂಧಃ । ಕುತಃ? ಅಸ್ಮಾತ್ ಪೂರ್ವ- ಸೂಕ್ತಾತ್ ಮುಕ್ತಾಮುಕ್ತ ಸರ್ವಪುರುಷಸಂಬಂಧಾತ್ ಮುಕ್ತಸ್ಯಾಪಿ ಬಂಧಾಪತ್ತೇರಿತ್ಯರ್ಥಃ ।*

ಅನುವಾದ: ದೇಶದ ಯೋಗದಿಂದಲೂ ಪುರುಷನಿಗೆ ಬಂಧವಿರದು ಏಕೆ? ಮೊದಲ ಸೂತ್ರದಲ್ಲಿ ಹೇಳಿರುವಂತೆ ಮುಕ್ತರು ಮತ್ತು ಅಮುಕ್ತರಾದ ಎಲ್ಲ ಪುರುಷರ ಸಂಬಂಧದಂತೆ ಮುಕ್ತರೂ 'ಬಂಧ'ಕ್ಕೊಳಗಾದಂತಾಗುವರು.

ಸೂತ್ರ: ನಾವಸ್ಥಾತೋ ದೇಹಧರ್ಮತ್ವಾತ್ ತಸ್ಯಾಃ ॥ ೧೪ ॥

ಅನುವಾದ: ಅವಸ್ಥೆಯನ್ನು ನಿಮಿತ್ತವನ್ನಾಗಿ ಮಾಡಿಕೊಂಡು ಇದ್ದರೂ ಬಂಧ ಉಂಟಾಗಲಾರದು. ಏಕೆಂದರೆ, ಅವಸ್ಥೆಯು ಅಚೇತನ ದೇಹದ ಧರ್ಮವಷ್ಟೆ. ಅದರಿಂದಲೂ ಪುರುಷನಿಗೆ ಬಂಧಬಾರದು. ಏಕೆಂದರೆ, ದೇಹದ ಧರ್ಮವು ಅಚೇತನದ ಧರ್ಮವಾಗಿರುವುದು. ಯಾವುದೋ (ಅಚೇತನದ) ಧರ್ಮವನ್ನು ಬೇರೆಯ (ಚೇತನದ) ಮೇಲೆ ಅನ್ವಯಿಸಿದಲ್ಲಿ ಅದು ಅತಿಪ್ರಸಂಗವಾಗುವುದು ಎಂದರೆ ಮುಕ್ತನ ಮೇಲೆ ಬಂಧವನ್ನು ಅನ್ವಯಿಸಿದಂತಾಗುವುದು.

ವಿವರಣೆ: ಅವಸ್ಥೆ ಎಂದರೇನು? ದೇಹದಲ್ಲಿ ಆಗುವ ಬದಲಾವಣೆಗಳು. ಉದಾಹರಣೆಗೆ ಬಾಲ್ಯ, ಯೌವನ, ವೃದ್ದಾಪ್ಯ ಕೇವಲ ದೇಹದಲ್ಲಿ ಆಗುವ ಬದಲಾವಣೆಗಳು– ಚೇತನನಾದ ಪುರುಷನಲ್ಲಿ ಈ ಬದಲಾವಣೆಗಳು ಉಂಟಾಗಲಾರವು.

ಸೂತ್ರ: ಅಸಂಗೋಽಯಂ ಪುರುಷ ಇತಿ ॥ ೧೫ ॥

ಅನುವಾದ: ಪುರುಷನು ಸ್ವಾಭಾವಿಕವಾಗಿಯೇ ಸಂಗರಹಿತನು.

ಭಾಷ್ಯ: *ಇತಿ ಶಬ್ದೋ ಹೇತ್ವರ್ಥೇ ।*

ಅನುವಾದ: ಇತಿ ಎಂಬ ಪದವು ಕಾರಣ ಎಂಬ ಅರ್ಥದಲ್ಲಿದೆ.

ಭಾಷ್ಯ: *ಪುರುಷಸ್ಯ ಅಸಂಗತ್ವಾತ್ ಅವಸ್ಥಾಯಾ ದೇಹಮಾತ್ರ- ಧರ್ಮತ್ವಮಿತಿ ಪೂರ್ವಸೂತ್ರೇಣ ಅನ್ವಯಃ । ಪುರುಷಸ್ಯ ಅವಸ್ಥಾರೂಪವಿಕಾರಸ್ವೀಕಾರೇ ವಿಕಾರಹೇತುಸಂಯೋಗಾಖ್ಯಃ ಸಗಃ ಪ್ರಸಜ್ಯೇತೇತಿ ಭಾವಃ । ಅಸಂಗತ್ವೇ ಚ ಶ್ರುತಿಃ 'ಸ ಯದತ್ರ ಕಿಂಚಿತ್ ಪಶ್ಯತಿ ಅನನ್ವಾಗತಸ್ತೇನ ಭವತಿ । ಅಸಂಗೋಹ್ಯಯಂ ಪುರುಷ ಇತಿ (ಬೃ.ಉ. ೪.೩.೧೬) । ಸಂಗಶ್ಚ ಸಂಯೋಗಮಾತ್ರಂ ನ ಭವತಿ, ಕಾಲ,–ದೇಶಸಂಬಂಧಸ್ಯ*

ಪೂರ್ವಮುಕ್ತತ್ವಾತ್ । ಶ್ರುತಿಸ್ಮೃತಿಷು ಪದ್ಮಪತ್ರಜಲೇನೇವ ಪದ್ಮಪತ್ರಸ್ಯ ಅಸಂಗತಾಯಾಃ ಪುರುಷಾಸಂಗತಾಯಾಂ ದೃಷ್ಟಾಂತತಾಶ್ರವಣಾಚ್ಚ ।

ಅನುವಾದ: ಪುರುಷನು ಅಸಂಗ ಸ್ವರೂಪನಾದ ಕಾರಣ ಅವಸ್ಥೆಯು ಕೇವಲ ದೇಹಧರ್ಮವೆಂದು ಪೂರ್ವಸೂತ್ರದಿಂದ ಅನ್ವಯಿಸಲಾಗಿದೆ. ಪುರುಷನಿಗೆ ಅವಸ್ಥೆಗಳ ಬದಲಾವಣೆಗಳನ್ನು ಅನ್ವಯಿಸಿದಲ್ಲಿ ವಿಕಾರವಾದ ಕಾರಣ ಸಂಯೋಗ ವಾಗುವುದೆಂಬ ಸಂಗವು ಉಂಟಾಗುವುದೆಂದು ಭಾವ. ಅಸಂಗವನ್ನು ಕುರಿತು ಶ್ರುತಿಯು ಹೀಗಿದೆ: 'ಅವನು ಏನನ್ನು ನೋಡುವನೋ ಅದರೊಡನೆ ಸೇರುವುದಿಲ್ಲ. ಈ ಪುರುಷನು ಅಸಂಗನೆಂದು ಕರೆಯಲ್ಪಡುವನು'. ಸಂಗವೆಂದರೆ ಕೇವಲ ಸಂಯೋಗವಲ್ಲ, ಅದನ್ನು ಕುರಿತು ಹೇಳಲಾಗಿದೆ ಶ್ರುತಿ ಸ್ಮೃತಿಗಳಲ್ಲಿ ಕಮಲದ ಎಲೆಯ ಮೇಲಿನ ನೀರಿನಂತೆ, ಪದ್ಮಪತ್ರದ ಅಸಂಗತೆಯ ದೃಷ್ಟಾಂತದಿಂದ ಪುರುಷನ ಅಸಂಗತೆಯನ್ನು ನಿರೂಪಿಸಲಾಗಿದೆ.

ವಿವರಣೆ: ಅಚೇತನವಾದ ವಸ್ತುವು ಪರಿಣಾಮಕ್ಕೆ ಗುರಿಯಾಗುವಂತೆ ಚೇತನನಾದ ಪುರುಷನು ಪರಿಣಾಮಗೊಳ್ಳುವುದಿಲ್ಲ.

ಸೂತ್ರ: ನ ಕರ್ಮಣಾನ್ಯಧರ್ಮತ್ವಾತ್ ಅತಿಪ್ರಸಕ್ತೇಶ್ಚ ॥ ೧೬ ॥

ಅನುವಾದ: ಬೇರೆಯದರ ಧರ್ಮವಾಗಿರುವ ಕಾರಣ ಮತ್ತು ಅತಿವಿಸ್ತಾರವಾಗಿರುವುದ ರಿಂದ ಕರ್ಮದಿಂದ ಪುರುಷನು ಬಂಧಕ್ಕೊಳಗಾಗುವುದಿಲ್ಲ.

ಭಾಷ್ಯ: *ನ ಹಿ ವಿಹಿತನಿಷಿದ್ಧಕರ್ಮಣಾಪಿ ಪುರುಷಸ್ಯ ಬಂಧಃ । ಕರ್ಮಣಾಮನಾತ್ಮಧರ್ಮತ್ವಾತ್ । ಅನ್ಯಧರ್ಮೇಣ ಸಾಕ್ಷಾದನ್ಯಸ್ಯ ಬಂಧೇ ಚ ಮುಕ್ತಸ್ಯಾಪಿ ಬಂಧಾಪತ್ತೇಃ ।*

ಅನುವಾದ: ವಿಧಿಸಲ್ಪಟ್ಟ ಅಥವಾ ಪ್ರತಿಷಿದ್ಧವಾದ ಕರ್ಮದಿಂದಲೂ ಪುರುಷನಿಗೆ ಬಂಧವಾಗದು, ಏಕೆಂದರೆ ಕರ್ಮಗಳು ಪುರುಷನಿಗೆ ಸಂಬಂಧಿಸಿದ ಧರ್ಮಗಳಲ್ಲ. ಏಕೆಂದರೆ ಬೇರೆಯ ಧರ್ಮದಿಂದ ಇನ್ನೊಂದರ ಸಾಕ್ಷಾತ್ ಬಂಧವುಂಟಾಗ ಬಹುದಾದ್ದರಿಂದ ಮುಕ್ತನಿಗೂ ಬಂಧವಾಗುವ ಪ್ರಸಂಗ ಬರಬಹುದು.

ಭಾಷ್ಯ: *ನನು ಸ್ವೋಪಾಧಿಕರ್ಮಣಾ ಬಂಧಾಂಗೀಕಾರೇ ನಾಯಂ ದೋಷ ಇತ್ಯಾಶಯೇನ ಹೇತ್ವಂತರಮಾಹ ।*

ಅನುವಾದ: ತಮ್ಮ ತಮ್ಮ ಕರ್ಮವೆಂಬ ಉಪಾಧಿಯಿಂದ ಬಂಧವಾದರೆ ಮೇಲಿನ ದೋಷ ಉಂಟಾಗಲಾರದು ಅಲ್ಲವೆ?

ಭಾಷ್ಯ: *ಅತಿಪ್ರಸಕ್ತೇಶ್ಚೇತಿ । ಪ್ರಲಯಾದಾವಪಿ ದುಃಖಯೋಗರೂಪ–ಬಂಧಾಪತ್ತೇಃ ಚ ಇತ್ಯರ್ಥಃ । ಸಹಕಾರ್ಯ್ಯಂತರವಿಲಂಬಿತೋ ವಿಲಂಬಕಲ್ಪನಂ ಚ ಪ್ರಾಗೇವ ನಿರಾಕೃತಂ 'ನ ಕಾಲಯೋಗ...' (ಸಾಂ.ಸೂ. ೧–೧೨) ಇತ್ಯಾದಿ ಸೂತ್ರ ಇತಿ ।*

ಅನುವಾದ: ಅತಿ ವಿಸ್ತಾರವಾದದ್ದೆಂದರೆ, ಪ್ರಲಯಾದಿಗಳಲ್ಲಿ ದುಃಖದ ಸಂಯೋಗದ ಬಂಧವು ಉಂಟಾಗುವುದು. ಇತರ ಸಹಕಾರಿಗಳ ವಿಲಂಬದ ಕಾರಣ ಆಗುವ ವಿಲಂಬವು ಮೊದಲೇ ನಿರಾಕರಿಸಲ್ಪಟ್ಟಿದೆ. 'ನ ಕಾಲಯೋಗ.....' (ಸಾಂ. ಸೂ. ೧–೧೨) ಎಂಬ ಸೂತ್ರದಿಂದ.

ಭಾಷ್ಯ: *ನನ್ವೇವಂ ದುಃಖಯೋಗರೂಪೋ ಬಂಧಃ ಕರ್ಮಸಾಮಾನಾಧಿಕರಣ್ಯಾನುರೋಧೇನೇವ ಚಿತ್ತಸ್ಯೈವಾಸ್ತು ದುಃಖಸ್ಯ ಚಿತ್ತಧರ್ಮತಾಯಾಃ ಸಿದ್ಧತ್ವಾತ್, ಕಿಮರ್ಥಂ ಪುರುಷಸ್ಯಾಪಿ ಕಲ್ಪ್ಯತೇ ಬಂಧ ಇತ್ಯಾಶಂಕಾಯಾಮಾಹ ।*

ಅನುವಾದ: ದುಃಖ ಸಂಯೋಗದ ಸ್ವರೂಪವುಳ್ಳ ಬಂಧವು ಕರ್ಮದೊಡನೆ ಸಮಾನಾಶ್ರಯವನ್ನು ಪಡೆದಾಗ ಅದು ಚಿತ್ತಕ್ಕೆ ಮಾತ್ರ ಅನ್ವಯಿಸಬಹುದು. ಏಕೆಂದರೆ ಚಿತ್ತವು ದುಃಖದ ಧರ್ಮವನ್ನು ಹೊಂದಿರುವುದು ತಿಳಿದದ್ದೆ. ಆದರೆ ಪುರುಷನಿಗೂ ಇದು ಅನ್ವಯಿಸುವುದು ಎಂಬ ಕಲ್ಪನೆ ಏಕೆ?

ಸೂತ್ರ: ವಿಚಿತ್ರಭೋಗಾನುಪಪತ್ತಿರನ್ಯಧರ್ಮತ್ವೇ ॥ ೧೭ ॥

ಅನುವಾದ: ಇತರ ಧರ್ಮಗಳನ್ನು ಪುರುಷನಿಗೆ ಅನ್ವಯಿಸಿದಲ್ಲಿ ವಿವಿಧ ಭೋಗಗಳನ್ನು ಪಡೆಯುವ ಸಂದರ್ಭ ಬರಲಾರದು.

ಭಾಷ್ಯ: *ಪುರುಷಸ್ಯ ಹಿ ದುಃಖಯೋಗಂ ವಿನಾಪಿ ದುಃಖಸಾಕ್ಷಾತ್ಕಾರಾ– ಖ್ಯಭೋಗಸ್ವೀಕಾರೇ ಸರ್ವಪುರುಷದುಃಖಾದೀನಾಂ ಸರ್ವಪುರುಷಭೋಗ್ಯತಾ ಸ್ಯಾನ್ನಿಯಾಮಕಾಭಾವಾತ್ ।*

ಅನುವಾದ: ದುಃಖದ ಭೋಗವಿಲ್ಲದೆ ಪುರುಷನಿಗೆ ದುಃಖ ಸಾಕ್ಷಾತ್ಕಾರವೆಂಬ ಭೋಗವನ್ನು ಅಂಗೀಕರಿಸಿದಲ್ಲಿ ಎಲ್ಲ ಪುರುಷರಿಗೆ ದುಃಖವೇ ಮೊದಲಾದ ಭೋಗಗಳು ಯಾವುದೇ ಹತೋಟಿಯಿಲ್ಲದೆ ಎಲ್ಲ ಪುರುಷರಿಗೂ ಭೋಗದ ವಿಷಯವಾಗುವುದು.

ಭಾಷ್ಯ: *ತತಶ್ಚಾಯಂ ದುಃಖ ಭೋಕ್ತಾಽಯಂ ಚ ಸುಖಭೋಕ್ತಾ ಇತ್ಯಾದಿ ರೂಪ ಭೋಗವೈಚಿತ್ರ್ಯಂ ನೋಪಪದ್ಯೇತ ಇತ್ಯರ್ಥಃ ।*

ಅನುವಾದ: ಅನಂತರ 'ಇವನು ದುಃಖವನ್ನು ಭೋಗಿಸುವವನು, ಇವನು ಸುಖವನ್ನು ಭೋಗಿಸುವವನು'. ಹೀಗೆ ಬಗೆ ಬಗೆಯ ಭೋಗಗಳುಂಟಾಗಲಾರವು, ಎಂದರ್ಥ.

ಭಾಷ್ಯ: *ಅತಃ ಭೋಗವೈಚಿತ್ರ್ಯೋಪಪತ್ತಯೇ ಭೋಗನಿಯಾಮಕತಯಾ ದುಃಖಾದಿ ಯೋಗರೂಪೋ ಬಂಧಃ ಪುರುಷೇಽಪಿ ಸ್ವೀಕಾರ್ಯಃ ।*

ಅನುವಾದ: ಆದ್ದರಿಂದ ಭೋಗ ವೈವಿಧ್ಯವನ್ನು ಪಡೆಯಲು ಭೋಗ ನಿಯಾಮಕ ರೂಪದಲ್ಲಿ ದುಃಖಾದಿ ಸಂಯೋಗ ರೂಪವಾದ ಬಂಧವು ಪುರುಷನಿಗೂ ಅನ್ವಯಿಸುವಂತಾಗುವುದು.

ಭಾಷ್ಯ: *ಸ ಚ ಪುರುಷೇ ದುಃಖಯೋಗಃ ಪ್ರತಿಬಿಂಬರೂಪಃ ಏವ ಪ್ರಾಗೇವೋಕ್ತಮ್ ।*

ಅನುವಾದ: ಪುರುಷನಿಗೆ ಆಗುವ ದುಃಖದ ಸಂಯೋಗ ಪ್ರತಿಬಿಂಬ ರೂಪದಲ್ಲಿರುವುದು ಎಂದು ಮೊದಲೇ ಹೇಳಿದ್ದೇವೆ.

ವಿವರಣೆ: (ಪ್ರತಿಬಿಂಬಸ್ವರೂಪಕಾಯಾಮೇವ ಪರ್ಯವಸ್ಯತಿ ।) 'ಪ್ರತಿಬಿಂಬದ ಸ್ವರೂಪದಲ್ಲಿಯೇ ಅಂತ್ಯಗೊಳ್ಳುತ್ತದೆ' ಎಂದು ಭಾಷ್ಯಕಾರನು ೧.೧ ಮೇಲಿನ ಭಾಷ್ಯದಲ್ಲಿ ಹೇಳಿದ್ದಾನೆ.

ಭಾಷ್ಯ: *'ಚಿತ್ತ ವೃತ್ತಿಬೋಧೇ ಪುರುಷಸ್ಯಾನಾದಿಃ ಸ್ವಸ್ವಾಮಿಭಾವಃ ಸಂಬಂಧಃ ಹೇತುರಿತಿ ಯೋಗಭಾಷ್ಯಾತ್ (೧.೪) ಅಯಂ ಸಿದ್ಧಾಂತಃ ಸಿದ್ಧಃ ।*

ಅನುವಾದ: ಚಿತ್ತದಲ್ಲಿಯೂ ಪುರುಷನ ಒಡೆತನವು ಅದರಲ್ಲಿ ಅಡಗಿರುವ ವಾಸನಾ (ಮಾನಸಿಕ ಪರಿಣಾಮಗಳನ್ನು) ಮುಖಾಂತರ ಪುರುಷನು ಅನುಭವಿಸುವುದರಲ್ಲಿ ಇರುತ್ತದೆ.

ವಿವರಣೆ: ವಾಸನಾ ಎಂಬುದು ಸ್ಮೃತಿಗೆ ಕಾರಣವಾದ ಒಂದು ಸಂಸ್ಕಾರ ವಿಶೇಷ. ಚಿತ್ತದ ಚಟುವಟಿಕೆಗೆ ಪ್ರೇರಕ.

ಭಾಷ್ಯ: *'ಯತ್ತು ಚಿತ್ತಸ್ಯೈವ ಬಂಧಮೋಕ್ಷಾ, ನ ಪುರುಷಸ್ಯ' ಇತಿ ಶ್ರುತಿಸ್ಮೃತಿಷು ಗೀಯತೇ ।*

ಅನುವಾದ: ಶ್ರುತಿ ಸ್ಮೃತಿಗಳಲ್ಲಿ ಹೇಳಿರುವಂತೆ 'ಬಂಧವೆಲ್ಲ ಚಿತ್ತಕ್ಕೇ ಹೊರತು ಪುರುಷನಿಗಲ್ಲ.

ಭಾಷ್ಯ: *ತದ್ ಬಿಂಬರೂಪ ದುಃಖಯೋಗರೂಪಂ ಪಾರಮಾರ್ಥಿಕಂ ಬಂಧಮಾದಾಯ ಬೋಧ್ಯಮ್ ।*

ಅನುವಾದ: ಬಿಂಬದ ರೂಪದಲ್ಲಿ ದುಃಖಯೋಗದ ರೂಪ ಪಡೆದ 'ಪಾರಮಾರ್ಥಿಕ ಬಂಧ'ವೆಂದು ತಿಳಿಯಬೇಕು.

ವಿವರಣೆ: ಬಂಧವೆಂದರೆ ದೇಹಕ್ಕೂ ಪುರುಷನಿಗೂ ಸಂಬಂಧದ ಕಲ್ಪನೆ. ಅಚೇತನವಾದ ಜಗತ್ತು ಚೇತನವಾದ ಪುರುಷನಿಗೆ ಭೋಗಾಪವರ್ಗಗಳನ್ನು ಒದಗಿಸುತ್ತದೆ.

ಭಾಷ್ಯ: *ಸಾಕ್ಷಾತ್ ಪ್ರಕೃತಿ ನಿಮಿತ್ತಕತ್ವಮಪಿ ಬಂಧಸ್ಯ ಅಪಾಕರೋತಿ ।*

ಅನುವಾದ: ಬಂಧವು ಸಾಕ್ಷಾತ್ತಾಗಿ ಪ್ರಕೃತಿಯ ನಿಮಿತ್ತದಿಂದಾದುದು ಎಂಬ ಅಂಶವನ್ನೂ ಅಲ್ಲಗಳೆದಿದ್ದಾರೆ.

ಸೂತ್ರ: ಪ್ರಕೃತಿನಿಬಂಧನಾತ್ ಚೇತ್ ನ, ತಸ್ಯಾ ಅಪಿ ಪಾರತಂತ್ರ್ಯಮ್ ॥ ೧೮ ॥

ಅನುವಾದ: ಪ್ರಕೃತಿಯ ಕಾರಣದಿಂದ ಪುರುಷನಿಗೆ ಬಂಧವುಂಟಾಗುವುದು ಎಂದರೆ ಅದೂ ಸರಿಯಲ್ಲ. ಏಕೆಂದರೆ ಅದೂ ಸಹ ಪರತಂತ್ರವಾದುದು.

ಭಾಷ್ಯ: *ನನು ಪ್ರಕೃತಿನಿಮಿತ್ತಾದ್ ಬಂಧೋ ಭವತು ।*

ಅನುವಾದ: ಪ್ರಕೃತಿಯಿಂದ ಪುರುಷನಿಗೆ ಬಂಧ ಉಂಟಾಗುತ್ತದೆ ಎಂದರೆ ಸರಿಯಲ್ಲವೆ?

ಭಾಷ್ಯ: *ಇತಿ ಚೇನ್ನ । ಯತಸ್ತಸ್ಯಾ ಅಪಿ ಬಂಧಕತ್ವೇ 'ಸಂಯೋಗ–ಪಾರತಂತ್ರ್ಯಮುತ್ತರತ್ರ' (೧.೧೯) ವಕ್ಷ್ಯಮಾಣಮಸ್ತಿ । ಸಂಯೋಗವಿಶೇಷಂ ವಿನಾಪಿ ಬಂಧಕತ್ವೇ ಪ್ರಲಯಾದಾವಪಿ ದುಃಖಬಂಧಪ್ರಸಂಗಾದಿತ್ಯರ್ಥಃ । ಪ್ರಕೃತಿನಿಬಂಧನಾ ಚೇದಿತಿ ಪಾಠೇ ತು ಪ್ರಕೃತಿನಿಬಂಧನೇ ಚೇತ್ ಬಂಧನೇ ಇತ್ಯರ್ಥಃ ।*

ಅನುವಾದ: ಪ್ರಕೃತಿಯೇ ಬಂಧವನ್ನುಂಟು ಮಾಡುವುದಾದರೆ (ಅದೂ ಸಾಧ್ಯವಿಲ್ಲವೆಂಬುದನ್ನು) ಸಂಯೋಗದಲ್ಲಿ ಪ್ರಕೃತಿಯೂ ಪರತಂತ್ರ ಎಂಬ ಅಂಶವನ್ನು ಮುಂದೆ ಹೇಳಲಾಗುವುದು. ವಿಶೇಷವಾದ ಸಂಯೋಗವಿಲ್ಲದೆ ಬಂಧವುಂಟಾದರೆ ಪ್ರಲಯಾದಿಗಳಲ್ಲಿಯೂ ದುಃಖಬಂಧ ಉಂಟಾಗುವ ಸಂಭವವುಂಟು. 'ಪ್ರಕೃತಿನಿಬಂಧನಾ ಚೇತ್' (ಅನಿರುದ್ಧನೆಂಬ ಪ್ರಸಿದ್ಧ ವ್ಯಾಖ್ಯಾಕಾರನು ಬರೆದಿರುವ ಪಾಠ) ಎಂಬ ಸೂತ್ರಪಾಠದಲ್ಲಿ 'ಬಂಧವು ಪ್ರಕೃತಿಯಿಂದುಂಟಾದರೆ' ಎಂದರ್ಥ.

ವಿವರಣೆ: ಪ್ರಲಯದ ಕಲ್ಪನೆಯೆಂದರೆ ಜಡವಾದ ಪ್ರಕೃತಿಯು ಚೇತನನಾದ ಪುರುಷನ ಪ್ರೇರಣೆಯಿಂದಾಗುವ ಪ್ರವೃತ್ತಿಯಿಂದ ಲಯವಾಗುವುದು ಮತ್ತು ಸೃಷ್ಟಿಯಾಗುವುದು. ಹೀಗೆ ಪರತಂತ್ರವಾದ ಪ್ರಕೃತಿಯು ಸ್ವತಂತ್ರವಾಗಿ ಏನೂ ಮಾಡಲು ಸಾಧ್ಯವಿಲ್ಲ.

ಭಾಷ್ಯ: *ಅತೋ ಯತ್ಪರತಂತ್ರಾ ಪ್ರಕೃತಿರ್ಬಂಧಕಾರಣಂ ಸಂಭವೇತ್ ತಸ್ಮಾದೇವ ಸಂಯೋಗ ವಿಶೇಷಾತ್ ಔಪಾಧಿಕೋ ಬಂಧೋ ಅಗ್ನಿಸಂಯೋಗಾತ್ ಜಲೌಷ್ಣ್ಯವದಿತಿ ಸ್ವಸಿದ್ಧಾಂತಂ ಅನೇನೈವ ಪ್ರಸಂಗೇನ ಅಂತರಾಲ ಏವಾವಧಾರಯತಿ ।*

ಅನುವಾದ: ಆದ್ದರಿಂದ ಪರತಂತ್ರವಾದ ಪ್ರಕೃತಿಯು ಬಂಧಕ್ಕೆ ಕಾರಣವಾದರೆ ಅದು 'ಸಂಯೋಗ ವಿಶೇಷ'ದ ಕಾರಣ ಔಪಾಧಿಕ ಬಂಧವಾಗುವುದು. ಇದನ್ನು ಅಗ್ನಿಸಂಯೋಗದಿಂದಾಗುವ ನೀರಿನ ಉಷ್ಣತೆಗೆ ಕಾರಣವೆನ್ನಬಹುದಾದ ರೀತಿಯಲ್ಲಿ ತಿಳಿಯಬಹುದು. ತಮ್ಮ ಈ ಸಿದ್ಧಾಂತವನ್ನು ಇದೇ ಪ್ರಸಂಗದಡಿಯಲ್ಲಿ ನಿರ್ಧರಿಸಿದ್ದಾರೆ.

ಸೂತ್ರ: ನ ನಿತ್ಯಶುದ್ಧಬುದ್ಧಮುಕ್ತಸ್ವಭಾವಸ್ಯ ತದ್ಯೋಗಸ್ತದ್ಯೋಗಾದೃತೇ ॥ ೧೯ ॥

ಅನುವಾದ: ಪ್ರಕೃತಿಯೊಡನೆ ಸಂಯೋಗವಾಗದ ಹೊರತು ನಿತ್ಯ, ಶುದ್ಧ, ಬುದ್ಧ, ಮುಕ್ತ ಸ್ವಭಾವದವನಾದ ಪುರುಷನಿಗೆ ಬಂಧಸಂಬಂಧವಾಗದು.

ಭಾಷ್ಯ: *ತಸ್ಮಾತ್ ತದ್ಯೋಗಾದೃತೇ ಪ್ರಕೃತಿಸಂಯೋಗಂ ವಿನಾ ನ ಪುರುಷಸ್ಯ ತದ್ಯೋಗೋ ಬಂಧಸಂಪರ್ಕೋಽಸ್ತಿ ಅಪಿತು ಸ ಏವ ಬಂಧಃ ।*

ಅನುವಾದ: ಆದ್ದರಿಂದ ಪ್ರಕೃತಿ ಸಂಯೋಗವಿಲ್ಲದೆ ಪುರುಷನಿಗೆ ಬಂಧಸಂಪರ್ಕವಿಲ್ಲ. ಅದೇ ಅವನ ಪಾಲಿಗೆ ಬಂಧ.

ಭಾಷ್ಯ: *ಬಂಧಸ್ಯ ಔಪಾಧಿಕತ್ವಲಾಭಾಯ ನಞ್ದ್ವಯೇನ ವಕ್ರೋಕ್ತಿಃ ।*

ಅನುವಾದ: ಬಂಧ ಉಪಾಧಿಯೊಡನೆ ಉಂಟಾದುದು ಎಂದು ತಿಳಿಸಲು ಎರಡು 'ನ' ಕಾರಗಳಿಂದ ಕೂಡಿದ ವಕ್ರೋಕ್ತಿಯನ್ನು ಬಳಸಲಾಗಿದೆ.

ಭಾಷ್ಯ: *ಯದಿ ಹಿ ಬಂಧಃ ಪ್ರಕೃತಿಸಂಯೋಗಜನ್ಯಃ ಸ್ಯಾತ್*
ಪಾಕಜರೂಪವತ್, ತದಾ ತದ್ವದೇವ ತದ್ವಿಯೋಗೇಽಪಿ ಅನುವರ್ತೇತ ।

ಅನುವಾದ: ಪಾಕಜ ರೂಪವಾದಂತೆ ಪ್ರಕೃತಿ ಸಂಯೋಗದಿಂದ ಬಂಧವುಂಟಾದರೆ ಆಗ ಅದರಂತೆಯೇ ಪ್ರಕೃತಿಯಿಂದ ಬಿಡುಗಡೆ ಪಡೆದ ನಂತರವೂ ಹಾಗೆಯೇ ಇರುವುದು.

ವಿವರಣೆ: ಪಾಕಜವೆಂದರೆ ಯಾವುದಾದರೂ ವಸ್ತುವನ್ನು ಕಾಯಿಸಿದಾಗ ಅದರ ಬಣ್ಣದಲ್ಲಿ ಉಂಟಾಗುವ ಬದಲಾವಣೆ. (ರೂಪಾದಿ ಪರಾವೃತ್ತಿಫಲಕಃ ವಿಜಾತೀಯತೇಜಃ–। ಸಂಯೋಗಃ)

ಭಾಷ್ಯ: *ನ ಚ ದ್ವಿತೀಯ ಕ್ಷಣಾದೇರ್ದುಃಖನಾಶಕತ್ವಂ ಕಲ್ಪ್ಯಮ್*
ಕಾರಣನಾಶಸ್ಯ ಕಾರ್ಯನಾಶಕತಾಯಾಃ ಕ್ಲೃಪ್ತತ್ವೇನ
ತೇನೈವ ಉಪಪತ್ತೌ ಅಸ್ಮಾಭಿಸ್ತದಕಲ್ಪನಾತ್ ।

ಅನುವಾದ: ಮತ್ತೆ ಎರಡನೆಯ ಕ್ಷಣದಲ್ಲಿಯೇ ದುಃಖ ನಾಶವಾಗುವುದೆಂದು ಕಲ್ಪಿಸುವುದೂ ಸಾಧ್ಯವಾಗದು. ಏಕೆಂದರೆ ಕಾರಣದ ನಾಶದಿಂದ ಕಾರ್ಯದ ನಾಶವು ಸಮ್ಮತವಾದ್ದರಿಂದ ಅದರಿಂದಲೇ ಅದು ಉತ್ಪತ್ತಿಯಾಗುವುದರಿಂದ ನಾವು ಬೇರೆಯ ರೀತಿಯಲ್ಲಿ ಭಾವಿಸಿಲ್ಲ.

ಭಾಷ್ಯ: *ವೃತ್ತಿರ್ಹಿ ದುಃಖಾದೇರುಪಾದಾನಮ್ ।*

ಅನುವಾದ: ದುಃಖಾದಿಗಳಿಗೆ ಮೂಲಕಾರಣವನ್ನು 'ವೃತ್ತಿ' ಎನ್ನುತ್ತಾರೆ.

ಭಾಷ್ಯ: *ಅತೋ ದೀಪಶಿಖಾವತ್ ಕ್ಷಣಭಂಗುರಾಯಾಃ ವೃತ್ತೇಃ ಆಶು–*
ವಿನಾಶತ್ವೇನೈವ ತದ್ಧರ್ಮಾಣಾಂ ದುಃಖೇಚ್ಛಾದೀನಾಂ
ವಿನಾಶಃ ಸಂಭವತೀತಿ ।

ಅನುವಾದ: ಆದ್ದರಿಂದ ದೀಪದ ಜ್ವಾಲೆಯಂತೆ ಕ್ಷಣಭಂಗುರವಾದ ವೃತ್ತಿಯ ಕಾರಣ ಕೂಡಲೆ ವಿನಾಶವಾಗುವುದರಿಂದ ಅದರ ಗುಣಗಳಾದ ದುಃಖ, ಇಚ್ಛೆ ಮುಂತಾದುವು ಕೂಡ ಕೂಡಲೆ ವಿನಾಶವಾಗುವ ಸಂಭವವಿರುತ್ತದೆ.

ಭಾಷ್ಯ: *ಅತಃ ಪ್ರಕೃತಿವಿಯೋಗೇ ಬಂಧಾಭಾವಾತ್ ಔಪಾಧಿಕ*
ಏವ ಬಂಧಃ, ನ ತು ಸ್ವಾಭಾವಿಕೋ ನೈಮಿತ್ತಿಕೋವಾ ಇತಿ ।
ತಥಾ ಸಂಯೋಗ ನಿವೃತ್ತಿರೇವ ಸಾಕ್ಷಾದ್ಧಾನೋಪಾಯ ಇತ್ಯಪಿ
ವಕ್ರೋಕ್ತಿಫಲಮ್ ।

ಅನುವಾದ: ಆದ್ದರಿಂದ ಪ್ರಕೃತಿಯಿಂದ ಬೇರೆಯಾದಾಗಲೇ ಬಂಧವು ಕಣ್ಮರೆಯಾಗುವುದರಿಂದ ಬಂಧವು ಉಪಾಧಿಯಿಂದಲೇ ಉಂಟಾಗಿರುವುದರಿಂದಲೇ ಹೊರತು ಸ್ವಾಭಾವಿಕ ಅಥವಾ ನೈಮಿತ್ತಿಕವಲ್ಲ. ಹಾಗೆಯೇ ಸಂಯೋಗದಿಂದ ಬಿಡುಗಡೆಯೇ ಸಾಕ್ಷಾತ್ ಬಿಡಿಸಿಕೊಳ್ಳುವ ಉಪಾಯ, ಇದೂ ವಕ್ರೋಕ್ತಿಯ ಫಲ.

ವಿವರಣೆ: ಔಪಾಧಿಕಬಂಧ– ಎಂದರೆ ಸಾಂದರ್ಭಿಕವಾಗಿ ಉಂಟಾದ, ಪುರುಷನಿಗೆ ದುಃಖ, ಇಚ್ಛೆ ಮುಂತಾದವು ಸ್ವಾಭಾವಿಕವಾದುದಲ್ಲ ಅಥವಾ ಯಾವುದೇ ಸ್ಥಿತಿಯಿಂದ ಉಂಟಾದುದಲ್ಲ. ವಕ್ರೋಕ್ತಿ ಎಂದರೆ ನೇರವಾಗಿ ಹೇಳದೆ ವ್ಯಂಜಕವಾಗಿ ಹೇಳುವುದು.

ಭಾಷ್ಯ: *ತಥಾ ಚ ಸ್ಮೃತಿಃ ।*

ಯಥಾ ಜ್ವಲದ್ಗೃಹೋಽಶ್ಲಿಷ್ಟಗೃಹಂ ವಿಚ್ಛಿದ್ಯ ರಕ್ಷ್ಯತೇ ।
ತಥಾ ಸದೋಷಪ್ರಕೃತಿ ವಿಚ್ಛಿನ್ನೋಽಯಂ ನ ಶೋಚತಿ ॥

ಅನುವಾದ: ಹೇಗೆ ಉರಿಯುವ ಮನೆಗೆ ಸೇರಿದ ಬೇರೆ ಮನೆಯನ್ನು ಬೇರೆ ಮಾಡುವರೋ ಹಾಗೆಯೇ ದೋಷಪೂರ್ಣವಾದ ಪ್ರಕೃತಿಯಿಂದ ದೂರವಾದ ಪುರುಷನು ದುಃಖಕ್ಕೆ ಗುರಿಯಾಗನು.

ಭಾಷ್ಯ: *ವೈಶೇಷಿಕಾಣಾಮಿವ ಪಾರಮಾರ್ಥಿಕೋ ದುಃಖಯೋಗ ಇತಿ ಭ್ರಮೋ ಮಾಭೂದಿತ್ಯೇತದರ್ಥಂ ನಿತ್ಯೇತ್ಯಾದಿ ।*

ಅನುವಾದ: 'ನಿತ್ಯ' ಮುಂತಾದ ಶಬ್ದಗಳನ್ನು ಸೂತ್ರಕಾರನು 'ದುಃಖವು ಪುರುಷನಿಗೆ ಪಾರಮಾರ್ಥಿಕವಾಗಿ ಸಂಬಂಧಿಸಿದ್ದು' ಎಂಬ ವೈಶೇಷಿಕ ಭ್ರಮೆ ಬಾರದಿರಲಿ ಎಂದು ಪ್ರಯೋಗಿಸಿದ್ದಾನೆ.

ಭಾಷ್ಯ: *ಯಥಾ ಸ್ವಭಾವಶುದ್ಧಸ್ಯ ಸ್ಫಟಿಕಸ್ಯ ರಾಗಯೋಗೋ ನ ಜಪಾಯೋಗಂ ವಿನಾ ಘಟತೇ ತಥೈವ ನಿತ್ಯಶುದ್ಧ ಆದಿ ಸ್ವಭಾವಸ್ಯ ಪುರುಷಸ್ಯೋಪಾಧಿಸಂಯೋಗಂ ವಿನಾ ದುಃಖ ಸಂಯೋಗೋ ನ ಘಟತೇ ಸ್ವತೋ ದುಃಖಾದ್ಯಸಂಭವಾದಿತ್ಯರ್ಥಃ ।*

ಅನುವಾದ: ಹೇಗೆ ಸ್ವಾಭಾವಿಕವಾಗಿ ನಿರ್ಮಲವಾಗಿರುವ ಸ್ಫಟಿಕಕ್ಕೆ (ಕೆಂಪು) ದಾಸವಾಳದ ಸಂಪರ್ಕವಿಲ್ಲದೆ ಕೆಂಪುಬಣ್ಣ ಬರಲಾರದೋ ಹಾಗೆ ನಿತ್ಯ ಶುದ್ಧವೂ, ಬುದ್ಧವೂ ಮುಂತಾಗಿ ಆಗಿರುವ ಸ್ವಭಾವವುಳ್ಳ ಪುರುಷನಲ್ಲಿ ಉಪಾಧಿಯ ಸಂಬಂಧವಿಲ್ಲದೆ ದುಃಖಸಂಯೋಗವಾಗಲಾರದು, ಏಕೆಂದರೆ ದುಃಖಾದಿಗಳು ಪುರುಷನಿಗೆ ಸ್ವಾಭಾವಿಕವಲ್ಲ ಎಂದು ಸೂತ್ರಾರ್ಥ.

ವಿವರಣೆ: ಶುದ್ಧನಾದ ಪುರುಷ ಸ್ಫಟಿಕದಂತೆ ನಿರ್ಮಲ. ಬೇರೊಂದು ವಸ್ತುವಿನ ಸಂಯೋಗದಿಂದ ಅದರ ಗುಣ ಅವನಲ್ಲಿ ಪ್ರತಿಬಿಂಬಿತವಾಗುತ್ತದೆ.

ಭಾಷ್ಯ: *ತದುಕ್ತಂ ಸಾರೇ–*
ಯಥಾ ಹಿ ಕೇವಲೋ ರಕ್ತಃ ಸ್ಫಟಿಕೋ ಲಕ್ಷ್ಯತೇ ಜನೈಃ ।
ರಂಜಕಾದ್ಯುಪಧಾನೇನ ತದ್ವತ್ ಪರಮಪೂರುಷಃ ॥ (ಸೌ.ಪು. ॥ ೩೧ ॥

ಅನುವಾದ: ಹೇಗೆ ನಿರ್ಮಲವಾದ ಸ್ಫಟಿಕವು ಇತರ ವಸ್ತುವಿನ ಸಂಪರ್ಕದಿಂದ ಜನಗಳಿಗೆ ಕೆಂಪಾಗಿ ಕಾಣುವುದೋ ಹಾಗೆ (ಶುದ್ಧನಾದ) ಪರಮಪುರುಷನು (ದುಃಖಾದಿಗಳೊಡನೆ) ಇರುವಂತೆ ಕಾಣುವನು.

ವಿವರಣೆ: ಇದು ಸೌರಪುರಾಣದಿಂದ ತೆಗೆದುಕೊಂಡ ಶ್ಲೋಕ.

ಭಾಷ್ಯ: *ನಿತ್ಯತ್ವಂ ಕಾಲಾನವಚ್ಛಿನ್ನತ್ವಂ ಶುದ್ಧಾದಿ ಸ್ವಭಾವತ್ವಂಚ ನಿತ್ಯಶುದ್ಧತ್ವಾದಿಕಮ್ । ತತ್ರ ನಿತ್ಯಶುದ್ಧತ್ವಂ ಸದಾ ಪಾಪ–ಪುಣ್ಯಶೂನ್ಯತ್ವಮ್ । ನಿತ್ಯಬುದ್ಧತ್ವಂ ಅಲುಪ್ತಚಿದ್ರೂಪತ್ವಮ್ । ನಿತ್ಯಮುಕ್ತತ್ವಂ ಸದಾ ಪಾರಮಾರ್ಥಿಕದುಃಖಾಯುಕ್ತತ್ವಮ್ । ಪ್ರತಿಬಿಂಬರೂಪದುಃಖಯೋಗತ್ವ ಪಾರಮಾರ್ಥಿಕೋ ಬಂಧಃ ಇತಿ ಭಾವಃ ।*

ಅನುವಾದ: ನಿತ್ಯತ್ವವೆಂದರೆ ಕಾಲದಿಂದ ಬೇರ್ಪಡಿಸಲಾಗದ್ದು. ನಿತ್ಯಶುದ್ಧವೆಂದರೆ ನಿತ್ಯಶುದ್ಧಾದಿ ಸ್ವಭಾವದಿಂದ ಕೂಡಿದ್ದು. ನಿತ್ಯಶುದ್ಧತ್ವದಲ್ಲಿ ಪಾಪಪುಣ್ಯಗಳಿರಲಾರವು. ನಿತ್ಯ ಬುದ್ಧತ್ವವೆಂದರೆ ನಿತ್ಯ ಚಿದ್ರೂಪವನ್ನು ಕಳೆದುಕೊಳ್ಳದಿರುವುದು. ನಿತ್ಯಮುಕ್ತತ್ವವೆಂದರೆ ಯಾವಾಗಲೂ ಪಾರಮಾರ್ಥಿಕ ದುಃಖದಿಂದ ಸಂಬಂಧವಿಲ್ಲದಿರುವುದು. ಪ್ರತಿಬಿಂಬರೂಪದ ದುಃಖದ ಸಂಯೋಗದಿಂದ ಕೂಡಿರುವುದು ಪಾರಮಾರ್ಥಿಕ ಬಂಧ ಎಂದು ಅಭಿಪ್ರಾಯ.

ಭಾಷ್ಯ: *ಆತ್ಮನೋ ನಿತ್ಯಶುದ್ಧತ್ವಾದೌ ಚ ಶ್ರುತಿಃ ಅಯಮಾತ್ಮಾ ಸನ್ಮಾತ್ರೋ ನಿತ್ಯಃ ಶುದ್ಧೋ ಬುದ್ಧಃ ಸತ್ಯೋ ಮುಕ್ತೋ ನಿರಂಜನೋ ವಿಭವಃ (ನೃಸಿಂಹ ಉತ್ತರ ತಾಪಿನೀ ಉಪನಿಷತ್ ೨.೯.೯) ಇತ್ಯಾದಿಃ*

ಅನುವಾದ: ಆತ್ಮನು (ಪುರುಷನು) ನಿತ್ಯಶುದ್ಧನು ಮುಂತಾದುವುಗಳಲ್ಲಿ ಶ್ರುತಿಯು ಹೀಗೆ ಹೇಳಿದೆ– ಈ ಆತ್ಮನು ಸತ್ ಮಾತ್ರನು ನಿತ್ಯ, ಶುದ್ಧ, ಬುದ್ಧ, ಸತ್ಯ, ಮುಕ್ತ, ನಿರಂಜನ ಮತ್ತು ಸರ್ವವ್ಯಾಪಿ.

ಭಾಷ್ಯ: *ನನ್ವಸ್ಯ ಮನನಶಾಸ್ತ್ರತ್ವಾದತ್ರಾರ್ಥೇ ಯುಕ್ತಿರಪಿ ವಕ್ತವ್ಯೇತಿ ಚೇತ್, ಸತ್ಯಮ್– 'ನ ತದ್ಯೋಗಸ್ತದ್ಯೋಗಾದೃತೇ' (೧.೧೯) ಇತ್ಯನೇನ ನಿತ್ಯಶುದ್ಧತ್ವಾದೌ ಯುಕ್ತಿರಪ್ಯುಕ್ತೈವ । ತಥಾಹಿ –ಆತ್ಮನಿ ನಿತ್ಯತ್ವವಿಭುತ್ವಾದಿಕಂ ತಾವತ್ ನ್ಯಾಯಾದಿ ದರ್ಶನೇಷ್ವೇವ ಸಾಧಿತಮ್ । ತತ್ರ ನಿತ್ಯಸ್ಯ ವಿಭೋರಾತ್ಮನೋ ಯದ್ಯೋಗಂ ವಿನಾ ದುಃಖಾದ್ಯಖಿಲ–*

*ವಿಕಾರೈಃ ಯೋಗೋ ನ ಭವತಿ, ತಸ್ಯೈವಾಂತಃಕರಣಸ್ಯ–
ಸರ್ವಸಮ್ಮತಕಾರಣಸ್ಯ ತದುಪಾದಾನಕಾರಣತ್ವಮೇವ
ಯುಕ್ತಮ್, ಲಾಘವಾತ್। ಸರ್ವವಿಕಾರೇಷು ಅಂತಃ–
ಕರಣಸ್ಯೈವ ಅನ್ವಯವ್ಯತಿರೇಕಾಭ್ಯಾಂ ಚ; ನ ಪುನಃ
ಅಂತರ್ವಿಕಾರೇಷು ಮನಸೋ ನಿಮಿತ್ತತ್ವಮಾತ್ಮನಶ್ಚ
ಉಪಾದಾನತ್ವಂ ಯುಕ್ತಂ, ಕಾರಣದ್ವಯೇ ಗೌರವಾತ್ ।*

ಅನುವಾದ: 'ಇದು ಮನನಶಾಸ್ತ್ರವಾದ್ದರಿಂದ ಈ ವಿಷಯದಲ್ಲಿ ಯುಕ್ತಿಯನ್ನೂ ಹೇಳಬೇಕಲ್ಲವೆ?' (ಉತ್ತರ) ಅದು ಸರಿ. 'ಅದರ ಸಂಯೋಗವಿಲ್ಲದೆ ಬಂಧ ಸಿದ್ಧಿಸದು' ಎಂಬ ಸೂತ್ರದಂತೆ ನಿತ್ಯಶುದ್ಧಾದಿಗಳನ್ನುಳ್ಳ ಬಗ್ಗೆ ಯುಕ್ತಿಯನ್ನು ಹೇಳಿದ್ದಾಯಿತು. ಹಾಗೆಯೇ ಆತನು ನಿತ್ಯ ವಿಭು ಮುಂತಾದುವುಗಳನ್ನು ನ್ಯಾಯಾದಿ ದರ್ಶನಗಳಲ್ಲಿ ಸಾಧಿಸಲಾಗಿದೆ. ಅಲ್ಲಿ ನಿತ್ಯನಾದ, ಸರ್ವ ವ್ಯಾಪಿಯಾದ ಆತ್ಮನಿಗೆ ಸಂಯೋಗವಿಲ್ಲದೆ ದುಃಖವೇ ಮುಂತಾದ ವಿಕಾರಗಳಿಂದ ಸಂಯೋಗವಾಗದೋ ಆ ಸರ್ವಸಮ್ಮತವಾದ ಕಾರಣ ಎಂದರೆ ಅಂತಃಕರಣವೇ ಎಲ್ಲಾ ವಿಕಾರಗಳಿಗೂ ಉಪಾದಾನ ಕಾರಣ ಎಂದು ಭಾವಿಸುವುದು ಉಚಿತ, ಸರಳವಾಗಿರುವುದರಿಂದ. ಎಲ್ಲಾ ವಿಕಾರಗಳಲ್ಲಿಯೂ ಅನ್ವಯ ವ್ಯತಿರೇಕಗಳ ರೀತಿಯಲ್ಲಿ ಅಂತಃಕರಣವೇ ಬದಲಾಗುವುದು. ಮತ್ತು ಅಂತಃಕರಣಗಳ ವಿಕಾರಗಳಿಗೆ ಮನಸ್ಸೇ ನಿಮಿತ್ತ ಕಾರಣ ಮತ್ತು ಆತ್ಮವು ಉಪಾದಾನ ಕಾರಣ, ಹೀಗೆ ಎರಡು ಕಾರಣಗಳನ್ನು ಹೇಳುವುದು ಅಧಿಕವೆನಿಸುವುದು. ಇದು ಸರಿಯಲ್ಲ.

ವಿವರಣೆ: ಲಾಘವಾತ್ ಎಂದರೆ ಸುಲಭವಾಗಿ ಅರ್ಥಮಾಡಿಸುವ ಉಪಾಯ ಗೌರವಾತ್ ಎಂದರೆ ಅಗತ್ಯಕ್ಕಿಂತ ಹೆಚ್ಚಾಗಿ ಅರ್ಥ ಹೇಳುವುದು ಅನ್ವಯವ್ಯತಿರೇಕ ಗಳೆಂದರೆ ಯಾವುದಾದರೂ ವಸ್ತುವಿನೊಡನೆ ಇನ್ನೊಂದು ವಸ್ತುವು ಅದಿರುವಾಗ ಇದೂ ಇರುವುದು ಅಥವಾ ಅದಿಲ್ಲದಾಗ ಇದೂ ಇಲ್ಲದಿರುವುದು. ಉದಾಹರಣೆಗೆ ಧೂಮವಿರುವೆಡೆ ಅಗ್ನಿಯು ತಪ್ಪದೆ ಇರುವುದು. ಅಗ್ನಿಯಿಲ್ಲದಿದ್ದರೆ ಧೂಮವೂ ಇರದು. ಹಾಗೆಯೇ ಅಂತಃಕರಣವಿರುವೆಡೆಯೆಲ್ಲ ದುಃಖಾದಿಗಳು ಇರುವುವು; ಅದಿಲ್ಲದಿರುವಾಗ ಅವೂ ಇರಲಾರವು.

ಭಾಷ್ಯ: *ನನ್ವಹಂ ಸುಖೀ, ದುಃಖೀ, ಕರೋಮಿ ಇತ್ಯನುಭವಾದಾತ್ಮನೋ
ವಿಕಾರೋಪಾದಾನತ್ವಸಿದ್ಧಿಃ ।*

ಅನುವಾದ: ನಾನು ಸುಖಿ, ದುಃಖಿ, ಮಾಡುವೆ ಮುಂತಾದ ಅನುಭವದಿಂದ ಆತ್ಮನಲ್ಲಿಯೇ ವಿಕಾರಗಳಿಗೆ ಉಪಾದಾನ ಕಾರಣವಿರುವುದಲ್ಲವೆ?

ಭಾಷ್ಯ: *ಇತಿ ಚೇನ್ನ, ಅಹಂ ಗೌರಃ ಇತ್ಯಾದಿ ಭ್ರಮ ಶತ–
ಅಂತಃಪಾತಿತ್ವೇನ ಅಪ್ರಮಾಣಶಂಕಾಸ್ಕಂದಿತತಯಾ
ಉಕ್ತಪ್ರತ್ಯಕ್ಷಾಣಾಂ ಉಕ್ತತರ್ಕಾಮಗೃಹೀತಾನುಮಾನಾಪೇಕ್ಷಯಾ
ದುರ್ಬಲತ್ವಾತ್ ।*

ಅನುವಾದ: ಅದು ಹಾಗಲ್ಲ. 'ನಾನು ಬೆಳ್ಳಗಿದ್ದೇನೆ' ಮುಂತಾದ ನೂರಾರು ಭ್ರಮೆಗಳಲ್ಲಿ ಅಪ್ರಾಮಾಣ್ಯದ ಶಂಕೆಯು ಉಂಟಾಗುವುದರಿಂದ ಮೇಲೆ ಹೇಳಿದ ಪ್ರತ್ಯಕ್ಷವು ಉಕ್ತವಾದ ತರ್ಕದಿಂದ ಒಪ್ಪಿದ ಅನುಮಾನದ ಮುಂದೆ ದುರ್ಬಲವಾಗುವುದು.

ವಿವರಣೆ: ಆತ್ಮನಿಗೆ ಬಿಳಿಯಬಣ್ಣ ಹೇಗೆ ಬಂದೀತು ಎಂಬ ಅನುಮಾನ ಪ್ರಬಲವಾಗಿರುವಾಗ ನಾನು ಬೆಳ್ಳಗಿದ್ದೇನೆ ಎಂಬ ಭ್ರಮೆಯ ಕಾರಣ ಪ್ರತ್ಯಕ್ಷಕ್ಕೂ ಅಪ್ರಾಮಾಣ್ಯದ ಸಂದೇಹ ಬರುವುದು.

ಭಾಷ್ಯ: *ಅಸ್ಯ ಸೂತ್ರಸ್ಯೈವಾರ್ಥಃ ಕಾರಿಕಯಾಉಕ್ತಃ*
ತಸ್ಮಾತ್ತತ್ಸಂಯೋಗಾತ್ ಅಚೇತನಂ ಚೇತನವದಿವ ಲಿಂಗಮ್ ।
ಗುಣಕರ್ತೃತ್ವೇ ಚ ತಥಾ ಕರ್ತೇವ ಭವತ್ಯುದಾಸೀನಃ ॥೭೦ ॥

ಅನುವಾದ: ಆದ್ದರಿಂದ ಪುರುಷನ ಸಂಯೋಗದಿಂದ ಅಚೇತನವಾದ ಲಿಂಗವೂ ಸಹ ಚೇತನದಂತೆ ಕಾಣುತ್ತದೆ. ಗುಣಗಳೇ ಕಾರ್ಯದಲ್ಲಿ ತೊಡಗಿದರೂ ಉದಾಸೀನನಾದ ಪುರುಷನೇ ಕರ್ತೃವಂತೆ ಕಾಣುತ್ತಾನೆ ಎಂದು ಈ ಸೂತ್ರದ ಆರ್ತವನ್ನು ಕಾರಿಕೆಯು ಹೇಳುತ್ತದೆ.

ವಿವರಣೆ: 'ತತ್ಸಂಯೋಗಾತ್' ಎಂದರೆ ಪುರುಷನ ಸಾಮೀಪ್ಯದಿಂದ, ಲಿಂಗಮ್ ಎಂದರೆ ಲಿಂಗಶರೀರವು, (ಮಹತ್ತು, ಅಹಂಕಾರ, ಮನಸ್ಸು, ತನ್ಮಾತ್ರಗಳು), ಗುಣಗಳು– ಸತ್ತ್ವ, ರಜಸ್, ತಮಸ್‌ಗಳು ಪ್ರಕೃತಿಯಲ್ಲಿ ಬದಲಾವಣೆಗಳನ್ನುಂಟು ಮಾಡುವ ಗುಣಗಳು, 'ಉದಾಸೀನ' ಎಂದರೆ 'ಕರ್ತೃವಾಗದಿದ್ದರೂ'

ಭಾಷ್ಯ: *ಕರ್ತೃತ್ವಮತ್ರ ದುಃಖಿತ್ವಾದಿ ಸಕಲವಿಕಾರೋಪಲಕ್ಷಣಮ್ ।*
ತಥಾ ಯೋಗಸೂತ್ರೇಽಪಿ ಅಸ್ಯ ಸೂತ್ರಸ್ಯ ಏವ ಅರ್ಥಃ
ಉಕ್ತಃ ದ್ರಷ್ಟೃದೃಶ್ಯಯೋಃ ಸಂಯೋಗೋ ಹೇಯಹೇತುಃ ಇತಿ ।
ಗೀತಾಯಾಂ ಚ ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿ ಜಾನ್
ಗುಣಾನ್ । (೧೩–೨೧)

ಅನುವಾದ: ಇಲ್ಲಿ ಕರ್ತೃತ್ವವೆಂದರೆ ದುಃಖಿತ್ವವೇ ಮೊದಲಾದ ಎಲ್ಲಾ ವಿಕಾರಗಳನ್ನು ಸೂಚಿಸುವುದು. ಯೋಗಸೂತ್ರದಲ್ಲಿಯೂ ಈ ಸೂತ್ರದ ಅರ್ಥವನ್ನೇ ತಿಳಿಸಲಾಗಿದೆ. ದ್ರಷ್ಟೃ ಮತ್ತು ದೃಶ್ಯ ಎರಡೂ ಸಂಯೋಗ ಹೊಂದಿದಾಗ ಆ ಸ್ಥಿತಿ ತ್ಯಜಿಸಲು ಯೋಗ್ಯವಾದುದು. 'ಪುರುಷನು ಪ್ರಕೃತಿಯಲ್ಲಿ ಸೇರಿ ಪ್ರಕೃತಿಯಿಂದ ಉಂಟಾಗುವ ಗುಣಗಳನ್ನು ಅನುಭವಿಸುವನು.

ವಿವರಣೆ: ಪುರುಷನು ಬುದ್ಧಿಯಲ್ಲಿ ತಾದಾತ್ಮ್ಯ ಹೊಂದಿ ಅದರಲ್ಲಾಗುವ ಸುಖ–ದುಃಖಾದಿಗಳನ್ನು ಅನುಭವಿಸುತ್ತಾನೆ. ಪುರುಷ ಕೇವಲ ದ್ರಷ್ಟಾ ನೋಡುವವನು. ಅವನಿಗೂ ಬುದ್ಧಿಗೂ ಸಂಯೋಗವಾಗುವುದು ದುಃಖಾದಿಗಳನ್ನು ಅನುಭವಿಸುವುದಕ್ಕೆ ಅವಕಾಶವಾಗುವುದು.

ಭಾಷ್ಯ: *ಪ್ರಕೃತಿಸ್ಥಃ ಪ್ರಕೃತೇ ಸಂಯುಕ್ತಃ ತಥಾ ಚ ಶ್ರುತಾವಪಿ–*
ಆತ್ಮೇಂದ್ರಿಯ ಮನೋ ಯುಕ್ತಂ ಭೋಕ್ತೇತ್ಯಾಹುರ್ಮನೀಷಣಃ ।
(ಕ.ಉ. ೧.೩.೪)

ಅನುವಾದ: ಪ್ರಕೃತಿಸ್ಥಃ ಎಂದರೆ ಪ್ರಕೃತಿಯೊಡನೆ ಸಂಯೋಗ ಹೊಂದಿ ಇದೇ ರೀತಿಯಲ್ಲಿ ಶ್ರುತಿಯಲ್ಲಿ ಹೇಳಿದೆ–

'ಆತ್ಮ, ಇಂದ್ರಿಯ, ಮನಸ್ಸು ಇವುಗಳಿಂದ ಕೂಡಿದ (ಜೀವಾತ್ಮನನ್ನು) ಜ್ಞಾನಿಗಳು ಭೋಕ್ತಾ ಎಂದು ಹೇಳುವರು.

ಭಾಷ್ಯ: *ನ ಚ ಕಾಲಾದಿವದೇವ ಪ್ರಕೃತಿಸಂಯೋಗೋಽಪಿ*
ಮುಕ್ತಾಮುಕ್ತಪುರುಷಸಾಧಾರಣತಯಾ ಕಥಂ ಬಂಧಹೇತುರಿತಿ ವಾಚ್ಯಮ್।

ಅನುವಾದ: ಕಾಲಾದಿಗಳಂತೆ ಪ್ರಕೃತಿಯ ಸಂಯೋಗವೂ ಮುಕ್ತಾಮುಕ್ತ ಎರಡೂ ಬಗೆಯ ಪುರುಷರಿಗೆ ಹೇಗೆ ಬಂಧವುಂಟಾದೀತು' ಈ ಬಗೆಯ ಸಂದೇಹ ಸಾಧ್ಯವಿಲ್ಲ.

ಭಾಷ್ಯ: *ಜನ್ಮಾಽಪರನಾಮ್ನಃ ಸ್ವಸ್ವಬುದ್ಧಿಭಾವಾಪನ್ನಪ್ರಕೃತಿಸಂಯೋಗ*
ವಿಶೇಷಸ್ಯ ಏವ ಅತ್ರ ಸಂಯೋಗಶಬ್ದಾರ್ಥತ್ವಾತ್
ಯೋಗಭಾಷ್ಯೇ ವ್ಯಾಸೈಃ ತಥಾ ವ್ಯಾಖ್ಯಾತತ್ವಾತ್,
ಬುದ್ಧಿವೃತ್ತ್ಯುಪಾಧಿನಾ ಏವ ದುಃಖಯೋಗಾಚ್ಚ ।
ವೈಶೇಷಿಕಾದಿವದೇವ ಭೋಗಜನಕತಾವಚ್ಛೇದಕತ್ವೇನ
ಅಂತಃಕರಣಸಂಯೋಗೇ ವೈಜಾತ್ಯಮಪಿ ಅಸ್ಮಾಭಿರಪೀಷ್ಟಮ್ ।
ಅತೋ ನ ಸುಷುಪ್ತ್ಯಾದೌ ಬಂಧಪ್ರಸಂಗಃ । ಸ್ವತ್ವಂ ಚ
ಸ್ವಸ್ವಭುಕ್ತವೃತ್ತಿವಾಸನಾವತ್ತ್ವಮ್ । ಯತ್ಕಿಂಚಿತ್
ವೃತ್ತಿತತ್ಸಂಸ್ಕಾರಪ್ರವಾಹೋಽಪಿ ಅನಾದಿಃ ಅತಃ ಸ್ವಸ್ವಾಮಿಭಾವವ್ಯವಸ್ಥಿತಿಃ ।

ಅನುವಾದ: ಇಲ್ಲಿ ಸಂಯೋಗ ಶಬ್ದವನ್ನು ತಮ್ಮ ತಮ್ಮ ಬುದ್ಧಿಯ ರೂಪದಲ್ಲಿ ತೋರುವ ಪ್ರಕೃತಿಯ ವಿಶೇಷ ಸಂಯೋಗ ಎಂಬ ಅರ್ಥದಲ್ಲಿ ಬಳಸಲಾಗಿದೆ ಎಂದರೆ ಈ ಸಂಯೋಗವನ್ನು 'ಜನ್ಮ' ಎಂಬ ಅರ್ಥದಲ್ಲಿ ಬಳಸಲಾಗಿದೆ. ಏಕೆಂದರೆ ವ್ಯಾಸಮುನಿಗಳು ಆ ರೀತಿಯಾಗಿ ವ್ಯಾಖ್ಯಾನ ಮಾಡಿದ್ದಾರೆ. ಪುರುಷನಿಗೆ ಈ ಬುದ್ಧಿವೃತ್ತಿ ಎಂಬ ಉಪಾಧಿಯಿಂದಲೇ ದುಃಖದ ಸಂಯೋಗವಾಗುತ್ತದೆ. ವೈಶೇಷಿಕತೆ ಮೊದಲಾದವರ ಅಭಿಪ್ರಾಯವಾದ, ಭೋಗವನ್ನುಂಟು ಮಾಡುವ ಧರ್ಮದಿಂದ ಕೂಡಿದ ಅಂತಃಕರಣ ಸಂಯೋಗದಲ್ಲಿ ಯಾವ ಭೇದವಿರುವುದೊ ಅದನ್ನು ನಾವೂ ಸಹ ಒಪ್ಪುವೆವು. ಆದ್ದರಿಂದ ಸುಷುಪ್ತಿ ಮೊದಲಾದ ಸಂದರ್ಭಗಳಲ್ಲಿ ಬಂಧವುಂಟಾಗದು. ಸ್ವತ್ವ ಎಂದರೆ ಬುದ್ಧಿಯು ತಾನು ಅನುಭವಿಸಿದ ವಾಸನಾದಂತೆ ಯಾವ ಯಾವ ವೃತ್ತಿಗಳಿರುವುವೋ ಆ ಸಂಸ್ಕಾರ ಪ್ರವಾಹವೂ ಅನಾದಿಯಾದುದು, ಆದ್ದರಿಂದಲೇ 'ತನ್ನ ಮತ್ತು ತನ್ನ ಸ್ವಾಮಿ' ಎಂಬ ಭಾವವಿರುತ್ತದೆ.

ವಿವರಣೆ: ಬುದ್ಧಿ ವೃತ್ತಿ ಎಂದರೆ ಬುದ್ಧಿ ನಡೆದುಕೊಳ್ಳುವ ರೀತಿ. ವಾಸನಾ ಎಂದರೆ (ಸ್ಮೃತಿ ಹೇತುಃ ಸಂಸ್ಕಾರ ವಿಶೇಷಃ) ನಡೆದುಕೊಳ್ಳುವ ರೀತಿಗೆ ಪ್ರೇರಕವಾದ ಸಂಸ್ಕಾರ ಸ್ವಸ್ವಾಮಿಭಾವ – ಎಂದರೆ ಪುರುಷನಿಗೂ ಮಹತ್ತಿಗೂ ಇರುವ ಸಂಬಂಧ ಒಡೆಯನಿಗೂ ಭೃತ್ಯನಿಗೂ ಇರುವ ಸಂಬಂಧದಂತೆ.

ಭಾಷ್ಯ: *ಕಶ್ಚಿತ್ತು ಪ್ರಕೃತಿಪುರುಷಯೋಃ ಸಂಯೋಗಾಂಗೀಕಾರೇ*
ಪುರುಷಸ್ಯ ಪರಿಣಾಮಸಂಗೌ ಪ್ರಸಜ್ಯೇಯಾತಾಮ್ ।
ಅತಃ ಅತ್ರ ಅವಿವೇಕ ಏವ ಯೋಗಶಬ್ದಾರ್ಥಃ
ನ ತು ಸಂಯೋಗಃ ಇತಿ ।

ಅನುವಾದ: ಕೆಲವರು 'ಪ್ರಕೃತಿ ಪುರುಷರ ಸಂಯೋಗವನ್ನು ಒಪ್ಪಿದರೆ ಪುರುಷನಲ್ಲಿ ಪರಿಣಾಮವೂ ಸಂಗವೂ ಉಂಟಾಗುತ್ತವೆ. ಆದ್ದರಿಂದ ಇಲ್ಲಿ ಅವಿವೇಕವೇ ಯೋಗ ಶಬ್ದದ ಅರ್ಥ. ಸಂಯೋಗವಲ್ಲ' ಎನ್ನುತ್ತಾರೆ.

ವಿವರಣೆ: ಇದು ಪೂರ್ವ ಪಕ್ಷ (ಆಕ್ಷೇಪ). ಪರಿಣಾಮ ಎಂದರೆ (ಅವಸ್ಥಿತಸ್ಯ ದ್ರವ್ಯಸ್ಯ ಪೂರ್ವಧರ್ಮನಿವೃತ್ತೌ ಧರ್ಮಾಂತರೋತ್ಪತ್ತಿಃ) ಯಾವುದಾದರೂ ದ್ರವ್ಯದ ಮೊದಲ ಗುಣ ಬದಲಾಗಿ ಬೇರೊಂದು ಗುಣ ಉಂಟಾಗುವುದು ಸಂಗವೆಂದರೆ ಒಟ್ಟಿಗೆ ಸೇರುವುದು.

ಭಾಷ್ಯ: *ತನ್ನ । 'ತದ್ಯೋಗೋಽಪ್ಯವಿವೇಕಾತ್' (ಸೂತ್ರ ೧.೫೫)*
ಸೂತ್ರೇಣ ಅವಿವೇಕಸ್ಯ ಯೋಗಹೇತುತಾಯಾ ಏವ
ಸೂತ್ರಕಾರೇಣ ವಕ್ಷ್ಯಮಾಣತ್ವಾತ್ ।
ಸ್ವಸ್ವಾಮಿಶಕ್ತ್ಯೋಃ ಸ್ವರೂಪೋಪಲಬ್ಧಿಹೇತುಃ ಸಂಯೋಗಃ ।
'ತಸ್ಯ ಹೇತುರವಿದ್ಯಾ' (ದ್ವಿ.ಪಾ. ೨೩–೨೪) ಸೂತ್ರಾಭ್ಯಾಂ
ಪಾತಂಜಲೀಽಪಿ ಸಂಯೋಗಹೇತುತ್ವಸ್ಯ ಏವ ಅವಿದ್ಯಾಯಾಃ ಉಕ್ತತ್ವಾಚ್ಚ ।

ಅನುವಾದ: ಅದು ಸರಿಯಲ್ಲ. ಸೂತ್ರಕಾರರು 'ಅವಿವೇಕವೇ ಸಂಯೋಗಕ್ಕೆ ಕಾರಣ' ಎಂದು ಹೇಳಿದ್ದಾನೆ. ಈ ಸೂತ್ರದ ಮುಖಾಂತರ ಅವಿವೇಕವೇ ಸಂಯೋಗಕ್ಕೆ ಕಾರಣ ಎಂದು ಮುಂದೆ ಹೇಳಿರುವುದರಿಂದ (ನಿಮ್ಮ ಆಕ್ಷೇಪ ಸರಿಯಲ್ಲ). 'ಸ್ವ–ಸ್ವಾಮಿಶಕ್ತಿಗಳಲ್ಲಿ ತನ್ನ ಸ್ವರೂಪವನ್ನು ಪಡೆಯುವ ಕಾರಣವೇ ಸಂಯೋಗ', 'ಅದಕ್ಕೆ ಕಾರಣವೇ ಅವಿದ್ಯೆ' ಪತಂಜಲಿಯ ಗ್ರಂಥದಲ್ಲಿಯೂ ಸಂಯೋಗಕ್ಕೆ ಅವಿದ್ಯೆಯೇ ಕಾರಣ ಎಂದು ಹೇಳಿರುವುದರಿಂದ.

ವಿವರಣೆ: 'ಸ್ವಸ್ವಾಮಿಶಕ್ತ್ಯೋಃ' ಎಂದರೆ ತನ್ನ (ಪ್ರಕೃತಿಯ) ಮತ್ತು ಸ್ವಾಮಿ (ಪುರುಷನ)ಯ ಶಕ್ತಿಗಳ; ಪ್ರಕೃತಿ ದೃಶ್ಯ, ಪುರುಷ ದ್ರಷ್ಟಾ, ಚೇತನನಾದ ಪುರುಷನು ತನ್ನ ಸ್ವರೂಪವನ್ನು ತಿಳಿಯಬಲ್ಲ. ಆದರೆ ಸಂಯೋಗವಾದಾಗ ತನ್ನ ಮತ್ತು ಪ್ರಕೃತಿಯ ಎರಡೂ ರೂಪಗಳನ್ನು ಕಾಣತೊಡಗುತ್ತಾನೆ.

ಭಾಷ್ಯ: *ಕಿಂಚ ವಿವೇಕಾಭಾವರೂಪಸ್ಯ ಅವಿವೇಕಸ್ಯ –ಸಂಯೋಗತ್ವೇ ಪ್ರಲಯಾದೌ ಅಪಿ ಪ್ರಕೃತಿ ಪುರುಷಸಂಯೋಗಸತ್ತ್ವೇನ ಭೋಗಾದಿ ಆಪತ್ತಿಃ, ಮಿಥ್ಯಾಜ್ಞಾನರೂಪಸ್ಯ ಅವಿವೇಕಸ್ಯ ಚ ಸಂಯೋಗತ್ವೇ ಆತ್ಮಾಶ್ರಯಃ, ಪುಂಪ್ರಕೃತಿಯೋಗಸ್ಯ ಅಜ್ಞಾನಾದಿ ಹೇತುತ್ವಾತ್ ಇತಿ । ತಸ್ಮಾದವಿವೇಕಾತಿರಿಕ್ತೋ ಯೋಗೋ ವಕ್ತವ್ಯಃ । ಸ ಚ ಸಂಯೋಗ ಏವ, ಅನ್ಯಸ್ಯ ಅಪ್ರಾಮಾಣಿಕತ್ವಾತ್ । ಸಂಯೋಗಶ್ಚ ನ ಪರಿಣಾಮಃ ಸಾಮಾನ್ಯಗುಣಾವತಿರಿಕ್ತಧರ್ಮೋ–ತ್ಪತ್ತ್ಯೈವ ಪರಿಣಾಮಿತ್ವವ್ಯವಹಾರಾತ್ । ಅನ್ಯಥಾ ಕೂಟಸ್ಥಸ್ಯ ಸರ್ವಗತತ್ವರೂಪವಿಭುತ್ವಾನುಪಪತ್ತೇಃ । ನಾಪಿ ಸಂಯೋಗ–ಮಾತ್ರಂ ಸಂಗಃ, ಪರಿಣಾಮಹೇತುಸಂಯೋಗಸ್ಯೈವ ಸಂಗ–ಶಬ್ದಾರ್ಥತಾಯಾಃ ವಕ್ತವ್ಯತ್ವಾದಿತಿ ।*

ಅನುವಾದ: ಅಲ್ಲದೆ ವಿವೇಕದ ಅಭಾವರೂಪವಾದ ಅವಿವೇಕದ ಸಂಯೋಗ ಉಂಟಾದಾಗ ಪ್ರಲಯಾದಿಗಳಲ್ಲಿಯೂ ಪ್ರಕೃತಿ ಪುರುಷರ ಸಂಯೋಗದ ಕಾರಣ ಭೋಗಾದಿಗಳು ಉಂಟಾಗಬೇಕಾಗುತ್ತದೆ ಮತ್ತು ಅವಿವೇಕವು ಮಿಥ್ಯಾಜ್ಞಾನರೂಪ ವೆಂದು ಭಾವಿಸಿ ಅದು ಸಂಯೋಗವಾದಾಗ 'ಆತ್ಮಾಶ್ರಯ' ದೋಷ ಉಂಟಾಗುವುದು; ಏಕೆಂದರೆ ಪುರುಷ–ಪ್ರಕೃತಿ ಸಂಯೋಗವು ಅಜ್ಞಾನಾದಿಗಳಿಗೆ ಕಾರಣವಾಗುವುದು. ಆದ್ದರಿಂದ ಯೋಗವು ಅವಿವೇಕಕ್ಕಿಂತ ಭಿನ್ನವೆಂದು ಹೇಳಬೇಕಾಗುವುದು. ಅದೂ ಸಹ ಸಂಯೋಗವೇ ಏಕೆಂದರೆ ಬೇರೊಂದು ಅರ್ಥವನ್ನು ಮಾಡಲು ಪ್ರಮಾಣವಿಲ್ಲ. ಆಗ ಸಂಯೋಗವನ್ನು ಪರಿಣಾಮವೆಂದು ಭಾವಿಸಲು ಸಾಧ್ಯವಿಲ್ಲ. ಏಕೆಂದರೆ ಸಾಮಾನ್ಯ ಗುಣಗಳಿಂದ ಭಿನ್ನವಾದ ಗುಣಗಳನ್ನು ಹೊಂದುವುದೇ ಪರಿಣಾಮವೆಂದು ಹೇಳುತ್ತಾರೆ. ಹಾಗಿಲ್ಲದಿದ್ದರೆ ಕೂಟಸ್ಥ (ಪುರುಷ)ನ ಎಲ್ಲೆಡೆಯಲ್ಲಿಯೂ ಇರುವ ವಿಭುತ್ವ ಸಿದ್ಧವಾಗದು. ಸಂಗವೆಂದರೆ ಸಂಯೋಗವಷ್ಟೇ ಅಲ್ಲ. ಪರಿಣಾಮಕ್ಕೆ ಕಾರಣಭೂತವಾದ ಸಂಯೋಗವೆಂದರ್ಥ.

ವಿವರಣೆ: ಭಾಷ್ಯದಲ್ಲಿ ಸಂಯೋಗ ಮತ್ತು ಸಂಗಗಳ ವ್ಯತ್ಯಾಸವನ್ನು ಹೇಳಲಾಗಿದೆ. 'ಪರಿಣಾಮ' ಎಂಬುದರ ಅರ್ಥವನ್ನು 'ಸಾಮಾನ್ಯ ಗುಣಾತಿರಿಕ್ತಧರ್ಮೋತ್ಪತ್ತ್ಯಾ ಏವ ಪರಿಣಾಮಿತ್ವಂ' (ಪದಾರ್ಥವು) ಸಾಮಾನ್ಯ ಗುಣದ ಬದಲಾಗಿ ಬೇರೆ ಗುಣವನ್ನು ಪಡೆಯುವುದೇ ಪರಿಣಾಮಿತ್ವ' ಎಂದು ವಿವರಿಸಲಾಗಿದೆ. ಸಂಯೋಗವು ಪರಿಣಾಮವಲ್ಲ (ಸಂಯೋಗಶ್ಚ ನ ಪರಿಣಾಮಃ) ಎಂಬುದು ಗಮನಾರ್ಹ.

ಭಾಷ್ಯ: *ನನು ತಥಾಪಿ ಕಥಂ ನಿತ್ಯಯೋಃ ಪ್ರಕೃತಿ ಪುರುಷಯೋಃ ಮಹದಾದಿಹೇತುಃ ಅನಿತ್ಯಃ ಸಂಯೋಗಃ ಘಟತೇ?*

ಅನುವಾದ: (ಆಕ್ಷೇಪ) ಹಾಗಿದ್ದರೂ ಪ್ರಕೃತಿ ಪುರುಷಗಳು ನಿತ್ಯ ಪದಾರ್ಥಗಳಾಗಿವೆ. ಅವುಗಳಲ್ಲಿ ಮಹತ್ತೇ ಮುಂತಾದುವುಗಳ ಅನಿತ್ಯಸಂಯೋಗವು ಹೇಗೆ ಸಂಭವಿಸುವುದು?

ಭಾಷ್ಯ: *ಇತಿ ಚೇನ್ನ । ಪ್ರಕೃತೇಃ ಪರಿಚ್ಛಿನ್ನಾಪರಿಚ್ಛಿನ್ನತ್ರಿವಿಧ–
ಗುಣಸಮುದಾಯರೂಪತಯಾ ಪರಿಚ್ಛಿನ್ನಗುಣಾವ–
ಚ್ಛೇದೇನ ಪುರುಷಸಂಯೋಗೋತ್ಪತ್ತೇಃ ಸಂಭವಾತ್ ।
ಶ್ರುತಿಸ್ಮೃತಿಸಿದ್ಧತ್ವಾತ್ ಪ್ರಕೃತಿಸಂಯೋಗಕ್ಷೋಭಯೋರಿತಿ ।
ಏತಚ್ಚ ಯೋಗವಾರ್ತಿಕೇ (೨.೧೩–೨೦) ಪ್ರಪಂಚಿತಂ ಅಸ್ಮಾಭಿಃ ।*

ಅನುವಾದ: ಅದು ಸರಿಯಲ್ಲ. ಪ್ರಕೃತಿಯು ನಿರ್ದಿಷ್ಟವಾದ ಅಥವಾ ಅನಿರ್ದಿಷ್ಟವಾದ ಮೂರು ಗುಣಗಳ ಸಮೂಹವನ್ನುಳ್ಳ ರೂಪ ಹೊಂದಿರುವುದರಿಂದ ನಿರ್ದಿಷ್ಟವಾದ ಗುಣದಿಂದ ಮಾತ್ರ ಕೂಡಿದ್ದು ಪುರುಷನ ಸಂಯೋಗವನ್ನು ಪಡೆಯುವ ಸಂಭವ ವಿರುತ್ತದೆ. ಪ್ರಕೃತಿಯ ಸಂಯೋಗ ಮತ್ತು ಕ್ಷೋಭಗಳು ಶ್ರುತಿ ಸ್ಮೃತಿಗಳಲ್ಲಿ ಪ್ರಮಾಣಿತ ವಾಗಿರುತ್ತದೆ. ನಾವು ಈ ವಿಷಯವನ್ನು ಯೋಗವಾರ್ತಿಕದಲ್ಲಿ ವಿವರಿಸಿದ್ದೇವೆ.

ಭಾಷ್ಯ: *ಅಪರಸ್ತು ಭೋಗ್ಯ ಭೋಕ್ತೃಯೋಗ್ಯತೈವಾನಯೋಃ
ಸಂಯೋಗ ಇತ್ಯಾಹ ।*

ಅನುವಾದ: ಬೇರೊಬ್ಬರು (ಆಕ್ಷೇಪ) ಹೇಳಿದ್ದಾರೆ, 'ಇವರಿಬ್ಬರ (ಪ್ರಕೃತಿ–ಪುರುಷರ) ಸಂಯೋಗವು ಭೋಗ್ಯ–ಭೋಕ್ತೃ ಯೋಗ್ಯತೆಗಳಂತೆ ತಿಳಿಯಬೇಕು.

ಭಾಷ್ಯ: *ತದಪಿ ನ । ಯೋಗ್ಯತಾಯಾ ನಿತ್ಯತ್ವೇಜ್ಞಾನನಿವರ್ತ್ಯತ್ವಾನುಪಪತ್ತೇಽ ।
ಅನಿತ್ಯತ್ವೇ ಅಮಪರಾದ್ಧಂ ಸಂಯೋಗೇನ, ಪರಿಣಾಮಿತ್ವಾಪತ್ತೇಃ
ಸಮಾನತ್ವಾತ್ । ಭೋಗ್ಯ–ಭೋಕ್ತೃ ಯೋಗ್ಯತಾಯಾಃ
ಸಂಯೋಗರೂಪತ್ವಸ್ಯ ಸೂತ್ರಾದಿಷ್ವನುಕ್ತತ್ವೇನ ಅಪ್ರಾಮಾ–
ಣಿಕತ್ವಾಚ್ಚ ಇತಿ । ತಸ್ಮಾತ್ ಸಂಯೋಗ ವಿಶೇಷ ಏವಾತ್ರ
ಬಂಧಾಖ್ಯಹೇಯ ಹೇತುತಯಾ ಸೂತ್ರಕಾರಾಭಿಪ್ರೇತ ಇತಿ
ಸ್ವಯಂ ಬಂಧಹೇತುರವಧಾರಿತಃ ।*

ಅನುವಾದ: ಅದೂ ಸರಿಯಲ್ಲ. ಯೋಗ್ಯತೆಯು ನಿತ್ಯವೆನ್ನುವ ಪಕ್ಷದಲ್ಲಿ ಜ್ಞಾನದಿಂದ ಅದರ ನಿವೃತ್ತಿಯಾಗಲಾರದು. ಅನಿತ್ಯವಾದಲ್ಲಿ ಸಂಯೋಗವು ಏನು ಅಪರಾಧ ಮಾಡಿದೆ? ಪರಿಣಾಮಿತ್ವ ಉಂಟಾಗುವುದು ಎನ್ನುವುದಾದರೆ ಎರಡೂ ಪರಿಣಾಮಗಳು ಒಂದೇ ಆಗುವುವು. ಭೋಗ್ಯ–ಭೋಕ್ತೃ ಯೋಗ್ಯತೆಯನ್ನು ಸಂಯೋಗ ರೂಪವೆಂದು ಯಾವುದೇ ಸೂತ್ರದಲ್ಲಿ ಹೇಳಿಲ್ಲ. ಆದ್ದರಿಂದ ಅದಕ್ಕೆ ಪ್ರಮಾಣವಿಲ್ಲ. ಆದ್ದರಿಂದ ಸಂಯೋಗ ವಿಶೇಷವೇ ಬಾಧವೆಂಬ ನಿವಾರಿಸಬೇಕಾದ ಕಾರಣದಿಂದ ಸೂತ್ರಕಾರನ ಅಭಿಪ್ರಾಯವೇ ಬಂಧಕ್ಕೆ ಕಾರಣವೆಂದು ನಿರ್ಧರಿಸಿದ್ದಾನೆ.

ವಿವರಣೆ: ಭೋಗ್ಯ ಎಂದರೆ ಅನುಭವಿಸಬೇಕಾದ ಪದಾರ್ಥ (ಪ್ರಕೃತಿ); ಭೋಕ್ತಾ– ಎಂದರೆ ಅನುಭವಿಸುವವನು (ಪುರುಷ); ಯೋಗ್ಯತಾ – (ಏಕ ಪದಾರ್ಥೇ ಅಪರ ಪದಾರ್ಥ ಪ್ರಕೃತ ಸಂಸರ್ಗವತ್ವಮ್). ಒಂದು ಪದಾರ್ಥವು ಮತ್ತೊಂದರೊಡನೆ ಸೇರಬಲ್ಲ ಸಾಮರ್ಥ್ಯ ಹೇಯಹೇತು ಎಂದರೆ ನಿವಾರಣೆಗೆ ಕಾರಣವಾದದ್ದು

ಭಾಷ್ಯ: *ಇದಾನೀಂ ನಾಸ್ತಿಕಾಭಿಪ್ರೇತಾ ಅಪಿ ಬಂಧಹೇತವೋ ನಿರಾಕರ್ತವ್ಯಾಃ ।*

ಅನುವಾದ: ಇನ್ನು ನಾಸ್ತಿಕರು ಅಭಿಪ್ರಾಯಪಟ್ಟಿರುವ ಬಂಧದ ಕಾರಣವನ್ನು ನಿರಾಕರಿಸಬೇಕಾಗಿದೆ.

ಭಾಷ್ಯ: *ತತ್ರ, 'ಷಡಭಿಜ್ಞೋ ದಶಬಲೋಽದ್ವಯ–*
ವಾದೀ ವಿನಾಯಕಃ (ಅಮರಕೋಶ ೧.೧.೧೪)' ಇತಿ
ಅನುಶಾಸನಾದಿಸಿದ್ಧಾಃ ಕ್ಷಣಿಕವಿಜ್ಞಾನಾತ್ಮವಾದಿನಃ ಬೌದ್ಧ–
ಪ್ರಭೇದಾಃ ಏವಮಾಹುಃ ನಾಸ್ತಿ ಪ್ರಕೃತ್ಯಾದಿ ಬಾಹ್ಯಂ
ವಸ್ತ್ವನ್ಯದ್ಯೇನ ತತ್ಸಂಯೋಗಾತ್ ಔಪಾಧಿಕಃ ತಾತ್ತ್ವಿಕಃ
ವಾ ಬಂಧಃ ಸ್ಯಾತ್ । ಕಿಂತು ಕ್ಷಣಿಕವಿಜ್ಞಾನ ಸಂತಾನಮಾತ್ರಂ
ಅದ್ವಿತೀಯಂ ತತ್ತ್ವಮ್, ಅನ್ಯತ್ಸರ್ವಂ ಸಾಂವೃತಿಕಂ ಸಂವೃತಿಶ್ಚ
ಅವಿದ್ಯಾ ಮಿಥ್ಯಾಜ್ಞಾನಾಖ್ಯಾ ತತ ಏವ ಬಂಧ ಇತಿ ।

ಅನುವಾದ: 'ಯಾರು ಆರು ಅದ್ವಯವಾದಿಯೋ, ಹತ್ತುಬಲವುಳ್ಳವನೋ, ಸಿದ್ಧಿಗಳನ್ನು ಬಲ್ಲನೋ ಅವನನ್ನು ಬುದ್ಧನೆನ್ನುವರು' ಎಂದು 'ಶಬ್ದಾನುಶಾಸನ'ದಲ್ಲಿ ಹೇಳಿರುವಂತೆ ಕ್ಷಣಕ ವಿಜ್ಞಾನವಾದಿಗಳಾದ ಬೌದ್ಧರು–ಪ್ರಕೃತಿಯೇ ಮೊದಲಾದ ಬಾಹ್ಯವಸ್ತುಗಳಿಲ್ಲ. ಆದ್ದರಿಂದ ಪ್ರಕೃತಿಯ ಸಂಯೋಗದಿಂದ ಔಪಾಧಿಕವಾಗಲಿ ತಾತ್ತ್ವಿಕವಾಗಲಿ ಬಂಧವುಂಟಾಗುವುದಿಲ್ಲ. ಆದರೆ ಕ್ಷಣಿಕವಾದ ವಿಜ್ಞಾನದ ಸರಣಿಯ ಮಾತ್ರದಿಂದಲೇ ಅದ್ವಿತೀಯ ತತ್ತ್ವವಾಗಿರುತ್ತದೆ. ಉಳಿದಿದ್ದೆಲ್ಲ 'ಸಂವೃತಿ' ಎನಿಸಿಕೊಳ್ಳುತ್ತದೆ. ಸಂವೃತಿಯು ಮಿಥ್ಯಾಜ್ಞಾನವೆಂಬ ಅವಿದ್ಯೆ, ಅನಂತರವೇ ಬಂಧವುಂಟಾಗುವುದು, ಎಂದಿದ್ದಾರೆ.

ವಿವರಣೆ: ಅದ್ವಯ ಎಂದರೆ ಎರಡನೆಯದಿಲ್ಲದಿರುವುದು, ಹತ್ತುಬಲಗಳು; ದಾನ, ಶೀಲ, ಕ್ಷಮಾ, ವೀರ್ಯ, ಧ್ಯಾನ, ಬಲ, ಪ್ರಜ್ಞಾ, ಉಪಾಯ, ಪ್ರಣಿಧಿ, ಜ್ಞಾನ. ಆರು ಅಭಿಜ್ಞಗಳು; ದಿವ್ಯವಾದ ಕಣ್ಣು, ಕಿವಿ ಪರಚಿತ್ತಜ್ಞಾನ, ಪೂರ್ವನಿವಾಸಾನುಸ್ಮೃತಿ, ಆತ್ಮಜ್ಞಾನ, ವಿಯದ್ಗಮನ, ಕಾಯವ್ಯೂಹಸಿದ್ಧಿ, ಔಪಾಧಿಕ–ಉಪಾಧಿಯಿಂದ ಉಂಟಾದ ವಿನಾಯಕನೆಂದರೆ ಬುದ್ಧ; ಸಂವೃತ್ತಿಃ–ಸಮಂತಾದ್‌ವರಣಂ–ಅಜ್ಞಾನಂ, 'ಸುತ್ತಲೂ ಎಲ್ಲ ಪದಾರ್ಥ ತತ್ವಗಳನ್ನೂ ಆವರಿಸುವುದರಿಂದ ಉಂಟಾಗುವ ಅಜ್ಞಾನ'. ಈ ತತ್ವ ಮಾಧ್ಯಮಿಕರಲ್ಲಿ ಪ್ರತಿಪಾದಿತವಾಗಿದೆ.

ಭಾಷ್ಯ: *ತಥಾ ಚ ತೈರುಕ್ತಮ್–*
ಅಭಿನ್ನೋಽಪಿ ಹಿ ಬುದ್ಧ್ಯಾತ್ಮಾ ವಿಪರ್ಯಾಸನಿದರ್ಶನೈಃ ।
ಗ್ರಾಹ್ಯಗ್ರಾಹಕಸಂವಿತ್ತಿಭೇದವಾನಿವ ಲಕ್ಷ್ಯತೇ ॥

ಅನುವಾದ: ಅವರು ಹೇಳಿರುವುದೆಂದರೆ ಬುದ್ಧಿ ಮತ್ತು ಆತ್ಮಗಳು ಒಂದೇ ಆದರೂ ವಿಪರ್ಯಾಸದ ನಿದರ್ಶನಗಳಿಂದ ಗ್ರಾಹ್ಯ ಗ್ರಾಹಕ ರೂಪದಿಂದ ಅವು ಬೇರೆಯಾಗಿ ತೋರಿಬರುತ್ತದೆ.

ವಿವರಣೆ: ಅವಿದ್ಯೆ, ಮೋಹ, ವಿಪರ್ಯಾಸಗಳು ಸಮಾನಾರ್ಥಕಗಳು. ಗ್ರಾಹ್ಯ–ಗ್ರಾಹಕ–ಸಂವಿತ್ತಿ–ಬುದ್ಧಿಯು ಗ್ರಹಿಸಬೇಕಾದ ಪದಾರ್ಥ ಮತ್ತು ಪದಾರ್ಥವನ್ನು ಗ್ರಹಿಸುವ ಬುದ್ಧಿ ಎರಡೂ ಒಂದೇ ಆದರೂ ಬೇರೆಯಾದ ಅನುಭವ ಬರುತ್ತದೆ.

ಭಾಷ್ಯ: *ತನ್ಮತಂ ಆದೌ ನಿರಾಕ್ರಿಯತೇ ।*

ಅನುವಾದ: ಬೌದ್ಧರ ಈ ವಾದವನ್ನು ಮೊದಲು ನಿರಾಕರಿಸುತ್ತಾರೆ.

ಸೂತ್ರ: ನಾವಿದ್ಯಾತೋಽಪ್ಯವಸ್ತುನಾ ಬಂಧಾಯೋಗಾತ್ ॥ ೨೦ ॥

ಅನುವಾದ: ಅವಿದ್ಯೆಯಿಂದಲೂ ಬಂಧವಾಗದು. ಏಕೆಂದರೆ ಅವಸ್ತುವಿನಿಂದ ಬಂಧವುಂಟಾಗುವುದು ಸಾಧ್ಯವಿಲ್ಲ.

ಭಾಷ್ಯ: *ಅಪಿಶಬ್ದಃ ಪೂರ್ವೋಕ್ತಕಾಲಾದ್ಯಪೇಕ್ಷಯಾ,*
ಅವಿದ್ಯಾತೋಽಪಿ ನ ಸಾಕ್ಷಾದ್ಬಂಧಯೋಗಃ ।

ಅನುವಾದ: 'ಅಪಿ' ಶಬ್ದವು ಪೂರ್ವದಲ್ಲಿ ಹೇಳಿದ ಕಾಲಕ್ಕೆ ಸಂಬಂಧಿಸಿದಂತೆ ಹೇಳಲ್ಪಟ್ಟಿದೆ. ಅವಿದ್ಯೆಯಿಂದಲೂ ಸಾಕ್ಷಾತ್ ಬಂಧವುಂಟಾಗದು.

ಭಾಷ್ಯ: *ಅದ್ವೈತವಾದಿನಾಂ ತೇಷಾಮವಿದ್ಯಾಯಾ ಅಪಿ ಅವಸ್ತುತ್ವೇನ*
ತಯಾ ಬಂಧಾನೌಚಿತ್ಯಾತ್ । ನ ಹಿ ಸ್ವಾಪ್ನರಜ್ಜ್ವಾ ಬಂಧನಂ
ದೃಷ್ಟಮಿತ್ಯರ್ಥಃ । ಬಂಧೋಽಪಿ ಅವಾಸ್ತವ ಇತಿ ಚೇನ್ನ ।
ಸ್ವಯಂ ಸೂತ್ರಕಾರೇಣ ನಿರಾಕರಿಷ್ಯಮಾಣತ್ವಾತ್ ।

ಅನುವಾದ: ಅದ್ವೈತವಾದಿಗಳ ಅವಿದ್ಯೆಯೂ ಸಹ ಒಂದು ಅವಸ್ತು. ಅದರಿಂದ ಬಂಧವೂ ವಾಸ್ತವವಲ್ಲ. ಅದೂ ಸರಿಯಲ್ಲ. ಸ್ವಪ್ನದಲ್ಲಿ ಕಾಣುವ ಹಗ್ಗದಿಂದ ಕಟ್ಟಲ್ಪಟ್ಟಿದ್ದನ್ನು ಯಾರೂ ನೋಡಿಲ್ಲ. ಬಂಧವೂ ಕೂಡ ಅವಾಸ್ತವಿಕವೆನ್ನುವುದಾದರೆ ಅದೂ ತಪ್ಪು. ಮುಂದೆ ಸೂತ್ರಕಾರನು ಇದನ್ನು ಅಲ್ಲಗಳೆದಿದ್ದಾನೆ.

ವಿವರಣೆ: ಅದ್ವಯವಾದಿಗಳಾದ ಬೌದ್ಧರನ್ನು ಇಲ್ಲಿ ಅದ್ವೈತ ವಾದಿಗಳೆಂದು ಕರೆಯಲಾಗಿದೆ. ಅವರ ವಾದದ ಪ್ರಕಾರ ಅವಿದ್ಯೆ ವಸ್ತುವಲ್ಲ.

ಭಾಷ್ಯ: *ವಿಜ್ಞಾನಾದ್ವೈತಶ್ರವಣೋತ್ತರಂ ಬಂಧನಿವೃತ್ತಯೇ*
ಯೋಗಾಭ್ಯಾಸಾಭ್ಯುಪಗಮವಿರೋಧಾಚ್ಚ ।

ಅನುವಾದ: ವಿಜ್ಞಾನಾದ್ವೈತವನ್ನು ಕೇಳಿದ ನಂತರ ಬಂಧ ನಿವೃತ್ತಿಗಾಗಿ ಯೋಗಾಭ್ಯಾಸವನ್ನು ಮಾಡಬೇಕಾಗುವುದು; ಆಗ ಅವೆರಡಕ್ಕೂ ವಿರೋಧ ಬರುವುದು.

ವಿವರಣೆ: ಇತ್ತ ವಿಜ್ಞಾನಾರ್ಜನೆ ಅತ್ತ ಯೋಗಾಭ್ಯಾಸ, ಇವೆರಡೂ ಪರಸ್ಪರ ವಿರೋಧಿಗಳು ಎಂದರ್ಥ.

ಭಾಷ್ಯ: *ಬಂಧ ಮಿಥ್ಯಾತ್ವಶ್ರವಣೇನ ಬಂಧನಿವೃತ್ತ್ಯಾಖ್ಯ–*
ಫಲಸಿದ್ಧತ್ವನಿಶ್ಚಯಾತ್ ತದರ್ಥಂ ಬಹ್ವಾಯಾಸ–
ಸಾಧ್ಯಯೋಗಾಂಗಾನುಷ್ಠಾನಾಸಂಭವಾದಿತಿ ।

ಅನುವಾದ: ಬಂಧವು ಮಿಥ್ಯೆ ಎಂದು ಕೇಳಿದ ಮೇಲೆ ಬಂಧನಿವೃತ್ತಿಯೆಂಬ ಫಲವು ದೊರೆಯುವುದು ನಿಶ್ಚಯುವಾದ್ದರಿಂದ ಅದಕ್ಕಾಗಿ ಬಹು ಕಷ್ಟದಿಂದ ಮಾಡಬಹುದಾದ ಯೋಗಾಂಗಗಳ ಅನುಷ್ಠಾನವು ಅಗತ್ಯವಿರುವುದಿಲ್ಲ.

ಸೂತ್ರ: ವಸ್ತುತ್ವೇ ಸಿದ್ಧಾಂತ ಹಾನಿಃ ॥ ೨೧ ॥

ಅನುವಾದ: (ಅವಿದ್ಯೆಯನ್ನು) ವಸ್ತುವೆಂದು ಭಾವಿಸಿದರೆ (ಬೌದ್ಧರ) ಸಿದ್ಧಾಂತವೇ ಹಾಳಾಗುವುದು.

ಭಾಷ್ಯ: *ಯದಿ ಚ ಅವಿದ್ಯಾಯಾಃ ವಸ್ತುತ್ವಂ ಸ್ವೀಕ್ರಿಯತೇ ತಥಾ।*
ಸ್ವಾಭ್ಯುಪಗತಸ್ಯ ಅವಿದ್ಯಾನೃತತ್ವಸ್ಯ ಹಾನಿರಿತ್ಯರ್ಥಃ ।

ಅನುವಾದ: ಅವಿದ್ಯೆಯನ್ನು ವಸ್ತುವೆಂದು ಪರಿಗಣಿಸಿದಲ್ಲಿ ತಾವೇ ಪ್ರತಿಪಾದಿಸಿದ 'ಅವಿದ್ಯೆಯು ಮಿಥ್ಯೆ'ಯೆಂಬ ಕಲ್ಪನೆಯೇ ಕೆಡುವುದು.

ಸೂತ್ರ: ವಿಜಾತೀಯ ದ್ವೈತಾಪತ್ತಿಃ ॥ ೨೨ ॥

ಅನುವಾದ: (ಅವಿದ್ಯೆಯನ್ನು) ಸ್ವೀಕರಿಸಿದಲ್ಲಿ ವಿಜಾತೀಯ ದ್ವೈತದ ಪ್ರಸಂಗವುಂಟಾಗುವುದು.

ಭಾಷ್ಯ: *ಕಿಂಚಾವಿದ್ಯಾಯಾ ವಸ್ತುತ್ವೇ ಕ್ಷಣಿಕ ವಿಜ್ಞಾನಸಂತಾನಾತ್*
ವಿಜಾತೀಯಂ ದ್ವೈತಂ ಪ್ರಸಜ್ಯೇತ । ತಚ್ಚ ಭವತಾಂ ಅನಿಷ್ಟಮಿತ್ಯರ್ಥಃ ।

ಅನುವಾದ: ಅಲ್ಲದೆ ಅವಿದ್ಯೆಯನ್ನು ವಸ್ತುವೆಂದು ಭಾವಿಸಿದರೆ ಕ್ಷಣಿಕ ವಿಜ್ಞಾನ ಸಂತಾನದಿಂದ ದ್ವೈತದ ಪ್ರಸಂಗವು ಬರುವುದು. ಆದರೆ ಅದು ವಿಜಾತೀಯ ತತ್ತ್ವವಾಗುವುದು.

ವಿವರಣೆ: 'ಕ್ಷಣಿಕ ವಿಜ್ಞಾನ ಸಂತಾನ' ಬೌದ್ಧರ ಮುಖ್ಯ ತತ್ತ್ವ. ಅದು 'ಕ್ಷಣ ಕ್ಷಣಕ್ಕೆ ಬರುವ ಅರಿವಿನ ಸರಣಿ'. ಈ ಅರಿವಿಗೆ ವಿರುದ್ಧವಾದ 'ವಸ್ತು'ವೂ ಬಂದಾಗ ಅವರ ಅದ್ವಯವಾದಕ್ಕೆ ಧಕ್ಕೆ ಬರುವುದು.

ಭಾಷ್ಯ: *ಸಂತಾನಾಂತಃಪಾತಿವ್ಯಕ್ತೀನಾಮಾನಂತ್ಯಾತ್ ಅವಿದ್ಯಯಾ*
ಅಪಿ ಕಥಂ ವಿಜಾತೀಯದ್ವೈತಮ್ ।

ಅನುವಾದ: ಅವಿದ್ಯೆಯೂ ಜ್ಞಾನವಿಶೇಷವಾದ್ದರಿಂದ ಅವಿದ್ಯೆಯೂ (ವಸ್ತುರೂಪವೆಂದು) ತಿಳಿದರೆ ವಿಜಾತೀಯ ದ್ವೈತವೆನ್ನುವುದು ಹೇಗೆ?

ಭಾಷ್ಯ: *ಇತಿ ಚೇನ್ನ । ಜ್ಞಾನರೂಪಾವಿದ್ಯಾಯಾ ಬಂಧೋತ್ತರಕಾಲೀನ–*
ತಯಾ ವಾಸನಾರೂಪಾವಿದ್ಯಾಯಾ ಏವ ತೈರ್ಬಂಧಹೇತುತ್ವ–
ಅಭ್ಯುಪಗಮಾತ್ । ವಾಸನಾ ತು ಜ್ಞಾನಾದ್ವಿಜಾತೀಯಾ ಏವ ಇತಿ ।

ಅನುವಾದ: ಇದು ಸರಿಯಲ್ಲ. ಜ್ಞಾನರೂಪವಾದ ಅವಿದ್ಯೆಯು ಬಂಧವುಂಟಾದ ಬಳಿಕ ಆಗುವುದರಿಂದ ವಾಸನಾರೂಪ ಅವಿದ್ಯೆಯನ್ನೇ ಬಂಧಕ್ಕೆ ಕಾರಣವೆಂದು ಅವರು ಸ್ವೀಕರಿಸಿದ್ದಾರೆ. 'ವಾಸನಾ' ಜ್ಞಾನಕ್ಕಿಂತ ವಿಜಾತೀಯವಲ್ಲವೆ?

ವಿವರಣೆ: ಅವಿದ್ಯೆಯು ಮೊದಲು ಜ್ಞಾನರೂಪವಾಗಿದ್ದು, ಅನಂತರ ವಾಸನಾರೂಪವಾಗಿ ಉಳಿಯುತ್ತದೆ. 'ವಾಸನಾ' ಮತ್ತು ಜ್ಞಾನ ಒಂದೇ ಜಾತಿಗೆ ಸೇರಿದ್ದಲ್ಲ.

ಭಾಷ್ಯ: *ಏಭಿಶ್ಚ ಸೂತ್ರೈರ್ಬ್ರಹ್ಮಮೀಮಾಂಸಾ ಸಿದ್ಧಾಂತೋ ನಿರಾಕ್ರಿಯತ ಇತಿ ಭ್ರಮೋ ನ ಕರ್ತವ್ಯಃ । ಬ್ರಹ್ಮ ಮೀಮಾಂಸಾಯಾಂ ಕೇನಾಪಿ ಸೂತ್ರೇಣಾವಿದ್ಯಾಮಾತ್ರತೋ ಬಂಧಸ್ಯಾನುಕ್ತತ್ವಾತ್ । 'ಅವಿಭಾಗೋ ವಚನಾತ್' (ವೇದಾಂತಸೂತ್ರ ೪.೨.೧೬) ಇತ್ಯಾದಿ ಸೂತ್ರೈಃ ಬ್ರಹ್ಮಮೀಮಾಂಸಾಯಾಃ ಅಭಿಪ್ರೇತಸ್ಯ ಅವಿಭಾಗ–ಲಕ್ಷಣಾದ್ವೈತಸ್ಯ ಅವಿದ್ಯಾದಿವಾಸ್ತವತ್ವೇ ಅಪಿ ಅವಿರೋಧಾಚ್ಚ ।*

ಅನುವಾದ: ಈ ಸೂತ್ರಗಳಿಂದ ಬ್ರಹ್ಮಮೀಮಾಂಸೆಯ ಸಿದ್ಧಾಂತವು ನಿರೂಪಿಸಲ್ಪಟ್ಟಿದೆ ಎಂದು ಭ್ರಮಿಸಬಾರದು. ಏಕೆಂದರೆ ಬ್ರಹ್ಮಮೀಮಾಂಸೆಯಲ್ಲಿ ಯಾವುದೇ ಸೂತ್ರದ ಮುಖಾಂತರ ಅವಿದ್ಯೆ ಮಾತ್ರ ಬಂಧಕ್ಕೆ ಕಾರಣವೆಂದು ಎಲ್ಲೂ ಪ್ರತಿಪಾದಿಸಿಲ್ಲ. '(ವೇದಗಳ) ಹೇಳಿಕೆಯಂತೆ (ಬ್ರಹ್ಮನ) ವಿಭಜನೆಯಿಲ್ಲ' ಇತ್ಯಾದಿ; ಅವಿದ್ಯೆಯನ್ನು ವಾಸ್ತವವೆಂದು ತಿಳಿದರೂ ಬ್ರಹ್ಮಮೀಮಾಂಸೆಯಲ್ಲಿ ವಿಭಜನೆಯಿಲ್ಲವೆಂಬ ಅಂಶದಲ್ಲಿ ಯಾವುದೇ ವಿರೋಧವಿಲ್ಲ.

ವಿವರಣೆ: ಈ ಸೂತ್ರಗಳಿಂದ ಎಂದರೆ, ಪ್ರಥಮಾಧ್ಯಾಯದ ೨೦, ೨೧, ೨೨ನೇ ಸಾಂಖ್ಯ ಸೂತ್ರಗಳು. ಇವುಗಳಲ್ಲಿ ಅವಿದ್ಯೆಯನ್ನು ಕುರಿತ ಚರ್ಚೆ ಇದೆ. ಬ್ರಹ್ಮಮೀಮಾಂಸೆಯೆಂದರೆ ವೇದಾಂತ.

ಭಾಷ್ಯ: *ಯತ್ತು ವೇದಾಂತಿಬ್ರುವಾಣಾಮಾಧುನಿಕಸ್ಯ ಮಾಯಾವಾದಸ್ಯ ಅತ್ರ ಲಿಂಗಂ ದೃಶ್ಯತೇ ತತ್ ತೇಷಾಮಪಿ ವಿಜ್ಞಾನವಾದೀ ಏಕದೇಶಿತಯಾ ಯುಕ್ತಮೇವ–*

ಅನುವಾದ: ವೇದಾಂತಿಗಳೆಂದು ಹೇಳಿಕೊಳ್ಳುವವರೂ ಆಧುನಿಕ ಮಾಯಾವಾದವನ್ನು ಹೇಳುವ ಗುರುತೂ ಕಂಡುಬರುತ್ತದೆ. ಅವರೂ ಸಹ ವಿಜ್ಞಾನವಾದಿಗಳು ಮತ್ತು ಬೌದ್ಧರ ಒಂದು ಭಾಗವಾಗಿರುತ್ತಾರೆ; ಅದು ಸರಿಯಾದುದೇ.

ಭಾಷ್ಯ: *ಮಾಯಾವಾದಮಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಮೇವಚ ।*
ಮಯ್ಯೈವ ಕಥಿತಂ ದೇವಿ ಕಲೌ ಬ್ರಾಹ್ಮಣರೂಪಿಣಾ

(ಪದ್ಮಪುರಾಣ ೬.೧೬೩–೭೦)

ಅನುವಾದ: ಎಲೈದೇವಿಯೆ! ಕಲಿಯುಗದಲ್ಲಿ ಬ್ರಾಹ್ಮಣನರೂಪವನ್ನು ತಾಳಿದವನಾಗಿ ನಾನೇ ಹೇಳಿದೆ, 'ಮಾಯಾವಾದವು ಅಸತ್‌ಶಾಸ್ತ್ರ, ಒಂದು ರೀತಿ ಪ್ರಚ್ಛನ್ನಬೌದ್ಧಮತವೇ ಆಗಿದೆ'.

ಭಾಷ್ಯ: *ಇತ್ಯಾದಿ ಪದ್ಮಪುರಾಣಾಸ್ಥ ಶಿವವಾಕ್ಯಪರಂಪರಾರಾಭ್ಯಃ । ನ ತು "ತದ್ವೇದಾಂತಮತಮ್ ವೇದಾರ್ಥವನ್ಮಹಾಶಾಸ್ತ್ರಂ ಮಾಯಾವಾದಮವೈದಿಕಮ್" ।(ಪದ್ಮ ಪುರಾಣ ೬.೨೬೩.೭೪)*

ಅನುವಾದ: ಮುಂತಾಗಿ ಪದ್ಮಪುರಾಣದಲ್ಲಿ ಉಕ್ತವಾಗಿರುವ ಶಿವನ ಮಾತುಗಳ ಸಾಲುಗಳಿಂದ (ತಿಳಿದುಬರುವುದು) ಅದು (ಮಾಯಾವಾದವು) ವೇದಾಂತದ ಅಭಿಪ್ರಾಯವಲ್ಲ. ಏಕೆಂದರೆ, 'ವೇದಾರ್ಥವನ್ನೊಳಗೊಂಡದ್ದು ಮಹಾಶಾಸ್ತ್ರವು. ಆದರೆ ಮಾಯಾವಾದವು ವೈದಿಕವಲ್ಲ' (ಎಂದು ಶಿವನು ಹೇಳಿದ ಉಳಿದ ಭಾಗವಿದೆ).

ವಿವರಣೆ: ಮಹಾಶಾಸ್ತ್ರವೆಂದರೆ ಬ್ರಹ್ಮಮೀಮಾಂಸೆ.

ಭಾಷ್ಯ: *ಇತಿ ತದ್ವಾಕ್ಯಶೇಷಾದಿತಿ । ಮಾಯಾವಾದಿನೋಽತ್ರ ಚ ನ ಸಾಕ್ಷಾತ್ಪ್ರತಿವಾದಿತ್ವಂ, ವಿಜಾತೀಯೇತಿ ವಿಶೇಷಣವೈಯರ್ಥ್ಯಾತ್ ।*

ಅನುವಾದ: ಈ ವಾಕ್ಯಶೇಷದಿಂದ (ಮಾಯಾವಾದ ವೇದಾಂತವಲ್ಲವೆಂದು) ಸ್ಪಷ್ಟಪಡುತ್ತದೆ. ಈ ವಿಷಯದಲ್ಲಿ ಮಾಯಾವಾದಿಗಳು ಪ್ರತಿವಾದಿಗಳೆಂದು ಭಾವಿಸಿಲ್ಲ; ಏಕೆಂದರೆ ವಿಜಾತೀಯ ಎಂಬ ವಿಶೇಷಣವು ವ್ಯರ್ಥವಾಗುವುದು. ಮಾಯಾ ವಾದದಲ್ಲಿ ಸಜಾತೀಯವಾದ ಎರಡು ವಸ್ತುಗಳನ್ನು ಒಪ್ಪಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ವಿಜ್ಞಾನ ವಾದಿಗಳ ಬಂಧಕ್ಕೆ ಕಾರಣದ ವ್ಯವಸ್ಥೆಯನ್ನು ಸಾಕ್ಷಾತ್ ನಿರಾಕರಿಸಲಾಗಿದೆ.

ವಿವರಣೆ: ಮಾಯಾವಾದಿಗಳು ಬ್ರಹ್ಮನೊಬ್ಬನೇ ಸತ್ಯ ಎಂದು ಪ್ರತಿಪಾದಿಸುತ್ತಾರೆ. ಅವರ ದೃಷ್ಟಿಯಲ್ಲಿ ಸಜಾತೀಯವಾದ ಅಥವಾ ವಿಜಾತೀಯವಾದ ದ್ವೈತವಿಲ್ಲ.

ಭಾಷ್ಯ: *ಅನಯೈವ ಚ ರೀತ್ಯಾ ನವೀನಾನಾಮಪಿ ಪ್ರಚ್ಛನ್ನಬೌದ್ಧಾನಾಂ ಮಾಯಾವಾದಿನಾಂ ಅವಿದ್ಯಾಮಾತ್ರಸ್ಯ ತುಚ್ಛಸ್ಯ–ಬಂಧಹೇತುತ್ವಂ ನಿರಾಕೃತಂ ವೇದಿತವ್ಯಮ್ ।*

ಅನುವಾದ: ಮೇಲೆ ಹೇಳಿದ ರೀತಿಯಲ್ಲೇ ನವೀನ ಪ್ರಚ್ಛನ್ನಬೌದ್ಧರಾದ ಮಾಯಾವಾದಿಗಳ ಶೂನ್ಯಸ್ವರೂಪದ ಅವಿದ್ಯಾಮಾತ್ರವನ್ನು ಬಂಧಕ್ಕೆ ಕಾರಣವೆಂಬ ವಾದವನ್ನು ನಿರಾಕರಿಸಿದ್ದೇವೆ ಎಂದು ತಿಳಿಯಬೇಕು.

ಭಾಷ್ಯ: *ಅಸ್ಮನ್ಮತೇ ತ್ವವಿದ್ಯಾಯಾಃ ಕೂಟಸ್ಥನಿತ್ಯತಾ ರೂಪಪಾರಮಾ–ರ್ಥಿಕಸತ್ತ್ವಾಭಾವೇಽಪಿ ಘಟಾದಿವತ್ ವಾಸ್ತವತ್ವೇನ ವಕ್ಷ್ಯಮಾಣ–ಸಂಯೋಗದ್ವಾರಾ ಬಂಧಹೇತುತ್ವೇ ಯಥೋಕ್ತಬಾಧಾಽನವಕಾಶಃ ।*

ಅನುವಾದ: ನಮ್ಮ ಅಭಿಪ್ರಾಯದಲ್ಲಿ ಅವಿದ್ಯೆಯು ಅವಿನಾಶಿ ಮತ್ತು ನಿತ್ಯಸ್ವರೂಪವು. ಪಾರಮಾರ್ಥಿಕಸತ್ತ್ವದ ಅಭಾವವಿದ್ದರೂ ಘಟವೇ ಮೊದಲಾದುವುಗಳಂತೆ ವಾಸ್ತವವಾಗಿ ಮುಂದೆ ಹೇಳಲಾಗುವ ಸಂಯೋಗದ ಮುಖಾಂತರ ಬಂಧದ ಕಾರಣವನ್ನು ಸ್ವೀಕರಿಸುವುದರಲ್ಲಿ ಯಾವ ಸಂದರ್ಭವೂ ಇಲ್ಲ.

ಭಾಷ್ಯ: *ಏವಂ ಯೋಗಮತೇ ಬ್ರಹ್ಮಮೀಮಾಂಸಮತೇಽಪಿ ಇತಿ ।*

ಅನುವಾದ: ಇದೇ ರೀತಿ ಯೋಗಮತದಲ್ಲಿ ಮತ್ತು ಬ್ರಹ್ಮಮೀಮಾಂಸಮತದಲ್ಲಿಯೂ ಇರುವುದು.

ಭಾಷ್ಯ: *ಪುನಃ ಶಂಕತೇ ।*

ಸೂತ್ರ: ವಿರುದ್ಧೋಭಯರೂಪಾ ಚೇತ್ ॥ ೨೩ ॥

ಅನುವಾದ: (ಅವಿದ್ಯೆಯು) ವಿರುದ್ಧವಾದ ಸತ್–ಅಸತ್ ಎರಡು ರೂಪಗಳನ್ನು ಹೊಂದಿದ್ದರೂ ದ್ವೈತವುಂಟಾಗಲಾರದಲ್ಲವೆ?

ಭಾಷ್ಯ: *ನನು ವಿರುದ್ಧಂ ಯದುಭಯಂ ಸದಸಚ್ಚ ಸದಸದ್ವಿ–*
ಲಕ್ಷಣಂ ವಾ ತದ್ರೂಪೈವಾವಿದ್ಯಾ ವಕ್ತವ್ಯಾ । ಅತೋ
ನ ತಯಾ ಪಾರಮಾರ್ಥಿಕಾದ್ವೈತ ಭಂಗ ಇತಿ ಚೇದಿತ್ಯರ್ಥಃ ।

ಅನುವಾದ: 'ಪರಸ್ಪರ ವಿರುದ್ಧವಾದ ಸತ್ ಮತ್ತು ಅಸತ್ ಇವೆರಡೂ ವಿಶಿಷ್ಟ ಲಕ್ಷಣಗಳಿಂದ ಕೂಡಿದ ಅಥವಾ ಅದೇ ರೂಪದ ಅವಿದ್ಯೆ' ಎಂದು ಹೇಳಬೇಕು. ಆದ್ದರಿಂದ ಪಾರಮಾರ್ಥಿಕ ಅದ್ವೈತಕ್ಕೆ ಭಂಗ ಬರಲಾರದಲ್ಲವೆ?

ವಿವರಣೆ: ಅವಿದ್ಯೆಯು ವಿಶಿಷ್ಟ ಲಕ್ಷಣಗಳಿಂದ ಕೂಡಿರುವುದು. ಅದು ಸತ್ ಆಗಲಿ, ಅಸತ್ ಆಗಲಿ ಅಥವಾ ಸದಸತ್ ಆಗಲಿ ಅಲ್ಲ. ಇನ್ನು ಇದಕ್ಕೆ ಸಜಾತೀಯ, ವಿಜಾತೀಯ ರೂಪಗಳು ಇಲ್ಲ ಎಂದು ಹೇಳಬಹುದಲ್ಲವೆ? ಎಂದರ್ಥ.

ಭಾಷ್ಯ: *ಸ್ವಯಂ ತು ಸದಸತ್ತ್ವ ಪ್ರಪಂಚಸ್ಯ ಯದ್ ವಕ್ಷ್ಯತಿ*
ತತ್ರ ಸತ್ವಾಸತ್ವೇ ವ್ಯಕ್ತಾವ್ಯಕ್ತತ್ವರೂಪತ್ವಾತ್ ವಿರುದ್ಧೇ
ಏವ ನ ಭವತಃ ಇತಿ ಸೂಚಯಿತುಂ ವಿರುದ್ಧಪದೋಪಾದಾನಮ್ ।

ಅನುವಾದ: ಮುಂದೆ ತಾವೇ ಪ್ರಪಂಚವು ಸತ್, ಅಸತ್ ಎಂದು ಹೇಳಿರುವರೋ (೫/೫೬) ಸತ್ತ್ವ, ಅಸತ್ತ್ವಗಳು ವ್ಯಕ್ತ ಮತ್ತು ಅವ್ಯಕ್ತರೂಪವಾದ್ದರಿಂದ ಅವು ಪರಸ್ಪರ ವಿರುದ್ಧವಲ್ಲ ಎಂದು ಸೂಚಿಸಲು 'ವಿರುದ್ಧ' ಎಂಬ ಪದವನ್ನು ಬಳಸಿರುವರು.

ಭಾಷ್ಯ: *ಪರಿಹರತಿ–*

(ಮೇಲಿನ ಸಂದೇಹವನ್ನು) ಹೋಗಲಾಡಿಸುವರು.

ಸೂತ್ರ: ನ ತಾದೃತ್ವದಾರ್ಥಪ್ರತೀತೇಃ ॥ ೨೪ ॥

ಅನುವಾದ: ಅಂತಹ ಪದಾರ್ಥವು ತಿಳುವಳಿಕೆಗೆ ಬರಲಾರದು.

ಭಾಷ್ಯ: *ಸುಗಮಮ್ । ಅಪಿ ಚ ಅವಿದ್ಯಾಯಾಃ ಸಾಕ್ಷಾದೇವ*
ದುಃಖಯೋಗಾಖ್ಯಬಂಧಹೇತುತ್ವೇ ಜ್ಞಾನೇನ ಅವಿದ್ಯಾ–
ಕ್ಷಯಾನಂತರಂ ಪ್ರಾರಬ್ಧಭೋಗಾನುಪಪತ್ತಿಃ
ಬಂಧಪರ್ಯಾಯಸ್ಯ ದುಃಖಭೋಗಸ್ಯ ಕಾರಣನಾಶಾದಿತಿ ।

ಅನುವಾದ: ಸುಲಭವಾಗಿ ಅರ್ಥವಾಗುವುದು. ಅಲ್ಲದೆ ಅವಿದ್ಯೆಯು ದುಃಖವನ್ನು ನೀಡುವುದೆಂಬ ಬಂಧಕ್ಕೆ ಕಾರಣವಾಗಿದೆ ಎಂದರೆ ಜ್ಞಾನದಿಂದ ಅವಿದ್ಯೆಯು ನಶಿಸಿ ಹೋದನಂತರ ಪ್ರಾರಬ್ಧ ಕರ್ಮದ ಭೋಗದ ಅವಕಾಶವೇ ಇರದು. ಏಕೆಂದರೆ ಬಂಧದ ಪ್ರಕಾರವಾದ ದುಃಖಭೋಗದ ಕಾರಣ ನಾಶವಾಗಿರುವುದು.

ಭಾಷ್ಯ: *ಅಸ್ಮದಾದಿಮತೇ ತು ನಾಯಂ ದೋಷಃ । ಸಂಯೋಗದ್ವಾರಾ ಅವಿದ್ಯಾಕರ್ಮಾದೀನಾಂ ಬಂಧಹೇತುತ್ವಾತ್ । ಜನ್ಮಾಖ್ಯಶ್ಚ ಸಂಯೋಗಃ ಪ್ರಾರಬ್ಧಸಮಾಪ್ತಿಂ ವಿನಾ ನ ನಶ್ಯತೀತಿ ।*

ಅನುವಾದ: ನಮ್ಮ ಅಭಿಪ್ರಾಯದಲ್ಲಿ ಈ ಯುಕ್ತಿಯಲ್ಲಿ ದೋಷವಿಲ್ಲ. ಏಕೆಂದರೆ, ಸಂಯೋಗದ ಮೂಲಕ ಅವಿದ್ಯೆ, ಕರ್ಮ ಮುಂತಾದವು ಬಂಧಕ್ಕೆ ಕಾರಣವಾಗುತ್ತವೆ. ಜನ್ಮವೆಂಬ ಸಂಯೋಗವು ಪ್ರಾರಬ್ಧದ ಸಮಾಪ್ತಿಯಾಗದೆ ನಾಶವಾಗದು.

ವಿವರಣೆ: ಅವಿದ್ಯೆಯು ಬಂಧಕ್ಕೆ ಕಾರಣ. ಆದರೆ ಅವಿದ್ಯೆಯೇ ನಾಶವಾದ ಮೇಲೆ ಬಂಧವೆಲ್ಲಿ ಬಂತು? ಆದ್ದರಿಂದ 'ವಿರುದ್ಧೋಭಯರೂಪಾ' ಎಂಬ ಪ್ರಶ್ನಾರ್ಥಕ ಸೂತ್ರಕ್ಕೆ ಇದು ಉತ್ತರ.

ಭಾಷ್ಯ: *ಪುನಃ ಶಂಕತೇ*

ಅನುವಾದ: ಮತ್ತೆ ಶಂಕೆ ಮಾಡುತ್ತಾರೆ

ಸೂತ್ರ: ನ ವಯಂ ಷಟ್ ಪದಾರ್ಥವಾದಿನಃ ವೈಶೇಷಿಕಾದಿವತ್ ॥ ೨೫ ॥

ಅನುವಾದ: ನಾವು ವೈಶೇಷಿಕವೇ ಮೊದಲಾದವರಂತೆ ಷಟ್ ಪದಾರ್ಥವಾದಿಗಳಲ್ಲ.

ಭಾಷ್ಯ: *ನನು ವೈಶೇಷಿಕಾದ್ಯಾಸ್ತಿಕವತ್ ನ ಷಟ್ ಷೋಡಶಾದಿನಿಯತ ಪದಾರ್ಥ ವಾದಿನಃ ।*

ಅನುವಾದ: ನಾವು ವೈಶೇಷಿಕವೇ ಮೊದಲಾದ ಆಸ್ತಿಕ ದರ್ಶನಗಳಂತೆ ಆರು ಅಥವಾ ಹದಿನಾರು ನಿಯತಪದಾರ್ಥ ವಾದಿಗಳಲ್ಲ.

ವಿವರಣೆ: ವೈಶೇಷಿಕವು ಆರು ಪದಾರ್ಥಗಳನ್ನೂ ನ್ಯಾಯವು ಹದಿನಾರು ಪದಾರ್ಥಗಳನ್ನೂ ಹೇಳುತ್ತವೆ.

ಭಾಷ್ಯ: *ಅತಃ ಅಪ್ರತೀತೋಽಪಿ ಸದಸದಾತ್ಮಕಃ ಸದಸದ್ವಿಲಕ್ಷಣಃ ವಾ ಪದಾರ್ಥಃ ಅವಿದ್ಯೇತ್ಯಭ್ಯುಪೇಯಮಿತಿ ಭಾವಃ ।*

ಅನುವಾದ: ಆದ್ದರಿಂದ ತಿಳುವಳಿಕೆಗೆ ಬಾರದಿದ್ದರೂ ಸದ್–ಅಸದಾತ್ಮಕವಾದ ಅಥವಾ ಸದ್–ಅಸದ್ ವಿಲಕ್ಷಣವಾದ ಪದಾರ್ಥಗಳನ್ನು ಅವಿದ್ಯೆಯೆಂದೇ ತಿಳಿಯಬೇಕು.

ವಿವರಣೆ: ವಿಶೇಷವಾದ ಗುಣಗಳಿಂದ ಕೂಡಿದ ಅವಿದ್ಯೆಯೆಂಬ ಪದಾರ್ಥವನ್ನು ಒಪ್ಪುವುದೂ ಸರಿಯೆ ಎಂದರ್ಥ.

ಸೂತ್ರ: ಅನಿಯತತ್ವೇऽಪಿ ನಾ ಯೌಕ್ತಿಕಸ್ಯ ಸಂಗ್ರಹೋऽನ್ಯಥಾ ಬಾಲೋನ್ಮತ್ತಾದಿಸಮತ್ವಮ್ ॥ ೨೬ ॥

ಅನುವಾದ: ನಿಶ್ಚಿತವಾದ ಸಂಖ್ಯೆಯಲ್ಲಿ ಪದಾರ್ಥಗಳನ್ನು ಹೇಳದಿದ್ದರೂ ಯುಕ್ತಿಯಿಂದ ಕೂಡಿರದೆ ಇದ್ದರೆ ಅಜ್ಞಾನಿಯಾದ ಬಾಲಕ ಅಥವಾ ಉನ್ಮತ್ತನ ಮಾತಿನಂತಾಗುವುದು.

ಭಾಷ್ಯ: *ಪದಾರ್ಥ ನಿಯಮೋ ಮಾऽಸ್ತು, ತಥಾಪಿ ಭಾವಾಭಾವ ವಿರೋಧೇನ ಯುಕ್ತಿವಿರುದ್ಧಸ್ಯ ಸದಸದಾತ್ಮಕಪದಾರ್ಥಸ್ಯ ಸಂಗ್ರಹೋ ಭವದ್ವಚನಮಾತ್ರಾತ್ ಶಿಷ್ಯಾಣಾಂ ನ ಸಂಭವತಿ ।*

ಅನುವಾದ: ಪದಾರ್ಥಗಳ (ಸಂಖ್ಯೆಯ) ನಿಯಮವಿಲ್ಲದಿರಬಹುದು. ಆದರೂ ಅಸ್ತಿತ್ವ ಮತ್ತು ಅನಸ್ತಿತ್ವಗಳ ವಿರೋಧದಿಂದ ಯುಕ್ತಿಗೆ ವಿರುದ್ಧವಾದ ಸತ್ ಮತ್ತು ಅಸತ್ ಪದಾರ್ಥಗಳನ್ನು ಅಂಗೀಕರಿಸುವುದು. ನೀವು ಹೇಳಿದಂತೆ ಶಿಷ್ಯರು ಒಪ್ಪುವರು ಎಂದು ಹೇಳಲಾಗದು.

ವಿವರಣೆ: ಯುಕ್ತಿ ಎಂದರೆ ತರ್ಕಬದ್ಧವಾದ ವಿಚಾರ ಯುಕ್ತಿರಹಿತವಾದ ಮಾತುಗಳನ್ನು ಯಾವ ಶಿಷ್ಯನೂ ಒಪ್ಪಲಾರ.

ಭಾಷ್ಯ: *ಅನ್ಯಥಾ ಬಾಲಕಾದ್ಯುಕ್ತಸ್ಯಾಪಿ ಅಯೌಕ್ತಿಕಸ್ಯ ಸಂಗ್ರಹಃ ಸ್ಯಾದಿತ್ಯರ್ಥಃ । ಶ್ರುತ್ಯಾದಿಕಂ ಚಾಸ್ಮಿನ್ನರ್ಥೇ ಸ್ಫುಟಂ ನಾಸ್ತಿ । ಯುಕ್ತ ವಿರೋಧೇನ ಚ ಸಂದಿಗ್ಧ– ಶ್ರುತೇಃ ಅರ್ಥಾಂತರಸಿದ್ಧಿರಿತಿ ಭಾವಃ ।*

ಅನುವಾದ: ಹಾಗಿಲ್ಲದಿದ್ದರೆ ಬಾಲಕರೇ ಮೊದಲಾದವರ ಮಾತುಗಳು ಯುಕ್ತಿಹೀನವಾದರೂ ಸ್ವೀಕರಿಸಬೇಕಾಗಬಹುದು. ಈ ವಿಷಯದಲ್ಲಿ ಶ್ರುತಿಯೇ ಮುಂತಾದುವುಗಳು ಸ್ಪಷ್ಟವಾಗಿ ಏನೂ ಹೇಳಿಲ್ಲ. ಯುಕ್ತಿಗೆ ವಿರುದ್ಧವಾದರೆ ಮತ್ತು ಶ್ರುತಿಯನ್ನು ಸಂದೇಹಪೂರ್ವಕವಾಗಿ ಅರ್ಥಮಾಡಿದರೆ ಬೇರೊಂದು ಅರ್ಥಕ್ಕೆ ಅವಕಾಶವಾಗುವುದು.

ವಿವರಣೆ: ಶ್ರುತಿಯು ಅಸ್ಪಷ್ಟವಾದಾಗ ಬೇರೆ ಅರ್ಥಗಳನ್ನು ಕಲ್ಪಿಸುವ ಸಾಧ್ಯತೆಯಿರುತ್ತದೆ.

ಭಾಷ್ಯ: *ನಾಸದ್ರೂಪಾ ನ ಸದ್ರೂಪಾ ಮಾಯಾ ನೈವೋಭಯಾತ್ಮಿಕಾ ।*
ಸದಸದ್ಭ್ಯಾಂ ಅನಿರ್ವಾಚ್ಯಾ ಮಿಥ್ಯಾಭೂತಾ ಸನಾತನೀ ॥
ಇತ್ಯಾದಿಸೌರಾದಿವಾಕ್ಯಾನಾಂ ಅಯಮರ್ಥಃ । ಸೌರಪುರಾಣ ॥ ೨೯ ॥

ಅನುವಾದ: ಈ ಮಾಯೆಯು ಸದ್ರೂಪವೂ ಅಲ್ಲ, ಅಸದ್ರೂಪವೂ ಅಲ್ಲ; ಉಭಯ ರೂಪವೂ ಅಲ್ಲ. ಅದನ್ನು ಸತ್ ಎಂದೂ ಅಸತ್ ಎಂದೂ ವಿವರಿಸುವುದು ಸಾಧ್ಯವಿಲ್ಲ. ಅದು ಸನಾತನ ಮಿಥ್ಯೆ. ಹೀಗೆ ಸೌರಪುರಾಣವೇ ಮೊದಲಾದುವುಗಳಿಂದ ತೆಗೆದುಕೊಂಡ ಅರ್ಥ.

ಭಾಷ್ಯ: *ವಿಕಾರಜನನೀಂ ಮಾಯಾಮಷ್ಟರೂಪಾಮಜಾಂ ಧ್ರುವಾಮ್ । (ಚೂಲಿಕೋಪನಿಷತ್ ೩) ಇತ್ಯಾದಿಶ್ರುತಿಸಿದ್ಧಾ ಮಾಯಾಖ್ಯಾ ಪ್ರಕೃತಿಃ ಪರಮಾರ್ಥಸತೀ ನ ಭವತಿ, ಪೂರ್ವಪೂರ್ವವಿಕಾರರೂಪೈಃ ಪ್ರತಿಕ್ಷಣಮಪಾಯಾತ್ ।*

ಅನುವಾದ: ವಿಕಾರಗಳನ್ನು ಉಂಟುಮಾಡುವ, ಎಂಟು ರೂಪಗಳುಳ್ಳ, ಜನ್ಮವಿಲ್ಲದ ಮತ್ತು ಶಾಶ್ವತವಾದ ಮಾಯೆಯನ್ನು ಮುಂತಾದ ಶ್ರುತಿಗಳಿಂದ ಸಿದ್ಧವಾದ ಮಾಯೆಯೆಂಬ ಪ್ರಕೃತಿಯು ಪಾರಮಾರ್ಥಿಕವಾಗಿ ಇರದಿದ್ದರೂ ಹಿಂದಿನ ವಿಕಾರಗಳಿಂದ ಪ್ರತಿಕ್ಷಣವೂ ವಿನಾಶವಾಗುತ್ತಾ ಇರುತ್ತದೆ.

ಭಾಷ್ಯ: *ನಾಪಿ ಪರಮಾರ್ಥಸತೀ ಭವತಿ । ಅರ್ಥಕ್ರಿಯಾಕಾಂತ್ವೇನ ಶಶಶೃಂಗವಿಲಕ್ಷಣತ್ವಾತ್ ನಾಽಪಿ ತದುಭಯಾತ್ಮಕಾ ವಿರೋಧಾ ಚ । ಅತಃ ಸದಸದ್ಭ್ಯಾಂ ಅನಿರ್ವಾಚ್ಯಾ, ಸತ್ಯೇವೇತಿ ಅಸತ್ಯೇವೇತಿ ಚ ನಿರ್ಧಾರ್ಯ ಉಪದೇಷ್ಟುಮಶಕ್ಯಾ ।*

ಅನುವಾದ: ಅದು ಪಾರಮಾರ್ಥಿಕವಲ್ಲವೆಂದೂ ಹೇಳಲಾಗದು. ವಸ್ತುವನ್ನು ನಿರ್ಮಿಸಿ ಕ್ರಿಯಾಶೀಲ ಮಾಡಬಲ್ಲದಾದ್ದರಿಂದ ಮೊಲದ ಕೊಂಬು ಇರುವಂತೆ ವಿರುದ್ಧವಾದ ಲಕ್ಷಣಗಳಿಂದ ಕೂಡಿದಂತೆಯೂ ಇಲ್ಲ. ಹೀಗೆ ಸತ್ ಅಸತ್‌ಗಳಿಂದ ವಿವರಿಸಲಾಗದ, ಇದು ಇದ್ದೇ ಇದೆ, ಇದು ಇದ್ದೇ ಇಲ್ಲ ಎಂದು ನಿರ್ಧರಿಸಿ ತಿಳಿಸುವುದು ಸಾಧ್ಯವಿಲ್ಲ.

ಭಾಷ್ಯ: *ಕಿಂತು ಮಿಥ್ಯಾಭೂತಾ ಲಯಾಖ್ಯವ್ಯಾವಹಾರಿಕಸತ್ತಾವತೀ ಪರಿಣಾಮಿನಿತ್ಯತಾ ರೂಪವ್ಯಾವಹಾರಿಕಸತ್ತಾವತೀ ಚೇತಿ । ಏತಚ್ಚಾರಾಗ್ರೇ (೧–೬೧, ೬೫) ಪ್ರಪಂಚಯಿಷ್ಯಾಮ ಇತಿ ದಿಕ್ ।*

ಅನುವಾದ: ಆದರೆ (ಮಾಯೆಯು) ಮಿಥ್ಯೆಯಾಗಿರುವ, ಲಯವೆಂಬ ವ್ಯಾವಹಾರಿಕವಾದ ಸತ್ತ್ವವುಳ್ಳ ಮತ್ತು ಪರಿಣಾಮಿಯೂ, ನಿತ್ಯತಾರೂಪವಾದದ್ದೂ ವ್ಯಾವಹಾರಿಕ ಸತ್ತ್ವವುಳ್ಳದ್ದೂ ಆಗಿರುತ್ತದೆ. ಇದನ್ನೂ ಸಹ ವಿಸ್ತರಿಸಿ ಹೇಳುತ್ತೇವೆ.

ವಿವರಣೆ: ವ್ಯಾವಹಾರಿಕವಾಗಿ ಅದು ಲಯ ಹೊಂದುತ್ತದೆ, ಯಾವಾಗಲೂ ಬದಲಾವಣೆ ಹೊಂದುವ ಗುಣ ಹೊಂದಿರುತ್ತದೆ.

ಭಾಷ್ಯ: *ಏತತ್ಪ್ರಕರಣಾಪನ್ಯಸ್ತಾನಿ ಚ ಸರ್ವಾಣ್ಯೇವ ದೂಷಣಾನಿ ಆಧುನಿಕೇಽಪಿ ಮಾಯಾವಾದೇ ಯೋಜನೀಯಾನಿ ।*

ಅನುವಾದ: ಈ ಪ್ರಕರಣದಲ್ಲಿ ಹೇಳಿರುವ ಎಲ್ಲ ದೋಷಗಳೂ ಆಧುನಿಕ ಮಾಯಾವಾದ ದಲ್ಲಿಯೂ ಸೇರಿಸಬೇಕು.

ಭಾಷ್ಯ: *ಅಪರೇ ನಾಸ್ತಿಕಾ ಆಹುಃ– 'ಕ್ಷಣಿಕಾ ಬಾಹ್ಯವಿಷಯಾಃ ಸಂತಿ ತೇಷಾಂ ವಾಸನಯಾ ಜೀವಸ್ಯ ಬಂಧ' ಇತಿ । ತದಪಿ ದೂಷಯತಿ ।*

ಅನುವಾದ: ಇತರ ನಾಸ್ತಿಕರು ಹೇಳುವ 'ಬಾಹ್ಯ ಪದಾರ್ಥಗಳು ಕ್ಷಣಿಕ. ಇವುಗಳ 'ವಾಸನಾ'ದ ಸಂಪರ್ಕದಿಂದ ಜೀವದ ಬಂಧವುಂಟಾಗುತ್ತದೆ' ಎಂಬುದನ್ನು ಅಲ್ಲಗಳೆಯುವರು.

ವಿವರಣೆ: ವಾಸನಾ ಎಂದರೆ 'ಸ್ಮೃತಿಯನ್ನು ತರುವ ಸಂಸ್ಕಾರ ವಿಶೇಷ' ಎಂದರ್ಥ. 'ಅನಿರುದ್ಧ' ಎಂಬ ಮತ್ತೊಬ್ಬ ಭಾಷ್ಯಕಾರನ ಪ್ರಕಾರ ಮುಂದಿನ ಸೂತ್ರದಲ್ಲಿ ಬೌದ್ಧರನ್ನು ಅಲ್ಲಗಳೆಯಲಾಗಿದೆ. (ಬೌದ್ಧಪಕ್ಷಂ ನಿರಸ್ಯತಿ ।)

ಸೂತ್ರ: ನಾನಾದಿ ವಿಷಯೋಪರಾಗ ನಿಮಿತ್ತಕೋऽಪ್ಯಸ್ಯ ॥ ೨೭ ॥

ಅನುವಾದ: (ನಾಸ್ತಿಕರು ಹೇಳುವ 'ವಾಸನಾ'ದಿಂದ ಉಂಟಾಗುವ ಬಂಧ) ಅನಾದಿ ವಿಷಯಗಳ ವಾಸನಾ ಸಂಪರ್ಕದಿಂದಲೂ ಬಂಧ ಉಂಟಾಗಲಾರದು.

ಭಾಷ್ಯ: *ಅಸ್ಯ ಆತ್ಮನಃ ಪ್ರವಾಹರೂಪೇಣ ಅನಾದಿರ್ಯಾ ವಿಷಯ ವಾಸನಾ ತನ್ನಿಮಿತ್ತಕೋऽಪಿ ಬಂಧೋ ನ ಸಂಭವತೀತಿ ಅರ್ಥಃ । ತನ್ನಮಿತ್ತತೋऽಪ್ಯಸ್ಯೇತಿ ಪಾಠಸ್ತು ಸಮೀಚೀನಃ ।*

ಅನುವಾದ: ಅನಾದಿಯಾದ ವಿಷಯವಾಸನೆಯು ಪ್ರವಾಹರೂಪದಲ್ಲಿದ್ದು ಮತ್ತು ಆ ಕಾರಣದಿಂದ ಬಂಧವು ಉಂಟಾಗದು ಎಂದರ್ಥ. ಈ ಸೂತ್ರದಲ್ಲಿ 'ತನ್ನಿಮಿತ್ತಕೋऽಪಿ' ಎಂಬುದಕ್ಕೆ ಬದಲಾಗಿ 'ತನ್ನಿಮಿತ್ತತೋऽಪಿ' ಎಂಬ ಪಾಠವು ಸರಿಯಾದುದು.

ಭಾಷ್ಯ: *ಅಥ ಹೇತುಮಾಹ–*

ಅನುವಾದ: ಅದಕ್ಕೆ ಏನು ಕಾರಣ ಎಂಬುದನ್ನು ಹೇಳಿದ್ದಾರೆ

ಸೂತ್ರ: ನ ಬಾಹ್ಯಾಭ್ಯಂತರಯೋರುಪರಜ್ಯೋಪರಂಜಕಭಾವೋऽಪಿ ದೇಶವ್ಯವಧಾನಾತ್ ಸ್ರುಘ್ನಸ್ಥ ಪಾಟಲಿಪುತ್ರಯೋರಿವ ॥ ೨೮ ॥

ಅನುವಾದ: ಒಳಗಾಗಲಿ ಹೊರಗಾಗಲಿ ಬಣ್ಣ ಪಡೆಯುವ ಮತ್ತು ಬಣ್ಣ ನೀಡುವ ಪದಾರ್ಥಗಳ ಸಂಬಂಧವೂ ಸ್ಥಳಾವಕಾಶವಿರುವ ಕಾರಣ ಪದಾರ್ಥಗಳಲ್ಲಿ ಉಂಟಾಗದು. ಅದು ಸ್ರುಘ್ನ ಮತ್ತು ಪಾಟಲಿಪುತ್ರಗಳಲ್ಲಿರುವ ಪದಾರ್ಥಗಳ ಸಂಬಂಧವುಂಟು ಮಾಡಿದಂತೆ.

ವಿವರಣೆ: ಸ್ರುಘ್ನ ಮತ್ತು ಪಾಟಲೀಪುತ್ರಗಳ ನಡುವೆ ಅಂತರ ಬಹಳವಿದೆ.

ಭಾಷ್ಯ: *ತನ್ಮತೇ ಪರಿಚ್ಛಿನ್ನೋ ದೇಹಾಂತಸ್ಥ ಏವಾತ್ಮಾ । ತಸ್ಯ ಆಭ್ಯಂತರಸ್ಯ ನ ಬಾಹ್ಯ ವಿಷಯೇಣ ಸಹ ಉಪರಜ್ಯ–ಉಪರಂಜಕ ಭಾವೋऽಪಿ ಸಂಭವತಿ ।*

ಅನುವಾದ: ಅವರ (ಎಂದರೆ ಬೌದ್ಧರ) ಅಭಿಪ್ರಾಯದಲ್ಲಿ (ವಿಜ್ಞಾನರೂಪಿಯಾಗಿ) ಬೇರೆಯಾಗಿರುವ ಆತ್ಮ ದೇಹದೊಳಗೇ ಇರುವನು. ಹೀಗೆ ಒಳಗಿರುವ ಆತ್ಮನು ಹೊರಗಿನ ಪದಾರ್ಥದೊಡನೆ ಬಣ್ಣ ಪಡೆಯುವ ಮತ್ತು ಬಣ್ಣ ನೀಡುವ ಭಾವವೂ ಸಂಭವಿಸದು.

ಭಾಷ್ಯ: *ಕುತ ಇತಿ? ಸ್ರುಘ್ನಸ್ಥಪಾಟಲಿಪುತ್ರಸ್ಥಯೋರಿವ ದೇಶವ್ಯವಧಾನಾದಿತ್ಯರ್ಥಃ । ಸಂಯೋಗೇ ಸತ್ಯೇವಹಿ ವಾಸನಾಖ್ಯ ಉಪರಾಗೋ ದೃಷ್ಟಃ ।*

ಅನುವಾದ: ಏಕೆ (ಸಂಭವಿಸದು?) ಸ್ರುಘ್ನದಲ್ಲಿರುವ ಮತ್ತು ಪಾಟಲೀಪುತ್ರದಲ್ಲಿರುವ ಪದಾರ್ಥಗಳಂತೆ ದೇಶಗಳ ಅಂತರವಿರುವ ಕಾರಣ ಸಂಯೋಗವಾದಲ್ಲಿ ವಾಸನಾ ಎಂಬ ಸಂಬಂಧವುಂಟಾಗುವುದು.

ಭಾಷ್ಯ: *ಯಥಾ ಮಂಜಿಷ್ಠಾವಸ್ತ್ರಯೋಃ । ಯಥಾ ಮ ಪುಷ್ಪ ಸ್ಫಟಿಕಯೋರಿತಿ ।*

ಅನುವಾದ: ನಾರು(?) ಮತ್ತು ವಸ್ತ್ರಗಳಿದ್ದಂತೆ ಅಥವಾ ಹೂವು ಮತ್ತು ಸ್ಫಟಿಕಗಳಿದ್ದಂತೆ.

ಭಾಷ್ಯ: *ಅಪಿ ಶಬ್ದೇನ ಸ್ವಮತೇಽಪಿ ಸಂಗಾಭಾವಾದಿಃ ಸಮುಚ್ಚೀಯತೇ । ಸ್ರುಘ್ನ–ಪಾಟಲಿಪುತ್ರೌ ವಿಪ್ರಕೃಷ್ಟೌ ದೇಶವಿಶೇಷೌ ।*

ಅನುವಾದ: ಅಪಿಶಬ್ದದಿಂದ ಸೂತ್ರಕಾರನ ಅಭಿಪ್ರಾಯದಲ್ಲಿಯೂ ಸಂಯೋಗದ ಅಭಾವವು ಸೇರಿಸಲ್ಪಟ್ಟಿದೆ. ಸ್ರುಘ್ನ ಮತ್ತು ಪಾಟಲಿಪುತ್ರಗಳು ಪರಸ್ಪರ ದೂರದಲ್ಲಿರುವ ಎರಡು ಪ್ರದೇಶಗಳು.

ವಿವರಣೆ: ಪದಾರ್ಥಗಳು ದೂರವಿದ್ದರೆ ಸ್ಫಟಿಕ–ಪುಷ್ಪಗಳಂತೆ ಅಗಲಾರದು. ಹಾಗೆಯೇ ಬಾಹ್ಯ ವಸ್ತುಗಳು ಆಭ್ಯಂತರ ವಿಜ್ಞಾನಕ್ಕೆ ಸಂಪರ್ಕ ಹೊಂದಲಾರವು. ಪರಸ್ಪರ ದೂರವಿರುವ ಪದಾರ್ಥಗಳು ಒಂದರ ಧರ್ಮವನ್ನು ಮತ್ತೊಂದು ಪಡೆಯಲಾರವು.

ಭಾಷ್ಯ: *ನನು ಭವತಾಂ ಇಂದ್ರಿಯಾಣಾಮಿವ ಅಸ್ಮಾಕಂ ಆತ್ಮನಃ ವಿಷಯದೇಶೇ ಗಮನಾತ್ ವಿಷಯ ಸಂಯೋಗೇನ ವಿಷಯೋಪರಾಗಃ ವಕ್ತವ್ಯಃ ತತ್ರಾಹ–*

ಅನುವಾದ: ನೀವು ಇಂದ್ರಿಯಗಳು ವಿಷಯದತ್ತ ಹೋಗುತ್ತವೆ ಎಂದು ಹೇಳುವಂತೆ ನಾವೂ (ವಿಜ್ಞಾನ ರೂಪದ) ಆತ್ಮನು ವಿಷಯದತ್ತ ಹೋದಾಗ ವಿಷಯದ ಬಣ್ಣ ಪ್ರತಿಬಿಂಬಿತವಾಗಬಹುದಲ್ಲವೆ?

ಸೂತ್ರ: ದ್ವಯೋರೇಕದೇಶಲಬ್ಧೋಪರಾಗಾನ್ನ ವ್ಯವಸ್ಥಾ ॥ ೨೯ ॥

ಅನುವಾದ: ಒಂದೇ ಪದಾರ್ಥದ ಸ್ಥಳದಲ್ಲಿ ವಿಷಯದಿಂದ ಬಣ್ಣ ಪ್ರತಿಬಿಂಬಿತವಾಗುವುದು ಅಸಾಧ್ಯ.

ವಿವರಣೆ: ಎರಡೂ (ದ್ವಯೋಃ) ಎಂದರೆ ಬದ್ಧ ಮತ್ತು ಮುಕ್ತ ಇಬ್ಬರ ಆತ್ಮಗಳೂ ಒಂದೆಡೆಯೇ ಇರುವಾಗ ಬಂಧ ಮತ್ತು ಮುಕ್ತಿ ಎರಡನ್ನೂ ಸೇರಿಸುವುದು ಅಸಾಧ್ಯ.

ಭಾಷ್ಯ: *ದ್ವಯೋಃ ಬದ್ಧಮುಕ್ತಾತ್ಮನೋಃ ಏಕಸ್ಮಿನ್ ವಿಷಯದೇಶೇ ಲಬ್ಧವಿಷಯೋಪರಾಗಾನ್ನ ಬಂಧಮೋಕ್ಷವ್ಯವಸ್ಥಾ ಸ್ಯಾತ್ । ಮುಕ್ತಸ್ಯಾಪಿ ಬಂಧಾಪತ್ತೇರಿತ್ಯರ್ಥಃ ।*

ಅನುವಾದ: ಎರಡೂ ಬಗೆಯ ಬದ್ಧ ಮುಕ್ತ ಆತ್ಮಗಳಿಗೆ ಒಂದೇ ಪ್ರದೇಶದಲ್ಲಿ ವಿಷಯದ ಬಣ್ಣದ ಪ್ರತಿಬಿಂಬ ಬೀಳುವಾಗ ಬಂಧ–ಮೋಕ್ಷ ವ್ಯವಸ್ಥೆಯು ಆಗಲಾರದು. ಮುಕ್ತನೂ ಬಂಧಕ್ಕೆ ಸಿಕ್ಕಿಬೀಳುವ ಸಾಧ್ಯತೆ ಬರುವುದು.

ವಿವರಣೆ: ಬೌದ್ಧರು ವಿಜ್ಞಾನ ರೂಪವಾದ ಆತ್ಮನು ಹೊರಗೆ ಹೋಗಿ ಪದಾರ್ಥದೊಡನೆ ಸೇರಿದಾಗ ಮುಕ್ತನೂ ಸಹ ಅದರಲ್ಲಿ ಸೇರಿ ಹೋಗುವನು ಮತ್ತು ಮತ್ತೆಯೂ ಬದ್ಧನಾಗುವನು ಎನ್ನುವರು. ಇದು ಸಾಧ್ಯವಾಗದ ಸಂದರ್ಭ.

ಸೂತ್ರ: ಅದೃಷ್ಟವಶಾಚ್ಚೇತ್ ॥ ೩೦ ॥

ಅನುವಾದ: ಅದೃಷ್ಟದ ಬಲದಿಂದ ಬಂಧ–ಮುಕ್ತ ವ್ಯವಸ್ಥೆಯು ಉಂಟಾಗುವುದಾದರೆ ಹಾನಿಯೇನು?

ಭಾಷ್ಯ: *ನನ್ವೇಕದೇಶಸಂಬಂಧೇನ ವಿಷಯಸಂಯೋಗಸಾಮ್ಯೇಽಪಿ ಅದೃಷ್ಟವಶಾತ್ ಏವ ಉಪರಾಗಲಾಭ ಇತಿ ಚೇದಿತ್ಯರ್ಥಃ ।*

ಅನುವಾದ: ಒಂದೇ ಸ್ಥಳದ ಕಾರಣ ವಸ್ತುಗಳ ಸಂಯೋಗವು ಸಮವಾಗಿದ್ದರೂ ಅದೃಷ್ಟದ ಕಾರಣ ಉಪರಾಗವುಂಟಾದರೆ!

ವಿವರಣೆ: ಅದೃಷ್ಟದ ಕಾರಣ ಬದ್ಧವಾದ ಆತ್ಮವಿಶೇಷದ ಸಂಪರ್ಕ ಪದಾರ್ಥದೊಡನೆಯೂ ಅದೃಷ್ಟವಿಲ್ಲದ ಕಾರಣ ಆತ್ಮನ ಸಂಪರ್ಕ ವಸ್ತುವಿನೊಡನೆ ಆಗದೆಯೂ ಇರಬಹುದಾದ್ದರಿಂದ ಸಂಪರ್ಕವಿಲ್ಲದೆಯೂ ಇರಬಹುದು.

ಭಾಷ್ಯ: *ಪರಿಹರತಿ*

ಅನುವಾದ: ಸಂಶಯವನ್ನು ಪರಿಹರಿಸುತ್ತಾರೆ.

ಸೂತ್ರ: ನ ದ್ವಯೋರೇಕಕಾಲಾಯೋಗಾದುಪಕಾರ್ಯೋಪಕಾರಕಭಾವಃ ॥ ೩೧ ॥

ಅನುವಾದ: ಎರಡೂ ಒಂದೇ ಕಾಲದಲ್ಲಿ ಸೇರಲಾಗದ ಕಾರಣ ಉಪಕಾರ್ಯ ಮತ್ತು ಉಪಕಾರದ ಭಾವವು ಇರಲಾರದು.

ವಿವರಣೆ: ಕರ್ತೃವೂ ಭೋಕ್ತೃವೂ ಒಂದೇ ಕಾಲದಲ್ಲಿ ಸೇರಲಾರವು. ಏಕೆಂದರೆ ಬೌದ್ಧರು ಕ್ಷಣಿಕತ್ವವನ್ನು ಪ್ರತಿಪಾದಿಸುತ್ತಾರೆ. 'ಉಪಕಾರಕ' ಎಂದರೆ ಉಪಕಾರ ಮಾಡುವವನು ಮತ್ತು 'ಉಪಕಾರ್ಯ' ಎಂದರೆ ಉಪಕಾರಕ್ಕೆ ಅರ್ಹನಾದವನು.

ಭಾಷ್ಯ: *ಕ್ಷಣಿಕತ್ವಾಭ್ಯುಪಗಮಾತ್ ದ್ವಯೋಃ ಕರ್ತೃಭೋಕ್ತ್ರೋಃ ಏಕಕಾಲಾಸತ್ತ್ವೇನ ನೋಪಕಾರ್ಯೋಪಕಾರಕಭಾವಃ । ನ ಕರ್ತೃನಿಷ್ಠಾದೃಷ್ಟೇನ ಭೋಕ್ತೃನಿಷ್ಠೋ ವಿಷಯೋಪರಾಗಃ ಸಂಭವತೀತ್ಯರ್ಥಃ ।*

ಅನುವಾದ: ಕ್ಷಣಿಕತ್ವವನ್ನು ಅಂಗೀಕರಿಸಿದ ಮೇಲೆ ಕರ್ತೃ ಮತ್ತು ಭೋಕ್ತೃಗಳೆರಡೂ ಏಕಕಾಲದಲ್ಲಿ ಇರುವುದು ಸಾಧ್ಯವಿಲ್ಲದ ಕಾರಣ ಉಪಕಾರ್ಯ ಮತ್ತು ಉಪಕಾರಕಗಳು ಇರಲಾರವು. ಕರ್ತೃವಿನಲ್ಲಿರುವ ಅದೃಷ್ಟದಿಂದ ಭೋಕ್ತೃವಿನ ವಿಷಯ ಭೋಗಗಳು ಸಂಭವಿಸಲಾರವು.

ವಿವರಣೆ: ಬೌದ್ಧರು ವಿಜ್ಞಾನ ರೂಪನಾದ ಆತ್ಮನು ಕ್ಷಣಿಕವೆಂದು ಹೇಳುತ್ತಾರೆ. ಅದೃಷ್ಟವುಳ್ಳ ವಿಜ್ಞಾನ ರೂಪನಾದ ಆತ್ಮ ಮತ್ತು ಫಲವನ್ನು ಅನುಭವಿಸುವ ವಿಜ್ಞಾನ ರೂಪನಾದ ಆತ್ಮ ಇವೆರಡೂ ಬೇರೆ ಬೇರೆ. ಭೋಕ್ತಾ ಉಪಕಾರ್ಯ, ಕರ್ತೃ ಉಪಕಾರಕ. ಇವೆರಡೂ ಬೇರೆ ಬೇರೆ ಕ್ಷಣಗಳಲ್ಲಿರಬೇಕಾಗುತ್ತದೆ. ಆದ್ದರಿಂದ ವಿಷಯೋಪರಾಗವೆಂಬ ಬಂಧ ಸಂಭವಿಸದು.

ಭಾಷ್ಯ: *ಶಂಕತೇ ಇತಿ*

ಅನುವಾದ: (ಬೌದ್ಧರು) ಮತ್ತೆ ಶಂಕೆ ಪಡುವದು.

ಸೂತ್ರ: ಪುತ್ರಕರ್ಮವದಿತಿ ಚೇತ್ ॥ ೩೨ ॥

ಅನುವಾದ: ಮಗನ ಸಲುವಾಗಿ ಆಚರಿಸುವ ಕರ್ಮದಂತೆ ಸ್ವೀಕರಿಸಬಹುದಲ್ಲ.

ವಿವರಣೆ: ಉಪಕಾರ್ಯ–ಉಪಕಾರಕ ಭಾವವು ನಾನಾ ರೀತಿಯಲ್ಲಿ ಆಗುವುದು ಸಾಧ್ಯ. ಉದಾಹರಣೆಗೆ ಮಗನ ಸಲುವಾಗಿ ಮಾಡುವ ಕರ್ಮಗಳು.

ಭಾಷ್ಯ: *ನನು ಯಥಾ ಪಿತೃನಿಷ್ಠೇನ ಪುತ್ರಕರ್ಮಣಾ ಪುತ್ರಸ್ಯ*
ಉಪಕಾರೋ ಭವತಿ, ತದ್ವತ್ ವ್ಯಧಿಕರಣೇನ ಏವ
ಅದೃಷ್ಟೇನ ವಿಷಯೋಪರಾಗಃ ಸ್ಯಾದಿತ್ಯರ್ಥಃ ।

ಅನುವಾದ: ಪಿತೃವು ಮಾಡುವ ಪುತ್ರಕರ್ಮದಿಂದ ಪುತ್ರನಿಗೆ ಉಪಕಾರವು ಉಂಟಾಗುವುದು. ಹಾಗೆಯೇ ಬೇರೆ ಬೇರೆ ಆಶ್ರಯವುಳ್ಳ ಅದೃಷ್ಟದಿಂದಲೂ ವಿಷಯೋಪರಾಗವು ಆಗಬಹುದಲ್ಲವೆ?

ವಿವರಣೆ: ಮಗನ ಸಲುವಾಗಿ ತಂದೆಯು ಮಾಡುವ ಸಂಸ್ಕಾರಗಳು ತಂದೆಯನ್ನು ಉಪಕಾರಕನನ್ನಾಗಿಯೂ ಮಗನನ್ನು ಉಪಕಾರ್ಯನನ್ನಾಗಿಯೂ ಮಾಡುತ್ತವೆ. ಆದ್ದರಿಂದ ಅದೃಷ್ಟದ ಕಾರಣ ಮುಂದೆ ಯಾವಾಗಲೋ ವಿಷಯೋಪರಾಗ ವಾಗಬಹುದಲ್ಲವೆ? ಇದರಿಂದ ಅದೂ ಕೂಡ ಬಂಧಕ್ಕೆ ಕಾರಣವಾಗಬಹುದಲ್ಲವೆ?

ಭಾಷ್ಯ: *ದೃಷ್ಟಾಂತಾಸಿದ್ಧ್ಯಾ ಪರಿಹರತಿ–*

ಅನುವಾದ: ದೃಷ್ಟಾಂತವು ಅಸಿದ್ಧವೆಂದು ತಿಳಿಸಿ ಸಂಶಯವನ್ನು ಹೋಗಲಾಡಿಸುವರು.

ಸೂತ್ರ: ನಾಸ್ತಿ ಹಿ ತತ್ರ ಸ್ಥಿರಏಕಾತ್ಮಾ ಯೋ ಗರ್ಭಾಧಾನಾದಿನಾ ಸಂಸ್ಕೃ ಸಂಸ್ಕ್ರಿಯೇತ ॥ ೩೩ ॥

ಅನುವಾದ: (ಬೌದ್ಧಮತದಂತೆ) ಯಾವುದೇ ಒಂದು ಆತ್ಮನು ಸ್ಥಿರವಲ್ಲ; ಅದಕ್ಕೆ ಗರ್ಭಾಧಾನವೇ ಮೊದಲಾದ ಸಂಸ್ಕಾರಗಳು ಅನ್ವಯಿಸುವುದಿಲ್ಲ.

ಭಾಷ್ಯ: *ಪುತ್ರೇಷ್ಟ್ಯಾಪಿ ತನ್ಮತೇ ಪುತ್ರಸ್ಯ ಉಪಕಾರೋ ನ ಘಟತೇ । ಹಿ ಯಸ್ಮಾತ್ ತತ್ರ ತನ್ಮತೇ ಗರ್ಭಾಧಾನಮಾರಭ್ಯ ಜನ್ಮಪರ್ಯಂತಂ ಸ್ಥಾಯೀ ಏಕ ಆತ್ಮಾನಾಸ್ತಿ, ಯೋ ಜನ್ಮೋ- ತ್ತರ ಕಾಲೀನ ಕರ್ಮಾಧಿಕಾರಾರ್ಥಂ ಪುತ್ರೇಷ್ಟ್ಯಾ ಸಂಸ್ಕ್ರಿಯೇತ ಇತಿ ದೃಷ್ಟಾಂತಸ್ಯಾಪಿ ಅಸಿದ್ಧಿರಿತ್ಯರ್ಥಃ ।*

ಅನುವಾದ: ಪುತ್ರೇಷ್ಟಿಯಿಂದಲೂ ಅವರ ಮತದಲ್ಲಿ ಮಗನಿಗೆ ಉಪಕಾರವಾಗಲಾರದು. ಏಕೆಂದರೆ ಅವರ (ಬೌದ್ಧರ) ಅಭಿಪ್ರಾಯದಂತೆ ಗರ್ಭಾಧಾನದಿಂದ ಹಿಡಿದು ಜನ್ಮದ ಕೊನೆಯವರೆಗೆ ಸ್ಥಾಯಿಯಾದ ಒಂದು ಆತ್ಮ ಇರಲಾರದು. ಏಕೆಂದರೆ ಅದಕ್ಕೆ ಹುಟ್ಟಿದ ನಂತರದ ಕಾಲದಲ್ಲಿ ಕರ್ಮಗಳಲ್ಲಿ ಅಧಿಕಾರಕ್ಕಾಗಿ ಪುತ್ರೇಷ್ಟಿಯ ಮುಖಾಂತರ ಸಂಸ್ಕಾರ ಮಾಡಬೇಕಾಗುತ್ತದೆ; ಆದ್ದರಿಂದ ಈ ದೃಷ್ಟಾಂತವೂ ಸಿದ್ಧಿಸಲಾರದು ಎಂದರ್ಥ.

ಭಾಷ್ಯ: *ಅಸ್ಮನ್ಮತೇ ತು ಸ್ಥೈರ್ಯಾಭ್ಯುಗಮಾತ್ ತತ್ರಾಪಿ ಅದೃಷ್ಟಸಾಮಾನಾಧಿಕರಣ್ಯಂ ಏವ ಅಸ್ತಿ । ಪುತ್ರೇಷ್ಟ್ಯಾ ಜನಿತೇನ ಪುತ್ರೋಪಾಧಿನಿಷ್ಠಾದೃಷ್ಟೇನ ಏವ ಪುತ್ರೋಪಾ- ಧಿದ್ವಾರಾ ಪುತ್ರಸ್ಯೋಪಕಾರಾತ್ ಇತಿ ಅಸ್ಮಿನ್ಮತೇಽಪಿ ನ ದೃಷ್ಟಾಂತಸಿದ್ಧಿರಿತಿ ಭಾವಃ ।*

ಅನುವಾದ: ನಮ್ಮ ದೃಷ್ಟಿಯಲ್ಲಿ ಎಂದರೆ ಸ್ಥಿರವಾದ ಆತ್ಮವಾದಿಗಳ ಅಭಿಪ್ರಾಯದಲ್ಲಿಯೂ ಅದೃಷ್ಟದಿಂದ ಸಮಾನವಾದ ಆಶ್ರಯವನ್ನು ಕಾಣಬಹುದು. ಪುತ್ರೇಷ್ಟಿಯಿಂದ ಉಂಟಾದ ಪುತ್ರನೆಂಬ ಉಪಾಧಿಯಲ್ಲಿ ಇರುವ ಅದೃಷ್ಟದ ಕಾರಣ ಪುತ್ರನು ಉಪಕಾರ ಪಡೆಯುವುದರಿಂದ ನಮ್ಮ ದೃಷ್ಟಿಯಲ್ಲೂ ಈ ದೃಷ್ಟಾಂತವು ಒಪ್ಪಿಗೆಯಿಲ್ಲ.

ವಿವರಣೆ: ಸಾಂಖ್ಯರು ಸ್ಥಿರಾತ್ಮವಾದಿಗಳು ಅವರ ಪ್ರಕಾರ ಅದೃಷ್ಟವು ಪುತ್ರನ ಉಪಾಧಿಗೆ ಸೇರಿದ್ದು. ಆತ್ಮನಿಗಲ್ಲ. ಉಪಾಧಿಯಿಂದಾಗುವ ಬಾಹ್ಯ ಉಪರಾಗ ಬಂಧದ ಕಾರಣವೆಂದು ಹೇಳಲಾಗದು.

ಭಾಷ್ಯ: *ನನು ಬಂಧಸ್ಯಾಪಿ ಕ್ಷಣಿಕವಾದಿ –। ನಿಯತಕಾರಣಕೋಽಭಾವಕಾರಣಕೋ ವಾ ಬಂಧೋಽಸ್ತ್ವಿತ್ಯಾಶಯೇನ ಅಪರೋ ನಾಸ್ತಿಕಃ ಪ್ರತ್ಯವತಿಷ್ಠತೇ ।*

ಅನುವಾದ: ಬಂಧವೂ ಸಹ ಕ್ಷಣಿಕವಾದಿಗಳು ಹೇಳುವ ಅನಿರ್ದಿಷ್ಟ ಕಾರಣಗಳಿಂದಾಗುವುದೋ ಅಥವಾ ಅಭಾವದ ಕಾರಣಗಳಿಂದಾಗುವುದೋ ಎಂದು ಮತ್ತೊಬ್ಬ ನಾಸ್ತಿಕನು ಆಕ್ಷೇಪ ಮಾಡುತ್ತಾನೆ.

ವಿವರಣೆ: ಆತ್ಮವೂ ಕ್ಷಣಿಕ ಎಂದು ಹೇಳುವ ಬೌದ್ಧರು. ಬಂಧವನ್ನೂ ಕ್ಷಣಿಕವೆನ್ನಬೇಕಾಗುವುದು. ಆದ್ದರಿಂದ ಅನಿರ್ದಿಷ್ಟ ಕಾರಣವಾಗಬಹುದು ಅಥವಾ ಅಭಾವವೇ ಕಾರಣವಾಗಬಹುದು, ಬಂಧವಂತೂ ಆಗುವುದು. ಬಂಧಕ್ಕೆ ಅಭಾವವೂ ಒಂದು ಕಾರಣ ಎಂಬ ಅಭಿಪ್ರಾಯವಿದೆ.

ಸೂತ್ರ: **ಸ್ಥಿರಕಾರ್ಯಾಸಿದ್ಧೇಃ ಕ್ಷಣಿಕತ್ವಮ್ ॥ ೩೪ ॥**

ಅನುವಾದ: ಸ್ಥಿರವಾದ ಕಾರ್ಯವು ಸಿದ್ಧಿಸದ ಕಾರಣ (ಬಂಧವು) ಕ್ಷಣಿಕ.

ಭಾಷ್ಯ: *ಬಂಧಸ್ಯ ಇತಿ ಶೇಷಃ । ಭಾವಸ್ತೂಕ್ತ ಏವ ।*

ಅನುವಾದ: (ಸೂತ್ರದಲ್ಲಿ) ಉಳಿದ ಭಾಗ ಬಂಧವೆಂದು ತೆಗೆದುಕೊಳ್ಳಬೇಕು. (ಸೂತ್ರದ) ಭಾವವನ್ನು ಹೇಳಾಗಿದೆ.

ಭಾಷ್ಯ: *ಅತ್ರಾಯಂ ಪ್ರಯೋಗಃ । ವಿವಾದಾಸ್ಪದಂ ಬಂಧಾದಿ ಕ್ಷಣಿಕಂ ಸತ್ತ್ವಾತ್ ದೀಪಶಿಖಾದಿವತ್ । ನ ಚ ಘಟಾದೌ ವ್ಯಭಿಚಾರಃ ತಸ್ಯಾಪಿ ಪಕ್ಷಸಮತ್ವಾತ್ ।*

ಅನುವಾದ: ಇಲ್ಲಿ ಪ್ರಯೋಗ (ಅನುಮಾನ) ಹೀಗಿದೆ.

ವಿವಾದಾಸ್ಪದವಾದ ಬಂಧವು ಕ್ಷಣಿಕ. ಅದು ಸತ್ತ್ವವಾದ್ದರಿಂದ ದೀಪದ ಜ್ವಾಲೆಯಂತೆ. ಇಲ್ಲಿ ಘಟಾದಿಗಳಲ್ಲಿ ವ್ಯಭಿಚಾರವಿಲ್ಲ. ಏಕೆಂದರೆ ಘಟಾದಿಗಳೂ ಪಕ್ಷಕ್ಕೆ ಸಮಾನವಾದುವು.

ವಿವರಣೆ: ಪ್ರಯೋಗವೆಂದರೆ ಉದಾಹರಣೆಯ ಮೂಲಕ ಅನುಮಾನ ಮಾಡುವುದು. ವ್ಯಭಿಚಾರವೆಂದರೆ 'ಹೇತುದೋಷ', ತಪ್ಪು ಕಾರಣ ಕೊಡುವುದು. (ಉದಾಹರಣೆಗೆ ಶಬ್ದವು ನಿತ್ಯ, ಸ್ಪರ್ಶರಹಿತವಾಗಿರುವುದರಿಂದ) ಮೇಲಿನ ಉದಾಹರಣೆಯಲ್ಲಿ 'ದೀಪಶಿಖೆ' ನಿರಂತರ ಬದಲಾಗುತ್ತಲೇ ಇರುತ್ತದೆ. ಆದ್ದರಿಂದ ಅದು ಕ್ಷಣಿಕ.

ಭಾಷ್ಯ: *ಸಮಾಧತ್ತೇ ।*

ಅನುವಾದ: ಅದಕ್ಕೆ ಸಮಾಧಾನ ಹೇಳಲಾಗಿದೆ.

ಸೂತ್ರ: **ನ ಪ್ರತ್ಯಭಿಜ್ಞಾಬಾಧಾತ್ ॥ ೩೫ ॥**

ಅನುವಾದ: ಪ್ರತ್ಯಭಿಜ್ಞೆಯು ಬಾಧಗೊಳ್ಳುವುದರಿಂದ ವಸ್ತು ಕ್ಷಣಿಕವಲ್ಲ.

ವಿವರಣೆ: ಪ್ರತಿಭಿಜ್ಞಾ ಎಂದರೆ ಪ್ರತ್ಯಕ್ಷದ ಸಮಯದಲ್ಲಿ ವಸ್ತುವಿನ ಹಿಂದಿನ ಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡು ಅದನ್ನು ಗ್ರಹಿಸುವುದು ಕ್ಷಣಿಕವಾದಕ್ಕೆ ಪ್ರತ್ಯಭಿಜ್ಞೆಯು ಅಸಹಕಾರಿ.

ಭಾಷ್ಯ: *ನ ಕಸ್ಯಾಪಿ ಕ್ಷಣಿಕತ್ವಮ್ ಇತಿ ಶೇಷಃ ।*

ಅನುವಾದ: (ನ ಪ್ರತ್ಯಭಿಜ್ಞಾನಾತ್) ಮುಂದೆ 'ಕಸ್ಯಾಪಿ ಕ್ಷಣಿಕತ್ವಮ್' ಯಾವ ವಸ್ತುವಿಗೂ ಕ್ಷಣಿಕತೆಯಿಲ್ಲ ಎಂದು ಉಳಿದ ಭಾಗವನ್ನು ಸೇರಿಸಿಕೊಳ್ಳಬೇಕು.

ಭಾಷ್ಯ: *ಯದೇವಾಹಂ ಅದ್ರಾಕ್ಷಂ ತದೇವ ಅಹಂಸ್ಪೃಶಾಮಿ ಇತ್ಯಾದಿ ಇತ್ಯಾದಿ ಪ್ರತ್ಯಭಿಜ್ಞಯಾ ಸ್ಥೈರ್ಯಸಿದ್ಧೇಃ ಕ್ಷಣಿಕತ್ವಸ್ಯ ಬಾಧಾತ್ ಪ್ರತಿಪಕ್ಷಾನುಮಾನೇನೇತ್ಯರ್ಥಃ ।*

ಅನುವಾದ: 'ನಾನು ಯಾವ ವಸ್ತುವನ್ನು ನೋಡಿದೆನೋ ಅದನ್ನೇ ಸ್ಪರ್ಶಿಸುತ್ತಿದ್ದೇನೆ ಎಂಬ ಪ್ರತ್ಯಭಿಜ್ಞೆಯಿಂದ ಸ್ಥಿರತೆಯು ಸಿದ್ಧವಾಗುತ್ತದೆ. ಪ್ರತಿಪಕ್ಷದವರ ಅನುಮಾನದಿಂದ (ಕ್ಷಣಿಕತ್ವಕ್ಕೆ ಬಾಧ ಬರುತ್ತದೆ).

ಭಾಷ್ಯ: *ತದ್ಯಥಾ ಬಂಧನಾದಿ ಸ್ಥಿರಂ ಸತ್ತ್ವಾತ್ ಘಟಾದಿವದಿತಿ*
ಅಸ್ಮನ್ಮತೆ ಅನುಕೂಲತರ್ಕಸತ್ವೇನ ನ ಸತ್ಪ್ರತಿಪಕ್ಷತಾ ।
ಪ್ರದೀಪಾದೌ ಚ ಸೂಕ್ಷ್ಮಾನೇಕಲಕ್ಷಣಾನಾಕಲನೇನ
ಕ್ಷಣಿಕತ್ವಭ್ರಮ ಏವ ಪರೇಕ್ಷಾಮಿತಿ ।

ಅನುವಾದ: ಬಂಧಾದಿಗಳು ಸ್ಥಿರ ಏಕೆಂದರೆ ಅವು ಸತ್ತ್ವಗಳು, ಘಟವೇ ಮೊದಲಾದವುಗಳಂತೆ. ನಮ್ಮ ಅಭಿಪ್ರಾಯದಲ್ಲಿ ಅನುಕೂಲ ತರ್ಕವಿರುವ ಕಾರಣ ಸತ್‌ಪ್ರತಿಪಕ್ಷ ದೋಷವಿಲ್ಲ. ದೀಪವೇ ಮುಂತಾದುವುಗಳಲ್ಲಿ ಕ್ಷಣಗಳನ್ನು ಎಣಿಸುವುದರಿಂದ ಕ್ಷಣಿಕತ್ವದ ಭ್ರಮೆಯು ಇತರರಿಗೆ ಆದೀತು.

ವಿವರಣೆ: ಸತ್ಪ್ರತಿಪಕ್ಷವೆಂಬುದು ಒಂದು ಹೇತ್ವಾಭಾಸ ಅಥವಾ ಹೇತುದೋಷ. ಒಂದು ಸಾಧ್ಯವನ್ನು ಸಾಧಿಸಲು ಬೇಕಾದ ಅಂಶಗಳು, ಪಕ್ಷ ಅಥವಾ ಪ್ರತಿಪಕ್ಷಗಳು. ಉದಾಹರಣೆಗೆ ಶಬ್ದ ನಿತ್ಯವೇ ಅನಿತ್ಯವೇ ಎಂದು ಸಂದೇಹ ಬಂದಾಗ ಶಬ್ದ ನಿತ್ಯ ಎಂಬುದು ಪಕ್ಷ, ಶಬ್ದ ಅನಿತ್ಯ ಎಂಬುದು ಪ್ರತಿಪಕ್ಷ. ಆದರೆ ಹಾಗೆಯೇ 'ಪರ್ವತದಲ್ಲಿ ಬೆಂಕಿ ಇದೆ' ಎನ್ನಲು 'ಧೂಮ ಕಾರಣ; ಅಡಿಗೆಮನೆಯಲ್ಲಿರುವಂತೆ' ಎಂದು ಹೇಳುವ ಹಾಗೆ 'ಪರ್ವತದಲ್ಲಿ ಬೆಂಕಿ ಇಲ್ಲ' 'ಏಕೆಂದರೆ ಅದು ಕಲ್ಲುಗಳಿಂದ ಕೂಡಿದೆ'; 'ಗೋಡೆಯಂತೆ' ಎಂದೂ ಹೇಳಲು ಬರುತ್ತದೆ. ಇಂತಹ ದೋಷವನ್ನು 'ಸತ್ಪ್ರತಿಪಕ್ಷ' ಎನ್ನುವರು. ಇದು ಅನುಮಾನಕ್ಕೆ ಪ್ರತಿಬಂಧಕವಾದುದು.

ಸೂತ್ರ: ಶ್ರುತಿ ನ್ಯಾಯವಿರೋಧಾಚ್ಚ ॥ ೩೬ ॥

(ಕ್ಷಣಿಕವಾದವನ್ನು ಒಪ್ಪಲಾಗದು) ಏಕೆಂದರೆ ಅದು ಶ್ರುತಿಗೂ, ನ್ಯಾಯಕ್ಕೂ ವಿರೋಧವಾದುದು.

ಭಾಷ್ಯ: *ಸದೇವ ಸೋಮ್ಯ ಇದಮಗ್ರಾಸೀತ್ (ಛಾಂದೋಗ್ಯ ೬-೨-೧),*
ತಮ ಏವ ಇದಮಗ್ರ ಆಸೀತ್ (ಮೈತ್ರಾಯಣೀ ೫.೨)
ಇತ್ಯಾದಿಶ್ರುತಿಭಿಃ ಕಥಮಸತಃ ಸಜ್ಜಾಯೇತ
ಇತ್ಯಾದಿ (ಛಾಂ. ೬.೨.೨) ಶ್ರೌತಾದಿ ಯುಕ್ತಿಭಿಶ್ಚ ಕಾರ್ಯ-
ಕಾರಣಾತ್ಮಕ ಅಖಿಲ ಪ್ರಪಂಚೇ ಕ್ಷಣಿಕತ್ವಾನುಮಾನಸ್ಯ
ವಿರೋಧಾನ್ನ ಕ್ಷಣಿಕತ್ವಂ ಕಸ್ಯಾಪೀತ್ಯರ್ಥಃ ।

ಅನುವಾದ: 'ಎಲೈ ಸೋಮ್ಯ, ಪ್ರಾರಂಭದಲ್ಲಿ ಇದೆಲ್ಲವೂ ಇತ್ತು. 'ಪ್ರಾರಂಭದಲ್ಲಿ ಕತ್ತಲೆಯೊಂದೇ ಇತ್ತು' ಮುಂತಾದ ಶ್ರುತಿವಾಕ್ಯಗಳಿಂದ 'ಸತ್ ಅಲ್ಲದಿರುವುದರಿಂದ 'ಸತ್' ಹೇಗೆ ಹುಟ್ಟೀತು ಮುಂತಾದ ಶ್ರುತಿವಾಕ್ಯಗಳಿಂದ ಯುಕ್ತಿಯಿಂದಲೂ ಕಾರ್ಯಕಾರಣಗಳಿಂದಾದ ಸಮಸ್ತ ಜಗತ್ತಿನಲ್ಲಿ ಕ್ಷಣಿಕತ್ವಕ್ಕೆ ವಿರೋಧವಿರುವುದರಿಂದ ಯಾವುದಕ್ಕೂ ಕ್ಷಣಿಕತ್ವವನ್ನು ಸಿದ್ಧಮಾಡಲಾಗದು.

ಸೂತ್ರ: ದೃಷ್ಟಾಂತಾಸಿದ್ಧೇಶ್ಚ ॥ ೩೭ ॥

ಅನುವಾದ: (ಕ್ಷಣಿಕತ್ವವನ್ನು ಸಿದ್ಧಿಸಲು) ಮೇಲೆ ಹೇಳಿದ ದೃಷ್ಟಾಂತವೂ ಅಸಿದ್ಧವಾದುದು.

ಭಾಷ್ಯ: *ಕಿಂಚ ಕ್ಷಣಿಕತಾವಾದಿನಾಂ ಮೃದ್ಘಟಾದಿಸ್ಥಲೇಽಪಿ ಕಾರ್ಯಕಾರಣಭಾವಃ ಪ್ರವೃತ್ತಿ–ನಿವೃತ್ತಿ–ಅನ್ಯಥಾನುಪಪತ್ತಿ ಸಿದ್ಧೋ ನೋಪಪದ್ಯೇತೇತ್ಯಾಹ ।*

ಅನುವಾದ: ಅಷ್ಟೇ ಅಲ್ಲದೆ ಕ್ಷಣಿಕವಾದಿಗಳು ಮಣ್ಣು, ಘಟ ಮುಂತಾದುವುಗಳ ಸ್ಥಳದಲ್ಲಿಯೂ ಕಾರ್ಯಕಾರಣಭಾವವೂ ಪ್ರವೃತ್ತಿ, ನಿವೃತ್ತಿಗಳಿಲ್ಲದೆ ಬೇರೆ ರೀತಿಯಲ್ಲಿ ಸಿದ್ಧವಾಗದು.

ವಿವರಣೆ: ಪ್ರವೃತ್ತಿ ಎಂದರೆ ಪ್ರಯತ್ನ, ಕಾರ್ಯದಲ್ಲಿ ತೊಡಗುವಿಕೆ. ನಿವೃತ್ತಿ ಎಂದರೆ ಜಿಹಾಸೆ, ಹಿಂದೆಗೆಯುವುದು. ಅನ್ಯಥಾನುಪಪತ್ತಿ ಎಂದರೆ, ಸ್ವಾಭಾವ–ಪ್ರಯೋಜ್ಯಾಸಂಭವ, ಬೇರೆಯ ರೀತಿಯಲ್ಲಿ ಸಾಧ್ಯವಾಗದ ಸನ್ನಿವೇಶ.

ಸೂತ್ರ: ಯುಗಪಜ್ಜಾಯಮಾನಯೋಃ ಕಾರ್ಯಕಾರಣಭಾವಃ ॥ ೩೮ ॥

ಅನುವಾದ: ಒಟ್ಟಿಗೇ ಉತ್ಪನ್ನವಾಗುವ ಪದಾರ್ಥಗಳಿಗೆ ಕಾರ್ಯಕಾರಣ ಭಾವವು ಇರಲಾರದು.

ಭಾಷ್ಯ: *ಕಿಂ ಯುಗಪಜ್ಜಾಯಮಾನಯೋಃ ಕಾರ್ಯಕಾರಣಭಾವಃ ಕಿಂ ವಾ ಕ್ರಮಿಕಯೋಃ? ತತ್ರ ನಾದ್ಯ ವಿನಿಗಮಕಾಭಾವದ್ ದಿಭ್ಯಃ ಇತಿಭಾವಃ ।*

ಅನುವಾದ: ಯಾವ ಪದಾರ್ಥವು ಒಂದೇ ಕಾಲದಲ್ಲಿ ಉತ್ಪನ್ನವಾಗುವುದೋ ಅದರಲ್ಲಿ ಕಾರ್ಯಕಾರಣ ಭಾವವಿರುವುದೇ ಅಥವಾ ಕ್ರಮವಾಗಿ ಉತ್ಪನ್ನವಾಗುವುದೋ! ಈ ಎರಡು ಸಾಧ್ಯತೆಗಳಲ್ಲಿ ಮೊದಲನೆಯದು ಸಾಧ್ಯವಿಲ್ಲ. ಏಕೆಂದರೆ ಅದರಲ್ಲಿ ವಿನಿಗಮಕವಿಲ್ಲ.

ವಿವರಣೆ: ವಿನಿಗಮನಾ ಎಂದರೆ 'ಅನ್ಯತರ ಪಕ್ಷಪಾತಿನೀ ವೃತ್ತಿಃ' ಬೇರೊಂದು ಪಕ್ಷವನ್ನು ಗ್ರಹಿಸಿ ಪಕ್ಷಾಂತರವನ್ನು ಹಿಡಿಯುವುದು. ಮೇಲಿನ ಸಾಧ್ಯತೆಗಳಲ್ಲಿ ಒಟ್ಟಿಗೇ ಉತ್ಪನ್ನವಾದಾಗ ಕಾರ್ಯಕಾರಣ ಭಾವವು ಸಾಧ್ಯವಿಲ್ಲ. ಕಾರಣವೂ ಕಾರ್ಯವೂ ಒಂದೇ ಕಾಲದಲ್ಲಿ ಇರಲಾರವು.

ಭಾಷ್ಯ: *ನಾಂತ್ಯ ಇತ್ಯಾಹ ।*

ಅನುವಾದ: ಎರಡನೆಯ ಸಾಧ್ಯತೆಯೂ ಆಗದು.

ಸೂತ್ರ: ಪೂರ್ವಾಪಾಯೇ ಉತ್ತರಾಯೋಗಾತ್ ॥ ೩೯ ॥

ಅನುವಾದ: ಮೊದಲ ವಸ್ತು ವಿನಾಶವಾದ ನಂತರ ಅನಂತರದ ವಸ್ತುವಿನೊಡನೆ ಸಂಬಂಧ ಹೊಂದಲಾರದು.

ವಿವರಣೆ: ಕ್ಷಣಿಕವಾದದ ಪ್ರಕಾರ ಯಾವ ವಸ್ತು ಯಾವ ಕ್ಷಣದಲ್ಲಿ ಉತ್ಪನ್ನವಾಗುವುದೋ ಅದರ ದ್ವಿತೀಯ ಕ್ಷಣದಲ್ಲಿ ನಾಶವಾಗುವುದು. ಹೀಗೆ ನಾಶವಾದ ವಸ್ತು ಮತ್ತೊಂದು ವಸ್ತುವಿಗೆ ಕಾರಣವಾಗುವುದು ಹೇಗೆ? ಎಂದು ಅಲ್ಲಗಳೆಯುತ್ತಾರೆ.

ಭಾಷ್ಯ: *ಪೂರ್ವಸ್ಯ ಕಾರಣಸ್ಯ ಅಪಾಯಕಾಲೇ ಉತ್ತರಸ್ಯ ಕಾರ್ಯಸ್ಯ ಉತ್ಪತ್ತ್ಯನೌಚಿತ್ಯಾದಪಿ ನ ಕ್ಷಣಿಕವಾದೇ ಸಂಭವತಿ ಕಾರ್ಯಕಾರಣಭಾವಃ ।*

ಅನುವಾದ: ಮೊದಲ ಕ್ಷಣದಲ್ಲಿ ಉತ್ಪನ್ನವಾದ ವಸ್ತುವು ಕಾರಣ ಎಂದು ಹೇಳಿದರೆ ಉತ್ತರಕಾಲದಲ್ಲಿ ಉತ್ಪನ್ನವಾಗುವ ವಸ್ತು ಬರುವ ಮೊದಲೇ ಪೂರ್ವಕ್ಷಣದ ಕಾರಣವು ವಿನಾಶವಾಗಿ ಬಿಟ್ಟಿರುತ್ತದೆ. ಆದ್ದರಿಂದ ಕಾರ್ಯಕಾರಣ ಭಾವವು ಕ್ಷಣಿಕವಾದಕ್ಕೆ ಔಚಿತ್ಯವನ್ನು ಹೊಂದದು.

ಭಾಷ್ಯ: *ಉಪಾದಾನ ಕಾರಣಾನುಗತತಯಾ ಏವ ಕಾರ್ಯಾನುಭವಾದ್ ಇತ್ಯರ್ಥಃ*

ಅನುವಾದ: ಉಪಾದಾನ ಕಾರಣವನ್ನು ಹಿಂಬಾಲಿಸಿಯೇ ಕಾರ್ಯವು ಅನುಭವಕ್ಕೆ ಬರುತ್ತದೆ.

ವಿವರಣೆ: ಉಪಾದಾನ ಕಾರಣವನ್ನು ಅವಲಂಬಿಸಿಯೇ ಕಾರ್ಯವು ಉತ್ಪತ್ತಿಯಾಗುವುದು. ಉಪಾದಾನ ಕಾರಣವು ನಾಶವಾದ ಮೇಲೆ ಕಾರ್ಯಕ್ಕೆ ಕಾರಣವಿಲ್ಲದೆ ಹೋಗುವುದು. ಇನ್ನು ಕಾರ್ಯಕಾರಣಭಾವ ಸಂಭವಿಸುವುದಾದರೂ ಹೇಗೆ?

ಭಾಷ್ಯ: *ಉಪಾದಾನ ಕಾರಣಮಧಿಕೃತ್ಯೈವ ದೂಷಣಾಂತರಮಾಹ ।*

ಅನುವಾದ: ಉಪಾದಾನ ಕಾರಣವನ್ನು ಆಧಾರವಾಗಿಟ್ಟುಕೊಂಡು ಇನ್ನೊಂದು ದೂಷಣೆಯನ್ನು ಮಾಡಿದ್ದಾರೆ.

ವಿವರಣೆ: ಉಪಾದಾನ ಎಂದರೆ ಮೂಲದ್ರವ್ಯ ಅವಯವಿಯಾಗಿ ಪರಿಣಮಿಸುವುದು.

ಸೂತ್ರ: ತದ್ಭಾವೇ ತದಯೋಗಾದುಭಯವ್ಯಭಿಚಾರಾದಪಿ ॥ ೪೦ ॥

ಅನುವಾದ: ಅದು ಇರಲಾಗಿ ಅದರ ಸಂಬಂಧವಿಲ್ಲದೆ ಉಭಯ ವ್ಯಭಿಚಾರದ ಕಾರಣ (ಕಾರ್ಯಕಾರಣ ಸಂಬಂಧವಿರಲಾರದು)

ವಿವರಣೆ: ಅದು ಇರಲಾಗಿ ಎಂದರೆ ಕಾರಣವಿರಲಾಗಿ; 'ಉಭಯವ್ಯಭಿಚಾರ'ವೆಂದರೆ ಎರಡು ಬಗೆಯ ಹೇತು ದೋಷಗಳಿಂದ ಅ) ಅನ್ವಯವ್ಯಭಿಚಾರ, ಬ) ವ್ಯತಿರೇಕವ್ಯಭಿಚಾರ ಕೂಡಿರುವುದು. ಅ) ಕಾರಣವಿರುವಾಗ ಕಾರ್ಯದ ಅಭಾವ ಬ) ಕಾರ್ಯವಿರುವಾಗ ಕಾರಣದ ಅಭಾವ

ಭಾಷ್ಯ: *ಯತಃ ಪೂರ್ವಸ್ಯ ಭಾವಕಾಲೇ ಉತ್ತರಸ್ಯಾಸಂಬಂಧಃ ಅತಃ ಉಭಯವ್ಯಭಿಚಾರಾತ್ ಅನ್ವಯ ವ್ಯತಿರೇಕ ವ್ಯಭಿಚಾರಾದಪಿ ನ ಕಾರ್ಯಕಾರಣಭಾವಃ ಇತ್ಯರ್ಥಃ*

ಅನುವಾದ: ಏಕೆಂದರೆ ಪೂರ್ವವಸ್ತುವು ಇರುವಾಗ ಮುಂದೆ ಬರುವ ವಸ್ತುವಿಗೆ ಸಂಬಂಧವಿಲ್ಲದೆ ಹೋಗುವುದು. ಆದ್ದರಿಂದ ಅನ್ವಯ ವ್ಯತಿರೇಕದ ವ್ಯಭಿಚಾರದ ಕಾರಣ ಕಾರ್ಯಕಾರಣ ಭಾವವು ಸಾಧ್ಯವಿಲ್ಲ.

ಭಾಷ್ಯ: *ತಥಾಹಿ ಯದೋಪಾದೇಯೋತ್ಪತ್ತಿಸ್ತದೋಪಾದಾನಂ*
ಯದಾಚ ಉಪಾದಾನಾಭಾವಸ್ತದೋಪಾದೇಯತೋತ್ಪತ್ತ್ಯಭಾವಃ
ಇತಿ ಅನ್ವಯವ್ಯತಿರೇಕೇಣೈವ ಉಪಾದಾನೋಪಾದೇಯ–
ಯೋಃ ಕಾರ್ಯಕಾರಣಭಾವಗ್ರಹಃ ಭವತಿ ।

ಅನುವಾದ: ಉಪಾದಾನ ಕಾರಣವಿರುವಾಗ ಉಪಾದೇಯದ ಉತ್ಪತ್ತಿಯು ಅನ್ವಯವು, ಉಪಾದಾನದ ಅಭಾವವಿರುವಾಗ ಉಪಾದೇಯದ ಅಭಾವವು ವ್ಯತಿರೇಕವು. ಹೀಗೆ ಅನ್ವಯ ವ್ಯತಿರೇಕಗಳಿಂದಲೇ ಉಪಾದಾನ ಉಪಾದೇಯಗಳಲ್ಲಿ ಕಾರ್ಯ–ಕಾರಣ ಭಾವವು ಉಂಟಾಗುವುದು.

ವಿವರಣೆ: ಉಪಾದಾನವೆಂದರೆ ಕಾರಣವಸ್ತು, ಉಪಾದೇಯವೆಂದರೆ ಕಾರ್ಯವಸ್ತು.

ಭಾಷ್ಯ: *ತತ್ರ ಕ್ಷಣಿಕತ್ವೇನ ಕ್ರಮಿಕಯೋಃ ವಿರುದ್ಧಕಾಲತಯಾ*
ಅನ್ವಯವ್ಯತಿರೇಕವ್ಯಭಿಚಾರಾಭ್ಯಾಂ ನ ಕಾರ್ಯಕಾರಣ ಭಾವಸಿದ್ಧಿರಿತಿ ।

ಅನುವಾದ: ಏಕೆಂದರೆ ಕ್ಷಣಿಕತ್ವದ ಕಾರಣ ಕ್ರಮವಾಗಿ ವಿರುದ್ಧ ಕಾಲವಾಗುವುದರಿಂದ ಅನ್ವಯ ವ್ಯತಿರೇಕಗಳಲ್ಲಾಗುವ ಹೇತುದೋಷಗಳಿಂದ ಕಾರ್ಯಕಾರಣ ಭಾವವು ಸಿದ್ಧಿಸದು.

ವಿವರಣೆ: ಕಾರಣವಿಲ್ಲದೆ ಕಾರ್ಯವಾಗದು. ಹಾಗಿದ್ದರೂ ಕಾರಣವಿಲ್ಲದೆ ಕಾರ್ಯ ವುಂಟಾಗುವುದು ಎಂಬ ಬೌದ್ಧರ ಕ್ಷಣಿಕವಾದವು ಅಸಂಬದ್ಧವಾಗುವುದು.

ಭಾಷ್ಯ: *ನನು ನಿಮಿತ್ತಕಾರಣಸ್ಯೈವ ಉಪಾದಾನಕಾರಣಸ್ಯಾಪಿ*
ಪೂರ್ವಭಾವಮಾತ್ರೇಣೈವ ಕಾರಣತಾಸ್ತು–ತತ್ರಾಹ

ಅನುವಾದ: (ಆಕ್ಷೇಪ) ನಿಮಿತ್ತ ಕಾರಣದಂತೆ ಉಪಾದಾನ ಕಾರಣವೂ ಮೊದಲಿರುವುದು. ಕಾರಣದ ಪ್ರಯೋಜನವನ್ನು ಹೊಂದಬಹುದಲ್ಲವೆ?

ಸೂತ್ರ: ಪೂರ್ವಭಾವಮಾತ್ರೇ ನ ನಿಯಮಃ ॥ ೪೧ ॥

ಮೊದಲಿದ್ದ ಮಾತ್ರಕ್ಕೆ ಉಪಾದಾನವೆನಿಸಲಾರದು.

ಭಾಷ್ಯ: *ಪೂರ್ವಭಾವಮಾತ್ರಾಭ್ಯುಪಗಮೇ ಚೇದಮೇವೋ–*
ಪಾದಾನಮಿತಿ ನಿಯಮೋ ನ ಸ್ಯಾನ್ನಿಮಿತ್ತಕಾರಣಾ–
ನಾಮಪಿ ಪೂರ್ವಭಾವವಿಶೇಷಾತ್ । ಉಪಾದಾನ–
ನಿಮಿತ್ತಯೋರ್ವಿಭಾಗಃ ಸರ್ವಲೋಕಸಿದ್ಧಃ ಇತ್ಯರ್ಥಃ ।

ಅನುವಾದ: ಪೂರ್ವದಲ್ಲಿ ಇದ್ದ ಮಾತ್ರಕ್ಕೇ ಅದು ಉಪಾದಾನವೆನಿಸಿಕೊಳ್ಳಲಾರದು. ನಿಮಿತ್ತಕಾರಣವೂ ಕಾರ್ಯಕ್ಕೆ ಪೂರ್ವಭಾವಿಯಾಗಿರುವುದು. ಆದರೆ ನಿಮಿತ್ತ ಕಾರಣಕ್ಕೂ ಉಪಾದಾನಕಾರಣಕ್ಕೂ ವಿಭಾಗವು ಲೋಕಕ್ಕೆಲ್ಲ ತಿಳಿದದ್ದೇ, ಎಂದರ್ಥ.

ಭಾಷ್ಯ: *ಅಪರೇ ನಾಸ್ತಿಕಾ ಆಹುಃ– 'ವಿಜ್ಞಾನಾತಿರಿಕ್ತವಸ್ತ್ವಭಾವೇನ ಬಂಧೋಽಪಿ ವಿಜ್ಞಾನಮಾತ್ರಂ ಸ್ವಪ್ನಪದಾರ್ಥವತ್' । ಅತಃ ಅತ್ಯಂತಮಿಥ್ಯಾತ್ವೇನ ನ ತತ್ರ ಕಾರಣಮಸ್ತೀತಿ । ತನ್ಮತಂ ಅಪಾಕರೋತಿ ।*

ಅನುವಾದ: 'ವಿಜ್ಞಾನವೊಂದನ್ನೇ ತತ್ತ್ವವಾಗಿಟ್ಟುಕೊಂಡು ಅದನ್ನು ಮೀರಿದ ವಸ್ತುಗಳು ಇಲ್ಲ, ಬಂಧವೂ ಕೂಡ ವಿಜ್ಞಾನ ಮಾತ್ರ, ಅದೂ ಸ್ವಪ್ನದಂತೆಯೇ' ಎಂದು ನಾಸ್ತಿಕರು ಹೇಳುವರು. 'ಆದ್ದರಿಂದ ಪೂರ್ಣವಾಗಿ ಮಿಥ್ಯಾತ್ವವೇ ಇರುವಾಗ ಬಂಧಕ್ಕೆ ಕಾರಣವೇ ಇಲ್ಲ' ಎನ್ನುವರು. ಆ ಅಭಿಪ್ರಾಯವನ್ನು ಅಲ್ಲಗಳೆಯುವರು.

ಸೂತ್ರ: ನ ವಿಜ್ಞಾನಮಾತ್ರಂ ಬಾಹ್ಯಪ್ರತೀತೇಃ ॥ ೪೨ ॥

ಅನುವಾದ: ಕೇವಲ ವಿಜ್ಞಾನವಷ್ಟೇ ಅಲ್ಲ, ಹೊರಗಿನ ವಸ್ತುಗಳ ಅರಿವಾಗುವುದರಿಂದ.

ವಿವರಣೆ: ಬೌದ್ಧರ ಪ್ರಕಾರ ವಿಜ್ಞಾನವೆಂದರೆ, 'ಇದು ಘಟ' ಎಂದೂ, ಅದರ (ಜ್ಞಾನವನ್ನು) ತಿಳಿಯುವುದೂ ಎಂದೂ ಅನುಭವ ಪಡೆವುದು. ವಸ್ತುವನ್ನು ಮನಸ್ಸಿನಲ್ಲಿ ಗ್ರಹಿಸಿ ಅದರ ಅಸ್ತಿತ್ವವನ್ನು ಅರಿಯುವುದು.

ಭಾಷ್ಯ: *ನ ವಿಜ್ಞಾನಮಾತ್ರಂ ತತ್ತ್ವಂ, ಬಾಹ್ಯಾರ್ಥಾನಾಮಪಿ ವಿಜ್ಞಾನವತ್ ಪ್ರತೀತಿಸಿದ್ಧತ್ವಾತ್ ಇತ್ಯರ್ಥಃ ।*

ಅನುವಾದ: ವಿಜ್ಞಾನವೊಂದೇ ತತ್ತ್ವವಲ್ಲ. ಹೊರಗಿನ ವಸ್ತುಗಳೂ ವಿಜ್ಞಾನದಂತೆ ಅರಿವಿಗೆ ಬರುತ್ತವೆ.

ಭಾಷ್ಯ: *ನನು ಲಾಘವತರ್ಕೇಣ ಸ್ವಪ್ನಾದಿದೃಷ್ಟಾಂತೈಃ ದೃಶ್ಯತ್ವ–ಹೇತುಕಮಿಥ್ಯಾತ್ವಾನುಮಾನೇನ ಬಾಹ್ಯವಸ್ತ್ವನುಭವಃ ಬಾಧನೀಯ ಅತ್ರ ಭವತಾಮ್ । ಶ್ರುತಿ–ಸ್ಮೃತೇ ಅಪಿಸ್ತಃ– ಚಿದ್ಧೀದಂ ಸರ್ವಂ (ನೃಸಿಂ ೨–೭) ತಸ್ಮಾದ್ವಿಜ್ಞಾನಮೇವಾಸ್ತಿ ನ ಪ್ರಪಂಚಃ ನ ಸಂಸೃತಿಃ । (ಕೂರ್ಮ ೨.೨.೩೯) ಇತ್ಯಾದೌ ।*

ಅನುವಾದ: ಆಕ್ಷೇಪ–ಸುಲಭ ತರ್ಕದಿಂದಲೇ ಸ್ವಪ್ನವೇ ಮೊದಲಾದ ದೃಷ್ಟಾಂತಗಳ ಆಧಾರದ ಮೇಲೆ ಹೊರಗೆ ಕಾಣುವ ವಸ್ತುಗಳು ಮಿಥ್ಯೆ ಎಂಬ ಅನುಮಾನ ಪ್ರಮಾಣದಿಂದ ಬಾಹ್ಯವಸ್ತುಗಳ ಅನುಭವವು ಪ್ರಮಾಣ ವಿರೋಧವೆನ್ನುವುದೇ ಸರಿ. ಆದರೆ ಶ್ರುತಿ ಸ್ಮೃತಿಗಳೂ ಹೀಗೆ ಹೇಳುತ್ತವೆ– 'ಇವೆಲ್ಲವೂ ಚಿತ್ತವೇ' (ನೃ.ಉ. ೨–೭) 'ಆದ್ದರಿಂದ ವಿಜ್ಞಾನವಮಾತ್ರವೇ ಇರುವುದು. ಪ್ರಪಂಚವಾಗಲಿ ಸಂಸೃತಿಯಾಗಲಿ ಇಲ್ಲ' (ಕೂರ್ಮ ೨.೨.೩೯)

ವಿವರಣೆ: ಬಾಹ್ಯವಸ್ತುವು ಸ್ವಪ್ನದಂತೆ ಕೇವಲ ಮಿಥ್ಯೆ ಎಂಬ ಅನುಮಾನ ಸುಲಭತರ್ಕ. ಅದಕ್ಕೆ (ನಿಮ್ಮ) ಶ್ರುತಿ ಸ್ಮೃತಿಗಳಲ್ಲಿಯೇ ಸಮರ್ಥನೆಯುಂಟಲ್ಲ ಎಂದು ವಾದ. ಸಂಸ್ಕೃತಿ ಎಂದರೆ ಪುನರ್ಜನ್ಮ.

ಭಾಷ್ಯ: *ಇತ್ಯತೋ ದೂಷಣಾಂತರಮಾಹ ।*

ಅನುವಾದ: ಆದ್ದರಿಂದ ಮತ್ತೊಂದು ದೂಷಣೆಯನ್ನು ಹೇಳುವರು.

ಸೂತ್ರ: ತದಭಾವೇ ತದಭಾವಾತ್ ಶೂನ್ಯಂ ತರ್ಹಿ ॥ ೪೩ ॥

ಅನುವಾದ: ಬಾಹ್ಯವಸ್ತುವಿಲ್ಲದಿದ್ದಲ್ಲಿ ವಿಜ್ಞಾನವೂ ಶೂನ್ಯವೇ.

ವಿವರಣೆ: ಬಾಹ್ಯವಸ್ತುವಿನ ಅಭಾವವಿರುವಾಗ ವಿಜ್ಞಾನವೂ ಅಭಾವವೇ. ಆಗ ಎಲ್ಲ ಶೂನ್ಯವಷ್ಟೆ.

ಭಾಷ್ಯ: *ತರ್ಹಿ ಬಾಹ್ಯಾಭಾವೇ ಶೂನ್ಯಮೇವ ಪ್ರಸಜ್ಯೇತ, ನತು ವಿಜ್ಞಾನಮಪಿ । ಕುತಃ? ತದಭಾವೇ ತದಭಾವಾತ್ ಬಾಹ್ಯಾಭಾವೇ ವಿಜ್ಞಾನಸ್ಯಾಪಿ ಅಭಾವಪ್ರಸಂಗಾತ್ ವಿಜ್ಞಾನ–ಪ್ರತೀತೇರಪಿ ಬಾಹ್ಯಪ್ರತೀತಿವತ್ ಅವಸ್ತುವಿಷಯತ್ವಾನು–ಮಾನಸಂಭವಾತ್ । ವಿಜ್ಞಾನ ಪ್ರಾಮಾಣ್ಯಸ್ಯ ಕ್ವಾಪ್ಯಸಿದ್ಧತ್ವಾಚ್ಚ । ತಥಾ ವಿಜ್ಞಾನೇ ಪ್ರಮಾಣಾನಾಮಪಿ ಬಾಹ್ಯತಯಾಲಾಪಾಚ್ಚ ।*

ಅನುವಾದ: ಹಾಗಾದರೆ ಬಾಹ್ಯವಸ್ತುಗಳ ಅಭಾವವೇ ಇದ್ದಲ್ಲಿ ಶೂನ್ಯಮಾತ್ರ ಉಳಿಯುವುದು, ವಿಜ್ಞಾನವೂ ಉಳಿಯದು. ಏಕೆ? (ಸ್ವಪ್ನದಲ್ಲಿ ಕಾಣುವುದರ) ಅಭಾವದ ಕಾರಣ ವಿಜ್ಞಾನದ ವಸ್ತುವೂ ಇಲ್ಲವೆಂದೇ ಭಾವಿಸಬೇಕು. ಬಾಹ್ಯ ವಸ್ತುಗಳನ್ನು ತಿಳಿಯುವಂತೆ ವಿಜ್ಞಾನಕ್ಕಾಗಿ ಇಲ್ಲದ ವಸ್ತುಗಳನ್ನೂ ಅನುಮಾನದಿಂದ ಕಲ್ಪಿಸಬಹುದು. ವಿಜ್ಞಾನದ ವಸ್ತುಗಳ ಕಲ್ಪನೆಗೆ ಪ್ರಾಮಾಣ್ಯವೂ ಸಿದ್ಧವಾಗಲಾರದು. ಹಾಗೆಯೇ ಬಾಹ್ಯವಸ್ತುಗಳ ಅಭಾವದಿಂದ ಅದರ ವಿಜ್ಞಾನದ ಬಗ್ಗೆ ಪ್ರಮಾಣವನ್ನು ಮರೆಮಾಚಿದಂತೆ ಆಯಿತು.

ಭಾಷ್ಯ: *ನನು ಅನುಭವವೇ ಕಸ್ಯಾಪಿ ವಿವಾದಾಭಾವೇನ ನಾಸ್ತಿ ತತ್ರ ಪ್ರಮಾಣಾಪೇಕ್ಷಾ ।*

ಅನುವಾದ: ಅನುಭವಕ್ಕೆ ಬರುವುದರಿಂದ ಯಾವುದೇ ವಿವಾದವಿರದ ಕಾರಣ ಅಲ್ಲಿ ಪ್ರಮಾಣದ ಅಪೇಕ್ಷೆ ಇರದು.

ಭಾಷ್ಯ: *ಇತಿ ಚೇನ್ನ । ಶೂನ್ಯವಾದಿನಾಮೇವತತ್ರ ವಿವಾದಾತ್ ।*

ಅನುವಾದ: ಇದು ಸರಿಯಲ್ಲ. (ಅನುಭವಕ್ಕೆ ಬರುವ) ವಿಷಯದಲ್ಲಿ ಶೂನ್ಯವಾದಿಗಳದೇ ವಿವಾದವಿರುವುದು.

ಭಾಷ್ಯ: *ಅಥ ಅ ಸತಾಪಿ ಪ್ರಮಾಣೇನ ವಸ್ತು ಸಿದ್ಧ್ಯತಿ । ವಿಷಯಾಬಾಧಸ್ಯೈವ ಪ್ರಾಮಾಣ್ಯ ಪ್ರಯೋಜಕತ್ವಾತ್ । ನ ತು ಪ್ರಮಾಣಪಾರಮಾರ್ಥಿಕಸ್ಯ ।*

ಅನುವಾದ: ಪ್ರಮಾಣವಿಲ್ಲದೇ ಇದ್ದರೂ ವಸ್ತು ಇದೆಯೆನ್ನಬಹುದು. ಏಕೆಂದರೆ, ವಸ್ತುವಿನ ವಿಷಯದಲ್ಲಿ ಬಾಧವುಂಟಾಗದಿರುವುದೇ ಪ್ರಾಮಾಣ್ಯಕ್ಕೆ ಪ್ರಯೋಜಕವಾದುದು.

ಭಾಷ್ಯ: *ಇತಿ ಚೇನ್ನ । ಏವಂ ಸತಿ ಅಪ್ರಮಾಣಸ್ಯ ಸರ್ವತ್ರ ಸುಲಭತ್ವೇನ ಕ್ವಾಪಿ ಅರ್ಥೇ ಪ್ರಮಾಣಾನ್ವೇಷಣಸ್ಯಾಯೋಗಾತ್।*

ಅನುವಾದ: ಹಾಗಾಗದು. ಹಾಗಿದ್ದಲ್ಲಿ ಪ್ರಮಾಣವಿಲ್ಲದಿರುವಾಗ ಎಲ್ಲೆಡೆ ಸುಲಭವಾಗಿರುವುದರಿಂದ ಯಾವುದೇ ವಸ್ತುವಿನ ಬಗ್ಗೆ ಪ್ರಮಾಣದ ಅನ್ವೇಷಣೆಯ ಅಗತ್ಯಬಾರದು.

ಭಾಷ್ಯ: *ಅಥ ಅಸನ್ಮಧ್ಯೇಽಪಿ ವ್ಯಾವಹಾರಿಕಸತ್ತ್ವರೂಪಃ ವಿಶೇಷಃ ಪ್ರಮಾಣಾದಿಷು ಏಷ್ಟವ್ಯ ಇತಿ ಚೇತ್ ।*

ಅನುವಾದ: ಅಸತ್ ಪ್ರಮಾಣವಿದ್ದರೂ ವ್ಯಾವಹಾರಿಕ ಸತ್ತ್ವದ ರೂಪ ವಿಶೇಷವು ಪ್ರಮಾಣಾದಿ ಪದಾರ್ಥಗಳಲ್ಲಿ ಹುಡುಕಬೇಕಾದರೆ,

ವಿವರಣೆ: ಪ್ರಮಾಣವು ಇಲ್ಲದಿದ್ದರೂ ನಾವು ಅದನ್ನು ಅನ್ವೇಷಣೆ ಮಾಡದೇ ಇರಲಾಗದು. ಆದರೆ ಅದನ್ನು ವ್ಯಾವಹಾರಿಕಸ್ತರದಲ್ಲಿ ಪ್ರಮಾಣಕ್ಕಾಗಿ ಹುಡುಕುವುದು ಅಗತ್ಯ ಎಂದರ್ಥ.

ಭಾಷ್ಯ: *ಆಯಾತಂ ಮಾರ್ಗೇಣ । ಕಿಂ ಪುನರಿದಂ ವ್ಯಾವಹಾರಿಕತ್ವಮ್ । ಯದಿ ಪರಿಣಾಮಿತ್ವಂ ತದಾಸ್ಮಾಭಿರಪಿ ಈದೃಶಮೇವ ಸತ್ತ್ವಂ ಗ್ರಾಹ್ಯ- ಗ್ರಾಹಕಪ್ರಮಾಣಾನಾಮಿಷ್ಟಮ್ । ಶುಕ್ತಿ ರಜತಾದಿ ತುಲ್ಯತ್ವಸ್ಯೈವ ಪ್ರಪಂಚೇಽಸ್ಮಾಭಿಃ ಪ್ರತಿಷೇಧಾತ್ । ಯದಿ ಪುನಃ ಪ್ರತೀಯಮಾನತಾಮಾತ್ರಂ ತದಾಪಿ ತಾದೃಶೈರೇವ ಪ್ರಮಾಣೈರ್ಬಾಹ್ಯಾರ್ಥಸ್ಯಾಪಿ ಸಿದ್ಧಿಪ್ರಸಂಗಾತ್ । ಲಾಘವತರ್ಕ- ಅನುಗೃಹೀತೇನ ಯಥಾಕಥಂಚಿದನುಮಾನೇನೈವ ಬಾಧಸ್ತು ವಿಜ್ಞಾನೇಽಪಿ ಸಮಾನ ಇತಿ ।*

ಅನುವಾದ: ಅಂತೂ ದಾರಿಗೆ ಬಂದಿರಿ. ಈ ವ್ಯಾವಹಾರಿಕತ್ವವಾದರೂ ಏನು? ಅದು ಪರಿಣಾಮಿತ್ವವಾದರೆ ನಮಗೂ ಸಹ ಗ್ರಾಹ್ಯ-ಗ್ರಾಹಕ ಪ್ರಮಾಣಗಳು ಬೇಕಾದದ್ದೇ. ಶುಕ್ತಿ-ರಜತಗಳ ಸಮಾನ ಸತ್ತ್ವಗಳನ್ನು ನಾವು ಒಪ್ಪದಿರುವುದು ತಿಳಿದದ್ದೆ ಮತ್ತು ಕೇವಲ ತೋರುವುದೇ ವ್ಯಾವಹಾರಿಕತ್ವವಾದರೆ ಆಗಲೂ ಅಂತಹ ಪ್ರಮಾಣಗಳಿಂದಲೇ ಬಾಹ್ಯವಸ್ತುಗಳು ಇವೆಯೆಂಬುದೂ ಸಿದ್ಧಿಸುವುದು. ಸಾಧಾರಣ ತರ್ಕದಿಂದಲೇ ಒಪ್ಪಿದ ಅನುಮಾನದಿಂದ ಹೇಗೋ ಆಗುವ ಬಾಧವು ವಿಜ್ಞಾನದಲ್ಲಿಯೂ ಹಾಗೆಯೇ ಸಮಾನವಾಗಿರುತ್ತದೆ.

ಭಾಷ್ಯ: *ಯತ್ತು ಕಾಲಾಂತರೇಣಾಪಿ ನಾನ್ಯಸಂಜ್ಞಾಮುಪೈತಿ ವೈ ।*
ಪರಿಣಾಮಾದಿಸಂಭೂತಾಂ ತದ್ವಸ್ತು ನೃಪ ತಚ್ಚ ಕಿಮ್ ॥
ವಸ್ತು ರಾಜೇತಿ ಯಲ್ಲೋಕೇ ಯತ್ತು ರಾಜಭಟಾದಿಕಮ್ ।
ತಥಾನ್ಯಚ್ಚ ನೃಪೇತ್ಥಂ ತು ನ ಸತ್ ಸಂಕಲ್ಪನಾಮಯಮ್ ॥
(ವಿಷ್ಣು ೨-೧೩-೬೪-೬೫)

ಅನುವಾದ: ಯಾವುದು ಕಾಲಾಂತರದಲ್ಲಿ ಪರಿಣಾಮಾದಿಗಳಿಂದ ಬೇರೆಯ ಹೆಸರನ್ನು ಪಡೆಯದೇ ಅದೇ 'ವಸ್ತು'ವೆನಿಸಿಕೊಳ್ಳುವುದು. ಅದೇನು? ಆ ವಸ್ತು ರಾಜನೆಂದೇ ತಿಳಿ ಆದರೆ, ಎಲ್ಲೈ ರಾಜನೆ, ರಾಜಭಟರೇ ಆದಿಯಾಗಿ ಎಲ್ಲ ಇತರ ವಸ್ತುಗಳೂ 'ಸತ್' ಅಲ್ಲ. ಅದೆಲ್ಲ ಕಲ್ಪನಾಮಯವಾದುದು.

ವಿವರಣೆ: ಈ ಮೇಲಿನ ಪದ್ಯಗಳನ್ನು ನಂದಲಾಲ್ ಸಿನ್ಹರವರು ಹೀಗೆ ಅರ್ಥಮಾಡಿದ್ದಾರೆ. 'ಈ ವಸ್ತು ರಾಜ', 'ಇವರು ರಾಜನ ಭಟರು' ಹೀಗೆಯೇ ಮುಂತಾಗಿ ಹೇಳಿಕೆಗಳನ್ನು (ಈ ದೇಹಕ್ಕೆ ಅನ್ವಯಿಸಿ) ಅವು ಸತ್ಯವಲ್ಲ, ಕೇವಲ ಕಾಲ್ಪನಿಕ. ಆದರೆ ಯಥಾರ್ಥವೆಂದರೆ ಸಮಯ ಕಳೆದಂತೆ ಪರಿಣಾಮದ ಫಲವಾಗಿ ಬೇರೆಯ ಹೆಸರನ್ನು ಯಾವುದು ಪಡೆಯದೋ ಅದು ಯಾವುದು?

ಹೀಗೆ ಅರ್ಥಮಾಡುವಾಗ (೬೫)ನೆಯ ಶ್ಲೋಕವು (೬೪)ನೆಯದಾಗಿಯೂ (೬೪)ನೆಯ ಶ್ಲೋಕವು (೬೫)ನೆಯದಾಗಿಯೂ ತೆಗೆದುಕೊಳ್ಳಲಾಗಿದೆ.

ಭಾಷ್ಯ: *ಇತಿ ವಿಷ್ಣುಪುರಾಣಾದಿಭ್ಯಃ ಪರಿಣಾಮಿತ್ವಸ್ಯೈವ ಅಸತ್ತಾತ್ವ–ಅವಗಮಾದಿತಿ । ಸಂಕಲ್ಪಾನಾಮಯಮೀಶ್ವರಾದಿ ಸಂಕಲ್ಪರಚಿತಮ್ । ಏತೇನ, 'ವಿಜ್ಞಾನಮಯಮೇವೈತದಶೇಷಮವಗಚ್ಛತ (ವಿಷ್ಣುಪುರಾಣ ೩.೧೮.೧೬) ಇತ್ಯಾದಿನಾ ವಿಷ್ಣುಪುರಾಣೇ ಮಾಯಾ–ಮೋಹರೂಪಿಣಾ ವಿಷ್ಣುನಾ ಅಸುರೇಭ್ಯೋಽಪಿ ತತ್ತ್ವಮೇವ ಉಪದಿಷ್ಟಮ್, ತೇ ತ್ವನಧಿಕಾರಾದಿದೋಷೈಃ ವಿಪರೀತಾರ್ಥ ಗ್ರಹಣೇನ ವಿಜ್ಞಾನವಾದಿನೋ ನಾಸ್ತಿಕಾ ಬಭೂವುರಿತ್ಯವಗಂತವ್ಯಮ್ । ತದೇತತ್ ಬ್ರಹ್ಮಮೀಮಾಂಸಾಭಾಷ್ಯೇ (೧.೧.೨.೪) ಮಾಯಾವಾದನಿರಸನಪ್ರಸಂಗತಃ ವಿಸ್ತಾರಿತಮಸ್ಮಾಭಿಃ ।*

ಅನುವಾದ: ಹೀಗೆ ವಿಷ್ಣುಪುರಾಣಾದಿಗಳಿಂದ ತಿಳಿದುಬರುವುದೇನೆಂದರೆ, ಪರಿಣಾಮಿತ್ವವು ಅಸತ್ತಾ ರೂಪವಾದುದು 'ಸಂಕಲ್ಪಾನಾಮಯಂ' ಎಂದರೆ 'ಈಶ್ವರಾದಿಗಳ ಸಂಕಲ್ಪದಿಂದ ರಚಿತವಾದುದು'. ಇದರಿಂದ 'ಇದೆಲ್ಲವೂ ವಿಜ್ಞಾನಮಯೆಂದೇ ತಿಳಿಯಿರಿ' ಮುಂತಾದ ವಾಕ್ಯಗಳಿಂದ ವಿಷ್ಣುಪುರಾಣದಲ್ಲಿ ಮಾಯಾಮೋಹರೂಪಿಯಾದ ವಿಷ್ಣುವು ಅಸುರರಿಗೂ ಸಹ ಈ ತತ್ತ್ವವನ್ನು ಉಪದೇಶಿಸಿದನು. ಅವರಾದರೋ ಅನರ್ಹತೆಯ ದೋಷಗಳಿಂದ ವಿಪರೀತಾರ್ಥವನ್ನು ಗ್ರಹಿಸಿ ವಿಜ್ಞಾನವಾದಿಗಳಾಗಿ ನಾಸ್ತಿಕರಾಗಿ ಉಳಿದರು ಎಂದು ತಿಳಿಯಬೇಕು. ಈ ವಿಷಯವನ್ನು ನಾವು ಬ್ರಹ್ಮಮೀಮಾಂಸಾ ಭಾಷ್ಯದಲ್ಲಿ ಮಾಯಾವಾದವನ್ನು ಅಲ್ಲಗಳೆಯುವ ಸಂದರ್ಭದಲ್ಲಿ ವಿಸ್ತಾರವಾಗಿ ತಿಳಿಸಿದ್ದೇವೆ.

ಭಾಷ್ಯ: *ನನ್ವೇವಂ ಭವತು ಶೂನ್ಯಮೇವ ತತ್ತ್ವಂ, ತದಾ ಸುತರಾಮೇವ ಬಂಧಕಾರಣಾನ್ವೇಷಣಂ ನ ಯುಕ್ತಂ ತುಚ್ಛತ್ವಾದಿತಿ ನಾಸ್ತಿಕಶಿರೋಮಣಿಃ ಪ್ರತ್ಯವತಿಷ್ಠತೇ ।*

ಅನುವಾದ: ಈ ರೀತಿಯಾಗಿ ಶೂನ್ಯವೇ ತತ್ತ್ವವೆಂದಾಗ ಖಂಡಿತವಾಗಿಯೂ ಬಂಧಕ್ಕೆ ಕಾರಣವನ್ನು ಹುಡುಕುವ ಅಗತ್ಯ ಬರದು. ಏಕೆಂದರೆ ಎಲ್ಲವೂ ಶೂನ್ಯ ಎಂದು ನಾಸ್ತಿಕಶಿರೋಮಣಿಯು ವಿರೋಧಿಸುತ್ತಾನೆ.

ಸೂತ್ರ: ಶೂನ್ಯಂ ತತ್ತ್ವಂ ಭಾವೋ ವಿನಶ್ಯತಿ ವಸ್ತುಧರ್ಮಾದ್ವಿನಾಶಾಯ ॥ ೪೪ ॥

ಸೂತ್ರಾನುವಾದ: ಶೂನ್ಯವೇ ತತ್ತ್ವ, ಭಾವ ವಿನಾಶವಾಗುವುದು. ವಿನಾಶವಾಗುವುದು ವಸ್ತುವಿನ ಗುಣ.

ವಿವರಣೆ: ಭಾವವೆಂದರೆ ಸತ್ತಾ ಅಥವಾ ಪದಾರ್ಥ

ಭಾಷ್ಯ: *ಶೂನ್ಯಮೇವ ತತ್ತ್ವಮ್ । ಯತಃ ಸರ್ವೋಽಪಿ ಭಾವೋ ವಿನಶ್ಯತಿ । ಯಶ್ಚ ವಿನಾಶೀ ಚ ಮಿಥ್ಯಾ ಸ್ವಪ್ನವತ್ ।*

ಅನುವಾದ: ಶೂನ್ಯವೇ ತತ್ತ್ವ, ಎಲ್ಲ ಪದಾರ್ಥಗಳೂ ನಾಶವಾಗುವುವು. ಯಾವುದು ವಿನಾಶಿಯೋ ಅದು ಸ್ವಪ್ನದಂತೆ ಮಿಥ್ಯ.

ಭಾಷ್ಯ: *ಅತಃ ಸರ್ವವಸ್ತೂನಾಮಾದ್ಯಂತಯೋರಭಾವಮಾತ್ರತ್ವಾತ್ ಮಧ್ಯೇ ಕ್ಷಣಿಕಸತ್ತ್ವಂ ಸಾಂವೃತಿಕಂ, ನ ಪಾರಮಾರ್ಥಿಕಂ ಬಂಧಾದಿ । ತತಃ ಕಿಂ ಕೇನ ಬಧ್ಯೇತ ಇತ್ಯಾಶಯಃ । ಭಾವಾನಾಂ ವಿನಾಶಿತ್ವೇ ಹೇತುಃ ವಸ್ತುಧರ್ಮತ್ವಾತ್ ವಿನಾಶಸ್ಯೇತಿ । ವಿನಾಶಸ್ಯ ವಸ್ತುಸ್ವಭಾವತ್ವಾತ್ । ಸ್ವಭಾವಂ ತು ವಿಹಾಯ ಪದಾರ್ಥಃ ನ ತಿಷ್ಠತೀತ್ಯರ್ಥಃ ।*

ಅನುವಾದ: ಆದ್ದರಿಂದ ಎಲ್ಲ ವಸ್ತುಗಳೂ ಆದಿ ಅಂತ್ಯಗಳಿಲ್ಲದ ಕಾರಣ ನಡುವೆ ಕ್ಷಣಿಕವಾದ ಅಸ್ತಿತ್ವವು ಸಾಂವೃತಿಕವಾದುದು. ಆದ್ದರಿಂದ ಬಂಧವು ಪಾರಮಾರ್ಥಿಕವಲ್ಲ. ವಸ್ತುಗಳು ವಿನಾಶವಾಗುವುದರಿಂದ ವಸ್ತು ಧರ್ಮವೇ ವಿನಾಶವಾಗುವಿಕೆ ವಿನಾಶವು ವಸ್ತುಗಳ ಸ್ವಭಾವವೇ. ತನ್ನ ಸ್ವಭಾವವನ್ನೇ ಬಿಟ್ಟು ಪದಾರ್ಥಗಳು ಇರುವುದಾದರೂ ಹೇಗೆ?

ವಿವರಣೆ: ಸಾಂವೃತಿಕ ಎಂದರೆ ಮಿಥ್ಯಾರೂಪವಾದುದು.

ಸೂತ್ರ: ಅಪವಾದ ಮಾತ್ರಮಬುದ್ಧಾನಾಮ್ ॥ ೪೫ ॥

ಅನುವಾದ: ಇದೆಲ್ಲ ಕೇವಲ ಅಜ್ಞರ ಮಿಥ್ಯಾವಾದ

ಭಾಷ್ಯ: *ಭಾವತ್ವಾದ್ವಿನಾಶಿತ್ವಮಿತಿ ಮೂಢಾನಾಮಪವಾದಮಾತ್ರಂ ।*

ಅನುವಾದ: ಪದಾರ್ಥಗಳು ಅಸ್ತಿತ್ವವನ್ನು ಹೊಂದಿರುವುದರಿಂದ ವಿನಾಶಿಗಳು ಎಂದು ಮೂಢರು ಹೇಳುವುದು ತಪ್ಪು ಕಲ್ಪನೆ ಅಥವಾ ಮಿಥ್ಯಾವಾದ.

ಭಾಷ್ಯ: *ನಾಶಕಾರಣಾಭಾವೇನ ನಿರವಯವದ್ರವ್ಯಾಣಾಂ ನಾಶಾಸಂಭವಾತ್, ಕಾರ್ಯಾಣಾಮಪಿ ವಿನಾಶಾಸಿದ್ಧೇಶ್ಚ ।*

ಅನುವಾದ: ಅವಯವಗಳಿಲ್ಲದ ವಸ್ತುಗಳು ವಿನಾಶವಾಗಲು ಕಾರಣವಿಲ್ಲ, ನಾಶವು ಸಾಧ್ಯವಿಲ್ಲದಿರುವುದರಿಂದ. ಹಾಗೆಯೇ ಕಾರ್ಯರೂಪದಲ್ಲಿರುವ ವಸ್ತುಗಳೂ ನಾಶವಾಗುವುದು ಸಾಧ್ಯವಿಲ್ಲ.

ಭಾಷ್ಯ: *ಘಟೋ ಜೀರ್ಣ ಇತಿ ಪ್ರತ್ಯಯವದೇವ ಘಟಃ ಅತೀತಃ ಇತ್ಯಾದಿ ಪ್ರತೀತ್ಯಾ ಘಟಾದೇರತೀತಾಖ್ಯಾಯಾ ಅವಸ್ಥಾಯಾ ಏವ ಸಿದ್ಧೇಃ।*

ಅನುವಾದ: ಘಟವು ಜೀರ್ಣವಾಯಿತು ಎಂದು ತಿಳಿಯುವಂತೆ ಘಟವು ಹೊರಟು ಹೋಯಿತು ಎಂಬ ಅರಿವೂ ಸಹ ಘಟವು ಹಿಂದೆ ಇದ್ದಂತೆ ಈಗಿಲ್ಲ ಎಂಬುದು ಸಿದ್ಧವಾಗುತ್ತದೆ.

ಭಾಷ್ಯ: *ಅವ್ಯಕ್ತಾಯಾಶ್ಚ ಕಾರ್ಯತೀತತಾಭ್ಯುಪಗಮೇ ಅಸ್ಮನ್ಮತಪ್ರವೇಶ ಏವ ।*

ಅನುವಾದ: ಅವ್ಯಕ್ತತೆಯೆಂದರೆ ಕಾರ್ಯವು (ಅತೀತ) ಈಗಿಲ್ಲದ ಅವಸ್ಥೆ ಎನ್ನವಿರಾದರೆ ನಮ್ಮ ಅಭಿಪ್ರಾಯವನ್ನೇ ಅಂಗೀಕರಿಸಿದಂತಾಯಿತು.

ಭಾಷ್ಯ: *ಕಿಂಚ ವಿನಾಶಸ್ಯ ಪ್ರಪಂಚತತ್ತ್ವತಾಭ್ಯುಪಗಮೇಽಪಿ ವಿನಾಶ ಏವ ಬಂಧಸ್ಯ ಪುರುಷಾರ್ಥಃ ಸಂಭವತ್ಯೇವೇತಿ ।*

ಅನುವಾದ: ಅಲ್ಲದೆ ವಿನಾಶ ಎಂಬ ಪ್ರಪಂಚತತ್ತ್ವದಲ್ಲಿ ನಂಬಿಕೆ ಇದ್ದರೂ ಬಂಧದ ವಿನಾಶವನ್ನೇ ಪುರುಷಾರ್ಥವೆನ್ನ ಬೇಕಾಗುವುದು.

ಭಾಷ್ಯ: *ಕಶ್ಚಿತ್ತು ವ್ಯಾಚಷ್ಟೇ ಶೂನ್ಯಂ ತತ್ತ್ವಮಿತ್ಯಜ್ಞಾನಾಂ ಕುತ್ಸಿತವಾದಮಾತ್ರಂ, ನ ಪುನರತ್ರ ಯುಕ್ತಿರಸ್ತಿ ಪ್ರಮಾಣಸತ್ತ್ವಾಸತ್ತ್ವವಿಕಲ್ಪಾಸಹತ್ವಾತ್ । ಶೂನ್ಯೇ ಪ್ರಮಾಣಾಂಗೀಕಾರೇ ತೇನೈವ ಶೂನ್ಯತಾಕ್ಷತಿಃ ಅನಂಗೀಕಾರೇ ಪ್ರಮಾಣಾಭಾವಾನ್ನ ಶೂನ್ಯಸಿದ್ಧಿಃ ।*

ಅನುವಾದ: ಒಬ್ಬರು ಹೀಗೆ ವ್ಯಾಖ್ಯಾನ ಮಾಡಿದ್ದಾರೆ. ಅವರು ಶೂನ್ಯತತ್ತ್ವವು ಅಜ್ಞಾನಿಗಳ ನಿಂದೆಗೆ ಪಾತ್ರವಾಗಿರುವ ವಾದವನ್ನು ಮಾಡಿರುವರು. ಇದರಲ್ಲಿ ಯಾವ ತರ್ಕವೂ ಅಡಗಿಲ್ಲ ಪ್ರಮಾಣವಿದೆಯೆ ಇಲ್ಲವೆ ಎಂಬ ಸಂಶಯವು ಹಾಗೆಯೇ ಉಳಿದಿದೆ. ಶೂನ್ಯವನ್ನೇ ಪ್ರಮಾಣವೆಂದು ಅಂಗೀಕರಿಸಿದಲ್ಲಿ ಅದರಿಂದ ಶೂನ್ಯತೆಯು ಹೋಗುವುದು. ಪ್ರಮಾಣವಿಲ್ಲವೆಂದು ಭಾವಿಸಿದರೆ ಪ್ರಮಾಣದ ಅಭಾವದಿಂದ ಶೂನ್ಯವು ಸಿದ್ಧಿಸದು.

ವಿವರಣೆ: ಶೂನ್ಯವನ್ನೇ ಪ್ರಮಾಣವಾಗಿ ಅಂಗೀಕರಿಸಿದರೆ ಶೂನ್ಯವೇ ಇರುವಾಗ ಪ್ರಮಾಣವು ಅಸಾಧ್ಯ. ಅದರಿಂದ ಶೂನ್ಯತೆಯೇ ಹೋಗಿಬಿಡುವುದು ಪ್ರಮಾಣವಿಲ್ಲವೆಂದರೆ ಶೂನ್ಯ ತತ್ತ್ವ ಸಿದ್ಧಿಸಲು ಸಾಧ್ಯವೇ ಆಗದು.

ಭಾಷ್ಯ: *ಸ್ವತಃ ಸಿದ್ಧೌ ಚ ಚಿದ್ರೂಪಾದ್ಯಾಪತ್ತಿರಿತ್ಯರ್ಥ ಇತಿ ।*

ಅನುವಾದ: ಶೂನ್ಯವು ಸ್ವತಃ ಸಿದ್ಧವೆಂದರೆ ಅದನ್ನು ಚಿದ್ರೂಪವೆಂದೇ ಹೇಳಬೇಕು.

ವಿವರಣೆ: ಸ್ವತಃ ಸಿದ್ಧವೆಂದರೆ ತಾನಾಗಿಯೇ ಮನಸ್ಸಿನಲ್ಲಿ ಮೂಡುವುದು ಇದು ಶೂನ್ಯಕ್ಕೆ ಹೇಗೆ ಸಾಧ್ಯ?

ಭಾಷ್ಯ: *ನಚ, ನ ವಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕೈಃ ।*
ನ ಮುಮುಕ್ಷುರ್ನ ವೈ ಮುಕ್ತಾ ಇತ್ಯೇಷಾ ಪರಮಾರ್ಥತಾ ॥
(ಮಾಂಡೂಕ್ಯಕಾರಿಕಾ ೨.೩೨)

ಅನುವಾದ: 'ತಡೆಯಿಲ್ಲ, ಉತ್ಪತ್ತಿಯಿಲ್ಲ, ಬಂಧವಿಲ್ಲ, ಸಾಧಕವಲ್ಲ, ಮುಮುಕ್ಷುವೂ ಅಲ್ಲ, ಮುಕ್ತನೂ ಅಲ್ಲ. ಇದೇ ಪರಮಾರ್ಥತೆ

ಭಾಷ್ಯ: *ಸರ್ವಶೂನ್ಯಂ ನಿರಾಲಂಬಂ ಸ್ವರೂಪಂ ಯತ್ರ ಚಿಂತ್ಯತೇ ।*
ಅಭಾವಯೋಗಃ ಸ ಪ್ರೋಕ್ತೋ ಯೇನಾತ್ಮಾನಂ ಪ್ರಪಶ್ಯತಿ ॥
(ಶಿವಪುರಾಣ ೭.೨.೨೩. ೬.೭)

ಅನುವಾದ: ಸರ್ವಶೂನ್ಯವಾದ ಆಧಾರರಹಿತವಾದ ಸ್ವರೂಪವನ್ನು ಎಲ್ಲಿ ಚಿಂತಿಸುವರೋ ಅದನ್ನು 'ಅಭಾವಯೋಗ' ಎನ್ನುವರು. ಅದರಿಂದ ಆತ್ಮನನ್ನು ಕಾಣುವರು.

ಭಾಷ್ಯ: *ಇತಿ ಶ್ರುತಿಸ್ಮೃತಿಭ್ಯಾಮಪಿ ಶೂನ್ಯಂ ತತ್ತ್ವತಯಾ ಪ್ರತಿಪದ್ಯತಿ ವಾಚ್ಯಮ್ ।*

ಅನುವಾದ: ಹೀಗೆ ಶ್ರುತಿ–ಸ್ಮೃತಿಗಳಿಂದಲೂ ಶೂನ್ಯವನ್ನು ತತ್ವದ ರೂಪದಲ್ಲಿ ಪ್ರತಿಪಾದಿಸಿದ್ದಾರೆ ಎಂದು ಹೇಳಲಾಗದು.

ಭಾಷ್ಯ: *ಪುರುಷಾಣಾಂ ನಿರೋಧಾದ್ಯಭಾವಸ್ಯೈವ ತಾದೃಶೀಷು ಶ್ರುತಿಷು ತತ್ತ್ವತಯಾ ಉಕ್ತತ್ವಾತ್ ।*

ಅನುವಾದ: ಏಕೆಂದರೆ ಶ್ರುತಿಗಳಲ್ಲಿ ಪುರುಷರಿಗೆ ನಿರೋಧವೇ ಮೊದಲಾದವುಗಳ ಅಭಾವವನ್ನು ತತ್ವರೂಪದಲ್ಲಿ ಹೇಳಿದೆ.

ಭಾಷ್ಯ: *ಪೂರ್ವೋತ್ತರ ವಾಕ್ಯಾಭ್ಯಾಂ ಪುರುಷಸ್ಯ ಪ್ರಕರಣಾತ್ ।*

ಅನುವಾದ: ಏಕೆಂದರೆ ಮೊದಲ ಮತ್ತು ಮುಂದಿನ ವಾಕ್ಯಗಳಲ್ಲಿ ಪುರುಷನನ್ನು ಕುರಿತೇ ಹೇಳಲಾಗಿದೆ.

ಭಾಷ್ಯ: *ವಿಲೀನವಿಶ್ವಚಿದಾಕಾಶಸ್ಯ ಏವ ಏತಾದೃಶಸ್ಮೃತಿಷು ತತ್ತ್ವತಯಾ ಪ್ರತಿಪಾದನಾಚ್ಚ ।*

ಅನುವಾದ: ಇಂತಹ ಸ್ಮೃತಿಗಳಲ್ಲಿ ಇದೇರೀತಿ ವಿಲೀನವಾದ ವಿಶ್ವಾವರಿಸಿರುವ ಚಿದಾಕಾಶವನ್ನು ತತ್ತ್ವದರೂಪದಲ್ಲಿ ಹೇಳಲಾಗಿದೆ.

ಭಾಷ್ಯ: *ತ್ರೈಲೋಕ್ಯಂ ಗಗನಾಕಾರಂ ನಭಸ್ತುಲ್ಯಂ ವಪುಃ ಸ್ವಕಮ್ ।*
ವಿಯದ್ಗಾಮಿ ಮನೋಧ್ಯಾಯನ್ ಯೋಗೀ ಬ್ರಹ್ಮೈವ ಗೀಯತೇ ॥

ಅನುವಾದ: ಯಾವ ಯೋಗಿಯು ಮೂರು ಲೋಕಗಳನ್ನು ಗಗನಾಕಾರವಾಗಿಯೂ, ತನ್ನ ದೇಹವನ್ನು ಅಂತರಿಕ್ಷದಂತೆಯೂ ಮನಸ್ಸು ಆಕಾಶದತ್ತ ಹೋಗುವಂತೆಯೂ ಮಾಡುವನೋ ಅವನನ್ನು ಬ್ರಹ್ಮನೆಂದೇ ಹೇಳುವರು. (ಮೂಲ?)

ಭಾಷ್ಯ: *ಇತ್ಯಾದಿ ವಾಕ್ಯಾಂತರೈರೇಕವಾಕ್ಯತ್ವಾದಾಕಾಶಶೂನ್ಯಯೋಃ ಪರ್ಯಾಯತ್ವಾದಿತಿ । ಮನೋಮಹತ್ತತ್ವಾದಿ ಅಖಿಲಾಂಶಃ ಕರಣಂ ವಿಯದ್ಗಾಮಿ ಚಿದಾಕಾಶೇ ಲೀನಮ್ ।*

ಅನುವಾದ: ಇತ್ಯಾದಿ ಬೇರೆ ವಾಕ್ಯಗಳಿಂದ ಅದೇ ವಾಕ್ಯವನ್ನು ಹೇಳಿದಂತಾಯಿತು. ಆಕಾಶವೂ ಶೂನ್ಯವೂ ಪರ್ಯಾಯಗಳಷ್ಟೆ ಮನಸ್ಸು, ಮಹತ್ತತ್ವ ಆದಿ ಎಲ್ಲ ಅಂತಃಕರಣವೂ ವಿಯದ್ಗಾಮಿ ಎಂದರೆ ಚಿದಾಕಾಶದಲ್ಲಿ ಲೀನವಾಗಿ ಬಿಡುತ್ತವೆ.

ಭಾಷ್ಯ: *ದೂಷಣಾಂತರಮಾಹ–*

ಅನುವಾದ: ಶೂನ್ಯವಾದದ ಮತ್ತೊಂದು ದೂಷಣೆಯನ್ನೂ ಹೇಳುತ್ತಾರೆ

ಸೂತ್ರ: ಉಭಯ ಪಕ್ಷಸಮಾನಕ್ಷೇಮತ್ವಾದಯಮಪಿ ॥ ೪೬ ॥

ಅನುವಾದ: (ಸೂತ್ರ) ಎರಡೂ ಪಕ್ಷಗಳು ಸಮಾನವಾಗಿರುವುದರಿಂದ ಸಾಮಾನ್ಯ ವಾದಗಳಿಂದ ಇದರ ಖಂಡನೆಯೂ ಆದಂತೆಯೇ.

ವಿವರಣೆ: ಎರಡೂ ಪಕ್ಷಗಳೆಂದರೆ ಕ್ಷಣಿಕವಾದ ಮತ್ತು ಬಾಹ್ಯ ವಿಜ್ಞಾನ ಇದರ ಖಂಡನೆ ಎಂದರೆ ಶೂನ್ಯವಾದದ ಖಂಡನೆ ಕ್ಷೇಮ ಎಂದರೆ (ಸಿದ್ಧಸ್ಯ ರಕ್ಷಣಮ್), ದೃಢಪಟ್ಟಿರುವುದನ್ನು ಉಳಿಸಿಕೊಂಡಿರುವುದು.

ಭಾಷ್ಯ: *ಕ್ಷಣಿಕ ಬಾಹ್ಯವಿಜ್ಞಾನೋಭಯ ಪಕ್ಷಯೋಃ ಸಮಾನ–ಕ್ಷೇಮತ್ವಾತ್ ತುಲ್ಯನಿರಸನ ಹೇತುಕತ್ವಾತ್ ಅಯಮಪಿಪಕ್ಷಃ ವಿನಶ್ಯತೀತಿ ಅನುಷಂಗಃ ।*

ಅನುವಾದ: ಕ್ಷಣಿಕ ವಿಜ್ಞಾನ ಮತ್ತು ಬಾಹ್ಯವಿಜ್ಞಾನ ಪಕ್ಷಗಳೆರಡೂ ಶೂನ್ಯವಾದಕ್ಕೆ ಸಮಾನವಾಗಿರುವುದರಿಂದ ಅದೂ ಸಹ ಅದೇ ರೀತಿ ಅಲ್ಲಗಳೆಯಬಹುದಾದ್ದರಿಂದ ಖಂಡಿಸಲ್ಪಡುತ್ತದೆ ಎಂದು ಮುಕ್ತಾಯಗೊಳಿಸಬಹುದು.

ವಿವರಣೆ: ಇಲ್ಲಿ ಅನುಷಂಗ ಪದವನ್ನು ಪೂರ್ಣಗೊಳಿಸಲಾಗಿದೆ ಎಂಬ ಅರ್ಥದಲ್ಲಿ ಬಳಸಲಾಗಿದೆ.

ಭಾಷ್ಯ: *ಕ್ಷಣಿಕಪಕ್ಷನಿರಾಸಹೇತುರ್ಹಿ ಯತ್ ಪ್ರತ್ಯಭಿಜ್ಞಾನು–ಪಪತ್ತ್ಯಾದಿಭಿಃ ಶೂನ್ಯವಾದೇಽಪಿ ಸಮಾನಃ ।*

ಅನುವಾದ: ಏಕೆಂದರೆ ಕ್ಷಣಿಕ ಪಕ್ಷವನ್ನು ಅಲ್ಲಗಳೆಯುವಾಗ ಪ್ರತ್ಯಭಿಜ್ಞಾನುಪಪತ್ತಿಯೇ ಮೊದಲಾದ ಕಾರಣಗಳು ಶೂನ್ಯವಾದಕ್ಕೂ ಸಮಾನವಾಗಿ ಅನ್ವಯಿಸಬಹುದು.

ವಿವರಣೆ: ಪ್ರತ್ಯಭಿಜ್ಞಾ ಎಂದರೆ ಪೂರ್ವಾವಸ್ಥೆಯನ್ನು ಮನಸ್ಸಿಗೆ ತಂದುಕೊಳ್ಳುವುದು. ಇದು ಅಸಾಧ್ಯವೆಂಬ ಈ ಹೇತುವಿನಿಂದ ಶೂನ್ಯವಾದವನ್ನು ನಿರಾಕರಿಸಲಾಗಿದೆ.

ಭಾಷ್ಯ: *ತಥಾ ವಿಜ್ಞಾನಪಕ್ಷನಿರಾಸಹೇತುರ್ಬಾಹ್ಯಪ್ರತೀತ್ಯಾದಿರಪಿ ಅತ್ರ ಸಮಾನ ಇತ್ಯರ್ಥಃ ।*

ಅನುವಾದ: ಹಾಗೆಯೇ ವಿಜ್ಞಾನಪಕ್ಷದ ನಿರಾಕರಣೆಗೆ ಹೇತುವು ಬಾಹ್ಯಪ್ರತೀತಿಯಾದ ಕಾರಣ ಶೂನ್ಯವಾದದ ಖಂಡನೆಗೂ ಅದೇರೀತಿಯಾಗಿ ಹೇಳಬಹುದು.

ಭಾಷ್ಯ: *ಯದ್ಯಪಿ ದುಃಖನಿವೃತ್ತಿರೂಪತಯಾ*
ತತ್ಸಾಧನತಯಾ ವಾ ಶೂನ್ಯತೈವಾಸ್ತು ಪುರುಷಾರ್ಥ
ಇತಿ ತೈರ್ಮನ್ಯತೇ, ತದಪಿ ದುರ್ಘಟಮಿತ್ಯಾಹ ।

ಅನುವಾದ: ದುಃಖನಿವೃತ್ತಿಯ ರೂಪದಿಂದಲೂ ಅದನ್ನು ಸಾಧಿಸುವ ಸಾಧನದ ರೀತಿಯಿಂದ ಶೂನ್ಯತೆಯೇ ಪುರುಷಾರ್ಥವೆಂದು ಅವರು ಭಾವಿಸಿದರೆ ಅದೂ ಸಹ ಅಸಂಭವವೆಂದು ಹೇಳಿದ್ದಾರೆ.

ವಿವರಣೆ: ಸಾಂಖ್ಯ ದರ್ಶನದ ಪುರುಷಾರ್ಥ ಅಥವಾ ಗುರಿಯು ದುಃಖನಿವೃತ್ತಿ ಮತ್ತು ಅದರ ಸಾಧನಗಳೇ ಆದರೂ ಅದು ಶೂನ್ಯತೆಯನ್ನು ಗುರಿಯಾಗಿ ಮಾಡುವುದು ಅಸಂಭವ.

ಸೂತ್ರ: ಅಪುರುಷಾರ್ಥತ್ವಮುಭಯಥಾ ॥ ೪೭ ॥

ಅನುವಾದ: ಎರಡು ರೀತಿಯಲ್ಲಿಯೂ (ಶೂನ್ಯವಾದದಲ್ಲಿ) ಪುರುಷಾರ್ಥವಿಲ್ಲ.

ಭಾಷ್ಯ: *ಉಭಯಥಾ ಸ್ವತಃ ಪರತಶ್ಚ ಶೂನ್ಯತಾಯಾಃ ಪುರುಷಾರ್ಥತ್ವಂ*
ನ ಸಂಭವತಿ । ಸ್ವನಿಷ್ಠತ್ವೇನೈವ ಸುಖಾದೀನಾಂ ಪುರುಷಾರ್ಥತ್ವಾತ್ ।

ಅನುವಾದ: ಎರಡು ರೀತಿಯಲ್ಲಿಯೂ ಎಂದರೆ ಸ್ವತಃ ಮತ್ತು ಪರತಃ ಶೂನ್ಯತೆಯ ಪುರುಷಾರ್ಥತ್ವವಿಲ್ಲ. ಏಕೆಂದರೆ ಸುಖಾದಿಗಳು ಪುರುಷಾರ್ಥಗಳಲ್ಲಿ ತಾವಾಗಿಯೇ ಅಡಗಿರುವುದರಿಂದ.

ಭಾಷ್ಯ: *ಸ್ಥಿರಸ್ಯ ಚ ಪುರುಷಸ್ಯ ಅನಭ್ಯುಪಗಮಾದಿತ್ಯರ್ಥಃ ।*

ಅನುವಾದ: ಅಲ್ಲದೆ (ಬೌದ್ಧರ) ಮತದಲ್ಲಿ ಸ್ಥಿರವಾದ ಪುರುಷನ ಅಸ್ತಿತ್ವದ ಅಂಗೀಕಾರವಿಲ್ಲ.

ಭಾಷ್ಯ: *ತದೇವಂ ಬಂಧಕಾರಣವಿಷಯೇ ನಾಸ್ತಿಕಮತಾನಿ ದೂಷಿತಾನಿ ।*

ಅನುವಾದ: ಹೀಗೆ ಬಂಧದ ಕಾರಣದ ವಿಷಯದಲ್ಲಿ ನಾಸ್ತಿಕಮತಗಳು ಖಂಡಿಸಲ್ಪಟ್ಟಂತಾಯಿತು.

ಭಾಷ್ಯ: *ಇದಾನೀಂ ಪೂರ್ವನಿರಸ್ತಾವಶಿಷ್ಟಾನಿ ಆಸ್ತಿಕಸಂಭಾವ್ಯಾನಿ*
ಅಪಿ ಅನ್ಯಾನಿ ಬಂಧಕಾರಣಾನಿ ನಿರಸ್ಯಂತೇ ।

ಅನುವಾದ: ಈಗ ಹಿಂದೆ ನಿರಾಕರಿಸಲ್ಪಟ್ಟ ಉಳಿದ ಇತರ ಆಸ್ತಿಕ ಮತಗಳ ಬಂಧಕಾರಣಗಳನ್ನು ನಿರಾಕರಿಸುತ್ತಾರೆ.

ಸೂತ್ರ: ನ ಗತಿ ವಿಶೇಷಾತ್ ॥ ೪೮ ॥

ಅನುವಾದ: ಗತಿವಿಶೇಷದಿಂದಲೂ (ಪುರುಷನಿಗೆ ಬಂಧವು) ಇಲ್ಲ.

ವಿವರಣೆ: ವಿಜ್ಞಾನಭಿಕ್ಷುವಿನ ಪ್ರಕಾರ ಈ ಹಂತದಲ್ಲಿ ನಾಸ್ತಿಕಮತದ ನಿರಾಕರಣೆ ಯಾಗಿದ್ದರೂ ಅನಿರುದ್ಧನ ('ಕಪಿಲ ಸಾಂಖ್ಯ ಪ್ರವಚನ ಸೂತ್ರವೃತ್ತಿ' ಎಂಬ ವ್ಯಾಖ್ಯಾನಕಾರ) ಪ್ರಕಾರ ಬೌದ್ಧಮತದ ಖಂಡನೆ ಮುಂದುವರೆಯುತ್ತದೆ.

ಗತಿವಿಶೇಷ ಎಂದರೆ ಶರೀರವನ್ನು ಪ್ರವೇಶಿಸುವುದೇ ಮುಂತಾದುವು.

ಭಾಷ್ಯ: *ಪ್ರಕರಣಾತ್ ಬಂಧಃ ಲಭ್ಯತೇ । ನ ಗತಿವಿಶೇಷಾತ್ ಶರೀರಪ್ರವೇಶಾದಿರೂಪಾದಪಿ ಪುರುಷಸ್ಯ ನ ಬಂಧಃ ಇತ್ಯರ್ಥಃ ।*

ಅನುವಾದ: ಈ ವಿಚಾರದಲ್ಲಿ ಬಂಧವು ಸೇರಿದೆ. 'ನ ಗತಿವಿಶೇಷಾತ್' ಎಂದರೆ ಶರೀರ ಪ್ರವೇಶವೇ ಮೊದಲಾದ ರೀತಿಯಲ್ಲಿ ಪುರುಷನಿಗೆ ಬಂಧವುಂಟಾಗದು.

ಭಾಷ್ಯ: *ಅತ್ರ ಹೇತುಮಾಹ*

ಅನುವಾದ: ಇದಕ್ಕೆ ಕಾರಣ ಹೇಳಿದೆ–

ಸೂತ್ರ: ನಿಷ್ಕ್ರಿಯಸ್ಯ ತದಸಂಭವಾತ್ ॥ ೪೯ ॥

ಅನುವಾದ: ಪುರುಷನು ನಿಷ್ಕ್ರಿಯನು ಅವನು ಹಾಗೆ (ಗತಿಶೀಲನಾಗುವುದು) ಅಸಂಭವ.

ವಿವರಣೆ: ಆದ್ದರಿಂದ ಅವನಿಗೆ ಬಂಧಬಾರದು ಎಂದರ್ಥ.

ಭಾಷ್ಯ: *ನನು ಶ್ರುತಿಸ್ಮೃತ್ಯೋರಿಹಲೋಕಪರಲೋಕಗಮನಾಗ ಮನಶ್ರವಣಾತ್ ಪುರುಷಸ್ಯ ಪರಿಚ್ಛಿನ್ನತ್ವಮೇವಾಸ್ತು ತಥಾ ಚ ಶ್ರುತಿರಪಿ– 'ಅಂಗುಷ್ಠಮಾತ್ರಃ ಪುರುಷೋ ಅಂತರಾತ್ಮಾ' ಇತ್ಯಾದಿರಿತ್ಯಾಶಂಕಾಮಪಾಕರೋತಿ ।*

ಅನುವಾದ: 'ಅಂತರಾತ್ಮನಾದ ಪುರುಷನು ಕೇವಲ ಅಂಗುಷ್ಠಮಾತ್ರದವನು' (ಶ್ವೇ.ಉ.೩.೧೩) ಎಂದು ಮುಂತಾಗಿ ಶ್ರುತಿವಾಕ್ಯವೂ ಇರುವುದಲ್ಲ.

ಶ್ರುತಿಸ್ಮೃತಿಗಳಲ್ಲಿ ಇಹಲೋಕ ಪರಲೋಕಗಳಿಗೆ ಹೋಗುವುದು ಬರುವುದು ಎಂಬುದನ್ನು ಕೇಳುವುದರಿಂದ, ಪುರುಷನಿಗೆ ಅಳತೆಯನ್ನು ನಿರ್ಮಿಸಿದಂತಾಯಿತು.

ಹೀಗೆ ಇರುವ ಸಂದೇಹವನ್ನು ಮುಂದಿನ ಸೂತ್ರ ಹೋಗಲಾಡಿಸುತ್ತದೆ.

ಸೂತ್ರ: ಮೂರ್ತತ್ವಾತ್ ಘಟಾದಿವತ್ ಸಮಾನಧರ್ಮಾಪತ್ತೌ ಅಪಸಿದ್ಧಾಂತಃ ॥ ೫೦ ॥

ಅನುವಾದ: ಘಟವೇ ಮುಂತಾದುವುಗಳಂತೆ ಆತ್ಮನನ್ನೂ ಮೂರ್ತವೆಂದು ಭಾವಿಸಿದರೆ (ಘಟಕ್ಕೂ ಆತ್ಮನಿಗೂ) ಸಮಾನಧರ್ಮವನ್ನು ಅನ್ವಯಿಸಬೇಕಾದ್ದರಿಂದ ಅದು ಅಪಸಿದ್ಧಾಂತವಾಗುತ್ತದೆ.

ವಿವರಣೆ: ಅಪಸಿದ್ಧಾಂತವೆಂದರೆ ಒಂದು ಸಿದ್ಧಾಂತವನ್ನು ನಿಶ್ಚಯಗೊಳಿಸಿ ಅನಂತರ ಅದಕ್ಕೆ ವಿರುದ್ಧವಾದ ಮತ್ತೊಂದು ಸಿದ್ಧಾಂತವನ್ನು ಒಪ್ಪಿಸುವುದು.

ಭಾಷ್ಯ: *ಗತಿಶ್ರುತಿಮುಪಪಾದಯತಿ ।*

ಅನುವಾದ: ಗತಿಯನ್ನು ಕುರಿತ ಶ್ರುತಿಯನ್ನು ತಿಳಿಸುವರು

ಸೂತ್ರ: ಗತಿಶ್ರುತಿರಪ್ಯುಪಾಧಿಯೋಗಾದಾಕಾಶವತ್ ॥ ೫೧ ॥

ಅನುವಾದ: (ಪುರುಷನ) ಚಲನೆಯನ್ನು ಕುರಿತದ್ದೂ ಸಹ ಉಪಾಧಿಯ ಸಂಬಂಧದಿಂದ ಉಂಟಾದುದು, ಆಕಾಶದಂತೆ.

ಭಾಷ್ಯ: *ಯಾ ಚ ಗತಿಶ್ರುತಿರಪಿ ಪುರುಷೇಽಸ್ತಿ ಸಾ ವಿಭುತ್ವ ಶ್ರುತಿ–ಸ್ಮೃತಿ–ಯುಕ್ತ್ಯನುರೋಧೇನ ಆಕಾಶಸ್ಯೇವ ಉಪಾಧಿ–। ಯೋಗಾದೇವ ಮಂತವ್ಯಾ ಇತ್ಯರ್ಥಃ ।*

ಅನುವಾದ: ಪುರುಷನ ವಿಷಯದಲ್ಲಿ ಯಾವ ಗತಿಶ್ರುತಿ ಇರುವುದೋ ಅದು ವಿಭುತ್ವವನ್ನು ಹೇಳುವ ಶ್ರುತಿ–ಸ್ಮೃತಿ ಮತ್ತು ಯುಕ್ತಿಗಳಾದ ಕಾರಣ ಆಕಾಶದಂತೆ ಉಪಾಧಿಯ ಯೋಗದಿಂದಲೇ ಗತಿಶ್ರುತಿಯನ್ನು ಹೇಳುತ್ತವೆ.

ವಿವರಣೆ: ಪುರುಷನಿಗೆ ಆಕಾಶದಂತೆ ಯಾವ ಸ್ವರೂಪವೂ ಇಲ್ಲ. ಆದರೆ ಬದ್ಧಾವಸ್ಥೆಯಲ್ಲಿ ಅವನು ಉಪಾಧಿಯಿಂದ ಕೂಡಿರುವುದರಿಂದ ಉಪಾಧಿಯನ್ನು ಅವನ ಮೇಲೆ ಆರೋಪಿಸಲಾಗುತ್ತದೆ.

ಭಾಷ್ಯ: *ತತ್ರ ಚ ಪ್ರಮಾಣಮ್*

ಅದರ ವಿಷಯದಲ್ಲಿ ಪ್ರಮಾಣವಿದು.

ಘಟಸಂವೃತಮಾಕಾಶಂ ನೀಯಮಾನೇ ಘಟೇ ಯಥಾ ।
ಘಟೋ ನೀಯೇತ ನಾಕಾಶಂ ತದ್ವಜ್ಜೀವೋ ನಭೋಪಮಃ ॥
(ಬ್ರಹ್ಮಬಿಂದೂಪನಿಷದ್ ೧೩)

ಅನುವಾದ: ಘಟವನ್ನು ಎತ್ತಿ ಒಯ್ಯುವಾಗ ಘಟದಿಂದ ಆವೃತವಾದ ಆಕಾಶವನ್ನು ಘಟವೇನೂ ಹೊತ್ತು ಹೋಗುವುದಿಲ್ಲ. ಹಾಗೆಯೇ ಜೀವವೂ ಆಕಾಶದಂತೆ.

ವಿವರಣೆ: ಜೀವ ಆಕಾಶದಂತೆ ಸರ್ವವ್ಯಾಪಿ. ಆದರೆ ಅದಕ್ಕೆ ದೇಹದ ಉಪಾಧಿಯನ್ನು ನೀಡಿದಾಗ ಅದೂ ಸಹ ದೇಹದೊಳಗಿರುವಂತೆ ಕಾಣುತ್ತದೆ.

ಭಾಷ್ಯ: *'ಬುದ್ಧೇರ್ಗುಣೇನ ಆತ್ಮಗುಣೇನ ಚೈವ ಆರಾಗ್ರಮಾತ್ರೋ ಹ್ಯಪರೋಽಪಿ ದೃಷ್ಟಃ' (ಶ್ವೇತ ಉ. ೫.೮), ನಿತ್ಯಃ ಸರ್ವಗತಃ ಸ್ಥಾಣುಃ (ಭ.ಗೀ. ೨.೨೪) ಇತ್ಯಾದಿಕಾಸ್ಮೃತಿಃ । ಮಧ್ಯಮಪರಿಮಾಣತ್ವೇ ಸಾವಯವತ್ವಾಪತ್ತ್ಯಾ ವಿನಾಶಿತ್ವಮ್, 'ಅಣುತ್ವೇ ಚ ದೇಹವ್ಯಾಪಿಜ್ಞಾನಾದಿ ಅನುಪಪತ್ತಿಃ ಇತ್ಯಾದಿಶ್ಚ ಯುಕ್ತಿರಿತಿ ।*

ಅನುವಾದ: 'ಬುದ್ಧಿಯ ಮತ್ತು ಶರೀರದ ಗುಣದಿಂದಲೂ ಕೂಡಿರುವ ಇನ್ನೊಬ್ಬ ಜೀವಾತ್ಮನು ಅಂಕುಶದ ಮೊನೆಯಂತೆ ಕಂಡುಬರುವನು.

ಅನುವಾದ: 'ಅವನು ನಿತ್ಯನು, ಎಲ್ಲೆಡೆ ಇರುವವನು, ಸ್ಥಿರನು', ಮುಂತಾಗಿ ಸ್ಮೃತಿಯಿದೆ. ಅದು ಮಧ್ಯಮ ಪರಿಮಾಣದ್ದು ಎಂದರೆ ಸಾವಯವ ಮತ್ತು ವಿನಾಶಿಯಾಗುವುದು, ಅಣುತ್ವವನ್ನು ಒಪ್ಪಿದರೆ ಶರೀರವ್ಯಾಪಿಯಾದ ಜ್ಞಾನ ಒದಗದು ಎಂಬ ಯುಕ್ತಿಯಿದೆ.

ವಿವರಣೆ: ಆರಾಗ್ರಮಾತ್ರಃ ಎಂದರೆ ಅಂಕುಶದ ತುದಿಯಂತೆ, ಎಂದರೆ ಅಷ್ಟು ಸೂಕ್ಷ್ಮವಾಗಿರುವವನು. ಮಧ್ಯಮ ಪರಿಮಾಣವೆಂದರೆ, ಅತ್ತ ಸರ್ವವ್ಯಾಪಿಯೂ ಅಲ್ಲ, ಇತ್ತ ಅಣುವೂ ಅಲ್ಲ.

ಭಾಷ್ಯ: *ಪ್ರಕೃತಿಃ ಕುರುತೇ ಕರ್ಮ ಶುಭಾಶುಭಫಲಾತ್ಮಕಮ್ ।*
ಪ್ರಕೃತಿಶ್ಚ ತದಶ್ನಾತಿ ತ್ರಿಷು ಲೋಕೇಷು ಕಾಮಗಾ ॥
(ಮ.ಭಾ.ಶಾಂಪ. ೩೦–೪೫)

ಅನುವಾದ: ಶುಭಾಶುಭ ಫಲಗಳನ್ನು ನೀಡುವ ಕರ್ಮಗಳನ್ನು ಪ್ರಕೃತಿಯು ಮಾಡುವುದು ಮತ್ತು ಮೂರು ಲೋಕಗಳಲ್ಲಿಯೂ ಅದರ ಫಲವನ್ನು ಅನುಭವಿಸುವುದು.

ಭಾಷ್ಯ: *ಇತ್ಯಾದಿ ಸ್ಮೃತಿಭಿಃ ಪ್ರಕೃತೇರೇವ ವಿಶಿಷ್ಟಕ್ರಿಯಾರೂಪಾ ಗತಿಃ ಸ್ಮರ್ಯತ ಇತಿ ।*

ಅನುವಾದ: ಇತ್ಯಾದಿ ಸ್ಮೃತಿಗಳಿಂದ 'ಪ್ರಕೃತಿಯೇ ವಿಶೇಷವಾಗಿ ಕ್ರಿಯಾರೂಪವಾದ ಗತಿಯನ್ನು ನೆನೆಯುತ್ತದೆ' ಎಂದು ತಿಳಿಯುತ್ತದೆ.

ವಿವರಣೆ: ಈ ಎಲ್ಲ ಮೂಲಗಳಿಂದ ಪ್ರಕೃತಿಯೊಂದೇ ಚಲನೆಯಲ್ಲಿ ತೊಡಗುತ್ತದೆ ಎಂದು ತಿಳಿದುಬರುವುದು.

ಸೂತ್ರ: ನ ಕರ್ಮಣಾಪ್ಯತದ್ಧರ್ಮತ್ವಾತ್ ॥ ೫೨ ॥

ಅನುವಾದ: ಕರ್ಮದಿಂದಲೂ ಬಂಧವುಂಟಾಗದು. ಏಕೆಂದರೆ ಅದು ಪುರುಷನ ಧರ್ಮವಲ್ಲ.

ವಿವರಣೆ: ಕರ್ಮ ಎಂದರೆ ಅದೃಷ್ಟ.

ಭಾಷ್ಯ: *ಕರ್ಮಣಾದೃಷ್ಟೇನಾಪಿ ಸಾಕ್ಷಾನ್ನ ಪುರುಷಸ್ಯ ಬಂಧಃ । ಕುತಃ? ಪುರುಷಧರ್ಮತ್ವಾಭಾವಾದಿತ್ಯರ್ಥಃ । ಪೂರ್ವಂ ವಿಹಿತನಿಷಿದ್ಧವ್ಯಾಪಾರರೂಪೇಣ ಕರ್ಮಣಾ ಬಂಧಃ ನಿರಾಕೃತಃ । ಅತ್ರ ತು ತಜ್ಜನ್ಯಾದೃಷ್ಟೇನ ಇತಿ ಆರ್ಥಿಕ ವಿಭಾಗಾದ್ ಅಪೌನರುಕ್ತ್ಯಮ್ ।*

ಅನುವಾದ: ಕರ್ಮ ಎಂದರೆ ಅದೃಷ್ಟದಿಂದಲೂ ಪುರುಷನ ಬಂಧವು ಉಂಟಾಗದು. ಏಕೆ? ಅದೃಷ್ಟವು ಪುರುಷನ ಧರ್ಮವಲ್ಲ. ಹಿಂದೆಯೇ ವಿಹಿತವಾದ ಅಥವಾ ನಿಷಿದ್ಧವಾದ ವ್ಯಾಪಾರರೂಪದ ಕರ್ಮದಿಂದ (ಪುರುಷನಿಗೆ) ಬಂಧವನ್ನು

ನಿರಾಕರಿಸಿ ಇಲ್ಲಾದರೋ ಅದರಿಂದ ಹುಟ್ಟುವ ಅದೃಷ್ಟದಿಂದ ಉಂಟಾಗದು ಎಂಬ ಅರ್ಥದ ಕಾರಣ ಪುನರುಕ್ತಿಯಾಗಲಾರದು.

ವಿವರಣೆ: ಪೂರ್ವಂ, ಹಿಂದೆ, ಎಂದರೆ ಸೂತ್ರ ೧–೧೬

ಭಾಷ್ಯ: *ನನ್ವನ್ಯಧರ್ಮೇಣಾಪ್ಯನ್ಯಸ್ಯ ಬಂಧಃ ಸ್ಯಾತ್, ತತ್ರಾಹ ।*

ಅನುವಾದ: ಬೇರೆಯವರ ಧರ್ಮದಿಂದ ಇನ್ನೊಬ್ಬನಿಗೆ ಬಂಧವೇಕೆ ಉಂಟಾಗದು? ಅದನ್ನು ಕುರಿತು ಹೇಳಲಾಗಿದೆ.

ಸೂತ್ರ: ಅತಿಪ್ರಸಕ್ತಿರನ್ಯಧರ್ಮತ್ವೇ ॥ ೫೩ ॥

ಅನುವಾದ: ಯಾರದೋ ಧರ್ಮದಿಂದ ಇನ್ನಾರಿಗೋ ಬಂಧವುಂಟಾಗುವುದು ಅತಿಪ್ರಸಕ್ತಿಯಾಗುವುದು.

ವಿವರಣೆ: ಅತಿಪ್ರಸಕ್ತಿ ಎಂದರೆ ಬಹಳ ದೂರ ಕೊಂಡೊಯ್ಯುವುದು.

ಭಾಷ್ಯ: *ಬಂಧತತ್ಕಾರಣಯೋಃ ಭಿನ್ನಧರ್ಮತ್ವೇ ಅತಿಪ್ರಸಕ್ತಿಃ ಮುಕ್ತಸ್ಯಾಪಿ ಬಂಧಾಪತ್ತಿರಿತ್ಯರ್ಥಃ ।*

ಅನುವಾದ: ಬಂಧ ಮತ್ತು ಅದಕ್ಕೆ ಕಾರಣ ಬೇರೆ ಬೇರೆಯಾಗಿ ಆದರೆ ಅತಿಪ್ರಸಕ್ತಿ ದೋಷ ಉಂಟಾಗುವುದು. ಏಕೆಂದರೆ ಮುಕ್ತನಿಗೂ ಬಂಧ ಉಂಟಾಗಬಹುದು.

ಭಾಷ್ಯ: *ಕಿಂ ಬಹುನಾ ಸ್ವಭಾವಾದಿಕರ್ಮಾಂತೈಃ ಅನ್ಯೇನ ವಾ ಕೇನಾಪಿ ಪುರುಷಸ್ಯ ಬಂಧೋತ್ಪತ್ತಿಃ ನ ಘಟತೇ, ಶ್ರುತಿವಿರೋಧಾದಿತಿ ಸಾಧಾರಣಂ ಬಾಧಕಮಾಹ ।*

ಅನುವಾದ: ಹೆಚ್ಚೇನು? ಸ್ವಭಾವಾದಿ ಕರ್ಮಾಂತ ಯಾವುದರಿಂದಲೂ ಪುರುಷನಿಗೆ ಬಂಧವುಂಟಾಗದು; ಏಕೆಂದರೆ ಅದು ಶ್ರುತಿಗೆ ವಿರೋಧವಾದುದು. ಆದ್ದರಿಂದ ಸಾಧಾರಣಬಾಧಕವನ್ನು ಹೇಳಲಾಗಿದೆ.

ವಿವರಣೆ: 'ಸ್ವಭಾವಾದಿಕರ್ಮಾಂತೈಃ' ಎಂದರೆ ಸ್ವಭಾವದಿಂದ ಪ್ರಾರಂಭವಾಗಿ ಕರ್ಮದಲ್ಲಿ ಕೊನೆಗೊಳ್ಳುವ (ನೋಡಿ, ಸಾಂಖ್ಯಸೂತ್ರ ೧.೭ ಮತ್ತು ೧.೫೨, ಅವೆರಡರ ನಡುವೆ ಬರುವ ಚರ್ಚೆ ಎಂದರ್ಥ)

ಸೂತ್ರ: ನಿರ್ಗುಣಾದಿಶ್ರುತಿವಿರೋಧಶ್ಚೇತಿ ॥ ೫೪ ॥

ಅನುವಾದ: ಪುರುಷನ ಬಂಧಕ್ಕೆ ಉಪಾಧಿಯೇ ಕಾರಣವಲ್ಲವೆಂದರೆ ನಿರ್ಗುಣವೇ ಮೊದಲಾದ ಶ್ರುತಿಗಳಿಗೆ ವಿರೋಧ ಬರುವುದು.

ಭಾಷ್ಯ: *ಪುರುಷಬಂಧಸ್ಯ ಔಪಾಧಿಕತ್ವೇ 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' (ಶ್ವೇ.ಉ. ೬.೧೧) ಇತ್ಯಾದಿ ಶ್ರುತಿವಿರೋಧಶ್ಚ ಇತ್ಯರ್ಥಃ । ಇತಿಶಬ್ದೋ ಬಂಧಹೇತುಪರೀಕ್ಷಾಸಮಾಪ್ತಾ ।*

ಅನುವಾದ: ಪುರುಷನಿಗಾಗುವ ಬಂಧಕ್ಕೆ ಉಪಾಧಿಯು ಕಾರಣವಿಲ್ಲದಿದ್ದರೆ 'ಸಾಕ್ಷಿ, ಚೇತನ, ಕೇವಲ ಮತ್ತು ನಿರ್ಗುಣ' ಇತ್ಯಾದಿ ಅದಕ್ಕೆ ಶ್ರುತಿ ವಿರೋಧವಿದೆ. (ಸೂತ್ರದ) ಇತಿ ಶಬ್ದ ಬಂಧಕ್ಕೆ ಕಾರಣವನ್ನು ಪರೀಕ್ಷೆ ಮಾಡುವುದು ಪೂರ್ಣಗೊಂಡಿತು ಎಂದರ್ಥ.

ಭಾಷ್ಯ: *ತಾಮಿಮಾಂ ಆಶಂಕಾಂ ಪರಿಹರತಿ ।*

ಅನುವಾದ: ಹೀಗೆ ಈ ಸಂದೇಹವನ್ನು ಹೋಗಲಾಡಿಸಲು ಮುಂದಿನ ಸೂತ್ರವನ್ನು ಹೇಳಿರುವರು.

ಸೂತ್ರ: ತದ್ಯೋಗೋಽಪ್ಯವಿವೇಕಾನ್ನ ಸಮಾನತ್ವಮ್ ॥ ೫೫ ॥

ಅನುವಾದ: ಪ್ರಕೃತಿಯ ಸಂಯೋಗವೂ ಅವಿವೇಕದಿಂದಾಗುತ್ತದೆ. ಆದ್ದರಿಂದ ಮೊದಲಿನ ಕಾರಣಗಳೊಡನೆ ಇದು ಸಮಾನವಲ್ಲ.

ಭಾಷ್ಯ: *ಪೂರ್ವೋಕ್ತತದ್ಯೋಗೋಽಪಿ ಪುರುಷಸ್ಯಾವಿವೇಕಾತ್ ವಕ್ಷ್ಯಮಾಣಾದವಿವೇಕಾದೇವ ಹಿ ನಿಮಿತ್ತಾ ತ್ ಸಂಯೋಗೋ ಭವತಿ । ಅತಃ ನೋಕ್ತ ದೋಷಾಣಾಂ ಸಮಾನತ್ವಮಸ್ತಿ ಇತ್ಯರ್ಥಃ । ಸ ಚ ಅವಿವೇಕೋ ಮುಕ್ತೇಷು ನಾಸ್ತೀತಿ ನ ತೇಷಾಂ ಪುನಃ ಸಂಯೋಗೋ ಭವತೀತಿ ।*

ಅನುವಾದ: ಮೊದಲು ಹೇಳಿದ ಪ್ರಕೃತಿ ಯೋಗವೂ ಕೂಡ ಮುಂದೆ ಹೇಳಲಿರುವಂತೆ ಪುರುಷನ ಅವಿವೇಕವೇ ಅವನನ್ನು ಪ್ರಕೃತಿಯ ಬಳಿಗೆ ತರುತ್ತದೆ. ಆದ್ದರಿಂದ ಮೇಲೆ ಹೇಳಿದ ದೋಷಗಳಿಗೆ ಸಮಾನತೆ ಇದೆ ಎಂದರ್ಥ. ಈ ಅವಿವೇಕ ಮುಕ್ತರಲ್ಲಿ ಕಂಡುಬರದು, ಅವರಿಗೆ ಪ್ರಕೃತಿಯೊಡನೆ ಸಂಯೋಗವಾಗದು.

ಭಾಷ್ಯ: *ನನ್ವವಿವೇಕೋಽತ್ರ ನ ಪ್ರಕೃತಿಪುರುಷ ಭೇದ –। ಸಾಕ್ಷಾತ್ಕಾರಃ, ಸಂಯೋಗಾತ್ ಪ್ರಾಗಸತ್ತ್ವಾತ್, ಕಿಂತು ವಿವೇಕ ಪ್ರಾಗಭಾವೋಽವಿವೇಕಾಖ್ಯ ಜ್ಞಾನವಾಸನಾ ವಾ । ತದುಭಯಮಪಿ ನ ಪುರುಷಧರ್ಮಃ, ಕಿಂತು ಬುದ್ಧಿಧರ್ಮ ಏವ ಇತ್ಯನ್ಯಧರ್ಮೇಣಾನ್ಯತ್ರ ಸಂಯೋಗೋಽತಿಪ್ರಸಂಗ– ದೋಷಸಾಮ್ಯಮಸ್ತ್ಯೇವೇತಿ ಚೇತ್ ।*

ಅನುವಾದ: ಅವಿವೇಕದಿಂದ ಪ್ರಕೃತಿ–ಪುರುಷರ ಅಭೇದವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೆ? ಹಿಂದೆ ಸಂಭವಿಸದೆ ಈಗ ಅವೆರಡೂ ಸೇರುವುದರಿಂದಲೆ? ಆದರೆ ವಿವೇಕವು ಮೊದಲು ಇಲ್ಲದೆ ಇದ್ದುದರಿಂದಲೇ ಅಥವಾ ಅವಿವೇಕವೆಂಬ ಜ್ಞಾನದ ವಾಸನೆಯಿಂದಲೇ? ಅವೆರಡೂ ಸಹ ಪುರುಷನ ಗುಣಗಳಲ್ಲ, ಆದರೆ ಅದು ಬುದ್ಧಿಧರ್ಮವೇ? ಆ ಕಾರಣ ಅನ್ಯರ ಧರ್ಮದ ಕಾರಣ ಬೇರೊಂದೆಡೆ ಸಂಯೋಗವೆಂದರೆ ಅತಿಪ್ರಸಕ್ತಿಯ ದೋಷದಿಂದ ಸಮಾನವಾಗುವುದು ಎಂದರೆ?

ಭಾಷ್ಯ: *ಮೈವಮ್ । ವಿಷಯತಾ ಸಂಬಂಧೇನಾವಿವೇಕಸ್ಯ ಪುರುಷಧರ್ಮತ್ವಾತ್ ತಥಾಚ ಪ್ರಕೃತಿರ್ಬುದ್ಧಿರೂಪಾಸತೀ ಯಸ್ಮೈಸ್ವಾಮಿಪುರುಷಾಯ ತನುಂ ವಿವಿಚ್ಯ ನ ದರ್ಶಿತವತೀ ಸ್ವವೃತ್ತಿದರ್ಶನಾರ್ಥಂ ತದೀಯಬುದ್ಧಿರೂಪೇಣ ತತ್ರೈವ ಪುರುಷೇ ಸಂಯುಜ್ಯತೇ ಇತಿ ವ್ಯವಸ್ಥಯಾ ಅತಿಪ್ರಸಂಗಾಭಾವಾತ್ ।*

ಅನುವಾದ: ಇದು ಸರಿಯಲ್ಲ. (ಪ್ರಕೃತಿಯು) ವಿಷಯದ ಸಂಬಂಧವನ್ನು ಇಟ್ಟುಕೊಂಡಿರುವುದರಿಂದ ಅವಿವೇಕವು ಪುರುಷನ ಧರ್ಮವಾಗಿರುವುದರಿಂದ, ಹಾಗೆಯೇ ಪ್ರಕೃತಿಯು ಬುದ್ಧಿರೂಪವಾಗಿ ಇದ್ದು ತನ್ನ ಒಡೆಯನಾದ ಪುರುಷನಿಗೆ ದೇಹವನ್ನು ತೋರ್ಪಡಿಸಿ ಅದೇ ಪುರುಷನೊಡನೆ ತನ್ನ ವ್ಯಾಪಾರವನ್ನು ತೋರಿಸಲು ಅವಳ ಬುದ್ಧಿಯ ರೂಪದಲ್ಲಿ ಅಲ್ಲಿಯೇ ಪುರುಷನೊಡನೆ ಸೇರುವಳು ಎಂಬ ವ್ಯವಸ್ಥೆಯಲ್ಲಿ ಅತಿಪ್ರಸಂಗ ದೋಷವುಂಟಾಗದು.

ಭಾಷ್ಯ: *ತದುಕ್ತಂ ಕಾರಿಕಯಾ–*
ಪುರುಷಸ್ಯ ದರ್ಶನಾರ್ಥಂ ಕೈವಲ್ಯಾರ್ಥಂ ತಥಾ ಪ್ರಧಾನಸ್ಯ ।
ಪಂಗ್ವಂಧವದುಭಯೋರಪಿ ಸಂಯೋಗಸ್ತತ್ಕೃತಃ ಸರ್ಗಃ ॥ (ಸಾಂ.ಕಾ. ೨೧)

ಅನುವಾದ: ಚಲಿಸಲು ಅಸಮರ್ಥನಾದ ಕುಂಟನು ಕಾಣದ ಕುರುಡನ ಜೊತೆಗೂಡಿದಂತೆ ಪುರುಷನ ಕೈವಲ್ಯಕ್ಕಾಗಿ ಮತ್ತು ಪ್ರಧಾನದ ದರ್ಶನಕ್ಕಾಗಿ ಅವರಿಬ್ಬರ ಸಂಯೋಗವಾಗುವುದು. ಅದರಿಂದ ಸೃಷ್ಟಿಯುಂಟಾಗುತ್ತದೆ.

ವಿವರಣೆ: ಪುರುಷನಿಗೆ ತನ್ನ ಗುರಿಯಾದ ಕೈವಲ್ಯವನ್ನು ಸಾಧಿಸುವ ಕಾತರ. ಪ್ರಕೃತಿ ತನ್ನ ಭೋಗ್ಯತ್ವವನ್ನು ವ್ಯಕ್ತಪಡಿಸುವ ಅಭಿಲಾಷೆ. ಇದರ ಫಲವಾಗಿ ಸೃಷ್ಟಿ.

ಭಾಷ್ಯ: *ಸ್ವಾಮಿನೇ ಪುರುಷಾಯ ಪ್ರಧಾನೇನ ದರ್ಶಯಿತುಂ ಕೈವಲ್ಯಾರ್ಥಂ ಚ ಇತ್ಯರ್ಥಃ । ಅವಿವೇಕಸ್ಯ ವೃತ್ತಿರೂಪತ್ವಂ ತು 'ವಾಙ್ಮಾತ್ರಂ ನ ತು ತತ್ತ್ವಂ ಚಿತ್ತಸ್ಥಿತೇಃ' ಇತಿ ಆಗಾಮಿಸೂತ್ರೇ ವಕ್ಷ್ಯಾಮಃ । ಅವಿವೇಕನಾಶೇಽಪಿ ಜೀವನ್ಮುಕ್ತಸ್ಯ ದುಃಖಭೋಗದರ್ಶನಾಚ್ಚ । ಅತಃ ಸಾಕ್ಷಾದೇವಾವಿವೇಕೋ ಬಂಧಕಾರಣಂ ಪ್ರಾಙ್ನೋಕ್ತಃ ।*

ಅನುವಾದ: ಸ್ವಾಮಿಯಾದ ಪುರುಷನಿಗೆ ಕೈವಲ್ಯ ಪ್ರಾಪ್ತಿಯಾಗಲೆಂದೂ ಪ್ರಕೃತಿಗೆ ದಾರಿ ತೋರಲೆಂದೂ ಎಂದರ್ಥ. ಅವಿವೇಕವು ಕಾರ್ಯಪ್ರವೃತ್ತವಾಗುವುದಾದರೂ ಅದು ವಾಸ್ತವವಲ್ಲ. 'ವಿವೇಕಜ್ಞಾನವು ವಾಙ್ಮಾತ್ರವಷ್ಟೆ, ನಿಜವಲ್ಲ, ಏಕೆಂದರೆ ವೃತ್ತಿಯು ಚಿತ್ತಕ್ಕೆ ಸೇರಿದ್ದು. (ಸಾಂ.ಸೂ. ೧–೧೬) ಎಂಬ ಸೂತ್ರದಲ್ಲಿ ನಾವು ಹೇಳುವೆವು. ಅವಿವೇಕವು ನಾಶವಾದರೂ ಜೀವನ್ಮುಕ್ತನು ದುಃಖವನ್ನು ಅನುಭವಿಸುವುದನ್ನು ಕಂಡಿದ್ದೇವೆ. ಆದ್ದರಿಂದ ಸಾಕ್ಷಾತ್ ಅವಿವೇಕವೇ ಬಂಧಕ್ಕೆ ಕಾರಣವೆಂದು ಮೊದಲು ಹೇಳಿಲ್ಲ.

ವಿವರಣೆ: ಪ್ರಕೃತಿ ಕುರುಡ, ಪುರುಷ ಕುಂಟ, ಇಬ್ಬರಿಗೂ ತಮ್ಮ ಉದ್ದೇಶವನ್ನು ಸಾಧಿಸಬೇಕೆಂಬ ತವಕ. ಸಾಂಖ್ಯರ ಪ್ರಕಾರ ಪುರುಷನಿಗೆ ಹಿರಿಯ ಸ್ಥಾನ, ಅವನೇ ಒಡೆಯ, ಭೋಕ್ತಾ.

ಭಾಷ್ಯ: *ನನು ಭೋಗ್ಯಭೋಕ್ತೃಭಾವನಿಯಾಮಕತ್ವೇನ ಕ್ಲಪ್ತಸ್ಯ ಅನಾದಿಸ್ವಸ್ವಾಮಿಭಾವಸ್ಯ ಕರ್ಮಾದೀನಾಂ ವಾ ಸಂಯೋಗ ಹೇತುತ್ವಮಸ್ತು, ಕಿಮಿತಿ ಅವಿವೇಕೋಽಪಿ ಸಂಯೋಗಹೇತುರಿಷ್ಯತೇ? ಇತಿ ಚೇತ್ ।*

ಅನುವಾದ: ಭೋಗ್ಯ–ಭೋಕ್ತೃ ಭಾವವನ್ನು ನಿಯಾಮಕ ಮಾಡಿರುವುದರಿಂದ ಅನಾದಿಕಾಲದ 'ತನ್ನ–ತನ್ನ ಒಡೆಯನ' ಭಾವವಾಗಲಿಲ್ಲ. ಕರ್ಮಾದಿಗಳಾಗಲೀ ಸಂಯೋಗಕ್ಕೆ ಕಾರಣವಾಗಲಿ, ಇದೇಕೆ ಅವಿವೇಕವನ್ನೂ ಸಂಯೋಗಕ್ಕೆ ಕಾರಣವೆಂದು ಹೇಳುವಿರಿ?

ಭಾಷ್ಯ: *ನೇತಿ*

ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್
ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು ॥ ಗೀತಾ ೧೫–೨೧
ಇತಿ ಗೀತಾಯಾಂ ಸಂಗಾಖ್ಯಾಭಿಮಾನಸ್ಯ ಸಂಯೋಗಹೇತುತ್ವ ಸ್ಮರಣಾತ್, ವಕ್ಷ್ಯಮಾಣಾದಿವಾಕ್ಯಯುಕ್ತಿಭ್ಯಶ್ಚ ಅನ್ಯಥಾ ಜ್ಞಾನತೋ ಮೋಕ್ಷಸ್ಯ ಶ್ರುತಿಸ್ಮೃತಿಸಿದ್ಧಸ್ಯ ಅನುಪಪತ್ತೇಶ್ಚ ।

ಅನುವಾದ: ಹಾಗಲ್ಲ. ಪುರುಷನು ಪ್ರಕೃತಿಯಲ್ಲಿದ್ದುಕೊಂಡೇ ಪ್ರಕೃತಿಯಿಂದ ಉಂಟಾಗುವ ಭೋಗಗಳನ್ನು ಅನುಭವಿಸುವವನು. ಈ ಗುಣದ ಸಂಪರ್ಕವೇ ಒಳ್ಳೆಯ ಮತ್ತು ಕೆಟ್ಟ ಯೋನಿಗಳಲ್ಲಿ ಹುಟ್ಟುವುದಕ್ಕೆ ಕಾರಣವು. ಹೀಗೆ ಗೀತೆಯಲ್ಲಿ ಸಂಗವೆಂಬ ಅಭಿಮಾನವೇ ಸಂಯೋಗಕ್ಕೆ ಕಾರಣವೆಂದು ಹೇಳಲಾಗಿದೆ. ಮುಂದೆ ಹೇಳುವ ವಾಕ್ಯಗಳ ಯುಕ್ತಿಗಳಿಂದಲೂ ಮತ್ತು ಮೇಲಿನ ವಾಕ್ಯದಿಂದಲೂ ಇದು ಸಿದ್ಧವಾಗುತ್ತದೆ. ಹಾಗಿಲ್ಲದಿದ್ದಲ್ಲಿ ಶ್ರುತಿಸ್ಮೃತಿಗಳು ಹೇಳುವ ಜ್ಞಾನದಿಂದ ಮೋಕ್ಷವೆಂಬುದು ಪ್ರತಿಪಾದಿತವಾಗುತ್ತಿರಲಿಲ್ಲ.

ಭಾಷ್ಯ: *ಅಥೈವಮಪಿ ಸ್ವೋಪಾಧಿಕರ್ಮಾಧಿಕಮಪಿ ಸಂಯೋಗ–ಕಾರಣಂ ಭವತಿ । ತದ್ವಿಹಾಯ ಕಥಮವಿವೇಕ ಏವ ಕೇವಲಂ ತತ್ರ ಕಾರಣಮುಚ್ಯತ ಇತಿ ।*

ಅನುವಾದ: ಹಾಗಿದ್ದರೂ ಉಪಾಧಿಯಗಿರುವ ಕರ್ಮವೂ ಸಹ ಸಯೋಗಕ್ಕೆ ಕಾರಣವಾಗ ಬಹುದು. ಅದನ್ನು ಬಿಟ್ಟು ಅವಿವೇಕವೇ ಕಾರಣವೆಂದು ಹೇಗೆ ಹೇಳುವಿರಿ.

ಭಾಷ್ಯ: *ಉಚ್ಯತೇ । ಅವಿವೇಕಾಪೇಕ್ಷಯಾ ಕರ್ಮಾದೀನಾಮಿವ ಪರಂಪರಯೈವ ಪುರುಷಸಂಬಂಧಃ । ತಥಾ ಅವಿವೇಕ ಏವ ಪುರುಷೇಣ ಸ್ವಾಕ್ಷಾಚ್ಛೇತ್ತುಂ ಶಕ್ಯತೇ । ಕರ್ಮಾದಿಕಂ ತು*

ಅವಿವೇಕಾಖ್ಯ ಹೇತೂಚ್ಛೇದದ್ವಾ ಏವ ಇತ್ಯಾಶಯೇನ ಅವಿವೇಕ ಏವ ಮುಖ್ಯತರಃ ಸಂಯೋಗಹೇತುಕತಯೋಕ್ತಃ ಇತಿ ।

ಅನುವಾದ: ಹೇಳುತ್ತೇವೆ. ಕರ್ಮ ಮುಂತಾದವುಗಳೆಲ್ಲ ಅವಿವೇಕದ ಆಧಾರದ ಮೇಲೆ ಆಗುತ್ತದೆ. ಇದು ಪುರುಷನ ಸಂಬಂಧವೆಂಬ ಪರಂಪರೆಯಿಂದ ಆಗುವುದು. ಹಾಗೆಯೇ ಅವಿವೇಕವು. ಸಾಕ್ಷಾತ್ತಾಗಿ ಪುರುಷನಿಂದಲೇ ನಾಶವಾಗುವುದು ಸಾಧ್ಯ. ಕರ್ಮಾದಿಗಳಾದರೋ ಅವಿವೇಕವೆಂಬ ಕಾರಣವನ್ನು ನಾಶಮಾಡಿದ ನಂತರ ನಾಶವಾಗುತ್ತವೆ. ಈ ಅಭಿಪ್ರಾಯದಿಂದಲೇ ಅವಿವೇಕವನ್ನು ಮುಖ್ಯ ಸಂಯೋಗಕ್ಕೆ ಕಾರಣ, ಎಂದಿದೆ.

ಭಾಷ್ಯ: *ಅಯಂ ಚಾವಿವೇಕೋಽಗೃಹೀತಾಸಂಸರ್ಗಕಂ ಉಭಯಜ್ಞಾನಮವಿದ್ಯಾಸ್ಥಲಾಭಿಷಿಕ್ತ ಏವ ವಿವಕ್ಷಿತಃ । 'ಬಂಧೋ ವಿಪರ್ಯಯಾತ್' (ಸೂತ್ರ ೩.೨೪) 'ವಿಪರ್ಯಯಭೇದಾಃ ಪಂಚ' (ಸೂತ್ರ ೩.೩೭) ಇತ್ಯಾಗಾಮಿ-ಸೂತ್ರದ್ವಯಾತ್ 'ತಸ್ಯ ಹೇತುರವಿದ್ಯಾ'(ಸೂತ್ರ ೨.೨೪) ಇತಿ ಯೋಗಸೂತ್ರೇಽಪ್ಯವಿದ್ಯಾಯಾ ಏವ ಪಂಚಪರ್ವಾಯಾ ಬುದ್ಧಿಪುರುಷ ಸಂಯೋಗಃ ಹೇತುಸಾವಚಮತ್ ಚ ಅನ್ಯಥಾಖ್ಯಾತಿ ಅನಭ್ಯುಪಗಮಮಾತ್ರ ಏವ ಯೋಗತೋಽತ್ರ ವಿಶೇಷೌಚಿತ್ಯಾತ್ । ನ ಪುನರವಿವೇಕೋಽತ್ರಾಭಾವಮಾತ್ರಂ ವಿವೇಕಪ್ರಾಗಭಾವೋ ವಾ, ಮುಕ್ತಸ್ಯಾಪಿ ಬಂಧಾಪತ್ತೇಃ ಜೀವನ್ಮುಕ್ತಸ್ಯಾಪಿ ಭಾವಿವಿವೇಕವ್ಯಕ್ತಿಪ್ರಾಗಭಾವೇನ ಧರ್ಮಾಧರ್ಮೋತ್ಪತ್ತಿದ್ವಾರಾ ಪುನರ್ಬಂಧಪ್ರಸಂಗಾಚ್ಚ ತಥಾಗಾಮಿಸೂತ್ರಸ್ಥ (೧.೫೬) ಧ್ವಾಂತದೃಷ್ಟಾಂತಾನುಪಪತ್ತೇಶ್ಚ, ಅಭಾವಸ್ಯ ಧ್ವಾಂತವದಾವರಕತ್ವ ಅಸಂಭವಾತ್ ತಥಾ ವೃದ್ಧಿಹ್ರಾಸಾವಪ್ಯವಿವೇಕಸ್ಯ ಶ್ರೂಯಮಾಣಃ ನೋಪಪದ್ಯೇಯಾತಾಂ ಇತಿ ।*

ಅನುವಾದ: ಈ ಅವಿವೇಕವೂ ಸಹ ಈ ಸಂಯೋಗವು ಇಲ್ಲವೆಂಬುದನ್ನು ಅರಿಯದೆ ಉಭಯಜ್ಞಾನ ರೂಪವನ್ನು ಹೊಂದಿ ಅವಿದ್ಯೆಯ ಸ್ಥಾನದಲ್ಲಿ ಸೇರಿಹೋಗುತ್ತದೆ ಎಂದು ಹೇಳಲು ಇಚ್ಛಿಸಲಾಗಿದೆ. 'ವಿಪರ್ಯಯದಿಂದ ಬಂಧವುಂಟಾಗುವುದು'. 'ವಿಪರ್ಯಗಳು ಐದು ಬಗೆ' ಎಂದು ಮುಂದೆ ಬರುವ ಎರಡು ಸೂತ್ರಗಳಿಂದಲೂ, 'ಅದಕ್ಕೆ ಕಾರಣ ಅವಿದ್ಯೆ' ಎಂಬ ಯೋಗಸೂತ್ರದಿಂದಲೂ ಪಂಚಪರ್ವ ಅವಿದ್ಯೆಯೇ. ಬುದ್ಧಿ-ಪುರುಷ ಸಂಯೋಗಕ್ಕೆ ಕಾರಣ ಎಂದು ಹೇಳಲಾಗಿದೆ. ಈ ಸನ್ನಿವೇಶದಲ್ಲಿ ಪ್ರಕೃತ ಗಮನಿಸಬೇಕಾದುದು ಯೋಗಕ್ಕಿಂತ ಬೇರೆಯಾಗಿ ಸಾಂಖ್ಯವು ಅನ್ಯಥಾಖ್ಯಾತಿಯನ್ನು ಒಪ್ಪದು ಎಂಬ ಅಂಶ ಪ್ರಾಗಭಾವವೆಂದು ತಿಳಿಯಬಾರದು. ಏಕೆಂದರೆ ಮುಕ್ತನಿಗೂ ಅದು ಅನ್ವಯಿಸಬಹುದು. ಜೀವನ್ಮುಕ್ತನಿಗೂ ಸಹ ಮುಂದೆ ಬರಬಹುದಾದ ವಿವೇಕದ ಪ್ರಾಗಭಾವದಿಂದ

ಧರ್ಮಾಧರ್ಮಗಳ ಉತ್ಪತ್ತಿಯ ಮೂಲಕ ಮತ್ತೆ ಬಂಧವುಂಟಾಗಬಹುದಾದ ಪ್ರಸಂಗದ ಕಾರಣ, ಮುಂದೆ ಬರುವ ಸೂತ್ರದಲ್ಲಿ ತಮಸ್ಸಿನ ದೃಷ್ಟಾಂತವು ಅನ್ವಯಿಸದಿರುವುದು. ಅಭಾವ ತಮಸ್ಸಿನಂತೆ ಆವರಿಸುವ ಸಂಭವವಿಲ್ಲದಿರುವುದರಿಂದ ಹಾಗೂ ವೃದ್ಧಿ ಹಾಗೂ ಕ್ಷಯಗಳು ಅವಿವೇಕಕ್ಕೆ ಇರುವುದೆಂಬುದನ್ನು ಕೇಳಿಬರದಿರುವುದರಿಂದ ಅನ್ವಯಿಸದು.

ವಿವರಣೆ: ಉಭಯ ಜ್ಞಾನವೆಂದರೆ ಪ್ರಕೃತಿ–ಪುರುಷರು ಭಿನ್ನವೆಂದು ತಿಳಿಯದೆ ಒಂದೇ ಎಂದು ಭಾವಿಸುವುದು ಇದನ್ನೇ ಅವಿವೇಕವೆನ್ನುವರು.

'ಅನ್ಯಥಾ ಖ್ಯಾತಿ' ಎಂದರೆ, 'ಅಯಥಾರ್ಥ ಅನುಭವ', 'ಭ್ರಮೆ', 'ಪ್ರಾಗಭಾವ'ವೆಂದರೆ 'ಅನಾಗತ ಅವಸ್ಥಾ' ಇನ್ನೂ ರೂಪುಗೊಳ್ಳದ ಸ್ಥಿತಿ.

'ಧ್ವಾಂತ' ಎಂದರೆ ಕತ್ತಲೆ 'ವಿಪರ್ಯಯ'ವೆಂದರೆ 'ಅಯಥಾರ್ಥನಿಶ್ಚಯ', 'ತಪ್ಪುಗ್ರಾಹಿಕೆ'.

ಭಾಷ್ಯ: *ಅಸ್ಮನ್ಮತೇ ಚ ವಾಸನಾರೂಪಸ್ಯೈವ ಅವಿವೇಕಸ್ಯ ಸಂಯೋಗಾಖ್ಯಜನ್ಮಹೇತುತಯಾ ತಮೋವದಾವರಕತ್ವವೃದ್ಧಿ–ಹ್ರಾಸಾದಿಕಮಂಜಸ್ಯೈವೋಪಪದ್ಯತೇ । 'ತಸ್ಯ ಹೇತುರವಿದ್ಯಾ' ಇತಿ ಪಾತಂಜಲಸೂತ್ರೇ (೨.೨೪) ಚ ಭಾಷ್ಯಕಾರೈಃ ಅವಿದ್ಯಾಶಬ್ದೇನ ಅವಿದ್ಯಾಬೀಜಂ ವ್ಯಾಖ್ಯಾತಮ್ ।*

ಅನುವಾದ: ನಮ್ಮ ದೃಷ್ಟಿಯಲ್ಲಿ ವಾಸನಾರೂಪದ ಅವಿವೇಕವೇ ಸಂಯೋಗವೆಂಬ ಜನ್ಮಕ್ಕೆ ಕಾರಣವಾಗಿ ಕತ್ತಲೆಯಂತೆ ಆವರಿಸುತ್ತ ಮತ್ತು ವೃದ್ಧಿ ಮತ್ತು ಹ್ರಾಸಾದಿಗಳನ್ನುಳ್ಳದ್ದಾಗಿ ಸುಲಭವಾಗಿ ತಿಳಿಸಲ್ಪಡುತ್ತದೆ. ('ತಸ್ಯಹೇತುರವಿದ್ಯಾ') 'ಅದಕ್ಕೆ ಕಾರಣ ಅವಿದ್ಯೆ' ಎಂಬ ಪತಂಜಲಿಯ ಸೂತ್ರದಲ್ಲಿ ಭಾಷ್ಯಕಾರರು ಅವಿದ್ಯೆಯೆಂಬ ಪದದಿಂದ 'ಅವಿದ್ಯೆಯ ಬೀಜವು' ಎಂದಿದ್ದಾರೆ.

ವಿವರಣೆ: 'ಅವಿದ್ಯೆ' ಎಂಬ ಪದಕ್ಕೆ ಅವಿದ್ಯೆಯ ಮೂಲ ಎಂದು ಅರ್ಥಮಾಡಲಾಗಿದೆ.

ಭಾಷ್ಯ: *ಜ್ಞಾನಸ್ಯ ಸಂಯೋಗೋತ್ತರಕಾಲೀನತ್ವೇನ ಸಂಯೋಗಾ–ಜನಕತ್ವಾದಿತಿ । ಅಪಿ ಚ 'ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ' (ಗೀ. ೧೩.೨೧) ಇತ್ಯಾದಿ ವಾಕ್ಯಗಳಲ್ಲಿ ಅಭಿಮಾನಾಖ್ಯ ಸಂಯೋಗ–ಸ್ಯೈವ ಪ್ರಕೃತಿಸ್ಥತಾಖ್ಯ ಸಂಯೋಗ ಹೇತುತಾವಗಮ್ಯತೇ ।*

ಅನುವಾದ: ಸಂಯೋಗವಾದ ನಂತರ ಜ್ಞಾನವು ಉಂಟಾಗುವುದರಿಂದ ಸಂಯೋಗವನ್ನು ಅದು ಮಾಡಲಾರದು. ಅಲ್ಲದೆ 'ಪುರುಷನು ಪ್ರಕೃತಿಯಲ್ಲಿದ್ದುಕೊಂಡೇ ಅನುಭವಿಸುವನು' ಮುಂತಾದ ವಾಕ್ಯಗಳಲ್ಲಿ ಅಭಿಮಾನವೆಂಬ ಸಂಯೋಗದಿಂದಲೇ ಪ್ರಕೃತಿಯಲ್ಲಿದ್ದವನಾಗಿ ಎಂಬ ಸಂಯೋಗದ ಕಾರಣವನ್ನು ತಿಳಿಯಬಹುದಾಗಿದೆ.

ಭಾಷ್ಯ: *ಅತ ಏವ ಚ ಅವಿದ್ಯಾ, ನಾಭಾವೋಽಪಿ ತು ವಿದ್ಯಾವಿರೋಧಿ ಜ್ಞಾನಾಂತರಮಿತಿ ಯೋಗಭಾಷ್ಯೇ ವ್ಯಾಸದೇವೈಃ ಪ್ರಯತ್ನೇನ*

ಅವಧೃತಮ್ । ತಸ್ಮಾದವಿವೇಕಾವಿದ್ಯಯೋಃ ತುಲ್ಯಯೋಗಕ್ಷೇಮತಯಾ ಅವಿವೇಕಸ್ಯಾಪಿ ಜ್ಞಾನವಿಶೇಷತ್ವಮಿತಿ ಸಿದ್ಧಮ್ ।

ಅನುವಾದ: ಆದ್ದರಿಂದಲೇ ಅವಿದ್ಯೆಯು ಅಭಾವವಲ್ಲದಿದ್ದರೂ ವಿದ್ಯೆಗೆ ವಿರೋಧಿಯಾದ ಜ್ಞಾನಾಂತರವೆಂದು ಯೋಗಭಾಷ್ಯದಲ್ಲಿ ವ್ಯಾಸದೇವನು ಪ್ರಯತ್ನಪೂರ್ವಕವಾಗಿ ದೃಢಪಡಿಸಿದ್ದಾನೆ. ಆದ್ದರಿಂದ ಅವಿವೇಕ ಮತ್ತು ಅವಿದ್ಯೆಗಳು ಸಮಾನವಾಗಿರುವುದರಿಂದ ಅವಿವೇಕವೂ ಒಂದು ಜ್ಞಾನವಿಶೇಷ ಎಂದು ಸಿದ್ಧವಾಗುತ್ತದೆ.

ವಿವರಣೆ: ಇಲ್ಲಿ ಅವಿವೇಕವು ಜ್ಞಾನಾಂತರವೇ ಹೊರತು ಜ್ಞಾನದ ಅಭಾವವಲ್ಲ ಎಂದು ತಿಳಿಯಬೇಕು.

ಭಾಷ್ಯ: *ಅಯಂ ಚಾವಿವೇಕಸ್ತ್ರಿಧಾ ಸಂಯೋಗಾಖ್ಯಜನ್ಮಹೇತುಃ ಸಾಕ್ಷಾದ್ಧರ್ಮಾಧರ್ಮೋತ್ಪತ್ತಿದ್ವಾರಾ ರಾಗಾದಿದೃಷ್ಟದ್ವಾರಾ ಚ ಭವತಿ । 'ಸತಿ ಮೂಲೇ ತದ್ವಿಪಾಕಃ (ಯೋಗ್ಯಸೂತ್ರ ೨.೧೩.೮) ಇತಿ ಯೋಗಸೂತ್ರಾತ್ । 'ಕರ್ತಾಸ್ಮೀತಿ ನಿಬಧ್ಯತೇ' ಇತಿ ಸ್ಮೃತೇಃ 'ವೀತರಾಗಜನ್ಮಾದರ್ಶನಾತರ (೩.೧.೨೫) ಇತಿ ನ್ಯಾಯಸೂತ್ರಾಚ್ಚ ।*

ಅನುವಾದ: ಈ ಅವಿವೇಕವು ಮೂರು ಬಗೆಯದ್ದು ಸಂಯೋಗವೆಂಬುದರ ಜನ್ಮಕ್ಕೆ ಕಾರಣವಾಗುವುದು– (ಅ) ಸಾಕ್ಷಾತ್; (ಆ) ಧರ್ಮಾಧರ್ಮೋತ್ಪತ್ತಿದ್ವಾರಾ; (ಇ) ರಾಗಾದಿದೃಷ್ಟಕಾರಣದ್ವಾರಾ ಎಂದು.

'ಮೂಲವಿರಲಾಗಿ ಅದು ಪಕ್ವವಾಗುವುದು' ಎಂಬ ಯೋಗಸೂತ್ರದಿಂದಲೂ, 'ನಾನೇ ಕರ್ತನೆಂದು ಕಟ್ಟಲ್ಪಡುವನು' ಎಂಬ ಸ್ಮೃತಿ ವಾಕ್ಯದಿಂದಲೂ, 'ರಾಗವನ್ನು ಬಿಟ್ಟವರ ಜನ್ಮ ಕಂಡುಬರದು' ಎಂಬ ನ್ಯಾಯಸೂತ್ರದಿಂದಲೂ ಎಂಬ ಈ ಸೂತ್ರಗಳಿಂದ ಪುಷ್ಟೀಕರಿಸಲ್ಪಟ್ಟಿವೆ.

ಭಾಷ್ಯ: *ತದುಕ್ತಂ ಮೋಕ್ಷದರ್ಮೇಽಪಿ ।*
ಜ್ಞಾನೇಂದ್ರಿಯಾಣೀಂದ್ರಿಯಾರ್ಥಾನ್ ನೋಪಸರ್ಪಂತ್ಯತರ್ಷುಲಮ್ ।
ಹೀನಶ್ಚ ಕರಣೈರ್ದೇಹೀ ನ ದೇಹಂ ಪುನರರ್ಹತಿ
(ಶಾಂತಿಪರ್ವ ೨೧೩.೨೧)
ತಸ್ಮಾತ್ ತರ್ಷಾತ್ಮಕಾದ್ರಾಗಾತ್ ಬೀಜಾಜ್ಜಾಯಂತಿ ಜಂತವಃ ॥
ಶಾಂ.ಪ. ೨೧೩.೨೦

ಅನುವಾದ: ತೃಷ್ಣೆಯಿಲ್ಲದ ವ್ಯಕ್ತಿಯ ಜ್ಞಾನೇಂದ್ರಿಯಗಳು ತಮ್ಮ ವಿಷಯಗಳತ್ತ ಪ್ರವೃತ್ತವಾಗುವುದಿಲ್ಲ. ಹಾಗೆಯೇ ಇಂದ್ರಿಯಗಳಿಲ್ಲದ ದೇಹಿಯು ಮತ್ತೆ ದೇಹಾಂತರವನ್ನು ಪಡೆಯುವುದಿಲ್ಲ. ಆದ್ದರಿಂದ ತೃಷ್ಣೆಯಿಂದ ತುಂಬಿದ ರಾಗವೆಂಬ ಬೀಜದಿಂದ ಪ್ರಾಣಿಗಳು ಉತ್ಪನ್ನವಾಗುತ್ತವೆ.

ಭಾಷ್ಯ: *'ರಾಗಸ್ತ್ವವಿವೇಕಕಾರ್ಯಃ' ಇತಿ ಯೋಗಸೂತ್ರಾಭ್ಯಾಮಪಿ ಏತತ್ ಪ್ರತ್ಯೇತವ್ಯಮ್, ಸಮಾನತಂತ್ರನ್ಯಾಯಾತ್ । ತಚ್ಚ*

ಸೂತ್ರದ್ವಯಂ – ಕ್ಲೇಶಮೂಲಃ ಕರ್ಮಾಶಯಃ, ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾ (ಯೋಗಸೂತ್ರ ೨.೧೨–೧೩) ॥ ಇತಿ । ಕ್ಲೇಶಶ್ಚಾವಿದ್ಯಾದಿಪಂಚಕಮಿತಿ (ಯೋ.ಸೂ. ೫.೩) ।

ಅನುವಾದ: 'ರಾಗವು ಅವಿವೇಕದ ಕಾರ್ಯ' ಎಂದು ಈ ಎರಡು ಯೋಗಸೂತ್ರಗಳಿಂದ ತಿಳಿಯಬೇಕು. ಏಕೆಂದರೆ ಅವೆರಡೂ ಸಮಾನವಾದ ತತ್ತ್ವಗಳ ಚಿಂತನೆಯಲ್ಲಿದೆ. ಆ ಎರಡು ಸೂತ್ರಗಳು, 'ಕ್ಲೇಶ ಮೂಲಃ ಕರ್ಮಾಶಯಃ', 'ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾ' ಇತಿ । (ಯೋ.ಸೂ. ೨. ೧೨–೧೩) ಕ್ಲೇಶಗಳಾದರೋ ಅವಿದ್ಯೆಯೇ ಮುಂತಾಗಿ ಐದು (ಯೋ.ಸೂ. ೫–೩)

ವಿವರಣೆ: ಕ್ಲೇಶ ಮೂಲಃ ಕರ್ಮಾಶಯಃ ಎಂದರೆ 'ರಾಗದ ಕರ್ಮದಲ್ಲಿ ತೊಡಗುವುದು ಕ್ಲೇಶಕ್ಕೆ ಮೂಲ', 'ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ', 'ಮೂಲ ವಿರಲಾಗಿ ಅದರ ಫಲವಾಗಿ ಸ್ಥಿತಿ, ಆಯಸ್ಸು ಮತ್ತು ಭೋಗಗಳು ಉಂಟಾಗುತ್ತವೆ'.

ಭಾಷ್ಯ: *ಅವಿವೇಕಸ್ಯ ಬಂಧಜನನೇ ದ್ವಾರಜಾತಂ ಚ*
ಪಿಂಡೀಕೃತ್ಯ ಈಶ್ವರಗೀತಾಯಾಮುಕ್ತಮ್ ।
'ಅನಾತ್ಮನ್ಯಾತ್ಮವಿಜ್ಞಾನಂ ತಸ್ಮಾದ್ ದುಃಖತಥೇತರತ್ ।
ರಾಗದ್ವೇಷಾದಯೋ ದೋಷಾಃ ಸರ್ವೇ ಭ್ರಾಂತಿ ನಿಬಂಧನಾಃ॥'
ಕಾರ್ಯೋಹ್ಯಸ್ಯ ಭವೇದ್ದೋಷಃ ಪುಣ್ಯಾಪುಣ್ಯಮಿತಿ ಶ್ರುತಿಃ ।
ತದ್ದೋಷಾದೇವ ಸರ್ವೇಷಾಂ ಸರ್ವದೇಹಸಮುದ್ಭವಃ ॥
ಕೂ.ಪು. ೨.೨. ೨೦

ಅನುವಾದ: ಅವಿವೇಕವು ಬಂಧವನ್ನುಂಟು ಮಾಡುವುದು ಮತ್ತು ಇತರ ಕಾರಣಗಳಿಂದ ಅದು ಆಗುವುದು, ಇವುಗಳನ್ನು ಕುರಿತು ಈಶ್ವರಗೀತೆಯಲ್ಲಿ ಒಟ್ಟಾಗಿ ಹೀಗೆ ಹೇಳಿದೆ. 'ಆತ್ಮವಲ್ಲದ್ದನ್ನು ಆತ್ಮವೆಂದು ತಿಳಿಯುವುದು, ಮತ್ತು ಇತರ ವಿಷಯಗಳೂ ದುಃಖಕ್ಕೆ ಕಾರಣಗಳು. ರಾಗದ್ವೇಷಾದಿಗಳೂ ಭ್ರಮೆಗೆ ಒಳಪಟ್ಟ ದೋಷಗಳು. ಈ ದೋಷಗಳ ಕಾರಣವೇ ಎಲ್ಲ ದೇಹಗಳೂ ಮತ್ತೆ ಉಂಟಾಗುತ್ತವೆ ಎಂದು ಈ ದೋಷಗಳೇ ಸಂಭವಿಸುವ ಪುಣ್ಯ–ಅಪುಣ್ಯಗಳು ಉಂಟಾಗಲು ಕಾರಣ' ಎಂದು ಶ್ರುತಿಯು ಹೇಳುತ್ತದೆ.

ವಿವರಣೆ: ಮೇಲಿನ ಶ್ಲೋಕಗಳಿಗೆ ಭಾವಾನುವಾದವನ್ನು ಹೀಗೂ ಮಾಡಬಹುದು– ಅವಿವೇಕವು ಅನಾತ್ಮವನ್ನು ಆತ್ಮವೆಂದು ತಿಳಿಯುವಂತೆ ಮಾಡುತ್ತದೆ. ಇದರಿಂದ ದುಃಖವೂ ಅದರ ವಿರುದ್ಧವಾದದೂ ಉಂಟಾಗುವುವು. ರಾಗ, ದ್ವೇಷ ಮುಂತಾದ ಎಲ್ಲ ದೋಷಗಳೂ ಅವಿವೇಕದಿಂದಲೇ ಉಂಟಾಗುವುವು. ಪುಣ್ಯ–ಅಪುಣ್ಯಗಳೆಂಬ ದೋಷವು ಅದರಿಂದಲೇ ಫಲಿಸುವುವು ಎಂದು ವೇದವು ಹೇಳುತ್ತದೆ. ಈ ದೋಷದಿಂದಲೇ ಎಲ್ಲ ಜೀವಿಗಳೂ ಮತ್ತೆ ಮತ್ತೆ ದೇಹವನ್ನು ಪಡೆಯುವುವು.

ಭಾಷ್ಯ: *ಏತದೇವ ನ್ಯಾಯೇ ಸೂತ್ರಿತಮ್ । ದುಃಖಜನ್ಮಪ್ರವೃತ್ತಿದೋಷ ಮಿಥ್ಯಾಜ್ಞಾನಾನಾಂ ಉತ್ತರೋತ್ತರಾಪಾಯೇ ತದನಂತರಾಪಾಯಾತ್*

ಅಪವರ್ಗಃ (ನ್ಯಾ.ಸೂ. ೧.೧.೨) ಇತಿ । ತದೇವಂ ಸಂಯೋಗಾಖ್ಯಜನ್ಮದ್ವಾರಾ ಬಂಧಾಖ್ಯಹೇಯಸ್ಯ ಮೂಲಕಾರಣಂ ಅವಿವೇಕ ಇತಿ ಹೇಯಹೇತುಃ ಪ್ರತಿಪಾದಿತಃ ।

ಅನುವಾದ: ಈ ವಿಷಯವನ್ನೇ ನ್ಯಾಯಸೂತ್ರದಲ್ಲಿ 'ದುಃಖ, ಜನ್ಮ, ಪ್ರವೃತ್ತಿ, ದೋಷ, ಮಿಥ್ಯಾಜ್ಞಾನ ಇವುಗಳಲ್ಲಿ ಕ್ರಮವಾಗಿ ಮುಂದಿನ ವಿಷಯಗಳು ಕಣ್ಮರೆಯಾದಂತೆಲ್ಲ ಹಿಂದಿನ ವಿಷಯಗಳು ಕಣ್ಮರೆಯಾಗುತ್ತಾ ಹೋಗುತ್ತವೆ' ಎಂದು ಹೇಳಿದೆ. ಹಾಗೆಯೇ ಸಂಯೋಗವೆಂಬುದು ಉಂಟಾದಾಗ ಬಂಧವೆಂಬ ತ್ಯಾಜ್ಯವಾದುದಕ್ಕೆ ಮೂಲ ಕಾರಣ ಅವಿವೇಕ ಎಂದು ತ್ಯಾಜ್ಯವಾದುದರ ಕಾರಣ ಪ್ರತಿಪಾದಿತವಾಗಿದೆ.

ಭಾಷ್ಯ: *ಇತಃ ಪರಂ ಕ್ರಮಪ್ರಾಪ್ತಂ ಹಾನೋಪಾಯವ್ಯೂಹಂ ಅತಿವಿಸ್ತರೇಣ ಆಶಾಸ್ತ್ರಸಮಾಪ್ತಿ ಪ್ರತಿಪಾದಯತಿ । ಅನ್ತರಾ ಅನ್ತರಾ ಚ ಉಕ್ತವ್ಯೂಹಾನಪಿ ವಿಸ್ತಾರಯಿಷ್ಯತಿ ।*

ಅನುವಾದ: ಇದಾದನಂತರ ಕ್ರಮವಾಗಿ ಬಂದ ಹಾನೋಪಾಯದ ಸಮೂಹವನ್ನು ವಿಸ್ತಾರವಾಗಿ ಶಾಸ್ತ್ರದ ಸಮಾಪ್ತಿಯವರೆಗೆ ಪ್ರತಿಪಾದಿಸಲಾಗುತ್ತದೆ. ನಡುನಡುವೆ ಮೇಲೆ ಹೇಳಿದ ತರ್ಕವನ್ನೂ ವಿಸ್ತಾರವಾಗಿ ತಿಳಿಸುತ್ತೇವೆ.

ಸೂತ್ರ: ನಿಯತಕಾರಣಾತ್ ತದುಚ್ಛಿತ್ತಿರ್ಧ್ವಾಂತವತ್ ॥ ೫೬ ॥

ಅನುವಾದ: ನಿರ್ದಿಷ್ಟವಾದ ಕಾರಣದಿಂದ ಆ ಅವಿವೇಕವು ಕತ್ತಲೆಯಂತೆ ನಾಶವಾಗಿ ಬಿಡುತ್ತದೆ.

ಭಾಷ್ಯ: *ಶುಕ್ತಿರಜತಾದಿಸ್ಥಲೇ ಲೋಕಸಿದ್ಧಂ ಯನ್ನಿಯತಕಾರಣಂ ವಿವೇಕಸಾಕ್ಷಾತ್ಕಾರಃ ತಸ್ಮಾತ್ ತಸ್ಯ ಅವಿವೇಕಸ್ಯ ಉಚ್ಛಿತ್ತಿರ್ಭವತಿ, ಧ್ವಾಂತವತ್ ।*

ಅನುವಾದ: ಶುಕ್ತಿ–ರಜತಗಳ ವಿಷಯದಲ್ಲಿ ನಿರ್ದಿಷ್ಟವಾದ ಜ್ಞಾನಕ್ಕೆ ಕಾರಣವೆಂದರೆ 'ವಿವೇಕ ಸಾಕ್ಷಾತ್ಕಾರವು', ಅದರಿಂದ ಅವಿವೇಕವು ಕತ್ತಲೆಯಂತೆ ನಾಶವಾಗುವುದು ಎಂಬುದು ಲೋಕವ್ಯವಹಾರ.

ಭಾಷ್ಯ: *ಯಥಾ ಧ್ವಾಂತಮಾಲೋಕಾದೇವ ನಿಯತಕಾರಣಾತ್ ನಶ್ಯತಿ ನೋಪಾಯಾಂತರೇಣ ।*

ಅನುವಾದ: ಹೇಗೆ ಕತ್ತಲೆಯು ಬೆಳಕೆಂಬ ನಿರ್ದಿಷ್ಟ ಕಾರಣದಿಂದಲೇ ನಾಶವಾಗುವುದೇ ಹೊರತು ಬೇರೆಯ ಉಪಾಯಗಳಿಂದ ಅಲ್ಲವೋ (ಹಾಗೆ)

ಭಾಷ್ಯ: *ತಥೈವ ಅವಿವೇಕೋಽಪಿ ವಿವೇಕಾದೇವ ನಶ್ಯತಿ, ನ ತು 'ಕರ್ಮಾದಿಭ್ಯಃ ಸಾಕ್ಷಾದಿತ್ಯರ್ಥಃ । ತದುಕ್ತಂ ಯೋಗಸೂತ್ರೇಣ– ವಿವೇಕಖ್ಯಾತಿರವಿಪ್ಲವಾ ಹಾನೋಪಾಯಃ' ಇತಿ (೨.೨೬)*

ಅನುವಾದ: ಅವಿವೇಕವೂ ಸಹ ಹಾಗೆಯೇ ವಿವೇಕದಿಂದಲೇ ನಾಶವಾಗುತ್ತದೆ. ಸಾಕ್ಷಾತ್ತಾಗಿ ಕರ್ಮಾದಿಗಳಿಂದಲ್ಲ. ಇದನ್ನೇ ಯೋಗಸೂತ್ರದಲ್ಲಿ ಹೀಗೆ ಹೇಳಿದೆ: 'ತಡೆಯಿಲ್ಲದೆ ವಿವೇಕವು ಆವಿರ್ಭಾವವಾದಾಗ ಅದು ಅವಿವೇಕವನ್ನು ಹೋಗಲಾಡಿಸುವುದು'.

ಭಾಷ್ಯ: *ಕರ್ಮಾದೀನಿ ತು ಜ್ಞಾನಸ್ಯೈವ ಸಾಧನಾನಿ, 'ಯೋಗಾಂಗಾನುಷ್ಠಾನಾದಶುದ್ಧಿಕ್ಷಯೇ ಜ್ಞಾನದೀಪ್ತಿರಾವಿವೇಕಖ್ಯಾತೇಃ' (೨.೨೮) ಇತಿ ಯೋಗಸೂತ್ರೇಣ ಸತ್ತ್ವಶುದ್ಧಿದ್ವಾರಾ ಜ್ಞಾನ ಏವ ಯೋಗಾಂಗಾಂತರ್ಗತಸರ್ವಕರ್ಮಣಾಂ ಸಾಧನತ್ವಾವಧಾರಣಾತ್ ಇತಿ ।*

ಅನುವಾದ: ಕರ್ಮವೇ ಮೊದಲಾದವು ಜ್ಞಾನಕ್ಕೆ ಸಾಧನಗಳು. 'ಯೋಗಾಂಗಗಳನ್ನು ಅನುಷ್ಠಾನ ಮಾಡುವುದರಿಂದ ಅಶುದ್ಧಿಗಳೆಲ್ಲ ಕ್ಷಯಿಸಿ ಜ್ಞಾನವು ವಿವೇಕದ ಆವಿರ್ಭಾವವಾಗುವವರೆಗೆ ಕ್ರಮೇಣ ಬೆಳಗುತ್ತಾ ಹೋಗುತ್ತದೆ'. ಅದರಂತೆ ಸತ್ತ್ವಶುದ್ಧಿಯ ಮೂಲಕ ಯೋಗಾಂಗಗಳಲ್ಲಿ ಹೇಳಿರುವ ಎಲ್ಲ ಕರ್ಮಗಳೂ ಜ್ಞಾನವೊಂದಕ್ಕೆ ಸಾಧನಗಳಾಗಿವೆ.

ಭಾಷ್ಯ: *ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ ।*
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತಮಶ್ನುತೇ ॥
ಈಶಾವಾಸ್ಯ ॥೧೧॥

ಅನುವಾದ: ಯಾರು ವಿದ್ಯೆಯನ್ನೂ ಅವಿದ್ಯೆಯನ್ನೂ ಒಟ್ಟಿಗೇ ತಿಳಿದಿರುವರೋ ಅವನು ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುವನು.

ವಿವರಣೆ: ಅವಿದ್ಯೆಯೆಂದರೆ ಕರ್ಮದಲ್ಲಿ ತೊಡಗುವುದು. ವಿದ್ಯೆಯೆಂದರೆ ಜ್ಞಾನ ಸಂಪಾದನೆ. ಅಮೃತವೆಂದರೆ ಅಮರತ್ವ.

ಭಾಷ್ಯ: *ಇತಿ ಶ್ರುತೌ, 'ಸಹಕಾರಿತ್ವೇನ ಚ' ಇತಿ (ಬ್ರ.ಸೂ.೩.೪. ೩೩) ವೇದಾಂತಸೂತ್ರೇ ಚಾಂಗಾಂಗಿಭಾವೇನ ಜ್ಞಾನಕರ್ಮಣೋಃ ಸಹಕಾರಿತ್ವಾವಧಾರಣಾತ್ ।*

ಅನುವಾದ: ಈ ಶ್ರುತಿಯಲ್ಲಿ ಹಾಗೂ 'ಕರ್ಮವು ಜ್ಞಾನಕ್ಕೆ ಸಹಕಾರಿಯಾಗಿ ಇರಬೇಕು' ಎಂಬ ವೇದಾಂತಸೂತ್ರದಲ್ಲಿ ಹೇಳಿರುವಂತೆ ಜ್ಞಾನ–ಕರ್ಮಗಳು ಅಂಗಾಂಗಿ ಭಾವದಿಂದ ಸಹಕಾರಿತ್ವವನ್ನು ಹೊಂದಿರಬೇಕು.

ವಿವರಣೆ: ಅಂಗಾಂಗಿಭಾವವೆಂದರೆ ಜ್ಞಾನ–ಅಂಗಿ, ಕರ್ಮ–ಅಂಗ ಈ ಸಂಬಂಧ.

ಭಾಷ್ಯ: *ಜ್ಞಾನಿನಾಜ್ಞಾನಿನಾ ವಾಪಿ ಯಾವದ್ದೇಹಸ್ಯ ಧಾರಣಮ್ ।*
ತಾವದ್ವರ್ಣಾಶ್ರಮಪ್ರೋಕ್ತಂ ಕರ್ತವ್ಯಂ ಕರ್ಮ ಮುಕ್ತಯೇ ಇತ್ಯಾದಿ ಸ್ಮೃತೇಶ್ಚ ॥

ಅನುವಾದ: ಜ್ಞಾನಿಯಾಗಲಿ ಅಜ್ಞಾನಿಯಾಗಲಿ ಎಲ್ಲಿಯವರೆಗೆ ದೇಹವು ಇರುವುದೋ ಅಲ್ಲಿಯವರೆಗೆ ವರ್ಣ ಮತ್ತು ಆಶ್ರಮಗಳಿಗೆ ವಿಹಿತವಾದ ಕರ್ಮಗಳನ್ನು ಮುಕ್ತಿಯ ಸಲುವಾಗಿ ಮಾಡುತ್ತಿರಬೇಕು ಎಂದು ಸ್ಮೃತಿಯಿರುವುದರಿಂದ.

ಭಾಷ್ಯ: *'ಉಪಮರ್ದಂ ಚ' (ವೇ.ಸೂ. ೩.೪.೧೬)*
ಇತಿ ವೇದಾಂತಸೂತ್ರೇಣ ತು ಕರ್ಮತ್ಯಾಗೋ
ಯೋಗಾರೂಢಸ್ಯ ನ್ಯಾಯಪ್ರಾಪ್ತೇ ಅನೂದ್ಯತ ಏವ,
ಜ್ಞಾನಸ್ಯ ಮುಖ್ಯತೋ ಮೋಕ್ಷಹೇತುತ್ವಂ ವ್ಯವಸ್ಥಾಪಯಿತುಮ್ ।
ಯದಿ ಹಿ ವಿಕ್ಷೇಪಕತ್ವಾತ್ ಕರ್ಮ ಜ್ಞಾನಾಭ್ಯಾಸಸ್ಯ ವಿರೋಧೀ
ಭವೇತ್ ತದಾ ಗುಣಲೋಪೇ ನ ಗುಣಿನಃ ಇತಿ
ನ್ಯಾಯೇನ ಪ್ರಧಾನರಕ್ಷಾರ್ಥಮಂಗಭೂತಂ ಕರ್ಮೈವ
ತ್ಯಾಜ್ಯಂ ಜಡಭರತಾದಿವತ್ ಇತ್ಯಾಶಯಾದಿತಿ ।

ಅನುವಾದ: '(ಜ್ಞಾನವು) (ಕರ್ಮವನ್ನು) ನಾಶಮಾಡುತ್ತದೆ' ಎಂಬ ವೇದಾಂತ ಸೂತ್ರದಿಂದ ಕರ್ಮದ ತ್ಯಾಗವು ಯೋಗಾರೂಢನಾದವನಿಗೆ ನ್ಯಾಯವಾಗಿ ದೊರೆಯ ಬೇಕಾದುದೇ. ಅದನ್ನು ಮತ್ತೆ ಏನು ಹೇಳುವುದು? ಆದ್ದರಿಂದಲೇ, ಜ್ಞಾನವು ಮುಖ್ಯವಾಗಿ ಮೋಕ್ಷಕ್ಕೆ ಕಾರಣ ಎಂದು ಸಿದ್ಧಪಡಿಸುವ ಉದ್ದೇಶದಿಂದ, ಜ್ಞಾನಾಭ್ಯಾಸಕ್ಕೆ ವಿರೋಧವಾಗಿದ್ದಲ್ಲಿ 'ಗುಣವು ಕಣ್ಮರೆಯಾದಲ್ಲಿ ಗುಣವುಳ್ಳ ವಸ್ತುವೂ ಕಣ್ಮರೆಯಾಗದು' ಎಂಬ ನ್ಯಾಯದಂತೆ ಪ್ರಧಾನವಾದ ವಸ್ತುವನ್ನು ಉಳಿಸಿಕೊಳ್ಳಲು ಅದರ ಅಂಗವಾದ ಕರ್ಮವನ್ನು ಜಡಭರತನ ರೀತಿಯಲ್ಲಿ ತೊರೆಯಬೇಕು.

ವಿವರಣೆ: ಜಡಭರತನೆಂಬುವನು ಒಬ್ಬ ಋಷಿ; ಜ್ಞಾನಿ. ಇವನ ಉಪದೇಶಗಳು ವಿಷ್ಣುಪುರಾಣ ಮುಂತಾದವುಗಳಲ್ಲಿ ಬರುತ್ತವೆ.

ಭಾಷ್ಯ: *ತೇಷಾಂ ಮತೇಽಪಿ ವಿವೇಕದ್ವಾರತಾಂ ವಿನಾ ಅವಿವೇಕ–*
ನಾಶಕತ್ವಂ ಕರ್ಮಣಃ ನೈವ ಸಿದ್ಧ್ಯತೇತಿ ನ ತದ್ವಿರೋಧಃ ।

ಅನುವಾದ: ಆ ವೇದಾಂತಿಗಳ ಅಭಿಪ್ರಾಯದಲ್ಲಿಯೂ ವಿವೇಕವನ್ನು ದ್ವಾರವನ್ನಾಗಿ ಮಾಡಿಕೊಳ್ಳದೆ ಕರ್ಮವು ಅವಿವೇಕವನ್ನು ಹೋಗಲಾಡಿಸಲು ಸಾಧ್ಯವಾಗದು ಎಂಬ ವಿಷಯದಲ್ಲಿ ವಿರೋಧವಿಲ್ಲ.

ಭಾಷ್ಯ: *ಅತ್ರ ಸೂತ್ರೇ ಧ್ವಾಂತಸ್ಯ ಆಲೋಕನಾಶ್ಯತ್ವವಚನಾತ್*
ತಮೋಽಪಿ ದ್ರವ್ಯಮೇವ, ನ ಆಲೋಕಾಭಾವಃ । ಅಸತಿ
ಬಾಧಕೇ ನೀಲಂತಮ ಇತ್ಯಾದಿ ಪ್ರತ್ಯಯಾನಾಂ ಭ್ರಮತ್ವಾನೌಚಿತ್ಯಾತ್ ।

ಅನುವಾದ: ಈ ಸೂತ್ರದಲ್ಲಿ ಕತ್ತಲು ಬೆಳಕಿನಿಂದ ನಾಶವಾಗುವುದು ಎಂಬ ಮಾತಿನಿಂದ ತಮಸ್ಸೂ ಒಂದು ದ್ರವ್ಯವೆಂದೂ ಅದು ಬೆಳಕಿನ ಅಭಾವವೆಂದೂ ಹೇಳುವುದು ಉಚಿತ. ಏಕೆಂದರೆ ನೀಲಿಯ ಕತ್ತಲೆ ಎಂಬ ಮಾತಿನಲ್ಲಿ ಭ್ರಮೆಯಿದೆಯೆಂದು ಹೇಳುವುದು ಉಚಿತವಲ್ಲ.

ಭಾಷ್ಯ: *ನ ಚ ಕ್ಲಪ್ತೇನೈವೋಪಪತ್ತೌ ಅತಿರಿಕ್ತಕಲ್ಪನಾಗೌರವಂ*
ಏವ ಬಾಧಕಮಿತಿ ವಾಚ್ಯಮ್ ।

ಅನುವಾದ: ಸ್ವೀಕೃತವಾದ ಪದಾರ್ಥವೆನಿಸಿದ ತಮಸ್ಸನ್ನು ಒಂದು ಅತಿರಿಕ್ತವಾದ ದ್ರವ್ಯವೆಂದು ಕಲ್ಪಿಸುವುದೂ ಬಾಧಕವಲ್ಲ.

ಭಾಷ್ಯ: *ಏವಂ ಚ ಸತಿ ವಿಜ್ಞಾನಮಾತ್ರೇಣೈವ ಸ್ವಪ್ನವತ್*
ಸರ್ವವ್ಯವಹಾರೋಪಪತ್ತ್ಯಾ ಅತಿರಿಕ್ತಕಲ್ಪನಾಗೌರವೇಣ
ಬಾಹ್ಯಾರ್ಥಪ್ರತೀತೇರಪಿ ಬಾಧಾಪತ್ತೇಃ । ತಸ್ಮಾದತ್ರ
ಪ್ರಾಮಾಣಿಕತ್ವಾತ್ ಗೌರವಂ ನ ದೋಷಾಯ ಇತಿ ।

ಅನುವಾದ: ಹಾಗಿರಲಾಗಿ ಸ್ವಪ್ನದಂತೆ ವಿಜ್ಞಾನಮಾತ್ರದಿಂದಲೇ ಎಲ್ಲಾ ವ್ಯವಹಾರಗಳಲ್ಲಿಯೂ ಜ್ಞಾನವುಂಟಾಗುವುದೆಂದು ಹೇಳಬಹುದು. ಆಗ ಅತಿರಿಕ್ತವಾದ ವಸ್ತುವಿನ ಅಧಿಕತೆಯಿಂದ ಹೊರಗಿನ ವಸ್ತುವಿನ ಪ್ರತೀತಿಗೆ ಬಾಧೆಯುಂಟಾಗುವುದು. ಆದ್ದರಿಂದ ಅತಿರಿಕ್ತದ್ರವ್ಯಕಲ್ಪನೆಯು ಪ್ರಮಾಣಕ್ಕೊಳಪಟ್ಟಿರುವುದರಿಂದ ಅಧಿಕತೆಯು ದೋಷವುಳ್ಳದ್ದಲ್ಲ.

ಭಾಷ್ಯ: *ನನು ವಿವೇಕಜ್ಞಾನಂ ವಿನಾಪಿ ಅವಿವೇಕಾಖ್ಯಜ್ಞಾನ–*
ವ್ಯಕ್ತೀನಾಂ ಸ್ವ–ಸ್ವತೃತೀಯಕ್ಷಣೇ ಅವಶ್ಯಂ ವಿನಾಶಾತ್ ಜ್ಞಾನಸ್ಯ
ತನ್ನಾಶಕತ್ವಂ ಕಿಮರ್ಥಮಿಷ್ಯತ ಇತಿ ಚೇತ್ ।

ಅನುವಾದ: ವಿವೇಕಜ್ಞಾನವು ಇಲ್ಲದೆಯೂ ಅವಿವೇಕಜ್ಞಾನದ ವ್ಯಕ್ತಿಗಳಲ್ಲಿ ತಮ್ಮ ತಮ್ಮ ಮೂರನೆಯ ಕ್ಷಣದಲ್ಲಿ ಅದು ನಾಶವಾಗುವುದು ಖಂಡಿತ, ಹಾಗಿರುವಾಗ ವಿವೇಕ ಜ್ಞಾನವು ನಾಶಮಾಡುವುದು ಎಂದು ಹೇಳುವ ಅಗತ್ಯವೇನು?

ವಿವರಣೆ: ಇಲ್ಲಿ ವ್ಯಕ್ತಿ ಎಂದರೆ ಗೋಚರವಾಗುವುದು.

ಭಾಷ್ಯ: *ಅವಿವೇಕಶಬ್ದೇನ ತದ್ವಾಸನಾಯಾ ಏವ ಪೂರ್ವಸೂತ್ರೇ*
(೧.೫೫) ವ್ಯಾಖ್ಯಾತತ್ವಾತ್ । ಅನಾಗತಾವಸ್ಥಸ್ಯ ಅವಿವೇಕಸ್ಯ
ಅಸ್ಮನ್ಮತೇ ನಾಶಸಂಭವಾಚ್ಚ ಇತಿ ।

ಅನುವಾದ: ಅವಿವೇಕಶಬ್ದದ ಅರ್ಥ ಅದರ 'ವಾಸನಾ' ಎಂದು ಹಿಂದಿನ ಸೂತ್ರದಲ್ಲಿ ಹೇಳಿದೆ. ಭವಿಷತ್ತಿನಲ್ಲಿ ಇರಬಹುದಾದ ಅವಿವೇಕವು ನಾಶವಾಗುವ ಸಂಭವವುಂಟು ಎಂದು ನಮ್ಮ ಅಭಿಪ್ರಾಯ.

ವಿವರಣೆ: 'ವಾಸನೆ' ಎಂದರೆ, 'ಸ್ಮೃತಿಹೇತುಃ ಸಂಸ್ಕಾರವಿಶೇಷಃ' । ಸ್ಮೃತಿಗೆ ಕಾರಣವಾದ ವಿಶೇಷ ಸಂಸ್ಕಾರ.

ಭಾಷ್ಯ: *ನನು ಪ್ರಕೃತಿಪುರುಷಾವಿವೇಕ ಏವ ಚೇತ್ಥಂ ಸಂಯೋಗದ್ವಾರಾ*
ಬಂಧಹೇತುಃ ತಯೋರ್ವಿವೇಕ ಏವ ಮೋಕ್ಷಹೇತುಃ ತರ್ಹಿ
ದೇಹಾದ್ಯಭಿಮಾನಸತ್ತ್ವೇಽಪಿ ಮೋಕ್ಷಃ ಸ್ಯಾತ್ ।

ಅನುವಾದ: ಪ್ರಕೃತಿ–ಪುರುಷರ ಅವಿವೇಕವೇ ಈ ರೀತಿಯಾಗಿ ಸೇರಿ ಹೋಗಿ ಬಂಧಕ್ಕೆ ಕಾರಣವಾದರೆ ಮತ್ತು ವಿವೇಕವೇ ಮೋಕ್ಷಕ್ಕೆ ಕಾರಣವಾದರೆ ದೇಹಾದಿಗಳಲ್ಲಿ ಅಭಿಮಾನವಿರಲಾಗಿ ಮೋಕ್ಷವೇಕಾಗಬಾರದು?

ಭಾಷ್ಯ: *ತಚ್ಚ ಶ್ರುತಿ ಸ್ಮೃತಿ ನ್ಯಾಯ ವಿರುದ್ಧಮಿತಿ ತತ್ರಾಹ ।*

ಸೂತ್ರ: ಪ್ರಧಾನಾವಿವೇಕಾತ್ ಅನ್ಯಾವಿವೇಕಸ್ಯ ತದ್ಧಾನೇ ಹಾನಮ್ ॥ ೫೭ ॥

ಅನುವಾದ: ಪ್ರಧಾನ ಮತ್ತು ಪುರುಷರು (ಒಂದೇ ಎಂಬ) ಅವಿವೇಕದಿಂದ ಇತರ ಅವಿವೇಕವೂ ಆಗುವುವು. ಅವಿವೇಕವು ಹೋದಾಗ ಇತರ ಅವಿವೇಕವೂ ನಾಶವಾಗುವುದು?

ವಿವರಣೆ: ಇತರ ಅವಿವೇಕವೂ ಆಗುವುದು ಎಂದರೆ 'ದೇಹಾದಿಗಳಲ್ಲಿರುವ ಅಭಿಮಾನವೆಂಬ ಅವಿವೇಕ' ಪ್ರಧಾನಾವಿವೇಕಾತ್ ಎಂದರೆ ಪ್ರಕೃತಿ–ಪುರುಷರು ಒಂದೇ ಎಂಬ ಭಾವ.

ಭಾಷ್ಯ: *ಪುರುಷೇ ಪ್ರಧಾನಾವಿವೇಕಾತ್ ಕಾರಣಾತ್ ಯೋ ಅನ್ಯಾವಿವೇಕಃ ಬುದ್ಧ್ಯಾದ್ಯವಿವೇಕಃ ಜಾಯತೇ । ಕಾರ್ಯಾವಿವೇಕಸ್ಯ ಕಾರ್ಯತಯಾ ನಾದಿಕಾರಣಾವಿವೇಕ ಮೂಲಕತ್ವಾತ್, ತಸ್ಯ ಪ್ರಧಾನಾವಿವೇಕಹಾನೇ ಸತಿ ಅವಶ್ಯಂ ಹಾನಮಿತ್ಯರ್ಥಃ । ಯಥಾ ಶರೀರಾದಾತ್ಮನಿ ವಿವಿಕ್ತೇ ಶರೀರಕಾರ್ಯೇಷು ರೂಪಾದಿಷು ಅವಿವೇಕೋ ನ ಸಂಭವತಿ ।*

ಅನುವಾದ: ಪುರುಷನು ಪ್ರಧಾನದಿಂದ ಬೇರೆಯುಲ್ಲವೆಂಬ ಅವಿವೇಕದಿಂದ ಬುದ್ಧ್ಯಾದಿಗಳಲ್ಲಿ ಅವಿವೇಕ ರೂಪದ 'ಅನ್ಯಾವಿವೇಕ' ಉಂಟಾಗುತ್ತದೆ. ಏಕೆಂದರೆ ಕಾರ್ಯವಿವೇಕವು ಕಾರ್ಯರೂಪವಾಗುವುದರಿಂದ ಅದು ಅನಾದಿಕಾಲಿಕ ಕಾರಣದ ಅವಿವೇಕದ ಮೂಲವಾಗುತ್ತದೆ. ಆದ್ದರಿಂದ ಪ್ರಧಾನವು ಬೇರೆ ಎಂಬ ಅವಿವೇಕವನ್ನು ತೊರೆಯುವುದರಿಂದ ಅದರ ಕಾರ್ಯದಲ್ಲಿಯೂ ಅವಶ್ಯವಾಗಿ ತೊರೆಯುವುದು. ಹೇಗೆ ಶರೀರದಿಂದ ಆತ್ಮನು ಬೇರೆಯೆಂದು ತಿಳಿದಾಗ ರೂಪಾದಿ ಗುಣಗಳು ಶರೀರವೆಂಬ ಕಾರ್ಯಗಳಲ್ಲಿ ಇವೆಯೆಂಬ ಅವಿವೇಕವು ಎಂದೂ ಸಂಭವಿಸಲಾರದೋ, ಹಾಗೆ.

ಭಾಷ್ಯ: *ತಥಾ ಕೂಟಸ್ಥತ್ವಾದಿಧರ್ಮೈಃ ಪ್ರಧಾನಾತ್ ಪುರುಷೇ ವಿವಿಕ್ತೇ ತತ್ಕಾರ್ಯೇಷು ಪರಿಣಾಮಾದಿಧರ್ಮಕೇಷು ಬುದ್ಧ್ಯಾದಿಷು ಅಭಿಮಾನೋ ನೋತ್ಪತ್ತುಮುತ್ಸಹತೇ ತುಲ್ಯನ್ಯಾಯಾತ್ ಕಾರಣನಾಶಾಚ್ಚೇತಿ ಭಾವಃ ।*

ಅನುವಾದ: ಹಾಗೆಯೇ ಕೂಟಸ್ಥತ್ವವೇ ಮೊದಲಾದ ಧರ್ಮಗಳಿಂದ ಪುರುಷನನ್ನು ಪ್ರಧಾನದಿಂದ ಬೇರೆ ಮಾಡಿದಾಗ ಅದರ ಕಾರ್ಯಗಳಾದ ಪರಿಣಾಮವೇ ಮೊದಲಾದವೂ ಬುದ್ಧಿ ಮುಂತಾದುವುಗಳಲ್ಲಿ ಅಭಿಮಾನವೇ ಮುಂತಾದುವೂ ಅದೇ ನ್ಯಾಯವನ್ನು ಅನ್ವಯಿಸಿದಾಗ ಮತ್ತು ಕಾರಣವೇ ನಾಶಹೊಂದಿರುವಾಗ ಉಂಟಾಗಲಾರವು.

ಭಾಷ್ಯ: *ತದೇತತ್ ಸ್ಮರ್ಯತೇ–*

ಚಿತ್ರಾಧಾರಪಟತ್ಯಾಗೇ ತ್ಯಕ್ತಂ ತಸ್ಯ ಹಿ ಚಿತ್ರಕಮ್ ।
ಪ್ರಕೃತೇರ್ವಿರಮೇ ಚೇತ್ಥಂ ಧ್ಯಾಯಿನಾಂ ಕೇ ಸ್ಮರಾದಯಃ ॥

ಅನುವಾದ: ಈ ಮಾತನ್ನು ಸ್ಮೃತಿಯಲ್ಲಿ ಹೇಳಿದೆ–

ಚಿತ್ರಕ್ಕೆ ಆಧಾರಭೂತವಾದ ಪಟವನ್ನೇ ತೊರೆದ ಮೇಲೆ ಅದರಲ್ಲಿರುವ ಚಿತ್ರವೂ ನಾಶವಾದಂತೆಯೇ. ಹಾಗೆಯೇ ಪ್ರಕೃತಿಯು ವಿರಮಿಸಿದಾಗ ಧ್ಯಾನ ಮಗ್ನರಾಗಿರುವವರಿಗೆ ಕಾಮಾದಿಗಳು ಇರುವ ಸಾಧ್ಯತೆಯೆಲ್ಲಿ?

ಭಾಷ್ಯ: *ವಿರಮೋ ವಿರಾಮಸ್ತ್ಯಾಗಃ । ಆದಿ ಶಬ್ದೇನ ದ್ರವ್ಯರೂಪಾ ಅಪಿ ವಿಕಾರಾ ಗ್ರಾಹ್ಯಾ ಇತಿ ।*

ಅನುವಾದ: ವಿರಮ ಎಂದರೆ ವಿರಾಮ ಅಥವಾ ತ್ಯಾಗ. 'ಆದಿ' ಪದದಿಂದ 'ದ್ರವ್ಯ ರೂಪದ ವಿಕಾರಗಳು' ಎಂದು ತಿಳಿಯಬೇಕು.

ಭಾಷ್ಯ: *ಯಚ್ಚ ಬುದ್ಧಿಪುರುಷವಿವೇಕಾದೇವ ಮೋಕ್ಷ ಇತ್ಯಪಿ ಕ್ವಚಿದುಚ್ಯತೇ, ತಚ್ಚ ಸ್ಥೂಲಸೂಕ್ಷ್ಮಬುದ್ಧಿಗ್ರಹಣಾತ್ ಪ್ರಕೃತೇರಪಿ ಗ್ರಹಣಮ್ । ಅನ್ಯಥಾ ಬುದ್ಧಿವಿವೇಕೇಽಪಿ ಪ್ರಕೃತ್ಯಭಿಮಾನಸಂಭವಾದಿತಿ ।*

ಅನುವಾದ: ಅಲ್ಲದೆ ಹೀಗೂ ಹೇಳಿದ್ದುಂಟು– 'ಬುದ್ಧಿ–ಪುರುಷ ವಿವೇಕದಿಂದಲೇ ಮೋಕ್ಷವುಂಟಾಗುವುದು' ಎಂದು ಆ ವಿಷಯದಲ್ಲಿ ಸ್ಥೂಲ–ಸೂಕ್ಷ್ಮ ಬುದ್ಧಿಯನ್ನು ಗ್ರಹಿಸುವುದರಿಂದ ಪ್ರಕೃತಿಯನ್ನೂ ಗ್ರಹಿಸಿದಂತಾಯಿತು. ಹಾಗಿಲ್ಲದಿದ್ದಲ್ಲಿ ಬುದ್ಧಿಯಲ್ಲಿ ವಿವೇಕವಿದ್ದರೂ ಪ್ರಕೃತಿಯ ಬಗ್ಗೆ ಅಭಿಮಾನವುಂಟಾಗುವ ಸಾಧ್ಯತೆಯಿರುತ್ತದೆ.

ಭಾಷ್ಯ: *ನನು ಬದ್ಧ್ಯಾದ್ಯಭಿಮಾನಾತಿರಿಕ್ತೇ ಪ್ರಕೃತ್ಯಭಿಮಾನೇ ಕಿಂ ಪ್ರಮಾಣಮಹಮಜ್ಞ ಇತ್ಯಾದ್ಯಖಿಲಾಭಿಮಾನಾನಾಂ ಬುದ್ಧ್ಯಾದಿವಿಷಯತ್ವೇನೈವೋಪಪತ್ತೇಃ ।*

ಅನುವಾದ: ಬುದ್ಧ್ಯಾದಿಗಳು ಅಭಿಮಾನವಿಲ್ಲದ ಪ್ರಕೃತಿಯ ಬಗ್ಗೆ ಅಭಿಮಾನ ತೋರುವುದು ಹೇಗೆ ಸಾಧ್ಯ? ಏಕೆಂದರೆ, 'ನಾನು ಅಜ್ಞ' ಮುಂತಾದ ಎಲ್ಲ ಅಭಿಮಾನಗಳೂ ಉಂಟಾಗಬೇಕಾದರೆ ಬುದ್ಧಿ ಮುಂತಾದುವುಗಳಿಗೆ ವಿಷಯವಾದಾಗಲೇ ಸಾಧ್ಯವಾಗುವುದಲ್ಲವೆ?

ಭಾಷ್ಯ: *ಇತಿ ಚೇತ್ ನ ಇತಿ–*

ಮೃತ್ವಾ ಮೃತ್ವಾ ಪುನಃ ಸೃಷ್ಟೌ ಸ್ವರ್ಗೀಸ್ಯಾಂ ಮಾ ಚ ನಾರಕೀ ॥

ಅನುವಾದ: ಸೃಷ್ಟಿಯಲ್ಲಿ ಸತ್ತು ಸತ್ತು ಮತ್ತೆ ನಾನು ಸ್ವರ್ಗವಾಸಿಯಾಗಬೇಕು, ನರಕವಾಸಿಯಲ್ಲ.

ಭಾಷ್ಯ: *ಇತ್ಯಾದ್ಯಭಿಮಾನಾನಾಂ ಪ್ರಧಾನವಿಷಯತ್ವಂ ವಿನಾನುಪಪತ್ತೇಃ ।*

ಅನುವಾದ: ಮುಂತಾದ ಅಭಿಮಾನಗಳಲ್ಲಿ ಪ್ರಧಾನವೂ ವಿಷಯವಾಗದ ಹೊರತು ಅದು ಸಾಧ್ಯವಿಲ್ಲ.

ಭಾಷ್ಯ: *ಅತೀತಾನಾಂ ಬುದ್ಧ್ಯಾದ್ಯಖಿಲಕಾರ್ಯಾಣಾಂ ಪುನಃ ಸೃಷ್ಟ್ಯಭಾವಾತ್ । ಪ್ರಧಾನಸ್ಯತು ಇದಮೇವ ಪ್ರಲಯಾನಂತರಂ ಜನ್ಮ ಯದ್ಬುದ್ಧ್ಯಾದಿರೂಪೈ- ಕಪರಿಣಾಮತ್ಯಾಗೇನ ಅಪರಬುದ್ಧ್ಯಾದಿರೂಪತಯಾ ಪರಿಣಮನಮಿತಿ ।*

ಅನುವಾದ: ಕಳೆದುಹೋದ ಬುದ್ಧಿಯೇ ಮುಂತಾದ ಸಮಸ್ತ ಕಾರ್ಯಗಳನ್ನು ಮತ್ತೆ ಸೃಷ್ಟಿ ಮಾಡುವುದು ಸಾಧ್ಯವಿಲ್ಲ. ಮತ್ತು ಪ್ರಧಾನವು ಹುಟ್ಟುವುದು ಪ್ರಳಯದ ನಂತರವೇ. ಆದಕಾರಣ ಈಗಿರುವ ಬುದ್ಧ್ಯಾದಿರೂಪಗಳ ಪರಿಣಾಮಗಳನ್ನು ತ್ಯಜಿಸಿ ಪ್ರಧಾನವು ಬೇರೊಂದು ಬುದ್ಧ್ಯಾದಿರೂಪದಲ್ಲಿ ಪರಿಣಾಮ ಹೊಂದುವುದಲ್ಲವೆ?

ಭಾಷ್ಯ: *ನ ಚಾತ್ಮನಿ ಜನ್ಮಾದಿ ಜ್ಞಾನಮಭಿಮಾನ ಏವ ನ ಭವತಿ ಪುರುಷಸ್ಯಾಪಿ ಲಿಂಗಶರೀರಸಂಯೋಗವಿಯೋಗ- ರೂಪಯೋಃ ಪಾರಮಾರ್ಥಿಕತ್ವಾದಿತಿ ವಾಚ್ಯಮ್ ।*

ಅನುವಾದ: ಆತ್ಮನಲ್ಲಿ ಜನ್ಮಾದಿಗಳ ಜ್ಞಾನವನ್ನು 'ಅಭಿಮಾನ' ಎನ್ನಲಾಗದು; ಏಕೆಂದರೆ ಪುರುಷನಲ್ಲಿ ಲಿಂಗಶರೀರದ ಸಂಯೋಗ ವಿಯೋಗರೂಪವಾದ ಜನನ ಮರಣಗಳು ಪಾರಮಾರ್ಥಿಕದ ಕಾರಣ ಎಂಬುದು ಸರಿಯಲ್ಲ.

ಭಾಷ್ಯ: *'ನ ಜಾಯತೇ ಮ್ರಿಯತೇಕದಾಚಿತ್*
ನಾಯಂ ಭೂತ್ವಾ ಭವಿತಾ ವಾ ನ ಭೂಯಃ ॥
(ಗೀತಾ) ಇತ್ಯಾದಿವಾಕ್ಯೈರ್ಜನ್ಮಾದಿ ಪ್ರತಿಷೇಧೇನೋತ್ಪತ್ತಿ ವಿನಾಶಾಭಿಮಾನ (೨.೨೦) ರೂಪಸ್ಯಾತ್ಮನಿ ಜನ್ಮಾದಿ ಜ್ಞಾನಸ್ಯ ಸಿದ್ಧೇರಪ್ರಸಕ್ತಸ್ಯ ಪ್ರತಿಷೇಧಾಯೋಗಾತ್ ।

ಅನುವಾದ: (ಈ ಆತ್ಮವು) ಹುಟ್ಟದು, ಸಾಯದು. ಒಮ್ಮೆಯಾದರೂ ಹುಟ್ಟಿ ತನ್ನ ಅಸ್ತಿತ್ವವನ್ನು ಮತ್ತೆ ಪಡೆಯದು. ಮುಂತಾದ ವಾಕ್ಯಗಳಿಂದ ಜನ್ಮವೇ ಮುಂತಾದುವನ್ನು ಪ್ರತಿಷೇಧಿಸಿರುವುದರಿಂದ ಉತ್ಪತ್ತಿ, ವಿನಾಶ ಮುಂತಾದ ಅಭಿಮಾನ ರೂಪದ ಆತ್ಮನಲ್ಲಿ ಜನ್ಮಾದಿಜ್ಞಾನವು ಸಂಭವಿಸುವುದು ಸಾಧ್ಯವಿಲ್ಲ. ಏಕೆಂದರೆ ಅದನ್ನು ಪ್ರತಿಷೇಧಿಸುವುದಾದರೂ ಹೇಗೆ?

ವಿವರಣೆ: ಪ್ರತಿಷೇಧಿಸಬೇಕಾದರೆ ಯಾವುದನ್ನಾದರೂ ಪಡೆಯುವ ಸಂದರ್ಭವಿರಬೇಕು. ಆ ಸಂದರ್ಭವೇ ಇಲ್ಲದಿರುವಾಗ ಪ್ರತಿಷೇಧವೆಲ್ಲಿಂದ ಬಂತು? ಎಂದರ್ಥ.

ಭಾಷ್ಯ: *ಕಿಂತು ಬುದ್ಧ್ಯಾದಿಷು ಪುರುಷಾಣಾಮಭಿಮಾನೋಽನಾದಿಃ ವಕ್ತುಂ ನ ಶಕ್ಯತೇ, ಬುದ್ಧ್ಯಾದೀನಾಂ ಕಾರ್ಯತ್ವಾತ್ । ಅತಃ ಕಾರ್ಯೇಷ್ವಭಿಮಾನವ್ಯವಸ್ಥಾರ್ಥಂ ನಿಯಾಮಕಾಕಾಂಕ್ಷಯಾಂ*

ಕಾರಣಾಭಿಮಾನ ಏವ ನಿಯಾಮಕತಯಾ ಸಿಧ್ಯತಿ
ಲೋಕೇ ದೃಷ್ಟತ್ವಾತ್; ಕಲ್ಪನಾಯಾಶ್ಚ ದೃಷ್ಟಾನುಸಾರಿತ್ವಾತ್ ।

ಅನುವಾದ: ಆದರೆ ಬುದ್ಧ್ಯಾದಿಗಳಲ್ಲಿ ಪುರುಷರ ಅಭಿಮಾನವು ಅನಾದಿ ಎಂದು ಹೇಳುವುದೂ ತಪ್ಪಾಗುವುದು; ಏಕೆಂದರೆ ಬುದ್ಧಿಯೂ ಸಹ ಕಾರ್ಯವೇ. ಆದ್ದರಿಂದ ಬುದ್ಧ್ಯಾದಿ ಕಾರ್ಯದಲ್ಲಿ ಅಭಿಮಾನದ ವ್ಯವಸ್ಥೆ ಮಾಡಲು ಒಬ್ಬ ನಿಯಾಮಕನ ಅಗತ್ಯವಿರುವುದು. ಹಾಗಾದರೆ ಕಾರಣಾಭಿಮಾನವೇ ನಿಯಾಮಕವೆನ್ನಬೇಕು. ಏಕೆಂದರೆ ಅದನ್ನು ಲೋಕದಲ್ಲಿ ನೋಡಿದ್ದೇವೆ. ನೋಡಿದ ರೀತಿಯಲ್ಲಿಯೇ ಕಲ್ಪನೆಯನ್ನೂ ಮಾಡಿಕೊಳ್ಳಬೇಕು.

ಭಾಷ್ಯ: *ಯಥಾ ಲೋಕೇ ದೃಷ್ಟಃ ಕ್ಷೇತ್ರಾಭಿಮಾನಾತ್ ಕ್ಷೇತ್ರಜನ್ಯ–*
ಧಾನ್ಯಾದಿಷ್ವಭಿಮಾನಃ ಸುವರ್ಣಾಭಿಮಾನಾಚ್ಚ ತಜ್ಜನ್ಯಕಟಕಜಾದಿಷು
ಅಭಿಮಾನಃ
ತಯೋರ್ನಿವೃತ್ತ್ಯಾ ಚ ತಯೋರ್ನಿವೃತ್ತಿಃ ಇತಿ
ಪ್ರಧಾನಾಭಿಮಾನತದ್ವಾಸನಯೋಶ್ಚ
ಬೀಜಾಂಕುರವತ್ ಅನಾದಿತ್ವಾತ್ ನ ತದಭಿಮಾನೇ
ನಿಯಾಮಕಾಂತರಾಪೇಕ್ಷೇತಿ ।

ಅನುವಾದ: ಹೇಗೆ ಲೋಕದಲ್ಲಿ ಹೊಲಗದ್ದೆಗಳಲ್ಲಿ ಅಭಿಮಾನವಿಟ್ಟು ಆ ಕ್ಷೇತ್ರದಿಂದ ದೊರೆಯುವ ಧಾನ್ಯಾದಿಗಳಲ್ಲಿ ಅಭಿಮಾನವುಂಟಾಗುವುದೋ, ಚಿನ್ನದ ಮೇಲೆ ಅಭಿಮಾನವಿಟ್ಟು ಅದರಿಂದ ಮಾಡಿಸಿದ ಕಂಕಣಾದಿಗಳಲ್ಲಿ ಅಭಿಮಾನವಿರುವುದೋ, ಮತ್ತು ಅವುಗಳಲ್ಲಿ ಆಸಕ್ತಿ ಕಳೆದುಕೊಂಡಾಗ ಅದರಿಂದ ಉಂಟಾಗುವ ವಸ್ತುಗಳ ಮೇಲೆ ಆಸಕ್ತಿ ಕಳೆದುಹೋಗುವುದೋ ಹಾಗೆಯೇ ಪ್ರಧಾನದ ಮೇಲೆ ಅಭಿಮಾನ ಮತ್ತು ಅದರ ವಾಸನಾ ಮೇಲೆ, ಬೀಜ–ಅಂಕುರಗಳಂತೆ ಅನಾದಿಯಾದ ಕಾರಣ, ಅದರ ಅಭಿಮಾನದಲ್ಲಿ ಇತರ ನಿಯಾಮಕಗಳ ಅಪೇಕ್ಷೆ ಇರದು.

ವಿವರಣೆ: ಪ್ರಕೃತಿ–ಪುರುಷರ ಅವಿವೇಕದ ಕಾರಣ ದೇಹಾದಿಗಳಲ್ಲಿ ಅಭಿಮಾನವಿರುವುದು ಸಹಜ. ಆದರೆ ಅವಿವೇಕವೇ ಇಲ್ಲದಿರುವಾಗ ದೇಹಾದಿಗಳಲ್ಲಿ ಅಭಿಮಾನ ಮೂಡುವುದಾದರೂ ಹೇಗೆ?

ಭಾಷ್ಯ: *ಏವಂ ಪ್ರತಿಪಾದಿತೇ ಚತುರ್ವ್ಯೂಹೇ ಪುನರಿಯಮಾಶಂಕಾ ।*

ಅನುವಾದ: ಹೀಗೆ ಚತುರ್ವ್ಯೂಹವನ್ನು ಪ್ರತಿಪಾದಿಸಿರಲಾಗಿ ಮತ್ತೆ ಸಂದೇಹ ವುಂಟಾಗುವುದು.

ವಿವರಣೆ: ಚತುರ್ವ್ಯೂಹವೆಂದರೆ ನಾಲ್ಕು ತರ್ಕಾಂಶಗಳು:

(ಅ) ಹೇಯ–ತ್ಯಜಿಸಬೇಕಾದುದು; (ಆ) ಹೇಯಹೇತು–ತ್ಯಜಿಸಬೇಕಾದ ಕಾರಣ; (ಇ) ಹಾನ–ತ್ಯಜಿಸುವಿಕೆ; (ಈ) ಹಾನೋಪಾಯ–ತ್ಯಜಿಸಬೇಕಾದ ಅನುಸರಿಸ ಬೇಕಾದ ಉಪಾಯ. (ನೋಡಿ: ಮೊದಲನೆಯ ಅಧ್ಯಾಯದ ಕೊನೆಯ ಶ್ಲೋಕ)

ಭಾಷ್ಯ: *ನನು ಪುರುಷೇ ಚೇತ್ ಬಂಧಮೋಕ್ಷೌ ವಿವೇಕ–ಅವಿವೇಕೌ ಸ್ವೀಕೃತೌ, ತರ್ಹಿ ನಿತ್ಯಶುದ್ಧಬುದ್ಧಮುಕ್ತಸ್ಯ ಇತಿ (೧.೧೯) ಸ್ವೋಕ್ತಿ ವಿರೋಧಃ ।*

ಅನುವಾದ: ಪುರುಷನಲ್ಲಿ ಬಂಧಮೋಕ್ಷಗಳುಂಟಾಗುವುದಾದರೆ ವಿವೇಕ ಅವಿವೇಕಗಳು ಕಾರಣ ಎಂಬುದು ಸಮ್ಮತವೇ. ಹಾಗಾದರೆ ನಿತ್ಯ –ಶುದ್ಧಬುದ್ಧ ಮುಕ್ತ ಎಂಬ ಮಾತು ಅದಕ್ಕೆ ವಿರೋಧವಲ್ಲವೆ?

ಭಾಷ್ಯ: *ತಥಾಚ*

ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।
ನ ಮುಮುಕ್ಷುಃ ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ
(ಮಾಂ.ಕಾ. ೨.೩೨)

ಇತ್ಯಾದಿ ಶ್ರುತಿವಿರೋಧಶ್ಚ ।

ಅನುವಾದ: '(ಆತ್ಮನಿಗೆ) ನಿರೋಧವಿಲ್ಲ, ಉತ್ಪತ್ತಿಯಿಲ್ಲ, ಅವನು ಬದ್ಧನಲ್ಲ, ಅವನು ಸಾಧಕನಲ್ಲ, ಅವನು ಮುಮುಕ್ಷುವಲ್ಲ, ಮುಕ್ತನೂ ಅಲ್ಲ; ಇದೇ ವಾಸ್ತವವಾದುದು' ಎಂಬ ಶ್ರುತಿಗೆ ವಿರೋಧವಾಯಿತಲ್ಲ.

ಭಾಷ್ಯ: *ತಾಂ ಪರಿಹರತಿ*

ಸೂತ್ರ: ವಾಙ್ಮಾತ್ರಂ ನ ತು ತತ್ತ್ವಂ ಚಿತ್ತಸ್ಥಿತೇಃ ॥ ೫೮ ॥

ಅನುವಾದ: (ವಿವೇಕಜ್ಞಾನವು) ಕೇವಲ ಹೇಳಿಕೆಯಷ್ಟೆ. ತತ್ತ್ವವಲ್ಲ, ಏಕೆಂದರೆ (ವೃತ್ತಿಯು) ಚಿತ್ತದಲ್ಲಿರುವುದು.

ಭಾಷ್ಯ: *ಬಂಧಾದೀನಾಂ ಸರ್ವೇಷಾಂ ಚಿತ್ತ ಏವಾವಸ್ಥಾನಾತ್ ತತ್ ಪುರುಷೇ ವಾಙ್ಮಾತ್ರಂ ಸರ್ವಂ ಸ್ಫಟಿಕಲೌಹಿತ್ಯವತ್ ಪ್ರತಿಬಿಂಬ–ಮಾತ್ರತ್ವಾತ್ ನತು ತತ್ತ್ವಂ ತಸ್ಯ ಭಾವಃ । ಅನಾರೋಪಿತಂ ಜಪಾಲೌಹಿತ್ಯವತ್ ಇತ್ಯರ್ಥಃ । ಅತಃ ನೋಕ್ತವಿರೋಧಃ ।*

ಅನುವಾದ: ಬಂಧವೇ ಮೊದಲಾದ ಎಲ್ಲ ವೃತ್ತಿಗಳೂ ಚಿತ್ತದಲ್ಲಿ ಮಾತ್ರ ಇರುತ್ತವೆ. ಪುರುಷನಿಗಾದರೋ ಅದು ಕೇವಲ ಹೇಳಿಕೆ ಅಷ್ಟೆ (ಹೊರತು ತತ್ತ್ವವಲ್ಲ). ಹೇಗೆ ಸ್ಫಟಿಕದಲ್ಲಿ ಕೆಂಪುಬಣ್ಣ ಪ್ರತಿಬಿಂಬ ಮಾತ್ರದಲ್ಲಿ ಇರುತ್ತದೆಯೋ ಮತ್ತು ವಾಸ್ತವವಾಗಿ ಸ್ಫಟಿಕದಲ್ಲಿರುವುದಿಲ್ಲವೋ ಹಾಗೆಯೇ ಇದೂ ಸಹ ವಾಸ್ತವವಲ್ಲ ಎಂದು ಅಭಿಪ್ರಾಯ; ಜಪಾ ಕುಸುಮದಂತೆ ಕೆಂಪುಬಣ್ಣ. ಅನಾರೋಪಿತವಲ್ಲ. ಆದ್ದರಿಂದ ಹೇಳಿದ ಉಕ್ತಿಗೆ ವಿರೋಧವಲ್ಲ ಎಂದು ಅಭಿಪ್ರಾಯ.

ವಿವರಣೆ: 'ಅನಾರೋಪಿತ' ಎಂದರೆ ಸ್ವಾಭಾವಿಕವಾದುದು. ಜಪಾಕುಸುಮ ಅಥವಾ ದಾಸವಾಳದಂತೆ ಸ್ವಾಭಾವಿಕ ಕೆಂಪುಬಣ್ಣ ಸ್ಫಟಿಕದಲ್ಲಿ ಇರದು. ಸ್ಫಟಿಕದ ಕೆಂಪುಬಣ್ಣ ಆರೋಪಿತ ಅಥವಾ ಹೂವಿನ ಬಣ್ಣದ ಛಾಯೆಮಾತ್ರ–

ಭಾಷ್ಯ: *'ಸ ಸಮಾನಃ ಸನ್ನುಭೌ ಲೋಕೌ ಅನುಸಂಚರತಿ ಧ್ಯಾಯತೀವ ಲೇಲಾಯತೀವ' (ಬೃ. ೪.೩.೭) ಇತ್ಯಾದಿ ಶ್ರುತಯಸ್ತತ್ರ ಪ್ರಮಾಣಮ್ ।*

ಅನುವಾದ: 'ಅವನು ಸಮಾನವಾಗಿ ಈ ಲೋಕ ಮತ್ತು ಪರಲೋಕದಲ್ಲಿ ಎರಡು ಕಡೆಗಳಲ್ಲಿಯೂ ಧ್ಯಾನ ಮಾಡುವಂತೆಯೂ ಮತ್ತು ಇಚ್ಛಿಸುವಂತೆಯೂ ತೋರುವನು' ಮುಂತಾದ ಶ್ರುತಿಗಳು ಇಲ್ಲಿ ಪ್ರಮಾಣ.

ವಿವರಣೆ: 'ಸಮಾನ' ಎಂದರೆ ಪುರುಷನು ಬುದ್ಧಿವೃತ್ತಿಗೆ ಅನುಗುಣವಾಗಿ ಸಂಚರಿಸುತ್ತಾನೆ. ಸ್ವಾಭಾವಿಕವಾಗಿ ಅಲ್ಲ ಎಂದರ್ಥ.

ಭಾಷ್ಯ: *ಪುರುಷಃ ಸಮಾನೋ ಲೋಕಯೋರೇಕರೂಪಃ । ಇವ ಶಬ್ದಾಭ್ಯಾಂ ನಾನಾರೂಪತ್ವಸ್ಯ ಔಪಾಧಿಕತ್ವಮುಕ್ತಮ್ ।*

ಅನುವಾದ: ಎರಡೂ ಲೋಕಗಳಲ್ಲಿ ಪುರುಷನು ಸಮಾನನು ಎಂದರೆ ಏಕರೂಪನು. ಇವ ಎಂಬ ಶಬ್ದ ಎರಡು ಬಾರಿ ಪ್ರಯೋಗವಾಗಿರುವ ಕಾರಣ ಅದರ ನಾನಾರೂಪಗಳೆಂಬ ಉಪಾಧಿಯನ್ನು ಹೇಳಲಾಗಿದೆ.

ಭಾಷ್ಯ: *ಬಂಧಮೋಕ್ಷೌ ಸುಖಂ ದುಃಖಂ ಮೋಹಾಪತ್ತಿಶ್ಚ ಮಾಯಯಾ ।*
ಸ್ವಪ್ನೇ ಯಥಾತ್ಮನಃ ಖ್ಯಾತಿಃ ಸಂಸೃತಿಃ ನ ತು ವಾಸ್ತವೀ ॥

ಅನುವಾದ: ಸ್ವಪ್ನದಲ್ಲಾಗುವ ಜ್ಞಾನ ಮತ್ತು ಸೃಷ್ಟಿ ಹೇಗೆ ವಾಸ್ತವವಲ್ಲವೋ ಅದೇ ರೀತಿ ಆತ್ಮನ ಬಂಧ ಮತ್ತು ಅದರ ಮೋಕ್ಷ, ಸುಖ, ದುಃಖ ಮತ್ತು ಮೋಹಗಳಿಗೆ ಮಾಯೆಯೇ ಕಾರಣ, ವಾಸ್ತವವಲ್ಲ.

ಭಾಷ್ಯ: *ಮಾಯಯಾ ಮಾಯಾಖ್ಯಪ್ರಕೃತ್ಯೌಪಾಧಿಕೀ ಇತ್ಯರ್ಥಃ ।*

ಅನುವಾದ: ಪ್ರಕೃತಿಯನ್ನೇ ಮಾಯೆಯೆನ್ನುವರು, ಬಂಧಾದಿಗಳು ಕೇವಲ ಉಪಾಧಿ ಮಾತ್ರ.

ವಿವರಣೆ: ಪುರುಷನಿಗೆ ಬಂಧಾದಿಗಳು ಕೇವಲ ಆರೋಪಿತವಾದುದೇ ಹೊರತು ವಾಸ್ತವವಲ್ಲ.

ಭಾಷ್ಯ: *ನನ್ವೇವಂ ತುಚ್ಛಸ್ಯ ಬಂಧಸ್ಯ ಹಾನಂ ಕಥಂ ಪುರುಷಾರ್ಥಃ? ಕಥಂ ವಾ ಅನ್ಯಧರ್ಮಾಭ್ಯಾಂ ಅವಿವೇಕ-ವಿವೇಕಾಭ್ಯಾಂ ಅನ್ಯಸ್ಯ ಬಂಧಮೋಕ್ಷಸ್ವೀಕಾರೇ ಕರ್ಮಾದಿಭಿರಿವ ನಾವ್ಯವಸ್ಥಾ ।*

ಅನುವಾದ: ಹೀಗೆ ವಾಸ್ತವವಲ್ಲದ ಬಂಧವನ್ನು ಹಾನವೆಂಬ ಪುರುಷಾರ್ಥವೆಂದು ಹೇಗೆ ಹೇಳುವುದು? ಹೇಗೆ ಬೇರೆಯದರ ಧರ್ಮಗಳಿಂದ ಇನ್ನೊಂದರ ಬಂಧ ಮೋಕ್ಷವೆಂದು ತಿಳಿಯುವುದು? ಬಂಧಮೋಕ್ಷಗಳನ್ನು ಸ್ವೀಕರಿಸಿದರೂ ಕರ್ಮಾದಿ ಗಳಿಂದ ಆಗುವ ಅವ್ಯವಸ್ಥೆಯು ಏಕೆ ಆಗದು?

ವಿವರಣೆ: ತುಚ್ಛ ಎಂದರೆ ವಾಸ್ತವವಲ್ಲದ್ದು. ಅನ್ಯಧರ್ಮಾಭ್ಯಾಂ – ಎಂದರೆ ಅವಿವೇಕ, ವಿವೇಕಗಳು ಬೇರೆಯವರಿಗೆ ಸಲ್ಲುವಾಗ ಮಾಯೆಯಿಂದ ಪುರುಷನಿಗೆ ಅವಿವೇಕ–ವಿವೇಕಗಳು ಉಂಟಾಗುವಾಗ ಅವು ಬುದ್ಧಿಗೆ ಅನ್ವಯಿಸುವುವು ಎಂದು ಹೇಗೆ ಹೇಳುವುದು? ಇದರಿಂದ ಕರ್ಮಾದಿಗಳ ಪರಿಣಾಮವಾಗಿ ಅವ್ಯವಸ್ಥೆಯು ಉಂಟಾಗುವುದಿಲ್ಲವೆ?

ಭಾಷ್ಯ: ಇತಿ ಚೇತ್ ಅತ್ರ ಉಕ್ತಪ್ರಾಯಮಪಿ ಪುನಃ ಪ್ರಪಂಚ್ಯತೇ ।

ಅನುವಾದ: ಹೀಗೆ ಹೇಳಿದಲ್ಲಿ ಉತ್ತರವನ್ನು ಹೇಳಿದ್ದರೂ ಮತ್ತೆ ಹೇಳುತ್ತೇವೆ.

ಭಾಷ್ಯ: *ಯದ್ಯಪಿ ದುಃಖಯೋಗರೂಪೋ ಬಂಧೋ ವೃತ್ತಿರೂಪೌ ಚ ವಿವೇಕಾವಿವೇಕೌ ಚಿತ್ತಸ್ಯೈವ ತಥಾಪಿ ಪುರುಷೇ ದುಃಖಪ್ರತಿಬಿಂಬ ಏವ ಭೋಗ ಇತ್ಯವಸ್ತುತ್ವೇಽಪಿ ತದ್ಧಾನಂ ಪುರುಷಾರ್ಥಃ, ದುಃಖಂ ಮಾ ಭುಂಜೀಯ ಇತಿ ಪ್ರಾರ್ಥನಾತ್ ।*

ಅನುವಾದ: ಬಂಧವು ದುಃಖದೊಡನೆ ಸೇರುವುದಾದರೂ, ವಿವೇಕ–ಅವಿವೇಕಗಳು ವೃತ್ತಿರೂಪದ ಚಿತ್ತದಲ್ಲಿದ್ದರೂ, ಪುರುಷನಲ್ಲಿ ದುಃಖದ ಪ್ರತಿಬಿಂಬವಷ್ಟೆ ಆಗುವುದು; ಅದು ವಾಸ್ತವಿಕವಲ್ಲದಿದ್ದರೂ ಅದನ್ನು ತೊರೆಯುವುದು ಪುರುಷಾರ್ಥವೇ. 'ನನಗೆ ದುಃಖದ ಅನುಭವ ಆಗದಿರಲಿ' ಎಂದು ಪ್ರಾರ್ಥಿಸುವನು.

ಭಾಷ್ಯ: *ಏವಂ ತಸ್ಮೈ ಪುರುಷಾಯ ಪ್ರಕೃತಿರವಿವೇಕೇನ ದರ್ಶಿತವತೀ ತದ್ವಾಸನಾವಶಾತ್ ತಮೇವ ಸಂಯೋಗ ದ್ವಾರಾ ಬಧ್ನಾತಿ ನಾನ್ಯಮ್ । ತಥಾ ಯಸ್ಮೈ ಆತ್ಮಾನಂ ದರ್ಶಿತವತೀ ತಮೇವ ವಿಯೋಗದ್ವಾರಾ ಮೋಚಯತಿ, ವಾಸನೋಚ್ಛೇದಾದಿತಿ ವ್ಯವಸ್ಥಾಪಿ ಘಟತೇ ಇತಿ ।*

ಅನುವಾದ: ಹೀಗೆ ಯಾವ ಪುರುಷನ ಸಲುವಾಗಿ ಪ್ರಕೃತಿಯು ಅವಿವೇಕದಿಂದ ತೋರ್ಪಡಿಸಿಕೊಳ್ಳುವಳೋ ಆ ಪುರುಷನ 'ವಾಸನಾ'ಗೆ ಅನುಗುಣವಾಗಿ ಅವನೊಡನೆ ಸಂಯೋಗ ಹೊಂದಿ ಅವನಿಗೆ ಬಂಧವುಂಟು ಮಾಡುವಳು, (ಬೇರೆಯ ಪುರುಷನನ್ನಲ್ಲ). ಹೀಗೆ 'ವಾಸನಾ' ಬುಡಮೇಲಾಗುವುದರಿಂದ ಅದರ ಸ್ಥಾನವನ್ನು ಮತ್ತೆ ಪಡೆಯುತ್ತದೆ.

ಭಾಷ್ಯ: *ಕರ್ಮಾದಿಭಿರ್ಬಂಧಾದ್ಯುಪಗಮೇ ತ್ವೇವಂ ವ್ಯವಸ್ಥಾ ಸಂಘಟತೇ । ಕರ್ಮಾದೀನಾಂ ಸಾಕ್ಷಿಭಾಸ್ಯತ್ವಾಭಾವೇನ ಸಾಕ್ಷಾತ್ ಪುರುಷೇಷು ಅಪ್ರತಿಬಿಂಬನಾದಿತಿ ।*

ಅನುವಾದ: ಕರ್ಮವೇ ಮೊದಲಾದುವುಗಳಿಂದ ಬಂಧವನ್ನು ಸ್ವೀಕರಿಸಿದಲ್ಲಿ ಈ ವ್ಯವಸ್ಥೆಯು ಆಗುತ್ತಿರಲಿಲ್ಲ. ಏಕೆಂದರೆ, ಕರ್ಮಾದಿಗಳು ಸಾಕ್ಷಿಭಾಷ್ಯವಲ್ಲದ ಕಾರಣ ಪುರುಷರಲ್ಲಿ ಸಾಕ್ಷಾತ್ತಾಗಿ ಪ್ರತಿಬಿಂಬಿತವಾಗದು.

ವಿವರಣೆ: 'ಸಾಕ್ಷಿ' ಎಂದರೆ ಕರ್ತೃವಾಗದೆ ಗಮನ ಮಾತ್ರ ಮಾಡುತ್ತಿರುವವನು. 'ಸಾಕ್ಷಿಭಾಸ್ಯ' ಎಂದರೆ ಸಾಕ್ಷಿಯಲ್ಲಿ ತೋರುವುದು. ಕರ್ಮಾದಿಗಳು ಸಾಕ್ಷಿರೂಪನಾದ ಪುರುಷನಲ್ಲಿ ಪ್ರತಿಬಿಂಬಿತವಾಗುವುದಿಲ್ಲ.

ಭಾಷ್ಯ: *ನನು ಬಂಧಾದಿಕಂ ಚೇತ್ ಪುರುಷೇ ವಾಙ್ಮಾತ್ರಂ*
ತರ್ಹಿ ಶ್ರವಣೇನ ಯುಕ್ತ್ಯಾವಾ ತಸ್ಯಬಂಧೋ ಭವತು
ಕಿಮರ್ಥಂ ಶ್ರುತಿಸ್ಮೃತ್ಯೋಃ ಸಾಕ್ಷಾತ್ಕಾರಪರ್ಯಂತಂ ವಿವೇಕ–
ಜ್ಞಾನಮುಪದಿಶ್ಯತೇ ಮೋಕ್ಷಹೇತುತಯಾ ಇತಿ ।

ಅನುವಾದ: ಬಂಧಾದಿಗಳು ಪುರುಷನಲ್ಲಿ ಕೇವಲ ವಾಙ್ಮಾತ್ರವಾದರೆ ಕೇಳುವಷ್ಟ ರಿಂದಲೇ ಅದರ ಬಾಧವುಂಟಾಗಬೇಕಲ್ಲವೆ? ಹಾಗಿರುವಾಗ ಶ್ರುತಿಸ್ಮೃತಿಗಳಿಂದ ಸಾಕ್ಷಾತ್ಕಾರವಾಗುವವರೆಗೆ ವಿವೇಕಜ್ಞಾನವನ್ನು ಮೋಕ್ಷಕ್ಕಾಗಿ ಏಕೆ ಉಪದೇಶಿಸಬೇಕು?

ವಿವರಣೆ: ಬಂಧಾದಿಗಳು ಕೇವಲ ಕೇಳುವಷ್ಟರಿಂದಲೇ ಹೋಗಿಬಿಡುವುದಾದರೆ ಶ್ರುತಿ, ಸ್ಮೃತಿ ವಾಕ್ಯಗಳನ್ನು ಕೇಳಿದ ಮಾತ್ರಕ್ಕೇ ಭೇದಜ್ಞಾನವು ಏಕೆ ಉಂಟಾಗಬಾರದು? ಎಂದರ್ಥ.

ಭಾಷ್ಯ: *ತತ್ರೇತಿ*

ಸೂತ್ರ: ಯುಕ್ತಿತೋಽಪಿ ನ ಬಾಧ್ಯತೇ ದಿಙ್ಮೂಢವದಪರೋಕ್ಷಾದೃತೇ ॥ ೫೯ ॥

ಅನುವಾದ: ಯುಕ್ತಿಯಿಂದಲೂ (ಬಂಧವು) ಹೋಗಿಬಿಡುವುದಿಲ್ಲ; ದಿಙ್ಮೂಢನಾದ ವ್ಯಕ್ತಿಗೆ ಆಗುವಂತೆ ಸಾಕ್ಷಾತ್ಕಾರವಾದರೆ ಮಾತ್ರ ಸಾಧ್ಯ.

ಭಾಷ್ಯ: *ಯುಕ್ತಿರ್ಮನನಮ್ । ಅಪಿಶಬ್ದಃ ಶ್ರವಣಸಮುಚ್ಚಯಾರ್ಥಃ ।*

ಅನುವಾದ: ಯುಕ್ತಿ ಪದದ ಅರ್ಥ 'ಮನನ', 'ಅಪಿ' ಎಂಬುದರಿಂದ ಶ್ರವಣವೂ ಸಹ ಎಂಬ ಅರ್ಥ ಸೇರಿರುತ್ತದೆ.

ಭಾಷ್ಯ: *ವಾಙ್ಮಾತ್ರಮಪಿ ಪುರುಷಸ್ಯ ಬಂಧಾದಿಕಂ ಶ್ರವಣ–*
ಮನನಮಾತ್ರೇಣ ನ ಬಾಧ್ಯತೇ ಸಾಕ್ಷಾತ್ಕಾರಂ ವಿನಾ ।
ಯಥಾ ದಿಙ್ಮೂಢಸ್ಯ ಜನಸ್ಯ ವಾಙ್ಮಾತ್ರಮಪಿ ದಿಗ್–
ವೈಪರೀತ್ಯಂ ಶ್ರವಣ ಯುಕ್ತಿಭ್ಯಾಂ ನ ಬಾಧ್ಯತೇ ಸಾಕ್ಷಾತ್ಕಾರಂ ವಿನಾ
ಇತ್ಯರ್ಥಃ ॥

ಅನುವಾದ: ಪುರುಷನ ಬಂಧ ಮುಂತಾದುವು ವಾಙ್ಮಾತ್ರದಿಂದಾದರೂ ಅದರಿಂದ ಬಿಡುಗಡೆಯು ಕೇವಲ ಶ್ರವಣ ಮನನಗಳಿಂದ ಮಾತ್ರ ಸಿದ್ಧಿಸದು. ದಿಕ್ಕನ್ನು ಅರಿಯದ ವ್ಯಕ್ತಿಗೆ ದಿಕ್ಕು ತಪ್ಪಿರುವುದು ಮಾತಿನಿಂದಲೇ ಸಿದ್ಧವಾದರೂ ಕೇವಲ ಮಾತಿನಿಂದಾಗಲಿ ಯುಕ್ತಿಯಿಂದಾಗಲಿ ಅದರ ನಿವಾರಣೆಯಾಗದು. ಅದರ ನಿವೃತ್ತಿಯಾಗಬೇಕಾದರೆ ಸಾಕ್ಷಾತ್ಕಾರವಿಲ್ಲದೆ ಸಾಧ್ಯವಿಲ್ಲ.

ವಿವರಣೆ: ಮಾತನ್ನು ಕೇಳಿ ದಿಕ್ಕನ್ನು ಕಳೆದುಕೊಂಡವನಿಗೆ ಮತ್ತೆ ಮಾತಿನಿಂದಾಗಲಿ ಯುಕ್ತಿಯಿಂದಾಗಲಿ ಅದು ದೊರೆಯದು. ಅದು ಸಾಕ್ಷಾತ್ಕಾರದಿಂದ ಮಾತ್ರ ಸಾಧ್ಯ.

ಭಾಷ್ಯ: *ಪ್ರಕೃತೇ ಚ ಇದಮೇವ ಬಾಧ್ಯತ್ವಂ ಯತ್ ಪುರುಷೇ ಬಂಧಾದಿಬುದ್ಧಿನಿವೃತ್ತಿಃ ನ ತು ಅಭಾವಸಾಕ್ಷಾತ್ಕಾರ; ಶ್ರವಣಾದಿನಾ ತದುತ್ಪತ್ತಿಸಂಭಾವನಾಯಾ ಅಪ್ಯಭಾವಾದಿತಿ ।*

ಅನುವಾದ: ಪ್ರಕೃತದಲ್ಲಿ ಪುರುಷನ ಬಂಧವೇ ಮೊದಲಾದ ಬುದ್ಧಿಯ ನಿವೃತ್ತಿಯೇ ನಮಗಿರುವ ಗುರಿ, ಅಭಾವದ ಸಾಕ್ಷಾತ್ಕಾರವಲ್ಲ. ಕೇವಲ ಕೇಳುವುದರಿಂದಲೇ ಅದು ಸಂಭವಿಸುವುದು ಅಸಾಧ್ಯ.

ಭಾಷ್ಯ: *ಅಥವಾ ಇತ್ಥಂ ವ್ಯಾಖ್ಯೇಯಮ್ । ನನು ನಿಯತಕಾರಣಾತ್ ತದುಚ್ಛಿತ್ತಿರಿತ್ಯನೇನ (೧–೫೬) ವಿವೇಕಜ್ಞಾನಮವಿವೇಕೋಚ್ಛೇದಕಮುಕ್ತಮ್ । ತಜ್ಜ್ಞಾನಂ ಕಿಂ ಶ್ರವಣಾದಿ ಸಾಧಾರಣಮ್। ಉತ ಅಸ್ತಿ ಕಶ್ಚಿದ್ವಿಶೇಷ ಇತ್ಯಾಕಾಂಕ್ಷಾಯಾಂ ಆಹ – ಯುಕ್ತಿ–ತೋಽಪಿ ಇತ್ಯಾದಿಸೂತ್ರಮ್ ।*

ಅನುವಾದ: ಅಥವಾ ಹೀಗೆ ವ್ಯಾಖ್ಯಾನಮಾಡಬಹುದು. 'ನಿಯತಕಾರಣಾತ್ ತದುಚ್ಛಿತ್ತಿ (ರ್ಧ್ವಾಂತವತ್) ಎಂಬ ಸೂತ್ರದಂತೆ ಅವಿವೇಕವನ್ನು ಬುಡಮೇಲು ಮಾಡುವುದು ವಿವೇಕಜ್ಞಾನವೇ ಎಂದು ಹೇಳಿದೆ. ಈ ವಿವೇಕಜ್ಞಾನವು ಕೇವಲ ಶ್ರವಣಾದಿ ಸಾಧಾರಣವಾದದ್ದೇ ಅಥವಾ ಅದರಲ್ಲಿ ವಿಶೆಷವಡಗಿದೆಯೇ? ಎಂಬ ವಿಷಯವನ್ನು ಕುರಿತು ಹೇಳಿದೆ 'ಯುಕ್ತಿತೋಽಪಿ.....' (೧–೧೫೯) ಎಂದು.

ಭಾಷ್ಯ: *ಅವಿವೇಕೋ ಯುಕ್ತಿತಃ ಶ್ರವಣತಶ್ಚ ನ ಬಾಧ್ಯತೇ, ನೋಚ್ಛಿದ್ಯತೇ, ವಿವೇಕಾಪರೋಕ್ಷಂ ವಿನಾ ದಿಙ್ಮೋಹವದಿತ್ಯರ್ಥಃ ।*

ಅನುವಾದ: ದಿಙ್ಮೂಢನಾದ ವ್ಯಕ್ತಿಯಂತೆ ಅವಿವೇಕವು ಯುಕ್ತಿಯಿಂದಾಗಲೀ ಕೇಳುವುದರಿಂದಾಗಲೀ ವಿವೇಕವು ಪ್ರತ್ಯಕ್ಷವಾಗದ ಹೊರತು ಉಚ್ಛೇದಗೊಳ್ಳುವುದು ಅಸಾಧ್ಯ.

ಭಾಷ್ಯ: *ಸಾಕ್ಷಾತ್ಕಾರಭ್ರಮೇ ಸಾಕ್ಷಾತ್ಕಾರ ವಿಶೇಷದರ್ಶನಸ್ಯೈವ ವಿರೋಧಿತ್ವಾತ್ ।*

ಅನುವಾದ: ಸಾಕ್ಷಾತ್ಕಾರದ ಭ್ರಮೆಯುಂಟಾದಲ್ಲಿ ಅದಕ್ಕೆ ವಿರುದ್ಧವಾದ ಸಾಕ್ಷಾತ್ಕಾರ ವಿಶೇಷದ ದರ್ಶನವಾಗುವುದಷ್ಟೆ.

ವಿವರಣೆ: ಅವಿವೇಕವು ದೂರವಾಗಬೇಕಾದರೆ ವಿವೇಕಜ್ಞಾನವು ಉಂಟಾಗಬೇಕು. ಇಲ್ಲದಿದ್ದಲ್ಲಿ ದಿಗ್ಭ್ರಾಂತನಾದವನಿಗೆ ದಿಕ್ಕು ತೋರದಂತೆ ಸಾಕ್ಷಾತ್ಕಾರದ ಭ್ರಮೆಯು ಉಳಿಯುವುದು.

ಭಾಷ್ಯ: *ತದೇವಂ ವಿವೇಕಸಾಕ್ಷಾತ್ಕಾರಾತ್ ಮೋಕ್ಷಂ ಪ್ರತಿಪಾದ್ಯ ಇತಃ ಪರಂ ವಿವೇಕಃ ಪ್ರತಿಪಾದನೀಯಃ ।*

ಅನುವಾದ: ಹೀಗೆ 'ವಿವೇಕ ಸಾಕ್ಷಾತ್ಕಾರದಿಂದ ಮಾತ್ರ ಮೋಕ್ಷ ಸಾಧ್ಯ' ಎಂದು ಗ್ರಹಿಸಿ ವಿವೇಕವನ್ನು ತಿಳಿಸಬೇಕು.

ವಿವರಣೆ: ಸಾಕ್ಷಾತ್ಕಾರವೆಂದರೆ ವಿವೇಕವೆಂಬ ಜ್ಞಾನೋದಯ, ಅಪರೋಕ್ಷದ ಭ್ರಮೆಯಲ್ಲ ಎಂದರ್ಥ.

ಭಾಷ್ಯ: *ತತ್ರಾದೌ ಪ್ರಕೃತಿಪುರುಷಾದೀನಾಂ ವಿವೇಕತಃ ಸಿದ್ಧೌ*
ಪ್ರಮಾಣಾನಿ ಉಪನ್ಯಸ್ಯಂತೇ ।

ಅನುವಾದ: ಆದ್ದರಿಂದ ಮೊದಲು ಪ್ರಕೃತಿ–ಪುರುಷ ಮುಂತಾದವುಗಳನ್ನು ವಿವೇಕದಿಂದ ಸಿದ್ಧಿಸಲು ಪ್ರಮಾಣಗಳನ್ನು ಮುಂದಿಡುವರು.

ಸೂತ್ರ: ಅಚಾಕ್ಷುಷಾಣಾಂ ಅನುಮಾನೇವ ಬೋಧೋ
ಧೂಮಾದಿಭಿರಿವ ವಹ್ನೇಃ ॥ ೬೦ ॥

ಅನುವಾದ: ಪ್ರತ್ಯಕ್ಷವಾಗಿ ಕಾಣದ (ತತ್ತ್ವ)ವನ್ನು ಹೊಗೆಯಿಂದ ಅಗ್ನಿಯನ್ನು ಅನುಮಾನ ದಿಂದ ತಿಳಿಯುವಂತೆ ತಿಳಿಯಬೇಕು.

ಭಾಷ್ಯ: *ಅಚಾಕ್ಷುಷಾಣಾಂ ಅಪ್ರತ್ಯಕ್ಷಾಣಾಮ್ ।*
ಕೇಚಿತ್ ತಾವತ್ ಪದಾರ್ಥಃ ಸ್ಥೂಲಭೂತತತ್ಕಾರ್ಯ–
ದೇಹಾದಯಃ ಪ್ರತ್ಯಕ್ಷಸಿದ್ಧಾ ಏವ । ಪ್ರತ್ಯಕ್ಷೇಣಾಸಿದ್ಧಾನಾಂ
ಪ್ರಕೃತಿಪುರುಷಾದೀನಾಂ ಅನುಮಾನೇನಪ್ರಮಾಣೇನ ಬೋಧಃ
ಪುರುಷನಿಷ್ಠಫಲಸಿದ್ಧಿರ್ಭವತಿ ।
ಯಥಾ ಧೂಮಾದಿಭಿರ್ಜನಿತೇನ ಅನುಮಾನೇನ ವಹ್ನೇಃ ಸಿದ್ಧಿರಿತ್ಯರ್ಥಃ।

ಅನುವಾದ: 'ಅಚಾಕ್ಷುಷಾಣಾಂ' ಎಂದರೆ 'ಪ್ರತ್ಯಕ್ಷವಲ್ಲದ' ಎಂದರ್ಥ. ಸ್ಥೂಲವಾದ ಮಹಾಭೂತಗಳು ಮತ್ತು ಅವುಗಳ ಕಾರ್ಯಗಳಾದ ದೇಹಾದಿಗಳು ಪ್ರತ್ಯಕ್ಷವಾಗಿ ಗೋಚರವಾಗುವುವು. ಆದರೆ ಪ್ರತ್ಯಕ್ಷವಾಗಿ ಗೋಚರವಾಗದ ಪ್ರಕೃತಿ, ಪುರುಷಾದಿಗಳು ಅನುಮಾನ ಪ್ರಮಾಣದಿಂದ ತಿಳಿದುಬರುತ್ತವೆ. ಎಂದರೆ ಪುರುಷನನ್ನು ಕುರಿತ ಫಲವು ದೊರಕುವುದು.

ಧೂಮಾದಿಗಳಿಂದ ಉಂಟಾಗುವ ಅನುಮಾನದಿಂದ ಅಗ್ನಿಯು ಸಿದ್ಧವಾಗುವುದು ಎಂದರ್ಥ.

ಭಾಷ್ಯ: *ಅನುಮಾನಾಸಿದ್ಧಮ್ ಆಗಮಾತ್ ಸಿಧ್ಯತೀತಿ ಬೋಧ್ಯಮ್ ।*

ಅನುವಾದ: ಅನುಮಾನದಿಂದ ದೊರೆಯದ ಜ್ಞಾನ ಆಗಮದಿಂದ ಸಿದ್ಧವಾಗುತ್ತದೆ ಎಂದು ತಿಳಿಯಬೇಕು.

ಭಾಷ್ಯ: *ಅಸ್ಯ ಶಾಸ್ತ್ರಸ್ಯ ಅನುಮಾನಪ್ರಾಧಾನ್ಯಾತ್ ತು ಕೇವಲ–*
ಅನುಮಾನಸ್ಯ ಮುಖ್ಯತಯಾ ಏವ ಉಪನ್ಯಾಸಃ
ನ ತು ಆಗಮಸ್ಯ ಅನಪೇಕ್ಷಾ ಇತಿ ।

ಅನುವಾದ: ಈ ಶಾಸ್ತ್ರದಲ್ಲಿ ಅನುಮಾನವೇ ಪ್ರಧಾನವಾಗಿರುವುದರಿಂದ ಮುಖ್ಯವಾಗಿ ಕೇವಲ ಅನುಮಾನವನ್ನೇ ಮುಂದಿಡಲಾಗಿದೆ. ಆಗಮದ ಅಗತ್ಯವಿಲ್ಲವೆಂದಲ್ಲ.

ಭಾಷ್ಯ: *ತಥಾಚ ಕಾರಿಕಾ*

ಸಾಮಾನ್ಯತಸ್ತು ದೃಷ್ಟಾದತೀಂದ್ರಿಯಾಣಾಂ ಪ್ರತೀತಿರನುಮಾನಾತ್ ।
ತಸ್ಮಾದಪಿ ಚಾಸಿದ್ಧಂ ಪರೋಕ್ಷಮಾಪ್ತಾಗಮಾತ್ ಸಿದ್ಧಮ್ ॥ ಕಾ. ೬

ಅನುವಾದ: ಇಂದ್ರಿಯಗಳಿಗೆ ಮೀರಿದ ವಸ್ತುಗಳನ್ನು ತಿಳಿಯಬಹುದು. ಅದಕ್ಕೂ ಗೋಚರವಾಗದ ಪರೋಕ್ಷ ವಸ್ತುವನ್ನು ಆಗಮದಿಂದ ತಿಳಿಯಬಹುದು.

ಭಾಷ್ಯ: *ಅನೇನ ಸೂತ್ರೇಣೇದಂ ಮನನಶಾಸ್ತ್ರಮಿತ್ಯವಗಮ್ಯತೇ ।*

ಅನುವಾದ: ಈ ಸೂತ್ರದಿಂದ ಸಾಂಖ್ಯಶಾಸ್ತ್ರವು ಮನನಶಾಸ್ತ್ರವೆಂದು ತಿಳಿದುಬರುತ್ತದೆ.

ವಿವರಣೆ: ಅನುಮಾನಕ್ಕೆ ಪ್ರಾಧಾನ್ಯ ಕೊಡುವ ಸಾಂಖ್ಯಶಾಸ್ತ್ರವನ್ನು ಅನುಮಾನ ಅಥವಾ ಮನನಶಾಸ್ತ್ರವೆಂದು ಮಹಾಭಾರತದಲ್ಲಿ ಅನೇಕ ಕಡೆಗಳಲ್ಲಿ ಉಲ್ಲೇಖವಿದೆ.

ಭಾಷ್ಯ: *ಉಕ್ತಪ್ರಮಾಣೈಃ ಸಾಧ್ಯಸ್ಯ ವಿವೇಕಸ್ಯ ಪ್ರತಿಯೋಗಿ–ಅನುಯೋಗಿ ಪದಾರ್ಥಾನಾಂ ಸಂಗ್ರಹಸೂತ್ರಂ ವಕ್ಷ್ಯಮಾಣಾನುಮಾನೋಪಯೋಗಿಕಾರ್ಯಕಾರಣಭಾವಮಪಿ ಪ್ರದರ್ಶಯತಿ ।*

ಅನುವಾದ: ಮೇಲೆ ಹೇಳಿದ ಪ್ರಮಾಣಗಳಿಂದ ಸಾಧ್ಯವಾದ ವಿವೇಕದ ಪ್ರತಿಯೋಗಿ–ಅನುಯೋಗಿ ಪದಾರ್ಥಗಳ ಸಂಗ್ರಹ ಸೂತ್ರವನ್ನು ಮುಂದೆ ಹೇಳುವ ಅನುಮಾನ ದಲ್ಲಿ ಉಪಯೋಗಕ್ಕೆ ಬರುವ ಕಾರ್ಯಕಾರಣ ಭಾವವನ್ನು ಪ್ರದರ್ಶಿಸುತ್ತದೆ.

ವಿವರಣೆ: 'ಸಾಧ್ಯ' ಎಂದರೆ ಸಾಧಿಸಬೇಕಾದ ವಸ್ತು. ಉದಾಹರಣೆಗೆ 'ಪರ್ವತೋ ವಹ್ನಿಮಾನ್ ಧೂಮಾತ್' ಎಂಬಲ್ಲಿ 'ವಹ್ನಿ' ಸಾಧ್ಯ.

'ಪ್ರತಿಯೋಗಿತಾ' ಎಂದರೆ 'ವಿರೋಧವಾಗಿರುವುದು'. ಉದಾಹರಣಗೆ ಘಟಾಭಾವಕ್ಕೆ ಘಟ ವಿರೋಧಿ. ಅನುಯೋಗಿ–ಎಂದರೆ ಸಂಬಂಧವುಳ್ಳದ್ದು. ಉದಾಹರಣೆ– 'ಭೂತಲಂ ಘಟಾಭಾವವತ್' ಎಂಬಲ್ಲಿ ಭೂತಲವು ಅನುಯೋಗಿ.

ಸೂತ್ರ: **ಸತ್ತ್ವರಜಸ್ತಮಸಾಂ ಸಾಮ್ಯಾವಸ್ಥಾ ಪ್ರಕೃತಿಃ, ಪ್ರಕೃತೇಃ**
ಮಹಾನ್, ಮಹತೋಽಹಂಕಾರೋ, ಅಹಂಕಾರಾತ್
ಪಂಚತನ್ಮಾತ್ರಾಣಿ
ಉಭಯಂ ಇಂದ್ರಿಯಂ, ತನ್ಮಾತ್ರೇಭ್ಯಃ ಸ್ಥೂಲಭೂತಾನಿ ।
ಪುರುಷ ಇತಿ ಪಂಚವಿಂಶತಿರ್ಗಣಃ ॥ ೬೧ ॥

ಅನುವಾದ: ಸತ್ತ್ವರಜಸ್ತಮಸ್ಸುಗಳು ಸಮನಾಗಿರುವ ಸ್ಥಿತಿಯನ್ನು ಪ್ರಕೃತಿ ಎನ್ನುವರು. ಪ್ರಕೃತಿಯಿಂದ ಮಹತ್, ಮಹತ್‌ನಿಂದ ಅಹಂಕಾರ, ಅಹಂಕಾರದಿಂದ ಐದು

ತನ್ಮಾತ್ರಗಳು ಮತ್ತು ಎರಡು ಬಗೆಯ ಇಂದ್ರಿಯಗಳು ಮತ್ತು ತನ್ಮಾತ್ರಗಳಿಂದ ಸ್ಥೂಲ ಭೂತಗಳು (ಉಂಟಾಗುತ್ತವೆ); ಪುರುಷ (ವೂ ಸೇರಿ) ಒಟ್ಟು ಇಪ್ಪತ್ತೈದು (ತತ್ತ್ವಗಳ) ಸಮೂಹವಿರುವುದು.

ಭಾಷ್ಯ: *ಸತ್ತ್ವಾದೀನಿ ದ್ರವ್ಯಾಣಿ ನ ವೈಶೇಷಿಕಾಃ ಗುಣಾಃ ಸಂಯೋಗವಿಯೋಗವತ್ತ್ವಾತ್ । ಲಘುತ್ವ ಚಲತ್ವಗುರುತ್ವಾದಿ–ಧರ್ಮಕತ್ವಾಚ್ಚ ।*

ಅನುವಾದ: ಮೇಲೆ ಹೇಳಿದ ಸೂತ್ರದಲ್ಲಿ ನಿರ್ದಿಷ್ಟವಾದ ಸತ್ತ್ವಾದಿ ಗುಣಗಳುಳ್ಳವುಗಳು ದ್ರವ್ಯಗಳು. ಇವುಗಳಲ್ಲಿ ವೈಶೇಷಿಕದ ಗುಣಗಳಿಲ್ಲ–ವೈಶೇಷಿಕ ಗುಣಗಳಲ್ಲಾದರೋ ಸಂಯೋಗ–ವಿಭಾಗಗಳಿವೆ. ಅಲ್ಲದೆ ಲಘುತ್ವ, ಚಲತ್ವ ಮತ್ತು ಗುರುತ್ವ ಮುಂತಾದ ಧರ್ಮಗಳಿವೆ.

ವಿವರಣೆ: ಸತ್ವ, ರಜಸ್, ತಮಸ್‌ಗಳು ದ್ರವ್ಯರೂಪದವು. ಸ್ವತಂತ್ರವಾಗಿರುವ ಇವುಗಳು ವೈಶೇಷಿಕದ ಗುಣಗಳಂತಲ್ಲ.

ಭಾಷ್ಯ: *ತೇಷ್ವತ್ರ ಶಾಸ್ತ್ರೇ ಶ್ರುತ್ಯಾದೌ ಚ ಗುಣಶಬ್ದಃ ಪುರುಷೋಪಕರಣತ್ವಾತ್ ಪುರುಷಪಶುಬಂಧಕ–ತ್ರಿಗುಣಾತ್ಮಕಮಹದಾದಿರಜ್ಜುನಿರ್ಮಾತೃತ್ವಾತ್ ಚ ಪ್ರಯುಜ್ಯತೇ ।*

ಅನುವಾದ: ಈ ಸಾಂಖ್ಯಶಾಸ್ತ್ರದಲ್ಲಿ ಮತ್ತು ಶ್ರುತಿಯೇ ಮುಂತಾದುವುಗಳಲ್ಲಿ ಈ ಸತ್ತ್ವಾದಿಗಳನ್ನು 'ಗುಣ' ಶಬ್ದವನ್ನು ಪ್ರಯೋಗಿಸಲು ಕಾರಣ ಪುರುಷನ ಉದ್ದೇಶ ವನ್ನು ಪೂರೈಸುವುದು. ಅಲ್ಲದೆ ಪುರುಷಪಶುವನ್ನು ಕಟ್ಟಿಹಾಕುವ ಮೂರು ಗುಣಗಳುಳ್ಳ ಮಹತ್ತೇ ಮೊದಲಾದ ಹಗ್ಗವನ್ನು ನಿರ್ಮಾಣ ಮಾಡುವುದರಿಂದ ಗುಣವೆಂದು ಹೇಳುವರು.

ವಿವರಣೆ: ಗುಣ ಪದಕ್ಕೆ ಜಿ.ಎನ್. ಚಕ್ರವರ್ತಿಗಳು ನಿಘಂಟುವಿನಲ್ಲಿ ೨೩ ಅರ್ಥಗಳನ್ನು ಕೊಟ್ಟಿದ್ದಾರೆ. ಇಲ್ಲಿ ಮೂರುದಾರಗಳನ್ನು ಹೆಣೆದು ಮಾಡಿದ ಹಗ್ಗದಂತೆ ಮೂರು ಗುಣಗಳನ್ನು ಸೇರಿಸಿರುವ ಮಹತ್ತೇ ಮುಂತಾದ ತತ್ತ್ವಗಳೇ ಹೊರತು ವೈಶೇಷಿಕರು ಹೇಳುವ ಗುಣವಲ್ಲ ಎಂದು ಅಭಿಪ್ರಾಯ.

ಭಾಷ್ಯ: *ತೇಷಾಂ ಸತ್ವಾದಿ ದ್ರವ್ಯಾಣಾಂ ಯಾ ಸಾಮ್ಯಾವಸ್ಥಾ ಅನ್ಯೂನಾನತಿರಿಕ್ತಾವಸ್ಥಾ ಅನ್ಯೂನಾಧಿಕಭಾವೇನಾ ಸಂಹತಾ–ವಸ್ಥೇತಿ ಯಾವತ್ । ಅಕಾರ್ಯಾವಸ್ಥೇತಿ ನಿಷ್ಕರ್ಷಃ । ಅಕಾರ್ಯಾವಸ್ಥೋಪಲಕ್ಷಿತಂ ಗುಣಸಾಮಾನ್ಯಂ ಪ್ರಕೃತಿರಿತ್ಯರ್ಥಃ ।*

ಅನುವಾದ: ಸಾಮ್ಯಾವಸ್ಥಾ ಎಂದರೆ ಕಡಿಮೆ ಅಥವಾ ಹೆಚ್ಚಿಲ್ಲದ, ಪರಸ್ಪರ ಬೆರೆತು ಹೋಗದ ಅವಸ್ಥೆ. ಅಕಾರ್ಯವಸ್ಥೆಯೊಂದು ನಿಷ್ಕರ್ಷೆ. ಪ್ರಕೃತಿ ಎಂದರೆ ಅಕಾರ್ಯಾವಸ್ಥೆಯಿಂದ ಸೂಚಿತವಾದ ಗುಣಸಾಮಾನ್ಯ.

ವಿವರಣೆ: 'ಕಾರ್ಯ' ಎಂದರೆ ಕಾರಣಗಳು ಒಟ್ಟುಗೂಡಿ ವಸ್ತುವಿನಲ್ಲಿ ಪರಿಣಾಮಗೊಳ್ಳುವುದು. ಇಲ್ಲಿ ಮೂರು ಗುಣಗಳೂ ಒಟ್ಟು ಸೇರಿ ಮತ್ತೊಂದು ವಸ್ತುವಿನಲ್ಲಿ ಪರಿಣಾಮಗೊಳ್ಳದೆ ಬೇರೆ ಬೇರೆಯಾಗಿ ಇರುವುದು ಅಕಾರ್ಯ.

ಭಾಷ್ಯ: *ಯಥಾಶ್ರುತೇ ವೈಷಮ್ಯಾವಸ್ಥಾಯಾಂ ಪ್ರಕೃತಿನಾಶಪ್ರಸಂಗಾತ್ ।*
ಸತ್ತ್ವಂ ರಜಸ್ತಮ ಇತಿ ಏಷೈವ ಪ್ರಕೃತಿಃ ಸದಾ ।
ಏಷೈವ ಸಂಸೃತಿರ್ಜಂತೋಃ ಪಾರೇ ಪರಂ ಪದಮ್ ॥
ಇತ್ಯಾದಿಸ್ಮೃತಿಭಿರ್ಗುಣಮಾತ್ರಸ್ಯೈವ ಪ್ರಕೃತಿತ್ವವಚನಾಚ್ಚ ।

ಅನುವಾದ: ಶ್ರುತಿಯಂತೆ ಅರ್ಥಮಾಡಿದಲ್ಲಿ ವೈಷಮ್ಯಾವಸ್ಥೆಯಲ್ಲಿ ಪ್ರಕೃತಿಯು ನಾಶವಾಗಿಬಿಡುವುದು.

ಸತ್ತ್ವ, ರಜಸ್ಸು, ತಮಸ್ಸು ಇವುಗಳೇ ಮೂಲರೂಪದಲ್ಲಿ ಪ್ರಕೃತಿ ಎನಿಸಿಕೊಳ್ಳುತ್ತವೆ. ಅದೇ ಪ್ರಕೃತಿ ಪ್ರಾಣಿಗಳ ದೃಷ್ಟಿಗೆ ಕಾರಣವಾಗುತ್ತದೆ. ಅದರಾಚೆ ಪರಮಪದವಿರುತ್ತದೆ.

ಭಾಷ್ಯ: *ಸತ್ತ್ವಾದೀನಾಂ ಅನುಗಮಾಯ ಸಾಮಾನ್ಯೇತಿ ।*
ಪುರುಷ ವ್ಯಾವರ್ತನಾಯ ಗುಣೇತಿ ।
ಮಹದಾದಿ ವ್ಯಾವರ್ತನಾಯ ಚ ಉಪಲಕ್ಷಿತಾಂತಮಿತಿ ।
ಮಹದಾದಯೋಽಪಿ ಹಿ ಕಾರ್ಯಸತ್ತ್ವಾದಿರೂಪಾಂ ಪುರುಷೋ-
ಪಕರಣತಯಾ ಗುಣಾಶ್ಚ ಭವಂತೀತಿ । ತದತ್ರ ಪ್ರಕೃತೇಃ
ಸ್ವರೂಪಮೇವ ಉಕ್ತಮ್ । ಅಸ್ಯಾ ವಿಶೇಷಸ್ತು ಪಶ್ಚಾದ್ವಕ್ಷ್ಯತೇ ।

ಅನುವಾದ: ಸತ್ತ್ವಾದಿಗಳನ್ನು ಸೂಚಿಸಲು ಸಾಮಾನ್ಯ ಎಂದು ಹೇಳಿದೆ. ಗುಣಪದದಿಂದ ಪುರುಷನನ್ನು ಬಿಟ್ಟಿದ್ದಾರೆ. ಮಹದಾದಿಗಳನ್ನು ಬಿಡುವ ಕಾರಣ 'ಉಪಲಕ್ಷಿತ' ಪದವನ್ನು ಬಳಸಲಾಗಿದೆ, ಏಕೆಂದರೆ ಮಹದಾದಿಗಳೂ ಸಹ ಕಾರ್ಯಾತ್ಮಕವಾದ ಸತ್ತ್ವಾದಿರೂಪಗಳನ್ನು ಹೊಂದಿ ಪುರುಷನ ಸಹಾಯಕ್ಕಾಗಿರುವ ಗುಣಗಳಾಗಿರುತ್ತವೆ. ಹೀಗೆ ಪ್ರಕೃತಿಯ ಸ್ವರೂಪವನ್ನು ಹೇಳಲಾಗಿದೆ. ಇದರ ವಿಶೇಷವನ್ನು ಮುಂದೆ ಹೇಳಲಾಗುವುದು.

ಭಾಷ್ಯ: *ಪ್ರಕೃತೇಃ ಕಾರ್ಯಂ ಮಹಾನ್ ಮಹತ್ತತ್ತ್ವಮ್ ।*
ಮಹದಾದೀನಾಂ ಸ್ವರೂಪಂ ವಿಶೇಷಶ್ಚ ವಕ್ಷ್ಯತೇ । ಮಹತಶ್ಚ
ಕಾರ್ಯಂ ಅಹಂಕಾರಃ, ಅಹಂಕಾರಸ್ಯ ಕಾರ್ಯದ್ವಯಂ,
ತನ್ಮಾತ್ರಾಣಿ ಉಭಯಮಿಂದ್ರಿಯಂ ಚ । ತತ್ರ ಉಭಯಂ
ಇಂದ್ರಿಯಂ ಬಾಹ್ಯಾಭ್ಯಂತರಭೇದೇನ ಏಕಾದಶವಿಧಮ್ ।
ತನ್ಮಾತ್ರಾಣಾಂ ಕಾರ್ಯಾಣಿ ಪಂಚಸ್ಥೂಲಭೂತಾನಿ । ಸ್ಥೂಲ-
ಶಬ್ದಾತ್ ತನ್ಮಾತ್ರಾಣಾಂ ಸೂಕ್ಷ್ಮರೂಪತ್ತ್ವಂ ಅಭ್ಯುಪಗತಮ್ ।
ಪುರುಷಸ್ತು ಕಾರ್ಯಕಾರಣವಿಲಕ್ಷಣ ಇತಿ । ಇತ್ಯೇವಂ
ಪಂಚವಿಂಶತಿರ್ಗಣಃ ಪದಾರ್ಥವ್ಯೂಹಃ । ಏಕದತಿರಿಕ್ತಃ

ಪದಾರ್ಥಃ ನಾಸ್ತೀತ್ಯರ್ಥಃ । ಅಥವಾ ಸತ್ತ್ವಾದೀನಾಂ ಪ್ರತ್ಯೇಕವ್ಯಕ್ತ್ಯಾನಂತ್ಯಂ ಗಣಶಬ್ದೋ ವಕ್ತಿ ।

ಅನುವಾದ: ಪ್ರಕೃತಿಯಿಂದ ಉಂಟಾದ ಕಾರ್ಯ ಮಹಾನ್ ಅಥವಾ ಮಹತ್ತತ್ತ್ವ. ಮಹತ್ತೇ ಮೊದಲಾದುವುಗಳ ಸ್ವರೂಪ ಮತ್ತು ವೈಶಿಷ್ಟ್ಯ ಕುರಿತು ಮುಂದೆ ಹೇಳಲಾಗುವುದು. ಮಹತ್ತಿನಿಂದ ಉಂಟಾಗುವ ಕಾರ್ಯ ಅಹಂಕಾರ, ಅಹಂಕಾರ ದಿಂದ ಎರಡು ಬಗೆಯ ಕಾರ್ಯಗಳು– ಐದು ತನ್ಮಾತ್ರಗಳು, ಎರಡು ಪ್ರಕಾರದ ಇಂದ್ರಿಯಗಳು ಅದರಲ್ಲಿ ಎರಡು ಬಗೆಯ ಇಂದ್ರಿಯಗಳು ಎಂದರೆ ಬಾಹ್ಯ ಮತ್ತು ಅಭ್ಯಂತರ ಇಂದ್ರಿಯಗಳು ಸೇರಿ ಹನ್ನೊಂದು ವಿಧ. ತನ್ಮಾತ್ರಗಳ ಕಾರ್ಯಗಳು ಐದು ಸ್ಥೂಲಭೂತಗಳು. 'ಸ್ಥೂಲ' ಎಂಬ ಪದದ ಪ್ರಯೋಗದಿಂದ ಅವುಗಳ ಉಪಾದಾನವಾಗಿ ಐದು ತನ್ಮಾತ್ರಗಳು ಸೂಕ್ಷ್ಮಭೂತಗಳು. ಪುರುಷನಾದರೋ ಕಾರ್ಯಕಾರಣ ವಿಲಕ್ಷಣನು ಹೀಗೆ ಇಪ್ಪತ್ತೈದು ಗಣಗಳ ಅಥವಾ ಪದಾರ್ಥಗಳ ಸಮೂಹವಿದೆ. ಇದನ್ನು ಮೀರಿ ಪದಾರ್ಥಗಳಿಲ್ಲ ಎಂದು ಅಭಿಪ್ರಾಯ ಅಥವಾ ಗಣಶಬ್ದವನ್ನು 'ಸತ್ತ್ವಾದಿಗಳು ಪ್ರತಿವ್ಯಕ್ತಿರೂಪದಲ್ಲಿ ಅನಂತವಾಗಿವೆ' ಎಂಬ ಅರ್ಥದಲ್ಲಿ ಹೇಳಲಾಗಿದೆ.

ಭಾಷ್ಯ: *ಅಯಂ ಚ ಪಂಚವಿಂಶತಿಕೋ ಗಣೋ ದ್ರವ್ಯರೂಪ ಏವ– ಧರ್ಮಧರ್ಮ್ಯಭೇದಾತ್ತು ಗುಣಕರ್ಮ ಸಾಮಾನ್ಯಾದೀನಾಂ ಅತ್ರೈವ ಅಂತರ್ಭಾವಃ । ಏತದತಿರಿಕ್ತಪದಾರ್ಥಸತ್ತ್ವೇ ಹಿ ತತೋಽಪಿ ಪುರುಷಸ್ಯ ವಿವೇಕ್ತವ್ಯತಯಾ ತದಸಂಗ್ರಹ– ನ್ಯೂನತಾಪದ್ಯೇತ । ಏತೇನ ಸಾಂಖ್ಯಾನಾಂ ಅನಿಯತ– ಪದಾರ್ಥಾಭ್ಯುಪಗಮ ಇತಿ ಮೂಢಪ್ರಲಾಪಃ ಉಪೇಕ್ಷಣೀಯಃ । ದಿಕ್ಕಾಲೌ ಚ ಆಕಾಶಮೇವ 'ದಿಕ್ಕಾಲಾವಕಾಶಾದಿಭ್ಯಃ (೨.೧೨) ಇತ್ಯಾಗಾಮಿಸೂತ್ರಾತ್ ।*

ಅನುವಾದ: ಈ ಇಪ್ಪತ್ತೈದು ಗಣಗಳೂ ದ್ರವ್ಯರೂಪವೇ. ಧರ್ಮ ಮತ್ತು ಧರ್ಮೀ ಇವುಗಳಲ್ಲಿ ಭೇದವಿಲ್ಲದ ಕಾರಣ ಗುಣ, ಕರ್ಮ, ಸಾಮಾನ್ಯಾದಿಗಳೆಲ್ಲ ಇವುಗಳಲ್ಲೇ ಸೇರಿಹೋಗುತ್ತವೆ. ಇವುಗಳನ್ನು ಮೀರಿ ಪದಾರ್ಥವು ಇದೆಯೆಂದರೆ ಪುರುಷವು ಉಳಿದು ಹೋಗುವ ಕಾರಣ ಅವುಗಳಲ್ಲಿ ಪುರುಷನನ್ನು ಸೇರಿಸುವಂತಿಲ್ಲ. ಆಗ ಪದಾರ್ಥಗಳ ಸಂಖ್ಯೆಯಲ್ಲಿ ಅದನ್ನು ಸೇರಿಸದ ಕಾರಣ ನ್ಯೂನತೆ ಉಂಟಾಗುವುದು. ಇದರಿಂದ ಸಾಂಖ್ಯರು ಅನಿರ್ದಿಷ್ಟ ಪದಾರ್ಥಗಳನ್ನು ಒಪ್ಪಿದ್ದಾರೆ ಎಂದು ಹೇಳುವುದು ಮೂರ್ಖರ ಪ್ರಲಾಪವಷ್ಟೆ. ದಿಕ್ಕು ಕಾಲಗಳು ಆಕಾಶವೇ ಎಂದು 'ದಿಕ್ಕಾಲಾದವ ಕಾಶಾದಿಭ್ಯಃ' (೨.೧೨) ಎಂದು ಮುಂದೆ ಬರಲಿರುವ ಸೂತ್ರವು ಹೇಳುತ್ತದೆ.

ಭಾಷ್ಯ: *ಏತ ಏವ ಪದಾರ್ಥಾಃ ಪರಸ್ಪರ ಪ್ರವೇಶಾಪ್ರವೇಶಾಭ್ಯಾಂ ಕ್ವಚಿತ್ತು ಷಟ್, ಕ್ವಚಿತ್ ಷೋಡಶ, ಕ್ವಚಿಚ್ಚ ಸಂಖ್ಯಾಂತರೈಃ*

ಅಭ್ಯುಪದಿಶ್ಯಂತೇ । ವಿಶೇಷಸ್ತು ಸಾಧರ್ಮ್ಯವೈಧರ್ಮ್ಯಮಾತ್ರಂ ಇತಿ ಮಂತವ್ಯಮ್ ।

ಅನುವಾದ: ಇದೇ ಪದಾರ್ಥಗಳು ಪರಸ್ಪರ ಪ್ರವೇಶದಿಂದ ಅಥವಾ ತೆಗೆಯುವುದರಿಂದ ಕೆಲವು ಶಾಸ್ತ್ರಗಳಲ್ಲಿ ಒಂದೇ ಎಂದೂ, ಕೆಲವು ಶಾಸ್ತ್ರಗಳಲ್ಲಿ ಆರು ಪದಾರ್ಥಗಳೆಂದೂ, ಕೆಲವು ಕಡೆ ಹದಿನಾರು ಪದಾರ್ಥಗಳೆಂದೂ ಮತ್ತೆ ಕೆಲವು ಶಾಸ್ತ್ರಗಳಲ್ಲಿ ಹೆಚ್ಚು ಕಡಿಮೆಯಾಗಿಯೂ ಹೇಳಲ್ಪಟ್ಟಿವೆ. ಇವುಗಳೆಲ್ಲ ಸಾಧರ್ಮ್ಯ ವೈಧರ್ಮ್ಯಗಳೆಂದಷ್ಟೇ ತಿಳಿಯಬೇಕು.

ವಿವರಣೆ: ವೇದಾಂತದಲ್ಲಿ ಒಂದೇ ತತ್ವ ಬ್ರಹ್ಮ. ವೈಶೇಷಿಕದಲ್ಲಿ ಆರು ಪದಾರ್ಥಗಳು. ನ್ಯಾಯದಲ್ಲಿ ಹದಿನಾರು ಪದಾರ್ಥಗಳು.

ಭಾಷ್ಯ: *ತಥಾ ಚೋಕ್ತಂ ಭಾಗವತೇ ।*
ಏಕಸ್ಮಿನ್ನಪಿ ದೃಶ್ಯಂತೇ ಪ್ರವಿಷ್ಟಾನೀತರಾಣಿ ಚ ।
ಪೂರ್ವಸ್ಮಿನ್ ವಾ ಪರಸ್ಮಿನ್ ವಾ ತತ್ವೇ ತತ್ತ್ವಾನಿ ಸರ್ವಶಃ ॥
(ಭಾ. ೧೧.೨೨.೮)

ಅನುವಾದ: ಭಾಗವತದಲ್ಲಿ ಹೀಗೆ ಹೇಳಿರುವುದು: ಒಂದೇ ತತ್ತ್ವದಲ್ಲಿ ಅನೇಕ ಇತರ ತತ್ವಗಳು ಸೇರಿಹೋಗುವುದುಂಟು. ಯಾವುದರಲ್ಲಿ ಯಾವುದಾದರೂ ಅಂತರ್ಭಾವವಾಗುವುದು, ಮೊದಲ ತತ್ವದಲ್ಲಾಗಲಿ ಅನಂತರದ ತತ್ತ್ವದಲ್ಲಾಗಲಿ ಎಲ್ಲ ರೀತಿಯಲ್ಲಿಯೂ ಪರಸ್ಪರ ಬೆರೆಯಬಹುದು.

ಭಾಷ್ಯ: *ಇತಿ ನಾನಾ ಪ್ರಸಂಖ್ಯಾನಂ ತತ್ತ್ವಾನಾಂ ಋಷಿಭಿಃ ಕೃತಮ್ ।*
ಸರ್ವಂ ನ್ಯಾಯ್ಯಂ ಯುಕ್ತಿಮತ್ವಾದ್ವಿದುಷಾಂ ಕಿಮಶೋಭನಮ್ ॥

ಅನುವಾದ: ಹೀಗೆ ಋಷಿಗಳು ಭಿನ್ನ ಭಿನ್ನ ಪ್ರಕಾರದ ತತ್ತ್ವಗಳ ಗಣನೆಯನ್ನು ಮಾಡಿದ್ದಾರೆ. ಎಲ್ಲವೂ ಯುಕ್ತಿಪೂರ್ಣವಾಗಿರುವುದರಿಂದ ನ್ಯಾಯವೇ. (ತತ್ತ್ವಜ್ಞಾನಿಗಳಾದ) ವಿದ್ವಾಂಸರ ಅಭಿಪ್ರಾಯಗಳು ಎಲ್ಲವೂ ಚೆನ್ನಾಗಿರುತ್ತದೆ.

ಭಾಷ್ಯ: *ಏತೇ ಚ ಪದಾರ್ಥಾಃ ಶ್ರುತಿಷ್ವಪಿ ಗಣಿತಾಃ । ಯಥಾ ಗರ್ಭೋಪನಿಷದಿ(೩) ಅಷ್ಟೌ ಪ್ರಕೃತಯಃ ಷೋಡಶ ವಿಕಾರಾಃ । ಇತಿ । ಪ್ರಶ್ನೋಪನಿಷದಿ ಚ 'ಪೃಥ್ವೀ ಚ ಪೃಥ್ವೀಮಾತ್ರಾ ಚ' (೪.೮) ಇತ್ಯಾದಿನಾ । ಏವಂ ಮೈತ್ರೇಯೋಪನಿಷದಾದಿಷ್ವಪಿ। ಅಷ್ಟೌ ಚ ಪ್ರಕೃತಯಃ ಕಾರಿಕಯಾ ವ್ಯಾಖ್ಯಾತಾಃ ।*

ಅನುವಾದ: ಈ ಪದಾರ್ಥಗಳನ್ನು ಶ್ರುತಿಗಳಲ್ಲಿಯೂ ಎಣಿಕೆ ಮಾಡಿದ್ದಾರೆ. ಗರ್ಭೋಪನಿಷತ್ತಿನಲ್ಲಿ (೩) ಎಂಟು ಪ್ರಕೃತಿಗಳು ಮತ್ತು ಹದಿನಾರು ವಿಕಾರಗಳು ಇವೆ ಎಂದಿದೆ. ಪ್ರಶ್ನ ಉಪನಿಷತ್ತಿನಲ್ಲಿ 'ಪೃಥ್ವಿಯೂ ಪೃಥ್ವೀಮಾತ್ರವೂ' (೪.೮) ಎಂದಿದೆ. ಹೀಗೆಯೇ ಮೈತ್ರೇಯೋಪನಿಷತ್ತಿನಲ್ಲಿಯೂ ಹೇಳಿದೆ. ಎಂಟು ಪ್ರಕೃತಿಗಳು ಕಾರಿಕೆಯಲ್ಲಿ ಹೇಳಲ್ಪಟ್ಟಿವೆ.

ವಿವರಣೆ: ಎಂಟು ಪ್ರಕೃತಿಗಳು ಮತ್ತು ಹದಿನಾರು ವಿಕಾರಗಳನ್ನು ಹೀಗೆ ವಿಂಗಡಿಸಬಹುದು. ಪ್ರಕೃತಿ, ಮಹತ್, ಅಹಂಕಾರ, ಪಂಚತನ್ಮಾತ್ರಗಳು – ಎಂಟು ಪ್ರಕೃತಿಗಳು. ಮನಸ್ಸು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ಮಹಾಭೂತಗಳು –ಇವು ಹದಿನಾರು ವಿಕಾರಗಳು.

'ಪೃಥ್ವೀ ಚ ಪೃಥಿವೀ ಮಾತ್ರಾಚ' ಎಂಬ ವಾಕ್ಯವನ್ನು ಮುಂದುವರೆಸಿ ಪ್ರಶ್ನೋಪನಿಷತ್ತಿನಲ್ಲಿ ಹೀಗೆ ಹೇಳಿದೆ. (ಅನುವಾದ) ಪೃಥ್ವೀ, ಪೃಥ್ವೀತನ್ಮಾತ್ರಾ; ಜಲ, ಜಲತನ್ಮಾತ್ರಾ, ತೇಜಸ್ಸು, ತೇಜತನ್ಮಾತ್ರಾ; ವಾಯು, ವಾಯುತನ್ಮಾತ್ರಾ; ಆಕಾಶ, ಆಕಾಶತನ್ಮಾತ್ರಾ; ಇದಲ್ಲದೆ ಆಯಾ ಭೂತಗಳ ಗುಣಗಳನ್ನೂ ಉಲ್ಲೇಖ ಮಾಡಲಾಗಿದೆ.

ಇದೇ ರೀತಿ ಸಾಂಖ್ಯಕಾರಿಕೆಯಲ್ಲೂ ಎಂಟು ಪ್ರಕೃತಿಗಳನ್ನು ಕುರಿತು ಹೇಳಲಾಗಿದೆ.

ಭಾಷ್ಯ: *ಮೂಲ ಪ್ರಕೃತಿರವಿಕೃತಿಃ ಮಹದಾದ್ಯಾಃ ಪ್ರಕೃತಿ ವಿಕೃತಯಃಸಪ್ತ ।*
ಷೋಡಶಕಸ್ತು ವಿಕಾರೋ ನ ಪ್ರಕೃತಿರ್ನ ವಿಕೃತಿಃ ಪುರುಷಃ
ಸಾಂಖ್ಯಕಾರಿಕಾ ॥ ೩ ॥

ಅನುವಾದ: ಮೂಲ ಪ್ರಕೃತಿಯು ಯಾವುದರ ವಿಕಾರವೂ ಅಲ್ಲ. ಮಹದಾದಿ ಏಳು ಸತ್ತ್ವಗಳು ಪ್ರಕೃತಿ ವಿಕೃತಿಗಳು. ಹಾಗೆಯೇ ಉಳಿದ ಹದಿನೇಳು ತತ್ತ್ವಗಳು ವಿಕಾರ ಮಾತ್ರವಷ್ಟೆ. ಪುರುಷ ತತ್ತ್ವವಾದರೋ ಪ್ರಕೃತಿಯೂ ಅಲ್ಲ, ವಿಕೃತಿಯೂ ಅಲ್ಲ.

ವಿವರಣೆ: ಪ್ರಕೃತಿ ಎಂದರೆ ಕಾರಣ, ವಿಕೃತಿ ಎಂದರೆ ಕಾರ್ಯ. ಪ್ರಕೃತಿ ಮಹದಾದಿಗಳಿಗೆ ಕಾರಣವಾದರೂ ಸ್ವತಃ ಅದು ಕಾರ್ಯವಲ್ಲ. ಮಹದಾದಿಗಳು ಕಾರಣಗಳೂ ಹೌದು ಕಾರ್ಯವೂ ಹೌದು. ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚಮಹಾಭೂತಗಳು, ಈ ಹದಿನಾರೂ ಕೇವಲ ಕಾರ್ಯಗಳು. ಪುರುಷನು ಕಾರಣವೂ ಅಲ್ಲ ಕಾರ್ಯವೂ ಅಲ್ಲ.

ಭಾಷ್ಯ: *ಏಕಮೇವಾ ದ್ವಿತೀಯಂ ತತ್ತ್ವಮಿತಿ ಶ್ರುತಿಸ್ಮೃತಿ ಪ್ರವಾದಸ್ತು*
ಸರ್ವತತ್ತ್ವಾನಾಂ ಪುರುಷೇ ವಿಲಾಪನೇನ ಶಕ್ತಿಶಕ್ತಿಮದಭೇದೇನ
ಇತಿ ಅವಿರೋಧಃ । ಲಯಸ್ತು ಸೂಕ್ಷ್ಮೀಭಾವೇನ ಅವಸ್ಥಾನಂ
ನ ತು ನಾಶಃ ಇತಿ ।

ಅನುವಾದ: 'ಏಕಮೇವಾದ್ವಿತೀಯಂ ಬ್ರಹ್ಮ' ಇದೇ ತತ್ತ್ವವೆಂದು ಶ್ರುತಿಸ್ಮೃತಿ ಸಾರಿದರೂ ಶಕ್ತಿ ಮತ್ತು ಶಕ್ತಿಯುಳ್ಳ ವಸ್ತುಗಳಲ್ಲಿ ಅಭೇದದ ಅಭಿಪ್ರಾಯವನ್ನು ಪುರುಷನಿಗೆ ಅನ್ವಯಿಸಿರುವ ಕಾರಣ ವಿರೋಧವಿಲ್ಲ. 'ಲಯ'ವೆಂದರೆ ನಾಶವಲ್ಲ, ಸೂಕ್ಷ್ಮರೂಪ ದಲ್ಲಿರುವುದು.

ವಿವರಣೆ: ವಿರೋಧವಿಲ್ಲ ಎಂದರೆ ನಮ್ಮ ಅಭಿಪ್ರಾಯಕ್ಕೂ ಶ್ರುತಿಸ್ಮೃತಿಗಳ ಹೇಳಿಕೆಗೂ ವ್ಯತ್ಯಾಸವಿಲ್ಲ.

ಭಾಷ್ಯ: *ತದುಕ್ತಮ್ ।*
ಆಸೀಜ್ಜ್ಞಾನಮಯೋಽಪ್ಯರ್ಥಂ ಏಕಮೇವಾವಿಕಲ್ಪಿತಮ್ ।

ಅನುವಾದ: ಅದನ್ನು ಹೀಗೆ ಹೇಳಿದೆ–

ಜ್ಞಾನವೂ ಮತ್ತು ಅದರ ಅರ್ಥವೂ ಒಂದೇ ಮತ್ತು ಭಾಗವಿಲ್ಲದಂತಾಗಿತ್ತು.

ಭಾಷ್ಯ: *ಅವಿಕಲ್ಪಿತಮ್ ಅವಿಭಕ್ತಮ್ । ಏತಚ್ಚ ಬ್ರಹ್ಮಮೀಮಾಂಸಾ–ಭಾಷ್ಯೇ (೧.೧.೪–೫) ಅದ್ವೈತ ಪ್ರಸಂಗತೋ ವಿಸ್ತರೇಣ ಉಪಪಾದಿತಮ್ ।*

ಅನುವಾದ: 'ಅವಿಕಲ್ಪಿತಮ್' ಎಂದರೆ 'ಅವಿಭಕ್ತ' ಎಂದರ್ಥ. ಈ ಹೇಳಿಕೆ ಬ್ರಹ್ಮಮೀಮಾಂಸಾ ಭಾಷ್ಯದಲ್ಲಿ ಅದ್ವೈತದ ಸಂದರ್ಭದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ.

ಭಾಷ್ಯ: *ವಿಶೇಷಸ್ತ್ವಯಂ ಯತ್ ಸೇಶ್ವರವಾದೇ ಅನ್ಯತತ್ತ್ವಾನಾಂ ತತ್ರೈವ ಅವಿಭಾಗಾತ್ ಈಶ್ವರಚೈತನ್ಯಮೇವ ಏಕಂ ತತ್ತ್ವಮ್ । ನಿರೀಶ್ವರವಾದೇ ತು ತ್ರಿವೇಣಿವತ್ ಅನ್ಯೋನ್ಯಾವಿಭಕ್ತತಯಾ ಏಕಸ್ಮಿನ್ ಕೂಟಸ್ಥೇ ತೇಜೋಮಂಡಲವತ್ ಆದಿತ್ಯ–ಮಂಡಲೇ ಪ್ರಕೃತ್ಯಾಖ್ಯಸೂಕ್ಷ್ಮಾವಸ್ಥಾಯಾ ಮಹದಾದೇಃ ಅವಿಭಾಗಾತ್ ಆತ್ಮೈವೈಕಂ ತತ್ತ್ವಮಿತಿ । ತಥಾ ಚ ವಕ್ಷ್ಯತಿ– 'ನಾದ್ವೈತ ಶ್ರುತಿ ವಿರೋಧೋ ಜಾತಿಪರತ್ವಾದಿತಿ' ।*

ಅನುವಾದ: ವಿಶೇಷವು ಹೀಗಿದೆ– ಸೇಶ್ವರವಾದದಲ್ಲಿ ಅನ್ಯತತ್ತ್ವಗಳು ಅದರ (ಈಶ್ವರನ) ಒಳಗೇ ಸೇರಿ ಹೋಗುವುದರಿಂದ ಈಶ್ವರ ಚೈತನ್ಯವೊಂದೇ ತತ್ತ್ವವಾಗಿ ಉಳಿಯುವುದು. ಆದರೆ ನಿರೀಶ್ವರವಾದದಲ್ಲಿ ತ್ರಿವೇಣೀ ಸಂಗಮದಂತೆ ಒಂದಕ್ಕೊಂದು ಬೇರೆಯಾಗದೆಯೇ ಒಂದೇ ಕೂಟಸ್ಥ ಪುರುಷನಲ್ಲಿ ಆದಿತ್ಯ ಮಂಡಲದಲ್ಲಿ ತೇಜೋಮಂಡಲವಿರುವಂತೆ, ಪ್ರಕೃತಿ ಎಂಬ ಸೂಕ್ಷ್ಮಾವಸ್ಥೆಯ ಮಹದಾದಿಗಳ ಭೇದವಿಲ್ಲದೆ ಆತ್ಮವೊಂದನ್ನೇ ಏಕಮಾತ್ರ ತತ್ತ್ವ ಎನ್ನುತ್ತಾರೆ. ಆದ್ದರಿಂದ ಮುಂದೆ ಬರುವ ಸೂತ್ರ 'ನಾದ್ವೈತ ಶ್ರುತಿವಿರೋಧೋ ಜಾತಿಪರತ್ವಾದಿತಿ' (೧.೧೫೪) ಹೇಳುತ್ತದೆ.

ವಿವರಣೆ: ಇಲ್ಲಿ ಕೂಟಸ್ಥವೆಂದರೆ ಪುರುಷ, ಆದಿತ್ಯಮಂಡಲದಂತೆ ಪ್ರಕಾಶಿಸುವವನು. ಪ್ರಕೃತಿಯೆಂಬ ಸೂಕ್ಷ್ಮಾವಸ್ಥೆ, ತೇಜೋಮಂಡಲ.

ಭಾಷ್ಯ: *ಏತೇಷು ಪದಾರ್ಥೇಷು ಅಚಾಕ್ಷುಷಾಣಾಂ ಅನುಮಾನೇನ ಬೋಧಂ ಪ್ರತಿಪಾದಯತಿ ಸೂತ್ರಜಾತೇನ–*

ಅನುವಾದ: ಈ ಪದಾರ್ಥಗಳಲ್ಲಿ ಯಾವುದು ಕಣ್ಣಿಗೆ ಗೋಚರವಾಗದೋ ಅದನ್ನು ಅನುಮಾನಗಳಿಂದ ತಿಳಿಯಬಹುದು.

ಸೂತ್ರ: ಸ್ಥೂಲಾತ್ ಪಂಚತನ್ಮಾತ್ರಸ್ಯ ॥ ೬೨ ॥

ಅನುವಾದ: ಸ್ಥೂಲವಾದ (ಪಂಚಮಹಾಭೂತಗಳಿಂದ) ಪಂಚತನ್ಮಾತ್ರಗಳನ್ನು ಅನುಮಾನದಿಂದ ತಿಳಿಯಬಹುದು.

ಭಾಷ್ಯ: ಬೋಧ ಇತ್ಯನುವರ್ತತೇ (೧.೬೦) । ಸ್ಥೂಲಂ ತಾವಚ್ಚಾ–ಕ್ಷುಷಮೇವ । ತಚ್ಚ ತನ್ಮಾತ್ರಕಾರ್ಯತಯಾ ಉಕ್ತಮ್ ।

ತತಃ ಸ್ಥೂಲಭೂತಾತ್ ಕಾರ್ಯಾತ್ ತತ್ಕಾರಣತಯಾ ತನ್ಮಾತ್ರಾನುಮಾನೇನ ಸ್ಥೂಲವಿವೇಕತೋ ಬೋಧ ಇತ್ಯರ್ಥಃ । ಆಕಾಶಸಾಧಾರಣಾಯ ಸ್ಥೂಲತ್ವಮತ್ರ ಬಾಹ್ಯೇಂದ್ರಿಯಗ್ರಾಹ್ಯ ಗುಣಕತ್ವಮ್, ಶಾಂತಾದಿವಿಶೇಷವತ್ತ್ವಂ ವಾ । ತನ್ಮಾತ್ರಾಣಿ ಚ ಯಜ್ಜಾತೀಯೇಷು ಶಾಂತಾದಿವಿಶೇಷತ್ರಯಂ ನ ತಿಷ್ಠತಿ ತಜ್ಜಾತೀಯಾನಾಂ ಶಬ್ದಸ್ಪರ್ಶರೂಪರಸಗಂಧಾನಾಂ ಆಧಾರ-ಭೂತಾನಿ ಸೂಕ್ಷ್ಮದ್ರವ್ಯಾಣಿ ಸ್ಥೂಲಾನುಮವಿಶೇಷಾಃ ।

ಅನುವಾದ: (೧.೬೦ ಸೂತ್ರದ) ಬೋಧ (ಜ್ಞಾನ) ಎಂಬುದನ್ನು ಸೇರಿಸಿಕೊಳ್ಳಬೇಕು. ಸ್ಥೂಲವಾದ (ವಸ್ತು) ಗೋಚರವಾಗುವುದಷ್ಟೆ. ಸ್ಥೂಲತೆಯು ತನ್ಮಾತ್ರದಿಂದ ಉಂಟಾಗುವುದು ಎಂದು ಹೇಳಿದೆ. ಹಾಗೆಯೇ ಸ್ಥೂಲಭೂತವಾದ ಕಾರ್ಯಕ್ಕೆ ಅದಕ್ಕೆ ಕಾರಣವಾದ ತನ್ಮಾತ್ರಕ್ಕೆ ಭಿನ್ನವಾದ ಸ್ಥೂಲವೆಂದು ತಿಳುವಳಿಕೆ ಅನುಮಾನದಿಂದ ತಿಳಿದುಬರುತ್ತದೆ. ಆಕಾಶವೂ ಸ್ಥೂಲ ಸಾಧಾರಣವೆಂಬುದನ್ನು ಬಾಹ್ಯೇಂದ್ರಿಯದಿಂದ (ಕಿವಿ) ಗ್ರಹಿಸುವ ಗುಣವಾದ ಶಬ್ದದಿಂದಾಗಲಿ ಅಥವಾ ಶಾಂತಾದಿ ವಿಶೇಷಧರ್ಮದಿಂದ ತಿಳಿಯಬಹುದು. ತನ್ಮಾತ್ರಗಳು ಅದೇ ಪಂಗಡದ ಶಾಂತವೇ ಮೊದಲಾದ ಮೂರು ವಿಶೇಷಗಳು ಇರುವುದಿಲ್ಲವೋ ಆ ಪಂಗಡದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಗೆ ಆಧಾರಭೂತವಾದ ಸೂಕ್ಷ್ಮ ದ್ರವ್ಯಗಳು. ಇವು ಸ್ಥೂಲ ದ್ರವ್ಯಗಳಿಗಿರುವ ಹಾಗೆ ವಿಶೇಷಧರ್ಮಗಳನ್ನು ಹೊಂದಿರುವುದಿಲ್ಲ.

ವಿವರಣೆ: ಆಯಾ ಭೂತಗಳಲ್ಲಿ ಅವುಗಳು ಮಾತ್ರ ಇರುವುದರಿಂದ ಅವುಗಳನ್ನು ತನ್ಮಾತ್ರ ಎನ್ನುತ್ತಾರೆ. ಅವು ಶಾಂತವೂ ಅಲ್ಲ, ಘೋರವೂ ಅಲ್ಲ, ಮೈಮರೆಸು ವಂತಹುದೂ ಅಲ್ಲ. ಅವುಗಳಿಗೆ ವಿಶೇಷಣಗಳಿಲ್ಲ.

ಪಂಚಭೂತಗಳು ಕಾರ್ಯಗಳು. ಅವುಗಳಿಗೆ ಪಂಚತನ್ಮಾತ್ರಗಳು ಕಾರಣ. ಇವುಗಳ ಅಸ್ತಿತ್ವವನ್ನು ಅನುಮಾನದಿಂದ ತಿಳಿಯಬಹುದು. ಸ್ಥೂಲ ಭೂತಗಳಿಗಿರುವಂತೆ ತನ್ಮಾತ್ರದಲ್ಲಿ ಶಾಂತ, ಘೋರ ಮತ್ತು ಮೋಹ ಗುಣಗಳಿಲ್ಲ.

ಭಾಷ್ಯ: *ತಸ್ಮಿಂಸ್ತಸ್ಮಿಂಸ್ತು ತನ್ಮಾತ್ರಾಸ್ತೇನ ತನ್ಮಾತ್ರತಾ ಸ್ಮೃತಾಃ ।*
ನ ಶಾಂತಾ ನಾಪಿ ಘೋರಾಸ್ತೇ ನ ಮೂಢಾಶ್ಚಾವಿಶೇಷಣಃ ॥
(ವಿ.ಪು. ೧.೨.೪೩)

ಇತಿ ವಿಷ್ಣುಪುರಾಣಾದಿಭ್ಯಃ । ಅಸ್ಯ ಅಯಮರ್ಥಃ । ತೇಷು ತೇಷು ಭೂತೇಷು ತನ್ಮಾತ್ರಾಃ ತಿಷ್ಠಂತೀತಿ ಕೃತ್ವಾ ಧರ್ಮಧರ್ಮ್ಯಭೇದಾತ್ ದ್ರವ್ಯಾಣಾಮಪಿ ತನ್ಮಾತ್ರತಾ ಸ್ಮೃತಾ । ತೇ ಚ ಪದಾರ್ಥಾಃ ಶಾಂತಘೋರಮೂಢಾಖ್ಯೈಃ ಸ್ಥೂಲಗತ-ಶಬ್ದಾದಿವಿಶೇಷೈಃ ಶೂನ್ಯಾಃ ಏಕರೂಪತ್ವಾತ್ । ತಥಾ ಚ ಶಾಂತಾದಿವಿಶೇಷಶೂನ್ಯಶಬ್ದಾದಿಮತ್ತ್ವಮೇವ ಭೂತಾನಾಂ ಶಬ್ದಾದಿತನ್ಮಾತ್ರತ್ವಂ ಇತ್ಯಾಶಯಃ । ಅತಃ ಅವಿಶೇಷಿಣೋ

ಅವಿಶೇಷಸಂಜ್ಞಿತಾ ಇತಿ । ಶಾಂತಂ ಸುಖಾತ್ಮಕಮ್ ।
ಘೋರಂ ದುಃಖಾತ್ಮಕಮ್, ಮೂಢಂ ಮೋಹಾತ್ಮಕಮ್ ।
ತನ್ಮಾತ್ರಾಣಿ ಚ ದೇವಾದಿಮಾತ್ರಭೋಗ್ಯತ್ವೇನ ಕೇವಲಂ
ಸುಖಾತ್ಮಕಾನ್ಯೇವ, ಸುಖಾಧಿಕ್ಯಾತ್ ಇತಿ ।

ಅನುವಾದ: ಹೀಗೆ ವಿಷ್ಣುಪುರಾಣದಲ್ಲಿ ಹೇಳಿದೆ– ಅದರ ಅರ್ಥ ಹೀಗಿದೆ– ಆಯಾಭೂತಗಳಲ್ಲಿ ಧರ್ಮ ಧರ್ಮಿಗಳ ಭೇದವಿಲ್ಲದ ಕಾರಣ ದ್ರವ್ಯಗಳಲ್ಲಿಯೂ ತನ್ಮಾತ್ರಗಳನ್ನು ಹೇಳಿದೆ. ಈ ಪದಾರ್ಥಗಳು ಶಾಂತ, ಘೋರ ಮತ್ತು ಮೂಢ ಎಂದರೆ ಸ್ಥೂಲ ಭೂತಗಳಲ್ಲಿರುವ ಶಬ್ದವೇ ಮೊದಲಾದ ವಿಶೇಷಗಳು ಇರುವುದಿಲ್ಲ. ಏಕೆಂದರೆ ಅವು ಒಂದೇ ರೂಪವನ್ನು ಹೊಂದಿರುತ್ತವೆ. ಹಾಗೆಯೇ ಶಾಂತಾದಿ ವಿಶೇಷವಿಲ್ಲದ ಶಬ್ದಾದಿಗಳನ್ನು ಹೊಂದಿರುವುದೇ ಭೂತಗಳಲ್ಲಿ ಶಬ್ದಾದಿ ತನ್ಮಾತ್ರಗಳನ್ನು ಹೊಂದಿರಲು ಕಾರಣ ಎಂದರ್ಥ. ಆದ್ದರಿಂದ ಅವಿಶೇಷಿಣಃ ಎಂದರೆ ಅವಿಶೇಷ ಎಂದು ಕರೆಯುತ್ತಾರೆ; ಶಾಂತವು ಸುಖಾತ್ಮಕವು ಘೋರ ದುಃಖಾತ್ಮಕವು ಮತ್ತು ಮೂಢ ಮೋಹಾತ್ಮಕವು. ಆದರೆ ತನ್ಮಾತ್ರಗಳು ದೇವತೆಗಳೇ ಮೊದಲಾದವರು ಅನುಭವಿಸುವ ಕಾರಣ ಅವು ಕೇವಲ ಸುಖಾತ್ಮಕವಾಗಿರುತ್ತವೆ; ಏಕೆಂದರೆ ಅವರಿಗೆ ಸುಖವೇ ಹೆಚ್ಚಾಗಿರುತ್ತದೆ.

ವಿವರಣೆ: ಸಾಂಖ್ಯರ ತನ್ಮಾತ್ರಗಳು ವೈಶೇಷಿಕರ ಅಣುವಿಗಿಂತಲೂ ಸೂಕ್ಷ್ಮ. ಆದ್ದರಿಂದ ಅದರಲ್ಲಿ ವಿಶೇಷವೇನೂ ಇರದು.

ಭಾಷ್ಯ: *ಅತ್ರ ಇದಮನುಮಾನಮ್, ಅಪಕರ್ಷಕಾಷ್ಠಾಪನ್ನಾನಿ*
ಸ್ಥೂಲಭೂತಾನಿ ಸ್ವವಿಶೇಷಗುಣಾವತ್ ದ್ರವ್ಯೋಪದಾನಕಾನಿ
ಸ್ಥೂಲತ್ವಾತ್ ಘಟಪಟಾದಿವತ್ ಇತಿ । ಅತ್ರ ಅನವಸ್ಥಾಪತ್ತ್ಯಾ
ಸೂಕ್ಷ್ಮಮಾದಾಯ ಸಾಧ್ಯಂ ಪರ್ಯವಸ್ಯತಿ ।

ಅನುವಾದ: ಅನುಮಾನದ ಪ್ರಕಾರ ಹೀಗೆ– ಅತ್ಯಂತ ಸೂಕ್ಷ್ಮರೂಪದಲ್ಲಿರುವ ಸ್ಥೂಲಭೂತಗಳು ತಮ್ಮ ವಿಶೇಷ ಗುಣವನ್ನೇ ಹೊಂದಿರುವ ದ್ರವ್ಯಗಳಿಗೆ ಉಪಾದಾನ ಕಾರಣಗಳಾಗುತ್ತವೆ. ಸ್ಥೂಲವಾದ ಕಾರಣ, ಘಟಪಟಗಳಂತೆ; ಏಕೆಂದರೆ ಅವು (ಸ್ಥೂಲಭೂತವಾದದ್ದರಿಂದ) ಸ್ಥೂಲದ್ರವ್ಯಗಳಾಗುತ್ತವೆ.

ಅನವಸ್ಥಾದೋಷ ಬಾರದಿರಲೆಂದು ಸೂಕ್ಷ್ಮವನ್ನೇ ತೆಗೆದುಕೊಂಡು ಸಾಧ್ಯವಾಗಿಡಲಾಗಿದೆ. ಇಲ್ಲಿ ಅನುಕೂಲ ತರ್ಕವನ್ನು ಹೀಗೆ ಪ್ರದರ್ಶಿಸಲಾಗಿದೆ. 'ಕಾರಣದಲ್ಲಿರುವ ಗುಣಕ್ಕೆ ಅನುಸಾರವಾಗಿ ಕಾರಣಗುಣಗಳುಳ್ಳ ಕಾರ್ಯ ಉತ್ಪತ್ತಿಯಾಗುತ್ತದೆ'.

ವಿವರಣೆ: ಇಲ್ಲಿ ಅನುಮಾನದ ಪ್ರಯೋಗ ಹೀಗಿದೆ: 'ಅತ್ಯಂತ ಸೂಕ್ಷ್ಮರೂಪವಾದ ಸ್ಥೂಲಭೂತಗಳು ತಮ್ಮ ವಿಶೇಷ ಗುಣಗಳುಳ್ಳ ದ್ರವ್ಯಗಳಿಗೆ ಕಾರಣಗಳಾಗಿರುತ್ತವೆ– ಘಟಪಟಾದಿಗಳಂತೆ ಸ್ಥೂಲವಾದ ಕಾರಣ'.

'ಅತ್ಯಂತ ಸೂಕ್ಷ್ಮವಾದುವುಗಳಿಂದ ಉಂಟಾಗುವ ಸ್ಥೂಲಭೂತಗಳು' –ಇದು 'ಪಕ್ಷ' ಎಂದರೆ, 'ಸಂದೇಹದಿಂದ ಕೂಡಿದ ಸಾಧ್ಯವುಳ್ಳ ವಸ್ತು', 'ತನ್ನ ವಿಶೇಷ

ಗುಣಗಳಿಂದ ಕೂಡಿದ ದ್ರವ್ಯಕ್ಕೆ ಕಾರಣ' ಎಂಬುದು ಸಾಧ್ಯ. 'ಸಾಧ್ಯ' ಎಂದರೆ ಸಾಧಿಸಬೇಕಾದದ್ದು, ಉದಾ: 'ಪರ್ವತೋವಹ್ನಿಮಾನ್' ಎಂಬಲ್ಲಿ ಅಗ್ನಿ ಸಾಧ್ಯ. 'ಘಟಪಟಾದಿವತ್' ಎಂಬುದು ದೃಷ್ಟಾಂತ. 'ಅನವಸ್ಥಾ' ಎಂದರೆ ಉಪಪಾದ್ಯ ಉಪಪಾದಕಗಳಿಗೆ ಕೊನೆಯಿಲ್ಲದಿರುವುದು. ಶ್ರುತಿ ಸ್ಮೃತಿಗಳಲ್ಲಿ ಇದಕ್ಕೆ ಸಮರ್ಥನೆ ದೊರೆಯುತ್ತದೆ.

ಭಾಷ್ಯ: *ಪ್ರಕೃತೇಃ ಶಬ್ದಸ್ಪರ್ಶಾದಿಮಧ್ಯೇ ತು ಬಾಧಕಮಸ್ತಿ*
ಶಬ್ದಸ್ಪರ್ಶವಿಹೀನಂ ತದ್ರೂಪಾದಿಭಿರಸಂಯುತಮ್ ।
ತ್ರಿಗುಣಂ ತಜ್ಜಗದ್ಯೋನಿರನಾದಿಪ್ರಭವಾಪ್ಯಯಮ್ ॥
ಇತಿ ವಿಷ್ಣುಪುರಾಣಾದಿ ವಾಕ್ಯಜಾತಮ್ । (ವಿ.ಪ್ರ. ೧.೨. ೨೦–೨೧)

ಅನುವಾದ: ಆದರೆ ಪ್ರಕೃತಿಯಲ್ಲಿ ಶಬ್ದ ಸ್ಪರ್ಶಾದಿ ಧರ್ಮಗಳು ಇವೆ ಎಂಬ ವಿಷಯದಲ್ಲಿ ಬಾಧಕವಿದೆ.

'ಪ್ರಕೃತಿ'ಗೆ ಶಬ್ದ, ಸ್ಪರ್ಶಗಳಿಲ್ಲ. ಅದು ರೂಪಾದಿಗಳನ್ನು ಹೊಂದಿಲ್ಲ; ಮೂರು ಗುಣಗಳನ್ನು ಹೊಂದಿದೆ. ಅದೇ ಜಗತ್ತಿಗೆ ಕಾರಣ, ಅನಾದಿ. ಹೀಗೆ ವಿಷ್ಣು ಪುರಾಣಾದಿಗಳಲ್ಲಿ ಅನೇಕ ವಾಕ್ಯಗಳಲ್ಲಿ ಹೇಳಿದೆ.

ಭಾಷ್ಯ: *ಬುದ್ಧ್ಯಹಂಕಾರಯೋಶ್ಚ ಶಬ್ದಸ್ಪರ್ಶಾದಿಮತ್ತ್ವೇ*
ಭೂತಕಾರಣತ್ವಶ್ರುತಿಸ್ಮೃತಯ ಏವ ಬಾಧಿಕಾಃಸಂತಿ ।
ಬಾಹ್ಯೇಂದ್ರಿಯಗ್ರಾಹ್ಯ ಜಾತೀಯ ವಿಶೇಷಗುಣವತ್ತ್ವಸ್ಯ
ಏವ ಭೂತಲಕ್ಷಣತ್ವೇನ ತಯೋರಪಿ ಭೂತತ್ವಾಪತ್ತ್ಯಾ
ಸ್ವಸ್ಯಸ್ವಕಾರಣತ್ವಾನುಪಪತ್ತೇಃ ಇತಿ ॥

ಅನುವಾದ: ಬುದ್ಧಿ–ಅಹಂಕಾರಗಳು ಶಬ್ದ–ಸ್ಪರ್ಶ ಮುಂತಾದವುಗಳಿಂದ ಕೂಡಿವೆಯೆಂದು ಹೇಳಿದರೆ ಅವು ಭೂತಗಳಿಗೆ ಕಾರಣಗಳೆಂದು ಹೇಳುವ ಶ್ರುತಿಸ್ಮೃತಿಗಳೇ ಅವುಗಳಿಗೆ ಬಾಧಕಗಳಾಗುತ್ತವೆ. ಬಾಹ್ಯೇಂದ್ರಿಯಗಳಿಂದ ಗ್ರಾಹ್ಯವಾದ ಜಾತಿಯ ವಿಶೇಷಗುಣ ವನ್ನು ಹೊಂದಿರುವುದೇ ಭೂತದ ಲಕ್ಷಣ. ಅದರಿಂದ (ಬುದ್ಧಿ–ಅಹಂಕಾರಗಳೂ) ಭೂತತ್ವವನ್ನು ಪಡೆಯುವುವು. ಹಾಗಾದರೆ ತನ್ನಲ್ಲಿ ತಾನೇ ಕಾರಣವಾಗುವುದು ಸಾಧ್ಯವಿಲ್ಲವಷ್ಟೆ.

ಭಾಷ್ಯ: *ನನ್ವೇವಂ ಕಾರಣದ್ರವ್ಯೇಷು ರೂಪಾದ್ಯಭಾವೇ*
ತನ್ಮಾತ್ರರೂಪಾದೇಃ ಕಿಂ ಕಾರಣಮಿತಿ ಚೇತ್,

ಅನುವಾದ: ಹೀಗೆ ಕಾರಣ ದ್ರವ್ಯಗಳಲ್ಲಿ ರೂಪಾದಿಗಳ ಅಭಾವವಾದರೆ ತನ್ಮಾತ್ರದ ರೂಪಾದಿಗಳಿಗೆ ಕಾರಣವು ಯಾವುದು?

ಭಾಷ್ಯ: *ಸ್ವಕಾರಣ ದ್ರವ್ಯಾಣಾಂ ನ್ಯೂನಾಧಿಕ ಭಾವೇನ ಅನ್ಯೋನ್ಯಂ*
ಸಂಯೋಗ–ವಿಶೇಷ ಏವ । ಹರಿದ್ರಾದಿನಾಂ ಸಂಯೋಗಸ್ಯ
ತದುಭಯಾರಬ್ಧದ್ರವ್ಯೇ ರಕ್ತರೂಪಾದಿಹೇತುದರ್ಶನಾತ್ ।

ದೃಷ್ಟಾನುಸಾರೇಣ ಸ್ವಾಶ್ರಯಹೇತುಸಂಯೋಗಾನಾಮೇವ ರೂಪಾದಿಹೇತುತ್ವಸಂಭವೇ ತಾರ್ಕಿಕಾಣಾಂ ಪರಮಾಣುಷು ರೂಪಕಲ್ಪನಂ ತು ಹೇಯಮ್ । ಸಜಾತೀಯಕಾರಣಗುಣಸ್ಯ ಕಾರ್ಯಗುಣಾರಂಭಕತಾ ಇತಿ ತು ತೇಷಾಮಪಿ ನ ನಿಯಮಃ । ತ್ರಸರೇಣುಮಹತ್ತ್ವಾದಾವವಯವಬಹುತ್ವಾದೇರೇವ ತೈರಪಿ ಹೇತುತ್ವಾಭ್ಯುಪಗಮಾದಿತಿ ದಿಕ್ ।

ಅನುವಾದ: ತಮ್ಮ (ಉತ್ಪತ್ತಿಗೆ) ಕಾರಣವಾದ ದ್ರವ್ಯಗಳಿಗೆ ಹೆಚ್ಚು ಕಡಿಮೆ ಪರಸ್ಪರ ಸಂಯೋಗ–ವಿಶೇಷವೇ ಕಾರಣ. ಅರಿಷಿಣವೇ ಮೊದಲಾದವು ಬೆರೆತಾಗ (ಕೆಲವು) ದ್ರವ್ಯಗಳಲ್ಲಿ ಎರಡೂ ಸೇರಿ ಕೆಂಪುಬಣ್ಣವನ್ನು ಕಾಣುತ್ತೇವೆ. ನಮಗೆ ತಿಳಿದಿರುವಂತೆ ತಮ್ಮ ಉತ್ಪತ್ತಿಗೆ ಕಾರಣವಾದ ವಸ್ತುಗಳು ಸೇರಿದಾಗಲೇ ರೂಪಾದಿಗಳು ಉಂಟಾಗುವ ಸಂಭವವಿರುವಾಗ ತಾರ್ಕಿಕರ ಪರಮಾಣುಗಳಿಂದಾಗುವ ರೂಪದ ಕಲ್ಪನೆಯು ತ್ಯಾಜ್ಯವಾಗುವುದು. ಸಜಾತೀಯ ವಸ್ತುಗಳ ಕಾರಣಗುಣ ಕಾರ್ಯಗುಣಕ್ಕೆ ಕಾರಣ ಎಂಬುದೂ ಅವರ ನಿಯಮವಲ್ಲ. ತ್ರಸರೇಣುಗಳಲ್ಲಿರುವ ಮಹತ್ತ್ವಾದಿಗಳು ಅವಯವಗಳ ಬಹುತ್ವದ ಕಾರಣ ಉಂಟಾಗಿದೆಯೆಂದು ಹೇಳಬಹುದು.

ಭಾಷ್ಯ: *ಇಂದ್ರಿಯಾನುಮಾನಂ ಚಾಕಾಶಾನುಮಾನವದ್ದರ್ಶನ–ವಚನಾದಿಭಿಃ ಪ್ರತ್ಯಕ್ಷಾಭಿಃ ವೃತ್ತಿಭಿರೇವ ಇತಿ ತದತ್ರ ನೋಕ್ತಮ್ । ತತ್ತ್ವಾಂತರೇಣ ತತ್ತ್ವಾಂತರಾನುಮಾ–ನಾನಾಮೇವ ಪ್ರಕೃತತ್ವಾದಿತಿ ನ ನ್ಯೂನತಾ । ತನ್ಮಾತ್ರಾಣಾಂ ಚ ಉತ್ಪತ್ತೌ ಯೋಗಭಾಷ್ಯೋಕ್ತಪ್ರಕ್ರಿಯಾ ಏವ ಗ್ರಾಹ್ಯಾ । ಯಥಾऽಹಂಕಾರಾತ್ ಶಬ್ದತನ್ಮಾತ್ರಮ್ । ತತಶ್ಚ ಅಹಂಕಾರಸಹಕೃತಾಚ್ಛಬ್ದತನ್ಮಾತ್ರಾತ್ ಶಬ್ದಸ್ಪರ್ಶ–ಗುಣಕಂ ಸ್ಪರ್ಶತನ್ಮಾತ್ರಮ್ । ಏವಂ ಕ್ರಮೇಣೈಕೈಕಗುಣ–ವೃದ್ಧ್ಯಾ ತನ್ಮಾತ್ರಾಣಿ ಉತ್ಪದ್ಯಂತ ಇತಿ ।*

ಅನುವಾದ: (ಅತೀಂದ್ರಿಯ) ಇಂದ್ರಿಯಗಳ ಅನುಮಾನವನ್ನು ಇಲ್ಲಿ ಏಕೆ ಹೇಳಲಿಲ್ಲವೆಂದರೆ ಆಕಾಶದ ಅನುಮಾನದಂತೆ ಪ್ರತ್ಯಕ್ಷ ಮತ್ತು ಶಬ್ದಗಳಿಂದ ಪ್ರತ್ಯಕ್ಷವು ಅನುಭವಕ್ಕೆ ಬರುವ ವೃತ್ತಿಗಳಿಂದ ಮಾತ್ರ ಸಾಧ್ಯ; ಒಂದು ತತ್ತ್ವದಿಂದ ಮತ್ತೊಂದು ತತ್ತ್ವಕ್ಕೆ ಹೇಗೆ ಅನುಮಾನದಿಂದ ಹೋಗಬಹುದು ಎಂಬುದು ಇಲ್ಲಿ ಪ್ರಕೃತ; ಆದ್ದರಿಂದ ಇದರಲ್ಲಿ ನ್ಯೂನತೆಯೇನಿಲ್ಲ. ತನ್ಮಾತ್ರಗಳ ಉತ್ಪತ್ತಿಯಲ್ಲಿ ಯೋಗಭಾಷ್ಯದಲ್ಲಿ ಹೇಳಿದ ಪ್ರಕ್ರಿಯೆಯ ಮುಖಾಂತರವೇ ತಿಳಿಯಬೇಕು. ಹೇಗೆಂದರೆ ಅಹಂಕಾರದಿಂದ ಶಬ್ದತನ್ಮಾತ್ರವನ್ನು ತಿಳಿಯುವುದು. ಅನಂತರ ಅಹಂಕಾರದೊಡನೆ ಇರುವ ಶಬ್ದತನ್ಮಾತ್ರದಿಂದ ಶಬ್ದ, ಸಪರ್ಶಗಳ ಗುಣಗಳುಳ್ಳ ಸ್ಪರ್ಶತನ್ಮಾತ್ರ ಉತ್ಪನ್ನವಾಗುವುದು. ಹೀಗೆ ಒಂದೊಂದು ಗುಣದ ವೃದ್ಧಿಯಾದಂತೆಲ್ಲ ತನ್ಮಾತ್ರಗಳು ಉತ್ಪತ್ತಿಯಾಗುತ್ತವೆ.

ಭಾಷ್ಯ: *ಯಾ ತು–*

ಆಕಾಶಸ್ತು ವಿಕುರ್ವಾಣಃ ಸ್ಪರ್ಶಮಾತ್ರಂಸಸರ್ಜ ಹ ।
ಬಲವಾನಭವದ್ವಾಯುಃ ತತಃಸ್ಪರ್ಶೋ ಗುಣೋ ಮತಃ ॥ ವಿ.ಪು. ೧.೨.೩೮
ಇತ್ಯಾದಿನಾ ವಿಷ್ಣುಪುರಾಣೇ ಸ್ಪರ್ಶಾದಿತನ್ಮಾತ್ರಸೃಷ್ಟಿಃ ಆಕಾಶಾದಿಸ್ಥೂಲಭೂತಚತುಷ್ಟಯಾದುಕ್ತಃ । ಸಾ ಭೂತ–ರೂಪೇಣ ಪರಿಣಮನರೂಪೈವ ಮಂತವ್ಯಾ । ಆಕಾಶಾದೀನಿ ಜಲಾಂತಾನಿ ಹಿ ಸ್ಥೂಲಭೂತಾನಿ ಸ್ವಸ್ವೋತ್ತರಭೂತರೂಪೇಣ ಸ್ವಾನುಗತತನ್ಮಾತ್ರಾಃ ಸ್ವೋಪಷ್ಟಂಭತಃ ಪರಿಣಮಯಂತೀತಿ ।

ಅನುವಾದ: ಅದರರ್ಥ ಹೀಗಿದೆ–

ಆಕಾಶವನ್ನು ಪರಿಣಮಿಸುವಾಗ ಸ್ಪರ್ಶಮಾತ್ರವನ್ನು (ದೇವರು) ಸೃಷ್ಟಿಸಿದ. ವಾಯು ಬಲಗೊಂಡು ಅನಂತರ ಸ್ಪರ್ಶಗುಣವು ಉಂಟಾಯಿತು.

ವಿವರಣೆ: ಸ್ಪರ್ಶ ಮಾತ್ರ ಎಂದರೆ ಸ್ಪರ್ಶತನ್ಮಾತ್ರ.

ಅನುವಾದ: ಹೀಗೆ ವಿಷ್ಣುಪುರಾಣದಲ್ಲಿ ಸ್ಪರ್ಶಾದಿತನ್ಮಾತ್ರ ಸೃಷ್ಟಿಯು ಆಕಾಶಾದಿ ನಾಲ್ಕು ಸ್ಥೂಲಭೂತಗಳಿಂದ ಉಂಟಾಯಿತೆಂದು ಹೇಳಿದೆ. ಅದು ಭೂತರೂಪದಿಂದಲೇ ಪರಿಣಾಮಗೊಂಡ ರೂಪವೆಂದು ತಿಳಿಯಬೇಕು. ಆಕಾಶಾದಿಯಾಗಿ ನೀರಿನವರೆಗೆ ಇರುವ ಸ್ಥೂಲಭೂತಗಳು ತಮ್ಮೊಡನಿರುವ ತನ್ಮಾತ್ರಗಳನ್ನು ತಮ್ಮ ಮುಂದಿನ ಭೂತ ರೂಪವಾಗಿ ತಮ್ಮ ಪ್ರಾಬಲ್ಯದಿಂದ ಪರಿಣಾಮಕ್ಕೀಡು ಮಾಡುತ್ತವೆ.

ಸೂತ್ರ: ಬಾಹ್ಯಾಭ್ಯಂತರಾಭ್ಯಾಂ ತೈಶ್ಚಾಹಂಕಾರಸ್ಯ ॥ ೬೩ ॥

ಅನುವಾದ: ಹೊರಗಿನ ಮತ್ತು ಒಳಗಿನ (ಇಂದ್ರಿಯಗಳಿಂದ) ಮತ್ತು ತನ್ಮಾತ್ರಗಳಿಂದಲೂ ಅಹಂಕಾರವನ್ನು ಊಹಿಸಬಹುದು.

ಭಾಷ್ಯ: *ಬಾಹ್ಯಾಭ್ಯಂತರಾಭ್ಯಾಂ ಇಂದ್ರಿಯಾಭ್ಯಾಂ ತೈಃ ಪಂಚತನ್ಮಾತ್ರೈಶ್ಚ ಕಾರ್ಯೈಃ ತತ್ಕಾರಣತಯಾ ಅಹಂಕಾರಸ್ಯ ಅನುಮಾನೇನ ಬೋಧಃ ಇತಿ । ಅಹಂಕಾರಶ್ಚಾಭಿಮಾನವೃತ್ತಿಕಮಂತಃಕರಣದ್ರವ್ಯಂ ನ ತ್ವಭಿಮಾನಮಾತ್ರಂ ದ್ರವ್ಯಸ್ಯೈವ ಲೋಕೇ ದ್ರವ್ಯೋಪಾದಾನತ್ವದರ್ಶನಾತ್ ಸುಷುಪ್ತ್ಯಾದೌ ಅಹಂಕಾರವೃತ್ತಿ–ನಾಶೇನ ಭೂತನಾಶಪ್ರಸಂಗಾತ್ ವಾಸನಾಶ್ರಯತ್ವೇನ ಏವ ಅಹಂಕಾರಾಖ್ಯದ್ರವ್ಯಸಿದ್ಧೇಶ್ಚೇತಿ । ಅತ್ರ ಇತ್ಥಂ ಅನುಮಾನಮ್ ತನ್ಮಾತ್ರೇಂದ್ರಿಯಾಣಿ ಅಭಿಮಾನವತ್ ದ್ರವ್ಯೋಪಾದಾನಕಾನಿ ಅಭಿಮಾನಿಕಾರ್ಯದ್ರವ್ಯತ್ವಾತ್, ಯನ್ನೈವಂ ತನ್ನೈವಂ ಯಥಾ ಪುರುಷಾದಿರಿತಿ ।*

ಅನುವಾದ: ಬಾಹ್ಯ ಮತ್ತು ಆಭ್ಯಂತರ ಇಂದ್ರಿಯಗಳಿಂದಲೂ, ಮತ್ತು ತನ್ಮಾತ್ರರೂಪ ಕಾರ್ಯಗಳಿಂದಲೂ ಅವುಗಳಿಗೆ ಕಾರಣರೂಪವಾದ ಅಹಂಕಾರದ ಬೋಧವಾಗುತ್ತದೆ, ಅನುಮಾನದಿಂದ ಅಹಂಕಾರವೂ ಸಹ ಅಭಿಮಾನ ವೃತ್ತಿಯುಳ್ಳ ಅಂತಃಕರಣ ದ್ರವ್ಯ. ಕೇವಲ ಅಭಿಮಾನವನ್ನಷ್ಟೇ ಅಹಂಕಾರ ಎನ್ನುವುದಿಲ್ಲ. ಲೋಕದಲ್ಲಿ ದ್ರವ್ಯದ ಉಪಾದಾನ ಕಾರಣವಾಗಿ ದ್ರವ್ಯವೇ ಇರಲು ಸಾಧ್ಯ ಎಂಬುದನ್ನು ನೋಡಿದ್ದೇವೆ. ಸುಷುಪ್ತಿ ಮುಂತಾದ ಅವಸ್ಥೆಗಳಲ್ಲಿ ಅಹಂಕಾರವೃತ್ತಿಯು ನಾಶವಾಗುವುದರಿಂದ ಭೂತಗಳ ವಿನಾಶವೂ ಉಂಟಾಗುವುದು; ಆದ್ದರಿಂದ 'ವಾಸನಾ'ವನ್ನು ಆಶ್ರಯಿಸುವುದರಿಂದಲೇ ಅಹಂಕಾರ ದ್ರವ್ಯದ ಸಿದ್ಧಿಯಾಗುವುದು.

ಇಲ್ಲಿ ಹೀಗೆ ಅನುಮಾನ ಮಾಡಲಾಗಿದೆ. ತನ್ಮಾತ್ರಗಳೂ ಮತ್ತು ಇಂದ್ರಿಯಗಳೂ ಅಭಿಮಾನ ವಿಶಿಷ್ಟವಾದ ದ್ರವ್ಯದಿಂದ ಹುಟ್ಟುತ್ತವೆ. ಯಾವುದು ಹಾಗಿಲ್ಲವೋ ಅದು ಆ ರೀತಿಯಾಗಲಾರದು. ಉದಾಹರಣೆಗೆ ಪುರುಷಾದಿಗಳು.

ವಿವರಣೆ: 'ಅಭಿಮಾನೋಽಹಂಕಾರಃ' ಎಂಬ ಉಕ್ತಿ ಸಾಂಖ್ಯಕಾರಿಕೆಯ ೨೪ನೆಯ ಕಾರಿಕೆಯಲ್ಲಿ ಬರುತ್ತದೆ. ಅದು ತನ್ಮಾತ್ರಗಳಿಗೂ ಇಂದ್ರಿಯಗಳಿಗೂ ಉಪಾದಾನಕಾರಕ ಸುಷುಪ್ತಿಯಲ್ಲಿ ಅಹಂಕಾರವು ಇರದ ಕಾರಣ ಭೂತಗಳು ನಾಶವಾಗಬಹುದಾದ್ದರಿಂದ ಅಹಂಕಾರವು ಸಂಸ್ಕಾರವನ್ನು ಆಶ್ರಯಿಸಿರುತ್ತದೆ.

ಭಾಷ್ಯ: *ನನು ಅಭಿಮಾನವದ್ ದ್ರವ್ಯಮೇವ ಅಸಿದ್ಧಮಿತಿ ಚೇತ್ ।*

ಅನುವಾದ: ಅಭಿಮಾನವೆಂಬ ದ್ರವ್ಯವೇ ಸಿದ್ಧವಿಲ್ಲದಿರುವಾಗ ಅನುಮಾನದ ಪ್ರಯೋಗಕ್ಕೆ ಅವಕಾಶವೆಲ್ಲಿ?

ಭಾಷ್ಯ: *ಅಹಂ ಗೌರ ಇತ್ಯಾದಿವೃತ್ತ್ಯುಪಾದಾನತಯಾ ಚಕ್ಷುರಾದಿವತ್ ತತ್ಸಿದ್ಧೇಃ । ಅನೇನ ಚಾನುಮಾನೇನ ಮನ ಆದ್ಯತಿರೇಕಮಾತ್ರಸ್ಯ ತತ್ಕಾರಣತಯಾ ಪ್ರಸಾಧ್ಯತ್ವಾತ್ । ಅತ್ರ ಚಾಯಮನುಕೂಲ- ತರ್ಕಃ । 'ಬಹುಸ್ಯಾಂ ಪ್ರಜಾಯೇಯೇತಿ' (ಛಾಂ. ೬.೨.೩) ಇತ್ಯಾದಿ ಶ್ರುತಿಸ್ಮೃತಿಭ್ಯಸ್ತಾವತ್ ಭೂತಾದಿಸೃಷ್ಟೇಃ ಅಭಿಮಾನ- ಪೂರ್ವಕತ್ವಾತ್ ಬುದ್ಧಿವೃತ್ತಿಪೂರ್ವಕಸೃಷ್ಟೌಕಾರಣತಯಾ ಅಭಿಮಾನಃ ಸಿದ್ಧಃ ।*

ಅನುವಾದ: 'ನಾನು ಬೆಳ್ಳಗಿದ್ದೇನೆ' ಮುಂತಾದ ಬದಲಾವಣೆಗಳಿಗೆ ಆಧಾರವಾದ ಬಣ್ಣಕ್ಕೆ ಕಣ್ಣುಗಳೇ ಮೊದಲಾದವುಗಳು ಇರುವಂತೆ ಅಭಿಮಾನವುಳ್ಳ ದ್ರವ್ಯವನ್ನು ತಿಳಿಸಲಾಗಿದೆ. ಈ ಮೇಲೆ ಹೇಳಿದ ಅನುಮಾನದಿಂದ ಮನಸ್ಸೇ ಮೊದಲಾದವುಗಳಿಂದ ಭಿನ್ನವಾದ ಕಾರಣವೆಂದು ಸಿದ್ಧಮಾಡಬೇಕಾಗಿದೆ. ಇಲ್ಲಿ ಅನುಕೂಲ ತರ್ಕವೊಂದಿದೆ. 'ನಾನು ಅನೇಕವಾಗುತ್ತೇನೆ, ನಾನು ಸಂತತಿಯನ್ನು ಪಡೆಯುವೆ' ಮುಂತಾಗಿ ಶ್ರುತಿಸ್ಮೃತಿಗಳಿಂದ ಭೂತಾದಿಗಳ ಸೃಷ್ಟಿಯು ಅಭಿಮಾನದೊಡನೆಯೇ ಆಗುತ್ತದೆ. ಆದ್ದರಿಂದ ಬುದ್ಧಿಯಿಂದ ಸೃಷ್ಟಿಯೇ ಅಭಿಮಾನಕ್ಕೆ ಕಾರಣವೆಂಬುದು ಸಿದ್ಧವಾಗುತ್ತದೆ.

ಭಾಷ್ಯ: *ತತ್ರ ಚ ಏಕಾರ್ಥ ಪ್ರತ್ಯಾಸತ್ತ್ಯೈವಾಭಿಮಾನಸ್ಯ–*
ಸೃಷ್ಟಿಹೇತುತ್ವಂ ಲಾಘವಾತ್ ಕಲ್ಪ್ಯತೇ ಇತಿ ।

ಅನುವಾದ: ಆದ್ದರಿಂದ ಸುಲಭವಾಗಿ ಅರ್ಥವಾಗುವಂತೆ ಒಂದೇ ವಸ್ತುವಿನ ಸಾಮೀಪ್ಯದಿಂದ ಅಭಿಮಾನದ ಸೃಷ್ಟಿಗೆ ಕಾರಣವನ್ನು ಕಲ್ಪಿಸಲಾಗಿದೆ.

ಭಾಷ್ಯ: *ನನ್ವೇವಂ ಕುಲಾಲಾಹಂಕಾರಸ್ಯಾಪಿ ಘಟೋಪಾದಾನತ್ವಾಪತ್ತ್ಯಾ*
ಕುಲಾಲಮುಕ್ತೌ ತದಂತಃಕರಣನಾಶೇ ತನ್ನಿರ್ಮಿತಘಟನಾಶಃ ಸ್ಯಾತ್ ।

ಅನುವಾದ: ಹಾಗಾದರೆ ಕುಂಬಾರನ ಅಹಂಕಾರವೂ ಸಹ ಗಡಿಗೆಯನ್ನು ನಿರ್ಮಿಸುವ ಉಪಾದಾನವಾಗುವ ಸಂದರ್ಭದಲ್ಲಿ ಅವನಿಗೆ ಮುಕ್ತಿ ದೊರೆತಲ್ಲಿ ಅವನ ಅಂತಃಕರಣವು ನಾಶವಾಗುವಾಗ ಅವನು ನಿರ್ಮಿಸಿದ ಘಟವೂ ಏಕೆ ನಾಶವಾಗಬಾರದು?

ಭಾಷ್ಯ: *ನ ಚೈತದ್ಯುಕ್ತಮ್, ಪುರುಷಾಂತರೇಣ ಸ ಏವ ಘಟ*
ಇತಿ ಪ್ರತ್ಯಭಿಜ್ಞಾಯಮಾನತ್ವಾದಿತಿ । ಮೈವಮ್ ।
ಮುಕ್ತಪುರುಷಭೋಗಹೇತುಪರಿಣಾಮಸ್ಯೈವ ತದಂತಃ–
ಕರಣಮೋಕ್ಷೋತ್ತರಮುಚ್ಛೇದಾತ್, ನ ತು ಪರಿಣಾಮ–
ಸಾಮಾನ್ಯಸ್ಯ ಅಂತಃಕರಣಸ್ವರೂಪಸ್ಯ ಏವ ಉಚ್ಛೇದಃ ।
'ಕೃತಾರ್ಥಂ ಪ್ರತಿನಷ್ಟಮಪ್ಯನಷ್ಟಂ ತದನ್ಯಸಾಧಾರಣತ್ವಾತ್' (೨.೨೨)
ಇತಿ ಯೋಗಸೂತ್ರೇ ಮುಕ್ತಪುರುಷೋಪಕರಣಸ್ಯಾಪಿ
ಅನ್ಯ ಪುರುಷಾರ್ಥಸಾಧಕತ್ವಾಸಿದ್ಧೇಃ ಇತಿ । ಅಥವಾ
ಘಟಾದಿಷ್ವಪಿ ಹಿರಣ್ಯಗರ್ಭಾಹಂಕಾರ ಏವ ಕಾರಣಮಸ್ತು
ನ ಕುಲಾಲಾದಿ ಅಹಂಕಾರಸ್ತಥಾಪಿ ಸಾಮಾನ್ಯವ್ಯಾಪ್ತೌ ನ
ವ್ಯಭಿಚಾರಃ । ಸಮಷ್ಟಿಬುದ್ಧ್ಯಾದಿ ಉಪಾದಾನಿಕ ಏವಂ
ಹಿ ಸೃಷ್ಟಿಃ ಪುರಾಣಾದಿಷು ಸಾಂಖ್ಯಯೋಗಯೋಶ್ಚ
ಪ್ರತಿಪಾದ್ಯತೇ, ನ ತು ತದಂಶವ್ಯಷ್ಟಿಬುದ್ಧ್ಯಾದ್ಯುಪಾದಾನಿಕಾ ।
ಯಥಾ ಮಹಾಪೃಥಿವ್ಯಾ ಏವ ಸ್ಥಾವರಜಂಗಮಾದಿ ಉಪಾದಾನತ್ವಂ
ನ ತು ಪೃಥಿವ್ಯಂಶಲೋಷ್ಠಾದೇರಿತಿ ।

ಅನುವಾದ: ಈ ಸಂದೇಹ ಸರಿಯಲ್ಲ. ಏಕೆಂದರೆ, ಬೇರೆಯ ಪುರುಷನಿಗೆ ಈ ಗಡಿಗೆ ಅದೇ ಎಂದು ನೆನಪು ಮೂಡುವುದರಿಂದ. ಹಾಗಲ್ಲ(ವೆಂದರೆ); ಮುಕ್ತಪುರುಷನ ಭೋಗಕ್ಕೆ ಕಾರಣವಾದ ಪರಿಣಾಮವಷ್ಟೇ ಆಗುವುದು (ಏಕೆಂದರೆ) ಮುಕ್ತಪುರುಷನ ಅಂತಃಕರಣವು ಮೋಕ್ಷದ ನಂತರ (ಅದರಿಂದ) ನಾಶವಾಗಿ ಹೋಗುವುದು; ಆದರೆ ಸಾಮಾನ್ಯವಾಗಿ ಪರಿಣಾಮಗೊಳ್ಳುವ ಅಂತಃಕರಣ ಸ್ವರೂಪದ ಉಚ್ಛೇದವಲ್ಲ. 'ಕೃತಾರ್ಥನಾದವನ ದೃಷ್ಟಿಯಲ್ಲಿ ಅದು ನಷ್ಟವಾದರೂ ಇತರ ಎಲ್ಲರಿಗೂ ಸಾಧಾರಣವಾದ ಅಂತಃಕರಣ ಸ್ವರೂಪದ ನಾಶ ಉಂಟಾಗದು' ಎಂಬ ಯೋಗಸೂತ್ರದಲ್ಲಿ 'ಮುಕ್ತಪುರುಷನ ಉಪಕರಣಗಳು ಇತರ ಪುರುಷರ ಸಾಧನೆಗೆ

ಉಪಯೋಗವಾಗುತ್ತವೆ ಎಂದು ತಿಳಿಸಲಾಗಿದೆ. ಅಥವಾ 'ಘಟಾದಿಗಳಲ್ಲಿಯೂ ಸಹ ಹಿರಣ್ಯಗರ್ಭನ ಅಹಂಕಾರವಾದರೂ ಆಗಿರಬಹುದು. ಆದರೆ ಕುಂಬಾರನೇ ಮುಂತಾದವರ ಅಹಂಕಾರವಂತೂ ಅಲ್ಲ ಎಂದುಕೊಂಡರೂ ಸಾಮಾನ್ಯ ವ್ಯಾಪ್ತಿಯಲ್ಲಿ ವ್ಯಭಿಚಾರವೇನೂ ಇಲ್ಲ. ಪುರಾಣಗಳಲ್ಲಿ ಮತ್ತು ಸಾಂಖ್ಯ-ಯೋಗಗಳಲ್ಲಿಯೂ ಸಂಪೂರ್ಣವಾಗಿ ಬುದ್ಧಿಯೇ ಮೊದಲಾದುವು ಸೃಷ್ಟಿಗೆ ಉಪಾದಾನಕಾರಣವೆಂದು ಪ್ರತಿಪಾದಿಸಲ್ಪಟ್ಟಿದೆ. ಆದರೆ ವಿಭಜಿತ ಬುದ್ಧಿಯ ಅಂಶಗಳು ಉಪಾದಾನವಾಗ ಲಾರವು. ಸ್ಥಾವರ-ಜಂಗಮಾದಿಗಳು ಮಹಾಪೃಥಿವಿಯ ಉತ್ಪನ್ನಗಳೇ ಹೊರತು ಭೂಮಿಯ ಅಂಶಗಳಾದ ಮಣ್ಣಿನ ಹೆಂಟೆ ಮುಂತಾದುವುಗಳು ಉಪಾದಾನ ಕಾರಣವೆಂದು ಹೇಳಿಲ್ಲ.

ಸೂತ್ರ: ತೇನಾಂತಃಕರಣಸ್ಯ ॥ ೬೪ ॥

ಅನುವಾದ: ಅದರಿಂದ (ಅಹಂಕಾರದಿಂದ) ಅಂತಃಕರಣದ (ಅನುಮಾನ ಮೂಡಬಹುದು).

ಭಾಷ್ಯ: *ತೇನಾಹಂಕಾರೇಣ ಕಾರ್ಯೇಣ ತತ್ಕಾರಣತಯಾ ಮೂಲ್ಯಸ್ಯಾಂತಃಕರಣಸ್ಯ ಮಹದಾಖ್ಯಬುದ್ಧೇಃ ಅನುಮಾನೇನ ಬೋಧಃ ಇತ್ಯರ್ಥಃ । ಅತ್ರಾಪ್ಯಯಂ ಪ್ರಯೋಗಃ । ಅಹಂಕಾರದ್ರವ್ಯಂ ನಿಶ್ಚಯವೃತ್ತಿಮದ್ ದ್ರವ್ಯೋಪಾದಾನಕಂ ನಿಶ್ಚಯಕಾರ್ಯದ್ರವ್ಯತ್ವಾತ್, ಯನ್ನೈವಮ್ ತನ್ನೈವಮ್ ಯಥಾ ಪುರುಷಾದಿರಿತಿ ।*

ಅನುವಾದ: ಆ ಅಹಂಕಾರದ ಕಾರ್ಯದಿಂದ ಅದೇ ಕಾರಣವಾಗಿ ಅಂತಃಕರಣದ ಮಹತ್ತೆಂಬ ಬುದ್ಧಿಯು ಅನುಮಾನದಿಂದ ತಿಳಿದುಬರುತ್ತದೆ. (ಅನುಮಾನದ) ಪ್ರಯೋಗವನ್ನು ಹೀಗೆ ಮಾಡಬಹುದು-

ಅಹಂಕಾರ ದ್ರವ್ಯವು ನಿಶ್ಚಯವೃತ್ತಿಯುಳ್ಳ ದ್ರವ್ಯಕ್ಕೆ ಉಪಪಾದಕವಾಗಿರುತ್ತದೆ. ಏಕೆಂದರೆ ಅದೂ ನಿಶ್ಚಯದಿಂದ ಉಂಟಾದದ್ದು. ಅದಿಲ್ಲದಿದ್ದರೆ ಇದೂ ಇಲ್ಲ. ಪುರುಷನೇ ಮುಂತಾದುವುಗಳಿರುವಂತೆ-

ಭಾಷ್ಯ: *ಅತ್ರಾಪ್ಯಯಂ ತರ್ಕಃ । ಸರ್ವೋಽಪಿಲೋಕಃ ಪದಾರ್ಥಂ ಆದೌ ಸ್ವರೂಪತಃ ನಿಶ್ಚಿತ್ಯ ಪಶ್ಚಾದಭಿಮನ್ಯತೇ ಅಯಮಹಂ, ಮಯೇದಂ ಕರ್ತವ್ಯಂ ಇತ್ಯಾದಿರೂಪೇಣ ಇತಿ ತಾವತ್ ಸಿದ್ಧಮೇವ । ತತ್ರಾಹಂಕಾರದ್ರವ್ಯಕಾರಣಾಕಾಂಕ್ಷಾಯಾಂ ವೃತ್ತ್ಯೋಃ ಕಾರ್ಯಕಾರಣಭಾವೇನ ತದಾಶ್ರಯಯೋರೇವ ಕಾರ್ಯ-ಕಾರಣಭಾವಃ ಲಾಘವಾತ್ ಕಲ್ಪ್ಯತೇ । ಕಾರಣಸ್ಯ ವೃತ್ತಿಲಾಭೇನ ಕಾರ್ಯವೃತ್ತಿಲಾಭಸ್ಯ ಔತ್ಸರ್ಗಿಕತ್ವಾತ್ ಇತಿ । ಶ್ರುತಾವಪಿ- 'ಸ ಈಕ್ಷಾಂಚಕ್ರೇ' (ಬೃ. ೧.೪.೨) ತದೈಕ್ಷತ (ಛಾಂ. ೬.೨೩) ಇತ್ಯಾದೌ ಸರ್ಗಾದ್ಯುತ್ಪನ್ನಬುದ್ಧಿತ ಏವ ತದಿತರಾಖಿಲಸೃಷ್ಟಿಃ ಅವಗಮ್ಯತೇ ಇತಿ ।*

ಅನುವಾದ: ಈ ವಿಷಯದಲ್ಲಿ ಹೀಗೆ ತರ್ಕವುಂಟು– ಜಗತ್ತಿನಲ್ಲಿ ಎಲ್ಲರೂ ಪದಾರ್ಥವನ್ನು ಮೊದಲು ಸ್ವರೂಪದಿಂದ ನಿಶ್ಚಯಿಸಿ, ಅನಂತರ 'ಇದೋ ನಾನು, ಈ ಕೆಲಸ ನನ್ನಿಂದ ಆಗಬೇಕು' ಮುಂತಾಗಿ ನಿರ್ಧರಿಸುತ್ತಾರೆ. ಇಲ್ಲಿ ಅಹಂಕಾರ ದ್ರವ್ಯಕ್ಕೆ ಕಾರಣದ ಆಕಾಂಕ್ಷೆಯಲ್ಲಿ ಎರಡು ವೃತ್ತಿಗಳ ಕಾರ್ಯಕಾರಣಭಾವದಿಂದ ಅವುಗಳಿಗೆ ಆಶ್ರಯಗಳಲ್ಲಿಯೂ ಕಾರ್ಯಕಾರಣಭಾವವನ್ನು ಕಲ್ಪನೆ ಮಾಡುವುದು ಸುಲಭ. ಶ್ರುತಿಯಲ್ಲಿಯೂ ಸಹ 'ಸ ಈಕ್ಷಾಂಚಕ್ರೇ', 'ಅವನು ಸುತ್ತಲೂ ನೋಡಿದನು', 'ತದೈಕ್ಷತ' 'ಅದು ನೋಡಿತು' ಮುಂತಾಗಿರುವುದರಿಂದ ಸೃಷ್ಟಿಯ ಆರಂಭದಲ್ಲಿ ಉಂಟಾದ ಬುದ್ಧಿಯಿಂದಲೇ ಸಮಸ್ತ ಸೃಷ್ಟಿಯ ಆರಂಭವಾಯಿತೆಂದು ತಿಳಿಯಬೇಕು.

ವಿವರಣೆ: ಇಲ್ಲಿ ಎರಡು ವೃತ್ತಿಗಳೆಂದರೆ ಅಹಂಕಾರ ಮತ್ತು ನಿಶ್ಚಯ ವೃತ್ತಿಗಳು. ಇವುಗಳಿಗೆ ಆಶ್ರಯಗಳಾದ ಅಭಿಮಾನ ಮತ್ತು ನಿಶ್ಚಯಗಳಿಗೆ ಕಾರ್ಯಕಾರಣ ಭಾವವನ್ನು ತಿಳಿಯುವುದು ಸುಲಭ.

ಭಾಷ್ಯ: *ಯದ್ಯಪಿ ಏಕಮೇವಾಂತಃಕರಣಂ ವೃತ್ತಿಭೇದೇನ ತ್ರಿವಿಧಂ ಲಾಘವಾತ್ ।*

ಅನುವಾದ: ಯದ್ಯಪಿ ಒಂದೇ ಅಂತಃಕರಣವಿದ್ದರೂ ವೃತ್ತಿಭೇದದಿಂದ ಮೂರು ಬಗೆಯೆಂದು ತಿಳಿಯುವುದು ಸುಲಭ.

ಭಾಷ್ಯ: *ಗುಣಕ್ಷೋಭೇ ಜಾಯಮಾನೇ ಮಹಾನ್ ಪ್ರಾದುರ್ಬಭೂವ ಹ ।*
ಮನೋ ಮಹಾಂಶ್ಚ ವಿಜ್ಞೇಯ ಏಕತದ್ ವೃತ್ತಿಭೇದತಃ ॥ ಇತಿ ಲೈಂಗಾತ್

ಅನುವಾದ: ಗುಣಗಳಲ್ಲಿ ಕ್ಷೋಭವುಂಟಾಗಿ 'ಮಹತ್ ತತ್ತ್ವ'ವು ಹುಟ್ಟಿತು. ಮನವೂ ಮಹತ್ತೆಂದೇ ತಿಳಿಯಬೇಕು. ಮಹತ್ತು ಒಂದೇ ಆದರೂ ವೃತ್ತಿಗಳು ಬೇರೆ ಬೇರೆಯಾಗಿ ಆಗುತ್ತವೆ. ಹೀಗೆಂದು ಲಿಂಗಪುರಾಣವು ಹೇಳುತ್ತದೆ.

ಭಾಷ್ಯ: *'ಪಂಚವೃತ್ತಿರ್ಮನೋವತ್ ವ್ಯಪದಿಶ್ಯತ' ಇತಿ ವೇದಾಂತಸೂತ್ರೇಣ ಪ್ರಾಣದೃಷ್ಟಾಂತವಿಧಯಾ ಮನಸೋಽಪಿ ವೃತ್ತಿಮಾತ್ರಭೇದೇನ ಬಹುತ್ವ ಸಿದ್ದೇಶ್ಚ । ಅನ್ಯಥಾ ನಿಶ್ಚಯಾದಿವೃತ್ತಿಭಿರಿವ ಭ್ರಮಸಂಶಯನಿದ್ರಾಕ್ರೋಧಾದಿವೃತ್ತಿಃ ಅಪಿ ಸ್ವಸಮಸಂಖ್ಯಾತಾಂತಃಕರಣಾಪತ್ತೇಃ । ಬುದ್ಧ್ಯಾದಿಷು ಅವ್ಯವಸ್ಥಯಾ ಮನ ಆದಿ ಪ್ರಯೋಗಸ್ಯ ಪಾತಂಜಲಾದಿ– ಸರ್ವಶಾಸ್ತ್ರೇಷು ಅನುಪಪತ್ತೇಶ್ಚ ।*

ಅನುವಾದ: 'ಮುಖ್ಯಪ್ರಾಣವು ಮನಸ್ಸಿನಂತೆ ಐದು ವೃತ್ತಿಗಳನ್ನು ಹೊಂದಿದೆಯೆಂದು ಹೇಳಲ್ಪಟ್ಟಿದೆ. (ಬ್ರ.ಸೂ. ೨.೪.೧೨) ಎಂಬ ವೇದಾಂತ ಸೂತ್ರದಂತೆ ಪ್ರಾಣದ ದೃಷ್ಟಾಂತದ ವಿಧದಿಂದ ಮನಸ್ಸಿನಲ್ಲಿಯೂ ವೃತ್ತಿಮಾತ್ರದಲ್ಲಿ ಬಹುವಿಧತ್ವವನ್ನು ಹೇಳಿದೆ. ಹಾಗಿಲ್ಲದಿದ್ದಲ್ಲಿ ನಿಶ್ಚಯಾದಿ ವೃತ್ತಿಗಳಿಂದೆಂಬಂತೆ ಭ್ರಮೆ, ಸಂಶಯ, ನಿದ್ರೆ, ಕ್ರೋಧಾದಿ ವೃತ್ತಿಗಳಿಂದಲೂ ಪ್ರತಿಯೊಂದಕ್ಕೂ ಸಮನಾಗಿ ಅನಂತ ಅಂತಃಕರಣಗಳನ್ನು ಹೇಳಬೇಕಾಗಿ ಬರುತ್ತದೆ. ಬುದ್ಧಿಯೇ ಮುಂತಾದುವುಗಳಲ್ಲಿ

ಅವ್ಯವಸ್ಥೆಯುಂಟಾಗಿ ಮನಸ್ಸೇ ಮೊದಲಾದುವುಗಳ ಪ್ರಯೋಗಗಳು ಪತಂಜಲಿಯೇ ಮುಂತಾದವರ ಶಾಸ್ತ್ರಗಳಲ್ಲಿ ದೊರೆಯದಂತಾಗುವುದು.

ವಿವರಣೆ: ಪ್ರಾಣಾದಿಗಳಂತೆ ಮನಸ್ಸಿನಲ್ಲಿಯೂ ವೃತ್ತಿಮಾತ್ರದಲ್ಲಿ ಬಹುತ್ವವಿದೆಯೇ ಹೊರತು ನಿಶ್ಚಯಾದಿಗಳಲ್ಲಲ್ಲ.

ಭಾಷ್ಯ: *ತಥಾಪಿ ವಂಶಪರ್ವಸು ಇವ ಅವಾಂತರಭೇದಮಾಶ್ರಿತ್ಯ ಅಂತಃಕರಣತ್ರಯೇ ಕ್ರಮಃ ಕಾರ್ಯಕಾರಣಭಾವಶ್ಚೋಕ್ತಃ ಯೋಗೋಪಯೋಗಿಶ್ರುತಿಸ್ಮೃತಿಪರಿಭಾಷಾನುಸಾರಾದಿತಿ ಮಂತವ್ಯಮ್ ।*

ಅನುವಾದ: ಆದರೂ ಬಿದಿರಿನ ಗಂಟುಗಳಂತೆ ನಡುವಿನ ಭೇದಗಳನ್ನು ಒಪ್ಪಿ ಅಂತಃಕರಣತ್ರಯದಲ್ಲಿ ಕ್ರಮವೂ ಕಾರ್ಯಕಾರಣಭಾವವೂ ಉಕ್ತವಾಗಿವೆ; ಇವು ಯೋಗೋಪಯೋಗವಾದ ಶ್ರುತಿ ಸ್ಮೃತಿಗಳ ಪರಿಭಾಷೆಗೆ ಅನುಸಾರವಾಗಿವೆ ಎಂದು ತಿಳಿಯಬೇಕು.

ಭಾಷ್ಯ: *ತದುಕ್ತಂ (ಯೋಗ)ವಾಸಿಷ್ಠೇ–*

ಅಹಮರ್ಥೋದಯೋ ಯೋಽಯಂ ಚಿತ್ತಾತ್ಮಾ ವೇದನಾತ್ಮಕಃ ।
ಏತಚ್ಚಿತ್ತದ್ರುಮಸ್ಯಾಸ್ಯ ಬೀಜಂ ವಿದ್ಧಿ ಮಹಾಮತೇ ॥
ಏತಸ್ಮಾತ್ ಪ್ರಥಮೋದ್ಭಿನ್ನಾದಂಕುರೋಽಭಿನವಾಕೃತಿಃ ।
ನಿಶ್ಚಯಾತ್ಮಾ ನಿರಾಕಾರೋ ಬುದ್ಧಿರಿತ್ಯಭಿಧೀಯತೇ ॥
ಅಸ್ಯ ಬುದ್ಧ್ಯಪಧಾನಸ್ಯ ಯಾಂಕುರಸ್ಯ ಪ್ರಪೀನತಾ ।
ಸಂಕಲ್ಪರೂಪಿಣೀ ತಸ್ಯಾಶ್ಚಿತ್ತಂ ಚೇತೋಮನೋಽಭಿದಾ ॥

ಅನುವಾದ: ಚಿತ್ತರೂಪವಾದ ವೇದನಾತ್ಮಕವಾದ 'ಅಹಮರ್ಥ'ವ ಉದಯವು ಚಿತ್ತರೂಪದ ವೃಕ್ಷದ ಬೀಜವೆಂದು ತಿಳಿ. ಇದರಿಂದ ಮೊದಲು ಬಿರಿದ ಮೊಳಕೆಯು ಹೊಸ ರೂಪ ನಿಶ್ಚಯರೂಪವಾದ ಆಕಾರವಿಲ್ಲದ ಬುದ್ಧಿ ಎನ್ನುವರು. ಇದರಿಂದ ಮೊದಲನೆಯದಾಗಿ ಹುಟ್ಟುವ ಮೊಳಕೆಯು ನಿಶ್ಚಯಾತ್ಮಕವಾದ ಮತ್ತು ಆಕಾರರಹಿತವಾದ ಬುದ್ಧಿಯೆಂದು ಹೇಳುವರು. ಈ ಬುದ್ಧಿಯೆಂಬ ಮೊಳಕೆಯು ಬೆಳೆಯುವುದು ಸಂಕಲ್ಪವಿಂದ, ಅದನ್ನೇ ಚಿತ್ತ, ಚೇತಸ್, ಮನ ಎನ್ನುವರು.

ವಿವರಣೆ: 'ವೇದನಾತ್ಮಕ' ಎಂದರೆ ಅರ್ಥಮಾಡಿಕೊಳ್ಳಬಲ್ಲ ಎಂದರ್ಥ. 'ಚಿತ್ತಾತ್ಮಾ' ಎಂದರೆ ಚಿತ್ತದ ರೂಪದ ಆತ್ಮ. 'ಪ್ರಪೀನತಾ' ಎಂದರೆ ಪುಷ್ಟಿ.

ಭಾಷ್ಯ: *ಅಹಮರ್ಥೋಽಂತಃಕರಣಸಾಮಾನ್ಯಮ್ । ಅತ್ರ ವಾಕ್ಯೇ ಬೀಜಾಂಕುರನ್ಯಾಯೇನ ಏಕಸ್ಯೈವಾಂತಕರಣ–ವೃಕ್ಷಸ್ಯ ವೃತ್ತಿಮಾತ್ರರೂಪೇಣ ಚಿತ್ತಾದ್ಯಾಖ್ಯಾವಸ್ಥಾಭೇದಾಃ ಕ್ರಮಿಕಾಸ್ತ್ರಿವಿಧಾಃ ಪರಿಣಾಮಾ ಉಕ್ತಾ ಇತಿ । ಸಾಂಖ್ಯಶಾಸ್ತ್ರೇ ಚ ಚಿಂತಾವೃತ್ತಿಕಸ್ಯ ಚಿತ್ತಸ್ಯ ಬುದ್ಧಾವೇವಾಂತರ್ಭಾವಃ । ಅಹಂಕಾರಸ್ಯ ಚಾತ್ರ ವಾಕ್ಯೇ ಬುದ್ಧಾವಂತರ್ಭಾವಃ ।*

ಅನುವಾದ: 'ಅಹಂ' ಎಂಬ ವಸ್ತು ಅಂತಃಕರಣ ಸಾಮಾನ್ಯವು. ಈ ವಾಕ್ಯದಲ್ಲಿ ಬೀಜಾಂಕುರ ನ್ಯಾಯದಂತೆ ಒಂದೇ ಅಂತಃಕರಣವೃಕ್ಷದಲ್ಲಿ ಕೇವಲ ವೃತ್ತಿರೂಪದಲ್ಲಿ ಚಿತ್ತವೇ ಮುಂತಾಗಿ ಕರೆಯಲ್ಪಡುವ ಕ್ರಮವಾದ ಅವಸ್ಥಾಭೇದಗಳು ಮೂರು ವಿಧದ ಪರಿಣಾಮಗಳೆಂದು ಹೇಳಲ್ಪಡುತ್ತವೆ. ಸಾಂಖ್ಯಶಾಸ್ತ್ರದಲ್ಲಾದರೋ ಆಲೋಚನಾತ್ಮಕ ವೃತ್ತಿಯುಳ್ಳ ಚಿತ್ತವು ಬುದ್ಧಿಯಲ್ಲಿ ಅಂತರ್ಭಾವ ಉಕ್ತವಾಗಿದೆ.

ವಿವರಣೆ: ಸಾಂಖ್ಯಶಾಸ್ತ್ರದಲ್ಲಿ ಬಾಹ್ಯಕರಣಗಳು ಹತ್ತು, ಅಂತಃಕರಣಗಳು ಮೂರು. ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಬಾಹ್ಯಕರಣಗಳು. ಬುದ್ಧಿ, ಅಹಂಕಾರ, ಮನಸ್ಸು ಅಂತಃಕರಣಗಳು.

ಸೂತ್ರ: ತತಃ ಪ್ರಕೃತೇಃ ॥ ೬೫ ॥

ಅನುವಾದ: ಅಂತಃಕರಣಗಳಿಂದ ಪ್ರಕೃತಿಯ ಅನುಮಾನ ಮಾಡಬಹುದು.

ಭಾಷ್ಯ: *ತತಃ ಮಹತ್ತತ್ತ್ವಾತ್ ಕಾರ್ಯಾತ್ ಕಾರಣತಯಾ ಪ್ರಕೃತೇಃ ಅನುಮಾನೇನ ಬೋಧ ಇತ್ಯರ್ಥಃ । ಅಂತಃಕರಣಸಾಮಾನ್ಯಸ್ಯ ಅಪಿ ಕಾರ್ಯತ್ವಂ ತಾವದೇಕದಾ ಪಂಚೇಂದ್ರಿಯ –ಜ್ಞಾನಾನುಪತ್ತ್ಯಾ ಮಧ್ಯಮಪರಿಮಾಣತಯಾ ದೇಹಾದಿವದೇವ ಸಿದ್ಧಂ ಶ್ರುತಿಸ್ಮೃತಿಪ್ರಾಮಾಣ್ಯಾಚ್ಚ ।*

ಅನುವಾದ: ಅನಂತರ ಮಹತ್ತತ್ತ್ವವೆಂಬ ಕಾರ್ಯದಿಂದ ಕಾರಣರೂಪವಾದ ಪ್ರಕೃತಿಯನ್ನು ಅನುಮಾನದಿಂದ ತಿಳಿಯಬಹುದು. ಅಂತಃಕರಣ ಸಾಮಾನ್ಯದ ಕಾರ್ಯತ್ವವೂ ಸಹ ಒಂದೇ ಸಮಯದಲ್ಲಿ ಪಂಚೇಂದ್ರಿಯ ಜ್ಞಾನಗಳು ದೊರೆಯದ ಕಾರಣ ಮಧ್ಯಮ ಪರಿಮಾಣದ ರೂಪದಲ್ಲಿ ದೇಹದಂತೆ ಸಿದ್ಧವಾಗುವುದು. ಇದರ ಸಮರ್ಥನೆ ಶ್ರುತಿಸ್ಮೃತಿಗಳಲ್ಲಿಯೂ ದೊರೆಯುವುದು.

ವಿವರಣೆ: ಪಂಚೇಂದ್ರಿಯಗಳು ಒಂದೇ ಸಮಯದಲ್ಲಿ ಒಟ್ಟಿಗೇ ಕೆಲಸ ಮಾಡುವುದಿಲ್ಲ. ಆದ್ದರಿಂದ ನಡುವಿನ ಪರಿಮಾಣದಲ್ಲಿ ಕಾರ್ಯರೂಪಕ್ಕೆ ಬರುತ್ತವೆ; ದೇಹವೇ ಮುಂತಾದವುಗಳಿರುವಂತೆ.

ಭಾಷ್ಯ: *ತಸ್ಯ ಚ ಪ್ರಕೃತಿಕಾರ್ಯತ್ವೇಽಯಂ ಪ್ರಯೋಗಃ– ಸುಖದುಃಖ ಮೋಹಧರ್ಮಿಣೀ ಬುದ್ಧಿಃ ಸುಖ ದುಃಖಮೋಹ– ಧರ್ಮಕದ್ರವ್ಯಜನ್ಯಾ ಕಾರ್ಯತ್ವೇ ಸತಿ ಸುಖದುಃಖ– ಮೋಹಾತ್ಮಕತ್ವಾತ್, ಕಾಂತಾದಿವದಿತಿ । ಕಾರಣಗುಣಾನುಸಾರೇಣೈವ ಕಾರ್ಯಗುಣೌಚಿತ್ಯಂ ಚಾನುಕೂಲಸ್ತರ್ಕಃ, ಶ್ರುತಿಸ್ಮೃತಿಯೋಽಪಿ ಇತಿ ಮಂತವ್ಯಮ್ ।*

ಅನುವಾದ: ಅದು ಪ್ರಕೃತಿಯಿಂದ ಉಂಟಾದುದು ಎಂಬುದಕ್ಕೆ ಹೀಗೆ ಅನುಮಾನ ಮಾಡಬಹುದು– ಸುಖದುಃಖ ಮೋಹ ಧರ್ಮವುಳ್ಳ ಬುದ್ಧಿಯು ಸುಖದುಃಖ

ಮೋಹಧರ್ಮವುಳ್ಳ ದ್ರವ್ಯದಿಂದ ಉಂಟಾಗುವುದು, ಕಾರ್ಯರೂಪವನ್ನು ಪಡೆದ ನಂತರ ಅದೇ ರೀತಿಯಾಗಿ ಸುಖದುಃಖ ಮೋಹಾತ್ಮಕವಾಗಿರುವುದರಿಂದ, ಕಾಂತೆಯಂತೆ ಕಾರಣಗುಣಾನುಸಾರವಾಗಿ ಕಾರ್ಯಗುಣಗಳಿರುವುದರಿಂದ; ಈ ಅನುಕೂಲ ತರ್ಕ ಇಲ್ಲಿ ಸುಲಭವಾಗಿ ಪ್ರಯೋಗಿಸಬಹುದು. ಶ್ರುತಿ ಸ್ಮೃತಿಗಳ ಪ್ರಮಾಣವೂ ಇದೆ.

ಭಾಷ್ಯ: *ನನು ವಿಷಯೇಷು ಸುಖಾದಿಮತ್ವೇ ಪ್ರಮಾಣಂ ನಾಸ್ತಿ, ಅಹಂ ಸುಖೀತ್ಯಾದ್ಯೇವಾನುಭವಾತ್, ತತ್ಕಥಂ ಕಾಂತಾದಿವಿಷಯೋ ದೃಷ್ಟಾಂತಃ ।*

ಅನುವಾದ: ಈ ವಿಷಯಗಳಲ್ಲಿ ಸುಖಾದಿಗಳಿಂದ ಕೂಡಿದ್ದು ಎಂಬುದು ಪ್ರಮಾಣವಾಗ ಲಾರದು (ಏಕೆಂದರೆ) 'ನಾನು ಸುಖಿ' ಮುಂತಾದುವುಗಳ ಅನುಭವದಂತೆ. ಹೀಗಿರುವಾಗ (ಅನುಮಾನದಲ್ಲಿ) ಕಾಂತಾದಿಗಳ ದೃಷ್ಟಾಂತ ಹೇಗೆ ಸಾಧ್ಯ?

ಭಾಷ್ಯ: *ಇತಿ ಚೇನ್ನ । ಸುಖಾದ್ಯಾತ್ಮಕ ಬುದ್ಧಿಕಾರ್ಯತಯಾ ಸ್ರಕ್ಸುಖಂ ಚಂದನಸುಖಂ ಇತ್ಯಾದ್ಯನುಭವೇನ ಚ ವಿಷಯಾಣಾಮಪಿ ಸುಖಾದಿಧರ್ಮಕತ್ವಾಸಿದ್ಧೇಃ; ಶ್ರುತಿಸ್ಮೃತಿಪ್ರಾಮಾಣ್ಯಾಚ್ಚ ।*

ಅನುವಾದ: ಅದು ಹಾಗಲ್ಲ. ಸುಖವೇ ಮೊದಲಾದವುಗಳನ್ನು ಒಳಗೊಂಡ ಬುದ್ಧಿಯ ಕಾರ್ಯರೂಪದಲ್ಲಿಯೂ, ಸರ, ಚಂದನ ಮುಂತಾದವುಗಳ ಸುಖದ ಅನುಭವದಿಂದಲೂ, ವಿಷಯಗಳಲ್ಲಿ ಸುಖಾದಿ ಧರ್ಮಗಳು ಸಿದ್ಧವಾಗಿರುವುವು, ಶ್ರುತಿ, ಸ್ಮೃತಿಗಳ ಪ್ರಮಾಣದಿಂದಲೂ ಅದು ಸಿದ್ಧವಾಗಿರುವುದು.

ಭಾಷ್ಯ: *ಕಿಂಚ ಯಸ್ಯಾನ್ವಯವ್ಯತಿರೇಕಾ ಸುಖಾದಿನಾ ಸಹ ದೃಶ್ಯತೇ ತಸ್ಯೈವ ಸುಖಾದ್ಯುಪಾದಾನತ್ತ್ವಂ ಕಲ್ಪ್ಯತೇ । ತಸ್ಯ ನಿಮಿತ್ತತ್ವಂ ಪರಿಕಲ್ಪ್ಯ ಅನ್ಯಸ್ಯೋಪಾದನತ್ವ ಕಲ್ಪನೇ ಕಾರಣ–ದ್ವಯಕಲ್ಪನಾಗೌರವಾತ್ ।*

ಅನುವಾದ: ಅಲ್ಲದೆ ಅನ್ವಯ ವ್ಯತಿರೇಕಗಳು ಸುಖಾದಿಗಳೊಡನೆ ಕಂಡುಬರುತ್ತವೆ; ಅದರಿಂದಲೇ ಉಪಾದಾನ ಕಾರಣತ್ವದ ಕಲ್ಪನೆ ಮಾಡಬಹುದು. ಅದನ್ನು ನಿಮಿತ್ತವೆಂದು ಭಾವಿಸಿ ಬೇರೆಯದರಲ್ಲಿ ಉಪಾದಾನಕಾರಣತ್ವವನ್ನು ಕಲ್ಪನೆ ಮಾಡಿದರೆ ಎರಡು ಕಾರಣಗಳ ಕಲ್ಪನೆ ಮಾಡುವುದರ ಕಾರಣ ಅನಗತ್ಯವಾಗುವುದು.

ವಿವರಣೆ: ಸುಖಾದಿಗಳಿಗೆ ಉಪಾದಾನ ಕಾರಣವೆಂದರೆ, ಆ ಕಾರಣವಿದ್ದಾಗ ಸುಖಾದಿಗಳೂ ಇರುತ್ತವೆ; ಇಲ್ಲದಿರುವಾಗ ಸುಖಾದಿಗಳು ಇರುವುದಿಲ್ಲ. ಇದನ್ನು ಅನ್ವಯ ವ್ಯತಿರೇಕಗಳೆನ್ನುವರು.

ಭಾಷ್ಯ: *ಅಪಿ ಚ ಅನ್ಯೋನ್ಯಸಂವಾದೇನ ಪ್ರತ್ಯಭಿಜ್ಞಯಾ ಚ ವಿಷಯೇಷು ಸರ್ವಪುರುಷಸಾಧಾರಣಸ್ಥಿರಸುಖಸಿದ್ಧಿಃ ।*

ತತ್ಸುಖಗ್ರಹಣಾಯಾಸ್ಮನ್ನಯೇ ವೃತ್ತಿನಿಯಮಾದಿಕಲ್ಪನಾ–
ಗೌರವಂ ಚ ಫಲಮುಖತ್ವಾನ್ನ ದೋಷಾವಹಮ್ । ಅನ್ಯಥಾ
ಪ್ರತ್ಯಭಿಜ್ಞಯಾ ಅವಯವಿ–ಅಸಿದ್ಧಿಪ್ರಸಂಗಾತ್
ತತ್ಕಾರಣಾತ್ ದಿ ಕಲ್ಪನಾಗೌರವಾತ್ ಇತಿ ।

ಅನುವಾದ: ಅಲ್ಲದೆ ಅನ್ಯೋನ್ಯ ಹೋಲಿಕೆಯಿಂದಲೂ ಪೂರ್ವಸ್ಮರಣೆಯಿಂದಲೂ ವಿಷಯಗಳಲ್ಲಿ ಸರ್ವಪುರುಷರಿಗೆ ಸಾಧಾರಣವಾದ ಸ್ಥಿರ ಸುಖ ಸಿದ್ಧಿಸುತ್ತದೆ. ಆ ಸುಖಾನುಭವವನ್ನು ಗ್ರಹಿಸಲು ವೃತ್ತಿ, ನಿಯಮ ಮುಂತಾದ ವಿಸ್ತಾರವಾದ ಕಲ್ಪನೆಗಳನ್ನು ನಾವು ಮಾಡಿದ್ದೇವೆ. ಇದು ಫಲವನ್ನು ನೀಡುವುದಾದ್ದರಿಂದ ದೋಷಕ್ಕೆ ಕಾರಣವಲ್ಲ. ಹಾಗಿಲ್ಲದಿದ್ದಲ್ಲಿ ಪೂರ್ವಸ್ಮರಣೆಯ ಬಲದಿಂದ ಅವಯವಿಯೂ ಸಿದ್ಧಿಸದಂತಾದೀತು. ಅದರ ಕಾರಣಾದಿಗಳ ಕಲ್ಪನೆಯೂ ಅನಗತ್ಯವೆನಿಸುವುದು.

ವಿವರಣೆ: ಅವಯವಿ ಎಂದರೆ ಅವಯವಗಳಿಂದ ಕುಡಿದ ವಸ್ತು. ಘಟಪಟಾದಿಗಳಂತೆ.

ಭಾಷ್ಯ: *ವಿಷಯೇಽಪಿ ಸುಖಾದಿಕಂ ಚ ಮಾರ್ಕಂಡೇಯೇ ಪ್ರೋಕ್ತಮ್ ।*
ತತ್ಸಂತು ಚೇತಸ್ಯಥವಾಪಿ ದೇಹೇ
ಸುಖಾನಿ ದುಃಖಾನಿ ಚ ಕಿಂ ಮಮಾತ್ರ । ಇತಿ ಮಾರ್ಕಂಡೇಯೇ ॥
೩೭–೩೮ ॥

ಅನುವಾದ: ವಿಷಯದಲ್ಲಿಯೂ ಸುಖಾದಿಗಳನ್ನು ಮಾರ್ಕಂಡೇಯ ಪುರಾಣದಲ್ಲಿ ಹೇಳಿದೆ.

ಸುಖವಾಗಲಿ ದುಃಖವಾಗಲಿ ನನ್ನ ಚಿತ್ತದಲ್ಲಾಗಲಿ ದೇಹದಲ್ಲಾಗಲಿ ಆಗುವುದು. ಅದರಿಂದ ನನಗೇನಾದೀತು?

ಭಾಷ್ಯ: *ಅಹಂ ಸುಖೀ ಇತ್ಯಾದಿಪ್ರತ್ಯಯಸ್ತು, ಅಹಂ ಧನೀ ಇತ್ಯಾದಿ*
ಪ್ರತ್ಯಯವತ್ ಸ್ವಸ್ವಾಮಿಭಾವಾಖ್ಯ ಸಂಬಂಧವಿಷಯಕಃ ।
ತೇಷಾಂ ಪ್ರತ್ಯಾಯಾನಾಂ ಸಮವಾಯಸಂಬಂಧ ವಿಷಯಕತ್ವ–
ಭ್ರಮನಿರಾಸಾರ್ಥಂ ತು ಸುಖದುಃಖಿಮೂಢೇಭ್ಯಃ ಪುರುಷೋ
ವಿವಿಚ್ಯತೇ ಶಾಸ್ತ್ರೇಷ್ವಿತಿ । ಶಬ್ದಾದಿಷು ಚ ಸುಖಾದ್ಯಾತ್ಮತಾ–
ವ್ಯವಹಾರ ಏಕಾರ್ಥಸಮವಾಯಾತ್ । ಅಸ್ತು ವಾ ಶಬ್ದಾದಿಷು
ಸಾಕ್ಷಾದೇವ ಸುಖಮುಕ್ತ ಪ್ರಮಾಣೇಭ್ಯಃ ವಿಷಯ–
ಗತಸುಖಾದೇಶ್ಚ ಬುದ್ಧಿಮಾತ್ರಗ್ರಾಹ್ಯತ್ವಂ ಫಲಬಲಾತ್ ।
ಯತ್ತು ವಿಷಯಾಸಂಪ್ರಯೋಗಕಾಲೇ ಶಾಂತಿಸುಖಂ ಸಾತ್ತ್ವಿಕಂ
ಸುಷುಪ್ತ್ಯಾದೌ ವ್ಯಜ್ಯತೇ, ತದೇವ ಬುದ್ಧಿಧರ್ಮ ಆತ್ಮಸುಖಂ ಉಚ್ಯತೇ ಇತಿ ।

ಅನುವಾದ: 'ನಾನು ಸುಖಿ' ಎಂಬ ಜ್ಞಾನವಾದರೋ 'ನಾನು ಧನಿಕ' ಎಂಬ ಜ್ಞಾನದಂತೆ ತಾನು ಮತ್ತು ತನ್ನ ಒಡೆಯ ಎಂಬ ಸಂಬಂಧ ವಿಷಯವುಳ್ಳದ್ದು.

ಆ ಜ್ಞಾನಗಳಲ್ಲಿ ಸಮವಾಯ ಸಂಬಂಧವಿಷಯದ ಭ್ರಮೆಯನ್ನು ಹೋಗಲಾಡಿಸಲು ಶಾಸ್ತ್ರಗಳಲ್ಲಿ ಸುಖ ದುಃಖ ಮೋಹಗಳಿಂದ ಪುರುಷನನ್ನು ಭಿನ್ನನು ಎಂದು ವಿವೇಚಿಸಲಾಗಿದೆ. ಶಬ್ದಾದಿಗಳಲ್ಲಾದರೋ ಸುಖವೇ ಮೊದಲಾದ ಆತ್ಮತಾವ್ಯವಹಾರ ಏಕಾರ್ಥ ಸಮವಾಯದ ಆಧಾರ ಮಾಡಲಾಗುತ್ತದೆ ಅಥವಾ ಉಕ್ತವಾದ ಪ್ರಮಾಣಗಳಿಂದ ಶಬ್ದಾದಿ ವಿಷಯಗಳಲ್ಲಿ ಸುಖಾದಿಗಳನ್ನು ಸಾಕ್ಷಾತ್ ಎಂದು ಭಾವಿಸಿದರೂ ವಿಷಯಗತವಾದ ಯಾವ ಸುಖಾದಿಗಳಿವೆಯೋ ಆ ಫಲಗಳ ಬಲದಿಂದ ಬುದ್ಧಿಮಾತ್ರದಲ್ಲಿ ಗ್ರಾಹ್ಯವಾಗಿರುತ್ತವೆ. ವಿಷಯಗಳ ಸಂಪರ್ಕವಿಲ್ಲದ ಸಮಯದಲ್ಲಿ ಶಾಂತಿ, ಸುಖ ಮುಂತಾದ ಸಾತ್ತ್ವಿಕವಾದ ಅನುಭವಗಳು ಸುಷುಪ್ತ್ಯಾದಿಗಳಲ್ಲಿ ಅಭಿವ್ಯಕ್ತವಾಗುವುವು. ಅದೇ ಬುದ್ಧಿ ಧರ್ಮ, ಅದನ್ನೇ ಆತ್ಮಸುಖವೆನ್ನುವರು.

ವಿವರಣೆ: ಸಮವಾಯವೆಂದರೆ 'ಅಯುತಸಿದ್ಧವಾದ ಸಂಬಂಧ' ಮಿಶ್ರಣವಲ್ಲದ ಸಂಬಂಧ (ಅಯುತಸಿದ್ಧಯೋಃ ಸಂಬಂಧಃ) ಉದಾಹರಣೆಗೆ ಅವಯವ-ಅವಯವಿಗಳ ಸಂಬಂಧವಾದ ಕಪೋಲಗಳು ಮತ್ತು ಗಡಿಗೆಗಳಿಗಿರುವ ಸಂಬಂಧ ಅಥವಾ ನಾರುಗಳಿಂದಾದ ಬಟ್ಟೆಗಳು ನಾರು- ಬಟ್ಟೆಗಳ ಸಂಬಂಧ.

ಏಕಾರ್ಥಸಮವಾಯ ಎಂದರೆ ಸಮವಾಯಿ-ಸಮವಾಯಗಳು ಒಂದೇ ಕಡೆ ಕಾಣುವುದು. ಉದಾಹರಣೆಗೆ ಏಕಂ ರೂಪಂ ಎಂಬ ಪದಗಳಲ್ಲಿ ಏಕತ್ವ ಮತ್ತು ರೂಪಗಳಲ್ಲಿ (ಗುಣ) ಏಕಾರ್ಥಸಮವಾಯವಿರುವುದು.

ಭಾಷ್ಯ: *ಯದ್ಯಪಿ ವೈಶೇಷಿಕಾದ್ಯಾ ಅಪಿ ತಾರ್ಕಿಕಾಃ ಪ್ರಪಂಚೇ ಅನ್ಯಥಾಽಪಿ ಕಾರ್ಯಕಾರಣವ್ಯವಸ್ಥಾಮನುಮಿಮತೇ, ತಥಾಪಿ ಬಹುಲಶ್ರುತಿಸ್ಮೃತ್ಯುಪೋದ್ವಲನೇನ ಅಸ್ಮಾಭಿರನುಮಿತ್ಯೈವ ವ್ಯವಸ್ಥಾ ಮುಮುಕ್ಷುಭಿರುಪಾದೇಯಾ । ಮೂಲಶೈಥಿಲ್ಯ-ದೋಷೇಣ ಪರಾನುಮಾನಾನಾಂ ದುರ್ಬಲತ್ವಾತ್ । ಅತ ಏವ 'ತರ್ಕಾಪ್ರತಿಷ್ಠಾನಾತ್' ಇತಿ (೨.೧.೧೧) ವೇದಾಂತ ಸೂತ್ರೇಣ ಅಪ್ರತಿಷ್ಠಾದೋಷತಃ ಕೇವಲತರ್ಕೋ ಉಪಾಸ್ತಃ ।*

ಅನುವಾದ: ವೈಶೇಷಿಕರೇ ಮೊದಲಾದ ತಾರ್ಕಿಕರೂ ಪ್ರಪಂಚದಲ್ಲಿ ಕಾರ್ಯಕಾರಣ ವ್ಯವಸ್ಥೆಯನ್ನು ಬೇರೆಯ ರೀತಿಯಲ್ಲಿ ಅನುಮಾನ ಮಾಡಿದ್ದರೂ ಅನೇಕ ಶ್ರುತಿಸ್ಮೃತಿಗಳ ಆಧಾರದಿಂದ ನಾವು ಮಾಡಿದ ಅನುಮಿತಿಯ ವ್ಯವಸ್ಥೆಯೇ ಮುಮುಕ್ಷುಗಳು ಗ್ರಹಿಸಬೇಕು. ಏಕೆಂದರೆ ಮೂಲದಲ್ಲಿಯೇ ಅದೃಢವಾದುದರಿಂದ ಇತರರ ಅನುಮಾನಗಳು ಬಹಳ ದುರ್ಬಲವಾದುದು. ಆದ್ದರಿಂದಲೇ 'ತರ್ಕಾಪ್ರತಿಷ್ಠಾನಾತ್' ಎಂಬ ಸೂತ್ರದಿಂದ ತರ್ಕವು ಅಂತಿಮ ನಿರ್ಧಾರವಲ್ಲ ಎಂಬ ದೋಷದ ಕಾರಣ ಕೇವಲ ತರ್ಕವನ್ನು ನಿರಾಕರಿಸಲಾಗಿದೆ.

ಭಾಷ್ಯ: *ತಥಾ ಮನುನಾಪಿ-*

ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರಾऽವಿರೋಧಿನಾ ।
ಯಸ್ತರ್ಕೇಣಾನುಸಂಧತ್ತೇ ಸ ಧರ್ಮಂ ವೇದ ನೇತರಃ ॥ ಮನು ೧೨–೧೦೬

ಅನುವಾದ: ಹಾಗೆಯೇ ಮನುವು ಹೇಳಿರುವನು.

'ಯಾವ ವ್ಯಕ್ತಿಯು ಋಷಿಗಳು ಕಂಡ ವೇದಗಳನ್ನೂ, ಧರ್ಮದ ಉಪದೇಶವನ್ನು ವೇದಗಳಿಗೆ ವಿರೋಧ ಬರದಂತೆ ತರ್ಕದಿಂದ ವಿಚಾರಮಾಡುವನೋ ಅವನೇ ಧರ್ಮಜ್ಞ, ಇತರರಲ್ಲ.

ಭಾಷ್ಯ: *ಇತಿ ವೇದಾವಿರುದ್ಧ ತರ್ಕಸ್ಯೈವಾರ್ಥನಿಶ್ಚಾಯಕತ್ವಂ ಉಕ್ತಮ್ । ತಸ್ಮಾತ್ 'ಶ್ರೋತವ್ಯಃ ಶ್ರುತಿವಾಕ್ಯೇಭ್ಯೋ ಮಂತವ್ಯಶ್ಚ ಉಪಪತ್ತಿಭಿಃ' ಇತ್ಯಾದಿ ವಾಕ್ಯೇಭ್ಯಃ ಶ್ರವಣಸಮಾನಾರ್ಥಕಮೇವ ಮನನಂ ಬಲವತ್ । ಅನ್ಯಾಕಾರಂ ಮನನಂ ತು ಪರೇಷಾಂ ದುರ್ಬಲಮ್ । ಏವಂ ಪುರುಷೇऽಪಿ ಸುಖದುಃಖಾದಿ–ಸತ್ತ್ವೇನ ತೇಷಾಮನುಮಾನಂ ಬಹುಲಶ್ರುತ್ಯಾದಿವಿರೋಧಾತ್ ದುರ್ಬಲಮಿತಿ ದಿಕ್ । ಪ್ರಕೃತಿಗತವಿಶೇಷಂ ಚ ಪಶ್ಚಾದ್ವಕ್ಷ್ಯಾಮಃ ।*

ಅನುವಾದ: ಹೀಗೆ ವೇದಕ್ಕೆ ವಿರುದ್ಧವಾದ ತರ್ಕವೇ ಅರ್ಥವನ್ನು ನಿರ್ಧರಿಸುವುದೆಂದು ಹೇಳಿದೆ. ಆದ್ದರಿಂದ 'ಶ್ರುತಿವಾಕ್ಯಗಳಿಂದ ಕೇಳಬೇಕು ಮತ್ತು ಯುಕ್ತಿಯಿಂದ ತಿಳಿಯಬೇಕು' ಮುಂತಾದ ವಾಕ್ಯಗಳಿಂದ ಶ್ರವಣಕ್ಕೆ ಸಮಾನವಾದ ಮನನವು ಪ್ರಬಲವೆಂದು ಹೇಳಲಾಗಿದೆ. ಬೇರೆಯವರು ಮಾಡುವ ಅನ್ಯ ಆಕಾರವನ್ನು ದುರ್ಬಲ ಎಂದು ಹೇಳಲಾಗಿದೆ. ಹಾಗೆಯೇ ಪುರುಷನಲ್ಲಿಯೂ ಸುಖದುಃಖಾದಿಗಳು ಇರುವುದೆಂಬ ಅವರ ಅನುಮಾನಕ್ಕೆ ಅನೇಕ ಶ್ರುತಿಗಳು ವಿರುದ್ಧವಾಗಿರುವುದರಿಂದ ದುರ್ಬಲವೇ ಸರಿ. ಪ್ರಕೃತಿಗತ ವಿಶೇಷವನ್ನೂ ಅನಂತರ ಹೇಳುವೆವು.

ವಿವರಣೆ: ಕೇಳಬೇಕು, ತಿಳಿಯಬೇಕು ಎಂದರೆ 'ಆತ್ಮನ ಯಥಾರ್ಥತೆಯನ್ನು' ಎಂದು ಸೇರುತ್ತದೆ.

ಭಾಷ್ಯ: *ನನ್ವಖಿಲಜಡೇಭ್ಯಃ ಪುರುಷವಿವೇಕ ಏವ ಮುಕ್ತೌ ಹೇತುಃ ತತ್ ಕಿಮರ್ಥಂ ಜಡಾನಾಮನ್ಯೋऽನ್ಯವಿವೇಕೋऽತ್ರ ದರ್ಶಿತ ಇತಿ ಚೇತ್ ।*

ಅನುವಾದ: ಸಮಸ್ತ ಜಡಪದಾರ್ಥಗಳಿಂದ ಪುರುಷವಿವೇಕವು ಮುಕ್ತಿಗೆ ಕಾರಣವಾದರೆ ಜಡವಸ್ತುಗಳಲ್ಲಿ ಭಿನ್ನತೆಯನ್ನು ತೋರಿಸುವ ಕಾರಣವೇನು?

ವಿವರಣೆ: ಪುರುಷ ವಿವೇಕವೆಂದರೆ ಪುರುಷನು ಜಡಪ್ರಪಂಚಕ್ಕೆ ಭಿನ್ನ ಎಂದರ್ಥ. ಅನ್ಯೋನ್ಯ ವಿವೇಕವೆಂದರೆ ಪರಸ್ಪರ ಭೇದದ ಅರಿವು.

ಭಾಷ್ಯ: *ಪ್ರಕೃತ್ಯಾದಿ ತತ್ತ್ವೋಪಾಸನಯಾ ಸತ್ತ್ವಶುದ್ಧ್ಯರ್ಥಂ ವಿವೇಕಸ್ಯ ಅಪಿ ಅಪೇಕ್ಷಿತತ್ವಾತ್ ಇತಿ । ಕಾರ್ಯಕಾರಣಮುದ್ರಯಾ*

ಪ್ರಕೃತಿಪರ್ಯಂತಸ್ಯ ಅನುಮಾನೇನ ವಿವೇಕತಃ ಸಿದ್ಧಿಂ ಉಕ್ತ್ವಾ ಯಥೋಕ್ತಕಾರ್ಯಕಾರಣಭಾವಶೂನ್ಯಸ್ಯ ಪುರುಷಸ್ಯ ಪ್ರಕಾರಾಂತರೇಣಾನುಮಾನಸ್ತಥಾ ಸಿದ್ಧಿಮಾಹ–

ಅನುವಾದ: ಪ್ರಕೃತಿಯೇ ಮೊದಲಾದುದರ ಉಪಾಸನೆ (ಚಿಂತನೆ)ಯಿಂದ ಸತ್ತ್ವಶುದ್ಧಿಯಾಗುವುದರಿಂದ ವಿವೇಕದ ಅಗತ್ಯವೂ ಆಗುವುದು. ಕಾರ್ಯಕಾರಣ ಭಾವವನ್ನು ತೋರಿಸುತ್ತಾ ಪ್ರಕೃತಿತತ್ತ್ವದವರೆಗೆ ಅನುಮಾನದಿಂದಲೂ ವಿವೇಕದ ಮೂಲಕ ತಿಳಿಸಿ ಈಗ ಮೇಲೆ ತಿಳಿಸಿದ ಕಾರ್ಯಕಾರಣಭಾವಶೂನ್ಯವಾದ ಪುರುಷನ (ಸಿದ್ಧಿಯನ್ನು) ಬೇರೆಯ ಪ್ರಕಾರದಿಂದಲೂ ಅನುಮಾನದಿಂದಲೂ ಹೇಳಿದೆ–

ವಿವರಣೆ: ವಸ್ತುಗಳ ಗುಣಗಳನ್ನು ಬೇರ್ಪಡಿಸಿ ವಿವೇಕವೆಂದರೆ ಯಥಾರ್ಥವಾಗಿ ವಸ್ತುಸ್ವರೂಪವನ್ನು ತಿಳಿಯುವುದು.

ಸೂತ್ರ: ಸಂಹತಪರಾರ್ಥತ್ವಾತ್ ಪುರುಷಸ್ಯ ॥ ೬೬ ॥

ಸೂತ್ರಾನುವಾದ: ವಸ್ತುಗಳು ಸೇರಿ ಇನ್ನೊಬ್ಬರಿಗಾಗಿ ಇರುವುದರಿಂದ ಪುರುಷನನ್ನು ಅನುಮಾನದಿಂದ ತಿಳಿಯಬಹುದು.

ಭಾಷ್ಯ: *ಸಂಹನನಮಾರಂಭಕಸಂಯೋಗಃ । ಸ ಚಾವಯವಾವಯವಿ–ಭೇದಾತ್ ಪ್ರಕೃತಿಕಾರ್ಯಸಾಧಾರಣಃ । ತಥಾ ಚ ಸಂಹತಾನಾಂ ಪ್ರಕೃತಿತತ್ಕಾರ್ಯಾಣಾಂ ಪರಾರ್ಥತ್ವಾನುಮಾನೇನ ಪುರುಷಸ್ಯ ಬೋಧಃ ಇತ್ಯರ್ಥಃ । ತದ್ಯಥಾ ವಿವಾದಾಸ್ಪದಂ ಪ್ರಕೃತಿಮಹದಾದಿಕಂ ಪರಾರ್ಥಂ, ಸ್ವೇತರಸ್ಯ ಭೋಗಾಪವರ್ಗಫಲಕಂ ಸಂಹತತ್ವಾತ್ ಶಯ್ಯಾಸನಾದಿವದಿತ್ಯನುಮಾನೇನ ಪರೋಽಸಂಹತ ಏವ ಪುರುಷಃ ಸಿದ್ಧ್ಯತಿ । ತಸ್ಯಾಪಿ ಸಂಹತತ್ವೇಽನವಸ್ಥಾಪತ್ತೇಃ ।*

ಅನುವಾದ: ಸಂಹನನವೆಂದರೆ ವಸ್ತುನಿರ್ಮಾಣದಲ್ಲಿ ಆಗುವ ಸಂಯೋಗ ಅದು ಅವಯವ–ಅವಯವಿಗಳ ಅಭೇದದಿಂದ ಪ್ರಕೃತಿ ಕಾರ್ಯದಲ್ಲಿ ಸಾಧಾರಣವಾದುದು. ಹಾಗೆಯೇ ಪ್ರಕೃತಿ ಮತ್ತು ಅದರ ಕಾರ್ಯಗಳು ಬೇರೊಂದು ಪದಾರ್ಥಕ್ಕಾಗಿ ಎಂದು ಅನುಮಾನ ಮಾಡುವುದರಿಂದ ಪುರುಷನ ಬೋಧವಾಗುತ್ತದೆ. 'ಪ್ರಕೃತಿ ಮಹದಾದಿಗಳು ಪರಾರ್ಥಕ್ಕಾಗಿವೆ ಎಂಬುದು ಚಿಂತನೀಯ. ತನಗಿಂತ ಭಿನ್ನವಾದುದಕ್ಕೆ ಭೋಗ ಅಪವರ್ಗಗಳು ಫಲನೀಡುತ್ತವೆ, ಏಕೆಂದರೆ ಅವು ಜೊತೆಗೂಡುತ್ತವೆ, ಹಾಸಿಗೆ ಆಸನಗಳಂತೆ; ಎಂಬ ಅನುಮಾನದಂತೆ (ಪ್ರಕೃತಿಗಿಂತ) ಭಿನ್ನವಾದ ಪುರುಷನನ್ನು ಸಿದ್ಧಿಸಬಹುದು. ಅವನೂ ಸಂಹತನಾದಲ್ಲಿ ಅನವಸ್ಥಾ ದೋಷವುಂಟಾಗುವುದು.

ವಿವರಣೆ: ಪರಿಣಾಮಕ್ಕೆ ಒಳಗಾಗುವುವು ಅಚೇತನಗಳು ಪರಿಣಾಮಕ್ಕೊಳಗಾಗುವ ಈ ಅಚೇತನಗಳು ತಮಗಾಗಿಯೇ ಏನನ್ನೂ ಮಾಡುವುದಿಲ್ಲ. ಪರಿಣಾಮ

ಕ್ಕೊಳಗಾಗುವ ಪ್ರಕೃತಿ ಮುಂತಾದ ಅಚೇತನಗಳು ಅವನ್ನು ಅನುಭವಿಸುವ ಚೇತನದತ್ತ ಸೂಚನೆ ನೀಡುತ್ತವೆ. ಅದೇ ಪುರುಷ.

ಭಾಷ್ಯ: *ಪಾತಂಜಲೇ ಚ– 'ಪರಾರ್ಥಂ ಸಂಹತ್ಯಕಾರಿತ್ವಾತ್' (೪.೩೪) ಇತಿ ಸೂತ್ರಕಾರೇಣಾನುಮಾನಂ ಕೃತಮ್ । ತತ್ತು ಯಥಾಶ್ರುತಂ ಏವ ಅಂತ್ಯಾವಯವಸಾಧಾರಣಮ್, ಇತರ ಸಾಹಿತ್ಯೇನ ಅರ್ಥಕ್ರಿಯಾ–ಕಾರಿತ್ವಸ್ಯೈವ ಸಂಹತ್ಯಕಾಂತಾಶಬ್ದಾರ್ಥತ್ವಾತ್ । ಪುರುಷಸ್ತು ವಿಷಯ ಪ್ರಕಾಶರೂಪಾಯಾಂ ಸ್ವಾರ್ಥಕ್ರಿಯಾಯಾಂ ನಾನ್ಯದಪೇಕ್ಷತೇ, ನಿತ್ಯಪ್ರಕಾಶರೂಪತ್ವಾತ್ । ಪುರುಷಸ್ಯಾರ್ಥಸಂಬಂಧಮಾತ್ರೇ ಬುದ್ಧಿವೃತ್ತ್ಯಪೇಕ್ಷಣಾತ್ । ಸಂಬಂಧಸ್ತು ನಾಸಾಧಾರಣ್ಯರ್ಥಕ್ರಿಯೇತಿ । ಅತ್ರ ಚ 'ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ' (ಬೃ. ೨.೪.೫) ಇತ್ಯಾದಿ ಶ್ರುತಿಸ್ಮೃತಯೋಽನುಕೂಲತರ್ಕಾಃ ।*

ಅನುವಾದ: 'ಯಾವುದಾದರೂ ಪದಾರ್ಥಗಳು ಸೇರಿ ಕಾರ್ಯ ಸಮರ್ಥವಾದರೆ ಅದು ಇತರರ ಸಲುವಾಗಿಯೇ' ಎಂದು ಸೂತ್ರಕಾರನು ಅನುಮಾನ ಮಾಡಿದ್ದಾನೆ. ಅದಾದರೊ ನಾವು ಕೇಳಿರುವಂತೆ ಅಂತ್ಯಾವಯವಕ್ಕೆ (ಪ್ರಕೃತಿಗೆ) ಸಾಧಾರಣ ವಾದುದು. ಏಕೆಂದರೆ 'ಸಂಹತ್ಯಕಾರಿತಾ' ಶಬ್ದದ ಅರ್ಥ ಇತರ ವಸ್ತುಗಳೊಡನೆ ಸೇರಿ ಅರ್ಥ ಮತ್ತು ಕ್ರಿಯೆಯಲ್ಲಿ ತೊಡಗುವುದು. ಪುರುಷನಾದರೋ ನಿತ್ಯಪ್ರಕಾಶರೂಪನು; ಆದ್ದರಿಂದ ತನ್ನ ವಿಷಯವನ್ನು ಪ್ರಕಾಶಿಸುವ ರೂಪದಲ್ಲಿ ತನ್ನ ಕ್ರಿಯೆಗೆ ಇತರ ವಸ್ತುಗಳನ್ನು ಅಪೇಕ್ಷಿಸುವುದಿಲ್ಲ. ಪುರುಷನಿಗೆ ಯಾವುದಾದರೂ ವಸ್ತುವಿನ ಸಂಬಂಧವುಂಟಾಗಲು ಅದಕ್ಕೆ ಬುದ್ಧಿವೃತ್ತಿಯ ಅಗತ್ಯವಿರುತ್ತದೆ. ಈ ಸಂಬಂಧವಾದರೋ ಅಸಾಧಾರಣ ಅರ್ಥಕ್ರಿಯೆಯೇನಲ್ಲ. 'ಎಲ್ಲರ ಬಯಕೆಗಾಗಿ ಎಲ್ಲವೂ ಪ್ರಿಯವಾದುದೇನಲ್ಲ, ಆದರೆ ತನ್ನ ಬಯಕೆಗಾಗಿ ಎಲ್ಲವೂ ಪ್ರಿಯವಾಗುತ್ತವೆ (ಬೃ. ೨.೪.೫) ಎಂಬ ವೇದ ಸ್ಮೃತಿಗಳ ತರ್ಕ ಅನುಕೂಲವಾಗಿದೆ.

ವಿವರಣೆ: 'ಸಂಹತ್ಯಕಾರಿ', 'ಅನೇಕ ಪದಾರ್ಥಗಳು ಒಟ್ಟುಗೂಡಿ ಯಾವುದಾದರೂ ಕಾರ್ಯಕ್ಕೆ ಅನುವಾಗುವುದು'.

ಭಾಷ್ಯ: *ಅನ್ಯಚ್ಚ ಸುಖಾದಿಮತ್ ಪ್ರಧಾನಾದಿಕಂ ಯದಿ ಸ್ವಸ್ಯ ಸುಖಾದಿಭೋಗಾರ್ಥಂ ಸ್ಯಾತ್ತದು ತಸ್ಯ ಸಾಕ್ಷಾತ್ ಸ್ವಜ್ಞೇಯತ್ವೇ ಕರ್ಮಕರ್ತೃವಿರೋಧಃ । ನ ಹಿ ಧರ್ಮಿಭಾನಂ ವಿನಾ ಸುಖಸ್ಯ ಭಾನಂ ಸಂಭವತಿ ಅಹಂ ಸುಖೀತ್ಯೇವಂ ಸುಖಾನುಭವಾದಿತಿ । ಅಪಿ ಚ ಸಂಹನ್ಯಮಾನಾನಾಂ ಬಹೂನಾಂ ಗುಣಾನಾಂ ತತ್ಕಾರ್ಯಾಣಾಂ ಚ ಅನೇಕವಿಕಾರಾಣಾಂ ಅನೇಕ ಚೈತನ್ಯಗುಣಕಲ್ಪನಾಯಾಂ ಗೌರವೇಣ ಲಾಘವಾದೇಕ ಏವ ಚಿತ್ಪ್ರಕಾಶರೂಪಃ ಪುರುಷಃ ಸರ್ವಸಂಹತೇಭ್ಯಃ ಪರಃ ಕಲ್ಪಯಿತುಂ ಯುಜ್ಯತ ಇತಿ ।*

ಅನುವಾದ: ಅಷ್ಟೇ ಅಲ್ಲದೆ ಸುಖಾದಿಗಳಿಂದ ಕೂಡಿದ ಪ್ರಕೃತಿಯೇ ಮೊದಲಾದವನ್ನು ತಮ್ಮ ಸುಖಾದಿಗಳ ಭೋಗಾರ್ಥವಾಗಿದ್ದರೆ ಅದನ್ನು ಸಾಕ್ಷಾತ್ ತನ್ನದೇ ಅನುಭವ ವೆನ್ನುವರು; ಆಗ ಕರ್ಮ–ಕರ್ತೃವಿರೋಧ ಉಂಟಾಗುವುದು. ಧರ್ಮವುಳ್ಳವನೆಂಬ ಜ್ಞಾನವಿಲ್ಲದೆ ಸುಖಾದಿಗಳ ಅನುಭವ ಸಾಧ್ಯವಿಲ್ಲ. ಪ್ರತಿಯೊಬ್ಬನಿಗೂ ನಾನು ಸುಖಿ ಎಂಬ ಅನುಭವವಿದ್ದೇ ಇರುತ್ತದೆ. ಅಲ್ಲದೆ ಜೊತೆಗೂಡುವ ಅನೇಕ ಗುಣಗಳ ಮತ್ತು ಅದರ ಕಾರ್ಯಭೂತವಾದ ಅನೇಕ ವಿಕಾರಗಳಲ್ಲಿ ಅನೇಕ ಚೈತನ್ಯ ಗುಣಗಳನ್ನು ಕಲ್ಪಿಸಿಕೊಂಡರೆ ಹೆಚ್ಚಾದೀತು. ಆದ್ದರಿಂದ ಆ ಮಿತಿಮೀರಿದ ಕಲ್ಪನೆಗಿಂತ ಚಿತ್‌ಪ್ರಕಾಶರೂಪವಾದ, ಎಲ್ಲ ಜೊತೆಗೂಡಿದ ತತ್ವಗಳಿಗಿಂತ ವಿಲಕ್ಷಣವಾದ ಪುರುಷತತ್ತ್ವವನ್ನು ಕಲ್ಪಿಸುವುದು ಸುಲಭ ಮತ್ತು ಉಚಿತ.

ಭಾಷ್ಯ: *ಅನೇನ ಸೂತ್ರೇಣ ನಿಮಿತ್ತಕಾರಣತಯಾ ಪುರುಷಾನುಮಾನಂ ಉಕ್ತಮ್, ಪುರುಷಾರ್ಥಸ್ಯಾಽಖಿಲವಸ್ತುಸಂಹನನನಿಮಿತ್ತತ್ವ ವಚನಾತ್ । ಅತ ಏವ ಸರ್ಗಾದುತ್ಪನ್ನಂ ಪುರುಷಂ ಪ್ರಕೃತ್ಯ ವಿಷ್ಣುಪುರಾಣಾದೌ ಸ್ಮರ್ಯತೇ ।*

ಅನುವಾದ: ಈ ಸೂತ್ರದ ಮುಖಾಂತರ ನಿಮಿತ್ತ ಕಾರಣವಾಗಿ ಪುರುಷನನ್ನು ಅನುಮಾನ ಮಾಡಲಾಗಿದೆ. ಏಕೆಂದರೆ ಎಲ್ಲ ವಸ್ತುಗಳೂ ಜೊತೆಗೂಡುವುದರ ನಿಮಿತ್ತ ಪುರುಷನ ಸಲುವಾಗಿಯೇ. ಆದ್ದರಿಂದ ಸರ್ಗದಲ್ಲಿ ಗೋಚರವಾಗುವ ಪುರುಷನನ್ನು ಉದ್ದೇಶಿಸಿ ವಿಷ್ಣುಪುರಾಣಾದಿಗಳಲ್ಲಿ ಹೀಗೆ ಹೇಳಿದೆ.

ಭಾಷ್ಯ: *ನಿಮಿತ್ತ ಮಾತ್ರಮೇವಾಸೌ ಸೃಜ್ಯಾನಾಂ ಸರ್ಗಕರ್ಮಣಿ ।*
ಪ್ರಧಾನಕಾರಣೀಭೂತಾ ಯತೋ ವೈ ಸೃಜ್ಯಶಕ್ತಯಃ ॥ ವಿ.ಪು. ೪.೫೨ ॥

ಅನುವಾದ: ಈ (ಪುರುಷನು) ಸೃಷ್ಟಿಕಾರ್ಯದಲ್ಲಿ ಸೃಷ್ಟವಾಗುವ ವಸ್ತುಗಳಿಗೆ ನಿಮಿತ್ತ ಮಾತ್ರನು. ಏಕೆಂದರೆ ಸೃಷ್ಟಿಯಾಗುವ ವಸ್ತುಗಳ ಶಕ್ತಿಗಳು ಪ್ರಕೃತಿಯ ಕಾರಣದಿಂದ ಉಂಟಾಗುತ್ತವೆ.

ಭಾಷ್ಯ: *ಗುಣಸಾಮ್ಯಾತ್ತತಸ್ತಸ್ಮಾತ್ ಕ್ಷೇತ್ರಜ್ಞಾಧಿಷ್ಠಿತಾನ್ಮುನೇ ।*
ಗುಣವ್ಯಜನಸಂಭೂತಿಃ ಸರ್ಗಕಾಲೇ ದ್ವಿಜೋತ್ತಮ ॥ ವಿ.ಪು. ೧.೬೦–೬೬

ಅನುವಾದ: ಆದ್ದರಿಂದ ಎಲೈ ಮುನಿಯೇ, ಕ್ಷೇತ್ರಜ್ಞನಲ್ಲಿ ಆಶ್ರಯಪಡೆದು ಗುಣಗಳು ಸಮಾನವಾಗಿರುವಾಗ ಸೃಷ್ಟಿಯ ಸಮಯದಲ್ಲಿ ಗುಣಗಳ ಅಭಿವ್ಯಕ್ತಿ ರೂಪವಾದ ಉತ್ಪತ್ತಿಯು ಉಂಟಾಗುವುದು.

ಭಾಷ್ಯ: *ಇತ್ಯಾದಿ ಕ್ಷೇತ್ರಜ್ಞಾಧಿಷ್ಠಾನಂ ಅಸಮಾಪ್ತಪುರುಷಾರ್ಥಸ್ಯ ಸಂಯೋಗಮಾತ್ರಂ ಗುಣವ್ಯಂಜನಂ ಮಹತ್ತತ್ವಂ ಕಾರಣತಯಾ ತ್ರಿಗುಣಾತ್ಮವ್ಯಂಜಕಪ್ರಧಾನತ್ವಾದಿತಿ । ತದೇವಮಚಾಕ್ಷುಷಾಣಾಂ ಅನುಮಾನೇನ ಸಿದ್ಧಿರುಕ್ತಾ । (ಸೂ. ೧೬೦)*

ಅನುವಾದ: (ಈ ಉಕ್ತಿಗಳಿಂದ) ಎಲ್ಲದರ ಅಧಿಷ್ಠಾನ ಕ್ಷೇತ್ರಜ್ಞವೇ ಇದರ ಕಾರ್ಯ ಅಸಮಾಪ್ತವಾದ ಪುರುಷಾರ್ಥವುಳ್ಳ ಸಂಯೋಗ ಮಾಡುವುದಷ್ಟೆ. 'ಗುಣವ್ಯಂಜನ' ವೆಂದರೆ ಮಹತ್ತತ್ವ. ಅದರಿಂದಲೇ ಅದಕ್ಕೆ ಕಾರಣವಾದ ತ್ರಿಗುಣಾತ್ಮಕವಾದ ಪ್ರಧಾನದ ಅಭಿವ್ಯಕ್ತಿಯಾಗುವುದು. ಆದರೆ ಇದಾವುದೂ ಕಣ್ಣಿಗೆ ಕಾಣದು. ಆದ್ದರಿಂದ ಇದರ ಅಸ್ತಿತ್ವವನ್ನು ಅನುಮಾನದಿಂದ ಹೇಳಲಾಗಿದೆ.

ವಿವರಣೆ: ಇಲ್ಲಿ ಕ್ಷೇತ್ರಜ್ಞನೆಂದರೆ ಪುರುಷನೆಂದು ಅರ್ಥ. 'ಪುರುಷಾರ್ಥ'ವೆಂದರೆ ಪುರುಷನ ಸಲುವಾಗಿ ಇರುವುದು ಎಂದರೆ ಭೋಗಾಪವರ್ಗಗಳು.

ಭಾಷ್ಯ: *ಇದಾನೀಂ ಸರ್ವಕಾರಣತ್ವೋಪಪತ್ತಯೇ ಪ್ರಕೃತಿನಿತ್ಯತ್ವಂ ಉಪಪಾದ್ಯತೇ ಪುರುಷತಾಟಸ್ಥ್ಯಸಿದ್ಧ್ಯರ್ಥಮ್ ।*

ಅನುವಾದ: ಇನ್ನು ಎಲ್ಲಕ್ಕೂ ಕಾರಣವನ್ನು ನಿರ್ಧರಿಸಲು ಪ್ರಕೃತಿಯ ನಿತ್ಯತ್ವವನ್ನು ತಿಳಿಸಲಾಗಿದೆ. ಅದರಿಂದ ಪುರುಷನು ನಾಶರಹಿತನು ಎಂಬುದೂ ತಿಳಿಯುವುದು.

ಸೂತ್ರ: ಮೂಲೇ ಮೂಲಾಭಾವಾತ್ ಅಮೂಲಂ ಮೂಲಮ್ ॥ ೬೭ ॥

ಅನುವಾದ: ಮೂಲದಲ್ಲಿ ಮೂಲದ (ಉಪಾದಾನ ಕಾರಣದ) ಅಭಾವವಿರುವುದರಿಂದ ಆ ಮೂಲಕ್ಕೆ ಮತ್ತೆ ಮೂಲವಿರುವುದಿಲ್ಲ.

ಭಾಷ್ಯ: *ತ್ರಯೋವಿಂಶತಿತತ್ತ್ವಾನಾಂ ಮೂಲಮುಪಾದಾನಂ ಪ್ರಧಾನಂ ಮೂಲಶೂನ್ಯಮ್ । ಅನವಸ್ಥಾಪತ್ತ್ಯಾ ತತ್ರ ಮೂಲಾಂತರಾಸಂಭವಾದಿತ್ಯರ್ಥಃ ।*

ಅನುವಾದ: ಇಪ್ಪತ್ಮೂರು ತತ್ತ್ವಗಳ ಮೂಲ, ಎಂದರೆ ಉಪಾದಾನವಾದ ಪ್ರಕೃತಿಯು ತನಗೆ ಮೂಲವಿಲ್ಲದ್ದು. ಏಕೆಂದರೆ ಹಾಗಾದಲ್ಲಿ ಮೂಲಾಂತರವು ಸಾಧ್ಯವಾಗುತ್ತಾ ಅನವಸ್ಥಾ ದೋಷವುಂಟಾಗುವುದು.

ವಿವರಣೆ: ಅನವಸ್ಥಾ ಎಂದರೆ ಬದಲಾಗಿ ವಸ್ತುಗಳ ಕಲ್ಪನೆಯ ಪರಂಪರೆಗೆ ವಿರಾಮ ದೊರೆಯದ ಸ್ಥಿತಿ. ಉದಾಹರಣೆಗೆ, ಪ್ರಕೃತಿಗೆ ಮೂಲವಿದ್ದರೆ, ಅದಕ್ಕೊಂದು ಮೂಲ, ಅದಕ್ಕೊಂದು ಮೂಲ. ಹೀಗೆ ಅನಿಶ್ಚಿತತೆಗೆ ಎಡೆಯಾಗುವುದು.

ಭಾಷ್ಯ: *ನನು 'ತಸ್ಮಾದವ್ಯಕ್ತಮುತ್ಪನ್ನಂ ತ್ರಿಗುಣಂ ದ್ವಿಜಸತ್ತಮ' ।*

(ಮ.ಭಾ.ಶಾಂ.ಪ. ೩೩೪.೩೧)

ಇತ್ಯಾದಿನಾ ಪ್ರಧಾನಸ್ಯಾಪಿ ಪುರುಷಾದುತ್ಪತ್ತಿಶ್ರವಣಾತ್ ಪುರುಷ ಏವ ಪ್ರಕೃತೇರ್ಮೂಲಂ ಭವತು, ಪುರುಷಸ್ಯ ನಿತ್ಯತಯಾ ನಾನವಸ್ಥಾ, ಅವಿದ್ಯಾದ್ವಾರಕತಯಾ ಚ ನ ಪುರುಷಕೌಟಸ್ಥ್ಯ ಹಾನಿಃ ತಥಾ ಚ ಸ್ಮರ್ಯತೇ,

ತಸ್ಮಾದಜ್ಞಾನಮೂಲೋಽಯಂ ಸಂಸಾರಃ ಪುರುಷಸ್ಯ ಹಿ । ಇತಿ–।

(ಕೂ.ಪು. ೨.೨.೧೬)

ಅನುವಾದ: 'ಅದರಿಂದ ಮೂರು ಗುಣಗಳಿಂದ ಕೂಡಿದ ಅವ್ಯಕ್ತವು ಉತ್ಪನ್ನವಾಯಿತು' (ಮಹಾಭಾರತ), ಈ ಮಾತುಗಳಿಂದ ಪ್ರಧಾನವೂ ಸಹ ಪುರುಷನಿಂದ ಉತ್ಪತ್ತಿಯಾಯಿತೆಂದು ಕೇಳಿರುವುದರಿಂದ ಪುರುಷನೇ ಪ್ರಕೃತಿಗೆ ಮೂಲವೆಂದು ತಿಳಿಯಬೇಕಲ್ಲವೆ? ಪುರುಷನು ನಿತ್ಯನಾಗಿರುವುದರಿಂದ ಅನವಸ್ಥಾ ದೋಷವೂ ಬಾರದು. ಅವಿದ್ಯೆಯ ದ್ವಾರಾ ಇದು ಆಗುವುದೆಂದು ಭಾವಿಸುವುದರಿಂದ ಪುರುಷನು ಕೂಟಸ್ಥನೆಂಬುದಕ್ಕೂ ಹಾನಿಬಾರದು. ಹಾಗೆಯೇ ಈ ಸ್ಮೃತಿಯನ್ನು (ನೋಡೋಣ) ಈ ಪುರುಷನ ಸಂಸಾರವು ಅಜ್ಞಾನದ ಮೂಲವನ್ನು ಹೊಂದಿದೆ. ಇತ್ಯಾಶಂಕ್ಯಾಹ –ಎಂದು ಶಂಕಿಸಿ ಹೀಗೆ ಹೇಳಿದೆ.

ಸೂತ್ರ: ಪಾರಂಪರ್ಯೇಽಪ್ಯೇಕತ್ರ ಪರಿನಿಷ್ಠೇತಿ ಸಂಜ್ಞಾಮಾತ್ರಮ್ ॥ ೬೮ ॥

ಅನುವಾದ: 'ಪರಂಪರೆಯನ್ನು ಸ್ವೀಕರಿಸಿದರೂ ಒಂದೆಡೆ ನಿಲ್ಲುವುದು ಆವಶ್ಯಕ' ಎಂದು ಹೆಸರಿನಲ್ಲಿ ಮಾತ್ರ (ಪ್ರಕೃತಿ) ಎನ್ನಲಾಗಿದೆ.

ಭಾಷ್ಯ: *ಅವಿದ್ಯಾದಿದ್ವಾರೇಣ ಪರಂಪರಯಾ ಪುರುಷಸ್ಯ ಜಗನ್ ಮೂಲಕಾರಣತ್ವೇಽಪ್ಯೇಕಸ್ಮಿನ್ನವಿದ್ಯಾದೌ ಯತ್ರಕುತ್ರಚಿನ್ನಿತ್ಯೇ ದ್ವಾರೇ ಪರಂಪರಾಯಾಃ ಪರ್ಯವಸಾನಂ ಭವಿಷ್ಯತಿ ಪುರುಷಸ್ಯಾಪರಿಣಾಮಿತ್ವಾತ್ । ಅತಃ ಯತ್ರ ಪರ್ಯವಸಾನಂ ಸೈವ ನಿತ್ಯಾ ಪ್ರಕೃತಿಃ । ಪ್ರಕೃತಿರಿಹ ಮೂಲಕಾರಣಸ್ಯ ಸಂಜ್ಞಾಮಾತ್ರಮಿತ್ಯರ್ಥಃ ।*

ಅನುವಾದ: ಅವಿದ್ಯಾದಿಗಳ ಮೂಲಕ ಪರಂಪರೆಯಂತೆ ಪುರುಷನೇ ಜಗತ್ತಿನ ಮೂಲ ಕಾರಣನಾದರೂ ಅವಿದ್ಯಾದಿಗಳಲ್ಲಿ ಯಾವುದಾದರೂ ಒಂದು ನಿತ್ಯಪದಾರ್ಥವನ್ನು ನಡುವೆ ಮಾಡಿಕೊಂಡು ಪರಂಪರೆಯು ಕೊನೆಗೊಳ್ಳುವುದು; ಏಕೆಂದರೆ ಪುರುಷನು ಪರಿಣಾಮರಹಿತನು. ಆದ್ದರಿಂದ ಅದು ಎಲ್ಲಿ ಕೊನೆಗೊಳ್ಳುವುದೋ ಅದನ್ನೇ ನಿತ್ಯಪ್ರಕೃತಿ ಯೆಂದು ತಿಳಿಯಬೇಕು. ಪ್ರಕೃತಿ ಎಂಬ ಶಬ್ದ ಮೂಲಕಾರಣದ ಒಂದು ಹೆಸರಷ್ಟೆ.

ವಿವರಣೆ: ಜಗತ್ತಿನ ಸೃಷ್ಟಿಯ ಕಾರಣ ಪರಂಪರೆಯನ್ನು ಹುಡುಕುತ್ತಾ ಹೋದಲ್ಲಿ ಒಂದು ಹಂತದಲ್ಲಿ ಅದು ನಿಲ್ಲಬೇಕಷ್ಟೆ. ಆ ಪರಂಪರೆಯ ಮೂಲವಸ್ತುವನ್ನೇ 'ಪ್ರಕೃತಿ' ಎಂಬ ಹೆಸರಿಟ್ಟು ಕರೆದಿರುವರು. ಪರಿಣಾಮಕ್ಕೆ ಗುರಿಯಾಗುವುದು ಅಚೇತನವಾದ ಪ್ರಕೃತಿಯೇ ಹೊರತು ಚೇತನವಾದ ಪುರುಷನಲ್ಲ.

ಭಾಷ್ಯ: *ನನ್ವೇವಂ ಪಂಚವಿಂಶತಿತತ್ತ್ವಾನೀತಿ ನೋಪಪದ್ಯತೇ, ಮಹತ್ ತತ್ತ್ವಕಾರಣಾಪೇಕ್ಷಯಾಪಿ ಜಡತತ್ತ್ವಾಂತರಾಪತ್ತೇಃ ಇತಿ ಆಶಯೇನ ಮೂಲಸಮಾಧಾನಮಾಹ–*

ಅನುವಾದ: ಹಾಗಾದರೆ ಇಪ್ಪತ್ತೈದು ತತ್ತ್ವಗಳೆಂದು ಹೇಳಲಾಗದು. ಮಹತ್ತತ್ತ್ವಕ್ಕೆ ಕಾರಣವಾದ ಅವ್ಯಕ್ತವನ್ನು ಬಿಟ್ಟರೆ ಮತ್ತೊಂದು ಜಡತತ್ತ್ವವು ಒದಗುವುದು. ಈ ಉದ್ದೇಶದಿಂದ ಮುಂದಿನ ಸೂತ್ರದಲ್ಲಿ ಸಮಾಧಾನ ಹೇಳಲಾಗಿದೆ.

ವಿವರಣೆ: ಇಲ್ಲಿ ಪ್ರಶ್ನೆಯೇನೆಂದರೆ, 'ಅವ್ಯಕ್ತ'ವು ವ್ಯಕ್ತವಾದ ಮಹತ್ತಿಗೆ (ಬುದ್ಧಿಗೆ) ಹೇಗೆ ಕಾರಣವಾಗಬಲ್ಲುದು? ಎಂದು.

ಸೂತ್ರ: ಸಮಾನಃ ಪ್ರಕೃತೇರ್ದ್ವಯೋಃ ॥ ೬೯ ॥

ಅನುವಾದ: ಪ್ರಕೃತಿಯ (ಉಪಾದಾನತ್ವವು) ಇಬ್ಬರಿಗೂ ಸಮಾನವಾದುದು.

ವಿವರಣೆ: ಇಬ್ಬರಿಗೂ ಎಂದರೆ ವಾದಿ–ಪ್ರತಿವಾದಿಗಳಾದ ನಮಗೆ.

ಭಾಷ್ಯ: *ವಸ್ತುತಸ್ತು ಪ್ರಕೃತೇರ್ಮೂಲಕಾರಣವಿಚಾರೇ ದ್ವಯೋಃ ವಾದಪ್ರತಿವಾದಿನೋಃ ಆವಯೋಃ ಸಮಾನಃ ಪಕ್ಷಃ*

ಅನುವಾದ: ವಾಸ್ತವವಾಗಿ ಪ್ರಕೃತಿಯ ಮೂಲಕಾರಣ ವಿಚಾರದಲ್ಲಿ ವಾದಿಪ್ರತಿವಾದಿಗಳಾದ ನಮ್ಮ ಇಬ್ಬರ ಪಕ್ಷಗಳೂ ಸಮಾನವಾಗಿವೆ.

ಭಾಷ್ಯ: *ಏತದುಕ್ತಂ ಭವತಿ – ಯಥಾ ಪ್ರಕೃತೇರುತ್ಪತ್ತಿಃ ಶ್ರೂಯತೇ*
ಏವಮವಿದ್ಯಾಯಾ ಅಪಿ ।
ಅವಿದ್ಯಾ ಪಂಚಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಾ ।
ಇತ್ಯಾದಿ ವಾಕ್ಯೈಃ । ವಿ.ಪು. ೧.೫.೫
ಅತ ಏಕಸ್ಯಾ ಅವಶ್ಯಂ ಗೌಣ್ಯುತ್ಪತ್ತಿರ್ವಕ್ತವ್ಯಾ । ತತ್ರ ಚ
ಪ್ರಕೃತೇರೇವ ಪುರುಷಸಂಯೋಗಾದಿಭಿರ್ವ್ಯಕ್ತರೂಪಾ
ಗೌಣ್ಯುತ್ಪತ್ತಿರ್ಯುಕ್ತಾ ।
ಸಂಯೋಗಲಕ್ಷಣೋತ್ಪತ್ತಿಃ ಕಥ್ಯತೇ ಕರ್ಮಜ್ಞಾನಯೋಃ ।

ಅನುವಾದ: ಹೇಳುವ ಅಭಿಪ್ರಾಯವೇನೆಂದರೆ ಹೇಗೆ ಪ್ರಕೃತಿಯ ಉತ್ಪತ್ತಿಯ ಬಗ್ಗೆ ಕೇಳಲ್ಪಟ್ಟಿದೆಯೋ ಹಾಗೆಯೇ ಅವಿದ್ಯೆಯ ಬಗ್ಗೆಯೂ ಕೇಳಿದ್ದೇವೆ. 'ಐದು ಭಾಗಗಳಿಂದ ಕೂಡಿದ ಅವಿದ್ಯೆಯು ಮಹಾನ್ ಆತ್ಮನಿಂದ ಹುಟ್ಟಿದುವು' ಮುಂತಾದ ವಾಕ್ಯಗಳಿಂದ. ಆದ್ದರಿಂದ ಇವೆರಡರಲ್ಲಿ ಒಂದು ಗೌಣ ಉತ್ಪತ್ತಿಯೆಂದು ಹೇಳಬೇಕಾಗುತ್ತದೆ. ಅದರಲ್ಲೂ ಪ್ರಕೃತಿಯೆಂದೇ ಹೇಳಬೇಕಾಗುವುದು. ಏಕೆಂದರೆ ಪುರುಷಸಂಯೋಗಾದಿ ದ್ವಾರಾ ಅದರ ಅಭಿವ್ಯಕ್ತಿರೂಪದ ಉತ್ಪತ್ತಿಯಾಗುತ್ತದೆ.

ಕರ್ಮ ಮತ್ತು ಜ್ಞಾನಗಳು ಉತ್ಪತ್ತಿಯಾಗಿ ಪರಸ್ಪರ ಸಂಯೋಗದ ಲಕ್ಷಣವನ್ನು ಪಡೆಯುತ್ತವೆ' (ಕೂರ್ಮ ಪುರಾಣ)

ಭಾಷ್ಯ: *ಇತಿ ಕೌರ್ಮವಾಕ್ಯೇ ಪ್ರಕೃತಿಪುರುಷಯೋಃ ಗೌಣೋತ್ಪತ್ತಿ–ಸ್ಮರಣಾತ್ । ಅವಿದ್ಯಾಯಾಶ್ಚ ಕ್ವಾಪಿ ಗೌಣೋತ್ಪತ್ತಿಶ್ರವ–ಣಾತ್, ತಸ್ಯಾ ನಾದಿತಾವಾಕ್ಯಾನಿತು ಪ್ರವಾಹರೂಪೇಣೈವ ವಾಸನಾದ್ಯನಾದಿವಾಕ್ಯವತ್ ವ್ಯಾಖ್ಯೇಯಾನೀತಿ ।*

ಅನುವಾದ: ಹೀಗೆ ಕೂರ್ಮಪುರಾಣದ ವಾಕ್ಯದಲ್ಲಿ ಪ್ರಕೃತಿ–ಪುರುಷರ ಗೌಣ ಉತ್ಪತ್ತಿ ಹೇಳಲ್ಪಟ್ಟಿದೆ. ಆದರೆ ಅವಿದ್ಯೆಯ ಗೌಣೋತ್ಪತ್ತಿಯನ್ನು ಕುರಿತು ಹೇಳಿಲ್ಲ. ಆದ್ದರಿಂದ

ಅದು ಅನಾದಿ. ಅದರ ಅನಾದಿತೆಯನ್ನು ಕುರಿತು ಹೇಳಿರುವ ವಾಕ್ಯಗಳು ವಾಸನಾದಿಗಳ ವಾಕ್ಯದಂತೆ ಪ್ರವಾಹರೂಪದಲ್ಲಿ ವ್ಯಾಖ್ಯಾನ ಮಾಡಬೇಕು.

ಭಾಷ್ಯ: *ಅವಿದ್ಯಾ ಚ ಮಿಥ್ಯಾಜ್ಞಾನರೂಪಾ ಬುದ್ಧಿಧರ್ಮ ಇತಿ ಯೋಗೇ ಸೂತ್ರಿತಂ (೧-೮), ಅತೋ ನ ತತ್ತ್ವಾಧಿಕ್ಯಮ್ ।*

ಅನುವಾದ: ಅವಿದ್ಯೆಯೂ ಮಿಥ್ಯಾಜ್ಞಾನರೂಪವಾದುದು. ಅದು ಬುದ್ಧಿಯ ಧರ್ಮ ಎಂದು ಯೋಗಸೂತ್ರದಲ್ಲಿ ಹೇಳಿದೆ. ಆದ್ದರಿಂದ (ಇಪ್ಪತ್ತೈದು) ತತ್ವಗಳಿಗಿಂತ ಹೆಚ್ಚಿಲ್ಲ.

ಭಾಷ್ಯ: *ಅಥವಾ ದ್ವಯೋಃ ಪ್ರಕೃತಿಪುರುಷಯೋಃ ಸಮಾನ ಏವ ನ್ಯಾಯಃ ಇತ್ಯರ್ಥಃ ।*

ಅನುವಾದ: ಅಥವಾ ಪ್ರಕೃತಿ-ಪುರುಷರೆರಡರಲ್ಲಿಯೂ ಸಮಾನವಾದ ನ್ಯಾಯವಿದೆ ಎಂದು ಅರ್ಥ.

ವಿವರಣೆ: 'ಅಥವಾ' ಎಂದರೆ 'ಈ ಸೂತ್ರದ ಮತ್ತೊಂದು ಅರ್ಥವೆಂದರೆ' ಎಂದು ಅಭಿಪ್ರಾಯ. 'ಸಮಾನ ನ್ಯಾಯಃ' ಎಂದರೆ 'ಒಂದೇ ತರ್ಕವಡಗಿದೆ' ಎಂದರ್ಥ.

ಭಾಷ್ಯ: *ಯತಃ ಪ್ರಧಾನಪುರುಷೌ ಯತಶ್ಚೈತಚ್ಚರಾಚರಮ್ ।
ಕಾರಣಂ ಸಕಲಸ್ಯಾಸ್ಯ ಸ ನೋ ವಿಷ್ಣುಃ ಪ್ರಸೀದತು ॥*

ಅನುವಾದ: ಯಾರಿಂದ ಪ್ರಧಾನಪುರುಷರೂ, ಯಾರಿಂದ ಈ ಚರಾಚರ ಜಗತ್ತು ಉತ್ಪನ್ನವಾಗಿದೆಯೋ, ಈ ಎಲ್ಲಕ್ಕೂ ಯಾರು ಕಾರಣರೋ ಆ ವಿಷ್ಣುವು ನಮ್ಮಲ್ಲಿ ಪ್ರಸನ್ನನಾಗಲಿ.

ಭಾಷ್ಯ: *ಇತ್ಯಾದಿವಾಕ್ಯೈಃ ಪುರುಷಸ್ಯಾಪಿ ಉತ್ಪತ್ತಿಶ್ರವಣಾದಿತಿ ಭಾವಃ । ತಥಾ ಚ ಪುರುಷಸ್ಯೇವ ಪ್ರಕೃತೇರಪಿ ಗೌಣ್ಯೇವೋತ್ಪತ್ತಿಃ । ನಿತ್ಯತ್ವಶ್ರವಣಾದಿತ್ಯಪಿ ಸಮಾನಮಿತಿ । ತಸ್ಮಾತ್ ಪ್ರಕೃತೇರೇವ ಉಪಾದಾನಂ ಜಗತಃ । ಪ್ರಕೃತಿಧರ್ಮಶ್ಚ ಅವಿದ್ಯಾ ಜಗನ್ನಿಮಿತ್ತ-ಕಾರಣಮ್ । ತಥಾ ಪುರುಷೋಽಪೀತಿ ಸಿದ್ಧಮ್ ।*

ಅನುವಾದ: ಇತ್ಯಾದಿ ವಾಕ್ಯಗಳಿಂದ ಪುರುಷನ ಉತ್ಪತ್ತಿಯೂ ಕೇಳಿಬರುವುದು. ಹಾಗೆಯೇ ಪುರುಷನಂತೆಯೇ ಪ್ರಕೃತಿಯೂ ಉತ್ಪನ್ನವಾದುದು. ಗೌಣದಾದುದು. ಆದ್ದರಿಂದ ಪ್ರಕೃತಿಯೇ ಧರ್ಮ. ಅದು ಜಗತ್ತಿಗೆ ನಿಮಿತ್ತ ಕಾರಣ. ಹಾಗೆಯೇ ಪುರುಷನನ್ನೂ ಹಾಗೆಂದೇ ಭಾವಿಸಬೇಕು.

ಭಾಷ್ಯ: *ಯತ್ತು, ಅವಿದ್ಯಾಮಾಹುರವ್ಯಕ್ತಂ ಸರ್ಗಪ್ರಲಯಧರ್ಮಿಣಮ್ ।
ಸರ್ಗಪ್ರಲಯನಿರ್ಮುಕ್ತಂ ವಿದ್ಯಾಂ ವೈ ಪಂಚವಿಂಶಕಮ್ ॥
(ಮ.ಭಾ.ಶಾಂ.ಪ. ೩೦೭/೨)*

ಅನುವಾದ: (ಋಷಿಗಳು) ಸೃಷ್ಟಿ–ಪ್ರಲಯಗಳಿಂದ ಕೂಡಿದ ಅವಿದ್ಯೆಯನ್ನು ಅವ್ಯಕ್ತ (ಪ್ರಕೃತಿ) ಎನ್ನುತ್ತಾರೆ. ಸೃಷ್ಟಿ–ಪ್ರಲಯಗಳಿಲ್ಲದ್ದನ್ನು ವಿದ್ಯೆ ಎನ್ನುತ್ತಾರೆ. ಆದ್ದರಿಂದ (ತತ್ತ್ವಗಳು) ಇಪ್ಪತ್ತೈದು ಮಾತ್ರವೇ.

ಭಾಷ್ಯ: *ಇತಿ ಮೋಕ್ಷಧರ್ಮೇ ಪ್ರಕೃತಿ–ಪುರುಷಯೋಃ ಅವಿದ್ಯಾ–ವಿದ್ಯೇತಿ ವಚನಮ್ । ತತ್ತು ತದುಭಯ ವಿಷಯೋಪ–ಚರಿತಮೇವ । ಪರಿಣಾಮಿತ್ತ್ವೇನ ಹಿ ಪುರುಷಾಪೇಕ್ಷಯಾ ಪ್ರಕೃತಿರಸತೀತಿ ತಸ್ಯಾ ಅವಿದ್ಯಾವಿಷಯತ್ತ್ವಮುಕ್ತಮ್ ।*

ಅನುವಾದ: ಹೀಗೆ ಮೋಕ್ಷಧರ್ಮದಲ್ಲಿ 'ಅವಿದ್ಯಾ–ವಿದ್ಯಾ' ಎಂದು ಕ್ರಮವಾಗಿ ಪ್ರಕೃತಿ–ಪುರುಷರನ್ನು ಕರೆಯಲಾಗಿದೆ. ಅದು ಎರಡನ್ನೂ ಕುರಿತು ಹೇಳಿರುವುದರಿಂದ ಔಪಚಾರಿಕವಾಗಿ ಹೇಳಲಾಗಿದೆ. ಪರಿಣಾಮಗೊಳ್ಳುವುದರಿಂದ ಪುರುಷನಿಗಿಂತ ಭಿನ್ನವಾಗಿ ಪ್ರಕೃತಿಯು ಅಸತ್ತೆನಿಸಿಕೊಳ್ಳುತ್ತದೆ. ಆದ್ದರಿಂದ ಅದನ್ನು ಅವಿದ್ಯಾ ವಿಷಯತ್ತ್ವವುಳ್ಳದ್ದೆಂದು ಹೇಳಿದೆ.

ಭಾಷ್ಯ: *ಏವಮೇವ ತಸ್ಮಿನ್ ಪ್ರಕರಣೇ ಸ್ವ–ಸ್ವಕಾರಣಾಪೇಕ್ಷಯಾ ಭೂತಾಂತಂ ಕಾರ್ಯಜಾತಮವಿದ್ಯೇತ್ಯುಕ್ತಮ್ । ಸ್ವ–ಸ್ವಾಪೇಕ್ಷಯಾ ಚ ಸ್ವಸ್ವಕಾರಣಂ ವಿದ್ಯೇತಿ । ಪುರುಷಸ್ಯ ಪರಿಣಾಮರೂಪಂ ಜಗದು–ಪಾದಾನತ್ವಂ ತು ಪ್ರಕೃತ್ಯುಪಾಧಿಕಮೇವ ಕರ್ತೃತ್ವಾದಿವತ್ ಶ್ರುತಿ–ಸ್ಮೃತ್ಯೋರುಪಾಸಾರ್ಥಮೇವಾನೂದ್ಯತೇ । ಅನ್ಯಥಾ ಅಸ್ಥೂಲಂ ಅನಣ್ವಹ್ರಸ್ವಮ್ । (ಬೃ.ಉ. ೩.೮.೮) ಇತ್ಯಾದಿ ಶ್ರುತಿವಿರೋಧಾಪತ್ತೇಃ ಇತಿ ಮಂತವ್ಯಮ್ ।*

ಅನುವಾದ: ಇದೇ ರೀತಿ ಆ ಪ್ರಕರಣದಲ್ಲಿ ತಮ್ಮ ತಮ್ಮ ಕಾರಣಗಳಿಗೆ ಸಂಬಂಧಿಸಿದಂತೆ ಭೂತಗಳವರೆಗೆ ಇರುವ ಕಾರ್ಯಗಳ ಸಮೂಹ ಅವಿದ್ಯೆಯೆಂದು ಹೇಳಲಾಗಿದೆ. ತಮ್ಮ ತಮ್ಮ ಅಗತ್ಯದಂತೆ ತಮ್ಮ ತಮ್ಮ ಕಾರಣವನ್ನು ವಿದ್ಯೆ ಎಂದು ಹೇಳಲಾಗಿದೆ. ಪುರುಷನು ಪರಿಣಾಮಗೊಳ್ಳುವವನಾಗಿ ಜಗತ್ತಿಗೆ ಉಪಾದಾನ ಕಾರಣವಾಗುವುದು ಎಂಬುದು ಪ್ರಕೃತಿಯನ್ನು ಉಪಾಧಿಯಾಗಿ ಮಾಡಿಕೊಂಡು ಕರ್ತೃವಿನಂತೆ ಮಾತ್ರ ಕಾಣುವುದರಿಂದ. ಇದನ್ನು ಶ್ರುತಿ, ಸ್ಮೃತಿಗಳಲ್ಲಿ ಉಪಾಸನೆಗೆ ಮಾತ್ರ ಹೇಳಿದೆ. ಹಾಗಿಲ್ಲದಿದ್ದಲ್ಲಿ 'ಅದು ಸ್ಥೂಲವಲ್ಲ, ಅಣುವಲ್ಲ, ಹ್ರಸ್ವವೂ ಅಲ್ಲ (ಬೃ.ಉ)' ಮುಂತಾದ ಶ್ರುತಿಗಳಿಗೆ ವಿರೋಧವುಂಟಾಗುವುದು ಎಂದು ತಿಳಿಯಬೇಕಾಗುವುದು.

ವಿವರಣೆ: ಪುರುಷನು ಕೇವಲ ಉಪಾಧಿ ಮಾತ್ರದಿಂದ ಉಪಾದಾನ ಕಾರಣನೆಂದೂ ಉಪಾಸನೆಯ ಸಲುವಾಗಿ ಹಾಗೆ ಹೇಳಿದೆಯೆಂದೂ ತಿಳಿಯಬೇಕು.

ಭಾಷ್ಯ: *ಮಾಯಾಶಬ್ದೇನ ಚ ಪ್ರಕೃತಿರೇವೋಚ್ಯತೇ । 'ಮಾಯಾಂ ತು ಪ್ರಕೃತಿಂ ವಿದ್ಯಾದ್' (ಶ್ವೇ.ಉ. ೨/೧೦) ಇತಿ ಶ್ರುತೌ 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ ತಸ್ಮಿಂಶ್ಚಾನ್ಯೋ ಮಾಯಯಾ ಸನ್ನಿರುದ್ಧಃ । (ಶ್ವೇ.ಉ. ೪/೯) ಇತಿ ಪೂರ್ವಪ್ರಕ್ರಾಂತಮಾಯಾಯಾಃ ಪ್ರಕೃತಿಸ್ವರೂಪತಾವಚನಾತ್ ।*

ಅನುವಾದ: ಮಾಯಾ ಎಂದರೆ ಪ್ರಕೃತಿಯನ್ನೇ ಕುರಿತು ಹೇಳಿರುವುದು. ಮಾಯಾ ಎಂದರೆ ಪ್ರಕೃತಿಯೆಂದೇ ತಿಳಿಯಬೇಕು. 'ಮಾಯಿಯು ಈ ವಿಶ್ವವನ್ನು ಸೃಷ್ಟಿಸುತ್ತಾನೆ. ಅದರಲ್ಲಿ ಮತ್ತೊಬ್ಬನು ಬಂಧಿಸಲ್ಪಟ್ಟಿದ್ದಾನೆ.' ಈ ಉಕ್ತಿಯಿಂದ ಮೊದಲು ನಿರ್ದೇಶಿಸಿದ ಮಾಯೆಯನ್ನೇ ಪ್ರಕೃತಿ ಸ್ವರೂಪವೆಂದು ಹೇಳಲಾಗಿದೆ.

ವಿವರಣೆ: 'ಮಾಯೀ' ಎಂದರೆ 'ಮಾಯೆಯನ್ನು ಅವಲಂಬಿಸಿ' ಎಂದರ್ಥ.

ಭಾಷ್ಯ: *'ಸತ್ತ್ವಂ ರಜಸ್ತಮ ಇತಿ ಪ್ರಾಕೃತಂ ತು ಗುಣತ್ರಯಮ್ ।*
ಏತನ್ಮಯೀ ಚ ಪ್ರಕೃತಿಃ ಮಾಯಾ ಯಾ ವೈಷ್ಣವೀ ಶ್ರುತಾ ॥
ಲೋಹಿತಶ್ವೇತಕೃಷ್ಣೇತಿ ತಸ್ಯಾಸ್ತಃ ದೃಗ್ಬಹುಪೂಜಾಃ' ।
ಇತ್ಯಾದಿ ಸ್ಮೃತಿಭ್ಯಶ್ಚ ನ ತು ಜ್ಞಾನನಾಶ್ಯಾ ಅವಿದ್ಯಾ ಮಾಯಾ ಶಬ್ದಾರ್ಥೋ, ನಿತ್ಯತ್ವಾನುಪಪತ್ತೇಃ ।

ಅನುವಾದ: ಸತ್ತ್ವ, ರಜಸ್, ತಮಗಳು ಪ್ರಕೃತಿಗೆ ಸಂಬಂಧಿಸಿದ ಗುಣಗಳು. ಪ್ರಕೃತಿಯು ಆ ಮೂರು ಗುಣಗಳನ್ನು ಕೂಡಿಕೊಂಡು ಇರುವುದು. ಮಾಯೆಯು ವಿಷ್ಣುವಿನದೆಂದು ಶ್ರುತಿ ಹೇಳುವುದು. ಅದು ಕೆಂಪು, ಬಿಳಿ ಮತ್ತು ಕಪ್ಪು ಬಣ್ಣಗಳಿಂದ ಕೂಡಿದೆ. ಅದರಿಂದಲೇ ಆ ಪ್ರಕಾರದ ಜನಗಳು ಉಂಟಾದರು.

ಇತ್ಯಾದಿ ಸ್ಮೃತಿಗಳಿಂದಲೂ 'ಮಾಯಾ' ಶಬ್ದದ ಅರ್ಥವು ಜ್ಞಾನದಿಂದ ನಾಶವಾಗದ ಅವಿದ್ಯೆಯಲ್ಲ; ಹಾಗಿಲ್ಲದಿದ್ದಲ್ಲಿ ಅದರ ನಿತ್ಯತ್ವವು ದೊರೆಯದು.

ಭಾಷ್ಯ: *ಕಿಂಚ ಅವಿದ್ಯಾಯಾಃ ದ್ರವ್ಯತ್ವೇ ಶಬ್ದಮಾತ್ರಭೇದಃ ಗುಣತ್ವೇ ಚ ತದಾಧಾರತಯಾ ಪ್ರಕೃತಿಸಿದ್ಧಿಃ । ಪುರುಷಸ್ಯ ನಿರ್ಗುಣತ್ವಾದಿಭ್ಯಃ ।*

ಅನುವಾದ: ಅಷ್ಟೇ ಅಲ್ಲದೆ ಅವಿದ್ಯೆಯನ್ನು ದ್ರವ್ಯವೆಂದು ಕರೆದರೆ ಕೇವಲ ಶಬ್ದಭೇದವಷ್ಟೇ ಆಗುವುದು. ಗುಣದ ವಿಷಯದಲ್ಲಿ ಅದಕ್ಕೆ ಆಧಾರವಾಗಿ ಪ್ರಕೃತಿಯೇ ಸಿದ್ಧವಾಗುವುದು; ಏಕೆಂದರೆ ಪುರುಷನಲ್ಲಿ ನಿರ್ಗುಣತ್ವಾದಿಗಳಿವೆ.

ಭಾಷ್ಯ: *ಅಥ ದ್ರವ್ಯಗುಣಕರ್ಮವಿಲಕ್ಷಣೈವಾಸ್ಮಾಭಿರವಿದ್ಯಾ ವಕ್ತವ್ಯಾ ಇತಿ ಚೇನ್ನ । ತಾ ದೃಕ್ ಪದಾರ್ಥಾ ಪ್ರತೀತೇಃ ಉಕ್ತತ್ವಾದಿತಿ ।*

ಅನುವಾದ: 'ಹಾಗಾದರೆ ಅವಿದ್ಯೆಯು ದ್ರವ್ಯ, ಗುಣ, ಕರ್ಮಗಳಿಗಿಂತ ವಿಲಕ್ಷಣವಾದುದು ಎಂದು ನಾವು ಹೇಳಬೇಕಾಗುವುದು' ಎಂದರೆ ಅದು ಸರಿಯಲ್ಲ. ಅಂತಹ ಪದಾರ್ಥವು ತಿಳಿಯಲು ಬಾರದು ಎಂದು ಹೇಳಿದ್ದೇವೆ.

ವಿವರಣೆ: ನೋಡಿ –ಸೂತ್ರ ೧–೨೪, ತಾದೃಕ್ ಪದಾರ್ಥಾಪ್ರತೀತೇಃ.

ಭಾಷ್ಯ: *ನನು ಏವಂ ಚೇತ್ ಪ್ರಕೃತಿಪುರುಷಾದ್ಯನುಮಾನ ಪ್ರಕಾರೋಽಸ್ತಿ ತರ್ಹಿ ಸರ್ವೇಷಾಮೇವ ಕಥಂ ವಿವೇಕಮನನಂ ನ ಜಾಯತೇ? ತತ್ರಾಹ–*

ಅನುವಾದ: ಮೇಲೆ ಹೇಳಿದಂತೆ ಪ್ರಕೃತಿ, ಪುರುಷರ ಅನುಮಾನ ಮಾಡಿದಲ್ಲಿ ಎಲ್ಲರಿಗೂ ವಿವೇಕಜ್ಞಾನವು ಏಕಾಗುವುದಿಲ್ಲ? ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ಅಧಿಕಾರಿತ್ರೈವಿಧ್ಯಾನ್ನ ನಿಯಮಃ ॥ ೭೦ ॥

ಅನುವಾದ: ಅಧಿಕಾರಿಗಳು ಮೂರು ಬಗೆಯಾಗಿರುವುದರಿಂದ ಆ ನಿಯಮವಿಲ್ಲ.

ಭಾಷ್ಯ: *ಶ್ರವಣಾದಾವಿವ ಮನನೇಽಪ್ಯಧಿಕಾರಿಣಸ್ತ್ರಿವಿಧಾಃ ಮಂದಮಧ್ಯಮೋತ್ತಮಾಃ ಇತ್ಯತಃ ನ ಸರ್ವೇಷಾಮೇವ ಮನನನಿಯಮಃ । ಕುತರ್ಕಾದಿಭಿರ್ಮಂದ ಮಧ್ಯಮಯೋಃ ಬಾಧಸಪ್ರತಿಪಕ್ಷತಾಸಂಭವಾದಿತ್ಯರ್ಥಃ । ಮಂದೈಃ ಬೌದ್ಧಾದ್ಯುಕ್ತಕುತರ್ಕಜಾತೇನೋಕ್ತಾನುಮಾವಾನಿ ಬಾಧ್ಯಂತೇ । ಮಧ್ಯಮೈಶ್ಚ ಬುದ್ಧಾದ್ಯುಕ್ತೈರೇವ ವಿರುದ್ಧಾ ಸಂಲ್ಲಿಂಗೈಃ ಸಂಪ್ರತಿಪಕ್ಷಿತಾನಿ ಕ್ರಿಯಂತೇ । ಅತಃ ಉತ್ತಮಾಧಿಕಾರಿಣಾಂ ಏವ ಏತಾದೃಶಮನನಂ ಭವತೀತಿ ಭಾವಃ । ಪ್ರಕೃತೇಃ ಸ್ವರೂಪಂ ಗುಣಸಾಮ್ಯಂ ಪ್ರಾಗೇವೋಕ್ತಮ್ । ಸೂಕ್ಷ್ಮಭೂತಾ–ದಿಕಂ ಚ ಪ್ರಸಿದ್ಧಮೇವಾಸ್ತೀತಿ ।*

ಅನುವಾದ: (ಶಾಸ್ತ್ರಾದಿಗಳನ್ನು) ಕೇಳುವುದೇ ಮುಂತಾದವುಗಳಿಗೆ ಇರುವಂತೆ ಮನನದಲ್ಲಿಯೂ ಮೂರು ಬಗೆಯ ಅಧಿಕಾರಿಗಳು, ಮಂದ, ಮಧ್ಯಮ, ಉತ್ತಮ ಬಗೆಯವರು ಇರುವರು. ಆದ್ದರಿಂದ ಎಲ್ಲರಿಗೂ 'ಮನನ' ಮಾಡುವುದು ಸಾಧ್ಯವಿಲ್ಲ. ಮಂದ ಮಧ್ಯಮ ಅಧಿಕಾರಿಗಳು ಕುತರ್ಕಾದಿಗಳಲ್ಲಿ ತೊಡಗುವರು. ಏಕೆಂದರೆ ಬಾಧ, ಸಪ್ರತಿಪಕ್ಷಗಳು ಅಡ್ಡಿಬರುವ ಸಂಭವವುಂಟು. 'ಮಂದ' ಅಧಿಕಾರಿಗಳು ಮಾಡುವ ಅನುಮಾನವು ಬೌದ್ಧಾದಿಗಳು ಹೇಳಿದ ಕುತರ್ಕಗಳ ಸಮೂಹದಿಂದ ಬಾಧಿತವಾಗುವುವು. ಮಧ್ಯಮ ಅಧಿಕಾರಿಗಳು ಮಾಡುವ ಅನುಮಾನವು ಬೌದ್ಧಾದಿಗಳಿಂದ ಉಕ್ತವಾದ ವಿರುದ್ಧವೂ, ಅಸಲ್ಲಿಂಗವೂ ಆದ ತರ್ಕಗಳಿಂದ ಸತ್ಪ್ರತಿಪಕ್ಷಗಳಾಗುವುವು. ಆದ್ದರಿಂದ ಉತ್ತಮ ಅಧಿಕಾರಿಗಳಲ್ಲಿ ಮಾತ್ರವೇ ಇಂತಹ ಮನನವು ಸಾಧ್ಯ ಎಂದು ಅಭಿಪ್ರಾಯ. ಪ್ರಕೃತಿಯ ಮೂಲಸ್ವರೂಪವು ಗುಣಸಾಮ್ಯವೆಂದು ಮೊದಲೇ ಹೇಳಿದ್ದೇವೆ. ಸೂಕ್ಷ್ಮಭೂತಗಳೇ ಮೊದಲಾದುವು ಪ್ರಸಿದ್ಧವಾದುವೇ.

ವಿವರಣೆ: ಶಾಸ್ತ್ರ 'ಶ್ರವಣ' ಎಲ್ಲರಿಗೂ ಒಂದೇ ಆದರೂ 'ಮನನ' ಶಕ್ತಿ ಅವರವರ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಅಂತಹ ಅಧಿಕಾರಿಗಳನ್ನು ವಿಂಗಡಿಸಿ ಸೂತ್ರಕಾರನು ಅಧಿಕಾರಿತ್ರೈವಿಧ್ಯವನ್ನು ಹೇಳಿದ್ದಾನೆ.

ಭಾಷ್ಯ: *ಅವಶಿಷ್ಟಯೋಃ ಮಹದಹಂಕಾರಯೋಃ ಸ್ವರೂಪಮಾಹ ಸೂತ್ರಾಭ್ಯಾಮ್।*

ಅನುವಾದ: ಇನ್ನುಳಿದ ಮಹತ್ತು ಮತ್ತು ಅಹಂಕಾರಗಳ ಸ್ವರೂಪವನ್ನು ಎರಡು ಸೂತ್ರಗಳಲ್ಲಿ ಹೇಳಿದೆ.

ಸೂತ್ರ: ಮಹದಾಖ್ಯಂ ಆದ್ಯಂ ಕಾರ್ಯಂ ತನ್ಮನಃ ॥ ೭೧ ॥

ಅನುವಾದ: ಮಹತ್ತೆಂದು ಕರೆಯಲ್ಪಡುವ ಮೊದಲ ಕಾರ್ಯವು ಮನನ ಮಾಡುವ ಮನಸ್ಸು.

ಭಾಷ್ಯ: *ಮಹದಾಖ್ಯಮಾದ್ಯಂ ಕಾರ್ಯಂ ತನ್ಮನೋ ಮನನವೃತ್ತಿಕಮ್ । ಮನನಮತ್ರ ನಿಶ್ಚಯಃ । ತದ್ವೃತ್ತಿಕಾ ಬುದ್ಧಿಃ ಇತ್ಯರ್ಥಃ ।*

ಅನುವಾದ: ಮಹತ್ತೆಂಬ ಹೆಸರಿನ ಮೊದಲ ಕಾರ್ಯವು ಮನನ ಮಾಡುವುದರಿಂದ ಮನಸ್ಸೆನ್ನುವರು. ಮನನವೆಂದರೆ ನಿರ್ಧರಿಸುವುದು. ಹೀಗೆ ನಿರ್ಧರಿಸುವ ವೃತ್ತಿಯನ್ನು ಹೊಂದಿರುವ ಬುದ್ಧಿ ಎಂದರ್ಥ.

ಭಾಷ್ಯ: *ಯದೇತದ್ವಿಸ್ತೃತಂ ಬೀಜಂ ಪ್ರಧಾನಪುರುಷಾತ್ಮಕಮ್ ।*
ಮಹತ್ತತ್ತ್ವಮಿತಿ ಪ್ರೋಕ್ತಂ ಬುದ್ಧಿತತ್ತ್ವಂ ತದುಚ್ಯತೇ ॥
ಇತ್ಯಾದಿ ವಾಕ್ಯೇಭ್ಯೋ ಬುದ್ಧೇತಿವಾದ್ಯಕಾರ್ಯತ್ವಾವಗಮಾತ್ ।

ಅನುವಾದ: ಪ್ರಧಾನ–ಪುರುಷರ ಈ ಬೀಜವನ್ನು 'ಮಹತ್ತತ್ವ' ಎನ್ನುತ್ತಾರೆ. ಅದನ್ನೇ ಬುದ್ಧಿತತ್ತ್ವ ಎಂದೂ ಕರೆಯುವರು. ಇತ್ಯಾದಿ ವಾಕ್ಯಗಳಿಂದ ಬುದ್ಧಿತತ್ತ್ವವೇ ಮೊದಲ ಕಾರ್ಯವೆಂದು ತಿಳಿದುಬರುತ್ತದೆ.

ವಿವರಣೆ: ಸತ್ತ್ವ, ರಜಸ್, ತಮೋಗುಣಗಳು ಏರುಪೇರಾದ ಕಾರಣ ಸೃಷ್ಟಿಕ್ರಮದಲ್ಲಿ ಮೊದಲು ಹುಟ್ಟುವುದು ಮಹತ್ ಅಥವಾ ಬುದ್ಧಿ ಎಂದು ಅಭಿಪ್ರಾಯ.

ಸೂತ್ರ: ಚರಮೋಽಹಂಕಾರಃ ॥ ೭೨ ॥

ಅನುವಾದ: ಮಹತ್ತತ್ವದ ಅನಂತರ ಉಂಟಾಗುವ ಕಾರ್ಯ ಅಹಂಕಾರ.

ಸೂತ್ರ: *ತಸ್ಯಾನಂತರಃ ಯಃ ಸೋಽಹಂಕಾರೋಽತೀತ್ಯಾಭಿಮಾನ ವೃತ್ತಿಕಃ ಇತ್ಯರ್ಥಃ। ಚರಮೋಽಭಿಮಾನವೃತ್ತಿಕೋಽಹಂಕಾರೋಽತಸ್ತತ್ಕಾರ್ಯತ್ವಂ ಉತ್ತರೇಷಾಂ ಉಪಪನ್ನಮಿತ್ಯಾಹ ।*

ಅನುವಾದ: ಅದರ ನಂತರ 'ನಾನೆಂಬುದನ್ನು ಉಂಟುಮಾಡುತ್ತದೆ' ಎಂಬರ್ಥದಲ್ಲಿ ಅಭಿಮಾನದ ಭಾವವನ್ನು ಹೊಂದಿರುತ್ತದೆ. ಹೀಗೆ ಅಭಿಮಾನದ ವೃತ್ತಿಯನ್ನುಳ್ಳ ಅಹಂಕಾರವು ಮುಂದೆ ಸಂಭವಿಸುವ ಕಾರ್ಯಗಳನ್ನು ಹೇಳುವುದು ಸರಿಯೇ.

ಸೂತ್ರ: ತತ್ಕಾರ್ಯಮುತ್ತರೇಷಾಮ್ ॥ ೭೩ ॥

ಅನುವಾದ: ಮುಂದೇ ಹೇಳುವುದೆಲ್ಲ ಅದರಿಂದುಂಟಾಗುವ ಕಾರ್ಯಗಳು.

ಭಾಷ್ಯ: *ಸುಗಮಮ್, ಏವಂ ತ್ರಿಸೂತ್ರೀಂ ವ್ಯಾಖ್ಯಾಯ ಪೌನರುಕ್ತ್ಯಾಶಂಕಾಪಾಸ್ತಾ ।*

ಅನುವಾದ: ಇದು ಸುಲಭವೇ. ಹೀಗೆ ಮೂರು ಸೂತ್ರಗಳನ್ನು ವ್ಯಾಖ್ಯಾನಮಾಡಿ ಪುನರುಕ್ತಿ ದೋಷವನ್ನು ಹೋಗಲಾಡಿಸಲಾಗಿದೆ.

ಭಾಷ್ಯ: *ನನು ಏವಂ ಪ್ರಕೃತಿಃ ಸರ್ವಕಾರಣಮಿತಿ ಶ್ರುತಿಸ್ಮೃತಿ–।*
ವಿರೋಧ ಇತ್ಯಾಶಂಕಾಯಾಮಾಹ ।

ಅನುವಾದ: ಹೀಗೆ ಪ್ರಕೃತಿಯು ಎಲ್ಲಕ್ಕೂ ಕಾರಣವೆಂದು ಹೇಳುವುದು ಶ್ರುತಿ ಸ್ಮೃತಿಗಳಿಗೆ ವಿರೋಧವಲ್ಲವೆ? ಎಂಬ ಸಂದೇಹ ಬರಲು ಮುಂದೆ ಹೇಳಿದೆ.

ಸೂತ್ರ: ಆದ್ಯಹೇತುತಾ ತದ್ದ್ವಾರಾ ಪಾರಂಪರ್ಯೇಽಪ್ಯಣುವತ್ ॥ ೭೪ ॥

ಅನುವಾದ: ಅಣುವು (ವಸ್ತುಗಳಿಗೆ ಕಾರಣವಾಗಿರುವಂತೆ) ಕಾರ್ಯಗಳು ತಮ್ಮ ತಮ್ಮ ಕಾರಣಗಳಲ್ಲಿ ಲೀನವಾದರೂ ಪ್ರಕೃತಿಯು ಮೂಲಕಾರಣವೆಂಬುದು ಸ್ಪಷ್ಟಗೊಳ್ಳುವುದು.

ಭಾಷ್ಯ: *ಪಾರಂಪರ್ಯೇಽಪಿ ಸಾಕ್ಷಾದಹೇತುತ್ವೇಽಪ್ಯಾದ್ಯಾಯಾಃ*
ಪ್ರಕೃತೇರ್ಹೇತುತಾಹಂಕಾರಾದಿಷು ಮಹದಾದಿದ್ವಾರಾಽಸ್ತಿ ।
ಯಥಾ ವೈಶೇಷಿಕಮತೇಽಣೂನಾಂ ಘಟಾದಿಹೇತುನಾ
ದ್ವ್ಯಣುಕಾದಿದ್ವಾರೈವಾ ಇತ್ಯರ್ಥಃ ।

ಅನುವಾದ: ಮೂಲಪ್ರಕೃತಿಯಲ್ಲಿ ಸಾಕ್ಷಾತ್ ಕಾರಣತೆಯಿಲ್ಲದಿದ್ದರೂ ಪರಂಪರೆಯಿಂದ ಅಹಂಕಾರಾದಿಗಳಿಗೆ ಮಹದಾದಿಗಳು ಕಾರಣವಾಗುತ್ತವೆ; ಹೇಗೆ ವೈಶೇಷಿಕಮತದಲ್ಲಿ ಅಣುಗಳು ದ್ವ್ಯಣುಕಾದಿಗಳಿಂದ ಘಟಾದಿಗಳಿಗೆ ಕಾರಣವೋ ಹಾಗೆ ಕಾರಣವಾಗುತ್ತವೆ.

ವಿವರಣೆ: ಇಲ್ಲಿ ಲಯಪರಂಪರೆಯ ಪ್ರಸ್ತಾಪವಿದೆ. ಪ್ರತ್ಯೇಕ ಕಾರ್ಯವು ತನ್ನ ತನ್ನ ಕಾರಣದಲ್ಲಿ ಲಯವಾಗುತ್ತಾ ಹೋದಲ್ಲಿ ಕೊನೆಗೆ ಆದ್ಯಾಪ್ರಕೃತಿಯಲ್ಲಿ ಲೀನವಾಗುತ್ತವೆ. ಅಣುವತ್ ಎಂದರೆ ವೈಶೇಷಿಕರು ಸ್ಥೂಲವಾದ ಕಾರ್ಯಕ್ಕೆ ಅಣುಗಳು ಕಾರಣವೆಂದು ಹೇಗೆ ಹೇಳುವರೋ ಹಾಗೆ ಅತ್ಯಂತ ಸೂಕ್ಷ್ಮವಾದ ತನ್ಮಾತ್ರಗಳು ಭೂತಾದಿಗಳಿಗೆ ಕಾರಣವೆಂದು ಸಾಂಖ್ಯರ ಅಭಿಪ್ರಾಯ.

ಭಾಷ್ಯ: *ನನು ಪ್ರಕೃತಿಪುರುಷಯೋರುಭಯೋರೇವ ನಿತ್ಯತ್ವಾತ್*
ಪ್ರಕೃತೇರೇವ ಕಾರಣತ್ವೇ ಕಿಂ ನಿಯಾಮಕಮ್? ತತ್ರಾಹ–

ಅನುವಾದ: ಪ್ರಕೃತಿ ಪುರುಷ ಎರಡೂ ಅನಾದಿಯಾಗಿರಲು ಅವೆರಡರಲ್ಲಿ ಪ್ರಕೃತಿಯೇ ಸೃಷ್ಟಿಗೆ ಕಾರಣವೆಂದು ಹೇಗೆ ಮಿತಿಗೊಳಿಸುವಿರಿ?

ಸೂತ್ರ: ಪೂರ್ವಭಾವಿತ್ವೇ ದ್ವಯೋರೇಕತರಸ್ಯ ಹಾನೇಽನ್ಯತರಯೋಗಃ ॥ ೭೫ ॥

ಅನುವಾದ: ಅವೆರಡೂ ಅನಾದಿಯಾಗಿರಲು ಅವೆರಡರಲ್ಲಿ ಒಂದನ್ನು ಬಿಟ್ಟಾಗ ಮತ್ತೊಂದು ತಾನಾಗಿಯೇ ಸಿದ್ಧವಾಗುವುದು.

ಭಾಷ್ಯ: *ದ್ವಯೋರೇವ ಪುಮ್‌ಪ್ರಕೃತ್ಯೋಃ ಅಖಿಲಕಾರ್ಯಪೂರ್ವ–*
ಭಾವಿತ್ವೇಽಪಿ ಏಕತರಸ್ಯ ಪುರುಷಸ್ಯ ಅಪರಿಣಾಮಿತ್ವೇನ
ಕಾರಣತಾಹಾನ್ಯಾಽನ್ಯತರಸ್ಯಾಃ ಕಾರಣತ್ವೌಚಿತ್ಯಮಿತ್ಯರ್ಥಃ ।
ಪುರುಷಸ್ಯಾಪರಿಣಾಮಿತ್ವೇ ಚೇದಂ ಬೀಜಮ್ । ಪುರುಷಸ್ಯ
ಸಂಹತ್ಯಕಾರಿತ್ವೇ ಪರಾರ್ಥತ್ವಾಪತ್ತ್ಯಾಽನವಸ್ಥಾ । ಅಸಂಹತ್ಯ–

ಕಾರಿತ್ವೇ ಸರ್ವದಾ ಮಹದಾದಿಕಾರ್ಯಪ್ರಸಂಗಃ । ಪ್ರಕೃತಿದ್ವಾರಾ ಪರಿಣಾಮಕಲ್ಪನೇ ಚ ಲಾಘವಾತ್ ತಸ್ಯಾ ಏವ ಪರಿಣಾಮೋಽಸ್ತು ।

ಅನುವಾದ: ಪುರುಷ-ಪ್ರಕೃತಿಗಳೆರಡರಲ್ಲೂ ಎಲ್ಲ ಕಾರ್ಯಗಳ ಮೊದಲೇ ಇದ್ದರೂ ಅವುಗಳಲ್ಲಿ ಪುರುಷನು ಪರಿಣಾಮ ಹೊಂದದ ಕಾರಣ ಮತ್ತೊಂದು ಎಂದರೆ ಪ್ರಕೃತಿಯು ಕಾರಣತೆಯನ್ನು ಹೊಂದುವುದು ಉಚಿತವಾದುದೇ ಸರಿ. ಪುರುಷನು ಅಪರಿಣಾಮಿಯಾಗಿರುವುದೇ ಇದರ ಕಾರಣ. ಪುರುಷನು (ಪ್ರಕೃತಿಯೊಂದಿಗೆ) ಸೇರಿದಲ್ಲಿ ಇತರರ ಸಲುವಾಗಿಯೇ ಇರಬೇಕಾಗುವುದು. ಹೀಗೆ ಆದಲ್ಲಿ ಅನವಸ್ಥಾ ದೋಷವುಂಟಾಗುವುದು. ಸೇರದೇ ಇದ್ದಲ್ಲಿ ಯಾವಾಗಲೂ ಮಹದಾದಿಗಳು ಉಂಟಾಗುತ್ತಲೇ ಇರುವುವು. ಪ್ರಕೃತಿಯೇ ಪರಿಣಾಮಕ್ಕೆ ಗುರಿಯಾಗುವುದು ಎಂದುಕೊಂಡರೆ ಅದು ಸರಳವಾದ ಮಾತು. ಆದ್ದರಿಂದ ಪ್ರಕೃತಿಯೇ (ಸೃಷ್ಟಿಯಲ್ಲಿ) ಪರಿಣಾಮಗೊಳ್ಳುವುದು ಎನ್ನೋಣ.

ಭಾಷ್ಯ: *ಪುರುಷೇತು ಸ್ವಾಮಿತ್ವೇನ ಸ್ರಷ್ಟೃತ್ವೋಪಚಾರಃ । ಯಥಾ ಯೋಧೇಷು ವರ್ತಮಾನೋ ಜಯಪರಾಜಯೌ ರಾಜನ್ಯು-ಉಪಚರ್ಯೇತೇ, ತತ್ಫಲಸುಖದುಃಖಭೋಕ್ತೃತ್ವೇನ ತತ್ಸ್ವಾಮಿತ್ವಾದಿತಿ ।*

ಅನುವಾದ: ಪುರುಷನು ಸ್ವಾಮಿಯಾದ ಕಾರಣ ಸೃಷ್ಟಿಕರ್ತನೆಂದು ಹೇಳುವುದು ಔಪಚಾರಿಕವಾಗಿ ಹೇಗೆ ಯುದ್ಧದಲ್ಲಿ ಆಗುವ ಜಯಾಪಜಯಗಳು ಯೋಧರಿಗೆ ಆದರೂ ಔಪಚಾರಿಕವಾಗಿ ರಾಜನಿಗೆ ಅನ್ವಯಿಸುವುವೋ ಹಾಗೆ ಅದರ ಫಲವಾದ ಸುಖದುಃಖಗಳನ್ನು ಭೋಕ್ತೃವಾಗಿ ಒಡೆಯನ ಸ್ಥಾನದಲ್ಲಿ ಅನುಭವಿಸುತ್ತಾನೆ.

ಭಾಷ್ಯ: *ಕಿಂಚ ಧರ್ಮಿಗ್ರಾಹಕಮಾನೇನ ಕಾರಣತಯೈವ ಪ್ರಕೃತೇಃ ಸಿದ್ಧೌ ನಾನ್ಯಕಾರಣಾಕಾಂಕ್ಷಾಸ್ತಿ । ಯಥಾ ಧರ್ಮಿಗ್ರಾಹಕಪ್ರಮಾಣೇನ ದ್ರಷ್ಟೃತಯಾ ಪುರುಷಸಿದ್ಧೌ ನಾನ್ಯದ್ರಷ್ಟ್ರಾಕಾಂಕ್ಷಾ ಇತಿ ।*

ಅನುವಾದ: ಅಷ್ಟೇ ಅಲ್ಲದೆ ಧರ್ಮವುಳ್ಳದ್ದೆಂಬ ಪ್ರಮಾಣದಿಂದ ಕಾರಣವೆಂದು ಪ್ರಕೃತಿಯು ಸಿದ್ಧವಾಗಿರಲು ಬೇರೊಂದು ಕಾರಣದ ಆಕಾಂಕ್ಷೆ ಇರಲಾರದು. ಹೇಗೆಂದರೆ, ಧರ್ಮಿಯನ್ನುಳ್ಳದ್ದೆಂಬ ಪ್ರಮಾಣದಿಂದ ಪುರುಷನು ನೋಡುವವನಾಗಿ ಸಿದ್ಧವಾಗಿರಲು ಬೇರೊಬ್ಬ ದ್ರಷ್ಟೃವಿನ ಆಕಾಂಕ್ಷೆ ಬರಲಾರದು.

ಭಾಷ್ಯ: *ಅಪಿ ಚ ಪುರುಷಸ್ಯ ಪರಿಣಾಮಿತ್ವೇ ಕದಾಚಿತ್ ಚಕ್ಷುಃ ಮನ ಆದಿವತ್ ವಂಧ್ಯತ್ವಮಪಿಸ್ಯಾತ್ । ತಥಾ ಚ ವಿದ್ಯಮಾನಂ ಅಪಿ ಸುಖದುಃಖಾದಿಕಂ ನ ಜ್ಞಾಯೇತ । ತತ್ವಶ್ಚಾಹಂ ಸುಖೀ ನ ವಾ ಇತ್ಯಾದಿಸಂಶಯಾಪತ್ತಿಃ ।*

ಅನುವಾದ: ಅಲ್ಲದೆ, ಪುರುಷನು ಪರಿಣಾಮಿಯೆಂದು ಒಪ್ಪಿದರೆ ಕಣ್ಣು, ಮನಸ್ಸುಗಳಂತೆ ಅದರಲ್ಲಿ ವಂಧ್ಯತ್ವವೂ ಉಂಟಾಗುವುದು. ಹಾಗೆಯೇ ಸುಖದುಃಖಾದಿಗಳು

ಇದ್ದರೂ ಸಹ ಅನುಭವಕ್ಕೆ ಬಾರದು. ಆ ಸ್ಥಿತಿಯಲ್ಲಿ 'ನಾನು ಸುಖಿಯೇ ಅಲ್ಲವೇ' ಮುಂತಾಗಿ ಸಂಶಯವುಂಟಾಗುವುದು.

ವಿವರಣೆ: ವಂಧ್ಯತ್ವವೆಂದರೆ ನಿಷ್ಪ್ರಯೋಜಕತೆ.

ಭಾಷ್ಯ: *ಅತಃ ಸದಾ ಪ್ರಕಾಶಸ್ವರೂಪಾನಪಾಯತ್ವೇನ ಪುರುಷಸ್ಯ ಅಪರಿಣಾಮಿತ್ವಂ ಸಿಧ್ಯತಿ । ತದುಕ್ತಂ ಯೋಗಸೂತ್ರೇಣ– 'ಸದಾ ಜ್ಞಾತಾಶ್ಚಿತ್ತವೃತ್ತಯಃ ತತ್ಪ್ರಭೋಃ ಪುರುಷಸ್ಯಾಪರಿಣಾಮಿ–ತ್ವಾ'ದಿತಿ । (ಕೈ.ಪಾ. ೧೮) । ತದ್ಭಾಷ್ಯೇಣ ಚ, 'ಸದಾ ಜ್ಞಾನವಿಷಯತ್ವಂ ತು ಪುರುಷಸ್ಯಾಪರಿಣಾಮಿತ್ವಂ ಪರಿದೀಪಯತಿ' (೨–೨೦) ಇತಿ । ಸದಾ ಪ್ರಕಾಶಸ್ವರೂಪತ್ವೇಽಪಿ ಯಥಾ ನೈಕದಾ ವಿಶ್ವಪ್ರಕಾಶತ್ವಂ ತಥಾ ವಕ್ಷ್ಯಾಮಃ ।*

ಅನುವಾದ: ಆದ್ದರಿಂದ ಯಾವಾಗಲೂ ಪ್ರಕಾಶರೂಪವಾಗಿರುವುದು ಹೋಗಲಾರದ ಕಾರಣ ಪುರುಷನು ಅಪರಿಣಾಮಿ ಎಂಬುದು ಸಿದ್ಧವಾಗುವುದು. ಯೋಗಸೂತ್ರದಲ್ಲಿ ಹೀಗೆ ಹೇಳಿದೆ, 'ಚಿತ್ತದ ಒಡೆಯನಾದ ಪುರುಷನು ಅಪರಿಣಾಮಿಯಾದ್ದರಿಂದ ಚಿತ್ತವೃತ್ತಿಗಳು ತಿಳಿಯಬರುತ್ತವೆ'. ಅದರ ಭಾಷ್ಯದಲ್ಲಿ 'ಸದಾ ಚಿತ್ತವೃತ್ತಿಗಳು ಜ್ಞಾನದ ವಿಷಯುವಾದ್ದರಿಂದ ಪುರುಷನು ಅಪರಿಣಾಮಿಯೆಂಬುದು ಪ್ರಕಟವಾಗುತ್ತವೆ' (೨–೨೦) ಎಂದಿದೆ. ಯಾವಾಗಲೂ ಪ್ರಕಾಶಸ್ವರೂಪವಾದ್ದರಿಂದ ಒಮ್ಮೆಲೇ ಸಂಪೂರ್ಣ ವಿಶ್ವವನ್ನು ಏಕೆ ಬೆಳಗದು ಎಂಬುದನ್ನು ಹೇಳುವೆವು.

ಭಾಷ್ಯ: *ಪ್ರಕೃತೇರ್ಯುಗಪತ್ಕಾರಣತ್ವೋಪಪತ್ತಯೇ ವಿಭುತ್ವಮಪಿ ಪ್ರತಿಪಾದಯತಿ ।*

ಅನುವಾದ: ಒಂದೇ ಸಮಯದಲ್ಲಿ ಕಾರಣತ್ವವನ್ನು ಪಡೆಯುವ ಪ್ರಕೃತಿಯ ವಿಭುತ್ವವನ್ನು ಪ್ರತಿಪಾದಿಸುತ್ತಾರೆ.

ಸೂತ್ರ: ಪರಿಚ್ಛಿನ್ನಂ ನ ಸರ್ವೋಪಾದಾನಮ್ ॥ ೭೬ ॥

ಅಳತೆಯೊಳಗೊಳಪಟ್ಟ ಯಾವುದೂ ಎಲ್ಲ ವಸ್ತುಗಳಿಗೂ ಉಪಾದಾನವಾಗಲಾರದು.

ಭಾಷ್ಯ: *ಸರ್ವೋಪಾದಾನಂ ಪ್ರಧಾನಂ ನ ಪರಿಚ್ಛಿನ್ನಂ ವ್ಯಾಪಕಮಿತ್ಯರ್ಥಃ ।*

ಅನುವಾದ: ಎಲ್ಲಕ್ಕೂ ಉಪಾದಾನವಾದುದು ಪ್ರಧಾನ, ಅದು ಎಂದೂ ಭಾಗವಾಗಿಲ್ಲ ಎಂದರೆ ವ್ಯಾಪಕವಾಗಿರುವುದು ಎಂದರ್ಥ.

ಭಾಷ್ಯ: *ಸರ್ವೋಪಾದಾನತ್ವಮತ್ರ ಹೇತುಗರ್ಭವಿಶೇಷಣಮ್ ಪರಿಚ್ಛಿನ್ನೇ ತದಸಂಭವಾದಿತಿ ।*

ಅನುವಾದ: ಇಲ್ಲಿ ಸರ್ವೋಪಾದಾನತ್ವ ಹೇತುಗರ್ಭ ವಿಶೇಷಣವಾಗಿದೆ. ಪರಿಚ್ಛಿನ್ನ ವಾದುದು ಎಂದೂ ಅದಾಗಲಾರದು.

ವಿವರಣೆ: ಹೇತುಗರ್ಭ ವಿಶೇಷಣವೆಂದರೆ ಕಾರಣವನ್ನೊಳಗೊಂಡ ವಿಶೇಷಣ. 'ಸರ್ವೋಪಾದಾನ' ಎಂಬುದು 'ಎಲ್ಲಕ್ಕೂ ಉಪಾದಾನವಾದುದು' ಎಂದರೆ 'ವಿಶ್ವಕ್ಕೆಲ್ಲ' ಎಂದು ಅನುಮಾನಿಸಬಹುದು.

ಭಾಷ್ಯ: *ನನು ಪ್ರಕೃತೇರಪರಿಚ್ಛಿನ್ನತ್ವಂ ನೋಪಪದ್ಯತೇ, ಪ್ರಕೃತಿರ್ಹಿ ಸತ್ತ್ವಾದಿಗುಣತ್ರಯಾದತಿರಿಕ್ತಾ ನ ಭವತಿ 'ಸತ್ತ್ವಾದೀನಾಂ ಅತದ್ಧರ್ಮತ್ವಂ ತದ್ರೂಪತ್ವಾತ್ ಇತ್ಯಾಗಾಮಿಸೂತ್ರಾತ್ (೬–೩೯) ಯೋಗಸೂತ್ರಭಾಷ್ಯಾಭ್ಯಾಂ ಸ್ಪಷ್ಟಮವಧೃತತ್ವಾತ್ (೨೧೮–೧೯)*

ಅನುವಾದ: ಪ್ರಕೃತಿಯಲ್ಲಿ ಅಪರಿಚ್ಛಿನ್ನತ್ವವು ಏಕೆ ಉಂಟಾಗದು? ಪ್ರಕೃತಿಯು ಸತ್ತ್ವಾದಿ ಮೂರು ಗುಣಗಳನ್ನು ಮೀರಿದ್ದಲ್ಲ. ಈ ಮಾತನ್ನು ಸೂತ್ರಕಾರನು ತಾನೇ ಹೇಳಿರುವ ಸತ್ವಾದಿಗಳು ಪ್ರಕೃತಿಯ ಧರ್ಮಗಳಲ್ಲ, ಅವುಗಳು ಅದರ ರೂಪವೇ (೬.೩೯) ಎಂದು ಮುಂದೆ ಬರುವ ಸೂತ್ರದಿಂದಲೂ (೨, ೧೮–೧೯) ಅದರ ಮೇಲಿನ ಯೋಗಸೂತ್ರ ಭಾಷ್ಯದಿಂದಲೂ ಸ್ಪಷ್ಟಪಡುತ್ತದೆ.

ಭಾಷ್ಯ: *ತೇಷಾಂ ಚ ಸತ್ತ್ವಾದೀನಾಂ ಲಘುತ್ವ ಚಲತ್ವ ಗುರುತ್ವಾದಯೋ ಧರ್ಮಾ ವಕ್ಷ್ಯಮಾಣಾ ವಿಭುತ್ವೇ ಸತಿ ವಿರುದ್ಧ್ಯಂತೇ, ಸೃಷ್ಟ್ಯಾದಿ-ಹೇತುವಃ ಸಂಯೋಗ–ವಿಭಾಗಾದಯಶ್ಚ ನೋಪಪದ್ಯಂತ ಇತಿ ।*

ಅನುವಾದ: ಆ ಸತ್ತ್ವಾದಿಗಳೂ ಲಘುತ್ವ, ಚಲತ್ವ, ಗುರುತ್ವಗಳೆಂಬ ಧರ್ಮಗಳು ಮುಂದೆ ಉಲ್ಲೇಖಿಸಲ್ಪಡಲಿವೆ; ಆ ಧರ್ಮಗಳು (ಪ್ರಕೃತಿಯು) ವಿಭುವಾದಲ್ಲಿ ವಿರೋಧಗೊಳ್ಳುತ್ತವೆ. ಅಲ್ಲದೆ ಸೃಷ್ಟ್ಯಾದಿಗಳಾಗಲಿ ಸಂಯೋಗ ವಿಭಾಗಗಳಾದಿಯೂ ಉಂಟಾಗಲಾರವು.

ಭಾಷ್ಯ: *ಅತ್ರೋಚ್ಯತೇ ಪರಿಚ್ಛಿನ್ನತ್ವಮತ್ರ ದೈಶಿಕಾಭಾವಪ್ರತಿಯೋಗಿ-ತಾವಚ್ಛೇದಕಾಽವಚ್ಛಿನ್ನತ್ವಮ್ । ತದಭಾವಶ್ಚ ವ್ಯಾಪಕತ್ವಮ್ । ತಥಾ ಚ ಜಗತ್ಕಾರಣತ್ವಸ್ಯ ದೈಶಿಕಾಭಾವಪ್ರತಿಯೋಗಿತಾನವಚ್ಛೇ-ದಕತ್ವಮೇವೇತಿ ಪ್ರಕೃತೇರ್ವ್ಯಾಪಕತ್ವಮಿತಿ ಪರ್ಯವಸಿತಮ್ । ಯಥಾ ಪ್ರಾಣಸ್ಯ ಸ್ಥಾವರಜಂಗಮಾದಿ ಅಖಿಲಶರೀರವ್ಯಾಪಕತ್ವಂ ಪ್ರಾಣತ್ವಸಾಮಾನ್ಯೇನೋಚ್ಯತೇ, ಪ್ರಾಣವ್ಯಕ್ತೀನಾಂ ಸರ್ವದೇಹ-ಸಂಬಂಧಾತ್, ತದ್ವತ್ ಪ್ರಕೃತೇರ್ವ್ಯಾಪಕತ್ವಮಿತಿ । ಪ್ರಕೃತೇಃ ಅಕ್ರಿಯೈಕತ್ವಾದಿಕಂ ಚ ಸಾಧರ್ಮ್ಯವೈಧರ್ಮ್ಯಸೂತ್ರೇ (೧–೧೨೮) ಪ್ರತಿಪಾದಯಿಷ್ಯಾಮಃ ।*

ಅನುವಾದ: ಈ ವಿಷಯದಲ್ಲಿ ಹೀಗೆ ಹೇಳುತ್ತೇವೆ. 'ಪರಿಚ್ಛಿನ್ನ'ವೆಂದರೆ ಒಂದು ಸ್ಥಳದಲ್ಲಿ ಅಭಾವಕ್ಕೆ ಪ್ರತಿಯೋಗಿಯಾಗಿ ವಿಭಜನೆಗೆ ಗೊತ್ತಾದ ರೀತಿಯಲ್ಲಿ ವಿಂಗಡಿಸಲ್ಪಟ್ಟು ಇರುವ ಎಂದರ್ಥ. ಅದರ ಅಭಾವವೇ ವ್ಯಾಪಕತ್ವ. ಹಾಗೆಯೇ ಸಮಸ್ತ ಜಗತ್ತಿಗೆ ಕಾರಣವಾದ ಒಂದು ಸ್ಥಳದಲ್ಲಿರುವ ಅಭಾವಕ್ಕೆ ಪ್ರತಿಯೋಗಿಯಾಗಿ ವಿಂಗಡಿಸದಿರುವ

ಪ್ರಕೃತಿಯ ವ್ಯಾಪಕತ್ವವು ಇದೆಯೆಂದು ಸಿದ್ಧವಾಗುವುದು. ಹೇಗೆ ಪ್ರಾಣವು ಸ್ಥಾವರ ಜಂಗಮಾದಿ ಸಮಸ್ತ ಶರೀರಗಳಲ್ಲಿ ವ್ಯಾಪಿಸಿದೆಯೆನ್ನುವರೋ ಅದನ್ನೇ 'ಪ್ರಾಣತ್ವ ಸಾಮಾನ್ಯ'ದ ದೃಷ್ಟಿಯಿಂದ ಹೇಳುವರು. ಏಕೆಂದರೆ ಪ್ರಾಣವ್ಯಕ್ತಿಗಳು ಎಲ್ಲ ದೇಹಗಳೊಡನೆ ಸಂಬಂಧ ಹೊಂದಿರುವುವು. ಹಾಗೆಯೇ ಪ್ರಕೃತಿಯು ಕಾರ್ಯರಹಿತ ಮತ್ತು ಒಂದೇ ಎಂದು ಸಾಧರ್ಮ್ಯ ವೈಧರ್ಮ್ಯ ಸೂತ್ರದಲ್ಲಿ (೧–೧೨೮) ಹೇಳಲಾಗಿದೆ.

ವಿವರಣೆ: 'ಪ್ರತಿಯೋಗಿ' ಎಂದರೆ 'ವಿರೋಧಿಯಾಗಿರುವುದು' ಉದಾಹರಣೆಗೆ, 'ಘಟಾಭಾವಕ್ಕೆ ಘಟ ವಿರೋಧಿ ಅಥವಾ ಪ್ರತಿಯೋಗಿ'.

'ಅವಚ್ಛೇದಕ' ಎಂದರೆ 'ವಿಂಗಡಿಸಲು ಆಧಾರವಾದದ್ದು'. 'ಅವಚ್ಛಿನ್ನ' ಎಂದರೆ 'ಇಷ್ಟೆಂದು ವಿಂಗಡಿಸಲು ನಿರ್ಣಯಿಸುವುದು'.

ಭಾಷ್ಯ: *ನ ಕೇವಲಂ ಸರ್ವೋಪಾದಾನತ್ವಾತ್ ಅಪಿತು–*

(ಪ್ರಕೃತಿಯು) ಕೇವಲ ಸರ್ವೋಪಾದಾನವಾದ್ದರಿಂದ (ಜಗತ್ತಿಗೆ ಕಾರಣವಲ್ಲ) ಆದರೆ,

ಸೂತ್ರ: ತದುತ್ಪತ್ತಿಶ್ರುತೇಶ್ಚ ॥ ೭೭ ॥

ಅನುವಾದ: (ಪ್ರಕೃತಿಯಿಂದ) (ಜಗತ್ತಿನ) ಉತ್ಪತ್ತಿಯನ್ನು ಶ್ರುತಿಗಳಲ್ಲಿ ಹೇಳಿರುವುದರಿಂದ ಅದೇ (ಮೂಲ ಕಾರಣ).

ವಿವರಣೆ: ಅಣು ಮುಂತಾದುವುಗಳಲ್ಲ; ಪ್ರಕೃತಿಯೇ ಮೂಲಕಾರಣ ಎಂದರ್ಥ.

ಭಾಷ್ಯ: *ತೇಷಾಂ ಪರಿಚ್ಛಿನ್ನಾನಾಂ ಉತ್ಪತ್ತಿಶ್ರವಣಾಚ್ಚ ।*
'ಅಥ ಯದಲ್ಪಂ ತನ್ಮರ್ತ್ಯಂ' (ಛಾಂ.ಉ. ೭.೨೪–೧) ಇತ್ಯಾದಿ ಶ್ರುತಿಷು ಕರಣಧರ್ಮಕತ್ವೇನ ಪರಿಚ್ಛಿನ್ನಸ್ಯ ಉತ್ಪತ್ತ್ಯವಗಮಾತ್, ಶ್ರುತ್ಯಂತರೇಭ್ಯಶ್ಚ ಇತ್ಯರ್ಥಃ ।

ಅನುವಾದ: ಆ ಬೇರ್ಪಟ್ಟ (ತೋರಿಬಂದ) ಪದಾರ್ಥಗಳ ಉತ್ಪತ್ತಿಯು ಬಗ್ಗೆ ಕೇಳಿರುವುದರಿಂದ (ಪ್ರಕೃತಿ ಮೂಲಕಾರಣ) 'ಇನ್ನು ಯಾವುದು ಅಲ್ಪವೋ ಅದು ವಿನಾಶಿಯಾದುದು' (ಛಾಂ.ಉ. ೭.೨೪.೧) ಮುಂತಾದ ಶ್ರುತಿವಚನಗಳಲ್ಲಿ ಪರಿಚ್ಛಿನ್ನ ಪದಾರ್ಥಗಳ ಸಾಧಕಧರ್ಮವುಳ್ಳದ್ದೆಂದು ಹೇಳಿದೆ. ಬೇರೆಯ ಶ್ರುತಿಗಳಿಂದಲೂ (ತಿಳಿದುಬರುತ್ತದೆ).

ವಿವರಣೆ: 'ಯದಲ್ಪಂ' ಎಂಬ ಉಪನಿಷದ್ವಾಕ್ಯದಲ್ಲಿ 'ಅಲ್ಪಂ' ಎಂದರೆ ಪರಿಚ್ಛಿನ್ನವಾದ ಎಂದರ್ಥ.

ಭಾಷ್ಯ: *ಇದಾನೀಂ ಪ್ರಕೃತಿಕಾರಣತೋಪಪತ್ತಯೇಽಭಾವಾದಿ ಕಾರಣತಾಂ ನಿರಸ್ಯತಿ ।*

ಸೂತ್ರ: ನಾಽವಸ್ತುನೋ ವಸ್ತುಸಿದ್ಧಿಃ ॥ ೭೮ ॥

ಅನುವಾದ: ಪ್ರಕೃತಿಯ (ಉಪಾದಾನ) ಕಾರಣತೆಯನ್ನು ಪಡೆಯಲು ಅಭಾವಾದಿ ಕಾರಣತೆಗಳನ್ನು ಖಂಡಿಸಿದ್ದಾರೆ. (ಸೂತ್ರ) ಅವಸ್ತುವಿನಿಂದ ವಸ್ತುವು ಸಿದ್ಧಿಸಲಾರದು.

ಭಾಷ್ಯ: *ಅವಸ್ತುನೋಽಭಾವಾನ್ನ ವಸ್ತುಸಿದ್ಧಿರ್ಭಾವೋತ್ಪತ್ತಿಃ ಶಶಶೃಂಗಾಜ್ಜಗದುತ್ಪತ್ತ್ಯಾ ಮೋಕ್ಷಾದ್ಯನುಪಪತ್ತೇಸ್ತದದರ್ಶನಾಚ್ಚ ಇತ್ಯರ್ಥಃ ।*

ಅನುವಾದ: ಅವಸ್ತು ಎಂದರೆ ಅಭಾವವೇ (ಅಭಾವದಲ್ಲಿ) ವಸ್ತುವು ಸಿದ್ಧವಾಗುವುದು ಎಂದರೆ ಭಾವದ ಉತ್ಪತ್ತಿಯಿರದು. ಶಶಶೃಂಗದಿಂದ ಜಗತ್ತಿನ ಉತ್ಪತ್ತಿಯಾಗುವುದೆಂದರೆ ಮೋಕ್ಷವನ್ನು ಪಡೆಯುವುದು ಅಸಾಧ್ಯವೇ.

ಭಾಷ್ಯ: *ನನು ಜಗದಪ್ಯವಸ್ತ್ವೇವಾಸ್ತು ಸ್ವಪ್ನದಿವದಿತಿ, ತತ್ರಾಹ–*

ಸೂತ್ರ: ಅಬಾಧಾದದುಷ್ಟಕಾರಣಜನ್ಯತ್ವಾಚ್ಚ ನಾವಸ್ತುತ್ವಮ್ ॥ ೭೯ ॥

ಅನುವಾದ: ಈ ಜಗತ್ತೂ ಸಹ ಸ್ವಪ್ನಾದಿಗಳಂತೆ ಅವಸ್ತುವೆಂದೇ ಏಕೆ ಭಾವಿಸಬಾರದು.

ಸೂತ್ರಾನುವಾದ: ಪ್ರತಿಬಂಧವಿಲ್ಲದ ಕಾರಣ ದೋಷವಿಲ್ಲದ ಕಾರಣದಿಂದುಂಟಾಗುವುದರಿಂದ (ಜಗತ್ತನ್ನು) ಅವಸ್ತು ಎಂದು ಹೇಳಲಾಗದು.

ಭಾಷ್ಯ: *ಸ್ವಪ್ನಪದಾರ್ಥಸ್ಯೇವ ಪ್ರಪಂಚಸ್ಯ ಬಾಧಃ ಶ್ರುತ್ಯಾದಿ–ಪ್ರಮಾಣೈರ್ನಾಸ್ತಿ । ತಥಾ ಶಂಖಪೀತಿಮಾದೇರಿವ ದುಷ್ಟೇಂದ್ರಿಯಾದಿ ಜನ್ಯತ್ವಮಪಿನಾಸ್ತಿ । ದೋಷಕಲ್ಪನೇ ಪ್ರಮಾಣಾಭಾವಾದಿತ್ಯತಃ ನ ಕಾರ್ಯಸ್ಯಾವಸ್ತುತ್ವಮಿತ್ಯರ್ಥಃ ।*

ಅನುವಾದ: ಸ್ವಪ್ನ ಪದಾರ್ಥದಂತೆ ಪ್ರಪಂಚದ ಬಾಧವು ಶ್ರುತಿಯೇ ಮುಂತಾದ ಪ್ರಮಾಣಗಳಿಂದ ದೊರೆಯದು. ಹಾಗೆಯೇ ಶಂಖವು ಹಳದಿಯಾಗಿ ಕಾಣುವಂತೆ ದೂಷಿತವಾದ ಇಂದ್ರಿಯಾದಿಗಳಿಂದ ಹುಟ್ಟಿದ್ದೂ ಅಲ್ಲ. ಹೀಗೆ ದೋಷವನ್ನು ಕಲ್ಪಿಸುವುದರಲ್ಲಿ ಪ್ರಮಾಣಗಳಿಲ್ಲದ ಕಾರಣ ಈ ಕಾರ್ಯವನ್ನು (ಜಗತ್ತನ್ನು) ಅವಸ್ತು ಎನ್ನಲಾಗದು.

ಭಾಷ್ಯ: *ನನು 'ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕಾ ಇತ್ಯೇವ ಸತ್ಯಮ್' ಇತ್ಯಾದಿ ಶ್ರುತಿಭಿಃ (ಛಾಂ. ೬.೧.೪) ಏವ ಪ್ರಪಂಚಸ್ಯ ಬಾಧಃ, ಬಾಧಾಚ್ಚ ಅವಿದ್ಯಾಖ್ಯದೋಷೋಽಪಿ ಸ್ವಕಾರಣೇಽಸ್ತಿ ।*

ಅನುವಾದ: 'ವಿಕಾರವು ಮಾತಿನ ಆರಂಭ, ಕೇವಲ ಹೆಸರಷ್ಟೆ, ಆದರೆ ಅದು ಮಣ್ಣೆಂಬುದೇ ಸತ್ಯ' ಎಂಬ ಶ್ರುತಿಗಳಿಂದಲೇ ಪ್ರಪಂಚಕ್ಕೆ ಬಾಧವುಂಟಾಗುವುದು, ಬಾಧದಿಂದ ಅವಿದ್ಯೆಯೆಂಬ ದೋಷವೂ ಸ್ವಕಾರಣವೆಂದೇ ತಿಳಿಯಬೇಕು.

ವಿವರಣೆ: ಇಲ್ಲಿ ಅವಿದ್ಯೆಯೆಂಬುದು ಒಂದು ದೋಷ.

ಭಾಷ್ಯ: *ಇತಿ ಚೇನ್ನ । ಮೃದ್ದೃಷ್ಟಾಂತಸಿದ್ಧ್ಯನ್ಯಥಾನುಪಪತ್ತ್ಯಾ ಸ್ವಕಾರಣಾಪೇಕ್ಷಯಾ ಅಸ್ಥೈರ್ಯಸತ್ತ್ವಪರತ್ವಾತ್ ತಾದೃಗ್ ವಾಕ್ಯಾನಾಮ್, ಅನ್ಯಥಾ ಸೃಷ್ಟ್ಯಾದಿವಾಕ್ಯವಿರೋಧಾಚ್ಚ ।*

ಅನುವಾದ: ಮಣ್ಣಿನ ವಿಕಾರದ ದೃಷ್ಟಾಂತದ ಸಿದ್ಧಿಯು ಬೇರೆಯ ರೀತಿಯಲ್ಲಿ ದೊರೆಯದು. ಈ ರೀತಿಯ ಶ್ರುತಿವಚನಗಳನ್ನು ಸ್ವಕಾರಣವನ್ನು ಕುರಿತದ್ದೆಂದು ತಿಳಿಯುವ ಬದಲು ಸ್ಥಿರವಲ್ಲದ ಅಸತ್ತ್ವವನ್ನು ಕುರಿತದ್ದೆಂದು ತಿಳಿಯಬೇಕು. ಹಾಗಿಲ್ಲದಿದ್ದಲ್ಲಿ ಸೃಷ್ಟ್ಯಾದಿಗಳನ್ನು ಕುರಿತು ಹೇಳುವ ವಾಕ್ಯಗಳಿಗೆ ವಿರುದ್ಧವಾಗುವುದು.

ಭಾಷ್ಯ: *ಕಿಂ ಚ ಶ್ರುತ್ಯಾ ಪ್ರಪಂಚಬಾಧೇ ಆತ್ಮಾಶ್ರಯಃ । ಸ್ವಸ್ಯಾಪಿ ಪ್ರಪಂಚಾಂತರ್ಗತತಯಾ ಬಾಧೇನ ತದ್ ಬೋಧಿತಾರ್ಥೇ ಪುನಃ ಸಂಶಯಾಪತ್ತಿಶ್ಚೇತಿ ।*

ಅನುವಾದ: ಅಲ್ಲದೆ ಶ್ರುತಿವಚನದಿಂದ ಪ್ರಪಂಚಕ್ಕೆ ಬಾಧವುಂಟಾದಲ್ಲಿ ಆತ್ಮಾಶ್ರಯ ದೋಷವು ಸಂಭವಿಸುವುದು. ತಾನೂ ಸಹ ಪ್ರಪಂಚದಲ್ಲಿ ಅಂತರ್ಗತವಾದ ಕಾರಣ ಅದೂ ಸಹ ಬಾಧಿತವಾಗುವುದು. ಹೀಗೆ ಬಾಧಿತವಾದ ಶ್ರುತಿವಾಕ್ಯದಲ್ಲಿ ಮತ್ತೆ ಸಂಶಯವುಂಟಾಗುವುದು.

ವಿವರಣೆ: ಆತ್ಮಾಶ್ರಯ ದೋಷವೆಂದರೆ ತನ್ನ ಸಿದ್ಧಿಗಾಗಿ ತನ್ನನ್ನೇ ಆಶ್ರಯಿಸುವುದು.

ಭಾಷ್ಯ: *ಅತ ಏವ ಬಾಧಾಬಾಧಾದಿ ವೈಧರ್ಮ್ಯಾತ್ ಉಪಲಂಭಾಚ್ಚ ಜಾಗ್ರತ್ಪ್ರಪಂಚಸ್ಯ ಸ್ವಪ್ನಖಪುಷ್ಪಾದಿ ತುಲ್ಯತ್ವಮಿತಿನಿರ್ಬಂಧೇನ ಪ್ರತ್ಯಾಚಷ್ಟೇ ವೇದಾಂತಸೂತ್ರದ್ವಯಮ್– ವೈಧರ್ಮ್ಯಾಚ್ಚ ನ ಸ್ವಪ್ನಾದಿವದಿತಿ (ವೇ.ಸೂ. ೨೯.೨.೨) ನಾಭಾವ ಉಪಲಬ್ಧೇಶ್ಚೇತಿ । (ವೇ.ಸೂ. ೨.೨.೩೦) ಚ ।*

ಅನುವಾದ: ಆದ್ದರಿಂದಲೇ ಬಾಧ–ಅಬಾಧಗಳು ಪರಸ್ಪರ ವಿರುದ್ಧವಾದ್ದರಿಂದ ಜಾಗ್ರತ್ ಪ್ರಪಂಚದ ಉಪಲಬ್ಧಿಯಿಂದ ಅದರಲ್ಲಿ ಸ್ವಪ್ನ–ಖಪುಷ್ಪಾದಿಗಳ ಸಮಾನತೆಯನ್ನು ಪ್ರಬಲವಾಗಿ ನಿರಾಕರಿಸಲು ಎರಡು ವೇದಾಂತ ಸೂತ್ರಗಳನ್ನು ಹೇಳಲಾಗಿದೆ. (ಜಾಗೃದವಸ್ಥೆಯು) ಸ್ವಪ್ನಾದಿಗಳಂತಲ್ಲ, ಪರಸ್ಪರ ಭಿನ್ನಸ್ವರೂಪದವುಗಳಾದ್ದರಿಂದ 'ಬಾಹ್ಯವಸ್ತುಗಳು ಇಲ್ಲವೆನ್ನಲಾಗದು, ಏಕೆಂದರೆ (ನಮ್ಮ) ಅನುಭವಕ್ಕೆ ಬರುವುದರಿಂದ.'

ಭಾಷ್ಯ: *ನೇತಿ ನೇತಿ ಇತ್ಯೇವಂವಿಧವಾಕ್ಯಾನಿ (ಬೃ.ಉ. ೨.೩.೬.) ಚ ವಿವೇಕಪರಾಣ್ಯೇವ, ನ ತು ಸ್ವರೂಪತಃ ಪ್ರಪಂಚನಿಷೇಧಪರಾಣಿ– 'ಪ್ರಕೃತೈತಾವತ್ತ್ವಂ ಹಿ ಪ್ರತಿಷೇಧತಿ' ಇತಿ ವೇದಾಂತ ಸೂತ್ರಾತ್ (೩.೨.೨೨) । ಏವಮನ್ಯಾನ್ಯಪಿ ವಾಕ್ಯಾನಿ ಬ್ರಹ್ಮಮೀಮಾಂಸಾ–ಭಾಷ್ಯೇಽಸ್ಮಾಭಿರ್ವ್ಯಾಖ್ಯಾತಾನಿ ।*

ಅನುವಾದ: ನೇತಿ, ನೇತಿ ಎಂಬ ಈ ವಾಕ್ಯಗಳು ವಿವೇಕಪರವಾಗಿಯೇ ಇವೆ, ಅವು ಸ್ವರೂಪತಃ ಜಗತ್ತಿನ ನಿರಾಕರಣೆಯನ್ನು ಮಾಡುವ ವಾಕ್ಯಗಳಲ್ಲ. (ನೇತಿ ನೇತಿ ಎಂಬುದು) 'ಪ್ರಕೃತ ಇಷ್ಟೆಂದು ನಿರ್ಧರಿಸುವುದನ್ನು ಅಲ್ಲಗಳೆಯುತ್ತವೆ' ಎಂದು ವೇದಾಂತಸೂತ್ರ ಹೇಳುತ್ತದೆ. ಹೀಗೆಯೇ ಇತರ ವಾಕ್ಯಗಳ ವ್ಯಾಖ್ಯಾನವನ್ನು ಬ್ರಹ್ಮಮೀಮಾಂಸಾ ಭಾಷ್ಯದಲ್ಲಿ ನಾವು ಮಾಡಿದ್ದೇವೆ.

ಭಾಷ್ಯ: *'ನಾ ವಸ್ತು ನೋ ವಸ್ತುಸಿದ್ಧಿರಿತಿ' (೧-೭೪) ಯದುಕ್ತಂ, ತತ್ರ ಹೇತುಮಾಹ–*

ಸೂತ್ರ: 'ಭಾವೇ ತದ್ಯೋಗೇನ ತತ್ಸಿದ್ಧಿರಭಾವೇ ತದಭಾವಾತ್ ಕುತಸ್ತರಾಂ ತತ್ಸಿದ್ಧಿಃ ॥ ೮೦ ॥

ಅನುವಾದ: ಭಾವರೂಪವಿರುವಾಗ ಅದರ ಸಂಬಂಧದಲ್ಲಿ ಸದ್ರೂಪದ ಸಿದ್ಧಿಯಾಗುವುದು; ಅಭಾವವಿರುವಾಗ ಕಾರ್ಯದ ಅಭಾವದ ಕಾರಣ ಹೇಗೆ ತಾನೆ (ಜಗತ್ತಿನ) ಸಿದ್ಧಿಯಾದೀತು?

ಭಾಷ್ಯ: *ಭಾವೇ ಕಾರಣಸ್ಯ ಸದ್ರೂಪತ್ವೇ ತದ್ಯೋಗೇನ ಸತ್ತಾಯೋಗೇನ ಕಾರ್ಯಸಿದ್ಧಿರ್ಘಟೇತ । ಕಾರಣಸ್ಯಾಭಾವೇಽಸದ್ರೂಪತ್ವೇ ತು ತದಭಾವಾತ್ ಕಾರ್ಯಸ್ಯಾಪ್ಯಸತ್ತ್ವಾತ್ ಕಥಂ ವಸ್ತುಭೂತಕಾರ್ಯ-ಸಿದ್ಧಿಃ? ಕಾರಣಸ್ವರೂಪಸ್ಯೈವ ಕಾರ್ಯಸ್ಯೌಚಿತ್ಯಾದಿತ್ಯರ್ಥಃ ।*

ಅನುವಾದ: 'ಭಾವೇ' ಎಂದರೆ ಕಾರಣವು ಸತ್ತಾರೂಪವಾಗಿರಲು 'ತದ್ಯೋಗೇನ', ಆ ಸತ್ತಾಯೋಗದಿಂದ ಕಾರ್ಯಸಿದ್ಧಿಯುಂಟಾದೀತು. ಕಾರಣದ ಅಭಾವವಿರುವಾಗ ಎಂದರೆ 'ಅಸತ್' ಇರುವಾಗ (ಪ್ರಪಂಚರೂಪದ) ಕಾರ್ಯದ ಸತ್ತಾ ದೊರೆಯದ ಕಾರಣ ವಸ್ತುರೂಪದ ಕಾರ್ಯವು ಹೇಗೆ ಸಿದ್ಧಿಸುವುದು. ಕಾರಣಸ್ವರೂಪವಿದ್ದರೆ ಮಾತ್ರ ಕಾರ್ಯದ ಔಚಿತ್ಯವಿರುವುದು.

ಭಾಷ್ಯ: *ನನು ತಥಾಪಿ ಕರ್ಮೈವ ಆವಶ್ಯಕತಾತ್ ಜಗತ್ಕಾರಣಮಸ್ತು ಕಿಂ ಪ್ರಧಾನಕಲ್ಪನಯಾ ಇತಿ । ತತ್ರಾಪ್ಯಾಹ ।*

ಸೂತ್ರ: ನ ಕರ್ಮಣ ಉಪಾದಾನತ್ವಾಯೋಗಾತ್ ॥ ೮೧ ॥

ಅನುವಾದ: ಹಾಗಿದ್ದರೂ ಕರ್ಮವು ಆವಶ್ಯಕವಾದ್ದರಿಂದ ಅದೇ ಜಗತ್ತಿಗೆ ಕಾರಣವಾಗಿರ ಬಹುದಲ್ಲವೆ? ಮತ್ತೆ ಪ್ರಧಾನದ ಕಲ್ಪನೆ ಏಕೆ? ಅದಕ್ಕೆ (ಸಮಾಧಾನವಾಗಿ) ಹೇಳಿದೆ.

(ಸೂತ್ರ) ಕರ್ಮವು ಉಪಾದಾನವಾಗಲು ಸಾಧ್ಯವಿಲ್ಲದ ಕಾರಣ.

ಭಾಷ್ಯ: *ಕರ್ಮಣೋಽಪಿ ವಸ್ತುಸಿದ್ಧಿರ್ನಿಮಿತ್ತಕಾರಣಸ್ಯ ಕರ್ಮಣಃ ನ ಮೂಲಕಾರಣತ್ವಮ್, ಗುಣಾನಾಂ ದ್ರವ್ಯೋಪಾದಾನತ್ವಾಯೋಗಾತ್ । ಕಲ್ಪನಾ ಹಿ ದೃಷ್ಟಾನುಸಾರೇಣೈವ ಭವತಿ । ವೈಶೇಷಿಕೋಕ್ತಗುಣಾನಾಂ ಚೋಪಾದಾನತ್ವಂ ನ ಕ್ವಾಪಿ ದೃಷ್ಟಮಿತ್ಯರ್ಥಃ । ಅತ್ರ ಕರ್ಮಶಬ್ದೋಽವಿದ್ಯಾದೀನಾಮಪ್ಯುಪಲಕ್ಷಕಃ, ಗುಣತ್ವ –। ಅವಿಶೇಷೇಣ ತೇಷಾಮಪ್ಯುಪಾದಾನತ್ವಾಯೋಗಾತ್ । ಚಕ್ಷುಷಃ ಪಟಲಾದಿವತ್ ಅವಿದ್ಯಾಯಾಃ ಚೇತನಗತದ್ರವ್ಯತ್ವೇ ತು ಪ್ರಧಾನಸ್ಯ ಸಂಜ್ಞಾಮಾತ್ರಭೇದಃ ಇತಿ ॥*

ಅನುವಾದ: ಕರ್ಮದಿಂದಲೂ ವಸ್ತುಸಿದ್ಧಿಯಾಗದು. ಏಕೆಂದರೆ ಕರ್ಮವು ಕೇವಲ ನಿಮಿತ್ತ ಕಾರಣವಾಗಬಲ್ಲದೇ ಹೊರತು ಮೂಲ ಕಾರಣವಾಗಲಾರದು. ಗುಣಗಳು ದ್ರವ್ಯಗಳಿಗೆ ಉಪಾದಾನ ಕಾರಣವಾಗಲಾರದು. ಕಲ್ಪನೆಯು ದೃಷ್ಟಾನುಸಾರವಾಗಿಯೇ ಆಗುವುದು. ವೈಶೇಷಿಕದಲ್ಲಿ ಹೇಳಿರುವ ಗುಣಗಳನ್ನು ದ್ರವ್ಯಗಳ ಉಪಾದಾನ ಕಾರಣವಾಗಿರುವುದನ್ನು ಎಲ್ಲೂ ಕಂಡಿಲ್ಲ, ಇಲ್ಲಿ ಕರ್ಮಶಬ್ದವು ಅವಿದ್ಯಾದಿಗಳನ್ನೂ ಸೂಚಿಸುತ್ತದೆ. ಅವಿದ್ಯಾದಿಗಳೂ ಸಹ ಗುಣತ್ವವನ್ನು ಹೊಂದಿರುವುದರಿಂದ ಅವುಗಳೂ ಸಹ ಉಪಾದಾನ ಕಾರಣಗಳಾಗಲು ಸಾಧ್ಯವಿಲ್ಲ. ಕಣ್ಣಿನ ಪೊರೆಯಂತೆ ಅವಿದ್ಯೆಗೂ ಸಹ ಚೇತನದಲ್ಲಿರುವ ದ್ರವ್ಯವೆಂದಲ್ಲಿ ಪ್ರಧಾನದ ಹೆಸರೂ ಸಹ ಕೇವಲ ಹೆಸರಿನಲ್ಲಿ ಭೇದವುಂಟಾಗುವುದು.

ವಿವರಣೆ: ಕಲ್ಪನೆ ಎಂದರೆ ಅನುಮಾನ, ದೃಷ್ಟಾನುಸಾರವಾಗಿ ಎಂದರೆ ಅನುಮಾನವು ಗೋಚರವಾದದ್ದನ್ನೇ ಅವಲಂಬಿಸುವುದು. ವೈಶೇಷಿಕದ ಪ್ರಕಾರ ದ್ರವ್ಯ, ಗುಣಗಳು ಬೇರೆ ಪದಾರ್ಥಗಳು, ಗುಣ ದ್ರವ್ಯಕ್ಕೆ ಎಂದೂ ಕಾರಣವಾಗಲಾರದು.

ಭಾಷ್ಯ: *ತದೇವಂ ಪರಿಣಾಮಿತ್ವ–ಅಪರಿಣಾಮಿತ್ವ–ಪರಾರ್ಥತ್ವ–ಅಪದಾರ್ಥತ್ವಾಭ್ಯಾಂ ಪುಂ–ಪ್ರಕೃತ್ಯೋರ್ವಿವೇಕಃ ದರ್ಶಿತಃ । ಇದಾನೀಂ ವಿವೇಕಜ್ಞಾನಸ್ಯೈವ ಅವಿವೇಕ–ನಾಶದ್ವಾರಾ ಪರಮಪುರುಷಾರ್ಥಹೇತುತ್ವಂ, ನ ತು ತತ್ರ ವೈದಿಕಕರ್ಮಣಾಂ ಸಾಕ್ಷಾದ್ಧೇತುತಾಽಸ್ತೀತಿ ಯತ್ ಪ್ರಾಗುಕ್ತಂ 'ಅವಿಶೇಷಶ್ಚೋಭಯೋ'ರಿತಿ (೧–೬) ಸೂತ್ರೇಣ ತದೇವ ಪ್ರಪಂಚಯತಿ ಪಂಚಭಿಃ ಸೂತ್ರೈಃ ।*

ಅನುವಾದ: ಹೀಗೆ ಪರಿಣಾಮಿತ್ವ ಅಪರಿಣಾಮಿತ್ವ, ಪರಾರ್ಥತ್ವ–ಅಪರಾರ್ಥತ್ವ ಇವುಗಳ ಮೂಲಕ ಪುರುಷ ಪ್ರಕೃತಿಗಳ ಬಗ್ಗೆ ತಿಳಿಸಲಾಗಿದೆ. ಈಗ ವಿವೇಕಜ್ಞಾನದ ಮೂಲಕವೇ ಅವಿವೇಕನಾಶ ಮಾಡುವುದು ಪರಮ ಪುರುಷಾರ್ಥಕ್ಕೆ ಕಾರಣವೇ ಹೊರತು ಅದಕ್ಕಾಗಿ ವೈದಿಕ ಕರ್ಮಗಳೇ ಸಾಕ್ಷಾತ್ ಕಾರಣವಲ್ಲ ಎಂದು ಮೊದಲೇ ಹೇಳಿದ್ದನ್ನು (ಸಾಂ.ಸೂ. ೧–೬) ಮುಂದಿನ ಐದು ಸೂತ್ರಗಳಲ್ಲಿ ವಿಸ್ತರಿಸಿ ಹೇಳಿದೆ.

ಸೂತ್ರ: ನಾನುಶ್ರವಿಕಾದಪಿ ತತ್ಸಿದ್ಧಿಃ ಸಾಧ್ಯತ್ವೇನ ಆವೃತ್ತಿಯೋಗಾತ್ ಅಪುರುಷಾರ್ಥತ್ವಮ್ ॥ ೮೨ ॥

ಅನುವಾದ: ಯಜ್ಞಯಾಗಾದಿ ವೈದಿಕಕರ್ಮಗಳಿಂದ ಪುರುಷಾರ್ಥವನ್ನು ಸಾಧಿಸಲಾಗದು. ಮತ್ತೆ ಮತ್ತೆ ಅದು ಉಂಟಾಗುವುದರಿಂದ ಅಪುರುಷಾರ್ಥವೇ ಸರಿ.

ಭಾಷ್ಯ: *ಅಪಿ ಶಬ್ದೇನ 'ನ ದೃಷ್ಟಾತ್ ತತ್ಸಿದ್ಧಿರಿತಿ' (೧.೨) ಪ್ರಾಗುಕ್ತ–ದೃಷ್ಟಸಮುಚ್ಚಯಃ । ಗುರೋಃ ಅನುಶ್ರೂಯತೇ ಇತಿ ಅನುಶ್ರವಃ ವೇದಃ । ತದ್ವಿಹಿತೋ ಯಾಗಾದಿಃ ಆನುಶ್ರವಿಕಂ ಕರ್ಮ । ತಸ್ಮಾದಪಿ ನ ಪೂರ್ವೋಕ್ತಪುರುಷಾರ್ಥಸಿದ್ಧಿಃ । ಯತಃ ಕರ್ಮಸಾಧ್ಯತ್ವೇನ ಪುನರಾವೃತ್ತಿಸಂಬಂಧಾತ್ ಅತ್ಯಂತಪುರುಷಾರ್ಥತ್ವಾಭಾವಃ ಇತ್ಯರ್ಥಃ*

ಕರ್ಮಸಾಧ್ಯಸ್ಯ ಚಾನಿತ್ಯತ್ವೇ ಶ್ರುತಿಃ, 'ತದ್ಯಥೇಹ ಕರ್ಮಚಿತೋ ಲೋಕಃ ಕ್ಷೀಯತ ಏವಮೇವ ಅಮುತ್ರ ಪುಣ್ಯಚಿತಃ ಲೋಕಃ ಕ್ಷೀಯತೇ' (ಛಾಂ.ಉ. ೮.೧೬) ಇತಿ

ಅನುವಾದ: ಅಪಿ ಶಬ್ದದಿಂದ ಮೇಲೆ ಹೇಳಿದ 'ದೃಷ್ಟವಾದರಿಂದ ಅದು ಸಿದ್ಧಿಸದು' ಎಂಬ ಸೂತ್ರದಿಂದ ದೃಷ್ಟಸಮುಚ್ಚಯವು ವೇದ್ಯವಾಗುವುದು, ಗುರುಗಳಿಂದ ಕೇಳಿದ್ದು ಎಂಬರ್ಥದಲ್ಲಿ ಅನುಶ್ರವ ಅಥವಾ ವೇದವೆಂದು ತಿಳಿಯಬಹುದು. ಅದರ ಮುಖಾಂತರ ನೆರವೇರಿಸುವ ಯಾಗಾದಿಗಳನ್ನು 'ಆನುಶ್ರವಿಕ' ಕರ್ಮಗಳೆನ್ನುವರು. ಅದರಿಂದಲೂ ಮೊದಲು ಹೇಳಿದ ಪುರುಷಾರ್ಥವು ಸಿದ್ಧಿಸದು. ಏಕೆಂದರೆ ಕರ್ಮದಿಂದ ಸಾಧಿಸಬಹುದಾದ ಕಾರಣ ಮತ್ತೆ ಪುನರಾವೃತ್ತಿ ಯಾಗುವುದು ಮತ್ತು ಅತ್ಯಂತ ಪುರುಷಾರ್ಥದ ಅಭಾವವೇ ಉಳಿಯುವುದು. ಕರ್ಮದಿಂದ ಸಾಧಿಸಬಹುದಾದದ್ದು ಅನಿತ್ಯವೆಂದು ಶ್ರುತಿ ಹೇಳುತ್ತದೆ– 'ಹೇಗೆ ಕರ್ಮದಿಂದ ಗಳಿಸಿದ ಲೋಕವು ಸವೆಯುವುದೋ ಹಾಗೆ ಪುಣ್ಯದಿಂದ ಗಳಿಸಿದ ಲೋಕವೂ ಸಹ ಸವೆಯುವುದು' (ಛಾಂ. ೮.೧೬)

ಭಾಷ್ಯ: *'ನ ಕರ್ಮಣಾನ್ಯಧರ್ಮತ್ವಾತ್' ಇತಿ ಸೂತ್ರೇಣ (೧.೧೬) ಪೂರ್ವಂ ಕರ್ಮಣಾ ಬಂಧೋ ನಿರಾಕೃತಃ । ಇದಾನೀಂ ಚ ಮೋಕ್ಷೋ ನಿರಾಕ್ರಿಯತೇ ಇತಿ ನ ಪೌನರುಕ್ತ್ಯಮ್ । ಅನ್ಯಧರ್ಮತ್ವೇನ ಪೂರ್ವೋಕ್ತ– ಹೇತುನಾ ಬಂಧ ಇವ ಮೋಕ್ಷೇಽಪಿ ಕರ್ಮಣೋ ಹೇತುತ್ವಂ ನಿರಾಕೃತಪ್ರಾಯಮಿತಿ ಪುನರಾಶಂಕ್ಯೈವ ನೋದೇತಿ ।*

ಅನುವಾದ: ಕರ್ಮವು ಬೇರೆಯದರ ಧರ್ಮವಾದ್ದರಿಂದ (ಅದರಿಂದ ಪುರುಷನಿಗೆ ಬಂಧವು) ಬಾರದು ಎಂಬ ಸೂತ್ರದಂತೆ ಮೊದಲೇ ಕರ್ಮದಿಂದ ಬಂಧವು ಬರದೆಂದು ಹೇಳಿದೆ. ಈಗಲೂ ಸಹ ಮೋಕ್ಷವನ್ನು ನಿರಾಕರಿಸಲಾಗಿದೆ ಎಂಬುದು ಪುನರುಕ್ತಿಯಲ್ಲ. ಬೇರೆಯದರ ಧರ್ಮವಾದರೂ ಮೊದಲು ಹೇಳಿದ ಕಾರಣದಿಂದ ಬಂಧದಂತೆ ಕರ್ಮದ ಕಾರಣ ಮೋಕ್ಷವೂ ಸಹ ನಿರಾಕರಿಸಲ್ಪಟ್ಟರೆ ಆಗ ಸಂದೇಹಕ್ಕೆ ಅವಕಾಶವೇ ಇರದು, ಹಾಗಿರುವಾಗ ಕರ್ಮದಿಂದ ಬಂಧವುಂಟಾಗುವುದೆ ಎಂಬ ಪ್ರಶ್ನೆ ಏಳದು, ಅಲ್ಲವೆ?

ಭಾಷ್ಯ: *ಇತಿ ಚೇನ್ನ । ಬಂಧಹೇತುತ್ವೇನ ಅವಿವೇಕೇ ಸಿದ್ಧೇ ತತ್ ಪುರುಷೀಯಾವಿವೇಕಜತ್ವೇನ ಕರ್ಮಣಾಂ ತದೀಯತ್ವವ್ಯವಸ್ಥೋಪಪತ್ತೇರಿತಿ ।*

ಅನುವಾದ: ಅದು ಸರಿಯಲ್ಲ. ಏಕೆಂದರೆ ಬಂಧಕ್ಕೆ ಅವಿವೇಕವೇ ಕಾರಣವಾದ್ದರಿಂದ ಆಯಾ ಪುರುಷನಿಗೆ ಸಂಬಂಧಿಸಿದ ಅವಿವೇಕದಿಂದ ಉಂಟಾದ ಕರ್ಮಗಳು ಆಯಾ ಪುರುಷನಿಗೆ ಬಂಧವಾಗುವುದರಿಂದ ಹಾಗೆ ಹೇಳಿದೆ.

ಭಾಷ್ಯ: *ನನ್ವೇವಂ ಪಂಚಾಗ್ನಿವಿದ್ಯಾರೂಪೇಣ ಉಪಾಸನಾಖ್ಯಕರ್ಮಣಾ ತೀರ್ಥಮರಣಾದಿ ಕರ್ಮಣಾ ಚ ಬ್ರಹ್ಮಲೋಕಂ ಗತಸ್ಯ ಅನಾವೃತ್ತಿಶ್ರುತಿಃ ಕಥಮುಪಪದ್ಯತೇ, ತತ್ರಾಹ*

ಅನುವಾದ: ಪಂಚಾಗ್ನಿವಿದ್ಯೆಯ ರೂಪದಲ್ಲಿ ಉಪಾಸನೆ ಎಂಬ ಕರ್ಮದಿಂದ ಹಾಗೂ ತೀರ್ಥಸ್ಥಳದಲ್ಲಿ ಮರಣಾದಿ ಕರ್ಮಗಳಿಂದಲೂ ಬ್ರಹ್ಮಲೋಕಕ್ಕೆ ಹೋದವನು ಪುನರ್ಜನ್ಮವಿಲ್ಲದಿರುವುದು ಹೇಗೆ ಸಾಧ್ಯ?

ವಿವರಣೆ: ಪಂಚಾಗ್ನಿವಿದ್ಯೆಯ ಉಲ್ಲೇಖ ಛಾಂದೋಗ್ಯೋಪನಿಷತ್ತಿನಲ್ಲಿ ಬರುತ್ತದೆ. (೫.೪–೯)

ಸೂತ್ರ: ತತ್ರ ಪ್ರಾಪ್ತವಿವೇಕಸ್ಯ ಅನಾವೃತ್ತಿಶ್ರುತಿಃ ॥ ೮೩ ॥

ಅನುವಾದ: ಆ ವಿಷಯದಲ್ಲಿ ವಿವೇಕಜ್ಞಾನವನ್ನು ಪಡೆದವನು ಮತ್ತೆ ಹಿಂದಿರುಗಿ ಬರುವುದಿಲ್ಲ.

ವಿವರಣೆ: ಅಲ್ಲಿ ಎಂದರೆ ವೈದಿಕ ಕರ್ಮ ಮಾಡಿದ ವಿಷಯದಲ್ಲಿ, 'ವಿವೇಕ'ವೆಂದರೆ 'ತತ್ರ ಪ್ರಕೃತಿ–ಪುರುಷಯೋಃ ಪ್ರಾಪ್ತ ವಿವೇಕಸ್ಯ ವಿವೇಕ ಜ್ಞಾನಾತ್ ಅನಾವೃತ್ತಿಶ್ರುತಿಃ' ಎಂದು ಅನಿರುದ್ಧನು (ಇನ್ನೊಬ್ಬ ವ್ಯಾಖ್ಯಾಕಾರ) ಅಭಿಪ್ರಾಯಪಟ್ಟಿದ್ದಾನೆ.

ಭಾಷ್ಯ: *ತತ್ರ ಆನುಶ್ರವಿಕಕರ್ಮಣಿ ಬ್ರಹ್ಮಲೋಕಗತಾನಾಂ ಯಾ ಅನಾವೃತ್ತಿಶ್ರುತಿಃ ಸಾ ತತ್ರೈವ ಪ್ರಾಪ್ತವಿವೇಕಸ್ಯ ಮಂತವ್ಯಾ । ಅನ್ಯಥಾ ಹಿ ಬ್ರಹ್ಮಲೋಕಾದಪಿ ಆವೃತ್ತಿಂ ಪ್ರತಿಪಾದಯತಾಂ ವಾಕ್ಯಾಂತರಾಣಾಂ ವಿರೋಧ ಇತ್ಯರ್ಥಃ ।*

ಅನುವಾದ: ತತ್ರ ಎಂದರೆ ವೈದಿಕ ಕರ್ಮವನ್ನು ಅನುಷ್ಠಾನ ಮಾಡಿದಲ್ಲಿ ಬ್ರಹ್ಮಲೋಕವನ್ನು ಸೇರಿದವರ ವಿಷಯದಲ್ಲಿ ಅನಾವೃತ್ತಿಯನ್ನು ಕೇಳಿರುವುದು ವಿವೇಕಜ್ಞಾನವನ್ನು ಪಡೆದವರಿಗೆಂದು ತಿಳಿಯಬೇಕು. ಹಾಗಿಲ್ಲದಿದ್ದಲ್ಲಿ ಬ್ರಹ್ಮಲೋಕದಿಂದಲೂ ಆವೃತ್ತಿಯನ್ನು ಹೇಳುವ ವಾಕ್ಯಾಂತರಗಳಲ್ಲಿ ವಿರೋಧವುಂಟಾಗುವುದು.

ವಿವರಣೆ: ಅನಾವೃತ್ತಿ ಅಥವಾ ಪುನರ್ಜನ್ಮವಿಲ್ಲದಿರುವುದು ವಿವೇಕಜ್ಞಾನವನ್ನು ಪಡೆದವರಿಗೆ ಎಂದು ತಿಳಿಯಬೇಕು.

ಭಾಷ್ಯ: *ತಥಾಪಿ ಸಾಪ್ಯನಾವೃತ್ತಿರ್ವಿವೇಕ ಜ್ಞಾನಸ್ಯೈವ ಫಲಂ, ನ ತು ಸಾಕ್ಷಾದೇವ ಕರ್ಮಣಃ ಇತಿ । ಏತಚ್ಚ ಷಷ್ಠಾಧ್ಯಾಯೇ (೧೨–೨೬) ಪ್ರಪಂಚಯಿಷ್ಯತಿ । ಬ್ರಹ್ಮಮೀಮಾಂಸಾಭಾಷ್ಯೇ (೪.೪) ಚ ತಯೋರ್ವಾಕ್ಯಾನ್ಯುದಾಹೃತ್ಯ ಅಸ್ಮಾಭಿರ್ವ್ಯಾಖ್ಯಾತಾನಿ ।*

ಅನುವಾದ: ಹಾಗಿದ್ದರೂ ಆ ಅನಾವೃತ್ತಿಯು ವಿವೇಕಜ್ಞಾನದ ಫಲವೇ ಹೊರತು ಸಾಕ್ಷಾತ್ ಕರ್ಮದ ಫಲವಲ್ಲ. ಇದನ್ನೂ ಆರನೆಯ ಅಧ್ಯಾಯದಲ್ಲಿ ವ್ಯಕ್ತಪಡಿಸುತ್ತಾರೆ. ಬ್ರಹ್ಮಮೀಮಾಂಸಾ ಭಾಷ್ಯದಲ್ಲಿ (೪.೪) ಎರಡು ಬಗೆಯ ವಾಕ್ಯಗಳನ್ನು ನಾವು ಉದಾಹರಣೆ ನೀಡಿ ವ್ಯಾಖ್ಯಾನ ಮಾಡಿದ್ದೇವೆ.

ಭಾಷ್ಯ: *ಕರ್ಮಣಸ್ತು ಫಲಂ ತದಾಹ ।*

ಅನುವಾದ: ಕರ್ಮದ ಫಲವನ್ನು ಹೇಳಿದೆ.

ಸೂತ್ರ: ದುಃಖಾತ್ ದುಃಖಂ ಜಲಾಭಿಷೇಕವನ್ನ ಜಾಡ್ಯವಿಮೋಕಃ ॥ ೮೪ ॥

ಅನುವಾದ: ದುಃಖದಿಂದ ದುಃಖವುಂಟಾಗುವುದು. ಅದು ಕೇವಲ ಸ್ನಾನಕ್ಕೆ ಸಮಾನದಂತೆ ಜಾಡ್ಯವನ್ನು ಹೋಗಲಾಡಿಸಲಾರದು.

ಭಾಷ್ಯ: *ಅನುಶ್ರವಿಕಾತ್ತು ಹಿಂಸಾದಿದೋಷೇಣ ದುಃಖಾತ್ಮಕಭೋಗೇನ ಚ ದುಃಖಾದ್ ದುಃಖಂ ದುಃಖಧಾರೈವ ಭವತಿ– ನ ತು ಜಾಡ್ಯವಿಮೋಕೋ, ಅವಿವೇಕನಿವೃತ್ತಿಃ । ದುಃಖವಿಮೋಕಸ್ತು ಅತಿದೂರ ಏವ ತಿಷ್ಠತಿ । ಯಥಾ ಜಾಡ್ಯಾರ್ತಸ್ಯ ಜಲಾಭಿಷೇ–ಕಾತ್ ದುಃಖ–ಅನಿವೃತ್ತಿರೇವ ಭವತಿ ನ ತು ಜಾಡ್ಯವಿಮೋಕ್ಷಃ ಇತ್ಯರ್ಥಃ ।*

ಅನುವಾದ: ಆನುಶ್ರವಿಕಕರ್ಮವು ಹಿಂಸಾದಿ ದೋಷಗಳಿಂದಲೂ ದುಃಖಪೂರ್ಣವಾದ ಭೋಗದಿಂದಲೂ 'ದುಃಖಾತ್ ದುಃಖಂ' ಎಂದರೆ ದುಃಖಧಾರೆಯೇ ಆಗಿಹೋಗುತ್ತದೆ; ಅದರಿಂದ ಜಾಡ್ಯವಿಮೋಕ ಎಂದರೆ ಅವಿವೇಕವು ಹೋಗದು. ದುಃಖದ ನಿವೃತ್ತಿಯು ಇನ್ನು ಅತಿದೂರ ಉಳಿದಂತೆಯೇ. ಈ ಜಾಡ್ಯದಿಂದ ಕಂಗೆಟ್ಟವನು ಸ್ನಾನ ಮಾಡಿದರೂ ದುಃಖ ನಿವೃತ್ತಿಯಾಗದು. ಜಾಡ್ಯದಿಂದ ಬಿಡುಗಡೆಯೂ ದೊರೆಯದು.

ಭಾಷ್ಯ: *ತದುಕ್ತಮ್ ।*

ಯಥಾ ಪಂಕೇನ ಪಂಕಾಂಭಃ ಸುರಯಾ ವಾ ಸುರಾಕೃತಮ್ ।
ಭೂತಹತ್ಯಾಂ ತಥೈವೈಕಾಂ ನ ಯಜ್ಞೈರ್ಮಾರ್ಷ್ಟುಮರ್ಹತಿ ॥
ಭಾಗವತ ೧.೮.೫೨

ಶ್ರೂಯತೇ ಚ ಬ್ರಹ್ಮಲೋಕಸ್ಥಾನಾಂ ವಿಷ್ಣುಪಾರ್ಷದಾನಾಂ ಅಪಿ ಜಯವಿಜಯಾದೀನಾಂ ಪುನಃ ರಾಕ್ಷಸಯೋನೌ ದುಃಖಿಧಾರೇತಿ (ಭಾಗವತ ೩. ೧೫–೧೬) ಕಾರಿಕಯಾ ಚ ಇದಮುಕ್ತಮ್ ।

ದೃಷ್ಟವದಾನುಶ್ರವಿಕಃ ಸಹ್ಯವಿಶುದ್ಧಿಕ್ಷಯಾತಿಶಯಯುಕ್ತಃ ।
(ಸಾ.ಕಾ. ೨) ಇತಿ

ಅನುವಾದ: ಹೀಗೆ ಹೇಳಿದೆ– ಕೆಸರನ್ನು ಕೆಸರಿನ ನೀರಿನಿಂದ ತೊಳೆಯಲಾಗದು, ಹೆಂಡದಿಂದಾಗುವ ಪಾಪವನ್ನು ಹೆಂಡದಿಂದ ಹೋಗಲಾಡಿಸಲಾಗದು. ಒಂದು ಪ್ರಾಣಿಯನ್ನು ಕೊಂದ ಪಾಪವನ್ನು ಯಜ್ಞಗಳಿಂದ ಹೋಗಲಾಡಿಸಲಾಗದು. ವಿಷ್ಣುವಿನ ಸಭಿಕರಾದ (ಸೇವಕರಾದ) ಜಯವಿಜಯ ಮುಂತಾದವರೂ ಸಹ ಬ್ರಹ್ಮಲೋಕದಲ್ಲಿದ್ದವರಾದರೂ ರಾಕ್ಷಸ ಯೋನಿಯಲ್ಲಿ ಹುಟ್ಟಿ ದುಃಖಧಾರೆಯನ್ನು

ಅನುಭವಿಸಿದರು. ಸಾಂಖ್ಯ ಕಾರಿಕೆಯಲ್ಲಿಯೂ ಹೀಗೆ ಹೇಳಿದೆ. 'ಆನುಶ್ರವಿಕ ಉಪಾಯವೂ ಸಹ ಅವಿಶುದ್ಧಿ, ಕ್ಷಯ ಮತ್ತು ಅತಿಶಯಗಳಿಂದ ಕೂಡಿದ್ದು ಎಂಬುದನ್ನು ಎಲ್ಲರೂ ಕಂಡಿದ್ದಾರೆ.

ಭಾಷ್ಯ: *ನನು ನಿಷ್ಕಾಮಾದ್ ಅಂತರ್ಯಾಗಜಪಾದಿರೂಪಕರ್ಮಣಃ ನ ದುಃಖಂ, ಪ್ರತ್ಯುತ ಮೋಕ್ಷಃ ಫಲಂ ಶ್ರೂಯತೇ ಇ ತತ್ರಾಹ–*

ಸೂತ್ರ: ಕಾಮ್ಯೇಽಕಾಮ್ಯೇಪಿ ಸಾಧ್ಯತ್ವಾವಿಶೇಷಾತ್ ॥ ೮೫ ॥

ಅನುವಾದ: ಅಂತರ್ಯಾಗ, ಜಪ ಮುಂತಾದ ನಿಷ್ಕಾಮ ಕರ್ಮದಿಂದ ದುಃಖಬಾರದು. ಬದಲಾಗಿ ಮೋಕ್ಷ ದೊರೆಯುವುದು ಎನ್ನುವರು. ಅದನ್ನು ಕುರಿತು ಹೇಳಿದೆ–

ಅನುವಾದ: (ಸೂತ್ರ) ಕಾಮ್ಯ ಮತ್ತು ಅಕಾಮ್ಯ ಕರ್ಮದಲ್ಲಿಯೂ ಪಡೆಯಬಹುದಾದ ಫಲ ಸಮಾನವಾದುದು.

ಭಾಷ್ಯ: *ಕಾಮ್ಯೇಽಕಾಮ್ಯೇಚ ಕರ್ಮಣಿ ದುಃಖಾದ್ ದುಃಖಂ ಭವತಿ । ಕುತಃ? ಸಾಧ್ಯತ್ವಾವಿಶೇಷಾತ್ । ಕರ್ಮಸಾಧ್ಯಸ್ಯ ಸತ್ತ್ವಶುದ್ಧಿದ್ವಾರಕ–ಜ್ಞಾನಸ್ಯಾಪಿ ತ್ರಿಗುಣಾತ್ಮಕತಯಾ ದುಃಖಾತ್ಮಕತ್ವಾದಿತ್ಯರ್ಥಃ । 'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಂ ಆನಶುಃ' ಇತ್ಯಾದಿ ಶ್ರುತಿಭ್ಯಶ್ಚ (ತೈ.ಆ. ೧೧.೧೦) ಕರ್ಮಣೋ ನ ಸಾಕ್ಷಾನ್ಮೋಕ್ಷಃ ಫಲಮಿತಿ ಭಾವಃ । ತ್ಯಾಗೇನ ಅಭಿಮಾನ–ತ್ಯಾಗೇನ । ಏಕೇ ಕೇಚಿದೇವ ಅಮೃತತ್ವಮಾನಶುಃ ಪ್ರಾಪ್ತವಂತಃ, ನ ಸರ್ವೇ । ಅಭಿಮಾನತ್ಯಾಗಸ್ಯ ತತ್ತ್ವಜ್ಞಾನಜನ್ಯ–ತಯಾ ದುರ್ಲಭತ್ವಾದಿತ್ಯರ್ಥಃ ।*

ಅನುವಾದ: ಕಾಮ್ಯ ಮತ್ತು ಅಕಾಮ್ಯ ಕರ್ಮದಿಂದ ದುಃಖದಿಂದ ದುಃಖ ಉಂಟಾಗುವುದು. ಏಕೆಂದರೆ ಅವೆರಡರಿಂದಲೂ ಸಾಧಿಸಬೇಕಾದುದು ಒಂದೇ. ಕರ್ಮದಿಂದ ಸಾಧಿಸಬಹುದಾದ ಸತ್ತ್ವಶುದ್ಧಿಯ ಮೂಲಕ ಜ್ಞಾನವೂ ಸಹ ಮೂರು ಗುಣಗಳಿಂದ ಕೂಡಿರುವುದರಿಂದ ದುಃಖದಿಂದ ಕೂಡಿರುವುದು, ಎಂದರ್ಥ. 'ತ್ಯಾಗದಿಂದಲೇ ಕೆಲವರು ಅಮೃತತ್ವವನ್ನು ಪಡೆದರು, ಕರ್ಮದಿಂದಲ್ಲ, ಸಂತತಿಯಿಂದಲ್ಲ, ಹಣದಿಂದಲ್ಲ' (ತೈ.ಆ. ೧೧.೧೦). ಕರ್ಮದಿಂದ ಸಾಕ್ಷಾತ್ ಮೋಕ್ಷದ ಫಲ ದೊರೆಯದು ಎಂದು ಅಭಿಪ್ರಾಯ. ತ್ಯಾಗೇನ ಎಂದರೆ ಅಭಿಮಾನದ ತ್ಯಾಗದಿಂದ. 'ಏಕೇ' ಎಂದರೆ 'ಕೆಲವರು', ಅಮೃತತ್ವವನ್ನು ಪಡೆದರು, ಎಲ್ಲರೂ ಅಲ್ಲ. ಅಭಿಮಾನ ತ್ಯಾಗದಿಂದ ತತ್ವಜ್ಞಾನವುಂಟಾಗುವುದರಿಂದ ಅದು ದುರ್ಲಭ ಎಂದು ಅರ್ಥ.

ಭಾಷ್ಯ: *ನನು ಭವನ್ಮತೇಽಪಿ ಕಥಂ ಜ್ಞಾನಸಾಧ್ಯಸ್ಯ ನ ದುಃಖತ್ವಂ ಸಾಧ್ಯತ್ವಾಽವಿಶೇಷಾತ್ ।*

ಸೂತ್ರ: ನಿಜಮುಕ್ತಸ್ಯ ಬಂಧಧ್ವಂಸಮಾತ್ರಂ ಪರಂ ನ ಸಮಾನತ್ವಮ್ ॥ ೮೬ ॥

ಅನುವಾದ: ನೀವು ಹೇಳಿದಂತೆಯೇ ಹೇಗೆ ಜ್ಞಾನ ಸಾಧ್ಯವಾದ ದುಃಖರಹಿತತೆಯು ಮೋಕ್ಷದ ದುಃಖರಹಿತತೆಯಿಂದ ವಿಶೇಷವೇನಲ್ಲ ಎಂಬುದನ್ನು ಕುರಿತು ಹೀಗೆ ಹೇಳಿದೆ–

ಅನುವಾದ: ಸ್ವಾಭಾವಿಕವಾಗಿ ಮುಕ್ತನಾದ (ಪುರುಷನಿಗೆ) ಬಂಧದ ನಿವೃತ್ತಿ ಮಾತ್ರವೇ ಅತ್ಯಧಿಕಫಲ. ಆದ್ದರಿಂದ (ಕರ್ಮಜ ಫಲಕ್ಕೂ ಜ್ಞಾನದ ಫಲಕ್ಕೂ) ಸಮಾನತೆ ಇರದು.

ಭಾಷ್ಯ: *ನಿಜಮುಕ್ತಸ್ಯ ಸ್ವಭಾವಮುಕ್ತಸ್ಯಾವಿದ್ಯಾಖ್ಯಕಾರಣನಾಶೇನ ಯಥೋಕ್ತಬಂಧನಿವೃತ್ತಿಮಾತ್ರಂ ಪರಮಾತ್ಯಂತಿಕಂ ವಿವೇಕ–ಜ್ಞಾನಸ್ಯ ಫಲಮ್ । ಧ್ವಂಸಶ್ಚಾವಿನಾಶೀ, ನ ತು ಕರ್ಮಣ ಇವ ಸುಖಾದಿಕಂ ಭಾವರೂಪಂ ಕಾರ್ಯಂ, ಯೇನ ನಾಶಿತಯಾ ದುಃಖದಂ ತತ್ ಸ್ಯಾತ್, ಕರ್ಮಣಶ್ಚ ದೃಷ್ಟಕಾರಣಂ ವಿನಾ ನ ಸಾಕ್ಷಾದೇವ ವಿದ್ಯಾನಾಶಕತ್ವಂ ಘಟತೆ ಇತಿ । ಅತೋ ಜ್ಞಾನಸ್ಯ ಅಕ್ಷಯತ್ವಾನ್ನ ಸಮಾನತ್ವಂ ಜ್ಞಾನಕರ್ಮಣೋರಿತ್ಯರ್ಥಃ । ಜ್ಞಾನಾನ್ನ ಪುನರಾವೃತ್ತಿಃ ಸಂಭವತಿ, ಅವಿವೇಕಾऽऽಖ್ಯಕಾರಣ ನಾಶಾತ್ ಇತಿ ಸಿದ್ಧಮ್ । ತದೇವಂ ವಿವೇಕಜ್ಞಾನಮೇವ ಸಾಕ್ಷಾತ್ ಜ್ಞಾನೋಪಾಯ ಇತ್ಯುಕ್ತಮ್ ।*

ಅನುವಾದ: ಸ್ವಾಭಾವಿಕವಾಗಿಯೇ ಮುಕ್ತನಾದವನಿಗೆ ಅವಿದ್ಯೆಯೆಂಬ ಕಾರಣದ ನಾಶದಿಂದ ಆಗುವ ಬಂಧನಿವೃತ್ತಿಯಷ್ಟೆ; ಆದರೆ, ವಿವೇಕಜ್ಞಾನದ ಫಲವಾದರೋ ಆತ್ಯಂತಿಕ ನಿವೃತ್ತಿ, ಧ್ವಂಸವೆಂದರೆ ವಿನಾಶವೆಂದಲ್ಲ; ಕರ್ಮದಿಂದ ಉಂಟಾಗುವ ಸುಖ ಆದಿ ಭಾವರೂಪವಾದ ಕಾರ್ಯವು ನಾಶವಾಗುವಂತೆ ಅಲ್ಲ, ಹಾಗಿದ್ದಲ್ಲಿ ಅದು ದುಃಖರೂಪವನ್ನು ತಾಳುತ್ತಿತ್ತು. ಯಾವುದಾದರೂ ಗೋಚರವಾಗುವ ಕಾರಣವಿಲ್ಲದೆ ಕರ್ಮದಿಂದ ಅವಿದ್ಯೆಯ ನಾಶವು ಸಂಭವಿಸುವುದಿಲ್ಲ. ಆದ್ದರಿಂದ ಜ್ಞಾನವು ನಾಶವಾಗದ ಕಾರಣ ಜ್ಞಾನ ಮತ್ತು ಕರ್ಮಗಳು ಸಮಾನವೆಂದು ಹೇಳಲಾಗದು. ಜ್ಞಾನದಿಂದ ಪುನರಾವೃತ್ತಿಯಾಗದು, ಏಕೆಂದರೆ ಅವಿವೇಕಜ್ಞಾನವೇ ಸಾಕ್ಷಾತ್ ಜ್ಞಾನದ ಉಪಾಯ ಎಂದು ಹೇಳಿದೆ.

ವಿವರಣೆ: ಕರ್ಮದಿಂದ ದೊರೆಯುವ ಫಲ ಸುಖದ ಅನುಭವ. ಆದರೆ ಅದು ಶಾಶ್ವತವಲ್ಲ. ವಿವೇಕ ಜ್ಞಾನವೆಂಬ ಪ್ರಕಾಶದಿಂದ ಅವಿವೇಕವೆಂಬ ಅಂಧಕಾರವು ದೂರವಾಗಿ ಬಿಡುವುದು.

ಭಾಷ್ಯ: *ಇದಾನೀಂ ವಿವೇಕಜ್ಞಾನಸ್ಯಾಪಿ ಸಾಕ್ಷಾದುಪಾಯಾ ಪ್ರಮಾಣಾನಿ ಪರೀಕ್ಷ್ಯಂತೇ ಇತ್ಯಾದಿ ಶ್ರುತಿಭಿರ್ಹಿ ಪ್ರಮಾಣ–ತ್ರಯೇಣಾತ್ಮಜ್ಞಾನಮಿತ್ಯವಗಮ್ಯತೇ । ಕರ್ಮಾದಿಕಂ ಅನ್ಯತ್ ಮನ ಆದಿಪ್ರಮಾಣಾನಾಂ ಶುದ್ಧ್ಯಾದಿಕರಮೇವೇತಿ ।*

ಅನುವಾದ: ಈಗ ವಿವೇಕಜ್ಞಾನದ ಸಾಕ್ಷಾದ್ ಉಪಾಯಗಳು ಪ್ರಮಾಣಗಳ ಪರೀಕ್ಷೆ ಮಾಡಲ್ಪಡುತ್ತದೆ. ಶ್ರುತಿಗಳಿಂದ ಪ್ರಮಾಣತ್ರಯಗಳಿಂದ ಆತ್ಮಜ್ಞಾನವನ್ನು ತಿಳಿಯಬಹುದು. ಕರ್ಮಾದಿಗಳಾದರೋ ಬೇರೆಯ ಮನಸ್ಸೇ ಮೊದಲಾದ ಪ್ರಮಾಣಗಳನ್ನು ಶುದ್ಧಿಗೊಳಿಸುವುದಷ್ಟೇ ಮಾಡುತ್ತವೆ.

ವಿವರಣೆ: ಈಗ ವಿವೇಕಜ್ಞಾನದ ಸಾಕ್ಷಾದುಪಾಯಗಳನ್ನು (ಪ್ರಮಾಣಗಳನ್ನು) ಪರೀಕ್ಷಿಸುತ್ತೇವೆ.

ಭಾಷ್ಯ: *'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯಃ' । (ಬೃ.ಉ. ೨.೪.೫)*

ಸೂತ್ರ: **ದ್ವಯೋರೇಕತರಸ್ಯ ವಾಪ್ಯಸನ್ನಿಕೃಷ್ಟಾರ್ಥಪರಿಚ್ಛಿತ್ತಿಃ ಪ್ರಮಾ ತತ್ಸಾಧಕತಮಂಯತ್ತತ್ ತ್ರಿವಿಧಂ ಪ್ರಮಾಣಮ್ ॥ ೮೭॥**

ಅನುವಾದ: ಅಥವಾ ಎರಡರಲ್ಲಿ (ಬುದ್ಧಿ–ಪುರುಷರಲ್ಲಿ) ಒಂದರ ದೂರದ (ಅನಧಿಗತ) ವಸ್ತುವನ್ನು (ಅರಿತು) ದೃಢಪಡಿಸುವುದು ಪ್ರಮಾ. ಅದನ್ನು ವಿಶೇಷವಾಗಿ ತಿಳಿಯಪಡಿಸುವುದು ಪ್ರಮಾಣ. ಆ ಪ್ರಮಾಣವು ಮೂರು ಬಗೆ.

ವಿವರಣೆ: ವಾಪ್ಯಸನ್ನಿಕೃಷ್ಟ ಎನ್ನುವ ಬದಲು ವಾಸನ್ನಿಕೃಷ್ಟ ಎಂಬ ಇನ್ನೊಂದು ಪಾಠವಿದೆ. 'ಸಾಧಕತಮಂ' ಎಂಬುದಕ್ಕೆ ಬದಲಾಗಿ 'ಸಾಧಕಂ' ಎಂದು ಇನ್ನೊಂದು ಪಾಠವಿದೆ.

ಭಾಷ್ಯ: *ಅಸನ್ನಿಕೃಷ್ಟಃ ಪ್ರಮಾತರಿಂ ಅನಾರೂಢಃ ಅನಧಿಗತಃ ಇತಿ ಯಾವತ್ । ಏವಂಭೂತಸ್ಯಾರ್ಥಸ್ಯ ವಸ್ತುನಃ ಪರಿಚ್ಛಿತ್ತಿಃ ಅವಧಾರಣಂ ಪ್ರಮಾ । ಸಾ ಚ ದ್ವಯೋಃ ಬುದ್ಧಿಪುರುಷಯೋಃ ಉಭಯೋರೇವ ಧರ್ಮೋ ಭವತು, ಕಿಂ ವಾ ಏಕತರಮಾತ್ರಸ್ಯ ಉಭಯಥೈವ ತಸ್ಯಾಃ ಪ್ರಮಾಯಾಃ ಯತ್ ಸಾಧಕತಮಂ ಫಲಾಯೋಗವ್ಯವಚ್ಛಿನ್ನಂ ಕಾರಣಂ, ತಚ್ಚ ತ್ರಿವಿಧಂ ವಕ್ಷ್ಯಮಾಣ–। ರೂಪೇಣ ಇತ್ಯರ್ಥಃ । ಸ್ಮೃತಿವ್ಯಾವರ್ತನಾಯಾನಧಿಗತೇತಿ । ಭ್ರಮವ್ಯಾವರ್ತನಾಯ ವಸ್ತ್ವಿತಿ । ಸಂಶಯವ್ಯಾವರ್ತನಾಯ ತ್ವವಧಾರಣಮಿತಿ ।*

ಅನುವಾದ: ಅಸನ್ನಿಕೃಷ್ಟ ಎಂದರೆ ಪ್ರಮಾತೃವಿಗೆ ತಿಳಿದು ಬರದ ಎಂದರೆ 'ಗೊತ್ತಾಗದ' ಎಂದರ್ಥ. ಹೀಗಿರುವ ವಸ್ತುವಿನ ಪರಿಚ್ಛಿತ್ತಿ; ಎಂದರೆ ನಿರ್ಧರಿಸುವುದು ಪ್ರಮಾ. ಅದು ಬುದ್ಧಿ–ಪುರುಷವೆರಡರಲ್ಲಿಯೂ ಧರ್ಮವಾಗಿ ಇರಬಹುದು ಅಥವಾ ಒಂದರ ಧರ್ಮವಾಗಿರಬಹುದು. ಆದರೆ ಪ್ರಮಾ ಉಂಟುಮಾಡುವುದನ್ನು ಯಾವುದು ಉತ್ಕೃಷ್ಟ ಸಾಧನವಾಗಿ ಫಲ ದೊರೆಯುವುದಕ್ಕೆ (ನಿಲ್ಲಿಸದೆ ಇರುವ) ಕೂಡಲೆ ಕಾರಣವಾಗಿರುವುದೋ (ಅದನ್ನು ಪ್ರಮಾಣವೆನ್ನುವರು). ಅದೂ ಸಹ ಮೂರು ಬಗೆಯಲ್ಲಿ ತಿಳಿಸಲ್ಪಡುವುದು. ಸ್ಮೃತಿಯಿಂದ ಭಿನ್ನವೆಂದು ತೋರಿಸಲು 'ಅನಧಿಗತ' 'ಅರಿವಿಗೆ ಬಾರದ' ಎಂದು ಹೇಳಲಾಗಿದೆ. ಭ್ರಮದಿಂದ ಭಿನ್ನವೆನ್ನಲು 'ವಸ್ತು' ಎಂದು ಹೇಳಲಾಗಿದೆ. 'ಸಂಶಯ'ದಿಂದ ಬೇರೆಯೆಂದು ಹೇಳಲು 'ಅವಧಾರಣ', 'ನಿಶ್ಚಯವಾಗಿ ತಿಳಿಯುವುದು' ಎಂದು ಹೇಳಿದೆ.

ವಿವರಣೆ: ಅಭಿಪ್ರಾಯವೇನೆಂದರೆ ನಿಸ್ಸಂಶಯವಾಗಿ 'ಪ್ರಮಾ'ವನ್ನುಂಟು ಮಾಡಲು ತಪ್ಪದೇ ಇರುವ ಸಾಧನ ಪ್ರಮಾಣ.

ಭಾಷ್ಯ: *ಅತ್ರ ಯದಿ ಪ್ರಮಾರೂಪಂ ಫಲಂ ಪುರುಷನಿಷ್ಠಾಮಾತ್ರಂ ಉಚ್ಯತೇ, ತದಾ ಬುದ್ಧಿವೃತ್ತಿರೇವ ಪ್ರಮಾಣಮ್ । ಯದಿ ಚ ಬುದ್ಧಿನಿಷ್ಠಾಮಾತ್ರಮುಚ್ಯತೇ, ತದಾ ತೂಕ್ತೇಂದ್ರಿಯ– ಸನ್ನಿಕರ್ಷಾದಿರೇವ ಪ್ರಮಾಣಮ್ । ಪುರುಷಸ್ತು ಪ್ರಮಾ ಸಾಕ್ಷಿರೇವ, ನ ಪ್ರಮಾತೇತಿ । ಯದಿ ಪೌರುಷೇಯ ಬೋಧೋ ಬುದ್ಧಿವೃತ್ತಿಶ್ಚೋಭಯಮಪಿ ಪ್ರಮೋಚ್ಯತೇ, ತದಾತೂಕ್ತಂ ಉಭಯಮೇವ ಪ್ರಮಾಭೇದೇನ ಪ್ರಮಾಣಂ ಭಾಸತೇ । ಚಕ್ಷುರಾದಿಷು ತು ಪ್ರಮಾಣ ವ್ಯವಹಾರ –। ಪರಸ್ಪರಯೈವ ಸರ್ವಥೇತಿ ಭಾವಃ ।*

ಅನುವಾದ: ಹೀಗೆ ಪ್ರಮಾರೂಪವಾದ ಫಲವಾದರೆ ಅದು ಪುರುಷನಿಷ್ಠವಾದದ್ದೆಂದು ಮಾತ್ರವೇ ಆದಲ್ಲಿ ಆಗ ಅದಕ್ಕೆ ಬುದ್ಧಿ ವೃತ್ತಿಯೇ ಪ್ರಮಾಣ. ಆದರೆ ಅದು ಬುದ್ಧಿನಿಷ್ಠವಾದಲ್ಲಿ ಆಗ ಇಂದ್ರಿಯ ಸನ್ನಿಕರ್ಷವೇ ಪ್ರಮಾಣ. ಆಗ ಪುರುಷನು ಕೇವಲ ಸಾಕ್ಷಿಯಾಗಿರುವನು, ಪ್ರಮಾತೃವಲ್ಲ. ಪುರುಷನಿಗೆ ಬೋಧ ಮತ್ತೆ ಬುದ್ಧಿವೃತ್ತಿಯೂ ಎರಡೂ ಪ್ರಮಾ ಆದಲ್ಲಿ ಆಗ ಭಿನ್ನ ಭಿನ್ನ 'ಪ್ರಮಾ'ವಾದ ಕಾರಣ ಎರಡೂ ಪ್ರಮಾಣವೆನಿಸುವುದು. 'ಚಕ್ಷುರಾದಿ ಇಂದ್ರಿಯಗಳಲ್ಲಿ ಪ್ರಮಾಣ ವ್ಯವಹಾರವು ಸರ್ವಥಾ ಪರಂಪರೆಯಿಂದಲೇ ಎಂದು ಅಭಿಪ್ರಾಯ.

ವಿವರಣೆ: ಇಲ್ಲಿ ಪುರುಷಬೋಧ ಮತ್ತು ಬುದ್ಧಿವೃತ್ತಿ ಎಂಬ ಎರಡು ಪದಗಳನ್ನು ಬಳಸಲಾಗಿದೆ. ಬುದ್ಧಿಯನ್ನು ಪ್ರಕೃತಿಯ ಪರಿಣಾಮವೆಂದು ಪರಿಗಣಿಸಿರುವುದರಿಂದ ಬುದ್ಧಿಯ ಪರಿಣಾಮದ ಫಲವಾಗಿ ಪ್ರಮಾ ಉಂಟಾಗುವುದು. ಆದರೆ ಪುರುಷನ ಪಾಲಿಗೆ ಅದು ವೃತ್ತಿಯಲ್ಲ, ಬೋಧ ಎಂದರೆ ಅರಿವು.

ಭಾಷ್ಯ: *ಪಾತಂಜಲಭಾಷ್ಯೇತು ವ್ಯಾಸದೇವೈಃ ಪುರುಷನಿಷ್ಠಬೋಧಃ ಪ್ರಮಾ ಇತ್ಯುಕ್ತಃ । ಪುರುಷಾರ್ಥಮೇವ ಕರಣಾನಾಂ ಪ್ರವೃತ್ತ್ಯಾ ಫಲಸ್ಯ ಪುರುಷನಿಷ್ಠತಾಯಾ ಏವೌಚಿತ್ಯಾತ್ । ಅತಃ ಅತ್ರಾಪಿ ಸ ಏವ ಮುಖ್ಯಃ ಸಿದ್ಧಾಂತಃ ।*

ಅನುವಾದ: ಪಾತಂಜಲ ಭಾಷ್ಯದಲ್ಲಿ ವ್ಯಾಸದೇವನು ಪುರುಷನಿಷ್ಠಬೋಧವೇ ಪ್ರಮಾ ಎಂದಿದ್ದಾನೆ. ಪುರುಷಾರ್ಥವನ್ನು ಕರಣಗಳ ಪ್ರವೃತ್ತಿಯಿಂದ ದೊರೆಯುವ ಫಲ ಪುರುಷನಿಷ್ಠವೆಂದು ಹೇಳುವುದು ಉಚಿತ. ಆದ್ದರಿಂದ ಇಲ್ಲೂ ಸಹ ಅದೇ ಸಿದ್ಧಾಂತ ಮುಖ್ಯವಾದುದು.

ವಿವರಣೆ: ಕರಣಗಳು ಎಂದರೆ ಇಂದ್ರಿಯಗಳು. ಪುರುಷಾರ್ಥ ಎಂದರೆ ಪುರುಷನಿಗಾಗಿ ಎಂದರ್ಥ, ಪುರುಷಾರ್ಥಗಳಲ್ಲ.

ಭಾಷ್ಯ: *ನ ಚ ಪುರುಷಬೋಧರೂಪಸ್ಯ ನಿತ್ಯತಯಾ ಕಥಂ ಫಲತ್ವಂ ಇತಿ ವಾಚ್ಯಮ್ ।*

ಅನುವಾದ: ಪುರುಷಬೋಧವು ನಿತ್ಯವಾದುದರಿಂದ ಫಲವು ದೊರೆಯುವುದೆಂದು ಹೇಳುವುದು ಹೇಗೆ ಸಾಧ್ಯ?

ಭಾಷ್ಯ: *ಕೇವಲಸ್ಯ ನಿತ್ಯತ್ವೇऽಪಿ ಅರ್ಥೋಪರಕ್ತಸ್ಯ ಕಾರ್ಯತ್ವಾತ್ । ಪುರುಷಾರ್ಥೋಪರಾಗಸ್ಯೈವ ವಾ ಫಲತ್ವಾದಿತಿ ।*

ಅನುವಾದ: ಕೇವಲ ಬೋಧವು ನಿತ್ಯವಾದರೂ ಅರ್ಥದೊಡನೆ ಸಂಬಂಧಪಟ್ಟಾಗ ಅದು 'ಕಾರ್ಯ' ರೂಪವನ್ನು ತಳೆಯುತ್ತದೆ ಅಥವಾ ಪುರುಷಾರ್ಥದ ಉಪರಾಗ (ಸಂಬಂಧ)ವನ್ನೇ ಫಲವೆನ್ನಬಹುದು.

ಭಾಷ್ಯ: *ಅತ್ರೇಯಂ ಪ್ರಕ್ರಿಯಾ । ಇಂದ್ರಿಯಪ್ರಣಾಲಿಕಯಾ ಅರ್ಥ–ಸನ್ನಿಕರ್ಷೇಣ ಲಿಂಗಜ್ಞಾನಾದಿನಾ ವಾऽऽದೌ ಬುದ್ಧೇರರ್ಥಾ–ಕಾರಾ ವೃತ್ತಿರ್ಜಾಯತೇ । ತತ್ರ ಚ ಇಂದ್ರಿಯಸನ್ನಿಕರ್ಷಜಾ–ಪ್ರತ್ಯಕ್ಷಾ ವೃತ್ತಿರಿಂದ್ರಿಯವಿಶಿಷ್ಟಬುದ್ಧ್ಯಾಶ್ರಿತಾ ನಯನಾದಿಗತ–ಪಿತ್ತಾದಿದೋಷೈಃ ಪಿತ್ತಾದ್ಯಾಕಾರವೃತ್ತ್ಯಾದಯಾದಿತಿ ವಿಶೇಷಃ । ಸಾ ಚ ವೃತ್ತಿರರ್ಥೋಪರಕ್ತಾ ಪ್ರತಿಬಿಂಬರೂಪೇಣ ಪುರುಷಾ–ರೂಢಾ ಸತೀ ಭಾಸತೇ । ಪುರುಷಸ್ಯಾ ಪರಿಣಾಮಿತಯಾ ಬುದ್ಧಿವತ್ ಸ್ವತೋऽರ್ಥಾಕಾರತ್ವಾಸಂಭವಾತ್, ಅರ್ಥಾಕಾರತಾಯಾ ಏವ ಚಾರ್ಥಗ್ರಹಣತ್ವಾತ್, ಅನ್ಯಸ್ಯ ದುರ್ವಚತ್ವಾತ್ ।*

ಅನುವಾದ: ಅದರ ಪ್ರಕ್ರಿಯೆ ಹೀಗಿದೆ– ಇಂದ್ರಿಯಗಳ ಮೂಲಕ ವಸ್ತುವಿನೊಡನೆ ಸಂಬಂಧ ಏರ್ಪಟ್ಟಾಗ ಅಥವಾ ಆ ಕಾರಣದಿಂದ ಉಂಟಾದ ಜ್ಞಾನಾದಿಗಳಿಂದ ಮೊದಲು ಬುದ್ಧಿಯು ವಸ್ತುವಿನ ಆಕಾರವನ್ನು ತಳೆಯುತ್ತದೆ. ಅಲ್ಲಿ ಇಂದ್ರಿಯ ಸನ್ನಿಕರ್ಷದಿಂದ ಉಂಟಾದ ಪ್ರತ್ಯಕ್ಷರೂಪದ ವೃತ್ತಿಯು ಆಯಾ ಇಂದ್ರಿಯಗಳ ವಿಶೇಷತೆಯಿಂದ ಕೂಡಿದ ಬುದ್ಧಿಯನ್ನು ಆಶ್ರಯಿಸಿ ಕಣ್ಣುಗಳಲ್ಲಿರುವ ಪಿತ್ತಾದಿ ದೋಷಗಳಿಂದ ಪಿತ್ತಾದ್ಯಾಕಾರದ ವೃತ್ತಿಯುಂಟಾಗಿ ಉಳಿಯುವುದು ವಿಶೇಷ. ಆ ವೃತ್ತಿಯು ಪದಾರ್ಥದ ಸಂಬಂಧವನ್ನು ಹೊಂದಿ ಆ ಅರ್ಥೋಪರಕ್ತವಾದ ವೃತ್ತಿಯು ಪ್ರತಿಬಿಂಬರೂಪದಲ್ಲಿ ಪುರುಷನನ್ನು ಏರಿ ಬೆಳಗುವುದು. ಪುರುಷನು ಪರಿಣಾಮಕ್ಕೆ ಒಳಗಾಗದ ಕಾರಣ ಬುದ್ಧಿಯಂತೆ ತಾನೂ ಸಹ ಆಕಾರ ಪಡೆಯಲು ಸಾಧ್ಯವಿಲ್ಲದ ಕಾರಣ ಮತ್ತು ಅರ್ಥಾಕಾರದಿಂದಲೇ ವಸ್ತುವನ್ನು ಗ್ರಹಿಸಲು ಸಾಧ್ಯವಾದುದರಿಂದ ಬುದ್ಧಿಯನ್ನು ಬಿಟ್ಟು ಬೇರೊಂದು ಪದಾರ್ಥವು ಗ್ರಹಿಸಿತೆಂದು ಹೇಳಲಾಗದು.

ಭಾಷ್ಯ: *ತದೇತದ್ ವಕ್ಷ್ಯತಿ 'ಜಪಾಸ್ಫಟಿಕಯೋರಿವ ನೋಪರಾಗಃ ಕಿಂತ್ವಭಿಮಾನಃ' (೬–೨೮) । ಯೋಗ ಸೂತ್ರಂ ಚ 'ವೃತ್ತಿ–ಸಾರೂಪ್ಯಮಿತರತ್ರೇತಿ' (೧–೪)*

ಅನುವಾದ: ಮುಂದೆ ಹೀಗೆ ಹೇಳಲಾಗಿದೆ– 'ದಾಸವಾಳ ಮತ್ತು ಸ್ಫಟಿಕಗಳಂತೆ ಬಣ್ಣದ ವರ್ಗಾವಣೆಯಾಗದು. ಆದರೆ ಹಾಗೆ ತೋರುವುದು' ಎಂದು ಯೋಗಸೂತ್ರವೂ ಸಹ 'ಬೇರೊಂದೆಡೆ ಆಗಿದ್ದನ್ನು ತನ್ನದೆಂದು ಭಾವಿಸುವುದು' ಎಂದು ಹೇಳಿದೆ.

ಭಾಷ್ಯ: *ಸ್ಮೃತಿರಪಿ–*
'ತಸ್ಮಿಂಶ್ಚಿದ್ದರ್ಪಣೇ ಸ್ಫಾರೇ ಸಮಸ್ತಾ ವಸ್ತುದೃಷ್ಟಯಃ ।
ಇಮಾಸ್ತಾಃ ಪ್ರತಿಬಿಂಬಂತಿ ಸರಸೀವ ತಟದ್ರುಮಾಃ
(ಯೋ.ವಾ. ೯೧–೧೧೩) ಇತಿ ।
ಯೋಗಭಾಷ್ಯಂ ಚ 'ಬುದ್ಧೇಃ ಪ್ರತಿ ಸಂವೇದೀ ಪುರುಷಃ' ಇತಿ ।
ಪ್ರತಿಧ್ವನಿವತ್ ಪ್ರತಿಸಂದೇಶಃ ಸಂವೇದನ ಪ್ರತಿಬಿಂಬಃ
ತಸ್ಯಾಶ್ರಯ ಇತ್ಯರ್ಥಃ ।

ಅನುವಾದ: ಸ್ಮೃತಿಯೂ ಸಹ– 'ವಿಶಾಲವಾದ (ಮನಸ್ಸೆಂಬ) ಕನ್ನಡಿಯಲ್ಲಿ ಎಲ್ಲಾ ವಸ್ತುಗಳು ದಡದ ಮೇಲಿನ ಮರಗಳು ಸರೋವರದಲ್ಲಿ ಪ್ರತಿಬಿಂಬದಲ್ಲಿ ಕಾಣುವಂತೆ ತೋರುತ್ತವೆ. ಯೋಗಭಾಷ್ಯವೂ ಹೀಗೆ ಹೇಳುವುದು 'ಬುದ್ಧಿಯ ಅರಿವು ಪುರುಷನಲ್ಲಿ ತೋರುತ್ತದೆ' ತಿಳುವಳಿಕೆಯ ಪ್ರತಿಬಿಂಬವು ಪ್ರತಿಧ್ವನಿಯಂತೆ ಪುರುಷನಲ್ಲಿ ತೋರಿಬರುವುದು'.

ಭಾಷ್ಯ: *ಏತೇನ ಪುರುಷಾಣಾಂ ಕೂಟಸ್ಥವಿಭುಚಿದ್ರೂಪತ್ವೇಽಪಿ*
ನ ಸರ್ವದಾ ಸರ್ವಾಭಾಸನಪ್ರಸಂಗಃ । ಅಸಂಗತಯಾ
ಸ್ವತೋಽರ್ಥಾಕಾರತ್ವಾಭಾವಾತ್ । ಅರ್ಥಾಕಾರತಾಂ ವಿನಾ
ಚ ಸಂಯೋಗಮಾತ್ರೇಣಾರ್ಥಗ್ರಹಣಸ್ಯಾತೀಂದ್ರಿಯಾದಿಸ್ಥಲೇ
ಬುದ್ಧಾವದೃಷ್ಟತ್ವಾದಿತಿ । ಪುರುಷೇ ಚ ಸ್ವ ಸ್ವಬುದ್ಧಿವೃತ್ತೀನಾಂ
ಏವ ಪ್ರತಿಬಿಂಬಾರ್ಪಣಸಾಮರ್ಥ್ಯಮಿತಿ ಫಲಬಲಾತ್ ಕಲ್ಪತೇ ।

ಅನುವಾದ: ಇದರಿಂದ ಪುರುಷನು ಕೂಟಸ್ಥನೂ, ವಿಭುವೂ ಮತ್ತು ಚಿದ್ರೂಪನೂ ಆಗಿದ್ದರೂ ಯಾವಾಗಲೂ ಎಲ್ಲವೂ ತೋರಿಬರುವ ಪ್ರಸಂಗ ಬರದು. ಅವನು ಸಂಗರಹಿತವಾದ್ದರಿಂದ ತಾನಾಗಿಯೇ ಅರ್ಥಾಕಾರವನ್ನು ಪಡೆಯನು. ಅರ್ಥಾಕಾರವಿಲ್ಲದೆ ಕೇವಲ ಸಂಯೋಗದಿಂದಲೇ ವಿಷಯವನ್ನು ಗ್ರಹಿಸುವ ಅತೀಂದ್ರಿಯಾದಿ ಸ್ಥಳದಲ್ಲಿ ಬುದ್ಧಿಯು ಪ್ರವೃತ್ತವಾಗಲಾರದು. ಪುರುಷನಲ್ಲಿಯೂ ತನ್ನ ತನ್ನ ಬುದ್ಧಿವೃತ್ತಿಗಳ ಪ್ರತಿಬಿಂಬದ ಅರ್ಪಣ ಸಾಮರ್ಥ್ಯವು ಫಲದ ಬಲವನ್ನು ಅವಲಂಬಿಸುತ್ತದೆ.

ಭಾಷ್ಯ: *ಯಥಾ ರೂಪವತಾಮೇವ ಜಲಾದಿಷು ಪ್ರತಿಬಿಂಬನ–*
ಸಾಮರ್ಥ್ಯಂ ನೇತರಸ್ಯೇತಿ ।

ಅನುವಾದ: ಹೇಗೆಂದರೆ, ನೀರು ಮುಂತಾದುವುಗಳಲ್ಲಿ ರೂಪವುಳ್ಳ ವಸ್ತುಗಳು ಮಾತ್ರ ಪ್ರತಿಬಿಂಬನ ಸಾಮರ್ಥ್ಯ ಹೊಂದಿರುವುವೇ ಹೊರತು ಇತರ ಪದಾರ್ಥಗಳಲ್ಲ.

ಭಾಷ್ಯ: *ರೂಪವತ್ತ್ವಂ ಚ ನ ಸಾಮಾನ್ಯತಃ ಪ್ರತಿಬಿಂಬ ಪ್ರಯೋಜಕಂ ಶಬ್ದಸ್ಯಾಪಿ ಪ್ರತಿಧ್ವನಿ ರೂಪಪ್ರತಿಬಿಂಬ ದರ್ಶನಾತ್ । ನ ಚ ಶಬ್ದಜನ್ಯಂ ಶಬ್ದಾಂತರಮೇವ ಪ್ರತಿಧ್ವನಿರಿತಿ ವಾಚ್ಯಮ್ ।*

ಅನುವಾದ: ಸಾಮಾನ್ಯವಾಗಿ ರೂಪವತ್ತ್ವ ಪ್ರತಿಬಿಂಬಕ್ಕೆ ಪ್ರಯೋಜಕ ಎನ್ನಲು ಸಾಧ್ಯವಿಲ್ಲ; ಏಕೆಂದರೆ ಶಬ್ದಕ್ಕೂ ಸಹ ಪ್ರತಿಧ್ವನಿರೂಪದ ಪ್ರತಿಬಿಂಬವನ್ನು ನೋಡಿದ್ದೇವೆ. ಶಬ್ದದಿಂದ ಉಂಟಾದ ಬೇರೊಂದು ಶಬ್ದವೂ ಪ್ರತಿಧ್ವನಿ ಎಂದು ಹೇಳಲಾಗದು.

ಭಾಷ್ಯ: *ಸ್ಫಟಿಕತಾಗಹಿತ್ಯಾದೇರಪಿ ಜಪಾಸನ್ನಿಕರ್ಷಜನ್ಯಾಪತ್ತ್ಯಾ ಪ್ರತಿಬಿಂಬಮಿಥ್ಯಾತ್ವಸಿದ್ಧಾಂತಕ್ಷತೇರಿತಿ । ಪ್ರತಿಬಿಂಬಸ್ಯ ಬುದ್ಧೇರೇವ ಪರಿಣಾಮವಿಶೇಷಃ ಬಿಂಬಾಕಾರೋ ಜಲಾದಿಗತ ಇತಿ ಮಂತವ್ಯಮ್ ।*

ಅನುವಾದ: ಹಾಗಿಲ್ಲದಿದ್ದಲ್ಲಿ ಸ್ಫಟಿಕವು ಕೆಂಪುಬಣ್ಣವನ್ನು ಪಡೆಯುವುದೂ ದಾಸವಾಳವು ಸಮೀಪವಿರುವ ಕಾರಣ ಸಾಧ್ಯವು ಎಂದಾಗಿ ಅದರಿಂದ ಪ್ರತಿಬಿಂಬ ಮಿಥ್ಯೆ ಎಂಬ ವಾದವೂ ಕೆಡುವುದು. ಅದರಿಂದ ಪ್ರತಿಬಿಂಬವೂ ಸಹ ಬುದ್ಧಿಯ ಪರಿಣಾಮ ವಿಶೇಷವೇ ಬಿಂಬಾಕಾರವಾಗಿದ್ದು ನೀರಿನಲ್ಲಿ ಗೋಚರವಾಗುವುದು ಎಂದು ತಿಳಿಯಬೇಕು.

ಭಾಷ್ಯ: *ಕೇಚಿತ್ತು ವೃತ್ತೌ ಪ್ರತಿಬಿಂಬಿತಂ ಸದೇವ ಚೈತನ್ಯಂ ವೃತ್ತಿಂ ಪ್ರಕಾಶಯತಿ, ತಥಾ ವೃತ್ತಿಗತಪ್ರತಿಬಿಂಬ ಏವ ವೃತ್ತೌ ಚೈತನ್ಯವಿಷಯತಾ, ನ ತು ಚೈತನ್ಯೇ ವೃತ್ತಿಪ್ರತಿಬಿಂಬೋಽಸ್ತಿ ಇತ್ಯಾಹುಃ ।*

ಅನುವಾದ: ಕೆಲವರು 'ವೃತ್ತಿ'ಯಲ್ಲಿ ಪ್ರತಿಬಿಂಬಿತವಾದ ಚೈತನ್ಯವೇ ವೃತ್ತಿಯನ್ನು ಪ್ರಕಾಶಿಸುತ್ತದೆ ಎನ್ನುತ್ತಾರೆ. ಹೀಗೆ ವೃತ್ತಿಗತ ಪ್ರತಿಬಿಂಬವೇ ವೃತ್ತಿಯಲ್ಲಿ ಚೈತನ್ಯವೇ ವಿಷಯವಾಗಿ ಪರಿಣಮಿಸುವುದು, ಚೈತನ್ಯದಲ್ಲಿ ವೃತ್ತಿಯ ಪ್ರತಿಬಿಂಬವಲ್ಲ ಎಂದು ಅಭಿಪ್ರಾಯಪಡುವರು.

ಭಾಷ್ಯ: *ತದಸತ್ । ಉಪದರ್ಶಿತಶಾಸ್ತ್ರವಿರೋಧೇನ ಕೇವಲ–ತರ್ಕಸ್ಯಾಪ್ರಯೋಜಕತ್ವಾತ್ ವಿನಿಗಮನಾವಿರಹೇಣ ವೃತ್ತಿ–ಚೈತನ್ಯಯೋಃ ಅನ್ಯೋನ್ಯವಿಷಯತಾಖ್ಯ ಸಂಬಂಧರೂಪತಯಾ ಅನ್ಯೋನ್ಯ ಪ್ರತಿಬಿಂಬಸಿದ್ಧೇಶ್ಚ ।*

ಅನುವಾದ: ಅದು ಸರಿಯಲ್ಲ. ಅದು ಮೇಲೆ ತಿಳಿಯಪಡಿಸಿದ ಶಾಸ್ತ್ರದ ಉಕ್ತಿಗಳಿಗೆ ವಿರುದ್ಧವಾದುದು. ಏಕೆಂದರೆ ಕೇವಲ ತರ್ಕವು ಪ್ರಯೋಜಕವಲ್ಲ. ವಿನಿಗಮನವಿಲ್ಲದೆ ವೃತ್ತಿ ಮತ್ತು ಚೈತನ್ಯಗಳಲ್ಲಿ ವೃತ್ತಿ ಚೈತನ್ಯಗಳ ಪರಸ್ಪರ ವಿಷಯಗಳೆಂಬ ಸಂಬಂಧ ರೂಪದಿಂದ ಪರಸ್ಪರ ಪ್ರತಿಬಿಂಬಗಳು ಬೀಳುತ್ತವೆ.

ವಿವರಣೆ: 'ವಿನಿಗಮನಾ' ಎಂದರೆ ಬೇರೊಂದು ಪಕ್ಷವನ್ನು ಒಪ್ಪಲು ಹೂಡುವ ಯುಕ್ತಿ (ಅನ್ಯತರ ಪಕ್ಷಪಾತಿನೀ ಯುಕ್ತಿಃ)

ಭಾಷ್ಯ: *ಬಾಹ್ಯಸ್ಥಲೇಽರ್ಥಾಕಾರತಾಯಾ ಏವ ವಿಷಯತಾರೂಪತ್ವ–ಸಿದ್ಧ್ಯಾ ಅಂತರೇಽಪಿ ತತ್ತದರ್ಥಾಕಾರತಾಯಾಃ ಏವ ವಿಷಯತಾತ್ವೌಚಿತ್ಯಾಚ್ಚ ಇತಿ ।*

ಅನುವಾದ: ಹೊರಗೆ ಅರ್ಥಾಕಾರವನ್ನು ವಿಷಯದ ಸ್ವರೂಪವೆಂದು ಸಿದ್ಧ ಮಾಡಿದ ಮೇಲೆ ಒಳಗೂ ಸಹ ಆಯಾ ಅರ್ಥಾಕಾರವನ್ನು ವಿಷಯವೆಂದೇ ತಿಳಿಯುವುದು ಸರಿ.

ಭಾಷ್ಯ: *ಯೇ ತು ತಾರ್ಕಿಕಾ ಜ್ಞಾನಸ್ಯ ವಿಷಯಂ ತಾಂ ನೇಚ್ಛಂತಿ ತನ್ಮತೇ ಜ್ಞಾನವ್ಯಕ್ತೀನಾಂ ಅನುಗಮಕಧರ್ಮಾಭಾವೇನ ಘಟವಿಷಯಕಂ ಪಟವಿಷಯಕಂ ಜ್ಞಾನಮಿತ್ಯಾದ್ಯನುಗತ–ವ್ಯವಹಾರಾನುಪಪತ್ತಿಃ ।*

ಅನುವಾದ: ಆದರೆ ಯಾವ ತಾರ್ಕಿಕರು ಜ್ಞಾನವು ವಿಷಯವೆಂಬುದನ್ನು ಸ್ವೀಕರಿಸದೇ ಇರುವವರೋ ಅವರ ಅಭಿಪ್ರಾಯದಂತೆ ಆಯಾ ಜ್ಞಾನಗಳ ಅನುಗಮಕ ಧರ್ಮವಿಲ್ಲದ ಕಾರಣ 'ಪಟವಿಷಯದ್ದು' ಇತ್ಯಾದಿ ಜ್ಞಾನವುಂಟಾಗಿ ಅನುಗತ ವ್ಯವಹಾರ ಸಾಧ್ಯವಾಗದು ಎಂದೂ,

ವಿವರಣೆ: 'ಗಡಿಗೆ ವಿಷಯದ ಜ್ಞಾನ', 'ವಸ್ತ್ರವಿಷಯದ ಜ್ಞಾನ' ಹೀಗೆ ಹೇಳುವುದು ಹೊಂದದ ವ್ಯವಹಾರ ಅನುಗಮಕ ಧರ್ಮ ಎಂದರೆ ಒಪ್ಪಬಹುದಾದ ಗುಣ.

ಭಾಷ್ಯ: *ಕೇಚಿತ್ ತು ತಾರ್ಕಿಕಾ ಅನಯೈವಾನುಪಪತ್ತ್ಯಾ ವಿಷಯತಾಂ ಅತಿರಿಕ್ತಪದಾರ್ಥಮಾಹುಃ ।*

ಅನುವಾದ: ಇನ್ನು ಕೆಲವು ತಾರ್ಕಿಕರು ಮೇಲಿನ ವಿಷಯ ಸಾಧ್ಯವಾಗದ ಕಾರಣ ವಿಷಯತೆಯನ್ನು ಅತಿರಿಕ್ತ ಪದಾರ್ಥವೆಂದೂ ಹೇಳುವರು.

ಭಾಷ್ಯ: *ತದಪ್ಯಸತ್ । ಅನುಭೂಯಮಾನಾರ್ಥಕಾರತಾಂ ವಿಹಾಯ ವಿಷಯಾಂತರಕಲ್ಪನೇ ಗೌರವಾದಿತಿ ।*

ಅನುವಾದ: 'ವಿಷಯತೆ'ಯನ್ನು ಅತಿರಿಕ್ತ ಪದಾರ್ಥವೆನ್ನಲಾಗದು. ಏಕೆಂದರೆ ಅನುಭವಕ್ಕೆ ಬರುವ ಅರ್ಥಾಕಾರವನ್ನು ಬಿಟ್ಟು ಬೇರೊಂದು ಅರ್ಥ(ವಿಷಯ)ವನ್ನು ಕಲ್ಪಿಸುವುದು (ಹೆಚ್ಚಾಗುವುದು) ಸರಿಯಲ್ಲ.

ಭಾಷ್ಯ: *ನನು ತಥಾಪಿ ಸ್ವಸ್ವೋಪಾಧಿವೃತ್ತಿರೂಪೈವ ವೃತ್ತಿ ಚೈತನ್ಯಯೋಃ ಅನ್ಯೋನ್ಯವಿಷಯತಾಸ್ತು, ಸ್ವೋಪಾಧಿವೃತ್ತಿತ್ವೇನ ಏವ ಅನುಗಮಾತ್ ಅಲಮಾಕಾರಾಖ್ಯಪ್ರತಿಬಿಂಬದ್ವಯೇನ ಇತಿ ।*

ಅನುವಾದ: ಹಾಗಿದ್ದರೂ ವೃತ್ತಿ–ಚೈತನ್ಯಗಳಲ್ಲಿ ಅನ್ಯೋನ್ಯ ವಿಷಯತೆಯೇ ತಮ್ಮ ತಮ್ಮ ಉಪಾಧಿವೃತ್ತಿಯಿಂದಲೇ ಎಂದು ಭಾವಿಸೋಣ. ತಮ್ಮ ಉಪಾಧಿವೃತ್ತಿಯು ಒಪ್ಪಬಹುದಾದ ಗುಣವಾದರೂ ಆಕಾರವೆಂಬ ಎರಡು ಪ್ರತಿಬಿಂಬಗಳ ಕಲ್ಪನೆ ಮೂಡುವ ಅಗತ್ಯವಿಲ್ಲ.

ಭಾಷ್ಯ: *ಇತಿ ಚೇನ್ನ । ಪ್ರತಿಬಿಂಬಂ ವಿನಾ ಸ್ವತ್ವಸ್ಯಾಪಿ ದುರ್ವಚತ್ವಾತ್ ।*

ಅನುವಾದ: ಅದು ಹಾಗಲ್ಲ. ಪ್ರತಿಬಿಂಬವಿಲ್ಲದೆ ತನ್ನದೆಂಬುದೂ ಸಹ ತಿಳಿಸಲಾಗದು.

ಭಾಷ್ಯ: *ಸ್ವತ್ವಂ ಹಿ ಸ್ವಭುಕ್ತವೃತ್ತಿವಾಸನಾತ್ತ್ವಮ್ । ಭೋಗಶ್ಚ ಜ್ಞಾನಮ್ ।*

ಅನುವಾದ: 'ಸ್ವತ್ವ' (Subjectivity) ತಾನು ಅನುಭವಿಸಿದ ವೃತ್ತಿಯ ವಾಸನಾ ರೂಪವಾದುದು. ಭೋಗ ಜ್ಞಾನರೂಪವಾದುದು.

ಭಾಷ್ಯ: *ತಥಾ ಚ ವಿಷಯತಾಲಕ್ಷಣಸ್ಯ ವಿಷಯಸಾಮಗ್ರೀ ಘಟಿತತ್ವೇನ ಆತ್ಮಾಶ್ರಯಃ । ತಸ್ಮಾತ್ ಅಚೈತನ್ಯ-ಚೈತನ್ಯಯೋಃ ಅನ್ಯೋನ್ಯ-ವಿಷಯತಾರೂಪಃ ಅನ್ಯೋನ್ಯಸ್ಮಿನ್ ಅನ್ಯೋನ್ಯಪ್ರತಿಬಿಂಬಃ ಸಿದ್ಧಃ । ಅಧಿಕಂ ತು ಯೋಗವಾರ್ತಿಕೇ (೨-೨೦) ದ್ರಷ್ಟವ್ಯಮ್ ಇತಿ ದಿಕ್ ।*

ಅನುವಾದ: ಹಾಗೆಯೇ ವಿಷಯತಾ ಲಕ್ಷಣವು ವಿಷಯದ ಸಾಮಗ್ರಿಯನ್ನು ಹೊಂದಿರುವುದರಿಂದ ಆತ್ಮಾಶ್ರಯ ದೋಷವು ಬರುತ್ತದೆ. ಆದ್ದರಿಂದ ಚೈತನ್ಯ ಮತ್ತು ಅಚೈತನ್ಯಗಳು ಪರಸ್ಪರ ವಿಷಯತಾ ರೂಪವನ್ನು ಹೊಂದಿ ಪರಸ್ಪರ ಅವುಗಳಲ್ಲಿ ಅನ್ಯೋನ್ಯ ಪ್ರತಿಬಿಂಬ ಉಂಟಾಗುವುದು. ಹೆಚ್ಚು ವಿಷಯ ಚರ್ಚೆಯನ್ನು ಯೋಗವಾರ್ತಿಕದಲ್ಲಿ ನೋಡಬಹುದು.

ವಿವರಣೆ: ಆತ್ಮಾಶ್ರಯ ದೋಷವೆಂದರೆ ತನ್ನ ನಿಲುವನ್ನು ನಿರೂಪಿಸಲು ತನ್ನನ್ನೇ ಆಶ್ರಯಿಸುವುದು.

ಭಾಷ್ಯ: *ಅತ್ರಾಯಂ ಪ್ರಮಾತ್ರಾದಿ ವಿಭಾಗಃ ।*
ಪ್ರಮಾತಾ ಚೇತನಃ ಶುದ್ಧಃ ಪ್ರಮಾಣಂ ವೃತ್ತಿರೇವ ನಃ ।
ಪ್ರಮಾರ್ಥಾಕಾರವೃತ್ತೀನಾಂ ಚೇತನೇ ಪ್ರತಿಬಿಂಬನಮ್ ।
ಪ್ರತಿಬಿಂಬಿತವೃತ್ತೀನಾಂ ವಿಷಯೋ ಮೇಯ ಉಚ್ಯತೇ ।
ಸಾಕ್ಷಾದ್ದರ್ಶನರೂಪಂ ಚ ಸಾಕ್ಷಿತ್ವಂ ವಕ್ಷ್ಯತಿ ಸ್ವಯಮ್ ॥
ಅತಃ ಸ್ಯಾತ್ ಕಾರಣಾಭಾವಾತ್ ವೃತ್ತೇಃ ಸಾಕ್ಷ್ಯೇವ ಚೇತನಃ ।
ವಿಷ್ಣ್ವಾದೇಃ ಸರ್ವಸಾಕ್ಷಿತ್ವಂ ಗೌಣಂ ಲಿಂಗಾದ್ಯಭಾವತಃ ॥

ಅನುವಾದ: (ಭಾಷ್ಯದಲ್ಲಿ ಉಕ್ತವಾದ ಶ್ಲೋಕಗಳು ವಿಜ್ಞಾನ ಭಿಕ್ಷುವಿನ ರಚನೆಗಳು) ಇನ್ನು ಪ್ರಮಾತ್ರಾದಿ ವಿಭಾಗವು ಶುದ್ಧ ಚೇತನವೇ ಪ್ರಮಾತೃ. ವೃತ್ತಿಯೇ ಪ್ರಮಾಣ ಅರ್ಥಾಕಾರದ ವೃತ್ತಿಯು ಚೇತನದಲ್ಲಿ ಪ್ರತಿಬಿಂಬವಾದಾಗ ಅದು ಪ್ರಮಾ. ಪ್ರತಿಬಿಂಬಿತವಾದ ವೃತ್ತಿಗಳ ವಿಷಯವು ಮೇಯ (ಪ್ರಮೇಯ). ಸಾಕ್ಷಾತ್ ದರ್ಶನದ ರೂಪವು ಸಾಕ್ಷಿತ್ವ. ಆದ್ದರಿಂದ ಕಾರಣವೇ ಇಲ್ಲದೆ ವೃತ್ತಿಗೆ ಸಾಕ್ಷಿಯೇ ಚೇತನ. ವಿಷ್ಣುವು ಸರ್ವಸಾಕ್ಷಿ ಎನ್ನಲಾಗುತ್ತದೆ. ಆದರೆ ಕಾರಣದ ಅಭಾವದಿಂದ ಇದು ಗೌಣವಾದುದು.

ಭಾಷ್ಯ: *ನನು 'ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।*
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥
(ಭ.ಗೀ. ೧೩-೩೩)
ಇತ್ಯಾದಿ ವಾಕ್ಯೇಷೂಪಮಾನಾದಿ ಪ್ರಕೃತಿಪುರುಷವಿವೇಕೇ ಪ್ರಮಾಣಂ ಉಪನ್ಯಸ್ತಮ್, ತತ್ ಕಥಮುಚ್ಯತೇ ತ್ರಿವಿಧಮಿತಿ ।

ಅನುವಾದ: ಹೇಗೆ ಒಬ್ಬನೇ ಸೂರ್ಯನು ಇಡಿಯ ಜಗತ್ತೆಲ್ಲವನ್ನೂ ಬೆಳಗುವನೋ ಹಾಗೆ ಕ್ಷೇತ್ರಿಯು ಕ್ಷೇತ್ರವನ್ನೆಲ್ಲ ಬೆಳಗುವನು.

ವಿವರಣೆ: ಕ್ಷೇತ್ರಿ ಎಂದರೆ ಪರಮಾತ್ಮ. ಕ್ಷೇತ್ರಂ ಎಂದರೆ ದೇಹಗಳನ್ನು ಎಂದು ಅರ್ಥ ಮಾಡಬೇಕು. ಈ ಮುಂತಾದ ವಾಕ್ಯಗಳಿಂದ ಪ್ರಕೃತಿ-ಪುರುಷ ವಿವೇಕ ಮಾಡುವಾಗ ಪ್ರಮಾಣಗಳನ್ನು ಹೇಳಲಾಗಿದೆ; ಹೀಗಿರುವಾಗ ಮೂರು ಬಗೆಯ ಪ್ರಮಾಣಗಳೆಂದು ಹೇಗೆ ಹೇಳುವಿರಿ?

ಭಾಷ್ಯ: *ತತ್ರಾಹ-*

ಈ ವಿಷಯದಲ್ಲಿ ಹೀಗೆ ಹೇಳಿದೆ-

ಸೂತ್ರ: ತತ್ಸಿದ್ಧೌ ಸರ್ವಸಿದ್ಧೇರ್ನಾಧಿಕ್ಯಸಿದ್ಧಿಃ ॥ ೮೮ ॥

ಅನುವಾದ: ಹೆಚ್ಚು ಪ್ರಮಾಣಗಳ ಅವಶ್ಯಕತೆಯಿಲ್ಲ; ಏಕೆಂದರೆ ಅವು ಸಿದ್ಧವಾದಾಗ ಎಲ್ಲವೂ ಸಿದ್ಧವಾದಂತೆಯೇ.

ಭಾಷ್ಯ: *ತ್ರಿವಿಧಪ್ರಮಾಣಸಿದ್ಧೌ ಚ ಸರ್ವಸ್ಯಾರ್ಥಸ್ಯ ಸಿದ್ಧೇರ್ನ ಪ್ರಮಾಣಾಧಿಕ್ಯಂ ಸಿದ್ಧ್ಯತಿ, ಗೌರವಾದಿತ್ಯರ್ಥಃ ।*

ಅನುವಾದ: ಮೂರು ಪ್ರಮಾಣಗಳ ಸಿದ್ಧಿಯಿಂದ ಎಲ್ಲ ಅರ್ಥಗಳ ಸಿದ್ಧಿಯ ಕಾರಣ ಈ ಪ್ರಮಾಣಗಳಿಗಿಂತ ಹೆಚ್ಚು ಬೇಕಾಗಿಲ್ಲ. (ಸಿದ್ಧಿಯನ್ನು ಒಪ್ಪಿರುವುದರಿಂದ) ಮಾನ್ಯತೆ ನೀಡಲು.

ವಿವರಣೆ: 'ಅರ್ಥಗಳ' ಎಂದರೆ 'ಪ್ರಮೇಯಗಳ' ಎಂದರ್ಥ.

ಭಾಷ್ಯ: *ಅತ ಏವ ಮನುನಾಪಿ ಪ್ರಮಾಣತ್ರಯಮೇವ ಉಪನ್ಯಸ್ತಮ್ ।*
ಪ್ರತ್ಯಕ್ಷಮನುಮಾನಂ ಚ ಶಾಸ್ತ್ರಂ ಚ ವಿವಿಧಾಗಮಮ್ ।
ತ್ರಯಂ ಸುವಿದಿತಂ ಕಾರ್ಯಂ ಧರ್ಮಶುದ್ಧಿಮಭೀಪ್ಸತಾ ॥
(ಮನು ೧೨-೧೦೫) ಇತಿ ।

ಅನುವಾದ: ಆದ್ದರಿಂದ ಮನುವೂ ಸಹ ಮೂರು ಪ್ರಮಾಣಗಳನ್ನೇ ಹೇಳಿದ್ದಾನೆ-

'ಪ್ರತ್ಯಕ್ಷ, ಅನುಮಾನ, ವಿವಿಧಾಗಮರೂಪ ಶಾಸ್ತ್ರ (ಶಬ್ದ) ಈ ಮೂರು ಪ್ರಮಾಣಗಳನ್ನು ಧರ್ಮಶುದ್ಧಿಯನ್ನು ಬಯಸುವವನು ಸರಿಯಾಗಿ ತಿಳಿಯಬೇಕು' ಎಂದು.

ಭಾಷ್ಯ: *ಉಪಮಾನೈತಿಹ್ಯಾದೀನಾಂ ಚಾನುಮಾನಶಬ್ದಯೋಃ ಪ್ರವೇಶಃ । ಅನುಪಲಬ್ಧೀನಾಂ ಚ ಪ್ರತ್ಯಕ್ಷೇ ಪ್ರವೇಶ ಇತಿ ।*

ಅನುವಾದ: ಉಪಮಾನ, ಐತಿಹ್ಯ ಮುಂತಾದುವು ಅನುಮಾನ ಶಬ್ದಗಳಲ್ಲಿ ಸೇರಿಹೋಗುತ್ತವೆ. ಅನುಪಲಬ್ಧಿ ಆದಿಗಳು ಪ್ರತ್ಯಕ್ಷ ಪ್ರಮಾಣದಲ್ಲಿ ಸೇರುತ್ತವೆ.

ಭಾಷ್ಯ: *ಉಕ್ತವಾಕ್ಯೇತು ಇದಮನುಮಾನಮಭಿಪ್ರೇತಮ್ । ಆಪಾದ– ತಲಮಸ್ತಕಂ ಕೃತ್ಸ್ನಂ ಸ್ವವ್ಯತಿರಿಕ್ತೇನೈಕೇನ ಪ್ರಕಾಶ್ಯಂ ಸ್ವಯಂ ಅಪ್ರಕಾಶತ್ವಾತ್ ತ್ರೈಲೋಕ್ಯವದಿತಿ । ತೇಜಶ್ಚೈತನ್ಯಸಾಧಾರಣಂ ಚ ಪ್ರಕಾಶತ್ವಮಖಂಡೋಪಾಧಿಃ ಪ್ರಕಾಶವ್ಯವಹಾರ ನಿಯಾಮಕತಯಾ ಸಿದ್ಧ ಇತಿ ।*

ಅನುವಾದ: ಮೇಲೆ ಹೇಳಿದ ವಾಕ್ಯದಲ್ಲಿ ಅನುಮಾನ ಸೂಚಿತವಾಗಿದೆ. ಪಾದತಲದಿಂದ ತಲೆಯವರೆಗೂ ಸಮಸ್ತವೂ ತನಗಿಂತ ಭಿನ್ನವಾದ ಒಂದರಿಂದ ಪ್ರಕಾಶಿಸಲ್ಪಡುತ್ತದೆ. ತಾನೇ ಅಪ್ರಕಾಶರೂಪವಾದ್ದರಿಂದ, ಮೂರೂ ಲೋಕಗಳಂತೆ ತೇಜಸ್ಸು ಚೈತನ್ಯ ಸಾಧಾರಣವಾದುದು, ಅಖಂಡೋಪಾಧಿ ಧರ್ಮವುಳ್ಳದ್ದು ಪ್ರಕಾಶ, ಪ್ರಕಾಶ ವ್ಯವಹಾರದ ನಿಯಾಮಕವು.

ವಿವರಣೆ: ಮೇಲಿನ ವಾಕ್ಯಗಳಲ್ಲಿ ಪಕ್ಷ, ಸಾಧ್ಯ. ಹೇತು ಮತ್ತು ಉದಾಹರಣೆಗಳನ್ನು ಗುರುತಿಸಬಹುದು, ಇವುಗಳಲ್ಲಿ 'ಏಕೇನ ಪ್ರಕಾಶ್ಯಂ' ಎಂಬುದು ಸಾಧಿಸಬೇಕಾದ ಅಂಶ. 'ಅಖಂಡೋಪಾಧಿ' ಎಂದರೆ (ಅನಿರ್ವಚನೀಯಃ ಧರ್ಮಃ) ವರ್ಣಿಸಲಾಗದ ಧರ್ಮ ಅಥವಾ ಉಪಾಧಿ.

ಭಾಷ್ಯ: *ಪುರುಷನಿಷ್ಠಾ ಪ್ರಮಾ ಇತಿ ಮುಖ್ಯಸಿದ್ಧಾಂತಮಾಶ್ರಿತ್ಯ ಪ್ರಮಾಣಾ –। ನಾಂ ವಿಶೇಷಲಕ್ಷಣಾನಿ ವಕ್ತುಂ ಉಪಕ್ರಮತೇ ।*

ಸೂತ್ರ: **ಯತ್ಸಂಬದ್ಧಂ ಸತ್ ತದಾಕಾರೋಲ್ಲೇಖಿ ವಿಜ್ಞಾನಂ ತತ್ ಪ್ರತ್ಯಕ್ಷಮ್ ॥ ೮೯ ॥**

ಅನುವಾದ: (ಅನಿರುದ್ಧನು 'ಸಂಬಂಧಂ ಸತ್' ಎಂಬುದಕ್ಕೆ ಬದಲಾಗಿ 'ಸಂಬಂಧಸಿದ್ದಮ್' ಎಂದು ಬರೆದಿದ್ದಾನೆ.) ಪುರುಷನಿಷ್ಠವಾದುದು ಪ್ರಮಾ ಎಂಬ ಮುಖ್ಯ ಸಿದ್ಧಾಂತವನ್ನು ಆಶ್ರಯಿಸಿ ಪ್ರಮಾಣಗಳ ವಿಶೇಷ ಲಕ್ಷಣಗಳನ್ನು ಹೇಳಲು ಪ್ರಾರಂಭಿಸಿದೆ.

(ಸೂತ್ರ) ಯಾವ ವಸ್ತುವಿನೊಡನೆ ಸಂಬಂಧ ಉಂಟಾಗುವುದೋ ಅದೇ ಆಕಾರವನ್ನು ಗ್ರಹಿಸುವ ವಿಜ್ಞಾನವನ್ನು ಪ್ರತ್ಯಕ್ಷವೆನ್ನುವರು.

ಭಾಷ್ಯ: *ಸಂಬರಾದ್ಧಂ ಭವತ್ ಸಂಬದ್ಧವಸ್ತ್ವಾಕಾರಧಾರಿ ಭವತಿ ಯದ್ ವಿಜ್ಞಾನಂ ಬುದ್ಧಿವೃತ್ತಿಃ ತತ್ ಪ್ರತ್ಯಕ್ಷಂ ಪ್ರಮಾಣಮಿತ್ಯರ್ಥಃ । ಅತ್ರ ಸತ್ ಇತ್ಯಂತಂ ಹೇತುಗರ್ಭವಿಶೇಷಣಮ್ । ತಥಾ ಚ*

ಸ್ವಾರ್ಥಸನ್ನಿಕರ್ಷಜನ್ಯಾಕಾರಸ್ಯಾಶ್ರಯಃ ವೃತ್ತಿಃ ಪ್ರತ್ಯಕ್ಷಂ ಪ್ರಮಾಣಮಿತಿ ನಿಷ್ಕರ್ಷಃ ।

ಅನುವಾದ: ಸಂಬಂಧವನ್ನು ಹೊಂದಿರುವಾಗ ಸಂಬದ್ಧ ವಸ್ತುವಿನ ಆಕಾರವನ್ನು ಧರಿಸುವ ವಿಜ್ಞಾನವನ್ನು 'ಬುದ್ಧಿವೃತ್ತಿ' ಎನ್ನುವರು. ಅದೇ ಪ್ರತ್ಯಕ್ಷ ಪ್ರಮಾಣ ಎಂದರ್ಥ. ಅಲ್ಲಿ 'ಸತ್' ಎಂಬುದರವರೆಗೆ 'ಹೇತುಗರ್ಭವಿಶೇಷಣ'ವಿರುತ್ತದೆ. ಹಾಗೆಯೇ ತನ್ನ ವಸ್ತುವಿನ ಸನ್ನಿಕರ್ಷದಿಂದ ಉಂಟಾದ ಆಕಾರದ ಆಶ್ರಯವಾದ ವೃತ್ತಿಯನ್ನು ಪ್ರತ್ಯಕ್ಷ ಪ್ರಮಾಣವೆಂದು ನಿಷ್ಕರ್ಷವಾದುದು.

ವಿವರಣೆ: 'ಹೇತುಗರ್ಭವಿಶೇಷಣ' ಎಂದರೆ 'ಹೇತುವನ್ನೊಳಗೊಂಡ ವಿಶೇಷಣ', 'ಸ್ವಾರ್ಥ' ಎಂದರೆ 'ಇಂದ್ರಿಯಕ್ಕೆ ಸಂಬಂಧಪಟ್ಟ ಪದಾರ್ಥ'.

ಭಾಷ್ಯ: *'ವೃತ್ತಿಃ ಸಂಬಂಧಾರ್ಥಂ ಸರ್ಪತಿ' ಇತ್ಯಾಗಾಮಿಸೂತ್ರಾತ್ (ಅ. ೫–೧೦೭) ನ ವೃತ್ತೇಃ ಸನ್ನಿಕರ್ಷಜನ್ಯತ್ವಮಿತಿ ಆಕಾರಾಶ್ರಯ ಗ್ರಹಣಮ್ । ಚಕ್ಷುರಾದಿದ್ವಾರಕಬುದ್ಧಿವೃತ್ತಿಶ್ಚ ಪ್ರದೀಪಸ್ಯ ಶಿಖಾತುಲ್ಯಾ ಬಾಹ್ಯಾರ್ಥ ಸನ್ನಿಕರ್ಷಾನಂತರಮೇವ ತದಾಕಾರೋಲ್ಲೇಖಿನೀ ಭವತೀತಿ ನಾಸಂಭವಃ ।*

ಅನುವಾದ: ವೃತ್ತಿಯು ಅರ್ಥದೊಡನೆ ಇಂದ್ರಿಯವು ಸಂಬಂಧ ಪಡೆಯಲು ವಿಷಯದತ್ತ ಸಾಗುತ್ತದೆ; ವೃತ್ತಿಯು (ಇಂದ್ರಿಯಾರ್ಥ) ಸನ್ನಿಕರ್ಷದಿಂದ ಉಂಟಾಗುವುದಿಲ್ಲ. ಏಕೆಂದರೆ ಅದು ಆಕಾರವನ್ನು ಆಶ್ರಯಿಸುತ್ತದೆ. ಕಣ್ಣೇ ಮೊದಲಾದ ಇಂದ್ರಿಯದ ಮೂಲಕ ದೀಪದ ಜ್ವಾಲೆಯಂತೆ ಬಾಹ್ಯಾರ್ಥ ಸನ್ನಿಕರ್ಷದ ನಂತರವೇ ಅರ್ಥದ ಆಕಾರವನ್ನು ತಳೆಯುತ್ತದೆ ಎಂಬುದು 'ಅಸಂಭವ'ವಲ್ಲ.

ವಿವರಣೆ: 'ಅಸಂಭವ' ಎಂಬುದು ಒಂದು ದೋಷ. 'ಹಸುವಿಗೆ ಒಂದೇ ಗೊರಸಿನ ಲಕ್ಷಣವಿದೆ' ಎಂಬಂತೆ.

ಭಾಷ್ಯ: *ನನು ಯೋಗಿನಾಮತೀತಾನಗತವ್ಯವಹಿತವಸ್ತುಪ್ರತ್ಯಕ್ಷೇ ಅವ್ಯಾಪ್ತಿಃ; ಸಂಬದ್ಧವಸ್ತ್ವಾಕಾರಾಭಾವಾತ್ । ಇತ್ಯಾಶಂಕ್ಯ ತಸ್ಯಾಲಕ್ಷ್ಯತ್ವೇನ ಸಮಾಧತ್ತೇ ।*

ಸೂತ್ರ: **ಯೋಗಿನಾಮಬಾಹ್ಯಪ್ರತ್ಯಕ್ಷತ್ವಾನ್ನ ದೋಷಃ ॥ ೯೦ ॥**

ಅನುವಾದ: ಯೋಗಿಗಳಿಗೆ ಹಿಂದೆ ನಡೆದ, ಮುಂದೆ ನಡೆಯುವ ಮತ್ತು ಮರೆಯಾಗಿರುವ ವಸ್ತುಗಳನ್ನು ಪ್ರತ್ಯಕ್ಷ ಮಾಡಿಕೊಳ್ಳುವ ಶಕ್ತಿಯಿಂದ ಅವ್ಯಾಪ್ತಿಯಾಗದೆ? ಹೀಗೆಂದು ಸಂದೇಹಪಟ್ಟು ಅದು ಪ್ರತ್ಯಕ್ಷ ಪ್ರಮಾಣಕ್ಕೆ ಅಲಕ್ಷ್ಯವೆಂದು ಸಮಾಧಾನ ಹೇಳುವರು.

ವಿವರಣೆ: ಅಲಕ್ಷ್ಯವೆಂದರೆ (ಪ್ರತ್ಯಕ್ಷ ಪ್ರಮಾಣದ) ಲಕ್ಷಣ ಸಮನ್ವಯವಾಗದಿರುವುದು.

ಸೂತ್ರಾನುವಾದ: ಯೋಗಿಗಳಿಗೆ ಬಾಹ್ಯ ಪ್ರತ್ಯಕ್ಷವಿಲ್ಲದ ಕಾರಣ ತಪ್ಪೇನೂ ಇಲ್ಲ.

ಭಾಷ್ಯ: *ಐಂದ್ರಿಯಕ ಪ್ರತ್ಯಕ್ಷಮೇವಾತ್ರ ಲಕ್ಷ್ಯಮ್ । ಯೋಗಿನಶ್ಚ ಅಬಾಹ್ಯ ಪ್ರತ್ಯಕ್ಷಕಾಃ । ಅತೋ ನ ದೋಷಃ, ನ ತತ್ಪ್ರತ್ಯಕ್ಷೇ ಅವ್ಯಾಪ್ತಿರಿತ್ಯರ್ಥಃ ।*

ಅನುವಾದ: ಇಲ್ಲಿ ಇಂದ್ರಿಯಕ್ಕೆ ಪ್ರತ್ಯಕ್ಷವಾಗುವುದನ್ನು ಮಾತ್ರ ಲಕ್ಷ್ಯವಾಗಿಟ್ಟುಕೊಂಡಿದೆ. ಯೋಗಿಗಳು ಅಬಾಹ್ಯ ಪ್ರತ್ಯಕ್ಷವನ್ನು ಮಾಡುವವರು. ಆದ್ದರಿಂದ ಇಲ್ಲಿ ದೋಷವೇನೂ ಇಲ್ಲ. ಯೋಗಿಗಳ ಪ್ರತ್ಯಕ್ಷಕ್ಕೆ ಅವ್ಯಾಪ್ತಿಯೂ ಇರದು.

ಭಾಷ್ಯ: *ವಾಸ್ತವಂ ಸಮಾಧಾನಮಾಹ–*

ಅನುವಾದ: ಸೂತ್ರಕಾರನು ವಾಸ್ತವಿಕ ಸಮಾಧಾನ ನೀಡುವನು.

ಸೂತ್ರ: ಲೀನವಸ್ತುಲಬ್ಧಾತಿಶಯ ಸಂಬಂಧಾದ್ವಾಽದೋಷಃ ॥ ೯೧ ॥

ಅನುವಾದ: ಅಥವಾ ಲೀನವಾದ ವಸ್ತುಗಳಲ್ಲಿ ಯೋಗಶಕ್ತಿಯಿಂದ ಪಡೆದ ಅತಿಶಯವಾದ ಸಂಬಂಧದಿಂದ ದೋಷವೇನೂ ಇಲ್ಲ.

ವಿವರಣೆ: ಆದ್ದರಿಂದ ಪ್ರತ್ಯಕ್ಷ ಲಕ್ಷಣಕ್ಕೆ ಅವ್ಯಾಪ್ತಿಯಿಲ್ಲ.

ಭಾಷ್ಯ: *ಅಥವಾ ತದಪಿ ಲಕ್ಷ್ಯಮೇವ, ತಥಾಪಿ ನ ದೋಷಃ ನ ಅವ್ಯಾಪ್ತಿಃ । ಯತೋ ಲೀನವಸ್ತುಷು ಲಬ್ಧಯೋಗಜ ಧರ್ಮ–। ಜನ್ಯಾತಿಶಯಸ್ಯ ಯೋಗಿಚಿತ್ತಸ್ಯ ಸಂಬಂಧೋ ಘಟತೇ ಇತ್ಯರ್ಥಃ । ಅತ್ರ ಲೀನಶಬ್ದಃ ಪರಾಭಿಪ್ರೇತಾಸನ್ನಿಕೃಷ್ಟವಾಚೀ । ಸತ್ಕಾರ್ಯವಾದಿನಾಂ ಹ್ಯತೀತಾದಿಕಮಪಿ ಸ್ವರೂಪತೋಽಸ್ತೀತಿ ತತ್ಸಂಬಂಧಃ ಸಂಭವೇದಿತಿ ವ್ಯವಹಿತವಿಪ್ರಕೃಷ್ಟೇಷು ಸಂಬಂಧ ಹೇತುವಿಧಯಾ ಲಬ್ಧಾತಿಶಯೇನ ವಿಶೇಷಣಮ್ ಅತಿಶಯಶ್ಚ ವ್ಯಾಪಕತ್ವಂ, ವೃತ್ತಿಪ್ರತಿಬಂಧಕತಮೋನಿವೃತ್ತ್ಯಾದಿಶ್ಚೇತಿ ।*

ಅನುವಾದ: ಅಥವಾ ಅದನ್ನು ಲಕ್ಷ್ಯವೆನ್ನಬಹುದು, ಆದರೂ ದೋಷವು ಇರದು. ಅವ್ಯಾಪ್ತಿಯೂ ಇರದು. ಏಕೆಂದರೆ ಲೀನವಸ್ತುಗಳಲ್ಲಿ ಯೋಗದಿಂದುಂಟಾದ ಧರ್ಮದಿಂದ ಹುಟ್ಟುವ ಶ್ರೇಷ್ಠವಾದ ಯೋಗಿಚಿತ್ತದ ಸಂಬಂಧವು ಸಂಭವಿಸುವುದು ಎಂದರ್ಥ. ಇಲ್ಲಿ ಲೀನ ಪದವು ಪೂರ್ವಪಕ್ಷವು ಹೇಳುವಂತೆ ಸನ್ನಿಕರ್ಷವಿಲ್ಲದ ಎಂಬರ್ಥವನ್ನು ಕೊಡುವುದು. ಸತ್ಕಾರ್ಯ ವಾದಿಗಳು ಅತೀತವೇ ಮೊದಲಾದುವುಗಳನ್ನು ಸ್ವರೂಪತಃ ಇದೆ ಎಂದೂ (ಆದ್ದರಿಂದ) ಅವುಗಳ ಸಂಬಂಧ ಸಂಭವಿಸುವುದು ಎಂದೂ ಹೇಳುತ್ತಾರೆ. ಮರೆಯಾದ ಅಥವಾ ದೂರವಿರುವ ವಸ್ತುಗಳ ಸಂಬಂಧದ ಕಾರಣ ಕಲ್ಪಿಸಿರುವುದರಿಂದ ಅತಿಶಯವನ್ನು ಪಡೆದ ಎಂಬ ವಿಶೇಷಣ ಹೇಳಲಾಗಿದೆ. ಅತಿಶಯ ಎಂದರೆ ವ್ಯಾಪಕವಾದ, 'ವೃತ್ತಿಯನ್ನು ತಡೆಯುವ ತಮಸ್ಸನ್ನು ಹೋಗಲಾಡಿಸುವ' ಎಂದು ಮುಂತಾಗಿ ಅರ್ಥ ಮಾಡಬಹುದು.

ಭಾಷ್ಯ: *ಇದಮತ್ರಾವಧೇಯಮ್ । ಯತ್ಸಂಪದಂ ಸದಿತಿ ಪೂರ್ವಸೂತ್ರೇ ಬುದ್ಧೇರರ್ಥಸನ್ನಿಕರ್ಷಸ್ಯೈವ ಪ್ರತ್ಯಕ್ಷ ಹೇತುತಾಲಾಭಾತ್ ಪ್ರತ್ಯಕ್ಷಸಾಮಾನ್ಯೇ ಬಾಹ್ಯಾರ್ಥಸಾಧಾರಣೇ ಬುದ್ಧ್ಯರ್ಥ–ಸನ್ನಿಕರ್ಷೇ ಏವ ಕಾರಣಮ್ । ಇಂದ್ರಿಯಸನ್ನಿಕರ್ಷಾಸ್ತು ಚಾಕ್ಷುಷಾದಿ ಪ್ರತ್ಯಕ್ಷೇಷು ವಿಶಿಷ್ಟೈವ ಕಾರಣಾನಿ ।*

ಅನುವಾದ: ಈ ವಿಷಯದಲ್ಲಿ ಹೀಗೆ ತಿಳಿಯಬೇಕು– 'ಯತ್ಸಂಬಂಧಂಸತ್ (೧–೮೯) ಎಂಬ ಪೂರ್ವ ಸೂತ್ರದಲ್ಲಿ ಬುದ್ಧಿ ಮತ್ತು ಪದಾರ್ಥಗಳ ಸನ್ನಿಕರ್ಷವೇ ಪ್ರತ್ಯಕ್ಷಕ್ಕೆ ಕಾರಣವೆಂದು ಹೇಳಿದೆ. ಪ್ರತ್ಯಕ್ಷ ಸಾಮಾನ್ಯ ಬಾಹ್ಯಾರ್ಥಕ್ಕೆ ಸಂಬಂಧಿಸಿದಂತೆ ಸಾಧಾರಣ ಬುದ್ಧಿ–ಅರ್ಥಗಳ ಸನ್ನಿಕರ್ಷವೇ ಕಾರಣ. ಇಂದ್ರಿಯ ಸನ್ನಿಕರ್ಷಗಳಾದರೋ ಕಣ್ಣು ಮುಂತಾದುವುಗಳಿಗೆ ಗೋಚರವಾಗುವಲ್ಲಿ ವಿಶೇಷವಾಗಿ ಕಾರಣಗಳು.

ಭಾಷ್ಯ: *ನನು ಏವಮಿಂದ್ರಿಯ ಸನ್ನಿಕರ್ಷಯೋಗಜಧರ್ಮಾ–। ದ್ಯಭಾವೇಽಪಿ ಬುದ್ಧ್ಯಾ ಬಾಹ್ಯಾರ್ಥ ಪ್ರತ್ಯಕ್ಷಾಪತ್ತಿಃ ।*

ಅನುವಾದ: (ಮೇಲೆ ಹೇಳಿದಂತೆ) ಇಂದ್ರಿಯ ಸನ್ನಿಕರ್ಷ ಮತ್ತು ಯೋಗಜಧರ್ಮ ಮುಂತಾದುವುಗಳ ಅಭಾವದಲ್ಲಿಯೂ ಬುದ್ಧಿಯಿಂದಲೇ ಬಾಹ್ಯಾರ್ಥ ಪ್ರತ್ಯಕ್ಷದ ಪ್ರಸಂಗ ಬರುತ್ತದೆಯಲ್ಲವೆ?

ಭಾಷ್ಯ: *ನೈವಮ್ । ತಮಃ ಪ್ರತಿಬಂಧೇನ ತದಾನೀಂ ಬುದ್ಧಿ ಸತ್ತ್ವಸ್ಯ ವೃತ್ತ್ಯಸಂಭವಾತ್ । ತಚ್ಚ ತಮಃ ಕದಾಚಿತ್ ಅರ್ಥೇಂದ್ರಿಯಯೋಃ ಸನ್ನಿಕರ್ಷೇಣ, ಕದಾಚಿಚ್ಚ ಯೋಗಜ–। ಧರ್ಮೇಣ ಅಪಸಾರ್ಯತೇ, ಅಂಜನಸಂಯೋಗೇನ ನಯನಮಾಲಿನ್ಯವತ್ ।*

ಅನುವಾದ: ಹಾಗಲ್ಲ. ತಮಸ್ಸಿನ ಪ್ರತಿಬಂಧದ ಕಾರಣ ಆಗ ಬುದ್ಧಿಯ ಸತ್ತ್ವದ ವೃತ್ತಿಯು ಉಂಟಾಗದು. ತಮಸ್ಸು ಒಮ್ಮೆ ಅರ್ಥ–ಇಂದ್ರಿಯಗಳ ಸನ್ನಿಕರ್ಷದ ಅಥವಾ ಯೋಗಜ ಧರ್ಮದಿಂದ ಕಾರ್ಯಗಳ ಅಡಚಣೆಯುಂಟು ಮಾಡುತ್ತದೆ; ಕಾಡಿಗೆಯಿಂದ ಕಣ್ಣಿನ ದೃಷ್ಟಿಗೆ ಅಡಚಣೆಯಾಗುವಂತೆ.

ಭಾಷ್ಯ: *ನ ಚೈವಂ 'ತದ್ಧೇತೋರೇವ ತದಸ್ತ್ವಿತಿ' ನ್ಯಾಯೇ ಇಂದ್ರಿಯ ಸನ್ನಿಕರ್ಷಾದೇರೇವ ಬಾಹ್ಯಾರ್ಥ ಪ್ರತ್ಯಕ್ಷಸಾಮಾನ್ಯೇ ಹೇತುತ್ವಾಽಸ್ತು ।*

ಅನುವಾದ: 'ಹಾಗೆಯೇ ಅದರ ಸಲುವಾಗಿಯೇ ಅದಿರಲಿ' ಎಂಬ ನ್ಯಾಯದಂತೆ ಇಂದ್ರಿಯ ಸನ್ನಿಕರ್ಷದಿಂದಲೇ ಬಾಹ್ಯಾರ್ಥ ಪ್ರತ್ಯಕ್ಷ. ಸಾಮಾನ್ಯದಲ್ಲಿ ಕಾರಣವಿರಲಿ, ಎಂದು ಏಕಾಗಬಾರದು?

ಭಾಷ್ಯ: *ಇತಿ (ನ ಚೈವಂ) ವಾಚ್ಯಮ್ । ಸುಷುಪ್ತ್ಯಾದೌ ತಮಸೋ ಬುದ್ಧಿವೃತ್ತಿ ಪ್ರತಿಬಂಧಕತ್ವಸಿದ್ಧೇಃ ।*

ಅನುವಾದ: ನೀವು ಹೀಗೆ ಹೇಳುವುದು ಸರಿಯಲ್ಲ. ಸುಷುಪ್ತ್ಯಾದಿಗಳಲ್ಲಿ ತಮಸ್ಸಿನಿಂದ ಬುದ್ಧಿವೃತ್ತಿಗೆ ಪ್ರತಿಬಂಧಕತ್ವವಿರದು.

ಭಾಷ್ಯ: *ಸತ್ತ್ವಾಜ್ಜಾಗರಣಂ ವಿದ್ಯಾದ್ರಜಸಾ ಸ್ವಪ್ನಮಾದಿಶೇತ್ ।*
ಪ್ರಸ್ವಾಪನಂ ತು ತಮಸಾ ತುರೀಯಂ ತ್ರಿಷು ಸಂತತಮ್ ॥
(ಭಾ. ೧೧.೨೫–೨೦)

ಇತ್ಯಾದಿ ಸ್ಮೃತಿಭ್ಯಃ ಸುಷುಪ್ತ್ಯಾದೌ ವೃತ್ತಿಪ್ರತಿಬಂಧಕಾಂತರಾಽಸಂಭವಾಚ್ಚ । ಚಾಕ್ಷುಷ ವೃತ್ತಾವಪಿ ತಮಸಃ ಪ್ರತಿಬಂಧದರ್ಶನಾಚ್ಚ ।

ಅನುವಾದ: ಸತ್ತ್ವಗುಣದಿಂದ ಜಾಗ್ರದವಸ್ಥೆ, ರಜೋಗುಣದಿಂದ ಸ್ವಪ್ನಾವಸ್ಥೆ ಮತ್ತು ತಮೋಗುಣದಿಂದ ಸುಷುಪ್ತ್ಯವಸ್ಥೆ ಉಂಟಾಗುತ್ತವೆ. ಆದರೆ ತುರೀಯವು ಈ ಮೂರರಲ್ಲೂ ಯಾವಾಗಲೂ ಇರುತ್ತದೆ (ಭಾ. ೧೧.೨೫–೨೦). ಇತ್ಯಾದಿ ಸ್ಮೃತಿಗಳಿಂದ ಸುಷುಪ್ತಿಯೇ ಮುಂತಾದುವುಗಳಲ್ಲಿ ವೃತ್ತಿ ಪ್ರತಿಬಂಧಕವಲ್ಲದೆ ಬೇರೇನೂ ಸಂಭವ ವಿಲ್ಲದ ಕಾರಣ (ತಮೋ ಗುಣದಲ್ಲಿ ಮಾತ್ರ ವೃತ್ತಿಪ್ರತಿಬಂಧಕತೆ ಕಂಡುಬರುತ್ತದೆ) ಚಾಕ್ಷುಷ ವೃತ್ತಿಯಲ್ಲಿಯೂ ಪ್ರತಿಬಂಧಕವಾಗಿ ತಮೋಗುಣವೇ ಕಂಡುಬರುತ್ತದೆ.

ಭಾಷ್ಯ: *ಯತ್ತು ಶುಷ್ಕತಾರ್ಕಿಕಾಃ ಸುಷುಪ್ತೌ ವೃತ್ತ್ಯನುತ್ಪಾದಾರ್ಥಂ ಜ್ಞಾನಸಾಮಾನ್ಯೇ ತ್ವಙ್ಮನೋಯೋಗಂ ಕಾರಣಂ ಕಲ್ಪಯಂತಿ ।*

ಅನುವಾದ: ಶುಷ್ಕ ತಾರ್ಕಿಕರು ಸುಷುಪ್ತಿಯಲ್ಲಿ ವೃತ್ತಿಯು ಉಂಟಾಗುವುದಿಲ್ಲವೆಂದು ಹೇಳಲು 'ಜ್ಞಾನಸಾಮಾನ್ಯ'ದ ವಿಷಯದಲ್ಲಿ ತ್ವಙ್ಮನಃ ಸಂಯೋಗವನ್ನು ಕಾರಣವೆನ್ನುತ್ತಾರೆ.

ಭಾಷ್ಯ: *ತದಸತ್ ತ್ವಗಿಂದ್ರಿಯೋತ್ಪತ್ತೇಃ ಪ್ರಾಗಪಿ ಕೇವಲಬುದ್ಧ್ಯಾ ಸ್ವಯಂಭುವಃ ಸರ್ವಪ್ರತ್ಯಕ್ಷಶ್ರವಣಾತ್ । ತ್ವಙ್ಮನೋ ಯೋಗಾನುತ್ಪಾದೇಽಪಿ ತಮಸ ಏವ ನಿಮಿತ್ತತಾಯಾಃ ವಕ್ತವ್ಯತ್ವಾಚ್ಚ ಕೇವಲತರ್ಕಸ್ಯಾಽಪ್ರತಿಷ್ಠಾದೋಷ –। ಗ್ರಸ್ತತ್ವಾಚ್ಚ ಇತಿ ದಿಕ್ ।*

ಅನುವಾದ: ಅದು ಸರಿಯಲ್ಲ. ತ್ವಗಿಂದ್ರಿಯದ ಉತ್ಪತ್ತಿಗೆ ಮೊದಲೇ ಕೇವಲ ಬುದ್ಧಿ ಯಿಂದಲೇ ಸ್ವಯಂಭೂ ಆದ ಬ್ರಹ್ಮನಿಗೆ ಎಲ್ಲವೂ ಪ್ರತ್ಯಕ್ಷವಾಯಿತೆಂದು ಕೇಳಿದ್ದೇವೆ. ತ್ವಙ್ಮನೋಯೋಗಗಳು ಉತ್ಪನ್ನವಾಗದಿದ್ದರೂ ತಮಸ್ಸಿನ ಕಾರಣವನ್ನು ಹೇಳಬೇಕು. ಕೇವಲ ತರ್ಕಕ್ಕೆ ಅಸ್ಥಿರವೆಂಬ ದೋಷ ಒದಗುವುದು. ಹೀಗೆ ಇಷ್ಟು ಸಾಕು.

ಭಾಷ್ಯ: *ನನು ತಥಾಪೀಶ್ವರ ಪ್ರತ್ಯಕ್ಷೇಽವ್ಯಾಪ್ತಿಃ । ತಸ್ಯ ನಿತ್ಯತ್ವೇನ ಸನ್ನಿಕರ್ಷ ಅಜನ್ಯತ್ವಾತ್ ಇತಿ । ತತ್ರಾಹ–*

ಸೂತ್ರ: **ಈಶ್ವರಾಸಿದ್ಧೇಃ ॥ ೯೨ ॥**

ಅನುವಾದ: ಹಾಗಿದ್ದರೂ ಈಶ್ವರನ ಪ್ರತ್ಯಕ್ಷದಲ್ಲಿ ಅವ್ಯಾಪ್ತಿಯಾಗುವುದು. ಅವನು ನಿತ್ಯನಾದ್ದರಿಂದ ಸಂನಿಕರ್ಷವು ಉಂಟಾಗಲಾರದು. ಅದಕ್ಕೆ ಹೀಗೆ ಹೇಳಿದೆ–

ಸೂತ್ರಾನುವಾದ: ಈಶ್ವರನು (ಪ್ರಮಾಣವಿಲ್ಲದಿರುವುದರಿಂದ) ಅಸಿದ್ಧನು.

ಭಾಷ್ಯ: *ಈಶ್ವರೇ ಪ್ರಮಾಣಾಭಾವಾನ್ನ ದೋಷ ಇತ್ಯನುವರ್ತತೇ । ಅಯಂ ಚೇಶ್ವರಪ್ರತಿಷೇಧೇ ಏಕದೇಶಿನಾಂ ಪ್ರೌಢಿ–ವಾದೇನೈವ ಇತಿ ಪ್ರಾಗೇವ ಪ್ರತಿಪಾದಿತಮ್ । ಅನ್ಯಥಾ ಈಶ್ವರ–ಅಭಾವಾತ್ ಇತ್ಯೇವೋ ಚ್ಯೇತ । ಈಶ್ವರಾಭ್ಯು ಪ ಗಮೇ ತು ಸನ್ನಿಕರ್ಷಜನ್ಯ ಜಾತೀಯತ್ವಮೇವ ಪ್ರತ್ಯಕ್ಷ ಲಕ್ಷಣಂ ವಿವಕ್ಷಿತಮ್ । ಸಾಜಾತ್ಯಂ ಚ ಜ್ಞಾನತ್ವ ಸಾಕ್ಷಾದ್ವ್ಯಾಪ್ಯ ಜಾತ್ಯೇತಿ ಭಾವಃ ॥ ೯೨ ॥*

ಅನುವಾದ: ಈಶ್ವರನ ವಿಷಯದಲ್ಲಿ ಪ್ರಮಾಣದ ಅಭಾವವಿರುವುದು ದೋಷವೇನಲ್ಲ. ಈ ಈಶ್ವರ ಪ್ರತಿಷೇಧವು ಏಕದೇಶಿಗಳ ಪ್ರೌಢವಾದದಿಂದಲೇ ಮಾಡಲ್ಪಟ್ಟಿದೆ ಎಂದು ಮೊದಲೇ ಹೇಳಿದ್ದೇವೆ. ಹಾಗಿಲ್ಲದಿದ್ದಲ್ಲಿ 'ಈಶ್ವರಾಭಾವಾತ್' ಎಂದೇ (ಸೂತ್ರದಲ್ಲಿ) ಹೇಳುತ್ತಿದ್ದರು. ಈಶ್ವರನನ್ನು ಸ್ವೀಕರಿಸಿದ ಮೇಲೆ ಸನ್ನಿಕರ್ಷದಿಂದ ಉಂಟಾದ ಜಾತಿಯೇ ಪ್ರತ್ಯಕ್ಷ ಲಕ್ಷಣವೆಂದು ಹೇಳಬಯಸುತ್ತಿದ್ದರು. ಮತ್ತು ಆ ಸಜಾತಿಯನ್ನು ಎಂದರೆ 'ಜ್ಞಾನತ್ವವು ಸಾಕ್ಷಾತ್ ವ್ಯಾಪ್ಯ ಜಾತಿಯಿಂದ' ಎಂದು ಅರ್ಥ ಮಾಡಬೇಕು.

ವಿವರಣೆ: 'ಪ್ರೌಢಿವಾದ'ವೆಂದರೆ ಪದಪ್ರಯೋಗದಲ್ಲಿ ಅಭಿಪ್ರಾಯವನ್ನು ಸಂಪೂರ್ಣವಾಗಿ ಹೇಳುವುದು– 'ಏಕದೇಶಿ' ಎಂದರೆ 'ಪೂರ್ವಪಕ್ಷ' ಎಂದರ್ಥ.

ಭಾಷ್ಯ: *ಶ್ರುತಿಸ್ಮೃತಿಭ್ಯಾಂ ಕಥಮೀಶೋ ನ ಸಿಧ್ಯತೀತ್ಯಾಶಂಕಾಯಾಂ ।*

ಅನುವಾದ: ಶ್ರುತಿ–ಸ್ಮೃತಿಗಳ (ರಚನದಂತೆ) ಈಶ್ವರನನ್ನು ಸಿದ್ಧ ಮಾಡುವುದು ಹೇಗೆ ಎಂಬ ಶಂಕೆಗೆ,

ಭಾಷ್ಯ: *ತರ್ಕವಿರೋಧಂ ಲೌಕಿಕಮೇವ ಬಾಧಕಮಾಹ ।*

ಸೂತ್ರ: **ಮುಕ್ತಬದ್ಧಯೋರನ್ಯತರಾ ಭಾವಾನ್ನ ತತ್ಸಿದ್ಧಿಃ ॥ ೯೩ ॥**

ಅನುವಾದ: ಲೌಕಿಕವಾದ ತರ್ಕವಿರೋಧವೇ ಅದಕ್ಕೆ ಬಾಧಕವಾಗುವುದು.

ಸೂತ್ರಾನುವಾದ: ಮುಕ್ತ–ಬದ್ಧ ಇವುಗಳಲ್ಲಿ ಒಂದರ ಅಭಾವವಿದ್ದರೆ ಈಶ್ವರನ ಸಿದ್ಧಿ ಮಾಡಲಾಗದು.

ಭಾಷ್ಯ: *ಸ ಈಶ್ವರೋಽಭಿಮತಃ ಕಿಂ ಕ್ಲೇಶಾದಿಮುಕ್ತೋ ವಾ ತೈರ್ಬದ್ಧೋವಾ? ಅನ್ಯತರಸ್ಯಾಪ್ಯಸಂಭವಾತ್ ನೇಶ್ವರಸಿದ್ಧಿಃ ಇತ್ಯರ್ಥಃ ।*

ಅನುವಾದ: ಆ ಈಶ್ವರನು ಕ್ಲೇಶಾದಿಗಳಿಂದ ಮುಕ್ತನೋ ಅಥವಾ ಬದ್ಧನೋ? ಎರಡರಲ್ಲಿ ಒಂದರ ಅಸಂಭವತೆ ಇದ್ದರೂ ಈಶ್ವರನನ್ನು ಸಿದ್ಧಿಸುವುದು ಸಾಧ್ಯವಿಲ್ಲ.

ಸೂತ್ರ: ಉಭಯಥಾಪ್ಯಸತ್ಕರತ್ವಮ್ ॥ ೯೪ ॥

ಅನುವಾದ: ಎರಡು ರೀತಿಯಲ್ಲಿಯೂ ಸೃಷ್ಟಿಕರ್ತನೆನ್ನಲಾಗದು.

ಭಾಷ್ಯ: *ಮುಕ್ತತ್ವೇ ಸತಿ ಸ್ರಷ್ಟೃತ್ವಾದ್ಯಕ್ಷಮತ್ವಂ, ತತ್ಪ್ರಯೋಜಕಾಭಿಮಾನರಾಗದ್ಯಭಾವಾತ್ । ಬದ್ಧತ್ವೇಽಪಿ ಮೂಢತ್ವಾನ್ನ ಸೃಷ್ಟ್ಯಾದಿಕ್ಷಮತ್ವಮಿತ್ಯರ್ಥಃ ।*

ಅನುವಾದ: (ಈಶ್ವರನು) ಮುಕ್ತನಾಗಿದ್ದಲ್ಲಿ ಸೃಷ್ಟಿ ಮಾಡಲು ಬೇಕಾದ ಅಭಿಮಾನ, ರಾಗಾದಿಗಳನ್ನು ಹೊಂದಿಲ್ಲದಿರುವುದರಿಂದ ಅಸಮರ್ಥನು. ಬದ್ಧನಾಗಿದ್ದಲ್ಲಿ ಮೂಢತೆಯ ಕಾರಣ ಸೃಷ್ಟಿಮಾಡಲು ಅಸಮರ್ಥನು.

ಭಾಷ್ಯ: *ನನ್ವೇವಂ ಈಶ್ವರ ಪ್ರತಿಪಾದಕ ಶ್ರುತೀನಾಂ ಕಾ ಗತಿಃ ।*

ಅನುವಾದ: ಹಾಗಿದ್ದಲ್ಲಿ ಈಶ್ವರನನ್ನು ಪ್ರತಿಪಾದಿಸುವ ಶ್ರುತಿಗಳ ಗತಿ ಏನು?

ಸೂತ್ರ: ಮುಕ್ತಾತ್ಮನಃ ಪ್ರಶಂಸಾ, ಉಪಾಸಾ ಸಿದ್ಧಸ್ಯ ವಾ ॥ ೯೫ ॥

ಅನುವಾದ: ಈಶ್ವರನ ಪ್ರಶಂಸೆ; ಅಥವಾ ಸಿದ್ಧರ ಉಪಾಸನೆ (ಮುಂತಾದುವುಗಳ ವರ್ಣನೆಯಿದೆ).

ಭಾಷ್ಯ: *ಯಥಾಯೋಗಂ ಕಾಚಿತ್ ಶ್ರುತಿರ್ಮುಕ್ತಾತ್ಮನಃ ಕೇವಲಾತ್ಮ –। ಸಾಮಾನ್ಯಸ್ಯ ಜ್ಞೇಯತಾಽಭಿಧಾನಾಯ ಸನ್ನಿಧಿಮಾತ್ರೈಶ್ವರ್ಯೇಣ ಸ್ತುತಿರೂಪಾ ಪ್ರರೋಚನಾರ್ಥಾ । ಕಾಚಿಚ್ಚ ಸಂಕಲ್ಪ –। ಪೂರ್ವಕಸ್ರಷ್ಟೃತ್ವಾ– ದಿಪ್ರತಿಪಾದಿಕಾ ಶ್ರುತಿಃ ಸಿದ್ಧಸ್ಯ ಬ್ರಹ್ಮವಿಷ್ಣುಹರಾದೇರೇವ ಅನಿತ್ಯೇಶ್ವರಸ್ಯ ಅಭಿಮಾನಾದಿಮತೋಽಪಿ ಗೌಣ ನಿತ್ಯತ್ವಾದಿ–। ಮತ್ವಾದ್ಯುಪಾಸಾಪರೇತ್ಯರ್ಥಃ ।*

ಅನುವಾದ: ಪ್ರಸಂಗಕ್ಕೆ ಅನುಸಾರವಾಗಿ ಯಾವುದಾದರೂ ಶ್ರುತಿಯು ಕೇವಲ ಸಾಮಾನ್ಯಾತ್ಮನನ್ನು ತಿಳಿಯುವ ಬಗೆಯನ್ನು ತಿಳಿಸಲು ಸನ್ನಿಧಿ ಮಾತ್ರದ ಐಶ್ವರ್ಯವನ್ನು ಪಡೆಯುವುದರ ಮೂಲಕ ಪ್ರೋತ್ಸಾಹಿಸಲು ಸ್ತುತಿರೂಪವನ್ನು ಹೊಂದಿದೆ. ಬೇರೆ ಯಾವುದಾದರೂ ಶ್ರುತಿಯು ಸಂಕಲ್ಪದೊಡನೆ ಸ್ರಷ್ಟೃತ್ವಾದಿ ಪ್ರತಿಪಾದಿಸುತ್ತಾ ಬ್ರಹ್ಮ–ವಿಷ್ಣು–ಹರ ಮುಂತಾದ ಹೆಸರುಗಳಿಂದ ಪ್ರಸಿದ್ಧವಾದ ಮತ್ತು ಅಭಿಮಾನದಿಂದ ಕೂಡಿದ ಅನಿತ್ಯರಾದ ಈಶ್ವರರಲ್ಲಿ ಗೌಣವಾಗಿ ನಿತ್ಯತ್ವಾದಿಗಳನ್ನು ಹೊಂದಿರುವಂತೆ ಮಾಡಿ ಉಪಾಸನೆಯಲ್ಲಿ ತೊಡಗಿರುತ್ತದೆ.

ವಿವರಣೆ: ಸ್ತುತಿಯಾಗಲಿ, ಉಪಾಸನೆಯಾಗಲಿ ಹೇಳುವಾಗ ಪ್ರಶಂಸೆಗಳ ಮೂಲಕ ಐಶ್ವರ್ಯ ಪ್ರಾಪ್ತಿಗೆ ಕಾರಣರು ಅಥವಾ ಸ್ರಷ್ಟೃತ್ವಾದಿಗಳನ್ನು ಮಾಡುವವರು ಎಂದು ಪ್ರತಿಪಾದಿಸುವರು.

ಭಾಷ್ಯ: *ನನು ತಥಾಪಿ ಪ್ರಕೃತ್ಯಾದ್ಯಖಿಲಾಧಿಷ್ಠಾತೃತ್ವಂ ಶ್ರೂಯಮಾಣಂ ನೋಪಪದ್ಯತೇ, ಲೋಕೇ ಸಂಕಲ್ಪಾದಿನಾ ಪರಿಣಮನಸ್ಯೈವ ಅಧಿಷ್ಠಾತೃತ್ವ ವ್ಯವಹಾರಾದಿತಿ ।*

ಅನುವಾದ: ಹಾಗಿದ್ದರೂ ಸಹ ಪ್ರಕೃತಿಯೇ ಮೊದಲಾದ ಅಖಿಲ (ಜಗತ್ತಿಗೆ) ಅಧಿಷ್ಠಾತೃತ್ವ ರೂಪವಾಗಿ ಎಂದು ನಾವು ಕೇಳಿರುವುದು ದೊರೆಯದು, ಏಕೆಂದರೆ ಲೋಕದಲ್ಲಿ ಸಂಕಲ್ಪಾದಿಗಳ ಮೂಲಕ ಪರಿಣಾಮದ ದೃಷ್ಟಿಯಿಂದ ಅಧಿಷ್ಠಾತೃ ವ್ಯವಹಾರವು ನಡೆಯುತ್ತದೆ.

ಭಾಷ್ಯ: *ತತ್ರಾಹ ।*

ಆ ವಿಷಯದಲ್ಲಿ ಹೀಗೆ ಹೇಳಿದೆ–

ಸೂತ್ರ: ತತ್ಸನ್ನಿಧಾನಾದಧಿಷ್ಠಾತೃತ್ವಂ ಮಣಿವತ್ ॥ ೯೬ ॥

ಅನುವಾದ: ಮಣಿಯಂತೆ ಪ್ರಕೃತಿಯ ಸಾಮೀಪ್ಯದಿಂದ ಅಧಿಷ್ಠಾತೃತ್ವ ಉಂಟಾಗುವುದು.

ಭಾಷ್ಯ: *ಯದಿ ಸಂಕಲ್ಪೇನ ಸ್ರಷ್ಟೃತ್ವಮಧಿಷ್ಠಾತೃತ್ವ ಮುಚ್ಯತೇ ತದಾಯಂ ದೋಷಃ ಸ್ಯಾತ್ । ಅಸ್ಮಾಭಿಸ್ತು ಪುರುಷಸ್ಯ ಸನ್ನಿಧಾನಾದೇವಾಧಿಷ್ಠಾತೃತ್ವಂ ಸ್ರಷ್ಟೃತ್ವಾದಿರೂಪಮಿಷ್ಯತೇ ಮಣಿವತ್ । ಯಥಾಽಯಸ್ಕಾಂತಮಣೇಃ ಸಾನ್ನಿಧ್ಯಮಾತ್ರೇಣ ಶಲ್ಯನಿಷ್ಕರ್ಷಕತ್ವಂ, ನ ಸಂಕಲ್ಪಾದಿನಾ, ತಥೈವಾದಿ ಪುರುಷಸ್ಯ ಸಂಯೋಗಮಾತ್ರೇಣ ಪ್ರಕೃತೇರ್ಮಹತ್ತತ್ವರೂಪೇಣ ಪರಿಣಮನಮ್ । ಇದಮೇವ ಸ್ವೋಪಾಧಿಸ್ರಷ್ಟೃತ್ವಂ ಇತ್ಯರ್ಥಃ ।*

ಅನುವಾದ: ಸಂಕಲ್ಪದ ಮೂಲಕ ಸ್ರಷ್ಟೃತ್ವವೇ ಅಧಿಷ್ಠಾತೃತ್ವ ಎಂದು ಹೇಳಿದರೆ ಆಗ ದೋಷವೆನಿಸಬಹುದು. ಆದರೆ ನಾವು ಪುರುಷನ ಸನ್ನಿಧಾನದಿಂದಲೇ ಸ್ರಷ್ಟೃತ್ವಾದಿ ರೂಪದ ಅಧಿಷ್ಠಾತೃತ್ವರೂಪವನ್ನು ಒಪ್ಪಿದ್ದೇವೆ. ಹೇಗೆ ಸಂಕಲ್ಪವಿಲ್ಲದೆ ಅಯಸ್ಕಾಂತ ಮಣಿಯ ಸಾನ್ನಿಧ್ಯದಿಂದಲೇ ಕಬ್ಬಿಣವನ್ನು ಆಕರ್ಷಿಸುವುದು ಕಂಡುಬರುವುದೋ ಹಾಗೆ (ಸಂಕಲ್ಪವಿಲ್ಲದೆ) ಪುರುಷನ ಸಂಯೋಗ ಮಾತ್ರದಿಂದ ಪ್ರಕೃತಿಯು ಪರಿಣಾಮವಾಗಿ ಮಹತ್ತತ್ವ ರೂಪದಲ್ಲಿ ತೋರುತ್ತದೆ. ಇದನ್ನೇ 'ತನ್ನ ಉಪಾಧಿಯನ್ನು ತಾನೇ ಸೃಷ್ಟಿಸಿಕೊಳ್ಳುವನಾದನು' ಎಂದರ್ಥ.

ಭಾಷ್ಯ: *ತಥಾಚೋಕ್ತಮ್ ನಿರಿಚ್ಛೇ ಸಂಸ್ಥಿತೇ ರತ್ನೇ ಯಥಾ ಲೋಹಃ ಪ್ರವರ್ತತೇ ।*
ಸತ್ತಾಮಾತ್ರೇಣ ದೇವೇನ ತಥಾ ಚಾಯಂ ಜಗಜ್ಜನಃ ॥
ಅತ ಆತ್ಮನಿ ಕರ್ತೃತ್ವಂ ಅಕರ್ತೃತ್ವಂ ಚ ಸಂಸ್ಥಿತಮ್ ।

ನಿರಿಚ್ಛತ್ವಾದಕರ್ತಾಸೌ ಕರ್ತಾ ಸನ್ನಿಧಿಮಾತ್ರತಃ ॥
ಇತಿ (ಯೋ.ವಾ. ೪.೫–೩೦–೩೧)

ಅನುವಾದ: ಹಾಗೆಯೇ ಹೇಳಿರುವರು–

ಇಚ್ಛೆ ಇಲ್ಲದೆ ಬಿದ್ದಿರುವ ರತ್ನದ ಮೇಲೆ ಹೇಗೆ ಕಬ್ಬಿಣವು ಪ್ರವೃತ್ತವಾಗುವುದೋ ಹಾಗೇ ಈಶ್ವರನ ಸತ್ತಾ ಮಾತ್ರದಿಂದ ಜಗತ್ತು ಸಕ್ರಿಯವಾಗುತ್ತದೆ. ಆದ್ದರಿಂದ ಆತ್ಮನಲ್ಲಿ ಕರ್ತೃತ್ವ ಮತ್ತು ಅಕರ್ತೃತ್ವ ಎರಡೂ ಇರುತ್ತವೆ. ಇಚ್ಛಾರಹಿತನಾಗಿರುವುದರಿಂದ ಅಕರ್ತೃವಾಗಿಯೂ, ಸಾನ್ನಿಧ್ಯದಿಂದ ಕರ್ತೃವೆಂದೂ ಹೇಳಲ್ಪಡುತ್ತಾನೆ.

ಭಾಷ್ಯ: *'ತದೈಕ್ಷತ ಬಹು ಸ್ಯಾಮ್' (ಛಾ.ಉ. ೬.೨.೩) ಇತ್ಯಾದಿ ಶ್ರುತಿಸ್ತು, ಕೂಲಂ ಪಿಪತಿಷತಿ ಇತಿವತ್ ಗೌಣೀ, ಪ್ರಕೃತೇರಾಸನ್ನಬಹುತರಗುಣಸಂಯೋಗಾತ್ ।*

ಅನುವಾದ: 'ಅವನು ಇಚ್ಛಿಸಿದನು, ನಾನು ಅನೇಕವಾದೇನು' ಮುಂತಾದ ಶ್ರುತಿಗಳಲ್ಲಿ, 'ತಟವು ಬೀಳಲಿಚ್ಛಿಸುತ್ತದೆ' ಎಂಬಂತೆ ಗೌಣಾರ್ಥದಲ್ಲಿದೆ; ಏಕೆಂದರೆ ಪ್ರಕೃತಿಯ ಬಳಿ ಬಹಳ ಗುಣಗಳ ಸಂಯೋಗವಿದೆ.

ಭಾಷ್ಯ: *ಅಥವಾ ಬುದ್ಧಿಪೂರ್ವಸೃಷ್ಟಿಮೇತಾದೃಶವಾಕ್ಯ ಜಾತಂ, ನ ತ್ವಾದಿಸರ್ಗಪರಮ್, ತಸ್ಯಾಃ ಅಬುದ್ಧಿಪೂರ್ವಕತ್ವ–ಸ್ಮರಣಾತ್ ಇತಿ ಭಾವಃ ।*

ಅನುವಾದ: ಅಥವಾ ಬುದ್ಧಿಪೂರ್ವ ಸೃಷ್ಟಿಯನ್ನು ಕುರಿತ ವಿಷಯವೆಂದು ಮೇಲೆ ಹೇಳಿದ ವಾಕ್ಯಗಳನ್ನು ತಿಳಿಯಬೇಕು, ಆದಿಸೃಷ್ಟಿಯನ್ನು ಕುರಿತದ್ದಲ್ಲ. ಅದು ಆದಿ (ಸೃಷ್ಟಿ) ಬುದ್ಧಿಪೂರ್ವಕವಾದದ್ದೆಂದು ತಿಳಿಯಲಾಗದು.

ಭಾಷ್ಯ: *ಯಥಾ ಕೌರ್ಮೇ–*

ಇತ್ಯೇಷ ಪ್ರಾಕೃತಃ ಸರ್ಗಃ ಸಂಕ್ಷೇಪಾತ್ ಕಥಿತೋಮಯಾ ।
ಅಬುದ್ಧಿಪೂರ್ವಕಸ್ತ್ವೇಷಾ ಬ್ರಾಹ್ಮೀಂ ಸೃಷ್ಟಿಂ ನಿಬೋಧತ ॥
(ಕೂ.ಪು. ೧.೪.೬೬)

ಅಸ್ಯ ಚ ವಾಕ್ಯಸ್ಯಾದಿಪುರುಷಬುದ್ಧ್ಯಜನ್ಮತ್ವೇನ ಸಂಕೋಚೇ ಗೌರವಮಿತಿ–

ಅನುವಾದ: ಕೂರ್ಮ ಪುರಾಣದಲ್ಲಿ ಹೇಳಿರುವಂತೆ–

ಹೀಗೆ ಪ್ರಕೃತಿಯಿಂದುಂಟಾಗುವ ಸೃಷ್ಟಿಯನ್ನು ಸಂಕ್ಷೇಪವಾಗಿ ನಾನು ಹೇಳಿದೆ. ಇದು ಬುದ್ಧಿಪೂರ್ವಕವಾಗಿ ಮಾಡಿದ್ದಲ್ಲ. ಇನ್ನು ಬ್ರಾಹ್ಮೀ ಸೃಷ್ಟಿಯನ್ನು ತಿಳಿಯಿರಿ. ಈ ವಾಕ್ಯ ಆದಿಪುರುಷನು ಅಬುದ್ಧಿಪೂರ್ವಕವಾಗಿ ಸೃಷ್ಟಿ ಮಾಡಿದನೆಂದು ಅರ್ಥವನ್ನು ಕಿರಿದಾಗಿಸುವುದು ಅನಗತ್ಯವಾಗುವುದು.

ಭಾಷ್ಯ: ನ ಕೇವಲಂ ಸರ್ಗಾದಾವೇದಪುರುಷಸ್ಯ ಸಂಯೋಗಮಾತ್ರೇಣ ಸ್ರಷ್ಟೃತ್ವಾದಿಕಮಪಿತ್ವನ್ಯೇಷ್ವಪಿ

ಸಂಕಲ್ಪಾದಿ ಪೂರ್ವಕೇಷು ಭೂತಾದಿಷ್ವಖಿಲೇಷು
ವಿಶೇಷಕಾರ್ಯೇಷ್ವಪಿ ಸರ್ವಪುರುಷಾಣಾಮಿತ್ಯಾಹ ।

ಅನುವಾದ: ಸೃಷ್ಟಿಯ ಆರಂಭದಲ್ಲಿ ಸಂಯೋಗ ಮಾತ್ರದಿಂದ ಪುರುಷನು ಸೃಷ್ಟಿಕರ್ತ ನೆಂದಷ್ಟೇ ಅಲ್ಲ, ಆದರೆ ಸಂಕಲ್ಪಾದಿಗಳಿಂದ ಕೂಡಿ ಸಮಸ್ತ ಭೂತಾದಿ ವಿಶೇಷ ಕಾರ್ಯಗಳಲ್ಲಿ ಎಲ್ಲ ಪುರುಷರದ್ದೂ ಸ್ರಷ್ಟೃತ್ವವಿರುವುದು ಎಂದು ಹೇಳಿದೆ.

ಸೂತ್ರ: ವಿಶೇಷಕಾರ್ಯೇಷ್ವಪಿ ಜೀವಾನಾಮ್ ॥ ೯೭ ॥

ಅನುವಾದ: ವಿಶೇಷವಾದ ಕಾರ್ಯಗಳಲ್ಲಿಯೂ ಜೀವಗಳ (ಅಧಿಷ್ಠಾತೃತ್ವ) ಇರುತ್ತದೆ.

ಭಾಷ್ಯ: *ಅಧಿಷ್ಠಾತೃತ್ವಂ ಸನ್ನಿಧಾನಾದಿತ್ಯನುಷಜ್ಯತೇ । ಅಂತಃ–*
ಕರಣೋಪಲಕ್ಷಿತಸ್ಯೈವ ಜೀವಶಬ್ದಾರ್ಥತ್ವಂ ಷಷ್ಠಾಧ್ಯಾಯೇ
ವಕ್ಷ್ಯತೇ । ತಥಾ ಚ ವಿಶೇಷಕಾರ್ಯೇ ವಿಸರ್ಗಾಖ್ಯೇ
ವ್ಯಷ್ಟಿಸೃಷ್ಟೌ ಅಪಿ ಜೀವಾನಾಮಂತಃಕರಣಪ್ರತಿಬಿಂಬಿತ–
ಚೇತನಾನಾಂ ಸನ್ನಿಧಾನಾದೇವಾಧಿಷ್ಠಾತೃತ್ವಂ, ನ ತು ಕೇನಾಪಿ
ವ್ಯಾಪಾರೇಣ ಕೂಟಸ್ಥಚಿನ್ಮಾತ್ರರೂಪತ್ವಾದಿತ್ಯರ್ಥಃ ।

ಅನುವಾದ: (ಅಧಿಷ್ಠಾತೃತ್ವಂ ಸನ್ನಿಧಾನಾತ್) 'ಸನ್ನಿಧಾನದಿಂದ ಅಧಿಷ್ಠಾತೃತ್ವ' ಎಂದು (ನೋಡಿ ೯೬ನೆಯ ಸೂತ್ರ) ಸೇರಿಸಿಕೊಳ್ಳಬೇಕು. ಅಂತಃಕರಣದಿಂದ ಸೂಚಿಸಲ್ಪಟ್ಟ ಜೀವಶಬ್ದದ ಅರ್ಥವನ್ನು ಆರನೆಯ ಅಧ್ಯಾಯದಲ್ಲಿ ಹೇಳುತ್ತಾರೆ. ಹಾಗೆಯೇ ವಿಶೇಷ ಕಾರ್ಯವಾದ ವ್ಯಷ್ಟಿ ಸೃಷ್ಟಿಯಲ್ಲಿಯೂ ಜೀವಗಳ ಅಂತಃಕರಣದಲ್ಲಿ ಪ್ರತಿಬಿಂಬಿತವಾದ ಚೇತನಗಳ ಸಾನ್ನಿಧ್ಯದಿಂದಲೇ ಅಧಿಷ್ಠಾತೃತ್ವವಿರುತ್ತದೆ; ಬೇರೆ ಯಾವುದೇ ವ್ಯಾಪಾರದಿಂದಲ್ಲ. ಏಕೆಂದರೆ ಕೂಟಸ್ಥವಾದ ಚಿನ್ಮಾತ್ರರೂಪವಾಗಿ (ಜೀವಾತ್ಮನು) ಇರುವುದರಿಂದ.

ವಿವರಣೆ: 'ವ್ಯಷ್ಟಿಸೃಷ್ಟಿ' ಎಂದರೆ (ವಿಸರ್ಗವೆಂದು ಕರೆಯಲ್ಪಡುವ) ಬಿಡಿಭಾಗಗಳಾದ ಮಹದಾದಿಗಳ ಸೃಷ್ಟಿ.

ಭಾಷ್ಯ: *ನನು ಚೇತ್ ಸದಾ ಸರ್ವಜ್ಞ ಈಶ್ವರೋನಾಸ್ತಿ, ತರ್ಹಿ*
ವೇದಾಂತಮಹಾವಾಕ್ಯಾರ್ಥಸ್ಯ ವಿವೇಕಸ್ಯೋಪದೇಶೇ
ಅಂಧಪರಂಪರಾಶಂಕಯಾಽಪ್ರಾಮಾಣ್ಯಂ ಪ್ರಸಜ್ಯೇತ ।
ತತ್ರಾಹ–

ಸೂತ್ರ: ಸಿದ್ಧರೂಪಬೋದ್ಧೃತ್ವಾತ್ ವಾಕ್ಯಾರ್ಥೋಪದೇಶಃ ॥ ೯೮ ॥

ಅನುವಾದ: ಹಾಗಾದರೆ, ಯಾವಾಗಲೂ ಸರ್ವಜ್ಞನಾದ ಈಶ್ವರನು ಇಲ್ಲದಿದ್ದಲ್ಲಿ ವೇದಾಂತ ಮಹಾವಾಕ್ಯಾರ್ಥದ ವಿವೇಕದ ಉಪದೇಶವು ಅಂಧಪರಂಪರೆಯ ಶಂಕೆಯಿಂದ ಅಪ್ರಾಮಾಣ್ಯ ಉಂಟಾಗಬಹುದಲ್ಲವೆ? ಅದಕ್ಕೆ ಹೀಗೆ ಹೇಳಿದೆ–

(ಸೂತ್ರಾನುವಾದ) ಸಿದ್ಧವಾದ ರೂಪವನ್ನು ಬೋಧಿಸುವುದರಿಂದ (ವೇದಾಂತ) ವಾಕ್ಯಗಳ ಅರ್ಥವುಳ್ಳ ಉಪದೇಶವು ಪ್ರಮಾಣ.

ವಿವರಣೆ: 'ಸಿದ್ಧರೂಪ'ವೆಂದರೆ 'ಯಥಾರ್ಥ'.

ಭಾಷ್ಯ: *ಹಿರಣ್ಯಗರ್ಭಾದೀನಾಂ ಸಿದ್ಧರೂಪಸ್ಯ ಯಥಾರ್ಥಸ್ಯ– ಬೋಧ್ಯತ್ವಾತ್ ತದ್ವಕ್ತೃಕಾ ಆಯುರ್ವೇದಾದಿ ಪ್ರಾಮಾಣ್ಯೇನ ಅವಧೃತಾಚ್ಚ ಏಷಾಂ ವಾಕ್ಯಾರ್ಥೋಪದೇಶಃ ಪ್ರಮಾಣಮಿತಿ ಶೇಷಃ ।*

ಅನುವಾದ: ಹಿರಣ್ಯಗರ್ಭಾದಿಗಳು ಸಿದ್ಧರೂಪ ಅಥವಾ ಯಥಾರ್ಥದ ಬೋಧನೆ ಮಾಡುವುದರಿಂದ ಅದನ್ನೇ ಹೇಳುವ ಆಯುರ್ವೇದ ಮುಂತಾದುವುಗಳು ಪ್ರಾಮಾಣ್ಯದಿಂದ ಕೂಡಿರುವುದರಿಂದ ಇವುಗಳ ವಾಕ್ಯಾರ್ಥೋಪದೇಶವು ಪ್ರಮಾಣವೆಂದು ಹೇಳಬಹುದು.

ಭಾಷ್ಯ: *ನನು ಪುರುಷಸ್ಯ ಚೇತ್ ಸನ್ನಿಧಿಮಾತ್ರೇಣ ಗೌಣಂ ಅಧಿಷ್ಠಾತೃತ್ವಂ ತರ್ಹಿ ಮುಖ್ಯಂ ಅಧಿಷ್ಠಾತೃತ್ವಂ ಕಸ್ಯ? ಇತ್ಯಾಕಾಂಕ್ಷಾಯಾಂ ಆಹ–*

ಸೂತ್ರ: ಅಂತಃಕರಣಸ್ಯ ತದುಜ್ಜ್ವಲಿತತ್ವಾತ್ ಲೋಹವತ್ ಅಧಿಷ್ಠಾತೃತ್ವಮ್ ॥ ೯೯ ॥

ಅನುವಾದ: ಪುರುಷನಿಗೆ ಸಾನ್ನಿಧ್ಯದಿಂದಲೇ ಗೌಣವಾದ ಅಧಿಷ್ಠಾತೃತ್ವವಾದರೆ ಮುಖ್ಯವಾದ ಅಧಿಷ್ಠಾತೃತ್ವ ಯಾರದ್ದು? ಈ ಆಕಾಂಕ್ಷೆಗೆ ಉತ್ತರ ಹೇಳಿದೆ–

(ಸೂತ್ರಾನುವಾದ) – ಅಂತಃಕರಣವು ಅಧಿಷ್ಠಾತೃತ್ವವನ್ನು ಪಡೆದಿರುತ್ತದೆ. ಕಾದ ಕಬ್ಬಿಣದಂತೆ ಚೇತನದಿಂದ ಅದು ಉಜ್ಜ್ವಲಿತವಾಗುತ್ತದೆ.

ಭಾಷ್ಯ: *ಅಂತಃಕರಣಸ್ಯ ಅನುಪಚರಿತಂ ಅಧಿಷ್ಠಾತೃತ್ವಂ ಸಂಕಲ್ಪಾದಿ ದ್ವಾರಕಂ ಪ್ರತ್ಯೇತವ್ಯಮ್ । ನನು ಅಧಿಷ್ಠಾತೃತ್ವಂ ಘಟಾದಿವತ್ ಅಚೇತನಸ್ಯ ನ ಯುಕ್ತಮ್ । ತತ್ರಾಹ ।*

ಅನುವಾದ: ಅಂತಃಕರಣವು ಗೌಣವಲ್ಲದ ಅಧಿಷ್ಠಾತೃ ಮತ್ತು ಅದನ್ನು ಸಂಕಲ್ಪಾದಿದ್ವಾರಾ ತಿಳಿಯಬೇಕು.

ಅಧಿಷ್ಠಾತೃತ್ವವನ್ನು ಗಡಿಗೆಯಂತೆ ಅಚೇತನಕ್ಕೆ ಒಪ್ಪುವುದು ಸರಿಯಲ್ಲ, ಅಲ್ಲವೇ?

ಭಾಷ್ಯ: *ಲೋಹವತ್ ತದುಜ್ಜ್ವಲಿತತ್ವಾದಿತಿ । ಅಂತಃಕರಣಂ ಹಿ ತಪ್ತಲೋಹ– ವತ್ ಚೇತನೋಜ್ಜ್ವಲಿತಂ ಭವತಿ । ಅತಪ್ತಸ್ಯ ಚೇತನಾಯ– ಮಾನತಯಾಽಧಿಷ್ಠಾತೃತ್ವಂ ಘಟಾದಿ ವ್ಯಾವೃತ್ತಮುಪಪದ್ಯತೇ ಇತ್ಯರ್ಥಃ ।*

ಅನುವಾದ: ಕಾದ ಕಬ್ಬಿಣದಂತೆ ಅದೂ ಬೆಳಗುತ್ತದೆ. ಅಂತಃಕರಣವು ಕಾದ ಕಬ್ಬಿಣದಂತೆ ಚೇತನದಿಂದ ಬೆಳಗುತ್ತದೆ. ಆದ್ದರಿಂದ ಅದು ಚೇತನದಂತೆ ಸಕ್ರಿಯವಾಗಿ ಅದರಲ್ಲಿ ಅಧಿಷ್ಠಾತೃತ್ವ ಪಡೆಯುತ್ತದೆ. ಅದು ಘಟಾದಿಗಳಂತೆ ಜಡವಾಗದೆ ಭಿನ್ನವಾಗಿ ಕಾಣುತ್ತದೆ.

ಭಾಷ್ಯ: *ನನ್ವೇವಂ ಚೇತನೇನ ಅಂತಃಕರಣಸ್ಯೋಜ್ಜ್ವಲನೇ ಚಿತೇಃ ಸಂಗಿತ್ವಮಗ್ನಿವದೇವ ಸ್ಯಾತ್ ।*

ಅನುವಾದ: ಚೈತನ್ಯದ ಮೂಲಕ ಅಂತಃಕರಣವನ್ನು ಪ್ರಜ್ವಲಗೊಳಿಸುವುದರಿಂದ ಅಗ್ನಿಯಂತೆ ಅದರ ಅಸಂಗಿತ್ವ ನಷ್ಟವಾಗುವುದಿಲ್ಲವೆ?

ಭಾಷ್ಯ: *ಇತಿ ಚೇನ್ನ । ನಿತ್ಯೋಜ್ಜ್ವಲಚೈತನ್ಯ ಸಂಯೋಗವಿಶೇಷ ಮಾತ್ರಸ್ಯ ಅಥವಾ ಸಂಯೋಗ ವಿಶೇಷಜನ್ಯ ಚೈತನ್ಯ ಪ್ರತಿಬಿಂಬಸ್ಯ ಏವ ಅಂತಃಕರಣೋಜ್ಜ್ವಲನರೂಪತ್ವಾತ್ । ನ ತು ಚೈತನ್ಯಂ ಅಂತಃಕರಣೇ ಸಂಕ್ರಾಮತಿ ಯೇನ ಸಂಗಿತಾ ಸ್ಯಾತ್ ।*

ಅನುವಾದ: ಅದು ಹಾಗಲ್ಲ. ಯಾವಾಗಲೂ ಬೆಳಗುವ ಚೈತನ್ಯದ ಸಂಯೋಗ ವಿಶೇಷದಿಂದಲೇ ಅಥವಾ ಸಂಯೋಗ ವಿಶೇಷದಿಂದ ಉಂಟಾದ ಚೈತನ್ಯದ ಪ್ರತಿಬಿಂಬದಿಂದಲೇ ಅಂತಃಕರಣವು ಬೆಳಗುವಂತೆ ಕಾಣುತ್ತದೆ. ಚೈತನ್ಯವು ಅಂತಃಕರಣವನ್ನು ಸೇರಿಹೋಗದು, ಅದರಿಂದ ಸಂಗಿತೆಯೂ ಸಂಭವಿಸದು.

ಭಾಷ್ಯ: *ಅಗ್ನೇರಪಿ ಹಿ ಪ್ರಕಾಶಾಧಿಕಂ ನ ಲೋಹೇ ಸಂಕ್ರಾಮತಿ ಕಿಂತ್ವಗ್ನಿಯೋಗವಿಶೇಷ ಏವ ಲೋಹಸ್ಯೋಜ್ಜ್ವಲನಮಿತಿ ।*

ಅನುವಾದ: ಅಗ್ನಿಯ ಪ್ರಕಾಶಾದಿಗಳು ಕಬ್ಬಿಣದಲ್ಲಿ ಸೇರಿಹೋಗವು. ಆದರೆ ಅಗ್ನಿಯ ಸಂಪರ್ಕ ವಿಶೇಷದಿಂದಲೇ ಕಬ್ಬಿಣವು ಬೆಳಗುವುದು.

ಭಾಷ್ಯ: *ನನ್ವೇವಮಪಿ ಸಂಯೋಗೇನ ಪರಿಣಾಮಿತ್ವಮಿತಿ ।*

ಅನುವಾದ: ಹಾಗಾದರೆ ಸಂಯೋಗದ ಕಾರಣ ಪರಿಣಾಮ ಉಂಟಾದಂತೆ ಅಲ್ಲವೆ?

ಭಾಷ್ಯ: *ಇತಿ ಚೇನ್ನ, ಸಾಮಾನ್ಯಗುಣಾತಿರಿಕ್ತಧರ್ಮೋತ್ಪತ್ತೌ ಏವ ಪರಿಣಾಮ ವ್ಯವಹಾರಾದ್ ಇತಿ ।*

ಅನುವಾದ: ಹಾಗಲ್ಲ, ಸಾಮಾನ್ಯ ಗುಣವನ್ನು ಮೀರಿ ಧರ್ಮದ ಉತ್ಪತ್ತಿಯಲ್ಲಿಯೇ ಪರಿಣಾಮದ ವ್ಯವಹಾರ ನಡೆಯುವುದು.

ಭಾಷ್ಯ: *ಅಯಂ ಚ ಸಂಯೋಗ ವಿಶೇಷೋಽಂತಃಕರಣಸ್ಯ ಏವ ಸತ್ತ್ವೋದ್ರೇಕರೂಪಾತ್ ಪರಿಣಾಮಾತ್ ಭವತೀತಿ ಫಲಬಲಾತ್ ಕಲ್ಪ್ಯತೇ । ಪುರುಷಸ್ಯಾಪರಿಣಾಮಿತ್ವೇನ ಸಂಯೋಗೇ ತನ್ನಿಮಿತ್ತಕ ವಿಶೇಷಾಸಂಭವಾತ್ ಇತಿ ।*

ಅಯಮೇವ ಚ ಸಂಯೋಗವಿಶೇಷೋ ಬುದ್ಧ್ಯಾತ್ಮನೋಃ
ಅನ್ಯೋನ್ಯ ಪ್ರತಿಬಿಂಬನೇ ಹೇತುಃ ।

ಅನುವಾದ: ಈ ಸಂಯೋಗ ವಿಶೇಷವು ಅಂತಃಕರಣದ ಸತ್ತ್ವಗುಣವನ್ನು ಉದ್ರೇಕಗೊಳಿಸುವ ಪರಿಣಾಮದಿಂದ ಉಂಟಾಗುತ್ತದೆ ಎಂಬುದನ್ನು ಫಲದ ಬಲದಿಂದ ತಿಳಿಯ ಬಹುದು. ಪುರುಷನು ಪರಿಣಾಮಕ್ಕೆ ಗುರಿಯಾಗದೆ ಇರುವುದರಿಂದ ಸಂಯೋಗದಲ್ಲಿ ಆ ನಿಮಿತ್ತದಿಂದ ಯಾವುದೇ ವಿಶೇಷ ಸಂಭವಿಸದು. ಈ ಸಂಯೋಗ ವಿಶೇಷವು ಬುದ್ಧಿ ಮತ್ತು ಆತ್ಮಗಳು ಅನ್ಯೋನ್ಯ ಪ್ರತಿಬಿಂಬದ ಕಾರಣ ಉಂಟಾಗುವುದು.

ಭಾಷ್ಯ: *ನನು ಪ್ರತಿಬಿಂಬಹೇತುತಯಾ ಸಂಯೋಗ ವಿಶೇಷಾವಶ್ಯಕತ್ವೇ ಪ್ರತಿಬಿಂಬಕಲ್ಪನಾ ವ್ಯರ್ಥಾ, ಪ್ರತಿಬಿಂಬ ಕಾರ್ಯಸ್ಯಾರ್ಥಜ್ಞಾನಾದೇಃ ಸಂಯೋಗವಿಶೇಷಾದೇವ ಸಂಭವಾದಿತಿ ಚೇತ್ ।*

ಅನುವಾದ: ಪ್ರತಿಬಿಂಬಕ್ಕೆ ಹೇತುರೂಪವಾಗಿ ಸಂಯೋಗ ವಿಶೇಷದ ಆವಶ್ಯಕತೆ ಇರಲು ಪ್ರತಿಬಿಂಬದ ಕಲ್ಪನೆ ವ್ಯರ್ಥ; ಏಕೆಂದರೆ ಪ್ರತಿಬಿಂಬ ಕಾರ್ಯಕ್ಕೆ ಅರ್ಥಜ್ಞಾನಾದಿಗಳು ಇವೆ, ಅವು ಸಂಯೋಗ ವಿಶೇಷದಿಂದಲೇ ಉಂಟಾಗುತ್ತವೆ, ಅಲ್ಲವೆ?

ಭಾಷ್ಯ: *ಮೈವಮ್ । ಬುದ್ಧೌ ಚೈತನ್ಯ ಪ್ರತಿಬಿಂಬಃ ಚೈತನ್ಯ–ದರ್ಶನಾರ್ಥಂ ಕಲ್ಪ್ಯತೇ, ದರ್ಪಣೇ ಮುಖಪ್ರತಿಬಿಂಬವತ್ ।*

ಅನುವಾದ: ಹಾಗಲ್ಲ. ಬುದ್ಧಿಯಲ್ಲಿ ಚೈತನ್ಯದ ಪ್ರತಿಬಿಂಬವು ಚೈತನ್ಯ ದರ್ಶನಾರ್ಥ ಮಾಡಲ್ಪಟ್ಟಿದೆ; ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ.

ಭಾಷ್ಯ: *ಅನ್ಯಥಾ ಕರ್ಮಕರ್ತೃವಿರೋಧೇನ ಸ್ವಸ್ಯ ಸಾಕ್ಷಾತ್ ಸ್ವದರ್ಶನ ಅನುಪಪತ್ತೇಃ ।*

ಅನುವಾದ: ಹಾಗಿಲ್ಲದಿದ್ದರೆ ಕರ್ಮ–ಕರ್ತೃ ವಿರೋಧವಾಗುವುದರಿಂದ ತನ್ನನ್ನೇ ತಾನು ಸಾಕ್ಷಾತ್ತಾಗಿ ಕಾಣುವುದು ಸಾಧ್ಯವಿಲ್ಲ.

ವಿವರಣೆ: ಕರ್ಮ ಮತ್ತು ಕರ್ತೃ ಎರಡೂ ಒಂದೇ ವಸ್ತುವಿನಲ್ಲಿ ಒಂದೇ ಕಾಲದಲ್ಲಿ ತೋರಲಾರವು.

ಭಾಷ್ಯ: *ಅಯಮೇವ ಚ ಚಿತ್ ಪ್ರತಿಬಿಂಬೋ ಬುದ್ಧೌ 'ಚಿಚ್ಛಾಯಾ–ಪತ್ತಿರಿತಿ', 'ಚೈತನ್ಯಾಧ್ಯಾಸ' ಇತಿ, 'ಚಿದಾವೇಶ' ಇತಿ ಚೋಚ್ಯತೇ । ಯಶ್ಚ ಚೇತನ್ಯೇ ಬುದ್ಧೇಃ ಪ್ರತಿಬಿಂಬಃ ಸ ಚ ಆರೂಢವಿಷಯೈಃ ಸಹ ಬುದ್ಧೇರ್ಭಾನಾರ್ಥಮಿಷ್ಯತೇ । ಅರ್ಥಾಕಾರ ...। ತಯಾರ್ಥಗ್ರ–ಹಣಸ್ಯ ಬುದ್ಧೇಃ ಸ್ಥಲೇ ದೃಷ್ಟತ್ವೇನ ತಾಂ ವಿನಾ ಸಂಯೋಗ ವಿಶೇಷಮಾತ್ರೇಣಾರ್ಥಭಾನಸ್ಯ ಪುರುಷೇऽಪಿ ಅನೌಚಿತ್ಯಾತ್ । ಅರ್ಥಾಕಾರಸ್ಯೈವ ಅರ್ಥಗ್ರಹಣ ಪರಿಣಾಮೋ ನ ಸಂಭವತೀತ್ಯರ್ಥಾತ್ ಪ್ರತಿಬಿಂಬರೂಪ ಏವ ಪರ್ಯವಸ್ಯತೀತಿ ದಿಕ್ ।*

ಅನುವಾದ: ಬುದ್ಧಿಯಲ್ಲಿ ಚೈತನ್ಯದ ಪ್ರತಿಬಿಂಬವು 'ಚಿದಾವೇಶ' ಎಂದು ಹೇಳುತ್ತಾರೆ. 'ಬುದ್ಧಿಯಲ್ಲಿ ಚೈತನ್ಯದ ಛಾಯೆ ಬೀಳುವುದು', 'ಚೈತನ್ಯದ ಆರೋಪ', 'ಚೈತನ್ಯದ ಆಕ್ರಮಣ' ಎಂದೂ ಹೇಳುವರು. ಚೈತನ್ಯದಲ್ಲಿ ಬುದ್ಧಿಯ ಪ್ರತಿಬಿಂಬವು ಬಿದ್ದಾಗ ಬುದ್ಧಿಯು ಆರೂಢ ವಿಷಯುಗಳೊಡನೆ ಅದರ ತೋರಿಕೆಯುನ್ನೂ ಉದ್ದೇಶಿಸಲಾಗುತ್ತದೆ. ಬುದ್ಧಿಯು ಪದಾರ್ಥವನ್ನು ಗ್ರಹಿಸಿದಾಗ ಅದರ ಆಕಾರವನ್ನು ಪಡೆಯುವುದರಿಂದ ಬುದ್ಧಿಯ ಸ್ಥಳದಲ್ಲಿ ಅದರ ಆಕಾರವಿಲ್ಲದೆ ಕೇವಲ ಸಂಯೋಗ ವಿಶೇಷ ಮಾತ್ರದಿಂದ ಪದಾರ್ಥದ ತೋರಿಕೆಯು ಪುರುಷನಲ್ಲಿ ಸಾಧ್ಯವಾಗಲಾರದು. 'ಅರ್ಥಗ್ರಹಣ'ವೆಂದರೆ ಅರ್ಥಾಕಾರವನ್ನು ಪಡೆಯುವುದು. ಆದರೆ ಆ ಅರ್ಥಾಕಾರದ ರೂಪ ಪುರುಷನಲ್ಲಿ ಪರಿಣಾಮಗೊಳ್ಳದು. ಹಾಗೆಂದರೆ ಪ್ರತಿಬಿಂಬ ರೂಪದಲ್ಲಿ ಮಾತ್ರ ಪರ್ಯವಸಾನಗೊಳ್ಳುವುದು ಎಂದು ಮುಕ್ತಾಯ ಮಾಡೋಣ.

ಭಾಷ್ಯ: *ಸ ಚಾಯಮನ್ಯೋನ್ಯ ಪ್ರತಿಬಿಂಬೋ ಯೋಗಭಾಷ್ಯೇ (೨–೨೦, ೪–೨೨) ವ್ಯಾಸದೇವೈಃ ಸಿದ್ಧಾಂತಿತಃ । 'ಚಿತಿಶಕ್ತಿಃ ಅಪರಿಣಾಮಿನಿ ಅಪ್ರತಿಸಂಕ್ರಮಾ ಚ ಪರಿಣಾಮಿನ್ಯರ್ಥೇ ಪ್ರತಿಸಂಕ್ರಾಂತೇವ ತದ್ವೃತ್ತಿಮನುಪತತಿ । ತಸ್ಯಾಶ್ಚ ಪ್ರಾಪ್ತ ಚೈತನ್ಯೋಪಗ್ರಹರೂಪಾಯಾಃ ಬುದ್ಧಿವೃತ್ತೇಃ ಅನುಕಾರಿ– ಮಾತ್ರತಯಾ ಬುದ್ಧಿವೃತ್ತ್ಯವಿಶಿಷ್ಟಾ ಹಿ ಜ್ಞಾನವೃತ್ತಿರಿತ್ಯಾ ಖ್ಯಾಯತೇ' ಇತ್ಯಾದಿನಾ । ಯೋಗವಾರ್ತಿಕೇ (೨–೨೦) ಚ ಏತದ್ವಿಸ್ತರತೋ ಅಸ್ಮಾಭಿಃ ಪ್ರತಿಪಾದಿತಮ್ ।*

ಅನುವಾದ: ಅನ್ಯೋನ್ಯ ಪ್ರತಿಬಿಂಬದ ಈ ವಾದವನ್ನು ವ್ಯಾಸದೇವನು ಯೋಗಭಾಷ್ಯದಲ್ಲಿ ಹೀಗೆ ಹೇಳಿದ್ದಾನೆ. 'ಚಿತಿ ಶಕ್ತಿಯು ಪರಿಣಾಮ ಹೊಂದದು, ಬೇರೊಂದು ಪದಾರ್ಥಕ್ಕೆ ಹೋಗದು, ಆದರೆ ಪರಿಣಾಮ ಹೊಂದುವಂತೆ ಮತ್ತು ಬೇರೆ ಪದಾರ್ಥಕ್ಕೆ ಹೋದಂತೆ ಅದರ ವೃತ್ತಿಯಿಂದ ತೋರುತ್ತದೆ. ಬುದ್ಧಿವೃತ್ತಿಯೂ ಸಹ ಚೈತನ್ಯದ ಸಂಬಂಧವನ್ನು ಪಡೆದು ಅದರಂತೆ (ಚೈತನ್ಯದಂತೆ) ಆಗುವುದು. ಚೈತನ್ಯವನ್ನು ಪಡೆದ ಬುದ್ಧಿವೃತ್ತಿಯ ಅನುಕರಣೆಯಿಂದಲೇ ಬುದ್ಧಿವೃತ್ತಿಯಿಂದ ಬೇರೆಯಾಗದಂತೆ ಚೈತನ್ಯವು ಉಳಿಯುವುದರಿಂದ ಇದನ್ನು ಜ್ಞಾನವೃತ್ತಿಯೆನ್ನುವರು. ಯೋಗವಾರ್ತಿಕದಲ್ಲಿ ಇದನ್ನು ನಾವು ವಿಸ್ತಾರವಾಗಿ ಪ್ರತಿಪಾದಿಸಿದ್ದೇವೆ.

ಭಾಷ್ಯ: *ಕಶ್ಚಿತ್ತು 'ಬುದ್ಧಿಗತಯಾ ಚಿಚ್ಛಾಯಯಾ ಬುದ್ಧೇರೇವ ಸರ್ವಾರ್ಥಜ್ಞಾತೃತ್ವಂ ಇಚ್ಛಾದಿಭಿರ್ಜ್ಞಾನಸ್ಯ ಸಾಮಾನಾಧಿ– ಕರಣ್ಯಾನುಭವಾದನ್ಯಸ್ಯ ಜ್ಞಾನೇನಾನ್ಯಸ್ಯ ಪ್ರಕೃತ್ಯನೌಚಿತ್ವಾತ್ ಇತ್ಯಾಹ । ತತ್ ಆತ್ಮಾಜ್ಞಾನ ಮೂಲಕತ್ವಾತ್ ಉಪೇಕ್ಷಣೀಯಮ್ । ಏವಂ ಹಿ ಬುದ್ಧೇರೇವ ಜ್ಞಾತೃತ್ವೇ 'ಚಿದವಸಾನೋ ಭೋಗಃ' (೧–೧೦೪) ಇತ್ಯಾಗಾಮಿಸೂತ್ರದ್ವಯವಿರೋಧಃ । ಪುರುಷೇ*

ಪ್ರಮಾಣಾಭಾವಶ್ಚ, ಪುರುಷಲಿಂಗಸ್ಯ ಭೋಗಸ್ಯ ಬುದ್ಧೌ ಏವ ಸ್ವೀಕಾರಾತ್ ।

ಅನುವಾದ: ಮತ್ತೊಬ್ಬರ ಹೇಳಿಕೆಯೆಂದರೆ– 'ಬುದ್ಧಿಯಲ್ಲಿ ಆಗುವ ಚಿತ್‌ಪ್ರತಿಬಿಂಬದ ಕಾರಣ ಸರ್ವಾರ್ಥಜ್ಞಾತೃತ್ವವು ಇಚ್ಛೆಯೇ ಮೊದಲಾದ ಜ್ಞಾನದ ಸಾಮಾನಾಧಿಕರಣ್ಯದ ಅನುಭವದ ಮೂಲಕ ಬೇರೆಯ ಜ್ಞಾನದಿಂದ ಬೇರೆಯ ಪ್ರವೃತ್ತಿಯು ಉಂಟಾಗುವುದು ಉಚಿತವಲ್ಲ' ಎಂದು. ಇದು ಆತ್ಮಜ್ಞಾನದ ಅಭಾವದ ಮೂಲಕವಾದ್ದರಿಂದ ಗಮನ ನೀಡಬೇಕಾಗಿಲ್ಲ. ಹೀಗೆಯೇ ಬುದ್ಧಿಯೇ ತಿಳಿಯುವುದು ಎನ್ನುವುದಾದರೆ 'ಚಿದವಸಾನೋ ಭೋಗಃ' (೧–೧೦೪) ಎಂದು ಮುಂದೆ ಬರುವ ಸೂತ್ರಕ್ಕೆ ವಿರುದ್ಧವಾಗುವುದು. ಬುದ್ಧಿಯೇ ಭೋಗವನ್ನು ಅನುಭವಿಸುವುದೆಂದು ಸ್ವೀಕರಿಸಿದರೆ ಪುರುಷನ ಅಸ್ತಿತ್ವ ಪ್ರಮಾಣ ಶೂನ್ಯವಾಗುವುದು.

ವಿವರಣೆ: ಇಲ್ಲಿ ಸಾಮಾನಾಧಿಕರಣ್ಯ ಎಂದರೆ ಎರಡು ಪದಾರ್ಥಗಳು ಒಂದೇ ಆಶ್ರಯವನ್ನು ಹೊಂದಿರುವ ಸಂದರ್ಭ ಜ್ಞಾನ ಮತ್ತು ಇಚ್ಛೆ ಎರಡೂ ಬುದ್ಧಿಯನ್ನು ಆಶ್ರಯಿಸಿದರೆ ಪ್ರವೃತ್ತಿಯುಂಟಾಗುವುದು ಅನುಚಿತವಾಗುವುದು.

ಭಾಷ್ಯ: *ನ ಚ ಪ್ರತಿಬಿಂಬಾನ್ಯಥಾನುಪಪತ್ತ್ಯಾ ಬಿಂಬಭೂತಃ ಪುರುಷಃ ಸೇತ್ಸ್ಯತಿ ವಾಚ್ಯಮ್ । ಅನ್ಯೋನ್ಯಾಶ್ರಯಾತ್ ।*

ಅನುವಾದ: ಪ್ರತಿಬಿಂಬವನ್ನು ಬಿಟ್ಟು ಬೇರೇನೂ ಇಲ್ಲದಿರುವುದರಿಂದ ಬಿಂಬಭೂತವಾದ ಪುರುಷನೇ ಸಿದ್ಧವಾಗುವುದು ಎಂದು ಹೇಳುವುದು ಸಾಧ್ಯವಾಗದು; ಅನ್ಯೋನ್ಯಾಶ್ರಯದ ಕಾರಣ.

ಭಾಷ್ಯ: *ಪೃಥಗ್ಬಿಂಬಸಿದ್ಧೌ ಬುದ್ಧಿಸ್ಥಚೈತನ್ಯಸ್ಯ ಪ್ರತಿಬಿಂಬತಾ ಸಿದ್ಧಿಃ ಪ್ರತಿಬಿಂಬತಾಸಿದ್ಧೌ ಚ ತತ್ಪ್ರತಿಯೋಗಿತಯಾ ಬಿಂಬ ಸಿದ್ಧಿರಿತಿ ।*

ಅನುವಾದ: ಬೇರೆಯ ಬಿಂಬವನ್ನು ಸಿದ್ಧಿಸಿದರೆ ಬುದ್ಧಿಯಲ್ಲಿರುವ ಚೈತನ್ಯದ ಪ್ರತಿಬಿಂಬವು ಸಿದ್ಧವಾಗುವುದು. ಪ್ರತಿಬಿಂಬವು ಸಿದ್ಧವಾದರೆ ಅದರ ಪ್ರತಿಯೋಗಿಯಾಗಿ ಬಿಂಬವು ಸಿದ್ಧವಾಗುವುದು.

ವಿವರಣೆ: ಇಲ್ಲಿ ಅನ್ಯೋನ್ಯಾಶ್ರಯದೋಷ ಹೀಗಾಗುವುದು. (ಪುರುಷನನ್ನು) ಬಿಂಬವೆಂದು ಒಪ್ಪಿದರೆ ಪ್ರತಿಬಿಂಬವನ್ನು ಆಶ್ರಯಿಸಬೇಕಾಗುವುದು. ಪ್ರತಿಬಿಂಬವು ಬಿಂಬವನ್ನು ಆಶ್ರಯಿಸಬೇಕಾಗುವುದು.

ಪ್ರತಿಯೋಗಿಯಾಗಿ ಎಂದರೆ ಬಿಂಬದ ಅಭಾವಕ್ಕೆ ಬಿಂಬ ಪ್ರತಿಯೋಗಿ.

ಭಾಷ್ಯ: *ಅಸ್ಮನ್ಮತೇ ಚ ಜ್ಞಾತೃತಯಾ ಪುರುಷಸಿದ್ಧ್ಯನಂತರಂ ತಸ್ಯ ಜ್ಞೇಯತ್ವ ಅನ್ಯಥಾನುಪಪತ್ತ್ಯಾ ಪ್ರತಿಬಿಂಬಸಿದ್ಧೌ ನ ಅನ್ಯೋನ್ಯಾಶ್ರಯಃ ।*

ಅನುವಾದ: ನಮ್ಮ ದೃಷ್ಟಿಯಲ್ಲಿ ಜ್ಞಾತೃವೆಂಬ ಸ್ಥಿತಿಯಲ್ಲಿ ಪುರುಷನನ್ನು ಸಿದ್ಧಿಸಿದರೆ ಅದನ್ನು ತಿಳಿಯಲು ಬೇರೆ ವಿಧಾನವಿಲ್ಲದಿರುವುದರಿಂದ ಪ್ರತಿಬಿಂಬವು ಸಿದ್ಧಿಸುವುದರಲ್ಲಿ ಅನ್ಯೋನ್ಯಾಶ್ರಯವಿರದು.

ಭಾಷ್ಯ: *ಅಥ ವೃತ್ತಿ ಸಾಕ್ಷಿತಯಾ ಬಿಂಬರೂಪಶ್ಚೇತನಃ ಸಿದ್ಧ್ಯತೀತಿ ಚೇತ್, ತರ್ಹಿ ಸಾಕ್ಷಿಣಃ ಏವ ಪ್ರಮಾತೃತ್ವಮಪ್ಯುಚಿತಮ್ । ಉಭಯೋಃ ಜ್ಞಾತೃತ್ವಕಲ್ಪನೇ ಗೌರವಾತ್ । ವೃತ್ತಿಜ್ಞಾನ ಘಟಜ್ಞಾನಯೋಃ ಸಾಮಾನ್ಯಾಧಿಕರಣ್ಯಾನುಭವಾಚ್ಚ*

ಅನುವಾದ: ಇನ್ನು ವೃತ್ತಿಯ ಸಾಕ್ಷಿಯನ್ನು ತೆಗೆದುಕೊಂಡಲ್ಲಿ ಚೇತನವು ಸಿದ್ಧಿಸುತ್ತದೆ ಎಂದರೆ ಸಾಕ್ಷಿಯನ್ನೇ ಪ್ರಮಾತೃವೆಂದುಕೊಳ್ಳುವುದು ಉಚಿತ. ಏಕೆಂದರೆ ಎರಡನ್ನೂ (ಪುರುಷ ಮತ್ತು ವೃತ್ತಿಸಾಕ್ಷಿ) ಜ್ಞಾತೃವೆಂದು ತಿಳಿಯುವುದು ಅನಗತ್ಯವಾಗುವುದು ಅಲ್ಲದೆ ವೃತ್ತಿಜ್ಞಾನ ಮತ್ತು ಘಟಜ್ಞಾನಗಳಲ್ಲಿ ಸಾಮಾನಾಧಿಕರಣ್ಯದ ಅನುಭವವಿರುವುದು.

ಭಾಷ್ಯ: *ಕಿಂಚ ಏವಂ ಸತಿಬುದ್ಧೇರೇವ ಭೋಕ್ತೃತ್ವೇ 'ಭೋಕ್ತೃ-ಭಾವಾತ್ (೧-೧೪೩) ಇತ್ಯಾದಿಗಾಮಿ ಸೂತ್ರೇಣ ಭೋಕ್ತೃತಯಾ ಪುರಷಸಾಧನಂ ವಿರುದ್ಧ್ಯೇತ । ಅಥಬುದ್ಧಿಗತ ಚಿಚ್ಛಾಯಾ ರೂಪೇಣ ಸಂಬಂಧೇನ ಬಿಂಬಸ್ಯೈವ ಜ್ಞಾನಂ, ನ ತು ಚಿತೌ ಬುದ್ಧಿಪ್ರತಿಬಿಂಬಃ ಕಲ್ಪ್ಯತ ಇತ್ಯೇತಾವನ್ಮಾತ್ರತಯಾ ಚೇತ್ ತಸ್ಯಾಶಯೋ ವರ್ಣ್ಯೇತ ।*

ಅನುವಾದ: ಅಲ್ಲದೆ ಬುದ್ಧಿಯಲ್ಲೇ ಭೋಕ್ತೃತ್ವವಿದ್ದರೆ 'ಭೋಕ್ತೃಭಾವಾತ್' ಎಂಬ ಮುಂದೆ ಬರುವ ಸೂತ್ರದ ಮೂಲಕ ಭೋಕ್ತೃವಾಗಬೇಕಾದ ಪುರುಷನನ್ನು ಸಿದ್ಧಿಸುವುದಕ್ಕೆ ವಿರುದ್ಧವಾಗುವುದು. ಮುಂದೆ ಬುದ್ಧಿಯಲ್ಲಿರುವ ಚಿತ್ ಛಾಯೆಯ ರೂಪದ ಸಂಬಂಧ ದಿಂದ ಬಿಂಬಕ್ಕೇ ಜ್ಞಾನವುಂಟಾಗುವುದು, ಚೇತನದಲ್ಲಿ ಬುದ್ಧಿಯ ಪ್ರತಿಬಿಂಬದ ಕಲ್ಪನೆಯನ್ನು ಮಾಡಬೇಕಾಗಿಲ್ಲ. ಇಷ್ಟೇ ಈ ಸೂತ್ರದ ಆಶಯವಾದೀತು.

ಭಾಷ್ಯ: *ತದಪ್ಯಸತ್ । ಸೂರ್ಯಾದೇಃ ಸ್ವಪ್ರತಿಬಿಂಬ ರೂಪಸಂಬಂಧೇನ ಜಲಾದಿತತ್‌ಸ್ಥವಸ್ತು ಭಾಸಕತ್ವಾದರ್ಶನಾತ್, ಕಿರಣೈರೇವತದುಭಯ ಭಾಸನಾತ್ । ಮರುಮರೀಚಿಕಾದೌ ತು ಸ್ವಾದ್ಯಸ್ತಜಲಾದಿಭಾಸಕತ್ವಂ ದೃಷ್ಟಮೇವೇತಿ ದೃಷ್ಟಾನುಸಾರೇಣ ಅಸ್ಮಾಭಿಶ್ಚಿತೌ ಬುದ್ಧಿ ಪ್ರತಿಬಿಂಬ ಏವ ಸರ್ವಾರ್ಥಭಾನ ಹೇತುತಯಾ ಸಂಬಂಧಃ ಕಲ್ಪಿತಃ ಇತಿ ।*

ಅನುವಾದ: ಅದೂ ಸರಿಯಲ್ಲ. ತನ್ನ ಪ್ರತಿಬಿಂಬ ಸಂಬಂಧದ ರೂಪದಿಂದ ಸೂರ್ಯಾದಿ ಗಳಲ್ಲಿ ಮತ್ತು ಅದರಲ್ಲಿರುವ ವಸ್ತುಗಳು ತೋರಿಬರದಿರುವುದರಿಂದ ಸೂರ್ಯನ ಕಿರಣಗಳಿಂದಷ್ಟೇ ಅವೆರಡೂ ಬೆಳಗುತ್ತವೆ (ನೀರು ಮತ್ತು ನೀರೊಳಗಿರುವ ವಸ್ತು

ಪ್ರತಿಬಿಂಬ). ಮರುಭೂಮಿಯ ಮರೀಚಿಕೆ ಮುಂತಾದುವುಗಳಲ್ಲಿ ತಮ್ಮಿಂದಲೇ ಅಧ್ಯಾಸಗೊಂಡ ನೀರೇ ಮೊದಲಾದುವು ಬೆಳಗುವುದು ಎಲ್ಲರೂ ನೋಡಿರುವುದೇ! ಈ ಪ್ರತ್ಯಕ್ಷ ಅನುಭವದ ಪ್ರಕಾರ ನಾವೂ ಸಹ ಚೇತನದಲ್ಲಿ ಬುದ್ಧಿಪ್ರತಿಬಿಂಬದ ಕಾರಣ ಸಂಬಂಧವನ್ನು ಕಲ್ಪಿಸಿದ್ದೇವೆ.

ಭಾಷ್ಯ: *ಯಥೋಕ್ತಮನ್ಯಸ್ಯ ಜ್ಞಾನೇನ ಅನ್ಯಸ್ಯ ಪ್ರವೃತ್ತ್ಯನುಪಪತ್ತಿರಿತಿ ।*

ಅನುವಾದ: ನೀವು ಹೇಳಿದಂತೆ ಬೇರೆಯವರ ಜ್ಞಾನದಿಂದ ಬೇರೆಯವರ ಪ್ರವೃತ್ತಿಯು ಸಲ್ಲದು.

ಭಾಷ್ಯ: *ತದಪಿನ । 'ಅಕರ್ತುರಪಿ ಫಲೋಪಭೋಗಾನ್ನಾದ್ಯಮ್ (೧–೧೦೫) ಇತ್ಯಾಗಾಮಿಸೂತ್ರೇಣ ಜ್ಞಾನಪ್ರವೃತ್ತ್ಯೋಃ ವೈಯಧಿಕರಣ್ಯಸ್ಯ ದೃಷ್ಟಾಂತೇನ ಉಪಪಾದಯಿಷ್ಯಮಾಣತ್ವಾತ್ । ಬುದ್ಧೇಃ ಸಂಕಲ್ಪೇನ ದೇಹಕ್ರಿಯಾಯಾಮಿವಾತ್ರಾಪಿ ಸಂಯೋಗ–ವಿಶೇಷಾದೇರೇವ ನಿಯಾಮಕತ್ವಾದಿತಿ ।*

ಅನುವಾದ: ಅದೂ ಸರಿಯಲ್ಲ. 'ಕಾರ್ಯಕರ್ತನಿಲ್ಲದಿದ್ದರೂ ಫಲದ ಭೋಗ ದೊರೆಯುವುದು, ಅನ್ನಾದಿಗಳಂತೆ' ಎಂಬ ಮುಂದೆ ಬರುವ ಸೂತ್ರದಂತೆ ಜ್ಞಾನ–ಪ್ರವೃತ್ತಿಗಳು ಬೇರೆ ಬೇರೆ ಆಶ್ರಯದಲ್ಲಿರುವ ದೃಷ್ಟಾಂತದೊಡನೆ (ಮುಂದೆ) ಪ್ರತಿಪಾದಿಸುತ್ತಾರೆ. ಬುದ್ಧಿಯ ಸಂಕಲ್ಪದಿಂದ ದೇಹದ ಕ್ರಿಯೆಯಲ್ಲಿ ಇರುವಂತೆ ಇಲ್ಲೂ ಸಹ ಸಂಯೋಗ ವಿಶೇಷ ಮುಂತಾದುವುಗಳ ಮೂಲಕ ನಿಯಾಮಕತೆ ಇರುತ್ತದೆ.

ಭಾಷ್ಯ: *ಪ್ರತ್ಯಕ್ಷಪ್ರಮಾಣಂ ಲಕ್ಷಯಿತ್ವಾ ಅನುಮಾನಂ ಲಕ್ಷಯತಿ ।*

ಸೂತ್ರ: ಪ್ರತಿಬಂಧದೃಶಃ ಪ್ರತಿಬದ್ಧಜ್ಞಾನಮನುಮಾನಮ್ ॥ ೧೦೦ ॥

ಅನುವಾದ: ಪ್ರತ್ಯಕ್ಷ ಪ್ರಮಾಣವನ್ನು ತಿಳಿಸಿ ಅನುಮಾನವನ್ನು ತಿಳಿಸುತ್ತಾರೆ.

ಸೂತ್ರಾನುವಾದ: ವ್ಯಾಪ್ತಿಯ ಜ್ಞಾನವನ್ನು ಅರಿತವನಿಗೆ ದೊರೆಯುವ ವ್ಯಾಪಕ ಜ್ಞಾನವು ಅನುಮಾನ.

ಭಾಷ್ಯ: *ಪ್ರತಿಬಂಧೋವ್ಯಾಪ್ತಿಃ । ವ್ಯಾಪ್ತಿದರ್ಶನಾತ್ ವ್ಯಾಪಕಜ್ಞಾನಂ ವೃತ್ತಿರೂಪಮನುಮಾನಂ ಪ್ರಮಾಣಮಿತ್ಯರ್ಥಃ । ಅನುಮಿತಿಸ್ತು ಪೌರುಷೇಯೋ ಬೋಧಃ ।*

ಅನುವಾದ: ಪ್ರತಿಬಂಧವೆಂದರೆ ವ್ಯಾಪ್ತಿ. ವ್ಯಾಪ್ತಿಯನ್ನು ಕಾಣುವುದರಿಂದ ವ್ಯಾಪಕ ಜ್ಞಾನವುಂಟಾಗುವುದು. ಅದು ವೃತ್ತಿರೂಪದ ಅನುಮಾನವೆನ್ನುವ ಪ್ರಮಾಣವು. ಅನುಮಿತಿಯಾದರೋ ಪೌರುಷೇಯವಾದ ಬೋಧವು.

ವಿವರಣೆ: ವ್ಯಾಪ್ಯ ಎಂದರೆ ಹೇತು. ಪರ್ವತೋ ವಹ್ನಿಮಾನ್ ಧೂಮತ್ವಾತ್ ಎಂಬಲ್ಲಿ ಧೂಮ ವ್ಯಾಪ್ಯ, ವ್ಯಾಪಕ ಎಂದರೆ ಸಾಧ್ಯ. ಮೇಲೆ ಹೇಳಿದ ವಾಕ್ಯದಲ್ಲಿ ವಹ್ನಿ,

ಸಾಧ್ಯ ಅಥವಾ ವ್ಯಾಪಕ. ವ್ಯಾಪ್ಯ–ವ್ಯಾಪಕಗಳ ನಿಯತ ಸಂಬಂಧ ವ್ಯಾಪ್ತಿ. ಪೌರುಷೇಯ ಬೋಧವೆಂದರೆ ಪುರುಷನಿಗೆ ಅರಿವಾಗುವುದು.

ಭಾಷ್ಯ: *ಶಬ್ದ ಪ್ರಮಾಣಂ ಲಕ್ಷಯತಿ*

ಶಬ್ದಪ್ರಮಾಣವನ್ನು ಕುರಿತು ಹೇಳಿದೆ.

ಸೂತ್ರ: ಆಪ್ತೋಪದೇಶಃ ಶಬ್ದಃ ॥ ೧೦೧ ॥

ಅನುವಾದ: ಸತ್ಯ ನುಡಿಯುವವನ ಮಾತು ಶಬ್ದ (ಪ್ರಮಾಣ)

ಭಾಷ್ಯ: *ಆಪ್ತಿರತ್ರ ಯೋಗ್ಯತಾ । ವೇದಸ್ಯಾಪೌರುಷೇಯತಾಯಾಃ ಪಂಚಮಾಧ್ಯಾಯೇ (೫–೪೬–೫೦) ವಕ್ಷ್ಯಮಾಣತ್ವಾತ್ । ತಥಾಚ ಯೋಗ್ಯ ಶಬ್ದಃ ತಜ್ಜನ್ಯಂ ಜ್ಞಾನಂ ಶಬ್ದಾಖ್ಯಂ ಪ್ರಮಾಣಂ ಇತ್ಯರ್ಥಃ । ಫಲಂ ಚ ಪೌರುಷೇಯಃ ಶಾಬ್ದಃ ಬೋಧಃ ಇತಿ ।*

ಅನುವಾದ: 'ಆಪ್ತಿ' ಎಂದರೆ ಯೋಗ್ಯತೆ. ವೇದದ ಅಪೌರುಷೇಯತ್ವ ಐದನೆಯ ಅಧ್ಯಾಯ ದಲ್ಲಿ ಹೇಳಲ್ಪಟ್ಟಿದೆ. ಹಾಗೆಯೇ ಯೋಗ್ಯ ಶಬ್ದವೆಂದರೆ ಅದರಿಂದುಂಟಾಗುವ ಜ್ಞಾನ ಎಂದು ಅರ್ಥ. ಫಲವೂ ಸಹ 'ಪೌರುಷೇಯ ಶಾಬ್ದಬೋಧ' ಎಂದು.

ಭಾಷ್ಯ: *ಪ್ರಮಾಣ ಪ್ರತಿಪಾದನಸ್ಯ ಸ್ವಯಮೇವ ಫಲಮಾಹ–*

ಅನುವಾದ: ಪ್ರಮಾಣವನ್ನು ಪ್ರತಿಪಾದಿಸುವುದರಿಂದ ಆಗುವ ಫಲವನ್ನು ಸೂತ್ರಕಾರರೇ ಹೇಳಿದ್ದಾರೆ.

ಸೂತ್ರ: ಉಭಯಸಿದ್ಧಿಃ ಪ್ರಮಾಣಾತ್ ತದುಪದೇಶಃ ॥ ೧೦೨ ॥

ಅನುವಾದ: ಉಭಯಸಿದ್ಧಿಯು ಪ್ರಮಾಣದಿಂದಲೇ ಆಗುವುದರಿಂದ ಅದನ್ನು ಹೇಳಲಾಗಿದೆ.

ವಿವರಣೆ: ಉಭಯಸಿದ್ಧಿ ಎಂದರೆ ಚೇತನ ಮತ್ತು ಅಚೇತನಗಳ ಸಿದ್ಧಿ.

ಭಾಷ್ಯ: *ಉಭಯೋಃ ಆತ್ಮಾನಾತ್ಮಯೋಃ ವಿವೇಕೇನ ಸಿದ್ಧಿಃ ಪ್ರಮಾಣಾತ್ ಏವ ಭವತಿ । ಅತಸ್ತಸ್ಯ–ಪ್ರಮಾಣಸ್ಯ ಉಪದೇಶಃ ಕೃತಃ ಇತ್ಯರ್ಥಃ ।*

ಅನುವಾದ: ಎರಡೂ ಆತ್ಮ–ಅನಾತ್ಮಗಳನ್ನು ವಿವೇಕದಿಂದ ಸಿದ್ಧಿಸುವುದು ಪ್ರಮಾಣದಿಂದ ಆಗುತ್ತದೆ. ಆದ್ದರಿಂದ ಪ್ರಮಾಣವನ್ನು ಕುರಿತು ಹೇಳಲಾಗಿದೆ ಎಂದರ್ಥ.

ಭಾಷ್ಯ: *ತತ್ರ ಯೇನಾನುಮಾನವಿಶೇಷೇಣ ಪ್ರಮಾಣೇನ ಸಿದ್ಧಿಃ ಮುಖ್ಯತೋಽತ್ರ ಪ್ರಕೃತಿ–ಪುರುಷೌ ವಿಚಿತ್ಯ ಸಾಧನೀಯೌ ತದ್ವರ್ಣಯತಿ ।*

ಅನುವಾದ: ಈ ವಿಷಯದಲ್ಲಿ ಯಾವ ಅನುಮಾನ ವಿಶೇಷದಿಂದ ಮುಖ್ಯವಾಗಿ ಪ್ರಕೃತಿ–ಪುರುಷರನ್ನು ಬೇರೆ ಬೇರೆಯಾಗಿ ಸಿದ್ಧಮಾಡಬೇಕೋ ಅದನ್ನು ವರ್ಣಿಸಲಾಗಿದೆ.

ಸೂತ್ರ: ಸಾಮಾನ್ಯತೋದೃಷ್ಟಾದುಭಯಸಿದ್ಧಿಃ ॥ ೧೦೩ ॥

ಅನುವಾದ: ಸಾಮಾನ್ಯತೋದೃಷ್ಟ– ಅನುಮಾನದಿಂದ ಎರಡೂ ಸಿದ್ಧಿಸುತ್ತವೆ. (ಚೇತನ– ಅಚೇತನಗಳು ಸಿದ್ಧಿಸುತ್ತವೆ.)

ಭಾಷ್ಯ: *ಅನುಮಾನಂ ತಾವತ್ ತ್ರಿವಿಧಂ ಭವತಿ । ಪೂರ್ವವತ್, ಶೇಷವತ್, ಸಾಮಾನ್ಯತೋದೃಷ್ಟಂ ಚೇತಿ ।*

ಅನುವಾದ: ಅನುಮಾನ ಮೂರು ಬಗೆ, ಪೂರ್ವವತ್, ಶೇಷವ್ ಮತ್ತು ಸಾಮಾನ್ಯತೋದೃಷ್ಟ.

ಭಾಷ್ಯ: *ತತ್ರ ಪ್ರತ್ಯಕ್ಷೀಕೃತ ಜಾತೀಯವಿಷಯಕಂ ಪೂರ್ವವತ್ । ಯಥಾ ಧೂಮೇನ ವಹ್ನ್ಯನುಮಾನಮ್ । ವಹ್ನಿಜಾತೀಯೋಹಿಮಹಾನಸಾದೌ ಪೂರ್ವಂ ಪ್ರತ್ಯಕ್ಷೀಕೃತಃ ।*

ಅನುವಾದ: ಅದರಲ್ಲಿ ಪ್ರತ್ಯಕ್ಷವಾಗಿ ಕಂಡ ತನ್ನ ಜಾತಿಯ ಪದಾರ್ಥವನ್ನು ಕುರಿತದ್ದು ಪೂರ್ವವತ್ । ಹೊಗೆಯಿಂದ ಅಗ್ನಿಯನ್ನು ಅನುಮಾನ ಮಾಡುವುದು. ಅಗ್ನಿಯ ಜಾತಿಯನ್ನು ಅಡಿಗೆಮನೆಯಲ್ಲಿ ಮೊದಲೇ ಪ್ರತ್ಯಕ್ಷವಾಗಿ ಕಂಡಿದ್ದುಂಟು.

ವಿವರಣೆ: 'ಜಾತಿ' ಎಂದರೆ ಸಮಾನವಾದ ಆಕಾರವನ್ನು ಬುದ್ಧಿಯಲ್ಲಿ ಮೂಡಿಸಬಲ್ಲ ಯೋಗ್ಯತೆ. ಉದಾಹರಣೆಗೆ ಗೋತ್ವ ಗೋವಿನ ಜಾತಿ.

ಭಾಷ್ಯ: *ವ್ಯತಿರೇಕಾನುಮಾನಂ ಶೇಷವತ್ । ಶೇಷೋಽಪೂರ್ವೋರ್ಥೋ ಅಸ್ಯ ವಿಷಯತ್ವೇನ ಅಸ್ತೀತಿ ಶೇಷವತ್ । ಅಪ್ರಸಿದ್ಧಸಾಧ್ಯಕಂ ಇತಿ ಯಾವತ್ । ಯಥಾ ಪೃಥಿವೀತ್ವೇನ ಇತರ ಭೇದಾನುಮಾನಂ ಪೃಥಿವೀತರಭೇದೋ ಹಿ ಪ್ರಮಾಣಸಿದ್ಧಃ ।*

ವಿವರಣೆ: ವ್ಯತಿರೇಕ ಅನುಮಾನವನ್ನು ಶೇಷವತ್ ಎನ್ನುವರು. 'ಶೇಷವತ್' ಎಂದರೆ 'ಅಪೂರ್ವವಾದ ಅರ್ಥ ಅಥವಾ ವಿಷಯದಿಂದ ಕೂಡಿರುವುದು'. ಹಿಂದೆ ತಿಳಿಯದ್ದನ್ನು ಈ ಮೂಲಕ ತಿಳಿಯುವುದು. 'ಪೃಥಿವೀತ್ವವನ್ನು ಹೇತುವಾಗಿ ತೆಗೆದುಕೊಂಡು ಉಳಿದುದರ ಭೇದವನ್ನು ಅನುಮಾನ ಮಾಡುವುದು; ಮೊದಲು ಸಿದ್ಧವಾದುದಲ್ಲದ್ದು 'ಪೃಥಿವೀತರಭೇದ'.

ಭಾಷ್ಯ: *ಸಾಮಾನ್ಯತೋದೃಷ್ಟಂ ಚ ತದುಭಯಭಿನ್ನಮನುಮಾನಮ್ ಯತ್ರ ಸಾಮಾನ್ಯತಃ ಪ್ರತ್ಯಕ್ಷಾದಿಜಾತಿಮಾದಾಯ ವ್ಯಾಪ್ತಿಗ್ರಹಾತ್ ಪಕ್ಷಧರ್ಮತಾಬಲೇನ ತದ್ವಿಜಾತೀಯೋಽಪ್ರತ್ಯಕ್ಷಾದ್ಯರ್ಥಃ ಸಿದ್ಧ್ಯತಿ । ಯಥಾ ರೂಪಾದಿಜ್ಞಾನೇ ಕ್ರಿಯಾತ್ವೇನ ಕರಣ ವತ್ತ್ವನುಮಾನಮ್ । ಅತ್ರ ಹಿ ಪೃಥಿವೀತ್ವಾದಿಜಾತೀಯಂ ಕುಠಾರಾದಿಕರಣಮಾದಾಯ ವ್ಯಾಪ್ತಿಂ ಗೃಹೀತ್ವಾ ತದ್ವಿಜಾತೀಯಮತೀಂದ್ರಿಯಮ್ ಸಾಧ್ಯತೇ ಇತಿ ।*

ಅನುವಾದ: ಸಾಮಾನ್ಯತೋದೃಷ್ಟವು, ಇವೆರಡಕ್ಕಿಂತ ಭಿನ್ನವಾದ ಅನುಮಾನವು. ಇದರಲ್ಲಿ ಸಾಮಾನ್ಯವಾಗಿ ಪ್ರತ್ಯಕ್ಷಾದಿ ಜಾತಿಗೆ ಸೇರಿದ್ದನ್ನು ತೆಗೆದುಕೊಂಡು ವ್ಯಾಪ್ತಿಯನ್ನು ಗ್ರಹಿಸುವುದರಿಂದ ಪಕ್ಷಧರ್ಮತೆಯ ಬಲದಿಂದ ಅದಕ್ಕಿಂತ ಭಿನ್ನವಾದ ಅಪ್ರತ್ಯಕ್ಷಾದಿ ಅರ್ಥವು ಸಿದ್ಧಿಸುತ್ತದೆ. ರೂಪಾದಿಜ್ಞಾನದಲ್ಲಿ ಕ್ರಿಯೆಯು ಇರುವುದರಿಂದ ಕರಣವತ್ವ ಅನುಮಾನವು. ಈ ವಿಷಯದಲ್ಲಿ ಪೃಥಿವೀತ್ವವೇ ಮೊದಲಾದ ಜಾತಿಗೆ ಸೇರಿದ ಕೊಡಲಿ ಮುಂತಾದ ಕರಣವನ್ನು ತೆಗೆದುಕೊಂಡು (ಛೇದನ ಕ್ರಿಯೆಯ) ವ್ಯಾಪ್ತಿಯನ್ನು ಅರಿತುಕೊಳ್ಳುವಂತೆ ಅತೀಂದ್ರಿಯವಾದ ಚಕ್ಷುರಿಂದ್ರಿಯದ ಮೂಲಕ ರೂಪಜ್ಞಾನವನ್ನು ಪಡೆದು ಆ ಇಂದ್ರಿಯವನ್ನು ಸಾಧಿಸಬಹುದು.

ವಿವರಣೆ: ಕಣ್ಣಿಗೆ ಕಾಣದ ವಸ್ತುಗಳು ಅತೀಂದ್ರಿಯಗಳು. ಕಾರ್ಯವಿರುವ ವಸ್ತುಗಳು ಇರುವ ಕಡೆ ಕಾರಣವಿರುವಂತೆ ರೂಪಜ್ಞಾನವೆಂಬ ಕಾರ್ಯದ ಹಿಂದೆ ಕಾರಣವಾದ ಚಕ್ಷುದಿಂದ್ರಿಯವನ್ನು ಅನುಮಾನ ಮಾಡಬಹುದು. ಇದು ಸಾಮಾನ್ಯತೋದೃಷ್ಟಕ್ಕೆ ಒಂದು ಉದಾಹರಣೆ. 'ಪಕ್ಷಧರ್ಮತಾ' ಎಂದರೆ 'ವ್ಯಾಪ್ಯದಲ್ಲಿರುವ ಇರುವಿಕೆ'.

ಭಾಷ್ಯ: *ತತ್ರ ಸಾಮಾನ್ಯತೋದೃಷ್ಟಾನುಮಾನಾತ್ ದ್ವಯೋಃ ಪ್ರಕೃತಿ ಪುರುಷಯೋಃ ಸಿದ್ಧಿರಿತ್ಯರ್ಥಃ । ತತ್ರ ಪ್ರಕೃತೇಃ ಸಾಮಾನ್ಯತೋ ದೃಷ್ಟಮನುಮಾನಮ್ । ಯಥಾಮಹತ್ತತ್ವಂ ಸುಖದುಃಖ–ಮೋಹಧರ್ಮಕ ದ್ರವ್ಯೋಪಾದಾನಕಂ ಕಾರ್ಯತ್ವೇ ಸತಿ ಸುಖದುಃಖ ಮೋಹಧರ್ಮಕತ್ವಾತ್, ಸುವರ್ಣಾದಿಜಕುಂಡಲಾದಿವತ್ ಇತ್ಯಾದಿ*

ಅನುವಾದ: ಇಲ್ಲಿ ಸಾಮಾನ್ಯತೋದೃಷ್ಟ ಅನುಮಾನದಿಂದ ಪ್ರಕೃತಿ–ಪುರುಷ ಎರಡೂ ಸಿದ್ಧಗೊಳ್ಳುತ್ತವೆ. ಪ್ರಕೃತಿಯನ್ನು ಸಿದ್ಧಿಸಲು ಸಾಮಾನ್ಯತೋದೃಷ್ಟದ ಪ್ರಯೋಗ ಸರಿಯಾದುದು. ಕಾರ್ಯರೂಪವಾದ ಮಹತ್ತತ್ವವು ಸುಖ, ದುಃಖ, ಮೋಹ ರೂಪವಾಗಿರುವುದರಿಂದ ಅದರ ಉಪಾದಾನ ಕಾರಣವಾದ ಪ್ರಕೃತಿಯೂ ಸುಖ, ದುಃಖ ಮೋಹಗಳಿಂದ ಕೂಡಿರಬೇಕು. ಕುಂಡಲಾದಿಗಳು ತಮಗೆ ಉಪಾದಾನ ಕಾರಣವಾದ ಚಿನ್ನದ ಗುಣಗಳನ್ನೇ ಹೊಂದಿರುತ್ತವೆ.

ವಿವರಣೆ: ಪ್ರಕೃತಿಯು ತ್ರಿಗುಣಾತ್ಮಕವಾದುದು; ಎಂದರೆ ಸತ್ತ್ವ, ರಜಸ್ಸು, ತಮಸ್ಸು ಇವುಗಳಿಂದ ಕೂಡಿದ್ದುದು. ಪ್ರಕೃತಿಯ ಪರಿಣಾಮವಾದ ಮಹತ್ತತ್ವದಲ್ಲಿ ಸುಖ, ದುಃಖ ಮತ್ತು ಮೋಹಗಳು ಉಪಾದಾನಕಾರಣದ ಲಕ್ಷಣಗಳನ್ನೇ ಹೊಂದಿರುತ್ತವೆ. ಚಿನ್ನದಿಂದ ಮಾಡಿದ ಆಭರಣಗಳು ಚಿನ್ನದ ಗುಣಗಳನ್ನೇ ಹೊಂದಿರುತ್ತವೆ.

ಭಾಷ್ಯ: *ಪುರುಷೇ ತು ಯದ್ಯಪಿ ಅನುಮಾನಾಪೇಕ್ಷಾ ನಾಸ್ತಿ ಸರ್ವಸಮ್ಮತತ್ವಾತ್, ತಥಾಪಿ ಪ್ರಕೃತ್ಯಾದಿವಿವೇಕೇ ಸಾಮಾನ್ಯ–। ತೋದೃಷ್ಟಮೇವಾಪೇಕ್ಷ್ಯತೇ ।*

ಅನುವಾದ: ಪುರುಷನನ್ನು ಸಿದ್ಧಿಸಲು ಅನುಮಾನದ ಅಪೇಕ್ಷೆ ಇಲ್ಲದಿದ್ದರೂ ಮತ್ತು ಅದನ್ನು ಎಲ್ಲರೂ ಒಪ್ಪಿದ್ದರೂ ಪ್ರಕೃತಿ ಮುಂತಾದ ವಿವೇಕ ಮಾಡಲು ಸಾಮಾನ್ಯ ತೋದೃಷ್ಟ ಅನುಮಾನದ ಅಪೇಕ್ಷೆ ಇರುತ್ತದೆ.

ಭಾಷ್ಯ: *ತದ್ಯಥಾ ಪ್ರಧಾನಂ ಪರಾರ್ಥಂ ಸಂಹತ್ಯಕಾರಿತ್ವಾತ್, ಗೃಹಾದಿವತ್ ಇತಿ ।*

ಅನುವಾದ: ಪ್ರಧಾನವು ಪರಾರ್ಥವಾಗಿರುವುದು, (ವಸ್ತುಗಳು) ಸೇರಿಕೊಂಡಿರುವುದರಿಂದ, ಮನೆಯೇ ಮುಂತಾದುವುಗಳಂತೆ.

ವಿವರಣೆ: 'ಪರಾರ್ಥ' ಎಂದರೆ ಪುರುಷನ ಸಲುವಾಗಿ ಎಂದು ಅರ್ಥಮಾಡಬೇಕು.

ಭಾಷ್ಯ: *ಅತ್ರ ಹಿ ಪ್ರತ್ಯಕ್ಷಸಿದ್ಧಂ ದೇಹಾದ್ಯರ್ಥಕತ್ತ್ವಂ ಗೃಹೀತ್ವಾ ತದ್ವಿಜಾತೀಯಃ ಪುರುಷಃ ಪ್ರಧಾನಾದಿ ಪರತ್ವೇನಾನುಮೀಯತೇ । ದೇಹಾದೀನಾಂ ಚ ಭೋಕ್ತೃತ್ವಮವಿವೇಕೇನ ಪ್ರಾಗ್ಗೃಹೀತ ಮಿತ್ಯುಭಯಸಿದ್ಧಿರಿತಿ ।*

ಅನುವಾದ: ಈ ವಿಷಯದಲ್ಲಿ ಪ್ರತ್ಯಕ್ಷವಾಗಿ ಸಿದ್ಧವಾದ ದೇಹಾದಿ ಅರ್ಥಗಳನ್ನು ಗೃಹಾದಿ (ಅಚೇತನ)ಗಳಂತೆ ತಿಳಿದು ಅದಕ್ಕೆ ವಿಜಾತೀಯವಾದ ಪುರುಷನು ಪ್ರಧಾನಕ್ಕೆ 'ಪರ' (ಇತರ)ವೆಂಬ ರೀತಿಯಲ್ಲಿ ಅನುಮಾನ ಮಾಡಲಾಗಿದೆ. ದೇಹಾದಿಗಳು ಭೋಕ್ತೃಗಳು ಎಂದು ಅವಿವೇಕದಿಂದ ಮೊದಲು ಸ್ವೀಕರಿಸಲಾಯಿತು ಎಂದು ಈಗ ಉಭಯ ಸಿದ್ಧಿಯುಂಟಾಗುತ್ತದೆ.

ಭಾಷ್ಯ: *ಯಾ ಪ್ರಮಾಣಸ್ಯ ಫಲಭೂತಾ ಪ್ರಮಾಖ್ಯಸಿದ್ಧಿರುಕ್ತಾ ತಯಾ ಪುರುಷಸ್ಯ ಪರಿಣಾಮಾಪತ್ತಿರಿತಿ ಆಶಂಕಾಯಾಂ ತಸ್ಯಾಃ ಸ್ವರೂಪಮಾಹ ।*

ಅನುವಾದ: ಯಾವ ಪ್ರಮಾಣದ ಫಲವಾಗಿರುವ 'ಪ್ರಮಾ' ಎಂಬ ಸಿದ್ಧಿಯನ್ನು ಹೇಳಿದೆಯೋ ಅದರಿಂದ ಪುರುಷನಿಗೆ ಪರಿಣಾಮವುಂಟಾಗುವುದು ಎಂಬ ಸಂದೇಹ ಬರುವುದರಿಂದ ಅದರ ಸ್ವರೂಪವನ್ನು ಹೇಳಲಾಗಿದೆ.

ಸೂತ್ರ: ಚಿದವಸಾನೋ ಭೋಗಃ ॥ ೧೦೪ ॥

ಅನುವಾದ: ಭೋಗದ ಅನುಭವವು ಚಿತ್ತಿನಲ್ಲಿ ಕೊನೆಗೊಳ್ಳುತ್ತದೆ.

ಭಾಷ್ಯ: *ಪುರುಷಸ್ವರೂಪೇ ಚೈತನ್ಯೇ ಪರ್ಯವಸಾನಂ ಯಸ್ಯೈತಾದೃಶೀ ಭೋಗಸಿದ್ಧಿರಿತ್ಯರ್ಥಃ । ಬುದ್ಧೇರ್ಭೋಗಸ್ಯ ವ್ಯಾವರ್ತನಾಯ ಚಿದವಸಾನ ಇತಿ । ಚಿತಃ ಪರಿಣಾಮಿತ್ವ ಸಧರ್ಮತ್ವಾದಿ ಶಂಕಾನಿರಾಸಾಯ ಅವಸಾನಪದಮ್ । ಚಿತೌ ಭೋಗಸ್ಯ ಸ್ವರೂಪೇ ಪರ್ಯವಸಿತತ್ವಾನ್ನ ಕೌಟಸ್ಥ್ಯ-ದಿ ಹಾನಿರಿತ್ಯಾಶಯಃ ।*

ಅನುವಾದ: ಪುರುಷ ಸ್ವರೂಪದ ಚೈತನ್ಯದಲ್ಲಿ ಪರ್ಯವಸಾನಗೊಳ್ಳುವುದು ಭೋಗಸಿದ್ಧಿ. ಬುದ್ಧಿಯು ಭೋಗದ ಅನುಭವದಿಂದ ಹೊರತಾದುದು ಎಂದು ಹೇಳಲು 'ಚಿದವಸಾನ' ಎನ್ನಲಾಗಿದೆ. ಚೇತನವು ಪರಿಣಾಮಿಯೇ, ಗುಣಗಳನ್ನು ಹೊಂದಿರುವುದೇ ಎಂಬ ಸಂದೇಹಗಳನ್ನು ನಿವಾರಿಸಲು 'ಅವಸಾನ' ಪದವನ್ನು ಬಳಸಲಾಗಿದೆ. ಚೇತನದಲ್ಲಿ

ಭೋಗವು ಚೇತನದ ಸ್ವರೂಪದಲ್ಲಿ ಪರ್ಯವಸಾನಗೊಳ್ಳುವುದರಿಂದ ಕೌಟಸ್ಥ್ಯ ಮುಂತಾದುವುಗಳಿಗೆ ಹಾನಿ ಬರದು ಎಂದು ಅಭಿಪ್ರಾಯ.

ವಿವರಣೆ: ಸುಖ–ದುಃಖಾದಿ ಭೋಗಗಳು ಚಿತ್ತಿನಲ್ಲಿ ಯಾವುದೇ ವಿಕಾರವನ್ನುಂಟು ಮಾಡುವುದಿಲ್ಲ. ಬುದ್ಧಿಯಲ್ಲಿನ ವೃತ್ತಿ ಪ್ರತಿಬಿಂಬಿತವಾಗುವುದಷ್ಟೆ. ಕೌಟಸ್ಥ್ಯ ಕೂಟಸ್ಥಪದದ ಭಾವವಾಚಕ.

ಭಾಷ್ಯ: *ತಥಾ ಹಿ ಪ್ರಮಾಣಾಖ್ಯವೃತ್ತ್ಯಾರೂಢಂ ಪ್ರಕೃತಿಪುರುಷಾದಿಕಂ ಪ್ರಮೇಯಂ ವೃತ್ತ್ಯಾ ಸಹ ಪುರುಷೇ ಪ್ರತಿಬಿಂಬಿತಂ ಸದ್ಭಾಸತೇ । ಅತಃ ಅರ್ಥೋಪರಕ್ತ ವೃತ್ತಿಪ್ರತಿಬಿಂಬಾವಚ್ಛಿನ್ನಂ ಸ್ವರೂಪ–ಚೈತನ್ಯಮೇವ ಭಾನಂ ಪುರುಷಸ್ಯ ಭೋಗಃ, ಪ್ರಮಾಣಸ್ಯ ಚ ಫಲಮಿತಿ । ತತಶ್ಚ ಪ್ರತಿಬಿಂಬರೂಪೇಣಾರ್ಥಸಂಬಂಧೇ ದ್ವಾರತಯಾ ವೃತ್ತೀನಾಂ ಕರಣತ್ವಮಿತಿ ।*

ಅನುವಾದ: ಹಾಗಯೇ ಪ್ರಮಾಣವೆಂಬ ವೃತ್ತಿಯಲ್ಲಿ ತೊಡಗಿದ ಪ್ರಕೃತಿ–ಪುರುಷ ಮುಂತಾದ ಪ್ರಮೇಯಗಳು ವೃತ್ತಿಯೊಡನೆ ಪುರುಷನಲ್ಲಿ ಪ್ರತಿಬಿಂಬಿತವಾಗಿ ಬೆಳಗುತ್ತವೆ. ಆದ್ದರಿಂದ ವಿಷಯದೊಡನೆ ಸಂಬಂಧವಿರುವ ವೃತ್ತಿಯ ಪ್ರತಿಬಿಂಬ ದಿಂದ ಕೂಡಿದ ಸ್ವರೂಪಚೈತನ್ಯವೇ ತೋರಿಬರುವುದು ಪುರುಷನ ಭೋಗ, ಪ್ರಮಾಣದ ಫಲವೂ ಸಹ (ಭೋಗವೇ) ಆದ್ದರಿಂದ ಪ್ರತಿಬಿಂಬರೂಪೇಣ ಅರ್ಥದ ಸಂಬಂಧದಲ್ಲಿರುವುದರಿಂದ ವೃತ್ತಿಗಳೇ 'ಕರಣ'ಗಳಾಗುತ್ತವೆ.

ವಿವರಣೆ: 'ಭಾನ' ಎಂದರೆ ವಿಷಯವು ಪ್ರಕಟಗೊಳ್ಳುವುದು

ಭಾಷ್ಯ: *ತದುಕ್ತಂ ವಿಷ್ಣುಪುರಾಣೇ–*

ಗೃಹೀತಾನಿಂದ್ರಿಯೈರರ್ಥಾನಾತ್ಮನೇ ಯಃ ಪ್ರಯಚ್ಛತಿ ।
ಅಂತಃಕರಣರೂಪಾಯ ತಸ್ಮೈ ವಿಶ್ವಾತ್ಮನೇ ನಮಃ ॥ ವಿ.ಪು. ೧–೧೪–೩೫

ಅನುವಾದ: ಈ ಮಾತನ್ನು ವಿಷ್ಣು ಪುರಾಣವು ಹೀಗೆ ಹೇಳುತ್ತದೆ:

ಇಂದ್ರಿಯಗಳಿಂದ ಗ್ರಹಿಸಲ್ಪಟ್ಟ ವಿಷಯಗಳನ್ನು ಆತ್ಮನಿಗೆ ಯಾರು ಅರ್ಪಿಸುವರೋ ಅಂತಹ ಅಂತಃಕರಣ ರೂಪನಾದ ವಿಶ್ವಾತ್ಮನಿಗೆ ಪ್ರಣಾಮಗಳು.

ಭಾಷ್ಯ: *ರಾಜ್ಞೋ ಹಿ ಕರಣವರ್ಗಃಸ್ವಾಮಿನೇ ಭೋಗ್ಯಜಾತಂ ಸಮರ್ಪಯತೀತಿ ದೃಷ್ಟಮಿತಿ । ಭೋಗಶಬ್ದಾರ್ಥಶ್ಚ ಅಭ್ಯ–ವಹರಣಮ್, ಆತ್ಮಸಾತ್ಕರಣಮಿತಿ ಯಾವತ್ । ಸ ಚ ದೇಹಾದಿಚೇತನಾಂತೇಷು ಸಾಧಾರಣಃ । ವಿಶೇಷಸ್ತ್ವಯಮ್ । ಅಪರಿಣಾಮಿತ್ವಾತ್ ಪುರುಷಸ್ಯ ವಿಷಯಭೋಗಃ ಪ್ರತಿಬಿಂಬಾ–ದಾನಮಾತ್ರಮ್ । ಅನ್ಯೇಷಾಂ ತು ಪರಿಣಾಮಿತ್ವಾತ್ ಪುಷ್ಟ್ಯಾದಿಃ ಅಪಿ ಇತಿ ।*

ಅನುವಾದ: ರಾಜನ ಕರಣಿಕ ವರ್ಗವು ಸಮಸ್ತ ಭೋಗ್ಯ ವಸ್ತುಗಳನ್ನು ರಾಜನಿಗೆ ಒಪ್ಪಿಸುವುದನ್ನು ನೋಡಿದ್ದೇವೆ. ಭೋಗಶಬ್ದದ ಅರ್ಥ ಭೋಜನಾದಿಗಳನ್ನು ಒದಗಿಸುವುದು, ಎಂದರೆ ಆತ್ಮ ಸಾತ್‌ಕರಣ. ಭೋಗವಾದರೋ ದೇಹದಿಂದ ಚೇತನದವರೆಗೆ ಎಲ್ಲರಿಗೂ ಸಾಧಾರಣವಾದುದು. ಆದರೆ ವಿಷಯದ ಭೋಗ ಪ್ರತಿಬಿಂಬವನ್ನು ಗ್ರಹಿಸುವುದರಿಂದ ಮಾತ್ರ. ಇತರ ವಸ್ತುಗಳಲ್ಲಿ ಪರಿಣಾಮಿಗಳಾದ ಕಾರಣ ವಿಷಯಭೋಗ ಪುಷ್ಟಿ ಮುಂತಾದವುಗಳಲ್ಲಿ ಕಾಣುತ್ತದೆ.

ಭಾಷ್ಯ: *ಅಯಮೇವ ಚ ಪರಿಣಾಮರೂಪಃ ಪಾರಮಾರ್ಥಿಕಃ ಭೋಗಃ ಪುರುಷೇ ಪ್ರತಿಷಿಧ್ಯತೇ, ಬುದ್ಧೇರ್ಭೋಗ ಇವಾತ್ಮನೀ (ಶಿಶುಪಾಲವಧಂ ೨.೫೯) ತ್ಯಾದಿಭಿರಿತಿ ಮಂತವ್ಯಮ್ । ಅಸ್ಮಿನ್‌ಸೂತ್ರೇ ಪುರುಷಸ್ಯಾಪಿ ಫಲವ್ಯಾಪ್ಯತಾ ಸಿದ್ಧಾ । ಚಿದವಸಾನತಾಯಾ ಏವೋಭಯಸಿದ್ಧಿತ್ವವಚನಾದಿತಿ ।*

ಅನುವಾದ: ಈ ಪರಿಣಾಮರೂಪವಾದ ಭೋಗವು ಪಾರಮಾರ್ಥಿಕವಾದುದು. ಇದನ್ನು ಪುರುಷನಲ್ಲಿ ನಿಷೇಧಿಸಿದೆ. 'ಬುದ್ಧಿಯ ಭೋಗವು ಆತ್ಮನಲ್ಲಿ ಕಂಡಂತೆ' ಇತ್ಯಾದಿ ಗಳಿಂದ ತಿಳಿಯಬೇಕು. ಈ ಸೂತ್ರದಲ್ಲಿ ಪುರುಷನ ಫಲವನ್ನೂ ವ್ಯಾಪ್ಯವಾಗಿ ಸಿದ್ಧಿಸಲಾಗಿದೆ. ಪ್ರಕೃತಿ–ಪುರುಷರ ಸಿದ್ಧಿಯನ್ನು ಚಿತ್ತಿನಲ್ಲಿ ಕೊನೆಗೊಳ್ಳುತ್ತದೆಯೆಂದು ಹೇಳಿದೆ.

ವಿವರಣೆ: 'ಪಾರಮಾರ್ಥಿಕ' ಎಂದರೆ (ಪ್ರಮಾವಿಷಯತ್ವಮ್) ಪ್ರಮೆಗೆ ವಿಷಯವಾಗುವುದು.

ಭಾಷ್ಯ: *ನನು ಕರ್ತುರೇವ ಲೋಕೇಕ್ರಿಯಾಫಲಭೋಗೋ ದೃಷ್ಟಃ । ಯಥಾ ಸಂಚರತ ಏವ ಸಂಚಾರೋತ್ಥದುಃಖ ಭೋಗ ಇತಿ । ತತ್ ಕಥಂ ಬುದ್ಧಿಕೃತಿ ಧರ್ಮಾದಿಫಲಸ್ಯ ಸುಖಾದ್ಯಾತ್ಮಿಕಾಯಾಃ ಅರ್ಥೋಪರಕ್ತಬುದ್ಧಿವೃತ್ತೇ ಭೋಗಃ ಪುರುಷೇ ಘಟೇತ ಇತ್ಯಾಶಂಕಾಯಾಮಾಹ–*

ಅನುವಾದ: ಲೋಕದಲ್ಲಿ ಕಂಡಂತೆ ಕ್ರಿಯೆಯಲ್ಲಿ ತೊಡಗಿದ ಕರ್ತೃವೇ ಫಲವನ್ನು ಅನುಭವಿಸುವನು. ಸಂಚಾರ ಮಾಡುವವನಿಗೇ ಸಂಚಾರದಿಂದಾಗುವ ದುಃಖಗಳ ಅನುಭವವಾಗುತ್ತದೆ. ಹಾಗಿರುವಾಗ ಬುದ್ಧಿಯು ಮಾಡಿದ ಧರ್ಮಾದಿಗಳ ಸುಖಾದಿಗಳಿಂದ ಕೂಡಿದ ಫಲವುಳ್ಳವಸ್ತುವಿಗೆ ಸಂಬಂಧಿಸಿದ ಬುದ್ಧಿವೃತ್ತಿಯ ಭೋಗವು ಪುರುಷನಲ್ಲಿ ಉಂಟಾಗುವುದು ಹೇಗೆ ಎಂಬ ಸಂದೇಹವನ್ನು ಹೇಳಲಾಗಿದೆ.

ಸೂತ್ರ: ಅಕರ್ತುರಪಿ ಫಲೋಪಭೋಗೋಽನ್ನಾದ್ಯವತ್ ॥ ೧೦೫ ॥

ಅನುವಾದ: ಕರ್ತೃವಲ್ಲದಿದ್ದರೂ ಫಲದ ಭೋಗವು ಉಂಟಾಗುವುದು (ಹೇಗೆಂದರೆ) ಅನ್ನಾದಿಗಳಂತೆ.

ಭಾಷ್ಯ: ಬುದ್ಧಿಕರ್ಮಫಲಸ್ಯಾಪಿ ವೃತ್ತೇರುಪಭೋಗಃ ತದಕರ್ತುಃ ಅಪಿ ಪುರುಷಸ್ಯ ಯುಕ್ತಃ, ಅನ್ನಾದ್ಯವತ್ । ಯಥಾನ್ಯ–

ಕೃತಸ್ಯಾನ್ನಾದೇಃ ಉಪಭೋಗೋ ರಾಜ್ಞಃ ಭವತಿ ತದ್ವತ್ ಇತ್ಯರ್ಥಃ । ಅವಿವೇಕಸ್ಯ ಸ್ವಸ್ವಾಮಿಭಾವಸ್ಯ ವಾ ಭೋಗನಿಯಾಮಕತ್ವಾತ್ ತು ನಾತಿಪ್ರಸಂಗಃ । ಸುಖ-ದುಃಖಾದೇಃ ಕರ್ಮಫಲತ್ವಮಭ್ಯುಪೇತ್ಯ ಬುದ್ಧಿಗತಂ ಕರ್ಮಫಲಂ ಪುರುಷೋ ಭುಂಕ್ತೇ ಇತ್ಯುಕ್ತಮ್ ।

ಅನುವಾದ: ಬುದ್ಧಿಯ ಕಾರ್ಯಗಳ ಫಲವನ್ನು, ವೃತ್ತಿಯನ್ನು ಅನುಭವಿಸುವಂತೆ, ಪುರುಷನು ಯಾವ ಕಾರ್ಯವನ್ನು ಮಾಡದವನಾದರೂ ಅದರ ಫಲವನ್ನು ಅನುಭವಿಸಬೇಕಾಗುವುದು, ಅನ್ನಾದಿಗಳಂತೆ; ಹೇಗೆ ಬೇರೆಯವರು ಮಾಡಿದ ಅನ್ನಾದಿಗಳ ಉಪಭೋಗವನ್ನು ರಾಜನು ಮಾಡುವನೋ ಹಾಗೆಯೇ ಎಂದರ್ಥ. ಇದರಲ್ಲಿ ಅವಿವೇಕದ ಅಥವಾ ಸ್ವಸ್ವಾಮಿಭಾವದ ಭಾವ ಭೋಗಕ್ಕೆ ನಿಯಾಮಕ ವಾದ್ದರಿಂದ ಅತಿಪ್ರಸಂಗಕ್ಕೆ ಎಡೆಯಿಲ್ಲ. ಸುಖದುಃಖಾದಿಗಳು ಕರ್ಮಫಲವೆಂದು ತಿಳಿದು ಬುದ್ಧಿಯಲ್ಲಿರುವ ಕರ್ಮಫಲವನ್ನು ಪುರುಷನು ಅನುಭವಿಸುತ್ತಾನೆ, ಎಂದು ಹೇಳಿದೆ.

ಭಾಷ್ಯ: *ಇದಾನೀಂ ಪುರುಷಗತಭೋಗಸ್ಯೈವ ಕರ್ಮಫಲತ್ತ್ವಂ ಸ್ವೀಕೃತ್ಯ ಬುದ್ಧಿಕರ್ಮಣಾ ಪುರುಷೇ ಏವ ಫಲಮುತ್ಪದ್ಯತೇ ಇತಿ ಮುಖ್ಯಸಿದ್ಧಾಂತಮಾಹ ।*

ಸೂತ್ರ: ಅವಿವೇಕಾದ್ವಾತತ್ಸಿದ್ಧೇಃ ಕರ್ತುಃ ಫಲಾವಗಮಃ ॥ ೧೦೬ ॥

ಅನುವಾದ: ಈಗ ಪುರುಷನ ಭೋಗಕ್ಕೆ ಕರ್ಮದ ಫಲವೇ ಎಂದು ಸ್ವೀಕರಿಸಿ ಬುದ್ಧಿಕರ್ಮದಿಂದ ಪುರುಷನಲ್ಲಿಯೇ ಫಲವುಂಟಾಗುವುದು ಎಂದು ಮುಖ್ಯ ಸಿದ್ಧಾಂತವನ್ನು ಹೇಳಿದೆ–

ಸೂತ್ರಾನುವಾದ: ಅಥವಾ ಅವಿವೇಕದಿಂದಲೇ ಅದರ ಸಿದ್ಧಿಯಾಗುವುದು ಏಕೆಂದರೆ 'ಕರ್ತೃವಿಗೆ ಫಲಪ್ರಾಪ್ತಿಯಾಗುವುದು' ಎಂದು ಶಾಸ್ತ್ರ ಹೇಳುವುದು.

ಭಾಷ್ಯ: *ಅಥವಾ ಕರ್ತರಿ ಫಲಮೇವ ನ ಭವತಿ । ಸುಖಂ ಭುಂಜೀಯ ಇತ್ಯಾದಿಕಾಮನಾಭಿಃ ಭೋಗಸ್ಯೈವ ಫಲತ್ವಾತ್ । ಅತೋ ಭೋಕ್ತೃನಿಷ್ಠಮೇವ ಫಲಂ ಭವತಿ, ಶಾಸ್ತ್ರವಿಹಿತಂ ಫಲಂ ಅನುಷ್ಠಾತಂ ಇತಿ । ಶಾಸ್ತ್ರೇಷು ಕರ್ತುಃ ಫಲಾವಗಮಸ್ತು ತತ್ಸಿದ್ಧೇಃ ಅಕರ್ತೃನಿಷ್ಠಾಯಾಃ ಭೋಗಾಖ್ಯಸಿದ್ಧೇಃ ಕರ್ತೃಬುದ್ಧಾ ಅವಿವೇಕಾದಿತ್ಯರ್ಥಃ । ಯೋಽಹಂ ಕರೋಮಿ ಸ ಏವ ಅಹಂ ಭುಂಜೇ ಇತಿ ಹ ಲೌಕಿಕಾನುಭವಃ ಇತಿ । ಯಾ ಚ ಸುಖಂ ಮೇ ಭೂಯಾದಿತ್ಯಾದಿಕಾಮನಾ, ಸಾ ಪುತ್ರೋ ಮೇ ಭೂಯಾತ್ ಇತಿವತ್ ಫಲಸಾಧನತ್ವೇನ ಏವ ಉಪಪದ್ಯತೇ । ಭೋಗಸ್ತು ನಾನ್ಯಸ್ಯ ಸಾಧನಮ್ । ಅತಃ ಸ ಏವ ಫಲಮಿತಿ ಮುಖ್ಯಃ ಸಿದ್ಧಾಂತಃ ।*

ಅನುವಾದ: ಅಥವಾ ಕರ್ತೃವಿನಲ್ಲಿಯೇ ಫಲಪ್ರಾಪ್ತಿಯಾಗದು. 'ಸುಖವನ್ನು ಅನುಭವಿಸಿಯೇನು', ಮುಂತಾದ ಕಾಮನೆಗಳಿಂದ ಭೋಗದ ಫಲ ದೊರೆಯುವುದು. ಆದ್ದರಿಂದ ಭೋಕ್ತೃವಿನಲ್ಲಿಯೇ ಫಲ ಉಂಟಾಗುವುದು; 'ಶಾಸ್ತ್ರವಿಹಿತವಾದ ಫಲವು ಕರ್ಮಾನುಷ್ಠಾನ ಮಾಡಿದವನಿಗೆ' ಎಂದು ಹೇಳಲ್ಪಟ್ಟಿದೆ. ಶಾಸ್ತ್ರಗಳಲ್ಲಿ ಕರ್ತೃವಿಗೆ ಫಲಪ್ರಾಪ್ತಿಯು ಉಕ್ತವಾಗಿದೆ. ಆದರೆ ಕರ್ಮಾನುಷ್ಠಾನ ಮಾಡಿದವನಿಗೆ ದೊರೆಯದೆ ಕರ್ತೃವಿನ ಬುದ್ಧಿಯ ಅವಿವೇಕದಿಂದ ಭೋಗವೆಂಬ ಸಿದ್ಧಿಯು ಉಂಟಾಗುವುದು ಎಂದಿದ್ದಾರೆ. 'ನಾನು ಏನನ್ನು ಮಾಡುವೆನೋ ಅದನ್ನೇ ನಾನು ಅನುಭವಿಸುವೆನು' ಎಂಬುದು ಲೋಕಾನುಭವ. ನನಗೆ ಸುಖ ಬರಲಿ ಮುಂತಾದ ಕಾಮನೆಗಳು, 'ನನಗೆ ಮಗನಾಗಲಿ' ಎಂಬುದರಂತೆ ಫಲವನ್ನು ಪಡೆಯಲು ಸಾಧನವೆಂದೇ ಬಯಸುತ್ತಾರೆ. ಭೋಗವಾದರೋ ಮತ್ತೊಂದನ್ನು ಪಡೆಯುವ ಸಾಧನವಲ್ಲ. ಆದ್ದರಿಂದ ಭೋಗವೇ ಫಲವೆಂದು ಮುಖ್ಯ ಸಿದ್ಧಾಂತ.

ಭಾಷ್ಯ: *ಭೋಗಸ್ಯ ಪುರುಷಸ್ವರೂಪತ್ವೇಽಪಿ ವೈಶೇಷಿಕಾಣಾಂ ಮತೇ ಶ್ರೋತ್ರವತ್ ಕಾರ್ಯತಾ ಬೋಧ್ಯಾ, ಸುಖಾದ್ಯವಚ್ಛಿನ್ನ-ಚಿತೇರೇವ ಭೋಗತ್ವಾತ್ । ಅಸ್ಮಿಂಶ್ಚ ಭೋಗಸ್ಯ ಫಲತ್ವಪಕ್ಷೇ ದುಃಖಭೋಗಾಭಾವಃ ಏವ ಅಪವರ್ಗೋ ಬೋಧ್ಯಃ । ಅಥವಾ ಭೋಗ್ಯತಾರೂಪಸ್ವತ್ವ ಸಂಬಂಧೇನ ಸುಖದುಃಖಾಭಾವಯೋರೇವ ಫಲತ್ವಮಸ್ತು ತೇನ ಸಂಬಂಧೇನ ಧನಾದೇರಿವ ಸುಖಾದೇರಪಿ ಪುರುಷನಿಷ್ಠತ್ವಾದಿತಿ ।*

ಅನುವಾದ: ಭೋಗವನ್ನು ಪುರುಷನ ಸ್ವರೂಪವೆಂದರೂ ವೈಶೇಷಿಕ ಮತದಲ್ಲಿ ಶ್ರೋತ್ರವನ್ನು ಕಾರ್ಯವೆಂದು ತಿಳಿಯುವಂತೆ ಭೋಗವೂ ಕಾರ್ಯವೆಂದೇ ತಿಳಿಯಬೇಕು. ಏಕೆಂದರೆ ಸುಖಾದಿಗಳಿಂದ ಒಳಪಟ್ಟ ಚಿತ್ತವೇ ಭೋಗತ್ವದ ಸ್ಥಿತಿ. ಭೋಗವು ಫಲವೆಂದು ಪಕ್ಷದಲ್ಲಿ ದುಃಖಭೋಗದ ಅಭಾವವೇ ಅಪವರ್ಗವೆಂದು ತಿಳಿಯಬೇಕು. ಭೋಗ್ಯತಾರೂಪದ ಸ್ವತ್ವ ಸಂಬಂಧದಿಂದ ಸುಖದುಃಖಗಳ ಅಭಾವವೇ ಫಲವೆನ್ನಿ. ಈ ಸಂಬಂಧದಿಂದ ಧನಾದಿಗಳಂತೆ ಸುಖಾದಿಗಳನ್ನೂ ಪುರುಷನಿಷ್ಠವೆನ್ನಬಹುದು.

ವಿವರಣೆ: ಅವಿವೇಕದ ಪ್ರಭಾವದಿಂದ ಪುರುಷನಲ್ಲಿ ಕರ್ತೃತ್ವ, ಭೋಕ್ತೃತ್ವಗಳು ಇರುತ್ತವೆ. ವಿವೇಕಜ್ಞಾನ ಉಂಟಾಗುತ್ತಿದ್ದಂತೆಯೇ ಈ ಅನುಭವಗಳು ಕಣ್ಮರೆಯಾಗುತ್ತವೆ.

ಭಾಷ್ಯ: *ತದೇವಂ ಪ್ರಮಾಣಾನಿ ಪ್ರಮಾಣಫಲಭೂತಾಂ ಪ್ರಮೇಯಸಿದ್ಧಿಂ ಚ ಪ್ರತಿಪಾದ್ಯ ಪ್ರಮೇಯಸಿದ್ಧೇರಪಿ ಫಲಮಾಹ–*

ಸೂತ್ರ: ನೋಭಯಂ ಚ ತತ್ತ್ವಾಖ್ಯಾನೇ ॥ ೧೦೭ ॥

ಅನುವಾದ: ಹೀಗೆ ಪ್ರಮಾಣಗಳನ್ನು ಅವುಗಳ ಫಲವಾದ ಪ್ರಮೇಯ ಸಿದ್ಧಿಯನ್ನು ತಿಳಿಸಿ. ಪ್ರಮೇಯ ಸಿದ್ಧಿಯ ಫಲವನ್ನು ಹೇಳಿದೆ.

ಸೂತ್ರಾನುವಾದ: ಪ್ರಕೃತಿ–ಪುರುಷರ ಯಥಾರ್ಥ ಸ್ವರೂಪವನ್ನು ತಿಳಿದ ನಂತರ ಸುಖದುಃಖಗಳ ಅನುಭವ ಪುರುಷನಿಗಿರದು.

ಭಾಷ್ಯ: *ಪ್ರಮಾಣೇನ ಪ್ರಕೃತಿ ಪುರುಷಯೋಸ್ತತ್ತ್ವಖ್ಯಾನೇ*
ತತ್ವ ಸಾಕ್ಷಾತ್ಕಾರೇ ಸತಿ ಉಭಯಮಪಿ ಸುಖದುಃಖೇ
ನ ಭವತಃ । 'ವಿದ್ವಾನ್ ಹರ್ಷಶೋಕೌ ಜಹಾತಿ (ಕಠಉ. ೧.೨.೧೨) ಇತಿ
ಶ್ರುತೇಃ ನ್ಯಾಯಾತ್ ಚ ಇತ್ಯರ್ಥಃ ।

ಅನುವಾದ: ಪ್ರಮಾಣದಿಂದ ಪ್ರಕೃತಿ ಪುರುಷರ ತತ್ತ್ವಜ್ಞಾನ ಉಂಟಾದ ನಂತರ ಎರಡೂ ಎಂದರೆ ಸುಖದುಃಖಗಳು ಇರುವುದಿಲ್ಲ. 'ಅರಿತವನು ಹರ್ಷ ಶೋಕಗಳನ್ನು ತೊರೆಯುವನು' ಎಂಬ ಶ್ರುತಿಯ ನ್ಯಾಯದಂತೆ ಹರ್ಷ ಶೋಕಗಳಿಂದ ಮುಕ್ತನಾಗುವನು.

ಭಾಷ್ಯ: *ಸಂಕ್ಷೇಪತೋ ವಿವೇಕೇ ನಾನುಮಾಪಿತೌ ಪ್ರಕೃತಿಪುರುಷೌ ।*
ತಯೋಃ ಪ್ರಕೃತಿಪುರುಷಯೋಃ ಅನುಮಾನೇ ಅವಾಂತರ ವಿಶೇಷಾ
ಇತಃ ಪರಂ ಅಧ್ಯಾಯಸಮಾಪ್ತಿಂ ಯಾವದ್ ವಿಚಾರ್ಯಾಃ ।
ತತ್ರ ಪ್ರಕೃತ್ಯಾದ್ಯನುಮಾನೇಷು ಅನುಪಲಂಭಬಾಧಕಂ ಅಪಾಕರೋತಿ ।

ಅನುವಾದ: ಸಂಕ್ಷೇಪವಾಗಿ ಪ್ರಕೃತಿ ಪುರುಷರ ಭಿನ್ನತೆಯನ್ನು ಅನುಮಾನದಿಂದ ಹೇಳಲಾಗಿದೆ. ಈ ಪ್ರಕೃತಿ ಪುರುಷರ ಅನುಮಾನದಲ್ಲಿ ಕೆಲವು ನಡುವೆ ಬರುವ ವಿಶೇಷಗಳನ್ನು ಅಧ್ಯಾಯದ ಸಮಾಪ್ತಿಯವರೆಗೆ ವಿಚಾರ ಮಾಡಬೇಕಾಗಿದೆ. ಅದರಲ್ಲಿ ಮೊದಲು ಪ್ರಕೃತಿಯಾದಿಯಾಗಿ (ಪ್ರಮೇಯಗಳ) ಅನುಪಲಬ್ಧಿಯನ್ನು ಹೋಗಲಾಡಿಸುತ್ತಾರೆ.

ವಿವರಣೆ: ಅನುಪಲಂಭ ಅಥವಾ ಅನುಪಲಬ್ಧಿ ಎಂಬುದು ಒಂದು ಪ್ರಮಾಣ. ಅಭಾವ ಜ್ಞಾನಕ್ಕೆ ಕಾರಣವಾದ ಪ್ರಮಾಣ.

ಸೂತ್ರ: ವಿಷಯೋಽವಿಷಯೋಽಪ್ಯತಿ ದೂರಾದೇರ್ಹಾನೋಪಾ–ದಾನಾಭ್ಯಾಂ ಇಂದ್ರಿಯಸ್ಯ ॥ ೧೦೮ ॥

ಸೂತ್ರಾನುವಾದ: ಅತಿ ದೂರದ ಕಾರಣ ಅಥವಾ ಇಂದ್ರಿಯಗಳ ಹಾನಿ ಹಾಗೂ ಮರೆಯಿಂದ ವಸ್ತುವೂ ಸಹ ಅವಿಷಯವಾಗಿ ಬಿಡುತ್ತದೆ.

ವಿವರಣೆ: ಗೋಚರವಾಗಬಹುದಾದ ವಸ್ತುವೂ ಗೋಚರವಾಗದು ಎಂದರ್ಥ.

ಭಾಷ್ಯ: *ಇಂದ್ರಿಯಾನುಪಲಭ್ಯತಾಮಾತ್ರತೋ ಘಟಾದ್ಯಭಾವವತ್*
ಪ್ರತ್ಯಕ್ಷೇಣ ಚಾರ್ವಾಕೈಃ ಪ್ರಕೃತ್ಯಾದ್ಯಭಾವಃ ಸಾಧಯಿತುಂ
ನ ಶಕ್ಯತೇ । ಯತೋ ವಿದ್ಯಮಾನೋಽಪಿ ಅರ್ಥಃ ಇಂದ್ರಿಯಾಣಾಂ
ಕಾಲಭೇದೇನ ವಿಷಯೋಽವಿಷಯಶ್ಚ ಭವತಿ, ಅತಿ ದೂರತ್ವಾದಿ
ದೋಷಾತ್ । ಇಂದ್ರಿಯಘಾತೇಂದ್ರಿಯಗ್ರಹಾಭ್ಯಾಂಚೇತ್ಯರ್ಥಃ ।
ಸಾಮಗ್ರೀ ಸಮವಧಾನೇ ಸತಿ ಅನುಪಲಂಭಸ್ಯೈವ ಅಭಾವ–

ಪ್ರತ್ಯಕ್ಷಹೇತುತಾ । ಪ್ರಕೃತ್ಯಾದ್ಯುಪಲಂಭೇ ತು ವಕ್ಷ್ಯಮಾಣ–
ಪ್ರತಿಬಂಧಾತ್ ನ ಸಾಮಗ್ರೀ ಸಮವಧಾನಮಿತಿ ಭಾವಃ ।
ಅತಿದೂರಾದಯಶ್ಚ ದೋಷಾಃ ವಿಶಿಷ್ಟಕಾರಿಕಯಾ ಪರಿಗಣಿತಾಃ ।

ಅನುವಾದ: ಇಂದ್ರಿಯಗಳಿಗೆ ಅನುಪಲಬ್ಧಿ ಮಾತ್ರದಿಂದಲೇ ಘಟಾದಿಗಳ ಅಭಾವದಂತೆ ಚಾರ್ವಾಕರು ಪ್ರತ್ಯಕ್ಷದಿಂದ ಪ್ರಕೃತಿ ಆದಿಗಳ ಅಭಾವವನ್ನು ಸಾಧಿಸುವುದು ಸಾಧ್ಯವಿಲ್ಲ. ಏಕೆಂದರೆ ವಸ್ತು ಇದ್ದಾಗ್ಯೂ ಸಹ ಕಾಲಭೇದದಿಂದ ಇಂದ್ರಿಯಗಳ ವಿಷಯಗಳೂ ಅವಿಷಯಗಳಾಗಿ ಬಿಡುತ್ತವೆ; ಅದಕ್ಕೆ ಅತಿದೂರತ್ವವು ದೋಷವಾಗಿರುತ್ತದೆ. ಇಂದ್ರಿಯಗಳ ಬೇನೆಯಿಂದಾಗಲಿ ಅಥವಾ ಅವುಗಳ ಗ್ರಹ ಅಶಕ್ತವಾಗಿದ್ದಾಗಲಿ ದೋಷವಿರುತ್ತದೆ. (ಪ್ರತ್ಯಕ್ಷದ) ಸಾಮಗ್ರಿಗಳು ದೊರೆಯುವಾಗ ಅನುಪಲಬ್ಧಿಯು ಅಭಾವದ ಪ್ರತ್ಯಕ್ಷಕ್ಕೆ ಕಾರಣವಾಗುತ್ತದೆ. ಪ್ರಕೃತ್ಯಾದಿಗಳು ಅನುಪಲಬ್ಧವಾಗಿರುವಾಗ ಮುಂದೆ ಹೇಳುವ ಪ್ರತಿಬಂಧಗಳಿಂದ ಸಾಮಗ್ರೀ ಸಮವಧಾನವು ಇರದು. ಅತಿದೂರವೇ ಮೊದಲಾದ ದೋಷಗಳು ವಿಶೇಷವಾಗಿ ಕಾರಿಕೆಯಲ್ಲಿ ಹೇಳಲ್ಪಟ್ಟಿವೆ.

ಭಾಷ್ಯ: *ಅತಿದೂರಾತ್ ಸಾಮೀಪ್ಯಾತ್ ಇಂದ್ರಿಯ*
ಘಾತಾತ್ಮನೋಽನವಸ್ಥಾನಾತ್ ।
ಸೌಕ್ಷ್ಮ್ಯಾತ್ ವ್ಯವಧಾನಾದಭಿಭವಾತ್ ಸಮಾನಾಭಿಹಾರಾಚ್ಚ ॥
(ಸಾಂ.ಕಾ. ೭)

ಸಮಾನಾಭಿಹಾರಃ ಸಜಾತೀಯ ಸಂವಲನಮ್ । ಯಥಾ ಮಾಹಿಷೇ ಗವ್ಯಮಿಶ್ರಣಾತ್ ಮಾಹಿಷತ್ವಾಗ್ರಹಣಮಿತಿ ।

ಅನುವಾದ: ಅತಿ ದೂರದಿಂದಾಗಲಿ, ಬಹಳ ಸಮೀಪದಿಂದಾಗಲಿ, ಕಾಣದ ಇಂದ್ರಿಯ ಶಕ್ತಿಗೆ ಘಾತವಾದಾಗ, ಮನಸ್ಸು ಬೇರೆ ಎಡೆ ಇದದಾಗ, ವಸ್ತು ಬಹಳ ಸೂಕ್ಷ್ಮವಿರುವಾಗ, ಇಂದ್ರಿಯ ವಸ್ತುಗಳ ನಡುವೆ ಅಡ್ಡಿ ಇರುವಾಗ, ಯಾವಾದರೂ ಅಡ್ಡಿ ಒಡ್ಡಿದಾಗ, ಸಜಾತೀಯ ವಸ್ತುಗಳು ಬೆರೆತಾಗ ವಸ್ತುಗಳು ಗೋಚರವಾಗುವುದಿಲ್ಲ. ಎಮ್ಮೆಯ ಹಾಲಿಗೆ ಹಸುವಿನ ಹಾಲು ಬೆರೆತಾಗ ಎಮ್ಮೆಯ ಹಾಲನ್ನೇ ಬೇರೆಯಾಗಿ ಗ್ರಹಿಸುವುದು ಸಾಧ್ಯವಿಲ್ಲ.

ವಿವರಣೆ: ಸಮಾನಾಭಿಹಾರವೆಂದರೆ ಸಜಾತೀಯ ವಸ್ತುಗಳ ಸಂಮಿಲನ,

ಭಾಷ್ಯ: *ನನ್ವತಿದೂರತ್ವಾದಿಷು ಮಧ್ಯೇ ಪ್ರಕೃತ್ಯಾದ್ಯುಪಲಂಭೇ*
ಕಿಂ ಪ್ರತಿಬಂಧಕಮಿತಿ, ತತ್ರಾಹ–

ಸೂತ್ರ: ಸೌಕ್ಷ್ಮ್ಯಾತ್ತದನುಪಲಬ್ಧಿಃ ॥೧೦೯॥

ಅನುವಾದ: ಮೇಲೆ ಹೇಳಿದ ದೋಷಗಳಲ್ಲಿ ಬಹಳ ದೂರವಿರುವ ವಸ್ತುಗಳು ಎಂಬ ದೋಷದಿಂದ ಉಪಲಬ್ಧಿಗೆ ಯಾವುದು ಪ್ರತಿಂಬಂಧಕವಾದುದು?

ವಿವರಣೆ: ಕಾರಿಕೆಯಲ್ಲಿ ಹೇಳಿರುವ ಎಂಟು ದೋಷಗಳಲ್ಲಿ; ಮೊದಲನೆಯದು 'ಅತಿದೂರಾತ್' ಎಂಬುದನ್ನು ಪ್ರಶ್ನಿಸಲಾಗಿದೆ.

ಸೂತ್ರಾನುವಾದ: ಪ್ರಕೃತ್ಯಾದಿ ಅನುಪಲಬ್ಧಿ ಸೂಕ್ಷ್ಮತೆಯ ಕಾರಣ ಉಂಟಾಗುವುದು.

ಭಾಷ್ಯ: *ತಯೋಃ ಪೂರ್ವೋಕ್ತಯೋಃ ಪ್ರಕೃತಿಪುರುಷಯೋಃ ಅನುಪಲಬ್ಧಿಸ್ತು ಸೌಕ್ಷ್ಮ್ಯಾದಿತ್ಯರ್ಥಃ । ಸೂಕ್ಷ್ಮತ್ವಂ ಚ ನಾಣುತ್ವಮ್ । ವಿಶ್ವವ್ಯಾಪನಾತ್ । ನಾಪಿ ದುರೂಹತ್ವಾದಿಕಮ್, ದುರ್ವಚತ್ವಾತ್ । ಪ್ರತ್ಯಕ್ಷಪ್ರಮಾಪ್ರತಿಬಂಧಿಕಾ ಜಾತಿಃ । ಯೋಗಜ-ಧರ್ಮಸ್ಯಚ ಉತ್ತೇಜಕತಯಾ ಪ್ರಕೃತಿಪುರುಷಾದೀನಾಂ ಪ್ರತ್ಯಕ್ಷಪ್ರಮಾ ಭವತಿ । ಜಾತಿಸಾಂಕರ್ಯಂ ಚ ನ ದೋಷಾ-ವಹಮ್ । ಅಥವಾ ನಿರವಯವದ್ರವ್ಯತ್ವಮೇವ ಅತ್ರ ಸೂಕ್ಷ್ಮತ್ವಮ್, ಯೋಗಜಧರ್ಮಶ್ಚ ಉತ್ತೇಜಕ ಏವ ಇತಿ ।*

ಅನುವಾದ: ಮೇಲೆ ಹೇಳಿದ ಪ್ರಕೃತಿ-ಪುರುಷರ ಅನುಪಲಬ್ಧಿಯು ಸೌಕ್ಷ್ಮ್ಯದ ಕಾರಣ ಉಂಟಾಗುತ್ತದೆ. ಸೂಕ್ಷ್ಮತ್ವ ಅಣುತ್ವರೂಪ ಅಲ್ಲ, ಏಕೆಂದರೆ ಪ್ರಕೃತಿಯು ವಿಶ್ವವನ್ನೆಲ್ಲ ವ್ಯಾಪಿಸಿದೆ. ಅದನ್ನು ಊಹಿಸಲಸಾಧ್ಯ ಎಂದರೆ ಅದೂ ಸರಿಯಲ್ಲ. ಏಕೆಂದರೆ ಅದನ್ನು ತಿಳಿಸುವುದು ಅಸಾಧ್ಯ. ಆದರೆ ಪ್ರತ್ಯಕ್ಷ ಪ್ರಮಾಗೆ ಪ್ರತಿಬಂಧಕವಾದುದು (ಸೂಕ್ಷ್ಮತ್ವ) ಜಾತಿ. ಯೋಗದಿಂದುಂಟಾದ ಧರ್ಮದ ಉತ್ತೇಜಕತೆಯ ಕಾರಣ ಪ್ರಕೃತಿ ಪುರುಷರ ಪ್ರತ್ಯಕ್ಷ ಪ್ರಮಾ ಸಾಧ್ಯವಾಗುವುದು. ಇಲ್ಲಿ ಜಾತಿ ಸಾಂಕರ್ಯ ದೋಷ ಉಂಟುಮಾಡದು. ಅಥವಾ ನಿರವಯವ ದ್ರವ್ಯತ್ವವೇ ಸೂಕ್ಷ್ಮತ್ವ. ಯೋಗದಿಂದುಂಟಾದ ಧರ್ಮವಾದರೋ ಉತ್ತೇಜಕವು.

ವಿವರಣೆ: ಯೋಗಿಗಳು ಸೂಕ್ಷ್ಮವಸ್ತುಗಳನ್ನು ಕಾಣಬಲ್ಲರು, ಸಾಧಾರಣ ಜನರಿಗೆ ಅದು ಗೋಚರವಾಗದು.

ಭಾಷ್ಯ: *ನನ್ವಭಾವಾದೇವ ಅನುಪಲಬ್ಧಿಸಂಭವೇ ಕಿಮರ್ಥಂ ಸೌಕ್ಷ್ಮ್ಯಂ ಕಲ್ಪ್ಯತೇ, ಅನ್ಯಥಾ ಚ ಶಶಶೃಂಗಾದೇರಪಿ ಸೌಕ್ಷ್ಮ್ಯಾತ್ ಅನುಪಲಬ್ಧಿಃ ಕಿಂ ನ ಸ್ಯಾದಿತಿ, ತತ್ರಾಹ*

ಸೂತ್ರ: ಕಾರ್ಯದರ್ಶನಾತ್ತದುಪಲಬ್ಧೇಃ ॥ ೧೧೦ ॥

ಅನುವಾದ: ಅಭಾವದಿಂದಲೇ ಅನುಪಲಬ್ಧಿಯು ಸಂಭವಿಸುವಾಗ ಸೂಕ್ಷ್ಮತೆಯ ಕಲ್ಪನೆಯೇಕೆ? ಅದಿಲ್ಲದಿದ್ದರೆ ಶಶಶೃಂಗ ಆದಿ ಅನುಪಲಬ್ಧಿಯಲ್ಲಿ ಸೂಕ್ಷ್ಮತೆಯನ್ನೇಕೆ ಕಾಣಬಾರದು? ಹೀಗೆ ಹೇಳಿದೆ-

ಸೂತ್ರಾನುವಾದ: ಕಾರ್ಯವನ್ನು ಕಾಣುವುದರಿಂದ ಪ್ರಕೃತಿಯ ಉಪಲಬ್ಧಿ ದೊರೆಯುವುದು.

ಭಾಷ್ಯ: *ಕಾರ್ಯಾನ್ಯಥಾನುಪಪತ್ತ್ಯಾ ಪ್ರಕೃತ್ಯಾದಿಸಿದ್ಧೌ ಸತ್ಯಾಂ ತೇಷಾಂ ಸೂಕ್ಷ್ಮತ್ವಂ ಕಲ್ಪ್ಯತೇ । ಅನುಮಾನಾತ್ ಪೂರ್ವಂ ಚ ಸೂಕ್ಷ್ಮತ್ವಾದಿ ಸಂಶಯೇನಾಭಾವಾನಿರ್ಣಯಾತ್ ಅನುಮಾನಂ ಉಪಪದ್ಯತೇ ।*

ಅನುವಾದ: ಕಾರ್ಯವಲ್ಲದೆ ಬೇರೆಯ ರೀತಿ ಪ್ರಕೃತ್ಯಾದಿಗಳು ಸಿದ್ಧವಾಗದ ಕಾರಣ ಅವುಗಳ ಸೂಕ್ಷ್ಮತೆಯನ್ನು ಕಲ್ಪಿಸಲಾಗಿದೆ. ಅನುಮಾನಕ್ಕೆ ಮುಂಚೆಯೇ (ಪ್ರಕೃತಿಯ) ಸೂಕ್ಷ್ಮತೆಯ ಸಂಶಯದಿಂದ ಅಭಾವವು ನಿರ್ಣಯವಾಗದೆ ಅನುಮಾನ ಮಾಡುವುದು ಸರಿಯಾದುದೇ.

ಭಾಷ್ಯ: ಅತ್ರ ಶಂಕತೇ ।

ಇಲ್ಲಿ ಒಂದು ಸಂದೇಹ ತೋರುತ್ತಾರೆ.

ಸೂತ್ರ: ವಾದಿ ವಿಪ್ರತಿಪತ್ತೇಸ್ತದಸಿದ್ಧಿರಿತಿ ಚೇತ್ ॥ ೧೧೧ ॥

ಸೂತ್ರಾನುವಾದ : ಬೇರೆ ಬೇರೆ ವಾದಿಗಳ ಭಿನ್ನಮತದ ಕಾರಣ ಪ್ರಕೃತಿಯು ಅಸಿದ್ಧವೆಂದಲ್ಲಿ–

ಭಾಷ್ಯ: *ನನು ಕಾರ್ಯಂ ಚೇದುತ್ಪತ್ತೇಃ ಪ್ರಾಕ್ ಸಿದ್ಧಂ ಸ್ಯಾತ್, ತದಾಧಾರತಯಾ ನಿತ್ಯಾ ಪ್ರಕೃತಿಃ ಸೇತ್ಸ್ಯತಿ, ಕಾರ್ಯಸಾಹಿತ್ಯೇನ ಏವ ಕಾರಣಾನುಮಾನಸ್ಯ ವಕ್ಷ್ಯಮಾಣತ್ವಾತ್ । ವಾದಿ–ವಿಪ್ರತಿಪತ್ತೇಸ್ತು ಸತ್ಕಾರ್ಯಸ್ಯೈವ ಅಸಿದ್ಧಿರಿತಿಯದೀತ್ಯರ್ಥಃ ।*

ಅನುವಾದ: ಉತ್ಪತ್ತಿಗೆ ಮೊದಲೇ ಕಾರ್ಯವು ಸಿದ್ಧವಾದಲ್ಲಿ ಅದರ ಆಧಾರದಿಂದ ಪ್ರಕೃತಿಯು ನಿತ್ಯ ಎಂದು ಸಿದ್ಧವಾಗುತ್ತದೆ. ಏಕೆಂದರೆ ಕಾರ್ಯದೊಡನೆ ಇರುವ ಆಧಾರದ ಮೇಲೆ ಅನುಮಾನದಿಂದ ಕಾರಣವನ್ನು ಗೊತ್ತುಮಾಡುವರು. ವಾದಿಗಳ ಸಂದೇಹವನ್ನು ಹೇಳಿದ ಮೇಲೆ 'ಸತ್ಕಾರ್ಯ'ವೇ ಸಿದ್ಧಿಸದಿದ್ದಲ್ಲಿ–

ಭಾಷ್ಯ: *ಅಭ್ಯುಪೇತ್ಯ ಪರಿಹರತಿ –*

ಸೂತ್ರ: ತಥಾಪ್ಯೇಕತರದೃಷ್ಟ್ಯಾ ಏಕತರಸಿದ್ಧೇರ್ನಾಪಲಾಪಃ ॥ ೧೧೨ ॥

ಅನುವಾದ: ಹಾಗೆಯೇ ಆಗಲಿ ಎಂದು ಒಪ್ಪಿ ವಿವಾದವನ್ನು ಹೋಗಲಾಡಿಸುವರು.

ಸೂತ್ರಾನುವಾದ: ಹಾಗೆ ಶಂಕೆ ಮಾಡಿದರೂ ಅನ್ಯತರ ದೃಷ್ಟಿಯಿಂದ (ಕಾರ್ಯವನ್ನು ಒಪ್ಪಿದರೂ) ಬೇರೆಯ ದೃಷ್ಟಿಯಿಂದ (ಕಾರಣವು ಸಿದ್ಧಿಸುವುದು) ಮುಚ್ಚುಮರೆ ಮಾಡುವುದೇನಿಲ್ಲ.

ಭಾಷ್ಯ: *ಮಾಸ್ತು ಸತ್ಕಾರ್ಯಂ ತಥಾಪ್ಯೇಕತರಸ್ಯ ಕಾರ್ಯಸ್ಯ ದೃಷ್ಟ್ಯಾ ಅನ್ಯತರಸ್ಯ ಕಾರಣಸ್ಯ ಸಿದ್ಧೇಃ ಅಪಲಾಪಃ ನಾಸ್ತ್ಯೇವ ಇತಿ ನಿತ್ಯಂಕಾರಣಂ ಸಿದ್ಧಮೇವ । ತತ ಏವ ಚ ಪರಿಣಾಮಿನಃ ಸಕಾಶಾದಪರಿಣಾಮಿತಯಾ ಪುರುಷಸ್ಯ ವಿವೇಕೇನ ಮೋಕ್ಷೋಪಪತ್ತಿರಿತ್ಯರ್ಥಃ । ಅನೇನೈವಾಭ್ಯುಗಮ–ವಾದೇನ ವೈಶೇಷಿಕಾದ್ಯಾಸ್ತಿಕಶಾಸ್ತ್ರಂ ಪ್ರವರ್ತತೇ । ಅತಃ ಚ ನ ಸತ್ಕಾರ್ಯವಾದಿಶ್ರುತಿಸ್ಮೃತಿ ವಿರೋಧೇಽಪಿ ತೇಷಾಂ ಅಂಶಾಂತರೇಷು ಅಪ್ರಾಮಾಣ್ಯಮಿತಿ ಮಂತವ್ಯಮ್ ।*

ಅನುವಾದ: ಸತ್ಕಾರ್ಯವನ್ನು ಸ್ವೀಕರಿಸದಿರಿ. ಆದರೂ ಒಂದೆಡೆ ಕಾರ್ಯವನ್ನು ನೋಡಿದ ಮೇಲೆ ಬೇರೆ ಕಾರಣವನ್ನು ಒಪ್ಪಲೇಬೇಕಾಗುತ್ತದೆ. ಹೀಗಿರುವಾಗ ಕಾರಣವನ್ನು ಸಿದ್ಧಿಸುವ ಮುಚ್ಚುಮರೆಯ ಮಾತೇನಿಲ್ಲ. ಆದ್ದರಿಂದಲೇ ಪರಿಣಾಮಗೊಳ್ಳುವ (ಕಾರಣದಿಂದಲೇ) ಅಪರಿಣಾಮಿಯೆಂದು ಪುರುಷನನ್ನು ತಿಳಿದು ಮೋಕ್ಷದ ಪ್ರಾಪ್ತಿ ಸಂಭವಿಸುವುದು. ಈ ಅಭ್ಯುಪಗಮವಾದದಿಂದಲೇ ವೈಶೇಷಿಕವಾದಿ ಆಸ್ತಿಕಶಾಸ್ತ್ರವು ಇರುವುದು. ಆದ್ದರಿಂದ ಸತ್ಕಾರ್ಯವಾದವನ್ನು ಪ್ರತಿಪಾದಿಸುವ ಶ್ರುತಿಸ್ಮೃತಿಗಳಿಗೆ ವಿರೋಧವಾದರೂ ಅವುಗಳ ಕೆಲವು ಅಂಶಗಳಿಂದ ವೈಶೇಷಿಕಾದಿಗಳನ್ನು ಅಪ್ರಮಾಣವೆನ್ನಲಾಗದು.

ಭಾಷ್ಯ: *ಪರಮಾರ್ಥತಃ ಪರಿಹಾರಮಾಹ ।*

(ಸತ್ಕಾರ್ಯ ವಿರೋಧಗಳಿಗೆ) ಪರಮಾರ್ಥವಾಗಿ ಪರಿಹಾರವನ್ನು ಹೇಳಿದೆ–

ಸೂತ್ರ: ತ್ರಿವಿಧ ವಿರೋಧಾಪತ್ತೇಃ ಚ ॥ ೧೧೩ ॥

ಸೂತ್ರಾನುವಾದ: ಮೂರು ವಿಧದ (ಗುಣಗಳ) ವಿರೋಧ ಉಂಟಾಗುವುದರಿಂದ (ಪ್ರಕೃತಿ ಸಿದ್ಧವಾಗುವುದು)

ವಿವರಣೆ: ಸುಖ, ದುಃಖ, ಮೋಹಗಳೆಂಬ ಮೂರು ವಿಧಗಳನ್ನು ಅಲ್ಲಗಳೆದಂತಾಗುವುದು.

ಭಾಷ್ಯ: *ಅಥ ಸರ್ವಂ ಕಾರ್ಯಂ ತ್ರಿವಿಧಂ ಸರ್ವವಾದಿಸಿದ್ಧಂ ಅತೀತಂ ಅನಾಗತಂ ವರ್ತಮಾನಮಿತಿ ।*

ಅನುವಾದ: ಇನ್ನು ಎಲ್ಲ ಕಾರ್ಯವೂ ಅತೀತ–ಅನಾಗತ–ವರ್ತಮಾನ ಎಂದು ಮೂರು ಬಗೆ ಎಂಬ ವಿಷಯದಲ್ಲಿ ಎಲ್ಲ ವಾದಿಗಳೂ ಒಪ್ಪಿದ್ದಾರೆ.

ಭಾಷ್ಯ: *ತತ್ರ ಯದಿ ಕಾರ್ಯಂ ಸದಾ ಸನ್ನೇಷ್ಯತೇ, ತದಾ ತ್ರಿವಿಧತ್ವ ಅನುಪಪತ್ತಿಃ । ಅತೀತಾದಿ ಕಾಲೇ ಘಟಾದ್ಯಭಾವೇನ ಘಟಾದೇಃ ಅತೀತಾದಿಧರ್ಮಕತ್ವಾನುಪಪತ್ತೇಃ । ಸದಸತೋಃ ಸಂಬಂಧಾನುಪಪತ್ತೇಃ ।*

ಅನುವಾದ: ಇಲ್ಲಿ ಕಾರ್ಯವನ್ನು ಯಾವಾಗಲೂ ಸತ್ ಎಂದು ಭಾವಿಸದಿದ್ದಲ್ಲಿ ಆಗ ತ್ರಿವಿಧತ್ವವು ಉಂಟಾಗದು. ಅತೀತ ಮುಂತಾದ ಕಾಲದಲ್ಲಿ ಘಟಾದಿಗಳ ಅಭಾವದ ಕಾರಣ ಘಟಾದಿಗಳಲ್ಲಿ ಅತೀತಾದಿ ಧರ್ಮಗಳು ದೊರೆಯುವುದಿಲ್ಲ ಮತ್ತು ಸತ್ ಮತ್ತು ಅಸತ್‌ಗಳಲ್ಲಿ ಸಂಬಂಧ ದೊರೆಯುವುದೂ ಸಾಧ್ಯವಿಲ್ಲ.

ವಿವರಣೆ: ಘಟಾದಿಗಳು 'ಕಾರ್ಯ'ರೂಪಕ್ಕೆ ಬರದಿದ್ದಲ್ಲಿ ಸತ್ ಅಸತ್‌ಗಳಲ್ಲಿ 'ಸತ್' ಆಗಲಿ 'ಅಸತ್' ಆಗಲಿ ಇರಲು ಸಾಧ್ಯ. ಸತ್, ಅಸತ್ ಎರಡೂ ಇರುವುದು ಹೇಗೆ ಸಾಧ್ಯ?

ಭಾಷ್ಯ: *ಕಿಂಚ ಪ್ರತಿಯೋಗಿತ್ವಸ್ಯ ಪ್ರತಿಯೋಗಿರೂಪತ್ವೇ ತದ್ದೋಷತಾ–ದವಸ್ಥ್ಯಾತ್ । ಅಭಾವಮಾತ್ರಸ್ವರೂಪತ್ವೇ ಘಟಾಭಾವೋ*

ಘಟಾದ್ಯಭಾವಃ ಸ್ಯಾದಭಾವತ್ವಾ ವಿಶೇಷಾತ್ । ಅಭಾವೇಷ್ವಪಿ ಸ್ವರೂಪತೇ ವಿಶೇಷಾಂಗೀಕಾರೇ ಚ ಅಭಾವತ್ವಸ್ಯ ಪರಿಭಾಷಾ ಮಾತ್ರತ್ವ ಪ್ರಸಂಗಾತ್ ।

ಅನುವಾದ: ಅಲ್ಲದೆ ಪ್ರತಿಯೋಗಿತ್ವವನ್ನು ಪ್ರತಿಯೋಗಿರೂಪವೆಂದು ತಿಳಿದಾಗ ಆ ದೋಷವು ಹಾಗೆಯೇ ಉಳಿಯುವುದು. ಅಭಾವವೆಂದಷ್ಟೇ ಹೇಳಿದರೆ ಪಟಾಭಾವ ಮತ್ತು ಘಟಾಭಾವಗಳಲ್ಲಿ ಅಭಾವ ಸಾಮಾನ್ಯವಾಗಿರುವುದರಿಂದ ಎರಡೂ ಸಮಾನವಾಗಿ ಬಿಡುವುವು. ಅಭಾವಗಳಲ್ಲಿ ಸ್ವರೂಪದ ಭಿನ್ನತೆಯನ್ನು ಅಂಗೀಕರಿಸಿದರೆ ಆಗ ಅಭಾವತ್ವದ ಪರಿಭಾಷೆಯನ್ನು ಮಾತ್ರ ಹೇಳಿದಂತಾಗುವುದು.

ವಿವರಣೆ: ಪ್ರತಿಯೋಗಿ ಎಂದರೆ ವಿರೋಧತ್ವ ಅಥವಾ ವಿರುದ್ಧವಾದ ಸಂಬಂಧ ಹೊಂದಿರುವುದು. ಉದಾಹರಣೆಗೆ ಘಟಾಭಾವಕ್ಕೆ ಘಟ ಪ್ರತಿಯೋಗಿ. ಆದ್ದರಿಂದ ಘಟವಿದೆ ಎಂದರೆ 'ಘಟದ ಅಭಾವದ ಪ್ರತಿಯೋಗಿತ್ವವಿದೆ' ಇದನ್ನು ಇಲ್ಲಿ ಭಾಷ್ಯಕಾರನು ವಿಶ್ಲೇಷಿಸಿದ್ದಾನೆ.

ಭಾಷ್ಯ: *ಅಥ ಪ್ರತಿಯೋಗೀ ಏವ ಅಭಾವ ವಿಶೇಷಕ ಇತಿ ಚೇನ್ನ । ಅಸತಃ ಪ್ರತಿಯೋಗಿನಃ ಪ್ರಾಗಭಾವಸ್ತು ವಿಶೇಷಕತ್ವ ಅಸಂ–। ಭವಾದಿತಿ ।*

ಅನುವಾದ: ಪ್ರತಿಯೋಗಿಯ ಆಧಾರದ ಮೇಲೆ ಅಭಾವವಿಶೇಷಕ (ಭಿನ್ನತೆ) ಇರಬಹುದಲ್ಲವೆ?

ಅದು ಸರಿಯಲ್ಲ. 'ಸತ್' ಇಲ್ಲದಿರುವಾಗ ಪ್ರತಿಯೋಗಿಯ ಪ್ರಾಗಭಾವ ಮುಂತಾದುವುಗಳಲ್ಲಿ ಭಿನ್ನತೆ ಅಸಂಭವ.

ವಿವರಣೆ: 'ಸತ್' ಇಲ್ಲದಿರುವಾಗ ಪ್ರತಿಯೋಗಿಯಿರದು. ಪ್ರಾಗಭಾವ ಸಾಂಖ್ಯರ ಪ್ರಕಾರ (ಭಾವಸ್ಯ ಅನಾಗತಾ ಅವಸ್ಥಾ) ಕಾರಣದಿಂದ ಕಾರ್ಯವಿನ್ನೂ ಸಿದ್ಧವಾಗದ ಸ್ಥಿತಿ.

ಭಾಷ್ಯ: *ತಸ್ಮಾನ್ನಿತ್ಯಸ್ಯೈವ ಕಾರ್ಯಸ್ಯಾತೀತಾನಾಗತವರ್ತಮಾನಾವಸ್ಥಾಭೇದಾ ಏವ ವಕ್ತವ್ಯಾಃ । ಘಟೋಽತೀತೋ ಘಟೋ ವರ್ತಮಾನೋ ಘಟೋ ಭವಿಷ್ಯನ್ ಇತಿ ಪ್ರತ್ಯಯಾನಾಂ ತುಲ್ಯರೂಪತೌಚಿತ್ಯಾತ್ । ನ ತ್ವೇಕಸ್ಯ ಭಾವವಿಷಯತ್ವಮನ್ಯಯೋಶ್ಚ ಅಭಾವವಿಷಯತ್ವಂ ಇತಿ । ತೇ ಏವ ಅತೀತಾನಾಗತಾವಸ್ಥೇ ಧ್ವಂಸಪ್ರಾಗಭಾವವ್ಯವಹಾರಂ ಜನಯತಃ । ತದತಿರಿಕ್ತಾಭಾವದ್ವಯೇ ಪ್ರಮಾಣಾಭಾವಾದಿತಿ ದಿಕ್ । ಅಧಿಕಂ ತು ಪಾತಂಜಲೇ ದ್ರಷ್ಟವ್ಯಮ್ । (ಯೋ.ವಾ. ೪.೧೨)*

ಅನುವಾದ: ಆದ್ದರಿಂದ ಕಾರ್ಯವು ನಿತ್ಯ, ಅದು ಅತೀತ, ಅನಾಗತ, ವರ್ತಮಾನ ಭೇದಗಳೆಂದೇ ಹೇಳಬೇಕು. ಏಕೆಂದರೆ 'ಹಿಂದೆ ಇದ್ದ ಘಟ', 'ಘಟ ಇದೆ', 'ಘಟ ಮುಂದೆ ಇರುವುದು' ಮುಂತಾದ ಪ್ರತೀತಿಗಳ ಒಂದೇ ರೀತಿಯ ರೂಪವೆಂದು

ತಿಳಿಯುವುದು ಸರಿ. ಒಂದು ಭಾವ ವರ್ತಮಾನದಲ್ಲಿರುವುದು, ಇನ್ನೆರಡು ಅಭಾವ ವಿಷಯಗಳು ಎಂದು ಹೇಳಲಾಗದು. ಇವೆರಡೇ (ಅತೀತ–ಅನಾಗತ) ಅವಸ್ಥೆಗಳು. ಧ್ವಂಸಾಭಾವ, ಪ್ರಾಗಭಾವಗಳ ವ್ಯವಹಾರವನ್ನುಂಟು ಮಾಡುವುವು. ಅತೀತ–ಅನಾಗತ ಅವಸ್ಥೆಗಳಿಗಿಂತ ಭಿನ್ನವಾದ ಪ್ರಧ್ವಂಸಾಭಾವ, ಪ್ರಾಗಭಾವಗಳ ಬಗ್ಗೆ ಪ್ರಮಾಣಗಳಿಲ್ಲ. ಹೆಚ್ಚು ವಿಷಯವನ್ನು ಪಾತಂಜಲ ಯೋಗಸೂತ್ರದಲ್ಲಿ (ಯೋ.ವಾ. ೪.೧೨) ಕಾಣಬಹುದು.

ಭಾಷ್ಯ: *ಏವಮನ್ಯೋನ್ಯಾಭಾವಾತ್ಯಂತಾಭಾವಾವಪ್ಯಧಿಕರಣಸ್ವರೂಪಾವೇವ ।*

ಅನುವಾದ: ಹೀಗೆ ಅತ್ಯಂತಾಭಾವ ಮತ್ತು ಅನ್ಯೋನ್ಯಾಭಾವಗಳೂ ಅಧಿಕರಣ ಸ್ವರೂಪಗಳೇ.

ವಿವರಣೆ: ಅಧಿಕರಣವೆಂದರೆ ಪ್ರತೀತಿಗೆ ಸಾಕ್ಷಿಯಾದ ಸ್ವರೂಪ ಸಂಬಂಧ. ಉದಾ: 'ಘಟವದ್ ಭೂತಲಮ್' ಎಂದು ಹೇಳಿದರೆ ಭೂತಲದಲ್ಲಿ ಘಟಾಧಿಕರಣತೆಯಿರುತ್ತದೆ.

ಭಾಷ್ಯ: *ನ ಚೈವಂ ಪ್ರತಿಯೋಗಿ ಸತ್ತಾಕಾಲೇಽಪ್ಯಧಿಕರಣಸ್ವರೂಪ*
ಅನಪಾಯಾದತ್ಯಂತಾಭಾವಪ್ರತ್ಯಯಪ್ರಸಂಗಃ ।

ಅನುವಾದ: ಪ್ರತಿಯೋಗಿಯು ಇರುವಾಗಲೇ ಅಧಿಕರಣ ಸ್ವರೂಪ ನಷ್ಟವಾಗದೆಂದು ಭಾವಿಸಿದರೆ ಅತ್ಯಂತಾಭಾವಪ್ರತೀತಿಯಾಗುವ ಪ್ರಸಂಗ ಬರುವುದಲ್ಲ, ಎಂದೂ ಹೇಳಲಾಗದು.

ಭಾಷ್ಯ: *ಇತಿ ನ ಚ ವಾಚ್ಯಮ್ । ಪರೈರಪಿ ಪ್ರತಿಯೋಗಿನಮತಿದೇಶೇ ತದಪಿ*
ಅತ್ಯಂತಾಭಾವಾಂಗೀಕಾರಾತ್ ಪ್ರತಿಯೋಗಿ– ।
ಸಂಬಂಧಸ್ಯಾತೀತಾನಾಗತಃ
ವಸ್ಥಯೋಃ ಏವ ಸಾಮಯಿಕಾತ್ಯಂತಾಭಾವತ್ವಸಂಭವಾಚ್ಚ ।
ತಸ್ಮಾನ್ನಾಸ್ಮತ್ಸಿದ್ಧಾಂತೇ ಅಭಾವೋಽತಿರಕ್ತಃ ।
ಕಿಂಚ ಘಟೋ ಧ್ವಸ್ತೋ, ಘಟೋ ಭಾವೀ, ಘಟೋ ನಾಸ್ತಿ ಇತಿ
ಆದಿ ಪ್ರತ್ಯಯನಿಯಾಮಕತಯಾ ಕಿಂಚಿದ್ವಸ್ತ್ವಕಾಂಕ್ಷಾಯಾಂ
ತದ್ಭಾವರೂಪಮೇವ ಕಲ್ಪ್ಯತೇ ಲಾಘವಾತ್ । ಅಭಾವಸ್ಯಾದೃಷ್ಟಸ್ಯ
ಕಲ್ಪನೇ ಗೌರವಾದಿತಿ ಮಂತವ್ಯಮ್ ।

ಅನುವಾದ: ಹಾಗೆಂದು ಹೇಳಬೇಡಿ. ಏಕೆಂದರೆ ಇತರರು ಪ್ರತಿಯೋಗಿಯು ಆ ಸ್ಥಾನದಲ್ಲಿರುವಾಗಲೇ ಅತ್ಯಂತಾಭಾವವನ್ನು ಒಪ್ಪಿದ್ದಾರೆ. ಪ್ರತಿಯೋಗಿಗೆ ಸಂಬಂಧಿಸಿದ ಅತೀತ, ಅನಾಗತಗಳ ಸಾಮಯಿಕ ಅತ್ಯಂತಾಭಾವತ್ವದ ಸಂಭವವಿರುತ್ತದೆ. ಆದ್ದರಿಂದ ನಮ್ಮ ಸಿದ್ಧಾಂತದಲ್ಲಿ ಅಭಾವವು ಅತಿರಿಕ್ತ ಪದಾರ್ಥವಲ್ಲ.

ವಿವರಣೆ: ಸಾಮಯಿಕ ಅಭಾವವೆಂದರೆ ಪ್ರತಿಯೋಗಿಯು ಇಲ್ಲದ ಸಮಯದಲ್ಲಿ ತೋರುವ ಅಭಾವ. ಇದನ್ನು ಅತ್ಯಂತಾಭಾವ ಎಂದು ಕೆಲವರು ಎನ್ನುವರು.

ಅನುವಾದ: 'ಘಟ ಧ್ವಂಸವಾಯಿತು', 'ಘಟವು ಆಗಲಿದೆ', 'ಘಟವು ಇಲ್ಲ' ಇತ್ಯಾದಿ ಪ್ರತೀತಿಯನ್ನು ಉಂಟುಮಾಡುವುದರಿಂದ ಯಾವುದಾದರೂ ವಸ್ತುವಿನ

ಸಂದೇಹವಿರುವಾಗ ಸುಲಭವಾಗಿ ಅದರ ಭಾವರೂಪವನ್ನು ಕಲ್ಪಿಸಿಕೊಳ್ಳಬಹುದು. ಅದೃಷ್ಟದ ಅಭಾವ ಕಲ್ಪನೆ ಮಾಡುವುದು ಉತ್ತಮ.

ವಿವರಣೆ: ಅದೃಷ್ಟಸ್ಯ–ಅಭಾವಸ್ಯ ಎಂದರೆ ದೃಷ್ಟಿಗೆ ಗೋಚರವಾಗದ ಅಭಾವ.

ಭಾಷ್ಯ: *ಇತಶ್ಚ ಸತ್ಕಾರ್ಯ ಸಿದ್ಧಿರಿತ್ಯಾಹ–*

ಈ ಪ್ರಸಂಗದಿಂದ ಸತ್ಕಾರ್ಯ ಸಿದ್ಧಿಯನ್ನು ಹೇಳಿದ್ದಾರೆ.

ಸೂತ್ರ: ನಾಸದುತ್ಪಾದೋ ನೃಶೃಂಗವತ್ ॥ ೧೧೪ ॥

ಸೂತ್ರಾನುವಾದ: ಮನುಷ್ಯನಿಗೆ ಕೊಂಬುಗಳಂತೆ ಅಸದ್ವಸ್ತುವಿನ ಉತ್ಪತ್ತಿಯಾಗದು.

ಭಾಷ್ಯ: *ನರಶೃಂಗತುಲ್ಯಸ್ಯ ಅಸತ ಉತ್ಪಾದೋ ನ ಸಂಭವತೀತ್ಯರ್ಥಃ ।*

ಅನುವಾದ: ಮನುಷ್ಯನಿಗೆ ಕೊಂಬುಗಳು ಇರುವುದು ಹೇಗೆ ಅಸಂಭವವೋ ಹಾಗೆಯೇ ಅಸತ್ತಿನಿಂದ ಸತ್ ಎಂದೂ ಸಂಭವಿಸುವುದಿಲ್ಲ.

ಭಾಷ್ಯ: *ಅತ್ರ ಹೇತುಮಾಹ ।*

ಈ ವಿಷಯದಲ್ಲಿ ಕಾರಣವನ್ನು ಹೇಳುತ್ತಾರೆ.

ಸೂತ್ರ: ಉಪಾದಾನನಿಯಮಾತ್ ॥ ೧೧೫ ॥

ಸೂತ್ರಾನುವಾದ: (ಪ್ರತಿಯೊಂದು ಕಾರ್ಯವೂ) ಉಪಾದಾನ (ಕಾರಣ) ನಿಯತವಾಗಿರುವುದರಿಂದ (ಆ ಕಾರ್ಯವು) ಸತ್ ಎನಿಸಿಕೊಳ್ಳುತ್ತದೆ.

ಭಾಷ್ಯ: *ಮೃದ್ಯೇವ ಘಟ ಉತ್ಪದ್ಯತೇ, ತಂತುಷ್ವೇವ ಪಟ ಇತ್ಯೇವಂ ಕಾರ್ಯಾಣಾಂ ಉಪಾದಾನಕಾರಣಂ ಪ್ರತಿನಿಯಮೋಽಸ್ತಿ । ಸ ನ ಸಂಭವತಿ । ಉತ್ಪತ್ತೇಃ ಪ್ರಾಕ್ ಕಾರಣೇ ಕಾರ್ಯಾಸತ್ತಾಯಾಂ ಹಿ ನ ಕೋಽಪಿ ವಿಶೇಷೋಽಸ್ತಿ, ಯೇನ ಕಂಚಿದೇವಾಸಂತಂ ಜನಯೇತ್, ನೇತರಮಿತಿ । ವಿಶೇಷಾಂಗೀಕಾರೇ ಚ ಭಾವತ್ವುಪತ್ತೇರ್ಗತಂ ಅಸತ್ತಯಾ । ಸ ಏವ ಚ ವಿಶೇಷೋಽಸ್ಮಾಭಿಃ ಕಾಯಸ್ಯ–ಅನಾಗತಾವಸ್ಥಾ ಇತ್ಯುಚ್ಯತೇ ಇತಿ ।*

ಅನುವಾದ: ಮಣ್ಣಿನಿಂದಲೇ ಗಡಿಗೆ ಉತ್ಪನ್ನವಾಗುವುದು, ತಂತುಗಳಿಂದಲೇ ಬಟ್ಟೆ ಎಂದು ಹೀಗೆ ಕಾರ್ಯಗಳ ಉತ್ಪತ್ತಿಯು ತಮ್ಮ ತಮ್ಮ ಉಪಾದಾನ ಕಾರಣಗಳಿಂದಲೇ ಉಂಟಾಗುವುದು. ಹೀಗೆ ಇದಕ್ಕಾಗಿ ನಿಯಮವೇ ಉಂಟು. ಉತ್ಪತ್ತಿಗೆ ಮೊದಲು ಕಾರಣದಲ್ಲಿ ಕಾರ್ಯದ ಅಸ್ತಿತ್ವವು ಯಾವುದೇ ವಿಶೇಷತೆಯನ್ನು ಪಡೆದು ಇಲ್ಲದ ಬೇರೊಂದು ವಸ್ತುವನ್ನು ಉತ್ಪತ್ತಿ ಮಾಡುವುದು ಸಾಧ್ಯವಿಲ್ಲ. ವಿಶೇಷವನ್ನು ಅಂಗೀಕರಿಸಿದಲ್ಲಿ ಕಾರ್ಯವು ಭಾವರೂಪದಲ್ಲಿದೆ ಎಂದು ಸಿದ್ಧವಾಗುವುದು. ಆ ವಿಶೇಷವನ್ನು ನಾವು ಕಾರ್ಯದ ಅನಾಗತ ಅವಸ್ಥೆ ಎನ್ನುತ್ತೇವೆ.

ವಿವರಣೆ: ಕಾರ್ಯವು ಉತ್ಪತ್ತಿಗೆ ಮುಂಚೆ ಕಾರಣದಲ್ಲಿ ಸೂಕ್ಷರೂಪದಲ್ಲಿ ಇರಲೇಬೇಕು. ಇದನ್ನೇ ಸತ್ಕಾರ್ಯವಾದವೆನ್ನುವರು.

ಭಾಷ್ಯ: *ಏತೇನ ಯದ್ವೈಶೇಷಿಕಾಃ ಪ್ರಾಗಭಾವಮೇವ ಕಾರ್ಯೋತ್ಪತ್ತಿನಿಯಾಮಕಂ ಕಲ್ಪಯಂತಿ, ತದಪ್ಯಪಾಸ್ತಮ್ । ಅಭಾವ ಕಲ್ಪನಾಪೇಕ್ಷಯಾ ಭಾವಕಲ್ಪನೇ ಲಾಘವಾತ್, ಭಾವಾನಾಂ ದೃಷ್ಟತ್ವಾತ್, ಅನ್ಯಾನಪೇಕ್ಷತ್ವಾಚ್ಚ ।*

ಅನುವಾದ: ಇದರಿಂದ ವೈಶೇಷಿಕರು ಹೇಳುವ ಪ್ರಾಗಭಾವವನ್ನೇ ಕಾರ್ಯೋತ್ಪತ್ತಿ ನಿಯಾಮಕವೆನ್ನುವರೋ ಅದೂ ನಿರಾಕರಿಸಲ್ಪಟ್ಟಿದೆ. ಅಭಾವವನ್ನು ಕಲ್ಪಿಸುವುದಕ್ಕಿಂತ ಮುಖ್ಯವಾಗಿ ಭಾವದ ಕಲ್ಪನೆಯು ಸುಲಭ. ಭಾವಗಳು ದೃಷ್ಟಿ ಗೋಚರವಾಗುತ್ತವೆ. ಅದಕ್ಕೆ ಬೇರೆಯದನ್ನು ಬಯಸುವುದಿಲ್ಲ.

ಭಾಷ್ಯ: *ಕಿಂಚ ಅಭಾವೇಷು ಸ್ವತೋ ವಿಶೇಷೇ ಭಾವತ್ವಾಪತ್ತಿಃ । ಪ್ರತಿಯೋಗಿರೂಪವಿಶೇಷಶ್ಚ ಪ್ರತಿಯೋಗ್ಯಸತ್ತಾಕಾಲೇನಾಸ್ತಿ । ಅತೋಽಭಾವಾನಾಂ ಅವಿಶಿಷ್ಟತಯಾ ನ ಕಾರ್ಯೋತ್ಪತ್ತೌ ನಿಯಾಮಕತ್ವ ಯುಕ್ತಮಿತಿ ।*

ಅನುವಾದ: ಅಲ್ಲದೆ ಅಭಾವಗಳಲ್ಲಿ ತಾನಾಗಿಯೇ 'ವಿಶೇಷ' ಉಂಟೆಂದು ಭಾವಿಸಿದರೆ ಅದರಲ್ಲಿ ಭಾವತ್ವ ಅಡಗಿರುತ್ತದೆ. ಪ್ರತಿಯೋಗಿ ವಿಶೇಷವು ಪ್ರತಿಯೋಗಿಯೇ ಇಲ್ಲದಿರುವಾಗ ಇರಲಾರದು. ಆದರೆ ಅಭಾವಗಳ ವಿಶೇಷತೆಯನ್ನು ಪಡೆಯಲಾರದ ಕಾರಣ ಕಾರ್ಯೋತ್ಪತ್ತಿಯಲ್ಲಿ ಅವುಗಳನ್ನು ನಿಯಾಮಕಗಳೆಂದು ಹೇಳಲಾಗದು.

ಭಾಷ್ಯ: *ಉಪಾದಾನ ನಿಯಮೇ ಪ್ರಮಾಣಮಾಹ–*

ಅನುವಾದ: ಉಪಾದಾನದ ನಿಯಮವನ್ನು ಕುರಿತು ಪ್ರಮಾಣವನ್ನು ಹೇಳಿದ್ದಾರೆ.

ಸೂತ್ರ: ಸರ್ವತ್ರ ಸರ್ವದಾ ಸರ್ವಾಸಂಭವಾತ್ ॥ ೧೧೬ ॥

ಸೂತ್ರಾನುವಾದ: ಎಲ್ಲ ಕಡೆಯಲ್ಲಿಯೂ ಯಾವಾಗಲೂ ಎಲ್ಲವೂ ಉತ್ಪತ್ತಿಯಾಗಲಾರದು.

ಭಾಷ್ಯ: *ಸುಗಮಮ್ । ಉಪಾದಾನಾನಿಯಮೇ ಚ ಸರ್ವತ್ರ ಸರ್ವದಾ ಸರ್ವಂ ಸಂಭವೇದಿತ್ಯಾಶಯಃ ।*

ಅನುವಾದ: ಇದು ಸುಲಭವಾಗಿದೆ. ಉಪಾದಾನದ ನಿಯಮವಿಲ್ಲದಿದ್ದಲ್ಲಿ 'ಎಲ್ಲ ಕಡೆಯಲ್ಲಿಯೂ ಯಾವಾಗಲೂ ಎಲ್ಲವೂ ಉತ್ಪನ್ನವಾದಾವು' ಎಂದು ಅರ್ಥ.

ಭಾಷ್ಯ: *ಇತಶ್ಚ ನಾಸುದುತ್ಪಾದ ಇತ್ಯಾಹ ।*

ಅನುವಾದ: ಅಷ್ಟೇ ಅಲ್ಲದೆ ಅಸದುತ್ಪಾದವು ಸಾಧ್ಯವಿಲ್ಲವೆನ್ನಲು ಇನ್ನೊಂದು ಕಾರಣವಿದೆ.

ಸೂತ್ರ: ಶಕ್ತಸ್ಯ ಶಕ್ಯಕರಣಾತ್ ॥ ೧೧೭ ॥

ಸೂತ್ರಾನುವಾದ: ಶಕ್ತಿಯನ್ನುಳ್ಳ (ಕಾರಣವು) ಶಕ್ತಿಯುಳ್ಳ ಕಾರ್ಯೋತ್ಪತ್ತಿ ಮಾಡಲು ಸಾಧ್ಯ.

ಭಾಷ್ಯ: *ಕಾರ್ಯಶಕ್ತಿಮತ್ತ್ವಂ ಏವ ಉಪಾದಾನಕಾರಣತ್ತ್ವಮ್ ।
ಅನ್ಯಸ್ಯ ದುರ್ವಚತ್ವಾತ್ ಲಾಘವಾಚ್ಚ । ಸಾ ಶಕ್ತಿಃ ಕಾರ್ಯಸ್ಯ
ಅನಾಗತಾವಸ್ಥೈವ ಇತ್ಯತಃ ಶಕ್ತಸ್ಯ ಶಕ್ಯಕಾರ್ಯ–
ಕರಣಾನ್ನಾಸತ ಉತ್ಪಾದ ಇತ್ಯರ್ಥಃ ।*

ಅನುವಾದ: 'ಉಪಾದಾನಕಾರಣತ್ವ'ವೆಂದರೆ ಕಾರ್ಯವನ್ನುಂಟು ಮಾಡಲು ಇರುವ ಸಾಮರ್ಥ್ಯ, ಬೇರೆಯದಕ್ಕೆ ಆ ಸಾಮರ್ಥ್ಯವಿರದು. ಸುಲಭವೂ ಸಹ. ಆ ಶಕ್ತಿಯು ಕಾರ್ಯ ಇನ್ನೂ ಭಾವರೂಪಕ್ಕೆ ಬರದ ಅವಸ್ಥೆ. ಆದ್ದರಿಂದ ಶಕ್ತಿಯುಳ್ಳದ್ದೇ ಶಕ್ಯದ ಕಾರ್ಯ ಉಂಟುಮಾಡುವುದರಿಂದ ಅಸತ್ ಕಾರ್ಯದ ಉತ್ಪತ್ತಿಯಾಗುವುದು ಅಸಾಧ್ಯ.

ವಿವರಣೆ: ಶಕ್ತಿ ಎಂದರೆ (ಕಾರಣ ನಿಷ್ಠಃ ಕಾರ್ಯೋತ್ಪಾದನ ಯೋಗ್ಯೋ ಧರ್ಮವಿಶೇಷಃ), ಕಾರಣದಲ್ಲಿ ಅಡಗಿರುವ ಕಾರ್ಯವನ್ನು ಉತ್ಪನ್ನ ಮಾಡಬಲ್ಲ ವಿಶೇಷ ಗುಣ.

ಭಾಷ್ಯ: *ಇತಶ್ಚ*

(ಕಾರ್ಯ ಸತ್ ಆಗಲು) ಬೇರೊಂದು (ಕಾರಣವಿದೆ).

ಸೂತ್ರ: 'ಕಾರಣಭಾವಾಚ್ಚ' ॥ ೧೧೮ ॥

ಸೂತ್ರಾನುವಾದ: ಅಲ್ಲದೆ ಕಾರಣದ ರೂಪದಲ್ಲಿ ಕಾರ್ಯವು ಇರುವುದರಿಂದ (ಕಾರ್ಯ ಸತ್ ಎನಿಸಿಕೊಳ್ಳುತ್ತದೆ)

ಭಾಷ್ಯ: *ಉತ್ಪತ್ತೇಃ ಪ್ರಾಗಪಿ ಕಾರ್ಯಸ್ಯ ಕಾರಣಾಭೇದಃ ಶ್ರೂಯತೇ ।
ತಸ್ಮಾಚ್ಚ ಸತ್ಕಾರ್ಯಸಿದ್ಧ್ಯಾ ನಾಸದುತ್ಪಾದ ಇತ್ಯರ್ಥಃ ।
ಕಾರ್ಯಸ್ಯ ಅಸತ್ತ್ವೇ ಹಿ ಸದಸತೋಃ ಅಭೇದಾನುಪಪತ್ತಿಃ ಇತಿ ।
ಉತ್ಪತ್ತೇಃ ಪ್ರಾಕ್ ಕಾರ್ಯಾಣಾಂ ಕಾರಣಾಭೇದೇ ಶ್ರುತಿಃ ।
ತದ್ಧೇದಂ ತರ್ಹ್ಯ ವ್ಯಾಕೃತಮಾಸೀತ್ (ಬೃ.ಉ. ೧.೪.೭)
'ಸದೇವ ಸೋಮ ಇದಮಗ್ರ ಆಸೀತ್' (ಛಾಂ.ಉ. ೬.೧.೨)
ಆತ್ಮೈವೇದಮಗ್ರ ಆಸೀತ್ (ಮೈ.ಉ. ೫.೨) ಆಪ ಏವ ಇದಮಗ್ರ
ಆಸುಃ । (ಬೃ.ಉ. ೫.೫.೧) ಇತ್ಯಾದ್ಯಾಃ ।*

ಅನುವಾದ: ಉತ್ಪತ್ತಿಗೆ ಮೊದಲೂ ಸಹ ಕಾರ್ಯವು ಕಾರಣಕ್ಕಿಂದ ಭಿನ್ನವಾಗಿರದು ಎಂದು ಕೇಳಿದ್ದೇವೆ. ಆದ್ದರಿಂದ ಕಾರ್ಯವು ಕಾರಣದಲ್ಲಿ ಇರುವುದರಿಂದ ಅಸತ್ ಅಥವಾ ಇಲ್ಲದ ವಸ್ತು ಉತ್ಪನ್ನವಾಗಲಾರದು. ಕಾರ್ಯವು ಇಲ್ಲದಿರುವಾಗ ಸತ್–ಅಸತ್‌ಗಳು ಅಭಿನ್ನವಾಗಿ ಬಿಡುತ್ತವೆ. ಉತ್ಪತ್ತಿಗೆ ಮುಂಚೆ ಕಾರ್ಯ–ಕಾರಣಗಳ ಅಭೇದದ ವಿಷಯದಲ್ಲಿ 'ಈ ಜಗತ್ತು ಆ ಸಮಯದಲ್ಲಿ ತೋರ್ಪಟ್ಟಿರಲಿಲ್ಲ'. 'ಹೇ ಸೌಮ್ಯ, ಆರಂಭದಲ್ಲಿ ಇದೊಂದೇ ಇತ್ತು'. 'ಆತ್ಮವೇ ಪ್ರಾರಂಭದಲ್ಲಿ ಇತ್ತು', 'ಈ ಜಗತ್ತು ಮೊದಲು ನೀರೇ ಆಗಿತ್ತು' ಇತ್ಯಾದಿಗಳು.

ಭಾಷ್ಯ: *ಶಂಕತೇ ।*

ಅನುವಾದ: ಹೀಗೇಕೆ? ಎಂದು ಸಂದೇಹಪಡುತ್ತಾರೆ–

ಸೂತ್ರ: ನ ಭಾವೇ ಭಾವಯೋಗಶ್ಚೇತ್ ॥ ೧೧೯ ॥

ಅನುವಾದ: ಕಾರ್ಯದ ಅಸ್ತಿತ್ವವಿದ್ದರೆ ಅದಕ್ಕೆ ಉತ್ಪತ್ತಿಯ ಸಂಬಂಧವಿರದು.

ಭಾಷ್ಯ: *ನನ್ವೇವಂ ಕಾರ್ಯಸ್ಯ ನಿತ್ಯತ್ವೇ ಸತಿ ಭಾವರೂಪೇ ಕಾರ್ಯೇ ಭಾವಯೋಗ ಉತ್ಪತ್ತಿಯೋಗೋ ನ ಸಂಭವತಿ । ಅಸತಃ ಸತ್ತ್ವ ಏವೋತ್ಪತ್ತಿವ್ಯವಹಾರಾದಿತಿ ಚೇದಿತ್ಯರ್ಥಃ ॥*

ಅನುವಾದ: ಹೀಗೆ ಕಾರ್ಯವು ನಿತ್ಯವಾಗಿರುವಾಗ ಭಾವರೂಪವುಳ್ಳ ಕಾರ್ಯದಲ್ಲಿ 'ಭಾವಯೋಗ' ಎಂದರೆ 'ಉತ್ಪತ್ತಿಯೋಗ' ಉಂಟಾಗದು. ಏಕೆಂದರೆ 'ಅಸತ್' ಅಥವಾ ಇಲ್ಲದ ವಸ್ತುವಿನಿಂದ 'ಸತ್' ಉತ್ಪನ್ನವಾಗುವುದು ಎಂಬ ವ್ಯವಹಾರವಿದೆಯಲ್ಲ (ಎಂಬ ಸಂದೇಹ ಬಂದರೆ)

ಭಾಷ್ಯ: *'ಪರಿಹರತಿ'*

ಅದಕ್ಕೆ ಪರಿಹಾರ ನೀಡುವರು.

ಸೂತ್ರ: ನಾಭಿವ್ಯಕ್ತಿ ನಿಬಂಧನೌ ವ್ಯವಹಾರಾವ್ಯವಹಾರೌ ॥ ೧೨೦ ॥

ಸೂತ್ರಾನುವಾದ: ಹಾಗಲ್ಲ; ವ್ಯವಹಾರ ಮತ್ತು ಅವ್ಯವಹಾರಗಳು (ಕಾರ್ಯದ) ಅಭಿವ್ಯಕ್ತಿ ಮತ್ತು ಅನಭಿವ್ಯಕ್ತಿಗಳನ್ನು ಅವಲಂಬಿಸಿರುತ್ತವೆ.

ಭಾಷ್ಯ: *ಕಾರ್ಯೋತ್ಪತ್ತೇರ್ವ್ಯವಹಾರಾವ್ಯವಹಾರೌ ಕಾರ್ಯಾಭಿವ್ಯಕ್ತಿ ನಿಮಿತ್ತಕೌ । ಅಭಿವ್ಯಕ್ತಿತಃ ಉತ್ಪತ್ತಿವ್ಯವಹಾರೋಽಭಿವ್ಯಕ್ತ್ಯಭಾವಾಚ್ಚ ಉತ್ಪತ್ತಿ ವ್ಯವಹಾರಾಭಾವಃ, ನ ತ್ವಸತಃ ಸತ್ತಯೇತ್ಯರ್ಥಃ ।*

ಅನುವಾದ: ಕಾರ್ಯೋತ್ಪತ್ತಿಯ ವ್ಯವಹಾರ ಅವ್ಯವಹಾರಗಳು ಕಾರ್ಯದ ಅಭಿವ್ಯಕ್ತಿಗೆ ನಿಮಿತ್ತಗಳು. ಅಭಿವ್ಯಕ್ತಿಯಿಂದ ಉತ್ಪತ್ತಿ ವ್ಯವಹಾರವೂ ಅಭಿವ್ಯಕ್ತಿಯ ಅಭಾವದಿಂದ ಉತ್ಪತ್ತಿಯ ವ್ಯವಹಾರದ ಅಭಾವವೂ ಆಗುವುವು. ಅಸತ್ ಕಾರ್ಯದಿಂದ ಸತ್ ಕಾರ್ಯವು ಉಂಟಾಗದು.

ವಿವರಣೆ: ಇಲ್ಲಿ ವ್ಯವಹಾರವೆಂದರೆ 'ಶಬ್ದಪ್ರಯೋಗ'

ಭಾಷ್ಯ: *ಅಭಿವ್ಯಕ್ತಿಶ್ಚ ನ ಜ್ಞಾನಂ, ಕಿಂ ತು ವರ್ತಮಾನಾವಸ್ಥಾ । ಕಾರಣವ್ಯಾಪಾರೋಽಪಿ ಕಾರ್ಯಸ್ಯ ವರ್ತಮಾನಲಕ್ಷಣಂ ಏವ ಜನಯತಿ । ಸತಶ್ಚ ಕಾರ್ಯಸ್ಯ ಕಾರಣವ್ಯಾಪಾರಾತ್ ಅಭಿವ್ಯಕ್ತಿಮಾತ್ರಂ ಲೋಕೇಽಪಿ ದೃಷ್ಟಮ್ । ಯಥಾ ಶಿಲಾ–ಮಧ್ಯಸ್ಥ ಪ್ರತಿಮಾಯಾಃ ಲೈಂಗಿಕವ್ಯಾಪಾರೇಣ ಅಭಿವ್ಯಕ್ತಿ–*

ಮಾತ್ರಂ, ತಿಲಸ್ಥತೈಲಸ್ಯ ಚ ನಿಪೀಡನೇವ, ಧಾನ್ಯಸ್ಥತಂಡುಲಸ್ಯ ಚಾವಘಾತೇನೇತಿ ।

ಅನುವಾದ: ಅಭಿವ್ಯಕ್ತಿಯೆಂದರೆ ಜ್ಞಾನವಲ್ಲ. ಅದು 'ವರ್ತಮಾನ ಅವಸ್ಥೆ'. ಕಾರಣ ವ್ಯಾಪಾರವೂ ಕಾರ್ಯದ ವರ್ತಮಾನ ಲಕ್ಷಣದಿಂದ ಕೂಡಿದ ಪರಿಣಾಮವನ್ನು ಉತ್ಪತ್ತಿ ಮಾಡುವುದು ಲೋಕದಲ್ಲಿ ಕಂಡಂತೆ ಸತ್– ಕಾರ್ಯವು ಕಾರಣ ವ್ಯಾಪಾರವಿರುವಾಗ ಗೋಚರವಾಗುವುದು ಹೇಗೆ ಶಿಲೆಯ ನಡುವೆ ಇರುವ ಪ್ರತಿಮೆಯಲ್ಲಿ ಶಿಲೆಯ ಕಾರಣದಿಂದ ಅಭಿವ್ಯಕ್ತಿ ಮಾತ್ರವೋ, ಹೇಗೆ ಎಳ್ಳಿನಲ್ಲಿರುವ ಎಣ್ಣೆಯನ್ನು ಹಿಂಡುವುದರಿಂದ ಪಡೆಯುವೆವೋ, ಧಾನ್ಯವು ಬತ್ತವನ್ನು ಕುಟ್ಟುವುದರಿಂದ ದೊರೆಯುವುದೋ ಹಾಗೆ ಕಾರ್ಯದ ಅಭಿವ್ಯಕ್ತಿಯಾಗುವುದು.

ಭಾಷ್ಯ: *ತದುಕ್ತಂ ವಾಸಿಷ್ಠೇ*

ಯೋಗವಾಸಿಷ್ಠದಲ್ಲಿ ಹೀಗೆ ಹೇಳಿದೆ.

ಸುಷುಪ್ತಾವಸ್ಥಯಾ ಚಕ್ರಪದ್ಮರೇಖಾಃ ಶಿಲೋದರೇ ।
ಯಥಾ ಸ್ಥಿತಾ ಚಿತೇರಂತಃ ತಥೇಯಂ ಜಗದಾವಲೀ ॥ ಇತಿ ॥
ಪ್ರಕೃತಿದ್ವಾರೇಣೇತ್ಯರ್ಥಃ ।

ಅನುವಾದ: ಕಲ್ಲಿನ ಒಳಗಡೆ ಸುಷುಪ್ತಾವಸ್ಥೆಯಲ್ಲಿರುವ ಚಕ್ರರೇಖೆ, ಪದ್ಮರೇಖೆಗಳು ಹೇಗೆ ಇರುವುವೋ ಹಾಗೆಯೇ ಚಿತ್ತದ ಒಳಗಡೆ ಪ್ರಕೃತಿಯ ದ್ವಾರಾ ಈ 'ಜಗದಾವಲೀ' ಇರುತ್ತದೆ ಎಂದರ್ಥ

ಭಾಷ್ಯ: *ನನು ಭವತೂತ್ಪತ್ತೇಃ ಪ್ರಾಕ್ ಸತಃ ಯಥಾಕಥಂಚಿದುತ್ಪತ್ತಿಃ । ನಾಶಸ್ತು ಅನಾದಿಭಾವಸ್ಯ ಕಥಂ ಸ್ಯಾದಿತ್ಯಾಕಾಂಕ್ಷಾಯಾಂ ಆಹ–*

ಅನುವಾದ: ಉತ್ಪತ್ತಿಗೆ ಮೊದಲು ಹೇಗೋ 'ಸತ್'ನ ಉತ್ಪತ್ತಿಯು ಆಗಿರಲಿ. ಆದರೆ ಅನಾದಿಭಾವದ ನಾಶವಾದರೂ ಹೇಗೆ ಆದೀತು ಎಂದು ಸಂದೇಹಕ್ಕೆ ಉತ್ತರ–

ಸೂತ್ರ: ನಾಶಃ ಕಾರಣಲಯಃ ॥ ೧೨೧ ॥

ಸೂತ್ರಾನುವಾದ: (ವಸ್ತುವಿನ) ನಾಶ ಎಂದರೆ 'ಕಾರಣದಲ್ಲಿ ಲೀನವಾಗಿಬಿಡುವುದು'.

ಭಾಷ್ಯ: *'ಲೀಙ್ ಶ್ಲೇಷಣೇ' (ಧಾತು ಪಾಠ ೯–೩೩) ಇತ್ಯನುಶಾಸನಾತ್– ಲಯಃ ಸೂಕ್ಷ್ಮತಯಾ ಕಾರಣೇಷು ಅವಿಭಾಗಃ । ಸ ಏವ ಅತೀತಾಖ್ಯೋ ನಾಶ ಇತ್ಯುಚ್ಯತೇ ಇತ್ಯರ್ಥಃ । ಅನಾಗತಾಖ್ಯಸ್ತು ಲಯಃ ಪ್ರಾಗಭಾವಃ ಇತ್ಯುಚ್ಯತೇ ಇತಿ ಶೇಷಃ । ಲೀನ–ಕಾರ್ಯವ್ಯಕ್ತೇಸ್ತು ಪುನರಭಿವ್ಯಕ್ತಿರ್ನಾಸ್ತಿ, ಪ್ರತ್ಯಭಿಜ್ಞಾಪತ್ತ್ಯಾ ಪಾತಂಜಲೇ ನಿರಾಕೃತತ್ವಾತ್ । ಪರೋಕ್ಷಾಮಿವಾಸ್ಮಾಕಮಪಿ ಅನಾಗತಾವಸ್ಥಾಯಾಃ ಪ್ರಾಗಭಾವಾಖ್ಯಾಯಾಃ ಅಭಿವ್ಯಕ್ತಿಹೇತುತ್ವಾತ್ ಚ ।*

ಅನುವಾದ: 'ಲೀಙ್ ಶ್ಲೇಷಣೆ' ('ಲೀ' ಧಾತುವಿನ ಅರ್ಥ ಬೆರೆತು ಹೋಗುವುದು) ಎಂಬ ನಿಯತಾರ್ಥದಂತೆ ಲಯ ಎಂದರೆ ಸೂಕ್ಷ್ಮವಾಗಿ ಕಾರಣದಲ್ಲಿ ಬೆರೆತು ಹೋಗುವುದು. ಈ ಪ್ರಸಂಗವನ್ನು 'ಅತೀತ' ಎಂಬ ನಾಶವೆನ್ನುವರು ಎಂದು ಅರ್ಥ. 'ಅನಾಗತ'ವೆಂದರೆ ಲಯದ ಪ್ರಾಗಭಾವ ಎಂದು ಹೇಳುವರು ಎಂದು ಉಳಿದ ಅರ್ಥ. ಲೀನವಾದ ಕಾರ್ಯದ ಅಭಿವ್ಯಕ್ತಿಯು ಮತ್ತೆ ಗೋಚರವಾಗದು; ಏಕೆಂದರೆ ಹಾಗಿಲ್ಲದಿದ್ದಲ್ಲಿ ಮತ್ತೆ ಅಭಿವ್ಯಕ್ತಿಯಾಗುವ ಸಂಭವವಿರುವುದರಿಂದ ಪತಂಜಲಿಯ ಯೋಗಸೂತ್ರದಲ್ಲಿ ನಿರಾಕರಿಸಲಾಗಿದೆ. ನಾವೂ ಸಹ ಇತರರಂತೆ ಅನಾಗತ ಅವಸ್ಥೆಯನ್ನು ಅಭಿವ್ಯಕ್ತಿಗೆ ಕಾರಣವಾದ್ದರಿಂದ ಪ್ರಾಗಭಾವ ಎಂದು ಹೇಳಿದ್ದೇವೆ.

ಭಾಷ್ಯ: *ನನ್ವತೀತಮಪ್ಯಸ್ತೀತ್ಯತ್ರ ಕಿಂ ಪ್ರಮಾಣಮ್ ।*
ನ ಹ್ಯನಾಗತಸತ್ತಾಯಾಂ ಇವ ಶ್ರುತ್ಯಾದಯೋಽತೀತ–
ಸತ್ತಾಯಾಮಪಿ ಸ್ಫುಟಮುಪಲಭ್ಯಂತೇ ಇತಿ ।

ಅನುವಾದ: ಅತೀತವೂ ('ಅಸ್ತಿ') ಇದೆ ಎಂದು ಹೇಳಲು ಏನು ಪ್ರಮಾಣ? 'ಅನಾಗತ ಸತ್ತಾ'ದಂತೆ ಶ್ರುತಿಗಳು 'ಅತೀತ ಸತ್ತಾ'ವನ್ನು ಸ್ಪಷ್ಟವಾಗಿ ಹೇಳಿರುವುದು ದೊರೆಯುವುದಿಲ್ಲವಲ್ಲ.

ಭಾಷ್ಯ: *ಮೈವಮ್ । ಯೋಗಿಪ್ರತ್ಯಕ್ಷತ್ವಾನ್ಯಥಾನುಪಪತ್ತ್ಯಾ*
ಅನಾಗತ– ಅತೀತಯೋಃ ಉಭಯೋರೇವ ಸತ್ತ್ವಸಿದ್ಧೇಃ
ಪ್ರತ್ಯಕ್ಷಸಾಮಾನ್ಯೇ ವಿಷಯಸ್ಯ ಹೇತುತ್ವಾತ್ । ಅನ್ಯಥಾ
ವರ್ತಮಾನಸ್ಯಾಪಿ ಪ್ರತ್ಯಕ್ಷೇಣಾಸಿದ್ಧಾಪತ್ತೇಃ । ತಸ್ಮಾತ್
ಧಿಯಾಮೌತ್ಸರ್ಗಿಕಪ್ರಾಮಾಣ್ಯೇನ ಅಸತಿ ಬಾಧಕೇ ಯೋಗಿ–
ಪ್ರತ್ಯಕ್ಷೇಣಾತೀತಮಪ್ಯಸ್ತೀತಿ ಸಿದ್ಧ್ಯತಿ । ಯೋಗಿನಾಂ
ಅತೀತ–ಅನಾಗತ ಪ್ರತ್ಯಕ್ಷೇ ಚ ಶ್ರುತಿಸ್ಮೃತೀತಿಹಾಸಾದಿಕಂ
ಪ್ರಮಾಣಂ ಯೋಗವಾರ್ತಿಕೇ ಪ್ರಪಂಚಿತಂ ಇತಿ ದಿಕ್ ।

ಅನುವಾದ: ಅತೀತ–ಅನಾಗತಗಳೆರಡೂ ಯೋಗಿಗಳಿಗೆ ಪ್ರತ್ಯಕ್ಷವಾಗುವುದರಿಂದ ಅವುಗಳು ಇದ್ದ ಹೊರತು ಪ್ರತ್ಯಕ್ಷವಾಗುತ್ತಿರಲಿಲ್ಲ, ಪ್ರತ್ಯಕ್ಷ ಸಾಮಾನ್ಯದಲ್ಲಿ ವಿಷಯವು ಹೇತುವಾದುದು. ಹಾಗಿಲ್ಲದಿದ್ದಲ್ಲಿ ವರ್ತಮಾನದಲ್ಲಿಯೂ ವಸ್ತುಗಳು ಪ್ರತ್ಯಕ್ಷದಲ್ಲಿ ಸಿದ್ಧವಾಗುವುದಿಲ್ಲ. ಬುದ್ಧಿಯು ಪ್ರಾಮಾಣ್ಯವು ಸ್ವಾಭಾವಿಕವಾದ್ದರಿಂದ ಬಾಧಕಗಳಿಲ್ಲದಿರುವಾಗ ಯೋಗಿಗಳಿಗೆ ಪ್ರತ್ಯಕ್ಷವಾಗುವ ಅತೀತವೂ ಸಹ ಇದೆ ಎಂದು ಸಿದ್ಧವಾಗುತ್ತದೆ. ಯೋಗಿಗಳಿಗಾಗುವ ಅತೀತ–ಅನಾಗತ ಪ್ರತ್ಯಕ್ಷಗಳು ಮತ್ತು ಶ್ರುತಿ, ಸ್ಮೃತಿ, ಇತಿಹಾಸಗಳಿಂದ ದೊರೆಯುವ ಪ್ರಮಾಣ ಇವುಗಳನ್ನು ಯೋಗವಾರ್ತಿಕದಲ್ಲಿ ನಾವು ತೋರಿಸಿದ್ದೇವೆ.

ಭಾಷ್ಯ: *ತದೇವಮಭಿವ್ಯಕ್ತಿಲಯಾಭ್ಯಾಂ ಕಾರ್ಯಾಣಾಂ ಉತ್ಪತ್ತಿ ವಿನಾಶ–*
ವ್ಯವಹಾರಾವುಕ್ತೌ ।

ಅನುವಾದ: ಮೇಲೆ ಹೇಳಿದ ರೀತಿಯಲ್ಲಿ 'ಅಭಿವ್ಯಕ್ತಿ' ಮತ್ತು 'ಲಯ' ಇವುಗಳ ಆಧಾರದ ಮೇಲೆ ಕಾರ್ಯಗಳ ಉತ್ಪತ್ತಿ–ವಿನಾಶಗಳನ್ನು ಹೇಳಲಾಗಿದೆ.

ಭಾಷ್ಯ: *ನನು ಅಭಿವ್ಯಕ್ತಿರಪಿ ಪೂರ್ವಂ ಸತೀ ವಾ ಅಸತೀವಾ?*
ಆದ್ಯೇ ಕಾರಣವ್ಯಾಪಾರಾತ್
ಪ್ರಾಗಪಿ ಕಾರ್ಯಸ್ಯಾಭಿವ್ಯಕ್ತ್ಯಾ ಸ್ವಕಾರ್ಯಜನಕತ್ವಾಪತ್ತಿಃ ।
ಕಾರಣವ್ಯಾಪಾರಶ್ಚ ವಿಫಲಃ । ಅಂತ್ಯೇ ಚಾಭಿವ್ಯಕ್ತೌ ಏವ
ಸತ್ಕಾರ್ಯಸಿದ್ಧಾಂತಕ್ಷತಿಃ, ಅಸತ್ಯಾ ಏವ ಅಭಿವ್ಯಕ್ತೇಃ
ಅಭಿವ್ಯಕ್ತ್ಯಂಗೀಕಾರಾದಿತಿ ।

ಅನುವಾದ: ಅಭಿವ್ಯಕ್ತಿಯು ಮೊದಲು 'ಸತ್' ಆಗಿರುತ್ತದೆಯೇ ಅಥವಾ 'ಅಸತ್' ಆಗಿರುತ್ತದೆಯೆ? ಮೊದಲನೆಯದಾದರೆ ಕಾರಣ ವ್ಯಾಪಾರಕ್ಕೆ ಮೊದಲೇ ಕಾರ್ಯವು ಗೋಚರವಾಗುವಂತೆ ಆಗಿ ತನ್ನ ಕಾರ್ಯಕ್ಕೆ ತಾನೇ ಕಾರಣವಾದಂತಾಗುವುದು. ಕಾರಣದ ವ್ಯಾಪಾರ ವಿಫಲವಾದಂತೆಯೇ. ಅಸತ್‌ನಿಂದಲೇ ಅಭಿವ್ಯಕ್ತಿಯಾಯಿತೆಂದರೆ ಅಸತ್ಕಾರ್ಯ ಸಿದ್ಧಾಂತವು ಭಂಗವಾಗುವುದು–

ಭಾಷ್ಯ: *ಅತ್ರ ಉಚ್ಯತೇ । ಕಾರಣವ್ಯಾಪಾರಾತ್ ಪ್ರಾಕ್ ಸರ್ವಕಾರ್ಯಾಣಾಂ*
ಸದಾ ಸತ್ತ್ವಾಭ್ಯುಗಮೇನೋಕ್ತವಿಕಲ್ಪಾನವಕಾಶಾತ್ ಘಟವತ್
ತದಭಿವ್ಯಕ್ತೇರಪಿ ವರ್ತಮಾನಾಽವಸ್ಥಯಾ ಪ್ರಾಗಸತ್ತ್ವೇನ
ತದಸತ್ತಾನಿವೃತ್ತ್ಯರ್ಥಂ ಕಾರಣವ್ಯಾಪಾರಾಪೇಕ್ಷಣಾತ್ ।
ಅನಾಗತಾವಸ್ಥಯಾ ಚ ಸತ್ಕಾರ್ಯ ಸಿದ್ಧಾಂತಸ್ಯ ಅಕ್ಷತೇಃ ।

ಅನುವಾದ: ಈ ವಿಷಯದಲ್ಲಿ ಹೀಗೆ ಹೇಳುತ್ತೇವೆ. ಕಾರಣ ವ್ಯಾಪಾರಕ್ಕೆ ಮೊದಲು ಎಲ್ಲ ಕಾರ್ಯಗಳ ಸತ್ತಾವನ್ನು ಸ್ವೀಕರಿಸಿರುವುದರಿಂದ ಮೇಲೆ ಹೇಳಿದ ಸಂದೇಹಕ್ಕೆ ಅವಕಾಶವಿಲ್ಲದ ಕಾರಣ ಗಡಿಗೆಯಂತೆ ಅದರ ಅಭಿವ್ಯಕ್ತಿಯೂ ಅಭಿವ್ಯಕ್ತಿಗೆ ಮೊದಲೇ ವರ್ತಮಾನದ ಅವಸ್ಥೆಯ ರೂಪದಲ್ಲಿ ಅಸತ್ತ್ವವಾಗಿಯೇ ಇರುತ್ತದೆ. ಆ ಅಸತ್ತನ್ನು ಹೋಗಲಾಡಿಸಲು ಕಾರಣದ ವ್ಯಾಪಾರದ ಅಗತ್ಯವಿರುತ್ತದೆ. ಕಾರ್ಯವು ಅನಾಗತಾವಸ್ಥೆಯಲ್ಲಿಯೇ ಇರುವುದರಿಂದ ಸತ್ಕಾರ್ಯ ಸಿದ್ಧಾಂತಕ್ಕೆ ಚ್ಯುತಿ ಬಾರದು.

ಭಾಷ್ಯ: *ನನ್ವೇಕದಾ ಸದಸತ್ತ್ವಯೋರ್ವಿರೋಧಃ ।*

ಅನುವಾದ: ಒಂದೇ ಕಾಲದಲ್ಲಿ ಸತ್ತ್ವ ಮತ್ತು ಅಸತ್ತ್ವಗಳು ಇರುವುದು ಅಸಾಧ್ಯ.

ಭಾಷ್ಯ: *ಇತಿ ಚೇತ್, ಪ್ರಕಾರಭೇದಸ್ಯೋಕ್ತತ್ವಾತ್ ।*

ಅನುವಾದ: ಹಾಗೆಂದರೆ ಪ್ರಕಾರಭೇದವನ್ನು ಹೇಳಲಾಗಿದೆಯಲ್ಲ.

ಭಾಷ್ಯ: *ನನ್ವೇವಮಪಿ ಪ್ರಾಗಭಾವಾನಂಗೀಕಾರೇಣ ಪ್ರಾಗಸತ್ತ್ವಮೇವ*
ಕಾರ್ಯಾಣಾಂ ದುರ್ವಚಮಿತಿ ।

ಅನುವಾದ: ಹಾಗಿದ್ದರೂ ನೀವು ಪ್ರಾಗಭಾವವನ್ನು ಅಂಗೀಕರಿಸದೇ ಇರುವುದರಿಂದ ಉತ್ಪತ್ತಿಗೆ ಮೊದಲು ಅಸತ್ತ್ವವನ್ನು ಹೇಗೆ ಕಲ್ಪಿಸುವಿರಿ?

ಭಾಷ್ಯ: *ಮೈವಮ್ । ಅವಸ್ಥಾನಮೇವ ಪರಸ್ಪರಾಭಾವರೂಪತ್ವಾದಿತಿ ।*

ಅನುವಾದ: (ಭೂತ) ವರ್ತಮಾನ, (ಭವಿಷ್ಯತ್)ಗಳಲ್ಲಿರುವ ಅವಸ್ಥೆಗಳೇ ಪರಸ್ಪರ ಅಭಾವ ರೂಪದಲ್ಲಿರುತ್ತವೆ.

ಭಾಷ್ಯ: *ನನು ಸತ್ಕಾರ್ಯ ಸಿದ್ಧಾಂತರಕ್ಷಾರ್ಥಂ ಅಭಿವ್ಯಕ್ತೇರಪಿ ಅಭಿವ್ಯಕ್ತಿರೇಷ್ಟವ್ಯಾ, ತಥಾ ಚಾನವಸ್ಥಾ ಇತ್ಯಾಶಂಕ್ಯಾಹ ।*

ಅನುವಾದ: ಸತ್ಕಾರ್ಯ ಸಿದ್ಧಾಂತವನ್ನು ಉಳಿಸಲು ಅಭಿವ್ಯಕ್ತಿಯ ಅಭಿವ್ಯಕ್ತಿಯನ್ನು ಸ್ವೀಕರಿಸಬೇಕಾಗುವುದು. ಹಾಗೆಯೇ ಇದು ಅನವಸ್ಥಾ ದೋಷಕ್ಕೆ ಗುರಿಯಾಗುವುದು ಎಂದು ಸಂದೇಹ ಬರಲು ಹೀಗೆ ಹೇಳಿದೆ.

ಸೂತ್ರ: ಪಾರಂಪರ್ಯತೋಽನ್ವೇಷಣಾ ಬೀಜಾಂಕುರವತ್ ॥ ೧೨೨ ॥

ಸೂತ್ರಾನುವಾದ: ಬೀಜ–ಮೊಳಕೆಗಳಿಗೆ ಸಮಾನವಾಗಿ (ಅಭಿವ್ಯಕ್ತಿಯ) ಪರಂಪರೆಯ ನೆಲೆಯ ಮೇಲೆ ಅದನ್ನು ವಿಚಾರ ಮಾಡಬೇಕು.

ಭಾಷ್ಯ: *ಪಾರಂಪರ್ಯತಃ ಪರಂಪರಾರೂಪೇಣೈಮಭಿವ್ಯಕ್ತೇ ಅನುಧಾವನಂ ಕರ್ತವ್ಯಂ, ಬೀಜಾಂಕುರವತ್ ಪ್ರಾಮಾಣಿಕತ್ವೇನ ಚಾಸ್ಯಾ ಅದೋಷತ್ವಾದಿತ್ಯರ್ಥಃ । ಬೀಜಾಂಕುರಾಭ್ಯಾಂ ಚ ಅತ್ರ ಅಯಮೇವ ವಿಶೇಷಃ, ಯದ್ ಬೀಜಾಂಕುರಸ್ಥಲೇ ಕ್ರಮಿಕ ಪರಂಪರಯಾನವಸ್ಥಾ, ಅಭಿವ್ಯಕ್ತೌ ಚ ಏಕಕಾಲೀನ–ಪರಂಪರಯೇತಿ । ಪ್ರಾಮಾಣಿಕತ್ವಂ ತು ತುಲ್ಯಮೇವೇತಿ ।*

ಅನುವಾದ: 'ಪಾರಂಪರ್ಯತಃ' ಎಂದರೆ ಪರಂಪರಾರೂಪದಿಂದ ಅಭಿವ್ಯಕ್ತಿಯ ತತ್ತ್ವಾನ್ವೇಷಣೆ ಮಾಡಬೇಕು. ಬೀಜಾಂಕುರದಂತೆ ಪ್ರಾಮಾಣಿಕವಾಗಿ ತತ್ತ್ವಾನ್ವೇಷಣೆ ಮಾಡಿದರೆ ತಪ್ಪೇನಿಲ್ಲ. ಬೀಜಾಂಕುರಗಳಂತೆ ಎಂದರೆ ವಿಶೇಷವೆಂದರೆ, ಬೀಜದಿಂದ ಅಂಕುರ ಮತ್ತು ಅಂಕುರದಿಂದ ಬೀಜ ಎಂಬ ಈ ಕ್ರಮಿಕ ಪರಂಪರೆಯಿಂದಷ್ಟೇ ಅನವಸ್ಥಾ; ಆದರೆ ಅಭಿವ್ಯಕ್ತಿಯಲ್ಲಿ ಏಕಕಾಲೀನ ಪರಂಪರೆಯು ಸಂಭವಿಸುವುದು. ಪ್ರಾಮಾಣಿಕವಾಗಿ ಇವೆರಡೂ ಒಂದೇ.

ವಿವರಣೆ: ಭಾಷ್ಯಕಾರನು ಇಲ್ಲಿ ಕ್ರಮಿಕಪರಂಪರೆ ಮತ್ತು ಏಕಕಾಲೀನ ಪರಂಪರೆ ಇವೆರಡು ಭಿನ್ನ ಎಂದು ಸ್ಪಷ್ಟಪಡಿಸಿದ್ದಾನೆ. ಕ್ರಮಿಕ ಪರಂಪರೆ ಎಂದರೆ ಒಂದರ ನಂತರ ಮತ್ತೊಂದು ಪ್ರಕಟವಾಗುವುದು. ಆದರೆ ಏಕಕಾಲಿಕ ಪರಂಪರೆ ಎಂದರೆ ಸಮಕಾಲದಲ್ಲಿಯೇ ಪ್ರಕಟವಾಗುವುದು. ಒಂದನ್ನೊಂದು ಅವಲಂಬಿಸುವ ವಿಷಯದಲ್ಲಿ ಎರಡೂ ಸಮವೇ.

ಭಾಷ್ಯ: *ಸರ್ವಕಾರ್ಯಾಣಾಂ ಸ್ವರೂಪತೋ ನಿತ್ಯತ್ವಮವಸ್ಥಾಭಿಃ ವಿನಾಶಿತ್ವಂ ಚೇತಿ ಪಾತಂಜಲಭಾಷ್ಯೇ (೩.೧೩, ೪.೧೨) ವದದ್ಭಿಃ ವ್ಯಾಸದೇವೈಃ ಅಪಿ ಇಯಮಸ್ಥಾ ಪ್ರಾಮಾಣಿಕತ್ವೇನಸ್ವೀಕೃತಾ ।*

ಅನುವಾದ: ಎಲ್ಲಾ ಕಾರ್ಯಗಳು ಸ್ವರೂಪದಲ್ಲಿ ನಿತ್ಯವಾಗಿ ಇರುವುದು ಮತ್ತು ಅವಸ್ಥೆಗಳಲ್ಲಿ ವಿನಾಶಿತ್ವ ಇರುವುದು ಎಂದು ಪಾತಂಜಲ ಭಾಷ್ಯದಲ್ಲಿ ಹೇಳಿದ ವ್ಯಾಸದೇವರು ಈ ಅನವಸ್ಥೆಯನ್ನು ಪ್ರಾಮಾಣಿಕವೆಂದಿದ್ದಾರೆ.

ಭಾಷ್ಯ: *ಅತ್ರ ಚ ಬೀಜಾಂಕುರದೃಷ್ಟಾಂತಃ ಲೋಕದೃಷ್ಟ್ಯಾ ಉಪನ್ಯಸ್ತಃ । ವಸ್ತುತಸ್ತು ಜನ್ಮಕರ್ಮಾದಿವತ್ ಇತ್ಯತ್ರೈವ ತಾತ್ಪರ್ಯಮ್ । ತೇನ ಬೀಜಾಂಕುರಪ್ರವಾಹಸ್ಯ ಆದಿಸರ್ಗಾವಧಿಕತ್ವೇನಾನವಸ್ಥಾವಿರಹೇಽಪಿ ನ ಕ್ಷತಿಃ । ಆದಿಸರ್ಗೇ ಹಿ ವೃಕ್ಷಂ ವಿನೈವ ಬೀಜಮುತ್ಪದ್ಯತೇ ಹಿರಣ್ಯಗರ್ಭಸಂಕಲ್ಪೇನ ತಚ್ಛರೀರಾದಿಭ್ಯ ಇತಿ ಶ್ರುತಿಸ್ಮೃತ್ಯೋಃ ಪ್ರಸಿದ್ಧಮ್ ।*

ಅನುವಾದ: ಈ ವಿಷಯದಲ್ಲಿ ಬೀಜಾಂಕುರ ದೃಷ್ಟಾಂತವು ಲೋಕದ ವ್ಯವಹಾರದ ದೃಷ್ಟಿಯಿಂದ ಹೇಳಲ್ಪಟ್ಟಿದೆ. ನಿಜವಾಗಿ ನೋಡಿದರೆ ಜನ್ಮ, ಕರ್ಮಗಳಂತೆ ಇದರಲ್ಲಿಯೇ ತಾತ್ಪರ್ಯವು ಅಡಗಿದೆ. ಆದ್ದರಿಂದ ಬೀಜಾಂಕುರ ಪ್ರವಾಹದ ಆದಿಸರ್ಗವೇ ಅವಧಿಯಾಗಿರುವುದರಿಂದ ಅನವಸ್ಥಾ ದೋಷವಿದ್ದರೂ ನಷ್ಟವಿಲ್ಲ. ಮೊದಲ ಸೃಷ್ಟಿಯಲ್ಲಿ ವೃಕ್ಷವಿಲ್ಲದೆ ಬೀಜ ಉತ್ಪನ್ನವಾಗುತ್ತದೆ. ಶ್ರುತಿಸ್ಮೃತಿಗಳಲ್ಲಿ ಪ್ರಸಿದ್ಧವಾಗಿರುವಂತೆ ಹಿರಣ್ಯಗರ್ಭನ ಸಂಕಲ್ಪದಿಂದ ಅವನ ಶರೀರದಿಂದಲೇ ಎಲ್ಲ ಉತ್ಪನ್ನವಾಗುತ್ತವೆ.

ಭಾಷ್ಯ: *ಯಥಾ ಹಿ ಪಾದಪೋ ಮೂಲಸ್ಕಂಧ ಶಾಖಾದಿಸಂಯುತಃ ।*
ಆದಿ ಬೀಜಾತ್ ಪ್ರಭವತಿ ಬೀಜಾನ್ಯನ್ಯಾನಿ ವೈ ತತಃ

(ವಿಷ್ಣು ಪುರಾಣ ೨.೭.೩೨)

ಇತಿ ವಿಷ್ಣುಪುರಾಣಾದಿವಾಕ್ಯೈರಿತಿ ।

ಅನುವಾದ: ಹೇಗೆ ಬೇರು–ಕಾಂಡ–ಕೊಂಬೆಗಳಿಂದ ಕೂಡಿದ ವೃಕ್ಷವು ಉತ್ಪನ್ನವಾಗು ವುದೋ ಹಾಗೆಯೇ ಅನಂತರದಲ್ಲಿ ಆ ವೃಕ್ಷದಿಂದ ಬೀಜಗಳು ಹುಟ್ಟುತ್ತವೆ. ಹೀಗೆ ವಿಷ್ಣುಪುರಾಣದಲ್ಲಿ ಹೇಳಿದೆ.

ಭಾಷ್ಯ: *ವಸ್ತುತಸ್ತು ಅನವಸ್ಥಾಪಿ ನಾಸ್ತೀತ್ಯಾಹ ।*

ಸೂತ್ರ: ಉತ್ಪತ್ತಿವದ್ವಾಽದೋಷಃ ॥ ೧೨೩ ॥

ಸೂತ್ರಾನುವಾದ: ಅಥವಾ ಉತ್ಪತ್ತಿಯಂತೆ ದೋಷವಿಲ್ಲ.

ವಿವರಣೆ: ಉತ್ಪತ್ತಿ ಅಥವಾ ಸೃಷ್ಟಿಯು ಸಂಭವಿಸುವಂತೆ ನಮ್ಮ ಅಭಿವ್ಯಕ್ತಿ ಸಿದ್ಧಾಂತವೂ ದೋಷವಿಲ್ಲದ್ದಾಗಿದೆ.

ಭಾಷ್ಯ: *ಯಥಾ ಘಟೋತ್ಪತ್ತೇರುತ್ಪತ್ತಿಃ ಸ್ವರೂಪಮೇವ ವೈಶೇಷಿಕಾದಿಭಿಃ ಅಸದುತ್ಪಾದವಾದಿಭಿಃ ಇಷ್ಯತೇ ಲಾಘವಾತ್ ತಥೈವಾಸ್ಮಾಭಿರ್ಘಟಾದೇರ್ವ್ಯಕ್ತೇಃ ಅಪಿ ಅಭಿವ್ಯಕ್ತಿಃ ಸ್ವರೂಪಂ ಏವ ಏಷ್ಟವ್ಯಾ, ಲಾಘವಾತ್ । ಅತ ಉತ್ಪತ್ತಾವಿವಾಭಿವ್ಯಕ್ತೌ ಅಪಿ ನಾನವಸ್ಥಾದೋಷಃ ಇತ್ಯರ್ಥಃ ।*

ಅನುವಾದ: ಹೇಗೆ ಅಸತ್ಕಾರ್ಯವಾದಿಗಳಾದ ವೈಶೇಷಿಕಾದಿಗಳು ಘಟದ ಉತ್ಪತ್ತಿಯು ಉತ್ಪತ್ತಿಯನ್ನು ಸುಲಭತೆಯಿಂದ ಸ್ವರೂಪವೆನ್ನುವರೋ, ಹಾಗೆಯೇ ಸುಲಭತೆ ಯಿಂದ ನಾವೂ ಸಹ ಅಭಿವ್ಯಕ್ತಿಯ ಅಭಿವ್ಯಕ್ತಿಯನ್ನು ಸ್ವರೂಪವೆಂದೇ ತಿಳಿಯುತ್ತೇವೆ. ಆದ್ದರಿಂದ ಉತ್ಪತ್ತಿಯಲ್ಲಾಗುವಂತೆ ಅಭಿವ್ಯಕ್ತಿಯಲ್ಲಿ ಅನವಸ್ಥಾ ದೋಷವಿರದು.

ಭಾಷ್ಯ: *ಅಥ ಏವಮಭಿವ್ಯಕ್ತೇರಭಿವ್ಯಕ್ತ್ಯಂಗೀಕಾರೇ ಕಾರಣವ್ಯಾಪಾರಾತ್ ಪ್ರಾಕ್ ತಸ್ಯಾಃ ಸತ್ತ್ವಾನುಪಪತ್ತ್ಯಾ ಸತ್ಕಾರ್ಯವಾದಕ್ಷತಿರಿತಿ ಚೇತ್ ।*

ಅನುವಾದ: ಇನ್ನು ಅಭಿವ್ಯಕ್ತಿಯಿಂದ ಅಭಿವ್ಯಕ್ತಿಯನ್ನು ಒಪ್ಪದಿದ್ದಲ್ಲಿ ಕಾರಣ ವ್ಯಾಪಾರಕ್ಕೆ ಮೊದಲೇ ಅಭಿವ್ಯಕ್ತಿಯು ಇರುವುದು ಸಾಧ್ಯವಿಲ್ಲದ್ದರಿಂದ ಸತ್ಕಾರ್ಯವಾದ ಕ್ಷತಿಯಾಗುವುದಾದರೆ,

ಭಾಷ್ಯ: *ಅಸ್ಮಿನ್ ಪಕ್ಷೇ ಸತ ಏವ ಅಭಿವ್ಯಕ್ತಿರಿತ್ಯೇವ ಸತ್ಕಾರ್ಯ ಸಿದ್ಧಾಂತೇ ಇತ್ಯತಿಶಯಾತ್ । ಅಭಿವ್ಯಕ್ತೇಶ್ಚ ಅಭಿವ್ಯಕ್ತ್ಯಭಾವೇನ ತಸ್ಯಾಃ ಪ್ರಾಗಸತ್ತ್ವೇಽಪಿ ನ ಅಸತ್ಕಾರ್ಯಾಪತ್ತಿಃ ।*

ಅನುವಾದ: ಆ ಪಕ್ಷದಲ್ಲಿ ಇರುವುದರ ಅಭಿವ್ಯಕ್ತಿಯೇ ಸತ್ಕಾರ್ಯಸಿದ್ಧಾಂತದ ಪ್ರಕಾರ ಆಗುವುದು. ಅಭಿವ್ಯಕ್ತಿಯ ಅಭಿವ್ಯಕ್ತಿಯು ಆಗದ ಕಾರಣ ಅದು ಮೊದಲು ಇರದಿದ್ದರೂ ಅಸತ್ಕಾರ್ಯವು ಉಂಟಾಗದು.

ವಿವರಣೆ: 'ಸತ ಏವ ಅಭಿವ್ಯಕ್ತಿಃ', ಎಂದರೆ 'ಆಗಲೇ ಇರುವ ವಸ್ತುವು ಗೋಚರವಾಗುವುದು' ಎಂದರ್ಥ, ಅದರ ಅಭಿಪ್ರಾಯ ಸತ್ಕಾರ್ಯ ಸಿದ್ಧಾಂತಕ್ಕೆ ಚ್ಯುತಿ ಇಲ್ಲ ಎಂದು. ಕಾರಣದಲ್ಲಿ ವಸ್ತುವಿಲ್ಲ ಎಂದರೆ ಆಗ ಅಸತ್ಕಾರ್ಯವಾದೀತು.

ಭಾಷ್ಯ: *ನನ್ವೇವಂ ಮಹದಾದೀನಾಮೇವ ಪ್ರಾಗಸತ್ತ್ವಮಿಷ್ಯತಾಮ್, ಕಿಮಭಿವ್ಯಕ್ತ್ಯಾಖ್ಯಾವಸ್ಥಾಕಲ್ಪನೇನೇತಿ ।*

ಅನುವಾದ: ಹಾಗೆಯೇ ಮಹತ್ತತ್ವಾದಿಗಳಿಗೆ ಮೊದಲೇ ಅಸತ್ತ್ವವನ್ನೇಕೆ ಒಪ್ಪಬಾರದು. ಪುನರಭಿವ್ಯಕ್ತಿ ಎಂಬ ಅವಸ್ಥೆಯ ಕಲ್ಪನೆಯೇಕೆ?

ಭಾಷ್ಯ: *ಇತಿ ಚೇನ್ನ । 'ತದ್ಧೇದಂ ತರ್ಹ್ಯವ್ಯಾಕೃತಮಾಸೀತ್' (ಬೃ.ಉ. ೧.೪.೭) ಇತ್ಯಾದಿ ಶ್ರುತಿಭಿಃ ಅವ್ಯಕ್ತಾವಸ್ಥಯಾ, ಸತಾಮೇವ ಕಾರ್ಯಾಣಾಮಭಿವ್ಯಕ್ತಿಸಿದ್ಧೇಃ ।*

ಅನುವಾದ: ಹಾಗಲ್ಲ. 'ಅದೇ ತೋರ್ಪಟ್ಟಿರಲಿಲ್ಲ' ಮುಂತಾಗಿ ಶ್ರುತಿಗಳಿಂದ ಅವ್ಯಕ್ತ ಅವಸ್ಥೆಯಲ್ಲಿ ಇರುವ ಸತ್ತಾಗಳ ಕಾರ್ಯಗಳಿಂದಲೇ ಅಭಿವ್ಯಕ್ತಿ ಸಿದ್ಧವಾಗುವುದು.

ಭಾಷ್ಯ: *ತಥಾಪಿ ಅಭಿವ್ಯಕ್ತೇಃ ಪ್ರಾಗಭಾವಾದಿಸ್ವೀಕಾರಾಪತ್ತಿಃ ಇತಿ ।*

ಅನುವಾದ: ಆದರೂ ಅಭಿವ್ಯಕ್ತಿಯ ಪ್ರಾಗಭಾವವನ್ನು ಒಪ್ಪಬೇಕಾಗುವುದು.

ಭಾಷ್ಯ: *ಇತಿ ಚೇನ್ನ । ತಿಸೃಣಾಮನಾಗತಾದ್ಯವಸ್ಥಾನಾಮನ್ಯೋನ್ಯಸ್ಯ ಅಭಾವರೂಪತಯಾ ಉಕ್ತತ್ವಾತ್, ತಾದೃಶಾಭಾವನಿವೃತ್ತ್ಯೈವ ಚ ಕಾರಣವ್ಯಾಪಾರಸಾಫಲ್ಯಾದಿಸಂಭವಾತ್ ।*

ಅನುವಾದ: ಅದು ಸರಿಯಲ್ಲ. ಅನಾಗತವೇ ಮೊದಲಾದ ಮೂರು ಅವಸ್ಥೆಗಳು ಒಂದೊಂದೂ ಮತ್ತೊಂದರ ಅಭಾವರೂಪವಾದ್ದರಿಂದ ಅಂತಹ ಅಭಾವವನ್ನು ಹೋಗಲಾಡಿಸಿದ ನಂತರವೇ ಕಾರಣ ವ್ಯಾಪಾರದ ಸಾಫಲ್ಯವು ಸಂಭವಿಸುವುದು.

ಭಾಷ್ಯ: *ಅಯಮೇವ ಹಿ ಸತ್ಕಾರ್ಯವಾದಿನಾಮಸತ್ಕಾರ್ಯ–ವಾದಿಭ್ಯೋ ವಿಶೇಷೋ ಯತ್ ತೈರುಚ್ಯಮಾನೌ ಪ್ರಾಗಭಾವಪ್ರಧ್ವಂಸೌ ಸತ್ಕಾರ್ಯವಾದಿಭಿಃ ಕಾರ್ಯಸ್ಯ ಅತೀತಾನಗತಾವಸ್ಥೇ ಭಾವರೂಪೇ ಪ್ರೋಚ್ಯೇತೇ । ವರ್ತಮಾನತಾಖ್ಯಾ ಚಾಭಿವ್ಯಕ್ತ್ಯವಸ್ಥಾ ಘಟಾದ್ ವ್ಯತಿರಿಕ್ತೇಷ್ಯತೇ, ಘಟಾದೇರವಸ್ಥಾತ್ರಯವತ್ತ್ವಾನುಭವಾದಿತಿ । ಅನ್ಯತ್ ತು ಸರ್ವಂ ಸಮಾನಮ್ । ಅತಃ ನಾಸ್ತ್ಯಸ್ಮಾಸು ಅಧಿಕಶಂಕಾವಕಾಶಃ ಇತಿ ದಿಕ್ ।*

ಅನುವಾದ: ಸತ್ಕಾರ್ಯವಾದಿಗಳು ಅಸತ್ಕಾರ್ಯ ವಾದಿಗಳಿಗಿಂತ ಹೇಗೆ ವಿಶೇಷವೆಂದರೆ ಅಸತ್ಕಾರ್ಯವಾದಿಗಳು ಹೇಳುವ ಪ್ರಾಗಭಾವ–ಪ್ರಧ್ವಂಸಾಭಾವಗಳನ್ನು ಸತ್ಕಾರ್ಯ ವಾದಿಗಳು ಕಾರ್ಯದ ಅನಾಗತ–ಅತೀತ–ಅವಸ್ಥೆಗಳ ಭಾವರೂಪಗಳೆನ್ನುವರು. ವರ್ತಮಾನವೆಂಬ ಅಭಿವ್ಯಕ್ತಿಯ ಅವಸ್ಥೆಯನ್ನು ಭಿನ್ನರೂಪದಲ್ಲಿ ಹೇಳುವರು. ಏಕೆಂದರೆ ಘಟಾದಿಗಳಿಗೆ ಮೂರು ಅವಸ್ಥೆಗಳಿರುವುದು ಅನುಭವದ ವಿಷಯ. ಉಳಿದ ಎಲ್ಲವೂ ಸಮಾನವೇ. ಆದ್ದರಿಂದ ನಮ್ಮ ಅಭಿಪ್ರಾಯದಲ್ಲಿ ಹೆಚ್ಚು ಸಂದೇಹಗಳಿಗೆ ಅವಕಾಶವಿಲ್ಲ.

ವಿವರಣೆ: ಸಾಂಖ್ಯರು ಅಥವಾ ಸತ್ಕಾರ್ಯವಾದಿಗಳು ಪ್ರಾಗಭಾವವನ್ನು ಅನಾಗತವೆಂದೂ ಪ್ರಧ್ವಂಸಾಭಾವವನ್ನು ಅತೀತವೆಂದೂ ಹೇಳುತ್ತಾರೆ.

ಭಾಷ್ಯ: *ಕಾರ್ಯದರ್ಶನಾತ್ ತದುಪಲಬ್ಧೇಃ (೧.೧೧೦) ಇತಿ ಸೂತ್ರೇಣ ಕಾರ್ಯೇಣ ಮೂಲಕಾರಣಮನುಮೇಯಮಿತ್ಯುಕ್ತಮ್ । ತತ್ರ ಕಿಯತ್ಪರ್ಯಂತಂ ಕಾರ್ಯಂ ಇತ್ಯವಧಾರಯಿತುಂ ಸರ್ವಕಾರ್ಯಾಣಾಂ ಸಾಧರ್ಮ್ಯಮಾಹ ।*

ಅನುವಾದ: ('ಕಾರ್ಯದರ್ಶನಾತ್ ತದುಪಲಬ್ಧೇಃ') ಈ ಸೂತ್ರದಿಂದ ತಿಳಿದುಬರುವ ವಿಷಯವೆಂದರೆ ಕಾರ್ಯದಿಂದ ಮೂಲ ಕಾರಣವನ್ನು ಅನುಮಾನದಿಂದ ತಿಳಿಯಬಹುದು ಎಂದು. ಅದರಲ್ಲಿ ಎಷ್ಟರ ಮಟ್ಟಿಗೆ ಕಾರ್ಯವಿರುವುದು ಎಂಬುದನ್ನು ತಿಳಿಯಲು ಸಮಸ್ತ ಕಾರ್ಯಗಳಿಗೆ ಸಾಧರ್ಮ್ಯವುಂಟು ಎಂದು ಹೇಳಲಾಗಿದೆ.

ಸೂತ್ರ: ಹೇತುಮತ್–ಅನಿತ್ಯಂ–ಅವ್ಯಾಪಿ–ಸಕ್ರಿಯಂ–ಅನೇಕ ಮಾಶ್ರಿತಂ ಲಿಂಗಮ್ ॥ ೧೨೪ ॥

ಸೂತ್ರಾನುವಾದ: ಕಾರಣವುಳ್ಳದ್ದು, ಅನಿತ್ಯವಾದದ್ದು, ವ್ಯಾಪಿಯಲ್ಲದ್ದು, ಕ್ರಿಯಾಶೀಲ ವಾದುದು, ಅನೇಕ ಆಶ್ರಯವನ್ನು ಉಳ್ಳದ್ದು ಈ ಗುಣಗಳಿಂದ ಕಾರ್ಯವು ಕೂಡಿರುತ್ತದೆ.

ಭಾಷ್ಯ: *ಕಾರಣಾಮಮಾಪಕತ್ವಾತ್ ಲಯಗಮನಾದ್ವಾ ಅತ್ರ ಲಿಂಗಂ ಕಾರ್ಯಜಾತಮ್ । ನ ತು ಮಹತ್ತತ್ವಮಾತ್ರಮತ್ರ ವಿವಕ್ಷಿತಮ್, ಹೇತುಮತ್ವಾದೀನಾಂ ಅಖಿಲಕಾರ್ಯಸಾಧಾರಣ್ಯಾತ್ ।*

ಅನುವಾದ: ಇಲ್ಲಿ ಕಾರಣದ ಅನುಮಾಪಕವಾದ್ದರಿಂದ ಮತ್ತು ಲಯದ ಪ್ರಾಪ್ತಿಯಿರುವುದ ರಿಂದ ಲಿಂಗ ಎಂಬುದರ ಅರ್ಥ. 'ಎಲ್ಲ ಕಾರ್ಯಗಳು' ಹೀಗೆ ಕೇವಲ ಮಹತ್ತ್ವವನ್ನು ಮಾತ್ರ ಹೇಳಬಯಸಿಲ್ಲ, ಕಾರಣವುಳ್ಳದ್ದು ಮುಂತಾದ ಗುಣಗಳು ಎಲ್ಲ ಕಾರ್ಯಗಳಿಗೂ ಸಾಧಾರಣವಾಗಿವೆ.

ಭಾಷ್ಯ: *ಹೇತುಮದನಿತ್ಯಮವ್ಯಾಪಿ ಸಕ್ರಿಯಮನೇಕಮಾಶ್ರಿತಂ ಲಿಂಗಮ್ ಸಾವಯವಂ ಪರತಂತ್ರಂ ವ್ಯಕ್ತಂ ವಿಪರೀತಮವ್ಯಕ್ತಮ್ (ಸಾಂ.ಕಾ. ೧೦) ಇತಿ ಕಾರಿಕಾಯಾಮಪ್ಯತ ಏವ ವ್ಯಕ್ತಾಖ್ಯಂ ಸರ್ವಂ ಕಾರ್ಯಮೇವ ಲಿಂಗಮಿತ್ಯುಕ್ತಮ್ । ತಥಾ ಚ ತಲ್ಲಿಂಗಂ ಹೇತುಮತ್ತ್ವಾದಿ ಧರ್ಮಕಂ ಇತಿ ವಾಕ್ಯಾರ್ಥಃ ।*

ಅನುವಾದ: ಹೇತುಮತ್, ಅನಿತ್ಯ, ಅವ್ಯಾಪಿ, ಸಕ್ರಿಯ, ಅನೇಕ, ಆಶ್ರಿತ ಇವೆಲ್ಲ ಕಾರ್ಯಗಳೇ; ಇವು ಸಾವಯವಗಳು ಮತ್ತು ಪರತಂತ್ರವೂ ಆಗಿರುತ್ತವೆ. ಇವುಗಳು 'ವ್ಯಕ್ತ' ಮತ್ತು ಇವುಗಳಿಗೆ ವಿಪರೀತವಾದುದು 'ಅವ್ಯಕ್ತ'.

ಹೀಗೆ ಕಾರಿಕೆಯಲ್ಲಿಯೂ ಹೇಳಿದೆ. ಆದ್ದರಿಂದ 'ವ್ಯಕ್ತ' ಎಂಬುದೆಲ್ಲ ಕಾರ್ಯವೇ, ಇದನ್ನೇ ಲಿಂಗವೆಂದಿದ್ದಾರೆ. ಹಾಗೆಯೇ ಆ ಲಿಂಗವನ್ನು ಹೇತುಮತ್ತ್ವ ಮುಂತಾದ ಧರ್ಮಗಳಿಂದ ಕೂಡಿದೆ ಎಂದು ವಾಕ್ಯಾರ್ಥ.

ಭಾಷ್ಯ: *ತತ್ರ ಹೇತುಮತ್ತ್ವಂ ಕಾರಣವತ್ತ್ವಮ್ । ಅನಿತ್ಯತ್ವಂ ವಿನಾಶಿತಾ । ಪ್ರಧಾನಸ್ಯ ಯಾ ವ್ಯಾಪಿತಾ ಪೂರ್ವೋಕ್ತಾ ತದ್ವೈಪರೀತ್ಯಂ ಅವ್ಯಾಪಿತ್ವಮ್ । ಸಕ್ರಿಯತ್ವಂ ಅಧ್ಯವಸಾಯಾದಿ ರೂಪನಿಯತ–ಕಾರ್ಯಕಾರಿತ್ವಮ್ । ಪ್ರಧಾನಸ್ಯ ತು ಸರ್ವಕ್ರಿಯಾಸಾಧಾರಣ್ಯೇನ*

ಕಾರಣತ್ವಾನ್ನ ಕಾರ್ಯೈಕದೇಶ ಮಾತ್ರಕಾರಿತ್ವಮ್, ನ ಚ ಕ್ರಿಯಾ ಕರ್ಮೈವ ವಕ್ತುಂ ಶಕ್ಯತೇ । ಪ್ರಕೃತಿಕ್ಷೋಭಾತ್ ಸೃಷ್ಟಿಶ್ರವಣೇನ ಪ್ರಕೃತೇರಪಿ ಕರ್ಮವತ್ತಯಾ ಅತ್ರ ಸಕ್ರಿಯತ್ವಾಪತ್ತೇರಿತಿ । ಅನೇಕತ್ತ್ವಂ ಸರ್ಗಭೇದೇನ ಭಿನ್ನತ್ವಮ್, ಸರ್ಗದ್ವಯ– ಅಸಾಧಾರಣ್ಯಮಿತಿ ಯಾವತ್ । ನ ಪುನಃ ಸಜಾತೀಯ ಅನೇಕವ್ಯಕ್ತಿಕತ್ವಮ್, ಪ್ರಕೃತೌ ಅತಿ ವ್ಯಾಪ್ತೇಃ, ಪ್ರಕೃತೇರಪಿ ಸತ್ತ್ವಾದ್ಯನೇಕರೂಪತ್ವಾತ್ । 'ಸತ್ವಾದೀನಾಮತದ್ಧರ್ಮತ್ವಂ ತದ್ರೂಪತ್ವಾತ್' (ಸಾಂ.ಸೂ. ೬–೩೯) ಇತ್ಯಾಗಾಮಿಸೂತ್ರಾದಿತಿ। ಆಶ್ರಿತತ್ವ ತ್ವಂ ಚ ಅವಯವೇಷ್ವಿತಿ ।

ಅನುವಾದ: ಹೇತುಮತ್ತ್ವ ಎಂಬುದು ಇಲ್ಲಿ ಕಾರಣವತ್ತ್ವ ಎಂಬರ್ಥ ಹೊಂದಿದೆ. 'ಅನಿತ್ಯತ್ವ' ಎಂದರೆ ನಶ್ವರತೆ. ಪ್ರಧಾನದ ವ್ಯಾಪಿತಾ ಮೊದಲೇ ಹೇಳಲಾಗಿದೆ. ಅದಕ್ಕೆ ವಿಪರೀತವಾದುದು ಅವ್ಯಾಪಿತೆ. ಸಕ್ರಿಯತ ಎಂದರೆ ನಿರ್ಧರಿಸಿ ನಿಯತವಾದು ದನ್ನು ಮಾಡುವುದು. ಪ್ರಧಾನದಲ್ಲಿ ಎಲ್ಲ ಕ್ರಿಯಾ ಸಾಧಾರಣತ್ವವಿರುವುದರಿಂದ ಕಾರ್ಯವು ಏಕದೇಶದಲ್ಲಿ ಮಾತ್ರ ಎನ್ನಲಾಗದು. ಕರ್ಮವನ್ನು ಕ್ರಿಯೆಯೆಂದು ಹೇಳಲಾಗದು; ಏಕೆಂದರೆ ಪ್ರಕೃತಿಯು ಕ್ಷೋಭಗೊಂಡು ಸೃಷ್ಟಿಯಾಗುವುದನ್ನು ಕೇಳಿರುವುದರಿಂದ ಪ್ರಕೃತಿಯೂ ಸಹ ಕರ್ಮದಿಂದ ಕೂಡಿರುವುದರಿಂದ ಸಕ್ರಿಯ ಎನ್ನಬೇಕು. 'ಅನೇಕತ್ವ' ಎಂದರೆ ಸರ್ಗಭೇದದಿಂದ ಭಿನ್ನತೆ ಉಂಟಾಗುವುದು; ಎಂದರೆ ಎರಡು ಸರ್ಗಗಳಲ್ಲಿ ಸಾಧಾರಣತೆ ಇಲ್ಲದಿರುವುದು. ಅದು ಸಜಾತೀಯ ವಾದ ನಾನಾ ಬಗೆಯ ವ್ಯಕ್ತಿಗಳ ಸೃಷ್ಟಿಯಲ್ಲಿ, ಏಕೆಂದರೆ ಪ್ರಕೃತಿಯಲ್ಲಿ ಇದು ಕಾಣಬರುವುದರಿಂದ ಅತಿವ್ಯಾಪ್ತಿಯಾಗುವುದು, ಪ್ರಕೃತಿಯಲ್ಲಿ ಸತ್ತ್ವಾದಿ ಅನೇಕ ರೂಪಗಳಿರುವುದು. 'ಸತ್ತ್ವಾದಿಗಳು ಪ್ರಕೃತಿಯ ಧರ್ಮವಲ್ಲ, ಅವು ಪ್ರಕೃತಿಯ ಸ್ವರೂಪವೇ ಹೌದು' (ಸಾಂ.ಸೂ. ೬.೩೦) ಎಂದು ಮುಂದೆ ಬರುವ ಸೂತ್ರದಲ್ಲಿ ಹೇಳಿದೆ. 'ಆಶ್ರಿತತ್ವಂ' ಎಂದರೆ 'ಪ್ರತಿಯೊಂದು ಕಾರ್ಯವೂ ಅದರ ಅವಯವಗಳನ್ನು ಆಶ್ರಯಿಸುತ್ತದೆ' ಎಂದರ್ಥ.

ವಿವರಣೆ: 'ಲಯಂ ಗಚ್ಛತಿ ಪ್ರಧಾನೇ' ಇತಿ ಲಿಂಗಮ್, ಸಾಂಖ್ಯ ಮತದಲ್ಲಿ ಲಿಂಗ ಪದದ ಅರ್ಥ 'ತನ್ನ ಕಾರಣದಲ್ಲಿ ಲಯ ಹೊಂದುವ ವಸ್ತು' ಎಂದು.

ಭಾಷ್ಯ: *ಕಾರ್ಯಕಾರಣಯೋರ್ಭೇದೇ ಹೇತುಮತ್ತ್ವಾದಿ ಸಿದ್ಧ್ಯತೀತ್ವತಃ ಕಾರಣಾತಿರಿಕ್ತಕಾರ್ಯಸಿದ್ಧೌ ಪ್ರಮಾಣಾನ್ಯಾಹ ।*

ಅನುವಾದ: ಕಾರ್ಯಕಾರಣಗಳು ಭಿನ್ನವಾಗಿದ್ದರೆ ಕಾರಣವುಳ್ಳದ್ದು ಎಂದು ಸಿದ್ಧವಾಗುತ್ತದೆ; ಕಾರಣವನ್ನು ಬಿಟ್ಟು ಕಾರ್ಯವಿದ್ದರೆ ಅದಕ್ಕೆ ಪ್ರಮಾಣಗಳನ್ನು ಹೇಳಿದೆ–

ವಿವರಣೆ: ಅಭಿಪ್ರಾಯವೇನೆಂದರೆ ಪ್ರತ್ಯೇಕ ವಸ್ತುವು ಕಾರಣದಲ್ಲಿ ಅಭೇದವನ್ನು ಹೊಂದಿರುವುದು. ಆದರೆ ಕಾರ್ಯರೂಪ ಪಡೆದಾಗ ಭಿನ್ನವಾಗಿರುವುದು. ಈ ಭೇದಾಭೇದವನ್ನು ವಿಸ್ತರಿಸಲಾಗಿದೆ.

ಸೂತ್ರ: ಆಂಜಸ್ಯಾದಭೇದತೋ ವಾ ಗುಣಸಾಮಾನ್ಯಾದೇಃ ತತ್ಸಿದ್ಧಿಃ ಪ್ರಧಾನವ್ಯಪದೇಶಾದ್ವಾ ॥ ೧೨೫ ॥

ಸೂತ್ರಾನುವಾದ: ಪ್ರತ್ಯಕ್ಷವಾಗಿ ಅಥವಾ ಗುಣಸಾಮಾನ್ಯಗಳಿಂದ ಭೇದವಿಲ್ಲದೆ ಅಥವಾ ಪ್ರಧಾನವ್ಯಪದೇಶದಿಂದ ಕಾರ್ಯಭೇದದ ಸಿದ್ಧಿಯುಂಟಾಗುತ್ತದೆ.

ಭಾಷ್ಯ: *ತತ್ಸಿದ್ಧಿಃ ಲಿಂಗಾಖ್ಯಕಾರ್ಯಸ್ಯ ಕಾರಣಾತಿರೇಕತಃ ಸಿದ್ಧಿಃ ಕ್ವಚಿದಾಂಜಸ್ಯಾತ್ ಪ್ರತ್ಯಕ್ಷತ ಏವಾನಾಯಾಸೇನ ಭವತಿ । ತಥಾ ಸ್ಥೌಲ್ಯಾದಿನಾ ಧರ್ಮೇಣ ತಂತ್ವಾದಿಭ್ಯಃ ಪಟಾದೀನಾಮ್ ।*

ಅನುವಾದ: ಆ ಸಿದ್ಧಿಯು ಲಿಂಗವೆಂಬ ಕಾರ್ಯದ ಕಾರಣವನ್ನು (ಮೀರಿ) ಭಿನ್ನವಾಗಿ ಪ್ರತ್ಯಕ್ಷವಾಗಿಯೇ ಅನಾಯಾಸವಾಗಿ ಉಂಟಾಗುತ್ತದೆ. ಸ್ಥೂಲವಾದ ಕಾರಣ ಅದು ದಾರದಿಂದ ವಸ್ತ್ರದ ಭಿನ್ನತೆಯು ಗೋಚರವಾಗುವ ಹಾಗೆ ಉಂಟಾಗುತ್ತದೆ.

ಭಾಷ್ಯ: *ಕ್ವಚಿಚ್ಚ ಗುಣಸಾಮಾನ್ಯಾದೇರಭೇದತೋ ಗುಣಸಾಮಾನ್ಯಾ-ದ್ಯಾತ್ಮಕತ್ವೇನ ಲಿಂಗೇನಾನುಮಾನೇನ ಭವತಿ । ಯಥಾ ಅಧ್ಯವಸಾಯಾದಿಗುಣಾತ್ಮಕತ್ವ ರೂಪೇಣ ಕಾರಣ ವೈಧರ್ಮ್ಯೇಣ ಮಹದಾದೀನಾಮ್ । ಯ ಥಾ ಚ ಮಹಾಪೃಥಿವೀತ್ವಾದಿ-ಸಾಮಾನ್ಯಾತ್ಮಕತಾರೂಪೇಣ ತನ್ಮಾತ್ರವೈಧರ್ಮ್ಯೇಣ ಪೃಥಿವ್ಯಾದೀನಾಮ್ ।*

ಅನುವಾದ: ಕೆಲವೊಮ್ಮೆ 'ಗುಣಸಾಮಾನ್ಯಾದೇಃ ಅಭೇದತಃ' ಎಂದರೆ ಗುಣಸಾಮಾನ್ಯಾದಿ ಸ್ವರೂಪದ ಲಿಂಗಾತ್ಮಕ ಅನುಮಾನದಿಂದ ಅಭೇದವುಂಟಾಗುತ್ತದೆ; ಹೇಗೆಂದರೆ ನಿಶ್ಚಯಾದಿ ಗುಣಾತ್ಮಕ ಕಾರಣ ವೈಧರ್ಮ್ಯದಿಂದ ಮಹತ್ತತ್ವಾದಿಗಳು ಉಂಟಾಗುತ್ತವೆ. ಮತ್ತೆ ಹೇಗೆಂದರೆ, ಮಹಾಪೃಥಿವೀ ಮುಂತಾದ ಸಾಮಾನ್ಯಾತ್ಮಕ ರೂಪದ ತನ್ಮಾತ್ರವೈಧರ್ಮ್ಯದಿಂದ ಪೃಥಿವ್ಯಾದಿಗಳು ಸಿದ್ಧವಾಗುತ್ತವೆ.

ಭಾಷ್ಯ: *ಕ್ವಚಿತ್ತು ಆದಿಶಬ್ದಗೃಹೀತೇನ ಕರ್ಮಾದ್ಯಾತ್ಮಕತಾವೈಧರ್ಮ್ಯೇಣ । ಯಥಾ ಸ್ಥಿರಾವಯವೇಭ್ಯೋಽತಿರಿಕ್ತಸ್ಯ ಚಂಚಲಾವಯವಿನಃ ।*

ಅನುವಾದ: ಕೆಲವೊಮ್ಮೆ 'ಆದಿ' ಶಬ್ದದಿಂದ ತೆಗೆದುಕೊಂಡ ಕರ್ಮಾದ್ಯಾತ್ಮಕತೆಯ ವೈಧರ್ಮ್ಯದಿಂದ ಸಿದ್ಧಿಯಾಗುತ್ತದೆ. ಹೇಗೆಂದರೆ– ಸ್ಥಿರವಾದ ಅವಯವಗಳಲ್ಲದೆ ಅದನ್ನು ಮೀರಿದ ಚಂಚಲವಾದ ಅವಯವಗಳೂ ಸೇರುತ್ತವೆ.

ಭಾಷ್ಯ: *ತಥಾ ಪ್ರಧಾನವ್ಯಪದೇಶಾತ್ ಪ್ರಧಾನಶ್ರುತೇರಪಿ ಕಾರಣಾ-ತಿರಿಕ್ತಕಾರ್ಯಸಿದ್ಧಿರ್ಭವತಿ । ಪ್ರಧೀಯತೇಽಸ್ಮಿನ್ ಹಿ ಕಾರ್ಯಜಾತಮಿತಿ ಪ್ರಧಾನಮುಚ್ಯತೇ । ತಚ್ಚ ಕಾರ್ಯಕರಣಯೋಃ ಭೇದಾಭೇದೌ ವಿನಾ ನ ಘಟತೇ । ಅತ್ಯಂತಾಭೇದೇ ಸ್ವಸ್ಯ*

ಆಧಾರತ್ವಾಸಂಭವಾದಿತ್ಯರ್ಥಃ । ಕಾರ್ಯಾಣಾಂ ಸಾಧರ್ಮ್ಯ–।
ರೂಪಂ ಲಕ್ಷಣಂ ಕಾರಣಾತಿರಿಕ್ತ ಕಾರ್ಯೇಷು ಪ್ರಮಾಣಂ
ಚ ಸೂತ್ರಾಭ್ಯಾಂ ದರ್ಶಿತಮ್ ।

ಅನುವಾದ: ಹಾಗೆಯೇ ಪ್ರಧಾನವೆಂಬ ಹೆಸರಿನಿಂದ ಎಂದರೆ (ಪ್ರಧಾನ ವ್ಯಪದೇಶಾತ್) ಪ್ರಧಾನದ ವ್ಯವಹಾರದಿಂದ ಕಾರಣವನ್ನು ಮೀರಿದ ಕಾರ್ಯಸಿದ್ಧಿಯಾಗುವುದು. 'ಯಾವುದರಲ್ಲಿ ಕಾರ್ಯ ಸಮೂಹವೆಲ್ಲ ಧರಿಸಲ್ಪಟ್ಟಿದೆಯೋ' ಅದು ಪ್ರಧಾನ. ಅದೂ ಸಹ ಕಾರ್ಯಕಾರಣಗಳಲ್ಲಿ ಭೇದಾಭೇದಗಳು ಇಲ್ಲದೆ ಅರ್ಥ ಮಾಡಲಾಗದು. ಅವು ಅತ್ಯಂತ–ಅಭೇದವಾಗಿರುವಾಗ ತನ್ನಲ್ಲಿ ತಾನೇ ಆಧಾರವಾಗಿರುವುದು ಅಸಂಭವ. ಕಾರ್ಯಗಳ ಸಾಧರ್ಮ್ಯರೂಪಗಳ ಲಕ್ಷಣವನ್ನು ಕಾರಣವನ್ನು ಮೀರಿದ (ಭಿನ್ನವಾದ) ಕಾರ್ಯಗಳಲ್ಲಿ ಪ್ರಮಾಣವನ್ನು ಸೂತ್ರಗಳಿಂದ ತೋರಿಸಲಾಗಿದೆ.

ವಿವರಣೆ: ಪ್ರಕೃತಿಯಿಂದ ಹುಟ್ಟಿದ ಬುದ್ಧಿಯಲ್ಲಿ ಅಧ್ಯವಸಾಯ ವಿಶೇಷ ಗುಣ. ಹೀಗೆ ಅವೆರಡರಲ್ಲಿ ಅಭೇದ ಮತ್ತು ಭೇದಗಳು ಕಂಡುಬರುತ್ತವೆ. ಪ್ರಧಾನ ಶಬ್ದದಿಂದ ಪ್ರಧಾನವು ಪ್ರಲಯಕಾಲದಲ್ಲಿ ಕಾರ್ಯಜಾತವನ್ನು ಧರಿಸಿ ಹುಟ್ಟಿತು ಎಂದು ತಿಳಿದುಬರುತ್ತದೆ. ಹೀಗೆ ಅನುಮಾನದಿಂದ, ಶಬ್ದದಿಂದ ಭಿನ್ನತೆ ಮತ್ತು ಅಭೇದವನ್ನು ತಿಳಿಸಿ ಭೇದಾಭೇದ ಸಿದ್ಧಾಂತವನ್ನು ನಿರೂಪಿಸಲಾಗಿದೆ.

ಭಾಷ್ಯ: *ಇದಾನೀಂ ಕಾರ್ಯಸಧರ್ಮಕತಯಾ ಕಾರಣಾನುಮಾನಾಯ*
ಕಾರ್ಯಕಾರಣಯೋರಪಿ ಸಾಧರ್ಮ್ಯಂ ಪ್ರದರ್ಶಯತಿ ।

ಅನುವಾದ: ಈಗ ಕಾರ್ಯದ ಸಮಾನ ಧರ್ಮವಾಗುವುದರಿಂದ ಕಾರಣದ ಅನುಮಾನವನ್ನು ಮಾಡಲು ಕಾರಣ–ಕಾರ್ಯಗಳೆರಡರ ಸಾಧರ್ಮ್ಯವನ್ನು ತಿಳಿಯಪಡಿಸುತ್ತಾರೆ.

ಸೂತ್ರ: ತ್ರಿಗುಣಾಚೇತನತ್ವಾದಿ ದ್ವಯೋಃ ॥ ೧೨೬ ॥

ಸೂತ್ರಾನುವಾದ: ಎರಡರಲ್ಲೂ (ಕಾರ್ಯ–ಕಾರಣಗಳೆರಡರಲ್ಲೂ) ತ್ರಿಗುಣತ್ವ ಮತ್ತು ಅಚೇತನತ್ವಾದಿ ಧರ್ಮಗಳಿರುತ್ತವೆ.

ಭಾಷ್ಯ: *ದ್ವಯೋಃ ಕಾರ್ಯಕಾರಣಯೋರೇವ ತ್ರಿಗುಣತ್ವಾದಿ–*
ಸಾಧರ್ಮ್ಯಮಿತ್ಯರ್ಥಃ । ಆದಿ ಶಬ್ದಾಗ್ರಾಹ್ಯಾಶ್ಚ ಕಾರಿಕಾಯಾಮುಕ್ತಾಃ ।

ಅನುವಾದ: ಕಾರ್ಯ–ಕಾರಣಗಳೆರಡರಲ್ಲೂ ತ್ರಿಗುಣತ್ವ ಮೊದಲಾದ ಸಾಧರ್ಮ್ಯಗಳಿರುತ್ತವೆ ಎಂದು ಅರ್ಥ (ಸೂತ್ರದಲ್ಲಿರುವ) 'ಆದಿ' ಶಬ್ದದಿಂದ ಏನೇನು ಗ್ರಹಿಸಬೇಕು ಎಂಬುದನ್ನು ಕಾರಿಕೆಯಲ್ಲಿ ಹೇಳಿದೆ.

ಭಾಷ್ಯ: *ತ್ರಿಗುಣಮವಿವೇಕಿವಿಷಯಃ ಸಾಮಾನ್ಯಮಚೇತನಂ ಪ್ರಸವಧರ್ಮಿ ।*
ವ್ಯಕ್ತಂ ತಥಾ ಪ್ರಧಾನಂ ತದ್ವಿಪರೀತಸ್ತ ಥಾ ಚ ಪುಮಾನ್ ॥ ಇತಿ ।
(ಸಾ.ಕಾ. ೧೧)

ಅನುವಾದ: ವ್ಯಕ್ತವು ಮೂರು ಗುಣವುಳ್ಳದ್ದು, ವಿವೇಚನೆ ಮಾಡಲಾರದ್ದು, ವಿಷಯವಾಗಿರುವುದು, ಸಮಾನವಾದುದು, ಅಚೇತನವು ಮತ್ತು (ಹೊಸ ವಸ್ತುಗಳಿಗೆ) ಜನ್ಮ ಕೊಡುವುದು. ಪ್ರಧಾನವೂ ಹಾಗೆಯೇ. ಪುರುಷನು ಅದಕ್ಕೆ ವಿಪರೀತನಾದವನು.

ಭಾಷ್ಯ: *ತ್ರಯಃ ಸತ್ತ್ವಾದಿದ್ರವ್ಯರೂಪಾಃ ಗುಣಾಃ ಅತ್ರ ಸಂತೀತಿ ತ್ರಿಗುಣಮ್ ।*

ಅನುವಾದ: ಮೂರು ಎಂದರೆ ಸತ್ತ್ವಾದಿ ದ್ರವ್ಯರೂಪದ ಗುಣಗಳು. ಇದರಲ್ಲಿ ಇರುವುದರಿಂದ 'ತ್ರಿಗುಣಂ' ಎನ್ನಲಾಗಿದೆ.

ಭಾಷ್ಯ: *ತತ್ರ ಮಹದಾದಿಷು ಕಾರಣ ರೂಪೇಣ ಸತ್ತ್ವಾದೀನಾಮವಸ್ಥಾನಂ ವನೇ ವೃಕ್ಷವದೇವಾವಗಂತವ್ಯಮ್ ।*

ಅನುವಾದ: ಅದರಲ್ಲಿ ಮಹದಾದಿಗಳಲ್ಲಿ ಕಾರಣರೂಪದಲ್ಲಿ ಸತ್ತ್ವಾದಿಗಳು ಇರುತ್ತವೆ; ವನದಲ್ಲಿ ವೃಕ್ಷಗಳಿರುವಂತೆ ಎಂದು ತಿಳಿಯಬೇಕು.

ಭಾಷ್ಯ: *ಅಥವಾ ಸತ್ತ್ವಾದಿಶಬ್ದೇನ ಸುಖದುಃಖಮೋಹಾನಾಮಪಿ ವಚನಾತ್ ಕಾರ್ಯಕಾರಣಯೋಸ್ತ್ರಿಗುಣತ್ವಂ ಸಮಂಜಸಮಿತಿ । ಅವಿವೇಕಿ ವಿಷಯೋಽಜ್ಞೈರೇವ ದೃಶ್ಯಮ್, ಭೋಗ್ಯಮಿತಿ ಯಾವತ್ । ಅವಿವೇಕಿ ಚ ವಿಷಯಶ್ಚೇತಿತಚ್ಛೇದೇ ತು ಅವಿವೇಕಿತ್ವಂ ಸಂಭೂಯಕಾರಿತ್ವಂ, ವಿಷಯತ್ವಂ ತು ಭೋಗ್ಯತ್ವಮೇವ । ಸಾಮಾನ್ಯಂ ಸರ್ವಪುರುಷ ಸಾಧಾರಣಮ್, ಪುರುಷಭೇದೇಽಪ್ಯ ಭಿನ್ನಮಿತಿ ಯಾವತ್ । ಪ್ರಸವಧರ್ಮಿ ಪರಿಣಾಮಿ । ವ್ಯಕ್ತಂ ಕಾರ್ಯಮ್ ಪ್ರಧಾನಕಾರಣಮಿತ್ಯರ್ಥಃ ।*

ಅನುವಾದ: ಅಥವಾ ಸತ್ತ್ವಾದಿ ಶಬ್ದದಿಂದ ಸುಖ–ದುಃಖ–ಮೋಹಾದಿಗಳನ್ನು ಹೇಳಿದರೆ ಕಾರ್ಯ–ಕಾರಣಗಳಲ್ಲಿ ತ್ರಿಗುಣತೆಯನ್ನು ಹೇಳುವುದು ಸರಿಯಾದುದೇ ಎಂದರೆ ಅದು ಅವಿವೇಕಿ ವಿಷಯವಾಗುವುದು. ಅಜ್ಞಾನಿಗಳಿಗೆ ದೃಶ್ಯವಾದುದು ಅಥವಾ ಭೋಗ್ಯವಾಗುವುದು. ಆ ಪದವನ್ನು (ಅವಿವೇಕಿ ವಿಷಯ) ಬಿಡಿಸಿದರೆ ಅವಿವೇಕಿ, ವಿಷಯಗಳಾಗುವುದು. 'ಅವಿವೇಕಿ' ಎಂದರೆ 'ಸಂಭೂಯಕಾರಿತ್ವ' ಅರ್ಥಾತ್ ಪರಸ್ಪರ ಸೇರಿ ಮಾಡುವುದು ಮತ್ತು ವಿಷಯ ಎಂದರೆ ಭೋಗ, 'ಸಾಮಾನ್ಯ' ಎಂದರೆ ಸರ್ವಪುರುಷ ಸಾಧಾರಣವಾದುದು. 'ಪ್ರಸವಧರ್ಮಿ' ಎಂದರೆ ಪರಿಣಾಮ ಹೊಂದುವುದು. 'ವ್ಯಕ್ತ' ಎಂದರೆ ಕಾರ್ಯ. 'ಪ್ರಧಾನ' ಎಂದರೆ ಕಾರಣ.

ಭಾಷ್ಯ: *ಕಾರ್ಯಕಾರಣಯೋಃ ಅನ್ಯೋನ್ಯವೈಧರ್ಮ್ಯಪಿ ದರ್ಶಿತಮ್ ।*
ಹೇತುಮದನಿತ್ಯಂ ಅವ್ಯಾಪಿ ಸಕ್ರಿಯಮನೇಕಮಾಶ್ರಿತಂ ಲಿಂಗಮ್ ।
ಸಾವಯವಂ ಪರತಂತ್ರಂ ವ್ಯಕ್ತಂ ವಿಪರೀತಮವ್ಯಕ್ತಮ್ ॥ (ಸಾಂ.ಕಾ. ೧೦)

ಅನುವಾದ: ಕಾರ್ಯ–ಕಾರಣಗಳ ಪರಸ್ಪರ ವೈಧರ್ಮ್ಯಗಳನ್ನು ತಿಳಿಸಿದೆ.

'ವ್ಯಕ್ತ'ವು ಉತ್ಪನ್ನಶೀಲವಾದುದು, ಅನಿತ್ಯವಾದುದು ವ್ಯಾಪಕವಲ್ಲದ್ದು. ಸಕ್ರಿಯವಾದುದು, ಭಿನ್ನಭಿನ್ನವಾದುದು, ಆಶ್ರಯವುಳ್ಳದ್ದು, ಅನುಮಾನಕ್ಕೆ ಆಸ್ಪದ ನೀಡುವ ಗುರುತುಳ್ಳದ್ದು,

ಅವಯವಗಳಿಂದ ಕೂಡಿದ್ದು, ಕಾರಣಾಧೀನವಾದುದು; ಈ ಧರ್ಮಗಳಿಗೆ ವಿಪರೀತವಾದುದು ಅವ್ಯಕ್ತ.

ಭಾಷ್ಯ: *ಅತ್ರೈಕತ್ವಂ ಸರ್ಗಭೇದೇಽಪಿ ಅಭಿನ್ನತ್ವಮ್ । ಅತಃ ಪ್ರಕೃತೇಃ ಅನೇಕವ್ಯಕ್ತಿಕತ್ವೇಽಪಿ ನೈಕತ್ವಕ್ಷತಿಃ ।*

ಅನುವಾದ: ಇಲ್ಲಿ 'ಏಕತ್ವ'ವೆಂದರೆ ಭಿನ್ನ ಭಿನ್ನ ಸೃಷ್ಟಿಯಲ್ಲಿಯೂ ಭಿನ್ನವಾಗದೆ ಇರುವುದು. ಆದ್ದರಿಂದ ಪ್ರಕೃತಿಯ ಅನೇಕ ವ್ಯಕ್ತಿಗಳಿದ್ದರೂ ಏಕತ್ವವು ಹಾಳಾಗದು.

ಭಾಷ್ಯ: *ಮಹಾಂತಂ ಚ ಸಮಾವೃತ್ಯ ಪ್ರಧಾನಂ ಸಮವಸ್ಥಿತಮ್ ।*
ಅನಂತಸ್ಯ ನ ತಸ್ಯಾಂತಃ ಸಂಖ್ಯಾನಂ ಚಾಪಿ ವಿದ್ಯತೇ ॥

ವಿ.ಪು. ೨.೭. ೨೫

ಇತಿ ವಿಷ್ಣು ಪುರಾಣೇನ ಅಸಂಖ್ಯೇಯತಾವಚನಾತ್ ತು ಪ್ರಧಾನಸ್ಯ ವ್ಯಕ್ತಿಬಹುತ್ವಸಿದ್ಧಿರಿತಿ ।

ಅನುವಾದ: ಮಹಾನ್ (ಮಹತ್) ಅನ್ನು ಆವರಿಸಿ ಪ್ರಧಾನವು ಇರುತ್ತದೆ. ಅದು ಅನಂತವಾದುದು ಮತ್ತು ಎಂದರೆ ಅಂತ್ಯವಿಲ್ಲದ್ದು. ಅದು ಎಣೆಯಿಲ್ಲದ್ದು, ಎಂದು ವಿಷ್ಣು ಪುರಾಣದಲ್ಲಿ ಹೇಳಿರುವುದರಿಂದ ಅದರ ವ್ಯಕ್ತಿ ಬಹುತ್ವವನ್ನು ಸಿದ್ಧಪಡಿಸಿದಂತಾಯಿತು.

ಭಾಷ್ಯ: *ಪ್ರಧಾನಾಖ್ಯಾನಾಂ ಜಗತ್ಕಾರಣಗುಣಾನಾಂ ಅನ್ಯೋನ್ಯ-ವಿವೇಕಾಯ ತೇಷಾಂ ಅವಾಂತರಮಪಿ ವೈಧರ್ಮ್ಯಂ ಸಿದ್ಧಾಂತಯತಿ, ವಿವಿಧ ಜಗತ್ಕಾರಣೋಪಪತ್ತಯೇ ಚ ನ ಹ್ಯೇಕರೂಪಾತ್ ಕಾರಣಾತ್ ವಿಚಿತ್ರಕಾರ್ಯಾಣಿ ಸಂಭ್ರವಂತಿ । ಇತಿ ।*

ಅನುವಾದ: ಪ್ರಧಾನವೆಂದು ಕರೆಯಲ್ಪಡುವ ಜಗತ್ತಿಗೇ ಕಾರಣವಾದ ಗುಣಗಳ ಪರಸ್ಪರ ತಿಳುವಳಿಕೆಗಾಗಿ ಅವುಗಳ ನಡುವೆ ಇರುವ ವೈಧರ್ಮ್ಯಗಳ ಸಿದ್ಧಾಂತ ಮಾಡುವರು. ಒಂದೇ ರೂಪವಿರುವ ಕಾರಣದಿಂದ ವಿಚಿತ್ರವಾದ ಕಾರ್ಯಗಳು ಸಂಭವಿಸುತ್ತವೆ (ಎಂದು ಪ್ರತಿಪಾದಿಸುವರು).

ಸೂತ್ರ: ಪ್ರೀತ್ಯಪ್ರೀತಿ ವಿಷಾದಾದ್ಯೈರ್ಗುಣಾನಾಂ ಅನ್ಯೋನ್ಯಂ ವೈಧರ್ಮ್ಯಮ್ ॥ ೧೨೭ ॥

ಅನುವಾದ: ಗುಣಗಳಲ್ಲಿ ಪ್ರೀತಿ, ಅಪ್ರೀತಿ, ವಿಷಾದ ಮುಂತಾದುವುಗಳಿಂದ ಪರಸ್ಪರ ವೈಧರ್ಮ್ಯವು ಇರುತ್ತದೆ.

ಭಾಷ್ಯ: *ಗುಣಾನಾಂ ಸತ್ತ್ವಾದಿ ದ್ರವ್ಯತ್ರಯಾಣಾಂ ಅನ್ಯೋನ್ಯಂ ಸುಖದುಃಖಾದ್ಯೈರ್ವೈಧರ್ಮ್ಯಂ, ಕಾರ್ಯೇಷು ತದ್ದರ್ಶನಾದಿತ್ಯರ್ಥಃ ।*

ಸುಖಾದಿಕಂ ಚ ಘಟಾದೇರಪಿ ರೂಪಾದಿವದೇವ ಧರ್ಮಃ ಅಂತಃಕರಣೋಪಾದಾನತ್ವಾತ್ 'ಅನ್ಯಕಾರ್ಯಾಣಾಂ' ಇತ್ಯುಕ್ತಮ್ ।

ಅನುವಾದ: ಗುಣಗಳಾದ ಸತ್ತ್ವಾದಿ ದ್ರವ್ಯತ್ರಯಗಳಲ್ಲಿ ಪರಸ್ಪರ ಸುಖದುಃಖಾದಿ ವೈಧರ್ಮ್ಯಗಳು ಇರುತ್ತವೆ, ಏಕೆಂದರೆ ಕಾರ್ಯಗಳಲ್ಲಿ ಅವುಗಳ ವೈಧರ್ಮ್ಯಗಳು ಗೋಚರವಾಗುತ್ತವೆ– ಸುಖಾದಿ ಧರ್ಮಗಳು ಘಟಾದಿಗಳಲ್ಲಿ ರೂಪಾದಿಗಳಂತೆ ಇರುತ್ತವೆ; ಅನ್ಯ ಕಾರ್ಯಗಳಲ್ಲಿ ಅಂತಃಕರಣವು ಉಪಾದಾನವಾದ್ದರಿಂದ 'ಅನ್ಯ ಕಾರ್ಯಾಣಾಮ್' ಎಂದು ಹೇಳಿದೆ.

ವಿವರಣೆ: ಸುಖಾದಿಗಳು ಘಟದಲ್ಲಿಯೂ ಇರುತ್ತವೆ ಎಂಬುದರ ಅಭಿಪ್ರಾಯ ಸುಖದಲ್ಲಿ ಹಲವಾರು ಗುಣಗಳು ಸೇರುತ್ತವೆ ಎಂದು. ಈ ಅಂಶವನ್ನು ಮುಂದೆ ವಿಸ್ತರಿಸಲಾಗಿದೆ.

ಭಾಷ್ಯ: *ಅತ್ರ ಆದಿಶಬ್ದಗ್ರಾಹ್ಯಾಃ ಪಂಚಶಿಖಾಚಾರ್ಯೈರುಕ್ತಾಃ । ಯಥಾ, 'ಸತ್ವಂ ನಾಮ ಪ್ರಸಾದ–ಲಾಘವ–ಅಭಿಷ್ವಂಗ–ಪ್ರೀತಿ–ತಿತಿಕ್ಷಾ–ಸಂತೋಷಾದಿ ರೂಪಾನಂತಭೇದಂ ಸಮಾಸತಃ ಸುಖಾತ್ಮಕಮ್ । ಏವಂ ರಜೋಽಪಿ ಶೋಕಾದಿ ನಾನಾ ಭೇದಂ ಸಮಾಸತೋ ದುಃಖಾತ್ಮಕಮ್ । ಏವಂ ತಮೋಽಪಿ ನಿದ್ರಾದಿ ನಾನಾಭೇದಂ ಸಮಾಸತೋ ಮೋಹಾತ್ಮಕಮಿತಿ ।*

ಅನುವಾದ: ಆದಿ ಎಂದರೇನು ಎಂಬುದನ್ನು ವಿವರಿಸುತ್ತಾ ಪಂಚಶಿಖಾಚಾರ್ಯರು ಹೀಗೆ ಹೇಳಿದ್ದಾರೆ– ಸತ್ತ್ವವು ಪ್ರಸಾದ, ಲಾಘವ, ಅಭಿಷ್ವಂಗ, ಪ್ರೀತಿ, ತಿತಿಕ್ಷಾ, ಸಂತೋಷ ಮುಂತಾಗಿ ಅನಂತ ಭೇದಗಳಿಂದ ಕೂಡಿರುವುದರಿಂದ ಒಟ್ಟಾರೆ ಅದನ್ನು ಸುಖಾತ್ಮಕ ಎನ್ನಲಾಗಿದೆ. ಹಾಗೆಯೇ ರಜೋಗುಣವೂ ಶೋಕವೇ ಮೊದಲಾದ ನಾನಾಭೇದಗಳಿಂದ ಕೂಡಿ ಒಟ್ಟಾರೆ 'ದುಃಖಾತ್ಮಕ' ಎನ್ನಲಾಗಿದೆ. ಹಾಗೆಯೇ ತಮಸ್ಸೂ ಸಹ ನಿದ್ದೆ ಮೊದಲಾದ ನಾನಾ ಭೇದಗಳಿಂದ ಕೂಡಿ ಒಟ್ಟಾರೆ ಮೋಹಾತ್ಮಕವೆನ್ನಲಾಗಿದೆ.

ಭಾಷ್ಯ: *ಅತ್ರ ಪ್ರೀತ್ಯಾದೀನಾಂ ಗುಣಧರ್ಮತ್ವ ವಚನಾದಾಗಾಮಿ ಸೂತ್ರೇ ಚ ಲಘುತ್ವಾದೇರ್ವಕ್ಷ್ಯಮಾಣತ್ವಾತ್ ಸತ್ತ್ವಾದೀನಾಂ ದ್ರವ್ಯತ್ವಂ ಸಿದ್ಧಮ್ । ಸುಖಾದ್ಯಾತ್ಮಕತಾ ತು ಗುಣಾನಾಂ ಮನಸಃ ಸಂಕಲ್ಪಾತ್ಮಕತಾವತ್ ಧರ್ಮಧರ್ಮ್ಯಭೇದಾದೇವ ಉಪಪದ್ಯತೇ । ನ ವೈಶೇಷಿಕೋಕ್ತಾಃ ಸುಖಾದಯಃ ಏವ ಸತ್ತ್ವಾದಿಗುಣಾ ಇತಿ । ಸತ್ತ್ವಾದಿತ್ರಯಮಪಿ ವ್ಯಕ್ತಿಭೇದಾತ್ ಅನಂತಮ್ । ಅನ್ಯಥಾಹಿ ವಿಭುಮಾತ್ರತ್ವೇ ಗುಣವಿಮರ್ದ–ವೈಚಿತ್ರ್ಯಾತ್ ಕಾರ್ಯವೈಚಿತ್ರ್ಯಮಿತಿ ಸಿದ್ಧಾಂತೋ ನೋಪಪದ್ಯೇತ । ವಿಮರ್ದೇಽವಾಂತರಭೇದಾಸಂಭವಾತ್ ।*

ಅನುವಾದ: ಇಲ್ಲಿ ಪ್ರೀತಿ ಮುಂತಾದುವುಗಳಿಗೆ ಗುಣ, ಧರ್ಮಗಳನ್ನು ಹೇಳಿರುವುದರಿಂದ ಮುಂದಿನ ಸೂತ್ರದಲ್ಲಿ ಲಘುತ್ವ ಮುಂತಾದ ಧರ್ಮಗಳನ್ನು ಹೇಳಲಾಗುವುದರಿಂದ

ಸತ್ತ್ವಾದಿ ಪದಾರ್ಥಗಳು ದ್ರವ್ಯಗಳೆಂದು ಸಿದ್ಧವಾಗುತ್ತದೆ. ಸುಖಾದಿಗಳು ಗುಣಗಳದ್ದಾದ್ದರಿಂದ ಮನಸ್ಸಿನ ಸಂಕಲ್ಪಾತ್ಮಕತೆಗೆ ಸದೃಶವಾದ ಧರ್ಮ–ಧರ್ಮಿಗಳ ಅಭೇದದಿಂದಲೇ ಗುಣಗಳು ಸುಖಾದಿಗಳನ್ನು ಒಳಗೊಂಡಿರುವುದು ವ್ಯಕ್ತವಾಗುವುದು. ವೈಶೇಷಿಕರು ಹೇಳಿರುವ ಸುಖಾದಿಗಳು ಸತ್ತ್ವಾದಿ ಗುಣಗಳಲ್ಲ. ಸತ್ತ್ವಾದಿ ಮೂರೂ ಸಹ ವ್ಯಕ್ತಿಭೇದದ ಕಾರಣ ಅನಂತವಾಗಿರುವುದು. ಅನ್ಯಥಾ ಇವುಗಳನ್ನು ವಿಭುವೆಂದು ಭಾವಿಸಿದಲ್ಲಿ ಗುಣಗಳ ಸಂಘರ್ಷದ ವೈಚಿತ್ರ್ಯದ ಕಾರಣ ಕಾರ್ಯ ವೈಚಿತ್ರ್ಯವುಂಟಾಗುವುದು ಎಂಬ ಸಿದ್ಧಾಂತ ಸಿದ್ಧವಾಗದು. ಪರಸ್ಪರ ಘರ್ಷಣೆಯಿಂದ ನಡುವೆ ಭೇದವುಂಟಾಗುವುದಿಲ್ಲ.

ಭಾಷ್ಯ: *ಗುಣಾನಾಂ ಸತ್ತ್ವಾದೀನಾಮೇಕೈಕವ್ಯಕ್ತಿಮಾತ್ರತ್ವೇ ವೃದ್ಧಿಹ್ರಾಸಾದಿಕಂ ನೋಪಪದ್ಯತೇ । ತಥಾ ಪರಿಚ್ಛಿನ್ನತ್ವೇಽಚ ತತ್ಸಮೂಹರೂಪಸ್ಯ ಪ್ರಧಾನಸ್ಯ ಪರಿಚ್ಛಿನ್ನತ್ವಾಪತ್ತ್ಯಾ ಶ್ರುತಿಸ್ಮೃತಿಸಿದ್ಧಂ ಏಕದಾ ಅಸಂಖ್ಯಬ್ರಹ್ಮಾಂಡಾದಿಕಂ ನೋಪಪದ್ಯೇತ । ತತೋಽಸಂಖ್ಯತ್ವೇ ಗುಣಾನಾಂ ತ್ರಿತ್ವ ಸಂಖ್ಯೋಪಪಾದನಾಯ ವಿವೇಕಾದ್ಯರ್ಥಂ ಚ ತೇಷಾಂ ಸಾಧರ್ಮ್ಯವೈಧರ್ಮ್ಯೇ ಪ್ರತಿಪಾದಯತಿ ।*

ಅನುವಾದ: ಸತ್ತ್ವಾದಿ ಗುಣಗಳು ಒಬ್ಬೊಬ್ಬ ವ್ಯಕ್ತಿ ಮಾತ್ರಕ್ಕೆ ಎಂದರೆ ಅವುಗಳ ವೃದ್ಧಿಹ್ರಾಸಗಳಾದಿಗಳು ಉಂಟಾಗುವುದಿಲ್ಲ. ಹೀಗೆ ಬೇರ್ಪಡಿಸಿದ ನಂತರ ಅದರ ಸಮೂಹ ರೂಪವಾದ ಪ್ರಧಾನದಲ್ಲಿಯೂ ಪರಿಚ್ಛಿನ್ನತ್ವ ಉಂಟಾದಲ್ಲಿ ಶ್ರುತಿ–ಸ್ಮೃತಿಗಳಲ್ಲಿ ಪ್ರತಿಪಾದಿತವಾದ ಒಂದೇ ಕಾಲದಲ್ಲಿ ಅಸಂಖ್ಯ ಬ್ರಹ್ಮಾಂಡಾದಿಗಳು ಉಪಪನ್ನವಾಗುವುದಿಲ್ಲ. ಆದ್ದರಿಂದ ಗುಣಗಳ ಅಸಂಖ್ಯತ್ವದ ಕಾರಣ ತ್ರಿತ್ವ ಸಂಖ್ಯೆಯನ್ನು ಪಡೆಯಲು ಮತ್ತು ವಿವೇಕಾದಿಗಳನ್ನು ಸಿದ್ಧಿಸಲು ಅವುಗಳ ಸಾಧರ್ಮ್ಯ ವೈಧರ್ಮ್ಯಗಳನ್ನು ಪ್ರತಿಪಾದಿಸುತ್ತಾರೆ.

ಸೂತ್ರ: ಲಘ್ವಾದಿಧರ್ಮೈಃ ಸಾಧರ್ಮ್ಯಂ ವೈಧರ್ಮ್ಯಂ ಚ ಗುಣಾನಾಮ್ ॥ ೧೨೮ ॥

ಅನುವಾದ: ಲಘುವೇ ಮೊದಲಾದ ಧರ್ಮಗಳಿಂದ ಗುಣಗಳ ಸಾಧರ್ಮ್ಯ ವೈಧರ್ಮ್ಯಗಳು ಆಗುತ್ತವೆ.

ಭಾಷ್ಯ: *ಅಯಮರ್ಥಃ । ಲಘ್ವಾದೀತಿ ಭಾವಪ್ರಧಾನೋ ನಿರ್ದೇಶಃ । ಲಘುತ್ವಾದಿಧರ್ಮೇಣ ಸರ್ವಾಸಾಂ ಸತ್ತ್ವವ್ಯಕ್ತೀನಾಂ ಸಾಧರ್ಮ್ಯಂ ವೈಧರ್ಮ್ಯಂ ಚ ರಜಸ್ತಮೋಭ್ಯಾಮ್ । ತಥಾ ಚ ಪೃಥಿವೀವ್ಯಕ್ತೀನಾಂ ಪೃಥಿವೀತ್ವೇನೇವ ಸತ್ತ್ವವ್ಯಕ್ತೀನಾಂ ಏಕಜಾತೀಯತಯೈಕತಾ ಸಜಾತೀಯೋಪಷ್ಟಂಭಾದಿನಾ ವೃದ್ಧಿಹ್ರಾಸಾದಿಕಂ ಚ ಯುಕ್ತಮಿತ್ಯಾಶಯಃ । ಏವಂ ಚಂಚಲತ್ವಾದಿಧರ್ಮೇಣ ಸತ್ತ್ವಾದಿ ರಜೋ ವ್ಯಕ್ತೀನಾಂ ಸಾಧರ್ಮ್ಯಂ ಸತ್ತ್ವ–*

ತಮೋಭ್ಯಾಂ ಚ । ವೈಧರ್ಮ್ಯಮ್ । ಶೇಷಂ ಪೂರ್ವವತ್ । ಏವಂ ಗುರುತ್ವಾದಿಧರ್ಮೇಣ ಸರ್ವಾಸಾಂ ತಮೋವ್ಯಕ್ತೀನಾಂ ಸಾಧರ್ಮ್ಯಂ ಸತ್ವರಜೋಭ್ಯಾಂ ವೈಧರ್ಮ್ಯಮ್ । ಶೇಷಂ ಪೂರ್ವವದಿತಿ ।

ಅನುವಾದ: ಅದರ ಅರ್ಥ ಹೀಗಿದೆ– ಲಘ್ವಾದಿ ಎಂಬುದು ಭಾವಪ್ರಧಾನವಾದ ನಿರ್ದೇಶ. ಲಘುತ್ವವೇ ಮೊದಲಾದ ಧರ್ಮಗಳಿಂದ ಸಮಸ್ತ ಸತ್ತ್ವ ವ್ಯಕ್ತಿಗಳಲ್ಲಿ ಸಾಧರ್ಮ್ಯವಿರುತ್ತದೆ ಮತ್ತು ರಜಸ್ಸು, ತಮಸ್ಸುಗಳಲ್ಲಿ ವೈಧರ್ಮ್ಯವಿರುತ್ತದೆ. ಹಾಗೆಯೇ ಪೃಥಿವೀ ವ್ಯಕ್ತಿಗಳಲ್ಲಿ ಪೃಥಿವೀತ್ವದಿಂದ ಸತ್ತ್ವ ವ್ಯಕ್ತಿಗಳು ಒಂದೇ ಜಾತಿಗೆ ಸೇರುವುದರಿಂದ ಸಜಾತೀಯ ಪ್ರೇರಣೆಯಿಂದ ವೃದ್ಧಿ–ಹ್ರಾಸಗಳು ಸಂಭವಿಸುವುದು ಸರಿಯೆ. ಹಾಗೆಯೇ ರಜೋವ್ಯಕ್ತಿಗಳಲ್ಲಿ ಚಂಚಲತ್ವದ ಸಾಧರ್ಮ್ಯವಿರುತ್ತದೆ. ಸತ್ತ್ವ ಮತ್ತು ತಮೋವ್ಯಕ್ತಿಗಳೊಡನೆ ವೈಧರ್ಮ್ಯವಿರುತ್ತದೆ. ಹಾಗೆಯೇ ಗುರುತ್ವವೇ ಮೊದಲಾದ ಧರ್ಮದಿಂದ ಎಲ್ಲಾ ತಮೋವ್ಯಕ್ತಿಗಳ ಸಾಧರ್ಮ್ಯವಿರುತ್ತದೆ ಮತ್ತು ಸತ್ತ್ವ ರಜಸ್ಸುಗಳ ವೈಧರ್ಮ್ಯವಿರುತ್ತದೆ.

ವಿವರಣೆ: ವ್ಯಕ್ತಿ ಎಂದರೆ ಪದಾರ್ಥ; ಗುಣವಿಶೇಷಕ್ಕೆ ಆಶ್ರಯವಾಗಿರುವ ದ್ರವ್ಯ.

ಭಾಷ್ಯ: *ವೈಧರ್ಮ್ಯಸ್ಯ ಪ್ರಾಗೇವೋಕ್ತತಯಾತ್ರ ಪುನರ್ವೈಧರ್ಮ್ಯ–। ಕಥನಂ ಸಂಪಾತಾಯಾತಮ್ । ಅತ್ರ ವೈಧರ್ಮ್ಯಂ ವೇತಿ ಪಾಠಃ ಪ್ರಾಮಾದಿಕ ಏವೇತಿ ।*

ಅನುವಾದ: ವೈಧರ್ಮ್ಯವನ್ನು ಮೊದಲೇ ಹೇಳಿರುವುದರಿಂದ ಮತ್ತೆ ವೈಧರ್ಮ್ಯವನ್ನು ಹೇಳುವುದು ಪ್ರಾಸಂಗಿಕವಾಗಿ ಬಂದಿದೆ. ಇಲ್ಲಿ 'ವೈಧರ್ಮ್ಯ ವಾ' ಎಂಬ ಪಾಠವು ತಪ್ಪಾಗಿದೆ.

ಭಾಷ್ಯ: *ಅತ್ರ ಸೂತ್ರೇ ಸತ್ತ್ವಾದೀನಾಂ ಕಾರಣದ್ರವ್ಯಾಣಾಂ ಪ್ರತ್ಯೇಕಮನೇಕವ್ಯಕ್ತಿಕತ್ವಂ ಸಿದ್ಧಮ್ । ಅನ್ಯಥಾ ಲಘುತ್ವಾದೀನಾಂ ಸಾಧರ್ಮ್ಯಾನುಪಪತ್ತೇ; ಸಮಾನಾನಾಂ ಧರ್ಮಸ್ಯೈವ ಸಾಧರ್ಮ್ಯತ್ವಾತ್ । ನ ಚ ಕಾರ್ಯಸತ್ತ್ವಾದೀನಾಮನೇಕತಯಾ ಲಘುತ್ವಾದಿಕಂ ಸಾಧರ್ಮ್ಯಂ ಸ್ಯಾದಿತಿ ವಾಚ್ಯಮ್ । ತ್ರಿಗುಣಾ–ತ್ಮಕತ್ತ್ವೇನ ಘಟಾದೀನಾಮಪಿ ಕಾರ್ಯಸತ್ತ್ವಾದಿರೂಪತಯಾ ಲಘುತ್ವಾದೀನಾಂ ಸತ್ತ್ವಾದಿ ಸಾಧರ್ಮ್ಯತಾನುಪಪತ್ತೇಃ । ತಸ್ಮಾತ್ ಕಾರಣಗುಣಾನಾಂ ಏವಾತ್ರ ಸಾಧರ್ಮ್ಯಾದಿಕಮುಚ್ಯತ ಇತಿ ।*

ಅನುವಾದ: ಈ ಸೂತ್ರದಲ್ಲಿ ಸತ್ತ್ವಾದಿ ಕಾರಣ ದ್ರವ್ಯಗಳಲ್ಲಿ ಪ್ರತ್ಯೇಕವಾಗಿ ಅನೇಕ ವ್ಯಕ್ತಿಗಳು ಸಿದ್ಧವಾಗುತ್ತವೆ. ಹಾಗಿಲ್ಲದಿದ್ದಲ್ಲಿ ಲಘುತ್ವಾದಿಗಳ ಸಾಧರ್ಮ್ಯ ದೊರೆಯದು. ಏಕೆಂದರೆ ಸಮಾನವಾದ ಧರ್ಮಕ್ಕೇ ಸಾಧರ್ಮ್ಯ ಬರುವುದು. ಅಲ್ಲದೆ ಕಾರ್ಯರೂಪವಾದ ಸತ್ತ್ವಾದಿಗಳು ಅನೇಕವಾಗಿರುವುದರಿಂದ ಲಘುತ್ವಾದಿಗಳು

ಸಾಧರ್ಮ್ಯವನ್ನು ಪಡೆಯುತ್ತವೆ ಎಂಬುದು ಸರಿ. ಆದರೆ ತ್ರಿಗುಣಾತ್ಮಕವಾದ್ದರಿಂದ ಘಟಾದಿಗಳಲ್ಲೂ ಕಾರ್ಯಸತ್ತ್ವಾದಿ ರೂಪವಾದ್ದರಿಂದ ಲಘುತ್ವವನ್ನು ಅನ್ವಯಿಸಬೇಕಾಗಿ ಬಂದರೆ ಅಂತಹ ಪ್ರಸಂಗಗಳು ಒಪ್ಪತಕ್ಕದ್ದಲ್ಲ. ಆದ್ದರಿಂದ ಇಲ್ಲಿ ಕೇವಲ ಕಾರಣ ಗುಣಗಳನ್ನಾಗಿ ಸತ್ತ್ವಾದಿಗಳನ್ನು ಹೇಳಬೇಕಾಗಿದೆ.

ವಿವರಣೆ: ಸತ್ತ್ವಾದಿಗುಣಗಳು ಕಾರಣದಲ್ಲಿ ಮಾತ್ರ ಇರಲು ಸಾಧ್ಯ, ಕಾರ್ಯದಲ್ಲಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಭಾಷ್ಯ: *ಸತ್ತ್ವಾದೀನಾಂ ಲಘುತ್ವಾದಿಕಂ ಚೋಕ್ತಂ ಕಾರಿಕಯಾ ।*
ಸತ್ತ್ವಂ ಲಘು ಪ್ರಕಾಶಕಂ ಇಷ್ಟಂ ಉಪಷ್ಟಂಭಕಂ ಚಲಂಚರಜಃ ।
ಗುರು ವರಣಕಮೇವ ತಮಃ ಪ್ರದೀಪವಚ್ಚಾರ್ಥತೋ ವೃತ್ತಿಃ ॥
ಸಾಂ.ಕಾ. ೧೩

ಅರ್ಥತಃ ಪುರುಷಾರ್ಥನಿಮಿತ್ತಾತ್ ।

ಅನುವಾದ: ಸತ್ತ್ವಾದಿಗಳಲ್ಲಿ ಲಘುತ್ವಾದಿ ಧರ್ಮಗಳು ಕಾರಿಕೆಯಲ್ಲಿ ಹೇಳಿದೆ. 'ಸತ್ತ್ವವು ಲಘು ಮತ್ತು ಪ್ರಕಾಶಕ. ರಜಸ್ಸು (ಉಳಿದೆರಡು ಗುಣಗಳ) ಉತ್ತೇಜಕ ಮತ್ತು ಕ್ರಿಯಾಶೀಲವಾಗಿ ಇರುತ್ತದೆ. ತಮೋ ಗುಣವು ಜಡತೆ ಮತ್ತು ಆವರಿಸುವ ಗುಣ ಹೊಂದಿರುತ್ತದೆ. ಇವುಗಳ ವೃತ್ತಿಯು (ಎಣ್ಣೆ, ಬತ್ತಿ ಮತ್ತು ದೀಪಗಳಂತೆ) (ಪುರುಷನ) ಉದ್ದೇಶಕ್ಕಾಗಿ ಇರುತ್ತದೆ.

ಭಾಷ್ಯ: *ನನ್ವೇವಂ ಮೂಲಕಾರಣಸ್ಯ ಪರಿಚ್ಛಿನ್ನಾಪರಿಚ್ಛಿನ್ನಾಸಂಖ್ಯವ್ಯಕ್ತಿಕತ್ವೇ ವೈಶೇಷಿಕಮತಾದತ್ರ ಕೋ ವಿಶೇಷ ಇತಿ ಚೇತ್ ।*

ಅನುವಾದ: ಹೀಗೆ ಮೂಲ ಕಾರಣವು ನಿರ್ದಿಷ್ಟವಾದ, ಅನಿರ್ದಿಷ್ಟವಾದ ಅಸಂಖ್ಯ ವ್ಯಕ್ತಿಗಳಿಂದ ಕೂಡಿದ್ದಲ್ಲಿ ಇದು ವೈಶೇಷಿಕ ಮತಕ್ಕಿಂತ ಭಿನ್ನ ಎಂದು ಹೇಗೆ ಹೇಳುವುದು?

ಭಾಷ್ಯ: *ಕಾರಣದ್ರವ್ಯಸ್ಯ ಶಬ್ದಸ್ಪರ್ಶಾದಿರಾಹಿತ್ಯಮೇವ–*
ಶಬ್ದಸ್ಪರ್ಶವಿಹೀನಂ ತು ರೂಪಾದಿಭಿರಸಂಯುತಮ್ ।
ತ್ರಿಗುಣಂ ತಜ್ಜನದ್ಯೋನಿರನಾದಿ ಪ್ರಭವಾಪ್ಯಯಮ್ ।ವಿ.ಪು.೧.೨.೨೦
ಇತಿ ವಿಷ್ಣು ಪುರಾಣಾದಿಭ್ಯಃ । ಏತಚ್ಚ ಪಾತಂಜಲೇಽಸ್ಮಾಭಿಃ ಪ್ರಪಂಚಿತಮ್ ।

ಅನುವಾದ: ಕಾರಣ ದ್ರವ್ಯದಲ್ಲಿ ಶಬ್ದ–ಸ್ಪರ್ಶಾದಿಗಳು ಇಲ್ಲದಿರುವುದೇ ಅದರ ವಿಶೇಷ. 'ತ್ರಿಗುಣಗಳಿಂದ ಕೂಡಿರುವ ಈ ಪ್ರಕೃತಿ ಶಬ್ದ–ಸ್ಪರ್ಶಗಳಿಲ್ಲದ್ದು ಮತ್ತು ಯಾವುದೇ ರೂಪವನ್ನು ಹೊಂದಿಲ್ಲ. ಈ ಜಗತ್ತಿನ ಮೂಲ ಅನಾದಿ ಮತ್ತು ಅನಂತ ಎಂದು ವಿಷ್ಣುಪುರಾಣ ಮುಂತಾದವುಗಳಿಂದ ತಿಳಿದುಬರುತ್ತದೆ. ಇದೂ ಸಹ ಪತಂಜಲಿಯ (ಸೂತ್ರಗಳ ಮೇಲೆ) ನಾವು ವಿವರಿಸಿದ್ದೇವೆ.

ಭಾಷ್ಯ: *ನನು ಮಹದಾದೀನಾಂ ಸ್ವರೂಪತಃ ಸಿದ್ಧಾವಪಿ ತೇಷಾಂ ಪ್ರತ್ಯಕ್ಷೇಣೋತ್ಪತ್ತ್ಯದರ್ಶನಾತ್ ಕಾರ್ಯತ್ವೇ ನಾಸ್ತಿ ಪ್ರಮಾಣಂ ತೇನ ತೇಷಾಂ ಹೇತುಮತ್ತ್ವಂ ಸಾಧರ್ಮ್ಯಂ ಸ್ಯಾತ್ ।*

ಅನುವಾದ: ಮಹದಾದಿಗಳ ಸ್ವರೂಪವು ಸಿದ್ಧವಾದರೂ ಅವುಗಳ ಉತ್ಪತ್ತಿಯು ಪ್ರತ್ಯಕ್ಷವಾಗಿ ಕಾಣಬರದಿರುವುದರಿಂದ ಅವು ಕಾರ್ಯವೆಂದು ಹೇಳಲು ಯಾವ ಪ್ರಮಾಣವೂ ಇಲ್ಲ. ಅದು ಕಾರಣವುಳ್ಳ ಸಾಧರ್ಮ್ಯದಿಂದ ಕೂಡಿದ್ದು ಎಂದು ಹೇಗೆ ಹೇಳುವಿರಿ?

ಸೂತ್ರ: ಉಭಯಾನ್ಯತ್ವಾತ್ ಕಾರ್ಯತ್ವಂ ಮಹದಾದೇರ್ಘಟವತ್ ॥ ೧೨೯ ॥

ಸೂತ್ರಾನುವಾದ: ಪುರುಷ–ಪ್ರಕೃತಿಗಳು ಭಿನ್ನವಾಗಿರುವುದರಿಂದ ಮಹತ್ತು ಮೊದಲಾದುವುಗಳ ಕಾರ್ಯತ್ವವು ಘಟಾದಿಗಳಂತೆ (ಸಿದ್ಧವಾದುವು).

ಭಾಷ್ಯ: *ಮಹದಾದಿ ಪಂಚಭೂತಾಂತಂ ವಿವಾದಾಸ್ಪದಂ ತಾವನ್ನ ಪುರುಷೋ, ಭೋಗ್ಯತ್ವಾತ್ । ನಾಪಿ ಪ್ರಕೃತಿಃ; ಮೋಕ್ಷಾನ್ಯಥಾ ಅನುಪಪತ್ತ್ಯಾ ವಿನಾಶಿತ್ವಾತ್ । ಅತಃ ಪ್ರಕೃತಿ ಪುರುಷಭಿನ್ನಂ ತತ್; ಭಿನ್ನತ್ವಾಚ್ಚ ಕಾರ್ಯಂ ಘಟಾದಿವತ್ ಇತ್ಯರ್ಥಃ ।*

ಅನುವಾದ: ಮಹತ್ತಿನಿಂದ ಪಂಚಭೂತಗಳವರೆಗೆ ವಿವಾದಕ್ಕೆ ಎಡೆಯಿಲ್ಲ. ಏಕೆಂದರೆ ಪುರುಷನಿಗೆ ಅವು ಭೋಗ್ಯವಾಗಿವೆ. ಪ್ರಕೃತಿಯೂ ಅಲ್ಲ. ಹಾಗಿಲ್ಲದಿದ್ದಲ್ಲಿ ಮೋಕ್ಷವೇ ಇಲ್ಲದೆ ವಿನಾಶವಾಗಬೇಕಾಗುವುದು. ಆದ್ದರಿಂದ ಪ್ರಕೃತಿ–ಪುರುಷರಿಗಿಂತ ಭಿನ್ನ ವಾಗಿರಬೇಕು, ಭಿನ್ನವಾಗಿರುವುದರಿಂದಲೇ ಕಾರ್ಯವು ಘಟಾದಿಗಳಂತೆ ಇರುವುದು.

ವಿವರಣೆ: ಪುರುಷನಾಗಲಿ ಮೂಲ ಪ್ರಕೃತಿಯಾಗಲಿ ಉಪಾದಾನ ಕಾರಣಗಳನ್ನು ಹೊಂದಿಲ್ಲ. ಪ್ರಕೃತಿ–ಪುರುಷರಿಗಿಂತ ಭಿನ್ನವಾದ ಮತ್ತು ನಾಶವಾಗುವ ಪದಾರ್ಥಗಳು ಎಂದರೆ ಮಹತ್ತಿನಿಂದ ಪಂಚಭೂತಗಳವರೆಗೆ ಇರುವ ಪದಾರ್ಥಗಳು. ಆದ್ದರಿಂದ ಅವುಗಳನ್ನೇ ಕಾರ್ಯಗಳೆನ್ನಬೇಕು ಎಂದರ್ಥ. ಮಹದಾದಿಗಳು ವಿನಾಶಿಗಳಾದ್ದರಿಂದ ಪುರುಷನು ಮುಕ್ತಿ ಪಡೆಯುವುದು ಸಾಧ್ಯ.

ಭಾಷ್ಯ: *ನನು ವಿಕಾರಶಕ್ತಿದಾಹಾದಿನಾ ಏವ ಮೋಕ್ಷಾದ್ಯುಪಪತ್ತೇಃ ವಿನಾಶಿತ್ವಮಪಿ ತೇಷಾಮಸಿದ್ಧಮಿತ್ಯಾಶಂಕಾಯಾಂ ಕಾರ್ಯತ್ವೇ ಹೇತ್ವಂತರಾಣ್ಯಾಹ ।*

ಅನುವಾದ: ವಿಕಾರವು (ಕಾರ್ಯವು) ತನ್ನ ಶಕ್ತಿಯಿಂದ ದಾಹಾದಿಗಳನ್ನು ತೋರ್ಪಡಿಸು ವಂತೆ (ಮಹದಾದಿಗಳೂ) ಮೋಕ್ಷಾದಿ ಫಲಗಳನ್ನು ಪ್ರಕಟಗೊಳಿಸುವುವು; ಅವುಗಳ ವಿನಾಶಿತ್ವವೂ ಸಹ ಅಸಿದ್ಧವಾಗುವುದು. ಈ ಸಂದರ್ಭದಲ್ಲಿ ಕಾರ್ಯತ್ವಕ್ಕೆ ಬೇರೆ ಕಾರಣಗಳನ್ನು ಹೇಳಿದೆ.

ಸೂತ್ರ: ಪರಿಮಾಣಾತ್ ॥ ೧೩೦ ॥

ಸೂತ್ರಾನುವಾದ: (ಮಹದಾದಿಗಳು) ಪರಿಮಾಣದ ಕಾರಣ (ಕಾರ್ಯಗಳು)

ಭಾಷ್ಯ: *ಪರಿಚ್ಛಿನ್ನತ್ವಾತ್ ದೈಶಿಕಾಭಾವಪ್ರತಿಯೋಗಿತಾವಚ್ಛೇದಕ ಜಾತಿಮತ್ತ್ವಾದಿತ್ಯರ್ಥಃ । ತೇನ ಗುಣವ್ಯಕ್ತೀನಾಂ ಕಿಯತೀನಾಂ ಪರಿಚ್ಛಿನ್ನತ್ವೇಽಪಿ ನ ತತ್ರ ವ್ಯಭಿಚಾರಃ ।*

ಅನುವಾದ: ಪರಿಮಿತವಾದದ್ದರಿಂದ ಸ್ಥಳದಲ್ಲಿ ಅಭಾವ ಪ್ರತಿಯೋಗಿಯನ್ನು ನಿರ್ಣಯಿಸುವ ಜಾತಿಯಿಂದ ಕೂಡಿರುವುದರಿಂದ ಎಂದರ್ಥ. ಆದ್ದರಿಂದ ಗುಣವ್ಯಕ್ತಿಗಳು ಎಷ್ಟೇ ಸೀಮಿತಗೊಳಿಸಿದರೂ ತಪ್ಪಾಗದು.

ವಿವರಣೆ: ಕಾರ್ಯವೆಂದರೆ ಅದಕ್ಕೊಂದು ನಿರ್ದಿಷ್ಟ ಪರಿಮಿತಿಯಿರುವುದು. ಆಯಾ ಪಂಗಡಕ್ಕೆ ಸೇರಿದ ವಸ್ತು ತನ್ನ ಅಭಾವಕ್ಕೆ ಪ್ರತಿಯೋಗಿಯಾಗಿ 'ಪರಿಮಾಣ' ಹೊಂದಿ ಕಾರ್ಯವೆನಿಸಿಕೊಳ್ಳುವುದು.

ಸೂತ್ರ: ಸಮನ್ವಯಾತ್ ॥ ೧೩೧ ॥

ಸೂತ್ರಾನುವಾದ: ಪರಸ್ಪರ ಹೊಂದಿಕೊಂಡಿರುವುದರಿಂದ (ಮಹದಾದಿಗಳಲ್ಲಿ ಕಾರ್ಯತ್ವದ ಪ್ರತೀತಿಯುಂಟಾಗುವುದು)

ಭಾಷ್ಯ: *ಉಪವಾಸಾದಿನಾ ಕ್ಷೀಣಂ ಹಿ ಬುದ್ಧ್ಯಾದಿ ತತ್ತ್ವಮನ್ನಾದಿಭಿಃ ಸಮನ್ವಯೇನ ಸಮನುಗತೇನ ಪುನರುಪಚೀಯತೇ । ಅತಃ ಸಮನ್ವಯಾತ್ ಕಾರ್ಯತ್ವಮುನ್ನೀಯತ ಇತಿ ಅರ್ಥಃ । ನಿತ್ಯಸ್ಯ ಹಿ ನಿರವಯವತಯಾ ಅವಯವಾನುಪ್ರವೇಶರೂಪಃ ಸಮನ್ವಯೋ ನ ಘಟತೇ ಇತಿ । ಸಮನ್ವಯೇ ಚ ಶ್ರುತಿಃ ಪ್ರಮಾಣಂ ಮನಃ ಪ್ರಕೃತ್ಯ– 'ಏವಂ ತೇ ಸೌಮ್ಯ ಷೋಡಶಾನಾಂ ಕಲಾನಾಮೇಕಾ ಕಲಾಽತಿಶಿಷ್ಟಾಭೂತ್ । ಸಾನ್ನೇನೋಪಸಮಾಹಿತಾ ಪ್ರಾಜ್ವಾಲೀತ್' (ಛಾಂ.ಉ. ೬.೭.೬) ಯೋಗಸೂತ್ರಂ ಚ 'ಜಾತ್ಯಂತರ ಪರಿಣಾಮಃ ಪ್ರಕೃತ್ಯಾಪೂರಾತ್' । (೪.೨) ಇತಿ ।*

ಅನುವಾದ: ಉಪವಾಸಾದಿಗಳಿಂದ ಕ್ಷೀಣವಾದ ಬುದ್ಧ್ಯಾದಿತತ್ತ್ವಗಳು ಅನ್ನಾದಿಗಳ ಸಮನ್ವಯದಿಂದ ಎಂದರೆ ಹೊಂದಿಕೊಂಡಿರುವುದರಿಂದ ಪುನಃ ಬಲಗೊಳ್ಳುತ್ತವೆ. ಆದ್ದರಿಂದ ಸಮನ್ವಯದಿಂದ ಕಾರ್ಯತ್ವವು ಕಲ್ಪಿಸಲ್ಪಡುತ್ತದೆ. ನಿತ್ಯ–ಪದಾರ್ಥಗಳು ನಿರವಯವಾಗಿರುವುದರಿಂದ ಅವುಗಳಲ್ಲಿ ಅವಯವ ಪ್ರವೇಶ ರೂಪದ ಸಮನ್ವಯವು ಸಂಭವಿಸಲಾರದು. ಸಮನ್ವಯವನ್ನು ಕುರಿತು ಮನಸ್ಸನ್ನು ಕುರಿತು ಹೇಳಿರುವ ಶ್ರುತಿ ಪ್ರಮಾಣವು (ಛಾಂ.ಉ) ಹೀಗಿದೆ– 'ಎಲೈ ಸೌಮ್ಯನೆ, ಹದಿನಾರು ಕಲೆಗಳಲ್ಲಿ ಒಂದು ಕಲೆಯು ಉಳಿಯಿತು. ಅದು ಅನ್ನದ ಮೂಲಕ ವೃದ್ಧಿ ಹೊಂದಿತು ಎಂದರೆ ಪ್ರಜ್ವಲಗೊಳಿಸಿತು'. ಯೋಗಸೂತ್ರವೂ ಹೀಗೆ ಹೇಳಿದೆ– ಒಂದು ಜಾತಿಯಿಂದ ಮತ್ತೊಂದು ಜಾತಿಗೆ ಪರಿವರ್ತನವು ಪ್ರಕೃತಿಯು ಪೂರ್ಣಗೊಳ್ಳುವುದರಿಂದ ಉಂಟಾಗುವುದು.

ವಿವರಣೆ: ಮಹದಾದಿಗಳು ತ್ರಿಗುಣಾತ್ಮಕ ಪ್ರಕೃತಿಯಿಂದಾದ ಪರಿಣಾಮಗಳು. ಇವು ವ್ಯಕ್ತಿಶಃ ಭಿನ್ನ ಭಿನ್ನವಾದರೂ ಅವುಗಳಲ್ಲಿ ತ್ರಿಗುಣಗಳು ಸಮಾನವಾಗಿ ಕಂಡುಬರುತ್ತವೆ. ಪ್ರಧಾನೇನ ಸಹ ಸಂಯಕ್ ಅನ್ವಯಾತ್ ಪ್ರಧಾನಗುಣಾನಾಂ ಸರ್ವಪದಾರ್ಥೇಷು ದರ್ಶನಾತ್ । (ಅನಿರುದ್ಧ)

ಸೂತ್ರ: ಶಕ್ತಿತಶ್ಚೇತಿ ॥ ೧೩೨ ॥

ಸೂತ್ರಾನುವಾದ: ಮತ್ತು (ಕಾರಣದ) ಶಕ್ತಿಯಿಂದಲೂ (ಮಹದಾದಿಗಳು ಕಾರ್ಯಗಳೇ)

ಭಾಷ್ಯ: *ಕಿಂಚ – ಕರಣತಶ್ಚ ಇತ್ಯರ್ಥಃ । ಪುರುಷಸ್ಯಯತ್ಕರಣಂ ತತ್ ಕಾರ್ಯಂ ಚಕ್ಷುರಾದಿವತ್ ಇತಿ ಭಾವಃ । ಪುರುಷೇ ಸಾಕ್ಷಾದ್ವಿಷಯಾರ್ಪಕತ್ವಂ ಪ್ರಕೃತೇರ್ನಾಸ್ತೀತಿ ಪ್ರಕೃತಿಃ ನ ಕರಣಮಿತಿ । ಅತೋ ಮಹತ್ತ್ವಸ್ಯ ಕರಣತಯಾ ಕಾರ್ಯತ್ವೇ ಸಿದ್ಧೇ ಸುತರಾಂ ಅನ್ಯೇಷಾಮಪಿ ಕಾರ್ಯತ್ವಮ್ । ಇತಿಶಬ್ದಃ ಚ ಹೇತುವರ್ಗಸಮಾಪ್ತಿ ಸೂಚನಾರ್ಥಃ ।*

ಅನುವಾದ: ಕರಣವಾದ್ದರಿಂದಲೂ (ಕಾರ್ಯತ್ವವು) ಎಂದರ್ಥ. ಹೇಗೆ ಕಾರ್ಯವಾದ ಕಣ್ಣು ಒಂದು ಕರಣವೋ ಹಾಗೆ ಪುರುಷನ ಕರಣ ವಾದ ಮಹತ್ತೇ ಮುಂತಾದುವು ಕಾರ್ಯಗಳು. ಪುರುಷನ ಪಾಲಿಗೆ ಪ್ರಕೃತಿ ನೇರವಾಗಿ ವಿಷಯಗಳನ್ನು ಅರ್ಪಿಸದು. ಏಕೆಂದರೆ ಪ್ರಕೃತಿಯು ಕರಣವಲ್ಲ. ಆದ್ದರಿಂದ ಮಹತ್ವತ್ವವು ಕರಣವಾದ್ದರಿಂದ ಕಾರ್ಯವೆಂದು ಸಿದ್ಧವಾದ್ದರಿಂದ ಇತರ ತತ್ತ್ವಗಳೂ ಸಹ ಕಾರ್ಯಗಳೆಂದು ತಿಳಿದುಬರುತ್ತದೆ. (ಸೂತ್ರದ) ಇತಿ ಶಬ್ದವು ಹೇತುಗಳ ಸಮಾಪ್ತಿಯನ್ನು ಸೂಚಿಸುತ್ತವೆ.

ವಿವರಣೆ: ಶಕ್ತಿ ಎಂದರೆ (ಕಾರಣ ನಿಷ್ಠಃ ಕಾರ್ಯೋತ್ಪಾದನಯೋಗ್ಯಃ ಧರ್ಮವಿಶೇಷಃ) ಕಾರ್ಯವನ್ನು ಉತ್ಪಾದನ ಮಾಡಬಲ್ಲ ಕಾರಣದಲ್ಲಿರುವ ವಿಶೇಷ ಧರ್ಮವನ್ನು ಶಕ್ತಿ ಎನ್ನುವರು.

ಭಾಷ್ಯ: *ಯದಿ ಚ ಮಹದಾದಿಮಧ್ಯೇ ಕಿಂಚಿದಕಾರ್ಯಂ ಸ್ವೀಕ್ರಿಯತೇ ತದಪಿ ತದೇವ ಪ್ರಕೃತಿಃ ಪುರುಷೋ ವಾ ಇತಿ ಸಿದ್ಧಂ ನಃ ಸಮೀಹಿತಮ್ । ಪ್ರಕೃತಿಪುರುಷೌ ಪ್ರಸಾಧ್ಯ ಪರಿಣಾಮಿತ್ವ ಅಪರಿಣಾಮಿತ್ವಾಭ್ಯಾಂ ವಿವೇಕ್ತವ್ಯೌ ಇತ್ಯತ್ರ ಏವ ಅಸ್ಮಾಕಂ ತಾತ್ಪರ್ಯಾದಿತ್ಯಾಹ–*

ಅನುವಾದ: ಮಹದಾದಿಗಳಲ್ಲಿ ಏನಾದರೂ ಕಾರ್ಯರಾಹಿತ್ಯವನ್ನು ಸ್ವೀಕರಿಸಿದಲ್ಲಿ ಪುರುಷ ನನ್ನಾಗಲಿ ಪ್ರಕೃತಿಯನ್ನಾಗಲಿ ಒಪ್ಪಿದರೆ ನಾವು ಬಯಸಿದ್ದು ಸಿದ್ಧವಾದಂತೆಯೇ. ಪ್ರಕೃತಿ ಮತ್ತು ಪುರುಷರನ್ನು ಸಿದ್ಧ ಮಾಡಿದ ಮೇಲೆ ಪರಿಣಾಮಿತ್ವ–ಅಪರಿಣಾಮಿತ್ವಗಳ ಮೂಲಕ ವಿವೇಕ ಉಂಟುಮಾಡಬೇಕು ಎಂಬುದೇ ನಮ್ಮ ತಾತ್ಪರ್ಯ ಎಂದು (ಸೂತ್ರಕಾರರು) ಹೇಳಿದ್ದಾರೆ–

ಸೂತ್ರ: ತದ್ಧಾನೇ ಪ್ರಕೃತಿಃ ಪುರುಷೋ ವಾ ॥ ೧೩೩ ॥

ಸೂತ್ರಾನುವಾದ: ಅದನ್ನು ಒಪ್ಪದಿದ್ದಲ್ಲಿ ಪ್ರಕೃತಿಯನ್ನಾಗಲಿ ಪುರುಷನನ್ನಾಗಲಿ ಒಪ್ಪಬೇಕಾದುದೇ.

ಭಾಷ್ಯ: *ತದ್ಧಾನೇ ಕಾರ್ಯತ್ವಹಾನೇ ಯದಿ ಪರಿಣಾಮೀ ತದಾ ಪ್ರಕೃತಿಃ । ಯದಿ ವಾಪರಿಣಾಮೀ ಭೋಕ್ತಾ ತದಾ ಪುರುಷ ಇತ್ಯರ್ಥಃ ॥*

ಅನುವಾದ: (ಯಾವುದೇ ತತ್ತ್ವವನ್ನು ಕಾರ್ಯವೆಂದು) ಒಪ್ಪದಿದ್ದಲ್ಲಿ ಅದು ಪರಿಣಾಮಿಯಾದಲ್ಲಿ ಪ್ರಕೃತಿಯಾಗಿರಬೇಕು. ಅಪರಿಣಾಮಿಯಾದಲ್ಲಿ ಅದು ಭೋಕ್ತೃವಾದ ಪುರುಷನಾಗಿರಬೇಕು.

ಭಾಷ್ಯ: *ನನು ನಿತ್ಯಮಪಿ ಉಭಯಭಿನ್ನಂ ಸ್ಯಾತ್ । ತತ್ರಾಹ*

ಅನುವಾದ: ಆ ತತ್ತ್ವವು ನಿತ್ಯವಾದರೂ ಪ್ರಕೃತಿ–ಪುರುಷರಿಗಿಂತ ಭಿನ್ನವಾದರೆ– ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ತಯೋರನ್ಯತ್ವೇ ತುಚ್ಛತ್ವಮ್ ॥ ೧೩೪ ॥

ಸೂತ್ರಾನುವಾದ: ಅವೆರಡಕ್ಕಿಂತಲೂ ಭಿನ್ನವಾದರೆ ಅದು ಪ್ರಮಾಣಹೀನವಾಗುವುದು. (ಕಾರ್ಯವಲ್ಲದ್ದು ಕಾರಣವಾಗಿರಬೇಕು ಅಥವಾ ಭೋಕ್ತೃವಾಗಿರಬೇಕು ಎಂದು ಸಿದ್ಧವಾಗುವುದು, ಬೇರೆಯಾಗಲು ಸಾಧ್ಯವಿಲ್ಲ.)

ಭಾಷ್ಯ: *ತದೇವಂ ಮಹದಾದಿಷು ಕಾರ್ಯತ್ವಂ ಪ್ರಸಾಧ್ಯ ಸಾಂಪ್ರತಂ ತೈಃ ಪ್ರಕೃತ್ಯಾನುಮಾನೇಽನುಕ್ತಂ ವಿಶೇಷಮಾಹ–*

ಅನುವಾದ: ಮಹತ್ತತ್ತ್ವಾದಿಗಳಲ್ಲಿ ಕಾರ್ಯತ್ವವನ್ನು ಹೀಗೆ ಸಾಧಿಸಿ ಈಗ ಅವುಗಳಿಂದ ಪ್ರಕೃತಿಯ ಅನುಮಾನವನ್ನು ಮಾಡಲು ಇದುವರೆಗೆ ಹೇಳದ ವಿಶೇಷವನ್ನು ಹೇಳುತ್ತಾರೆ.

ಸೂತ್ರ: ಕಾರ್ಯಾತ್ ಕಾರಣಮನುಮಾನಂ ತತ್ಸಾಹಿತ್ಯಾತ್ ॥ ೧೩೫ ॥

ಸೂತ್ರಾನುವಾದ: ಕಾರ್ಯವು ಕಾರಣದಲ್ಲಿ ಅಡಗಿರುವುದರಿಂದ ಕಾರಣವನ್ನು ಅನುಮಾನ ಮಾಡಬಹುದು.

ಭಾಷ್ಯ: *ಕಾರ್ಯಾತ್ ಮಹತ್ತತ್ತ್ವಾದೇರ್ಲಿಂಗಾತ್ ಸಾಮಾನ್ಯತೋ– ದೃಷ್ಟಂ ಕಾರಣಮನುಮಾನಂ ಯದುಕ್ತಂ ತತ್ ತಾಟಸ್ಥ್ಯನಿವೃತ್ತಯೇ ತತ್ಸಾಹಿತ್ಯಾತ್ ಕಾರ್ಯಸಾಹಿತ್ಯೇನ ಕರ್ತವ್ಯಮ್ । 'ಸದೇವ ಸೌಮ್ಯೇದಮಗ್ರ ಆಸೀತ್ (ಛಾಂ.ಉ. ೬.೨.೧) 'ತಮ ಏವ ಇದಮಗ್ರ ಆಸೀತ್' (ಮೈ.ಆ. ೫.೨) ಇತ್ಯಾದಿ ಶ್ರುತ್ಯನುಸಾರಾತ್ । ತದ್ಯಥಾ– ಮಹದಾದಿಕಂ ಸ್ವೋಪಹಿತ ತ್ರಿಗುಣಾತ್ಮಕ ವಸ್ತೂಪಾದಾನಕಂ ಕಾರ್ಯತ್ವಾತ್, ಶಿಲಾಮಧ್ಯಸ್ಥ ಪ್ರತಿಮಾವತ್, ತೈಲಾದಿವಚ್ಚ ಇತ್ಯರ್ಥಃ । ಅನುಕೂಲತರ್ಕಃ ಪ್ರಾಗೇವ ದರ್ಶಿತಃ । (೧.೬೧–೬೫)*

ಅನುವಾದ: ಮಹತ್ತತ್ತ್ವಾದಿ ಕಾರ್ಯಗಳ ಲಿಂಗದಿಂದ ಸಾಮಾನ್ಯತೋದೃಷ್ಟವಾದ ಅನುಮಾನದಿಂದ ಹೇಳಿರುವುದನ್ನು 'ತಾಟಸ್ಥ್ಯ'ವನ್ನು ನಿವಾರಿಸಲು ಕಾರ್ಯ ಸಾಹಿತ್ಯದ ಮೂಲಕ ಮಾಡಬೇಕು. 'ಎಲೈ ಸೌಮ್ಯನೆ, ಪ್ರಾರಂಭದಲ್ಲಿ ಸತ್ತಾಗಿ ಇತ್ತು', 'ತಮಸ್ಸೇ ಪ್ರಾರಂಭದಲ್ಲಿ ಇತ್ತು' ಮುಂತಾದ ಶ್ರುತಿಗನುಸಾರವಾಗಿ ಇರುವುದರಿಂದ. ಹೇಗೆಂದರೆ ಮಹದಾದಿಗಳು ತಮಗೆ ಸೇರಿದ ತ್ರಿಗುಣಾತ್ಮಕವಾದ ವಸ್ತುಗಳನ್ನು ಉಪಾದಾನವಾಗಿ ಹೊಂದಿರುತ್ತವೆ, ಏಕೆಂದರೆ ಅವು ಕಾರ್ಯಗಳು; ಹೇಗೆಂದರೆ ಶಿಲೆಯ ನಡುವೆ ಇರುವ ಪ್ರತಿಮೆಯಂತೆ ಅಥವಾ ಎಣ್ಣೆ ಬೀಜಗಳಲ್ಲಿ ಎಣ್ಣೆ ಮೊದಲಾದವುಗಳಂತೆ. ಇದಕ್ಕೆ ಸಹಕಾರಿಯಾದ ತರ್ಕವನ್ನು ಮೊದಲೇ ತೋರಿಸಿ ಕೊಟ್ಟಿದ್ದೇವೆ.

ವಿವರಣೆ: 'ಕಾರ್ಯಸಾಹಿತ್ಯ'ವೆಂದರೆ ಸ್ವಕಾರಣದಲ್ಲಿ ಕಾರ್ಯವಿಲೀನವಾಗುವ ಪರಂಪರೆ.

ಭಾಷ್ಯ: *ತಸ್ಯಾಃ ಪ್ರಕೃತೇಃ ಕಾರ್ಯಾದ್ ವೈಧರ್ಮ್ಯಂ ವಿವೇಕಾರ್ಥಮಾಹ ।*

ಅನುವಾದ: ಆ ಪ್ರಕೃತಿಯ ಕಾರ್ಯದ ಭಿನ್ನತೆಯನ್ನು ತಿಳಿಯುವುದನ್ನು ಹೇಳಿದೆ.

ಸೂತ್ರ: ಅವ್ಯಕ್ತಂ ತ್ರಿಗುಣಾಲ್ಲಿಂಗಾತ್ ॥ ೧೩೬ ॥

ಸೂತ್ರಾನುವಾದ: ತ್ರಿಗುಣಾತ್ಮಕ ಲಿಂಗ (ರೂಪದ ಮಹತ್ತಿನಿಂದ) ಅವ್ಯಕ್ತ (ಪ್ರಕೃತಿ)ದ ಅನುಮಾನ ಮಾಡಬಹುದು.

ಭಾಷ್ಯ: *ಅಭಿವ್ಯಕ್ತಾತ್ ತ್ರಿಗುಣಾತ್ ಮಹತ್ತತ್ತ್ವಾದಿಪಿ ಮೂಲಕಾರಣಂ ಅವ್ಯಕ್ತಂ ಸೂಕ್ಷ್ಮಮ್ । ಮಹತ್ತತ್ತ್ವಸ್ಯ ಹಿ ಸುಖಾದಿಗುರ್ಣಾಃ ಸಾಕ್ಷಾತ್ ಕ್ರಿಯತೇ, ಪ್ರಕೃತೇಶ್ಚ ಗುಣೋಽಪಿ ನ ಸಾಕ್ಷಾತ್ಕ್ರಿಯತೇ ಇತಿ ಪ್ರಧಾನಂ ಪರಮವ್ಯಕ್ತಮ್ ।*

ಅನುವಾದ: ಅಭಿವ್ಯಕ್ತವಾದ ತ್ರಿಗುಣಾತ್ಮಕ ಮಹತ್ತತ್ತ್ವಕ್ಕಿಂತಲೂ ಮೂಲಕಾರಣವಾದ ಅವ್ಯಕ್ತವು ಸೂಕ್ಷ್ಮವಾದುದು. ಮಹತ್ತತ್ವದ ಸುಖಾದಿ ಗುಣಗಳು ಪ್ರತ್ಯಕ್ಷವಾಗಿ ಗೋಚರವಾಗುತ್ತದೆ. ಆದರೆ ಪ್ರಕೃತಿಯ ಗುಣವು ಪ್ರತ್ಯಕ್ಷವಾಗಿ ಗೋಚರವಾಗದು. ಆದ್ದರಿಂದ ಪ್ರಕೃತಿಯು ಪರಮಾವ್ಯಕ್ತವಾದುದು. ಮಹತ್ತತ್ವವು ಅದಕ್ಕಿಂತ ವ್ಯಕ್ತವಾದುದು.

ವಿವರಣೆ: ಪ್ರಕೃತಿಯು ಪರಮಾವ್ಯಕ್ತವಾದುದು. ಆದರೆ ಮಹತ್ತತ್ತ್ವ ವ್ಯಕ್ತವಾದುದು. ಮಹತ್ತತ್ವದಿಂದ ಅವ್ಯಕ್ತವಾದ ಪ್ರಕೃತಿಯನ್ನು ಅನುಮಾನ ಮಾಡಬಹುದು.

ಭಾಷ್ಯ: *ನನು ಪರಮಸೂಕ್ಷ್ಮಂ ಚೇತ್ ತರ್ಹಿ ತಸ್ಯಾಪಲಾಪ ಏವ ಉಚಿತ ಇತ್ಯಾಕಾಂಕ್ಷಾಯಾಂ ಪೂರ್ವೋಕ್ತಂ ಸ್ಮಾರಯತಿ ।*

ಅನುವಾದ: ಪ್ರಕೃತಿಯು ಅತ್ಯಂತ ಸೂಕ್ಷ್ಮವಾದರೆ ಅದನ್ನು ತಿರಸ್ಕರಿಸುವುದು ಉಚಿತವಲ್ಲವೇ?

ಸೂತ್ರ: ತತ್ಕಾರ್ಯತಸ್ತತ್ಸಿದ್ಧೇರ್ನಾಪಲಾಪಃ ॥ ೧೩೭ ॥

ಸೂತ್ರಾನುವಾದ: ಅದರ ಕಾರ್ಯಗಳಿಂದ ಅದನ್ನು ಸಿದ್ಧ ಮಾಡಿರುವುದರಿಂದ ಅದನ್ನು ತಿರಸ್ಕರಿಸಲಾಗದು.

ಭಾಷ್ಯ: *ಸುಗಮಮ್ ।*
ಪ್ರಕೃತ್ಯಾನುಮಾನಗತಾ ವಿಶೇಷಾ ವಿಸ್ತರತೋ ವಿಚಾರಿತಾಃ । ಇತಃ ಪರಂ ಅಧ್ಯಾಯಸಮಾಪ್ತಿಪರ್ಯಂತಂ ಪುರುಷಾನು– ಮಾನತಾ ವಿಶೇಷಾ ವಿಚಾರ್ಯಾಃ । ತತ್ರ ಕಂಚನಾದೌ ವಿಶೇಷಮಾಹ ।

ಪ್ರಕೃತಿಯನ್ನು ಅನುಮಾನದಿಂದ ತಿಳಿಯಬಹುದು ಎಂಬ ವಿಶೇಷ ವಿಷಯಗಳನ್ನು ವಿಸ್ತಾರವಾಗಿ ಹೇಳಿದ್ದಾಯಿತು. ಇನ್ನು ಮುಂದೆ ಅಧ್ಯಾಯ ಸಮಾಪ್ತಿಯಾಗುವವರೆಗೆ ಪುರುಷನು ಅನುಮಾನಕ್ಕೆ ಸಂಬಂಧಪಟ್ಟಂತೆ ವಿಶೇಷಗಳನ್ನು ವಿಚಾರ ಮಾಡಬೇಕು. ಈಗ ಅವುಗಳಲ್ಲಿ ಒಂದು ವಿಶೇಷವನ್ನು ಹೇಳಿದೆ–

ಸೂತ್ರ: ಸಾಮಾನ್ಯೇನ ವಿವಾದಾಭಾವಾದ್ಧರ್ಮವತ್ ನ ಸಾಧನಮ್ ॥ ೧೩೮ ॥

ಅನುವಾದ: ಸಾಮಾನ್ಯ ರೂಪದಿಂದ ವಿವಾದವಿಲ್ಲದ ಕಾರಣ ಧರ್ಮಕ್ಕೆ ಹೋಲುವ ವಿಶೇಷ ಸಾಧನದ ಅಗತ್ಯವಿಲ್ಲ.

ಭಾಷ್ಯ: *ಯತ್ರ ವಸ್ತುನಿ ಸಾಮಾನ್ಯತೋ ವಿವಾದೋ ನಾಸ್ತಿ ನ ತಸ್ಯ– ಸ್ವರೂಪತಃ ಸಾಧನಮಪೇಕ್ಷ್ಯತೇ, ಧರ್ಮಸ್ಯೇವೇತ್ಯರ್ಥಃ । ಅಪೇಕ್ಷಿತಂ, ಧರ್ಮಿಣ್ಯಪಿ ವಿವಾದಾತ್ । ನೈವಂ ಪುರುಷಸ್ಯ ಸಾಧನಮಪೇಕ್ಷಿತಮ್, ಚೇತನಾಪಲಾಪೇ ಜಗದಾಂಧ್ಯ ಪ್ರಸಂಗತಃ ಭೋಕ್ತರ್ಯಹಂಪದಾರ್ಥೇ ಸಾಮಾನ್ಯತೋ ಬೌದ್ಧಾನಾಂ ಅಪಿ ಅವಿವಾದಾತ್ ಧರ್ಮ ಏವ । ಧರ್ಮ ಏವ ಸಾಮಾನ್ಯತೋ ಬೌದ್ಧೈರಪಿ ಸ್ವೀಕ್ರಿಯತೇ ತಪ್ತಶಿಲಾರೋಹಣಾದಿಷು ಧರ್ಮತ್ವ ಅಭ್ಯುಗಮಾತ್ । ಅತಃ ಪುರುಷೇ ವಿವೇಕ ನಿತ್ಯತ್ವಾದಿ ಸಾಧನಾ– ಮಾತ್ರಂ ಅನುಮಾನಂ ಕಾರ್ಯಮಿತಿ ।*

ಅನುವಾದ: ಯಾವ ವಸ್ತುವಿನ ವಿಷಯದಲ್ಲಿ ಸಾಮಾನ್ಯವಾಗಿ ಯಾವುದೇ ವಿವಾದವಿಲ್ಲವೊ ಅದರ ಅಸ್ತಿತ್ವವನ್ನು ತಿಳಿಯಲು ಸ್ವರೂಪತಃ ಸಾಧಿಸಬೇಕಾದ ಅಗತ್ಯವಿರುವುದಿಲ್ಲ, ಅಗತ್ಯವಿರುವುದು ಆದರ ಧರ್ಮವನ್ನು ತಿಳಿಯುವುದರಲ್ಲಿ. ಅಭಿಪ್ರಾಯವೇನೆಂದರೆ, ಪ್ರಕೃತಿಗೆ ಹೇಗೆ ಸಾಧಾರಣವಾಗಿ ಸಾಧನದ ಅಗತ್ಯವಿದ್ದರೂ ವಿಶೇಷವಾಗಿ ಹಾಗೆ ಧರ್ಮದಲ್ಲಿ ವಿವಾದವಿರುತ್ತದೆ. ಆದರೆ ಹೀಗೆ ಪುರುಷನಿಗೂ ಸಾಧನೆಯ ಅಗತ್ಯವಿರುವುದಿಲ್ಲ. ಚೇತನವನ್ನು ತಿರಸ್ಕರಿಸಿದಲ್ಲಿ ಜಗತ್ತು ಅದನ್ನು ನೋಡಲಾಗದರಿಂದ ಭೋಕ್ತೃವಾದ ಅಹಂ ಪದಾರ್ಥವನ್ನು ಬೌದ್ಧರಲ್ಲೂ ವಿವಾದವಿಲ್ಲದ ಕಾರಣ ಅದು ಧರ್ಮವೇ ಧರ್ಮವನ್ನು ಸಾಮಾನ್ಯವಾಗಿ ಬೌದ್ಧರು

ಸ್ವೀಕರಿಸುತ್ತಾರೆ. ಅವರೂ ಸಹ ಕಾದಕಲ್ಲಿನ ಮೇಲೆ ಏರುವುದು ಮೊದಲಾದವುಗಳಲ್ಲಿ ಧರ್ಮತ್ವವನ್ನು ಒಪ್ಪಿರುತ್ತಾರೆ. ಆದ್ದರಿಂದ ಪುರುಷನಲ್ಲಿ ವಿವೇಕ, ನಿತ್ಯತ್ವ ಮುಂತಾದ ಸಾಧನ ಮಾತ್ರವನ್ನು ಮಾಡಲು ಅನುಮಾನವನ್ನು ಮಾಡಬೇಕಾಗಿದೆ.

ಭಾಷ್ಯ: *ಸಂಹತಪರಾರ್ಥತ್ವಾತ್ ಪುರುಷಸ್ಯ । (೧.೬೬) ಇತ್ಯುಕ್ತ– ಸೂತ್ರೇಣಾಪಿ ವಿವೇಕಾನುಮಾನಮೇವ ಅಭಿಪ್ರೇತಂ, ನತು ತತ್ರ ಪುರುಷಸ್ಯ ಸರ್ವಥೈವಾಪ್ರತ್ಯಕ್ಷತ್ವಮಭಿಪ್ರೇತಮಿತಿ । ತತ್ರ ಚಾದೌ ವಿವೇಕಪ್ರತಿಜ್ಞಾ ಸೂತ್ರಮ್ ।*

ಅನುವಾದ: ಒಟ್ಟಿಗೆ ಸೇರಿದ್ದು (ಪ್ರಕೃತಿ) ಬೇರೆಯವರ ಸಲುವಾಗಿ ಇರುವುದರಿಂದ ಪುರುಷನ ಅಸ್ತಿತ್ವವನ್ನು ಒಪ್ಪಬೇಕು, ಆದರೆ ಈ ಸೂತ್ರದಿಂದ ಪುರುಷರು ಸರ್ವಥಾ ಅಪ್ರತ್ಯಕ್ಷನೆಂದು ಅಭಿಪ್ರಾಯ ಪಟ್ಟಿಲ್ಲ. ಅದರಲ್ಲೂ ಆರಂಭಕ್ಕೆ ವಿವೇಕದ ಪ್ರತಿಜ್ಞಾ ಸೂತ್ರವನ್ನು ನೀಡಲಾಗಿದೆ.

ಸೂತ್ರ: ಶರೀರಾದಿ ವ್ಯತಿರಿಕ್ತಃ ಪುಮಾನ್ ॥ ೧೩೯ ॥

ಸೂತ್ರಾನುವಾದ: ಶರೀರಾದಿಗಳಿಗಿಂತ ಭಿನ್ನವಾದುದು ಪುರುಷ.

ಭಾಷ್ಯ: ಶರೀರಾದಿಪ್ರಕೃತ್ಯಂತಂ ಯಚ್ಚತುರ್ವಿಂಶತಿ ತತ್ವಾತ್ಮಕಂ ವಸ್ತು ತತ್ತೋಽತಿರಿಕ್ತಃ ಪ್ರಮಾನ್ ಭೋಕ್ತೇತ್ಯರ್ಥಃ । ಭೋಕ್ತೃತ್ವಂ ಚ ದ್ರಷ್ಟೃತ್ವಮಿತಿ ।

ಅನುವಾದ: ಶರೀರದಿಂದ ಹಿಡಿದು ಪ್ರಕೃತಿಯವರೆಗೆ ಇಪ್ಪತ್ತನಾಲ್ಕು ಪದಾರ್ಥಗಳವರೆಗೆ ಇವೆ. ಅದನ್ನು ಮೀರಿ ಪುರುಷನು ಭೋಕ್ತೃವು ಎಂದರ್ಥ. ಭೋಕ್ತೃತ್ವವೆಂದರೆ ದ್ರಷ್ಟೃತ್ವ ಎಂದರ್ಥ.

ವಿವರಣೆ: 'ಭೋಕ್ತೃತ್ವ' ಪುರುಷನ ಪಾಲಿಗೆ ಕೇವಲ ಸಾಕ್ಷಿಯಂತೆ ನೋಡುತ್ತಿರುವುದು.

ಭಾಷ್ಯ: *ಅತ್ರ ಹೇತೂನಾಹ ಸೂತ್ರೈಃ ।*

ಸೂತ್ರ: ಸಂಹತಪರಾರ್ಥತ್ವಾತ್ ॥ ೧೪೦ ॥

ಅನುವಾದ: ಈ ವಿಷಯದಲ್ಲಿ ಸೂತ್ರಗಳ ಮೂಲಕ ಹೇಳಿದೆ –

ಸೂತ್ರಾನುವಾದ: ಒಟ್ಟಾಗಿರುವ ಪದಾರ್ಥಗಳು ಬೇರೆಯವರ ಸಲುವಾಗಿ ಇರಬೇಕಾಗಿರುವುದರಿಂದ (ಪುರುಷ ಸಿದ್ಧವಾದಂತೆ ಆಗುವುದು).

ವಿವರಣೆ: 'ಸಂಹತ' ಎಂದರೆ, 'ಒಟ್ಟಾಗಿರುವ', 'ಅವಯವಗಳಿಂದ ಕೂಡಿದ' ಎಂದರ್ಥ.

ಭಾಷ್ಯ: *ಯತಃ ಸರ್ವಂ ಸಂಹತಂ ಪ್ರಕೃತ್ಯಾದಿಕಂ ಪರಾರ್ಥಂ ಭವತಿ ಶಯ್ಯಾದಿವತ್ । ಅತಃ ಅಸಂಹತಃ ಸಂಹತದೇಹಾದಿಭ್ಯಃ ಪರಃ ಪುರುಷಃ ಸಿದ್ಧ್ಯತೀತಿ ಅರ್ಥಃ । ಅಯಂ ಚ ಹೇತುಃ ಸಂಹತಪರಾರ್ಥತ್ವಾತ್*

ಪುರುಷಸ್ಯ ಇತ್ಯತ್ರ (೧.೬೬) ವ್ಯಾಖ್ಯಾನಃ । ಉಕ್ತಸ್ಯಾಪಿ ಹೇತೋಃ ಪುನರುಪನ್ಯಾಸಃ ಹೇತುವರ್ಗಸಂಕಲನಾರ್ಥಃ ।

ಅನುವಾದ: ಎಲ್ಲವೂ ಒಟ್ಟಾಗಿ ಸೇರಿ ಪ್ರಕೃತ್ಯಾದಿ ವಸ್ತುಗಳು ಬೇರೆಯವರ ಸಲುವಾಗಿ ಇರುತ್ತವೆಯಾದ್ದರಿಂದ ಪುರುಷನ (ಅಸ್ತಿತ್ವವು) ಸಾಧಿಸಲ್ಪಟ್ಟಂತೆ, ಹಾಸಿಗೆಯಾದಿ (ಇತರರ ಸಲುವಾಗಿ) ಇರುವಂತೆ. ಆದ್ದರಿಂದ 'ಸಂಹತಃ', ಒಟ್ಟಿಗೆ ಸೇರಿ ರೂಪುಗೊಂಡ ದೇಹಾದಿಗಳಿಗಿಂತ ಬೇರೆಯಾದ ಪುರುಷನು ಸಿದ್ಧನಾಗುತ್ತಾನೆ. 'ಸಂಹತಪರಾರ್ಥತ್ವಾತ್ ಪುರುಷಸ್ಯ' (೧.೬೬), 'ಒಟ್ಟಿಗೆ ಸೇರಿಸಿದ ವಸ್ತುವು ಬೇರೆಯವರ ಪ್ರಯೋಜನಕ್ಕಾಗಿ, (ಈ ದೃಷ್ಟಿಯಿಂದ) ಪುರುಷನನ್ನು (ಅನುಮಾನದ ಮೂಲಕ) ಊಹಿಸಬಹುದು. ಎಂದು ವ್ಯಾಖ್ಯಾನ ನೀಡಲಾಗಿದೆ. ಈ ಕಾರಣವನ್ನು ಮೊದಲೇ ನೀಡಿ ಮತ್ತೆ ಹೇಳಿರುವುದು ಕಾರಣಗಳನ್ನೆಲ್ಲಾ ಕಲೆಹಾಕುವ ಉದ್ದೇಶದಿಂದ.

ಭಾಷ್ಯ: *ಕಿಂಚ; ಇನ್ನೂ ಏನೆಂದರೆ*

ಸೂತ್ರ: ತ್ರಿಗುಣಾದಿವಿಪರ್ಯಯಾತ್ ॥೧೪೧॥

ಸೂತ್ರಾನುವಾದ: ಅದರಲ್ಲಿ ತ್ರಿಗುಣಗಳೇ ಮೊದಲಾದುವು ಇರುವುದಿಲ್ಲ. (ಪುರುಷನು ಅವುಗಳಿಗಿಂತ ಭಿನ್ನ)

ಭಾಷ್ಯ: *ಸುಖ–ದುಃಖಮೋಹಾತ್ಮಕಾದಿ ವೈಪರೀತ್ಯಾದಿತ್ಯರ್ಥ ಃ । ಶರೀರಾದೀನಾಂ ಹಿ ಯಃ ಸುಖಾದ್ಯಾತ್ಮಕಂ ಧರ್ಮಃ ಸ ಸುಖಾದಿ ಭೋಕ್ತರಿ ನ ಸಂಭವತಿ, ಸ್ವಯಂ ಸುಖಾದಿಗ್ರಹಣೇ ಕರ್ಮಕರ್ತೃ ವಿರೋಧಾತ್, ಧರ್ಮಿಪುರಸ್ಕಾರೇಣೈವ ಸುಖಾದ್ಯನುಭವತಿ ।*

ಅನುವಾದ: 'ಸುಖ–ದುಃಖ–ಮೋಹ ಮೊದಲಾದುವುಗಳ ಅಭಾವದಿಂದ' ಎಂದರ್ಥ. ಶರೀರಾದಿಗಳಿಂದ ಸುಖ–ದುಃಖ ಮೊದಲಾದವುಗಳ ಧರ್ಮವನ್ನು ಕಾಣಬಹುದು. ಆದರೆ ಸುಖಾದಿಗಳನ್ನು ಅನುಭವಿಸುವ ಭೋಕ್ತೃವು ದೊರೆಯುವುದಿಲ್ಲ. ತಾನೇ ಸುಖಾದಿಗಳನ್ನು ಅನುಭವಿಸುವುದು ಎಂದುಕೊಂಡರೆ ಕರ್ತೃ–ಕರ್ಮಗಳ ವಿರೋಧವುಂಟಾಗುವುದು, (ಸುಖಾದಿ) ಧರ್ಮಗಳ ಅನುಭವ ಧರ್ಮಿಯ ಮುಖಾಂತರವೇ ಸಾಧ್ಯ.

ವಿವರಣೆ: **'ಕರ್ಮಕರ್ತೃ ವಿರೋಧಾತ್'**, ಎಂದರೆ ಯಾವುದು ಕರ್ಮವೋ ಅದೇ ಕರ್ತೃವೂ ಆಗುವುದು ಅಸಂಭವ; ಎಂದರೆ ಸುಖ–ದುಃಖಾದಿಗಳು ತಾವೇ ಅವುಗಳನ್ನು ಅನುಭವಿಸುವುದು ಎಂದರೆ ಕರ್ತೃಕರ್ಮಗಳಿಗೆ ವಿರೋಧವುಂಟಾಗುವುದು.

ಭಾಷ್ಯ: *ನನು ಬುದ್ಧಿವೃತ್ತಿಪ್ರತಿಬಿಂಬಿತಂ ಸ್ವಸುಖಾದಿಕಂ ಪುರುಷೇಣ ಗೃಹ್ಯತಾಂ ಸ್ವವದಿತಿ ।*

ಅನುವಾದ: ಬುದ್ಧಿ ವೃತ್ತಿಯಲ್ಲಿ ಪ್ರತಿಬಿಂಬತವಾದ ತನ್ನ ಸುಖಾದಿಗಳನ್ನು ಪುರುಷನೇ ಗ್ರಹಿಸುವನು ಎಂದೇಕೆ ಹೇಳಬಾರದು.

ಭಾಷ್ಯ: *ಇತಿ ಚೇನ್ನ । ಏವಂ ಸತಿ ಬುದ್ಧೇರೇವ ಸುಖಾದಿಕಲ್ಪನೌಚಿತ್ಯಾತ್ । ಪುರುಷಗತ ಸುಖಾದೇರ್ಬುದ್ಧೇ ಪ್ರತಿಬಿಂಬ ಕಲ್ಪನೇ ಗೌರವಾತ್ । ಅಹಂ ಸುಖೀ, ದುಃಖೀ, ಮೂಢಃ ಇತ್ಯಾದಿ ಪ್ರತ್ಯಯಾಸ್ತು ನ ಪುರುಷೇ ಸುಖಾದಿಸಾಧಕಾಃ, ತತ್ಸ್ವಾಮಿತ್ವೇನಾಪ್ಯುಪಪತ್ತೇಶ್ಚ । ಬುದ್ಧೇಃ ಸುಖಾದಿಮತ್ತ್ವೇನ ಅಪಿ ಉಪಪತ್ತೇಶ್ಚ । ಲೌಕಿಕ್ಯಾಂ ಅಹಂಬುದ್ಧಾವವಶ್ಯಂ ಬುದ್ಧಿರಪಿ ವಿಷಯೋ ಮಿಥ್ಯಾಜ್ಞಾನ ವಾಸನಾದಿರೂಪದೋಷಾನುವೃತ್ತೇಸ್ತತ್ಪ್ರತಿಬಿಂಬಕಲ್ಪನಾಯಾಂ ಚ ಗೌರವಾದಿತಿ ।*

ಅನುವಾದ: ಹಾಗಲ್ಲ. ಹಾಗಾದರೆ ಬುದ್ಧಿಯಲ್ಲಿಯೇ ಸುಖಾದಿಗಳನ್ನು ಕಲ್ಪಿಸುವುದು ಅತಿಶಯವಾಗುವುದು ಪುರುಷನಲ್ಲಿ ಸೇರಿದ ಸುಖಾದಿಗಳು ಧರ್ಮವನ್ನು ಬುದ್ಧಿಯಲ್ಲಿ ಪ್ರತಿಬಿಂಬ ಕಲ್ಪನೇ ಮಾಡುವುದು ಸರಿಯೇ? ನಾನು ಸುಖಿ, ನಾನು ದುಃಖಿ, ನಾನು ಮೂಢ ಮುಂತಾದ ಅನುಭವಗಳು ಪುರುಷನಲ್ಲಿ ಸಾಧಿಸುವುದು ಸಾಧ್ಯವಿಲ್ಲ, ಏಕೆಂದರೆ ಅದನ್ನು ತಮ್ಮ ಒಡೆಯನೆಂದು ತಿಳಿಯುವುದು ಸಮಂಜಸವಾದುದು. ಬುದ್ಧಿಯು ಸುಖಾದಿಗಳನ್ನು ಹೊಂದಿರುವುದು ಎಂಬ ಭಾವನೆಯೂ ಸಮಂಜಸವಾದುದು. ಲೌಕಿಕವಾದ ಅಹಂ ಬುದ್ಧಿ ಬುದ್ಧಿಯೂ ವಿಷಯವಾಗಬಲ್ಲುದು. ಏಕೆಂದರೆ ಮಿಥ್ಯಾಜ್ಞಾನದ ವಾಸನಾ ಮುಂತಾದವುಗಳ ದೋಷಗಳು ಹಿಂಬಾಲಿಸಿ ಬರುತ್ತವೆ. ಆದ್ದರಿಂದ ಅದರ ಪ್ರತಿಬಿಂಬದ ಕಲ್ಪನೆಯು ಸಮಂಜಸವಾದುದೇ.

ಭಾಷ್ಯ: *ಆದಿಶಬ್ದೇನ ಚಾತ್ರ 'ತ್ರಿಗುಣಮವಿವೇಕಿ ವಿಷಯಃ' (೧.೧೧) ಇತಿ ಕಾರಿಕೋಕ್ತಾಽವಿವೇಕಿತ್ವಾದಯಃ ಗ್ರಾಹ್ಯಾಃ । ತಥಾ ರೂಪಾದಯಃ ಶರೀರಾದಿಧರ್ಮಾ ಗ್ರಾಹ್ಯಾಃ । ಕಿಂಚ –*

ಅನುವಾದ: ಆದಿ ಶಬ್ದದಿಂದ ಇಲ್ಲಿ 'ಮೂರು ಗುಣಗಳಿಂದ ಕೂಡಿದೆ ಮತ್ತು ಆಲೋಚನೆಯ ಶಕ್ತಿಯಿಲ್ಲದ್ದು' ಎಂಬ ಸಾಂಖ್ಯಕಾರಿಕೆಯ ಉಕ್ತಿಯಲ್ಲಿ ಅವಿವೇಕಿತ್ವ ಮುಂತಾದುವನ್ನು ಗ್ರಹಿಸಬೇಕು. ಹಾಗೆಯೇ ಶರೀರ ಧರ್ಮಗಳಾದ ರೂಪಾದಿಗಳನ್ನೂ ಗ್ರಹಿಸಬೇಕು. ಅದೂ ಅಲ್ಲದೆ –

ಸೂತ್ರ: ಅಧಿಷ್ಠಾನಾಚ್ಚೇತಿ ॥ ೧೪೨ ॥

ಸೂತ್ರಾನುವಾದ: ಮತ್ತು ಅಧಿಷ್ಠಾನದ ಎಂದರೆ (ಅಚೇತನದಲ್ಲಿ ಚೇತನದ ಅಧಿಷ್ಠಾನದಿಂದ ಪ್ರವೃತ್ತಿ) ಕಾರಣದಿಂದ (ಪುರುಷ ಬೇರೆ)

ಭಾಷ್ಯ: *ಭೋಕ್ತುಃ ಅಧಿಷ್ಠಾತೃತ್ವಾತ್ ಚ ಅಧಿಷ್ಠೇಯೇಭ್ಯಃ ಪ್ರಕೃತ್ಯಂತೇಭ್ಯಃ ಅತಿರಿಕ್ತತಾ ಇತ್ಯರ್ಥಃ । ಅಧಿಷ್ಠಾನಂ ಹಿ ಭೋಕ್ತುಃ ಸಂಯೋಗಃ । ಸ ಚ ಪ್ರಕೃತ್ಯಾದೀನಾಂ ಭೋಗ ಹೇತು ಪರಿಣಾಮೇಷು ಕಾರಣಮ್ । ಭೋಕ್ತುಃ ಅಧಿಷ್ಠಾನಾತ್ ಭೋಗಾಯತನನಿರ್ಮಾಣಮಿತಿ (೫.೧೫) ವಕ್ಷ್ಯಮಾಣ*

ಸೂತ್ರತ್ವಾತ್ । ಸಂಯೋಗಶ್ಚ ಭೇದೇ ಭವತೀತಿ ಭಾವಃ । ಇತಿ ಶಬ್ದೋ ಹೇತುಸಮಾಪ್ತೌ ।

ಅನುವಾದ: ಭೋಕ್ತೃವು ಅಧಿಷ್ಠಾನವಾಗಿರುವುದರಿಂದ ಅಧಿಷ್ಠೇಯಗಳಾದ ಪ್ರಕೃತ್ಯಂತ ವಸ್ತುಗಳು ಭಿನ್ನವಾಗಿರುತ್ತವೆ. ಭೋಕ್ತೃವಿನ ಸಂಯೋಗ ಅಧಿಷ್ಠಾನ. ಈ ಸಂಯೋಗವು ಪ್ರಕೃತ್ಯಾದಿಗಳಾದ ಅಚೇತನಗಳು ಭೋಗದ ಸಲುವಾಗಿ ಪರಿಣಾಮಗೊಳ್ಳುವುದದಕ್ಕೆ ಕಾರಣ. 'ಪುರುಷನ ಅಧಿಷ್ಠಾನದ ಕಾರಣದಿಂದಲೇ ಶರೀರದ ನಿರ್ಮಾಣವಾಗುವುದು (ಸಾಂ.ಸೂ. ೫.೧೧೪) ಎಂದು ಮುಂದೆ ಹೇಳಲಾಗಿದೆ. ಸಂಯೋಗ ಭಿನ್ನವಾಗಿರುವಾಗಲೇ ಆಗುವುದು ಎಂದು ಭಾವ. 'ಇತಿ' ಎಂಬ ಪದವು ಹೇತುಸಮಾಪ್ತಿಯನ್ನು ಸೂಚಿಸುವುದು.

ಭಾಷ್ಯ: *ಉಕ್ತಾನುಮಾನೇಽನುಕೂಲತರ್ಕಂ ಪ್ರದರ್ಶಯತಿ ಸೂತ್ರಾಭ್ಯಾಮ್ ।*

ಸೂತ್ರ: ಭೋಕ್ತೃಭಾವಾತ್ ॥ ೧೪೩ ॥

ಸೂತ್ರಾನುವಾದ: ಭೋಕ್ತೃವಾದ್ದರಿಂದ (ಭೋಗ್ಯ ಬೇರೆ ಇರಬೇಕು.)

ಭಾಷ್ಯ: *ಯದಿ ಹಿ ಶರೀರಾದಿ ಸ್ವರೂಪ ಏವ ಭೋಕ್ತಾ ಸ್ಯಾತ್ ತದಾ ಭೋಕ್ತೃತ್ವಮೇವ ವ್ಯಾಹನ್ಯೇತ, ಕರ್ಮಕರ್ತೃವಿರೋಧಾತ್ । ಸ್ವಸ್ಯ ಸಾಕ್ಷಾತ್ ಸ್ವಭೋಕ್ತೃತ್ವಾನುಪಪತ್ತೇಃ ಇತ್ಯರ್ಥಃ । ಅನುಪಪತ್ತಿಶ್ಚ ಪೂರ್ವಮೇವ (೧.೯೯ ಭಾಷ್ಯ) ವ್ಯಾಖ್ಯಾತಃ । ಅತ್ರ ಸೂತ್ರೇ ಪುರುಷಸ್ಯ ಭೋಗಃ ಸ್ವೀಕೃತಃ ಇತಿ ಸ್ಮರ್ತವ್ಯಮ್ । ಅಪರಿಣಾಮಿನಶ್ಚ ಪುರುಷಸ್ಯ ಭೋಗಾಃ ಚಿದವಸಾನೋ ಭೋಗಃ (೧.೧೦೪) ಇತ್ಯತ್ರ ವ್ಯಾಖ್ಯಾತಃ ।*

ಅನುವಾದ: ಒಂದು ವೇಳೆ ಶರೀರಾದಿ ಸ್ವರೂಪವೇ ಭೋಕ್ತೃವಾದರೆ ಆಗ ಭೋಕ್ತೃತ್ವವೇ ಹಾಳಾಗುವುದು, ಏಕೆಂದರೆ, ಕರ್ಮಕರ್ತೃಗಳು ಪರಸ್ಪರ ವಿರೋಧವಾಗುತ್ತವೆ. ತನ್ನನ್ನು ಸಾಕ್ಷಾತ್ತಾಗಿ ತಾನೇ ಭೋಗಿಸುವುದು ಸಂಭವಿಸುವುದಿಲ್ಲ. ಈ ಅಸಂಭವತೆ ಯನ್ನು ಮೊದಲೇ (೧.೯೯ರ ಭಾಷ್ಯದಲ್ಲಿ) ವ್ಯಾಖ್ಯಾನ ಮಾಡಲಾಗಿದೆ. ಈ ಸೂತ್ರದಲ್ಲಿ ಪುರುಷನೇ ಭೋಕ್ತೃ ಎಂದು ಸ್ವೀಕರಿಸಲಾಗಿದೆ ಎಂಬುದನ್ನು ನೆನೆಯಬೇಕು. ಪರಿಣಾಮವಿಲ್ಲದ ಪುರುಷನು ಭೋಗವು (ಚಿದವಸಾನೋ ಭೋಗಃ, ೧.೧೦೪) 'ಭೋಗಸಿದ್ಧಿಯನ್ನು ಕೇವಲ ಪುರುಷನವರೆಗೆ ಎಂಬಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಭಾಷ್ಯ: *ಕಿಂಚ– (ಅಲ್ಲದೆ,)*

ಸೂತ್ರ: ಕೈವಲ್ಯಾರ್ಥಂ ಪ್ರವೃತ್ತೇಶ್ಚ ॥ ೧೪೪ ॥

ಸೂತ್ರಾನುವಾದ: ಅಲ್ಲದೆ (ಪುರುಷನ) ಕೇವಲಭಾವಕ್ಕಾಗಿಯೇ (ಪ್ರಕೃತಿಯು) ಪ್ರವೃತ್ತವಾಗುತ್ತದೆ.

ವಿವರಣೆ: ಎಂದರೆ, ಪುರುಷನ ಅಸ್ತಿತ್ವವನ್ನು ಒಪ್ಪಬೇಕಾಗುವುದು.

ಭಾಷ್ಯ: *ಶರೀರಾದಿಕಮೇವ ಚೇದ್ ಭೋಕ್ತೃಸ್ಯಾತ್ ತದಾ ಭೋಕ್ತುಃ ಕೈವಲ್ಯಾರ್ಥ ದುಃಖಾತ್ಯಂತೋಚ್ಛೇದಾರ್ಥಂ ಕಸ್ಯಾಪಿ ಪ್ರಕೃತಿಃ ನೋಪಪದ್ಯೇತ । ಶರೀರಾದೀನಾಂ ವಿನಾಶಿತ್ವಾತ್ ಪ್ರಕೃತೇಶ್ಚ ಧರ್ಮಿಗ್ರಾಹಕಮಾನೇನ ದುಃಖಸ್ವಾಭಾವ್ಯಸಿದ್ಧ್ಯಾಕೈವಲ್ಯಾಸಂಭವಾತ್ । ನಹಿ ಸ್ವಭಾವಸ್ಯಾತ್ಯಂತೋಚ್ಛೇದೋ ಘಟತ ಇತ್ಯರ್ಥಃ । ಅತ್ರ ಕೈವಲ್ಯಾರ್ಥಂ ಪ್ರಕೃತೇರಿತಿ ಸೂತ್ರಪಾಠಃ ಪ್ರಾಮಾದಿಕತ್ವಾದುಪೇಕ್ಷಣೀಯಃ ।*

ಅನುವಾದ: ಶರೀರಾದಿಗಳೇ ಭೋಕ್ತೃಗಳಾಗಿದ್ದಲ್ಲಿ ಆಗ ಭೋಕ್ತೃವಿನ ಕೈವಲ್ಯಕ್ಕಾಗಿ ದುಃಖವನ್ನು ಪೂರ್ಣವಾಗಿ ಕಿತ್ತೊಗೆಯಲು ಯಾರಿಗೂ ಪ್ರವೃತ್ತಿಯೇ ಉಂಟಾಗದು. ಶರೀರಾದಿಗಳು ವಿನಾಶವಾಗುವುದರಿಂದ, ಪ್ರಕೃತಿಯು ಧರ್ಮಿಗ್ರಾಹಕ ಪ್ರಮಾಣ ದಿಂದ ಮತ್ತು ದುಃಖ ಸ್ವಭಾವದಾದ್ದರಿಂದ ಕೈವಲ್ಯವು ಅಸಾಧ್ಯವಾಗುವುದು. ಸ್ವಭಾವವನ್ನು ಸಂಪೂರ್ಣವಾಗಿ ತ್ಯಜಿಸುವುದೂ ಅಸಾಧ್ಯ. 'ಕೈವಲ್ಯಾರ್ಥ ಪ್ರಕೃತೇಃ' ಎಂಬ ಸೂತ್ರ ಪಾಠವನ್ನು ತಪ್ಪಾದುದರಿಂದ ಅದನ್ನು ಉಪೇಕ್ಷಿಸಬೇಕು.

ವಿವರಣೆ: 'ಧರ್ಮಿಗ್ರಾಹಕಮಾನೇನ, ಎಂದರೆ ಧರ್ಮವುಳ್ಳ ವಸ್ತುವೆಂಬ ಅನುಮಾನ ಪ್ರಮಾಣದಿಂದ ಎಂದರ್ಥ.

ಭಾಷ್ಯ: *ಸಂಘಾತಪರಾರ್ಥತ್ವಾತ್ ತ್ರಿಗುಣಾದಿ ವಿಪರ್ಯಯಾದಧಿಷ್ಠಾನಾತ್ ॥ ಪುರುಷೋಽಸ್ತಿ ಭೋಕ್ತೃಭಾವಾತ್ ಕೈವಲ್ಯಾರ್ಥಂ ಪ್ರವೃತ್ತೇಶ್ಚ ॥ ಸಾ.ಕಾ ೧೭ ಇತಿ ಕಾರಿಕಾತಃ ಕೈವಲ್ಯಾರ್ಥಂ ಪ್ರವೃತ್ತೇಶ್ಚೇತಿ ಪಾಠಾತ್, ಅರ್ಥಾಸಂಗತೇಶ್ಚೇತಿ ।*

ಅನುವಾದ: ಅವಯವಗಳು ಸೇರಿದ (ವಸ್ತುವು) ಇತರರ ಸಲುವಾಗಿ ಇರಬೇಕಾದುರಿಂದ, ತ್ರಿಗುಣಗಳಿಗೆ ವಿರುದ್ಧವಾದ, ಅಧಿಷ್ಠಾನವಾದುದರಿಂದ, ಅನುಭವಿಸುವ ವಸ್ತುವಿರ ಬೇಕಾದುದರಿಂದ, 'ಕೈವಲ್ಯದ ಸಲುವಾಗಿ ಪ್ರವೃತ್ತಿಯಿಂದ (ಸಾಂಖ್ಯಕಾರಿಕಾಪಾಠ) ಎಂಬ ಪಾಠವಿರುವುದರಿಂದ, ಅರ್ಥವೂ ಕೂಡುವುದರಿಂದ, 'ಕೈವಲ್ಯಾರ್ಥಂ ಪ್ರವೃತ್ತೇಶ್ಚ' ಸರಿಯಾದ ಪಾಠವಾಗಿದೆ.

ಭಾಷ್ಯ: *ಚತುರ್ವಿಂಶತಿತ್ವಾತಿರಿಕತ್ತಯಾ ಪುರುಷಃ ಸಾಧಿತಃ, ಇದಾನೀಂ ಪುರುಷಗತೋ ವಿಶೇಷೋ ವಿವೇಕಸ್ಫುಟೀಕರಣಾಯ ಅನುಮೀಯತೇ ।*

ಸೂತ್ರ: ಜಡಪ್ರಕಾಶಾಯೋಗಾತ್ ಪ್ರಕಾಶಃ ॥ ೧೪೫ ॥

ಅನುವಾದ: ಇಪ್ಪತ್ತನಾಲ್ಕು ತತ್ತ್ವಗಳಿಗಿಂತ ಭಿನ್ನವೆಂದು ಪುರುಷನನ್ನು ಸಾಧಿಸಿದ್ದಾಯಿತು. ಈಗ ಪುರುಷಗತ ವಿಶೇಷದ ವಿವೇಕವನ್ನು ಸ್ಪಷ್ಟಗೊಳಿಸುವ ಸಲುವಾಗಿ ಅನುಮಾನ ಮಾಡಲಾಗಿದೆ.

ಸೂತ್ರ: ಜಡಪ್ರಕಾಶಾಯೋಗಾತ್ ಪ್ರಕಾಶಃ ॥೧೪೬॥

ಸೂತ್ರಾನುವಾದ: ಜಡ ವಸ್ತುವು ಪ್ರಕಾಶದೊಡನೆ ಸೇರದಿರುವುದರಿಂದ ಪ್ರಕಾಶವು (ಚೇತನದ ಲಕ್ಷಣವಾಗಿರಬೇಕು).

ಭಾಷ್ಯ: *ವೈಶೇಷಿಕಾ ಆಹುಃ – ಪ್ರಾಗಪ್ರಕಾಶರೂಪಸ್ಯ ಜಡಸ್ಯ ಆತ್ಮನಃ ಮನಃಸಂಯೋಗಾತ್ ಜ್ಞಾನಾಖ್ಯಃ ಪ್ರಕಾಶಃ ಜಾಯತೇ ಇತಿ।*

ಅನುವಾದ: ವೈಶೇಷಿಕರು ಹೇಳುವರು – 'ಮೊದಲು ಪ್ರಕಾಶ ರಹಿತವಾದ ಜಡವು ಆತ್ಮನು ಮನಸ್ಸಿನೊಡನೆ ಸೇರಿದಾಗ ಜ್ಞಾನವೆಂಬ ಬೆಳಕು ಉಂಟಾಗುತ್ತದೆ'.

ಭಾಷ್ಯ: *ತನ್ನ । ಲೋಕೇ ಜಡಸ್ಯ ಅಪ್ರಕಾಶಸ್ಯ – ಲೋಷ್ಠಾದೇಃ ಪ್ರಕಾಶೋತ್ಪತ್ತ್ಯದರ್ಶನೇನ ತದಯೋಗಾತ್ । ಅತಃ ಸೂರ್ಯಾದಿ ವತ್ ಪ್ರಕಾಶಸ್ವರೂಪ ಏವ ಪುರುಷಃ ಇತ್ಯರ್ಥಃ ।*

ಅನುವಾದ: ಅದು ಸರಿಯಲ್ಲ; ಲೋಕದಲ್ಲಿ ಅಪ್ರಕಾಶ ರೂಪವಾದ ಮಣ್ಣು ಹೆಂಟೆ ಮುಂತಾದುವುಗಳಲ್ಲಿ ಪ್ರಕಾಶದ ಉತ್ಪತ್ತಿಯು ಕಾಣದಿರುವುದರಿಂದ. ಆದ್ದರಿಂದ ಸೂರ್ಯಾದಿಗಳಂತೆ ಪ್ರಕಾಶ ಸ್ವರೂಪವಾದುದೇ 'ಪುರುಷ' ಎಂದರ್ಥ.

ಭಾಷ್ಯ: *ತಥಾ ಚ ಸ್ಮೃತಿಃ ।*

ಯಥಾ ಪ್ರಕಾಶತಮಸೋಃ ಸಂಬಂಧೋ ನೋಪಪದ್ಯತೇ ।
ತದ್ವದೈಕ್ಯಂ ನ ಸಂಬದ್ಧಂ ಪ್ರಪಂಚ ಪರಮಾತ್ಮನೋಃ ॥ಇತಿ॥

(ಕೂ.ಪು. ೨.೨.೧೦)

ಅನುವಾದ: ಹೇಗೆ ಪ್ರಕಾಶ ಮತ್ತು ತಮಸ್ಸುಗಳ ಸಂಬಂಧ ಎಂದೂ ಉಂಟಾಗುವುದಿಲ್ಲವೋ ಹಾಗೆಯೇ ಪ್ರಪಂಚ ಮತ್ತು ಪರಮಾತ್ಮನ ನಡುವೆ ಸಂಬಂಧ ಸಂಭವಿಸದು.

ಭಾಷ್ಯ: *ಯಥಾ ದೀಪಃ ಪ್ರಕಾಶಾತ್ಮಾ ಹ್ರಸ್ವೋ ವಾ ಯದಿ ವಾ ಮಹಾನ್ ।*
ಜ್ಞಾನಾತ್ಮಾನಂ ತಥಾ ವಿದ್ಯಾತ್ ಪುರುಷಂ ಸರ್ವಜಂತುಷು ॥

(ಕೂ.ಪು. ೨.೨.೧೧)

ಪ್ರಕಾಶತ್ವಂ ಚ ತೇಜಃ ಸತ್ತ್ವಚೈತನ್ಯೇಷು ಅನುಗತಂ ಅಖಂಡೋಪಾಧಿಃ ಅನುಗತವ್ಯವಹಾರಾದಿತಿ ॥

ಅನುವಾದ: ದೀಪವು ಚಿಕ್ಕದಾದರೂ ದೊಡ್ಡದಾದರೂ ಅದು ಹೇಗೆ ಸ್ವಯಂ ಪ್ರಕಾಶವೋ ಹಾಗೆಯೇ ಜ್ಞಾನರೂಪನಾದ ಪುರುಷನನ್ನು ಎಲ್ಲ ಪ್ರಾಣಿಗಳಲ್ಲಿಯೂ ಇರುವವನೆಂದು ತಿಳಿಯಬೇಕು.

ತೇಜ–ಸ್ಸತ್ವದಿಂದ ಚೈತನ್ಯಗಳಲ್ಲಿ ಪ್ರಕಾಶತ್ವವಿರುವುದು ಮತ್ತು ಜೊತೆಯಲ್ಲಿರುವ ಅನಿರ್ವಚನೀಯವಾದ ಉಪಾಧಿಯು ಜೊತೆಯಲ್ಲಿರುವ ವ್ಯವಹಾರದಂತೆ ಇರುವುದು.

ಭಾಷ್ಯ: *ನನು ಪ್ರಕಾಶಸ್ವರೂಪತ್ವೇಽಪಿ ತೇಜೋವದ್ಧರ್ಮಧರ್ಮಿಭಾವೋಽಸ್ತಿ ನ ವಾ ತತ್ರಾಹ –*

ಅನುವಾದ: (ಪುರುಷನು) ಪ್ರಕಾಶಸ್ವರೂಪನಾದರೂ ತೇಜಸ್ಸಿನಂತೆ ಧರ್ಮಧರ್ಮಿಭಾವ ಉಂಟೆ ಇಲ್ಲವೆ? ಹೀಗೆ ಹೇಳಿದೆ.

ಸೂತ್ರ: ನಿರ್ಗುಣತ್ವಾನ್ನ ಚಿದ್ಧರ್ಮಾ ॥ ೧೪೬ ॥

ಸೂತ್ರಾನುವಾದ: (ಪುರುಷನು) ನಿರ್ಗುಣನಾದ್ದರಿಂದ ಚೈತನ್ಯವು ಅದರ ಧರ್ಮವಲ್ಲ (ಚಿತ್ತವು ಅದರ ಗುಣವಲ್ಲ. ಅದೇ ಚಿನ್ಮಾತ್ರ.)

ಭಾಷ್ಯ: *ಸುಗಮಮ್ । ಪುರುಷಸ್ಯ ಪ್ರಕಾಶರೂಪತ್ವೇ ಸಿದ್ಧೇ ತತ್ಸಂಬಂಧಮಾತ್ರೇಣ ಅನ್ಯವ್ಯವಹಾರೋಪಪತ್ತೌ ಪ್ರಕಾಶಾತ್ಮಕಧರ್ಮಕಲ್ಪನಾ ಗೌರವತ್ವ ಮಿತಿ ಬೋದ್ಧವ್ಯಮ್ । ತೇಜಸಶ್ಚ ಪ್ರಕಾಶಾಖ್ಯ ರೂಪವಿಶೇಷಾಗ್ರಹೇಽಪಿ ಸ್ಪರ್ಶ ಪುರಸ್ಕಾರೇಣ ಗ್ರಹಾತ್ ಪ್ರಕಾಶತೇಜಸೋರ್ಭೇದಃ ಸಿದ್ಧ್ಯತಿ । ಆತ್ಮನಸ್ತು ಜ್ಞಾನಾಖ್ಯಪ್ರಕಾಶಾಗ್ರಹಕಾಲೇ ಗ್ರಹಣಂ ನಾಸ್ತೀತ್ಯತೋ ಲಾಘವಾದ್ಧರ್ಮಧರ್ಮಿಭಾವಶೂನ್ಯಂ ಪ್ರಕಾಶರೂಪಮೇವ ಆತ್ಮದ್ರವ್ಯಂ ಕಲ್ಪ್ಯತೇ । ತಸ್ಯ ಚ ನ ಗುಣತ್ವ ಸಂಯೋಗಾದಿ–। ಮತ್ತ್ವಾತ್, ಅನಾಶ್ರಿತತ್ವಾತ್ ಚೇತಿ ।*

ಅನುವಾದ: ಸುಲಭವಾಗಿಯೇ ಇದೆ. ಪುರುಷನು ಪ್ರಕಾಶರೂಪನೆಂದು ಸಿದ್ಧವಾಗಿರುವಾಗ ಅದರ ಸಂಬಂಧದಿಂದಲೇ ಇತರ ವ್ಯವಹಾರಗಳು ಉತ್ಪನ್ನವಾಗುವುವು ಮತ್ತು ಪ್ರಕಾಶಾತ್ಮಕ ಧರ್ಮದ ಕಲ್ಪನೆಯು ಅನಗತ್ಯ ಎಂದು ತಿಳಿಯಬೇಕು. ತೇಜಸ್ಸು ಪ್ರಕಾಶವೆಂಬ ರೂಪ ವಿಶೇಷವನ್ನು ಒಪ್ಪದಿದ್ದರೂ ಸ್ಪರ್ಶದ ಮುಖಾಂತರ ಅದನ್ನು ಗ್ರಹಿಸುವುದರಿಂದ ಪ್ರಕಾಶ ಮತ್ತು ತೇಜಸ್ಸುಗಳ ಭೇದ ತಿಳಿದು ಬರುವುದು. ಆದರೆ ಆತ್ಮನ ಜ್ಞಾನವೆಂಬ ಪ್ರಕಾಶವನ್ನು ಗ್ರಹಿಸದಿದ್ದಲ್ಲಿ ಅದರ ಗ್ರಹಣವೇ ಇರದು, ಸುಲಭವಾಗಿ ತಿಳಿಯಬೇಕಾದರೆ ಧರ್ಮಧರ್ಮಿ ಭಾವಶೂನ್ಯವಾದುದೇ ಆದ ಪ್ರಕಾಶರೂಪವಾದ ಆತ್ಮದ್ರವ್ಯವನ್ನು ತಿಳಿಯಬಹುದು. ಸಂಯೋಗಾದಿಗಳಿರು ವುದರಿಂದಲೂ ಆಶ್ರಯ ರಹಿತವಾಗಿರುವುದರಿಂದ ಅದಕ್ಕೆ ಪ್ರಕಾಶವು ಗುಣವಲ್ಲ.

ವಿವರಣೆ: ಪ್ರಕಾಶ ಸ್ವಪ್ರಕಾಶದ ಬೆಳಕಿಗೂ ತೇಜಸ್ಸಿನ (ಅಗ್ನಿ) ಬೆಳಕಿಗೂ ಭೇದವನ್ನು ಇಲ್ಲಿ ಹೇಳಿದೆ. ತೇಜಸ್ಸು ಪ್ರಕಾಶದಿಂದ ಒಮ್ಮೆ ಗೋಚರವಾಗದಿದ್ದರೂ ಸ್ಪರ್ಶದಿಂದ ಅದರ ಅರಿವಾಗುತ್ತದೆ. ಆದರೆ ಆತ್ಮ ಸ್ವಯಂಪ್ರಕಾಶನಾದ್ದರಿಂದ ಪ್ರಕಾಶ ಅದರ ಗುಣವಲ್ಲ.

ಭಾಷ್ಯ: *ತಥಾ ಚ ಸ್ಮರ್ಯ್ಯತೇ । (ಹಾಗೆಯೇ ಸ್ಮೃತಿಯ ವಾಕ್ಯವುಂಟು)*
ಜ್ಞಾನಂ ನೈವಾತ್ಮನೋ ಧರ್ಮೋನ ಗುಣೋ ವಾ ಕಥಂಚನ ।
ಜ್ಞಾನಸ್ವರೂಪ ಏನಾತ್ಮಾ ನಿತ್ಯಃ ಪೂರ್ಣಃ ಸದಾ ಶಿವಃ ॥ ಇತಿ
ಸೌ.ಪು. ॥೨೬॥

ಅನುವಾದ: ಹಾಗೆಯೇ ಸ್ಮೃತಿಯ ವಾಕ್ಯವುಂಟು ಜ್ಞಾನವು ಆತ್ಮನ ಧರ್ಮವಲ್ಲ. ಅದರ ಗುಣವೂ ಅಲ್ಲ. ಆತ್ಮವು ಜ್ಞಾನಸ್ವರೂಪವೇ. ಅದು ನಿತ್ಯ, ಪೂರ್ಣ ಮತ್ತು ಯಾವಾಗಲೂ ಮಂಗಳಕರ.

ಭಾಷ್ಯ: *ನನು ನಿರ್ಗುಣತ್ವೇ ಏವ ಕಾ ಯುಕ್ತಿರಿತಿ ಚೇತ್ ।*

ಅನುವಾದ: ಆತ್ಮನು ನಿರ್ಗುಣ ಎನ್ನಲು ಯುಕ್ತಿ ಏನು?

ಭಾಷ್ಯ: *ಉಚ್ಯತೇ । ಪುರುಷಸ್ಯೇಚ್ಛಾದ್ಯಾಸ್ತಾವನ್ನಿತ್ಯಾ ನ ಸಂಭವಂತಿ, ಜನ್ಯತಾಪ್ರತ್ಯಾಕ್ಷತ್ವಾತ್ । ಜನ್ಯಗುಣಾಂಗೀತಾರೇ ಪರಿಣಾಮಿತ್ವಾಪತ್ತಿಃ । ತಥಾ ಚ ಉಭಯೋರೇವ ಪ್ರಕೃತಿ ಪುರುಷಯೋಃ ಪರಿಣಾಮಹೇತುತ್ವಕಲ್ಪನೇ ಗೌರವಮ್ । ಆಂಧ್ಯಪರಿಣಾಮೇನ ಕದಾಚಿತಜ್ಞತ್ವಸ್ಯಾಪತ್ತ್ಯಾ ಜ್ಞಾನೇಚ್ಛಾದಿಗೋಚರಸಂಶಯಾಪತ್ತಿಶ್ಚ । ತಥಾ ಜಡಪ್ರಕಾಶಾಯೋಗಸ್ಯ ಉಕ್ತತ್ವಾದಪಿ ನ ನಿತ್ಯಸ್ಯಾನಿತ್ಯಜ್ಞಾನ ಸಂಭವ ಇತಿ। ಇಚ್ಛಾದಿಕಮನ್ವಯವ್ಯತಿರೇಕಾಖ್ಯಾಂ ಮನಸ್ಯೇವ ಲಾಘವಾತ್ ಸಿದ್ಧ್ಯತಿ । ಮನಃ ಸಂಯೋಗಸ್ಯ ಆತ್ಮನಶ್ಚ ಉಭಯೋಃ ತದ್ಧೇತುತ್ವೇ ಗೌರವಾತ್ । ಗುಣಶಬ್ದಶ್ಚ ವಿಶೇಷಗುಣವಾಚೀ ಇತ್ಯುಕ್ತಮೇವ । ಅತ ಆತ್ಮಾ ನಿರ್ಗುಣಃ।*

ಅನುವಾದ: ಪುರುಷನ ಇಚ್ಛಾದಿಗುಣಗಳನ್ನು ನಿತ್ಯ ಎನ್ನಲಾಗದು ಏಕೆಂದರೆ ಆ ಗುಣಗಳು ಹುಟ್ಟುವುವು ಎಂಬುದು ಎಲ್ಲರಿಗೂ ಪ್ರತ್ಯಕ್ಷವಾದುದೇ. ಅವು ಜನ್ಯ ಎಂದರೆ ಅವು ಪರಿಣಾಮಿಗಳೆಂಬುದು ಒಪ್ಪಬೇಕು. ಹಾಗೆ ಪ್ರಕೃತಿ–ಪುರುಷ ಎರಡರಲ್ಲೂ ಪರಿಣಾಮದ ಕಲ್ಪನೆ ಮಾಡುವುದೂ ಅನಗತ್ಯ. ಕುರುಡು ಪರಿಣಾಮದಿಂದ ಒಮ್ಮೆ ಅಜ್ಞತ್ವ ಉಂಟಾಗುವುದರಿಂದ ಪುರುಷನ ಜ್ಞಾನ ಇಚ್ಛೆ ಮುಂತಾದ ವಿಷಯಗಳಲ್ಲಿ ಸಂದೇಹವುಂಟಾಗುವುದು. ಹಾಗೆಯೇ ಜಡ ಮತ್ತು ಪ್ರಕಾಶಗಳು ಸೇರದೆ ಇರುವುದನ್ನು ಹೇಳಿದ್ದರೂ ನಿತ್ಯವಾದ ಪುರುಷನಿಗೆ ಅನಿತ್ಯವಾದ ಜ್ಞಾನವುಂಟಾಗುವುದು ಅಸಂಭವ. ಇಚ್ಛಾದಿಗಳು ಅನ್ವಯ–ವ್ಯತಿರೇಕಗಳ ಪ್ರಯೋಗದಿಂದ ಮನಸ್ಸಿನದೆಂದೇ ಸುಲಭವಾಗಿ ಸಿದ್ಧವಾಗುವುದು. ಹೀಗೆ ಇರುವಾಗ ಮನಸ್ಸಿನ ಸಂಯೋಗ ಮತ್ತು ಆತ್ಮ ಇವೆರಡೂ ಇದಕ್ಕೆ ಕಾರಣ ಎಂದು ಹೇಳುವುದು (ಅಧಿಕವಾಗುವುದು) ಸಂದರ್ಭಕ್ಕೆ ಮೀರಿದ್ದು. ಗುಣ ಶಬ್ದವೂ ವಿಶೇಷ ಗುಣವನ್ನು ಹೇಳುತ್ತದೆ ಎಂದು ಮೊದಲೇ ಹೇಳಿದೆ ಆದ್ದರಿಂದ ಆತ್ಮನು ನಿರ್ಗುಣ.

ಭಾಷ್ಯ: *ಅಪಿ ಚ ಯೇ ತಾರ್ಕಿಕಾ ಆತ್ಮನಃ ಕರ್ತೃತ್ವಮಿಚ್ಛಂತಿ ತೇಷಾಂ ಮೋಕ್ಷಾನುಪಪತ್ತಿಃ, ಅಹಂ ಕರ್ತೇತಿ ಬುದ್ಧೇರೇವ ಗೀತಾದಿಷು ಅದೃಷ್ಟೋತ್ಪತ್ತಿ ಹೇತುತಯೋಕ್ತತ್ವಾತ್ । ತಸ್ಯ ಅದ್ಯ ತನ್ಮತೇ ಮಿಥ್ಯಾ ಜ್ಞಾನತ್ವಾಭಾವೇನ ತತ್ತ್ವಜ್ಞಾನನಿವರ್ತ್ಯತ್ವಾಸಂಭವಾತ್ । ಅತಃ ಶ್ರುತ್ಯುಕ್ತಮೋಕ್ಷಾನುಪಪತ್ತ್ಯಾತ್ಮನಃ ಅಕರ್ತೃತ್ವಂ ಅಸ್ಮಾಭಿಃ ಇಷ್ಯತೇ । ಅಕರ್ತೃತ್ವಾಚ್ಚಾ ದೃಷ್ಟಸುಖಾದ್ಯಭಾವಃ । ತತಶ್ಚ ಮನಸಃ ಕೃತ್ಯಾದಿ ಹೇತುತ್ವೇ ಕಲ್ಪನೀಯೇ ಲಾಘವಾತ್ ಅಂತರ್ದೃಶ್ಯಗುಣತ್ವಾವಚ್ಛೇದೇನೈತತ್ ಕಲ್ಪ್ಯತೇ । ಅತ ಆತ್ಮಾ ನಿರ್ಗುಣ ಇತಿ । ಯಥೋಕ್ತಸ್ಯ ಪರಮಸೂಕ್ಷ್ಮಸ್ಯಾತ್ಮನಃ ಸ್ವರೂಪಂ ವಾಶಿಷ್ಠೇ ಕರಾಮಲಕವತ್ ಪ್ರೋಕ್ತಂ ವಿವಿಚ್ಯ ಪ್ರತಿಪಾದಿತಮ್ ।*

ಅನುವಾದ: ಅಲ್ಲದೆ ಯಾವ ತಾರ್ಕಿಕರು ಆತ್ಮನು ಕರ್ತೃವೆಂದು ಅಭಿಪ್ರಾಯ ಪಡುವರೋ ಅವರ ದೃಷ್ಟಿಯಲ್ಲಿ ಮೋಕ್ಷದ ಉಪಪತ್ತಿ ಸಾಧ್ಯವಾಗದು. 'ನಾನು ಕರ್ತೃ' ಎಂಬುದು ಬುದ್ಧಿಗೇ ಸಂಬಂಧಿಸಿದುದು; ಈ ಮಾತು ಗೀತಾದಿಗಳಲ್ಲಿ ಅದೃಷ್ಟೋತ್ಪತ್ತಿ ಹೇತುರೂಪದಲ್ಲಿ ಹೇಳಲ್ಪಟ್ಟಿದೆ. ಈ ಬುದ್ಧಿಯು ತಾರ್ಕಿಕರ ಮತದಲ್ಲಿ ಮಿಥ್ಯಾಜ್ಞಾನದ ಅಭಾವದಿಂದ ಮತ್ತು ತತ್ತ್ವಜ್ಞಾನದಿಂದ ಹೋಗಲಾರದು. ಆದ್ದರಿಂದ ಶ್ರುತಿಯಲ್ಲಿ ಹೇಳಿದ ಮೋಕ್ಷದ ಅನುಪಪತ್ತಿಯಿಂದ ಆತ್ಮನು ಕರ್ತೃವಲ್ಲವೆಂದು ನಮ್ಮ ಅಭಿಪ್ರಾಯ. ಆತ್ಮನು ಅಕರ್ತೃವಾದ್ದರಿಂದ ಅವನಿಗೆ ಅದೃಷ್ಟವಾದ ಸುಖಾದಿಗಳು ಇರಲಾರವು. ಅಲ್ಲದೆ ಮನಸ್ಸೇ ಕೃತ್ಯಾದಿಗಳಲ್ಲಿ ಕಾರಣ ಎಂದು ಕಲ್ಪಿಸಲ್ಪಟ್ಟಾಗ ಅದನ್ನು ಸುಲಭವಾಗಿ ಒಳಗೆ ಕಾಣುವ ಗುಣತ್ವದ ಮಿತಿಯಲ್ಲಿ ಕಲ್ಪಿಸಲಾಗುವುದು. ಆದ್ದರಿಂದ ಆತ್ಮನು ನಿರ್ಗುಣನು. ಮೇಲೆ ಹೇಳಿದ ಆತ್ಮನು ಪರಮಸೂಕ್ಷ್ಮನು. ಆ ಆತ್ಮನ ಸ್ವರೂಪವನ್ನು ಯೋಗವಾಸಿಷ್ಠದಲ್ಲಿ ಅಂಗೈಯಲ್ಲಿನ ನೆಲ್ಲಿಕಾಯಿಯಂತೆ ವಿವೇಚನೆಯ ಮೂಲಕ ತಿಳಿಸಲಾಗಿದೆ.

ವಿವರಣೆ: ಅದೃಷ್ಟೋತ್ಪತ್ತಿ ಎಂದರೆ ಪುಣ್ಯ-ಪಾಪಗಳ ಉತ್ಪತ್ತಿ 'ನಾನು ಕರ್ತೃ' ಎಂಬ ಮಾತನ್ನು ಗೀತೆಯಲ್ಲಿ 'ಕರ್ತಾಹಂ ಇತಿ ಮನ್ಯತೇ । ಗೀತೆ ೩.೨೭' ಎಂದು ಕಾಣಬಹುದು.

ಭಾಷ್ಯ: *ಯಥಾ – ಹೇಗೆಂದರೆ,*

ಅಸಂಭವತಿ ಸರ್ವತ್ರ ದಿಗ್ಭೂಮ್ಯಾಕಾಶರೂಪಿಣಿ ।
ಪ್ರಕಾಶ್ಯೇ ಯಾ ದೃಶಂ ರೂಪಂ ಪ್ರಕಾಶಸ್ಯಾಮಾಲಂ ಭವೇತ್ ॥
ತ್ರಿಜಗತ್ ತ್ವ ಮಹಂ ಚೇತಿ ದೃಶ್ಯೇ ಸತ್ತಾ ಮುಪಾಗತೇ ।
ದ್ರಷ್ಟುಃ ಸ್ಯಾತ್ ಕೇವಲೀಭಾವಃ ತಾದೃಶೋ ವಿಮಲಾತ್ಮನಃ ॥

(ಯೋ.ವಾ. ೩.೪. ೫೫೦೫೬)

ಅನುವಾದ: ದಿಕ್ಕು, ಭೂಮಿ, ಆಕಾಶ ಇವುಗಳನ್ನು ಎಲ್ಲೆಡೆಯಲ್ಲಿಯೂ ಬೆಳಗಬೇಕಾದ ಸಂಭವವಿಲ್ಲದಿದ್ದಲ್ಲಿ ಪ್ರಕಾಶದ ಸ್ವರೂಪವು ಹೇಗೆ ನಿರ್ಮಲವಾಗಿರುವುದೋ ಹಾಗೆಯೇ ಈ ಮೂರು ಜಗತ್ತುಗಳು, ನೀನು, ನಾನು ಮತ್ತು ದೃಶ್ಯಗಳು ಇಲ್ಲದಿರುವಾಗ ನಿರ್ಮಲ ಸ್ವರೂಪವಿರುವ ಚೇತನಕ್ಕೆ (ದ್ರಷ್ಟ್ರವಿಗೆ) ಅಂತಹ ಕೇವಲೀಭಾವವುಂಟಾಗುವುದು.

ಭಾಷ್ಯ: *ನನ್ವಹಂ ಜಾನಾಮೀತಿ ಧರ್ಮಧರ್ಮಿಭಾವಾನುಭವಾತ್ ಪುರುಷಸ್ಯ ಚಿದ್ಧರ್ಮಕತ್ವಂ ಸಿಧ್ಯತಿ । ಗೌರವಸ್ಯ ಪ್ರಾಮಾಣಿಕತ್ವೇನ ಅದೋಷತ್ವಾದಿತಿ । ತತ್ರಾಹ –*

ಅನುವಾದ: 'ನಾನು ತಿಳಿಯುವೆ' ಎಂಬ ಮಾತಿನಲ್ಲಿ ಧರ್ಮ, ಧರ್ಮಿ ಭಾವಗಳ ಅನುಭವವಿರುವ ಕಾರಣ ಆಗ ಪುರುಷನಿಗೆ ಚಿತ್ತೆಂಬುದು ಧರ್ಮವೆಂದು ಸಿದ್ಧವಾಗುತ್ತದೆ. ಚಿದ್ಧರ್ಮವೆಂದು ಹೇಳುವುದು ಅಧಿಕವೆನಿಸಿದರೂ ಪ್ರಮಾಣಬದ್ಧ ವಾದ್ದರಿಂದ ಅದು ದೋಷವಲ್ಲ.

ಭಾಷ್ಯ: *ತತ್ರಾಹ–ಅದಕ್ಕೆ ಹೀಗೆ ಹೇಳಿದೆ –*

ಸೂತ್ರ: ಶ್ರುತ್ಯಾ ಸಿದ್ಧಸ್ಯ ನಾಪಲಾಪಸ್ತತ್ಪ್ರತ್ಯಕ್ಷಬಾಧಾತ್ ॥ ೧೪೭ ॥

ಸೂತ್ರಾನುವಾದ: ವೇದವಚನದಿಂದ ಸಿದ್ಧವಾದ ಪದಾರ್ಥದ ಉಪೇಕ್ಷೆಯು ಸರಿಯಲ್ಲ; ಇದು ಪ್ರತ್ಯಕ್ಷ (ವೇದವಚನವನ್ನು) ಅಲ್ಲಗಳೆದಂತಾಗುವುದು.

ಭಾಷ್ಯ: *ಭವೇದೇವಂ ಯದಿ ಕೇವಲತರ್ಕೇಣ ಅಸ್ಮಾಭಿರ್ನಿರ್ಗುಣತ್ವಾತ್ ಚಿದ್ಧರ್ಮತ್ವಾದಿಕಂ ಪ್ರಸಾಧ್ಯತೇ, ಕಿಂತು ಶ್ರುತ್ಯಾ । ಅತಃ ಶ್ರುತ್ಯಾ ಸಿದ್ಧಸ್ಯ ನಿರ್ಗುಣತ್ವಾದೇರ್ನಾಪಲಾಪಃ ಸಂಭವತಿ, ತತ್ಪ್ರತ್ಯಕ್ಷಸ್ಯ ಗುಣಾದಿಪ್ರತ್ಯಕ್ಷಸ್ಯ ಶ್ರುತ್ಯೈವ ಬಾಧಾತ್ । ಅಹಂ ಗೌರ ಇತ್ಯಾದಿ ಪ್ರತ್ಯಕ್ಷವದಿತ್ಯರ್ಥಃ । ಅನ್ಯಥಾ ಹಿ ಗೌರೋಹಮಿತಿ ಪ್ರತ್ಯಕ್ಷಬಲೇನ ದೇಹಾತಿರಿಕ್ತಾತ್ಮಸಾಧಿಕಾ ಅಪಿ ಯುಕ್ತಯೋ ಬಾಧಿಕಾಃ ಸ್ಯುರಿತಿ ಜಿತಂ ನಾಸ್ತಿಕೈಃ ।*

ಅನುವಾದ: ಕೇವಲ ತರ್ಕದಿಂದ ನಾವು ನಿರ್ಗುಣತ್ವವನ್ನಾಗಲಿ ಅದರಿಂದ ಚಿದ್ಧರ್ಮವನ್ನಾಗಲಿ ಹೇಳಿದರೆ ಹೀಗೆ ಸಂದೇಹಪಡಬಹುದು.; ಆದರೆ ಶ್ರುತಿಯೂ (ನಿರ್ಗುಣತ್ವವನ್ನು) ಹೇಳುತ್ತದೆ. ಹೀಗೆ ಶ್ರುತಿಯಿಂದ ಸಿದ್ಧವಾದ ನಿಗುರ್ಣತ್ವಾದಿಗಳನ್ನು ಉಪೇಕ್ಷಿಸುವುದು ಸರಿಯಲ್ಲ. 'ಪ್ರತ್ಯಕ್ಷಸ್ಯ' ಎಂದರೆ ಗುಣಾದಿಗಳ ಪ್ರತ್ಯಕ್ಷವು ಶ್ರುತಿಗಳಿಂದ ಅಲ್ಲಗಳೆಯಲ್ಪಟ್ಟಿದೆ. 'ನಾನು ಬೆಳ್ಳಗಿರುವೆ' ಎಂಬ ಪ್ರತ್ಯಕ್ಷದಂತೆ ಅವುಗಳನ್ನು ವೇದಗಳು ಅಲ್ಲಗಳೆದಿವೆ. ಹಾಗಿಲ್ಲದಿದ್ದಲ್ಲಿ 'ನಾನು ಬೆಳ್ಳಗಿದ್ದೇನೆ' ಎಂಬ ಪ್ರತ್ಯಕ್ಷ ಬಲದಿಂದ ದೇಹವನ್ನು ಮೀರಿದ ಆತ್ಮವನ್ನು ಸಾಧಿಸುವ ಎಲ್ಲ ಯುಕ್ತಿಗಳೂ ಬಾಧಿತವಾಗಿ ನಾಸ್ತಿಕರೇ ಗೆದ್ದಂತಾಗುವುದು.

ಭಾಷ್ಯ: *ನಿರ್ಗುಣತ್ವೇ ಚ ಶ್ರುತಯಃ – ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ (ಶ್ವೇ.ಉ. ೬.೧೧), ಇತ್ಯಾದ್ಯಾಃ । ಚಿನ್ಮಾತ್ರತ್ವೇ ತು ಶ್ರುತಯಃ 'ಅಕರ್ತಾ ಚೈತನ್ಯಂ ಚಿನ್ಮಾತ್ರಂ ಸಚ್ಚಿತ್ ಏಕರಸೋ ಹ್ಯಯಮಾತ್ಮಾ' (ವೇದಾಂತಸಾರ ೧೫೮) ಇತ್ಯಾದ್ಯಾ ಇತಿ ಸರ್ವಜ್ಞತ್ವಾದಿ– ಶ್ರುತಯಸ್ತು ರಾಹೋಃ ಶಿರ ಇತಿವತ್ ಲೌಕಿಕ ವಿಕಲ್ಪಾನುವಾದ–ಮಾತ್ರಾಃ । ವಿಧಿನಿಷೇಧಶ್ರುತಿಮಧ್ಯೇ ನಿಷೇಧಶ್ರುತೇರೇವ ಬಲವತ್ತ್ವಾತ್ – 'ಅಥಾತ ಆದೇಶೋ ನೇತಿ ನೇತಿ ನ ಹಿ ಏತಸ್ಮಾದಿತಿ ನೇತ್ಯನ್ಯತ್ ಪರಮಸ್ತಿ' ಇತಿ (ಬೃ.ಉ. ೩.೬) ಶ್ರುತೇಃ ।*

ಅನುವಾದ: (ಆತ್ಮನ) ನಿರ್ಗುಣತ್ವದ ಬಗ್ಗೆ ಶ್ರುತಿಗಳು (ಹೀಗೆ ಹೇಳುತ್ತವೆ) 'ಆತ್ಮನು ಸಾಕ್ಷಿ, ಚೇತನಸ್ವರೂಪ, ಶುದ್ಧ, ಗುಣರಹಿತನು' ಮುಂತಾದುವುಗಳು. ಚಿನ್ಮಾತ್ರವನ್ನು ಕುರಿತು ಶ್ರುತಿಗಳು – ಕರ್ತೃವಲ್ಲ, ಚೈತನ್ಯ ಸ್ವರೂಪನು, ಚಿನ್ಮಾತ್ರನು, ಸತ್ ಮತ್ತು ಚಿತ್ ಏಕರಸವಾಗಿರುವುದು, ಎಂದು ವರ್ಣಿಸಿವೆ. ಅದು ಸರ್ವಜ್ಞ ಎಂಬುದನ್ನು ಪ್ರತಿಪಾದಿಸುವ ಶ್ರುತಿಗಳು ರಾಹುವಿನ ಶಿರಸ್ಸಿನಂತೆ ಲೌಕಿಕ

ವ್ಯವಹಾರವನ್ನು ತಿಳಿಯ ಪಡಿಸುತ್ತವೆ. ವಿಧಿ ಮತ್ತು ನಿಷೇಧ ಶ್ರುತಿಗಳ ನಡುವೆ ನಿಷೇಧ ಶ್ರುತಿಯೇ ಪ್ರಬಲವಾದ್ದರಿಂದ 'ಈಗ ನೇತಿ ನೇತಿ ಎಂಬ ಆದೇಶವು ಗೋಚರವಾಗುವ ಜಗತ್ತಿಗಿಂತ ಬೇರೆಯದನ್ನು ಮತ್ತು ಅದನ್ನು ಮೀರಿರುವುದನ್ನು ಅಲ್ಲವೆ ಹೇಳಿರುವುದು?'

ಭಾಷ್ಯ: *ಕಿಂ ಚಾಜ್ಞಾನಾಮಹಂ ಜಾನಾಮೀತಿ ಪ್ರತ್ಯಯೇ ಪ್ರಮಾತ್ವಕಲ್ಪನಾ–ಯಾಮೇವ ಗೌರವಮ್ । ಅನಾದ್ಯವಿದ್ಯಾದೋಷಸ್ಯ ಅನು–ವರ್ತಮಾನತಯಾ ಭ್ರಮತ್ವಸ್ಯೈವೌತ್ಸರ್ಗಿಕತ್ವಾತ್ । ಅತೋ ಭ್ರಮಶತಾಂತಃಪಾತಿತ್ವೇನಾಪ್ರಾಮಾಣ್ಯಶಂಕಾಸ್ಕಂದಿತ–ತ್ವಾಚ್ಚೈ ತತ್ಪ್ರತ್ಯಕ್ಷಬಾಧನೇ ಲಾಘವತರ್ಕಾದ್ಯನುಗೃಹೀತ ಮನುಮಾನಮಪಿ ಸಮರ್ಥಮಿತಿ ।*

ಅನುವಾದ: ಅಲ್ಲದೆ ಅಜ್ಞರು 'ನಾನು ತಿಳಿಯುತ್ತೇವೆ' ಎಂದು ಹೇಳುವುದರಲ್ಲಿ ಪ್ರಮಾತ್ವವನ್ನು ಕಲ್ಪಿಸುವುದುಅತಿಶಯವೇ. ಏಕೆಂದರೆ ಅನಾದಿಯಾದ ಅವಿದ್ಯಾದೋಷವು ಮುಂದುವರಿಯುತ್ತಲೇ ಇರುವುದರಿಂದ ಭ್ರಮೆಯುಂಟಾಗುವುದು ಸಾಧಾರಣ ವಾದುದು. ಆದ್ದರಿಂದ ನೂರಾರು ಭ್ರಮೆಗಳಲ್ಲಿ ಬೀಳುವುದರಿಂದ ಮತ್ತು ಅಪ್ರಾಮಾಣ್ಯದ ಸಂದೇಹ ಆವರಿಸುವುದರಿಂದ ಈ ಪ್ರತ್ಯಕ್ಷ ಭಾದವುಂಟಾಗು ವುದರಲ್ಲಿ ಸುಲಭವಾದ ತರ್ಕ ಮುಂತಾದುವುಗಳನ್ನು ತೆಗೆದುಕೊಂಡ ಅನುಮಾನವೂ ಸಮರ್ಥವಾಗಬಲ್ಲದು.

ವಿವರಣೆ: ಪ್ರಮಾತ್ವ ಎಂದರೆ 'ತದ್ವತಿ ತತ್ಪ್ರಕಾರಕಂಜ್ಞಾನಮ್' ವಸ್ತುವಿನ ಯಥಾರ್ಥ ಜ್ಞಾನ.

ಭಾಷ್ಯ: *ನನು ಆತ್ಮನೋ ನಿತ್ಯಜ್ಞಾನ ಸ್ವರೂಪತ್ವೇ ಕೀದೃಶಂ ಲಾಘವಂ ಇತಿ ಚೇತ್।*

ಅನುವಾದ: ಆತ್ಮನು ನಿತ್ಯನು ಮತ್ತು ಜ್ಞಾನ ಸ್ವರೂಪನು ಎಂದು ಹೇಳಿದ ಮೇಲೆ ಸುಲಭತೆ ಎಲ್ಲಿ ಬಂತು?

ಭಾಷ್ಯ: *ಉಚ್ಯತೇ । ನೈಯಾಯಿಕಾದಿಭಿರಂತಃಕರಣಂ ವ್ಯವಸಾಯ–ಅನುವ್ಯವಸಾಯೌ ತದಾಶ್ರಯಶ್ಚೇತಿ ಚತ್ವಾರಃ ಪದಾರ್ಥಾಃ ಕಲ್ಪ್ಯಂತೇ । ಅಸ್ಮಾಭಿಸ್ತು ಅಂತಃಕರಣಂ ವ್ಯವಸಾಯಸ್ಥಾನೀಯಾ ಚ ತದ್ವ ತ್ತಿರನಂತಾನು ವ್ಯವಸತಯಸ್ಥಾನೀಯಶ್ಚ ನಿತ್ಯೈಕಜ್ಞಾನರೂಪ ಆತ್ಮಾ ಇತಿತ್ರಯಃ ಪದಾರ್ಥಾಃ ಕಲ್ಪ್ಯಂತ ಇತಿ ।*

ಅನುವಾದ: ಹೇಳುತ್ತೇವೆ. ನೈಯಾಯಿಕರು ನಾಲ್ಕು ಕಲ್ಪನೆಗಳನ್ನು ಮಾಡಿದ್ದಾರೆ. ಅಂತಃಕರಣ, ವ್ಯವಸಾಯ, ಅನುವ್ಯವಸಾಯ ಮತ್ತು ಅದರ ಆಶ್ರಯ, ಎಂದು. ಆದರೆ ನಾವಾದರೋ, ಅಂತಃಕರಣ, ವ್ಯವಸಾಯದ ಸ್ಥಾನದಲ್ಲಿ ಅಂತಃಕಣವೃತ್ತಿ, ಅನಂತ ಅನುವ್ಯವಸಾಯಗಳ ಸ್ಥಾನದಲ್ಲಿ ನಿತ್ಯ–ಏಕ ಜ್ಞಾನರೂಪ ಆತ್ಮ ಈ ಮೂರು ಪದಾರ್ಥಗಳನ್ನು ಕಲ್ಪಿಸಿದ್ದೇವೆ.

ಭಾಷ್ಯ: *ನನು ಯದಿ ಪ್ರಕಾಶರೂಪ ಏವಾತ್ಮಾ ತದಾ ಸುಷುಪ್ತ್ಯಾದಿ ಅವಸ್ಥಾಭೇದಃ ನೋಪಪದ್ಯತೇ, ಸದಾ ಪ್ರಕಾಶಾನಪಾಯಾದಿತಿ ।*

ಅನುವಾದ: ಆತ್ಮನು ಪ್ರಕಾಶರೂಪನೇ ಆದಲ್ಲಿ ಆಗ ಸುಷುಪ್ತಿ ಮೊದಲಾದ ಅವಸ್ಥಾಭೇದಗಳು ಹೇಗೆ ಉಂಟಾಗುವುವು, ಏಕೆಂದರೆ ಪ್ರಕಾಶವು ಯಾವಾಗಲೂ ಕಣ್ಮರೆಯಾಗುವುದಿಲ್ಲವಲ್ಲ.

ಭಾಷ್ಯ: *ತತ್ರಾಹ –*

ಸೂತ್ರ: **ಸುಷುಪ್ತ್ಯಾದ್ಯಸಾಕ್ಷಿತ್ವಮ್ ॥ ೧೪೮ ॥**

ಸೂತ್ರಾನುವಾದ: ಸುಷುಪ್ತಿ ಆದ್ಯ (ಮೂರು ಅವಸ್ಥೆಗಳಲ್ಲೂ) (ಪುರುಷನು) ಸಾಕ್ಷಿಯಾಗಿರುವನು.

ವಿವರಣೆ: ಈ ಸೂತ್ರವನ್ನು ಅನಿರುದ್ಧನು ಸುಷುಪ್ತ್ಯಾದಿ – ಅಸಾಕ್ಷಿತ್ವಂ ಎಂದು ಬರೆದು 'ಪುರುಷನು ಪ್ರಕಾಶರೂಪನಾಗಿರುವುದರಿಂದ ಸಾಕ್ಷಿಯಾಗಲಾರ' ಎಂದು ಅರ್ಥ ಮಾಡಿದ್ದಾನೆ.

ಇದೇ ಸೂತ್ರವು ಇನ್ನೆರಡು ಪಾಠಗಳಲ್ಲಿ ದೊರೆತಿದೆ. 'ಸುಷುಪ್ತ್ಯಾದ್ಯವಸ್ಥಾಸಾಕ್ಷಿತ್ವಮ್' ಎಂಬ ಪಾಠವನ್ನು ನಾಗೇಶ ಎಂಬ ವ್ಯಾಖ್ಯಾಕಾರನೂ, 'ಸುಷುಪ್ತ್ಯಾದ್ಯಸ್ಯ ಸಾಕ್ಷಿತ್ವಮ್' ಎಂಬ ಪಾಠವನ್ನು ವೇದಾಂತಿ ಮಹಾದೇವನೆಂಬುವನೂ ಬರೆದಿರುತ್ತಾರೆ. (ನೋಡಿ, ಬ್ಯಾಲಂಟೈನ್ ಅನುವಾದ ಗ್ರಂಥ)

ಭಾಷ್ಯ: *ಸುಷುಪ್ತ್ಯಾದ್ಯಸ್ಯ ಅವಸ್ಥಾತ್ರಯಸ್ಯ ಬುದ್ಧಿಷ್ಠಸ್ಯ ಸಾಕ್ಷಿತ್ವಮೇವ ಪುಂಸಿ ಇತ್ಯರ್ಥಃ ।*

ಅನುವಾದ: ಸುಷುಪ್ತಿಯೇ ಮೊದಲಾದ ಅವಸ್ಥಾತ್ರಯಗಳು ಬುದ್ಧಿನಿಷ್ಠವಾಗಿವೆ. ಅದರ ಸಾಕ್ಷಿಯಾಗಿ ಪುರುಷನಿರುತ್ತಾನೆ.

ಭಾಷ್ಯ: *ತದುಕ್ತಮ್ ।*

ಜಾಗ್ರತ್ ಸ್ವಪ್ನಃ ಸುಷುಪ್ತಂ ಚ ಗುಣತೋ ಬುದ್ಧಿವೃತ್ತಯಃ ।
ತಾಸಾಂ ವಿಲಕ್ಷಣೋ ಜೀವಃ ಸಾಕ್ಷಿತ್ವೇನ ವ್ಯವಸ್ಥಿತಃ ॥

(ಭಾಗವತ ೧೧.೧೩.೨೭)

ತಾಸಾಂ ಬುದ್ಧಿವೃತ್ತೀನಾಂ ಸಾಕ್ಷಿತ್ವೇನ ತದ್ವಿಲಕ್ಷಣೋ ಜಾಗ್ರತ್ ಆದ್ಯ ಅವಸ್ಥಾರಹಿತೋ ನಿರ್ಣೀತಃ ।

ಅನುವಾದ: ಹೀಗೆ ಹೇಳಿದೆ,

ಜಾಗ್ರತ್, ಸ್ವಪ್ನ, ಸುಷುಪ್ತಿಗಳು ಗುಣಗಳಿಗೆ ಅನುಸಾರವಾಗಿ ಬುದ್ಧಿಯ ವೃತ್ತಿಗಳು, ಅವುಗಳಿಗೆ ವಿಲಕ್ಷಣವಾದ ಜೀವನು ಸಾಕ್ಷಿಯ ರೂಪದಲ್ಲಿ ಇರುತ್ತಾನೆ.

ಈ ಬುದ್ಧಿ ವೃತ್ತಿಗಳ ಸಾಕ್ಷಿತ್ವದ ಕಾರಣ ಅದಕ್ಕಿಂತ ಭಿನ್ನವಾದ ಜೀವವು ಜಾಗ್ರದಾದಿ ಅವಸ್ಥೆಗಳಿಲ್ಲದ್ದು ಎಂದು ನಿರ್ಣಯವಾದಂತೆ ಎಂದರ್ಥ.

ಭಾಷ್ಯ: *ತತ್ರ ಜಾಗ್ರನ್ನಾಮಾವಸ್ಥೇಂದ್ರಿಯದ್ವಾರಾ ಬುದ್ಧೇರ್ವಿಷಯಾ–ಕಾರಃ ಪರಿಣಾಮಃ । ಸ್ವಪ್ನಾವಸ್ಥಾ ಚ ಸಂಸ್ಕಾರಮಾತ್ರ–ಜನ್ಯಃ ತಾದೃಶಃ ಪರಿಣಾಮಃ । ಸುಷುಪ್ತ್ಯವಸ್ಥಾ ಚ ದ್ವಿವಿಧಾ–ರ್ಧಸಮಗ್ರಲಯಭೇದೇನ । ತತ್ರಾರ್ಧಲಯೇ ವಿಷಯಾಕಾರಾ ವೃತ್ತಿಃ ನ ಭವತಿ । ಕಿಂತು ಸ್ವಗತಸುಖದುಃಖ ಮೋಹಾಕಾರೈಃ ಏವ ಬುದ್ಧಿ ವೃತ್ತಿರ್ಭವತಿ । ಅನ್ಯಥೋತ್ಥಿತಸ್ಯ ಸುಖಮಹಂ ಅಸ್ವಾಪ್ಸಂ ಇತ್ಯಾದಿರೂಪನುಷುಪ್ತಿಕಾಲೀನಸುಖಾದಿಸ್ಮರಣಾನುಪ – ಪತ್ತೇಃ । ತದುಕ್ತಂ ವ್ಯಾಸಸೂತ್ರೇಣ 'ಮುಗ್ದೇರ್ಧಽಸಂಪತ್ತಿಃ ಪರಿಶೇಷಾತ್' (ಬ್ರ.ಸೂ. ೩.೨.೧೦) ಇತಿ*

ಅನುವಾದ: 'ಜಾಗ್ರತ್' ಎಂಬ ಅವಸ್ಥೆಯ ಇಂದ್ರಿಯದ ಮೂಲಕ ಬುದ್ಧಿಯ ವಿಷಯಾಕಾರದ ಪರಿಣಾಮವೇ. ಸ್ವಪ್ನಾವಸ್ಥೆಯು ಸಂಸ್ಕಾರ ಮಾತ್ರದಿಂದಲೇ ಹುಟ್ಟಿದ ಪರಿಣಾಮವಾಗಿದೆ. ಸುಷುಪ್ತಿಯು ಎರಡು ಬಗೆಯಾಗಿರುತ್ತದೆ, ಅರ್ಧಲಯ, ಸಮಗ್ರಲಯ ಎಂದು. ಅವೆರಡರಲ್ಲಿ ಅರ್ಧಲಯದಲ್ಲಿ ವಿಷಯಾಕಾರದ ವೃತ್ತಿಯು ಸಂಭವಿಸದು. ಆದರೆ ತನ್ನಲ್ಲಿರುವ ಸುಖ, ದುಃಖ, ಮೋಹಾಕಾರದ ಬುದ್ಧಿ ವೃತ್ತಿಯು ಆಗುವುದು ಹಾಗಿಲ್ಲದಿದ್ದಲ್ಲಿ ನಿದ್ದೆಯಿಂದ ಎದ್ದವನು 'ನಾನು ಸುಖವಾಗಿ ನಿದ್ರಿಸಿದೆ' ಮುಂತಾದ ಸುಷುಪ್ತಿ ಕಾಲದ ಸುಖಾದಿಗಳ ಸ್ಮರಣೆ ಇರುತ್ತಿರಲಿಲ್ಲ. ಅದನ್ನೇ ವ್ಯಾಸ ಸೂತ್ರದಲ್ಲಿ ಹೀಗೆ ಹೇಳಿದೆ – 'ಮೋಹಗೊಂಡಾಗ (ಜೀವನು) ಅರ್ಧಭಾಗ (ಬ್ರಹ್ಮನಲ್ಲಿ) ಇರುವನು, ಪರಿಶೇಷದ ಕಾರಣ'.

ವಿವರಣೆ: ಬುದ್ಧಿ ವೃತ್ತಿಯ ಜಾಗ್ರದವಸ್ಥೆಯಲ್ಲಿ ಇಂದ್ರಿಯಗಳ ಮೂಲಕ ಅರ್ಥೋಪಲಬ್ಧಿ ಯಾಗುತ್ತದೆ. ಆದರೆ ಸುಷುಪ್ತಿಯ ಅವಸ್ಥೆಯಲ್ಲಿ ಬುದ್ಧಿಯು ಕಾರ್ಯೋನ್ಮುಖ ವಾಗದು, ನಿರ್ಗುಣವಾದ ಚೇತನವಾದರೋ ಹಾಗೆಯೇ ಇರುತ್ತದೆ.

ಭಾಷ್ಯ: *ಸಮಗ್ರ ಲಯೇತು ಬುದ್ಧೇರ್ವೃತ್ತಿಸಾಮಾನ್ಯಾಭಾವಃ ಮರಣಾದಾವಿವ ಭವತಿ । ಅನ್ಯಥಾ, 'ಸಮಾಧಿಸುಷುಪ್ತಿ–ಮೋಕ್ಷೇಷು ಬ್ರಹ್ಮರೂಪತಾ' (ಸಾಂ.ಸೂ. ೫/೧೧೬) ಇತ್ಯಾಗಾಮಿಸೂತ್ರಾನುಪಪತ್ತೇರಿತಿ । ಸಾ ಚ ಸಮಗ್ರ–ಸುಷುಪ್ತಿ ವೃತ್ತ್ಯಭಾವರೂಪಾ ಇತಿ ಪುರುಷಸ್ತತ್ಸಾಕ್ಷೀ ನ ಭವತಿ, ಪುರುಷಸ್ಯ ವೃತ್ತಿ ಮಾತ್ರ ಸಾಕ್ಷಿತ್ವಾತ್ । ಅನ್ಯಥಾ ಸಂಸ್ಕಾರಾದೇರಪಿ ಬುದ್ಧಿ ಧರ್ಮಸ್ಯ ಸಾಕ್ಷಿಭಾಸ್ಯ ತಾಪತ್ತೇಃ । ಸುಷುಪ್ತ್ಯಾದಿ ಸಾಕ್ಷಿತ್ವಂ ತು ತಾದೃಶಬುದ್ಧಿವೃತ್ತೀನಾಂ ಸ್ವಪ್ರತಿಬಿಂಬಿತಾನಾಂ ಪ್ರಕಾಶನಂ ಇತಿ ವಕ್ಷ್ಯಾಮಃ (೧–೧೬೧) । ಅತೋ ಜ್ಞಾನಾರ್ಥಂ ಪುರುಷಸ್ಯ ನ ಪರಿಣಾಮಾಪೇಕ್ಷೇತಿ ।*

ಅನುವಾದ: ಸಮಗ್ರ ಲಯದಲ್ಲಿ ಮರಣಾದಿಗಳಂತೆ ಬುದ್ಧಿಯ ವೃತ್ತಿಯ ಸಾಮಾನ್ಯ ಭಾವವು ಉಂಟಾಗುತ್ತದೆ. ಹಾಗಿಲ್ಲದಿದ್ದಲ್ಲಿ 'ಸಮಾಧಿ–ಸುಷುಪ್ತಿ–ಮೋಕ್ಷ'ಗಳಲ್ಲಿ ಬ್ರಹ್ಮರೂಪತೆಯು ಪ್ರಾಪ್ತವಾಗುವುದು' ಎಂಬ ಮುಂದೆ ಬರುವ ಸೂತ್ರ ಅನ್ವಯಿಸ ಲಾರದಾಗುತ್ತದೆ. ಅದೂ ಸಹ ಸಮಗ್ರ ಸುಷುಪ್ತಿಯಲ್ಲಿ ವೃತ್ತ್ಯಭಾವರೂಪವಾದ ಕಾರಣ ಪುರುಷನು ಅದಕ್ಕೆ ಸಾಕ್ಷಿ ಎಂದು ಹೇಳಲು ಆಗದು ಏಕೆಂದರೆ ಪುರುಷನು ಕೇವಲ ವೃತ್ತಿಗೆ ಸಾಕ್ಷಿ. ಹಾಗಿಲ್ಲದಿದ್ದಲ್ಲಿ ಬುದ್ಧಿಧರ್ಮಗಳಾದ ಸಂಸ್ಕಾರಾದಿಗಳಲ್ಲಿಯೂ ಪುರುಷನನ್ನು 'ಸಾಕ್ಷಿ ಭಾಸ್ಯ' ಎನ್ನಬೇಕಾಗುವುದು. ಸುಷುಪ್ತ್ಯಾದಿಗಳ ಸಾಕ್ಷಿಯ ಭಾವವು ಅಂತಹ ಬುದ್ಧಿ ವೃತ್ತಿಗಳ ಸ್ವಪ್ರತಿಬಿಂಬದ ಪ್ರಕಾಶನವೆನ್ನಬೇಕು. (ಸಾಂ.ಸೂ. ೧.೧೬೧) ಆದ್ದರಿಂದ ಜ್ಞಾನಕ್ಕಾಗಿ ಪುರುಷನು ಪರಿಣಾಮಕ್ಕೆ ಗುರಿಯಾಗಬೇಕಾಗಿಲ್ಲ.

ಭಾಷ್ಯ: *ಸ್ಯಾದೇತತ್ । ಸುಷುಪ್ತೇ ಯದಿ ಸುಖದುಃಖಾದಿ–*
ಗೋಚರಾ ಬುದ್ಧಿವೃತ್ತೇರಿಷ್ಯತೇ, ತರ್ಹಿ
ಜಾಗ್ರದಾದೌ ಅಪಿ ಅಖಿಲವೃತ್ತೀನಾಂ ವೃತ್ತಿಗ್ರಾಹ್ಯತ್ವಸ್ವೀಕಾರೇ
ಏವ ಯುಕ್ತ ಇತಿ ವ್ಯರ್ಥತತ್ಸಾಕ್ಷಿಪುರುಷಕಲ್ಪನಾ ।
ಸ್ವಗೋಚರವೃತ್ತ್ಯೈವ ಏವ ಸ್ವವ್ಯವಹಾರಹೇತುತುಯಾಃ
ಸಾಮಾನ್ಯತಃ ಸುವಚತ್ವಾದಿತಿ ।
ಮೈವಮ್ । ನಿಯಮೇನ ಸ್ವಗೋಚರವೃತ್ತಿಕಲ್ಪನೇ
ಅನವಸ್ಥಾಪತ್ತಿಗೌರವಂ ಚ ಸ್ಯಾತ್ ।

ಅನುವಾದ: ಹಾಗಿರಬಹುದು. ಸುಷುಪ್ತಿಯಿರುವಾಗ ಒಂದು ವೇಳೆ ಬುದ್ಧಿ ವೃತ್ತಿಯಲ್ಲಿ ಸುಖ–ದುಃಖಾದಿಗಳು ಅನುಭವಕ್ಕೆ ಬರುವುವು ಎಂದಿಟ್ಟುಕೊಂಡರೆ ಆಗ ಜಾಗ್ರದಾದಿ ಅವಸ್ಥೆಗಳಲ್ಲೂ ಎಲ್ಲ ವೃತ್ತಿಗಳಿಗೂ ವೃತ್ತಿಗ್ರಾಹ್ಯತ್ವವನ್ನು ಸ್ವೀಕರಿಸುವುದೇ ಸರಿಯಾಗು ವುದು; ಆದ್ದರಿಂದ ಆ ಸಾಕ್ಷೀ ಪುರುಷನ ಕಲ್ಪನೆಯು ವ್ಯರ್ಥವಾಗಿ ಉಳಿಯುವುದು. ಏಕೆಂದರೆ ತನ್ನ ವ್ಯವಹಾರದ ಕಾರಣವನ್ನು ತನಗೆ ಗೋಚರವಾಗುವ ವೃತ್ತಿಯಿಂದಲೇ ಎಂದು ಸಾಮಾನ್ಯವಾಗಿ ಹೇಳುವುದು ಸುಲಭ. ಆದರೆ ಹಾಗಲ್ಲ. ನಿಯಮದಂತೆ ತನಗೆ ಗೋಚರವಾಗುವ ವೃತ್ತಿಯ ಕಲ್ಪನೆಯು ಅನವಸ್ಥಾದೋಷವನ್ನೂ ಅತಿಶಯತೆಯನ್ನೂ ಉಂಟು ಮಾಡುತ್ತದೆ.

ಭಾಷ್ಯ: *ಕಿಂ ಚಾಹಂ ಸುಖೀತ್ಯಾದಿವೃತ್ತಿಷು ಸುಖಾದೀನಾಂ ವಿಶೇಷಣತಯಾ*
ನಿರ್ವಿಕಲ್ಪಕಂ ತಜ್‌ಜ್ಞಾನಮಾದೌ ಅಪೇಕ್ಷ್ಯತೇ । ತತ್ರ ಚ
ಅನಂತನಿರ್ವಿಕಲ್ಪಕವೃತ್ತ್ಯಪೇಕ್ಷಯಾ ಲಾಘವೇನ ನಿತ್ಯ ಮೇಕ–
ಮೇವಾತ್ಮಸ್ವರೂಪಂ ಜ್ಞಾನಂ ಕಲ್ಪತೇ । ಅಹಂ ಸುಖೀತ್ಯಾದಿ–
ವಿಶಿಷ್ಟ ಜ್ಞಾನಾರ್ಥಂ ಬುದ್ಧಿವೃತ್ತೇರೇವ ತಾದೃಶಾಕಾರತ್ವಂ
ಪುರುಷೇ ವೃತ್ತಿ ಸಾರೂಪ್ಯ ಮಾತ್ರ ಸ್ವೀಕಾರೇಣ ವೃತ್ತ್ಯಾಕಾರಾ–
ತಿರಿಕ್ತಾಕಾರಾನಭ್ಯುಪಗಮಾತ್ ಸ್ವತಂತ್ರಾಕಾರೇಣ ಪರಿಣಾಮಾ–
ಪತ್ತೇರಿತಿ ।

ಅನುವಾದ: ಅಲ್ಲದೆ 'ನಾನು ಸುಖಿ' ಇತ್ಯಾದಿ ವೃತ್ತಿಗಳಲ್ಲಿ ಸುಖಾದಿಗಳು ವಿಶೇಷಣವಾಗುವುದರಿಂದ ಅದರ ನಿರ್ವಿಕಲ್ಪಕವಾದ ಜ್ಞಾನವು ಮೊದಲು ಅಪೇಕ್ಷಿತವಾಗುತ್ತದೆ. ಅದರಲ್ಲಿ ಅನಂತವಾದ ನಿರ್ವಿಕಲ್ಪಕ ವೃತ್ತಿಯ ಕಾರಣ ಸುಲಭವಾಗಿ ನಿತ್ಯವಾದ ಒಂದು ಆತ್ಮಸ್ವರೂಪದ ಜ್ಞಾನವನ್ನು ಕಲ್ಪಿಸಬಹುದು. 'ನಾನು ಸುಖಿ' ಮುಂತಾದ ವಿಶಿಷ್ಟವಾದ ಜ್ಞಾನಕ್ಕಾಗಿ ಬುದ್ಧಿವೃತ್ತಿಯದೇ ಆದ ಆ ಪ್ರಕಾರದ ಆಕಾರವನ್ನು ಪುರುಷನಲ್ಲಿ ವೃತ್ತಿ ಸ್ವರೂಪದಿಂದ ಮಾತ್ರ ಸ್ವೀಕರಿಸುವುದರಿಂದ ವೃತ್ತ್ಯಾಕಾರವನ್ನು ಮೀರಿದ ಆಕಾರವು ದೊರೆಯದಿರುವುದರಿಂದ ಸ್ವತಂತ್ರಾಕಾರದ ಪರಿಣಾಮವು ಒದಗುವುದು.

ವಿವರಣೆ: ಪುರುಷನು ವೃತ್ತಿಯ ಅಭಾವದ ಸಾಕ್ಷಿಯಾಗಲಾರ. ಸುಷುಪ್ತಿಯ ಸಮಯದಲ್ಲಿ ಪರುಷನ ಸ್ವತಂತ್ರಾಕಾರವೂ ಸಾಧ್ಯವಾಗದು.

'ನಿರ್ವಿಕಲ್ಪಕ', 'ವಸ್ತುಸ್ವರೂಪವನ್ನು ಮಾತ್ರ ಗ್ರಹಿಸುವ ಜ್ಞಾನ' ಎಂದರೆ, ಆದರೆ ಅದರ ಪ್ರಕಾರಗಳನ್ನು ಗ್ರಹಿಸದಿರುವುದು.

ಭಾಷ್ಯ: *ಅಥೈವಂ ಪುರುಷಂ ಸುಷುಪ್ತ್ಯಾದಿ ಸಾಕ್ಷಿಮಾತ್ರತ್ವೇನ ಪುರುಷೈಕ್ಯಸ್ಯಾಪಿ ಉಪಪತ್ತೌ ಸಕಿಮೇಕೋಽನೇಕೋ ವೇತಿ ಸಂಶಯಃ । ತತ್ರಾಯಂ ಪೂರ್ವಪಕ್ಷಃ – ಲಾಘವ–ತರ್ಕ ಸಹಕಾರೇಣ ಬಲವತೀಭ್ಯೋಽಭೇದ ಶ್ರುತಿಭ್ಯಃ ಏಕ ಏವ ಆತ್ಮಾ ಸಿದ್ಧ್ಯತಿ । ಜಾಗ್ರದಾದ್ಯವಸ್ಥಾರೂಪಾಣಾಂ ವೈಧರ್ಮ್ಯಾಣಾಂ ಬುದ್ಧಿಧರ್ಮತ್ವಾತ್ । ಯದ್ಯಪ್ಯೇಕಸ್ಯಾತ್ಮನಃ ಸರ್ವಬುದ್ಧಿಸಾಕ್ಷಿತ್ವಂ ತಥಾಪಿ ಯಸ್ಯಾಃ ಬುದ್ಧೇಃ ಯಾ ವೃತ್ತಿಃ ಸೈವ ಬುದ್ಧಿಃ ತದ್ವಿಶಿಷ್ಟತಯಾ ಸಾಕ್ಷಿಣಂ ಗೃಹ್ಣಾತಿ, ಘಟಂ ಜಾನಾಮೀತ್ಯಾದಿರೂಪೈಃ । ಅತ ಏಕಸ್ಯಾ ವೃತ್ತೇಃ ಅಯಂ ಘಟ ಇತಿ ವೃಕ್ತೌ ಸಾಮಾನ್ಯಬುದ್ಧಿವೃತ್ತಿದ್ವಾರಾ ನಾನುಭವಃ 'ಘಟಂ ಅಹಂ ಜಾನಾಮಿ' ಇತಿ ।*

ಅನುವಾದ: ಅಲ್ಲದೆ, ಪುರುಷನು ಸುಷುಪ್ತ್ಯಾದಿಗಳ ಸಾಕ್ಷಿ ಮಾತ್ರವಾಗಿರುವುದರಿಂದ ಪುರುಷನು ಒಂದೆಂಬುದು ಮನಸ್ಸಿಗೆ ಬಂದರೂ ಅವನು ಒಬ್ಬನೋ ಅಥವಾ ಅನೇಕನೋ ಎಂಬ ಸಂಶಯವುಂಟಾಗುವುದು. ಇದರ ಬಗ್ಗೆ ಪೂರ್ವ ಪಕ್ಷವು (ಹೀಗೆ ಇರುವುದು.) ಸುಲಭವಾದ ತರ್ಕದ ಸಹಕಾರದಿಂದ ಪ್ರಬಲವಾದ ಶ್ರುತಿಗಳಿಂದ ಆತ್ಮನು ಸಿದ್ಧನಾಗುತ್ತಾನೆ. ಜಾಗ್ರದಾದಿ ಅವಸ್ಥಾರೂಪಗಳಲ್ಲಿ ಇರುವ ವೈಧರ್ಮ್ಯಗಳು ಬುದ್ಧಿಧರ್ಮವಾದ್ದರಿಂದ (ಆತ್ಮನು ಒಬ್ಬನೇ). ಸರ್ವಬುದ್ಧಿಗಳಿಗೆ ಸಾಕ್ಷಿಯಾಗಿರುವುದು ಒಬ್ಬನೇ ಆತ್ಮನಾಗಿದ್ದರೂ ಯಾವ ಬುದ್ಧಿಗೆ ಯಾವ ವೃತ್ತಿ ಇರುವುದೋ ಅದೇ ಬುದ್ಧಿ ಮತ್ತು ಅದೇ ವೃತ್ತಿಗಳಿಂದ ಕೂಡಿದ ಸಾಕ್ಷಿಯೂ 'ನಾನು ಘಟವನ್ನು ತಿಳಿಸಿದ್ದೇನೆ' ಎಂಬ ರೂಪಗಳಿಂದ ಸ್ವೀಕರಿಸುತ್ತದೆ. ಆದ್ದರಿಂದ ಒಂದು ಬುದ್ಧಿಯು 'ಇದು ಒಂದು ಘಟ' ಎಂಬ ವೃತ್ತಿಯಲ್ಲಿ ಇರುವಾಗ

ಬೇರೆಯ ವೃತ್ತಿಯ ಮೂಲಕ 'ನಾನು ಘಟವನ್ನು ಬಲ್ಲೆ' ಎಂಬ ಅನುಭವ ಉಂಟಾಗಲಾರದು.

ಭಾಷ್ಯ: *ತತ್ರ ಸಿದ್ಧಾಂತಮಾಹ – (ಸೂತ್ರಕಾರರ ಸಿದ್ಧಆಂತವನ್ನು ಹೇಳಿದೆ)*

ಸೂತ್ರ: ಜನ್ಮಾದಿ ವ್ಯವಸ್ಥಾತಃ ಪುರುಷಬಹುತ್ವಮ್ ॥ ೧೪೯ ॥

ಸೂತ್ರಾನುವಾದ: ಜನ್ಮಾದಿಗಳ ವ್ಯವಸ್ಥೆಯ ಕಾರಣ ಪುರುಷರು ಅನೇಕ (ಎಂಬುದು ಸಿದ್ಧಿವಾಗುತ್ತದೆ).

ಭಾಷ್ಯ: *'ಪುಣ್ಯವಾನ್ ಸ್ವರ್ಗೇ ಜಾಯತೇ, ಪಾಪೀ ನರಕೇ,*
ಜ್ಞಾನೀ ಮುಚ್ಯತೇ' ಇತ್ಯಾದೇಃ ಶ್ರುತಿ ಸ್ಮೃತಿವ್ಯವಸ್ಥಾಯಾಃ
ವಿಭಾಗಸ್ಯ ಅನ್ಯಥಾನುಪಪತ್ತ್ಯಾ ಪುರುಷಾ ಬಹವ ಇತ್ಯರ್ಥಃ ।
ಜನ್ಮಮರಣೇ ಚಾತ್ರ ನೋತ್ಪತ್ತಿವಿನಾಶೌ, ಪುರುಷನಿಷ್ಠತ್ವ–
ಅಭಾವಾತ್ । ಕಿಂತ್ವಪೂರ್ವದೇಹೇಂದ್ರಿಯಾದಿ ಸಂಘಾತವಿಶೇಷೇಣ
ಸಂಯೋಗಶ್ಚ ವಿಯೋಗಶ್ಚ ಭೋಗತದಭಾವನಿಯಾಮಕೌ ಇತಿ ।

ಅನುವಾದ: 'ಪುಣ್ಯವಂತನು ಸ್ವರ್ಗದಲ್ಲಿ ಹುಟ್ಟುವನು', 'ಪಾಪಿಯು ನರಕದಲ್ಲಿರುವನು', 'ಅಜ್ಞಾನಿಯು ಬಂಧನದಲ್ಲಿರುವನು' 'ಜ್ಞಾನಿಯು ಮುಕ್ತನಾಗುವನು' ಹೀಗೆ ಶ್ರುತಿ ಸ್ಮೃತಿಗಳ ಮೂಲಕ ಹೇಳಿರುವ ವ್ಯವಸ್ಥೆಯ ವಿಭಾಗದಿಂದ ಬೇರೆಯಾಗಿ ವ್ಯವಸ್ಥೆಯು ಕಾಣಬರದಿರುವುದರಿಂದ ಪುರುಷರು ಬಹಳ ಎಂದು ಸ್ಪಷ್ಟ ಪಡುತ್ತದೆ. ಜನನ ಮರಣಗಳೂ ಸಹ ಪುರುಷನಲ್ಲಿ ಇಲ್ಲದಿರುವುದರಿಂದ ಉತ್ಪತ್ತಿ ವಿನಾಶಗಳಲ್ಲ. ಆದರೆ ಅಪೂರ್ವವಾದ ದೇಹ–ಇಂದ್ರಿಯಗಳು ವಿಶೇಷವಾಗಿ ಸೇರಿರುವುದರಿಂದ ಸಂಯೋಗ, ವಿಯೋಗ, ಭೋಗ ಮತ್ತು ಅದರ ಅಭಾವ ಹೀಗೆ ದೇಹೇಂದ್ರಿಯಗಳು ನಿಯಮವನ್ನುಂಟು ಮಾಡುವುವು.

ಭಾಷ್ಯ: *ಜನ್ಮಾದಿ ವ್ಯವಸ್ಥಾಯಾಂ ಶ್ರುತಿಃ ।–*
ಅಜಾಮೇಕಾಂ ಲೋಹಿತಕೃಷ್ಣಶುಕ್ಲಾಂ ಬಹ್ವೀಃ ಪ್ರಜಾಃ ಸೃಜಮಾನಾಂ
ಸರೂಪಾಃ ।
ಅಜೋಹ್ಯೇಕೋ ಜುಷಮಾಣೋಽನುಶೇತೇ ।
ಜಹಾತ್ಯೇನಾಂ ಭುಕ್ತಭೋಗಾಮಜ್ಯೋನ್ಯಃ ॥ ಶ್ವೇತಾ ೪.೫

ಅನುವಾದ: ಜನ್ಮಾದಿ ವ್ಯವಸ್ಥೆಯನ್ನು ಕುರಿತು ಶ್ರುತಿಯು ಹೀಗೆ ಹೇಳುತ್ತದೆ. ಅನೇಕ ಸಂತಾನಗಳನ್ನು ಸೃಷ್ಟಿಸುವ, ಕೆಂಪು, ಬಿಳಿ ಮತ್ತು ಕಪ್ಪು ಬಣ್ಣಗಳಿಂದ ಕೂಡಿದ ಒಂದು ಆಡು ಒಂದು ಹೋತವು (ಅಜಾ–ಜನ್ಮವಿಲ್ಲದ ಪ್ರಕೃತಿಯನ್ನು) ಒಂದು ಹೋತವು (ಅಜಃ–ಅಜ್ಞಾನಿಯಾದ ಜೀವವು) ಸೇವಿಸುತ್ತಾ ಮಲಗುತ್ತದೆ. ಇನ್ನೊಂದು ಹೋತವು ಅದನ್ನು ಭೋಗಿಸಿದ ಆಡನ್ನು (ಮತ್ತೊಂಬ್ಬ ಪುರುಷನು ಪ್ರಕೃತಿಯನ್ನು ಸೇವಿಸಿ) ತ್ಯಜಿಸುತ್ತದೆ.

ವಿವರಣೆ: ಮಹಾಭಾರತದಲ್ಲಿ (೧೨.೩೦೨.೪೫) ಶುಕ್ಲ, ಲೋಹಿತ-ಕೃಷ್ಣ ವರ್ಣಗಳನ್ನು ಸತ್ವ, ರಜಸ್, ತಮಸ್‌ಗಳಿಗೆ ಅನ್ವಯಿಸಿದ್ದಾರೆ.

ಭಾಷ್ಯ: *ನನು ಪುರುಷಸ್ಯೈಕ್ಯೇಽಪಿ ಉಪಾಧಿರೂಪಾವಚ್ಛೇದಕ-ಭೇದೇನ ಜನ್ಮಾದಿವ್ಯವಸ್ಥಾ ಭವೇತ್ । ತತ್ರಾಹ*

ಅನುವಾದ: ಪುರುಷನನ್ನು ಒಂದೇ ಎಂದು ಭಾವಿಸಿದರೂ ಉಪಾಧಿರೂಪದ ಮಿತಿಯಲ್ಲಿ ಜನ್ಮಾದಿ ವ್ಯವಸ್ಥೆಯು ಸಂಭವಿಸುವುದಲ್ಲದೆ? ಆ ವಿಷಯಕ್ಕೆ ಹೀಗೆ ಹೇಳಿದೆ –

ಸೂತ್ರ: ಉಪಾಧಿಭೇದೇಽಪ್ಯೇಕಸ್ಯ ನಾನಾಯೋಗ ಆಕಾಶಸ್ಯೇವ ಘಟಾದಿಭಿಃ ॥ ೧೫೦ ॥

ಸೂತ್ರಾನುವಾದ: ಉಪಾಧಿ ಇಲ್ಲದಿದ್ದರೂ ಒಂದೇ (ಆತ್ಮನು) ಅನೇಕ (ಶರೀರಗಳೊಡನೆ) ಸಂಬಂಧ ಹೊಂದಿರುತ್ತದೆ (ಹೇಗೆಂದರೆ) ಘಟಾದಿಗಳೊಡನೆ ಆಕಾಶವಿರುವಂತೆ.

ಭಾಷ್ಯ: *ಉಪಾಧಿಭೇದೇಽಪಿ ಏಕಸ್ಯೈವ ಪುರುಷಸ್ಯ ನಾನಾ-ಉಪಾಧಿಯೋಗೋಽಸ್ತ್ಯೇವ । ಯಥಾ ಏಕಸ್ಯೈವಾಕಾಶಸ್ಯ ಘಟಕುಡ್ಯಾದಿ ನಾನಾ ಯೋಗಃ । ಅತೋಽವಚ್ಛೇದಕ-ಭೇದೇನ ಏಕಸ್ಯಾತ್ಮನ ಏವ ವಿವಿಧ ಜನ್ಮಮರಣಾದ್ಯಾಪತ್ತಿಃ ಕಾಯವ್ಯೂಹಾದಾವಿವೇತಿ ನ ಸಂಭವತಿ ವ್ಯವಸ್ಥಾ, ಏಕಃ ಪುರುಷಃ ಜಾಯತೇ ನ ಅಪರಃ ಇತ್ಯಾದಿರಿತ್ಯರ್ಥಃ । ನ ಹ್ಯವಚ್ಛೇದಕ-ಭೇದೇನ ಕಪಿಸಂಯೋಗಃ ತದಭಾವವತಿ ಏಕಸ್ಮಿನ್ನೇವ ವೃಕ್ಷೇ ವ್ಯವಸ್ಥಾ ಘಟತೇ । ಏಕೋ ವೃಕ್ಷಃ ಕಪಿಸಂಯೋಗೀ, ಅನ್ಯಶ್ಚ ನೇತಿ ।*

ಅನುವಾದ: ಉಪಾಧಿಯು ಕಳೆದುಹೋದರೂ ಪುರುಷನಿಗೆ ನಾನಾ ಉಪಾಧಿಗಳ ಯೋಗವಿರುವುದು. ಆಕಾಶವು ಒಂದೇ ಆದರೂ ಘಟ, ಗೋಡೆ ಮುಂತಾದುವುಗಳ ಸಂಬಂಧ ಹೊಂದಿರುತ್ತದೆ. ಆದ್ದರಿಂದ ಅವಚ್ಛೇದಕ ಭೇದದಿಂದ ಒಂದೇ ಆತ್ಮನಲ್ಲಿ ವಿವಿಧ ಜನ್ಮಮರಣಾದಿಗಳ ವ್ಯವಸ್ಥೆಯು ಕಾಯವ್ಯೂಹಾದಿಗಳಲ್ಲಿ ಇರುವಂತೆ ಸಂಭವಿಸುವುದಿಲ್ಲ. ಒಬ್ಬನೇ ಪುರುಷ (ಮತ್ತೆ ಮತ್ತೆ) ಹುಟ್ಟುವನು, ಸಾಯುವನು, ಇತರ ಪುರುಷರಲ್ಲ ಇತ್ಯಾದಿ. ಒಂದೇ ಮರದಲ್ಲಿ ಕಪಿಯ ಸಂಯೋಗವೂ ಅದರ ಅಭಾವವೂ ಅವಚ್ಛೇದಕ ಭೇದದ ವ್ಯವಸ್ಥೆಯ ಕಾರಣ ಉಂಟಾಗದು ಎಂದರೆ ಒಂದೇ ವೃಕ್ಷವು ಕಪಿ ಸಂಯೋಗವನ್ನು ಹೊಂದುವುದು ಮತ್ತೊಂದಲ್ಲ (ಎಂದಂತಾಗುವುದು).

ವಿವರಣೆ: ಪುರುಷ ಬಹುತ್ವವನ್ನು ಸಾಧಿಸಲು ಸೂತ್ರಕಾರನ ಅಭಿಪ್ರಾಯವೆಂದರೆ, ಒಂದೇ ಪರುಷನಲ್ಲಿ ಅನೇಕ ಉಪಾಧಿಗಳಿರಲು ಸಾಧ್ಯ. ಆದರೆ ಜನ್ಮ, ಮರಣಾದಿಗಳು ಒಂದೇ ಪುರುಷನಲ್ಲಿ ಅವಚ್ಛಿನ್ನವಾದರೂ ಆ ಉಪಾಧಿಗಳು ಪ್ರತಿಯೊಬ್ಬ ಪುರುಷನಿಗೂ ಅನ್ವಯಿಸುವುದಿಲ್ಲ ಎಂದು ಹೇಳಲಾಗದು; ಎಂದರ್ಥ.

ಭಾಷ್ಯ: *ಕಿಂ ಚೈಕೋಪಾಧಿಕೋ ಮುಕ್ತಸ್ಯಾಪಿ ಆತ್ಮಪ್ರದೇಶಸ್ಯ ಉಪಾಧ್ಯಂತರೈಃ ಪುನರ್ಬಂಧ್ಯಾಪತ್ತ್ಯಾ ಬಂಧಮೋಕ್ಷಾಽವ್ಯವಸ್ಥಾ ತದವಸ್ಥೈವ । ಯಥೈಕಘಟಮುಕ್ತಸ್ಯ ಆಕಾಶಪ್ರದೇಶಸ್ಯ ಅನ್ಯಘಟಯೋಗಾತ್ ಘಟಾಕಾಶವ್ಯವಸ್ಥಾ ತದ್ವದಿತಿ । ನ ಚ ಬಂಧಮೋಕ್ಷವ್ಯವಸ್ಥಾ ಶ್ರುತಿರಪಿ ಲೌಕಿಕಭ್ರಮಾನು ವಾದ ಮಾತ್ರಮಿತಿ ವಾಚ್ಯಮ್ । ಮೋಕ್ಷಸ್ಯಾಲೌಕಿಕತ್ವಾತ್ । ಮಿಥ್ಯಾಪುರುಷಾರ್ಥಪ್ರತಿಪಾದನೇನ ಶ್ರುತೇಃ ಪ್ರಕಾರಕತ್ವಾದಿ ಆಪತ್ತೇಃ ।*

ಅನುವಾದ: ಅಲ್ಲದೆ ಒಂದು ಉಪಾಧಿಯಿಂದ ಮುಕ್ತನಾದರೂ ಬೇರೆಯ ಉಪಾಧಿಯಿಂದ ಬಂಧವನ್ನು ಆತ್ಮನು ಪಡೆಯುವನು. ಆಗ ಬಂಧಮೋಕ್ಷಗಳ ಅವ್ಯವಸ್ಥೆಯೇ ಸಂಭವಿಸುವುದು. ಹೇಗೆಂದರೆ ಒಂದು ಘಟರೂಪಿಯಾದ ಉಪಾಧಿಯಿಂದ ಮುಕ್ತವಾದ ಆಕಾಶವು ಅನ್ಯ ಘಟದ ಸಂಬಂಧದಿಂದ ಪುನಃ ಘಟಾಕಾಶವಾಗಿ ಆಗುವಂತೆ ಆತ್ಮ ಸಂಬಂಧವೂ ಆಗುವುದು ಬಂದಮೋಕ್ಷಗಳ ವ್ಯವಸ್ಥೆಯನ್ನು ಹೇಳುವ ಶ್ರುತಿಯಾದರೋ ಲೌಕಿಕಭ್ರಮೆಯನ್ನು ತಿಳಿಸುವಷ್ಟೆ ಎಂದು ಹೇಳಬಾರದು. ಮೋಕ್ಷವು ಅಲೌಕಿಕವಾದುದು, ಆದ್ದರಿಂದ ಅನ್ವಯಿಸದು. ಶ್ರುತಿಯು ಎಂದೂ ಮಿಥ್ಯಾ ಪ್ರತಿಪಾದನೆಯನ್ನು ಮೋಕ್ಷದ ವಿಷಯದಲ್ಲಿ ಮಾಡದು, ಇಲ್ಲದಿದ್ದಲ್ಲಿ ಅದಕ್ಕೆ ಪ್ರಕಾರಕತ್ವ ದೋಷವುಂಟಾಗುವುದು, (ಎಂದರೆ ವಂಚನೆಯ ದೋಷವುಂಟಾಗುವುದು.)

ವಿವರಣೆ: ಆಕಾಶವು ಘಟಾದಿಗಳಿಂದು ಬದಲಾಗದು. ಹಾಗೆಯೇ ಆತ್ಮನು ದೇಹಗಳು ಬದಲಾದರೂ ತಾನು ಬದಲಾಗದು.

ಭಾಷ್ಯ: *ನನು ಚೈತನ್ಯೈಕ್ಯೇಽಪಿ ತತ್ತದುಪಾಧಿವಿಶಿಷ್ಟಸ್ಯ ಅತಿರಿಕ್ತತಾಂ ಅಭ್ಯುಪಗಮ್ಯ ವ್ಯವಸ್ಥೋಪಪಾದನೀಯಾ, ತತ್ರಾಹ*

ಅನುವಾದ: ಚೈತನ್ಯವು ಒಂದೇ ಆದರೂ ಆಯಾ ಉಪಾಧಿ ವಿಶೇಷಗಳನ್ನು ಹೆಚ್ಚೆಂದು ಭಾವಿಸಿ ಆ ರೀತಿಯಾಗಿ ಕಲ್ಪಿಸಬೇಕು. (ತತ್ರಾಹ) ಅದಕ್ಕೆ ಹೀಗೆ ಹೇಳಿದೆ.

ಸೂತ್ರ: **ಉಪಾಧಿರ್ಭಿದ್ಯತೇ ನ ತು ತದ್ವಾನ್ ॥ ೧೫೧ ॥**

ಸೂತ್ರಾನುವಾದ: ಉಪಾಧಿಯು (ದೇಹವು) ನಾಶವಾದರೂ ಅದನ್ನು ಹೊಂದಿರುವ (ಶರೀರಿಯು) ನಾಶವಾಗುವುದಿಲ್ಲ.

ಭಾಷ್ಯ: *ಉಪಾಧಿರೇವ ನಾನಾ, ನತು ತದ್ವಾನ್ ಉಪಾಧಿವಿಶಿಷ್ಟೋ ಅಪಿ ನಾನಾಭ್ಯುಪೇಯೋ ವಿಶಿಷ್ಟಸ್ಯಾತಿರಿಕ್ತತ್ವೇ ನಾನಾತ್ಮತಯಾ ಏವ ಶಾಸ್ತ್ರಾಂತರೇಽಪಿ ಅಭ್ಯುಪಗಮಾಪತ್ತೇಃ ಇತ್ಯರ್ಥಃ । ಬಂಧಭಾಗಿನೋ ವಿಶಿಷ್ಟತ್ವೇ ವಿಶೇಷಣವಿಯೋಗೇನ ವಿಶಿಷ್ಟನಾಶಾತ್ ನ ಮೋಕ್ಷೋಪಪತ್ತಿಃ ಇತ್ಯಾದೀನ್ಯಪಿ ದೂಷಣಾನಿ ।*

ಅನವಾದ: ಉಪಾಧಿಗಳು ನಾನಾ ಬಗೆ. ಆದರೆ ಅದನ್ನು ಹೊಂದಿರುವ (ಶರೀರಿ) ನಾನಾ ಬಗೆ ಎಂದು ತಿಳಿಯಬೇಕಾಗಿಲ್ಲ; ವಿಶಿಷ್ಟವನ್ನು ಅದು ಮೀರಿದೆಯೆಂದು ಭಾವಿಸಿದರೆ ಬೇರೆಯ ಶಾಸ್ತ್ರದಲ್ಲಿಯೂ ನಾನಾ ಆತ್ಮಗಳ ಅಸ್ತಿತ್ವವನ್ನು ಸ್ವೀಕರಿಸುವ ಪ್ರಮೇಯ ಬರುವುದು. ಬಂಧಕ್ಕೆ ಭಾಗಿಯು ವಿಶಿಷ್ಟವೆಂದು ಭಾವಿಸಿದರೆ ವಿಶೇಷಣದ ವಿಯೋಗದಿಂದ ವಿಶಿಷ್ಟವೂ ನಾಶವಾಗಿ ಮೋಕ್ಷೋಪಪತ್ತಿಯು ಸಾಧ್ಯವಾಗದು ಮುಂತಾದ ಅನೇಕ ದೋಷಗಳುಂಟಾಗುವುವು.

ಭಾಷ್ಯ: *ನನು ವಿಶಿಷ್ಟಸ್ಯ ಜೀವತ್ವಾನ್ವಯವ್ಯತಿರೇಕಾದಿತಿ ಷಷ್ಠಾಧ್ಯಾಯೇ ಸ್ವಯಮೇವಾಹಂಕಾರ ವಿಶಿಷ್ಟಸ್ಯೈವ ಜೀವತ್ವಂ ವಕ್ಷ್ಯತೀತಿ ।*

ಅನುವಾದ: 'ವಿಶಿಷ್ಟದ ಜೀವತ್ವ ಅನ್ವಯ–ವ್ಯತಿರೇಕಗಳಿಂದ ಸಿದ್ಧವಾಗುತ್ತದೆ' (೬.೬೩) ಎಂದು ಆರನೆಯ ಅಧ್ಯಾಯದಲ್ಲಿ (ಸೂತ್ರಕಾರರು) ಜೀವತ್ವವು ಅಹಂಕಾರವಿಶಿಷ್ಟ ಎಂದು ಹೇಳಿದ್ದಾರೆ.

ವಿವರಣೆ: ಇನ್ನು ದೋಷವೆಲ್ಲಿ ಬಂತು ಎಂದು ಪ್ರಶ್ನೆ ।

ಭಾಷ್ಯ: *ಇತಿ ಚೇನ್ನ । ಪ್ರಾಣಧಾರಕತ್ವರೂಪ ಜೀವಕತ್ವಸ್ಯೈವ ವಿಶಿಷ್ಟಾಧೇಯತ್ವವಚನಾತ್ । ನ ತು ಬಂಧ ಮೋಕ್ಷವ್ಯವಸ್ಥಾಯಾಃ ವಿಶಿಷ್ಟಾಶ್ರಿತತ್ವಂ ವಕ್ಷ್ಯತೇ, ಮೋಕ್ಷಕಾಲೇ ವಿಶಿಷ್ಟಾಸತ್ತ್ವಾದಿತಿ ।*

ಅನುವಾದ: ಹಾಗಲ್ಲ.

ಜೀವನದ ಇರುವಿಕೆಯು ಪ್ರಾಣಧಾರಣೆಯನ್ನು ಮಾಡುವುದಾದ್ದರಿಂದ ಅದರಲ್ಲಿ ವಿಶಿಷ್ಟವಾದ ಆಶ್ರಯವನ್ನು ಹೊಂದಿರುವುದನ್ನು ಹೇಳಿದೆ. ಬಂಧ–ಮೋಕ್ಷಗಳ ವ್ಯವಸ್ಥೆಯು ವಿಶಿಷ್ಟವಾದ ಆಶ್ರಯವನ್ನು ಹೊಂದಿರುವುದನ್ನು ಹೇಳಲಾಗುವುದು ಏಕೆಂದರೆ ಮೋಕ್ಷಕಾಲದಲ್ಲಿ ವಿಶಿಷ್ಟವಾದ ಸತ್ತ್ವವು ಇರದು

ಭಾಷ್ಯ: *ಯದ್ಯಪಿ ಕೇಚಿನ್ನವೀನಾ ವೇದಾಂತಿಬ್ರುವಾ ಆಹುಃ । ಏಕಸ್ಯೈವಾತ್ಮನಃ ಕಾರ್ಯಕಾರಣೋಪಾಧಿಷು ಪ್ರತಿಬಿಂಬಾನಿ ಜೀವೇಶ್ವರಾಃ ।*

ಅನುವಾದ: ಕೆಲವು ನವೀನರಾದ ವೇದಾಂತಿಗಳೆಂದು ಹೇಳಿಕೊಳ್ಳುವವರು ಹೀಗೆಂದಿದ್ದಾರೆ. – 'ಒಂದೇ ಆತ್ಮನು ಕಾರ್ಯ–ಕಾರಣ ಉಪಾಧಿಗಳಲ್ಲಿ ಜೀವೇಶ್ವರರು (ಜೀವಾತ್ಮರು) ಪ್ರತಿಬಿಂಬಿಸಲ್ಪಡುತ್ತಾರೆ'.

ಭಾಷ್ಯ: *ಪ್ರತಿಬಿಂಬಾನಾ ಚಾನ್ಯೋನ್ಯಂ ಭೇದಾತ್ ಜನ್ಮಾದಿ ಅಖಿಲವ್ಯವಸ್ಥೋಪಪತ್ತಿಃ ಇತಿ ।*

ಅನುವಾದ: ಪ್ರತಿಬಿಂಬಗಳಲ್ಲಿ ಪರಸ್ಪರ ಭೇದದಿಂದ ಎಲ್ಲ ವ್ಯವಸ್ಥೆಗಳೂ ಉಂಟಾಗುತ್ತವೆ.

ಭಾಷ್ಯ: *ತದಸ್ಯ ಸತ್ । ಭೇದಾಭೇದವಿಕಲ್ಪಾ ಸಹತ್ವಾತ್ । ಬಿಂಬ ಪ್ರತಿಬಿಂಬಯೋರ್ಭೇದೇ ಪ್ರತಿಬಿಂಬಸ್ಯಾಚೇತನತಯಾ*

ಭೋಕ್ತೃತ್ವಬಂಧಮೋಕ್ಷಾದ್ಯನುಪಪತ್ತಿಃ । ಜೀವಬ್ರಹ್ಮಾಭೇದರೂಪ– ತತ್ಸಿದ್ಧಾಂತ ಕ್ಷತಿಶ್ಚ । ಜೀವೇಶ್ವರ ಭಿನ್ನಸ್ಯಾತ್ಮನೋ ಅಪ್ರಾಮಾಣಿಕತ್ವಂ ಚ । ಅಭೇದೇ ತು ಸಾಂಕರ್ಯಾಪರಿಹಾರಃ । ಭೇದಾಭೇದಾಭ್ಯುಪಗಮೇ ತು ತತ್ಸಿದ್ಧಾಂತಹಾನಿಃ, ಭೇದಾಭೇದವಿರೋಧಶ್ಚ ।

ಅನುವಾದ: ಅದು ಸರಿಯಲ್ಲ. ಅವರು ಹೇಳುವುದು ಭೇದ ಮತ್ತು ಅಭೇದ ಪಕ್ಷಗಳಿಗೆ ಒಪ್ಪಬಹುದಾದ ಉತ್ತರವಲ್ಲ. ಬಿಂಬ ಪ್ರತಿಬಿಂಬಗಳ ಭೇದವಿರುವಾಗ ಪ್ರತಿಬಿಂಬವು ಚೇತನವಲ್ಲದ ಕಾರಣ ಭೋಕ್ತೃತ್ವ, ಬಂಧ, ಮೋಕ್ಷಗಳು ಉಂಟಾಗುವುದಿಲ್ಲ. ಜೀವ ಬ್ರಹ್ಮಗಳ ಅಭೇದದ ಸಿದ್ಧಾಂತಕ್ಕೆ ಕ್ಷತಿಯುಂಟಾಗುವುದು. ಜೀವ, ಈಶ್ವರ ಇವುಗಳಿಗೆ ಭಿನ್ನವಾದ ಆತ್ಮನ ಬಗ್ಗೆ ಪ್ರಮಾಣದ ಕೊರತೆಯುಂಟಾಗುವುದು. ಅಭೇದ ಉಂಟಾದಲ್ಲಿ ಒಂದರೊಡನೆ ಇನ್ನೊಂದು ಬೆರೆತು ಹೋಗುವುದನ್ನು ತಪ್ಪಿಸಲಾಗದು. ಭೇದಾಭೇದಗಳನ್ನು ಒಪ್ಪಿದಲ್ಲಿ ಸಿದ್ಧಾಂತವೇ ಹಾಳಾಗುವುದು ಮತ್ತು ಭೇದಾಭೇದಗಳ ವಿರೋಧವೂ ಉಳಿಯುವುದು.

ಭಾಷ್ಯ: *ಅಸ್ಮನ್ಮತೇ ತ್ವಭೇದೋಽವಿಭಾಗಲಕ್ಷಣೋ ಭೇದಶ್ಚಾನ್ಯೋನ್ಯಾ– ಭಾವ ಇತ್ಯವಿರೋಧ ಇತಿ । ಅವಚ್ಛೇದಪ್ರತಿಬಿಂಬಾದಿ– ದೃಷ್ಟಾಂತವಾಕ್ಯಾನಿ ತ್ವಗ್ರೇ ವ್ಯಾಖ್ಯಾಸ್ಯಾಮಃ (ಸಾಂ.ಸೂ. ೧.೧೫೩–೧೫೪)*

ಅನುವಾದ: ಆದರೆ ನಮ್ಮ ಅಭಿಪ್ರಾಯದಲ್ಲಿ ಅಭೇದವು ಅವಿಭಾಗ ಲಕ್ಷಣವುಳ್ಳದ್ದು ಮತ್ತು ಭೇದವು ಅನ್ಯೋನ್ಯಾಭಾವ ಎಂದು, ಹೀಗೆ ವಿರೋಧವಿರದು. ಅವಚ್ಛೇದ– ಪ್ರತಿಬಿಂಬ ಮುಂತಾದ ದೃಷ್ಟಾಂತ ವಾಕ್ಯಗಳನ್ನು ಮುಂದೆ ವ್ಯಾಖ್ಯಾನ ಮಾಡಲಾಗುವುದು.

ಭಾಷ್ಯ: *ಸ್ಯಾದೇತತ್ ಬಿಂಬಪ್ರತಿಬಿಂಬಾದಿಭೇದಂ ಪರಿಕಲ್ಪ್ಯ ಶ್ರುತ್ಯಾ ಬಂಧಮೋಕ್ಷವ್ಯವಸ್ಥಾ ಕಲ್ಪಿತಾ ಇತ್ಯೇವಮಸ್ಮಾಭಿರುಚ್ಯತೇ ನ ತು ಪರಮಾರ್ಥತೋ ಬಿಂಬಪ್ರತಿಬಿಂಬಭಾವಸ್ತಯೋಃ ಭೇದಃ ಬಂಧ ಮೋಕ್ಷಾದಿಕಂ ಚೇಷ್ಯತೇ ಇತಿ ।*

ಅನುವಾದ: ಹಾಗೆಯೇ ಆಗಲಿ, ನಾವು ಹೇಳುವುದೇನೆಂದರೆ, ಬಿಂಬ– ಪ್ರತಿಬಿಂಬಾದಿ ಭೇದವನ್ನು ಕಲ್ಪಿಸಿ ಬಂಧಮೋಕ್ಷವ್ಯವಸ್ಥೆಯನ್ನು ನಾವು ಹೇಳುತ್ತಿದ್ದೇವೆ; ಆದರೆ ಪರಮಾರ್ಥದಲ್ಲಿ ಬಿಂಬ ಪ್ರತಿಬಿಂಬ ಭಾವವನ್ನೂ, ಅವೆರಡರ ಭೇದವನ್ನೂ, ಬಂಧ–ಮೋಕ್ಷಗಳ ವಿಚಾರವನ್ನೂ ಹೇಳುತ್ತಿಲ್ಲ.

ಭಾಷ್ಯ: *ಮೈವಮ್ । ಏವಂ ಸತಿ ಬಂಧಮೋಕ್ಷಾದಿ ಶ್ರುತಿಗಣಸ್ಯ ಭೇದಶ್ರುತಿಗಣಸ್ಯ ಚೋಭಯೋರ್ಬಾಧಾಪೇಕ್ಷಯಾ ಕೇವಲಾಭೇದ– ಶ್ರುತಿಗಣಸ್ಯ ಏವ ಅವಿಭಾಗಪರತಯೈವ ಸಂಕೋಚೋ ಲಾಘವಾದುಕ್ತಿಃ । ಶ್ರುತಿಸ್ಮೃತ್ಯಂತರೈರವಿಭಾಗಸ್ಯ ಸಿದ್ಧತ್ವಾಚ್ಚೇತಿ ।*

ಅನುವಾದ: ಹಾಗಲ್ಲ. ಹಾಗಾದ ಪಕ್ಷದಲ್ಲಿ ಬಂಧಮೋಕ್ಷಗಳನ್ನು ಹೇಳುವ ಶ್ರುತಿಗಣಕ್ಕೂ ಮತ್ತು ಭೇದವನ್ನು ಹೇಳುವ ಶ್ರುತಿಗಣಕ್ಕೂ ಪರಸ್ಪರ ಬಾಧವುಂಟಾಗುವುದರಿಂದ ಕೇವಲಾಭೇದವನ್ನು ಹೇಳುವ ಅವಿಭಾಗದ ಕಾರಣದಿಂದ ಅದನ್ನು ಮಿತಿಗೊಳಿಸುವುದು ಸುಲಭ. ಬೇರೆ ಶ್ರುತಿ, ಸ್ಮೃತಿಗಳಲ್ಲಿ ಅವಿಭಾಗವು ಸಿದ್ಧವಾದುದೇ.

ವಿವರಣೆ: ಕೆಲವು ಶ್ರುತಿಗಳು ಬಂಧ–ಮೋಕ್ಷಗಳನ್ನು ಪ್ರತಿಪಾದಿಸುತ್ತವೆ. ಇನ್ನು ಕೆಲವು ಜೀವ–ಬ್ರಹ್ಮಗಳ ಅಭೇದವನ್ನು ತಿಳಿಸುತ್ತವೆ. ಈ ತತ್ತ್ವಗಳನ್ನು ಪರಸ್ಪರ ವಿರುದ್ಧವೆಂದು ಭಾವಿಸಬೇಕಾಗಿಲ್ಲ. ಅದರ ಬದಲು ಜೀವ–ಬ್ರಹ್ಮಗಳ ಅಭೇದವನ್ನು ಬೋಧಿಸುವ ಭಾಗವನ್ನು ತೆಗೆದುಕೊಳ್ಳುವುದು ಸುಲಭ.

ಭಾಷ್ಯ: *ಆತ್ಮೈಕ್ಯವಾದಿಷೂಕ್ತಂ ದೂಷಣಮುಪಸಂಹರತಿ –*

ಅನುವಾದ: ಆತ್ಮೈಕ್ಯವಾದಿಗಳನ್ನು ಮೇಲೆ ಹೇಳಿರುವ ದೂಷಣವನ್ನು ಉಪಸಂಹಾರ ಮಾಡುವರು.

ಸೂತ್ರ: ಏವಮೇಕತ್ವೇನ ಪರಿವರ್ತಮಾನಸ್ಯ ನ ವಿರುದ್ಧ ಧರ್ಮಾಧ್ಯಾಸಃ ॥೧೫೨॥

ಸೂತ್ರಾರ್ಥ: ಹೀಗೆ (ಆತ್ಮನು) ಏಕತ್ವದಲ್ಲಿ ಅಸ್ತಿತ್ವ ವಿರುವಾಗ ವಿರುದ್ಧ ಧರ್ಮಗಳನ್ನು ಒಡ್ಡುವುದು ಸರಿಯಲ್ಲ.

ಭಾಷ್ಯ: *ಏವಂ ರೀತ್ಯಾ ಏಕತ್ವೇನ ಸರ್ವತಃ ವರ್ತಮಾನಸ್ಯ ಆತ್ಮನಃ ಜನ್ಮಮರಣಾದಿರೂಪವಿರುದ್ಧಧರ್ಮಪ್ರಸಂಗಃ ನ ಯುಕ್ತ ಇತ್ಯರ್ಥಃ । ಯದ್ವಾ ಏಕತ್ವ ಇತಿ ಚ್ಛೇದಃ । ಏಕತ್ವೇಽಭ್ಯುಪಗಮ್ಯಮಾನೇ ಪರಿತಃ ಸರ್ವತಃ ವರ್ತಮಾನಸ್ಯ ಸರ್ವೋಪಾಧಿಷು ಅನುಗತಸ್ಯ ವಿರುದ್ಧಧರ್ಮಾಧ್ಯಾಸಃ ನೇತಿ ನ, ಕಿಂತು ಸರ್ವಥಾ ವಿರುದ್ಧ–ಧರ್ಮಸಂಕರಃ ಅಪರಿಹಾರ್ಯಃ ಇತ್ಯರ್ಥಃ ।*

ಅನುವಾದ: ಈ ರೀತಿಯಾಗಿ ಎಲ್ಲರಲ್ಲಿಯೂ ಇರುವ ಆತ್ಮನ ಜನ್ಮ ಮರಣಾದಿ ರೂಪದ ವಿರುದ್ಧ ಧರ್ಮಗಳ ಪ್ರತೀತಿಯು ಸರಿಯಲ್ಲ. ಅಥವಾ 'ಏಕತ್ವೇ' 'ನ' ಎಂದು ಪದಚ್ಛೇದ ಮಾಡಬಹುದು. ಹಾಗೆ ಅಂಗೀಕರಿಸಿದಲ್ಲಿ (ಪರಿತಃ ಎಂದರೆ) ಎಲ್ಲೆಡೆಯೂ (ವರ್ತಮಾನಸ್ಯ ಇರುವ) ಎಲ್ಲಾ ಉಪಾಧಿಗಳಿಗೂ ಹೊಂದಿಕೊಳ್ಳುವ ಆತ್ಮನಿಗೆ ವಿರುದ್ಧ ಧರ್ಮಗಳು ಅಧ್ಯಾಸವಾಗಲಾರದು. ಇದು ಸರಿಯಾದ (ಅರ್ಥ)ವಲ್ಲ. ಆದರೆ ವಿರುದ್ಧ ಧರ್ಮಗಳ ಸಂಕರವನ್ನು ಸರ್ವಥಾ ಹೋಗಲಾಡಿಸುವುದು ಸಾಧ್ಯವಿಲ್ಲ.

ಭಾಷ್ಯ: *ನನು ಪುರುಷೋ ನಿರ್ಧರ್ಮಕಃ, ತತ್ರ ಕಥಂ ಜನ್ಮ–ಮರಣ ಬಂಧಮೋಕ್ಷಾದಿ ವಿರುದ್ಧ ಸಾಂಕರ್ಯಮಾಪದ್ಯತೇ, ಭವದ್ಭಿರಪಿ ಸರ್ವೇಷಾಂ ಧರ್ಮಾಣಾಂ ಉಪಾಧಿನಿಷ್ಠತ್ವ–ಅಭ್ಯುಪಗಮಾದಿತಿ ।*

ಅನುವಾದ: ಪುರುಷನು ಧರ್ಮಗಳಿಲ್ಲದವನಲ್ಲವೆ? ಆ ಪಕ್ಷದಲ್ಲಿ ಅವನಲ್ಲಿ ಜನ್ಮ–ಮರಣ, ಬಂಧ–ಮೋಕ್ಷಾ ದಿ ವಿರುದ್ಧ ಸಾಂಕರ್ಯಗಳು ಉಂಟಾಗುತ್ತವೆ ಅಲ್ಲವೆ? ಏಕೆಂದರೆ ಧರ್ಮಗಳು ಉಪಾಧಿನಿಷ್ಠವಾದುದೆಂದು ನೀವು ಅಂಗೀಕರಿಸಿರುವಿರಿ.

ಭಾಷ್ಯ: *ಇತಿ ಚೇನ್ನ । ಉಕ್ತ ಧರ್ಮಾಣಾಂ ಸಂಯೋಗವಿಯೋಗ–ಭೋಗಾಭೋಗರೂಪತಯಾ ಪುರುಷೇ ಸ್ವೀಕಾರಾತ್ । ಪರಿಣಾಮ–ರೂಪಧರ್ಮಾಣಾಮೇವ ಪುರುಷೇ ಪ್ರತಿಷೇಧಸ್ಯೋಕ್ತತ್ವಾದಿತಿ ।*

ಅನುವಾದ: ಇದು ಸರಿಯಲ್ಲ. ಮೇಲೆ ಹೇಳಿದ ಧರ್ಮಗಳು ಸಂಯೋಗ ವಿಯೋಗಗಳು ಭೋಗ–ಅಭೋಗ ರೂಪದಿಂದ ಪುರುಷನಲ್ಲಿ ಕಾಣುವುವೆಂದು ನಾವು ಒಪ್ಪಿದ್ದೇವೆ. ಪರಿಣಾಮರೂಪ ಧರ್ಮಗಳನ್ನು ಪುರುಷನಲ್ಲಿ ನಿಷಿದ್ಧವಾದುವೆಂದು ನಾವು ಹೇಳಿದ್ದೇವೆ.

ಭಾಷ್ಯ: *ಯಥಾ ಸ್ಫಟಿಕೇಷು ಲೌಹಿತ್ಯ ನೀಲಿಮಾದಿಧರ್ಮಾಣಾಂ ಆರೋಪಿತಾನಾಮಪಿ ವ್ಯವಸ್ಥಾಸ್ತಿ ತಥಾ ಪುರುಷೇಷ್ವಪಿ ಬುದ್ಧಿ–ಧರ್ಮಾಣಾಂ ಸುಖದುಃಖಾದೀನಾಂ ಶರೀರಾದಿಧರ್ಮಾಣಾಂ ಚ ಬ್ರಾಹ್ಮಣ್ಯಕ್ಷತ್ರಿಯತ್ವಾದೀನಾಂ ಆರೋಪಿತಾನಾಮಪಿ ವ್ಯವಸ್ಥಾಸ್ತಿ ಶಾಸ್ತ್ರೇಷು । ಯಥಾ ವಿಷ್ಣು ಪುರಾಣೇ,*

ಯಥೈಕಸ್ಮಿನ್ ಘಟಾಕಾಶೇ ರಜೋ ಧೂಮಾದಿಭಿರ್ಯುತೇ ।
ನ ಚ ಸರ್ವೇ ಪ್ರಯುಜ್ಯಂತ ಏವಂ ಜೀವಾಃ ಸುಖಾದಿಭಿಃ ।

ಅನುವಾದ: ಹೇಗೆ ಸ್ಫಟಿಕಮಣಿಗಳಲ್ಲಿ ಕೆಂಪು, ನೀಲಿ ಮುಂತಾದ ಧರ್ಮಗಳು ಆರೋಪಿತವಾದರೂ ಆ ವ್ಯವಸ್ಥೆಯು ಇರುವುದೋ ಹಾಗೆಯೇ ಪುರುಷನಲ್ಲಿ ಆರೋಪಿತವಾದ ಸುಖ ದುಃಖಾದಿಗಳೆಂಬ ಬುದ್ಧಿಧರ್ಮಗಳು ಮತ್ತು ಬ್ರಾಹ್ಮಣ್ಯ ಕ್ಷತ್ರಿಯತ್ವ ಮುಂತಾದ ಶರೀರಾದಿಧರ್ಮಗಳು ಇವುಗಳ ವ್ಯವಸ್ಥೆಯು ಶಾಸ್ತ್ರಗಳಲ್ಲಿ ಉಕ್ತವಾಗಿವೆ. ವಿಷ್ಣು ಪುರಾಣದಲ್ಲಿ ಹೇಳಿರುವಂತೆ –

ಹೇಗೆ ಒಂದೇ ಘಟಾಕಾಶವು ಧೂಳು, ಹೊಗೆ (ಮುಂತಾದ ಧರ್ಮದಿಂದ) ಆವೃತವಾಗಿರುವಾಗ ಎಲ್ಲ ಧರ್ಮಗಳನ್ನೂ ಹೇಳುವುದಿಲ್ಲವೋ ಹಾಗೆ ಸುಖಾದಿಗಳಿಂದ ಆವೃತವಾದ ಜೀವನಲ್ಲೂ ಆ ಎಲ್ಲ ಧರ್ಮಗಳ ಪ್ರಯೋಗವಾಗದು.

ವಿವರಣೆ: ಘಟಾಕಾಶದಲ್ಲಿ ಧೂಳು, ಹೊಗೆ ತುಂಬಿರುವಾಗಲೂ ಹೇಗೆ ಅದು ಘಟಾಕಾಶವಾಗಿಯೇ ಉಳಿಯುವುದೋ ಹಾಗೆ ಜೀವನು ಸುಖ–ದುಃಖಾದಿಗಳನ್ನು ಹೊಂದಿರುವಾಗ ಅವುಗಳನ್ನು ಜೀವನ ಮೇಲೆ ಆರೋಪಿಸಲಾಗದು.

ಭಾಷ್ಯ: *ಸಾಽಪಿ ವ್ಯವಸ್ಥೈಕಾತ್ಮ್ಯೇ ಸತಿ ಜನ್ಮಾದಿವ್ಯವಸ್ಥಾವದೇವ ನೋಪಪದ್ಯತ ಇತ್ಯಾಹ ।*

ಅನುವಾದ: ಆ ವ್ಯವಸ್ಥೆಯೂ ಸಹ ಏಕಾತ್ಮವಾದವಾಗಿರುವಾಗ ಜನ್ಮಾದಿವ್ಯವಸ್ಥೆಯಂತೆ ಉಂಟಾಗಲಾರದು – ಇದನ್ನೇ ಹೇಳಿದೆ.

ಸೂತ್ರ: ಅನ್ಯಧರ್ಮತ್ವೇಽಪಿ ನಾರೋಪಾತ್ ತತ್ಸಿದ್ಧಿರೇಕತ್ವಾತ್ ॥೧೫೩॥

ಅನುವಾದ: ಬೇರೆಯದರ ಧರ್ಮವಾದರೂ (ಪುರುಷನಲ್ಲಿ) ಆರೋಪ ಮಾಡಿದ ಮಾತ್ರಕ್ಕೆ ವ್ಯವಸ್ಥೆಯು ಸಿದ್ಧಿಸುವುದಿಲ್ಲ; ಏಕೆಂದರೆ ಎಲ್ಲರಿಗೂ ಒಬ್ಬನೇ (ಆತ್ಮನು.)

ಭಾಷ್ಯ: *ಅನ್ಯಧರ್ಮತ್ವೇಽಪಿ ಧರ್ಮಾಣಾಂ ಸುಖಾದೀನಾಮಾರೋಪಾತ್ ಪುರುಷೇ ವ್ಯವಸ್ಥಾ ನ ಸಿಧ್ಯತಿ । ಆರೋಪಾಧಿಷ್ಠಾನ ಪುರುಷಸ್ಯ ಏಕತ್ವಾತ್ ಇತ್ಯರ್ಥಃ । ಆಕಾಶಸ್ಯೈಕತ್ವೇಽಪಿ ಘಟಾವಚ್ಛಿನ್ನ ಆಕಾಶಾನಾಂ ಘಟಭೇದೇನ ಭಿನ್ನತಯಾ ಔಪಾಧಿಕಧರ್ಮವ್ಯವಸ್ಥಾ ಘಟತೇ ಆತ್ಮವಜ್ಜೀವತ್ವಾದಿಕಂ ತು ನೋಪಾಧ್ಯವಚ್ಛಿನ್ನಸ್ಯ, ಉಪಾಧಿವಿಯೋಗೇ ಘಟಾಕಾಶನಾಶವತ್ ತನ್ನಾಶೇನ ಜೀವೋ ನ ಮ್ರಿಯತೇ (ಕ.ಉ. ೧.೩.೧೮) ಇತ್ಯಾದಿ ಶ್ರುತಿ ವಿರೋಧ–ಪ್ರಸಂಗಾತ್ । ಕಿಂತು ಕೇವಲ ಚೈತನ್ಯಸ್ಯೇತಿ ಪ್ರಾಗೇವೋಕ್ತಮ್ ।*

ಅನುವಾದ: (ಆತ್ಮವಲ್ಲದೆ) ಬೇರೆಯದರ ಧರ್ಮವಾದರೂ ಸುಖ–ದುಃಖ ರೂಪದ ಧರ್ಮಗಳನ್ನು ಪುರುಷನಲ್ಲಿ ಆರೋಪ ಮಾಡುವುದರಿಂದ ವ್ಯವಸ್ಥೆಯ ಸಿದ್ಧವಾಗದು. ಆರೋಪಕ್ಕೆ ಅಧಿಷ್ಠಾನನಾದ ಪುರುಷನು ಒಬ್ಬನೇ ಎಂದರ್ಥ. ಆಕಾಶವು ಒಂದೇ ಆದರೂ ಘಟಾವಚ್ಛಿನ್ನ ಆಕಾಶದಲ್ಲಿ ಘಟಗಳು ಬೇರೆಯಾದ ಕಾರಣ ಉಪಾಧಿಯ ಧರ್ಮದ ವ್ಯವಸ್ಥೆಯು ಉಂಟಾಗುವುದು. ಆದರೆ ಆತ್ಮತ್ವ, ಜೀವತ್ವ ಮುಂತಾದುವುಗಳಾದರೋ ಉಪಾಧಿಯಿಂದ ಅವಚ್ಛಿನ್ನವಾಗವು. ಉಪಾಧಿಯು ಇಲ್ಲದಿರುವಾಗ ಘಟಾಕಾಶ ನಾಶವಾಗುವಂತೆ ಅದು ನಾಶವಾದಾಗ ಜೀವವು ನಾಶವಾಗದು. ಇದರಿಂದ (ಕಠಶ್ರುತಿಯಲ್ಲಿರುವಂತೆ) ಶ್ರುತಿಗಳ ವಿರೋಧದ ಪ್ರಸಂಗ ಬರುವುದು. ಆದರೆ 'ಕೇವಲ ಚೈತನ್ಯದ್ದು ಎಂದು ಮೊದಲೇ ಹೇಳಿದೆ.

ಭಾಷ್ಯ: *ಇಮಾಂ ಬಂಧಮೋಕ್ಷಾದಿವ್ಯವಸ್ಥಾನುಪತ್ತಿಂ ಸೂಕ್ಷ್ಮಾಂ ಅಬುಧ್ವಾ ಏವ ಆಧುನಿಕಾ ವೇದಾಂತಿಬ್ರುವಾಃ ಉಪಾಧಿ ಭೇದೇನ ಬಂದಮೋಕ್ಷವ್ಯವಸ್ಥಾಂ ಐಕಾತ್ಮ್ಯ ಇತ್ಯಾಹುಃ । ತೇಽಪಿ ಏತೇನ ನಿರಸ್ತಾಃ । ಯೇಽಪಿ ತದೇಕದೇಶಿನಃ ಇಮಾಮೇವ ಅನುಪಪತ್ತಿಂ ಪಶ್ಯಂತ ಉಪಾಧಿಗತ ಚಿತ್ಪ್ರತಿಬಿಂಬಾನಾಂ ಏವ ಬಂಧಾದೀನ್ಯಾಹುಃ ತೇತು ಅತೀವ ಭ್ರಾಂತಾಃ ಉಕ್ತಾದ್ ಭೇದಾಭೇದಾದಿವಿಕಲ್ಪಾಸಹತ್ವಾದಿದೋಷಾತ್, ಅಂತಃ ಕರಣಸ್ಯ ತದುಜ್ಜ್ವಲಿತತ್ವಾದಿ (ಸಾಂ.ಸೂ. ೧.೯೯) ತತ್ರೋಕ್ತದೋಷಾತ್ ।*

ಅನುವಾದ: ಈ ಸೂಕ್ಷ್ಮವಾದ ಬಂಧಮೋಕ್ಷಾದಿ ವ್ಯವಸ್ಥೆಯು ದೊರೆಯದೆ ಇರುವುದನ್ನು ತಿಳಿಯದೆಯೇ ಆಧುನಿಕರಾದ ವೇದಾಂತಿಗಳೆಂದು ಹೇಳಿಕೊಳ್ಳುವವರು ಆತ್ಮವು ಒಂದೇ ಎಂದು ಹೇಳಿ ಉಪಾಧಿಭೇದದಿಂದ ಬಂಧಮೋಕ್ಷಾದಿಗಳ ವ್ಯವಸ್ಥೆಯನ್ನು ಹೇಳಿರುವವರು ಅವರೂ ಸಹ ಇದರಿಂದ ಖಂಡಿಸಲ್ಪಟ್ಟಿದ್ದಾರೆ. ಏಕದೇಶಿಗಳಾದ

ವಿದ್ವಾಂಸರು ಈ ಅನುಪಪತ್ತಿಯನ್ನೇ ಗಮನಿಸುತ್ತಾ ಉಪಾಧಿಗತವಾದ ಚಿತ್‌ಪ್ರತಿಬಿಂಬಗಳನ್ನೇ ಬಂಧಾದಿಗಳೆಂದು ಹೇಳುವರು; ಅವರು ಅತೀವ್ರ ಭ್ರಾಂತರು ಅವರಿಗೆ ಭೇದಾಭೇದಾದಿವಿಕಲ್ಪಗಳು ಒಪ್ಪಿಗೆಯಿಲ್ಲದ ದೋಷದಿಂದ ಕೂಡಿದ್ದಾರೆ. ನಾವು ಅಂತಃಕರಣಸ್ಯ ತದುಜ್ಜ್ವಲಿತತ್ವಾತ್ (ಸಾಂ.ಸೂ. ೧.೯೯) (ಎಂಬ ಸೂತ್ರದಲ್ಲಿ ಹೇಳಿರುವಂತೆ) ಈ ದೋಷವನ್ನು ತೋರಿಸಿಕೊಟ್ಟಿದ್ದೇವೆ.

ವಿವರಣೆ: 'ಏಕದೇಶಿನಃ' ಎಂದರೆ ಪದದ ಅರ್ಥವನ್ನು ಮಿತಿಗೊಳಿಸದೆ ಅದೇ ರೀತಿ ಸಂಬಂಧವಿಲ್ಲದ ಅರ್ಥವನ್ನು ಅನ್ವಯಿಸುವಂತೆ ಮಾಡುವವರು.

ಭಾಷ್ಯ: *ಕಿಂಚ ವೇದಾಂತಸೂತ್ರೇ ಕ್ವಾಪಿ ಸರ್ವಾತ್ಮನಾಮತ್ಯಂತೈಕ್ಯಂ ನೋಕ್ತಮಸ್ತಿ । ಪ್ರತ್ಯುತ 'ಭೇದವ್ಯಪದೇಶಾಚ್ಚಾನ್ಯಃ' (ಬ್ರ.ಸೂ. ೧.೧.೨೧) ಅಧಿಕಂತು ಭೇದನಿರ್ದೇಶಾತ್ (ಬ್ರ.ಸೂ. ೨.೧.೨೨), ಅಂಶೋ ನಾನಾವ್ಯಪದೇಶಾತ್ (ಬ್ರ.ಸೂ. ೨.೩.೪೩) ಇತ್ಯಾದಿಸೂತ್ರೈಃ ಭೇದಃ ಉಕ್ತಃ । ಅತ ಆಧುನಿಕಾನಾಮವಚ್ಛೇದ ಪ್ರತಿಬಿಂಬ–ಆದಿವಾದಾಃ ಅಪಸಿದ್ಧಾಂತಾಃ ಏವ । ಸ್ವಶಾಸ್ತ್ರಾನುಕ್ತ ಸಂದಿಗ್ಧಾರ್ಥೇಷು ಸಮಾನತಂತ್ರ ಸಿದ್ಧಾಂತಸ್ಯೈವ ಸಿದ್ಧಾಂತತತ್ತ್ವಾಚ್ಚ ಇತ್ಯಾದಿಕಂ ಬ್ರಹ್ಮಮೀಮಾಂಸಾಯಾಭಾಷ್ಯೇ ಪ್ರತಿಪಾದಿತಮಸ್ಮಾಭಿಃ ।*

ಅನುವಾದ: ಅಲ್ಲದೆ ವೇದಾಂತ ಸೂತ್ರದಲ್ಲಿ ಎಲ್ಲೂ ಎಲ್ಲ ಆತ್ಮಗಳ ಐಕ್ಯವನ್ನು ಹೇಳಿಲ್ಲ. 'ಅದು ಜೀವಕ್ಕಿಂತ ಭಿನ್ನವಾದುದು? ಏಕೆಂದರೆ ಜೀವಕ್ಕಿಂತ ಭಿನ್ನವೆಂದು ಹೇಳಲಾಗಿದೆ'. 'ಜೀವಕ್ಕಿಂತ ಭಿನ್ನನಾದ (ಸರ್ವಜ್ಞ, ಸರ್ವಶಕ್ತಿಮಾನ್) ಬ್ರಹ್ಮನು (ಸೃಷ್ಟಿಕರ್ತನು)'. 'ಜೀವ ಈಶ್ವರನ ಅಂಶ ಏಕೆಂದರೆ ಜೀವೇಶ್ವರರ ಭೇದವನ್ನು (ಶ್ರುತಿಯಲ್ಲಿ) ಹೇಳಿದೆ' ಮುಂತಾದ ಸೂತ್ರಗಳಲ್ಲಿ ಭೇದವನ್ನು ಹೇಳಿದೆ. ಆದ್ದರಿಂದ ಆಧುನಿಕರು 'ಅವಚ್ಛೇದವಾದ' ಮತ್ತು 'ಪ್ರತಿಬಿಂಬವಾದ' ಮುಂತಾದುವು ಅಪಸಿದ್ಧಾಂತಗಳೇ ತಮ್ಮ ಶಾಸ್ತ್ರಗಳಲ್ಲಿ ಹೇಳದ ಸಂದಿಗ್ಧವಾದ ಅರ್ಥಗಳ ಸಿದ್ಧಾಂತ ರೂಪದ ನಿರ್ಣಯಗಳನ್ನು ಸಮಾನತಂತ್ರ ಸಿದ್ಧಾಂತಗಳಿಗನುಸಾರವಾಗಿಯೇ ಮಾಡಬೇಕು ಎಂದು ನಾವು ಬ್ರಹ್ಮಮೀಮಾಂಸಾ ಭಾಷ್ಯದಲ್ಲಿಯೇ ಹೇಳಿದ್ದೇವೆ.

ವಿವರಣೆ: ವೇದಾಂತಿಗಳು ಹೇಳುವಂತೆ ಆತ್ಮ ಒಂದೇ. ಆದರೆ ಅದಕ್ಕೆ ಮುಕ್ತಿ ಹೇಗೆ; ಸುಖದುಃಖಾದಿಗಳ ಅನುಭವ ಬೇರೆ, ಅಂತಃಕರಣಾದಿಗಳು ಬೇರೆ, ಇವೆಲ್ಲ ಆರೋಪದಿಂದ ಹೇಗೆ ಸಾಧ್ಯ ಎಂದು ಹೇಳಿ ವ್ಯಾಖ್ಯಾಕಾರನು ಪುರುಷ ಬಹುತ್ವವನ್ನು ಸಮರ್ಥಿಸಿಕೊಳ್ಳುತ್ತಾನೆ.

ಭಾಷ್ಯ: *ನನ್ವೇವಂ ಪುರುಷನಾನಾತ್ವೇ ಸತಿ–*

ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ ।
ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್ ॥
ನಿತ್ಯಃ ಸರ್ವಗತೋ ಹ್ಯಾತ್ಮಾ ಕೂಟಸ್ಥೋ ದೋಷವರ್ಜಿತಃ ।

(ಬ್ರಹ್ಮಬಿಂದು ಉಪನಿಷತ್ ೧೨)

ಏಕಃ ಸ ಭಿದ್ಯತೇ ಶಕ್ತ್ಯಾ ಮಾಯಯಾ ನ ಸ್ವಭಾವತಃ ॥
ಇತ್ಯಾದ್ಯಾಃ ಶ್ರುತ ಸ್ಮೃತಯಃ ಆತ್ಮೈಕತ್ವ ಪ್ರತಿಪಾದಿಕಾಃ ನೋಪಪದ್ಯಂತೇ ಇತಿ ತತ್ರಾಹ–

ಅನುವಾದ: 'ಒಂದೇ ಭೂತಾತ್ಮನು ಪ್ರತಿಯೊಂದು ಜೀವಿಯಲ್ಲಿಯೂ ಇರುತ್ತಾನೆ. ನೀರಿನಲ್ಲಿ ಕಾಣುವ ಚಂದ್ರನ ಬಿಂಬದಂತೆ ಒಬ್ಬನಾಗಿಯೂ ಬೇರೆ ಬೇರೆಯಾಗಿಯೂ ಕಾಣುವನು.

'ಎಲ್ಲೆಲ್ಲಿಯೂ ಇರುವ ಆತ್ಮನು ನಿತ್ಯನು, ಸರ್ವವ್ಯಾಪಿಯು, ಕೂಟಸ್ಥನು, ದೋಷವಿಲ್ಲದವನು. ಅವನು ಮಾಯೆಯ ಶಕ್ತಿಯಿಂದ ಬೇರೆ ಬೇರೆಯಾಗಿರುವನೇ ಹೊರತು ಸ್ವಾಭಾವಿಕವಾಗಿ ಅಲ್ಲ'. ಹೀಗೆ ಶ್ರುತಿಸ್ಮೃತಿಗಳು ಆತ್ಮೈಕತ್ವವನ್ನು ಪ್ರತಿಪಾದಿಸುವ ವಾಕ್ಯಗಳು ಯುಕ್ತವಲ್ಲ.

ಸೂತ್ರ: ನಾದ್ವೈತಶ್ರುತಿ ವಿರೋಧೋ ಜಾತಿಪರತ್ವಾತ್ ॥ ೧೫೪ ॥

ಸೂತ್ರಾನುವಾದ: ಜಾತಿಗೆ ಸೇರಿದ್ದರಿಂದ ಅದ್ವೈತ ಪ್ರತಿಪಾದಕಗಳಾದ ಶ್ರುತಿವಾಕ್ಯಗಳಿಗೆ ವಿರೋಧವಿಲ್ಲ.

ಭಾಷ್ಯ: *ಆತ್ಮೈಕ್ಯ ಶ್ರುತೀನಾಂ ವಿರೋಧಸ್ತು ನಾಸ್ತಿ ತಾಸಾಂ ಜಾತಿ ಪರತ್ವಾತ್ । ಜಾತಿಃ ಸಾಮಾನ್ಯಮೇಕರೂಪತ್ವಂ, ತತ್ರೈವ ಅದ್ವೈತ ಶ್ರುತೀನಾಂ ತಾತ್ಪರ್ಯಾತ್, ನ ತ್ವಖಂಡತ್ವೇ ಪ್ರಯೋಜನಾಭಾವಾದಿತ್ಯರ್ಥಃ । ಜಾತಿ ಶಬ್ದಸ್ಯ ಚ ಏಕರೂಪತಾ–ರ್ಥಕತ್ವಂ ಉತ್ತರಸೂತ್ರಾಲ್ಲಭ್ಯತೇ । ಯ ಥಾ ಶ್ರುತಿಜಾತಿಶಬ್ದಸ್ಯ ಆದರೇ– 'ಆತ್ಮಾ ವಾ ಇದಮೇಕ ಏಮಗ್ರ ಆಸೀತ್' (ಐ.ಉ. ೧.೧.೧) 'ಸದೇವ ಸೋಮ್ಯ ಇದಮಗ್ರ ಆಸೀತ್', 'ಏಕಮೇವಾದ್ವಿತೀಯಮ್' (ಛಾಂ. ೬.೨.೧) ಇತ್ಯಾದ್ಯದ್ವೈತ ಶ್ರುತ್ಯುಪಪಾದಕತಯೈವ ಸೂತ್ರಂ ವ್ಯಾಖ್ಯೇಯಮ್ । ಜಾತಿಪರತ್ವಾತ್ ವಿಜಾತೀಯಾದ್ವೈತ ನಿಷೇಧಪರತ್ವಾದಿತ್ಯರ್ಥಃ ।*

ಅನುವಾದ: ಆತ್ಮೈಕ್ಯವನ್ನು ಪ್ರತಿಪಾದಿಸುವ ಶ್ರುತಿವಾಕ್ಯಗಳೊಡನೆ ಯಾವ ವಿರೋಧವೂ ಇಲ್ಲ. ಏಕೆಂದರೆ ಆ ವಾಕ್ಯಗಳು ಜಾತಿಯನ್ನು ಕುರಿತು ಹೇಳಿವೆ. ಜಾತಿಯು 'ಸಾಮಾನ್ಯ' ಎಂದರೆ ಏಕರೂಪತ್ವ, ಅದೇ ಅದ್ವೈತಶ್ರುತಿಗಳ ತಾತ್ಪರ್ಯ, ಅಖಂಡತ್ವವನ್ನು ಕುರಿತದ್ದಲ್ಲ. ಆ ರೀತಿ ಮಾಡುವುದರಿಂದ ಪ್ರಯೋಜನ ಏನೂ ಇಲ್ಲ. ಜಾತಿ ಶಬ್ದಕ್ಕೆ ಏಕರೂಪತೆಯ ಅರ್ಥವು ಮುಂದಿನ ಸೂತ್ರದಲ್ಲಿ ದೊರೆಯುತ್ತದೆ. 'ಎಲೈ ಸೌಮ್ಯ, ಈ ಆತ್ಮವೊಂದೇ ಪ್ರಾರಂಭದಲ್ಲಿ (ಜಗತ್ತು ಪ್ರಕಟವಾಗುವ ಮುನ್ನ) ಇತ್ತು'. 'ಹೇ ಸೋಮ್ಯ, ಆರಂಭದಲ್ಲಿ ಅದ್ವಿತೀಯವಾದ ಏಕಮಾತ್ರ ಸತ್ ಇತ್ತು'. ಮುಂತಾಗಿ ಅದ್ವೈತ ಶ್ರುತಿಗಳು ಸಮರ್ಥನೆ ಮಾಡುವುದರ ಮೂಲಕ ಸೂತ್ರವನ್ನು ವ್ಯಾಖ್ಯಾನ ಮಾಡಬೇಕು. 'ಜಾತಿಪರತ್ವಾತ್' ಎಂದರೆ ಬೇರೆ ಜಾತಿಯದೆಂದು ದ್ವೈತವನ್ನು ನಿಷೇಧ ಮಾಡುವುದರಿಂದ.

ಭಾಷ್ಯ: *ತತ್ರಾದ್ಯವ್ಯಾಖ್ಯಾಯಾಂ ಅಯಂ ಭಾವಃ । ಆತ್ಮೈಕಶ್ರುತಿಷು ಏಕಾದಿಶಬ್ದಾಶ್ಚಿದೇಕರೂಪಮಾತ್ರತಾಪರಾಃ, ಭೇದಾದಿಶಬ್ದಾಃ ಚಿದೇಕರೂಪತಾ ಮಾತ್ರಪರಾಃ, ಭೇದಾದಿಶಬ್ದಾಶ್ಚ ವೈಧರ್ಮ್ಯಲಕ್ಷಣ–ಭೇದಪರಾಃ ।*

ಅನುವಾದ: ಅದರಲ್ಲಿ ಮೊದಲ ವ್ಯಾಖ್ಯಾನದಲ್ಲಿ ಇರುವ ಭಾವ ಹೀಗಿದೆ– 'ಆತ್ಮೈಕ್ಯವನ್ನು ಪ್ರತಿಪಾದಿಸುವ ಶ್ರುತಿಗಳಲ್ಲಿ 'ಏಕ' ಮುಂತಾದ ಶಬ್ದಗಳು ಚಿತ್ ಎಂಬ ಒಂದೇ ರೂಪದ್ದೆಂದು ಹೇಳುವುವು ಅಷ್ಟೆ, ಭೇದಾದಿಶಬ್ದಗಳು ವೈಧರ್ಮ್ಯದಿಂದ ಕೂಡಿ ಉಂಟಾದ ಭೇದಗಳನ್ನು ತಿಳಿಸುವುವು.

ಭಾಷ್ಯ: *ಏಕ ಏವಾತ್ಮಾ ಮಂತವ್ಯೋ ಜಾಗ್ರತ್ ಸ್ವಪ್ನಸುಷುಪ್ತಿಷು ।*
ಸ್ಥಾನತ್ರಯವ್ಯತೀತಸ್ಯ ಪುನರ್ಜನ್ಮ ನ ವಿದ್ಯತೇ ॥ (ಬ್ರ.ಬಿ.ಉ)
ಇತ್ಯಾದಿ ವಾಕ್ಯೇಷು ಏಕರೂಪಾರ್ಥತ್ವಾವಶ್ಯಕತ್ವಾತ್ । ಅನ್ಯಥಾ ಅವಸ್ಥಾತ್ರಯೇऽಪಿ ಆತ್ಮನಃ ಏಕತಾಮಾತ್ರಜ್ಞಾನೇನ ಸ್ಥಾನತ್ರಯವ್ಯತೀತಶಬ್ದೋಕ್ತಾಯಾ ಅವಸ್ಥಾತ್ರಯಾಭಿಮಾನ–ನಿವೃತ್ತೇರಸಂಭವಾತ್ । ತಥಾ ಏಕರೂಪತಾಪ್ರತಿಪಾದನೇನೈವ ನಿಖಿಲೋಪಾಧಿವಿವೇಕೇನ ಸರ್ವಾತ್ಮನಾಂ ಸ್ವರೂಪಬೋಧನ–। ಸಂಭವಾಚ್ಚ ।

ಅನುವಾದ: 'ಜಾಗ್ರತ್–ಸ್ವಪ್ನ–ಸುಷುಪ್ತಿಗಳಲ್ಲಿ ಆತ್ಮನು ಒಂದೇ ಎಂದು ತಿಳಿಯಬೇಕು. ಈ ಸ್ಥಾನಗಳೆಂಬ ಅವಸ್ಥೆಗಳನ್ನು ದಾಟಿದವನಿಗೆ ಪುನರ್ಜನ್ಮವಿರದು'.

ಇತ್ಯಾದಿ ವಾಕ್ಯಗಳಲ್ಲಿ ಏಕರೂಪತೆಯ ಅವಶ್ಯಕತೆ ಇರುತ್ತದೆ. ಹಾಗಿಲ್ಲದಿದ್ದಲ್ಲಿ ಮೂರು ಅವಸ್ಥೆಗಳಲ್ಲಿಯೂ ಆತ್ಮನು ಒಂದೇ ಎಂದು ತಿಳಿಯುವುದರಿಂದ ಮೂರು ಸ್ಥಾನಗಳನ್ನೂ ದಾಟಿದವನು ಎಂಬ ಶಬ್ದದಿಂದ ಪ್ರತಿಪಾದಿತವಾಗುವ ಅವಸ್ಥಾತ್ರಯದಲ್ಲಿ ಇರುವ ನಾನೆಂಬ ಭಾವವು ಹೋಗುವ ಸಂಭವವಿರದು. ಹಾಗೆಯೇ ಏಕರೂಪತೆಯ ಪ್ರತಿಪಾದನೆ ಮಾಡುವುದರಿಂದಲೇ ಎಲ್ಲ ಉಪಾಧಿಗಳೂ ತಿಳಿದುಬರುವುದರಿಂದಲೇ ಎಲ್ಲ ಆತ್ಮರ ಸ್ವರೂಪವನ್ನು ತಿಳಿಯುವುದು ಸಾಧ್ಯವಾಗುವ ಸಂಭವವಿರುತ್ತದೆ.

ಭಾಷ್ಯ: *ನ ಹ್ಯನ್ಯಥಾ ನಿರ್ಧರ್ಮಕಮಾತ್ಮಸ್ವರೂಪಂ ವಿಶಿಷ್ಯ ಬ್ರಹ್ಮಣಾಪಿ ಶಬ್ದೇನ ಸಾಕ್ಷಾತ್ಪ್ರತಿಪಾದಯಿತುಂ ಶಕ್ಯತೇ, ಶಬ್ದಾನಾಂ ಸಾಮಾನ್ಯ–ಮಾತ್ರಗೋಚರತ್ವಾತ್ । ಆಬ್ರಹ್ಮಸ್ತಂಬಪರ್ಯಂತೇಷು ಆತ್ಮನ ಏಕರೂಪತ್ವೇ ತು ಪ್ರತಿಪಾದಿತೇ ತದುಪಪತ್ತ್ಯರ್ಥಂ ಶಿಷ್ಯಃ ಸ್ವಯಮೇವ ತಾವದ್ವಿವೇಚಯತಿ ಯಾವನ್ನಿರ್ವಿಶೇಷೇ ಶಬ್ದ–ಗೋಚರೇ ಸ್ವರೂಪೇ ಪರ್ಯವಸ್ಯತೀತಿ । ತತಶ್ಚ ನಿಃಶೇಷ ಅಭಿಮಾನನಿವೃತ್ತ್ಯಾ ಕೃತಕೃತ್ಯೋ ಭವತಿ ।*

ಅನುವಾದ: ಹಾಗಿಲ್ಲದಿದ್ದಲ್ಲಿ ಧರ್ಮರಹಿತವಾದ ಆತ್ಮಸ್ವರೂಪವನ್ನು ವಿಶೇಷವಾಗಿ ಬ್ರಹ್ಮನೂ ಸಹ ಶಬ್ದರೂಪದಲ್ಲಿ ಸಾಕ್ಷಾತ್ತಾಗಿ ತಿಳಿಸಲು ಸಾಧ್ಯವಾಗದು. ಏಕೆಂದರೆ ಶಬ್ದಗಳು ಕೇವಲ ಸಾಮಾನ್ಯ ವಿಷಯಗಳನ್ನು ಕುರಿತದ್ದಾಗಿರುತ್ತದೆ. ಬ್ರಹ್ಮನಿಂದ ಹಿಡಿದು ಸ್ತಂಬದವರೆಗೆ ಆತ್ಮನ ಏಕರೂಪತ್ವವನ್ನೇ ಪ್ರತಿಪಾದಿಸಿದರೆ ಅದನ್ನು ಪಡೆಯಲು ಶಿಷ್ಯನು ತಾನಾಗಿಯೇ ವಿವೇಚನೆ ಮಾಡುತ್ತಿರುವಾಗ ಶಬ್ದಗೋಚರ ವಾದ ನಿರ್ವಿಶೇಷ ಸ್ವರೂಪದಲ್ಲಿ ಅದು ಪರ್ಯವಸಾನಗೊಳ್ಳುತ್ತದೆ. ಅನಂತರ ಅಭಿಮಾನವನ್ನು ನಿಃಶೇಷವಾಗಿ ಕಳೆದುಕೊಂಡು ಕೃತಕೃತ್ಯನಾಗುತ್ತಾನೆ.

ಭಾಷ್ಯ: *ಯದಿ ಪುನರದ್ವೈತವಾಕ್ಯಾನ್ಯಖಂಡತಾಮಾತ್ರಪರಾಣಿ ಸ್ಯುಸ್ತರ್ಹಿ ತೇಭ್ಯೋ ನಾಭಿಮಾನನಿವೃತ್ತಿಃ ಸಂಭವತಿ । ಆಕಾಶೇ ವಿವಿಧಶಬ್ದವತ್ ಅಖಂಡೇऽಪ್ಯಾತ್ಮನಿ ಸುಖದುಃಖ–ತದಭಾವಾದೀನಾಂ ಅವಚ್ಛೇದಕಭೇದೈರುಪಪತ್ತೇಃ । ಏಕಸ್ಯೈವ ವಾಕ್ಯಸ್ಯಾಖಂಡತ್ವ ವೈಧರ್ಮ್ಯೋಭಯಪರತ್ವೇ ಚ ವಾಕ್ಯಭೇದೋऽಖಂಡತಾಪರಕಲ್ಪನಾಯಾಂ ಫಲಾಭಾವಶ್ಚ, ಅವೈಧರ್ಮ್ಯ ಜ್ಞಾನಾದೇವ ಸರ್ವಾಭಿಮಾನನಿವೃತ್ತೇಃ ।*

ಅನುವಾದ: ಅದ್ವೈತ ವಾಕ್ಯಗಳು ಅಖಂಡತೆಯನ್ನು ಕುರಿತೇ ಹೇಳುವುದಾದರೆ ಆಗ ಅವುಗಳಿಂದ ಅಭಿಮಾನದ ನಿವೃತ್ತಿಯಾಗದು. ಆಕಾಶದಲ್ಲಿ ವಿವಿಧ ಶಬ್ದಗಳಿರುವಂತೆ ಆತ್ಮನಲ್ಲಿಯೂ ಸುಖ, ದುಃಖ ಮತ್ತು ಅವುಗಳ ಅಭಾವವು ಭಿನ್ನ ಭಿನ್ನ ಅವಚ್ಛೇದಕಗಳ ಮೂಲಕ ಸಂಭವಿಸುವುವು. (ಅದ್ವೈತದ) ಒಂದೇ ವಾಕ್ಯದಲ್ಲಿ ಅಖಂಡತ್ವ ಮತ್ತು ಅವೈಧರ್ಮ್ಯ ಎರಡೂ ಬರುವುದಾದರೆ ವಾಕ್ಯ ಭೇದವೂ ಮತ್ತು ಅಖಂಡತಾಪರತ್ವದ ಕಲ್ಪನೆಯ ಕಾರಣ ಫಲಾಭಾವವೂ ಉಂಟಾಗುವುವು. ಅವೈಧರ್ಮ್ಯ ಜ್ಞಾನದಿಂದಲೇ ಎಲ್ಲ ಅಭಿಮಾನಗಳೂ ಹೊರಟು ಹೋಗುವುವು.

ವಿವರಣೆ: ವಾಕ್ಯಭೇದ ಒಂದು ಬಗೆಯ ದೋಷ, ಒಂದೇ ವಾಕ್ಯದಲ್ಲಿ ಎರಡು ಭಿನ್ನಾಭಿಪ್ರಾಯಗಳು ಬಂದಾಗ ಉಂಟಾಗುವುದು.

ಭಾಷ್ಯ: *ಅತೋऽದ್ವೈತವಾಕ್ಯಾನಿ ನಾಖಂಡತಾಪರಾಣಿ, ನ್ಯಾಯಾನು–ಗ್ರಹೇಣ ಬಲವತೀಭಿರ್ಭೇದಗ್ರಾಹಕಸ್ಮೃತಿಶ್ರುತಿಭಿರ್ವಿರೋಧಾಚ್ಚ । ಕಿಂತ್ವವೈಧರ್ಮ್ಯಲಕ್ಷಣಾಭೇದ ಪರಾಣ್ಯೇವ । ಸಾಮ್ಯ ಬೋಧಕ–ಶ್ರುತಿಸ್ಮೃತಿ ಭಿತೇರೇಕವಾಕ್ಯತ್ವಾತ್ । 'ಸಾಮಾನ್ಯಾತ್ತು' (೩.೨.೩೨) ಬ್ರಹ್ಮಸೂತ್ರತ್ವಾಚ್ಚ ಇತಿ । ತತ್ರ ಸಾಮ್ಯೇಶ್ರುತಯಃ ।*

ಅನುವಾದ: ಆದ್ದರಿಂದ ಅದ್ವೈತ ವಾಕ್ಯಗಳು ಅಖಂಡತ್ವ ಪರಕಗಳಲ್ಲ. ಏಕೆಂದರೆ ನ್ಯಾಯವಾದದಿಂದ ಸ್ವೀಕರಿಸಲ್ಪಟ್ಟ ಬಲವತ್ತರವಾದ ಭೇದಗ್ರಾಹಕ ಶ್ರುತಿ ಸ್ಮೃತಿಗಳ ವಿರೋಧವಿರುವುದು ಆ ವಾಕ್ಯಗಳು ಅವೈಧರ್ಮ್ಯ ಲಕ್ಷಣ ಹೊಂದಿ ಅಭೇದಪರ ವೆಂದು ತಿಳಿಯಬೇಕು. ಏಕೆಂದರೆ ಸಮಾನಾರ್ಥವನ್ನು ತಿಳಿಸುವ ಶ್ರುತಿ–ಸ್ಮೃತಿಗಳಲ್ಲಿ

ಸಮನ್ವಯವಿರುವುದು. 'ಸಾಮಾನ್ಯಾತ್' (೩.೨.೩೨) ಎಂಬ ಬ್ರಹ್ಮಸೂತ್ರದಿಂದಲೂ ಸಮನ್ವಯವನ್ನು ಕಾಣಬಹುದು.

ಭಾಷ್ಯ: *ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ ।*
ಏವಂ ಮುನೇರ್ವಿಜಾನತ ಆತ್ಮಾ ಭವತಿ ಗೌತಮ! (ಕಠ. ಉ. ೪.೧.೫)
'ನಿರಂಜನಃ ಪರಮಂ ಸಾಮ್ಯಮುಪೈತಿ' (ಮು.ಉ. ೩.೧.೩) ಇತ್ಯಾದ್ಯಾಃ।

ಅನುವಾದ: 'ಹೇಗೆ ಶುದ್ಧವಾದ ನೀರಿನಲ್ಲಿ ಚೆಲ್ಲಿದ ಶುದ್ಧ ನೀರು ಅದರಂತೆ ಆಗುವುದೋ ಹಾಗೆಯೇ ಗೌತಮ, ಅರಿತಿರುವ ಮುನಿಯ ಆತ್ಮವೂ ಆಗುವುದು'. 'ನಿರಂಜನನಾಗಿ ಸರ್ವೋತ್ತಮವಾದ ಸಮತ್ವವನ್ನು ಪಡೆಯುವನು' ಮುಂತಾದುವು.

ಭಾಷ್ಯ: *ಸ್ಮೃತಯಶ್ಚ–*
ಜ್ಯೋತಿರಾತ್ಮನಿ ನಾನ್ಯತ್ರ ಸರ್ವಭೂತೇಷು ತತ್ಸಮಮ್ ।
ಸ್ವಯಂ ಚ ಶಕ್ಯತೇ ದ್ರಷ್ಟುಂ ಸುಸಮಾಹಿತಚೇತಸಾ ॥
ಯಾವಾನಾತ್ಮವಿ ಬೋಧಾತ್ಮಾ ತಾವಾನಾತ್ಮಾ ಪರಾತ್ಮನಿ ।
ಯ ಏವಂ ಸತತಂ ವೇದ ಜನಸ್ಥೋಽಪಿ ನ ಮುಹ್ಯತಿ ॥
ಇತ್ಯಾದ್ಯಾಃ ಉಕ್ತಶ್ರುತೌ ಮೋಕ್ಷದಶಾಯಾಮಪಿ ಭೇದಘಟಿತ ಸಾಮ್ಯ–
ಅವೈಧರ್ಮ್ಯ–ಅಭೇದಪರತ್ವಂ ಚಾಸ್ಮನ್ಮತೇ 'ವಿಷ್ಣುರಹಂ'
'ಶಿವೋಹಂ' ಇತ್ಯಾದಿ ವಾಕ್ಯಾನಾಂ ಮಂತವ್ಯಮ್, ನ ತು,
'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ' ಇತ್ಯಾದಿವಾಕ್ಯಾನಾಮಪಿ ।

ಅನುವಾದ: ಜ್ಯೋತಿಯು ಆತ್ಮನಲ್ಲಿ, ಬೇರೆ ಕಡೆ ಇಲ್ಲ. ಎಲ್ಲ ಭೂತಗಳಲ್ಲಿಯೂ ಅದು ಸಮವಾಗಿರುತ್ತದೆ. ದೃಢವಾದ ಮನಸ್ಸಿನಿಂದ ತನ್ನನ್ನು ತಾನೇ ಕಾಣಲು ಸಾಧ್ಯ. ಆತ್ಮನಲ್ಲಿ ಎಷ್ಟು ಬೋಧರೂಪತೆಗಳಿವೆಯೋ ಅಷ್ಟೇ ಬೋಧರೂಪತೆಗಳು ಪರಾತ್ಮನಲ್ಲಿಯೂ ಇವೆ. ಯಾರು ಯಾವಾಗಲೂ ಇದನ್ನು ತಿಳಿಯಬಲ್ಲರೋ ಅವನು ಜನಗಳ ನಡುವೆ ಇದ್ದರೂ ಮೋಹಕ್ಕೆ ಗುರಿಯಾಗಲಾರ.

ಹೀಗೆ ಮೇಲೆ ಹೇಳಿದ ಶ್ರುತಿಗಳಲ್ಲಿ ಮೋಕ್ಷದ ಸ್ಥಿತಿಯಲ್ಲಿಯೂ ಭೇದದಿಂದ ಉಂಟಾದ ಸಮಾನತೆಯ ಮಾತಿನಿಂದ ಸ್ವರೂಪ ಭೇದವೂ ಆತ್ಮಗಳಲ್ಲಿ ಉಂಟು ಎಂಬುದು ಸಿದ್ಧವಾಗುತ್ತದೆ. ನಮ್ಮ ದೃಷ್ಟಿಯಲ್ಲಿ 'ನಾನು ವಿಷ್ಣು', 'ನಾನು ಶಿವ' ಇತ್ಯಾದಿ 'ಅವೈಧರ್ಮ್ಯದ ಕಾರಣ ಅಭೇದದ ಪರವಾಗಿರುವುದು' ಎಂದು ತಿಳಿಯಬೇಕು. ಆದರೆ ಅವೈಧರ್ಮ್ಯದಿಂದ ಅಭೇದವು 'ತತ್ತ್ವಮಸಿ', 'ಅಹ್ಮಂಬ್ರಹ್ಮಾಸ್ಮಿ' ಇತ್ಯಾದಿ ವಾಕ್ಯಗಳಲ್ಲಿಲ್ಲ.

ವಿವರಣೆ: 'ಅವೈಧರ್ಮ್ಯದಿಂದ ಅಭೇದ' ಎಂದರೆ 'ಸಂಪೂರ್ಣವಾದ ಏಕತೆ' ಎಂದರ್ಥ.

ಭಾಷ್ಯ: *ತತ್ರ ಸಾಂಖ್ಯಮತೇ ಪ್ರಲಯಕಾಲೀನಸ್ಯ ಪೂರ್ಣಾತ್ಮನ ಏವ*
ತದಾದಿಪದಾರ್ಥತಯಾ 'ನಿತ್ಯಶುದ್ಧಮುಕ್ತಸ್ತ್ವಂ ಅಸಿ' ಇತ್ಯಾದಿ
ಯಥಾಶ್ರುತಸ್ಯ ತಾದೃಶವಾಕ್ಯಾರ್ಥತ್ವಾತ್ । ಯದಿ ತು ಸರ್ಗಾದುತ್ಪನ್ನ–

ಪುರುಷೋ ನಾರಾಯಣಾಖ್ಯ ಏವ ತತ್ಪದಾರ್ಥಸ್ತದಾ 'ತತ್ತ್ವಮಸಿ' ಇತ್ಯಾದಿವಾಕ್ಯಾನಾಂ ಅಪಿ ಅವೈಧರ್ಮ್ಯಾರ್ಥಕತಾ ಏವ ಅಸ್ತು. ।

ಅನುವಾದ: ಸಾಂಖ್ಯರ ಅಭಿಪ್ರಾಯದಲ್ಲಿ ಪ್ರಲಯಕಾಲದ ಪೂರ್ಣಾತ್ಮನೇ 'ತತ್'. ಆದಿ ಪದಾರ್ಥವಾದರೆ 'ನೀನು ನಿತ್ಯ ಶುದ್ಧ ಮುಕ್ತನಾಗಿರುವೆ' ಎಂದು ಶ್ರುತಿಗನುಗುಣವಾಗಿ ಅಂತಹ ವಾಕ್ಯದ ಅರ್ಥವಾಗುವುದು. ಒಂದು ವೇಳೆ ಸೃಷ್ಟಿಯಲ್ಲಿ ಉತ್ಪನ್ನವಾದ ಪುರುಷನೇ ನಾರಾಯಣನೆಂಬ ಹೆಸರಿನಲ್ಲಿ ಇದ್ದಲ್ಲಿ ಆ ಪದದ ಅರ್ಥ ಆಗ 'ತತ್ತ್ವಮಸಿ' ಇತ್ಯಾದಿ ವಾಕ್ಯಗಳಿಗೂ ಅವೈಧರ್ಮ್ಯದ ಅರ್ಥವೇ ಆಗಬಹುದು.

ವಿವರಣೆ: ಸೃಷ್ಟಿಯ ಆದಿಯಲ್ಲಿ ಇರುವ ಪುರುಷನನ್ನು ನಾರಾಯಣ ಎನ್ನುವಿರಾದರೆ 'ತತ್ತ್ವಮಸಿ', 'ಆ ಧರ್ಮಗಳನ್ನೊಳಗೊಂಡವನು ನೀನೇ' ಎನ್ನಬಹುದು.

ಭಾಷ್ಯ: *ನನು ಪ್ರಯೋಜನಾಭಾವಾನ್ನ ಭೇದಪರತ್ವಂ ಶ್ರುತೀನಾಂ ಸಂಭವತೀತಿ ಚೇತ್ ನ–*

ಅನುವಾದ: ಶ್ರುತಿವಾಕ್ಯಗಳಿಗೆ ಭೇದಪರವಾಗಿ ಇರುವುದು ಪ್ರಯೋಜನವಾಗದಿರುವುದು ಸಂಭವಿಸಿದರೆ–

ಭಾಷ್ಯ: *ನೇತಿ ಮೋಕ್ಷೋಪಪಾದನಸ್ಯೈವ ಪ್ರಯೋಜನತ್ವಾತ್ । ಸೃಷ್ಟಿ ಸಂಹಾರಯೋಃ ಪ್ರವಾಹರೂಪೇಣ ಅನುಚ್ಛೇದಾತ್ ತಸ್ಯೈಕ್ಯೇ ಮೋಕ್ಷಾನುಪಪತ್ತಿಃ ।*

ಅನುವಾದ: ಹಾಗಲ್ಲ. ಅದರ ಪ್ರಯೋಜನವು ಮೋಕ್ಷವನ್ನು ಪಡೆಯುವುದರಲ್ಲಿ ಅಡಗಿರುತ್ತದೆ. ಪ್ರವಾಹ ರೂಪದಲ್ಲಿರುವ ಸೃಷ್ಟಿ ಸಂಹಾರಗಳು ನಡುವೆ ನಿಲ್ಲದ ಕಾರಣ ಆತ್ಮವನ್ನು ಒಂದೇ ಎಂದು ಭಾವಿಸಿದಲ್ಲಿ ಮೋಕ್ಷವು ದೊರೆಯುವ ಬಗೆಯನ್ನು ಹೇಳಲಾರವು.

ಭಾಷ್ಯ: *ಅರ್ಥೈವಂ ಆತ್ಮಭೇದಸ್ಯ ಲೋಕಸಿದ್ಧತಯಾ ನ ತತ್ಪರತ್ವಂ ಶ್ರುತೀನಾಂ ಘಟತೇ ಇತಿ ।*

ಅನುವಾದ: ಹೀಗೆ ಭಾವಿಸಿದಲ್ಲಿ ಆತ್ಮಭೇದವು ಲೋಕಸಿದ್ಧವಾದುದರಿಂದ ಅದನ್ನು ಹೇಳಲು ಅಗತ್ಯವಿಲ್ಲ. ಆದ್ದರಿಂದ ಶ್ರುತಿ ವಚನಗಳು ಭೇದಪರವಾಗಿರುವುದು ಸರಿಯಲ್ಲ.

ಭಾಷ್ಯ: *ಮೈವಮ್ । ಲಾಘವತರ್ಕೇಣಾಕಾಶವದಾತ್ಮನ್ಯೇಕತ್ವಸ್ಯ ಅನುಮಾನತಃ ಪ್ರಸಕ್ತಸ್ಯ ಶ್ರುತ್ಯಾದಿಭಿರ್ನಿಷೇಧಾತ್ । ಸ್ವಪರ– ಚೈತನ್ಯಯೋರ್ಭೇದಸ್ಯ ಚಾಪ್ರತ್ಯಕ್ಷತ್ವಾತ್, ದೇಹಾದಿಷ್ವೇವ ಅನುಭವಾತ್ । 'ಯ ಏತಸ್ಮಿನ್ನುದರಮಂತರಂ ಕುರುತೇ ತಸ್ಯ ಭಯಂ ಭವತಿ' ಇತಿ (ತೈ.೨.೭.) ಆದಿಭೇದನಿಂದಾ ತು ವೈಧರ್ಮ್ಯವಿಭಾಗ । ಅನ್ಯತರಲಕ್ಷಣಭೇದಪರಾ ಇತಿ ।*

ಅನುವಾದ: ಹಾಗಲ್ಲ. ಸುಲಭವಾದ ತರ್ಕದಿಂದ ಆಕಾಶದಂತೆ ಆತ್ಮ ಎಂದು ಅನುಮಾನದಿಂದ ಪ್ರಸಕ್ತವಾದ ಆತ್ಮನು ಒಂದೇ ಎಂಬುದನ್ನು ಶ್ರುತ್ಯಾದಿಗಳಿಂದ ನಿಷೇಧ ಮಾಡಿದೆ. ಸ್ವಪರ ಚೈತನ್ಯಗಳ ಭೇದಗಳು ಅಪ್ರತ್ಯಕ್ಷವಾದ್ದರಿಂದಲೂ ದೇಹಾದಿಗಳಲ್ಲಿ ಮಾತ್ರ ಅನುಭವದಿಂದಲೂ (ತೋರುತ್ತವೆ). 'ಯಾರು ಸ್ವಲ್ಪವಾದರೂ ಪರಮಾತ್ಮನಿಂದ ದೂರವಿರುವನೋ ಅವನಿಗೆ (ಜನ್ಮಮೃತ್ಯು ರೂಪದ) ಭಯವುಂಟಾಗುವುದು'.

ಇದೇ ಮೊದಲಾದ ಭೇದ ನಿಂದೆಯು ವೈಧರ್ಮ್ಯ ಮತ್ತು ವಿಭಾಗ ಎರಡರಿಂದಲೂ ಭಿನ್ನವಾದ ಲಕ್ಷಣದ ಭೇದವನ್ನು ಕುರಿತದ್ದಾಗಿದೆ.

ವಿವರಣೆ: 'ಉದರಂ' ಎಂಬ ಪದವನ್ನು ಉತ್ (ಅಪಿ) ಅರಂ ಎಂದು ಶಾಂಕರ ಭಾಷ್ಯದಲ್ಲಿ ಪದವಿಭಾಗ ಮಾಡಲಾಗಿದೆ, ಎಂದರೆ (ಅಲ್ಪಮಪಿ) 'ಸ್ವಲ್ಪವಾದರೂ' ಎಂದರ್ಥ ಮಾಡಿದ್ದಾರೆ.

ಭಾಷ್ಯ: *ನನ್ವೇವಂ ಮುಕ್ತಾನಾಂ ಪ್ರತಿಬಿಂಬಾವಚ್ಛೇದಶ್ರುತೀನಾಂ ಕಾ ಗತಿಃ?*

ಅನುವಾದ: ಹೀಗೆ ಮುಕ್ತರ ಪ್ರತಿಬಿಂಬ, ಅವಚ್ಛೇದಶ್ರುತಿಗಳ ಗತಿಯೇನು?

ಭಾಷ್ಯ: *ಉಚ್ಯತೇ । ಅನೇಕ ತೇಜೋಮಯಾದಿತ್ಯ ಮಂಡಲವತ್ ಅನೇಕ ಆತ್ಮಮಯಮಪಿ ಚಿದದಾದಿತ್ಯಮಂಡಲಂ, ಏಕರಸಂ, ಅವಿಭಕ್ತಂ ಪಿಂಡೀಕೃತ್ಯ ತಸ್ಯ ಕಿರಣವತ್ ಸ್ವಾಂಶಭೂತೈಃ ಅಸಂಖ್ಯೈಃ ಪುರುಷೈಃ ಅಸಂಖ್ಯೋಪಾಧಿಷು ಅಸಂಖ್ಯವಿಭಾಗ ಏವ ಪ್ರತಿಬಿಂಬಾದಿ ದೃಷ್ಟಾಂತೈಃ ಪ್ರತಿಪಾದ್ಯತೇ ವಿಭಾಗ –। ಲಕ್ಷಣಾನ್ಯತ್ವಸ್ಯ ವಾಚಾರಂಭಣ ಮಾತ್ರತ್ವಂ ಬೋಧಯಿತುಂ, ನ ಪುನರಖಂಡತ್ವಮ್ । 'ವಾಯುರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ' । (ಕ.ಉ. ೧.೫.೧೦) ಇತ್ಯಾದಿ ಸಾಂಶದೃಷ್ಟಾಂತ ಶ್ರುತೀನಾಂ ನ್ಯಾಯಾನುಗ್ರಹೇಣ ಬಲವತ್ತ್ವಾದಿತಿ । ಯಥಾ ಚ ಸ್ಮರ್ಯತೇ । 'ಯಸ್ಯ ಸರ್ವಾತ್ಮಕತ್ವೇಽಪಿ ಖಂಡ್ಯತೇ ನೈಕಪಿಂಡಿತಾ' ಇತಿ ।*

ಅನುವಾದ: (ಉತ್ತರವನ್ನು) ಹೇಳುತ್ತೇವೆ. ಅನೇಕ ತೇಜೋಮಯವಾದ ಆದಿತ್ಯ ಮಂಡಲದಂತೆ ಚಿದಾದಿತ್ಯ ಮಂಡಲವು ಅನೇಕಾತ್ಮಮಯವಾಗಿದ್ದರೂ ಏಕರಸ ಮತ್ತು ಅವಿಭಕ್ತ ರೂಪದಲ್ಲಿ ಒಂದೇ ಪಿಂಡವಾಗಿ, ಸೂರ್ಯನ ಕಿರಣಗಳಂತೆ ತನ್ನ ಅಂಶಭೂತವಾದ ಅಸಂಖ್ಯ ಪುರುಷಗಳಾಗಿ ಅಸಂಖ್ಯ ಉಪಾಧಿಗಳಲ್ಲಿ ಅಸಂಖ್ಯ ವಿಭಾಗಗಳಾಗಿ ಇರುವಂತೆ ಪ್ರತಿಬಿಂಬಾದಿ ದೃಷ್ಟಾಂತಗಳಿಂದ ಪ್ರತಿಪಾದಿಸಲ್ಪಡುತ್ತದೆ. ವಿಭಾಗಲಕ್ಷಣವಾದ ಅನ್ಯತ್ವವನ್ನು ಹೇಳಿರುವುದು ಕೇವಲ ಮಾತಿನ ಬೆಸುಗೆಯಷ್ಟೆ, ಅಖಂಡತ್ವವನ್ನು ತಿಳಿಸಲಲ್ಲ.

'ಹೇಗೆ ವಾಯುವು ಜಗತ್ತನ್ನು ಪ್ರವೇಶಿಸಿ ಒಂದೊಂದು ರೂಪಕ್ಕೂ ಪ್ರತಿರೂಪ ವಾಗುತ್ತದೆ ಹಾಗೆ' (ಕ.ಉ. ೧.೫.೧೫) ಮುಂತಾದ ಶ್ರುತಿಗಳು ಅಂಶಗಳ

ದೃಷ್ಟಾಂತಗಳಿಂದ ತಾರ್ಕಿಕವಾಗಿ ಬಲವತ್ತರವಾಗಿವೆ. ಸ್ಮೃತಿಯಲ್ಲಿಯೂ ಹೇಳಿದೆ– 'ಸರ್ವಾತ್ಮಕವಾದರೂ ಯಾವುದರ ಪಿಂಡಭಾವವು ಖಂಡಿತವಾಗದೋ' ಎಂದು.

ಭಾಷ್ಯ: *ಬ್ರಹ್ಮಮೀಮಾಂಸಾಯಾಂ ತು ನಿತ್ಯಾಭಿವ್ಯಕ್ತೇ ಪರಮೇಶ್ವರ–ಚೈತನ್ಯೇ ಅನ್ಯೇಷಾಂ ಲಯರೂಪಾವಿಭಾಗೇನ ಅಪಿ ಅದ್ವೈತಂ ಉಕ್ತಮ್, 'ಅವಿಭಾಗೋ ವಚನಾದಿ'ತಿ (ಅ.೪.ಆ.೨.ಸೂ.೧೬) ಸೂತ್ರೇಣ ಇತಿ । ಅಧಿಕಂತು ಬ್ರಹ್ಮಸೂತ್ರಭಾಷ್ಯೇ (೪.೨.೪) ಪ್ರೋಕ್ತಮಸ್ಮಾಭಿಃ ಇತಿ ದಿಕ್ ।*

ಅನುವಾದ: ಬ್ರಹ್ಮಮೀಮಾಂಸದಲ್ಲಿ 'ಅವಿಭಾಗೋ ವಚನಾತ್ (೪.೨.೧೬) ಸೂತ್ರದ ಮೂಲಕ ನಿತ್ಯ ಅಭಿವ್ಯಕ್ತನಾದ ಪರಮೇಶ್ವರ ಚೈತನ್ಯನಲ್ಲಿ ಅನೇಕ ಲಯರೂಪವಿಭಾಗ ದಿಂದ ಅದ್ವೈತವನ್ನು ಹೇಳಲಾಗಿದೆ. ಇದಕ್ಕೆ ಸಂಬಂಧಿಸಿದ ಹೆಚ್ಚು ವಿಚಾರಗಳನ್ನು ನಾವು ಬ್ರಹ್ಮಮೀಮಾಂಸಾ ಭಾಷ್ಯದಲ್ಲಿ ಹೇಳಿದ್ದೇವೆ, ಇಲ್ಲಿಗೆ ಸಾಕು.

ಭಾಷ್ಯ: *ಸೂತ್ರಸ್ಯ ದ್ವಿತೀಯ ವ್ಯಾಖ್ಯಾಯಾಂ ತ್ವಯಂ ಭಾವಃ । ಪ್ರಲಯ–ಕಾಲೇ ಪುರುಷವಿಜಾತೀಯಂ ಸರ್ವಮೇವ ಅಸತ್, ಅರ್ಥಕ್ರಿಯಾ–ಕಾಂತ್ವಾಭಾವಾತ್ । ಪುರುಷಾಣಾಂ ಕೂಟಸ್ಥತ್ವೇನ ಅರ್ಥಕ್ರಿಯೈವ ಅಪ್ರಸಿದ್ಧಾ ಇತಿ । ಅತಃ ಸರ್ಗಕಾಲೇ ಇವ ಪ್ರಲಯೇऽಪಿ ಸತ್ತ್ವಮ್ । ಅತಸ್ತದಾತ್ಮನಾಂ ವಿಜಾತೀಯದ್ವೈತರಾಹಿತ್ಯಮ್ । ತಥಾ ಸರ್ಗಕಾಲೇऽಪಿ ಕೂಟಸ್ಥಸ್ವರೂಪ ಪಾರಮಾರ್ಥಿಕಸತ್ತ್ವಂ ನಾನ್ಯತ್ರೇತಿ ವಿಜಾತೀಯ ದ್ವೈತರಾಹಿತ್ಯಾತ್ ಸರ್ಗಕಾಲೀನಾದ್ವೈತಶ್ರುತಯೋ ಅಪಿ ಉಪಪನ್ನಾ । ಇತಿ ।*

ಅನುವಾದ: ಸೂತ್ರದ ಎರಡನೆಯ ವ್ಯಾಖ್ಯೆಯ ಭಾವ ಹೀಗಿದೆ– ಪ್ರಲಯಕಾಲದಲ್ಲಿ ಪುರುಷನಿಗೆ ವಿಜಾತೀಯವಾದುದೆಲ್ಲ ಅಸತ್ ಏಕೆಂದರೆ ಎಲ್ಲವೂ ಆಗ ಅರ್ಥ ಕ್ರಿಯೆಗಳಿಂದ ಕೂಡಿರುವುದಿಲ್ಲ. ಪುರುಷರು ನಿತ್ಯವಾದ್ದರಿಂದ ಅರ್ಥಕ್ರಿಯಾಕಾರಿತ್ವವು ಸಿದ್ಧವಾಗಿಲ್ಲವೆಂಬುದು ತಿಳಿದದ್ದೆ. ಆದ್ದರಿಂದ ಸರ್ಗಕಾಲದಲ್ಲಿರುವಂತೆ ಪ್ರಲಯದಲ್ಲಿಯೂ ಸತ್ತ್ವವು ಇರುತ್ತದೆ. ಆದ್ದರಿಂದ ಆ ಆತ್ಮಗಳಲ್ಲಿ ವಿಜಾತೀಯವಾದ ದ್ವೈತವು ಇರದು. ಹಾಗೆಯೇ ಸೃಷ್ಟಿಕಾಲದ ಕೂಟಸ್ಥಸ್ವರೂಪದ ಪಾರಮಾರ್ಥಿಕ ಸತ್ತ್ವವು ಬೇರೆಯೆಡೆ ಇರದು. ಏಕೆಂದರೆ ವಿಜಾತೀಯ ದ್ವೈತವು ಇರದ ಕಾರಣ ಸರ್ಗಕಾಲದ ಅದ್ವೈತ ಪ್ರತಿಪಾದಕ ಶ್ರುತಿಗಳು ದೊರೆಯುತ್ತವೆ.

ವಿವರಣೆ: ವೇದಾಂತಿಗಳು ಆತ್ಮೈಕ್ಯವನ್ನು ಪ್ರತಿಪಾದಿಸುವ ಶ್ರುತಿವಾಕ್ಯಗಳ ಉಲ್ಲೇಖ ಮಾಡಿರುವುದನ್ನು ಸಾಂಖ್ಯರು ಒಪ್ಪಿದರೂ ಅವುಗಳಲ್ಲಿ ಹೇಳಿರುವ ಆತ್ಮ ಸಮಾನ ರೂಪವಾಗಿರುವುವು ಎಂದರೆ, 'ವಿಜಾತೀಯ ದ್ವೈತರಾಹಿತ್ಯ ಅಥವಾ ಒಂದೇ ಜಾತಿಯದಾಗಿರುವುವು ಎಂದು ಸಾಂಖ್ಯರ ಅಭಿಪ್ರಾಯ'.

ಭಾಷ್ಯ: ನ ಸ್ವಾತ್ಮನ ಏಕತ್ವವದೇಕರೂಪತ್ವಮಪಿ ನಾನಾರೂಪತಾ ಪ್ರತ್ಯಕ್ಷೇಣ ವಿರುದ್ಧಮ್, ತತ್ಕಥಮುಕ್ತಂ ಜಾತಿ–। ಪರತ್ವಾದಿತಿತತ್ರಾಹ

ಅನುವಾದ: ಆತ್ಮನ ಏಕತ್ವಕ್ಕೆ ಸಮಾನರೂಪತ್ವವೂ ನಾನಾ ರೂಪಗಳು ಪ್ರತ್ಯಕ್ಷವಾಗುವುದರಿಂದ ವಿರುದ್ಧವಾಗುವುದಿಲ್ಲವೆ. ಹೀಗಿರುವಾಗ 'ಜಾತಿಪರತ್ವಾತ್' ಎಂದು ಹೇಗೆ ಹೇಳುವಿರಿ? ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ವಿದಿತಬಂಧಕಾರಣಸ್ಯ ದೃಷ್ಟ್ಯಾತದ್ರೂಪಮ್ ॥ ೧೫೫ ॥

ಸೂತ್ರಾನುವಾದ: ಬಂಧದ ಕಾರಣವನ್ನು ತಿಳಿದವನ ದೃಷ್ಟಿಯಿಂದ ಒಂದೇ ಬಗೆಯ ರೂಪವಿರದು.

ವಿವರಣೆ: ಅನಿರುದ್ಧನು ಈ ಸೂತ್ರದಲ್ಲಿ 'ಅತದ್ರೂಪಂ' ಎಂಬುದಕ್ಕೆ ಬದಲಾಗಿ 'ತದ್ರೂಪಂ' ಎಂಬ ಪಾಠವನ್ನು ತೆಗೆದುಕೊಂಡಿದ್ದಾನೆ. ಅವನ ಅಭಿಪ್ರಾಯದಲ್ಲಿ, 'ತಸ್ಯ ದೃಷ್ಟ್ಯಾ ವಿವೇಕಜ್ಞಾನೇನ ತದ್ರೂಪಂ ಕೈವಲ್ಯ ಜ್ಞಾನಮ್' ಎಂದರ್ಥ.

ಭಾಷ್ಯ: *ವಿದಿತಂ ಸ್ಪಷ್ಟಂ ಬಂಧಕಾರಣಮವಿವೇಕೋ ಯತ್ರ ತಸ್ಯ ದೃಷ್ಟ್ಯೈವ ಪುರುಷೇಷು ಅತದ್ರೂಪಂ ರೂಪಭೇದಃ ಇತ್ಯರ್ಥಃ । ಅತಃ ಭ್ರಾಂತದೃಷ್ಟ್ಯಾಂತ ನ ರೂಪಭೇದಸಿದ್ಧಿರಿತಿ ।*

ಅನುವಾದ: ವಿದಿತ ಎಂದರೆ ಸ್ಪಷ್ಟವಾಗಿದೆ; ಬಂಧಕ್ಕೆ ಕಾರಣ ಅವಿವೇಕವಾದೆಡೆ ಅವನ ದೃಷ್ಟಿಯಲ್ಲಿ ಪುರುಷರಲ್ಲಿ ಭಿನ್ನ ರೂಪಗಳು ತೋರಬಹುದು. ಆದ್ದರಿಂದ ಭ್ರಾಂತದೃಷ್ಟಿಯ ಕಾರಣ ರೂಪಭೇದವು ಕಾಣುವುದಿಲ್ಲ.

ಭಾಷ್ಯ: *ನನು ತಥಾಪಿ ಅನುಪಲಂಭಾತ್ ಏಕರೂಪತ್ವಾಭಾವಃ ಸೇತ್ಸ್ಯತಿ । ತತ್ರಾಹ–*

ಅನುವಾದ: ಹಾಗಿದ್ದರೂ ಹಾಗೆ ತೋರದ ಕಾರಣ ಏಕರೂಪವು ಸಿದ್ಧಿಸದು; ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ನಾಂಧಾದೃಷ್ಟ್ಯಾ ಚಕ್ಷುಷ್ಮತಾಂ ಅನುಪಲಂಭಃ ॥ ೧೫೬ ॥

ಸೂತ್ರಾನುವಾದ: ಕುರುಡನ ದೃಷ್ಟಿಯಿಂದ ನೋಡದಿರುವ ಕಣ್ಣುಗಳಿಗೆ ಅದು ದೊರೆಯದೆಂದು ಹೇಳಲಾಗದು.

ಭಾಷ್ಯ: *ಅನುಪಲಂಭ ಏವ ಅಸಿದ್ಧಃ । ಅಜ್ಞೈಃ ಅದರ್ಶನೇಽಪಿ ಜ್ಞಾನಿಭಿರೇಕರೂಪತ್ವಸ್ಯ ದರ್ಶನಾದಿತ್ಯರ್ಥಃ ।*

ಅನುವಾದ: ಅನುಪಲಬ್ಧಿ ಎಂಬುದು ಅಸಿದ್ಧವೇ ಅಜ್ಞರಿಗೆ ಆತ್ಮದರ್ಶನವಾಗದಿದ್ದರೂ ಜ್ಞಾನಿಗಳಿಗೆ ಅದರ ಏಕತೆಯ ದರ್ಶನವಾಗಿರುತ್ತದೆ.

ಭಾಷ್ಯ: *ಅದ್ವೈತಶ್ರುತ್ಯನನುಪತ್ತಿಂ ಸಮಾಧಾಯ ಅಖಂಡಾದ್ವೈತೇ ಬಾಧಕಾಂತರಮಾಹ–*

ಅನುವಾದ: ಅದ್ವೈತಶ್ರುತಿಯ ಅನುಪಪತ್ತಿಯ ಸಮಾಧಾನ ಹೇಳಿ ಅಖಂಡಾದ್ವೈತವನ್ನು ಸ್ವೀಕರಿಸಲು ಇರುವ ಬಾಧಕವನ್ನು ಹೇಳಿದ್ದಾರೆ.

ಸೂತ್ರ: ವಾಮದೇವಾದಿರ್ಮುಕ್ತೋ ನಾದ್ವೈತಮ್ ॥ ೧೫೭ ॥

ಸೂತ್ರಾರ್ಥ: ವಾಮದೇವಾದಿ (ಆತ್ಮಜ್ಞರಾದ ಋಷಿಗಳು) ಮುಕ್ತಿಯನ್ನು ಪಡೆದರು (ಇತರರಲ್ಲ). ಆದ್ದರಿಂದ ಆತ್ಮಗಳು ಹಲವು ಅದ್ವೈತವಲ್ಲ.

ಭಾಷ್ಯ: *ವಾಮದೇವಾದಿರ್ಮುಕ್ತೋಽಸ್ತೀತಿ, ತಥಾಪೀದಾನೀಂ ಬಂಧಃ ಸ್ವಸ್ಮಿನ್ನನುಭವ ಸಿದ್ಧಃ । ಅತೋ ನಾಖಂಡಾತ್ಮಾಽದ್ವೈತಮಿತ್ಯರ್ಥ*

ಅನುವಾದ: ವಾಮದೇವಾದಿಗಳು ಮುಕ್ತರಾದರು. ಆದರೆ ಈಗ ಇರುವ ಬಂಧ ಎಲ್ಲರಿಗೂ ತಿಳಿದದ್ದೆ. ಆದ್ದರಿಂದ ಅಖಂಡಾತ್ಮ ಅಥವಾ ಅದ್ವೈತವಿಲ್ಲ.

ಭಾಷ್ಯ: *'ಸ ಚಾಪಿ ಜಾತಿಸ್ಮರಣಾಪ್ತಬೋಧಃ ತತ್ರೈವ ಜನ್ಮನ್ಯಪವರ್ಗಮಾಪ । ಇತ್ಯಾದಿ ವಾಕ್ಯಶತವಿರೋಧಶ್ಚೇತಿ ಶೇಷಃ । ನ ಚೈವಂ ಬಂಧ-ಮೋಕ್ಷಾವುಪಾಧೇರೇವೇತ್ಯವಂಗಂತವ್ಯಮ್, ಶ್ರುತಿ ಸ್ಮೃತಿಸಿದ್ಧಾಂತ-ವಿರೋಧಾತ್ । ದುಃಖಂ ಮಾ ಭುಂಜೀಯೇತಿ ಕಾಮನಾದರ್ಶನೇನ ಪುರುಷಮೋಕ್ಷಸ್ಯೈವ ಮೋಕ್ಷಾಖ್ಯಪರಮಪುರುಷಾರ್ಥತ್ವಾಚ್ಚ । ಉಪಾಧೇರ್ದುಃಖಹಾನಸ್ಯ ಚ ತಾದರ್ಥ್ಯೇನ ಪರಂಪರಯೈವ ಪುರುಷಾರ್ಥತ್ವಾತ್ ಪುತ್ರಾದಿವದಿತಿ ।*

ಅನುವಾದ: ಹಾಗಿಲ್ಲದಿದ್ದಲ್ಲಿ, 'ಅವನೂ ಸಹ ಜಾತಿ ಸ್ಮರಣೆಯಿಂದ ಜ್ಞಾನವನ್ನು ಪಡೆದನು. ಅದೇ ಜನ್ಮದಲ್ಲಿ ಮೋಕ್ಷವನ್ನು ಪಡೆದನು'. ಇಂತಹ ನೂರಾರು ವಾಕ್ಯಗಳಿಂದ ವಿರೋಧವುಂಟಾಗುವುದು. ಅಲ್ಲದೆ ಬಂಧ, ಮೋಕ್ಷಗಳನ್ನು ಉಪಾಧಿಗಳೆಂದೂ ತಿಳಿಯಬಾರದು, ಏಕೆಂದರೆ ಶ್ರುತಿ-ಸ್ಮೃತಿ ಸಿದ್ಧಾಂತಗಳಿಗೆ ವಿರೋಧವಾಗಿ ಇರುವುದು. 'ನಾನು ದುಃಖವನ್ನು ಅನುಭವಿಸುವುದು ಬೇಡ' ಎಂಬ ಆಶೆ ಕಾಣಬರುವುದರಿಂದ ಪುರುಷನ ಮೋಕ್ಷವೊಂದೇ. ಏಕೆಂದರೆ ಮೋಕ್ಷವೆಂಬುದು ಪರಮ ಪುರುಷಾರ್ಥವಾಗಿದೆ. ಉಪಾಧಿಗಳ ದುಃಖವನ್ನು ಹೋಗಲಾಡಿಸುವುದು ಆತ್ಮಾರ್ಥವಾಗುವುದರಿಂದ ಪುತ್ರಾದಿಗಳಂತೆ ಪರಂಪರೆ ಯಿಂದಲೇ ಪುರುಷಾರ್ಥವೆಂದು ಕರೆಯಲ್ಪಡುತ್ತದೆ.

ಭಾಷ್ಯ: *ಯದಪಿ ಆಧುನಿಕೈರ್ಮಾಯಾವಾದಿಭಿಃ ಉಚ್ಯತೇ ಅದ್ವೈತ ಶ್ರುತಿವಿರೋಧಾತ್ ಬಂಧಮೋಕ್ಷ ಸೃಷ್ಟಿಸಂಹಾರಾದಿ ಶ್ರುತಯಃ ಬಾಧ್ಯಂತೇ ಇತಿ-*

ಅನುವಾದ: ಆಧುನಿಕ ಮಾಯಾವಾದಿಗಳು ಹೇಳುವಂತೆ ಅದ್ವೈತ- ಶ್ರುತಿಗೆ ವಿರೋಧ ದಿಂದ ಬಂಧ-ಮೋಕ್ಷ ಸೃಷ್ಟಿ ಸಂಹಾರ ಆದಿ ಶ್ರುತಿಗಳಿಗೆ ಬಾಂಧವುಂಟಾಗುತ್ತದೆ.

ಭಾಷ್ಯ: *ತದಪ್ಯಸತ್ । ಮೋಕ್ಷಾಖ್ಯಫಲಸ್ಯಾಪಿ ಶ್ರವಣಕಾಲೇ ಏವ ಅಭಾವನಿಶ್ಚಯೇ ಶ್ರವಣೋತ್ತರಂ ಮನನಾದಿ ವಿಧೇರನನುಷ್ಠಾನ-ಲಕ್ಷಣಾಪ್ರಾಮಾಣ್ಯಪ್ರಸಂಗಾತ್ । ಪ್ರಪಂಚಾಂತರ್ಗತಸ್ಯ*

ವೇದಾಂತಸ್ಯಾಪ್ಯದ್ವೈತ ಶ್ರುತ್ಯಾಬಾಧೇ ವೇದಾಂತಾವಗತೇಽಪ್ಯದ್ವೈತೇ ಪುನಃ ಸಂಶಯಾಪತ್ತೇಶ್ಚ । ಸ್ವಾಪ್ನವಾಕ್ಯಸ್ಯ ಜಾಗ್ರತಿ ಬಾಧೇ ತದ್ವಾಕ್ಯಾರ್ಥೇ ಪುನಃ ಸಂಶಯವತ್ ।

ಅನುವಾದ: ಅದೂ ಸರಿಯಲ್ಲ. ಶ್ರವಣ ಕಾಲದಲ್ಲಿಯೇ ಮೋಕ್ಷವೆಂಬ ಫಲವು ದೊರೆಯದಿರುವುದು ನಿಶ್ಚಯವಾಗಿರುವಾಗ ಶ್ರವಣದ ನಂತರ ಮನನವೇ ಮೊದಲಾದ ವಿಧಿಯನ್ನು ಆಚರಿಸದೆ ಇರುವ ಲಕ್ಷಣದ ಅಪ್ರಾಮಾಣ್ಯವು ಉಂಟಾಗುವುದು. ಅಲ್ಲದೆ ವೇದಾಂತವು ಪ್ರಪಂಚದಲ್ಲಿ ಅಂತರ್ಗತವಾಗಿರುವಾಗ ಅದರಿಂದ ಅದ್ವೈತ ಶ್ರುತಿಯಿಂದ ವೇದಾಂತಕ್ಕೆ ಬಾಧವಾಗಿರುವಾಗ ಆ ವೇದಾಂತ ದಿಂದ ತಿಳಿದು ಬರುವಾಗಲೂ ಅದ್ವೈತದಲ್ಲಿ ಮತ್ತೆ ಸಂಶಯವುಂಟಾಗಬಹುದು; ಹೇಗೆಂದರೆ ಸ್ವಪ್ನದಲ್ಲಾಡಿದ ಮಾತುಗಳ ಬಗ್ಗೆ ಎಚ್ಚರಗೊಂಡಾಗ ಬಾಧವು ಉಂಟಾಗಿ ಆ ವಾಕ್ಯಾರ್ಥದಲ್ಲಿ ಮತ್ತೆ ಸಂದೇಹ ಉಂಟಾಗುವಂತೆ.

ವಿವರಣೆ: ಶ್ರವಣ ಕಾಲದಲ್ಲಿಯೇ ಎಂದರೆ ಶಿಷ್ಯನು ಗುರುಗಳ ಮಾತುಗಳನ್ನು ಕೇಳುವಾಗಲೇ

ಭಾಷ್ಯ: *ಕಿಂಚ 'ಮಿಥ್ಯಾಬುದ್ಧಿರ್ನಾಸ್ತಿಕತಾ' ಇತಿ ಅನುಶಾಸನಾತ್ (ಅಮರಕೋಶ ೧.೪.೪) ಧರ್ಮಾದಿಷು ಸ್ವಾಪವನ್ಮಿಥ್ಯಾ ದೃಷ್ಟಯಃ ಬೌದ್ಧ ಪ್ರಭೇದಾ ಏವ ಸಾಂವೃತಿಕಶಬ್ದೇನ ಪ್ರಪಂಚಸ್ಯ ಅವಿದ್ಯಕತಾಯಾಶ್ಚ ತೈರಭ್ಯುಪಗಮಾತ್ ದಿಕ್ ।*

ಅನುವಾದ: ಅಲ್ಲದೆ 'ಮಿಥ್ಯೆಯಿಂದ ಕೂಡಿದ ಬುದ್ಧಿಯು ನಾಸ್ತಿಕತೆ' (ಅಮರ ೧.೪.೪) ಎಂಬ ಅನುಶಾಸನವನ್ನು ಗಮನಿಸಿ ಧರ್ಮಾದಿಗಳಲ್ಲಿ ಸ್ವಪ್ನದಂತೆ ಮಿಥ್ಯಾದೃಷ್ಟಿ ಯುಳ್ಳವರು ವಿಶೇಷವಾಗಿ ಬೌದ್ಧರಷ್ಟೆ. 'ಸಾಂವೃತಿಕ' ಶಬ್ದದಿಂದ ಪ್ರಪಂಚವು ಅವಿದ್ಯೆಯೆಂದು ಹೇಳಿದ್ದಾರೆ. ಹೀಗೆ ನಮ್ಮ ಮಂಡನೆ.

ವಿವರಣೆ: ಮಾಧ್ಯಮಿಕ (ಬೌದ್ಧರು) 'ಸಂವೃತಿ'ಯೆಂಬ ಪದವನ್ನು 'ಮೋಹದಿಂದ ಆವೃತವಾಗುವುದು' ಎಂಬ ಅರ್ಥದಲ್ಲಿ ಪ್ರಯೋಗಿಸುತ್ತಾರೆ. (ಮೋಹಃ ಸ್ವಭಾವಾವರಣಾದ್ಧಿ ಸಂವೃತಿಃ)

ಭಾಷ್ಯ: *ನನು ವಾಮದೇವಾದೇಃ ಅಪಿ ಪರಮ ಮೋಕ್ಷೋ ನ ಜಾತ ಇತ್ಯಭ್ಯುಪೇಯಮ್, ತತ್ರಾಹ–*

ಅನುವಾದ: ವಾಮದೇವಾದಿಗಳಿಗೆ ಪರಮಮೋಕ್ಷ ಉಂಟಾಗಲಿಲ್ಲ ಎಂದೇಕೆ ತಿಳಿಯಬಾರದು. ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ಅನಾದಾವದ್ಯಯಾವದಭಾವಾದ್ಭವಿಷ್ಯದಪ್ಯೇವಮ್ ॥ ೧೫೮ ॥

ಸೂತ್ರಾನುವಾದ: ಅನಾದಿ ಕಾಲದಿಂದ ಇಲ್ಲಿಯವರೆಗೆ (ಬಂಧವು) ಹೋಗಲಾಡಿಸಲ್ಪಟ್ಟಿಲ್ಲ. ಮುಂದೆಯೂ (ಬಂಧದಿಂದ) ಬಿಡುಗಡೆಯಿಲ್ಲ.

ಭಾಷ್ಯ: *ಅನಾದೌ ಕಾಲೇಽದ್ಯಯಾವಚ್ಚ ಉನ್ಮೋಕ್ಷೋ ನ ಜಾತಃ ಕಸ್ಯಾಪಿ ತರ್ಹಿ ಭವಿಷ್ಯತ್ಕಾಲೇಽಪಿ ಏವ ಮೋಕ್ಷಶೂನ್ಯ ಏವ ಸ್ಯಾತ್ । ಸಂಯಕ್ಸಾಧನಾನುಷ್ಠಾನಸ್ಯ ಅವಿಶೇಷಾತ್ ಇತ್ಯರ್ಥಃ । ತತ್ರ ಪ್ರಯೋಗಮಾಹ ।*

ಅನುವಾದ: ಅನಾದಿ ಕಾಲದಿಂದಲೂ ಇಲ್ಲಿಯವರೆಗೆ ಯಾರಿಗಾದರೂ ಮೋಕ್ಷ ಸಾಧನೆಯಾಗಿರದಿದ್ದಲ್ಲಿ ಭವಿಷತ್ಕಾಲದಲ್ಲಿಯೂ ಮೋಕ್ಷ ದೊರೆಯದಿರಬಹುದು. ಏಕೆಂದರೆ ಈ ಎರಡು ಕಾಲದಲ್ಲಿಯೂ ಸಂಯಕ್ ಸಾಧನೆಯ ಅನುಷ್ಠಾನದಲ್ಲಿ ಭೇದವಿಲ್ಲ. ಅದರ ಬಗ್ಗೆ ಹೀಗೆ ಹೇಳಿದೆ–

ವಿವರಣೆ: ಆತ್ಮಗಳು ಅನಂತವಾಗಿರುವುದರಿಂದಲೂ, ಅನಾದಿ ಕಾಲದಿಂದ ಅನಂತ ಕಾಲದವರೆಗೆ ಇರುವುದರಿಂದಲೂ ಜಗತ್ತಿನಿಂದ ಬೇರ್ಪಟ್ಟಿರಲಾರವು.

ಸೂತ್ರ: ಇದಾನೀಂ ಇವ ಸರ್ವತ್ರ ನಾತ್ಯಂತೋಚ್ಛೇದಃ ॥ ೧೫೯ ॥

ಸೂತ್ರಾರ್ಥ: ಈಗಿರುವಂತೆ ಎಲ್ಲ ಕಾಲದಲ್ಲೂ ಅತ್ಯಂತ ಉಚ್ಛೇದವು ಸಾಧ್ಯವಿಲ್ಲ.

ಭಾಷ್ಯ: *ಸರ್ವತ್ರ ಕಾಲೇ ಬಂಧಸ್ಯ ಅತ್ಯಂತೋಚ್ಛೇದಃ ಕಸ್ಯಾಪಿ ಪುಂಸಃ ನಾಸ್ತಿ ವರ್ತಮಾನ ಕಾಲವದಿತ್ಯನುಮಾನಂ ಸಂಭವೇದಿತ್ಯರ್ಥಃ।*

ಅನುವಾದ: ಯಾವುದೇ ಪುರುಷನಿಗಾಗಲಿ ಎಲ್ಲ ಕಾಲಕ್ಕೂ ಬಂಧದ ಸಂಪೂರ್ಣ ಬಿಡುಗಡೆ ಇರದು. ಈಗಿರುವಂತೆಯೇ ಇರುವುದು ಎಂಬುದನ್ನು ಅನುಮಾನದಿಂದ ತಿಳಿಯಬಹುದು.

ಭಾಷ್ಯ: *ಪುರುಷಾಣಾಂ ಯದೇಕರೂಪತ್ವಂ ಏಕತ್ವ ಪ್ರತಿಪಾದಕ ಶ್ರುತ್ಯರ್ಥಾವಧಾರಿತಂ, ತತ್ ಕಿಂ ಮೋಕ್ಷಕಾಲೇ, ಕಿಂ ಸರ್ವದಾ ಏವ ಇತಿ ಆಕಾಂಕ್ಷಾಯಾಂ ಆಹ ।*

ಅನುವಾದ: ಏಕರೂಪತೆಯನ್ನು ಪ್ರತಿಪಾದಿಸುವ ಶ್ರುತ್ಯರ್ಥವನ್ನು ಮನಗಂಡು ಪುರುಷರ ಏಕರೂಪತ್ವವು ಮೋಕ್ಷಕಾಲದಲ್ಲಿ ಉಂಟಾಗುವುದೋ ಅಥವಾ ಯಾವಾಗಲೂ ಇರುವುದೊ?

ಸೂತ್ರ: ವ್ಯಾವೃತ್ತೋಭಯರೂಪಃ ॥ ೧೬೦ ॥

ಸೂತ್ರಾನುವಾದ: ಉಭಯರೂಪಗಳಿಂದಲೂ ಬೇರೆಯಾದವನು (ಪುರುಷ)

ಭಾಷ್ಯ: *ಸ ಚ ಪುರುಷೋ ವ್ಯಾವೃತ್ತೋಭಯರೂಪೋ, ವ್ಯಾವೃತ್ತಃ ನಿವೃತ್ತಃ ರೂಪಭೇದಃ ಯಸ್ಮಾತ್ ತಥಾ ಇತ್ಯರ್ಥಃ । ಶ್ರುತಿಸ್ಮೃತಿನ್ಯಾಯೇಭ್ಯಃ ಸದೈಕರೂಪತಾಸಿದ್ಧೇರಿತಿ ಶೇಷಃ । ತದುಕ್ತಮ್ ।*

ಅನುವಾದ: ಆ ಪುರುಷನು ವ್ಯಾವೃತ್ತರೂಪನು, ಎಂದರೆ 'ರೂಪಭೇದಗಳಿಂದ ನಿವೃತ್ತನು'. ಶ್ರುತಿ–ಸ್ಮೃತಿಗೆ ಅನುಸಾರವಾಗಿ ಯಾವಾಗಲೂ ಏಕರೂಪತೆಯೇ ಸಿದ್ಧವಾಗಿರುವುದರಿಂದ ಎಂದು ಉಳಿದ ಭಾಗ.

ವಿವರಣೆ: 'ವ್ಯಾವೃತ್ತೋಭಯರೂಪಃ' ಎಂಬ ಪದವನ್ನು ಅನಿರುದ್ಧನು 'ವ್ಯಾವೃತ್ತೇ ಬದ್ಧತ್ವ–ಮುಕ್ತತ್ವರೂಪೇ ಯಸ್ಮಾತ್ ಸಃ' (ಬದ್ಧತ್ವ–ಮುಕ್ತತ್ವಗಳಿಂದ ಹೊರತಾದ) ಎಂದು ಅರ್ಥ ಮಾಡಿದ್ದಾನೆ.

ಭಾಷ್ಯ: *ಬಹುರೂಪ ಇವಾಭಾತಿ ಮಾಯಯಾ ಬಹುರೂಪಯಾ ।*
ರಮಮಾಣೋ ಗುಣೇಷ್ವಸ್ಯಾ ಮಮಾಹಮಿತಿ ಬಧ್ಯತೇ ।
ಜಗದಾಖ್ಯಮಹಾಸ್ವಪ್ನೇ ಸ್ವಪ್ನಾತ್ ಸ್ವಪ್ನಾಂತರಂ ವ್ರಜತ್ ।
ರೂಪಂ ತ್ಯಜತಿ ನೋ ಶಾಂತಂ ಬ್ರಹ್ಮಶಾಂತತ್ವ ಬೃಂಹಿತಮ್ ॥
(ಯೋಗವಾಸಿಷ್ಠ ೬.೭೨.೩.೪)

ಅನುವಾದ: ಅನೇಕ ರೂಪಗಳುಳ್ಳ ಮಾಯೆಯಿಂದ (ಪುರುಷನು) ಬಹುರೂಪವುಳ್ಳವನಾಗಿ ಕಾಣುತ್ತಾನೆ. ಮಾಯೆಯ ಗುಣಗಳಲ್ಲಿ ಆನಂದಪಡುತ್ತಾ 'ನನ್ನದು', 'ನಾನು' ಎಂದು ಮುಂತಾಗಿ ಬಂಧಿಸಲ್ಪಡುತ್ತಾನೆ. ಜಗತ್ತೆಂದು ಕರೆಯಲ್ಪಡುವ ಮಹಾಸ್ವಪ್ನದಲ್ಲಿ ಒಂದು ಸ್ವಪ್ನದಿಂದ ಮತ್ತೊಂದು ಸ್ವಪ್ನಕ್ಕೆ ಹೋಗುತ್ತಾ ಬ್ರಹ್ಮಶಾಂತಿಯು ತೋರುವಾಗ ಶಾಂತರೂಪವನ್ನು ಎಂದೂ ತ್ಯಜಿಸನು.

ಭಾಷ್ಯ: *ನನು ಸಾಕ್ಷಿತ್ವಸ್ಯಾನಿತ್ಯತ್ವಾತ್ ಪುರುಷಾಣಾಂ ಕಥಂ ಸದೈಕರೂಪತ್ವಂ ತತ್ರಾಹ–*

ಅನುವಾದ: ಸಾಕ್ಷಿತ್ವವು ಅನಿತ್ಯವಾಗಿರುವುದರಿಂದ ಪುರುಷರಿಗೆ ಯಾವಾಗಲೂ ಏಕರೂಪತೆ ಇರುವುದು ಹೇಗೆ? ಅದಕ್ಕೆ ಹೇಳಿದೆ–

ಸೂತ್ರ: **ಸಾಕ್ಷಾತ್ ಸಂಬಂಧಾತ್ ಸಾಕ್ಷಿತ್ವಮ್ ॥ ೧೬೧ ॥**

ಸೂತ್ರಾನುವಾದ: (ಬುದ್ಧಿಯೊಡನೆ) ಸಾಕ್ಷಾತ್ ಸಂಬಂಧವಿರುವುದರಿಂದ ಸಾಕ್ಷಿತ್ವವಿರುತ್ತದೆ.
ವಿವರಣೆ: ಅನಿರುದ್ಧನು ಸಾಕ್ಷಾತ್ ಎಂಬ ಪದವನ್ನು 'ಇಂದ್ರಿಯಗಳೊಡನೆ' ಎಂದು ಅರ್ಥಮಾಡಿದ್ದಾನೆ.

ಭಾಷ್ಯ: *ಪುರುಷಸ್ಯ ಯತ್ ಸಾಕ್ಷಿತ್ವಮುಕ್ತಂ ತತ್ ಸಾಕ್ಷಾತ್ ಸಂಬಂಧಮಾತ್ರಾತ್, ನ ತು ಪರಿಣಾಮತಃ ಇತ್ಯರ್ಥಃ । ಸಾಕ್ಷಾತ್ ಸಂಬಂಧೇನ ಬುದ್ಧಿಮಾತ್ರಸಾಕ್ಷಿತಾವಗಮ್ಯತೇ, 'ಸಾಕ್ಷಾತ್ ದ್ರಷ್ಟರಿ ಸಂಜ್ಞಾಯಾಮ್' (ಪಾ.ಸೂ. ೫.೨.೯೧) ಇತಿ ಸಾಕ್ಷಿಶಬ್ದವ್ಯುತ್ಪಾದನಾತ್ । ಸಾಕ್ಷಾದ್ದ್ರಷ್ಟೃತ್ವಂ ಚಾವ್ಯವಧಾನೇನ ದ್ರಷ್ಟೃತ್ವಮ್ । ಪುರುಷೇ ಚ ಸಾಕ್ಷಾತ್ ಸಂಬಂಧಃ ಸ್ವಬುದ್ಧಿ ವೃತ್ತೇರೇವ ಭವತಿ । ಅತೋ ಬುದ್ಧೇರೇವ ಸಾಕ್ಷೀ ಪುರುಷಃ ಅನ್ಯೇಷಾಂ ತು ದ್ರಷ್ಟೃಮಾತ್ರಮಿತಿ ಶಾಸ್ತ್ರೀಯೋ ವಿಭಾಗಃ । ಜ್ಞಾನನಿಯಾಮಕಶ್ಚ ಅರ್ಥಾಕಾರತಾಸ್ಥಾನೀಯಃ ಪ್ರತಿಬಿಂಬ ರೂಪ ಏವ ಸಂಬಂಧಃ, ನ ತು ಸಂಯೋಗಮಾತ್ರಂ ಅತಿ*

ಪ್ರಸಂಗಾತ್ ಇತಿ ಅಸಕೃತ್ ಆವೇದಿತಮ್ (ಸಾಂ.ಸೂ. ೧.೪೮) ವಿಷ್ಣ್ವಾದೇಃ ಸರ್ವಸಾಕ್ಷಿತ್ವಂತ್ವಿಂದ್ರಿಯಾದಿ ವ್ಯವಧಾನಾಭಾವಮಾತ್ರೇಣ ಗೌಣಮ್ ।

ಅನುವಾದ: ಪುರುಷನ ಸಾಕ್ಷಿತ್ವವನ್ನು ಹೇಳಿರುವುದು ಸಾಕ್ಷಾತ್ ಸಂಬಂಧ ಮಾತ್ರದಿಂದ, ಪರಿಣಾಮದಿಂದಲ್ಲ ಎಂದರ್ಥ. (ಪುರುಷನೊಡನೆ) ಸಾಕ್ಷಾತ್ ಸಂಬಂಧದಿಂದ ಬುದ್ಧಿಯೊಂದೇ ಸಾಕ್ಷಿಯೆಂದು ತಿಳಿದುಬರುತ್ತದೆ. 'ಸಾಕ್ಷಾತ್ ದ್ರಷ್ಟರಿ ಸಂಜ್ಞಾಯಾಂ' ಎಂಬ ಪಾಣಿನಿಯ ಸೂತ್ರದಂತೆ ಸಾಕ್ಷಿ ಶಬ್ದ ದ್ರಷ್ಟೃ ಎಂಬರ್ಥದಲ್ಲಿ ನಿಷ್ಪನ್ನವಾಗಿರುವುದು. 'ಸಾಕ್ಷಾತ್ ದ್ರಷ್ಟ್ರತ್ವ'ವೆಂದರೆ ತಡೆಯಿಲ್ಲದೆ ದ್ರಷ್ಟೃತ್ವ ಎಂದರ್ಥ. ಪುರುಷನ ನಿರಂತರ ಸಂಬಂಧ ತನ್ನ ಬುದ್ಧಿವೃತ್ತಿಯೊಡನೆ ಇರುತ್ತದೆ. ಆದ್ದರಿಂದ ಅವನು ಬುದ್ಧಿಗೆ ಮಾತ್ರ ಸಾಕ್ಷಿಯಾಗಿರುತ್ತಾನೆ. ಆದರೆ ಇತರ ಪದಾರ್ಥಗಳೊಡನೆ ಕೇವಲ ದ್ರಷ್ಟೃವಾಗಿದೆ ಎಂದು ಶಾಸ್ತ್ರ ಸಮ್ಮತವಾಗಿ (ಸಾಕ್ಷಿ–ದ್ರಷ್ಟೃಗಳ ನಡುವೆ) ವಿಭಾಗ ಮಾಡಲಾಗಿದೆ. ಜ್ಞಾನ ಉಂಟಾಗುವುದೂ ಸಹ ಪ್ರಯೋಜನಕಾರಿಯಾಗಿದ್ದು ಕೇವಲ ಪ್ರತಿಬಿಂಬದ ರೂಪದ ಸಂಬಂಧವನ್ನು ಮಾತ್ರ ಹೊಂದಿರುತ್ತದೆ, ಆ ಸಂಬಂಧ ಸಂಯೋಗ ಮಾತ್ರವಷ್ಟೆ ಅನ್ಯಥಾ ಅತಿಪ್ರಸಂಗವಾಗುವುದು. ಈ ಮಾತನ್ನು ಅನೇಕ ಬಾರಿ ಹೇಳಿದ್ದೇವೆ. ವಿಷ್ಣುವೇ ಮೊದಲಾದವರ ಸರ್ವಸಾಕ್ಷಿತ್ವವೂ ಇಂದ್ರಿಯಗಳೇ ಮೊದಲಾದುವು ತಡೆಯಿಲ್ಲದಂತೆ ಇರುವುದರಿಂದಲೇ ಅದು ಗೌಣ ಸಾಕ್ಷಿತ್ವವಾಗುತ್ತದೆ.

ಭಾಷ್ಯ: *ಅಕ್ಷಸಂಬಂಧಾತ್ ಸಾಕ್ಷಿತ್ವಮಿತಿ ಪಾಠೇ ತ್ವಕ್ಷಮಾತ್ರಬುದ್ಧಿಃ ಕರಣತ್ವಸಾಮಾನ್ಯಾತ್ । ತಸ್ಯಾ ಯಥೋಕ್ತಾತ್ ಪ್ರತಿಬಿಂಬರೂಪಾತ್ ಸಂಬಂಧಾದಿತ್ಯರ್ಥಃ ।*

ಅನುವಾದ: (ಅಕ್ಷ ಸಂಬಂಧಾತ್ ಸಾಕ್ಷಿತ್ವಮ್) 'ಬುದ್ಧಿಯೊಡನೆ ಸಂಬಂಧದಿಂದ ಸಾಕ್ಷಿತ್ವ' ಎಂಬ ಪಾಠದಲ್ಲಿ ಅಕ್ಷ ಎಂಬ ಪದವನ್ನು ಬುದ್ಧಿ ಎಂದೇ ತೆಗೆದುಕೊಳ್ಳಬಹುದು. ಏಕೆಂದರೆ ಅದೂ ಒಂದು ಕರಣ. ಆದ್ದರಿಂದ ಯಥೋಕ್ತವಾದ ಪ್ರತಿಬಿಂಬರೂಪದಿಂದ ಸಂಬಂಧ ಹೊಂದಿರುತ್ತದೆ.

ವಿವರಣೆ: ಅದರಿಂದ ಮೋಕ್ಷವನ್ನು ಪಡೆಯುವುದು ಅಸಾಧ್ಯವಲ್ಲ.

ಭಾಷ್ಯ: *ಉಭಯ ರೂಪತ್ವ ಭಾವಸಿದ್ಧ್ಯರ್ಥಂ ಪುರುಷಸ್ಯ ಅಪತಾ ವಿಶೇಷೌ ಆಹ ಸೂತ್ರಾಭ್ಯಾಂ–*

ಅನುವಾದ: ಉಭಯರೂಪದ ಅಭಾವವನ್ನು ಸಿದ್ಧಪಡಿಸಲು ಪುರುಷನ ಎರಡು ವಿಶೇಷಗಳನ್ನು ಮುಂದಿನ ಎರಡು ಸೂತ್ರಗಳಲ್ಲಿ ಹೇಳಲಾಗಿದೆ–

ಸೂತ್ರ: ನಿತ್ಯ ಮುಕ್ತತ್ವಮ್ ॥ ೧೬೨ ॥

ಸೂತ್ರಾನುವಾದ: ನಿತ್ಯ ಮುಕ್ತತ್ವ (ಪುರುಷನ ಸ್ವರೂಪವು)

ಭಾಷ್ಯ: *ಸದೈವ ಪುರುಷಸ್ಯ ದುಃಖಾಖ್ಯಬಂಧ ಶೂನ್ಯತ್ವಮ್ । ದುಃಖಾದೇರ್ಬುದ್ಧಿಪರಿಣಾಮತ್ವಾದಿತ್ಯರ್ಥಃ । ಪುರುಷಾರ್ಥಸ್ತು ದುಃಖಭೋಗನಿವೃತ್ತಿಃ ಪ್ರತಿಬಿಂಬರೂಪದುಃಖನಿವೃತ್ತಿರ್ವಾ ಇತ್ಯುಕ್ತಮೇವ ।*

ಅನುವಾದ: ಪುರುಷನಲ್ಲಿ ಯಾವಾಗಲೂ ದುಃಖವೆಂಬುದರ ಶೂನ್ಯತ್ವವಿರುತ್ತದೆ. ಏಕೆಂದರೆ ದುಃಖಾದಿಗಳು ಬುದ್ಧಿಪರಿಣಾಮತ್ವವಿರುವ ಕಾರಣ ಉಂಟಾಗುತ್ತವೆ. ಪುರುಷಾರ್ಥವು ದುಃಖಭೋಗದ ನಿವೃತ್ತಿ ರೂಪದ್ದು; ಅಥವಾ ಪ್ರತಿಬಿಂಬ ರೂಪದ ದುಃಖನಿವೃತ್ತಿ ಎಂಬುದನ್ನು ಆಗಲೇ ಹೇಳಿದ್ದೇವೆ.

ವಿವರಣೆ: ಚೇತನನಾದ ಪುರುಷ, ಅಚೇತನನಾದ ಪ್ರಕೃತಿ ಎಂದೂ ಬೇರೆ ಬೇರೆಯಾಗಿರುತ್ತವೆ ಎಂದು ಇದರ ಅಭಿಪ್ರಾಯ.

ಸೂತ್ರ: **ಔದಾಸೀನ್ಯಂ ಚೇತಿ ॥ ೧೬೩ ॥**

ಸೂತ್ರಾನುವಾದ: ಅಲ್ಲದೆ ಉದಾಸೀನತೆ (ಪುರುಷನ ಸ್ವರೂಪ).

ಭಾಷ್ಯ: *ಔದಾಸೀನ್ಯಮಕರ್ತೃತ್ವಂ ತೇನ ಚಾನ್ಯೇಽಪಿ ನಿಷ್ಕಾಮ–ತ್ವಾದಯ ಉಪಲಕ್ಷಣೀಯಾಃ । "ಕಾಮಃ ಸಂಕಲ್ಪೋ ವಿಚಿಕಿತ್ಸಾ ಶ್ರದ್ಧಾಽಶ್ರದ್ಧಾ ಧೃತಿಃ ಅಧೃತಿಃ ಧೀಃ ಹ್ರೀಃ ಭೀಃ ಇತ್ಯೇತತ್ ಸರ್ವಂ ಮನ ಏವೇತಿ ಶ್ರುತೇಃ (ಬೃ.ಉ. ೧.೫.೩) । ಇತಿ–ಶಬ್ದಃ ಪುರುಷಧರ್ಮ ಪ್ರತಿಪಾದನಸಮಾಪ್ತೌ ।*

ಅನುವಾದ: 'ಔದಾಸೀನ್ಯ'ವೆಂದರೆ ಕರ್ತೃತ್ವವಿಲ್ಲದಿರುವುದು. ಈ ಅಕರ್ತೃತ್ವವು ನಿಷ್ಕಾಮತ್ವ ಮುಂತಾದುವುಗಳನ್ನು ಸೂಚಿಸುವುದು. ಶ್ರುತಿಯು (ಬೃಹದಾರಣ್ಯಕೋಪನಿಷತ್ತು) ಹೀಗೆ ಹೇಳುತ್ತದೆ, 'ಕಾಮ, ಸಂಕಲ್ಪ, ಸಂದೇಹ, ಶ್ರದ್ಧೆ, ಅಶ್ರದ್ಧೆ, ಧೃತಿ, ಅಧೃತಿ, ಧೀಮಂತಿಕೆ, ಲಜ್ಜೆ, ಭಯ ಇವೆಲ್ಲವೂ ಮನಸ್ಸೇ. 'ಇತಿ' ಶಬ್ದವು ಪುರುಷನ ಧರ್ಮವನ್ನು ಪ್ರತಿಪಾದನದ ಸಮಾಪ್ತಿಯನ್ನು ಸೂಚಿಸುತ್ತದೆ.

ಭಾಷ್ಯ: *ನನ್ವೇವಂ ಪ್ರಕೃತಿಪುರುಷಯೋರನ್ಯೋನ್ಯಂ ವೈಧರ್ಮ್ಯೇಣ ವಿವೇಕೇ ಸಿದ್ಧೇ ಪುರುಷಸ್ಯ ಕರ್ತೃತ್ವಂ ಬುದ್ಧೇರಪಿ ಜ್ಞಾತೃತ್ವಂ ಶ್ರುತಿಸ್ಮೃತ್ಯೋರುಚ್ಯಮಾನಂ ಕಥಮುಪಪದ್ಯಾಯೇತಾಂ, ತತ್ರಾಹ–*

ಅನುವಾದ: ಪ್ರಕೃತಿ–ಪುರುಷರಲ್ಲಿ ಪರಸ್ಪರ ವೈಧರ್ಮ್ಯದಿಂದ ವಿವೇಕವು ಉಂಟಾದರೆ ಪುರುಷನ ಕರ್ತೃತ್ವ, ಬುದ್ಧಿಯ ಜ್ಞಾತೃತ್ವ, ಇವು ಶ್ರುತಿ ಸ್ಮೃತಿಗಳಲ್ಲಿ ಹೇಳಿರುವಾಗ ಅದನ್ನು ಗಳಿಸುವುದು ಹೇಗೆ? ಅದಕ್ಕೆ ಹೀಗೆ ಹೇಳಿದೆ–

ಸೂತ್ರ: **ಉಪರಾಗಾತ್ ಕರ್ತೃತ್ವಂ ಚಿತ್ಸಾನ್ನಿಧ್ಯಾತ್ ಚಿತ್ಸಾನ್ನಿಧ್ಯಾತ್ ॥ ೧೬೪ ॥**

ಸೂತ್ರಾನುವಾದ: (ಬುದ್ಧಿಯು) ಬಳಿಯಲ್ಲಿರುವುದರಿಂದ ಪುರುಷನಲ್ಲಿ ಕರ್ತೃತ್ವ ಮತ್ತು ಪುರುಷನ ಸಾನ್ನಿಧ್ಯದಿಂದ ಬುದ್ಧಿಯಲ್ಲಿ ಜ್ಞಾತೃತ್ವ ಉಂಟಾಗುವುವು.

ಭಾಷ್ಯ: *ಅತ್ರ ಯಥಾಯೋಗ್ಯಮನ್ವಯಃ । ಪುರುಷಸ್ಯ ಯತ್ ಕರ್ತೃತ್ವಂ ತದ್‌ಬುದ್ಧ್ಯುಪರಾಗಾತ್ । ಬುದ್ಧೇಶ್ಚ ಯಾ ಚಿತ್ತಾ ಸಾ ಪುರುಷಸಾನ್ನಿಧ್ಯಾತ್, ಏತದುಭಯಂ ನ ವಾಸ್ತವಮಿತ್ಯರ್ಥಃ । ಯಥಾ ಅಗ್ನ್ಯಯಸೋಃ ಪರಸ್ಪರಂ ಸಂಯೋಗ ವಿಶೇಷಾತ್ ಪರಸ್ಪರ ಧರ್ಮ ವ್ಯವಹಾರಃ ಔಪಾಧಿಕೋ, ಯಥಾವಾ ಜಲಸೂರ್ಯಯೋಃ ಸಂಯೋಗಾತ್ ಪರಸ್ಪರ ಧರ್ಮಾರೋಪಃ ತಥೈವ ಪುರುಷಬುದ್ಧಿಯೋರಿತಿ ಭಾವಃ । ಏತಚ್ಚ ಕಾರಿಕಾಯಾಂ ಉಕ್ತಮ್ ।*

ಅನುವಾದ: ಇಲ್ಲಿ ಪದಗಳನ್ನು ಸರಿಯಾದ ರೀತಿಯಲ್ಲಿ ಅನ್ವಯ ಮಾಡಬೇಕು. ಪುರುಷನ ಕರ್ತೃತ್ವವು ಬುದ್ಧಿಯ ಸಾನ್ನಿಧ್ಯದಿಂದ ಇವೆರಡೂ ವಾಸ್ತವವಲ್ಲ. ಹೇಗೆ ಬೆಂಕಿ ಮತ್ತು ಕಬ್ಬಿಣಗಳು ಪರಸ್ಪರ ವಿಶೇಷ ಸಂಯೋಗದಿಂದ ಪರಸ್ಪರ ಧರ್ಮವ್ಯವಹಾರವು ಔಪಾಧಿಕವೋ ಅಥವಾ ಜಲ ಮತ್ತು ಸೂರ್ಯರ ಸಂಯೋಗದಿಂದ ಪರಸ್ಪರ ಧರ್ಮದ ಆರೋಪವಾಗುವುದೋ ಹಾಗೆಯೇ ಪುರುಷ ಬುದ್ಧಿಗಳ ಸಂಯೋಗವನ್ನು ತಿಳಿಯಬೇಕು ಎಂದು ಭಾವ. ಇದನ್ನೇ ಕಾರಿಕೆಯಲ್ಲಿ ಹೇಳಿದೆ.

ತಸ್ಮಾತ್ ತತ್ಸಂಯೋಗಾತ್ ಅಚೇತನಂ ಚೇತನಾವದಿವ ಲಿಂಗಮ್ ।
ಗುಣಕರ್ತೃತ್ವೇ ಚ ತಥಾ ಕರ್ತೇವ ಭವತ್ಯುದಾಸೀನಃ ॥ ಸಾಂ.ಕಾ. ೨೦
ಚಿತ್ಸಾನ್ನಿಧ್ಯಾದಿತಿ ದ್ವಿಃಪಾಠೋಽ ಅಧ್ಯಾಯ ಸಮಾಪ್ತಿ ಸೂಚನಾರ್ಥಃ ।

ಅನುವಾದ: ಆದ್ದರಿಂದ ಪುರುಷನ ಸಂಯೋಗದಿಂದ ಅಚೇತನವಾದ ಲಿಂಗಶರೀರವು (ಬುದ್ಧಿ, ಅಹಂಕಾರ, ಮನಸ್ಸು, ಇಂದ್ರಿಯಗಳು ಮತ್ತು ತನ್ಮಾತ್ರಗಳು) ಚೈತನ್ಯದಿಂದ ಕೂಡಿರುವಂತೆ ಕಾಣುವುದೋ ಹಾಗೆಯೇ (ಬುದ್ಧ್ಯಾದಿಗಳಿಂದ) ಪರಿಣಾಮ ಗೊಂಡ ಗುಣಗಳಲ್ಲಿ ಕರ್ತೃತ್ವ ಧರ್ಮವಿಲ್ಲದಿದ್ದರೂ ಉದಾಸೀನನಾದ ಪುರುಷನು ಕರ್ತೃವಂತೆ ಕಾಣುತ್ತಾನೆ.

ಈ ಅಧ್ಯಾಯದ ಸಮಾಪ್ತಿಯ ಸೂಚನೆಯಾಗಿ 'ಚಿತ್ಸಾನ್ನಿಧ್ಯಾತ್' ಎಂಬ ಪದವನ್ನು ಎರಡು ಬಾರಿ ಪ್ರಯೋಗಿಸಲಾಗಿದೆ.

ಭಾಷ್ಯ: *ಹೇಯಹಾನೇ ತಯೋರ್ಹೇತೂ ಇತಿ ವ್ಯೂಹಾ ಯಥಾಕ್ರಮಮ್ । ಚತ್ವಾರಃ ಶಾಸ್ತ್ರಮುಖ್ಯಾರ್ಥಾ ಅಧ್ಯಾಯೇಽಸ್ಮಿನ್ ಪ್ರಪಂಚಿತಾಃ ॥*

ಅನುವಾದ: ಈ ಅಧ್ಯಾಯದಲ್ಲಿ ಭಾಷ್ಯವು ಹೇಯ, ಹಾನ, ಹೇಯ-ಹೇತು ಮತ್ತು ಹಾನಹೇತು ಎಂದು ಚತುರ್ವ್ಯೂಹವೆಂಬ ಶಾಸ್ತ್ರ ಮುಖ್ಯಾರ್ಥವನ್ನು ವಿಸ್ತಾರವಾಗಿ ತಿಳಿಸಲಾಗಿದೆ.

ಸಙ್ಕ್ಷಿಪ್ತ ಸಾಂಖ್ಯಸೂತ್ರಾಣಾಂ ಅರ್ಥಸ್ಯಾತ್ರಪ್ರಪಂಚನಾತ್ ।
ಶಾಸ್ತ್ರಂ ಯೋಗವದೇವೇದಂ ಸಾಂಖ್ಯಪ್ರವಚನಾಭಿಧಮ್ ॥

ಅನುವಾದ: ಸಂಕ್ಷೇಪವಾದ ಸಾಂಖ್ಯ ಸೂತ್ರಗಳ ಅರ್ಥವನ್ನು ತಿಳಿಸಿರುವುದರಿಂದ ಯೋಗದಂತೆ ಇದೂ ಸಹ ಸಾಂಖ್ಯ ಪ್ರವಚನವೆಂಬ ಶಾಸ್ತ್ರವು.

ಹೀಗೆ ಶ್ರೀವಿಜ್ಞಾನಾಚಾರ್ಯರಿಂದ ರಜತವಾದ ಕಪಿಲ ಸಾಂಖ್ಯಪ್ರವಚನದ ಭಾಷ್ಯದ 'ವಿಷಯಾಧ್ಯಾಯ'ವೆಂಬ ಪ್ರಥಮಾಧ್ಯಾಯವು

ಅಥ ದ್ವಿತೀಯೋಽಧ್ಯಾಯಃ

ಪ್ರಧಾನ ಕಾರ್ಯಾಧ್ಯಾಯವೆಂಬ ಎರಡನೆಯ ಅಧ್ಯಾಯ

ಭಾಷ್ಯ: *ಶಾಸ್ತ್ರಸ್ಯ ವಿಷಯೋ ನಿರೂಪಿತಃ । ಸಾಂಪ್ರತಂ ಪುರುಷಸ್ಯ ಅಪರಿಣಾಮಿತ್ವೋಪಪಾದನಾಯ ಪ್ರಕೃತಿತಃ ಸೃಷ್ಟಿಪ್ರಕ್ರಿಯಾಂ ಅತಿವಿಸ್ತರೇಣ ದ್ವಿತೀಯಾಧ್ಯಾಯೇ ವಕ್ಷ್ಯತಿ । ತತ್ರೈವ ಪ್ರಧಾನ । ಕಾರ್ಯಾಣಾಂ ಸ್ವರೂಪಂ ವಿಸ್ತರತೋ ವಕ್ತವ್ಯಮ್, ತೇಭ್ಯೋಽಪಿ ಪುರುಷಸ್ಯ ಅತಿಕುಟಿಲವಿವೇಕಾಯ । ಅತ ಏವ ।*

ಅನುವಾದ: (ಮೊದಲ ಅಧ್ಯಾಯದಲ್ಲಿ) ಶಾಸ್ತ್ರದ ವಿಷಯದ ನಿರೂಪಣೆ ಆಯಿತು. ಈಗ ಪುರುಷನ ಅಪರಿಣಾಮಿತ್ವವನ್ನು ಸಾಧಿಸಲು ಪ್ರಕೃತಿಯಿಂದ ಸೃಷ್ಟಿಯಾಗುವ ಪ್ರಕ್ರಿಯೆಯನ್ನು ವಿಸ್ತಾರವಾಗಿ ಎರಡನೇ ಅಧ್ಯಾಯದಲ್ಲಿ ತಿಳಿಸಲಾಗಿದೆ. ಅದರಲ್ಲಿಯೇ ಪ್ರಧಾನದ ಕಾರ್ಯಗಳ ಸ್ವರೂಪವನ್ನು ವಿಸ್ತಾರವಾಗಿ ಹೇಳಬೇಕಾಗಿದೆ, ಅದರಲ್ಲಿಯೂ ಪುರುಷನ ಅತಿಸ್ಫುಟವಾದ ವಿವೇಕ ದೊರೆಯುವುದು. ಆದ್ದರಿಂದಲೇ–

ಭಾಷ್ಯ: *ವಿಕಾರಂ ಪ್ರಕೃತಿಂ ಚೈವ ಪುರುಷಂ ಚ ಸನಾತನಮ್ ।*
ಯೋ ಯಥಾವದ್ವಿಜಾನಾತಿ ಸ ವಿತೃಷ್ಣೋ ವಿಮುಚ್ಯತೇ ॥
(ಶಾಂ.ಪ. ೨೧೭–೩೭)

ಅನುವಾದ: ವಿಕಾರ ಮತ್ತು ಪ್ರಕೃತಿ ಹಾಗೂ ಸನಾತನವಾದ ಪುರುಷನನ್ನು ಯಾರು ಯಥಾವತ್ತಾಗಿ ತಿಳಿದಿರುತ್ತಾರೋ ಅವರು ವಿತೃಷ್ಣರಾಗಿ ವಿಮುಕ್ತರಾಗುತ್ತಾರೆ.

ಭಾಷ್ಯ: *ಇತಿ ಮೋಕ್ಷಧರ್ಮಾದಿಷು ತ್ರಯಾಣಾಮೇವ ಜ್ಞೇಯತ್ವವಚನಮ್। ತತ್ರ ಆದೌ ಅಚೇತನಾಯಾಃ ಪ್ರಕೃತೇರ್ನಿಷ್ಪ್ರಯೋಜನಸ್ರಷ್ಟೃತ್ವೇ ಮುಕ್ತಸ್ಯಾಪಿ ಬಂಧಪ್ರಸಂಗಃ ಇತ್ಯಾಶಯೇನ ಜಗತ್ಸರ್ಜನೇ ಪ್ರಯೋಜನಮಾಹ ।*

ಅನುವಾದ: ಹೀಗೆ ಮೋಕ್ಷಧರ್ಮಾದಿಗಳಲ್ಲಿ ಕೇವಲ ಮೂರನ್ನೇ ತಿಳಿಯಬೇಕೆಂದು ಹೇಳಿದೆ. ಅದರಲ್ಲಿ ಮೊದಲನೆಯದಾದ ಅಚೇತನದ ಸೃಷ್ಟಿಯು ನಿಷ್ಪ್ರಯೋಜನ ವೆಂದು ಹೇಳಿದರೆ ಮುಕ್ತನೂ ಬದ್ಧನಾದ ಪ್ರಸಂಗ ಉಂಟಾಗುವುದು ಎಂಬ ಉದ್ದೇಶದಿಂದ ಜಗತ್ತಿನ ಸೃಷ್ಟಿಯ ಪ್ರಯೋಜನವನ್ನು ಹೇಳಿದೆ.

ಸೂತ್ರ: ವಿಮುಕ್ತಮೋಕ್ಷಾರ್ಥಂ ಸ್ವಾರ್ಥಂ ವಾ ಪ್ರಧಾನಸ್ಯ ॥ ೧ ॥

ಸೂತ್ರಾರ್ಥ: ಪುರುಷನ ಮೋಕ್ಷಪ್ರಾಪ್ತಿಗಾಗಲಿ ಸ್ವಾರ್ಥಕ್ಕಾಗಲಿ ಪ್ರಧಾನವು (ಪ್ರವೃತ್ತವಾಗುವುದು).

ಭಾಷ್ಯ: *ಕರ್ತೃತ್ವಮಿತಿ ಪೂರ್ವಾಧ್ಯಾಯಶೇಷಸೂತ್ರಾದನುಷಜ್ಯತೇ । ಸ್ವಭಾವತೋ ದುಃಖಬಂಧಾದ್ವಿಮುಕ್ತಸ್ಯ ಪುರುಷಸ್ಯ ಪ್ರತಿಬಿಂಬರೂಪದುಃಖಮೋಕ್ಷಾರ್ಥಂ ಪ್ರತಿಬಿಂಬಸಂಬಂಧೇನ ದುಃಖಮೋಕ್ಷಾರ್ಥಂ ವಾ ಪ್ರಧಾನಸ್ಯ ಜಗತ್ಕರ್ತೃತ್ವಮ್ । ಅಥವಾ ಸ್ವಾರ್ಥಂ ಸ್ವಸ್ಯ ಪಾರಮಾರ್ಥಿಕದುಃಖ–ಮೋಕ್ಷಾರ್ಥಂ ಇತ್ಯರ್ಥಃ । ಯದ್ಯಪಿ ಮೋಕ್ಷವದ್ಭೋಗೋಽಪಿ ಸೃಷ್ಟೇಃ ಪ್ರಯೋಜನಂ ತಥಾಪಿ ಮುಖ್ಯತ್ವಾನ್ಮೋಕ್ಷ ಏವೋಕ್ತಃ ।*

ಅನುವಾದ: ಹಿಂದಿನ ಅಧ್ಯಾಯದ ಕೊನೆಯ ಸೂತ್ರದ (ಉಪರಾಗಾತ್) ಕರ್ತೃತ್ವಂ ಎಂಬ ಪದವನ್ನು ಮುಂದುವರಿಸಲಾಗಿದೆ.

ಸ್ವಾಭಾವಿಕವಾಗಿಯೇ ದುಃಖವೆಂಬ ಬಂಧದಿಂದ ವಿಮುಕ್ತನಾದ ಪುರುಷನ ಪ್ರತಿಬಿಂಬ ರೂಪದ ದುಃಖದ ಮೋಕ್ಷಾರ್ಥವಾಗಿ ಅಥವಾ ಪ್ರತಿಬಿಂಬಸಂಬಂಧದಿಂದ ದುಃಖವನ್ನು ಹೋಗಲಾಡಿಸಿಕೊಳ್ಳಲು ಪ್ರಕೃತಿಯು ಜಗತ್ತಿನ ಸೃಷ್ಟಿಕರ್ತೃವಾಗುತ್ತದೆ. ಅಥವಾ ಸ್ವಾರ್ಥಕ್ಕಾಗಿ ಎಂದರೆ ತನ್ನ ಪಾರಮಾರ್ಥಿಕ ದುಃಖವನ್ನು ಹೋಗಲಾಡಿಸಿ ಕೊಳ್ಳಲು ಎಂದರ್ಥ. ಮೋಕ್ಷದಂತೆ ಭೋಗವೂ ಸೃಷ್ಟಿಯ ಪ್ರಯೋಜನವಾದರೂ ಮುಖ್ಯವಾಗಿ ಮೋಕ್ಷವನ್ನೇ ಹೇಳಲಾಗಿದೆ.

ಭಾಷ್ಯ: *ನನು ಮೋಕ್ಷಾರ್ಥಂ ಚೇತ್ ಸೃಷ್ಟಿಃ ತರ್ಹಿ ಸಕೃತ್ ಸೃಷ್ಟ್ಯೈವ ಮೋಕ್ಷಸಂಭವೇ ಪುನಃ ಪುನಃ ಸೃಷ್ಟಿರ್ನಸ್ಯಾದಿತ, ತತ್ರಾಹ–*

ಅನುವಾದ: (ಪುರುಷನ) ಮೋಕ್ಷಕ್ಕಾಗಿಯೇ ಸೃಷ್ಟಿ ಇರುವುದಾದರೆ ಒಮ್ಮೆ ಸೃಷ್ಟಿಯಾದದ್ದು ಮತ್ತೆ ಮತ್ತೆ ಸೃಷ್ಟಿಯು ಆಗಬೇಕಾಗಿಲ್ಲವಲ್ಲ– ಎಂಬುದಕ್ಕೆ ಉತ್ತರ.

ಸೂತ್ರ: ವಿರಕ್ತಸ್ಯ ತತ್ಸಿದ್ಧೇಃ ॥ ೨ ॥

ಸೂತ್ರಾನುವಾದ: ವಿರಕ್ತನಾದವನಿಗೆ ಮಾತ್ರ (ಮೋಕ್ಷ) ಸಿದ್ಧಿಯಾಗುವುದರಿಂದ (ಅದನ್ನು ಪಡೆಯಲು ಜಗತ್ತಿನ ಸೃಷ್ಟಿಯಾಗುವುದು).

ಭಾಷ್ಯ: *ನೈಕದಾ ಸೃಷ್ಟೇರ್ಮೋಕ್ಷಃ, ಕಿಂತು ಬಹುಶೋ ಜನ್ಮ–ಮರಣ–ವ್ಯಾಧ್ಯಾದಿವಿವಿಧದುಃಖೇನ ಭೃಶಂ ತಪ್ತಸ್ಯ । ತತಶ್ಚ ಪ್ರಕೃತಿಪುರುಷ–ಯೋರ್ವಿವೇಕಖ್ಯಾತ್ಯೋತ್ಪನ್ನಪರವೈರಾಗ್ಯಸ್ಯ ಏವ ಮೋಕ್ಷೋತ್ಪತ್ತಿ–ಸಿದ್ಧೇರಿತ್ಯರ್ಥಃ ।*

ಅನುವಾದ: ಒಮ್ಮೆ ಸೃಷ್ಟಿ ಮಾಡಿದ ಮೇಲೆ ಮೋಕ್ಷ ದೊರೆಯಿತೆಂದಲ್ಲ. ಅನೇಕ ಬಾರಿ ಜನ್ಮ–ಮರಣ–ವ್ಯಾಧಿ ಮೊದಲಾದ ವಿವಿಧ ದುಃಖಗಳಿಂದ ಬಹಳ ನೊಂದ

ನಂತರ (ಅದು ದೊರೆತಂತೆ). ಅನಂತರ ಪ್ರಕೃತಿ–ಪುರುಷರ ವಿವೇಕಖ್ಯಾತಿಯಿಂದ ಉಂಟಾಗುವ ತೀವ್ರವಾದ ವೈರಾಗ್ಯವುಳ್ಳ ವ್ಯಕ್ತಿಗೆ ಮಾತ್ರ ಮೋಕ್ಷ ಪಡೆಯುವ ಸಿದ್ಧಿಯಾದೀತು.

ವಿವರಣೆ: **'**ವಿವೇಕಖ್ಯಾತಿ**'** ಎಂದರೆ ಪುರುಷನು ಪ್ರಕೃತಿಯಿಂದ ಭಿನ್ನ ಎಂಬ ತಿಳುವಳಿಕೆ.

ಭಾಷ್ಯ: *ಸಕೃತ್ ಸೃಷ್ಟ್ಯಾ ವೈರಾಗ್ಯಾಸಿದ್ಧೌ ಹೇತುಮಾಹ ।*

ಸೂತ್ರ: ನ ಶ್ರವಣಮಾತ್ರಾತ್ ತತ್ಸಿದ್ಧಿರನಾದಿವಾಸನಾಯಾ ಬಲವತ್ತ್ವಾತ್ ॥ ೩ ॥

ಅನುವಾದ: ಒಮ್ಮೆ ಆದ ಸೃಷ್ಟಿಯಿಂದಲೇ ವೈರಾಗ್ಯ ದೊರೆಯದು ಎನ್ನಲು ಕಾರಣವನ್ನು ಹೇಳಿದೆ.

ಸೂತ್ರಾನುವಾದ: ಕೇಳುವುದಷ್ಟರಿಂದಲೇ ವೈರಾಗ್ಯದ ಸಿದ್ಧಿಯಾಗದು, ಅನಾದಿ–ವಾಸನೆಯಿಂದಲೇ ಬಲಗೊಳ್ಳುವುದರಿಂದ.

ವಿವರಣೆ: ವಾಸನಾ ಎಂದರೆ (ಸ್ಮೃತಿ ಹೇತುಃ ಸಂಸ್ಕಾರವಿಶೇಷಃ ।) ಸ್ಮೃತಿಗೆ ಕಾರಣವಾದ ವಿಶೇಷ ಸಂಸ್ಕಾರ

ಭಾಷ್ಯ: *ಶ್ರವಣಮಪಿ ಬಹುಜನ್ಮಕೃತಪುಣ್ಯೇನ ಭವತಿ । ತತ್ರಾಪಿ ಶ್ರವಣಮಾತ್ರಾನ್ನ ವೈರಾಗ್ಯಸಿದ್ಧಿಃ, ಕಿಂತು ಸಾಕ್ಷಾತ್ಕಾರಾತ್ ।*

ಸಾಕ್ಷಾತ್ಕಾರಶ್ಚ ಝಟಿತಿ ನ ಭವತಿ – ಅನಾದಿಮಿಥ್ಯಾವಾಸನಾಯಾಃ ಬಲವತ್ತ್ವಾತ್ । ಕಿಂತು ಯೋಗನಿಷ್ಠಯಾ । ಯೋಗೇ ಚ ಪ್ರತಿಬಂಧ–ಬಾಹುಲ್ಯಮಿತ್ಯತಃ ಬಹುಜನ್ಮಭಿರೇವ ವೈರಾಗ್ಯಂ ಮೋಕ್ಷಶ್ಚ ಕದಾಚಿತ್ ಕಸ್ಯಚಿದೇವ ಸಿಧ್ಯತೀತ್ಯರ್ಥಃ ।

ಅನುವಾದ: (ಶಾಸ್ತ್ರಾದಿಗಳನ್ನು) ಕೇಳುವುದೂ ಸಹ ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯದಿಂದ ದೊರೆಯುವುದು. ಅದರಲ್ಲೂ ಶ್ರವಣದಿಂದಷ್ಟೇ ವೈರಾಗ್ಯವು ಸಿದ್ಧಿಸದು, ಆದರೆ ಸಾಕ್ಷಾತ್ಕಾರದಿಂದ ಮಾತ್ರ ಸಾಧ್ಯ. ಸಾಕ್ಷಾತ್ಕಾರವೂ ಕೂಡಲೆ ಸಿದ್ಧಿಸದು ಏಕೆಂದರೆ ಅನಾದಿಕಾಲದ ಮಿಥ್ಯಾವಾಸನೆಯು ದೃಢವಾಗಿರುವುದು, ಆದರೆ ಅದು ಯೋಗನಿಷ್ಠೆಯಿಂದ ಲಭಿಸೀತು. ಯೋಗದಲ್ಲಿಯೂ ಅನೇಕ ಪ್ರತಿಬಂಧಗಳ ಕಾರಣ ಬಹುಜನ್ಮಗಳಿಂದಲೇ ವೈರಾಗ್ಯವೂ, ಮೋಕ್ಷವೂ ಎಂದಾದರೂ ಯಾರಿಗಾದರೂ ದೊರೆತೀತು ಎಂದರ್ಥ.

ಭಾಷ್ಯ: *ಸೃಷ್ಟಿಪ್ರವಾಹೇ ಹೇತ್ವಂತರಮಾಹ–*

ಸೂತ್ರ: ಬಹುಭೃತ್ಯವದ್ ವಾ ಪ್ರತ್ಯೇಕಮ್ ॥ ೪ ॥

ಅನುವಾದ: ಸೃಷ್ಟಿಪ್ರವಾಹವು ಇರಲು ಕಾರಣವನ್ನು ಹೇಳಿದೆ.

ಸೂತ್ರಾನುವಾದ: ಅಥವಾ ಗೃಹಸ್ಥನು (ತನ್ನ ಆಶ್ರಯದಲ್ಲಿರುವವರಲ್ಲಿ) ಪ್ರತ್ಯೇಕವಾಗಿ ಪ್ರತಿಯೊಬ್ಬರನ್ನೂ ನೋಡಿಕೊಳ್ಳಬೇಕಾದ ಬಗೆಯ ಪ್ರವೃತ್ತಿ ಉಂಟಾಗುವುದು.

ಭಾಷ್ಯ: *ಯಥಾ ಗೃಹಸ್ಥಾನಾಂ ಪ್ರತ್ಯೇಕಂ ಬಹವೋ ಭರ್ತವ್ಯಾಃ ಭವಂತಿ ಸ್ತ್ರೀಪುತ್ರಾದಿಭೇದೇನ, ಏವಂ ಸತ್ತ್ವಾದಿಗುಣಾನಾಮಪಿ ಪ್ರತ್ಯೇಕಂ ಅಸಂಖ್ಯಪುರುಷಾ ವಿಮೋಚನೀಯಾ ಭವಂತಿ । ಅತಃ ಕಿಯತ್ ಪುರುಷಮೋಕ್ಷೇಪಿ ಪುರುಷಾಂತರಮೋಚನಾರ್ಥಂ ಸೃಷ್ಟಿಪ್ರವಾಹೋ ಘಟತೇ, ಪುರುಷಾಣಾಂ ಆನಂತ್ಯಾದಿತ್ಯರ್ಥಃ । ತಥಾ ಚ ಯೋಗಸೂತ್ರಂ, 'ಕೃತಾರ್ಥಂ ಪ್ರತಿ ನಷ್ಟಮಪ್ಯನಷ್ಟಂ ತದನ್ಯಸಾಧಾರಣತ್ವಾತ್ । (ಯೋ.ಸೂ. ೨.೨೨) ಇತಿ ।*

ಅನುವಾದ: ಹೇಗೆ ಗೃಹಸ್ಥರಿಗೆ ಸ್ತ್ರೀಪುತ್ರಾದಿಗಳೆಂಬ ಭೇದದಿಂದ ಪ್ರತ್ಯೇಕವಾಗಿ ಅನೇಕರನ್ನು ನೋಡಿಕೊಳ್ಳುವುದಿರುವುದೋ ಹಾಗೆ ಸತ್ತ್ವಾದಿಗುಣಗಳೂ ಸಹ ಪ್ರತ್ಯೇಕವಾಗಿ ಅಸಂಖ್ಯವಾದ ಪುರುಷರನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಆದ್ದರಿಂದ ಎಷ್ಟೇ ಪುರುಷರು ಮೋಕ್ಷ ಪಡೆದರೂ ಇತರ ಪುರುಷರನ್ನು ವಿಮೋಚನಗೊಳಿಸಲು ಸೃಷ್ಟಿಪ್ರವಾಹವು ಮುಂದುವರೆಯುವುದು, ಏಕೆಂದರೆ ಪುರುಷರ ಸಂಖ್ಯೆ ಅನಂತವಾಗಿರುತ್ತದೆ. ಯೋಗಸೂತ್ರವೂ ಹೀಗೆ ಹೇಳಿದೆ– ಕೃತಾರ್ಥನಾದ (ಮುಕ್ತಿ ಪಡೆದ) ಪುರುಷನ ಬಗ್ಗೆ ನಷ್ಟವಾಗಿದ್ದರೂ ಅನ್ಯರಿಗೆ ಸಾಧಾರಣವಾದ (ಈ ಜಗತ್ತು) ಹಾಗೆಯೇ ಇರುವುದು' ಎಂದು.

ಭಾಷ್ಯ: *ನನು ಪ್ರಕೃತೇರೇವ ಸ್ರಷ್ಟೃತ್ವಂ ಕಥಮುಚ್ಯತೇ, ಏತಸ್ಮಾದಾತ್ಮನ ಆಕಾಶಃ ಸಂಭೂತಃ (ತೈ.ಉ.೨.೧) ಇತಿ ಶ್ರುತ್ಯಾ ಪುರುಷಸ್ಯಾಪಿ ಸ್ರಷ್ಟೃತ್ವಸಿದ್ಧೇಃ ಇತಿ, ತತ್ರಾಹ–*

ಅನುವಾದ: (ನೀವು) ಪ್ರಕೃತಿಯೇ ಸೃಷ್ಟಿಕರ್ತೃವೆಂದು ಹೇಗೆ ಹೇಳುವಿರಿ? 'ಈ ಆತ್ಮನಿಂದಲೇ ಆಕಾಶವು ಉತ್ಪನ್ನವಾಯಿತು' ಎಂಬ ಶ್ರುತಿಯಂತೆ ಪುರುಷನೂ ಸಹ ಸೃಷ್ಟಿಕರ್ತನೆಂದು ಸಿದ್ಧವಾಯಿತಲ್ಲವೆ? ಅದಕ್ಕೆ ಹೀಗೆ ಹೇಳಿದ್ದಾರೆ–

ಸೂತ್ರ: ಪ್ರಕೃತಿವಾಸ್ತವೇ ಚ ಪುರುಷಸ್ಯಾಧ್ಯಾಸಸಿದ್ಧಿಃ ॥ ೫ ॥

ಸೂತ್ರಾನುವಾದ: ಪ್ರಕೃತಿಯು (ಸೃಷ್ಟಿಕರ್ತೃ ಎಂದು) ಸತ್ಯವೆಂದಾಗ ಪುರುಷನ ಮೇಲೆ ಅದನ್ನು ಅಧ್ಯಾಸ ಮಾಡಿರುವುದು ಸಿದ್ಧವಾಗುತ್ತದೆ.

ಭಾಷ್ಯ: *ಪ್ರಕೃತೌ ಸ್ರಷ್ಟೃತ್ವಸ್ಯ ವಸ್ತುತ್ವೇ ಚ ಸಿದ್ಧೇ ಪುರುಷಸ್ಯ ಸ್ರಷ್ಟೃತ್ವಾಧ್ಯಾಸಃ ಏವ ಶ್ರುತಿಷು ಸಿಧ್ಯತಿ, ಉಪಾಸನಾಯಾಂ ಏವ ಶ್ರುತೇಸ್ತಾತ್ಪರ್ಯಾತ್। 'ಅಜಾಮೇಕಾಂ' (ಶ್ವೇ.ಉ. ೪.೫) ಇತ್ಯಾದಿ ಶ್ರುತ್ಯಂತರೇಣ ಪ್ರಕೃತೇಃ ಸ್ರಷ್ಟೃತ್ವಸಿದ್ಧೇಃ ಪುಂಸಾಂ ಕೂಟಸ್ಥಚಿನ್ಮಾತ್ರತಾಬೋಧಕಶ್ರುತ್ಯಂತರ–ವಿರೋಧಾಚ್ಚೇತ್ಯರ್ಥಃ ।*

ಅಯಂ ಚಾಧ್ಯಾಸಃ ಉಪಚಾರರೂಪೋ ಲೋಕೇ ಸಿದ್ಧ ಏವಾಸ್ತಿ । ಯಥಾ ಸ್ವಶಕ್ತಿಷು ಯೋಧೇಷು ವರ್ತಮಾನೌ ಜಯಪರಾಜಯೌ ರಾಜನ್ಯುಪಚರ್ಯೇತೇ, ತಥಾ ಸ್ವಶಕ್ತೌ ಪ್ರಕೃತೌ ವರ್ತಮಾನಂ ಸ್ರಷ್ಟೃತ್ವಾದಿಕಂ ಶಕ್ತಿಮತ್ಸು ಪುರುಷೇಷು ಉಪಚರ್ಯತೇ, ಶಕ್ತಿ-ಶಕ್ತಿಮದಭೇದಾತ್ ।

ತದುಕ್ತಂ ಕೌರ್ಮೇ–

ಶಕ್ತಿಶಕ್ತಿಮತೋರ್ಭೇದಂ ಪಶ್ಯಂತಿ ಪರಮಾರ್ಥತಃ ।
ಅಭೇದಂ ಚಾನುಪಶ್ಯಂತಿ ಯೋಗಿನಸ್ತತ್ತ್ವಚಿಂತಕಾಃ ॥ ಇತಿ ॥
(ಕೂ.ಪು.೧.೧೨.೨೮)

ಭೇದಮನ್ಯೋನ್ಯಭಾವಮಭೇದಂಚಾವಿಭಾಗರೂಪಂ ಪ್ರಕೃತ್ಯಾದಿ–ತತ್ತ್ವೋಪಾಸಕಾಃ ಪಶ್ಯಂತೀತ್ಯರ್ಥಃ । ತಯೋಶ್ಚ ಉದಾಹರಣಂ– ಅಥಾತ ಆದೇಶೋ ನೇತಿನೇತಿ ಇತ್ಯಾದಿ ಶ್ರುತಿಃ (ಬೃ.ಉ. ೨.೩.೬) 'ಆತ್ಮೈವ ಇದಂ ಸರ್ವಂ' ಇತ್ಯಾದಿ, (ಛಾಂ.ಉ. ೭.೨೫.೨) ಶ್ರುತಿಶ್ಚ ಇತಿ ಭಾವಃ ।

ಅನುವಾದ: ಪ್ರಕೃತಿಯು ವಸ್ತುವೆಂದೂ ಸ್ರಷ್ಟೃವೆಂದೂ ಸಿದ್ಧವಾಗಿರಲಾಗಿ ಶ್ರುತಿಯಲ್ಲಿ ಹೇಳಿರುವ ಸ್ರಷ್ಟೃತ್ವವು ಪುರುಷನಲ್ಲಿ ಅಧ್ಯಾಸವಾಗಿರುವುದು ಸಿದ್ಧವಾಗುವುದು ಏಕೆಂದರೆ ಶ್ರುತಿಯಲ್ಲಿ ಹೇಳಿರುವ (ಆ ಸಂದರ್ಭವು) ಉಪಾಸನೆಗಾಗಿ ಮಾತ್ರ ಇರುವುದು. 'ಒಂದು ಆಡನ್ನು' (ಅಜಾಮೇಕಾಂ ಶ್ವೇ.ಉ. ೪.೫) ಎಂಬ ಇನ್ನೊಂದು ಶ್ರುತಿಯಿಂದ ಸ್ರಷ್ಟೃತ್ವವು ಸಿದ್ಧವಾಗುವುದು, ಹಾಗಿಲ್ಲದಿದ್ದಲ್ಲಿ ಪುರುಷರು ಕೂಟಸ್ಥ ಮತ್ತು ಚಿನ್ಮಾತ್ರರು ಎಂದು ತಿಳಿಸುವ ಬೇರೆ ಶ್ರುತಿಗಳಿಗೆ ವಿರೋಧವುಂಟಾಗುವುದು.

ಈ ಅಧ್ಯಾಸವು ಔಪಚಾರಿಕವಾಗಿ ಲೋಕದಲ್ಲಿ ಸಿದ್ಧವಾಗಿರುವುದಷ್ಟೆ. ಹೇಗೆ ತನ್ನ ಬಲವಾದ ಸೈನ್ಯದ ಜಯ ಅಪಜಯಗಳು ರಾಜನಿಗೆ ಅನ್ವಯಿಸುವಂತೆ ತನ್ನ ಶಕ್ತಿಯಾದ ಪ್ರಕೃತಿಯಲ್ಲಿ ಇರುವ ಸ್ರಷ್ಟೃತ್ವಾದಿಗಳನ್ನು ಶಕ್ತಿಮಂತನಾದ ಪುರುಷರಿಗೆ ಔಪಚಾರಿಕವಾಗಿ ಅನ್ವಯಿಸುವಂತೆ ಮಾಡುವರು ಏಕೆಂದರೆ ಶಕ್ತಿ ಮತ್ತು ಶಕ್ತಿಮಾನ್‌ಗಳ ನಡುವೆ ಭೇದವಿರದು.

ಕೂರ್ಮಪುರಾಣದಲ್ಲಿ ಹೀಗೆ ಹೇಳಿದೆ–

ಶಕ್ತಿ ಮತ್ತು ಶಕ್ತಿಮಾನ್‌ಗಳ ಭೇದವನ್ನು (ಸಾಧಾರಣ ಜನರು) ನಿಜವೆಂದು ಭಾವಿಸುವರು. ಆದರೆ ತತ್ತ್ವಚಿಂತನೆ ಮಾಡುವ ಯೋಗಿಗಳು ಅವುಗಳ ಅಭೇದವನ್ನು ಕಾಣುತ್ತಾರೆ.

'ಭೇದ' ಎಂದರೆ 'ಅನ್ಯೋನ್ಯಾಭಾವ', ಅಭೇದ ಎಂದರೆ ಅವಿಭಾಗರೂಪವಾದದ್ದು, ಹೀಗೆ ಪ್ರಕೃತಿಯೇ ಮೊದಲಾದ ತತ್ತ್ವಗಳನ್ನು ಉಪಾಸನೆ ಮಾಡುವವರು (ಯೋಗಿಗಳು) ತಿಳಿಯುತ್ತಾರೆ. ಅವೆರಡಕ್ಕೂ ಉದಾಹರಣೆಗಳನ್ನು ಹೇಳಿದೆ– 'ಇನ್ನು ಆದೇಶವು ಅದಲ್ಲ, ಅದಲ್ಲ' ಎಂದು ಶ್ರುತಿಯಿದೆ. 'ಆತ್ಮವೇ ಇದೆಲ್ಲವೂ' ಎಂಬ ಶ್ರುತಿಯೂ ಇದೆ.

ವಿವರಣೆ: '.... ನೇತಿ ನೇತಿ' ಎಂಬುದು ಭೇದಕ್ಕೂ, 'ಆತ್ಮೈವೇದಂ ಸರ್ವಮ್' ಎಂಬುದು ಅಭೇದಕ್ಕೂ ಉದಾಹರಣೆಗಳು.

ಭಾಷ್ಯ: *ನನ್ವೇವಂ ಪ್ರಕೃತಾವಪಿ ಸ್ರಷ್ಟೃತ್ವಂ ವಾಸ್ತವಮಿತಿ ಕುತೋಽವಧೃತಮ್, ಸೃಷ್ಟೇಃ ಸ್ವಪ್ನಾದಿತುಲ್ಯತಾಯಾಃ ಅಪಿ ಶ್ರವಣಾದಿತಿ, ತತ್ರಾಹ–*

ಅನುವಾದ: ಹಾಗೆ ಪ್ರಕೃತಿಯಲ್ಲಿಯೇ ಸ್ರಷ್ಟೃತ್ವವು ವಾಸ್ತವ ಎಂದು ಹೇಗೆ ನಿಶ್ಚೈಸಲ್ಪಟ್ಟಿತು? ಏಕೆಂದರೆ ಸ್ವಪ್ನಾದಿಗಳಲ್ಲೂ ಹೀಗೆಯೇ (ಸ್ರಷ್ಟೃತ್ವವಿದೆಯೆಂದು) ಕೇಳಿದ್ದೇವಲ್ಲ, ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ಕಾರ್ಯತಸ್ತತ್ಸಿದ್ಧೇಃ ॥ ೬ ॥

ಸೂತ್ರಾರ್ಥ: (ಪ್ರಕೃತಿಯ) ಪರಿಣಾಮಗಳಿಂದ (ಸ್ರಷ್ಟೃತ್ವ) ಸಿದ್ಧವಾಗುವುದು.

ವಿವರಣೆ: ಈ ಸೂತ್ರವನ್ನು ವೃತ್ತಿಕಾರನಾದ ಅನಿರುದ್ಧನು 'ತತ್‌ಸಿದ್ಧೇಃ'ಗೆ ಬದಲಾಗಿ 'ತತ್ಸಿದ್ಧಿಃ' ಎಂದು ಬರೆದಿದ್ದಾನೆ.

ಭಾಷ್ಯ: *ಕಾರ್ಯಾಣಾಮರ್ಥಕ್ರಿಯಾಕಾರಿತಯಾ ವಾಸ್ತವತ್ವೇನ ಕಾರ್ಯತ ಏವ ಧರ್ಮಿಗ್ರಾಹಕಪ್ರಮಾಣೇನ ಪ್ರಕೃತೇಃ ವಾಸ್ತವಸ್ರಷ್ಟೃತ್ವಸಿದ್ಧೇಃ ಇತ್ಯರ್ಥಃ । ಸ್ವಪ್ನಾದಿತುಲ್ಯತಾಶ್ರುತಯಃ ತು ಅನಿತ್ಯತಾರೂಪಾಸತ್ತ್ವಾಂಶ–ಮಾತ್ರೇ ಪುರುಷಾಧ್ಯಸ್ತತ್ವಾಂಶೇ ವಾ ಬೋಧ್ಯಾಃ, ಅನ್ಯಥಾ ಸೃಷ್ಟಿಪ್ರತಿಪಾದಕಶ್ರುತಿವಿರೋಧಾತ್ ಸ್ವಪ್ನಪದಾರ್ಥಾನಾಮಪಿ ಮನಃ ಪರಿಣಾಮತ್ವೇನ ಅತ್ಯಂತಾಸತ್ತಾವಿರಹಾಚ್ಚೇತಿ ।*

ಅನುವಾದ: ಕಾರ್ಯಗಳು ಉದ್ದಿಷ್ಟವಾದುದನ್ನು ಮಾಡಿ ತೋರಿಸುವುದರಿಂದ ವಾಸ್ತವತೆಯಿಂದ ಕೂಡಿ ಧರ್ಮಿಗ್ರಾಹಕವಾದ ಪ್ರಮಾಣದಿಂದ ಪ್ರಕೃತಿಯು ನಿಜವಾದ ಸ್ರಷ್ಟೃವೆಂಬುದು ಸಿದ್ಧವಾಗುವುದು ಎಂದರ್ಥ. ಸ್ವಪ್ನಾದಿಗಳೂ ಇದಕ್ಕೆ ಸಮನೆಂದು ಹೇಳುವ ಶ್ರುತಿಗಳು ಅದು ಅನಿತ್ಯರೂಪವಾದ ಅಸತ್ತ್ವಾಂಶಮಾತ್ರವೆಂದಾಗಲಿ ಪುರುಷನಲ್ಲಿ ಅಧ್ಯಾಸದ ಅಂಶವೆಂದಾಗಲಿ ಹೇಳುತ್ತವೆ ಎಂದು ತಿಳಿಯಬೇಕು. ಹಾಗಿಲ್ಲದಿದ್ದಲ್ಲಿ ಸೃಷ್ಟಿಯನ್ನು ಪ್ರತಿಪಾದಿಸುವ ಶ್ರುತಿಗಳಿಗೆ ವಿರೋಧವಾಗುವುದರಿಂದ ಸ್ವಪ್ನದ ಪದಾರ್ಥಗಳೂ ಸಹ ಮನಸ್ಸಿನ ಪರಿಣಾಮದ ಸ್ವರೂಪವನ್ನು ಪಡೆದು ಅತ್ಯಂತ ಅಸತ್ತಾ ಆಗುವುದಿಲ್ಲ.

ವಿವರಣೆ: ಧರ್ಮಿಗ್ರಾಹಕಪ್ರಮಾಣೇನ– ಎಂದರೆ, 'ವಸ್ತುವು ವಿಶಿಷ್ಟ ಗುಣವನ್ನು ಹೊಂದಿದೆಯೆಂದು ಯಾವುದರಿಂದ ಅನುಮಾನ ಮಾಡುವೆವೋ ಆ ಪ್ರಮಾಣದಿಂದ'.

ಪ್ರಕೃತಿಯು ತನ್ನ ಪರಿಣಾಮದಿಂದ ಕಾರ್ಯರೂಪವಾಗಿ (ಸ್ರಷ್ಟೃತ್ವ) ಪುರುಷನ ಭೋಗಾಪವರ್ಗಗಳಿಗೆ ಅನುವಾಗುವುದು ಎಂದು ಅಭಿಪ್ರಾಯ.

ಭಾಷ್ಯ: *ನನು ಪ್ರಕೃತೇಃ ಸ್ವಾರ್ಥತ್ವ ಪಕ್ಷೇ ಮುಕ್ತಪುರುಷಂ ಪ್ರತ್ಯಪಿ ಸಾ ಪ್ರವರ್ತೇತ, ತತ್ರಾಹ–*

ಅನುವಾದ: ಪ್ರಕೃತಿಯು (ಪುರುಷನಿಗೆ ಭೋಗಾಪವರ್ಗಗಳನ್ನು ಉಂಟುಮಾಡುವುದೇ) ನಿಜವಾದ ಉದ್ದೇಶವಾದರೆ ಮುಕ್ತನಾದ ಪುರುಷನ ಬಗ್ಗೆಯೂ ಅದು ಪ್ರವೃತ್ತವಾಗುವುದಲ್ಲವೆ? ಅದಕ್ಕೆ ಹೇಳಿದೆ–

ಸೂತ್ರ: ಚೇತನೋದ್ದೇಶಾನ್ನಿಯಮಃ ಕಂಟಕಮೋಕ್ಷವತ್ ॥ ೭ ॥

ಸೂತ್ರಾನುವಾದ: ಚೇತನವನ್ನು ಉದ್ದೇಶಿಸಿ (ಪ್ರಕೃತಿಯ ಪ್ರವೃತ್ತಿಯು) ಒಂದು ವ್ಯವಸ್ಥೆ; ಮುಳ್ಳನ್ನು ಹೋಗಲಾಡಿಸಲು ಇರುವಂತೆ,

ಭಾಷ್ಯ: *ಚಿತೀ ಸಂಜ್ಞಾನೇ ಇತಿ ವ್ಯುತ್ಪತ್ತ್ಯಾ ಚೇತನೋऽತ್ರ ಅಭಿಜ್ಞಃ । ಯಥೈಕಮೇವ ಕಂಟಕಂ ಯಶ್ಚೇತನೋऽಭಿಜ್ಞಃ ತಸ್ಮಾದೇವ ಮುಚ್ಯತೇ, ತಂ ಪ್ರತ್ಯೇವ ದುಃಖಾತ್ಮಕಂ ನ ಭವತಿ, ಅನ್ಯಾನ್ ಪ್ರತಿ ತು ಭವತ್ಯೇವ। ತಥಾ ಪ್ರಕೃತಿರಪಿ ಚೇತನಾದಭಿಜ್ಞಾತ್ ಕೃತಾರ್ಥಾದೇವಂ ಉಚ್ಯತೇ। ತಂ ಪ್ರತಿ ಏವ ದುಃಖಾತ್ಮಿಕಾ ನ ಭವತಿ । ಅನ್ಯಾನಭಿಜ್ಞಾನ್ ಪ್ರತಿ ತು ದುಃಖಾತ್ಮಿಕಾ ಭವತ್ಯೇವೇತಿ ನಿಯಮೋ ವ್ಯವಸ್ಥೇತ್ಯರ್ಥಃ ।*

ಅನುವಾದ: ಚಿತೀ ಸಂಜ್ಞಾನೇ ಎಂಬ ವ್ಯುತ್ಪತ್ತಿಯಂತೆ ಚೇತನ ಪದವು 'ಅರಿತವನು' ಎಂಬ ಅರ್ಥವುಳ್ಳದ್ದು. ಹೇಗೆ ಒಂದೇ ಮುಳ್ಳು ಇದ್ದರೂ ಜ್ಞಾನಿಯಾದ ಚೇತನದಿಂದ ಅದು ದೂರವಿರುವುದೊ ಮತ್ತು ಅದು ನೋವನ್ನು ನೀಡದೋ ಹಾಗೆ ಇತರೆ (ಅಜ್ಞಾನಿಗಳಿಗೆ) (ಅದೇ ಕಂಟಕ) ನೋವನ್ನು ನೀಡುವುದು. ಹಾಗೆಯೇ ಪ್ರಕೃತಿಯೂ ಸಹ ಜ್ಞಾನಿಯಾದ ಚೇತನನಿಗೆ, ಅವನು ಕೃತಾರ್ಥನಾದ ಕಾರಣ, ದೂರವಿರುತ್ತದೆ. ಕೇವಲ ಅವನಲ್ಲಿ ಮಾತ್ರ ದುಃಖ ಉಂಟುಮಾಡುವುದಿಲ್ಲ. ಆದರೆ ಇತರ ಅಜ್ಞಾನಿಗಳನ್ನು ದುಃಖಕ್ಕೆ ಗುರಿಮಾಡುವುದು ಎಂಬುದು ವ್ಯವಸ್ಥೆ.

ವಿವರಣೆ: ಪ್ರಜ್ಞೆಯಿಂದ ಕೂಡಿದ ಚೇತನರು ಪ್ರಕೃತಿಯಿಂದ ಅಪವರ್ಗದ ಪ್ರಯೋಜನ ಪಡೆದರೆ ಅಜ್ಞಾನಿಗಳು ಭೋಗದಲ್ಲಿ ಸಿಕ್ಕಿಹಾಕಿಕೊಳ್ಳುವರು.

ಭಾಷ್ಯ: *ಏತೇನ ಸ್ವಭಾವತೋ ಬದ್ಧಾಯಾ ಅಪಿ ಪ್ರಕೃತೇಃ ಸ್ವಮೋಕ್ಷೋ ಘಟತೇ ಇತಿ ಅತೋ ನ ಮುಕ್ತಪುರುಷಂ ಪ್ರತಿ ಪ್ರವರ್ತತೇ ।*

ಅನುವಾದ: ಇದರಿಂದ ಸ್ವಾಭಾವಿಕವಾಗಿ ಪ್ರಕೃತಿಯು ಬದ್ಧವಾಗಿದ್ದರೂ ಅದಕ್ಕೆ ಆ ಚೇತನನಿಂದ ಮೋಕ್ಷ ಉಂಟಾಗುವುದು. ಆದ್ದರಿಂದ ಮುಕ್ತಪುರುಷನ ವಿಷಯದಲ್ಲಿ ಅದು ತೊಡಗದು.

ಭಾಷ್ಯ: *ನನು ಪುರುಷೇ ಸ್ರಷ್ಟೃತ್ವಮಧ್ಯಸ್ತಮಾತ್ರಮಿತಿ ಯದುಕ್ತಂ ತನ್ನ ಯುಕ್ತಮ್। ಪ್ರಕೃತಿಸಂಯೋಗೇನ ಪುರುಷಸ್ಯಾಪಿ ಮಹದಾದಿಪರಿಣಾಮೌಚಿತ್ಯಾತ್। ದೃಷ್ಟೋ ಹಿ ಪೃಥಿವ್ಯಾದಿಯೋಗೇನ ಕಾಷ್ಠಾದೇಃ ಪೃಥಿವ್ಯಾದಿಸದೃಶಃ ಪರಿಣಾಮ ಇತಿ । ತತ್ರಾಹ–*

ಅನುವಾದ: ಪುರುಷನಲ್ಲಿ ಸ್ರಷ್ಟೃತ್ವವನ್ನು ಅಧ್ಯಾರೋಪ ಮಾಡಿದ್ದಾರಷ್ಟೆ ಎಂದು ಹೇಳಿದ್ದೀರಿ,

ಅದು ಸರಿಯಲ್ಲ. ಪ್ರಕೃತಿ ಸಂಯೋಗದ ಕಾರಣ ಪುರುಷನಲ್ಲಿಯೂ ಮಹದಾದಿಗಳು ಪರಿಣಾಮಗೊಳ್ಳುವುದು ಸರಿಯಾದುದು, ಅಲ್ಲವೆ? ಪೃಥಿವೀ ಮುಂತಾದುವುಗಳ ಸಂಬಂಧದಿಂದ ಕಾಷ್ಠಾದಿಗಳಲ್ಲಿ ಪೃಥಿವ್ಯಾದಿಗಳಿಗೆ ಸದೃಶವಾದ ಪರಿಣಾಮವುಂಟಾಗುವುದು. ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ಅನ್ಯಯೋಗೇऽಪಿ ತತ್ಸಿದ್ಧಿರ್ನಾಂಜಸ್ಯೇನಾಯೋದಾಹವತ್ ॥ ೮ ॥

ಸೂತ್ರಾನುವಾದ: ಬೇರೆಯದರ ಸಹಯೋಗವಿದ್ದರೂ ಕೂಡಲೆ (ಸಾಕ್ಷಾತ್) ಅದರ ಪ್ರಾಪ್ತಿಯಾಗದು, ಕಬ್ಬಿಣದಲ್ಲಿರುವ ಬೆಂಕಿಯಂತೆ.

ಭಾಷ್ಯ: *ಪ್ರಕೃತಿಯೋಗೇऽಪಿ ಪುರುಷಸ್ಯ ನ ಸ್ರಷ್ಟೃತ್ವಸಿದ್ಧಿಃ ಆಂಜಸ್ಯೇನ ಸಾಕ್ಷಾತ್। ತತ್ರ ದೃಷ್ಟಾಂತೋ ಅಯೋದಾಹವತ್ । ಯಥಾ ಅಯಸೋ ನ ದ್ರಷ್ಟೃತ್ವಂ ಸಾಕ್ಷಾದಸ್ತಿ, ಕಿಂತು ಸ್ವಸಂಯುಕ್ತಾಗ್ನಿದ್ವಾರಕಂ ಅಧ್ಯಸ್ತಮೇವೇತ್ಯರ್ಥಃ । ಉಕ್ತದೃಷ್ಟಾಂತೇ ತೂಭಯೋಃ ಪರಿಣಾಮಃ ಪ್ರತ್ಯಕ್ಷಸಿದ್ಧತ್ವಾದಿಷ್ಯತೇ । ಸಂದಿಗ್ಧಸ್ಥಲೇ ತ್ವೇಕಸ್ಯೈವ ಪರಿಣಾಮೇನ ಉಪಪತ್ತೌ ಉಭಯೋಃ ಪರಿಣಾಮಕಲ್ಪನೇ ಗೌರವಮ್ । ಅನ್ಯಥಾ ಜಪಾಸಂಯೋಗಾತ್ ಸ್ಫಟಿಕಸ್ಯ ರಾಗಪರಿಣಾಮಾಪತ್ತೇರಿತಿ ।*

ಅನುವಾದ: ಪ್ರಕೃತಿಯೊಡನೆ ಸೇರಿದರೂ ಪುರುಷನಲ್ಲಿ ಸ್ರಷ್ಟೃತ್ವಸಿದ್ಧಿಯು, 'ಆಂಜಸ್ಯೇನ' ಎಂದರೆ ಸಾಕ್ಷಾತ್ತಾಗಿ, ಆಗದು. ಅದಕ್ಕೆ ಉದಾಹರಣೆಯಾಗಿ ಅಯೋದಾಹ ಅಥವಾ ಕಬ್ಬಿಣದಲ್ಲಿ ಸುಡುವ ಶಕ್ತಿಯಂತೆ. ಕಬ್ಬಿಣಕ್ಕೆ ಸ್ವತಃ ಸುಡುವ ಶಕ್ತಿ ಸಾಕ್ಷಾತ್ತಾಗಿ ಇಲ್ಲ. ಆದರೆ ತನ್ನಲ್ಲಿ ಸೇರಿ ಹೋದ ಅಗ್ನಿಯ ಮೂಲಕ ಅಧ್ಯಾಸ ಮಾಡಲ್ಪಡುತ್ತದೆ. ಈ ದೃಷ್ಟಾಂತದಲ್ಲಿ ಎರಡೂ ಪರಿಣಾಮಗೊಳ್ಳುವುದು ಪ್ರತ್ಯಕ್ಷವಾದ್ದರಿಂದ ಎರಡರಲ್ಲೂ ಪರಿಣಾಮವನ್ನು ನಾವು ನಂಬುತ್ತೇವೆ. ಸಂದೇಹವಿರುವೆಡೆ ಒಂದರಲ್ಲಿಯೇ ಪರಿಣಾಮವು ಉಂಟಾದರೆ ಎರಡರಲ್ಲಿಯೂ ಪರಿಣಾಮವನ್ನು ಕಲ್ಪಿಸುವುದರ ಅಗತ್ಯ ಬರದು. ಹಾಗಿಲ್ಲದಿದ್ದಲ್ಲಿ ದಾಸವಾಳ ಹೂವಿನೊಡನೆ ಸ್ಫಟಿಕದಲ್ಲಿಯೂ ಕೆಂಪು ಬಣ್ಣವನ್ನು ಪರಿಣಾಮವೆಂದು ಭಾವಿಸಬೇಕಾದೀತು.

ವಿವರಣೆ: ಅಗ್ನಿಗೆ ಆಶ್ರಯವಾಗಿರುವುದು ಕಬ್ಬಿಣ. ಆದರೆ ನಾವು ಭಾವಿಸುವುದು ಕಬ್ಬಿಣವೇ ಸುಟ್ಟೀತೆಂದು.

ಭಾಷ್ಯ: *ಸೃಷ್ಟೇಃ ಫಲಂ ಮೋಕ್ಷ ಇತಿ ಪ್ರಾಗುಕ್ತಮ್ ಇದಾನೀಂ ಸೃಷ್ಟೇಃ ಮುಖ್ಯಂ ನಿಮಿತ್ತಕಾರಣಮಾಹ–*

ಅನುವಾದ: ಸೃಷ್ಟಿಯ ಫಲ ಮೋಕ್ಷವೆಂದು ಮೊದಲೇ ಹೇಳಿದೆ. ಈಗ ಸೃಷ್ಟಿಯ ಮುಖ್ಯ ನಿಮಿತ್ತ ಕಾರಣವನ್ನು ಹೇಳಿದೆ.

ಸೂತ್ರ: ರಾಗವಿರಾಗಯೋರ್ಯೋಗಃ ಸೃಷ್ಟಿಃ ॥ ೯ ॥

ಸೂತ್ರಾನುವಾದ: ರಾಗದಿಂದ ಸೃಷ್ಟಿಯೂ ವಿರಾಗದಿಂದ ಯೋಗವೂ ಉಂಟಾಗುತ್ತವೆ.

ಭಾಷ್ಯ: *ರಾಗೇ ಸೃಷ್ಟಿಃ ವೈರಾಗ್ಯೇ ಚ ಯೋಗಃ ಸ್ವರೂಪೇಽವಸ್ಥಾನಮ್, ಮುಕ್ತಿರಿತಿ ಯಾವತ್ । ಅಥವಾ ಚಿತ್ತವೃತ್ತಿನಿರೋಧಃ ಇತ್ಯರ್ಥಃ। ತಥಾ ಚ ಅನ್ವಯವ್ಯತಿರೇಕಾಭ್ಯಾಂ ರಾಗಃ ಸೃಷ್ಟಿಕಾರಣಮಿತ್ಯಾಶಯಃ । ತಥಾ ಚ ಶ್ರುತಿರಪಿ ಬ್ರಹ್ಮಾದಿರೂಪಾಂ ವಿವಿಧಕರ್ಮಗತಿಂ ಉಕ್ತ್ವಾ ಆಹ– 'ಇತಿ ತು ಕಾಮಯಮಾನೋಽಥಾಕಾಮಯಮಾನೋಯೋಽಕಾಮೋ ನಿಷ್ಕಾಮ ಆಪ್ತಕಾಮ ಆಪ್ತಕಾಮೋ । ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ । ನ ತಸ್ಯ ಪ್ರಾಣಾ ಉತ್ಕ್ರಾಮಂತಿ' (ಬೃ.ಉ. ೪.೪.೬) ಇತಿ । ರಾಗವೈರಾಗ್ಯೇ ಪ್ರಕೃತಿಧರ್ಮೌ ಏವ।*

ಅನುವಾದ: ರಾಗವಿರುವಾಗ ಸೃಷ್ಟಿ, ವೈರಾಗ್ಯವಿರುವಾಗ ಯೋಗ ಆದರೆ ಸ್ವತಃ ತನ್ನ ರೂಪದಲ್ಲಿರುವಾಗ ಅವಸ್ಥಾನ ಎಂದರೆ ಮುಕ್ತಿ. ಅಥವಾ ಚಿತ್ತವೃತ್ತಿಯನ್ನು ಹತೋಟಿಯಲ್ಲಿಡುವುದು ಎಂದರ್ಥ. ಹೀಗೆ ಅನ್ವಯವ್ಯತಿರೇಕಗಳಿಂದ ರಾಗವು ಸೃಷ್ಟಿಗೆ ಕಾರಣ ಎಂದು ಅಭಿಪ್ರಾಯ. ಹಾಗೆಯೇ ಶ್ರುತಿಯೂ ಸಹ ಬ್ರಹ್ಮಾದಿರೂಪದ ವಿವಿಧ ಕರ್ಮಗತಿಗಳನ್ನು ಹೇಳಿ ತಿಳಿಸಿದ್ದಾರೆ– 'ಹೀಗೆ ಇಚ್ಛೆಯನ್ನು ಉಳ್ಳವನು (ಪುನಃ ಈ ಲೋಕಕ್ಕೆ ಬರುವನು). ಕಾಮವಿಲ್ಲದವನ ಪ್ರಾಣಗಳ ಉತ್ಕ್ರಮಣ ಮಾಡಲಾರವು. ಅವನು ಬ್ರಹ್ಮನೇ ಆಗಿ ಬ್ರಹ್ಮನನ್ನೇ ಪಡೆಯುವನು. ಅವನ ಪ್ರಾಣವು ಹಾರಿಹೋಗದು' ಎಂದು. ರಾಗ–ವೈರಾಗ್ಯಗಳೂ ಸಹ ಪ್ರಕೃತಿಧರ್ಮಗಳೇ.

ಭಾಷ್ಯ: *ಇತಃ ಪರಂ ಸೃಷ್ಟಿಪ್ರಕ್ರಿಯಾಂ ವಕ್ತುಮಾರಭತೇ ।*

ಅನುವಾದ: ಇನ್ನು ಮುಂದೆ ಸೃಷ್ಟಿಪ್ರಕ್ರಿಯೆಯನ್ನು ಹೇಳಲು ತೊಡಗುವರು.

ಸೂತ್ರ: ಮಹದಾದಿಕ್ರಮೇಣ ಪಂಚಭೂತಾನಾಮ್ ॥ ೧೦ ॥

ಸೂತ್ರಾನುವಾದ: ಮಹತ್ತೇ ಮೊದಲಾಗಿ ಕ್ರಮವಾಗಿ ಪಂಚಭೂತಗಳ (ಸೃಷ್ಟಿಯಾಗುವುದು)

ಭಾಷ್ಯ: *ಸೃಷ್ಟಿರಿತಿ ಪೂರ್ವಸೂತ್ರಾದನುವರ್ತತೇ । ಯದ್ಯಪಿ 'ಏತಸ್ಮಾದಾತ್ಮನಃ ಆಕಾಶಃ ಸಂಭೂತಃ' (ತೈ.ಉ. ೨.೧) ಶ್ರುತಾವಾದಾವೇವ ಪಂಚಭೂತಾನಾಂ ಸೃಷ್ಟಿಃ ಶ್ರೂಯತೇ, ತಥಾಪಿ ಮಹಾದಾದಿಕ್ರಮೇಣೈವ ಪಂಚಭೂತಾನಾಂ ಸೃಷ್ಟಿಃ ಇಷ್ಟಾ ಇತ್ಯರ್ಥಃ । ತೇಜ ಆದಿ ಸೃಷ್ಟಿಶ್ರುತೌ ಗಗನವಾಯು.ಸೃಷ್ಟೇರಾಪೂರಣವತ್ ಉಕ್ತಶ್ರುತಾವಪ್ಯಾದೌ ಮಹದಾದಿಸೃಷ್ಟಿಃ ಪೂರಣೀಯೇತಿ ಭಾವಃ । ಅತ್ರ ಚ ಪ್ರಮಾಣಂ ಘಟಸೃಷ್ಟಿವದಂತಃಕರಣಾತಿರಿಕ್ತಾಖಿಲಸೃಷ್ಟೇರಂತಃಕರಣವೃತ್ತಿಪೂರ್ವ–ಕತ್ವಾನುಮಾನಮ್।*

ಅನುವಾದ: 'ಸೃಷ್ಟಿ' ಎಂದು ಹಿಂದಿನ ಸೂತ್ರದಿಂದ ಸೇರಿಸಿಕೊಳ್ಳಬೇಕು, 'ಈ ಆತ್ಮನಿಂದ ಆಕಾಶವು ಹುಟ್ಟಿತು' ಎಂದು ಶ್ರುತಿಯು ಆದಿಯಲ್ಲಿಯೇ ಪಂಚಭೂತಗಳ ಸೃಷ್ಟಿಯಾಯಿತೆಂದು ಹೇಳಿರುವುದನ್ನು ಕೇಳಿದ್ದೇವೆ. ಆದರೂ ಮಹದಾದಿಕ್ರಮದಿಂದ ಪಂಚಭೂತಗಳ ಸೃಷ್ಟಿಯಾಯಿತೆಂದು ಅಭಿಪ್ರಾಯವಿದೆ. ತೇಜಸ್ಸೇ ಮೊದಲಾದುವುಗಳ

ಸೃಷ್ಟಿಯನ್ನು ಕೇಳಿದರೆ ಗಗನ, ವಾಯುಗಳ ಸೃಷ್ಟಿಯಿಂದ ಪೂರ್ಣಗೊಳ್ಳುತ್ತದೆ. ಹಾಗೆಯೇ ಮಹದಾದಿಸೃಷ್ಟಿಯನ್ನು ಪೂರ್ಣಗೊಳಿಸಬೇಕು ಎಂದು ಭಾವ. ಇಲ್ಲೂ ಸಹ ಘಟದ ಸೃಷ್ಟಿಯಂತೆ ಅಂತಃಕರಣಾತಿರಿಕ್ತವಾದ ಎಲ್ಲ ಸೃಷ್ಟಿಯು ಅಂತಃಕರಣವೃತ್ತಿಪೂರ್ವಕವಾಗಿ ಆಗುವ (ಸಂಪೂರ್ಣತೆಯನ್ನು) ಅನುಮಾನ ಪ್ರಮಾಣದಿಂದ ತಿಳಿಯಬಹುದು.

ಭಾಷ್ಯ: *ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ । ಖಂ ವಾಯುರ್ಜ್ಯೋತಿರಾಪಶ್ಚಪೃಥಿವೀ ವಿಶ್ವಸ್ಯಧಾರಿಣೀ ॥ (ಮುಂ.ಉ. ೨.೧.೩)*

ಅನುವಾದ: 'ಇದರಿಂದ ಪ್ರಾಣ, ಮನಸ್ಸು, ಎಲ್ಲ ಇಂದ್ರಿಯಗಳೂ, ಆಕಾಶ, ವಾಯು, ಜ್ಯೋತಿ, ಜಲ ಮತ್ತು ವಿಶ್ವವನ್ನೇ ಧರಿಸಿರುವ ಪೃಥಿವಿ ಉತ್ಪನ್ನವಾಗುತ್ತವೆ.'

ಭಾಷ್ಯ: *ಇತಿ ಶ್ರುತ್ಯಂತರಸ್ಥಪಾಠಕ್ರಮಾನುರೋಧೇನ, 'ಸ ಪ್ರಾಣಮಸೃಜತ್ ಪ್ರಾಣಾಚ್ಛ್ರದ್ಧಾಂ ಖಂ ವಾಯುಮಿತ್ಯಾದಿ (ಪ್ರಶ್ನೋ. ಉ. ೬.೩.೪) ಶ್ರುತ್ಯಂತರೇಣ ಚ ಪಂಚಭೂತಸೃಷ್ಟೇಃ ಪ್ರಾಙ್‌ಮಹದಾದಿಸೃಷ್ಟಿರವ-ಧಾರ್ಯತೇ' ಇತಿ । ಪ್ರಾಣಶ್ಚ ಅಂತಃಕರಣಸ್ಯ ವೃತ್ತಿಭೇದ ಇತಿ ವಕ್ಷ್ಯತಿ (ಸಾಂ.ಸೂ. ೨.೩೧) । ಅತಃ ಅಸ್ಯಾಂ ಶ್ರುತೌ ಪ್ರಾಣ ಏವ ಮಹತ್ತತ್ತ್ವಮಿತಿ ।*

ಅನುವಾದ: ಹೀಗೆ ಬೇರೆಯ ಶ್ರುತಿಯಲ್ಲಿರುವ ಪಾಠಕ್ರಮದ ಅನುಸರಣೆಯಿಂದ, 'ಅವನು ಪ್ರಾಣವನ್ನು ಸೃಷ್ಟಿಸಿದನು, ಪ್ರಾಣದಿಂದ ಶ್ರದ್ಧೆಯನ್ನೂ, ಆಕಾಶವನ್ನೂ, ವಾಯುವನ್ನೂ (ಸೃಷ್ಟಿಸಿದನು)' ಈ ಶ್ರುತಿಯಿಂದಲೂ ಪಂಚಭೂತಗಳ ಸೃಷ್ಟಿಯ ಮೊದಲು ಮಹದಾದಿಗಳ ಸೃಷ್ಟಿಯೂ ನಿರ್ಧಾರವಾಗುತ್ತದೆ. ಪ್ರಾಣವೂ ಸಹ ಅಂತಃಕರಣದ ಒಂದು ವೃತ್ತಿವಿಶೇಷವೆಂದು ಮುಂದೆ ಹೇಳುವರು. ಆದ್ದರಿಂದ ಈ ಶ್ರುತಿಯಲ್ಲಿ ಪ್ರಾಣವೇ ಮಹತ್ತತ್ತ್ವವು.

ಭಾಷ್ಯ: *ತಥಾ ವೇದಾಂತಸೂತ್ರಮಪಿ ಮಹದಾದಿಕ್ರಮೇಣೈವ ಸೃಷ್ಟಿಂ ವಕ್ತಿ 'ಅಂತರಾವಿಜ್ಞಾನಮನಸೀ ಕ್ರಮೇಣ ತಲ್ಲಿಂಗಾತ್ ಇತಿ' । (ಬ್ರ.ಸೂ. ೨.೩.೧೫) ಸದಾಕಾಶಯೋರ್ಮಧ್ಯೇ ಬುದ್ಧಿಮನಸೀ ಉತ್ಪಾದ್ಯೇ ಇತಿ ಕ್ರಮೇಣೇತ್ಯರ್ಥಃ । ಮನಸಿ ವಾಽಹಂಕಾರಸ್ಯ ಪ್ರವೇಶ ಇತಿ ।*

ಅನುವಾದ: ಹಾಗೆಯೇ ವೇದಾಂತಸೂತ್ರವೂ ಸಹ ಮಹದಾದಿ ಕ್ರಮದಿಂದ ಸೃಷ್ಟಿಯನ್ನು ಹೇಳುತ್ತದೆ– 'ವಿಜ್ಞಾನಮನಸ್ಸುಗಳ ನಡುವೆ ಹೀಗೆ ಆಕ್ರಮದ ಕಾರಣದಿಂದ' ಎಂದು. ಸತ್ ಮತ್ತು ಆಕಾಶಗಳ ನಡುವೆ ಬುದ್ಧಿ ಮನಸ್ಸುಗಳು ಉತ್ಪನ್ನವಾಗುತ್ತವೆ ಎಂದು ಆ ಕ್ರಮದಲ್ಲಿ ಹೇಳಿದೆ. ಮನಸ್ಸಿನಲ್ಲಿ ಅಹಂಕಾರವೂ ಸೇರಿಹೋಗುತ್ತದೆ.

ಭಾಷ್ಯ: *ಪ್ರಕೃತೇರೇವ ಸ್ರಷ್ಟೃತ್ವಂ ಸ್ವಮೋಕ್ಷಾರ್ಥಂ, ಕಸ್ಮಾ ನಿತ್ಯತ್ವಾತ್, ಮಹದಾದೀನಾಂ ತು ಸ್ವಸ್ವವಿಕಾರಸ್ರಷ್ಟೃತ್ವಂ ನ ಸ್ವಮೋಕ್ಷಾರ್ಥಂ ಅನಿತ್ಯತ್ವಾದಿತಿ, ವಿಶೇಷಮಾಹ–*

ಅನುವಾದ: ಪ್ರಕೃತಿಯ ಸೃಷ್ಟಿಕ್ರಮ ತನ್ನ ಮೋಕ್ಷಕ್ಕಾಗಿ ಏಕೆಂದರೆ ಅದು ನಿತ್ಯ; ಮಹದಾದಿಗಳಾದರೋ ತಮ್ಮ ತಮ್ಮ ವಿಕಾರಗಳನ್ನು ಸೃಷ್ಟಿ ಮಾಡುತ್ತವೆ ಆದರೆ ಅದು ತಮ್ಮ ಮೋಕ್ಷಕ್ಕಾಗಿ ಅಲ್ಲ. ಮತ್ತೆ ವಿಶೇಷವನ್ನು ಹೇಳಿದೆ.

ಸೂತ್ರ: ಆತ್ಮಾರ್ಥತ್ವಾತ್ ಸೃಷ್ಟೇರ್ನೈಷಾಮಾತ್ಮಾರ್ಥ ಆರಂಭಃ ॥ ೧೧ ॥

ಸೂತ್ರಾನುವಾದ: ಆತ್ಮದ ಸಲುವಾಗಿ ಸೃಷ್ಟಿಯಾದ್ದರಿಂದ ಈ ಮಹದಾದಿಗಳು ತಮ್ಮ ಸಲುವಾಗಿ ಸ್ರಷ್ಟೃತ್ವವನ್ನು ಹೊಂದಿಲ್ಲ.

ಭಾಷ್ಯ: *ಏಷಾಂ ಮಹದಾದೀನಾಂ ಸ್ರಷ್ಟೃತ್ವಸ್ಯಾತ್ಮಾರ್ಥತ್ವಾತ್ ಪುರುಷಮೋಕ್ಷಾರ್ಥತ್ವಾತ್ ನ ಸ್ವಾರ್ಥೇ ಆರಂಭಃ । ಸ್ರಷ್ಟೃತ್ವವಿನಾಶಿತ್ವೇನ ಮೋಕ್ಷಾಯೋಗಾದಿತ್ಯರ್ಥಃ । ಪರಮೋಕ್ಷಾರ್ಥಕತ್ವೇ ಚಾವಶ್ಯಕೇ ಪುರುಷಮೋಕ್ಷಾರ್ಥಕತ್ವಮೇವ ಯುಕ್ತಂ, ನ ಪ್ರಕೃತಿ ಮೋಕ್ಷಾರ್ಥಕತ್ತ್ವಮ್ । ತಸ್ಯಾಃ ಪುರುಷಗುಣತ್ವಾದಿತಿ ।*

ಅನುವಾದ: ಹೀಗೆ ಈ ಮಹದಾದಿಗಳ ಸ್ರಷ್ಟೃತ್ವವು ಆತ್ಮಕ್ಕಾಗಿ ಎಂದರೆ ಪುರುಷನ ಮೋಕ್ಷದ ಸಲುವಾಗಿ, ತಮ್ಮ ಸಲುವಾಗಿ ಆ ಸೃಷ್ಟಿಯಲ್ಲ. ಸ್ರಷ್ಟೃತ್ವವು ವಿನಾಶಿತ್ವದೊಡನೆ ಇರುವುದರಿಂದ ಮೋಕ್ಷದ ವಿಷಯದಲ್ಲಿ ಸಂಬಂಧ ಹೊಂದಿರುವುದಿಲ್ಲ. ಆದರೆ ಇತರರ ಮೋಕ್ಷದ ಸಲುವಾಗಿ ಎಂಬುದನ್ನು ಒಪ್ಪುವುದು ಆವಶ್ಯಕ; ಆದ್ದರಿಂದ ಪುರುಷನ ಮೋಕ್ಷಕ್ಕಾಗಿ ಎಂಬುದನ್ನು ತಿಳಿಯುವುದು ಉಚಿತ, ಆದರೆ ಪ್ರಕೃತಿಯ ಮೋಕ್ಷಕ್ಕಾಗಿ ಅಲ್ಲ, ಏಕೆಂದರೆ ಅದು ಪುರುಷನ ಕೇವಲ ಗುಣವಷ್ಟೆ.

ಭಾಷ್ಯ: *ಖಂಡದಿಕ್ಕಾಲಯೋಃ ಸೃಷ್ಟಿಮಾಹ–*

ಸೂತ್ರ: ದಿಕ್ಕಾಲಾವಕಾಶಾದಿಭ್ಯಃ ॥ ೧೨ ॥

ಅನುವಾದ: ಕ್ಲಪ್ತವಾದ ದಿಕ್‌ಕಾಲಗಳ ಸೃಷ್ಟಿಯನ್ನು ಹೇಳಿದೆ–

ಸೂತ್ರಾನುವಾದ: ದಿಕ್ಕು, ಕಾಲುಗಳು ಆಕಾಶಾದಿಗಳಿಗಿಂತ ಬೇರೆಯಲ್ಲ.

ಭಾಷ್ಯ: *ನಿತ್ಯೌ ಯೌ ದಿಕ್ಕಾಲೌ ತಾವಾಕಾಶಪ್ರಕೃತಿಭೂತೌ ಪ್ರಕೃತೇಃ ಗುಣವಿಶೇಷೌ ಏವ । ಅತಃ ದಿಕ್ಕಾಲಯೋರ್ವಿಭುತ್ವೋಪಪತ್ತಿಃ । 'ಆಕಾಶವತ್–ಸರ್ವಗತಶ್ಚ ನಿತ್ಯಃ' । (ಛಾಂ.ಉ. ೬.೩.೨) ಇತ್ಯಾದಿ ಶ್ರುತ್ಯುಕ್ತಂ ವಿಭುತ್ವಂ ಚಾಕಾಶಸ್ಯೋಪಪನ್ನಮ್ । ಯೌ ತು ಖಂಡದಿಕ್ಕಾಲೌ ತೌ ತು ತತ್ತದುಪಾಧಿಸಂಯೋಗಾತ್ ಆಕಾಶಾತ್ ಉತ್ಪದ್ಯೇತೇ ಇತ್ಯರ್ಥಃ । ಆದಿಶಬ್ದೇನ ಉಪಾಧಿಗ್ರಹಣಾದಿತಿ । ಯದ್ಯಪಿ ತತ್ತದುಪಾಧಿವಿಶಿಷ್ಟಾ–ಕಾಶಮೇವ ಖಂಡದಿಕ್ಕಾಲೌ ತಥಾಪಿ ವಿಶಿಷ್ಟಸ್ಯಾತಿರಿಕ್ತತಾಭ್ಯುಪಗಮ–ವಾದೇನ ವೈಶೇಷಿಕನಯೇ ಶ್ರೋತ್ರಸ್ಯ ಕಾರ್ಯತಾವತ್ ತತ್ಕಾರ್ಯತ್ವಂ ಅತ್ರೋಕ್ತಮ್ ।*

ಅನುವಾದ: ನಿತ್ಯವಾದ ದಿಕ್‌ಕಾಲಗಳು ಆಕಾಶದ ಪ್ರಕೃತಿ ಭೂತಗಳು. ಅರ್ಥಾತ್ ಪ್ರಕೃತಿಯ ಗುಣವಿಶೇಷಗಳಷ್ಟೆ. ಆದ್ದರಿಂದ ದಿಕ್ಕು, ಕಾಲಗಳೆರಡೂ ವಿಭುಗಳಾಗಿರಬೇಕು. 'ಆಕಾಶದಂತೆ ಸರ್ವಗತವೂ, ನಿತ್ಯವೂ ಆಗಿರುತ್ತದೆ; ಮುಂತಾದ ಶ್ರುತ್ಯುಕ್ತವಾದ ವಿಭುತ್ವವು ಆಕಾಶದಿಂದ ಉಂಟಾಗುತ್ತವೆ. 'ಯಾವ ದಿಕ್ಕಾಲಗಳು ಆಯಾ ಉಪಾಧಿಗಳ ಸಂಬಂಧದ ಕಾರಣ ಆಕಾಶದಿಂದ ಉಂಟಾಗುತ್ತವೆ' ಎಂದರ್ಥ. 'ಆದಿ' ಶಬ್ದದಿಂದ ಉಪಾಧಿಗ್ರಹಣದಿಂದ ಎಂದರ್ಥ. ಆಯಾ ಉಪಾಧಿವಿಶಿಷ್ಟವಾದ ಆಕಾಶವಾದರೂ ಆಕಾಶವೇ ಖಂಡದಿಕ್ಕಾಲಗಳಾಗಿ ಇರುತ್ತದೆ. ಹಾಗಿದ್ದರೂ ವಿಶಿಷ್ಟವಾದುದನ್ನು ಮೀರಿದ್ದು ಎಂದು ವಾದ ಮಾಡುವುದರಿಂದ, ವೈಶೇಷಿಕ ಶಾಸ್ತ್ರದಲ್ಲಿ ಶ್ರೋತ್ರದ ಕಾರ್ಯವಾಗಿರುವಂತೆ, ಅದೂ ಕಾರ್ಯವೆಂದು ಇಲ್ಲಿ ಹೇಳಲಾಗಿದೆ.

ವಿವರಣೆ: ದಿಕ್(Space) ಮತ್ತು ಕಾಲ (Time) ಇವುಗಳನ್ನು ಕುರಿತು ಸಾಂಖ್ಯದ ನಿಲುವನ್ನು ತಿಳಿಸುವ ಈ ಭಾಷ್ಯ-ಭಾಗ ಬಹಳ ಮುಖ್ಯವಾದುದು. ಸಾಂಖ್ಯರ ದೃಷ್ಟಿಯಲ್ಲಿ ದಿಕ್ ಮತ್ತು ಕಾಲಗಳು ಆಕಾಶದ ಉಪಾಧಿಗಳು, ಸ್ವತಂತ್ರ ವಸ್ತುಗಳಲ್ಲ.

ಭಾಷ್ಯ: *ಇದಾನೀಂ 'ಮಹದಾದಿ ಕ್ರಮೇಣ' ಇತ್ಯುಕ್ತಾನ್ (ಸಾಂ.ಸೂ. ೨.೧೦) ಸ್ವರೂಪತೋ ಧರ್ಮತಶ್ಚ ಕ್ರಮೇಣ ದರ್ಶಯತಿ–*

ಅನುವಾದ: ಈಗ ಮಹದಾದಿ ಕ್ರಮದಲ್ಲಿ ತಿಳಿಸಲ್ಪಟ್ಟ ತತ್ತ್ವಗಳ ಸ್ವರೂಪ ಮತ್ತು ಧರ್ಮಗಳನ್ನು ಕ್ರಮೇಣ ಹೇಳುತ್ತಾರೆ.

ಸೂತ್ರ: ಅಧ್ಯವಸಾಯೋ ಬುದ್ಧಿಃ ॥ ೧೩ ॥

ಸೂತ್ರಾನುವಾದ: ನಿಶ್ಚಯಾತ್ಮಕವಾದ ವೃತ್ತಿಯುಳ್ಳದ್ದು ಬುದ್ಧಿ.

ಭಾಷ್ಯ: *ಮಹತ್ತತ್ತ್ವಸ್ಯ ಪರ್ಯಾಯೋ ಬುದ್ಧಿರಿತಿ । ಅಧ್ಯವಸಾಯಶ್ಚ ನಿಶ್ಚಯಾಖ್ಯಸ್ತಸ್ಯಾಸಾಧಾರಣೀ ವೃತ್ತಿರಿತ್ಯರ್ಥಃ । ಅಭೇದನಿರ್ದೇಶಸ್ತು ಧರ್ಮಧರ್ಮ್ಯಭೇದಾತ್ । ಅಸ್ಯಾಶ್ಚ ಬುದ್ಧೇರ್ಮಹತ್ತ್ವಂ ಸ್ವೇತರ ಸಕಲಕಾರ್ಯವ್ಯಾಪಕತ್ವಾನ್ಮಹೈಶ್ವರ್ಯಾಚ್ಚ ಮಂತವ್ಯಮ್ ।*

ಅನುವಾದ: ಮಹತ್ತತ್ತ್ವದ ಸಮಾನಾರ್ಥಕ ಪದ ಬುದ್ಧಿ. ಅಧ್ಯವಸಾಯವೆಂದರೆ ನಿಶ್ಚಯವೆಂದು, ಅರ್ಥಾತ್ ಬುದ್ಧಿಯ ಅಸಾಧಾರಣ ವೃತ್ತಿ. ಅಭೇದವೆಂದು ಹೇಳಿರುವುದು ಧರ್ಮ ಮತ್ತು ಧರ್ಮಿಗಳಲ್ಲಿ ಅಭೇದವಿರುವುದರಿಂದ. ಈ ಬುದ್ಧಿಯ ಮಹತ್ತ್ವವನ್ನು ತಿಳಿಯಬಹುದಾದ್ದೆಂದರೆ, ತನಗಿಂತ ಭಿನ್ನವಾದ ಎಲ್ಲ ಕಾರ್ಯಗಳಿಗೂ ವ್ಯಾಪಕತ್ವವಿರುವುದರಿಂದ, ಅಲ್ಲದೆ ಐಶ್ವರ್ಯವಿರುವುದರಿಂದ (ಪ್ರಭುತ್ವವಿರುವುದರಿಂದ) ಸಾಧ್ಯ.

ಭಾಷ್ಯ: *ಸವಿಕಾರಾತ್ ಪ್ರಧಾನಾತ್ ತು ಮಹತ್ತತ್ತ್ವಮಜಾಯತ ।*
ಮಹಾನಿತಿ ಯತಃ ಖ್ಯಾತಿರ್ಲೋಕಾನಾಂ ಜಾಯತೇ ಸದಾ ॥

(ಮತ್ಸ್ಯ ಪು. ೩.೧೭)

ಅನುವಾದ: ವಿಕಾರವುಳ್ಳ ಪ್ರಧಾನದಿಂದ ಮಹತ್ತತ್ತ್ವವು ಹುಟ್ಟಿತು. ಆದಕಾರಣ ಲೋಕದಲ್ಲಿ ಮಹಾನ್ ಎಂಬ ಖ್ಯಾತಿಯು ಉಂಟಾಗಿದೆ.

ಭಾಷ್ಯ: *ಇತಿ ಸ್ಮೃತೇಃ 'ಅಸ್ಯ ಮಹತೋ ಭೂತಸ್ಯ ನಿಶ್ವಸಿತಂ ಏತದ್ ಋಗ್ವೇದ' (ಬೃ.ಉ. ೨.೪.೧೦) ಇತ್ಯಾದಿ ಶ್ರುತಿಸ್ಮೃತಿಷು ಚ ಹಿರಣ್ಯಗರ್ಭೇ ಚೇತನೇಽಪಿ ಮಹಾನಿತಿ ಶಬ್ದೋ ಬುದ್ಧ್ಯಭಿಮಾನಿತ್ವೇನೈವ । ಯಥಾ ಪೃಥಿವ್ಯಭಿಮಾನಿಚೇತನೇ ಪೃಥಿವೀಶಬ್ದಸ್ತದ್ವತ್ । ಏವಮೇವ ರುದ್ರಾದಿಷ್ವಹಂಕಾರಶಬ್ದೋಽಪಿ ಬೋಧ್ಯಃ । ಪ್ರಕೃತ್ಯಭಿಮಾನಿದೇವತಾ–ಮಾರಭ್ಯ ಸರ್ವೇಷಾಮೇವ ಭೂತಾಭಿಮಾನಿಪರ್ಯಂತಾನಾಂ ಸ್ವಸ್ವಬುದ್ಧಿರೂಪಾಶ್ಚ ಪ್ರತಿನಿಯತೋಪಾಧಯೋ ಮಹತ್ತತ್ತ್ವಸ್ಯೈವಾಂಶಾ ಇತಿ ।*

ಅನುವಾದ: ಎಂದು ಸ್ಮೃತಿಯು (ಮತ್ಸ್ಯಪುರಾಣ) ಹೇಳುತ್ತದೆ. 'ಈ ಮಹಾನ್ ಭೂತದ ನಿಶ್ವಾಸವೇ ಋಗ್ವೇದ. ಮೊದಲಾದ ಶ್ರುತಿ–ಸ್ಮೃತಿಗಳಲ್ಲಿ ಹಿರಣ್ಯಗರ್ಭದ ಚೇತನದಲ್ಲಿ ಮಹಾನ್ ಎಂಬ ಶಬ್ದವು ಬುದ್ಧಿಗೆ ಅಭಿಮಾನದಿಂದಲೇ ಹೇಳಲಾಗಿದೆ. ಹೇಗೆ ಪೃಥಿವೀ ಅಭಿಮಾನಿ ಚೇತನದಲ್ಲಿ ಪೃಥಿವೀಶಬ್ದವನ್ನು ಪ್ರಯೋಗಿಸಿದಂತೆ. ಹೀಗೆಯೇ ರುದ್ರಾದಿಗಳಲ್ಲಿ ಅಹಂಕಾರಾದಿಶಬ್ದಗಳನ್ನೂ ತಿಳಿಯಬೇಕು. ಪ್ರಕೃತ್ಯಭಿ–ಮಾನಿದೇವತೆಯಿಂದ ಹಿಡಿದು ಎಲ್ಲಾ ಭೂತಾಭಿಮಾನಿದೇವತೆಗಳವರೆಗೆ ತನ್ನ ತನ್ನ ಬುದ್ಧಿ ರೂಪಗಳಿರುತ್ತವೆ, ಎಂದರೆ, ಪ್ರತಿನಿಯತವಾದ ಉಪಾಧಿಗಳು ಮಹತ್ತತ್ವದ ಅಂಶಗಳೇ' ಎಂದು.

ಭಾಷ್ಯ: *ಮಹತ್ತತ್ತ್ವಸ್ಯಾಪರಾನಪಿ ಧರ್ಮಾನಾಹ ।*

ಸೂತ್ರ: ತತ್ಕಾರ್ಯಂ ಧರ್ಮಾದಿ ॥ ೧೪ ॥

ಅನುವಾದ: ಮಹತ್ತತ್ತ್ವದ ಇತರ ಧರ್ಮಗಳನ್ನೂ ಹೇಳಲಾಗಿದೆ.

ಸೂತ್ರಾನುವಾದ: ಬುದ್ಧಿಯ ಕಾರ್ಯಗಳು ಧರ್ಮಾದಿ ।

ಭಾಷ್ಯ: *ಧರ್ಮಜ್ಞಾನವೈರಾಗ್ಯೈಶ್ವರ್ಯಾಣ್ಯಪಿ ಬುದ್ಧ್ಯುಪಾದಾನಕಾನಿ ನಾಹಂಕಾರಾದ್ಯುಪಾದಾನಕಾನಿ । ಬುದ್ಧೇರೇವ ನಿರತಿಶಯಸತ್ತ್ವ–ಕಾರ್ಯತ್ವಾದಿತ್ಯರ್ಥಃ ।*

ಅನುವಾದ: ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳೂ ಸಹ ಬುದ್ಧಿಯನ್ನು ಉಪಾದಾನಕಾರಣವನ್ನಾಗಿ ಹೊಂದಿವೆ, ಆದರೆ (ಈ ಕಾರ್ಯಗಳಿಗೆ) ಅಹಂಕಾರವು ಉಪಾದಾನಕಾರಣವಲ್ಲ. ಏಕೆಂದರೆ ಬುದ್ಧಿಯು ಮುಖ್ಯವಾಗಿ ಸತ್ತ್ವಗುಣವುಳ್ಳದ್ದು ಮತ್ತು ಈ ಎಲ್ಲ ಕಾರ್ಯಗಳೂ ಅದರಿಂದ ಆಗುತ್ತವೆ ಎಂದರ್ಥ.

ಭಾಷ್ಯ: *ನನ್ವೇವಂ ಕಥಂ ನರಪಶ್ವಾದಿಗತಾನಾಂ ಬುದ್ಧ್ಯಂಶಾನಾಂ ಅಧರ್ಮಪ್ರಾಬಲ್ಯಮುಪಪದ್ಯತಾಮ್ । ತತ್ರಾಹ–*

ಅನುವಾದ: ಹಾಗಿದ್ದರೆ ಮನುಷ್ಯರು ಪಶ್ವಾದಿಗಳು ಇವರಲ್ಲಿ ಇರುವ ಬುದ್ಧಿಯ ಅಂಶದಲ್ಲಿ ಅಧರ್ಮದ ಪ್ರಾಬಲ್ಯ ಹೇಗೆ ಉಂಟಾಗುವುದು? ಅದನ್ನು ಕುರಿತು ಹೇಳಿದೆ–

ಸೂತ್ರ: ಮಹದುಪರಾಗಾದ್ವಿಪರೀತಮ್ ॥ ೧೫ ॥

ಸೂತ್ರಾನುವಾದ: ರಜೋಗುಣ, ತಮೋಗುಣಗಳ ಪ್ರಭಾವದಿಂದ ಮಹತ್ತತ್ವವು (ಧರ್ಮಾದಿಗಳಿಗೆ) ವಿಪರೀತವಾಗಿ ಕಾರ್ಯ ಮಾಡುತ್ತವೆ.

ಭಾಷ್ಯ: *ತದೇವ ಮಹನ್ ಮಹತ್ತತ್ತ್ವಂ ರಜಸ್ತಮೋಭ್ಯಾಮುಪರಾಗಾತ್ ವಿಪರೀತಧರ್ಮಾ (ಕ್ಷುದ್ರಧರ್ಮಾ) ಅಜ್ಞಾನವೈರಾಗ್ಯಾನೈಶ್ವರ್ಯಾ–ಧರ್ಮಕಮಪಿ ಭವತೀತ್ಯರ್ಥಃ । ಏತೇನ ಸರ್ವಮೇವ ಪುರುಷಾ ಈಶ್ವರಾ ಇತಿ ಶ್ರುತಿ–ಸ್ಮೃತಿಪ್ರವಾದೋಽಪಿ ಉಪಪಾದಿತಃ ಸರ್ವೋ–ಪಾಧೀನಾಂ ಸ್ವಾಭಾವಿಕೈಶ್ವರ್ಯಸ್ಯ ರಜಸ್ತಮೋಭ್ಯಾಮೇವಾವರಣಾದಿತಿ ।*

ಅನುವಾದ: ಆ ಮಹತ್ತತ್ವವೇ ರಜಸ್ತಮೋಗುಣಗಳ ಪ್ರಭಾವದಿಂದ ವಿರುದ್ಧವಾದ ಧರ್ಮಗಳನ್ನು, ಕ್ಷುದ್ರಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ ಧರ್ಮಗಳನ್ನೂ ಪಡೆಯುತ್ತದೆ. ಇದರಿಂದ ಎಲ್ಲ ಪುರುಷರೂ ಒಡೆಯರು (ಈಶ್ವರಾಃ) ಎಂದು ಹೇಳುವ ಶ್ರುತಿ, ಸ್ಮೃತಿಗಳ ನಿಂದೆಯುನ್ನೂ ಮಾಡಿದಂತಾಗುವುದು (ಅಲ್ಲಗಳೆದಂತಾಗುವುದು); ಏಕೆಂದರೆ ಎಲ್ಲಾ ಉಪಾಧಿಗಳ ಸ್ವಾಭಾವಿಕವಾದ ಒಡೆತನವನ್ನು ರಜಸ್–ತಮೋ–ಗುಣಗಳು ಆವರಿಸಿಬಿಡುತ್ತವೆ.

ಭಾಷ್ಯ: *ನನು ಧರ್ಮಾದ್ಯವಸ್ಥಾನಾರ್ಥಂ ಬುದ್ಧೇರಪಿ ನಿತ್ಯತ್ವಾತ್ ಕಥಂ ಕಾರ್ಯತೇತಿ ।*

ಅನುವಾದ: ಹಾಗಿದ್ದಲ್ಲಿ ಧರ್ಮ, ಜ್ಞಾನಾದಿಗಳ ಸ್ಥಿತಿ ಇರಬೇಕಾದರೆ ಬುದ್ಧಿ ನಿತ್ಯವೆಂದು ಹೇಳಬೇಕಾಗುವುದು. ಅದು ನಿತ್ಯವಾದರೆ ಕಾರ್ಯವೆಂದು ಹೇಗೆ ಹೇಳುವುದು?

ಭಾಷ್ಯ: *ಇತಿ ಚೇನ್ನ । ಪ್ರಕೃತ್ಯಂಶರೂಪೇ ಬೀಜಾವಸ್ಥಮಹತ್ತತ್ತ್ವೇ ಸತ್ತ್ವವಿಶೇಷೇ ಕರ್ಮವಾಸನಾದೀನಾಂ ಅವಸ್ಥಾನಾತ್ ತಸ್ಯೈವ ಜ್ಞಾನಕಾರಣಾವ–ಸ್ಥಾಯಾಂ ಅಂಕುರವದುಪಪತ್ತ್ಯಂಗೀಕಾರಾತ್ । ತಥಾ ಚ ಆಕಾಶವ–ದೇವ ನಿತ್ಯಾನಿತ್ಯ–ಉಭಯರೂಪಾ ಬುದ್ಧಿಃ । ಯಥಾಕಾರಣಂ ಸ್ವಾಕಾರಃ ಪ್ರಕೃತಿಪ್ರಭಾವಾದಿತಿ ।*

ಅನುವಾದ: ಹಾಗಲ್ಲ. ಪ್ರಕೃತಿಯ ಅಂಶರೂಪವಾದ ಬೀಜಾವಸ್ಥೆಯಲ್ಲಿರುವ ಮಹತ್ತತ್ತ್ವದ ಸತ್ತ್ವವಿಶೇಷವು ಕರ್ಮವಾಸನೆಗಳ ಸ್ಥಿತಿಯ ಕಾರಣ. ಅದು ಜ್ಞಾನಕಾರಣದ ಅವಸ್ಥೆಯಲ್ಲಿ ಅಂಕುರದಂತೆ ಇರುವುದನ್ನು ಅಂಗೀಕರಿಸಲಾಗಿದೆ. ಹಾಗೆಯೇ ಆಕಾಶದಂತೆ ಬುದ್ಧಿಯು ನಿತ್ಯ–ಅನಿತ್ಯ ರೂಪವನ್ನು ಹೊಂದಿರುವುದು. ಪ್ರಕೃತಿಯ ಪ್ರಭಾವದಂತೆ ಕಾರಣಕ್ಕೆ ಅನುಗುಣವಾಗಿ ಅದರ ಆಕಾರವಿರುತ್ತದೆ.

ಭಾಷ್ಯ: *ಮಹತ್ತತ್ತ್ವಂ ಲಕ್ಷಯಿತ್ವಾ ತತ್ಕಾರ್ಯಮಹಂಕಾರಂ ಲಕ್ಷಯತಿ ।*

ಅನುವಾದ: ಮಹತ್ತತ್ವವನ್ನು ವಿವರಿಸಿ ಅದರ ಕಾರ್ಯವಾದ ಅಹಂಕಾರವನ್ನು ವಿವರಿಸುವರು.

ಸೂತ್ರ: ಅಭಿಮಾನೋಽಹಂಕಾರಃ ॥ ೧೬ ॥

ಸೂತ್ರಾನುವಾದ: ಅಭಿಮಾನವೆಂಬ ವೃತ್ತಿಯುಳ್ಳದ್ದು ಅಹಂಕಾರ.

ಭಾಷ್ಯ: *ಅಹಂಕರೋತೀತ್ಯಹಂಕಾರಃ ಕುಂಭಕಾರವತ್ । ಅಂತಃಕರಣದ್ರವ್ಯಮ್। ಸ ಚ ಧರ್ಮಧರ್ಮ್ಯಭೇದಾದಭಿಮಾನ ಇತ್ಯುಕ್ತೋಽಸಾಧಾರಣ–ವೃತ್ತಿತಾಸೂಚನಾಯ । ಬುದ್ಧ್ಯಾ ನಿಶ್ಚಿತ ಏವಾರ್ಥೇಽಹಂಕಾರ–ಮಮಕಾರೋ ಜಾಯೇತೇ । ಅತೋ ವೃತ್ತ್ಯೋಃ ಕಾರ್ಯಕಾರಣ–ಭಾವಾನುಸಾರೇಣ ವೃತ್ತಿಮತೋರಪಿ ಕಾರ್ಯಕಾರಣಭಾವ ಉನ್ನೀಯತೇ ಇತಿ ಪ್ರಾಗೇವೋಕ್ತಮ್ ।*

ಅನುವಾದ: 'ಅಹಂ' ಎಂಬುದನ್ನು ಪ್ರಕಟಪಡಿಸುವುದೇ ಅಹಂಕಾರ (ಕುಂಭಂ–ಕರೋತೀತಿ) ಕುಂಭಕಾರಃ ಎಂಬಂತೆ. ಇದು ಅಂತಃಕರಣದ್ರವ್ಯ. ಧರ್ಮಧರ್ಮಿಗಳಲ್ಲಿ ಅಭೇದವಿರುವ ಕಾರಣ (ಅಭಿಮಾನ ಧರ್ಮ, ಅಹಂಕಾರ ಧರ್ಮಿ) ಅಸಾಧಾರಣ ವ್ಯಾಪಾರವನ್ನು ಸೂಚಿಸಲು ಅಭಿಮಾನ ಎನ್ನಲಾಗಿದೆ. ಬುದ್ಧಿಯಿಂದ ನಿರ್ಧರಿಸಲ್ಪಟ್ಟ ಅರ್ಥವೇ 'ನಾನು', 'ನನ್ನದು' ಎಂದು ಹುಟ್ಟಿಕೊಳ್ಳುತ್ತವೆ. ಆದ್ದರಿಂದ ವೃತ್ತಿಗಳ ಕಾರ್ಯಕಾರಣಭಾವವನ್ನು ತಿಳಿಯಬೇಕು ಎಂದು ಮೊದಲೇ ಹೇಳಲಾಗಿದೆ.

ವಿವರಣೆ: ವೃತ್ತ್ಯೋಃ ಕಾರ್ಯಕಾರಣಭಾವಾಃ – ಅಭಿಮಾನ, ಅಧ್ಯವಸಾಯ – ವೃತ್ತಿಮತೋಃ ಕಾರ್ಯಕಾರಣಭಾವಃ

ಭಾಷ್ಯ: *ಅಂತಃಕರಣಮೇಕಮೇವಬೀಜಾಂಕುರಮಹಾವೃಕ್ಷಾದಿವತ್ ಅವಸ್ಥಾತ್ರಯಮಾತ್ರಭೇದಾತ್ ಕಾರ್ಯಕಾರಣಭಾವಮಾಪದ್ಯತೇ ಇತಿ ಚ ಪ್ರಾಗೇವ ಉಕ್ತಮ್ । ಅತ ಏವ ವಾಯುಮಾತ್ಸ್ಯಯೋಃ ।*

ಅನುವಾದ: ಅಂತಃಕರಣ ಇರುವುದು ಒಂದೇ. ಆದರೆ ಬೀಜ, ಅಂಕುರ ಮತ್ತು ಮಹಾವೃಕ್ಷಗಳಂತೆ ಅವಸ್ಥಾತ್ರಯದಷ್ಟೇ ಭೇದ ಎಂದು ಮೊದಲೇ ಹೇಳಿದ್ದೇವೆ.

ಭಾಷ್ಯ: *ಮನೋಮಹಾನ್ ಮತಿರ್ಬ್ರಹ್ಮಾ ಪೂರ್ಬುದ್ಧಿಃ ಖ್ಯಾತಿರೀಶ್ವರಾ । (ವಾ.ಪು. ೧೧.೨೫) ಇತಿ ಮನೋಬುದ್ಧ್ಯೋರೇಕಪರ್ಯಾಯ–ತ್ವಮುಕ್ತಮಿತಿ ।*

ಅನುವಾದ: ಆದ್ದರಿಂದ ವಾಯುಪುರಾಣ, ಮತ್ಸ್ಯಪುರಾಣಗಳಲ್ಲಿ ಹೀಗೆ ಹೇಳಿದೆ–

ಮನಸ್ಸು, ಮಹಾನ್ ಮತಿ, ಬ್ರಹ್ಮಾ, ಪೂರ್, ಬುದ್ಧಿ, ಖ್ಯಾತಿ ಮತ್ತು ಈಶ್ವರ (ಎಲ್ಲ ಪರ್ಯಾಯಪದಗಳು) ಎಂದು ಮನಸ್ಸು ಮತ್ತು ಬುದ್ಧಿಗಳನ್ನು ಪರ್ಯಾಯ ಪದಗಳೆಂದು ಹೇಳಲಾಗಿದೆ.

ಭಾಷ್ಯ: *ಕ್ರಮಾಗತಮಹಂಕಾರಸ್ಯ ಕಾರ್ಯಮಾಹ ।*

ಸೂತ್ರ: ಏಕಾದಶಪಂಚತನ್ಮಾತ್ರಂ ಯತ್ಕಾರ್ಯಮ್ ॥ ೧೭ ॥

ಅನುವಾದ: ಕ್ರಮದಲ್ಲಿ ಬಂದಿರುವ ಅಹಂಕಾರದ ಕಾರ್ಯವನ್ನು ಹೇಳಿದೆ.

ಸೂತ್ರಾನುವಾದ: ಹನ್ನೊಂದು ಇಂದ್ರಿಯಗಳು ಐದು ತನ್ಮಾತ್ರಗಳು ಅಹಂಕಾರದ ಕಾರ್ಯಗಳು.

ಭಾಷ್ಯ: *ಏಕಾದಶೇಂದ್ರಿಯಾಣಿ ಶಬ್ದಾದಿ ಪಂಚತನ್ಮಾತ್ರಂ ಚಾಹಂಕಾರಸ್ಯ ಕಾರ್ಯಮಿತ್ಯರ್ಥಃ । ಮಯಾಽನೇನೇಂದ್ರಿಯೇಣ ಇದಂ ರೂಪಾದಿಕಂ ಭೋಕ್ತವ್ಯಂ ಇದಮೇವ ಸುಖಸಾಧನಂ ಇತ್ಯಾದ್ಯಭಿಮಾನಾದೇವ ಆದಿಸರ್ಗೇಷು ಇಂದ್ರಿಯತದ್ವಿಷಯೋತ್ಪತ್ತ್ಯಾಹಂಕಾರ ಇಂದ್ರಿಯಾದಿ–ಹೇತುಃ । ಲೋಕೇ ಭೋಗಾಭಿಮಾನಿನೈವ ರಾಗದ್ವಾರಾ ಭೋಗೋಪ–ಕರಣಕರಣದರ್ಶನಾತ್ । 'ರೂಪರಾಗಾದಭೂಚ್ಚಕ್ಷುಃ (ಶಾಂ.ಪ. ೨೧೩.೧೬) ಇತ್ಯಾದಿನಾ ಮೋಕ್ಷಧರ್ಮೇ ಹಿರಣ್ಯಗರ್ಭಸ್ಯ ರಾಗಾದೇವ ಸಮಷ್ಟಿಚಕ್ಷುರಾದ್ಯೋತ್ಪತ್ತಿಸ್ಮರಣಾಚ್ಚೇತಿ ಭಾವಃ । ಅತಶ್ಚ ಭೂತೇಂದ್ರಿಯಯೋರ್ಮಧ್ಯೇ ರಾಗಧರ್ಮಕಂ ಮನ ಏವಾದಾವಹಂಕಾರಾದುತ್ಪದ್ಯತೇ ಇತಿ ವಿಶೇಷಸ್ತನ್ಮಾತ್ರಾದೀನಾಂ ರಾಗಕಾರ್ಯತ್ವಾದಿತಿ ।*

ಅನುವಾದ: ಹನ್ನೊಂದು ಇಂದ್ರಿಯಗಳು, ಶಬ್ದಾದಿತನ್ಮಾತ್ರಗಳು ಅಹಂಕಾರದಿಂದ ಉತ್ಪನ್ನವಾದುವು. ನಾನು ಈ ಇಂದ್ರಿಯದಿಂದ ಈ ರೂಪಾದಿಗಳನ್ನು ಅನುಭವಿಸಬೇಕು, ಇದೇ ಸುಖದ ಸಾಧನ ಇತ್ಯಾದಿ ಅಭಿಮಾನದಿಂದಲೇ ಆದಿಸೃಷ್ಟಿಯಲ್ಲಿ ಇಂದ್ರಿಯ ಮತ್ತು ಅದರ ವಿಷಯಗಳ ಮುಖಾಂತರ ಅಹಂಕಾರವೇ ಇಂದ್ರಿಯಾದಿಗಳಿಗೆ ಕಾರಣ. ಲೋಕದಲ್ಲಿ ಭೋಗ ಬಯಸುವವರಿಂದಲೇ ರಾಗದಿಂದ ಕೂಡಿ ಭೋಗೋಪಕರಣಗಳ ಗಮನವಿಡುವುದನ್ನು ನೋಡಿದ್ದೇವೆ. 'ರೂಪರಾಗಗಳಿಂದ ಕಣ್ಣು ಉಂಟಾಯಿತು' ಇತ್ಯಾದಿ ಮೋಕ್ಷಧರ್ಮದಲ್ಲಿ ಹಿರಣ್ಯ ಹೇಳಿರುವಂತೆ ಹಿರಣ್ಯಗರ್ಭನ ರಾಗದಿಂದಲೇ ಸಮಗ್ರ ಚಕ್ಷುರಾದಿ ಉತ್ಪತ್ತಿಯಾಯಿತೆಂದು ತಿಳಿಯಬೇಕೆಂದು ಭಾವ. ಆದ್ದರಿಂದ ಭೂತ ಮತ್ತು ಇಂದ್ರಿಯಗಳ ನಡುವೆ ರಾಗಧರ್ಮವುಳ್ಳ ಮನಸ್ಸೇ ಮೊದಲು ಅಹಂಕಾರದಿಂದ ಉತ್ಪನ್ನವಾಗುತ್ತದೆ ಎಂದು ಮತ್ತು ವಿಶೇಷವೆಂದರೆ ರಾಗದಿಂದ ತನ್ಮಾತ್ರಗಳು ಉಂಟಾಗುತ್ತವೆ ಎಂದೂ ತಿಳಿಯಬೇಕು.

ಭಾಷ್ಯ: *ತತ್ರಾಪಿ ವಿಶೇಷಮಾಹ– ಅದರಲ್ಲೂ ವಿಶೇಷವೇನೆಂದು ಹೇಳಿದೆ.*

ಸೂತ್ರ: ಸಾತ್ತ್ವಿಕಮೇಕಾದಶಕಂ ಪ್ರವರ್ತತೇ ವೈಕೃತಾದಹಂಕಾರಾತ್ ॥ ೧೮ ॥

ಸೂತ್ರಾನುವಾದ: ಸಾತ್ತ್ವಿಕವಾದ ಅಹಂಕಾರದಿಂದ ಸತ್ತ್ವಪ್ರಧಾನವಾದ ಹನ್ನೊಂದು ಇಂದ್ರಿಯಗಳು ಒಟ್ಟಾಗಿ ಪ್ರವರ್ತಿತವಾಗುತ್ತವೆ.

ಭಾಷ್ಯ: *ಏಕಾದಶಾನಾಂ ಪೂರಣಂ ಏಕಾದಶಕಂ ಮನಃ ಷೋಡಶಾತ್ಮ-ಗಣಮಧ್ಯೇ ಸಾತ್ತ್ವಿಕಮ್ । ಅತಃ ತದ್ವೈಕೃತಾತ್ ಸಾತ್ತ್ವಿಕಾಹಂಕಾರಾತ್ ಜಾಯತೇ ಇತ್ಯರ್ಥಃ । ಅತಶ್ಚ ರಾಜಸಾಹಂಕಾರಾದ್ದಶೇಂದ್ರಿಯಾಣಿ, ತಾಮಸಾಹಂಕಾರಾತ್ ತನ್ಮಾತ್ರಾಣೀತ್ಯಧಿಗಂತವ್ಯಮ್ ।*

ಅನುವಾದ: ಹನ್ನೊಂದು ಇಂದ್ರಿಯಗಳನ್ನು ಪೂರ್ಣಗೊಳಿಸುವ ಮನಸ್ಸು ಹದಿನಾರರ ಗಣದ ಮಧ್ಯದಲ್ಲಿ ಸಾತ್ತ್ವಿಕವಾದುದು. ಆದ್ದರಿಂದ ವೈಕೃತವಾದ ಎಂದರೆ ಸಾತ್ತ್ವಿಕವಾದ ಅಹಂಕಾರದಿಂದ ಅದು ಉತ್ಪತ್ತಿಯಾಗುತ್ತದೆ. ಆದ್ದರಿಂದ ರಾಜಸ ಅಹಂಕಾರದಿಂದ ಹತ್ತು ಇಂದ್ರಿಯಗಳು ಮತ್ತು ತಾಮಸಾಹಂಕಾರದಿಂದ ಪಂಚತನ್ಮಾತ್ರಗಳು ಉತ್ಪತ್ತಿಯಾಗುತ್ತವೆ.

ಭಾಷ್ಯ: *ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿಧಾ ।*
ಅಹಂತತ್ತ್ವಾದ್ವಿಕುರ್ವಾಣಾತ್ಮನೋ ವೈಕಾರಿಕಾದಭೂತ್ ॥
ವೈಕಾರಿಕಾಶ್ಚಯೇ ದೇವಾ ಅರ್ಥಾಭಿವ್ಯಂಜನಂ ಯತಃ ।
ತೈಜಸಾದಿಂದ್ರಿಯಾಣ್ಯೇವ ಜ್ಞಾನಕರ್ಮಮಯಾನಿ ಚ ॥
ತಾಮಸೋ ಭೂತಸೂಕ್ಷ್ಮಾದಿರ್ಯತಃ ಖಂ ಲಿಂಗಮಾತ್ಮನಃ ।
ಇತ್ಯಾದಿಸ್ಮೃತಿಭ್ಯ ಏವ ನಿರ್ಣಯಾತ್ । (ಭಾಗ ೩.೫.೩೦-೩೧)
ಅತ ಏವ ಪುರಾಣಾದ್ಯನುಸಾರೇಣ ಕಾರಿಕಾಯಾಮಪಿ ಏತದುಕ್ತಮ್।

ಅನುವಾದ: ಅಹಂಕಾರ ಮೂರು ಬಗೆ- ವೈಕೃತ, ತೈಜಸ ಮತ್ತು ತಾಮಸ. ಸಾತ್ತ್ವಿಕ ಅಹಂಕಾರ ತತ್ತ್ವದಿಂದ ಮನಸ್ಸು ಉತ್ಪನ್ನವಾಯಿತು. ಸಾತ್ತ್ವಿಕದಿಂದ ಅವುಗಳನ್ನೇ ವೈಕಾರಿಕ(ನಿಯಂತ್ರಕ)ವೆನ್ನುವರು. ಅದರಿಂದ ವಸ್ತುಗಳು ಪ್ರಕಟವಾದುವು. ತೈಜಸ ಅಹಂಕಾರದಿಂದ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಉತ್ಪನ್ನವಾದುವು. ತಾಮಸ (ಅಹಂಕಾರದಿಂದ) ಭೂತಸೂಕ್ಷ್ಮಾದಿಗಳನ್ನು ಹೇಳಿದೆ. ಆತ್ಮನನ್ನು ಗುರುತಿಸಲು ಇಂದ್ರಿಯವು ಹೇತುವಾಗಿದೆ.

ವಿವರಣೆ: 'ಖಂ' ಪದಕ್ಕೆ 'ಆಕಾಶ' ಎಂಬರ್ಥವನ್ನು ತೆಗೆದುಕೊಂಡು 'ಆಕಾಶವು ಹೇತುವಾಗಿದೆ' ಎಂದೂ ಅರ್ಥ ಮಾಡಬಹುದು.

ಅನುವಾದ: ಇತ್ಯಾದಿ ಸ್ಮೃತಿಗಳಲ್ಲೇ ನಿರ್ಣಯಿಸಲ್ಪಟ್ಟಿದೆ. ಆದ್ದರಿಂದ ಪುರಾಣಾದಿ ಅನುಸಾರವಾಗಿ ಕಾರಿಕೆಯಲ್ಲೂ ಹೀಗೆ ಹೇಳಿದ್ದಾರೆ.

ಭಾಷ್ಯ: *ಸಾತ್ತ್ವಿಕ ಏಕಾದಶಕಃ ಪ್ರವರ್ತತೇ ವೈಕೃತಾದಹಂಕಾರಾತ್ ।*
ಭೂತಾದೇಸ್ತನ್ಮಾತ್ರಃ ಸ ತಾಮಸಸ್ತೈಜಸಾದುಭಯಮ್ ॥ (ಕಾರಿಕಾ-೨೫)

ಅನುವಾದ: ವೈಕೃತ ಅಹಂಕಾರದಿಂದ ಸಾತ್ವಿಕವಾದ ಹನ್ನೊಂದು ಪ್ರವೃತ್ತವಾಗುವುದು. ಭೂತಾದಿ ಅಹಂಕಾರದಿಂದ ಪ್ರವೃತ್ತವಾಗುವುದು ತನ್ಮಾತ್ರಗಳು. 'ತೈಜಸ' ಅಹಂಕಾರ ದಿಂದ ಎರಡು ಇಂದ್ರಿಯಗಳೂ ಕಾರ್ಯನಿರತವಾಗುವುವು. ತೈಜಸ ಎಂದರೆ ರಾಜಸ. 'ಉಭಯಂ' ಎಂದರೂ ಜ್ಞಾನ ಮತ್ತು ಕರ್ಮೇಂದ್ರಿಯಗಳು.

ಭಾಷ್ಯ: *ನನು 'ದೇವತಾಲಯಶ್ರುತಿಃ' (ಸಾಂ.ಸೂ. ೩.೨೧) ಇತ್ಯಾದಿಗಾಮಿ ಸೂತ್ರೇ ಕರಣಾನಾಂ ದೇವಾನ್ ವಕ್ಷ್ಯತಿ । ತತ್ ಕಥಂ ಕಾರಿಕಯಾ ಅಪಿ ದೇವಾನಾಂ ಸಾತ್ತ್ವಿಕಾದಹಂಕಾರ್ಯತ್ವಂ ನೋಕ್ತಮಿತಿ ।*

ಅನುವಾದ: (ದೇವತೆಗಳ ಲಯವನ್ನು ಹೇಳುವ ಶ್ರುತಿಯು ಉತ್ಪಾದಕತೆಯನ್ನು ಕುರಿತು ಹೇಳುವುದಿಲ್ಲ) ಎಂಬ ಮುಂದೆ ಬರುವ ಸೂತ್ರದಲ್ಲಿ ದೇವತೆಗಳ ಇಂದ್ರಿಯ ಗಳನ್ನು ಕುರಿತು ಹೇಳಲಾಗುವುದು. ಹಾಗಾದರೆ ಕಾರಿಕೆಯಲ್ಲಿಯೂ ಸಹ, ದೇವತೆಗಳೂ ಸಹ ಸಾತ್ತ್ವಿಕ ಅಹಂಕಾರದಿಂದ ಹುಟ್ಟಿದರು ಎಂದು ಏಕೆ ಹೇಳಿಲ್ಲ?

ಭಾಷ್ಯ: *ಉಚ್ಯತೇ । ಸಮಷ್ಟಿ ಚಕ್ಷುರಾದಿ ಶರೀರಿಣಃ ಸೂರ್ಯಾದಿಚೇತನಾ ಏವ ಚಕ್ಷುರಾದಿ ದೇವತಾಃ ಶ್ರೂಯಂತೇ । ಅತಶ್ಚ ವ್ಯಷ್ಟಿಕರಣಾನಾಂ ಸಮಷ್ಟಿಕರಣಾನಿ ದೇವತೇತ್ಯೇವ ಪರ್ಯವಸ್ಯತಿ । ತಥಾ ಚ ವ್ಯಷ್ಟಿಸಮಷ್ಟ್ಯೋರೇಕತಾಽಽಶಯೇನ ಅತ್ರ ಶಾಸ್ತ್ರೇ ದೇವಾಃ ಕರಣೇಭ್ಯಃ ನ ಪೃಥಕ್ ನಿರ್ದಿಶ್ಯಂತೇ । ಅತಃ ಸಮಷ್ಟೀಂದ್ರಿಯಾಣಿ ಮನೋಽಪೇಕ್ಷಯಾ ಅಲ್ಪಸತ್ತ್ವತ್ವೇನ ರಾಜಸಾಹಂಕಾರಕಾರ್ಯತ್ವೇನ ಏವ ನಿರ್ದಿಷ್ಟಾನಿ । ಸ್ಮೃತಿಷು ಚ ವ್ಯಷ್ಟೀಂದ್ರಿಯಾಪೇಕ್ಷಯಾ ಅಧಿಕಸತ್ತ್ವೇನ ಸಾತ್ತ್ವಿಕಾ- ಹಂಕಾರಕಾರ್ಯತಯಾ ಉಕ್ತಾನೀತಿ ಅವಿರೋಧ ಇತ್ಯವಗಂತವ್ಯಮ್। ತದೇವಮಹಂಕಾರಸ್ಯ ತ್ರೈವಿಧ್ಯಾತ್ ಮಹತೋಽಪಿ ತತ್ಕಾರಣಸ್ಯ ತ್ರೈವಿಧ್ಯಂ ಮಂತವ್ಯಮ್ ।*

ಅನುವಾದ: ಇದೋ ಉತ್ತರ ಹೇಳುತ್ತೇವೆ– ಸಮಸ್ತ ಚಕ್ಷುಸ್ಸೇ ಮೊದಲಾದ ಇಂದ್ರಿಯಗಳನ್ನು ಹೊಂದಿರುವ ಶರೀರಿಯು ಸೂರ್ಯನೇ ಮುಂತಾದ ದೇವತೆಗಳೇ ಚಕ್ಷುರಾದಿ ದೇವತೆಗಳೆಂದು ಕೇಳಿದ್ದೇವೆ. ಆದ್ದರಿಂದ ಬೇರೆ ಬೇರೆ ಇಂದ್ರಿಯಗಳನ್ನು ಒಟ್ಟಿಗೆ ಸೇರಿಸಿ ದೇವತೆಯೆಂದೇ ಹೇಳಬೇಕು. ಹಾಗೆಯೇ ಬೇರೆ ಇರುವ ಹಾಗೂ ಒಟ್ಟಿಗೆ ಇರುವ ಇಂದ್ರಿಯಗಳ ಏಕತೆಯನ್ನು ಈ ಶಾಸ್ತ್ರದಲ್ಲಿ ದೇವತೆಗಳು ಇಂದ್ರಿಯಗಳಿಂದ ಬೇರೆಯಾಗಿ ನಿರ್ದೇಶ ಮಾಡಿಲ್ಲ. ಆದ್ದರಿಂದ ಸಮಷ್ಟಿ ಇಂದ್ರಿಯಗಳು ಮನಸ್ಸಿಗಿಂತಲೂ ಕಡಿಮೆ ಸತ್ತ್ವವನ್ನು ಹೊಂದಿರುವುದರಿಂದ ಅವುಗಳನ್ನು ರಾಜಸ ಅಹಂಕಾರದ ಕಾರ್ಯಗಳೆಂದೇ ನಿರ್ದೇಶಿಸಲಾಗಿದೆ. ಸ್ಮೃತಿಗಳಲ್ಲಿಯೂ ಬೇರೆ ಬೇರೆ ಇಂದ್ರಿಯಗಳಿಗಿಂತ ಹೆಚ್ಚು ಸತ್ತ್ವವುಳ್ಳದ್ದರಿಂದ ಸಾತ್ವಿಕಾಹಂಕಾರ ಕಾರ್ಯಗಳೆಂದು ಹೇಳಲಾಗಿದೆಯಾದ್ದರಿಂದ ಯಾವ ವಿರೋಧವೂ ಇಲ್ಲವೆಂದು ತಿಳಿಯಬೇಕು. ಹೀಗೆ ಅಹಂಕಾರದ ಮೂರು ಬಗೆಗಳನ್ನು ಹೇಳಿರುವಂತೆ ಮಹತ್ತತ್ತ್ವದ ಕಾರ್ಯಗಳನ್ನೂ ಮೂರೆಂದು ತಿಳಿಯಬೇಕು.

ಭಾಷ್ಯ: *'ಸಾತ್ತ್ವಿಕೋ ರಾಜಸಶ್ಚೈವ ತಾಮಸಶ್ಚ ತ್ರಿಧಾ ಮಹಾನ್' । ಇತಿ ಸ್ಮರಣಾತ್ । ತ್ರೈವಿಧ್ಯಂ ಚಾನಯೋಃ (ವಿ.ಪು. ೧.೨.೩೪; ಮಾ.ಪು. ೪೫–೩೮) ವ್ಯಕ್ತಿಭೇದಾದಂಶಭೇದಾದ್ವಾ ಇತ್ಯನ್ಯದೇತತ್।*

ಅನುವಾದ: ಸಾತ್ತ್ವಿಕ, ರಾಜಸ ಮತ್ತು ತಾಮಸಗಳೆಂಬ ಮೂರು ಬಗೆಗಳಿಂದ ಮಹಾನ್ ಇರುತ್ತದೆ. ಹೀಗೆ ಸ್ಮೃತಿ ಹೇಳುತ್ತದೆ. (ಮಹಾನ್ ಮತ್ತು ಅಹಂಕಾರ) ಇವೆರಡರ ತ್ರೈವಿಧ್ಯವು ವ್ಯಕ್ತಿಭೇದದಿಂದಲೋ ಅಂಶಭೇದದಿಂದಲೋ ಎಂಬುದು ಬೇರೆಯ ವಿಷಯ.

ಭಾಷ್ಯ: *ಏಕಾದಶೇಂದ್ರಿಯಾಣಿ ದರ್ಶಯತಿ ।*

ಸೂತ್ರ: ಕರ್ಮೇಂದ್ರಿಯಬುದ್ಧೀಂದ್ರಿಯೈರಾಂತರಮೇಕಾದಶಕಮ್ ॥ ೧೯ ॥

ಅನುವಾದ: ಐದು ಕರ್ಮೇಂದ್ರಿಯ, ಐದು ಜ್ಞಾನೇಂದ್ರಿಯಗಳೊಡನೆ ಹನ್ನೊಂದನೆಯ ಇಂದ್ರಿಯ ಆಭ್ಯಂತರವಾದುದು ಮನಸ್ಸು.

ಭಾಷ್ಯ: *ಕರ್ಮೇಂದ್ರಿಯಾಣಿ–ವಾಕ್–ಪಾಣಿ–ಪಾದ–ಪಾಯು–ಉಪಸ್ಥಾನಿ ಪಂಚ, ಜ್ಞಾನೇಂದ್ರಿಯಾಣಿ ಚ ಚಕ್ಷುಃ ಶ್ರೋತ್ರ–ತ್ವಕ್–ರಸನಾ–ಘ್ರಾಣಾಖ್ಯಾನಿ ಪಂಚ । ಏತೈರ್ದಶಭಿಃ ಸಹಾऽऽಂತರಂ ಮನ ಏಕಾದಶಕಮೇಕಾದಶೇಂದ್ರಿಯಮಿತ್ಯರ್ಥಃ । ಇಂದ್ರಸ್ಯ ಸಂಘಾತೇಶ್ವರಸ್ಯ ಕರಣಮಿಂದ್ರಿಯಮ್ । ತಥಾ ಚ ಅಹಂಕಾರಕಾರ್ಯತ್ವೇ ಸತಿ ಕರಣತ್ವಮಿಂದ್ರಿಯತ್ವಮಿತಿ ।*

ಅನುವಾದ: ಕರ್ಮೇಂದ್ರಿಯಾಣಿ–ವಾಕ್–ಪಾಣಿ–ಪಾಯು–ಉಪಸ್ಥಗಳು ಐದು, ಜ್ಞಾನೇಂದ್ರಿಯಗಳು ಚಕ್ಷುಸ್, ಶ್ರೋತ್ರ, ತ್ವಕ್, ರಸನ, ಘ್ರಾಣ ಎಂಬುವು ಐದು. ಹೀಗೆ ಹತ್ತರೊಡನೆ ಒಳಗಿನ ಮನಸ್ಸು ಹನ್ನೊಂದನೆಯದು. 'ಇಂದ್ರ' (ಶಬ್ದದ ಅರ್ಥ) ದೇಹದ ಒಡೆಯ, ಅವನ (ಭೋಗ)ಸಾಧನ 'ಇಂದ್ರಿಯ'. ಹಾಗೆಯೇ ಅಹಂಕಾರದ ಕಾರ್ಯವಾಗಿರುವುದರಿಂದ ಕರಣವು ಇದ್ದಲ್ಲಿ ಇಂದ್ರಿಯವೆನ್ನುವರು.

ಭಾಷ್ಯ: *ಇಂದ್ರಿಯಾಣಾಂ ಭೌತಿಕತ್ವಮತಂ ನಿರಾಕರೋತಿ ।*

ಸೂತ್ರ: ಆಹಂಕಾರಿಕತ್ವಶ್ರುತೇರ್ನ ಭೌತಿಕಾನಿ ॥ ೨೦ ॥

ಅನುವಾದ: ಇಂದ್ರಿಯಗಳು ಭೌತಿಕವೆಂಬ ಮತವನ್ನು ನಿರಾಕರಿಸುವರು.

ಸೂತ್ರಾನುವಾದ: ಅಹಂಕಾರದಿಂದ ಉತ್ಪನ್ನವಾಗುವುದನ್ನು ಕೇಳಿ (ಇಂದ್ರಿಯಗಳು) ಭೌತಿಕವೆಂದು ಹೇಳಲಾಗದು.

ಭಾಷ್ಯ: *ಇಂದ್ರಿಯಾಣೀತಿ ಶೇಷಃ । ಆಹಂಕಾರಿಕತ್ವೇ ಚ ಪ್ರಮಾಣಭೂತಾ ಭೂತಿಃ ಕಾಲಲುಪ್ತಾऽಪ್ಯಾಚಾರ್ಯವಾಕ್ಯಾತ್ ಮನ್ವಾದ್ಯಖಿಲಸ್ಮೃತಿಭ್ಯಶ್ಚ ಅನುಮೀಯತೇ । ಪ್ರತ್ಯಕ್ಷಾಶ್ರುತಿಃ– ಅಹಂ ಬಹುಸ್ಯಾಮಿತ್ಯಾದಿಃ ।*

(ಛಾಂ.ಉ. ೬.೨.೩, ತೈ.ಉ. ೨.೬)

ಅನುವಾದ: (ಭೌತಿಕಾನಿ) 'ಇಂದ್ರಿಯಾಣಿ' ಎಂದು (ಸೂತ್ರಕ್ಕೆ) ಸೇರಿಸಿಕೊಳ್ಳಬೇಕು. ಅಹಂಕಾರದಿಂದ ಉತ್ಪನ್ನವಾದದ್ದು ಎನ್ನಲು ಶ್ರುತಿಯು ಕಾಲದ ಪ್ರಭಾವದಿಂದ

ಲುಪ್ತವಾದ ಆಚಾರ್ಯವಾಕ್ಯದಂತೆ ಮತ್ತು ಮನುವೇ ಮೊದಲಾದವರ ಸಮಸ್ತ ಸ್ಮೃತಿಗಳಿಂದ ಅನುಮಾನ ಮಾಡಲ್ಪಡುತ್ತದೆ. 'ನಾನು ಅನೇಕವಾಗುವೆನು' ಎಂಬ ಶ್ರುತಿಯಾದರೋ ಪ್ರತ್ಯಕ್ಷವಾದುದೇ.

ಭಾಷ್ಯ: *ನನು 'ಅನ್ನಮಯಂ ಹಿ ಸೌಮ್ಯ ಮನಃ' (ಛಾಂ.ಉ.೬.೫.೪) ಇತ್ಯಾದಿ– ಭೌತಿಕತ್ವೇಽಪಿ ಶ್ರುತಿರಸ್ತೀತಿ ಚೇನ್ನ । ಪ್ರಕಾಶಕತ್ವಸಾಮ್ಯೇನ ಅಂತಃ– ಕರಣೋಪಾದಾನತ್ವಸ್ಯ ಏವ ಉಚಿತತಯಾ ಆಹಂಕಾರಿಕತ್ವಶ್ರುತೇರೇವ ಮುಖ್ಯತ್ವಾತ್ । ಭೂತಾನಾಮಪಿ ಹಿರಣ್ಯಗರ್ಭಸಂಕಲ್ಪಜನ್ಯತಯಾ ಅನ್ನಸ್ಯ ಮನೋಜನ್ಯತ್ವಾತ್ ಚ । ವ್ಯಷ್ಟಿಮನ ಆದೀನಾಂ ಭೂತಸಂಸೃಷ್ಟತಯೈವ ತಿಷ್ಠತಾಂ ಭೂತೇಭ್ಯೋಽಭಿವ್ಯಕ್ತಿಮಾತ್ರೇಣ ತು ಭೌತಿಕಶ್ರುತಿರ್ಗೌಣೀತಿ ।*

ಅನುವಾದ: 'ಹೇ ಸೌಮ್ಯ, ಮನಸ್ಸು ಅನ್ನದಿಂದ (ಉಂಟಾಯಿತು) ಎಂದ ಭೌತಿಕತ್ವ ದಲ್ಲಿಯೂ ಮನಸ್ಸಿದೆಯೆಂಬ ಶ್ರುತಿವಚನವಿದೆಯಲ್ಲ ಎಂದರೆ ಅದು ಸರಿಯಲ್ಲ. ಏಕೆಂದರೆ, ಪ್ರಕಾಶಕತ್ವದಲ್ಲಿ ಸಮಾನತೆಯನ್ನು ಹೊಂದಿರುವುದರಿಂದ ಅಂತಃಕರಣಕ್ಕೆ ಉಪಾದಾನವೆಂಬುದೇ ಉಚಿತವಾದ್ದರಿಂದ 'ಆಹಂಕಾರಿಕ' ಶ್ರುತಿವಚನವೇ ಮುಖ್ಯವೆಂದು ತಿಳಿಯಬೇಕು. ಏಕೆಂದರೆ ಭೂತಾದಿಗಳೂ ಸಹ ಹಿರಣ್ಯಗರ್ಭದ ಸಂಕಲ್ಪದಿಂದ ಹುಟ್ಟಿರುವುದರಿಂದ ಅನ್ನವು ಮನಸ್ಸಿನಿಂದ ಹುಟ್ಟಿದ್ದು. ವ್ಯಷ್ಟಿರೂಪ ವಾದ ಮನಸ್ಸೇ ಮುಂತಾದುವು ಭೂತಗಳಿಂದ ಪ್ರಕಟವಾಗುವುದಷ್ಟೆ. ಆದ್ದರಿಂದ ಭೂತಗಳಿಂದ ಅಭಿವ್ಯಕ್ತವಾಗುವುದಷ್ಟರಿಂದಲೇ, ಭೌತಿಕ ಶ್ರುತಿಗಳು ಗೌಣವಾಗಿರುತ್ತವೆ.

ಭಾಷ್ಯ: *ನನು ತಥಾಪ್ಯಾಹಂಕಾರಿಕತ್ವನಿರ್ಣಯೋ ನ ಘಟತೇ, 'ಅಸ್ಯ ಪುರುಷಸ್ಯಾಗ್ನಿಂ ವಾಗಪ್ಯೇತಿ ವಾತಿ ಪ್ರಾಣಶ್ಚಕ್ಷುರಾದಿತ್ಯಮ್ (ಬೃ.ಉ. ೩.೨.೧೩) ಇತ್ಯಾದಿಶ್ರುತೌ ದೇವತಾಸ್ವಿಂದ್ರಿಯಾಣಾಂ ಲಯಕಥನೇನ ದೇವತೋಪಾದಾನಕತ್ವಸ್ಯಾಪ್ಯವಗಮಾತ್, ಕಾರಣ ಏವ ಹಿ ಕಾರ್ಯಸ್ಯ ಲಯ ಇತ್ಯಾಶಂಕ್ಯಾಹ–*

ಅನುವಾದ: ಹಾಗಿದ್ದರೂ (ಇಂದ್ರಿಯಗಳು) ಅಹಂಕಾರದಿಂದ ಉಂಟಾದುವೆಂದು ನಿರ್ಣಯವು ಸರಿಯಲ್ಲ. 'ಈ ಪುರುಷನ ಮಾತು ಅಗ್ನಿಯಲ್ಲಿ, ಪ್ರಾಣ ವಾಯುವಿನಲ್ಲಿ, ಚಕ್ಷುಸ್ ಸೂರ್ಯನಲ್ಲಿ ಸೇರುತ್ತದೆ' ಮುಂತಾದ ಶ್ರುತಿಗಳು ಇಂದ್ರಿಯಗಳು ದೇವತೆಗಳಲ್ಲಿ ಸೇರಿಹೋಗುವುದನ್ನು ಹೇಳಿರುವುದರಿಂದ ಆಯಾ ಇಂದ್ರಿಯಗಳು ದೇವತೆಗಳ ಉಪಾದಾನಕತ್ವವನ್ನು ಹೊಂದಿರುವುದು ತಿಳಿದುಬರುತ್ತದೆ. ಕಾರ್ಯವು ಕಾರಣದಲ್ಲಿ ಲಯ ಹೊಂದುತ್ತವೆ ಎಂಬ ಶಂಕೆಗೆ ಹೀಗೆ ಹೇಳಿದೆ.

ಸೂತ್ರ: **ದೇವತಾಲಯಶ್ರುತಿರ್ನಾರಂಭಕಸ್ಯ ॥ ೨೧ ॥**

ಸೂತ್ರಾನುವಾದ: ದೇವತೆಯಲ್ಲಿ ಲಯಗೊಳ್ಳುವುದನ್ನು ಹೇಳುವ ಶ್ರುತಿಯು ಉತ್ಪಾದಕತೆಯ ನಿರ್ದೇಶವನ್ನು ಮಾಡದು.

ಭಾಷ್ಯ: *ದೇವತಾಸು ಯಾ ಲಯಶ್ರುತಿಃ ಸಾ ನಾರಂಭಕಸ್ಯ, ನಾರಂಭಕ ವಿಷಯಿಣೀತ್ಯರ್ಥಃ । ಯಥಾ ಅನಾರಂಭಕೇಽಪಿ ಭೂತಲೇ ಜಲಬಿಂದೋರ್ಲಯದರ್ಶನಾತ್ । ಅನಾರಂಭಕೇಷ್ವಪಿ ಭೂತೇಷ್ವಾತ್ಮನೋ ಲಯಶ್ರವಣಾತ್ ಚ । 'ವಿಜ್ಞಾನಘನ ಏವೈತೇಭ್ಯೋ ಭೂತೇಭ್ಯಃ ಸಮುತ್ಥಾಯ ತಾನೇವಾನುವಿನಶ್ಯತಿ' (ಬೃ.ಉ. ೨.೪.೧೨) ಇತ್ಯಾದಿ ಶ್ರುತಾವಿತಿ ಭಾವಃ ।*

ಅನುವಾದ: ದೇವತೆಗಳಲ್ಲಿ ಲಯವಾಗುವುದನ್ನು ಕೇಳುವುದು ಕಾರಣತ್ವವನ್ನು ಸಿದ್ಧಿಸುವುದಿಲ್ಲ, ಎಂದರೆ ಶ್ರುತಿಗಳು ಆರಂಭಕ ವಿಷಯಗಳನ್ನು ಒಳಗೊಂಡಿಲ್ಲ. ಭೂತಲವು ಆರಂಭಕವಲ್ಲದಿದ್ದರೂ ಜಲಬಿಂದುವು ಲಯವಾಗುವುದಿಲ್ಲವೆ? ಆರಂಭಕವಲ್ಲದಿದ್ದರೂ ಭೂತಗಳಲ್ಲಿ ಆತ್ಮವು ಲಯವಾಗುವುದನ್ನು ಕೇಳಿದ್ದೇವೆ. 'ವಿಜ್ಞಾನಘನನಾದರೂ (ಆತ್ಮನು) ಈ ಭೂತಗಳಿಂದ ಮೇಲೆದ್ದು ಅವುಗಳನ್ನೇ ಮತ್ತೆ ಪ್ರವೇಶಿಸುತ್ತಾನೆ' ಎಂದು ಶ್ರುತಿಯಲ್ಲಿ ಹೇಳಿದೆ.

ಭಾಷ್ಯ: *ಇಂದ್ರಿಯಾಂತರ್ಗತಂ ಮನೋ ನಿತ್ಯಮಿತಿ ಕೇಚಿತ್ ತತ್ ಪರಿಹರತಿ ।*

ಅನುವಾದ: ಕೆಲವರ ಅಭಿಪ್ರಾಯದಲ್ಲಿ ಇಂದ್ರಿಯಗಳಲ್ಲಿ ಸೇರಿಹೋಗಿರುವ ಮನಸ್ಸು ನಿತ್ಯವೆನ್ನುವರು. ಅದನ್ನು (ಈ ಸೂತ್ರದಿಂದ) ಹೋಗಲಾಡಿಸಿದೆ.

ಸೂತ್ರ: ತದುತ್ಪತ್ತಿಶ್ರುತೇರ್ವಿನಾಶದರ್ಶನಾತ್ ॥ ೨೨ ॥

ಸೂತ್ರಾನುವಾದ: ಅಹಂಕಾರದಿಂದ ಇಂದ್ರಿಯಗಳ ಉತ್ಪತ್ತಿಯನ್ನು ಕೇಳಿದ ಮೇಲೆ ಅದರಲ್ಲಿಯೇ ಲಯ ಹೊಂದುವುದರಿಂದ ಇಂದ್ರಿಯಗಳು ಭೌತಿಕವಲ್ಲ.

ಭಾಷ್ಯ: *ತೇಷಾಂ ಸರ್ವೇಷಾಮೇವ ಇಂದ್ರಿಯಾಣಾಮುತ್ಪತ್ತೇರಸ್ತಿ 'ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ' (ಮುಂ. ೨.೩), ಇತ್ಯಾದಿ ಶ್ರುತೇಃ ವೃದ್ಧಾದ್ಯವಸ್ಥಾಸು ಚಕ್ಷುರಾದೀನಾಮಿವ ಮನಸೋಽಪ್ಯ-ಪಚಯಾದಿನಾ ವಿನಾಶನಿರ್ಣಯಾಚ್ಚ ಇತ್ಯರ್ಥಃ । ತಥಾ ಚೋಕ್ತಮ್, 'ದಶಕೇನ ನಿವರ್ತಂತೇ ಮನಃ ಸರ್ವೇಂದ್ರಿಯಾಣಿ ಚ' ಇತಿ । ಮನಸೋ ನಿತ್ಯತ್ವವಚನಾನಿ ಚ ಪ್ರಕೃತ್ಯಾಖ್ಯಾಬೀಜಪರಾಣೀತಿ ।*

ಅನುವಾದ: ಎಲ್ಲ ಇಂದ್ರಿಯಗಳ ಉತ್ಪತ್ತಿಯನ್ನು ಕುರಿತು ಹೇಳಿದೆ. 'ಈ ಅಕ್ಷರಪುರುಷನಿಂದ ಪ್ರಾಣ, ಮನಸ್ಸು, ಎಲ್ಲಾ ಇಂದ್ರಿಯಗಳು ಉಂಟಾಗುತ್ತವೆ' ಎಂಬ ಶ್ರುತಿವಚನದಂತೆ ವೃದ್ಧಾದಿ ಅವಸ್ಥೆಗಳಲ್ಲಿ ಚಕ್ಷುರಾದಿಯಾಗಿ ಮನಸ್ಸೂ ಸಹ ಕ್ಷೀಣವಾಗಿ ವಿನಾಶವಾಗುತ್ತದೆ, ಎಂದರ್ಥ. ಹೀಗೆ ಉಕ್ತಿಯುಂಟು. 'ಮನಸ್ಸು ಆ ಹತ್ತರೊಡನೆ ಸೇರಿ ಹನ್ನೊಂದು ಇಂದ್ರಿಯಗಳೂ ಹಿಂದೆ ಬರುತ್ತವೆ.' ಮನಸ್ಸು ನಿತ್ಯವೆಂಬ ಮಾತೂ ಸಹ ಪ್ರಕೃತಿ ಎಂಬ ಬೀಜದಿಂದ ಉಂಟಾಗಿದೆ ಎಂದು ತಿಳಿಯಬೇಕು.

ವಿವರಣೆ: ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಂದ್ರಿಯಗಳ ಉತ್ಪತ್ತಿಗೆ ಅಹಂಕಾರವೇ ಕಾರಣ. ಇಂದ್ರಿಯಗಳು ಭೌತಿಕವಲ್ಲ, ಆಹಂಕಾರಿಕಗಳು.

ಭಾಷ್ಯ: *ಗೋಲಕಜಾತಮೇವ ಇಂದ್ರಿಯಮಿತಿ ನಾಸ್ತಿಕಮತಮಪಾಕರೋತಿ ।*

ಅನುವಾದ: ನಾಸ್ತಿಕರ ಅಭಿಪ್ರಾಯದಂತೆ ಗೋಲಕಗಳನ್ನೇ ಇಂದ್ರಿಯಗಳೆನ್ನುತ್ತಾರೆ.

ಸೂತ್ರ: ಅತೀಂದ್ರಿಯಮಿಂದ್ರಿಯಂ ಭ್ರಾಂತಾನಾಮಧಿಷ್ಠಾನಮ್ ॥ ೨೩ ॥

ಸೂತ್ರಾನುವಾದ: ಇಂದ್ರಿಯವು ಅತೀಂದ್ರಿಯವು. (ಗೋಲಕವು) ಅಧಿಷ್ಠಾನ ಮಾತ್ರ. (ಆದರೂ) ಭ್ರಾಂತರು (ಆ ಸ್ಥಾನವನ್ನು ಇಂದ್ರಿಯವೆನ್ನುತ್ತಾರೆ.)

ವಿವರಣೆ: ಗೋಲಕವೆಂಬುದು ಕಣ್ಣಿನ ಪಾಪೆಯೆಂದು ಬಾಲಂಟೈನ್ ಅವರ ಅಭಿಪ್ರಾಯ. ವೃತ್ತಿಕಾರನು 'ಅಧಿಷ್ಠಾನೇ' ಎಂಬ ಪಾಠವನ್ನು ಅನುಸರಿಸಿದ್ದಾನೆ.

ಭಾಷ್ಯ: *ಇಂದ್ರಿಯಂ ಸರ್ವಮತೀಂದ್ರಿಯಮ್, ನ ತು ಪ್ರತ್ಯಕ್ಷಮ್ । ಭ್ರಾಂತಾ–ನಾಮೇವ ತ್ವಧಿಷ್ಠಾನೇ ಗೋಲಕೇ ತಾದಾತ್ಮ್ಯೇನ ಇಂದ್ರಿಯಮಿತ್ಯರ್ಥಃ। ಅಧಿಷ್ಠಾನಮಿತ್ಯೇವ ಪಾಠಃ ।*

ಅನುವಾದ: ಇಂದ್ರಿಯವು ಅತೀಂದ್ರಿಯವಾದುದು, ಪ್ರತ್ಯಕ್ಷವಲ್ಲ ಭ್ರಾಂತರಿಗೆ ಅದರ ಅಧಿಷ್ಠಾನವಾದ ಗೋಲಕವು ತಾದಾತ್ಮ್ಯದಿಂದ ಇಂದ್ರಿಯವೆನ್ನುತ್ತಾರೆ. ಇಲ್ಲಿ ಪಾಠವು 'ಅಧಿಷ್ಠಾನಂ' ಎಂದೇ ಇರುವುದು.

ಭಾಷ್ಯ: *ಏಕಮೇವೇಂದ್ರಿಯಂ ಶಕ್ತಿಭೇದಾದ್ವಿಲಕ್ಷಣಕಾರ್ಯಕಾರೀ ಇತಿ ಮತಮಪಾಕರೋತಿ ।*

ಅನುವಾದ: ಒಂದೇ ಇಂದ್ರಿಯವು ಶಕ್ತಿಭೇದವನ್ನು ಅವಲಂಬಿಸಿ ವಿಲಕ್ಷಣವಾದ ಕಾರ್ಯವನ್ನು ಮಾಡಬಲ್ಲುದು ಎಂಬ ಅಭಿಪ್ರಾಯವನ್ನು ಹೋಗಲಾಡಿಸುತ್ತಾರೆ.

ಸೂತ್ರ: ಶಕ್ತಿಭೇದೇಽಪಿ ಭೇದಸಿದ್ಧೌ ನೈಕತ್ವಮ್ ॥ ೨೪ ॥

ಸೂತ್ರಾನುವಾದ: ಶಕ್ತಿಭೇದವನ್ನು ಅವಲಂಬಿಸಿ ಭೇದವನ್ನು ಸಿದ್ಧಿಸಿದ ನಂತರ ಇಂದ್ರಿಯವು ಒಂದೇ ಎನ್ನಲಾಗದು.

ಭಾಷ್ಯ: *ಏಕಸ್ಯೈವೇಂದ್ರಿಯಸ್ಯ ಶಕ್ತಿಭೇದಸ್ವೀಕಾರೇಽಪಿ ಇಂದ್ರಿಯಭೇದಃ ಸಿದ್ಧ್ಯತಿ ಶಕ್ತೀನಾಮಪೀಂದ್ರಿಯತ್ವಾತ್ । ಅತೋ ನೈಕತ್ವಮಿಂದ್ರಿಯಸ್ಯ ।*

ಅನುವಾದ: ಒಂದೇ ಇಂದ್ರಿಯದಲ್ಲಿ ಶಕ್ತಿಭೇದವನ್ನು ಸ್ವೀಕರಿಸಿದರೂ ಇಂದ್ರಿಯಭೇದವು ಸಿದ್ಧವಾಗಿರುವುದು, ಏಕೆಂದರೆ ಆ ಶಕ್ತಿಗಳು ಇಂದ್ರಿಯಗಳಲ್ಲಿ ಅಡಗಿರುತ್ತವೆ; ಆದ್ದರಿಂದ ಇಂದ್ರಿಯವು ಒಂದೇ ಎಂದು ಹೇಳಲಾಗದು.

ಭಾಷ್ಯ: *ನನು ಏಕಸ್ಮಾದಹಂಕಾರಾತ್ ನಾನಾವಿಧೇಂದ್ರಿಯೋತ್ಪತ್ತಿಕಲ್ಪನಾಯಾಂ ನ್ಯಾಯವಿರೋಧಸ್ತತ್ರಾಹ–*

ಅನುವಾದ: ಒಂದೇ ಅಹಂಕಾರದಿಂದ ನಾನಾವಿಧವಾದ ಇಂದ್ರಿಯಗಳು ಉತ್ಪತ್ತಿಯಾಗುತ್ತವೆ ಎಂಬ ಕಲ್ಪನೆಯು ನ್ಯಾಯವಿರೋಧವಾದುದು. ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ನ ಕಲ್ಪನಾವಿರೋಧಃ ಪ್ರಮಾಣದೃಷ್ಟಸ್ಯ ॥ ೨೫ ॥

ಸೂತ್ರಾನುವಾದ: ಪ್ರಮಾಣಪೂರ್ವಕವಾಗಿ ಕಂಡ ವಸ್ತುವನ್ನು ಕೇವಲ ಕಲ್ಪನೆಯಿಂದ ಅಲ್ಲಗಳೆಯಲಾಗದು.

ಭಾಷ್ಯ: *ಸುಗಮಮ್ । – (ಸುಲಭವಾಗಿದೆ.)*

ಏಕಸ್ಯೈವ ಮುಖ್ಯೇಂದ್ರಿಯಸ್ಯ ಮನಸಃ ಅನ್ಯೇ ದಶಶಕ್ತಿಭೇದಾಃ ಇತ್ಯಾಹ ।

ಅನುವಾದ: ಒಂದೇ ಮುಖ್ಯ ಇಂದ್ರಿಯವಾದ ಮನಸ್ಸಿಗೆ ಇತರ ಹತ್ತು ಶಕ್ತಿಭೇದಗಳಿವೆ (ಎನ್ನಬಹುದೆ?)

ಸೂತ್ರ: ಉಭಯಾತ್ಮಕಂ ಮನಃ ॥ ೨೬ ॥

ಸೂತ್ರಾನುವಾದ: ಮನಸ್ಸು ಎರಡೂ ರೀತಿಯದಾಗಿರುತ್ತದೆ.

ಭಾಷ್ಯ: *ಜ್ಞಾನಕರ್ಮೇಂದ್ರಿಯಾತ್ಮಕಂ ಮನಃ ॥೨೬॥*

ಅನುವಾದ: ಮನಸ್ಸು ಜ್ಞಾನ–ಕರ್ಮೇಂದ್ರಿಯಾತ್ಮಕವಾಗಿರುತ್ತದೆ.

ವಿವರಣೆ: ಮನಸ್ಸು ಅಂತರಿಂದ್ರಿಯವಾದ್ದರಿಂದ ಬಾಹ್ಯೇಂದ್ರಿಯಗಳ ಮೂಲಕ ಅದು ಪ್ರವೃತ್ತವಾಗುತ್ತದೆ.

ಭಾಷ್ಯ: *ಉಭಯಾತ್ಮಕಮಿತ್ಯರ್ಥಂ ಸ್ವಯಂ ವಿವೃಣೋತಿ ।*

ಸೂತ್ರ: ಗುಣಪರಿಣಾಮಭೇದಾನ್ನಾನಾತ್ವಮವಸ್ಥಾವತ್ ॥ ೨೭ ॥

ಅನುವಾದ: 'ಉಭಯಾತ್ಮಕಂ' ಎಂಬುದನ್ನು ತಾವೇ ಸ್ಪಷ್ಟಪಡಿಸುವರು.

ಸೂತ್ರಾನುವಾದ: ಗುಣಗಳ ಪರಿಣಾಮ ವಿಶೇಷದ ಕಾರಣ ನಾನಾ ಇಂದ್ರಿಯಗಳ ಉತ್ಪತ್ತಿಯಾಗುವುದು; ಒಂದೇ ದೇಹದಲ್ಲಿ ನಾನಾ ಅವಸ್ಥೆಗಳು ಉಂಟಾಗುವಂತೆ.

ಭಾಷ್ಯ: *ಯಥೈಕ ಏವ ನರಃ ಸಂಗವಶಾನ್ನಾನಾತ್ವಂ ಭಜತೇ, ಕಾಮಿನೀಸಂಗಾತ್ ಕಾಮುಕಃ, ವಿರಕ್ತಸಂಗಾದ್ವಿರಕ್ತಃ, ಅನ್ಯಸಂಗಾಚ್ಚಾನ್ಯಃ, ಏವಂ ಮನೋಽಪಿ ಚಕ್ಷುರಾದಿಸಂಗಾಚ್ಚಕ್ಷುರಾದ್ಯೇಕೀಭಾವೇನ ದರ್ಶನಾದಿ ವೃತ್ತಿವಿಶಿಷ್ಟತಯಾ ನಾನಾ ಭವತಿ । ತತ್ರ ಹೇತುಃ– ಗುಣೇತ್ಯಾದಿ । ಗುಣಾದೀನಾಂ ಸತ್ತ್ವಾದೀನಾಂ ಪರಿಣಾಮಭೇದೇಷು ಸಾಮರ್ಥ್ಯಾದಿತ್ಯರ್ಥಃ । ಏತಚ್ಚ 'ಅನ್ಯತ್ರ ಮನಾ ಅಭೂವಂ, ನಾಶ್ರೌಷಂ' (ಬೃ.ಉ. ೧.೫.೩) ಇತ್ಯಾದಿ–ಶ್ರುತಿಸಿದ್ಧಾಚ್ಚಕ್ಷುರಾದೀನಾಂ ಮನಃ ಸಂಯೋಗಂ ವಿನಾ ವ್ಯಾಪಾರಾ–ಕ್ಷಮತ್ವಾದನುಮೀಯತೇ ।*

ಅನುವಾದ: ಹೇಗೆ ಒಬ್ಬನೇ ಮನುಷ್ಯ ಸಂಗದ ವಶದಿಂದ ನಾನಾತ್ವವನ್ನು ಪಡೆಯುವನೋ, ಕಾಮಿನಿಯ ಸಂಗದಿಂದ ಕಾಮುಕನಾಗಿ, ವಿರಕ್ತನ ಸಂಗದಿಂದ ವಿರಕ್ತನಾಗಿ, ಬೇರೆಯವರ ಸಂಗದಿಂದ ಬೇರೆಯವನಾಗಿ ಇರುವನೋ ಹಾಗೆಯೇ ಮನಸ್ಸೂ

ಕೂಡ ಚಕ್ಷುಸ್ಸೇ ಮೊದಲಾದುವುಗಳ ಸಂಗದಿಂದ ಚಕ್ಷುರಾದಿಗಳಲ್ಲಿ ಸೇರಿಹೋಗುವುದರಿಂದ ದರ್ಶನಾದಿ ಭಿನ್ನಭಿನ್ನ ವೃತ್ತಿಗಳಿಂದ ನಾನಾ ರೀತಿಯಲ್ಲಿ ಇರುತ್ತದೆ. ಅದಕ್ಕೆ ಕಾರಣವೆಂದರೆ, ಗುಣಗಳು ಮುಂತಾಗಿ, ಸತ್ತ್ವಾದಿಗುಣಗಳ ಪರಿಣಾಮಭೇದ ಹೊಂದಲು ಮನಸ್ಸಿಗೆ ಸಾಮರ್ಥ್ಯವಿದೆ ಎಂದು ಅರ್ಥ. ಅದನ್ನು 'ನನ್ನ ಮನಸ್ಸು ಎತ್ತಲೋ ಇತ್ತು. ಆದ್ದರಿಂದ ಕೇಳಿಸಿಕೊಳ್ಳಲಿಲ್ಲ' ಎಂಬ ಶ್ರುತಿವಚನದ ಆಧಾರದ ಮೇಲೆ ಚಕ್ಷುಸ್ಸೇ ಮೊದಲಾದುವುಗಳು ಮನಃಸಂಯೋಗವಿಲ್ಲದೆ ಕಾರ್ಯಪ್ರವೃತ್ತರಾಗಲಾರವು ಎಂದು ಅನುಮಾನ ಮಾಡಬಹುದು.

ಭಾಷ್ಯ: *ಜ್ಞಾನಕರ್ಮೇಂದ್ರಿಯಯೋರ್ವಿಷಯಮಾಹ ।*

ಸೂತ್ರ: ರೂಪಾದಿರಸಮಲಾಂತ ಉಭಯೋಃ ॥ ೨೮ ॥

ಅನುವಾದ: ಇನ್ನು ಜ್ಞಾನ ಮತ್ತು ಕರ್ಮೇಂದ್ರಿಯಗಳನ್ನು ಕುರಿತು ಹೇಳಲಾಗಿದೆ.

ಸೂತ್ರಾನುವಾದ: ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ವಿಷಯವು ರೂಪದಿಂದ ಪ್ರಾರಂಭವಾಗಿ ಮಲದವರೆಗೆ (ಇರುತ್ತದೆ.)

ಭಾಷ್ಯ: *ಅನ್ನರಸಾನಾಂ ಮಲಃ ಪುರೀಷಾದಿಃ । ತಥಾ ರೂಪರಸಗಂಧ–ಸ್ಪರ್ಶಶಬ್ದಾಃ ವಕ್ತವ್ಯ, ಆದಾತವ್ಯ, ಗಂತವ್ಯ, ಆನಂದಯಿತವ್ಯ ಮತ್ತು ಉತ್ಸ್ರಷ್ಟವ್ಯಾಃ ಚ ಉಭಯೋಃ ಜ್ಞಾನಕರ್ಮೇಂದ್ರಿಯಯೋಃ ದಶವಿಷಯಾ ಇತ್ಯರ್ಥಃ । ಆನಂದಿತವ್ಯ ಚ ಉಪಸ್ಥಸ್ಯ ಉಪಸ್ಥಾಂತರಂ ವಿಷಯ ಇತಿ ।*

ಅನುವಾದ: ಅನ್ನರಸಗಳ ಮಲವನ್ನು ಪುರೀಷವೆನ್ನುವರು. ಹಾಗೆಯೇ ರೂಪ, ರಸ, ಗಂಧ, ಸ್ಪರ್ಶ ಮತ್ತು ಶಬ್ದಗಳು ಇಂದ್ರಿಯಗಳಿಗೆ ವಿಷಯಗಳಾಗಿರುತ್ತವೆ. (ಚಕ್ಷುಸ್ಸಿಗೆ ವಿಷಯ ರೂಪ, ತ್ವಕ್ಕಿಗೆ ಸ್ಪರ್ಶ, ಶ್ರೋತ್ರಕ್ಕೆ ಶಬ್ದ, ರಸಕ್ಕೆ ರಸ ಮತ್ತು ಘ್ರಾಣಕ್ಕೆ ಗಂಧ) (ವಾಕ್ಕಿಗೆ ವಿಷಯ) ವಕ್ತವ್ಯ, ಕೈಗೆ ವಿಷಯ ಆದಾತವ್ಯ, ಕಾಲುಗಳಿಗೆ ವಿಷಯ ಗಂತವ್ಯ, ಪಾಯುವಿಗೆ ಉತ್ಸರ್ಜನ ಮತ್ತು ಉಪಸ್ಥಕ್ಕೆ ಆನಂದ (ಆನಂದಯಿತವ್ಯ). ಹೀಗೆ ಜ್ಞಾನಕರ್ಮೇಂದ್ರಿಯಗಳಿಗೆ ಹತ್ತು ವಿಷಯಗಳಿರುತ್ತವೆ. 'ಆನಂದಯಿತವ್ಯ' ಎಂದರೆ ಒಂದು ಮತ್ತೊಂದು ಉಪಸ್ಥಕ್ಕೆ ಆನಂದದಾಯಕವಾಗಿರುತ್ತದೆ. (ಒಂದು ಉಪಸ್ಥಕ್ಕೆ ಮತ್ತೊಂದು ಉಪಸ್ಥವೇ ವಿಷಯವಾಗಿರುತ್ತದೆ.)

ಭಾಷ್ಯ: *ಯಸ್ಯೇಂದ್ರಿಯಸ್ಯ ಯೇನೋಪಕಾರೇಣ ಏತಾನೀಂದ್ರಿಯಾಣಿ ಇತಿ ಉಚ್ಯಂತೇ, ತದುಭಯಮಾಹ–*

ಅನುವಾದ: ಯಾವ ಇಂದ್ರಿಯದ ಯಾವ ಉಪಕಾರದಿಂದ ಇವುಗಳು ಇಂದ್ರಿಯಗಳೆಂದು ಹೇಳಲ್ಪಡುತ್ತದೆ. ಅದಕ್ಕೆ (ಸೂತ್ರಕಾರರು) ಹೀಗೆ ಹೇಳಿದ್ದಾರೆ.

ಸೂತ್ರ: ದ್ರಷ್ಟೃತ್ವಾದಿರಾತ್ಮನಃ ಕರಣತ್ವಮಿಂದ್ರಿಯಾಣಾಮ್ ॥ ೨೯ ॥

ಸೂತ್ರಾನುವಾದ: ದ್ರಷ್ಟೃತ್ವವೇ ಮೊದಲಾದ (ಧರ್ಮಗಳು) ಆತ್ಮನಿಗೆ ಸೇರಿದ್ದು. ಕರಣತ್ವ (ಅದಕ್ಕೆ ಸಾಧನ) ಧರ್ಮ ಇಂದ್ರಿಯಗಳಿಗೆ ಸೇರಿದ್ದು.

ಭಾಷ್ಯ: *ದ್ರಷ್ಟೃತ್ವಾದಿ–ಪಂಚಕಂ, ವಕ್ತೃತ್ವಾದಿ ಪಂಚಕಂ, ಸಂಕಲ್ಪಯಿತೃತ್ವಂ ಚಾತ್ಮನಃ ಪುರುಷಸ್ಯ ದರ್ಶನಾದಿವೃತ್ತೌ ಕರಣತ್ವಂ ತ್ವಿಂದ್ರಿಯಾಣಾಮಿತ್ಯರ್ಥಃ ।*

ಅನುವಾದ: ದ್ರಷ್ಟೃತ್ವಾದೀಂದ್ರಿಯಗಳು (ಜ್ಞಾನೇಂದ್ರಿಯಗಳು) ಐದು, ವಾಗಾದೀಂದ್ರಿಯಗಳು ಐದು, (ಕರ್ಮೇಂದ್ರಿಯಗಳು) ಮತ್ತು ಸಂಕಲ್ಪ ಮಾಡುವ ಇಂದ್ರಿಯ (ಮನಸ್ಸು) ಇವೆಲ್ಲ ಆತ್ಮನ ಎಂದರೆ ಪುರುಷನ ದರ್ಶನಾದಿ ವೃತ್ತಿಗಳಿಗೆ; ಕರಣತ್ವಧರ್ಮ ಇಂದ್ರಿಯಗಳದ್ದು.

ಭಾಷ್ಯ: *ನನು ದ್ರಷ್ಟೃತ್ವಶ್ರೋತೃತ್ವಾದಿಕಂ ಕದಾಚಿದನುಭವೇ ಪರ್ಯವಸಾನಾತ್ ಪುರುಷಸ್ಯ ಅವಿಕಾರಿಣೋಽಪಿ ಘಟನಾಮ್, ವಕ್ತೃತ್ವಾದಿಕಂ ಕ್ರಿಯಾಮಾತ್ರಂ, ತತ್ ಕಥಂ ಕೂಟಸ್ಥಸ್ಯ ಘಟತಾಮಿತಿ ।*

ಅನುವಾದ: ದ್ರಷ್ಟೃತ್ವ, ಶ್ರೋತೃತ್ವ ಮುಂತಾದುವು ಒಮ್ಮೆ ಅನುಭವದಲ್ಲಿ ಪರ್ಯವಸಾನ ಗೊಳ್ಳುವುದರಿಂದ ಅವಿಕಾರಿಯಾದ ಪುರುಷನಲ್ಲಿ ಅದು ಹೇಗೆ ಸಾಧ್ಯ? ವಕ್ತೃತ್ವವೇ ಮೊದಲಾದುವು ಕೇವಲ ಕ್ರಿಯೆಗಳು. ಇವು ಕೂಟಸ್ಥಪುರುಷನಲ್ಲಿ ಹೇಗೆ ಸಂಭವಿಸುವುವು?

ಭಾಷ್ಯ: *ಇತಿ ಚೇನ್ನ । ಅಯಸ್ಕಾಂತವತ್ ಸಾನ್ನಿಧ್ಯಮಾತ್ರೇಣ ದರ್ಶನಾದಿ–ವೃತ್ತಿಕರ್ತೃತ್ವಸ್ಯೈವಾತ್ರ ದ್ರಷ್ಟೃತ್ವಾದಿಶಬ್ದಾರ್ಥತ್ವಾತ್ । ಯಥಾ ಹಿ ಮಹಾರಾಜಃ ಸ್ವಯಮವ್ಯಾಪ್ರಿಯಮಾಣೋಽಪಿ ಸೈನ್ಯೇನ ಕರಣೇನ ಯೋದ್ಧಾ ಭವತಿ ಆಜ್ಞಾಮಾತ್ರೇಣಪ್ರೇರಕತ್ವಾತ್, ತಥಾ ಕೂಟಸ್ಥೋಽಪಿ ಪುರುಷಶ್ಚಕ್ಷುರಾದಿ–ಅಖಿಲಕರಣೈರ್ದ್ರಷ್ಟಾ ವಕ್ತಾ ಸಂಕಲ್ಪಯಿತಾ ಚೇತ್ಯೇವಮಾದಿರ್ಭವತಿ । ಸಂಯೋಗಾಖ್ಯಸಾನ್ನಿಧ್ಯಮಾತ್ರೇಣ ಏವ ತೇಷಾಂ ಪ್ರೇರಕತ್ವಾದಯಸ್ಕಾಂತಮಣಿವದಿತಿ ।*

ಅನುವಾದ: ಅಯಸ್ಕಾಂತದಂತೆ ಕೇವಲ ಬಳಿಯಲ್ಲಿರುವುದರಿಂದಲೇ ದರ್ಶನಾದಿ ವೃತ್ತಿಗಳಿಗೆ ಕರ್ತೃತ್ವವುಂಟಾಗಿದೆ ಎಂದು ದ್ರಷ್ಟೃತ್ವವೇ ಮೊದಲಾದ ಶಬ್ದಗಳ ಅರ್ಥ ಮಾಡಬಹುದು. ಹೇಗೆ ಮಹಾರಾಜನು ತಾನೇ ಕಾರ್ಯದಲ್ಲಿ ತೊಡಗದಿದ್ದರೂ ತನ್ನ ಸಾಧನವಾದ ಸೈನ್ಯದಿಂದ ಯೋದ್ಧನೆಂದು ಕರೆಯಲ್ಪಡುವನೋ ಮತ್ತು ತನ್ನ ಆಜ್ಞಾಮಾತ್ರದಿಂದಲೇ ಪ್ರೇರಣೆ ನೀಡುವನೋ, ಹಾಗೆಯೇ ಕೂಟಸ್ಥನಾದರೂ ಕಣ್ಣೇ ಮೊದಲಾದ ಎಲ್ಲ ಇಂದ್ರಿಯಗಳಿಂದಲೂ ಪುರುಷನು ದ್ರಷ್ಟೃ, ವಕ್ತೃ, ಸಂಕಲ್ಪಯಿತೃ ಮುಂತಾಗಿ ಆಗುವನು. ಸಂಯೋಗವೆನ್ನುವ ಸಾನ್ನಿಧ್ಯಮಾತ್ರದಿಂದಲೇ, ಅಯಸ್ಕಾಂತಮಣಿಯಂತೆ, ಪ್ರೇರಕವಾಗುವುದು.

ಭಾಷ್ಯ: *ಕರ್ತೃತ್ವಂ ಚಾತ್ರ ಕಾರಕಚಕ್ರಪ್ರಯೋಕ್ತೃತ್ವಂ, ಕರಣತ್ವಂ ಕ್ರಿಯಾಹೇತು–ವ್ಯಾಪಾರವತ್ವಂ, ತತ್ಸಾಧಕತಮತ್ವಂ ವಾ ಕುಠಾರಾದಿವತ್ । ಯತ್ತು ಶಾಸ್ತ್ರೇಷು ಪುರುಷೇ ದರ್ಶನಾದಿ ಕರ್ತೃತ್ವಂ ನಿಷಿಧ್ಯತೇ ತದನುಕೂಲ–ಕೃತಿಮತ್ತ್ವಂ ತತ್ತತ್ಕ್ರಿಯಾವತ್ತ್ವಂ ವಾ ।*

ಅನುವಾದ: ಕರ್ತೃತ್ವವೂ ಸಹ ಕ್ರಿಯೆಯನ್ನು ನಡೆಸುವುದರಲ್ಲಿ ಒಂದೇ ಸಮನೆ ಚಕ್ರದಂತೆ ತೊಡಗುವುದು. ಕರಣತ್ವವು ಕ್ರಿಯೆಗೆ ಕಾರಣವಾಗುವುದರಲ್ಲಿ ತೊಡಗುವುದು ಅಥವಾ ಕೊಡಲಿಯೇ ಮೊದಲಾದ ಸಾಧನಗಳಂತೆ ಅತ್ಯಂತ ಪ್ರಯೋಜನಕಾರಿ ಯಾದ ಸಾಧನವಾಗುವುದು. ಶಾಸ್ತ್ರಗಳಲ್ಲಿ ಪುರುಷನೇ ದರ್ಶನಾದಿ ಕರ್ತೃತ್ವವನ್ನು ಮಾಡುವುದನ್ನು ನಿಷೇಧಿಸಿದ್ದಾರೆ; ಅದಕ್ಕೆ ಅನುಕೂಲವಾದ ಕಾರ್ಯದಲ್ಲಿ ತೊಡಗುವುದು ಅಥವಾ ಆಯಾ ಕ್ರಿಯೆಗಳನ್ನು ಹೊಂದಿರುವುದು ಎಂದು ತಿಳಿಯಬೇಕು.

ಭಾಷ್ಯ: *ತಥಾ ಚೋಕ್ತಮ್ ।*

ಅತ ಆತ್ಮನಿ ಕರ್ತೃತ್ವಮಕರ್ತೃತ್ವಂ ಚ ಸಂಸ್ಥಿತಮ್ ।
ನಿರಿಚ್ಛತ್ವಾದಕರ್ತಾಸೌ ಕರ್ತಾಸನ್ನಿಧಿಮಾತ್ರತಃ ॥ (ಯೋ.ವಾ. ೪.೫೬.೩೧)

ಅನುವಾದ: ಹೀಗೆಯೂ ಹೇಳಿದ್ದಾರೆ–

ಆತ್ಮನಿಗೆ ಕರ್ತೃತ್ವ ಮತ್ತು ಅಕರ್ತೃತ್ವ ಎರಡೂ ಇರುತ್ತವೆ. ಯಾವುದೇ ಆಕಾಂಕ್ಷೆ ಇಲ್ಲದಿರುವುದರಿಂದ ಅಕರ್ತೃವೂ ಮತ್ತು ಬಳಿಯಲ್ಲಿರುವವಷ್ಟರಿಂದಲೇ ಕರ್ತೃವೂ ಆಗಿರುವನು.

ಭಾಷ್ಯ: *ಅತ ಏವ ಕಾರಕಚಕ್ರಪ್ರಯೋಕ್ತೃತಾಶಕ್ತೇರಾತ್ಮಸ್ವರೂಪತಯಾ ದ್ರಷ್ಟೃತ್ವವಕ್ತೃತ್ವಾದಿಕಂ ಆತ್ಮನೋ ನಿತ್ಯಮಿತಿ ಶ್ರೂಯತೇ । 'ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇ' (ಬೃ.ಉ. ೪.೩.೨೩) ವಕ್ತುರ್ವಕ್ತೇರ್ವಿಪರಿಲೋಪೋ ವಿದ್ಯತೇ (ಬೃ.ಉ. ೪.೩.೨೬) ಇತ್ಯಾದಿನೇತಿ ।*

ಅನುವಾದ: ಆದ್ದರಿಂದಲೇ ಕ್ರಿಯೆಯನ್ನು ನಡೆಸುವ ಚಕ್ರದಲ್ಲಿ ಪ್ರಯುಕ್ತನಾಗುವ ಶಕ್ತಿಯಲ್ಲಿ ಆತ್ಮಸ್ವರೂಪವಿರುವ ಕಾರಣ ದ್ರಷ್ಟೃತ್ವ, ವಕ್ತೃತ್ವ ಆದಿಧರ್ಮಗಳು ಆತ್ಮದಲ್ಲಿ ನಿತ್ಯವೆಂದು ಕೇಳಿದ್ದೇವೆ, 'ದ್ರಷ್ಟೃವಿನ ದೃಷ್ಟಿಯು ಎಂದೂ ಲೋಪವಾಗದು', 'ಮಾತಾಡುವವನ ವಚನಶಕ್ತಿಯು ಯಾವ ರೀತಿಯಲ್ಲೂ ಲೋಪವಾಗದು' ಎಂಬ ಶ್ರುತಿವಾಕ್ಯಗಳಿರುವುದರಿಂದ (ಆ ವಾದ ಸರಿಯಾದುದು).

ಭಾಷ್ಯ: *ನನು ಪ್ರಮಾಣವಿಭಾಗೇ ಪ್ರತ್ಯಕ್ಷಾದಿವೃತ್ತೀನಾಮೇವ ಕರಣತ್ವಮುಕ್ತಮತ್ರ ಕಥಮಿಂದ್ರಿಯಸ್ಯೋಚ್ಯತೇ ।*

ಅನುವಾದ: ಪ್ರಮಾಣಗಳನ್ನು ವಿಭಾಗ ಮಾಡುವಾಗ ಪ್ರತ್ಯಕ್ಷಾದಿ ವೃತ್ತಿಗಳಲ್ಲಿಯೇ ಕರಣತ್ವವಿದೆಯೆಂದು ಹೇಳಿ ಈಗ ಇಂದ್ರಿಯಗಳಲ್ಲಿ ಕರಣತ್ವವನ್ನು ಹೇಳುವಿರಲ್ಲ;

ಭಾಷ್ಯ: *ಇತಿ ಚೇನ್ನ । ಅತ್ರ ದರ್ಶನಾದಿರೂಪಾಸು ಚಕ್ಷುರಾದಿ ದ್ವಾರಕಬುದ್ಧಿವೃತ್ತಿಷು ಏವ ಇಂದ್ರಿಯಾಣಾಂ ಕರಣತ್ವವಚನಾತ್ । ತತ್ರ ಪುರುಷನಿಷ್ಠೇ ಬೋಧಾಖ್ಯಫಲೇ ವೃತ್ತೀನಾಂ ಕರಣಸ್ಯೋಕ್ತತ್ವಾತ್ ಇತಿ ।*

ಅನುವಾದ: ಅದು ಸರಿಯಲ್ಲ. ಚಕ್ಷುರಾದಿಗಳ ಮೂಲಕ ದರ್ಶನವೇ ಮೊದಲಾದ ಬುದ್ಧಿವೃತ್ತಿಗಳಲ್ಲಿ ಇಂದ್ರಿಯದ ಕರಣತ್ವವನ್ನು ಹೇಳಿರುವುದಷ್ಟೆ. ಅದರಲ್ಲಿ ಪುರುಷನಿಷ್ಠ ವಾದ ಬೋಧವೆಂಬ ಫಲದಲ್ಲಿ ವೃತ್ತಿಗಳನ್ನು ಮಾತ್ರ ಕರಣವೆಂದು ಹೇಳಿದೆ.

ವಿವರಣೆ: ಇಂದ್ರಿಯಗಳು ವಿಷಯಗ್ರಹಣಕ್ಕೆ ಸಾಧನಗಳಷ್ಟೆ. ಅದರ ಅನುಭವಗಳು ಬುದ್ಧಿವೃತ್ತಿಗಳಲ್ಲಿ ಪುರುಷನಿಗೆ ಅನ್ವಯಿಸುವಂತೆ ತೋರುತ್ತದೆ.

ಭಾಷ್ಯ: *ಇದಾನೀಮಂತಃಕರಣತ್ರಯಸ್ಯಾಸಾಧಾರಣವೃತ್ತೀರಾಹ–*

ಅನುವಾದ: ಈಗ ಅಂತಃಕರಣತ್ರಯದ ಅಸಾಧಾರಣವೃತ್ತಿಗಳನ್ನು ಹೇಳುವರು.

ಸೂತ್ರ: ತ್ರಯಾಣಾಂ ಸ್ವಾಲಕ್ಷಣ್ಯಮ್ ॥ ೩೦ ॥

ಸೂತ್ರಾನುವಾದ: ಮೂರರ (ಅಂತಃಕರಣಗಳ) ಆಯಾ ವಿಶೇಷ ಲಕ್ಷಣಗಳೇ (ಸಾಧಾರಣ ಧರ್ಮಗಳು.)

ಭಾಷ್ಯ: *ತ್ರಯಾಣಾಂ ಮಹದಹಂಕಾರಮನಸಾಂ ಸ್ವಾಲಕ್ಷಣ್ಯಂ ಸ್ವಂ ಸ್ವಂ ಲಕ್ಷಣಮಸಾಧಾರಣೀವೃತ್ತಿರೇಷಾಮಿತಿ ಮಧ್ಯಮಪದಲೋಪೀ ವಿಗ್ರಹಃ, ತಸ್ಯ ಭಾವಸ್ತತ್ತ್ವಮಿತ್ಯರ್ಥಃ । ಲೋಕೇ ಚ ಮಹತೋ ಲಕ್ಷಣ–ಮಧ್ಯವಸಾಯಾದಿ ಪ್ರಕೃಷ್ಟಗುಣವತ್ತ್ವಮ್ । ಅಹಂ– ಕೃತಸ್ಯ ಚಾತ್ಮನ್ಯ–ವಿದ್ಯಮಾನಗುಣಾರೋಪಃ, ಮನಸಶ್ಚ ಇದಂ ಅಸ್ತ್ವಿತ್ಯಂಗೀಕರಣಮಿತಿ। ತಥಾ ಚ ಬುದ್ಧೇಃ ವೃತ್ತಿಃ ಅಧ್ಯವಸಾಯೋಽಭಿಮಾನೋಽಹಂಕಾರಸ್ಯ ಸಂಕಲ್ಪವಿಕಲ್ಪೌ ಮನಸ ಇತ್ಯಾಯಾತಮ್ । ಸಂಕಲ್ಪಶ್ಚಿಕೀರ್ಷಾ । 'ಸಂಕಲ್ಪಃ ಕರ್ಮಮಾನಸಮಿತ್ಯನುಶಾಸನಾತ್' ವಿಕಲ್ಪಶ್ಚ ಸಂಶಯೋ ಯೋಗೋಕ್ತಭ್ರಮವಿಶೇಷೋ ವಾ, ನ ತು ವಿಶಿಷ್ಟಜ್ಞಾನಮ್ ತಸ್ಯ ಬುದ್ಧಿವೃತ್ತಿತ್ವಾದಿತಿ ।*

ಅನುವಾದ: ಮಹತ್ತು, ಅಹಂಕಾರ, ಮನಸ್ಸು ಈ ಮೂರರ ಆಯಾ ಲಕ್ಷಣವು ಅಸಾಧಾರಣ ವಾದ ವೃತ್ತಿಯು ಯಾರದ್ದೋ ಅವರು, ಎಂಬುದು ಮಧ್ಯಮಪದಲೋಪೀ ಸಮಾಸ, ಅದರ (ಸ್ವಲಕ್ಷಣಸ್ಯ) ಭಾವವು, ಸ್ವಾಲಕ್ಷಣ್ಯ. ಲೋಕದಲ್ಲಿ ಮಹತ್ತಿನ ಲಕ್ಷಣವು ಅಧ್ಯವಸಾಯವೇ ಮೊದಲಾದ ಉತ್ತಮಗುಣವುಳ್ಳದ್ದು. ಅಹಂಕಾರ ದ್ದಾದರೋ ಆತ್ಮನಲ್ಲಿ ಇಲ್ಲದ ಗುಣಗಳನ್ನು ಅನ್ವಯಿಸುವುದು. ಮನಸ್ಸಿನದು 'ಇದಿರಲಿ' ಎಂದು ಅಂಗೀಕರಿಸುವುದು. ಹಾಗೆಯೇ ಬುದ್ಧಿಯ ವೃತ್ತಿಯು ನಿರ್ಧರಿಸುವುದು, ಅಹಂಕಾರದ್ದು ಅಭಿಮಾನ, ಸಂಕಲ್ಪ ಮತ್ತು ವಿಕಲ್ಪಗಳು ಮನಸ್ಸಿನದು. ಸಂಕಲ್ಪವೆಂದರೆ 'ಮಾಡಲು ಇಚ್ಛಿಸುವುದು' ಎಂದು ಅಮರಕೋಶವು ಹೇಳುತ್ತದೆ. ಹಾಗೆಯೇ ವಿಕಲ್ಪವೆಂದರೆ ಸಂಶಯ; ಯೋಗದಲ್ಲಿ ಹೇಳಿರುವ ಭ್ರಮವಿಶೇಷ ಎಂದರ್ಥವೇ ಹೊರತು ವಿಶಿಷ್ಟಜ್ಞಾನವಲ್ಲ. ಏಕೆಂದರೆ ಅದು ಬುದ್ಧಿಯ ವೃತ್ತಿ.

ಭಾಷ್ಯ: *ತ್ರಯಾಣಾಂ ಸಾಧಾರಣೀಂ ವೃತ್ತಿಮಪ್ಯಾಹ ।*

ಅನುವಾದ: ಈ ಮೂರರ ಸಾಧಾರಣವಾದ ವೃತ್ತಿಯನ್ನು ಹೇಳಿದ್ದಾರೆ.

ಸೂತ್ರ: ಸಾಮಾನ್ಯಕರಣವೃತ್ತಿಃ ಪ್ರಾಣಾದ್ಯಾಃ ವಾಯವಃ ಪಂಚ ॥ ೩೧ ॥

ಸೂತ್ರಾನುವಾದ: ಪ್ರಾಣವೇ ಆದಿಯಾಗಿ ವಾಯುಗಳು ಐದು. ಕರಣವೃತ್ತಿಗಳು ಎಲ್ಲಕ್ಕೂ ಸಾಧಾರಣವಾದದ್ದು.

ಭಾಷ್ಯ: *ಪ್ರಾಣಾದಿರೂಪಾಃ ಪಂಚ ವಾಯುವತ್ ಸಂಚಾರಾತ್ ವಾಯವೋ ಯೇ ಪ್ರಸಿದ್ಧಾಃ ತೇ, ಸಾಮಾನ್ಯಾ ಸಾಧಾರಣೀಕರಣಸ್ಯ ಅಂತಃಕರಣತ್ರಯಸ್ಯ ವೃತ್ತಿಃ ಪರಿಣಾಮಭೇದಾಃ ಇತ್ಯರ್ಥಃ । ತದೇತತ್ ಕಾರಿಕಯಾ ಉಕ್ತಮ್ ।*

ಅನುವಾದ: ಪ್ರಾಣಾದಿರೂಪಗಳಾದ ಐದು ವಾಯುಗಳಂತೆ ಸಂಚಾರ ಮಾಡುವುದರಿಂದ ಪ್ರಸಿದ್ಧವಾದ ವಾಯುಗಳಿರುವಂತೆ ಅಂತಃಕರಣತ್ರಯದ ಸಾಮಾನ್ಯ ಅಥವಾ ಸಾಧಾರಣ ವೃತ್ತಿಯು ಪರಿಣಾಮಭೇದವುಳ್ಳದ್ದು, ಇದನ್ನು ಕಾರಿಕೆಯಲ್ಲಿ ಹೇಳಿದೆ.

ಭಾಷ್ಯ: *ಸ್ವಾಲಕ್ಷಣ್ಯಂ ವೃತ್ತಿತ್ರಯಸ್ಯ ಸೈಷಾ ಭವತ್ಯಸಾಮಾನ್ಯಾ ।*
ಸಾಮಾನ್ಯಕರಣವೃತ್ತಿಃ ಪ್ರಾಣಾದ್ಯಾ ವಾಯವಃ ಪಂಚ ॥ (ಸಾಂ.ಕಾ. ೨೯)

ಅನುವಾದ: (ಬುದ್ಧಿ, ಅಹಂಕಾರ, ಮನಸ್ಸು) ಈ ಮೂರೂ ಕರಣಗಳು ತಮ್ಮ ತಮ್ಮ ವಿಶೇಷಲಕ್ಷಣಗಳನ್ನು ಹೊಂದಿರುತ್ತವೆ ಮತ್ತು ಅವು ಅಸಾಧಾರಣವಾದುವು. ಆದರೆ ಅವುಗಳ ಸಾಮಾನ್ಯ ಕರಣವೃತ್ತಿಯು ಪ್ರಾಣವೇ ಮೊದಲಾದ ಐದು ವಾಯುಗಳು.

ವಿವರಣೆ: ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಇವುಗಳು ಐದು ವಾಯುಗಳು; ಈ ಐದೂ ಸಾಧಾರಣವ್ಯಾಪಾರಗಳು.

ಭಾಷ್ಯ: *ಅತ್ರ ಕಶ್ಚಿತ್, ಪ್ರಾಣಾದ್ಯಾ ವಾಯುವಿಶೇಷಾ ಏವ । ತೇ ಚ ಅಂತಃಕರಣವೃತ್ತ್ಯಾ ಜೀವನಯೋನಿಪ್ರಯತ್ನರೂಪಯಾ ವ್ಯಾಪ್ರಿಯಂತ ಇತಿ ಕೃತ್ವಾ ಪ್ರಾಣಾದ್ಯಾಃ ಕರಣವೃತ್ತಿಃ ಇತಿ ಅಭೇದನಿರ್ದೇಶ ಇತ್ಯಾಹ । ತನ್ನ ನ ವಾಯುಕ್ರಿಯೇ ಪೃಥಗುಪದೇಶಾತ್ ಇತಿ (೨.೪.೯) ವೇದಾಂತಸೂತ್ರೇಣ ಪ್ರಾಣಸ್ಯ ವಾಯುತ್ವವಾಯುಪರಿಣಾಮತ್ವಯೋಃ ಸ್ಫುಟಂ ಪ್ರತಿಷೇಧಾದತ್ರಾಪಿ ತದೇಕವಾಕ್ಯತೌಚಿತ್ಯಾತ್ । ಮನೋ–ಧರ್ಮಸ್ಯ ಕಾಮಾದೇಃ ಪ್ರಾಣಕ್ಷೋಭಕತಯಾ ಸಾಮಾನಾಧಿಕರಣ್ಯೇನೌಚಿತ್ಯಾಚ್ಚ ।*

ಅನುವಾದ: ಈ ವಿಷಯದಲ್ಲಿ ಒಂದು ಅಭಿಪ್ರಾಯವಿದೆ– ಪ್ರಾಣವೇ ಮೊದಲಾದುವು ವಾಯುವಿಶೇಷಗಳೇ. ಅವೂ ಸಹ ಅಂತಃಕರಣವೃತ್ತಿಯಿಂದ ಜೀವನದ ಮೂಲ ಪ್ರಯತ್ನರೂಪದಿಂದ ಕಾರ್ಯನಿರತವಾಗುತ್ತವೆ ಎಂದು ಭಾವಿಸಿ ಪ್ರಾಣಾದಿಗಳೂ ಕರಣವೃತ್ತಿಗಳೇ ಎಂದು ಅಭೇದವನ್ನು ನಿರ್ದೇಶಿಸಲಾಗಿದೆ. ಅದು ಹಾಗಲ್ಲ, 'ವಾಯು ಮತ್ತು ಅದರ ಕ್ರಿಯೆಗಳೂ ಅಲ್ಲ ಏಕೆಂದರೆ ಅದನ್ನು ಬೇರೆಯಾಗಿ

ಉಪದೇಶಿಸಲಾಗಿದೆ' ಎಂಬ ವೇದಾಂತಸೂತ್ರದಂತೆ ಪ್ರಾಣವಾಯುತ್ವ ಮತ್ತು ವಾಯುಪರಿಣಾಮತ್ವಗಳನ್ನು ಸ್ಪಷ್ಟವಾಗಿ ಪ್ರತಿಷೇಧ ಮಾಡಿರುವುದರಿಂದ ಇಲ್ಲೂ ಸಹ ಅದೇ ವಾಕ್ಯವಾಗಿರುವುದನ್ನು ಉಳಿಸಿಕೊಳ್ಳುವುದು ಉಚಿತ. ಮನೋಧರ್ಮಗಳಾದ ಕಾಮಾದಿಗಳು ಪ್ರಾಣವನ್ನು ಕದಡಿಬಿಡುವುದರಿಂದ ಸಾಮಾನಾಧಿಕರಣ್ಯವನ್ನು ಒಪ್ಪುವುದು ಉಚಿತವಾಗುವುದು.

ಭಾಷ್ಯ: *ವಾಯುಪ್ರಾಣಯೋಃ ಪೃಥಗುಪದೇಶಶ್ರುತಯಸ್ತು–*
ಏತಸ್ಮಾಜ್ಜಾಯತೇ ಪ್ರಾಣೋಮನಃ ಸರ್ವೇಂದ್ರಿಯಾಣಿ ಚ ।
ಖಂ ವಾಯುರ್ಜ್ಯೋತಿರಾಪಶ್ಚ ಪೃಥ್ವೀವಿಶ್ವಸ್ಯಧಾರಿಣೀ ॥ (ಮುಂ.ಉ. ೨.೧.೩)

ಅನುವಾದ: ವಾಯು ಮತ್ತು ಪ್ರಾಣಗಳು ಬೇರೆ ಎಂದು ಹೇಳುವ ಶ್ರುತಿಗಳಾದರೋ, ಈ (ಅಕ್ಷರಪುರುಷನಿಂದಲೇ) ಪ್ರಾಣ ಉತ್ಪನ್ನವಾಗುತ್ತದೆ. ಹಾಗೆಯೇ ಪ್ರಾಣ, ಮನಸ್ಸು, ಎಲ್ಲ ಇಂದ್ರಿಯಗಳೂ, ಆಕಾಶ, ವಾಯು, ತೇಜಸ್ಸು, ನೀರು ಮತ್ತು ವಿಶ್ವವನ್ನು ಧರಿಸಿರುವ ಪೃಥ್ವಿ (ಉತ್ಪನ್ನವಾಗುತ್ತವೆ.)

ಭಾಷ್ಯ: *ಇತ್ಯಾದ್ಯಾ ಇತಿ । ಅತ ಏವ ಲಿಂಗಶರೀರಮಧ್ಯೇ ಪ್ರಾಣಾನಾಮಗಣನೇಽಪಿ ನ ನ್ಯೂನತಾ । ವೃದ್ಧೇರೇವ ಕ್ರಿಯಾಶಕ್ತ್ಯಾ ಸೂತ್ರಾತ್ಮಪ್ರಾಣಾದಿನಾಮಕತ್ವಾತಿ । ಅಂತಃಕರಣಪರಿಣಾಮೇ ಅಪಿ ವಾಯುತುಲ್ಯಸಂಚಾರವಿಶೇಷಾತ್ ವಾಯುದೇವತಾಧಿಷಿತ್ಥತ್ವಾಚ್ಚ ವಾಯುವ್ಯವಹಾರೋಪಪತ್ತಿರಿತಿ ।*

ಅನುವಾದ: ಮುಂತಾದುವು ಎಂದು (ಹೇಳಿದೆ.) ಆದ್ದಿರಂದಲೇ ಸೂಕ್ಷ್ಮಶರೀರದ ನಡುವೆ ಪ್ರಾಣಗಳ ಗಣನೆ ಮಾಡದಿದ್ದರೂ ಏನೂ ಕಡಿಮೆಯಾಗದು. ಕ್ರಿಯಾಶಕ್ತಿಯ ಬಲದಿಂದ ಸೂತ್ರಾತ್ಮ, ಪ್ರಾಣ ಮುಂತಾದುವುಗಳ ಹೆಸರನ್ನು ವೃದ್ಧಿಯೆಂದೇ ಹೇಳುವರು. ಅಂತಃಕರಣದ ಪರಿಣಾಮವಿದ್ದರೂ ವಾಯುತುಲ್ಯವಾದ ಸಂಚಾರವಿಶೇಷದಿಂದ ಮತ್ತು ವಾಯುದೇವತೆಯ ಅಧಿಷ್ಠಾನವಿರುವುದರಿಂದ ವಾಯುಶಬ್ದದ ಬಳಕೆ ಇರುತ್ತದೆ.

ವಿವರಣೆ: 'ಸಾಮಾನ್ಯಕರಣವೃತ್ತಿಃ ಪ್ರಾಣಾದ್ಯಾಃ ವಾಯವಃ ಪಂಚ ।' ಎಂದು ಸಾಂಖ್ಯಕಾರಿಕೆಯಲ್ಲಿ (೨೯) ಹೇಳಿದೆ. ಅಂತಃಕರಣಗಳ ವೃತ್ತಿಗಳಲ್ಲಿ ಪ್ರಾಣಾದಿಗಳು ಐದು ಸಾಮಾನ್ಯವಾದುದು ಎಂಬ ಅಂಶ ಗಮನಾರ್ಹವಾದುದು.

ಭಾಷ್ಯ: *ವೈಶೇಷಿಕಾಣಾಮಿವಾಸ್ಮಾಕಂ ನಾಯಂ ನಿಯಮೋ ಯತ್ ಇಂದ್ರಿಯವೃತ್ತಿಃ ಕ್ರಮೇಣೈವ ಭವತಿ । ನೈಕದೇತ್ಯಾಹ–*

ಅನುವಾದ: ವೈಶೇಷಿಕದವರಂತೆ ನಮ್ಮಲ್ಲಿ ಇಂದ್ರಿಯವೃತ್ತಿಯು ಒಮ್ಮೆಲೇ ಆಗದು, ಕ್ರಮೇಣ ಆಗುತ್ತದೆ ಎಂಬ ನಿಯಮವಿಲ್ಲ.

ವಿವರಣೆ: ನೋಡಿ, ವೈಶೇಷಿಕ ಸೂತ್ರ, ೩.೨.೩

ಸೂತ್ರ: **ಕ್ರಮಶೋಽಕ್ರಮಶಶ್ಚೇಂದ್ರಿಯವೃತ್ತಿಃ ॥ ೩೨ ॥**

ಸೂತ್ರಾನುವಾದ: ಇಂದ್ರಿಯವ್ಯಾಪಾರವು ಕ್ರಮವಾಗಿಯೂ ಅಥವಾ ಕ್ರಮವಿಲ್ಲದೆಯೂ ಎಂದರೆ ಒಮ್ಮೆಲೇ ಸಹ ಆಗುವುದು.

ಭಾಷ್ಯ: *ಸುಗಮಮ್ । ಜಾತಿಸಾಂಕರ್ಯಸ್ಯಾಸ್ಮಾಕಮ್ ಅದೋಷತ್ವಾತ್ ಸಾಮಗ್ರೀಸಮವಧಾನೇ ಸತಿ ಅನೇಕೈಃ ಅಪಿ ಇಂದ್ರಿಯೈಃ ಏಕದಾ ಏಕವೃತ್ತ್ಯುತ್ಪಾದನೇ ಬಾಧಕಂ ನಾಸ್ತಿ ಇತಿ ಭಾವಃ । ಇಂದ್ರಿಯವೃತ್ತೀನಾಂ ವಿಭಾಗಶ್ಚ ಕಾರಿಕಯಾ ವ್ಯಾಖ್ಯಾತಃ ।*

ಅನುವಾದ: ಸುಲಭವಾಗಿದೆ. ಜಾತಿಸಾಂಕರ್ಯದ ದೋಷವಿಲ್ಲದ ಕಾರಣ ಸಾಮಗ್ರಿಯು ಸಮೀಪದಲ್ಲಿರುವಾಗ ಅನೇಕ ಇಂದ್ರಿಯಗಳು ಒಂದೇ ಕಾಲದಲ್ಲಿ ಒಂದೇ ವೃತ್ತಿಯನ್ನು ಉತ್ಪಾದಿಸುವುದರಲ್ಲಿ ಬಾಧಕವೇನೂ ಇಲ್ಲ ಎಂದು ಅಭಿಪ್ರಾಯ. ಇಂದ್ರಿಯವೃತ್ತಿಗಳ ವಿಭಾಗವೂ ಸಹ ಕಾರಿಕೆಯಲ್ಲಿ ಹೀಗೆ ಹೇಳಿದೆ–

ಶಬ್ದಾದಿಷು ಪಂಚಾನಾಮಾಲೋಚನಮಾತ್ರಮಿಷ್ಯತೇ ವೃತ್ತಿಃ ।
ವಚನಾದಾನವಿಹರಣೋತ್ಸರ್ಗಾನಂದಾಶ್ಚ ಪಂಚಾನಾಮ್ ॥ಕಾ. ೨೮॥

ಅನುವಾದ: ಶಬ್ದಾದಿಗಳಾದ (ಶಬ್ದ–ಸ್ಪರ್ಶ–ರೂಪ–ರಸ–ಗಂಧ) ಈ ವಿಷಯಗಳನ್ನು (ಚಕ್ಷುರಾದಿಗಳಿಂದ) ಸಾಮಾನ್ಯರೂಪದಿಂದ ತಿಳಿಯುವುದೇ ವೃತ್ತಿ. ವಚನ–ಆದಾನ–ವಿಹರಣ–ಉತ್ಸರ್ಗ–ಆನಂದಗಳು ಕರ್ಮೇಂದ್ರಿಯಗಳ ವಿಶೇಷ ವ್ಯಾಪಾರಗಳು.

ವಿವರಣೆ: 'ಆಲೋಚನ ಎಂದರೆ ಸಾಮಾನ್ಯ–ವಿಶೇಷಗಳಿಲ್ಲದೆ ಇಂದ್ರಿಯಗಳಿಂದ ಉಂಟಾಗುವ ನಿರ್ವಿಕಲ್ಪಕವಾದ ಅಂತಃಕರಣವೃತ್ತಿ'. (ನ್ಯಾಯಕೋಶ.) ಮುಂದೆ ಭಾಷ್ಯಕಾರನು ಈ ತತ್ತ್ವವನ್ನು ಮತ್ತಷ್ಟು ವಿಸ್ತರಿಸಿದ್ದಾನೆ.

ಭಾಷ್ಯ: *ಆಲೋಚನಂ ಚ ಪೂರ್ವಾಚಾರ್ಯೈರ್ವ್ಯಾಖ್ಯಾತಮ್ ।*
ಅಸ್ತಿಹ್ಯಾಲೋಚನಂ ಜ್ಞಾನಂ ಪ್ರಥಮಂ ನಿರ್ವಿಕಲ್ಪಕಮ್ ।
ಪರಂ ಪುನಸ್ತಥಾ ವಸ್ತುಧರ್ಮೈರ್ಜಾತ್ಯಾದಿಭಿಸ್ತಥಾ ॥
(ಶ್ಲೋ.ವಾ. ೧೧೨,೧೨೦)

ಪರಮುತ್ತರಕಾಲೀನಂ ಚ ಪುನರ್ವಸ್ತು ಧರ್ಮೈಃ ದ್ರವ್ಯರೂಪದ್ರವ್ಯೈಸ್ತಥಾ ಜಾತ್ಯಾದಿಭಿರ್ಜ್ಞಾವಂ ಸವಿಕಲ್ಪಕಂ ತಥಾ ಆಲೋಚನಾಖ್ಯಂ ಭವತೀತ್ಯರ್ಥಃ । ತಥಾ ಚ ನಿರ್ವಿಕಲ್ಪಕ–ಸವಿಕಲ್ಪಕತ್ವಂ ಜ್ಞಾನಮಾಲೋಚನಸಂಜ್ಞಮಿತಿ ಲಬ್ಧಮ್ ।

ಅನುವಾದ: ಆಲೋಚನವನ್ನು ಹಿಂದಿನ ಆಚಾರ್ಯರು ವ್ಯಾಖ್ಯಾನಿಸಿದ್ದಾರೆ. ಮೊದಲು ಆಲೋಚನಜ್ಞಾನವು ನಿರ್ವಿಕಲ್ಪಕವಾಗಿರುತ್ತದೆ. ಆದರೆ ಅದೇ ವಸ್ತುವಿನ ಜಾತಿ, ಧರ್ಮಾದಿಗಳು ಗ್ರಹಿಸಲ್ಪಡುತ್ತವೆ. (ಶ್ಲೋ.ವಾ. ೧೧೨, ೧೨೦)

ಅದಾದ ನಂತರ ವಸ್ತುವಿನ ಜಾತಿ, ನಾಮ, ರೂಪ, ಬಣ್ಣಗಳಿಂದ ಅದರ ಸವಿಕಲ್ಪಕಜ್ಞಾನವು ಗ್ರಹಿಸಲ್ಪಡುವುದು. ಹೀಗೆ ನಿರ್ವಿಕಲ್ಪಕ, ಸವಿಕಲ್ಪಕ ರೂಪವಾದ ಎರಡು ಬಗೆಯಿಂದ ಇಂದ್ರಿಯದ ಮೂಲಕ ಜ್ಞಾನವನ್ನು ಆಲೋಚನಜ್ಞಾನ ವೆನ್ನುವರು.

ಭಾಷ್ಯ: *ಕಶ್ಚಿತ್ತು ನಿರ್ವಿಕಲ್ಪಕಂ ಜ್ಞಾನಮೇವ ಆಲೋಚನಂ ಇಂದ್ರಿಯಜನ್ಯಂ ಭವತಿ । ಸವಿಕಲ್ಪಕಂ ತು ಮನೋಮಾತ್ರಜನ್ಯಂ ಇತಿ ಶ್ಲೋಕಾರ್ಥಮಾಹ ।*

ಅನುವಾದ: ಇನ್ನೊಬ್ಬರು, 'ನಿರ್ವಿಕಲ್ಪಕವಾದ ಜ್ಞಾನವೇ ಆಲೋಚನ, ಅದು ಇಂದ್ರಿಯಜನ್ಯ' ಎಂದು ಹೇಳಿ 'ಸವಿಕಲ್ಪಕವಾದರೋ ಮನಸ್ಸಿನಲ್ಲಿ ಮಾತ್ರ ಹುಟ್ಟಿದ್ದು' ಎಂದು ಶ್ಲೋಕದ ಅರ್ಥವನ್ನು ಹೇಳಿದ್ದಾರೆ.

ವಿವರಣೆ: 'ಕಶ್ಚಿತ್ತು' ಎಂದರೆ ವೃತ್ತಿಕಾರನಾದ ಅನಿರುದ್ಧ.

ಭಾಷ್ಯ: *ತನ್ನ । ಯೋಗಭಾಷ್ಯೇ (೩.೪೭) ವ್ಯಾಸದೇವೈಃ ವಿಶಿಷ್ಟಜ್ಞಾನಸ್ಯಾಪಿ ಐಂದ್ರಿಯಕತ್ವಸ್ಯ ವ್ಯವಸ್ಥಾಪಿತತ್ವಾತ್, ಇಂದ್ರಿಯೈರ್ವಿಶಿಷ್ಟಜ್ಞಾನೇ ಬಾಧಕಾಭಾವಾಚ್ಚ ।*

ಅನುವಾದ: ಅದು ಸರಿಯಲ್ಲ. ಯೋಗಭಾಷ್ಯದಲ್ಲಿ ವ್ಯಾಸರು ವಿಶಿಷ್ಟಜ್ಞಾನವಿದ್ದರೂ ಯಾವ ಬಾಧಕವೂ ಇಲ್ಲ ಎಂದಿದ್ದಾರೆ. ಏಕೆಂದರೆ ಅದು ಇಂದ್ರಿಯಗಳಿಂದ ವ್ಯವಸ್ಥಾಪಿತವಾಗಿರುತ್ತದೆ.

ಭಾಷ್ಯ: *ಸ ಏವ ಸೂತ್ರಾರ್ಥಮಪ್ಯೇವಂ ವ್ಯಾಚಷ್ಟೇ– ಬಾಹ್ಯೇಂದ್ರಿಯಮಾರಭ್ಯ ಬುದ್ಧಿಪರ್ಯಂತಸ್ಯ ವೃತ್ತಿರುತ್ಸರ್ಗತಃ ಕ್ರಮೇಣ ಭವತಿ । ಕದಾಚಿತ್ತು ವ್ಯಾಘ್ರಾದಿದರ್ಶನಕಾಲೇ ಭಯವಿಶೇಷಾತ್ ವಿದ್ಯುಲ್ಲತೇವ ಸರ್ವಕರಣೇಷ್ವೇಕದೈವ ವೃತ್ತಿರ್ಭವತೀತ್ಯರ್ಥಃ ಇತಿ ।*

ಅನುವಾದ: ಅವರೇ (ಅನಿರುದ್ಧ) ಸೂತ್ರಾರ್ಥವನ್ನು ಹೀಗೆಂದು ಹೇಳಿದ್ದಾರೆ– ಬಾಹ್ಯೇಂದ್ರಿಯದಿಂದ ಹಿಡಿದು ಬುದ್ಧಿಯವರೆಗೆ ಇಂದ್ರಿಯವೃತ್ತಿಗಳು ಕೊನೆಯವರೆಗೆ ಕ್ರಮವಾಗಿ ಆಗುತ್ತವೆ; ಒಮ್ಮೆ ವ್ಯಾಘ್ರಾದಿಗಳನ್ನು ಕಂಡಾಗ ವಿಶೇಷವಾದ ಭಯದಿಂದ ಮಿಂಚಿನಂತೆ ಎಲ್ಲ ಇಂದ್ರಿಯಗಳಲ್ಲಿ ಒಮ್ಮೆಲೇ ವೃತ್ತಿಗಳು ಉಂಟಾಗುತ್ತವೆ ಎಂದಿದ್ದಾರೆ.

ಭಾಷ್ಯ: *ತದಪ್ಯಸತ್ । ಸೂತ್ರೇ ಇಂದ್ರಿಯವೃತ್ತೀನಾಮೇವ ಕ್ರಮಿಕ–ಕ್ರಮಿಕತ್ವವಚನಾತ್, ನ ಬುದ್ಧ್ಯಹಂಕಾರವೃತ್ತ್ಯೋಃ ಪ್ರಸಂಗೋಪ್ಯಸ್ತಿ ।*

ಅನುವಾದ: ಅದೂ ಸರಿಯಲ್ಲ. ಸೂತ್ರದಲ್ಲಿ ಇಂದ್ರಿಯವೃತ್ತಿಗಳ ಕ್ರಮವಾಗಿರುವಿಕೆ, ಕ್ರಮವಾಗಿಲ್ಲದಿರುವಿಕೆ ಎರಡನ್ನೂ ಹೇಳಿರುವುದರಿಂದ ಬುದ್ಧಿ ಅಹಂಕಾರವೃತ್ತಿಗಳ ಪ್ರಸಂಗ ಬರದು.

ಭಾಷ್ಯ: *ಕಿಂಚೈಕದಾ ಅನೇಕೇಂದ್ರಿಯವೃತ್ತಾವೇವ ವಾದಿವಿಪ್ರತಿಪತ್ತ್ಯಾ ತನ್ನಿರ್ಣಯಪರತ್ವಮೇವ ಸೂತ್ರಸ್ಯೋಚಿತಂ ಮನೋಽಣುತ್ವ-ಪ್ರತಿಷೇಧಾಯ, ನ ತು ಕಾಕದಂತಾನ್ವೇಷಣಪರತ್ವಮಿತಿ ।*

ಅನುವಾದ: ಅಲ್ಲದೆ ಒಮ್ಮೆಲೇ ಅನೇಕ ಇಂದ್ರಿಯಗಳು ಪ್ರವೃತ್ತವಾದಾಗ ವಾದಿಯ ವಿರೋಧವನ್ನು ಪರಿಹರಿಸಲು ಸೂತ್ರದ ಮುಖಾಂತರ ಅದನ್ನು ನಿರ್ಧರಿಸುವುದು ಉಚಿತ, ಏಕೆಂದರೆ ಮನಸ್ಸು ಅಣುವೆಂಬುದನ್ನು ಪ್ರತಿಷೇಧ ಮಾಡದಿರಲು; ಕಾಗೆಯ ಹಲ್ಲುಗಳೆಷ್ಟು ಎಂದು ಹುಡುಕುವುದಕ್ಕಲ್ಲ.

ವಿವರಣೆ: ಮನಸ್ಸು ಅಣುಪರಿಮಾಣದ್ದು. ಇಂದ್ರಿಯಗಳು ಪ್ರವೃತ್ತವಾದಾಗ ಬುದ್ಧಿ-ಅಹಂಕಾರಗಳ ಪ್ರಸಂಗ ಬರುವುದಿಲ್ಲ. ಇಂದ್ರಿಯವೃತ್ತಿಯು ಕ್ರಮಿಕವಾಗಿಯಾಗಲಿ, ಅಕ್ರಮಿಕವಾಗಿ ಆಗಲಿ ಆಗಬಹುದು.

ಭಾಷ್ಯ: *ಪಿಂಡೀಕೃತ್ಯ ಬುದ್ಧಿವೃತ್ತೀಃ ಸಂಸಾರನಿದಾನತಾ ಪ್ರತಿಪಾದನಾರ್ಥಂ ಆದೌ ದರ್ಶಯತಿ–*

ಸೂತ್ರ: ವೃತ್ತಯಃ ಪಂಚತಯ್ಯಃ ಕ್ಲಿಷ್ಟಾಕ್ಲಿಷ್ಟಾಃ ॥ ೩೩ ॥

ಅನುವಾದ: ಸಂಸಾರದ ಕಾರಣವನ್ನು ತಿಳಿಸಲು ಬುದ್ಧಿವೃತ್ತಿಯನ್ನು ಒಟ್ಟಿಗೆ ಸೇರಿಸಿ ತೋರಿಸುತ್ತಾರೆ.

ಸೂತ್ರಾನುವಾದ: ಕ್ಲೇಶಗಳನ್ನುಂಟುಮಾಡುವ ಮತ್ತು ಕ್ಲೇಶಗಳನ್ನು ಉಂಟುಮಾಡದ ವೃತ್ತಿಗಳು ಐದು ಬಗೆ.

ಭಾಷ್ಯ: *ಕ್ಲಿಷ್ಟಾ ಅಕ್ಲಿಷ್ಟಾ ವಾ ಭವಂತು ವೃತ್ತಯಃ ಪಂಚತಯ್ಯಃ ಪಂಚಪ್ರಕಾರಾ ಏವ, ನಾಧಿಕಾ ಇತ್ಯರ್ಥಃ । ಕ್ಲಿಷ್ಟಾಃ ದುಃಖದಾಃ ಸಾಂಸಾರಿಕವೃತ್ತಯಃ, ಅಕ್ಲಿಷ್ಟಾಃ ಚ ತದ್ವಿಪರೀತಾ ಯೋಗಕಾಲೀನವೃತ್ತಯಃ । ವೃತ್ತೀನಾಂ ಪಂಚಪ್ರಕಾರತ್ವಂ ಪಾತಂಜಲಸೂತ್ರೇಣೋಕ್ತಮ್, 'ಪ್ರಮಾಣವಿಪರ್ಯಯ ವಿಕಲ್ಪನಿದ್ರಾಸ್ಮೃತಯಃ' (ಯೋ.ಸೂ. ೧.೬) ಇತಿ । ತತ್ರ ಪ್ರಮಾಣ ವೃತ್ತಿರತ್ರಾಯುಕ್ತಾ (೧.೭) ವಿಪರ್ಯಯಸ್ತ್ವಸ್ಮಾಕಂ ವಿವೇಕಾಗ್ರಹ ಏವ, ಅನ್ಯಥಾಖ್ಯಾತೇರ್ನಿರಾಸ್ಯತ್ವಾತ್ (ಸಾಂ.ಸೂ. ೫.೫೫). ವಿಶೇಷ-ದರ್ಶನಕಾಲೇಽಪಿ ರಾಹೋಃ ಶಿರಃ, ಪುರುಷಸ್ಯ ಚೈತನ್ಯಮಿತ್ಯಾದಿ-ಜ್ಞಾನಮ್ । ನಿದ್ರಾ ಚ ಸುಷುಪ್ತಿಕಾಲೀನಾ ಬುದ್ಧಿವೃತ್ತಿಃ । ಸ್ಮೃತಿಶ್ಚ ಸಂಸ್ಕಾರಜನ್ಯಂ ಜ್ಞಾನಮಿತಿ । ಏತತ್ಸರ್ವಂ ಪಾತಂಜಲೇ ಸೂತ್ರಿತಮ್ (೧.೭–೧೧)*

ಅನುವಾದ: ವೃತ್ತಿಗಳು ಕ್ಲಿಷ್ಟವಿರಲಿ ಅಕ್ಲಿಷ್ಟವಿರಲಿ, ಐದು ಪ್ರಕಾರಗಳೆಂದರೆ ಐದೇ, ಅದಕ್ಕಿಂತ ಹೆಚ್ಚಾಗದು. ದುಃಖವನ್ನು ನೀಡುವ ಕ್ಲಿಷ್ಟಗಳಾದರೆ ಸಾಂಸಾರಿಕವೃತ್ತಿಗಳು, ಅಕ್ಲಿಷ್ಟಗಳಾದರೆ ಅದಕ್ಕೆ ವಿಪರೀತವಾದ ಯೋಗಕಾಲದ ವೃತ್ತಿಗಳು. ವೃತ್ತಿಗಳು

ಐದು ಪ್ರಕಾರಗಳು ಎಂಬುದು ಪಾತಂಜಲಸೂತ್ರದಿಂದ ಉಕ್ತವಾಗಿದೆ. ಅವು, 'ಪ್ರಮಾಣ–ವಿಪರ್ಯಯ–ವಿಕಲ್ಪ–ನಿದ್ರಾ–ಸ್ಮೃತಿಗಳು' ಎಂದು. ಆ ಪ್ರಮಾಣ ವೃತ್ತಿಯನ್ನು ಇಲ್ಲಿಯೂ ಹೇಳಲಾಗಿದೆ. ವಿಪರ್ಯಯವಾದರೋ ನಮ್ಮ ವಿವೇಕಾಗ್ರಹ (ವಿವೇಕವನ್ನು ಗ್ರಹಿಸದಿರುವುದು)ವಷ್ಟೆ, ಅನ್ಯಥಾಖ್ಯಾತಿಯನ್ನು ನಾವು ಒಪ್ಪದಿರುವುದರಿಂದ. ವಿಶೇಷದರ್ಶನ ಕಾಲದಲ್ಲಿಯೂ 'ರಾಹುವಿನ ಶಿರಸ್ಸು', ಪುರುಷನ ಚೈತನ್ಯ ಇತ್ಯಾದಿ ಜ್ಞಾನವುಂಟಾಗುವುದು. ಆದರೆ ನಿದ್ರೆಯೂ ಸಹ ಸುಷುಪ್ತಿಕಾಲದ ಬುದ್ಧಿವೃತ್ತಿಯೇ. ಸ್ಮೃತಿಯೂ ಸಹ ಸಂಸ್ಕಾರಜನ್ಯವಾದ ಜ್ಞಾನ– ಇವೆಲ್ಲ ಪಾತಂಜಲ ಸೂತ್ರದಲ್ಲಿ ಹೇಳಿದ್ದಾರೆ.

ವಿವರಣೆ: ಅನ್ಯಥಾಖ್ಯಾತಿ ಎಂದರೆ ಅಯಥಾರ್ಥವಾದ ಅನುಭವ, ಭ್ರಮೆ. ವಿಶೇಷ ದರ್ಶನಕಾಲೇ ಅಥವಾ ಗಮನವಿಟ್ಟು ನೋಡಿದಾಗಲೂ ರಾಹುವಿನ ತಲೆಯಷ್ಟೇ ಕಾಣುವುದು, ಪುರುಷಚೈತನ್ಯವೆಂದಷ್ಟೇ ತಿಳಿಯುವುದು.

ಭಾಷ್ಯ: *ಯಾ ಏತಾ ಬುದ್ಧಿವೃತ್ತಯಃ ಉಕ್ತಾ ಏತದೌಪಾಧಿಕ್ಯೇವ ಪುರುಷಸ್ಯ ಅನ್ಯರೂಪತಾ; ನ ಸ್ವತಃ, ಏತನ್ನಿವೃತ್ತೌ ಚ ಪುರುಷಃ ಸ್ವರೂಪೇಽವಸ್ಥಿತೋ ಭವತೀತ್ಯನಯಾಪಿ ದಿಶಾ ಪುರುಷಸ್ಯ ಸ್ವರೂಪಂ ಪರಿಚಾಯಯತಿ ।*

ಅನುವಾದ: ಇದುವರೆಗೆ ಹೇಳಿದ ಬುದ್ಧಿವೃತ್ತಿಗಳು ಪುರುಷನ ಉಪಾಧಿಗಳು ಅವನ ಸ್ವಂತದ್ದಲ್ಲ ಆದರೆ ಅವನ ಬೇರೆಯ ರೂಪವಾಗಿ ತೋರಿಬಂದಿದ್ದು. ಈ ಉಪಾಧಿಗಳು ಬಿಟ್ಟುಹೋದಾಗ ಪುರುಷನು ತನ್ನ ನಿಜರೂಪದಲ್ಲಿ ಇರುವನು. ಈ ದಿಕ್ಕಿನಲ್ಲಿಯೂ ಪುರುಷನ ಸ್ವರೂಪದ ಪರಿಚಯವನ್ನು ನೀಡುವರು.

ಸೂತ್ರ: ತನ್ನಿವೃತ್ತೌ ಉಪಶಾಂತೋಪರಾಗಃ ಸ್ವಸ್ಥಃ ॥ ೩೪ ॥

ಸೂತ್ರಾನುವಾದ: ಇಂದ್ರಿಯವೃತ್ತಿಗಳು ತಡೆಯಲ್ಪಟ್ಟಾಗ ವಿಷಯಗಳ ಪ್ರಭಾವವು ಶಾಂತವಾಗುವುದು ಮತ್ತು ಪುರುಷನು ತನ್ನ ಸ್ವರೂಪದಲ್ಲಿ ಉಳಿಯುವನು.

ಭಾಷ್ಯ: *ತಾಸಾಂ ವೃತ್ತೀನಾಂ ವಿರಾಮದಶಾಯಾಂ ಶಾಂತತತ್ಪ್ರತಿಬಿಂಬಕಃ ಸ್ವಸ್ಥೋ ಭವತಿ, ಕೈವಲ್ಯೇ ಇವಾನ್ಯದಾಪೀತ್ಯರ್ಥಃ । ತಥಾ ಚ ಯೋಗಸೂತ್ರತ್ರಯಂ, 'ಯೋಗಶ್ಚಿತ್ತವೃತ್ತಿನಿರೋಧಃ' (ಯೋ.ಸೂ. ೨); ತದಾ ದ್ರಷ್ಟುಃ ಸ್ವರೂಪೇಽವಸ್ಥಾನಮ್ (ಯೋ.ಸೂ. ೩); ವೃತ್ತಿಸಾರೂಪ್ಯಮಿತರತ್ರ (ಯೋ.ಸೂ. ೪), ಇದಮೇವ ಚ ಪುರುಷಸ್ಯ ಸ್ವಸ್ಥತ್ವಂ ಯದುಪಾಧಿವೃತ್ತೇಃ ಪ್ರತಿಬಿಂಬಸ್ಯ ನಿವೃತ್ತಿರಿತಿ । ಏತಾದೃಶೀ ಚಾವಸ್ಥಾ ಪುರುಷಸ್ಯ ವಾಸಿಷ್ಠೇ ದೃಷ್ಟಾಂತೇನ ಪ್ರದರ್ಶಿತಾ । ಯಥಾ–*

ಅನುವಾದ: ಆ ವೃತ್ತಿಗಳ ವಿರಾಮಾವಸ್ಥೆಯಲ್ಲಿ ಶಾಂತತೆಯ ಪ್ರತಿಬಿಂಬವುಳ್ಳ ಪುರುಷನು ತನ್ನ ಸ್ವರೂಪದಲ್ಲಿ ಉಳಿಯುವನು; ಅದು (ಪುರುಷನು) ಕೈವಲ್ಯದ ಅವಸ್ಥೆಯಲ್ಲಿರುವಂತೆ; ಹಾಗೆಯೇ ಯೋಗಸೂತ್ರತ್ರಯವನ್ನು (ನೋಡೋಣ).

'ಚಿತ್ತದ ವೃತ್ತಿಗಳನ್ನು ನಿರೋಧಿಸುವುದೇ ಯೋಗ' (ಯೋ.ಸೂ. ೧.೨); 'ಆಗ ದ್ರಷ್ಟುವು ತನ್ನ ಸ್ವರೂಪದಲ್ಲಿಯೇ ಕೊನೆಗೊಳ್ಳುವನು (ಯೋ.ಸೂ. ೧.೩); 'ಬೇರೆಯೆಡೆ ವೃತ್ತಿಯೊಡನೆ ಸಾರೂಪ್ಯ ಉಂಟಾಗುವುದು (ಯೋ.ಸೂ. ೧.೪). ಪುರುಷನು ಪಡೆಯುವ ಸ್ವರೂಪವೇ ಇದು; 'ಉಪಾಧಿರೂಪವಾದ ವೃತ್ತಿಯ ಪ್ರತಿಬಿಂಬವು ಕಣ್ಮರೆಯಾಗುವುದು', ಹೇಗೆಂದರೆ–

ಭಾಷ್ಯ: *ಅನಾಪ್ತಾಖಿಲಶೈಲಾದಿಪ್ರತಿಬಿಂಬೇ ಹಿ ಯಾದೃಶೀ ।*
ಸ್ಯಾದ್ದರ್ಪಣೇ ದರ್ಪಣತಾ ಕೇವಲಾತ್ಮಕಸ್ವರೂಪಿಣೀ ॥
ಅಹಂ ತ್ವಂ ಜಗದಿತ್ಯಾದೌ ಪ್ರಶಾಂತೇ ದೃಶ್ಯಸಂಭ್ರಮೇ ।
ಸ್ಯಾತ್ತಾದೃಶೀ ಕೇವಲತಾ ಸ್ಥಿತೇ ದ್ರಷ್ಟರ್ಯವೀಕ್ಷಣೇ ॥
(ಯೋಗವಾಸಿಷ್ಠ ೩.೪.೫೭–೫೮)

ಅನುವಾದ: ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಲ್ಲಿ ಹೇಗೆ ಪರ್ವತವೇ ಮೊದಲಾದುವು (ಗೋಚರವಾಗಿ) ಕಣ್ಮರೆಯಾದ ಮೇಲೆ ಕನ್ನಡಿಯು ತನ್ನ ರೂಪವನ್ನು ಮೊದಲಿನಂತೆಯೇ ಹೊಂದುವುದೋ ಹಾಗೆಯೇ ನಾನು, ನೀನು, ಜಗತ್ತು ಇತ್ಯಾದಿ ದೃಶ್ಯಭ್ರಮೆ ಹೋದಾಗ ದ್ರಷ್ಟೃವು ಕಾಣಬರುವುದಿಲ್ಲ.

ವಿವರಣೆ: ಇಂದ್ರಿಯವೃತ್ತಿ ನಿವೃತ್ತವಾದಾಗ ಉಪಾಧಿರಹಿತವಾದ ಪುರುಷನು ತನ್ನ ಸ್ವರೂಪದಲ್ಲಿ ಸ್ಥಿತನಾಗುವನು.

ಭಾಷ್ಯ: *ಏತದೇವ ದೃಷ್ಟಾಂತೇನ ವಿವೃಣೋತಿ ।*

ಸೂತ್ರ: ಕುಸುಮವಚ್ಚ ಮಣಿಃ ॥ ೩೫ ॥

ಅನುವಾದ: ಇದನ್ನೇ ದೃಷ್ಟಾಂತದ ಮೂಲಕ ಸ್ಪಷ್ಟಪಡಿಸಿದೆ–

ಸೂತ್ರಾನುವಾದ: (ನಿರ್ಮಲವಾದ) ಮಣಿಯು ಹೂವಿನಂತೆ (ಕಾಣುತ್ತದೆ.)

ಭಾಷ್ಯ: *ಚಕಾರೋ ಹೇತೌ । ಕುಸುಮೇನೇವ ಮಣಿತ್ಯರ್ಥಃ । ಯಥಾ ಜಪಾಕುಸುಮೇನ ಸ್ಫಟಿಕಮಣಿಃ ರಕ್ತೋಽಚ್ಛೋಽಸ್ವಸ್ಥೋ ಭವತಿ, ತನ್ನಿವೃತ್ತೌ ಚ ರಾಗಶೂನ್ಯಃ ಸ್ವಸ್ಥಃ ಭವತಿ ತದ್ವದಿತಿ । ತದೇತತ್ ಕೌರ್ಮೇ ।*

ಅನುವಾದ: 'ಚ' ಶಬ್ದವು ಹೇತುವಿನ ಅರ್ಥದಲ್ಲಿ ಹೇಳಲ್ಪಟ್ಟಿದೆ– ಎಂದರೆ, ಮಣಿಯು ಹೂವಿನಂತಿರುವುದರಿಂದ; ಹೇಗೆಂದರೆ, ದಾಸವಾಳದ ಹೂವಿನ ಸಾಮೀಪ್ಯದಿಂದ ತನ್ನ ಶುದ್ಧ ಸ್ವರೂಪವನ್ನು ಕಳೆದುಕೊಂಡು (ಅಸ್ವಸ್ಥ)ವಾಗುವುದು. ಆದರೆ ಹೂವನ್ನು ತೆಗೆದುಬಿಟ್ಟಾಗ ರಾಗಶೂನ್ಯವಾಗಿ ಸ್ವಸ್ಥವಾಗುವುದು. ಅದನ್ನು ಕೂರ್ಮಪುರಾಣದಲ್ಲಿ ಹೀಗೆ ಹೇಳಿದೆ–

ಭಾಷ್ಯ: *ಯಥಾ ಸಂಲಕ್ಷ್ಯತೇ ರಕ್ತಃ ಕೇವಲಃ ಸ್ಫಟಿಕೋ ಜನೈಃ ।*
ರಂಜಕಾದ್ಯುಪಧಾನೇನ ತದ್ವತ್ಪರಮಪೂರುಷಃ ॥೩೪॥
(ಕೂ.ಪು. ೨.೨.೨೮)

ಅನುವಾದ: ನಿರ್ಮಲವಾದ ಸ್ಫಟಿಕವನ್ನು ಜನರು ಕೆಂಪುಬಣ್ಣದ ವಸ್ತುವಿನ ಸಂಬಂಧ ದಿಂದ ಕೆಂಪೆಂದೇ ತಿಳಿಯುವರೋ ಅದೇ ರೀತಿ ಪರಮ ಪುರುಷನೂ (ಉಪಾಧಿಗಳ ಸಂಬಂಧದಿಂದ ಉಪಾಧಿಸಹಿತವಾಗಿ ಇರುವಂತೆ) ಕಾಣುವನು.

ಭಾಷ್ಯ: *ನನು ಕಸ್ಯ ಪ್ರಯತ್ನೇನ ಕರಣಜಾತಂ ಪ್ರವರ್ತತಾಮ್, ಪುರುಷಃ ಕೂಟಸ್ಥತ್ವಾದೀಶ್ವರಸ್ಯ ಚ ಪ್ರತಿಷಿದ್ಧತ್ವಾತ್ ಇತಿ । ತತ್ರಾಹ–*

ಅನುವಾದ: ಈ ಕರಣಸಮೂಹವು ಯಾರ ಪ್ರಯತ್ನದಿಂದ ಕಾರ್ಯಪ್ರವೃತ್ತ ವಾಗುವುದು? ಪುರುಷನು ಕೂಟಸ್ಥವಾಗಿರುವುದರಿಂದ ಮತ್ತು ಈಶ್ವರನು ಪ್ರವರ್ತಕನಲ್ಲ ಎಂಬ ನಿಮ್ಮ ವಾದವಿರುವುದರಿಂದ (ಈ ಪ್ರಶ್ನೆ).

ಸೂತ್ರ: ಪುರುಷಾರ್ಥಂ ಕರಣೋದ್ಭವೋऽಪ್ಯದೃಷ್ಟೋಲ್ಲಾಸಾತ್ ॥ ೩೬ ॥

ಸೂತ್ರಾನುವಾದ: (ಪ್ರಕೃತಿಯಂತೆ) ಪುರುಷಾರ್ಥಕ್ಕಾಗಿ ಅದೃಷ್ಟದ ಪ್ರಭಾವದಿಂದ ಇಂದ್ರಿಯಗಳ ವ್ಯಾಪಾರ ಉಂಟಾಗುವುದು.

ಭಾಷ್ಯ: *ಪ್ರಧಾನಪ್ರವೃತ್ತಿವತ್ ಪುರುಷಾರ್ಥಂ ಕರಣೋದ್ಭವಃ, ಕರಣಾನಾಂ ಪ್ರವೃತ್ತಿರಪಿ ಪುರುಷಸ್ಯಾದೃಷ್ಟಾಭಿವ್ಯಕ್ತೇರೇವ ಭವತೀತ್ಯರ್ಥಃ ಅದೃಷ್ಟಂ ಚೋಪಾಧೇರೇವ ।*

ಅನುವಾದ: ಪ್ರಧಾನದಂತೆ ಪುರುಷಾರ್ಥಕ್ಕಾಗಿ ಇಂದ್ರಿಯಗಳು ಉದ್ಭವವಾಗುತ್ತವೆ. ಇಂದ್ರಿಯಗಳ ಪ್ರವೃತ್ತಿಯೂ ಸಹ ಪುರುಷನ ಅದೃಷ್ಟದ ಅಭಿವ್ಯಕ್ತಿಯಿಂದಲೇ ಉಂಟಾಗುತ್ತದೆ. ಅದೃಷ್ಟವೂ ಸಹ ಉಪಾಧಿಯಿಂದಲೇ ಆಗುವುದು.

ಭಾಷ್ಯ: *ಪರಾರ್ಥಃ ಸ್ವತಃ ಪ್ರವೃತ್ತೌ ದೃಷ್ಟಾಂತಮಾಹ ।*

ಸೂತ್ರ: ಧೇನುವದ್ವತ್ಸಾಯ ॥ ೩೭ ॥

ಸೂತ್ರಾನುವಾದ: ಕರುವನ್ನು ಹಸುವು (ನೋಡಿಕೊಳ್ಳುವಂತೆ).

ಅನುವಾದ: (ಪ್ರಧಾನವು) ತನ್ನ ಪ್ರವೃತ್ತಿಯಿಂದಲೇ ಪರಾರ್ಥಕ್ಕಾಗಿ ಅನುವಾಗುವುದಕ್ಕೆ ದೃಷ್ಟಾಂತವನ್ನು ಹೇಳಲಾಗಿದೆ.

ಭಾಷ್ಯ: *ಯಥಾ ವತ್ಸಾರ್ಥಂ ಧೇನುಃ ಸ್ವಯಮೇವಕ್ಷೀರಂ ಸ್ರವತಿ ನಾನ್ಯಂ ಯತ್ನಮಪೇಕ್ಷತೇ, ತಥೈವ ಸ್ವಾಮಿನಃ ಪುರುಷಸ್ಯ ಕೃತೇ ಸ್ವಯಮೇವ ಕರಣಾನಿ ಪ್ರವರ್ತಂತೇ ಇತ್ಯರ್ಥಃ । ದೃಶ್ಯತೇ ಚ ಸುಷುಪ್ತಾತ್ ಸ್ವಯಮೇವ ಬುದ್ಧೇರುತ್ಥಾನಮಿತಿ । ಏತದೇವ ಕಾರಿಕಯಾಪ್ಯುಕ್ತಮ್ ।*

ಅನುವಾದ: ಹಸುವು ಕರುವಿನ ಸಲುವಾಗಿ ಹೇಗೆ ತಾನಾಗಿಯೇ ಹಾಲನ್ನು ಕೊಡುವುದೋ, ಮತ್ತು ಬೇರೆಯ ಯತ್ನವನ್ನು ಅಪೇಕ್ಷಿಸದೋ ಹಾಗೆಯೇ ತನ್ನ ಒಡೆಯನಾದ ಪುರುಷನಿಗಾಗಿ ಇಂದ್ರಿಯಗಳು ತಾವಾಗಿಯೇ ಪ್ರವೃತ್ತವಾಗುತ್ತವೆ. ಸುಷುಪ್ತಿಯಿಂದ

ತಾನಾಗಿಯೇ ಬುದ್ಧಿಯು ಉದ್ಭವವಾಗುವುದನ್ನು ಕಂಡಿದ್ದೇವೆ. ಇದನ್ನೇ ಕಾರಿಕೆಯಲ್ಲಿ ಹೇಳಿದೆ.

ಸ್ವಾಂ ಸ್ವಾಂ ಪ್ರತಿಪದ್ಯಂತೇ ಪರಸ್ಪರಾಕೂತಹೇತುಕಾಂ ವೃತ್ತಿಮ್ ।
ಪುರುಷಾರ್ಥ ಏವ ಹೇತುಃ ನ ಕೇನಚಿತ್ ಕಾರ್ಯತೇ ಕರಣಮ್ ॥
(ಸಾಂ.ಕಾ. ೩೧) ಇತಿ ।

ಅನುವಾದ: ಕರಣಗಳು ಪರಸ್ಪರ ಆಶಯಗಳ ಮೂಲಕ ತಮ್ಮ ತಮ್ಮ ವೃತ್ತಿಗಳನ್ನು ಪಡೆಯುತ್ತವೆ. ಪುರುಷನ ಸಲುವಾಗಿಯೇ ಹಾಗೆ ಮಾಡುತ್ತವೆ. ಈ ಕರಣಗಳನ್ನು ಪ್ರವೃತ್ತಗೊಳಿಸಲು ಬೇರೆ ಯಾವುದೂ ಇಲ್ಲ.

ಭಾಷ್ಯ: *ಬಾಹ್ಯಾಭ್ಯಂತರೈರ್ಮಿಲಿತ್ವಾ ಕಿಯಂತಿ ಕರಣಾನಿ ಇತ್ಯಾಕಾಂಕ್ಷಾಯಾಮಾಹ ।*

ಅನುವಾದ: ಬಾಹ್ಯ ಮತ್ತು ಆಭ್ಯಂತರಗಳೆರಡನ್ನೂ ಸೇರಿಸಿ ಎಂಬ ಆಕಾಂಕ್ಷೆಗೆ ಹೀಗೆ ಹೇಳಿದೆ–

ಸೂತ್ರ: ಕರಣಂ ತ್ರಯೋದಶವಿಧಮವಾಂತರಭೇದಮ್ ॥ ೩೮ ॥

ಸೂತ್ರಾನುವಾದ: ಉಪಭೇದಗಳ ಕಾರಣ ಕರಣಗಳು ಹದಿಮೂರು ಬಗೆ.

ಭಾಷ್ಯ: *ಅಂತಃಕರಣತ್ರಯಂ ದಶಬಾಹ್ಯಕರಣಾನಿ ಮಿಲಿತ್ವಾ ತ್ರಯೋದಶ । ತೇಷ್ವಪಿ ವ್ಯಕ್ತಿಭೇದೇನ ಆನಂತ್ಯಂ ಪ್ರತಿಪಾದಯಿತುಂ ವಿಧಮಿತ್ಯುಕ್ತಮ್ । ಬುದ್ಧಿರೇವ ಮುಖ್ಯಕರಣಮಿತ್ಯಾಶಯೇನ ಉಕ್ತಮ್, 'ಅವಾಂತರ–ಭೇದಾದಿತಿ, ಏಕಸ್ಯೈವ ಬುದ್ಧ್ಯಾಖ್ಯಕರಣಸ್ಯ ಕರಣಾನಾಮನೇಕತ್ವಾತ್ ಇತ್ಯರ್ಥಃ ।*

ಅನುವಾದ: ಅಂತಃಕರಣಗಳು (ಆಭ್ಯಂತರಕರಣಗಳು) ಮೂರು. ಬಾಹ್ಯ ಕರಣಗಳು ಹತ್ತು, ಒಟ್ಟು ಹದಿಮೂರು. ಅವುಗಳಲ್ಲಿಯೂ ವ್ಯಕ್ತಿಗಳ ಭೇದಗಳ ಕಾರಣ ಅನಂತತೆಯನ್ನು ಪ್ರತಿಪಾದಿಸಲು ವಿಧಮ್ ಎಂದು ಹೇಳಲಾಗಿದೆ. ಬುದ್ಧಿಯೇ ಮುಖ್ಯ ಕರಣವೆನ್ನಲು ವಿಶೇಷವಾಗಿ ಹೇಳಿದೆ, 'ಅವಾಂತರಭೇದಾತ್' ಎಂದರೆ ಒಂದೇ ಬುದ್ಧಿ ಎಂಬ ಕರಣಕ್ಕೆ ಅನೇಕ ಉಪಕರಣಗಳಿರುವ ಕಾರಣ ಎಂದರ್ಥ.

ಭಾಷ್ಯ: *ನನು ಬುದ್ಧಿರೇವ ಪುರುಷೇऽರ್ಥಸಮರ್ಪಕತ್ವಾತ್ ಮುಖ್ಯಂ ಕರಣಮ್ । ಅನ್ಯೇಷಾಂ ಕರಣತ್ವಂ ಗೌಣಮ್ । ತತ್ರ ಕೋ ಗುಣಃ ಇತ್ಯಾಕಾಂಕ್ಷಾಯಾಮಾಹ ।*

ಅನುವಾದ: ಪುರುಷನಲ್ಲಿ ಅರ್ಥಸಮರ್ಪಣೆಯನ್ನು ಬುದ್ಧಿಯೇ ಮಾಡುವುದರಿಂದ ಅದು ಮುಖ್ಯವಾದ ಕರಣ. ಉಳಿದವು ಗೌಣವಾದ ಕರಣಗಳು. ಇದರಲ್ಲಿ ಯಾವ ಗುಣ ಎಂಬುದರ ಬಗ್ಗೆ ಹೇಳಿದೆ.

ಸೂತ್ರ: ಇಂದ್ರಿಯೇಷು ಸಾಧಕತಮತ್ವಗುಣಯೋಗಾತ್ । ಕುಠಾರವತ್ ॥ ೩೯ ॥

ಸೂತ್ರಾನುವಾದ: ಇಂದ್ರಿಯಗಳಲ್ಲಿ (ಬುದ್ಧಿಯು) ಅತ್ಯಂತ ಸಾಧಕವಾದ ಗುಣವುಳ್ಳದ್ದಾಗಿರುತ್ತದೆ, ಕೊಡಲಿಯಂತೆ.

ಭಾಷ್ಯ: *ಇಂದ್ರಿಯೇಷು ಪುರುಷಾರ್ಥಸಾಧಕತಮತ್ವರೂಪಃ ಕುಠಾರಸ್ಯ ಬುದ್ಧೇರ್ಗುಣಃ ಪರಂಪರಯಾಽಸ್ತ್ಯತಸ್ತ್ರಯೋದಶವಿಧಂ ಕರಣಮುಪಪದ್ಯತ ಇತಿ ಪೂರ್ವಸೂತ್ರೇಣಾನ್ವಯಃ, ಕುಠಾರವತ್ ಇತಿ । ಯಥಾ ಫಲಾಯೋಗ ವ್ಯವಚ್ಛಿನ್ನತಯಾ ಪ್ರಹಾರಸ್ಯೈವ ಛಿದಾಯಾಂ ಮುಖ್ಯ ಕರಣತ್ವೇಽಪಿ ಪ್ರಕೃಷ್ಟಸಾಧನತ್ವಗುಣಯೋಗಾತ್ ಕುಠಾರಸ್ಯಾಪಿ ಕರಣತ್ವಂ ತಥೇತ್ಯರ್ಥಃ । ಅಂತಃಕರಣಸ್ಯೈಕತ್ವಮಭಿಪ್ರೇತ್ಯಾಹಂಕಾರಸ್ಯ ಗೌಣಕರಣತ್ವಮತ್ರ ನೋಕ್ತಮ್ ।*

ಅನುವಾದ: ಇಂದ್ರಿಯಗಳಲ್ಲಿ ಪುರುಷಾರ್ಥವನ್ನು ಸಾಧಿಸುವುದರಲ್ಲಿ ಅತ್ಯಂತ ಉತ್ತಮವಾದ ರೂಪವುಳ್ಳ ಕರಣವಾದ ಬುದ್ಧಿಯ ಗುಣವು ಪರಂಪರೆಯಿಂದ ಹದಿಮೂರು ವಿಧವಾದ ಕರಣಗಳು ಸೇರುತ್ತವೆ ಎಂದು ಹಿಂದಿನ ಸೂತ್ರದಿಂದ ಅನ್ವಯ ಮಾಡಬೇಕು; ಕುಠಾರದಂತೆ. ಕೊಡಲಿಯ ಏಟು ಕಾಷ್ಠವನ್ನು ಕತ್ತರಿಸಲು ಮುಖ್ಯವಾಗಿ ಉಪಯೋಗವಾಗುತ್ತದೆಯಾದರೂ ಕತ್ತರಿಸುವ ಮುಖ್ಯ ಸಾಧನವೆಂಬ ಗುಣವನ್ನು ಅನ್ವಯಿಸುವುದರಿಂದ ಕೊಡಲಿಯೇ ಕರಣವೆಂದು ಹೇಳಲ್ಪಡುತ್ತದೆ. ಹಾಗೆಯೇ ಅಂತಃಕರಣದ ಏಕತ್ವವನ್ನು ಗಮನಿಸಿ ಅಹಂಕಾರವು ಗೌಣವೆಂದು ಇಲ್ಲಿ ಹೇಳಿಲ್ಲ.

ವಿವರಣೆ: ಬುದ್ಧಿಗೆ ಬಾಹ್ಯ ಪದಾರ್ಥಗಳ ನೇರಸಂಪರ್ಕವಿರದು ಮತ್ತು ಇಂದ್ರಿಯಗಳು ಪುರುಷನ ಅರ್ಥವನ್ನು ಸಂಪಾದಿಸುವುದರಲ್ಲಿ ಸಾಧಕತಮಗಳು. ಕೊಡಲಿಯಿದ್ದರೂ ಅದನ್ನು ಹೊಡೆಯದಿದ್ದರೆ ಏನು ಉಪಯೋಗ. ಹಾಗೆಯೇ ಬುದ್ಧಿಯೇ ಸಾಧನವಾದರೂ ಇಂದ್ರಿಯಗಳಿಲ್ಲದಿದ್ದರೆ ಉಪಯೋಗವಿಲ್ಲ. ಆದ್ದರಿಂದ ಅದನ್ನು ಸಾಧಕತಮವೆನ್ನುವರು.

ಭಾಷ್ಯ: *ಗೌಣಮುಖ್ಯಭಾವೇ ವ್ಯವಸ್ಥಾಂ ವಿಶಿಷ್ಯಾಹ ।*

ಸೂತ್ರ: ದ್ವಯೋಃ ಪ್ರಧಾನಂ ಮನೋ ಲೋಕವದ್ ಭೃತ್ಯವರ್ಗೇಷು ॥ ೪೦ ॥

ಅನುವಾದ: (ಕರಣಗಳ) ಗೌಣ–ಮುಖ್ಯಭಾವಗಳ ವಿಶೇಷವ್ಯವಸ್ಥೆಯನ್ನು ಹೇಳುತ್ತಾರೆ.

ಸೂತ್ರಾನುವಾದ: ಲೋಕದಲ್ಲಿ ಕಾಣುವಂತೆ ಭೃತ್ಯವರ್ಗದಲ್ಲಿ ಇರುವಂತೆ ಎರಡರಲ್ಲೂ (ಬಾಹ್ಯ ಮತ್ತು ಆಭ್ಯಂತರ) ಮನಸ್ಸು (ಆಭ್ಯಂತರ ಇಂದ್ರಿಯ) ಮುಖ್ಯವಾಗಿರುತ್ತದೆ.

ಭಾಷ್ಯ: *ದ್ವಯೋರ್ಬಾಹ್ಯಾಂತರಯೋರ್ಮಧ್ಯೇ ಮನಃ ಬುದ್ಧಿರೇವ ಪ್ರಧಾನಂ ಮುಖ್ಯಮ್ । ಸಾಕ್ಷಾತ್ಕರಣಮಿತಿ ಯಾವತ್, ಪುರುಷೇ*

ಅರ್ಥಸಮರ್ಪಕತ್ವಾತ್ । ಯಥಾ ಭೃತ್ಯವರ್ಗೇಷು ಮಧ್ಯೇ ಕಶ್ಚಿದೇವ ಲೋಕೋ ರಾಜ್ಞಃ ಪ್ರಧಾನೋ ಭವತಿ, ಅನ್ಯೇ ಚ ತದುಪಸರ್ಜನೀಭೂತಾ ಗ್ರಾಮಾಧ್ಯಕ್ಷಾದಯಃ ತದ್ವದಿತ್ಯರ್ಥಃ । ಅತ್ರ ಮನಃಶಬ್ದೋ ನ ತೃತೀಯಾಂತಃಕರಣವಾಚೀ । ವಕ್ಷ್ಯಮಾಣಸ್ಯ ಅಖಿಲಸಂಸ್ಕಾರಾಧಾರ–ತ್ವಸ್ಯ ವೃದ್ಧ್ಯತಿರಿಕ್ತೇಷ್ವಸಂಭವಾತ್ । ಸಂಭವೇ ವಾ ಬುದ್ಧಿಕಲ್ಪನ–ವೈಯರ್ಥ್ಯಾದಿತಿ ।

ಅನುವಾದ: ಎರಡರಲ್ಲಿ (ಆಂತರ ಮತ್ತು ಬಾಹ್ಯ ಇಂದ್ರಿಯಗಳಲ್ಲಿ) ಮನಃ ಎಂದರೆ ಬುದ್ಧಿಯೇ ಪ್ರಧಾನವಾದುದು. ಎಂದರೆ ಮುಖ್ಯವಾದುದು. ಅದೇ ಸಾಕ್ಷಾತ್ತಾದ ಕರಣ; ಏಕೆಂದರೆ, ಅದೇ ಪುರುಷನಿಗೆ ವಿಷಯವನ್ನು ಅರಿಕೆ ಮಾಡುತ್ತದೆ. ಹೇಗೆಂದರೆ, ಭೃತ್ಯವರ್ಗಗಳಲ್ಲಿ ನಡುವೆ ಒಬ್ಬ ವ್ಯಕ್ತಿ ರಾಜನ ಪ್ರಧಾನನಾಗಿರುತ್ತಾನೆ. ಇತರರೂ ಸಹ ಗೌಣವಾಗಿ ಇರುವರು, ಗ್ರಾಮಾಧ್ಯಕ್ಷ ಮುಂತಾದವರು.

ಇಲ್ಲಿ ಮನಸ್ ಶಬ್ದವು ತೃತೀಯಾಂತಃಕರಣವನ್ನು ತಿಳಿಸುವುದಿಲ್ಲ. ಮುಂದೆ ಹೇಳುವ ಎಲ್ಲ ಸಂಸ್ಕಾರಗಳಿಗೂ ಆಧಾರಭೂತವಾದ ಬುದ್ಧಿಯನ್ನು ಬಿಟ್ಟು ಬೇರೆ ಯಾವುದೂ ಇಲ್ಲ. ಹಾಗಿಲ್ಲದಿದ್ದಲ್ಲಿ ಬುದ್ಧಿತತ್ತ್ವವನ್ನು ಕಲ್ಪಿಸುವುದು ವ್ಯರ್ಥವಾಗುವುದು.

ಭಾಷ್ಯ: *ಬುದ್ಧೇಃ ಪ್ರಧಾನತ್ವೇ ಹೇತೂನಾಹ ತ್ರಿಭಿಃ ಸೂತ್ರೈಃ ।*

ಸೂತ್ರ: ಅವ್ಯಭಿಚಾರಾತ್ ॥ ೪೧ ॥

ಅನುವಾದ: (ಬುದ್ಧಿಯು ಮುಖ್ಯವಾದದ್ದು) ಏಕೆಂದರೆ ಅದೆಂದೂ (ಇಂದ್ರಿಯಗಳಿಂದ) ದೂರವಾಗದು.

ಭಾಷ್ಯ: *ಸರ್ವಕರಣವ್ಯಾಪಕತ್ವಾತ್ ಫಲಾವ್ಯಭಿಚಾರಾದ್ವೇತ್ಯರ್ಥಃ ।*

ಅನುವಾದ: ಎಲ್ಲ ಕರಣಗಳಲ್ಲಿಯೂ ಬುದ್ಧಿಯು ವ್ಯಾಪಿಸಿರುವುದರಿಂದ ಅಥವಾ ಫಲ ನೀಡುವುದರಲ್ಲಿ ದೂರವಾಗದು.

ಸೂತ್ರ: ತಥಾಽಶೇಷಸಂಸ್ಕಾರಾಧಾರತ್ವಾತ್ ॥ ೪೨ ॥

ಸೂತ್ರಾನುವಾದ: ಹಾಗೆಯೇ ಎಲ್ಲ ಸಂಸ್ಕಾರಗಳ ಆಧಾರವಾಗಿ ಇರುವುದರಿಂದ.

ಭಾಷ್ಯ: *ಬುದ್ಧೇರೇವಾಖಿಲಸಂಸ್ಕಾರಾಧಾರತಾ, ನ ತು ಚಕ್ಷುರಾದೇಃ ಅಹಂಕಾರಮನಸೋರ್ವಾ ಪೂರ್ವದೃಷ್ಟಶ್ರುತಾದ್ಯರ್ಥಾನಾಂ ಅಂಧಬಧಿರಾದಿಭಿಃ ಸ್ಮರಣಾನುಪಪತ್ತೇಃ । ತತ್ತ್ವಜ್ಞಾನೇನ ಅಹಂಕಾರಮನಸೋರ್ಲಯೇಽಪಿ ಸ್ಮರಣದರ್ಶನಾಚ್ಚ । ಅತಃ ಅಶೇಷಸಂಸ್ಕಾರಾಧಾರತಯಾಽಪಿ ಬುದ್ಧೇರೇವ ಸರ್ವೇಭ್ಯಃ ಪ್ರಧಾನತ್ವಮಿತ್ಯರ್ಥಃ।*

ಅನುವಾದ: ಬುದ್ಧಿಯೇ ಎಲ್ಲ ಸಂಸ್ಕಾರಗಳಿಗೂ ಆಧಾರ, ಉಳಿದ ಚಕ್ಷು ಮುಂತಾದುವುಗಳಾಗಲಿ, ಅಹಂಕಾರ–ಮನಸ್ಸುಗಳಾಗಲಿ ಅಲ್ಲ. ಹಾಗಿಲ್ಲದಿದ್ದಲ್ಲಿ ಮೊದಲೇ ಕಂಡ

ಅಥವಾ ಕೇಳಿದ್ದನ್ನು ಅಂಧರೂ ಕಿವುಡರೂ ನೆನಪು ಮಾಡಿಕೊಳ್ಳುವುದು ಸಾಧ್ಯವಾಗಲಾರದು. ಆದರೆ ತತ್ತ್ವಜ್ಞಾನದ ನಂತರ ಅಹಂಕಾರ, ಮನಸ್ಸುಗಳು ಲಯವಾದರೂ ತತ್ತ್ವಜ್ಞಾನಿಗೆ ಸ್ಮರಣೆ ಬರುವುದು. ಆದ್ದರಿಂದ ಸಂಪೂರ್ಣವಾಗಿ ಸಂಸ್ಕಾರಾದಿಗಳನ್ನು ಆಧಾರವಾಗಿ ಹೊಂದಿರುವುದರಿಂದ ಬುದ್ಧಿಯೇ ಎಲ್ಲಕ್ಕಿಂತಲೂ ಮುಖ್ಯವಾದುದು ಎಂದರ್ಥ.

ಸೂತ್ರ: ಸ್ಮೃತ್ಯಾऽನುಮಾನಾಚ್ಚ ॥ ೪೩ ॥

ಸೂತ್ರಾನುವಾದ: ಮತ್ತು ನೆನಪು ಮತ್ತು ಅನುಮಾನಗಳಿಂದಲೂ (ಬುದ್ಧಿಯು ಮುಖ್ಯವಾದುದು).

ಭಾಷ್ಯ: *ಸ್ಮೃತ್ಯಾ ಚಿಂತನರೂಪಯಾ ವೃತ್ತ್ಯಾ ಪ್ರಾಧಾನ್ಯಾऽನುಮಾನಾಚ್ಚ ಇತ್ಯರ್ಥಃ। ಚಿಂತಾವೃತ್ತಿರ್ಹಿ ಧ್ಯಾನಾಖ್ಯಾ ಸರ್ವವೃತ್ತಿಭ್ಯಃ ಶ್ರೇಷ್ಠಾ । ತದಾಶ್ರಯತಯಾ ಚ ಚಿಂತಾಪರತ್ವನಾಮ್ನೀಬುದ್ಧಿರೇವ ಶ್ರೇಷ್ಠಾऽನ್ಯವೃತ್ತಿಕರಣೇಭ್ಯಃ ಇತ್ಯರ್ಥಃ ।*

ಅನುವಾದ: ಸ್ಮೃತಿಯಿಂದ ಎಂದರೆ ಚಿಂತನರೂಪವಾದ ವೃತ್ತಿಯಿಂದ ಪ್ರಾಧಾನ್ಯ ಎಂದು ಅನುಮಾನ ಮಾಡಬಹುದು. ಚಿಂತಾವೃತ್ತಿ ಎಂದರೆ ಧ್ಯಾನ ಎಲ್ಲಕ್ಕಿಂತ ಶ್ರೇಷ್ಠವಾದುದು. ಅದಕ್ಕೆ ಆಶ್ರಯವಾದ ಬುದ್ಧಿಯು ಚಿಂತೆ ಎಂಬ ಇನ್ನೊಂದು ಹೆಸರಿನಿಂದ ಇತರ ಎಲ್ಲ ವೃತ್ತಿಗಳಿಗಿಂತ ಮತ್ತು ಕರಣಗಳಿಗಿಂತ ಶ್ರೇಷ್ಠವಾದುದು ಎಂದರ್ಥ.

ಭಾಷ್ಯ: *ನನು ಚಿಂತಾವೃತ್ತಿಃ ಪುರುಷಸ್ಯೈವಾಸ್ತು, ತತ್ರಾಹ ।*

ಸೂತ್ರ: ಸಂಭವೇನ್ನಸ್ವತಃ ॥ ೪೪ ॥

ಅನುವಾದ: ಚಿಂತಾವೃತ್ತಿಗೆ ಪುರುಷನೇ ಏಕೆ ಆಶ್ರಯವಾಗಿರಬಾರದು?

ಸೂತ್ರಾನುವಾದ: ತಾನಾಗಿಯೇ (ಪುರುಷನಿಗೆ) ಸ್ಮೃತಿಯು ಸಂಭವಿಸದು.

ಭಾಷ್ಯ: *ಸ್ವತಃ ಪುರುಷಸ್ಯ ಸ್ಮೃತಿರ್ನಸಂಭವೇತ್ । ಕೂಟಸ್ಥತ್ವಾತ್ ಇತ್ಯರ್ಥಃ । ಇತ್ಥಂ ವಾ ವ್ಯಾಖ್ಯೇಯಮ್ । ನನ್ವೇವಂ ಬುದ್ಧಿರೇವ ಕರಣಮಸ್ತು, ಕೃತಮಂತರಕರಣೈರಿತ್ಯಾಶಂಕಾಯಾಮಾಹ, ಸಂಭವೇತ್ ನ ಸ್ವತಃ ಇತಿ । ಚಕ್ಷುರಾದಿದ್ವಾರಕಾಂ ವಿನಾ ಅಖಿಲವ್ಯಾಪಾರೇಷು ಬುದ್ಧೇಃ ಸ್ವತಃ ಕರಣತ್ವಂ ನ ಸಂಭವೇದಂಧಾದೇರಪಿ ರೂಪಾದಿ ದರ್ಶನಾಪತ್ತೇಃ ಇತ್ಯರ್ಥಃ ।*

ಅನುವಾದ: ಪುರುಷನಲ್ಲಿ ತಾನಾಗಿಯೇ ಸ್ಮೃತಿಯು ಬಾರದು ಏಕೆಂದರೆ ಅವನು ಕೂಟಸ್ಥನು. ಹೀಗೆಂದು ಹೇಳಬಹುದು. ಬುದ್ಧಿಯೇ ಕರಣವಾಗಿರಬಹುದು, ಮತ್ತೆ ನಡುವೆ ಅನೇಕ ಕರಣಗಳ ಅಗತ್ಯವೇನು? ಎಂದರೆ, 'ಸಂಭವೇನ್ನ ಸ್ವತಃ' (ಸೂತ್ರ), ಚಕ್ಷುಸ್ಸೇ ಮೊದಲಾದ ಇಂದ್ರಿಯಗಳ ಮೂಲಕವಲ್ಲದೆ, ಎಲ್ಲಾ ವ್ಯಾಪಾರಗಳೂ ಬುದ್ಧಿಯೇ ಸ್ವತಃ ಕರಣವಾಗಿರುವುದು ಸಾಧ್ಯವಿಲ್ಲ. ಏಕೆಂದರೆ ರೂಪಾದಿಗಳನ್ನು ಅಂಧರೂ ನೋಡಬಹುದಾದ ಪ್ರಸಂಗ ಬರುತ್ತದೆ.

ಭಾಷ್ಯ: *ನನ್ವೇವಂ ಬುದ್ಧೇರೇವ ಪ್ರಾಧಾನ್ಯೇ ಕಥಂ ಮನಸ ಉಭಯಾತ್ಮಕಂ ಪ್ರಾಗುಕ್ತಂ, ತತ್ರಾಹ–*

ಅನುವಾದ: ಹೀಗೆ ಬುದ್ಧಿಯೇ ಪ್ರಧಾನವಾದಲ್ಲಿ ಮನಸ್ಸನ್ನು ಉಭಯಾತ್ಮಕವೆಂದು ಮೊದಲು ಹೇಗೆ ಹೇಳಿದಿರಿ. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಆಪೇಕ್ಷಿಕೋ ಗುಣಪ್ರಧಾನಭಾವಃ ಕ್ರಿಯಾವಿಶೇಷಾತ್ ॥ ೪೫ ॥

ಸೂತ್ರಾನುವಾದ: ಮುಖ್ಯ–ಅಮುಖ್ಯ ಭಾವಗಳು ಕರಣಗಳ ಕ್ರಿಯಾವಿಶೇಷವನ್ನು ಅವಲಂಬಿಸಿರುತ್ತವೆ.

ಭಾಷ್ಯ: *ಕ್ರಿಯಾವಿಶೇಷಂ ಪ್ರತಿ ಕರಣಾನಾಂ ಆಪೇಕ್ಷಿಕೋ ಗುಣಪ್ರಧಾನಭಾವಃ। ಚಕ್ಷುರಾದಿವ್ಯಾಪಾರೇಷು ಮನಃ ಪ್ರಧಾನಂ, ಮನೋವ್ಯಾಪಾರೇ ಚಾಹಂಕಾರೋಽಹಂಕಾರವ್ಯಾಪಾರೇ ಚ ಬುದ್ಧಿಃ ಪ್ರಧಾನಮ್ ।*

ಅನುವಾದ: ಕ್ರಿಯಾವಿಶೇಷವನ್ನು ಆಶ್ರಯಿಸಿ ಕರಣಗಳ ಗುಣ ಪ್ರಧಾನದ ಭಾವಗಳು ಇರುತ್ತವೆ. ಚಕ್ಷುಸ್ಸೇ ಮೊದಲಾದುವುಗಳ ವ್ಯಾಪಾರಗಳಲ್ಲಿ ಮನಸ್ಸೇ ಪ್ರಧಾನವಾದುದು. ಮನಸ್ಸಿನ ವ್ಯಾಪಾರದಲ್ಲಿ ಅಹಂಕಾರವೂ, ಅಹಂಕಾರದ ವ್ಯಾಪಾರದಲ್ಲಿ ಬುದ್ಧಿಯೂ ಪ್ರಧಾನವಾಗಿರುತ್ತವೆ.

ಭಾಷ್ಯ: *ನನು ಅಸ್ಯ ಪುರುಷಸ್ಯೇಯಂ ಬುದ್ಧಿರೇವ ಕರಣಂ । ನ ಬುದ್ಧ್ಯಂತರ–ಮಿತ್ಯೇವಂ ವ್ಯವಸ್ಥಾ ಕಿನ್ನಿಮಿತ್ತಿಕೇತ್ಯಾಕಾಂಕ್ಷಾಯಾಂ ಆಹ–*

ಅನುವಾದ: ಈ ಪುರುಷನಿಗೆ ಈ ಬುದ್ಧಿಯೇ ಕರಣವಾಗಿರುವುದು ಬೇರೆಯ ಬುದ್ಧಿಯಲ್ಲ ಎಂಬ ಈ ವ್ಯವಸ್ಥೆಯ ಹಿಂದೆ ಯಾವ ನಿಮಿತ್ತವಿದೆ? ಈ ಆಕಾಂಕ್ಷೆಗೆ ಹೀಗೆ ಹೇಳಿದೆ–

ಸೂತ್ರ: ತತ್ಕರ್ಮಾರ್ಜಿತತ್ವಾತ್ ತದರ್ಥಮಭಿಚೇಷ್ಟಾ ಲೋಕವತ್ ॥ ೪೬ ॥

ಸೂತ್ರಾನುವಾದ: ಲೋಕದಲ್ಲಿರುವಂತೆ ಆಯಾ ವ್ಯಕ್ತಿಗಳ ಕರ್ಮಗಳಿಂದ ಗಳಿಸಿದ ಕಾರಣ ಅದೇ ವ್ಯಕ್ತಿಗೆ ಕರಣಗಳ ಪ್ರವೃತ್ತಿಯುಂಟಾಗುವುದು.

ಭಾಷ್ಯ: *ತತ್ಪುರುಷೀಯ ಕರ್ಮಜತ್ವಾತ್ ಕರಣಸ್ಯ ತತ್ ಪುರುಷಾರ್ಥಂ ಅಭಿಚೇಷ್ಟಾ ಸರ್ವವ್ಯಾಪಾರೋ ಭವತಿ ಲೋಕವತ್ । ಯಥಾ ಲೋಕೇ ಯೇನ ಪುರುಷೇಣ ಕ್ರಯಾದಿಕರ್ಮಣಾ ಅರ್ಜಿತಃ ಯಃ ಕುಠಾರಾದಿಸ್ತತ್ಪುರುಷಾರ್ಥಂ ಏವ ತಸ್ಯ ಛಿದಾದಿ ವ್ಯಾಪಾರ ಇತ್ಯರ್ಥಃ। ಅತಃ ಕರಣವ್ಯವಸ್ಥೇತಿ ಭಾವಃ ।*

ಅನುವಾದ: ಪ್ರತಿಯೊಬ್ಬ ಪುರುಷನಿಗೂ ಅವರವರ ಕರ್ಮಗಳಿಗೆ ತಕ್ಕಂತೆ ಕರಣಗಳು ಉಂಟಾಗುವುದರಿಂದ ಆಯಾ ಕರಣಗಳ ಪ್ರವೃತ್ತಿಯು ಆ ಪುರುಷನ ಸಲುವಾಗಿಯೇ ಆಗುತ್ತದೆ. ಹೇಗೆ ಲೋಕದಲ್ಲಿ ಯಾವ ಪುರುಷನು ಕೊಂಡುಕೊಂಡು

ಗಳಿಸಿದ ಕೊಡಲಿಯನ್ನು ತನ್ನ ಸಲುವಾಗಿ ಕತ್ತರಿಸುವುದೇ ಮೊದಲಾದ ಕಾರ್ಯಗಳಿಗೆ ಉಪಯೋಗಿಸುವನೋ ಹಾಗೆ ಕರಣಗಳ ವ್ಯವಸ್ಥೆ ಇರುತ್ತದೆ ಎಂದು ಭಾವ.

ಭಾಷ್ಯ: *ಯದ್ಯಪಿ ಕೂಟಸ್ಥತಯಾ ಪುರುಷೇ ಕರ್ಮ ನಾಸ್ತಿ, ತಥಾಪಿ ಪುರುಷಸ್ವಾಮಿಕತ್ತ್ವೇನ ರಾಜ್ಞಃ ಜಯಾದಿವದೇವ ಪುರುಷಸ್ಯ ಕರ್ಮ ಉಚ್ಯತೇ । ನನು ಕರ್ಮಣ ಏವ ತತ್ಪುರುಷೀಯತ್ವೇ ಕಿಂ ನಿಯಾಮಕ–ಮಿತಿ ಚೇತ್, ತಥಾವಿಧಂ ಕರ್ಮಾಂತರಮೇವ । ಅನಾದಿತ್ವಾತ್ತು ನಾನವಸ್ಥಾದೋಷಾಯ ಇತಿ । ಯತ್ತು ಕಶ್ಚಿದ್ ಅವಿವೇಕೀ ವದತಿ, ಬುದ್ಧಿಪ್ರತಿಬಿಂಬತತ್ಪುರುಷಸ್ಯ ಕರ್ಮ ಇತಿ । ತನ್ನ । ಯೋಗ–ಭಾಷ್ಯೇಽಸ್ಮದುಕ್ತಪ್ರಕಾರಸ್ಯೇವೋಕ್ತತ್ವೇನ ಅನ್ಯಪ್ರಕಾರಸ್ಯಾಪ್ರಾಮಾಣಿಕತ್ವಾತ್, ಪ್ರತಿಬಿಂಬಸ್ಯಾವಸ್ತುತ್ವೇನ ಕರ್ಮಾದ್ಯಸಂಭವಾಚ್ಚ । ಅನ್ಯಥಾ ಪ್ರತಿಬಿಂಬಸ್ಯ ಕರ್ಮತದ್ಯೋಗಾಂಗೀಕಾರೇ ಬಿಂಬತ್ವಾಭಿಮತಪುರುಷಕಲ್ಪನಾ–ವೈಯರ್ಥ್ಯಸ್ಯ ಪೂರ್ವಂ ಪ್ರತಿಪಾದಿತತ್ವಾದಿತಿ ।*

ಅನುವಾದ: ಪುರುಷನು ಕೂಟಸ್ಥನಂತೆ ಕರ್ಮರಹಿತನಾಗಿ ಇದ್ದರೂ ಸಹ ಪುರುಷನೇ ಸ್ವಾಮಿಯಾದ ಕಾರಣ ರಾಜನ ಜಯವೇ ಮುಂತಾದುವುಗಳಂತೆ ಪುರುಷನದೇ ಕರ್ಮ ಎಂದು ಹೇಳಲಾಗುತ್ತದೆ. ಕರ್ಮವು ಆಯಾ ಪುರುಷನದೇ ಎಂದು ಹೇಳಲು ಯಾವುದು ನಿಯಾಮಕವಾದುದು? ಎಂದರೆ ಹಾಗೆಯೇ ಇತರ ಕರ್ಮಗಳೂ ಸಹ. ಇದು ಅನಾದಿಯಾದ ಕಾರಣ ಅನವಸ್ಥಾದೋಷ ಬರದು. ಒಬ್ಬ ಅವಿವೇಕಿಯು ಹೀಗೆ ಹೇಳುವನು– 'ಕರ್ಮವು ಬುದ್ಧಿಯಲ್ಲಿ ಪ್ರತಿಬಿಂಬಿತನಾದ ಪುರುಷನಿಗೆ ಅನ್ವಯಿಸುವುದು' ಅದು ಸರಿಯಲ್ಲ. ಯೋಗಭಾಷ್ಯದಲ್ಲಿ ನಾವು ಹೇಳಿರುವಂತೆ ಹೇಳಿರುವ ಹಾಗೆ ಇರದೆ ಬೇರೆಯ ಪ್ರಕಾರವು ಅಪ್ರಾಮಾಣಿಕವಾದ್ದರಿಂದ ಒಪ್ಪಲಾಗದು. ಪ್ರತಿಬಿಂಬವು ವಸ್ತುವಲ್ಲದ ಕಾರಣ ಕರ್ಮಾದಿಗಳು ಸಂಭವಿಸುವುದು ಅಸಾಧ್ಯ. ಹಾಗಿಲ್ಲದಿದ್ದಲ್ಲಿ ಪ್ರತಿಬಿಂಬದಲ್ಲಿ ಕರ್ಮ, ಅದರ ಭೋಗಗಳನ್ನು ಸ್ವೀಕರಿಸಿದಲ್ಲಿ ಪುರುಷನು ಪ್ರತಿಬಿಂಬರೂಪದಲ್ಲಿದ್ದಾನೆ ಎಂಬ ಕಲ್ಪನೆ ವ್ಯರ್ಥವಾಗುವುದು; ಇದನ್ನು ನಾವು ಮೊದಲೇ ಪ್ರತಿಪಾದಿಸಿದ್ದೇವೆ.

ವಿವರಣೆ: ಪುರುಷನಿಗೆ ಅನ್ವಯಿಸುವ ಕರ್ಮ ಅನಾದಿಕಾಲದಿಂದ ಬಂದ ಪರಂಪರೆ.

ಭಾಷ್ಯ: *ಬುದ್ಧೇಃ ಪ್ರಾಧಾನ್ಯಂ ಪ್ರಕಟೀಕರ್ತುಮುಪಸಂಹರತಿ ।*

ಅನುವಾದ: ಬುದ್ಧಿಯ ಪ್ರಾಧಾನ್ಯವನ್ನು ಪ್ರಕಟಪಡಿಸಲು ಉಪಸಂಹಾರ ಮಾಡುವರು.

ಸೂತ್ರ: ಸಮಾನಕರ್ಮಯೋಗೇ ಬುದ್ಧೇಃ ಪ್ರಾಧಾನ್ಯಂ ಲೋಕವಲ್ಲೋಕವತ್ ॥ ೪೭ ॥

ಸೂತ್ರಾನುವಾದ: ಕರ್ಮಯೋಗದಲ್ಲಿ ಎಲ್ಲವೂ ಸಮಾನವಾಗಿದ್ದರೂ ಬುದ್ಧಿಗೇ ಪ್ರಾಧಾನ್ಯ, ಲೋಕವ್ಯವಹಾರದಂತೆ.

ಭಾಷ್ಯ: *ಯದ್ಯಪಿ ಪುರುಷಾರ್ಥತ್ವೇನ ಸಮಾನ ಏವ ಸರ್ವೇಷಾಂ ಕರಣಾನಾಂ ವ್ಯಾಪಾರಸ್ತಥಾಪಿ ಬುದ್ಧೇರೇವ ಪ್ರಾಧಾನ್ಯಂ ಲೋಕವತ್ । ಲೋಕೇ ಹಿ ರಾಜಾರ್ಥಕತ್ವಾವಿಶೇಷೇಽಪಿ ಗ್ರಾಮಾಧ್ಯಕ್ಷಾದಿಷು ಮಧ್ಯೇ ಮಂತ್ರಿಣ ಏವ ಪ್ರಾಧಾನ್ಯಂ, ತದ್ವದಿತ್ಯರ್ಥಃ । ಅತ ಏವ ಬುದ್ಧಿರೇವ ಮಹಾನ್ ಇತಿ ಸರ್ವಶಾಸ್ತ್ರೇಷು ಗೀಯತೇ ಇತಿ ವಿಪ್ಸ್ಯಾಪ್ಯಾಧ್ಯಾಯಸಮಾಪ್ತೌ ।*

ಅನುವಾದ: ಪುರುಷಾರ್ಥಕ್ಕಾಗಿ ಎಲ್ಲ ಇಂದ್ರಿಯಗಳೂ ಒಂದೇ ಸಮಾನವಾದರೂ ಬುದ್ಧಿಯದೇ ಪ್ರಾಧಾನ್ಯ, ಲೋಕವ್ಯವಹಾರದಂತೆ. ಲೋಕವ್ಯವಹಾರದಲ್ಲಿ ರಾಜನ ಸಲುವಾಗಿ ಕೆಲಸ ಮಾಡುವವರಲ್ಲಿ ಯಾವ ಭೇದವು ಇಲ್ಲದಿದ್ದರೂ ಗ್ರಾಮಾಧ್ಯಕ್ಷಾದಿಗಳ ನಡುವೆ ಮಂತ್ರಿಗಳದೇ ಪ್ರಾಧಾನ್ಯ, ಹಾಗೆ. ಆದ್ದರಿಂದಲೇ ಬುದ್ಧಿಯೇ ಮಹತ್ ಎಂದು ಸರ್ವ ಶಾಸ್ತ್ರಗಳಲ್ಲಿಯೂ ಹೇಳಲ್ಪಟ್ಟಿದೆ.

ಲೋಕವತ್ ಎಂಬ ಪದವನ್ನು ಎರಡು ಬಾರಿ ಹೇಳಿರುವ ಕಾರಣ ಅಧ್ಯಾಯದ ಸಮಾಪ್ತಿಯನ್ನು ಸೂಚಿಸಲು.

ಭಾಷ್ಯ: *ಲಿಂಗದೇಹಸ್ಯ ಘಟಕಂ ಯತ್ ಸಪ್ತದಶಸಂಖ್ಯಕಮ್ ।*
ಪ್ರಧಾನಕಾರ್ಯಂ ತತ್ ಸೂಕ್ಷ್ಮಮತ್ರಾಧ್ಯೇಯೇಽನುವರ್ಣಿತಮ್ ॥

ಅನುವಾದ: ಸೂಕ್ಷ್ಮಶರೀರದ ಹದಿನೇಳು ಅವಯವಗಳಲ್ಲಿ ಎಲ್ಲವೂ ಪ್ರಧಾನದ ಕಾರ್ಯರೂಪಗಳು. ಅದನ್ನೇ ಸೂಕ್ಷ್ಮಶಬ್ದದಿಂದ ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಹೀಗೆ ಶ್ರೀ ವಿಜ್ಞಾನಾಚಾರ್ಯನು ರಚಿಸಿದ ಕಪಿಲನ ಸಾಂಖ್ಯಪ್ರವಚನದ ಭಾಷ್ಯದಲ್ಲಿ 'ಪ್ರಧಾನಕಾರ್ಯ' ಎಂಬ ಅಧ್ಯಾಯವು ಸಮಾಪ್ತವಾಯಿತು.

ಅಥ ತೃತೀಯಃ ಅಧ್ಯಾಯಃ

ವೈರಾಗ್ಯಾಧ್ಯಾಯವೆಂಬ ಮೂರನೆಯ ಅಧ್ಯಾಯ

ಭಾಷ್ಯ: *ಇತಃ ಪರಂ ಪ್ರಧಾನಸ್ಯ ಸ್ಥೂಲಕಾರ್ಯಂ ಮಹಾಭೂತಾನಿ ಶರೀರದ್ವಯಂ ಚ ವಕ್ತವ್ಯಮ್ । ತತಶ್ಚ ವಿವಿಧಯೋನಿಗತ್ಯಾದಯಃ ಜ್ಞಾನಸಾಧನಾನು-ಷ್ಠಾನಹೇತ್ವಪರವೈರಾಗ್ಯರ್ಥಂ, ತತಶ್ಚ ಪರವೈರಾಗ್ಯಾಯ ಜ್ಞಾನ-ಸಾಧನಾನ್ಯಖಿಲಾನಿ ವಕ್ತವ್ಯಾನೀತಿ ತೃತೀಯಾರಂಭಃ ।*

ಅನುವಾದ: ಇನ್ನು ಮುಂದೆ ಪ್ರಕೃತಿಯ ಮೂಲಕಾರ್ಯಗಳು, ಮಹಾಭೂತಗಳು, ಎರಡು ಬಗೆಯ ದೇಹ ಇವುಗಳನ್ನು ಕುರಿತು ಹೇಳುತ್ತೇವೆ. ಅನಂತರ (ಪುರುಷನು) ವಿವಿಧ ಯೋನಿಗಳಲ್ಲಿ ಸೇರುವುದು ಮತ್ತು ಜ್ಞಾನಸಾಧನಗಳ ಅನುಷ್ಠಾನದಲ್ಲಿ ಕಾರಣಭೂತವಾದ ಅಪರ ವೈರಾಗ್ಯವನ್ನು ಪಡೆಯಲು ಮತ್ತು ಪರವೈರಾಗ್ಯವನ್ನು ಪಡೆಯಲು ಸಮಸ್ತ ಜ್ಞಾನಸಾಧನಗಳನ್ನು ಹೇಳಲು ಮೂರನೆಯ ಅಧ್ಯಾಯ ಆರಂಭವಾಗಿದೆ.

ಸೂತ್ರ: ಅವಿಶೇಷಾದ್ವಿಶೇಷಾರಂಭಃ ॥ ೧ ॥

ಸೂತ್ರಾನುವಾದ: ಸೂಕ್ಷ್ಮವಾದ ತನ್ಮಾತ್ರಗಳಿಂದ ಸ್ಥೂಲವಾದ ಭೂತಗಳು ಹುಟ್ಟುತ್ತವೆ.

ಭಾಷ್ಯ: *ನಾಸ್ತಿ ವಿಶೇಷಃ ಶಾಂತಘೋರಮೂಢತ್ವಾದಿರೂಪಃ ಯತ್ರೇತಿ ಅವಿಶೇಷೋ ಭೂತಸೂಕ್ಷ್ಮಂ ಪಂಚತನ್ಮಾತ್ರಾಖ್ಯಮ್ । ತಸ್ಮಾತ್ ಶಾಂತಾದಿರೂಪವಿಶೇಷವತ್ತ್ವೇನ ವಿಶೇಷಾಣಾಂ ಸ್ಥೂಲಾನಾಂ ಮಹಾಭೂತಾನಾಂ ಆರಂಭಃ ಇತ್ಯರ್ಥಃ । ಸುಖಾದ್ಯಾತ್ಮಕತಾ ಹಿ ಶಾಂತಾದಿರೂಪಾ ಸ್ಥೂಲಭೂತೇಷ್ವೇವ ತಾರತಮ್ಯಾದಿಭಿಃ ಅಭಿವ್ಯಜ್ಯತೇ, ನ ಸೂಕ್ಷ್ಮೇಷು । ತೇಷಾಂ ಶಾಂತೈಕರೂಪತಯೈವ ಯೋಗಿಷು ಅಭಿವ್ಯಕ್ತೇರಿತಿ ।*

ಅನುವಾದ: ಶಾಂತಿ-ಘೋರ-ಮೂಢತ್ವಾದಿ ರೂಪದ ವಿಶೇಷವು ಎಲ್ಲಿ ಇರದೋ ಅದು ಅವಿಶೇಷ, ಪಂಚತನ್ಮಾತ್ರಗಳೆಂದು ಹೇಳುವ ಭೂತಸೂಕ್ಷ್ಮಗಳು. ಆದ್ದರಿಂದ

ಶಾಂತಾದಿರೂಪಗಳಿಂದ ವಿಶಿಷ್ಟವಾದ ವಿಶೇಷಗಳೆಂಬ ಸ್ಥೂಲಗಳಾದ ಮಹಾಭೂತಗಳ ಉತ್ಪತ್ತಿಯಾಗುವುದು. ಸುಖಾದಿಗಳನ್ನುಳ್ಳದ್ದು ಶಾಂತರೂಪ ಮುಂತಾದುವುಗಳ ಸ್ಥೂಲಭೂತಗಳಲ್ಲಿ ತಾರತಮ್ಯಾದಿಗಳು ವ್ಯಕ್ತಪಡುತ್ತವೆ, ಸ್ಥೂಲಭೂತಗಳಲ್ಲಲ್ಲ. ಅವುಗಳ ಅಭಿವ್ಯಕ್ತಿ ಯೋಗಿಗಳಿಗೆ ಕೇವಲ ಶಾಂತವಾಗಿಯೇ ತೋರುತ್ತದೆ.

ಭಾಷ್ಯ: *ತದೇವಂ ಪೂರ್ವಾಧ್ಯಾಯಮಾರಭ್ಯ ತ್ರಯೋವಿಂಶತಿತತ್ತ್ವಾನಾಂ ಉತ್ಪತ್ತಿಂ ಉಕ್ತ್ವಾ ತಸ್ಮಾಚ್ಛರೀರದ್ವಯೋತ್ಪತ್ತಿಮಾಹ ।*

ಅನುವಾದ: ಹೀಗೆ ಪೂರ್ವಾಧ್ಯಾಯದಿಂದ ಆರಂಭಿಸಿ ಇಪ್ಪತ್ತಮೂರು ತತ್ತ್ವಗಳ ಉತ್ಪತ್ತಿಯನ್ನು ಹೇಳಿ ಅದರಿಂದ ಎರಡು ಶರೀರದ ಉತ್ಪತ್ತಿಯನ್ನು ಹೇಳಿದ್ದಾರೆ.

ಸೂತ್ರ: ತಸ್ಮಾಚ್ಛರೀರಸ್ಯ ॥ ೨ ॥

ಸೂತ್ರಾನುವಾದ: ಆ (ಇಪ್ಪತ್ತಮೂರು ತತ್ತ್ವಗಳಿಂದ) ಶರೀರಗಳ (ಸ್ಥೂಲ, ಸೂಕ್ಷ್ಮ) ಉತ್ಪತ್ತಿಯಾಗುವುದು.

ಭಾಷ್ಯ: *ತಸ್ಮಾತ್ ತ್ರಯೋವಿಂಶತಿತತ್ತ್ವಾತ್ ಸ್ಥೂಲಸೂಕ್ಷ್ಮಶರೀರಸ್ಯ ಆರಂಭಃ ಇತ್ಯರ್ಥಃ।*

ಅನುವಾದ: ಈ ಇಪ್ಪತ್ತುಮೂರು ತತ್ತ್ವಗಳಿಂದ ಸ್ಥೂಲ–ಸೂಕ್ಷ್ಮ ಶರೀರಗಳ ಉತ್ಪತ್ತಿಯುಂಟಾಗುವುದು.

ಭಾಷ್ಯ: *ಸಂಪ್ರತಿ ತ್ರಯೋವಿಂಶತಿತತ್ತ್ವೇ ಸಂಸಾರಾನ್ಯಥಾನುಪಪತ್ತಿಂ ಪ್ರಮಾಣಯತಿ।*

ಅನುವಾದ: ಇಪ್ಪತ್ತಮೂರು ತತ್ತ್ವಗಳಿರಲಾಗಿ ಸಂಸಾರವು ಬೇರೆಯ ರೀತಿಯಲ್ಲಿರ ಬಾರದೆಂಬ ವಿಷಯವನ್ನು ಪ್ರಮಾಣಸಹಿತವಾಗಿ ಹೇಳುವರು.

ಸೂತ್ರ: ತದ್ಬೀಜಾತ್ ಸಂಸೃತಿಃ ॥ ೩ ॥

ಸೂತ್ರಾನುವಾದ: ಅದರ ಬೀಜದಿಂದ ಸಂಸಾರ ಉಂಟಾಗುತ್ತದೆ.

ಭಾಷ್ಯ: *ತಸ್ಯ ಶರೀರಸ್ಯ ಬೀಜಾತ್ ತ್ರಯೋವಿಂಶತಿತತ್ತ್ವರೂಪಾತ್ ಸೂಕ್ಷ್ಮಾದ್ಧೇತೋಃ ಪುರುಷಸ್ಯ ಸಂಸೃತಿರ್ಗತಾಗತೇ ಭವತಃ । ಕೂಟಸ್ಥಸ್ಯ ವಿಭುತಯಾ ಸ್ವತೋ ಗತ್ಯಾದ್ಯಸಂಭವಾದಿತ್ಯರ್ಥಃ ।*

ಅನುವಾದ: ಆ ಸ್ಥೂಲ ಶರೀರದ ಬೀಜದಿಂದ ಇಪ್ಪತ್ತಮೂರು ತತ್ತ್ವಗಳಿಂದ ಪುರುಷನು ಸೂಕ್ಷ್ಮನಾಗಿರುವ ಕಾರಣ ಸಂಸಾರವು ಬಂದುಹೋಗಿ ಮಾಡುತ್ತಿರುತ್ತದೆ. ಏಕೆಂದರೆ ಕೂಟಸ್ಥನಾಗಿ ವಿಭುವಾಗಿರುವನು.

ಭಾಷ್ಯ: *ತ್ರಯೋವಿಂಶತಿತತ್ತ್ವೇಽವಸ್ಥಿತೋ ಹಿ ಪುರುಷಸ್ತೇನೈವೋಪಾಧಿನಾ ಪೂರ್ವ–ಕೃತಕರ್ಮಭೋಗಾರ್ಥಂ ದೇಹಾದ್ದೇಹಂಸಂಸರತಿ ।*

ಅನುವಾದ: ಇಪ್ಪತ್ತಮೂರು ತತ್ತ್ವಗಳಲ್ಲಿ ಇರುವ ಪುರುಷನು ಅದೇ ಉಪಾಧಿಯ ಕಾರಣ ದಿಂದ ಮೊದಲು ಮಾಡಿದ ಕರ್ಮಗಳ ಭೋಗಕ್ಕಾಗಿ ದೇಹದಿಂದ ದೇಹಕ್ಕೆ ಹೋಗುತ್ತಾನೆ.

ಭಾಷ್ಯ: *ಮಾನಸಂ ಮನಸೈವಾಯಮುಪಭುಂಕ್ತೇ ಶುಭಾಶುಭಮ್ ।*
ವಾಚಾ ವಾಚಾ ಕೃತಂ ಕರ್ಮ ಕಾಯೇನೈವ ತು ಕಾಯಿಕಮ್ ॥
(ಮನು ೧೨.೭)

ಇತ್ಯಾದಿ ಸ್ಮೃತಿಭಿಃ ಪೂರ್ವಸರ್ಗೀಯಕರಣೈಃ ಏವ ಉತ್ಸರ್ಗತಃ ಸರ್ಗಾಂತರೇಷೂಪಭೋಗಸಿದ್ಧೇಃ । ಅತ ಏವ ಬ್ರಹ್ಮಸೂತ್ರಂ ಉಪಸಂಹರತಿ 'ಸಂಪರಿಷ್ವಕ್ತ' ಇತಿ (೩.೧.೧)

ಅನುವಾದ: ಮನಸ್ಸಿನ ಶುಭಾಶುಭ ಕರ್ಮಗಳ ಫಲವನ್ನು ಮನಸ್ಸಿನಲ್ಲೂ, ಮಾತಿನ ಶುಭಾಶುಭ ಕರ್ಮಗಳ ಫಲವನ್ನು ಮಾತಿನಲ್ಲೂ, ದೇಹದ ಶುಭಾಶುಭ ಕರ್ಮಗಳ ಫಲವನ್ನು ದೇಹದಲ್ಲೂ ಅನುಭವಿಸಬೇಕಾಗುವುದು.

ಹೀಗೆ ಸ್ಮೃತಿಗಳಿಂದ ಪೂರ್ವಸರ್ಗದ ಸಾಧನಗಳಿಂದ ಕೊನೆಯವರೆಗೆ ಅನುಭವಿಸ ಬೇಕಾಗುತ್ತದೆ. ಏಕೆಂದರೆ ಇತರ ಸರ್ಗಗಳಲ್ಲಿಯೂ ಅನುಭವಿಸಬೇಕಾದ ನಿಯಮವಿದೆ. ಆದ್ದರಿಂದಲೇ ಬ್ರಹ್ಮಸೂತ್ರದಲ್ಲಿ 'ಸಂಪರಿಷ್ವಕ್ತಃ' ಎಂದು ತಿಳಿಸಿದೆ.

ಭಾಷ್ಯ: *ಸಂಸೃತೇರವಧಿಮಪ್ಯಾಹ–*

ಸೂತ್ರ: ಆ ವಿವೇಕಾಚ್ಚ ಪ್ರವರ್ತನಮವಿಶೇಷಾಣಾಮ್ ॥ ೪ ॥

ಅನುವಾದ: ಸಂಸಾರ ಎಲ್ಲಿಯವರೆಗೆ ಇರುತ್ತದೆ?

ಸೂತ್ರಾನುವಾದ: ಅವಿಶೇಷವಾದ ಸೂಕ್ಷ್ಮಶರೀರಗಳ ಸಂಸಾರ ವಿವೇಕಜ್ಞಾನ ಉಂಟಾಗುವವರೆಗೆ.

ಭಾಷ್ಯ: *ಈಶ್ವಾನೀಶ್ವರತ್ವಾದಿ ವಿಶೇಷರಹಿತಾನಾಂ ಸರ್ವೇಷಾಮೇವ ಪುಂಸಾಂ ವಿವೇಕಪರ್ಯಂತಮೇವ ಪ್ರವರ್ತನಂ ಸಂಸೃತಿಃ ಆವಶ್ಯಕೀ । ವಿವೇಕೋತ್ತರಂ ಚ ನ ಸೇತ್ಯರ್ಥಃ । ತತ್ರ ಹೇತುಮಾಹ–*

ಅನುವಾದ: ಈಶ್ವರ–ಅನೀಶ್ವರತ್ವ ಮುಂತಾದ ವಿಶೇಷಗಳಿಲ್ಲದ ಎಲ್ಲ ಪುರುಷರು ವಿವೇಕಜ್ಞಾನವು ಉಂಟಾಗುವವರೆಗೆ ಸಂಸಾರದ ಪ್ರವರ್ತನ ಉಳಿದಿರುತ್ತದೆ. ವಿವೇಕಜ್ಞಾನದ ನಂತರ ಅದು ಇರದು ಎಂದು ಅರ್ಥ. ಅದಕ್ಕೆ ಕಾರಣ ಹೇಳಿದೆ.

ಸೂತ್ರ: ಉಪಭೋಗಾದಿತರಸ್ಯ ॥ ೫ ॥

ಸೂತ್ರಾನುವಾದ: ಇತರರು (ಅವಿವೇಕಿಗಳು) ಉಪಭೋಗಿಸುವವರೆಗೆ (ಸಂಸಾರವಿರುತ್ತದೆ).

ಭಾಷ್ಯ: *ಇತರಸ್ಯಾವಿವೇಕಿನ ಏವ ಸ್ವೀಯಕರ್ಮಫಲಭೋಗಾವಶ್ಯಂಭಾವಾದಿತ್ಯರ್ಥಃ ।*

ಅನುವಾದ: 'ಇತರಸ್ಯ' ಎಂದರೆ ಅವಿವೇಕಿಯ; ತಾನು ಮಾಡಿದ ಕರ್ಮಗಳ ಫಲಭೋಗವು ಅವನಿಗೆ ಉಂಟಾಗುವುದು ನಿಶ್ಚಯ ಎಂದು ಅರ್ಥ.

ಭಾಷ್ಯ: *ದೇಹಸತ್ತ್ವೇಽಪಿ ಸಂಸೃತಿಕಾಲೇಽಪಿ ಭೋಗೋ ನಾಸ್ತೀತ್ಯಾಹ ।*

ಸೂತ್ರ: ಸಂಪ್ರತಿ ಪರಿಮುಕ್ತೋದ್ವಾಭ್ಯಾಮ್ ॥ ೬ ॥

ಸೂತ್ರಾನುವಾದ: ಸಂಸಾರದ ಸಮಯದಲ್ಲಿ (ಪುರುಷನು) ಎರಡರಿಂದಲೂ ಪೂರ್ಣವಾಗಿ ಮುಕ್ತನಾಗಿರುತ್ತಾನೆ.

ಭಾಷ್ಯ: *ಸಂಪ್ರತಿ ಸಂಸೃತಿಕಾಲೇ ಪುರುಷೋ ದ್ವಾಭ್ಯಾಂ ಶೀತೋಷ್ಣಸುಖ–ದುಃಖಾದಿದ್ವಂದ್ವೈಃ ಪರಿಮುಕ್ತೋ ಭವತೀತ್ಯರ್ಥಃ ।*

ಅನುವಾದ: ಸಂಪ್ರತಿ ಎಂದರೆ ಸಂಸಾರಕಾಲದಲ್ಲಿ ದ್ವಾಭ್ಯಾಂ ಎಂದರೆ ಶೀತ–ಉಷ್ಣ, ಸುಖ–ದುಃಖ ಈ ದ್ವಂದ್ವಗಳಿಂದ ಪರಿಮುಕ್ತನಾಗಿ ಇರುತ್ತಾನೆ.

ಭಾಷ್ಯ: *ತದೇತತ್ ಕಾರಿಕಯೋಕ್ತಮ್ ।*
ಸಂಸರತಿ ನಿರುಪಭೋಗಂ ಭಾವೈರಧಿವಾಸಿತಂ ಲಿಂಗಮ್ ॥

ಅನುವಾದ: ಈ ವಿಷಯವನ್ನು ಕಾರಿಕೆಯಲ್ಲಿ ಹೇಳಿದೆ– ಭಾವಗಳಿಂದ ಕೂಡಿದ ಬುದ್ಧಿಯಿಂದ ಆವರಿಸಲ್ಪಟ್ಟ ಸೂಕ್ಷ್ಮಶರೀರವು ಉಪಭೋಗವಿಲ್ಲದೆ ಸಂಸಾರದಲ್ಲಿ ಸಿಕ್ಕಿಬಿದ್ದಿರುತ್ತದೆ.

ವಿವರಣೆ: 'ಭಾವೈಃ ಅಧಿವಾಸಿತಂ', ಎಂದರೆ ಭಾವಗಳಿಂದ ಆವರಿಸಲ್ಪಟ್ಟು. ಭಾವಗಳು ಎಂಟು ಬಗೆ, ಧರ್ಮ–ಅಧರ್ಮ, ಜ್ಞಾನ–ಅಜ್ಞಾನ, ವೈರಾಗ್ಯ–ಅವೈರಾಗ್ಯ, ಐಶ್ವರ್ಯ–ಅನೈಶ್ವರ್ಯ.

ಭಾಷ್ಯ: *ಅತಃ ಪರಂ ಶರೀರದ್ವಯಂ ವಿಶಿಷ್ಯ ವಕ್ತುಮುಪಚಕ್ರಮೇ ।*

ಸೂತ್ರ: ಮಾತಾ–ಪಿತೃಜಂ ಸ್ಥೂಲಂ ಪ್ರಾಯಶ ಇತರನ್ನ ತಥಾ ॥ ೭ ॥

ಅನುವಾದ: ಇನ್ನು ಮುಂದೆ ಶರೀರದ್ವಯದ ವೈಶಿಷ್ಟ್ಯವನ್ನು ತಿಳಿಸಲು ಪ್ರಾರಂಭಿಸುತ್ತದೆ.

ಸೂತ್ರಾನುವಾದ: ಭೌತಿಕದೇಹವು ಸಾಮಾನ್ಯವಾಗಿ ತಾಯಿ–ತಂದೆಯರಿಂದ ಉಂಟಾಗುತ್ತದೆ. ಆದರೆ ಇನ್ನೊಂದು ಹಾಗಲ್ಲ.

ಭಾಷ್ಯ: *ಸ್ಥೂಲಂ ಮಾತಾಪಿತೃಜಂ ಪ್ರಾಯಶಃ ಬಾಹುಲ್ಯೇನ ಅಯೋನಿಜಸ್ಯಾಪಿ ಸ್ಥೂಲಶರೀರಸ್ಯ ಸ್ಮರಣಾದ್ ಇತರಚ್ಚ ಸೂಕ್ಷ್ಮಶರೀರಂ ನ ತಥಾ, ನ ಮಾತಾಪಿತೃಜಮ್ । ಸರ್ಗಾದ್ಯುತ್ಪನ್ನತ್ವಾದಿತ್ಯರ್ಥಃ । ತದುಕ್ತಂ ಕಾರಿಕಯಾ–*

ಪೂರ್ವೋತ್ಪನ್ನಮಸಕ್ತಂ ನಿಯತಂ ಮಹದಾದಿಸೂಕ್ಷ್ಮಪರ್ಯಂತಮ್ ।
ಸಂಸರತಿ ನಿರುಪಭೋಗಂ ಭಾವೈರಧಿವಾಸಿತಂ ಲಿಂಗಮ್ ॥ (ಕಾ.೪೦)

ಅನುವಾದ: ಬಹಳ ಮಟ್ಟಿಗೆ ಮಾತಾಪಿತೃಗಳಿಂದ ಹುಟ್ಟಿದ ಸ್ಥೂಲಶರೀರವು ಉತ್ಪನ್ನವಾದರೂ ಪ್ರಾಯಶಃ ಎಂಬ ಪದದಿಂದ ಅಯೋನಿಜ ಸ್ಥೂಲಶರೀರವೂ

ಉಂಟಾಗುವುದೂ ಉಂಟು ಎಂದು ಸೂಚಿತವಾಗಿದೆ. ಆದರೆ ಸೂಕ್ಷ್ಮಶರೀರವು ಹಾಗಲ್ಲ, ಅದು ಮಾತಾಪಿತೃಜವಲ್ಲ. ಏಕೆಂದರೆ ಸೃಷ್ಟಿಯ ಕಾಲದಲ್ಲಿ ಅವುಗಳು ಉತ್ಪನ್ನವಾಗಿರುತ್ತವೆ.

(ಕಾರಿಕೆ)(ಪುರುಷನು) ಸೃಷ್ಟಿಯ ಆದಿಯಲ್ಲಿ ಸೃಷ್ಟಿಯಾದ ಲಿಂಗಶರೀರದಲ್ಲಿ ಸೇರುತ್ತದೆ. ನಿಯತವಾದ, ಮಹದಾದಿ ಸೂಕ್ಷ್ಮದವರೆಗೆ ಇರುವ ಭೋಗರಹಿತವಾಗಿ, ಭಾವಗಳಿಂದ ಆವರಿಸಲ್ಪಟ್ಟ ಸೂಕ್ಷ್ಮಶರೀರವು ಸಂಸಾರದಲ್ಲಿ ತೊಡಗುತ್ತದೆ.

ಭಾಷ್ಯ: *ನಿಯತಂ ನಿತ್ಯಂ ದ್ವಿಪರಾರ್ಧಸ್ಥಾಯಿ, ಗೌಣನಿತ್ಯಂ ಪ್ರತಿಶರೀರಂ ಲಿಂಗೋತ್ಪತ್ತಿಕಲ್ಪನೇ ಗೌರವಾತ್ । ಪ್ರಲಯೇತು ತನ್ನಾಶಃ ಶ್ರುತಿಸ್ಮೃತಿಪ್ರಾಮಾಣ್ಯಾದಿಷ್ಯತೇ । ಗತಿಕಾಲೇ ಭೋಗಾಭಾವವಚನಂ–ಉತ್ಸರ್ಗಾಭಿಪ್ರಾಯೇಣ । ಕದಾಚಿತ್ತು ವಾಯವೀಯಶರೀರ– ಪ್ರವೇಶತಃ ಗಮನಕಾಲೇಽಪಿ ಭೋಗೋ ಭವತಿ । ಅತೋ ಯಮಮಾರ್ಗೇ ದುಃಖಭೋಗವಾಕ್ಯಾನಿ ಉಪಪದ್ಯಂತೇ ।*

ಅನುವಾದ: ಲಿಂಗಶರೀರವು ನಿತ್ಯವಾದುದು ಎಂದರೆ ದ್ವಿಪರಾರ್ಧಕಾಲದವರೆಗೆ ಸ್ಥಾಯಿಯಾಗಿರುವುದು; ಅರ್ಥಾತ್ ಅದರ ನಿತ್ಯತ್ವ ಗೌಣವಾದುದು; ಏಕೆಂದರೆ ಪ್ರತ್ಯೇಕ ಶರೀರಕ್ಕೆ ಲಿಂಗಶರೀರದ ಕಲ್ಪನೆ ಅತಿಶಯ ವಾಗುವುದು. ಏಕೆಂದರೆ ಪ್ರಲಯಕಾಲದಲ್ಲಿ ಲಿಂಗನಾಶವಾಗುವುದು ಎಂದು ಶ್ರುತಿಸ್ಮೃತಿಪ್ರಾಮಾಣ್ಯದಿಂದ ಮಾನ್ಯತೆಯನ್ನು ಪಡೆದಿದೆ. ಗತಿಕಾಲದಲ್ಲಿ ಭೋಗದ ಅಭಾವವನ್ನು ತಿಳಿಸುವ ವಚನವು ತ್ಯಾಗ ಮಾಡುವುದು ಎಂಬ ಅಭಿಪ್ರಾಯದಿಂದ ಹೇಳಿದೆ. ಒಮ್ಮೆ ವಾಯವೀಯ ಶರೀರವನ್ನು ಪ್ರವೇಶ ಮಾಡುವಾಗ ಭೋಗ ಉಂಟಾಗುತ್ತದೆ. ಆದ್ದರಿಂದ ಯಮಮಾರ್ಗದಲ್ಲಿ ದುಃಖಭೋಗವನ್ನು ಪ್ರತಿಪಾದಿಸುವ ವಾಕ್ಯಗಳು ದೊರೆಯುತ್ತವೆ.

ಭಾಷ್ಯ: *ಸ್ಥೂಲಸೂಕ್ಷ್ಮಶರೀರಯೋರ್ಮಧ್ಯೇ ಕಿಮುಪಾಧಿಕಃ ಪುರುಷಸ್ಯ ದ್ವಂದ್ವಯೋಗಃ । ತದವಧಾರಯತಿ ।*

ಅನುವಾದ: ಸೂಕ್ಷ್ಮ–ಸ್ಥೂಲ ಶರೀರಗಳ ನಡುವೆ ಯಾವ ಶರೀರಕ್ಕೆ ಸುಖದುಃಖಾದಿ ದ್ವಂದ್ವಗಳ ಭೋಗ ಉಂಟಾಗುತ್ತದೆ?

ಸೂತ್ರ: ಪೂರ್ವೋತ್ಪತ್ತೇಸ್ತತ್ಕಾರ್ಯತ್ವಂ ಭೋಗಾದೇಕಸ್ಯ ನೇತರಸ್ಯ ॥೮॥

ಸೂತ್ರಾನುವಾದ: (ಸೂಕ್ಷ್ಮ ಶರೀರವು) ಮೊದಲು ಉತ್ಪತ್ತಿಯಾಗಿ ಭೋಗದಿಂದ ಅದೊಂದಕ್ಕೇ ಭೋಗವುಂಟಾಗುವುದು, ಇನ್ನೊಂದಕ್ಕಲ್ಲ.

ಭಾಷ್ಯ: *ಪೂರ್ವಂ ಸರ್ಗಾದುತ್ಪತ್ತಿರ್ಯಸ್ಯ ಲಿಂಗಶರೀರಸ್ಯ ತಸ್ಯೈವ, ತತ್ಕಾರ್ಯತ್ವಂ ಸುಖದುಃಖಕಾರ್ಯಕತ್ವಮ್ । ಕುತಃ? ಏಕಸ್ಯ ಲಿಂಗದೇಹಸ್ಯೈವ ಸುಖದುಃಖಾಖ್ಯಭೋಗಾತ್, ನ ತ್ವಿತರಸ್ಯ*

ಸ್ಥೂಲಶರೀರಸ್ಯ । ಮೃತಶರೀರೇ ಸುಖದುಃಖಾದ್ಯಭಾವಸ್ಯ ಸರ್ವಸಮ್ಮತತ್ವಾತ್ ಇತ್ಯರ್ಥಃ ।

ಅನುವಾದ: ಮೊದಲು ಸರ್ಗಾದಿಯಲ್ಲಿ ಉತ್ಪತ್ತಿಯನ್ನು ಪಡೆದ ಲಿಂಗಶರೀರದ ಎಂದರೆ ಸೂಕ್ಷ್ಮಶರೀರವಿರುವುದರಿಂದಲೇ ಸುಖದುಃಖಾದಿಕಾರ್ಯಗಳು ಉಂಟಾಗುತ್ತವೆ. ಏಕೆ? ಕೇವಲ ಲಿಂಗದೇಹದ ಸುಖದುಃಖಗಳೆಂಬ ಭೋಗದ ಕಾರಣ, ಬೇರೆಯ ಎಂದರೆ ಸ್ಥೂಲಶರೀರದ ಭೋಗವಲ್ಲ. ಶರೀರವು ಮೃತಪಟ್ಟಾಗ ಸುಖದುಃಖಾದ್ಯ ಭಾವದ ಸ್ಥಿತಿಯು ಸರ್ವಸಮ್ಮತವಾದುದೇ.

ಭಾಷ್ಯ: *ಉಕ್ತಸ್ಯ ಸೂಕ್ಷ್ಮಶರೀರಸ್ಯ ಸ್ವರೂಪಮಾಹ–*

ಸೂತ್ರ: ಸಪ್ತದಶೈಕಂ ಲಿಂಗಮ್ ॥ ೯ ॥

ಸೂತ್ರಾನುವಾದ: (ಸೃಷ್ಟಿಯಲ್ಲಿ ಉಂಟಾದ) ಒಂದು ಸೂಕ್ಷ್ಮಶರೀರ ಹದಿನೇಳು ಅವಯವಗಳಿಂದ ಕೂಡಿರುತ್ತದೆ.

ಭಾಷ್ಯ: *ಸೂಕ್ಷ್ಮಶರೀರಮಪಿ ಆಧಾರಾಧೇಯಭಾವೇನ ದ್ವಿವಿಧಂ ಭವತಿ । ತತ್ರ ಸಪ್ತದಶಮಿಲಿತ್ವಾ ಲಿಂಗಶರೀರಮ್ । ತಚ್ಚ ಸರ್ಗಾದೌ ಸಮಷ್ಟಿ–ರೂಪಮೇಕಮೇವ ಭವತೀತ್ಯರ್ಥಃ । ಏಕಾದಶೇಂದ್ರಿಯಾಣಿ ಪಂಚ–ತನ್ಮಾತ್ರಾಣಿ ಬುದ್ಧಿಶ್ಚೇತಿ ಸಪ್ತದಶ । ಅಹಂಕಾರಸ್ಯ ಬುದ್ಧಾವೇವಾಂತ–ರ್ಭಾವಃ । ಚತುರ್ಥಸೂತ್ರವಕ್ಷ್ಯಮಾಣಪ್ರಮಾಣಾತ್ ಏತಾನ್ಯೇವ ಸಪ್ತದಶ ಲಿಂಗಂ ಮಂತವ್ಯಂ, ನ ತು ಸಪ್ತದಶಮೇಕಂ ಚ ಅಷ್ಟಾದಶತಯಾ ವ್ಯಾಖ್ಯೇಯಮ್ । ಉತ್ತರಸೂತ್ರೇಣ ವ್ಯಕ್ತಿಭೇದಸ್ಯ ಉಪಪಾದ್ಯತಯಾ ಲಿಂಗೈಕತ್ವ ಏಕಶಬ್ದಸ್ಯ ತಾತ್ಪರ್ಯಾವಧಾರಣಾಚ್ಚ ।*

ಅನುವಾದ: ಈ ಸೂಕ್ಷ್ಮಶರೀರವೂ ಸಹ ಆಧಾರ–ಆಧೇಯಭಾವದಂತೆ ಎರಡು ಬಗೆಯಾಗಿ ಇರುತ್ತದೆ. ಅದರಲ್ಲಿ ಹದಿನೇಳೂ ಸೇರಿ ಲಿಂಗಶರೀರವೆನಿಸಿ ಕೊಳ್ಳುತ್ತದೆ. ಅದೂ ಸೃಷ್ಟಿಕಾಲದಲ್ಲಿ ಸಮಷ್ಟಿರೂಪದಲ್ಲಿ ಒಂದೇ ಆಗುತ್ತದೆ. ಹನ್ನೊಂದು ಇಂದ್ರಿಯಗಳು, ಐದು ತನ್ಮಾತ್ರಗಳು ಮತ್ತು ಬುದ್ಧಿ ಎಂದು ಒಟ್ಟು ಹದಿನೇಳು. ಅಹಂಕಾರವಾದರೋ ಬುದ್ಧಿಯಲ್ಲಿಯೇ ಅಂತರ್ಭಾವಗೊಳ್ಳುವುದು. ನಾಲ್ಕನೆಯ ಸೂತ್ರದಲ್ಲಿ ಮುಂದೆ ಹೇಳುವ ಪ್ರಮಾಣದಂತೆ ಇವುಗಳೇ ಹದಿನಾಲ್ಕು ಅವಯವಗಳು ಹದಿನೇಳು ಲಿಂಗಶರೀರವೆಂದು ತಿಳಿಯಬೇಕು; ಹದಿನೇಳು ಮತ್ತು ಒಂದು ಎಂದು ವ್ಯಾಖ್ಯಾನ ಮಾಡಬಾರದು. ಏಕೆಂದರೆ ಮುಂದಿನ ಸೂತ್ರದಿಂದ ವ್ಯಕ್ತಿಭೇದದ ಉಪಪಾದನೆಯನ್ನು ಮಾಡಿರುವುದರಿಂದ ಇಲ್ಲಿ ಲಿಂಗದ ಏಕತ್ವದಲ್ಲಿಯೇ ಅರ್ಥವನ್ನು ಅರಿಯಬೇಕಾಗಿದೆ.

ಭಾಷ್ಯ: *ಕರ್ಮಾತ್ಮಾ ಪುರುಷೋ ಯೋಽಸೌ ಬಂಧಮೋಕ್ಷೈಃ ಪ್ರಯುಜ್ಯತೇ ।*
ಸ ಸಪ್ತದಶಕೇನಾಪಿ ರಾಶಿನಾ ಯುಜ್ಯತೇ ಚ ಸಃ ॥

(ಮೋ.ಧ. ೩೫೧.೧೫–೧೬)

ಅನುವಾದ: ಕರ್ಮದಲ್ಲಿ ತೊಡಗಿದ ಯಾವ ಪುರುಷನು ಬಂಧಮೋಕ್ಷಗಳಿಂದ ಕೂಡಿರುವನೋ ಅವನು ಹದಿನೇಳು ಅವಯವಗಳ ರಾಶಿಯಿಂದ ಸೇರಿಹೋಗುತ್ತಾನೆ.

ಭಾಷ್ಯ: *ಇತಿ ಮೋಕ್ಷಧರ್ಮಾದೌ ಲಿಂಗಶರೀರಸ್ಯ ಸಪ್ತದಶತ್ವಸಿದ್ಧೇಶ್ಚ । ಸಪ್ತದಶಾವಯವಾ ಅತ್ರ ಸಂತೀತಿ ಸಪ್ತದಶಕೋ ರಾಶಿರಿತ್ಯರ್ಥಃ । ರಾಶಿಶಬ್ದೇನ ಸ್ಥೂಲದೇಹವತ್ ಲಿಂಗದೇಹಸ್ಯ ಅವಯವಿತ್ವಂ ನಿರಾಕೃತಮ್ । ಅವಯವಿರೂಪೇಣ ದ್ರವ್ಯಾಂತರಕಲ್ಪನಾಯಾಂ ಗೌರವಾತ್ । ಸ್ಥೂಲದೇಹಸ್ಯ ಚ ಅವಯವಿತ್ವಮೇಕತಾದಿ ಪ್ರತ್ಯಕ್ಷಾನುರೋಧೇನ ಕಲ್ಪ್ಯತ ಇತಿ ।*

ಅನುವಾದ: ಹೀಗೆ ಮೋಕ್ಷಧರ್ಮಾದಿಗಳಲ್ಲಿ ಹದಿನೇಳು ಅವಯವಗಳು ಲಿಂಗಶರೀರದಲ್ಲಿ ಸಿದ್ಧವಾಗುವುದು. ಹದಿನೇಳು ಅವಯವಗಳುಳ್ಳದ್ದು ಎಂಬುದನ್ನು 'ಸಪ್ತದಶಕರಾಶಿ' ಎಂದು ಹೇಳಿದೆ. ರಾಶಿ ಶಬ್ದದ ಬಳಕೆಯಿಂದ ಸ್ಥೂಲದೇಹದಂತೆ ಲಿಂಗದೇಹದ ಅವಯವಿತ್ವವನ್ನು ನಿರಾಕರಿಸಲಾಗಿದೆ. ಅವಯವಿರೂಪದಿಂದ ಬೇರೊಂದು ವಸ್ತುವಿನ ಕಲ್ಪನೆ ಮಾಡಿದಲ್ಲಿ ಅದು ಅನಗತ್ಯವಾಗುವುದು. ಸ್ಥೂಲದೇಹದ ಅವಯವಿತ್ವವು ಒಂದೇ ಎಂದು ಪ್ರತ್ಯಕ್ಷದ ಮನವರಿಕೆಯಿಂದ ಕಲ್ಪಿಸಲ್ಪಡುತ್ತದೆ.

ಭಾಷ್ಯ: *ಅತ್ರ ಚ ಲಿಂಗದೇಹೇ ಬುದ್ಧಿರೇವ ಪ್ರಧಾನೇತ್ಯಾಶಯೇನ ಲಿಂಗದೇಹಸ್ಯ ಭೋಗಃ ಪ್ರಾಗುಕ್ತಃ । ಪ್ರಾಣಶ್ಚಾಂತಃ ಕರಣಸ್ಯೈವ ವೃತ್ತಿಭೇದಃ । ಅತೋ ಲಿಂಗದೇಹೇ ಪ್ರಾಣಪಂಚಕಸ್ಯಾಪಿ ಅಂತರ್ಭಾವ ಇತ್ಯಸ್ಯ ಸಪ್ತದಶಾವಯವಕಸ್ಯ ಶರೀರತ್ವಂ ಸ್ವಯಂ ವಕ್ಷ್ಯತಿ । 'ಲಿಂಗಶರೀರನಿಮಿತ್ತಕ ಇತಿ ಸನಂದನಾಚಾರ್ಯಃ' (೬.೬೯) ಇತಿ ಸೂತ್ರೇಣ । ಅತೋ ಭೋಗಾಯತನತ್ವಮೇವ ಮುಖ್ಯಂ ಶರೀರಲಕ್ಷಣಮ್ । ತದಾಶ್ರಯತಯಾ ತ್ವನ್ಯತ್ರ ಶರೀರತ್ವಮಿತಿ ಪಶ್ಚಾತ್ ವ್ಯಕ್ತೀ ಭವತಿ । 'ಚೇಷ್ಟೇಂದ್ರಿಯಾರ್ಥಾಶಯಃ ಶರೀರಂ' ಇತಿ ನ್ಯಾಯೇಽಪಿ (೧.೧.೧೧) ತಸ್ಯೈವ ಲಕ್ಷಣಂ ಕೃತಮಿತಿ ।*

ಅನುವಾದ: ಇಲ್ಲಿ ಲಿಂಗದೇಹದಲ್ಲಿ ಬುದ್ಧಿಯೇ ಪ್ರಧಾನವಾದುದು ಎಂಬ ಆಶಯದಿಂದ ಲಿಂಗದೇಹದ ಭೋಗವನ್ನು ಕುರಿತು ಮೊದಲೇ ಹೇಳಿದೆ. ಪ್ರಾಣವೂ ಸಹ ಅಂತಃಕರಣದ ವೃತ್ತಿವಿಶೇಷವಾಗಿರುವುದು. ಆದ್ದರಿಂದ ಹದಿನೇಳು ಅವಯವ ಸಮೂಹದ ಶರೀರತ್ವವನ್ನು ತಾನಾಗಿಯೇ ತಿಳಿಸಿದ್ದಾರೆ. 'ಸನಂದನಾಚಾರ್ಯರು (ಭೋಕ್ತೃ-ಭೋಗ್ಯ ಭಾವವನ್ನು) ಲಿಂಗಶರೀರದ ನಿಮಿತ್ತದಿಂದ ಆಗುತ್ತದೆ' ಎಂಬ ಸೂತ್ರದಿಂದ. 'ಆದ್ದರಿಂದ ಭೋಗಾಯತನವೇ ಮುಖ್ಯ ಶರೀರದ ಲಕ್ಷಣ'. ಅದರ ಆಶ್ರಯದಿಂದಲೇ ಬೇರೆಯ ಕಡೆ ಶರೀರತ್ವವೆಂದು ವ್ಯಕ್ತಪಡಿಸುತ್ತಾರೆ. 'ಚಟುವಟಿಕೆ, ಇಂದ್ರಿಯವ್ಯಾಪಾರಗಳು ಶರೀರದ ಲಕ್ಷಣಗಳು' ಎಂಬುದನ್ನು ನ್ಯಾಯದರ್ಶನದಲ್ಲಿಯೂ ಹೇಳಿದ್ದಾರೆ.

ಭಾಷ್ಯ: *ನನು ಲಿಂಗಂ ಚೇದೇಕಂ, ತರ್ಹಿ ಕಥಂ ಪುರುಷಭೇದೇನ ವಿಲಕ್ಷಣಾ ಭೋಗಾಃ ಸ್ಯುಸ್ತತ್ರಾಹ–*

ಅನುವಾದ: ಲಿಂಗ ಶರೀರವು ಒಂದೇ ಆದರೆ ಪುರುಷಭೇದದ ಕಾರಣ ವಿಲಕ್ಷಣವಾದ ಭೋಗಗಳು ಏಕೆ ಆಗುವುವು.

ಸೂತ್ರ: ವ್ಯಕ್ತಿಭೇದಃ ಕರ್ಮವಿಶೇಷಾತ್ ॥ ೧೦ ॥

ಸೂತ್ರಾನುವಾದ: ಕರ್ಮಗಳ ಭೇದದ ಕಾರಣ ವ್ಯಕ್ತಿಭೇದ ಉಂಟಾಗುತ್ತದೆ.

ಭಾಷ್ಯ: *ಯದ್ಯಪಿ ಸರ್ಗಾದೌ ಹಿರಣ್ಯಗರ್ಭೋಪಾಧಿಕರೂಪಂ ಏಕಮೇವ ಲಿಂಗಂ, ತಥಾಪಿ ತಸ್ಯ ಪಶ್ಚಾದ್ವ್ಯಕ್ತಿಭೇದಃ ವ್ಯಕ್ತಿರೂಪೇಣಾಂಶತೋ ನಾನಾತ್ವಮಪಿ ಭವತಿ । ಯಥಾ ಇದಾನೀಂ ಏಕಸ್ಯ ಪಿತೃಲಿಂಗದೇಹಸ್ಯ ನಾನಾತ್ವಮಂಶತೋ ಭವತಿ, ಪುತ್ರಕನ್ಯಾದಿಲಿಂಗದೇಹರೂಪೇಣ । ತತ್ರ ಕಾರಣಮಾಹ– ಕರ್ಮವಿಶೇಷಾದಿತಿ । ಜೀವಾಂತರಾಣಾಂ ಭೋಗಹೇತುಕರ್ಮಾದೇಃ ಇತ್ಯರ್ಥಃ । ಅತ್ರ ವಿಶೇಷವಚನಾತ್ ಸಮಷ್ಟಿಸೃಷ್ಟಿರ್ಜೀವಾನಾಂ ಸಾಧಾರಣೈಃ ಕರ್ಮಭಿಃ ಭವತೀತ್ಯಾಯಾತಮ್।*

ಅನುವಾದ: ಸೃಷ್ಟಿಯ ಆದಿಯಲ್ಲಿ ಹಿರಣ್ಯಗರ್ಭನೆಂಬ ಉಪಾಧಿರೂಪದ ಒಂದೇ ಲಿಂಗವಿದ್ದರೂ, ತದನಂತರ ವ್ಯಕ್ತಿಯ ಭೇದದಲ್ಲಿ ಎಂದರೆ ವ್ಯಕ್ತಿಯ ರೂಪದಲ್ಲಿ ಅಂಶತಃ ನಾನಾತ್ವ ಉಂಟಾಗುವುದು. ಹೇಗೆ ಈಗ ಒಬ್ಬ ಪಿತೃಲಿಂಗದೇಹದ ನಾನಾತ್ವವು ಪುತ್ರ, ಕನ್ಯೆ ಮುಂತಾದ ದೇಹದ ರೂಪಗಳಲ್ಲಿ ಅಂಶತಃ ಉಂಟಾಗುವುದು. ಅದಕ್ಕೆ ಕಾರಣವನ್ನು ಹೇಳಿದೆ– **'ಕರ್ಮವಿಶೇಷಾತ್'** ಎಂದರೆ ಕರ್ಮಭೇದದಿಂದ ಹಾಗಾಗುವುದು. ಎಲ್ಲ ಜೀವಗಳ ಸಮಷ್ಟಿಸೃಷ್ಟಿ ಸಾಧಾರಣ ಕರ್ಮಗಳಿಂದ ಉಂಟಾಗುತ್ತದೆ.

ವಿವರಣೆ: ಎಲ್ಲ ಜೀವಗಳ ಸಮಷ್ಟಿಸೃಷ್ಟಿಗೆ ಸಾಧಾರಣಕರ್ಮಗಳು ಕಾರಣವಾದರೂ ವ್ಯಕ್ತಿಭೇದವು ಅವರವರ ಸಂಸ್ಕಾರವನ್ನು ಅವಲಂಬಿಸಿರುತ್ತದೆ.

ಭಾಷ್ಯ: *ಅಯಂ ಚ ವ್ಯಕ್ತಿಭೇದೋ ಮನ್ವಾದಿಷ್ವಪ್ಯುಕ್ತಃ । ಯಥಾ ಮನೌ ಸಮಷ್ಟಿಪುರುಷಸ್ಯ ಷಡಿಂದ್ರಿಯೋತ್ಪತ್ತ್ಯನಂತರಮ್ ।*

ತೇಷಾಂ ತ್ವವಯವಾನ್ ಸೂಕ್ಷ್ಮಾನ್ ಷಣ್ಣಾಮಪ್ಯಮಿತೌಜಸಾನ್ ।
ಸನ್ನಿವೇಶ್ಯಾತ್ಮಮಾತ್ರಾಸು ಸರ್ವಭೂತಾನಿ ನಿರ್ಮಮೇ ॥

ಅನುವಾದ: ಆ ಆರು ಅತ್ಯಂತ ತೇಜಸ್ವಿಗಳಾದ (ತತ್ತ್ವಗಳ) ಸೂಕ್ಷ್ಮವಾದ ಅವಯವಗಳನ್ನು ಆತ್ಮಮಾತ್ರಗಳಲ್ಲಿ ಒಂದುಗೂಡಿಸಿ ಎಲ್ಲ ಭೂತಗಳನ್ನೂ ನಿರ್ಮಿಸಿದನು.

ಭಾಷ್ಯ: *ಷಣ್ಣಾಮಿತಿ ಸಮಸ್ತಲಿಂಗಶರೀರೋಪಲಕ್ಷಣಮ್ । ಆತ್ಮಮಾತ್ರಾಸು ಚಿದಂಶೇಷು ಸಂಯೋಜ್ಯೇತ್ಯರ್ಥಃ ।*

ಅನುವಾದ: (ಮೇಲಿನ ಶ್ಲೋಕದಲ್ಲಿ) '**ಷಣ್ಣಾಂ**' ಪದವು ಎಲ್ಲಾ ಲಿಂಗ ಶರೀರಗಳನ್ನು ಸೂಚಿಸುತ್ತದೆ. ಆತ್ಮಮಾತ್ರಾಸು ಎಂದರೆ ಚಿತ್‌ನ ಅಂಶಗಳಲ್ಲಿ ಕೂಡಿಸಿ ಎಂದರ್ಥ.

ಭಾಷ್ಯ: *ತಥಾ ಚ ತತ್ರೈವ ವಾಕ್ಯಾಂತರಮ್ ।*
ತಚ್ಛರೀರಸಮುತ್ಪನ್ನೈಃ ಕಾರ್ಯೈಸ್ತೈಃ ಕರಣೈಃ ಸಹ ।
ಕ್ಷೇತ್ರಜ್ಞಾಃ ಸಮಜಾಯಂತ ಗಾತ್ರೇಭ್ಯಸ್ತಸ್ಯ ಧೀಮತಃ ॥

ಅನುವಾದ: ಅದೇ ಪ್ರಕಾರ ಅಲ್ಲಿ ಬೇರೆಯ ವಾಕ್ಯಗಳೂ ಇವೆ. ಆ ಶರೀರದಿಂದ ಉತ್ಪನ್ನವಾದ ಕಾರ್ಯಗಳು ಮತ್ತು ಕರಣಗಳೊಡನೆ ಆ ಧೀಮಂತನ ಗಾತ್ರಗಳಿಂದ ಕ್ಷೇತ್ರಜ್ಞರು (ಜೀವರು) ಉತ್ಪನ್ನರಾದರು.

ಭಾಷ್ಯ: *ನನ್ವೇವಂ ಭೋಗಾಯತನತಯಾ ಲಿಂಗಸ್ಯೈವ ಶರೀರತ್ವೇ ಸ್ಥೂಲೇ ಕಥಂ ಶರೀರವ್ಯವಹಾರಸ್ತತ್ರಾಹ ।*

ಸೂತ್ರ: ತದಧಿಷ್ಠಾನಾಶ್ರಯೇ ದೇಹೇ ತದ್ವಾದಾತ್ ತದ್ವಾದಃ ॥ ೧೧ ॥

ಅನುವಾದ: ಹೀಗೆ ಭೋಗಾಯತನದ ರೂಪದಲ್ಲಿ 'ಲಿಂಗ' ಎಂಬುದನ್ನು ಶರೀರವೆಂಬ ಅರ್ಥದಲ್ಲಿ ಬಳಸಿ ಸ್ಥೂಲವಾದ ಶರೀರವ್ಯವಹಾರ ಮಾಡುವಿರಿ? ಅದಕ್ಕೆ ಉತ್ತರ–

ಸೂತ್ರಾನುವಾದ: (ಜೀವನ) ಅಧಿಷ್ಠಾನವಾದ ಸೂಕ್ಷ್ಮಶರೀರಕ್ಕೆ ಆಶ್ರಯನಾದ ದೇಹದಲ್ಲಿ (ಸ್ಥೂಲಶರೀರದಲ್ಲಿ) ಆ ಶಬ್ದವ್ಯವಹಾರವಿರುವುದರಿಂದ (ಸೂಕ್ಷ್ಮಶರೀರಕ್ಕೆ) ಅದೇ ಶಬ್ದವ್ಯವಹಾರವಿರುತ್ತದೆ.

ಭಾಷ್ಯ: *ತಸ್ಯ ಲಿಂಗಸ್ಯ ಯದಧಿಷ್ಠಾನಮಾಶ್ರಯೋ ವಕ್ಷ್ಯಮಾಣಭೂತಪಂಚಕಂ ತಸ್ಯಾಶ್ರಯೇ ಷಾಟ್‌ಕೌಶಿಕದೇಹೇ ತದ್ವಾದೋ ದೇಹಿವಾದಃ ತದ್ವಾದಾತ್ ತಸ್ಯಾಧಿಷ್ಠಾನಶಬ್ದೋಕ್ತಸ್ಯ ದೇಹವಾದಾತ್ ಇತ್ಯರ್ಥಃ । ಲಿಂಗ–ಸಂಬಂಧಾದಧಿಷ್ಠಾನಸ್ಯ ದೇಹತ್ವಮಧಿಷ್ಠಾನಾಶ್ರಯತ್ವಾಚ್ಚ ಸ್ಥೂಲಸ್ಯ ದೇಹತ್ವಮಿತಿ ಪರ್ಯವಸಿತೋಽರ್ಥಃ । ಅಧಿಷ್ಠಾನಂ ಚ ಸೂಕ್ಷ್ಮ–। ಪಂಚಭೂತಾತ್ಮಕಂ ವಕ್ಷ್ಯತೇ । ತಥಾ ಚ ಶರೀರತ್ರಯಂ ಸಿದ್ಧಮ್ ।*

ಅನುವಾದ: ಆ ಲಿಂಗಶರೀರದ 'ಅಧಿಷ್ಠಾನ' ಎಂದರೆ ಆಶ್ರಯವಾದ ಮತ್ತು ಮುಂದೆ ಹೇಳಲ್ಪಡುವ ಪಂಚಭೂತಗಳು ಮತ್ತು ಅವುಗಳಿಗೆ ಆಶ್ರಯವಾದ ಷಾಟ್‌ಕೌಶಿಕ ದೇಹದಲ್ಲಿ ದೇಹ ಎಂದು ಹೇಳುವರು ಮತ್ತು ಹಾಗೆ ಹೇಳುವುದರಿಂದ ಅದಕ್ಕೆ ಅಧಿಷ್ಠಾನವೆಂದು ಹೇಳುವ ದೇಹವೆಂದು ಅರ್ಥ. ಲಿಂಗಸಂಬಂಧದಿಂದ ಅಧಿಷ್ಠಾನವೆನಿಸಿದ ದೇಹವು ಮತ್ತು ಅಧಿಷ್ಠಾನದ ಆಶ್ರಯವೆನಿಸಿದ ಸ್ಥೂಲಕ್ಕೂ ದೇಹವೆನ್ನುತ್ತಾರೆ ಎಂದು ದೃಢವಾದ ಅರ್ಥ. ಹೀಗೆ ಅಧಿಷ್ಠಾನ ಮತ್ತು ಸೂಕ್ಷ್ಮ ಎರಡೂ ಪಂಚಭೂತಾತ್ಮಕವೆನ್ನುತ್ತಾರೆ. ಹೀಗೆ ಮೂರು ಶರೀರಗಳು ಸಿದ್ಧವಾದುವು.

ವಿವರಣೆ: ಷಾಟ್‌ಕೌಶಿಕ ಎಂದರೆ ಆರು ಕೋಶಗಳಿಂದ ಕೂಡಿದ

ಭಾಷ್ಯ: *ಯತ್ತು–*

ಆತಿವಾಹಿಕ ಏಕೋಽಸ್ತಿ ದೇಹೋಽನ್ಯಸ್ತ್ವಾಧಿಭೌತಿಕಃ ।
ಸರ್ವಾಸಾಂ ಭೂತಜಾತೀನಾಂ ಬ್ರಹ್ಮಣಸ್ತ್ವೇಕ ಏವ ಕಿಮ್ ।

ಅನುವಾದ: ಎಲ್ಲ ಭೂತಜಾತಿಗಳ ಆತಿವಾಹಿಕ ದೇಹವಿರುತ್ತದೆ ಹಾಗೂ ಆಧಿಭೌತಿಕ ದೇಹವಿರುತ್ತದೆ. ಹಾಗಾದರೆ ಬ್ರಹ್ಮನಿಗೆ ಒಂದೇ ದೇಹವೇಕೆ?

ವಿವರಣೆ: ಆತಿವಾಹಿಕವೆಂದರೆ ಲೋಕಾಂತರಕ್ಕೆ ಹೋಗಬಲ್ಲ.

ಭಾಷ್ಯ: *ಇತ್ಯಾದಿಶಾಸ್ತ್ರೇಷು ಶರೀರದ್ವಯಮೇವ ಶ್ರೂಯತೇ ತಲ್ಲಿಂಗ ಶರೀರಾಧಿಷ್ಠಾನಶರೀರಯೋಃ ಅನ್ಯೋನ್ಯನಿಯತತ್ವೇನ ಸೂಕ್ಷ್ಮತ್ವೇನ ಚ ಏಕತಾಭಿಪ್ರಾಯದಿತಿ ।*

ಅನುವಾದ: ಮುಂತಾದ ಶಾಸ್ತ್ರಗಳಲ್ಲಿ ಎರಡೇ ಶರೀರಗಳನ್ನು ಕೇಳಿದ್ದೇವೆ, ಆ ಲಿಂಗಶರೀರ ಮತ್ತು ಅಧಿಷ್ಠಾನ ಶರೀರಗಳಲ್ಲಿ ಅನ್ಯೋನ್ಯ ನಿಯತವಾಗಿರುವುದರಿಂದ ಮತ್ತು ಸೂಕ್ಷ್ಮವಾಗಿರುವುದರಿಂದ ಏಕತೆಯ ಅಭಿಪ್ರಾಯವುಂಟು.

ಭಾಷ್ಯ: *ನನು ಷಾಟ್‌ಕೌಶಿಕಾತಿರಿಕ್ತೇ ಲಿಂಗಶರೀರಾಧಿಷ್ಠಾನಭೂತೇ ಶರೀರಾಂತರೇ ಕಿಂ ಪ್ರಮಾಣಂ ಇತ್ಯಾಕಾಂಕ್ಷಾಯಾಮಾಹ–*

ಸೂತ್ರ: ನ ಸ್ವಾತಂತ್ರ್ಯಾತ್ ತದೃತೇ ಛಾಯಾವಚ್ಚಿತ್ರವಚ್ಚ ॥ ೧೨ ॥

ಅನುವಾದ: ಷಾಟ್‌ಕೌಶಿಕ ಶರೀರ (ಸ್ಥೂಲಶರೀರ)ವನ್ನು ಮೀರಿ ಲಿಂಗಶರೀರಕ್ಕೆ ಅಧಿಷ್ಠಾನ ಭೂತವಾದ ಬೇರೊಂದು ದೇಹಕ್ಕೆ ಸೇರಿತೆಂದು ಹೇಳಲು ಪ್ರಮಾಣವೇನು? ಅದಕ್ಕೆ ಉತ್ತರ ಹೇಳಿದೆ–

ಸೂತ್ರಾನುವಾದ: ಅದು (ಅಧಿಷ್ಠಾನ)ವಿಲ್ಲದೆ ಸ್ವತಂತ್ರವಾಗಿ ಲಿಂಗಶರೀರ ಇರಲಾರದು; ನೆರಳಿನಂತೆ, ಚಿತ್ರದಂತೆ.

ಭಾಷ್ಯ: *ತಲ್ಲಿಂಗಶರೀರಂ ತದೃತೇಽಧಿಷ್ಠಾನಂ ವಿನಾ ಸ್ವಾತಂತ್ರ್ಯಾತ್ ನ ತಿಷ್ಠತಿ । ಯಥಾ ಛಾಯಾ ನಿರಾಧಾರಾ ನ ತಿಷ್ಠತಿ ಇತ್ಯರ್ಥಃ । ತಥಾ ಚ ಸ್ಥೂಲದೇಹಂ ತ್ಯಕ್ತ್ವಾ ಲೋಕಾಂತರಗಮನಾಯ ಲಿಂಗದೇಹಸ್ಯಾಧಾರಭೂತಂ ಶರೀರಾಂತರಂ ಸಿದ್ಧ್ಯತೀತಿ ಭಾವಃ ।*

ಅನುವಾದ: ಆ ಲಿಂಗಶರೀರವು ಅಧಿಷ್ಠಾನವಿಲ್ಲದೆ ಸ್ವತಂತ್ರವಾಗಿ ನಿಲ್ಲಲಾರದು; ಆಧಾರವಿಲ್ಲದ ಛಾಯೆಯು ನಿಲ್ಲದಂತೆ ಎಂದರ್ಥ. ಹಾಗೆಯೇ ಸ್ಥೂಲದೇಹವನ್ನು ಬಿಟ್ಟು ಬೇರೆ ಲೋಕಕ್ಕೆ ಹೋಗಲು ಲಿಂಗದೇಹದ ಆಧಾರಭೂತವಾದ ಬೇರೆ ಶರೀರದ ಸಿದ್ಧಿಯಾಗುವುದು.

ಭಾಷ್ಯ: *ತಸ್ಯ ಚ ಸ್ವರೂಪಂ ಕಾರಿಕಾಯಾಮುಕ್ತಮ್ ।*

ಸೂಕ್ಷ್ಮಾ ಮಾತಾಪಿತೃಜಾಃ ಸಹಪ್ರಭೂತೈಸ್ತ್ರಿಧಾ ವಿಶೇಷಾಃ ಸ್ಯುಃ ।
ಸೂಕ್ಷ್ಮಾಸ್ತೇಷಾಂ ನಿಯತಾ ಮಾತಾಪಿತೃಜಾ ನಿವರ್ತಂತೇ ॥ ಕಾರಿಕಾ ೩೯ ॥

ಅನುವಾದ: ಕಾರಿಕೆಯಲ್ಲಿ ಅದರ ಸ್ವರೂಪವನ್ನು ಹೇಳಿದೆ. ಸೂಕ್ಷ್ಮ ಶರೀರ, ತಾಯಿ-ತಂದೆಯರಿಂದ ಪಡೆದದ್ದು, ಪಂಚಮಹಾಭೂತಗಳು ಹೀಗೆ ವಿಶೇಷಗಳು ಮೂರು. ಅವುಗಳಲ್ಲಿ ಸೂಕ್ಷ್ಮವು ನಿಯತ (ಸ್ಥಿರವಾದುದು), ತಾಯಿತಂದೆಯರಿಂದ ಪಡೆದದ್ದು (ಹಾಗೂ ಪಂಚಮಹಾಭೂತಗಳು) ಹಿಂದಿರುಗುತ್ತವೆ (ಸ್ಥಿರವಲ್ಲ).

ಭಾಷ್ಯ: *ಅತ್ರ ತನ್ಮಾತ್ರಕಾರ್ಯಂ ಮಾತಾಪಿತೃಜಶರೀರಾಪೇಕ್ಷಯಾ ಸೂಕ್ಷ್ಮಂ ಯದ್ ಭೂತಪಂಚಕಂ ಯಾವತ್ ಲಿಂಗಸ್ಥಾಯಿ ಪ್ರೋಕ್ತಂ, ತದೇವ ಲಿಂಗಾಧಿಷ್ಠಾನಂ ಶರೀರಮಿತಿ ಲಬ್ಧಂ ಕಾರಿಕಾಂತರೇಣ–*

ಅನುವಾದ: ಇಲ್ಲಿ ತನ್ಮಾತ್ರಗಳ ಕಾರ್ಯವು ತಾಯಿತಂದೆಗಳಿಂದ ಪಡೆದ ಶರೀರಕ್ಕಿಂತಲೂ ಸೂಕ್ಷ್ಮವು, ಲಿಂಗವು ಇರುವವರೆಗೆ ಇರುವುದು. ಅದನ್ನೇ ಲಿಂಗಾಧಿಷ್ಠಾನವಾದ ಶರೀರವೆಂದು ಮತ್ತೊಂದು ಕಾರಿಕೆಯಿಂದ ತಿಳಿದುಬರುತ್ತದೆ.

ಭಾಷ್ಯ: *ಚಿತ್ರಂಯಥಾಶ್ರಯಮೃತೇ ಸ್ಥಾಣ್ವಾದಿಭ್ಯೋ ವಿನಾ ಯಥಾ ಛಾಯಾ ।*
ತದ್ವದ್ವಿನಾ ವಿಶೇಷೈಃ ನ ತಿಷ್ಠತಿ ನಿರಾಶ್ರಯಂ ಲಿಂಗಮ್ ॥ ಕಾರಿಕಾ ೪೧ ॥

ಅನುವಾದ: ಹೇಗೆ ಚಿತ್ರವು ಆಶ್ರಯವಿಲ್ಲದೆ ಅಥವಾ ಛಾಯೆಯು ಸ್ಥಾಣುವಿಲ್ಲದೆ ಇರಲಾರವೋ ಹಾಗೆಯೇ ಸೂಕ್ಷ್ಮಶರೀರವು ವಿಶೇಷವಾದ ಶರೀರಗಳಿಲ್ಲದೆ ಇರಲಾರದು.

ಭಾಷ್ಯ: *ವಿಶೇಷೈಃ ಸ್ಥೂಲಭೂತೈಃ ಸೂಕ್ಷ್ಮಾಖ್ಯೈಃ । ಸ್ಥೂಲಾವಾಂತರಭೇದ್ಯೈರಿತಿ ಯಾವತ್ । ಅಸ್ಯಾಂ ಕಾರಿಕಾಯಾಂ ಸೂಕ್ಷ್ಮಾಖ್ಯಾನಾಂ ಸ್ಥೂಲಭೂತಾನಾಂ ಲಿಂಗಶರೀರಾದ್ಭೇದಾವಗಮನೇ, ಪೂರ್ವೋತ್ಪನ್ನಂ ಅಸಕ್ತಂ ನಿಯತಂ ಮಹದಾದಿಸೂಕ್ಷ್ಮಪರ್ಯಂತಂ (ಕಾ. ೪೦) ಇತ್ಯಾದಿ ಪೂರ್ವೋದಾಹೃತಕಾರಿಕಾಯಾಂ ಸೂಕ್ಷ್ಮಭೂತಪರ್ಯಂತಸ್ಯ ಲಿಂಗತ್ವಂ ನಾಽರ್ಥಃ, ಕಿಂತು ಮಹದಾದಿರೂಪಂ ಯಲ್ಲಿಂಗಂ ತತ್ ಸ್ವಾಧಾರಸೂಕ್ಷ್ಮಪರ್ಯಂತಂ ಸಂಸರತಿ । ತೇನ ಸಹ ಸಂಸರತೀತ್ಯರ್ಥಃ ।*

ಅನುವಾದ: ವಿಶೇಷೈಃ – ವಿಶೇಷವೆಂದು ಕರೆಯಲ್ಪಡುವ ಸೂಕ್ಷ್ಮರೂಪದ ಸ್ಥೂಲಭೂತಗಳು; ಸ್ಥೂಲದ ಒಂದು ಭೇದವೆಂದು ಹೇಳಬಹುದಾದದ್ದು. ಈ ಕಾರಿಕೆಯಲ್ಲಿ ಸೂಕ್ಷ್ಮವೆಂದು ಕರೆಯುವ ಸ್ಥೂಲಭೂತಗಳ ಲಿಂಗಶರೀರದಿಂದ ಭೇದವನ್ನು ತಿಳಿದಾಗ 'ಸೃಷ್ಟಿಯ ಸಮಯದಲ್ಲಿ, ಸಂಗರಹಿತವಾದ, ನಿತ್ಯವಾದ ಮಹತ್ತೇ ಮೊದಲಾಗಿ ಸೂಕ್ಷ್ಮಭೂತಗಳವರೆಗೆ' (ಕಾ. ೪೦) ಎಂದು ಮೊದಲೇ ಉದಾಹೃತವಾದ ಕಾರಿಕೆಯಲ್ಲಿ ಸೂಕ್ಷ್ಮಭೂತದವರೆಗೆ ಲಿಂಗತ್ವ ಎಂಬರ್ಥವಲ್ಲ. ಆದರೆ ಮಹದಾದಿ ರೂಪದ ಲಿಂಗವೇ ತನ್ನ ಆಧಾರಭೂತವಾದ ಸೂಕ್ಷ್ಮದವರೆಗೆ ಸಂಸಾರದಲ್ಲಿರುತ್ತದೆ.

ವಿವರಣೆ: ಇಲ್ಲಿ ಶರೀರವನ್ನು ಸ್ಥೂಲ ಮತ್ತು ಸೂಕ್ಷ್ಮ ಎಂದು ಎರಡು ಬಗೆಯಾಗಿ ವಿಂಗಡಿಸಲಾಗಿದೆ; ಸೂಕ್ಷ್ಮ ಎಂದರೆ ತನ್ಮಾತ್ರವಲ್ಲ.

ಭಾಷ್ಯ: *ನನ್ವೇವಂ ಲಿಂಗಘಟಕಪದಾರ್ಥಾಃ ಕಿಯಂತ ಇತಿ ಕಥಂ ಅವಧಾರ್ಯಮಿತಿ ಚೇತ್ ।*

ವಾಸನಾ ಭೂತಸೂಕ್ಷ್ಮಂ ಚ ಕರ್ಮವಿದ್ಯೇ ತಥೈವ ಚ ।
ದಶೇಂದ್ರಿಯಂ ಮನೋಬುದ್ಧಿರೇತಲ್ಲಿಂಗಂ ವಿದುರ್ಬುಧಾ ॥
ಯೋ.ವಾ. ೬.೧೨೮. ೧೮–೧೯

ಇತಿ ವಾಸಿಷ್ಠಾದಿವಾಕ್ಯೇಭ್ಯಃ । ಅತ್ರ ಲಿಂಗಶರೀರಪ್ರತಿಪಾದನೇನೈವ ಪುರ್ಯಷ್ಟಕಮಪಿ ವ್ಯಾಖ್ಯೇಯಮಿತ್ಯಾಶಯೇನ ಬುದ್ಧಿಧರ್ಮಾಣಾಂ ಅಪಿ ವಾಸನಾಕರ್ಮವಿದ್ಯಾನಾಂ ಪೃಥಗುಪನ್ಯಾಸಃ । ಭೂತಸೂಕ್ಷ್ಮಂ ಚಾತ್ರ ತನ್ಮಾತ್ರದಶೇಂದ್ರಿಯಾಣಿ ಚ ಜ್ಞಾನಕರ್ಮೇಂದ್ರಿಯಭೇದೇನ ಪುರದ್ವಯಮಿತ್ಯಾಶಯಃ ।

ಅನುವಾದ: ಹಾಗಾದರೆ ಲಿಂಗಘಟಕ ಪದಾರ್ಥಗಳೆಷ್ಟು? ಅವುಗಳನ್ನು ನಿರ್ಧರಿಸುವ ಬಗೆ ಹೇಗೆ?

'ವಾಸನಾ' ಭೂತಸೂಕ್ಷ್ಮ, ಕರ್ಮ, ವಿದ್ಯೆ, ಹತ್ತು ಇಂದ್ರಿಯಗಳು, ಮನಸ್ಸು, ಬುದ್ಧಿ; ಇವುಗಳನ್ನು ವಿದ್ವಾಂಸರು ಲಿಂಗವೆನ್ನುವರು.'

ಮುಂತಾಗಿ ವಾಸಿಷ್ಠಾದಿವಾಕ್ಯಗಳಿವೆ. ಇಲ್ಲಿ ಲಿಂಗಶರೀರದ ಪ್ರತಿಪಾದನೆಯಿಂದಲೇ ಪುರ್ಯಷ್ಟಕವೂ ವ್ಯಾಖ್ಯಾನ ಮಾಡತಕ್ಕದ್ದು ಎಂಬ ಆಶಯದಿಂದ ಬುದ್ಧಿಧರ್ಮಗಳ ವಾಸನಾ, ಕರ್ಮ, ವಿದ್ಯೆ ಇವುಗಳನ್ನು ಬೇರೆಯ ಕಡೆ ಹೇಳಿದೆ. ಭೂತಸೂಕ್ಷ್ಮವೂ ತನ್ಮಾತ್ರ, ದಶೇಂದ್ರಿಯಗಳು, ಜ್ಞಾನ ಮತ್ತು ಕರ್ಮೇಂದ್ರಿಯಗಳೆಂಬ ಭೇದದಿಂದ ಪುರದ್ವಯವೆಂದು ತಿಳಿಯಬೇಕು.

ವಿವರಣೆ: ಪುರ್ಯಷ್ಟಕಗಳು– 'ಮನಸ್ಸು, ಬುದ್ಧಿ, ಅಹಂಕಾರ, ಐದು ತನ್ಮಾತ್ರಗಳು' ಎಂದು ಯೋಗವಾಸಿಷ್ಠದಲ್ಲಿ ಹೇಳಿದೆ. (೬.೫೧.೫೦)

ಭಾಷ್ಯ: *ಯತ್ತು ಮಾಯಾವಾದಿನೋ ಲಿಂಗಶರೀರಸ್ಯ ತನ್ಮಾತ್ರಸ್ಥಾನೇ ಪ್ರಾಣಾದಿಪಂಚಕಂ ಪ್ರಕ್ಷಿಪಂತಿ, ಪುರ್ಯಷ್ಟಕಂ ಚಾನ್ಯಥಾ ಕಲ್ಪಯಂತಿ, ತದಪ್ರಾಮಾಣಿಕಮಿತಿ ।*

ಅನುವಾದ: ಮಾಯಾವಾದಿಗಳು ಲಿಂಗಶರೀರದ ತನ್ಮಾತ್ರಸ್ಥಾನದಲ್ಲಿ ಪ್ರಾಣಾದಿ ಪಂಚಕಗಳನ್ನು ತೆಗೆದುಹಾಕಿ ಪುರ್ಯಷ್ಟಕವನ್ನು ಬೇರೆಯ ರೀತಿಯಲ್ಲಿ ಕಲ್ಪಿಸುತ್ತಾರೆ, ಆದರೆ ಅದಕ್ಕೆ ಪ್ರಮಾಣವಿಲ್ಲ.

ಭಾಷ್ಯ: *ನನು ಮೂರ್ತದ್ರವ್ಯತಯಾ ವಾಯ್ವಾದೇರಿವ ಲಿಂಗಸ್ಯ ಆಕಾಶಮೇವ ಅಸಂಗೇ ಅನಾಧಾರೋಽಸ್ತು, ವ್ಯರ್ಥಮನ್ಯತ್ರ ಸಂಗಕಲ್ಪನಮಿತಿ ।*

ಸೂತ್ರ: **ಮೂರ್ತತ್ವೇಽಪಿ ನ ಸಂಘಾತಯೋಗಾತ್ ತರಣಿವತ್ ॥ ೧೩ ॥**

ಅನುವಾದ: ವಾಯ್ವಾದಿಗಳಿಗೆ ಸಮಾನವಾದ ಲಿಂಗವೂ ಮೂರ್ತದ್ರವ್ಯ ವಾಗಿರುವುದರಿಂದ ಅದು ಅಸಂಗವಾಗಿರುವ ಕಾರಣ ಅದಕ್ಕೆ ಆಕಾಶವೇ ಆಧಾರವೇಕಾಗಬಾರದು, ಅಲ್ಲದೆ ಬೇರೆಯ ಸಂಗದ ಕಲ್ಪನೆಯು ವ್ಯರ್ಥವಾಗುವುದು.

ಸೂತ್ರಾನುವಾದ: ಮೂರ್ತವಾದರೂ ಸೂರ್ಯನಂತೆ (ಸಂಗದ ಅನುಮಾನ ಮಾಡುವುದರಿಂದ) ಲಿಂಗವೂ ಸಂಗವಿಲ್ಲದೆ ಇರಲಾರದು.

ಭಾಷ್ಯ: *ಮೂರ್ತತ್ವೇಽಪಿ ನ ಸ್ವಾತಂತ್ರ್ಯಾದಸಂಗತಯಾ ಅವಸ್ಥಾನಂ ಪ್ರಕಾಶರೂಪತ್ವೇನ ಸೂರ್ಯಸ್ಯೇವ ಸಂಘಾತಸಂಗಾನುಮಾನಾತ್ ಇತ್ಯರ್ಥಃ । ಸೂರ್ಯಾದೀನಿ ಸರ್ವಾಣಿ ತೇಜಾಂಸಿ ಪಾರ್ಥಿವದ್ರವ್ಯ-ಸಂಗೇನ ಏವ ಅವಸ್ಥಿತಾನಿ ದೃಶ್ಯಂತೇ । ಲಿಂಗಂ ಚ ಸತ್ತ್ವಪ್ರಕಾಶಮಯ ಮತೋ ಭೂತಸಂಗತಮಿತಿ ।*

ಅನುವಾದ: ಮೂರ್ತತ್ವವಿದ್ದರೂ ಸ್ವತಂತ್ರವಾಗಿ ಸಂಗರಹಿತವಾಗಿ ಲಿಂಗವು ಇರಲಾರದು. ಪ್ರಕಾಶರೂಪದ ಕಾರಣ ಸೂರ್ಯನಂತೆ ಸಂಗವನ್ನು ಅನುಮಾನದಿಂದ ತಿಳಿಯ ಬಹುದು. ಸೂರ್ಯನೇ ಮೊದಲಾದ ಎಲ್ಲ ತೇಜಸ್ಸುಗಳೂ ಪಾರ್ಥಿವದ್ರವ್ಯದೊಡನೆ ಸಂಬಂಧವನ್ನು ಪಡೆದು ಇರುವಂತೆ ಕಾಣುತ್ತವೆ. ಲಿಂಗವಾದರೋ ಸತ್ತ್ವಪ್ರಕಾಶಮಯ. ಆದ್ದರಿಂದ ಭೂತಗಳೊಡನೆ ಸಂಬಂಧ ಸರಿಯಾದುದೇ.

ಭಾಷ್ಯ: *ಲಿಂಗಸ್ಯ ಪರಿಮಾಣಮವಧಾರಯತಿ ।*

ಅನುವಾದ: ಲಿಂಗದ ಪರಿಮಾಣವನ್ನು ನಿರ್ಧರಿಸುತ್ತಾರೆ.

ಸೂತ್ರ: ಅಣುಪರಿಮಾಣಂ ತತ್ ಕೃತಿಶ್ರುತೇಃ ॥ ೧೪ ॥

ಸೂತ್ರಾನುವಾದ: ಅದು (ಲಿಂಗಶರೀರವು) ಅಣುಪರಿಮಾಣವನ್ನು ಹೊಂದಿರುತ್ತದೆ, ಏಕೆಂದರೆ ಅದರಲ್ಲಿ ಕ್ರಿಯೆಯು ತಿಳಿದುಬರುತ್ತದೆ.

ಭಾಷ್ಯ: *ತಲ್ಲಿಂಗಮಣುಪರಿಮಾಣಂ ಪರಿಚ್ಛಿನ್ನಂ ನ ತ್ವತ್ಯಂತಮೇವಾಣು । ಸಾವಯವಸ್ತ್ವೋಕ್ತತ್ವಾತ್ । ಕುತಃ? ಕೃತಶ್ರುತೇಃ ಕ್ರಿಯಾಶ್ರುತೇಃ 'ವಿಜ್ಞಾನಂ ಯಜ್ಞಂ ತನುತೇ ಕರ್ಮಾಣಿ ತನುತೇಽಪಿ ಚ' (ತೈ.ಉ. ೧೫) ಇತ್ಯಾದಿ ಶ್ರುತೇರ್ವಿಜ್ಞಾನಾಖ್ಯಬುದ್ಧಿಪ್ರಧಾನತಯಾ ।*

ಅನುವಾದ: ಆ ಲಿಂಗವು ಬೇರ್ಪಟ್ಟಾಗ ಅಣುಪರಿಮಾಣವುಳ್ಳದಾಗಿ ಇರುತ್ತದೆ, ಅದು ಅತ್ಯಂತ ಅಣುವೇನಲ್ಲ ಏಕೆಂದರೆ ಅದನ್ನು ಸಾವಯವವೆಂದು ಹೇಳಲಾಗಿದೆ. ಏಕೆ? ಅದು ಕೃತಿಶೃತಿ ಎಂದರೆ ಅದರ ಕ್ರಿಯೆಯನ್ನು ಕುರಿತು ಹೇಳಲಾಗಿದೆ. 'ಲಿಂಗವು ಯಜ್ಞವನ್ನು ಪ್ರಚುರಪಡಿಸುತ್ತದೆ. ಹಾಗೆಯೇ ಕರ್ಮಗಳನ್ನೂ ಕೂಡ'. ಇತ್ಯಾದಿ ಶ್ರುತಿಯ ವಿಜ್ಞಾನವೆಂಬ ಬುದ್ಧಿಯ ಪ್ರಾಧಾನ್ಯವನ್ನೂ ಕೂಡ.

ಭಾಷ್ಯ: *ವಿಜ್ಞಾನಸ್ಯ ಲಿಂಗಸ್ಯ ಅಖಿಲಕರ್ಮಶ್ರವಣಾದಿತ್ಯರ್ಥಃ । ವಿಭುತ್ವೇಸತಿ ಕ್ರಿಯಾ ನ ಸಂಭವತಿ । ಸದ್ಗತಿಶ್ರುತೇರಿತಿ ಪಾಠಸ್ತು ಸಮೀಚೀನಃ ।*

ಲಿಂಗಶರೀರಸ್ಯ ಚ ಗತಿಶ್ರುತಿಃ 'ತಮುತ್ಕ್ರಾಮಂತಂ ಪ್ರಾಣೋಽನೂತ್ಕ್ರಾಮತಿ ಪ್ರಾಣಮನೂತ್ಕ್ರಾಮಂತಂ ಸರ್ವೇ ಪ್ರಾಣಾ ಅನೂತ್ಕ್ರಾಮಂತಿ ಸವಿಜ್ಞಾನೋಭವತಿ ಸವಿಜ್ಞಾನಮೇವ ಅನ್ವವಕ್ರಾಮತಿ' । (ಬೃ.ಉ. ೪.೪.೨) ಇತಿ । ಸವಿಜ್ಞಾನೋ ಬುದ್ಧಿಸಹಿತ ಏವ ಜಾಯತೇ । ಸವಿಜ್ಞಾನಂ ಯಥಾ ಸ್ಯಾತ್ ತಥಾ ಸಂಸರತಿ ಚೇತ್ಯರ್ಥಃ ।

ಅನುವಾದ: ವಿಜ್ಞಾನದ ಎಂದರೆ ಲಿಂಗದ ಅಖಿಲ ಕರ್ಮಗಳನ್ನು ಎಂದು ಕೇಳಿರುವುದರಿಂದ ಎಂದರ್ಥ. ಈ ಲಿಂಗವು ವಿಭುವೆಂದು ಪರಿಗಣಿಸಿದಾಗ ಕ್ರಿಯೆಯು ಸಂಭವಿಸುವುದಿಲ್ಲ. 'ತದ್ಗತಿಶ್ರುತೇಃ' (ಲಿಂಗಶರೀರದ ಚಲನೆಯನ್ನು ಕೇಳಿರುವುದರಿಂದ) ಎಂಬ ಪಾಠವೇ ಸರಿಯಾದುದು. ಲಿಂಗಶರೀರದ ಗತಿಶ್ರುತಿಯು 'ಲಿಂಗದ ಉತ್ಕ್ರಮಣ ಮಾಡುವಾಗ ಅದರೊಡನೆ ಪ್ರಾಣದ ಉತ್ಕ್ರಮಣವಾಗುತ್ತದೆ. ಪ್ರಾಣದ ಉತ್ಕ್ರಮಣವಾಗುವಾಗ ಎಲ್ಲಾ ಪ್ರಾಣಗಳೂ (ಇಂದ್ರಿಯ ವರ್ಗವೂ) ಉತ್ಕ್ರಮಣವಾಗುತ್ತವೆ. ಆಗ ಅವು ಬುದ್ಧಿಸಹಿತವಾಗಿ ಉತ್ಕ್ರಮಣ ಮಾಡುತ್ತವೆ. 'ಸವಿಜ್ಞಾನಃ' ಎಂದರೆ ಬುದ್ಧಿಸಹಿತವಾಗಿ ಎಂದರ್ಥ. 'ಸವಿಜ್ಞಾನಂ' ಎಂದರೆ ಬುದ್ಧಿಯೊಡನೆ ಇರುವ ರೀತಿಯಲ್ಲಿ ಸಂಸಾರದಲ್ಲಿ ಇರುತ್ತದೆ.

ಭಾಷ್ಯ: *ಪರಿಚ್ಛಿನ್ನತ್ವೇ ಯುಕ್ತ್ಯಂತರಮಾಹ ।*

ಸೂತ್ರ: ತದನ್ನಮಯತ್ವಶ್ರುತೇಶ್ಚ ॥ ೧೫ ॥

ಅನುವಾದ: ಲಿಂಗಶರೀರವು ಇಷ್ಟು ಎಂದು ನಿರ್ಧರಿಸಲು ಬೇರೊಂದು ಯುಕ್ತಿಯನ್ನು ಹೇಳಲಾಗಿದೆ.

ಸೂತ್ರಾನುವಾದ: ಅಲ್ಲದೆ ಲಿಂಗಶರೀರವು ಅನ್ನಮಯವೆಂದು ಶ್ರುತಿ(ಪ್ರಮಾಣ)ಯಿಂದ ತಿಳಿಯುತ್ತದೆ.

ಭಾಷ್ಯ: *ತಸ್ಯ ಲಿಂಗಸ್ಯ ಏಕದೇಶತೋ ಅನ್ನಮಯತ್ವಶ್ರುತೇಃ ನ ವಿಭುತ್ವಂ ಸಂಭವತಿ ಇತಿ । ವಿಭುತ್ವೇ ನಿತ್ಯಾಪತ್ತೇರಿತ್ಯರ್ಥಃ । ಸಾ ಚ ಶ್ರುತಿಃ ಹಿ 'ಅನ್ನಮಯಂ ಹಿ ಸೋಮ್ಯ ಮನ ಆಪೋಮಯಃ ಪ್ರಾಣಸ್ತೇಜೋಮಯೀ ವಾಕ್' ಇತ್ಯಾದಿಃ (ಛಾಂ.ಉ. ೬.೫.೪) ಯದ್ಯಪಿ ಮನ ಆದೀನಿ ನ ಭೌತಿಕಾನಿ ತಥಾಪ್ಯನ್ನಸಂಸೃಷ್ಟಸಜಾತೀಯಾಂಶಪೂರಣಾದನ್ನ–। ಮಯತ್ವಾದಿವ್ಯವಹಾರೋ ಬೋಧ್ಯಃ ।*

ಅನುವಾದ: ಆ ಲಿಂಗಶರೀರದ ಒಂದು ಘಟಕವು ಅನ್ನಮಯವಾಗಿ ಇರುವುದನ್ನು ಕೇಳುವುದರಿಂದ, ವಿಭುತ್ವವು ಸಾಧ್ಯವಿಲ್ಲ ಎಂಬುದು ಸ್ಪಷ್ಟಪಡುತ್ತದೆ. ಶ್ರುತಿಯಾದರೋ, ಸೋಮ್ಯ, ಮನಸ್ಸು ಅನ್ನಮಯವಾದುದು, ಪ್ರಾಣವು ಆಪೋಮಯವಾದುದು, ವಾಕ್ ತೇಜೋಮಯವಾದುದು. ಮನಸ್ಸೇ ಮುಂತಾದುವು ಭೌತಿಕವಲ್ಲದಿದ್ದರೂ

ಅನ್ನದಿಂದ ಪುಷ್ಟವಾದ ಸಜಾತೀಯ ಅಂಶವು ತುಂಬುವುದರಿಂದ ಅನ್ನಮಯಾದಿ ವ್ಯವಹಾರವೆಂದು ತಿಳಿಯಬೇಕು.

ಭಾಷ್ಯ: *ಅಚೇತನಾನಾಂ ಲಿಂಗಾನಾಂ ಕಿಮರ್ಥಂ ಸಂಸೃತೇಃ ದೇಹಾ-ದ್ದೇಹಾಂತರಸಂಚಾರ ಇತ್ಯಾಶಂಕಾಯಾಮಾಹ ।*

ಸೂತ್ರ: ಪುರುಷಾರ್ಥಂ ಸಂಸೃತಿರ್ಲಿಂಗಾನಾಂ ಸೂಪಕಾರವದ್ರಾಜ್ಞಃ ॥ ೧೬ ॥

ಅನುವಾದ: ಅಚೇತನವಾದ ಲಿಂಗವು ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹೋಗುವುದಾದರೂ ಹೇಗೆ? ಎಂಬ ಶಂಕೆಗೆ ಉತ್ತರ ಹೇಳಿದೆ-

ಸೂತ್ರಾನುವಾದ: ಲಿಂಗಗಳ (ಸೂಕ್ಷ್ಮಶರೀರಗಳ) ಚಲನೆಯು ಚೇತನನ ಸಲುವಾಗಿ ಆಗುತ್ತದೆ, ರಾಜನಿಗೆ ಅಡಿಗೆಯವರು ಇದ್ದಂತೆ.

ಭಾಷ್ಯ: *ಯಥಾ ರಾಜ್ಞಃ ಸೂಪಕಾರಾಣಾಂ ಪಾಕಶಾಲಾಸು ಸಂಚಾರೋ ರಾಜಾರ್ಥಂ, ತಥಾ ಲಿಂಗಶರೀರಾಣಾಂ ಸಂಸೃತಿಃ ಪುರುಷಾರ್ಥಂ ಇತ್ಯರ್ಥಃ ।*

ಅನುವಾದ: ಹೇಗೆ ರಾಜನ ಅಡಿಗೆಯವರು ಪಾಕಶಾಲೆಗಳಲ್ಲಿ ರಾಜನ ಸಲುವಾಗಿ ಸಂಚಾರ ಮಾಡುವರೋ ಹಾಗೆಯೇ ಲಿಂಗಶರೀರಗಳು ಪುರುಷನ ಸಲುವಾಗಿ ಚಲಿಸುವುವು.

ಭಾಷ್ಯ: *ಲಿಂಗಶರೀರಂ ಅಶೇಷವಿಶೇಷತೋ ವಿಚಾರಿತಮ್, ಇದಾನೀಂ ಸ್ಥೂಲಶರೀರಮಪಿ ತಥಾ ವಿಚಾರಯತಿ ।*

ಅನುವಾದ: ಲಿಂಗಶರೀರವನ್ನು ಸಂಪೂರ್ಣವಾಗಿ ಮತ್ತು ವಿಶೇಷವಾಗಿ ವಿಚಾರ ಮಾಡಿದ್ದಾಯಿತು. ಈಗ ಸ್ಥೂಲಶರೀರವನ್ನೂ ಹಾಗೆಯೇ ವಿಚಾರ ಮಾಡುವರು.

ಸೂತ್ರ: ಪಾಂಚಭೌತಿಕೋ ದೇಹಃ ॥ ೧೭ ॥

ಸೂತ್ರಾರ್ಥ: ಸ್ಥೂಲಶರೀರವು ಐದು ಭೂತಗಳಿಂದ ನಿರ್ಮಿತವಾಗಿದೆ.

ಭಾಷ್ಯ: *ಪಂಚಾನಾಂ ಭೂತಾನಾಂ ಮಿಲಿತಾನಾಂ ಪರಿಣಾಮೋ ದೇಹ ಇತ್ಯರ್ಥಃ।*

ಅನುವಾದ: ಐದು ಭೂತಗಳೂ ಸೇರಿ ದೇಹ ಉಂಟಾಗಿರುವುದು.

ಭಾಷ್ಯ: *ಮತಾಂತರಮಾಹ- ಬೇರೆ ಅಭಿಪ್ರಾಯ ಹೀಗಿದೆ.*

ಸೂತ್ರ: ಚಾತುರ್ಭೌತಿಕಮಿತ್ಯೇಕೇ ॥ ೧೮ ॥

ಸೂತ್ರಾನುವಾದ: ಕೆಲವು (ಸಿದ್ಧಾಂತಿಗಳು) (ಈ ಸ್ಥೂಲದೇಹವು) ನಾಲ್ಕು ಭೂತಗಳಿಂದ ಆಗಿವೆ (ಎಂದು ಅಭಿಪ್ರಾಯಪಡುತ್ತಾರೆ.)

ಭಾಷ್ಯ: *ಆಕಾಶಸ್ಯ ಅನಾರಂಭಕತ್ವಂ ಅಭಿಪ್ರೇತ್ಯ ಇದಮ್ ।*

ಅನುವಾದ: ಆಕಾಶವು ಈ ಉತ್ಪಾದಕತೆಯಲ್ಲಿ ಇಲ್ಲ ಎಂದು ಅಭಿಪ್ರಾಯಪಟ್ಟು ಹೀಗೆ ಹೇಳಿದ್ದಾರೆ.

ಸೂತ್ರ: ಐಕಭೌತಿಕಮಿತ್ಯಪರೇ ॥ ೧೯ ॥

ಸೂತ್ರಾರ್ಥ: ಇನ್ನಿತರರು (ಸ್ಥೂಲದೇಹವು) ಒಂದೇ ಭೂತದಿಂದಾಗಿದೆ (ಎಂದಿದ್ದಾರೆ).

ಭಾಷ್ಯ: *ಪಾರ್ಥಿವಮೇವ ಶರೀರಮನ್ಯಾನಿ ಚ ಭೂತಾನಿ ಉಪಷ್ಟಂಭಕ–ಮಾತ್ರಾಣಿ ಇತಿ ಭಾವಃ । ಅಥವಾ ಐಕಭೌತಿಕಂ ಏಕೈಕಭೌತಿಕ–ಮಿತ್ಯರ್ಥಃ । ಮನುಷ್ಯಾದಿಶರೀರೇಪಾರ್ಥಿವಾಂಶಾಧಿಕ್ಯೇನ ಪಾರ್ಥಿವತಾ ಸೂರ್ಯಾದಿಲೋಕೇಷು ಚ ತೇಜಃ ಆದ್ಯಾಧಿಕ್ಯೇನ ತೈಜಸಾದಿತಾ ಶರೀರಾಣಾಂ ಸುವರ್ಣಾದೀನಾಂ ಇವ ಇತಿ ಇಮಮೇವ ಪಕ್ಷಂ ಪಂಚಮಾಧ್ಯಾಯೇಽಪಿ ಸಿದ್ಧಾಂತಯಿಷ್ಯತಿ ।*

ಅನುವಾದ: ಈ ಸ್ಥೂಲಶರೀರ ಪೃಥಿವೀತತ್ತ್ವದಿಂದ ಉಂಟಾಯಿತು, ಉಳಿದ ತತ್ತ್ವಗಳು ಕೇವಲ ಆಶ್ರಯ ನೀಡುವಂತಹವು ಅಥವಾ 'ಐಕಭೌತಿಕಂ' ಎಂದರೆ ಒಂದೊಂದು ಭೂತದಿಂದ ಈ ದೇಹ ನಿರ್ಮಾಣವಾಗಿದೆ. ಅಥವಾ ಒಂದೇ ಭೂತದಿಂದ ನಿರ್ಮಾಣವಾಗಿದೆ. ಮನುಷ್ಯರೇ ಮೊದಲಾದವರ ಶರೀರವು ಪೃಥಿವೀ ಅಂಶವೇ ಅಧಿಕವಾಗಿರುವುದರಿಂದ ಪಾರ್ಥಿವತೆಯನ್ನು ಹೊಂದಿರುತ್ತವೆ. ಹಾಗೆಯೇ ಸೂರ್ಯಾದಿ ಲೋಕಗಳಲ್ಲಿ ತೇಜಸ್ಸಿನ ಆಧಿಕ್ಯದಿಂದ ತೈಜಸದೇಹಗಳ ಸೃಷ್ಟಿಯಾಗುತ್ತದೆ; ಚಿನ್ನವೇ ಮೊದಲಾದುವುಗಳಂತೆ ಇರುತ್ತವೆ ಎಂಬ ಪಕ್ಷವನ್ನು ಪಂಚಮಾಧ್ಯಾಯದಲ್ಲೂ ಸಿದ್ಧಾಂತ ಮಾಡುವರು.(೫.೧೦೨, ೧೦೩, ೧೧೧, ೧೧೩)

ಭಾಷ್ಯ: *ದೇಹಸ್ಯ ಭೌತಿಕತ್ವೇನ ಯತ್ಸಿಧ್ಯತಿ ತದಾಹ–*

ಸೂತ್ರ: ನ ಸಾಂಸಿದ್ಧಿಕಂ ಚೈತನ್ಯಂ ಪ್ರತ್ಯೇಕಾದೃಷ್ಟೇಃ ॥ ೨೦ ॥

ಅನುವಾದ: ದೇಹವು ಭೌತಿಕ ಎಂಬುದಕ್ಕೆ ಏನು ಪ್ರಯೋಜನ ಸಿದ್ಧವಾಗುವುದು?

ಸೂತ್ರಾನುವಾದ: ಪ್ರತ್ಯೇಕವಾಗಿ (ಚೈತನ್ಯವು) ಕಾಣದಿರುವುದರಿಂದ ಚೈತನ್ಯವನ್ನು (ಪಂಚಭೂತಗಳಿಂದಾದ) ಸ್ವಾಭಾವಿಕ ಉತ್ಪತ್ತಿ ಎಂದು ಹೇಳಲಾಗದು.

ಭಾಷ್ಯ: *ಭೂತೇಷು ಪೃಥಕ್ ಕೃತೇಷು ಚೈತನ್ಯಾದರ್ಶನಾತ್ ಭೌತಿಕಸ್ಯ ದೇಹಸ್ಯ ನ ಸ್ವಾಭಾವಿಕಂ ಚೈತನ್ಯಂ, ಕಿಂತು ಔಪಾಧಿಕಮಿತ್ಯರ್ಥಃ ।*

ಅನುವಾದ: ಭೂತಗಳನ್ನು ಬೇರೆ ಬೇರೆ ಮಾಡಿದಾಗಲೂ ಚೈತನ್ಯವು ಕಾಣದಿರುವುದರಿಂದ ಭೌತಿಕವಾದ ದೇಹಕ್ಕೆ ಚೇತನವು ಸ್ವಾಭಾವಿಕವಲ್ಲ. ಆದರೆ ಅದು ಔಪಾಧಿಕವಷ್ಟೆ.

ವಿವರಣೆ: ಪ್ರತಿಯೊಂದು ದೇಹದಲ್ಲೂ ಚೇತನವಿದ್ದರೂ ಅದು ಗೋಚರವಾಗುವುದಿಲ್ಲ.

ಭಾಷ್ಯ: *ಬಾಧಕಾಂತರಮಾಹ–*

ಅನುವಾದ: ಇನ್ನೊಂದು ಬಾಧಕವೇನೆಂದು ಹೇಳಿದೆ–

ಸೂತ್ರ: ಪ್ರಪಂಚಮರಣಾದಭಾವಶ್ಚ ॥ ೨೧ ॥

ಸೂತ್ರಾನುವಾದ: ಅಲ್ಲದೆ ಸಮಸ್ತ ಜಗತ್ತು ಮರಣಾದಿಗಳಿಲ್ಲದೆ ಹೋಗುವುದು.

ಭಾಷ್ಯ: *ಪ್ರಪಂಚಸ್ಯ ಸರ್ವಸ್ಯೈವ ಮರಣಸುಷುಪ್ತ್ಯಾದಭಾವಶ್ಚ ದೇಹಸ್ಯ ಸ್ವಾಭಾವಿಕಚೈತನ್ಯೇ ಸತಿ ಸ್ಯಾದಿತ್ಯರ್ಥಃ । ಮರಣ–ಸುಷುಪ್ತ್ಯಾದಿಕಂ ಹಿ ದೇಹಸ್ಯ ಅಚೇತನತಾ । ಸಾ ಚ ಸ್ವಾಭಾವಿಕಚೈತನ್ಯೇ ಸತಿ ನೋಪಪದ್ಯತೇ। ಸ್ವಭಾವಸ್ಯ ಯಾವದ್ದ್ರವ್ಯಭಾವಿತ್ವಾದಿತಿ ।*

ಅನುವಾದ: ದೇಹದಲ್ಲಿ ಸ್ವಾಭಾವಿಕವಾಗಿ ಚೈತನ್ಯವಿದ್ದಲ್ಲಿ ಸಮಸ್ತ ಪ್ರಪಂಚದಲ್ಲಿ ಮರಣ–ಸುಷುಪ್ತಿ ಮುಂತಾದುವುಗಳು ಇರುವುದಿಲ್ಲ. ದೇಹದ ಜಡತ್ವ ಮರಣ–ಸುಷುಪ್ತಿಗಳಲ್ಲಿ ತೋರುತ್ತದೆ. ಅಚೇತನತೆಯು ಸ್ವಾಭಾವಿಕವಾದ ಚೈತನ್ಯವಿದ್ದಲ್ಲಿ ತೋರದು. ಏಕೆಂದರೆ ಸ್ವಭಾವವು ದ್ರವ್ಯವಿರುವವರೆಗೆ ಮಾತ್ರ ಇದ್ದೀತು.

ಭಾಷ್ಯ: *ಪ್ರತ್ಯೇಕಾದೃಷ್ಟೇರಿತಿ ಯದುಕ್ತಂ, ತತ್ರಾಶಂಕ್ಯ ಪರಿಹರತಿ ।*

ಸೂತ್ರ: ಮದಶಕ್ತಿವಚ್ಚೇತ್ ಪ್ರತ್ಯೇಕಪರಿದೃಷ್ಟೇ ಸಾಂಹಿತ್ಯೇ ತದುದ್ಭವಃ ॥ ೨೨ ॥

ಅನುವಾದ: ಮಾದಕಶಕ್ತಿಯಂತೆ (ಚೈತನ್ಯ) ಇದ್ದಲ್ಲಿ ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಆ ದ್ರವ್ಯಗಳು ಸೇರಿ ಆ ಮಾದಕಶಕ್ತಿಯು ಉದ್ಭವಿಸುತ್ತದೆ.

ಭಾಷ್ಯ: *ನನು ಯಥಾ ಮಾದಕಶಕ್ತಿ ಪ್ರತ್ಯೇಕದ್ರವ್ಯಾವೃತ್ತಿಃ ಅಪಿ ಮಿಲಿತದ್ರವ್ಯೇ ವರ್ತತೇ, ಏವಂ ಚೈತನ್ಯಮಪಿ ಸ್ಯಾದಿತಿ ಚೇನ್ನ । ಪ್ರತ್ಯೇಕಪರಿದೃಷ್ಟೇ ಸತಿ ಸಾಂಹಿತ್ಯೇ ತದುದ್ಭವಃ ಸಂಭವೇತ್ । ಪ್ರಕೃತೇ ತು ಪ್ರತ್ಯೇಕಪರಿ–ದೃಷ್ಟತ್ವಂ ನಾಸ್ತಿ । ಅತಃ ದೃಷ್ಟಾಂತೇ ಪ್ರತ್ಯೇಕಂ ಶಾಸ್ತ್ರಾದಿಭಿಃ ಸೂಕ್ಷ್ಮತಯಾ ಮಾದಕತ್ವೇ ಸಿದ್ಧೇ ಸಂಹತಭಾವಕಾಲೇ ಮಾದಕತ್ವಾವಿರ್ಭಾವಮಾತ್ರಂ ಸಿಧ್ಯತಿ । ದಾರ್ಷ್ಟಾಂತಿಕೇ ತು ಪ್ರತ್ಯೇಕಭೂತೇಷು ಸೂಕ್ಷ್ಮತಯಾ ನ ಕೇನಾಪಿ ಪ್ರಮಾಣೇನ ಚೈತನ್ಯಂ ಸಿದ್ಧಮಿತ್ಯರ್ಥಃ ।*

ಅನುವಾದ: ಮಾದಕಶಕ್ತಿಯು ಹೇಗೆ ಪ್ರತ್ಯೇಕದ್ರವ್ಯದಲ್ಲಿಲ್ಲದಿದ್ದರೂ ಒಟ್ಟು ಸೇರಿದಾಗ (ಅದರ ಪ್ರಭಾವವಿರುವಂತೆ) ಚೈತನ್ಯವೂ ಹಾಗೆ ಏಕೆ ಇರಬಾರದು? ಹಾಗಲ್ಲ. ಮಾದಕವಸ್ತುವಿನಲ್ಲಿ (ದ್ರವ್ಯಗಳು) ಒಟ್ಟುಗೂಡಿದಾಗ ಅದು ಉಂಟಾಗುವುದು ಸಾಧ್ಯ. ಆದರೆ ಭೌತಿಕದೇಹದಲ್ಲಿ ಪ್ರತ್ಯೇಕ ದ್ರವ್ಯದಲ್ಲಿ ಚೇತನವು ಕಾಣದು. ಆದ್ದರಿಂದ ದೃಷ್ಟಾಂತದಲ್ಲಿ ಪ್ರತ್ಯೇಕವಾಗಿ ಶಾಸ್ತ್ರಾದಿಗಳಿಂದ ಸೂಕ್ಷ್ಮವಾಗಿ ಮಾದಕತ್ವವಿರುತ್ತದೆ ಎಂದು ಸಿದ್ಧವಾಗಿರುವಾಗ ದ್ರವ್ಯಗಳು ಸೇರಿದಾಗ ಮಾದಕತ್ವವು ಪ್ರಕಟವಾಗುವುದು ಸಿದ್ಧವಾಗುತ್ತದೆ. ಆದರೆ ದೃಷ್ಟಾಂತದಿಂದ ವಿವರಿಸಲ್ಪಟ್ಟ ಚೇತನವಾದರೋ ಸೂಕ್ಷ್ಮರೂಪದಲ್ಲಿ ಪ್ರತ್ಯೇಕ ಭೂತದಲ್ಲಿ ಯಾವುದೇ ಪ್ರಮಾಣದಿಂದ ಇರುವುದಿಲ್ಲ ಎಂಬುದು ಸಿದ್ಧವಾಗುವುದು.

ಭಾಷ್ಯ: *ನನು ಸಮುಚ್ಚಿತೇ ಚೈತನ್ಯದರ್ಶನೇನ ಪ್ರತ್ಯೇಕಭೂತೇ ಸೂಕ್ಷ್ಮಚೈತನ್ಯಶಕ್ತಿ– ರನುಮೇಯಾ ಇತಿ ಚೇನ್ನ, ಅನೇಕಭೂತೇಷ್ವನೇಕಕಲ್ಪನಾಯಾಂ ಗೌರವೇಣ ಲಾಘವಾದೇಕಸ್ಯ ಏವ ನಿತ್ಯಚಿತ್ಸ್ವರೂಪಸ್ಯ ಕಲ್ಪನೌಚಿತ್ಯಾತ್ ।*

ಅನುವಾದ: ಒಟ್ಟಿಗೆ ಸೇರಿದ ದ್ರವ್ಯಗಳಲ್ಲಿ ಚೈತನ್ಯದರ್ಶನದಿಂದ ಪ್ರತ್ಯೇಕದ್ರವ್ಯಗಳಲ್ಲಿ ಸೂಕ್ಷ್ಮಚೈತನ್ಯಶಕ್ತಿಯನ್ನು ಅನುಮಾನದಿಂದ ತಿಳಿಯಬಹುದಲ್ಲವೆ? ಸಾಧ್ಯವಿಲ್ಲ. ಏಕೆಂದರೆ ಅನೇಕ ಭೂತಗಳಲ್ಲಿ ಅನೇಕ ಶಕ್ತಿಗಳ ಕಲ್ಪನೆ ಮಾಡುವುದರಲ್ಲಿ ಅಧಿಕತೆಯುಂಟಾಗುವುದು, ಆದ್ದರಿಂದ ಸೂಕ್ಷ್ಮವಾಗಿ ಒಂದೇ, ನಿತ್ಯವಾದ ಸ್ವರೂಪವನ್ನು ಕಲ್ಪನೆ ಮಾಡುವುದು ಉಚಿತ.

ಭಾಷ್ಯ: *ನನು ಯಥಾವಯವೇ ಅವರ್ತಮಾನವಪಿ ಪರಿಣಾಮ ಜಲಾಹರಣ– ಆದಿಕಾರ್ಯಂ ಘಟಾದೌ ದೃಶ್ಯತೇ, ಏವಮೇವ ಶರೀರೇ ಚೈತನ್ಯಂ ಸ್ಯಾದಿತಿ ।*

ಅನುವಾದ: ಹೇಗೆ ಘಟಾದಿಗಳು ಅವಯವಗಳಲ್ಲಿ ಪ್ರತ್ಯೇಕವಾಗಿ ಇದ್ದರೂ ಅದಕ್ಕೆ ಪರಿಮಾಣವಿರುವುದು, ನೀರು ಮುಂತಾದುವುಗಳನ್ನು ತರುವರು, ಹಾಗೆಯೇ ಶರೀರದಲ್ಲಿ ಚೈತನ್ಯವು ಏಕೆ ಇರಬಾರದು?

ಭಾಷ್ಯ: *ಮೈಮಮ್ । ಭೂತಗತವಿಶೇಷಗುಣಾನಾಂ ಸಜಾತೀಯಕಾರಣಗುಣ– ಜನ್ಯತಯಾ ಕಾರಣೇ ಚೈತನ್ಯಂ ವಿನಾ ದೇಹೇ ಚೈತನ್ಯಾಸಂಭವಾದಿತಿ ।*

ಅನುವಾದ: ಹಾಗಲ್ಲ. ಭೂತಗಳಲ್ಲಿರುವ ವಿಶೇಷಗುಣಗಳು ಉತ್ಪತ್ತಿಯು ಅವುಗಳ ಕಾರಣಗಳಲ್ಲಿರುವ ಗುಣಗಳನ್ನು ಹೊಂದಿರುತ್ತವೆ. ದೇಹದಲ್ಲಿ ಚೈತನ್ಯವು ಕಾರಣವಾದ ಆ ತನ್ಮಾತ್ರಗಳಲ್ಲಿ ಇಲ್ಲದಿದ್ದರೆ ದೇಹದ ಚೇತನವು ಮೂಡುವುದು ಸಾಧ್ಯವೇ ಇಲ್ಲ.

ಭಾಷ್ಯ: *ಪುರುಷಾರ್ಥಂ ಸಂಸೃತಿರ್ಲಿಂಗಾನಾಮಿತ್ಯುಕ್ತಮ್ । ತತ್ರ ಲಿಂಗಾನಾಂ ಸ್ಥೂಲದೇಹಸಂಚಾರಾಖ್ಯಜನ್ಮನೋ ಯೋ ಯಃ ಪುರುಷಾರ್ಥೋ ಯೇನ ಯೇನ ವ್ಯಾಪಾರೇಣ ಸಿದ್ಧ್ಯತಿ, ತದಾಹ ಸೂತ್ರಾಭ್ಯಾಂ–*

ಅನುವಾದ: ಲಿಂಗಶರೀರದ ಸಂಸರಣ ಪುರುಷಾರ್ಥಕ್ಕಾಗಿ ಎಂದು ಹೇಳಿದೆ. ಅದರಲ್ಲಿ ಲಿಂಗಗಳ ಸ್ಥೂಲದೇಹದಲ್ಲಿ ಸಂಚಾರವೆಂಬುದರಿಂದ ಉಂಟಾಗುವ ಜನ್ಮಗಳು ಯಾವ ಯಾವ ಪುರುಷಾರ್ಥವಿದೆಯೋ ಅದು ಯಾವ ಯಾವ ವ್ಯಾಪಾರದಿಂದ ಸಿದ್ಧಿಸುತ್ತದೆ ಎಂಬುದನ್ನು ಎರಡು ಸೂತ್ರಗಳಲ್ಲಿ ಹೇಳಿದೆ.

ಸೂತ್ರ: ಜ್ಞಾನಾನ್ಮುಕ್ತಿಃ ॥ ೨೩ ॥

ಸೂತ್ರಾನುವಾದ: ಜ್ಞಾನದಿಂದ ಮುಕ್ತಿ (ದೊರೆಯುವುದು)

ಭಾಷ್ಯ: *ಲಿಂಗಸಂಸೃತಿತೋ ಜನ್ಮದ್ವಾರಾ ವಿವೇಕಸಾಕ್ಷಾತ್ಕಾರಃ ತಸ್ಮಾನ್ಮುಕ್ತಿರೂಪಃ ಪುರುಷಾರ್ಥಃ ಭವತೀತ್ಯರ್ಥಃ ।*

ಅನುವಾದ: ಲಿಂಗಶರೀರದ ಸಂಸೃತಿಯಿಂದ ಎಂದರೆ ಜನ್ಮ ಉಂಟಾಗುವುದರಿಂದ ವಿವೇಕಸಾಕ್ಷಾತ್ಕಾರವಾಗುವುದು ಮತ್ತು ಅದರಿಂದ ಮುಕ್ತಿರೂಪದ ಪುರುಷಾರ್ಥವು ಸಿದ್ಧಿಸುವುದು.

ಭಾಷ್ಯ: *ಜ್ಞಾನಾದಿಕಂ ಚ ಪ್ರತ್ಯಯಸರ್ಗತಯಾ ಕಾರಿಕಾಯಾಂ ಪರಿಭಾಷಿತಮ್ । 'ಏಷ ಪ್ರತ್ಯಯಸರ್ಗೋ ವಿಪರ್ಯಯಾಶಕ್ತಿತುಷ್ಟಿಸಿದ್ಧ್ಯಾಖ್ಯಃ' (ಈಶ್ವ-೪೧) । ವಿಪರ್ಯ-ಯಾದಯೋ ವ್ಯಾಖ್ಯಾಸ್ಯಂತೇ । ಅತ ಚ ಸ ಏವ ಕಾ । ಬುದ್ಧಿಸರ್ಗಃ ಪ್ರಯೋಜನಯೋಗೇನ ಸೂತ್ರೈರುಚ್ಯತೇ ಇತಿ ವಿಶೇಷಃ ।*

ಅನುವಾದ: ಜ್ಞಾನಾದಿಗಳನ್ನು ಪ್ರತ್ಯಯಸರ್ಗವೆಂದು ಕಾರಿಕೆಯಲ್ಲಿ ಪರಿಭಾಷೆ ನೀಡಲಾಗಿದೆ. ಈ ಪ್ರತ್ಯಯಸರ್ಗವು, ವಿಪರ್ಯಯ, ಶಕ್ತಿ, ತುಷ್ಟಿ, ಸಿದ್ಧಿ ಎಂದು ಹೇಳುತ್ತಾರೆ. ವಿಪರ್ಯಯಾದಿಗಳನ್ನು ಮುಂದೆ ವಿವರಿಸಲಾಗುವುದು. ಇಲ್ಲಿ ಅದನ್ನೇ ಬುದ್ಧಿಸೃಷ್ಟಿಯ ಪ್ರಯೋಜನದ ಸಂದರ್ಭದಲ್ಲಿ ಸೂತ್ರಗಳಿಂದ ತಿಳಿಸಲ್ಪಡುತ್ತದೆ ಎಂಬುದು ವಿಶೇಷವಾದುದು.

ಸೂತ್ರ: ಬಂಧೋ ವಿಪರ್ಯಯಾತ್ ॥ ೨೪ ॥

ಸೂತ್ರಾನುವಾದ: ತಪ್ಪಾಗಿ ತಿಳಿಯುವುದು ಬಂಧನಕ್ಕೆ ಕಾರಣವಾಗುವುದು.

ಭಾಷ್ಯ: *ವಿಪರ್ಯಯಾತ್ ಸುಖದುಃಖಾತ್ಮಕೋ ಬಂಧರೂಪಃ ಪುರುಷಾರ್ಥಃ ಲಿಂಗಸಂಸೃತಿತೋ ಭವತೀತ್ಯರ್ಥಃ ।*

ಅನುವಾದ: ಆತ್ಮಜ್ಞಾನವಿಲ್ಲದಿರುವಾಗ ಸುಖದುಃಖಾತ್ಮಕವಾದ ಬಂಧವೆಂಬ ಪುರುಷಾರ್ಥವು ಲಿಂಗದ ಸಂಸಾರದಿಂದ ಉಂಟಾಗುವುದು ಎಂದರ್ಥ.

ಭಾಷ್ಯ: *ಜ್ಞಾನವಿಪರ್ಯಯಾಭ್ಯಾಂ ಮುಕ್ತಿಬಂಧೌ ಉಕ್ತೌ । ತತ್ರಾದೌ ಜ್ಞಾನಾನ್ಮುಕ್ತಿಂ ವಿಚಾರಯತಿ ।*

ಅನುವಾದ: ಜ್ಞಾನ ಮತ್ತು ವಿಪರ್ಯಯಗಳಿಂದ ಮುಕ್ತಿ-ಬಂಧಗಳು ಉಂಟಾಗುವುದನ್ನು ಹೇಳಲಾಯಿತು. ಅದರಲ್ಲಿ ಮೊದಲು ಜ್ಞಾನದಿಂದ ಮುಕ್ತಿಯುಂಟಾಗುವುದನ್ನು ಹೇಳಲಾಗಿದೆ.

ಸೂತ್ರ: ನಿಯತಕಾರಣತ್ವಾನ್ನ ಸಮುಚ್ಚಯವಿಕಲ್ಪೌ ॥ ೨೫ ॥

ಸೂತ್ರಾನುವಾದ: ಕಾರಣವು ನಿಶ್ಚಿತವಾಗಿರುವಾಗ ಸಮುಚ್ಚಯವಾಗಲಿ ವಿಕಲ್ಪವಾಗಲಿ ಇರದು.

ವಿವರಣೆ: 'ಸಮುಚ್ಚಯ' ಎಂದರೆ ಜ್ಞಾನ-ಕರ್ಮಗಳು ಒಟ್ಟುಗೂಡುವುದು. ವಿಕಲ್ಪವೆಂದರೆ ಅವುಗಳಲ್ಲಿ ಯಾವುದಾದರೂ ಒಂದು.

ಭಾಷ್ಯ: *'ವಿದ್ಯಾಂ ಚಾವಿದ್ಯಾಂ ಚ ಯಸ್ತ ದ್ವೇದೋಭಯಂ ಸಹ।' (ಈಶಾವಾಸ್ಯ-೧೧) ಇತ್ಯಾದಿ ಶ್ರೂಯತೇ । ತಥಾಪಿ ಅವಿವೇಕನಿವೃತ್ತೌ*

ಲೋಕಸಿದ್ಧತಯಾ ಜ್ಞಾನಸ್ಯ ನಿಯತಕಾರಣತ್ವಾತ್ ಅವಿದ್ಯಾಖ್ಯಕರ್ಮಣಾ ಸಹ ಜ್ಞಾನಸ್ಯ ಮೋಕ್ಷಜನನೇ ಸಮುಚ್ಚಯೋ ವಿಕಲ್ಪೋ ವಾ ನಾಸ್ತೀತ್ಯರ್ಥಃ । 'ತಮೇವ ವಿದಿತ್ವಾತಿಮೃತ್ಯುಂ ಏತಿ ನಾನ್ಯಃ ಪಂಥಾ ವಿದ್ಯತೇಽಯನಾಯ ।' (ಶ್ವೇ. ೩.೮, ೬.೧೫) 'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇಽಮೃತತ್ವಮಾನಶುಃ' (ತೈ.ಆ. ೧೦.೧೦) ಇತ್ಯಾದಿ ಶ್ರುತಿಭ್ಯೋಽಪಿ ಕರ್ಮಣೋ ಸಮುಚ್ಚಯಾನುಷ್ಠಾನಂ ಶ್ರುತಿಷ್ವಂಗಾಂಗಿಭಾವಾದಿಭಿಃ ಉಪಪದ್ಯತೇ ಇತಿ ।

ಅನುವಾದ: 'ವಿದ್ಯೆಯನ್ನು ಅವಿದ್ಯೆಯನ್ನೂ ಎರಡನ್ನೂ ತಿಳಿದವನು ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತತ್ವವನ್ನು ಪಡೆಯುವನು.'

(ಈ ಮಂತ್ರದ ಎರಡನೆಯ ಪಾದ– ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ।)

ಹಾಗಿದ್ದರೂ ಅವಿವೇಕವು ದೂರವಾದಾಗ ಲೋಕದಲ್ಲಿ ಸಿದ್ಧವಾಗಿ ಇರುವಂತೆ ಜ್ಞಾನದ ನಿಶ್ಚಿತವಾದ ಕಾರಣದಿಂದ ಅವಿದ್ಯೆಯೆಂಬ ಕರ್ಮದೊಡನೆ ಜ್ಞಾನವು ಮೋಕ್ಷವನ್ನುಂಟುಮಾಡುವುದರಲ್ಲಿ ಸಮುಚ್ಚಯವಾಗಲಿ ವಿಕಲ್ಪವಾಗಲಿ ಇರದು. 'ಅವನನ್ನು ತಿಳಿದ ಮೇಲೆಯೇ ಸಾವನ್ನು ದಾಟುವನು, ಮುನ್ನಡೆಯಲು ಬೇರೊಂದು ಮಾರ್ಗವಿಲ್ಲ', 'ಕರ್ಮದಿಂದಾಗಲಿ, ಮಕ್ಕಳಿಂದಾಗಲಿ ಅಥವಾ ಧನದಿಂದಾಗಲಿ ಅಲ್ಲ, (ಕೇವಲ) ತ್ಯಾಗದಿಂದಲೇ ಅಮರತ್ವವನ್ನು ಪಡೆದರು.' ಮುಂತಾದ ಶ್ರುತಿಗಳಿಂದಲೂ ಕರ್ಮವೊಂದೇ ಮೋಕ್ಷಕ್ಕೆ ಸಾಕ್ಷಾತ್ ಕಾರಣವಲ್ಲ. ಶ್ರುತಿಗಳಲ್ಲಿ ಎಲ್ಲೆಲ್ಲಿ 'ಸಮುಚ್ಚಯಾನುಷ್ಠಾನ' ವಿದೆಯೋ ಅದೆಲ್ಲ ಅಂಗಾಂಗಿಭಾವದ ರೂಪದಲ್ಲಿ ಅದನ್ನು ಗ್ರಹಿಸಬೇಕು.

ವಿವರಣೆ: 'ಅಂಗಾಂಗಿಭಾವಾತ್' ಎಂದರೆ 'ಜ್ಞಾನವನ್ನು ಪ್ರಧಾನವಾಗಿ ಹೊಂದಿ (ಅಂಗಿ) ಅದರ ಅಂಗವಾಗಿ ಕರ್ಮವನ್ನು ಅನುಷ್ಠಾನ ಮಾಡುತ್ತಾ' ಎಂದರ್ಥ. ಜ್ಞಾನದೊಡನೆ ಸೇರಿದ ಕರ್ಮದ ಅನುಷ್ಠಾನವು ಸಮುಚ್ಚಯಾನುಷ್ಠಾನ.

ಭಾಷ್ಯ: *ಸಮುಚ್ಚಯವಿಕಲ್ಪಯೋರಭಾವೇ ದೃಷ್ಟಾಂತಮಾಹ–*

ಸೂತ್ರ: ಸ್ವಪ್ನಜಾಗರಾಭ್ಯಾಮಿವ ಮಾಯಿಕಾಮಾಯಿಕಾಭ್ಯಾಂ ನೋಭಯೋ–ರ್ಮುಕ್ತಿಃ ಪುರುಷಸ್ಯ ॥ ೨೬ ॥

ಅನುವಾದ: ಸಮುಚ್ಚಯ ಮತ್ತು ವಿಕಲ್ಪ ಇವೆರಡೂ ಇಲ್ಲದಿರುವುದಕ್ಕೆ ದೃಷ್ಟಾಂತವನ್ನು ನೀಡಿದ್ದಾರೆ.

ಸೂತ್ರಾನುವಾದ: ಹೇಗೆ ಸ್ವಪ್ನ ಮತ್ತು ಜಾಗ್ರತಾವಸ್ಥೆಗಳಲ್ಲಿ ಮಿಥ್ಯೆ ಮತ್ತು ಸತ್ಯಸ್ವರೂಪಗಳು ಗೋಚರವಾಗುವುದರಿಂದ ಸಮುಚ್ಚಯ ಮತ್ತು ವಿಕಲ್ಪಗಳಿರುವುದಿಲ್ಲವೋ ಹಾಗೆಯೇ ಪುರುಷನ ಮುಕ್ತಿಯು ಎರಡರಿಂದಲೂ (ಸಮುಚ್ಚಯ ಮತ್ತು ವಿಕಲ್ಪ) ಆಗದು.

ಭಾಷ್ಯ: *ಯಥಾ ಮಾಯಿಕಾಮಾಯಿಕಾಭ್ಯಾಂ ಸ್ವಪ್ನಜಾಗರಾಭ್ಯಾಂ ಅನ್ಯೋನ್ಯ-ಸಹಕಾರಿಭಾವೇನ ಪುರುಷಾರ್ಥೋ ನ ಸಂಭವತಿ । ಏವಂ ಉಭಯೋರ್ಮಾಯಿಕಾಮಾಯಿಕಯೋಃ ಅನುಷ್ಠಿತಯೋಃ ಕರ್ಮಜ್ಞಾನಯೋಃ ಪುರುಷಸ್ಯ ಮುಕ್ತಿರಿತಿ ನ ಯುಕ್ತೇತ್ಯರ್ಥಃ । ಮಾಯಿಕತ್ವಂ ಚ ಅಸತ್ಯತ್ವಮ್ । ಅಸ್ಥಿರತ್ವಮಿತಿ ಯಾವತ್ । ತಚ್ಚ ಸ್ವಾಪ್ನೇಽರ್ಥೇಽಸ್ತಿ । ಜಾಗ್ರತ್ಪದಾರ್ಥಸ್ತು ಸ್ವಪ್ನಾಪೇಕ್ಷಯಾ ಸತ್ಯ ಏವ । ಕೂಟಸ್ಥಪುರುಷಾಪೇಕ್ಷಯೈವ ಅಸ್ಥಿರತ್ವೇನ ಅಸತ್ಯತ್ವಾದತಃ ಸ್ವಪ್ನವಿಲಕ್ಷಣ ಸ್ನಾನಾದಿಕಾರ್ಯಕರಃ । ಏವಂ ಕರ್ಮಾಪ್ಯಸ್ಥಿರತ್ವಾತ್ ಪ್ರಕೃತಿಕಾರ್ಯ-ತ್ವಾಚ್ಚ ಮಾಯಿಕಮ್ । ಆತ್ಮಾ ತು ಸ್ಥಿರತ್ವಾದಕಾರ್ಯತ್ವಾಚ್ಚ ಅಮಾಯಿಕಃ। ಅತಃ ತಯೋಃ ಅನುಷ್ಠಿತಕರ್ಮಜ್ಞಾನಯೋಃ ಸಮಾನಫಲದಾತೃತ್ವಂ ಅಯೌಕ್ತಿಕಮಿತಿ ವಿಲಕ್ಷಣಮೇವ ಕಾರ್ಯಂ ಯುಕ್ತಮ್ ।*

ಅನುವಾದ: ಹೇಗೆ ಮಾಯೆಯಿಂದ ಕೂಡಿದ ಮತ್ತು ಮಾಯೆಯಿಲ್ಲದ ಸ್ವಪ್ನ-ಜಾಗ್ರದವಸ್ಥೆಗಳ ಪರಸ್ಪರ ಸಹಕಾರದ ಭಾವದಿಂದ ಪುರುಷಾರ್ಥವು ಸಿದ್ಧಿಸದೋ ಹಾಗೆಯೇ ಮಾಯೆಯಿಂದ ಕೂಡಿದ ಮತ್ತು ಮಾಯಾರಹಿತವಾದ ಕರ್ಮ-ಜ್ಞಾನಗಳನ್ನು ಅನುಷ್ಠಾನ ಮಾಡುವುದರಿಂದ ಪುರುಷನಿಗೆ ಮುಕ್ತಿ ದೊರೆಯುವುದೆಂಬ ಯುಕ್ತಿ ಸರಿಯಲ್ಲ. ಮಾಯಿಕವು ಅಸತ್ಯವಾದುದು. ಎಂದರೆ ಅಸ್ಥಿರವಾದುದು. ಅದು ಕೇವಲ ಸ್ವಪ್ನದ ಅವಸ್ಥೆಯಲ್ಲಿರುವ ಪದಾರ್ಥ. ಜಾಗ್ರದವಸ್ಥೆಯಲ್ಲಿರುವುದಾದರೋ ಸ್ವಪ್ನಕ್ಕಿಂತಲೂ ಸತ್ಯವಾದುದು. ಆದರೆ ಕೂಟಸ್ಥಪುರುಷನಿಗಿಂತಲೂ ಅಸ್ಥಿರವಾದುದರಿಂದ ಅದನ್ನು ಅಸತ್ಯವೆನ್ನುತ್ತಾರೆ. ಆದ್ದರಿಂದ ಜಾಗ್ರದವಸ್ಥೆಯ ಸ್ವಪ್ನದಲ್ಲಿ ಮಾಡುವ ಸ್ನಾನಾದಿಕಾರ್ಯಗಳಿಗಿಂತ ಭಿನ್ನವಾದುದು. ಹೀಗೆಯೇ ಕರ್ಮವೂ ಸಹ ಅಸ್ಥಿರವಾದ ಕಾರಣ ಮತ್ತು ಪ್ರಕೃತಿಯ ಕಾರ್ಯವನ್ನು ಮಾಡುವುದರಿಂದ 'ಮಾಯಿಕ'ವೆಂದು ಪರಿಗಣಿಸಲ್ಪಡುವುದು. ಆತ್ಮವು ಸ್ಥಿರವಾದುದರಿಂದ ಮತ್ತು ಪ್ರಕೃತಿಯ ಕಾರ್ಯವಲ್ಲದ್ದರಿಂದ 'ಅಮಾಯಿಕ'ವೆಂದು ಕರೆಯಲ್ಪಡುವುದು. ಆದ್ದರಿಂದ ಅನುಷ್ಠಾನ ಮಾಡಲ್ಪಟ್ಟ ಕರ್ಮಜ್ಞಾನಗಳು ಸಮಾನವಾದ ಫಲವನ್ನು ನೀಡುತ್ತವೆ ಎಂಬುದು ಯುಕ್ತಿಯುಕ್ತವಲ್ಲ ಮತ್ತು ಅವೆರಡೂ ಒಂದರಿಂದ ಮತ್ತೊಂದು ಭಿನ್ನವಾದುದು.

ವಿವರಣೆ: ಸ್ವಪ್ನ ಮತ್ತು ಜಾಗ್ರದವಸ್ಥೆಗಳು ಮಾಯಿಕ ಮತ್ತು ಅಮಾಯಿಕಗಳು. ಪುರುಷನ ಮುಕ್ತಿಗೆ ಇವೆರಡರ ಸಮುಚ್ಚಯವೂ ಸಾಧ್ಯವಲ್ಲ ಅಥವಾ ವಿಕಲ್ಪವೂ ಸಾಧ್ಯವಲ್ಲ.

ಭಾಷ್ಯ: *ನನ್ವೇವಮಪ್ಯಾತ್ಮೋಪಾಸನಾಖ್ಯಜ್ಞಾನೇನ ಸಹತತ್ತ್ವಜ್ಞಾನಸ್ಯ ಸಮುಚ್ಚಯ-ವಿಕಲ್ಪೌ ಸ್ಯಾತಾಮುಪಾಸ್ಯಸ್ಯಾಮಾಯಿಕತ್ವಾದಿತಿ । ತತ್ರಾಹ-*

ಅನುವಾದ: ಹಾಗಾದರೆ ಆತ್ಮೋಪಾಸನೆ ಎಂಬ ಜ್ಞಾನದೊಡನೆ ತತ್ತ್ವಜ್ಞಾನದ ಸಮುಚ್ಚಯ ಮತ್ತು ವಿಕಲ್ಪಗಳು ಇರಬಲ್ಲವು. ಏಕೆಂದರೆ ಉಪಾಸ್ಯವು ಅಮಾಯಿಕವಾದುದು. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಇತರಸ್ಯಾಪಿ ನಾತ್ಯಂತಿಕಮ್ ॥ ೨೭ ॥

ಸೂತ್ರಾನುವಾದ: ಇನ್ನೊಂದರ (ಉಪಾಸ್ಯದ)(ಅಮಾಯಿಕತ್ವ) ಆತ್ಯಂತಿಕವಾದುದಲ್ಲ.

ಭಾಷ್ಯ: *ಇತರಸ್ಯಾಪ್ಯುಪಾಸ್ಯಸ್ಯ ನಾತ್ಯಂತಿಕಮಮಾಯಿಕತ್ವಮ್ । ಉಪಾಸ್ಯಾತ್ಮನ್ಯಧ್ಯಸ್ತಪದಾರ್ಥಾನಾಮಪಿ ಪ್ರವೇಶಾದಿತ್ಯರ್ಥಃ ।*

ಅನುವಾದ: ಉಪಾಸ್ಯವಾದರೂ ಅದರಲ್ಲಿ ಆತ್ಯಂತಿಕವಾದ ಮಾಯಿಕತ್ವ ಇರದು. ಉಪಾಸ್ಯವಾದ ಆತ್ಮನಲ್ಲಿ ಅಧ್ಯಾಸವಾದ ಪದಾರ್ಥಗಳೂ ಸೇರಿರುತ್ತವೆ.

ಭಾಷ್ಯ: *ಉಪಾಸನಸ್ಯ ಮಾಯಿಕತ್ವಂ ಯಸ್ಮಿನ್ನಂಶೇತದಾಹ–*

ಸೂತ್ರ: ಸಂಕಲ್ಪಿತೇಽಪ್ಯೇವಮ್ ॥ ೨೮ ॥

ಸೂತ್ರಾನುವಾದ: ಉಪಾಸನೆಯ ಮಾಯಿಕತ್ವ ಯಾವ ಅಂಶದಲ್ಲಿ ಎಂಬುದನ್ನು ಹೇಳಿದ್ದಾರೆ.

ಅನುವಾದ: (ಮನಸ್ಸಿನಲ್ಲಿ) ಸಂಕಲ್ಪ ಮಾಡಿದ ಅಂಶದಲ್ಲಿ ಹಾಗೆಯೇ ಇರುತ್ತದೆ.

ಭಾಷ್ಯ: *ಮನಃ ಸಂಕಲ್ಪಿತೇ–ಧ್ಯೇಯಾಂಶೇ, ಏವಮಪಿ–ಮಾಯಿಕತ್ವಮಪಿ ಇತ್ಯರ್ಥಃ। 'ಸರ್ವಂ ಖಲ್ವಿದಂ ಬ್ರಹ್ಮ' (ಛಾಂ.ಉ. ೩.೧೪.೧) ಇತ್ಯಾದಿಶ್ರುತ್ಯುಕ್ತೇ–। ಹ್ಯುಪಾಸ್ಯೇ ಪ್ರಪಂಚಾಶಸ್ಯ ಮಾಯಿಕತ್ವಂ ಏವ ಇತಿ।*

ಅನುವಾದ: ಮನಸ್ಸಿನಲ್ಲಿ ಸಂಕಲ್ಪಿತವಾದ ಧ್ಯಾನದ ವಸ್ತುವಿನ ಅಂಶದಲ್ಲಿ, ಹಾಗೆಯೇ ಮಾಯಿಕತ್ವವೂ ಸಹ ಎಂದರ್ಥ. 'ಇದೆಲ್ಲವೂ ಬ್ರಹ್ಮ' (ಛಾಂ.ಉ. ೩.೧೪.೧) ಎಂದು ಶ್ರುತಿಯಲ್ಲಿ ಹೇಳಿರುವ ಉಪಾಸ್ಯದಲ್ಲಿ ಅದರ ಪ್ರಪಂಚಾತ್ಮಕ ಅಂಶದಲ್ಲಿ ಮಾಯಿಕತ್ವವಿರುತ್ತದೆ.

ಭಾಷ್ಯ: *ತರ್ಹ್ಯುಪಾಸನಸ್ಯ ಕಿಂ ಫಲಮಿತ್ಯಾಕಾಂಕ್ಷಾಯಾಂ ಆಹ–*

ಸೂತ್ರ: ಭಾವನೋಪಚಯಾಚ್ಛುದ್ಧಸ್ಯ ಸರ್ವಂಪ್ರಕೃತಿವತ್ ॥ ೨೯ ॥

ಅನುವಾದ: ಹಾಗಾದರೆ ಉಪಾಸನೆಯ ಫಲವಾದರೂ ಏನು? ಈ ಕುತೂಹಲಕ್ಕೆ ಹೀಗೆ ಹೇಳಿದ್ದಾರೆ–

ಸೂತ್ರಾನುವಾದ: ಶುದ್ಧವಾದ (ಪುರುಷನ) ಮಾನಸ ಚಿಂತನದ ತೀಕ್ಷ್ಣತೆಯ ಪ್ರಭಾವದಿಂದ ಪ್ರಕೃತಿಯಂತೆ ಎಲ್ಲವೂ ಆಗಿಬಿಡುತ್ತದೆ.

ಭಾಷ್ಯ: *ಭಾವನಾಖ್ಯೋಪಾಸನಾನಿಷ್ಪತ್ತ್ಯಾ ಶುದ್ಧಸ್ಯ ನಿಷ್ಪಾಪಸ್ಯ ಪುರುಷಸ್ಯ ಪ್ರಕೃತೇರಿವ ಸರ್ವಮೈಶ್ವರ್ಯಂ ಭವತೀತ್ಯರ್ಥಃ । ಪ್ರಕೃತಿರ್ಯಥಾ ಸೃಷ್ಟಿಸ್ಥಿತಿಸಂಹಾರಂ ಕರೋತಿ, ಏವಮುಪಾಸಕಸ್ಯ ಬುದ್ಧಿಸತ್ತ್ವಮಪಿ ಪ್ರಕೃತಿಪ್ರೇರಣೇನ ಸೃಷ್ಟ್ಯಾದಿಕರ್ತೃ ಭವತೀತಿ ।*

ಅನುವಾದ: 'ಶುದ್ಧಸ್ಯ' ಎಂದರೆ ಭಾವನಾ ಎಂಬ ಉಪಾಸನೆಯ ನಿಷ್ಪತ್ತಿಯಿಂದ ಪಾಪರಹಿತನಾಗಿ ಪುರುಷನು ಪ್ರಕೃತಿಯಂತೆ ಎಲ್ಲ ಶಕ್ತಿಯನ್ನೂ ಪಡೆಯುವುದು.

ಪ್ರಕೃತಿಯು ಹೇಗೆ ಸೃಷ್ಟಿ, ಸ್ಥಿತಿ, ಸಂಹಾರವನ್ನು ಮಾಡುತ್ತದೆಯೋ ಹಾಗೆಯೇ ಉಪಾಸಕನ ಬುದ್ಧಿಸತ್ತ್ವವೂ ಪ್ರಕೃತಿಯ ಪ್ರೇರಣೆಯಿಂದ ಸೃಷ್ಟ್ಯಾದಿಕರ್ತೃವಾಗುವನು.

ಭಾಷ್ಯ: *ಜ್ಞಾನಮೇವ ಮೋಕ್ಷಸಾಧನಮಿತಿ ಸ್ಥಾಪಿತಮ್ । ಇದಾನೀಂ ಜ್ಞಾನ–ಸಾಧನಾನಿ ಆಹ–*

ಸೂತ್ರ: ರಾಗೋಪಹತಿರ್ಧ್ಯಾನಮ್ ॥ ೩೦ ॥

ಅನುವಾದ: ಜ್ಞಾನವೇ ಮೋಕ್ಷಕ್ಕೆ ಸಾಧನವೆಂದು ಸಿದ್ಧವಾಯಿತು. ಈಗ ಜ್ಞಾನಸಾಧನವನ್ನು ಹೇಳಿದೆ.

ಸೂತ್ರಾನುವಾದ: ರಾಗವನ್ನು ತಡೆಹಿಡಿಯುವುದೇ ಧ್ಯಾನ

ಭಾಷ್ಯ: *ಜ್ಞಾನಪ್ರತಿಬಂಧಕೋ ಯೋ ವಿಷಯೋಪರಾಗಃ ಚಿತ್ತಸ್ಯ ತದುಪಘಾತ–ಹೇತುಃ ಧ್ಯಾನಮಿತ್ಯರ್ಥಃ । ಉಪಚಾರೇಣ ಕಾರ್ಯಕಾರಣಯೋರ–ಭೇದನಿರ್ದೇಶಃ, ರಾಗಕ್ಷಯಸ್ಯ ಧ್ಯಾನತ್ವಾಸಂಭವಾತ್ । ಅತ್ರ ಧ್ಯಾನಶಬ್ದೇನ ಧಾರಣಾಧ್ಯಾನಸಮಾಧಯಃ ಯೋಗೋಕ್ತಾಃ ತ್ರಯಃ ಏವ ಗ್ರಾಹ್ಯಾಃ ಪಾತಂಜಲೇ ಯೋಗಾಂಗಾನಾಂ ಅಷ್ಟಾನಾಮೇವ ವಿವೇಕಸಾಕ್ಷಾತ್ಕಾರಹೇತುತ್ವಶ್ರವಣಾದಿತಿ । ಏತೇಷಾಂ ಚಾವಾಂತರ–ವಿಶೇಷಾಸ್ತತ್ರೈವ ದ್ರಷ್ಟವ್ಯಾಃ । ಇತರಾಣಿ ಚ ಪಂಚಾಂಗಾನಿ ಚ ಸ್ವಯಂ ವಕ್ಷ್ಯತಿ ।*

ಅನುವಾದ: ಜ್ಞಾನಕ್ಕೆ ಅಡ್ಡಿಯನ್ನುಂಟುಮಾಡುವ ವಿಷಯಾಸಕ್ತಿಯು ಧ್ಯಾನವು (ಆ ಆಸಕ್ತಿಯನ್ನು) ಚಿತ್ತದಿಂದ ಹೋಗಲಾಡಿಸುವ ಕಾರಣವೇ ಆಗಿರುವುದು. ಲಾಕ್ಷಣಿಕ ವಾಗಿ ಕಾರ್ಯ–ಕಾರಣಾಭೇದವನ್ನು ಹೇಳಲಾಗಿದೆ; ಏಕೆಂದರೆ ರಾಗದ ನಾಶವೇ ಧ್ಯಾನವೆಂದು ಹೇಳಲಾಗದು. ಇಲ್ಲ ಧ್ಯಾನವೆಂದರೆ ಯೋಗದಲ್ಲಿ ಹೇಳಿರುವ ಧ್ಯಾನ–ಧಾರಣಾ–ಸಮಾಧಿ ಎಂದು ಗ್ರಹಿಸಬೇಕು. ಪತಂಜಲಿಯ ಯೋಗದಲ್ಲಿ ಎಂಟು ಯೋಗಗಳೂ ವಿವೇಕಸಾಕ್ಷಾತ್ಕಾರಕ್ಕೆ ಕಾರಣವೆಂದು ಹೇಳಲಾಗಿದೆ. ಇವುಗಳಲ್ಲಿ ನಡುವೆ ಬರುವ ವಿಶೇಷಗಳನ್ನು ಅದರಲ್ಲಿಯೇ (ಯೋಗಶಾಸ್ತ್ರ) ನೋಡಬೇಕು. ಇತರ ಐದು ಅಂಗಗಳಾದರೋ (ಸೂತ್ರಕಾರರೇ) ತಿಳಿಸುತ್ತಾರೆ.

ವಿವರಣೆ: ರಾಗವನ್ನು ಹತ್ತಿಕ್ಕಲು ಅಂತರಿಂದ್ರಿಯಗಳ ಪ್ರಯತ್ನ ಅಗತ್ಯ; ಆದ್ದರಿಂದ ಧ್ಯಾನ–ಧಾರಣಾ–ಸಮಾಧಿಗಳು 'ಗ್ರಾಹ್ಯ'ಗಳು. ಉಳಿದ ಅಂಗಗಳು ಬಾಹ್ಯೇಂದ್ರಿಯ ಗಳಿಗೆ ಸಂಬಂಧಪಟ್ಟವು.

ಭಾಷ್ಯ: *ಧ್ಯಾನನಿಷ್ಪತ್ತ್ಯೈವ ಜ್ಞಾನೋತ್ಪತ್ತಿರ್ನಾರಂಭಮಾತ್ರೇಣ ಇತ್ಯಾಶಯೇನ ಧ್ಯಾನನಿಷ್ಪತ್ತೇರ್ಲಕ್ಷಣಮಾಹ ।*

ಅನುವಾದ: ಧ್ಯಾನದ ನಿಷ್ಪತ್ತಿಯಿಂದಲೇ ಜ್ಞಾನದ ಉತ್ಪತ್ತಿ, ಕೇವಲ ಪ್ರಯತ್ನ ಮಾಡಿದಷ್ಟರಿಂದಲೇ ಅಲ್ಲ; ಧ್ಯಾನದ ನಿಷ್ಪತ್ತಿಯಾಗುವುದು ಹೇಗೆ ಎಂಬುದನ್ನು ಹೇಳಿದೆ–

ಸೂತ್ರ: ವೃತ್ತಿನಿರೋಧಾತ್ ತತ್ಸಿದ್ಧಿಃ ॥ ೩೧ ॥

ಸೂತ್ರಾನುವಾದ: ವೃತ್ತಿಗಳನ್ನು ತಡೆಗಟ್ಟುವುದರಿಂದಲೇ ಧ್ಯಾನದ ಸಿದ್ಧಿಯಾಗುವುದು.

ಭಾಷ್ಯ: *ಧ್ಯೇಯಾತಿರಿಕ್ತ ವೃತ್ತಿನಿರೋಧರೂಪೇಣ ಸಂಪ್ರಜ್ಞಾತಯೋಗೇನ ತತ್ಸಿದ್ಧಿ– ರ್ಧ್ಯಾನಸ್ಯ ನಿಷ್ಪತ್ತಿರ್ಜ್ಞಾನಾಖ್ಯಫಲೋಪಧಾನರೂಪಾ ಭವತೀತ್ಯರ್ಥಃ। ಅತಸ್ತಾವತ್ಪರ್ಯಂತಮೇವ ಧ್ಯಾನಂ ಕರ್ತವ್ಯಂ ಇತ್ಯಾಶಯಃ । ಇತರವೃತ್ತಿನಿರೋಧೇ ಸತ್ಯೇವ ವಿಷಯಾಂತರಸಂಚಾರಾಖ್ಯ ಪ್ರತಿಬಂಧಾಪಗಮಾದ್ ಧ್ಯೇಯಸಾಕ್ಷಾತ್ಕಾರೋ ಭವತೀತಿ ಕೃತ್ವಾ ಯೋಗೋಽಪಿ ಜ್ಞಾನೇ ಕಾರಣಂ, ಯೋಗಾಂಗಧ್ಯಾನಾದಿವದಿತ್ಯಪಿ ಮಂತವ್ಯಮ್ । 'ಅಧ್ಯಾತ್ಮಯೋಗಾಧಿಗಮೇನ ದೇವಂ ಮತ್ವಾ ಧೀರೋ ಹರ್ಷಶೋಕೌ ಜಹಾತಿ' (ಕ.ಉ. ೧.೨.೧೨) ಇತ್ಯಾದಿ ಶ್ರುತಿ ಸ್ಮೃತ್ಯೋಸ್ತದವಗಮಾದಿತಿ ।*

ಅನುವಾದ: ಧ್ಯೇಯವಸ್ತುವನ್ನು ಬಿಟ್ಟು ಬೇರೆಲ್ಲ ವೃತ್ತಿಗಳನ್ನೂ ನಿರೋಧಿಸುವುದರ ಮೂಲಕ ಧ್ಯಾನವನ್ನು ಪಡೆದಾಗ ಅದರಿಂದ ಜ್ಞಾನವೆಂಬ ಫಲದ ನಿಷ್ಪತ್ತಿಯಾಗು ವುದು. ಆದ್ದರಿಂದ (ಫಲಪ್ರಾಪ್ತಿ) ಆಗುವವರೆಗೆ ಧ್ಯಾನವನ್ನು ಮಾಡಬೇಕೆಂದು ಆಶಯ. ಇತರ ವೃತ್ತಿಗಳನ್ನು ನಿರೋಧಿಸುವುದರಿಂದಲೇ ಬೇರೆಯ ವಿಷಯದತ್ತ ಗಮನವು ಹೋಗುವುದೆಂಬುದನ್ನು ತಡೆಯುವುದರಿಂದಲೇ ಧ್ಯೇಯದ ಸಾಕ್ಷಾತ್ಕಾರ ವಾಗುವುದು. ಅದರಿಂದ ಯೋಗವೂ ಸಹ ಜ್ಞಾನಕ್ಕೆ ಕಾರಣವು. ಇದು ಯೋಗದ ಅಂಗವಾದ ಧ್ಯಾನದಂತೆ ತಿಳಿಯಬೇಕು. 'ಅಧ್ಯಾತ್ಮಯೋಗವನ್ನು ತಿಳಿದು ದೇವನನ್ನು ಅರಿತು ಧೀರನು ಹರ್ಷಶೋಕಗಳನ್ನು ತ್ಯಜಿಸುತ್ತಾನೆ' ಮುಂತಾದ ಶ್ರುತಿಸ್ಮೃತಿಗಳಿಂದ ತಿಳಿಯಬಹುದು.

ವಿವರಣೆ: ಸಂಪ್ರಜ್ಞಾತಯೋಗವನ್ನು ಹೀಗೆ ವಿವರಿಸಲಾಗಿದೆ– ಯಸ್ತ್ವೇಕಾಗ್ರೇ ಚೇತಸಿ ಸದ್ಭೂತಮರ್ಥಂ ಪ್ರದ್ಯೋತಿಯತಿ, ಕ್ಷಿಣೋತಿ ಚ ಕ್ಲೇಶಾನ್, ಕರ್ಮಬಂಧನಾನಿ ಶ್ಲಥಯತಿ, ನಿರೋಧಮಭಿಮುಖಂ ಕರೋತಿ ಸ ಸಂಪ್ರಜ್ಞಾತೋ ಯೋಗ ಇತ್ಯಾಖ್ಯಾಯತೇ । (ಯೋಗಸೂತ್ರ ೧.೧ರ ಮೇಲೆ ವ್ಯಾಸಭಾಷ್ಯ)

ಭಾಷ್ಯ: *ಧ್ಯಾನಸ್ಯಾಪಿ ಸಾಧನಾನ್ಯಾಹ–*

ಸೂತ್ರ: ಧಾರಣಾಸನಸ್ವಕರ್ಮಣಾ ತತ್ಸಿದ್ಧಿಃ ॥ ೩೨ ॥

ಅನುವಾದ: ಧ್ಯಾನದ ಸಾಧನಗಳನ್ನು ಹೇಳಿದೆ–

ಸೂತ್ರಾನುವಾದ: ಧಾರಣಾ, ಆಸನ, ವಿಧಿಪೂರ್ವಕ ಕರ್ಮಾನುಷ್ಠಾನ ಇವುಗಳಿಂದ ಅದರ (ಧ್ಯಾನದ) ಸಿದ್ಧಿಯಾಗುತ್ತದೆ.

ಭಾಷ್ಯ: *ಧಾರಣಾದಿತ್ರಯಂ ಸೂತ್ರತ್ರಯೇಣ ಲಕ್ಷಯತಿ ।*

ಸೂತ್ರ: ನಿರೋಧಶ್ಛರ್ದಿವಿಧಾರಣಾಭ್ಯಾಮ್ ॥ ೩೩ ॥

ಅನುವಾದ: ಧಾರಣವೇ ಮೊದಲಾದ ಮೂರನ್ನು ಮೂರು ಸೂತ್ರಗಳಿಂದ ಹೇಳಿದೆ.

ಸೂತ್ರಾನುವಾದ: ಪ್ರಾಣದ ಹತೋಟಿಯನ್ನು ಛರ್ದಿ, ವಿದಾರಣಗಳಿಂದ ಮಾಡಬಹುದು.

ಭಾಷ್ಯ: *ಪ್ರಾಣಸ್ಯೇತಿ ಪ್ರಸಿದ್ಧ್ಯಾ ಲಭ್ಯತೇ । ಪ್ರಚ್ಛರ್ದನವಿಧಾರಣಾಭ್ಯಾಂ ವಾ ಪ್ರಾಣಸ್ಯ (ಯೋ.ಸೂ. ೧.೩೪) ಇತಿ ಯೋಗಸೂತ್ರೇ ಭಾಷ್ಯಕಾರೇಣ ಪ್ರಾಣಾಯಾಮಸ್ಯ ವ್ಯಾಖ್ಯಾತತ್ವಾತ್ । ಛರ್ದಿಶ್ಚ ವಮನಮ್ । ತೇನ ಪೂರಣ-ರೇಚನಯೋರ್ಲಾಭಃ । ವಿಧಾರಣಂ ಚ ಕುಂಭಕಮ್ । ತಥಾಚ ಪ್ರಾಣಸ್ಯ ಪೂರಕ-ರೇಚಕ-ಕುಂಭಕೈರ್ಯೋ ನಿರೋಧೋ ವಶೀಕರಣಂ ಸಾ ಧಾರಣೇತ್ಯರ್ಥಃ । ಆಸನಕರ್ಮಣೋಃ ಸ್ವಶಬ್ದೇನ ಪಶ್ಚಾಲ್ಲಕ್ಷಣೀಯತಯಾ ಸೂತ್ರೇ ಪರಿಶೇಷತ ಏವ ಧಾರಣಾಯಾ ಲಕ್ಷ್ಯತ್ವಲಾಭಾತ್ ಧಾರಣಾಪದಂ ನೋಪಾತ್ತಮ್ । ಚಿತ್ತಸ್ಯ ಧಾರಣಾ ತು ಸಮಾಧಿವತ್ ಧ್ಯಾನಶಬ್ದೇನೈವ ಗೃಹೀತೇತ್ಯುಕ್ತಮ್ ।*

ಅನುವಾದ: ಪ್ರಾಣದ (ಪ್ರಾಣಸ್ಯ) ಎಂದು ಪ್ರಸಿದ್ಧಿಯ ಕಾರಣ ಸೇರಿಸಿಕೊಳ್ಳಬಹುದು. 'ಪ್ರಚ್ಛರ್ದನ ಮತ್ತು ವಿದಾರಣಗಳ ಮೂಲಕ ಪ್ರಾಣದ ನಿರೋಧ ಮಾಡಬಹುದು' ಎಂದು ಯೋಗಸೂತ್ರದಲ್ಲಿ ಭಾಷ್ಯಕಾರನು ಪ್ರಾಣಾಯಾಮದ ವ್ಯಾಖ್ಯಾನ ಮಾಡಿದ್ದಾನೆ. ಛರ್ದಿ ಎಂದರೆ ವಾಂತಿ. ವಿಧಾರಣ ಎಂದರೆ ತ್ಯಾಗ ಎಂದರ್ಥ. ಹೀಗೆ ಪ್ರಾಣವನ್ನು ಪೂರಕ-ರೇಚಕ-ಕುಂಭಕಗಳಿಂದ, ನಿರೋಧ ಎಂದರೆ ವಶದಲ್ಲಿಟ್ಟುಕೊಳ್ಳುವುದನ್ನು ಧಾರಣಾ ಎನ್ನುತ್ತಾರೆ. ಆಸನ ಮತ್ತು ಕರ್ಮಗಳನ್ನು ಅದೇ ಪದಗಳಿಂದ ಮುಂದೆ ಲಕ್ಷಣಗಳನ್ನು ವಿವರಿಸುವುದರಿಂದ ಉಳಿದ 'ಧಾರಣಾ'ವನ್ನು ಲಕ್ಷಿಸಿ ಹೇಳಿರುವುದರಿಂದ ಧಾರಣಾ ಪದವನ್ನು ಬಳಸಿಲ್ಲ. ಚಿತ್ತದ 'ಧಾರಣಾ' ಆದರೋ ಸಮಾಧಿಯಂತೆ ಧ್ಯಾನಶಬ್ದದಿಂದಲೇ ಗ್ರಹಿಸಲ್ಪಟ್ಟಿದೆ ಎಂದು ಹೇಳಿದೆ.

ವಿವರಣೆ: 'ಛರ್ದಿ' ಎಂದರೆ ರೇಚಕ (ನಿಧಾನವಾಗಿ ಉಸಿರನ್ನು ಹೊರಗೆ ಬಿಡುವುದು) ಎಂದರ್ಥ. ವಿಧಾರಣಾ ಎಂದರೆ ಕುಂಭಕ (ದೀರ್ಘವಾಗಿ ಉಸಿರನ್ನು ಒಳಗೆ ಎಳೆದುಕೊಳ್ಳುವುದು ಮತ್ತು ಸಾಧ್ಯವಾಗುವವರೆಗೆ ಹಿಡಿದಿಡುವುದು). 'ಪೂರಕ' ದೀರ್ಘವಾಗಿ ಉಸಿರನ್ನು ತೆಗೆದುಕೊಳ್ಳುವುದು.

ಭಾಷ್ಯ: *ಕ್ರಮಪ್ರಾಪ್ತಮಾಸನಂ ಲಕ್ಷಯತಿ ।*

ಸೂತ್ರ: ಸ್ಥಿರಸುಖಮಾಸನಮ್ ॥ ೩೪ ॥

ಅನುವಾದ: ಕ್ರಮಪ್ರಾಪ್ತವಾದ ಆಸನವನ್ನು ವಿವರಿಸಿದ್ದಾರೆ.

ಸೂತ್ರಾನುವಾದ: ಸ್ಥಿರವೂ ಸುಖಕರವೂ ಆದದ್ದನ್ನು ಆಸನವೆನ್ನುವರು.

ಭಾಷ್ಯ: *ಯತ್ ಸ್ಥಿರಂ ಸತ್ ಸುಖಸಾಧನಂ ಭವತಿ ಸ್ವಸ್ತಿಕಾದಿ, ತದಾಸನಮಿತ್ಯರ್ಥಃ ।*

ಅನುವಾದ: ಯಾವುದು ಸ್ಥಿರವಾಗಿದ್ದು ಸುಖಕ್ಕೆ ಸಾಧನವಾಗಿ ಸ್ವಸ್ತಿಕಾಸನದಂತಹವುಗಳನ್ನು ಆಸನವೆನ್ನುವರು.

ಭಾಷ್ಯ: *ಸ್ವಕರ್ಮ ಲಕ್ಷಯತಿ । ಸ್ವಕರ್ಮದ ಲಕ್ಷಣವನ್ನು ಹೇಳುತ್ತಾರೆ.*

ಸೂತ್ರ: ಸ್ವಕರ್ಮ ಸ್ವಾಶ್ರಮವಿಹಿತಕರ್ಮಾನುಷ್ಠಾನಮ್ ॥ ೩೫ ॥

ಸೂತ್ರಾನುವಾದ: ತಮ್ಮ ತಮ್ಮ ಆಶ್ರಮಕ್ಕೆ ಅನುಗುಣವಾಗಿ ವಿಧಿಸಲ್ಪಟ್ಟ ಕರ್ಮವನ್ನು ಅನುಷ್ಠಾನ ಮಾಡುವುದನ್ನು ಸ್ವಕರ್ಮವೆನ್ನುವರು.

ಭಾಷ್ಯ: *ಸುಗಮಮ್ । ತತ್ರ ಕರ್ಮಶಬ್ದೇನ ಯಮನಿಯಮಯೋರ್ಗ್ರಹಣಮ್। ಜಿತೇಂದ್ರಿಯತ್ವರೂಪಃ ಪ್ರತ್ಯಾಹಾರೋಽಪಿ ಸರ್ವಾಶ್ರಮಸಾಧಾರಣತಯಾ ಕರ್ಮಮಧ್ಯೇ ಪ್ರವೇಶನೀಯಃ । ತಥಾ ಚ ಪಾತಂಜಲಸೂತ್ರೇ ಜ್ಞಾನಸಾಧನತಯಾ ಪ್ರೋಕ್ತಾನ್ಯಷ್ಟೌ ಯೋಗಾಂಗಾನಿ ಅತ್ರಾಪಿ ಲಬ್ಧಾನಿ। ಯಥಾ ತತ್ಸೂತ್ರಮ್– 'ಯಮನಿಯಮಾಸನಪ್ರಾಣಾಯಾಮ–ಪ್ರತ್ಯಾಹಾರ ಧಾರಣಾಧ್ಯಾನಸಮಾಧಿಯಃ ಅಷ್ಟಾಂಗಾನೀತಿ' । ತೇಷಾಂ ಚ ಸ್ವರೂಪಂ ತತ್ರೈವ ದ್ರಷ್ಟವ್ಯಮ್ ।*

ಅನುವಾದ: ಸುಲಭವಾಗಿದೆ. ಅದರಲ್ಲಿ ಕರ್ಮಶಬ್ದದಿಂದ ಯಮನಿಯಮಗಳನ್ನು ಗ್ರಹಿಸಬೇಕು. ಎಲ್ಲ ಆಶ್ರಮಗಳಿಗೂ ಸಾಧಾರಣವಾದ್ದರಿಂದ ಪ್ರತ್ಯಾಹಾರವೂ ಸಹ ಇಂದ್ರಿಯಗಳನ್ನು ಗೆಲ್ಲಬೇಕೆಂಬ ತತ್ತ್ವದಿಂದ ಕೂಡಿರುವುದರಿಂದ ಕರ್ಮದಲ್ಲಿ ಸೇರಿಹೋಗುತ್ತದೆ. ಹಾಗೆಯೇ ಪಾತಂಜಲಸೂತ್ರದಲ್ಲಿ ಜ್ಞಾನಸಾಧನವೆಂದು ಹೇಳಲ್ಪಟ್ಟಿರುವುದರಿಂದ ಎಂಟು ಯೋಗಾಂಗಗಳು ಇಲ್ಲಿ ಹೇಳಲಾಗಿದೆ. ಇದರ ಸೂತ್ರ ಹೀಗಿದೆ– ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಎಂಬಿವೇ ಯೋಗಾಂಗಗಳು. ಅವುಗಳ ಸ್ವರೂಪವನ್ನು ಅಲ್ಲಿಯೇ ನೋಡಬಹುದು.

ವಿವರಣೆ: ಆಶ್ರಮಗಳು ನಾಲ್ಕು: ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ.

ಭಾಷ್ಯ: *ಮುಖ್ಯಾಧಿಕರಣೇ ನಾಸ್ತಿ ಬಹಿರಂಗಸ್ಯ ಯಮಾದಿಪಂಚಕಸ್ಯ ಅಪೇಕ್ಷಾ ಕೇವಲಾದ್ಧಾರಣಾಧ್ಯಾನಾದಿತ್ರಯರೂಪಾತ್ ಸಂಯಮಾದೇವ ಜ್ಞಾನಂ ಯೋಗಶ್ಚ ಭವತೀತಿ ಪಾತಂಜಲಸಿದ್ಧಾಂತಃ । ಜಡಭರತಾದಿಷು ಚ ತಥಾ ದೃಶ್ಯತೇಽಪಿ । ಅತಸ್ತದನುಸಾರೇಣ ಆಚಾರ್ಯೋಽಪ್ಯಾಹ–*

ಅನುವಾದ: ಉತ್ತಮ ಅಧಿಕಾರಿಗೆ ಯಮನಿಯಮಾದಿ ಐದರ ಅಪೇಕ್ಷೆ ಇರದು, ಕೇವಲ ಧಾರಣಾಧ್ಯಾನಾದಿತ್ರಯರೂಪಗಳಿಂದ ಸಂಯಮದಿಂದಲೇ ಜ್ಞಾನ, ಯೋಗ ಇವುಗಳು ಉಂಟಾಗುವುವು ಎಂಬುದು ಪತಂಜಲಿಯ ಸಿದ್ಧಾಂತ. ಜಡಭರತಾದಿಗಳೂ ಸಹ ಅದೇ ರೀತಿ ಸಿದ್ಧಾಂತ ಮಾಡಿದ್ದಾರೆ. ಆದ್ದರಿಂದ ಅದರಂತೆ ಆಚಾರ್ಯರು ಹೇಳುತ್ತಾರೆ.

ಸೂತ್ರ: ವೈರಾಗ್ಯಾದಭ್ಯಾಸಾಚ್ಚ ॥ ೩೬ ॥

ಸೂತ್ರಾನುವಾದ: ವೈರಾಗ್ಯದಿಂದಲೂ ಅಭ್ಯಾಸದಿಂದಲೂ (ಯೋಗಸಿದ್ಧಿ ಆಗುವುದು).

ಭಾಷ್ಯ: *ಕೇವಲಾಭ್ಯಾಸಾತ್ ಧ್ಯಾನರೂಪಾದೇವ ವೈರಾಗ್ಯಸಂಹಿತಾತ್ ಜ್ಞಾನಂ ತತ್ಸಾಧನಯೋಗಶ್ಚ ಭವತ್ಯುತ್ತಮಾಧಿಕಾರಿಣಾಮಿತ್ಯರ್ಥಃ । ತದುಕ್ತಂ ಗಾರುಡೇಽಪಿ–*

ಆಸನಸ್ಥಾನವಿಧಯೋ ನ ಯೋಗಸ್ಯ ಪ್ರಸಾಧಕಾಃ ।
ವಿಲಂಬಜನನಾಃ ಸರ್ವೇ ವಿಸ್ತರಾಃ ಪರಿಕೀರ್ತಿತಾಃ ॥
ಶಿಶುಪಾಲಃ ಸಿದ್ಧಿಮಾಪ ಸ್ಮರಣಾಭ್ಯಾಸಗೌರವಾತ್ ॥

(ಗ.ಪು. ೧.೨೨೭, ೪೪.–೪೫)

ಅನುವಾದ: ವೈರಾಗ್ಯದಿಂದ ಕೂಡಿದ ಕೇವಲ ಧ್ಯಾನದ ಅಭ್ಯಾಸದಿಂದ ಜ್ಞಾನವೂ ಅದನ್ನು ಸಾಧಿಸುವ ಯೋಗವೂ ಉಂಟಾಗುತ್ತವೆ. ಈ ಸಿದ್ಧಿಯು ಉತ್ತಮಾಧಿಕಾರಿಗಳಿಗೆ ದೊರೆಯುತ್ತದೆ.

ಆಸನ, ಸ್ಥಾನ ಮುಂತಾದ ವಿಧಿಗಳು ಯೋಗದ ಉತ್ಕೃಷ್ಟ ಸಾಧನವೇನಲ್ಲ. ಅವೆಲ್ಲ ಬಹಳ ವಿಳಂಬ ಉಂಟುಮಾಡುವುವು ಮತ್ತು ಬಹಳ ವಿಸ್ತಾರವೆನ್ನುತ್ತಾರೆ. ಶಿಶುಪಾಲನು ಸ್ಮರಣೆಯ ಅಭ್ಯಾಸಮಾತ್ರದಿಂದಲೇ ಸಿದ್ಧಿಯನ್ನು ಪಡೆದನು.

ಭಾಷ್ಯ: *ಅಥವಾ ವೈರಾಗ್ಯಧ್ಯಾನಾಭ್ಯಾಸಾವತ್ರ ಧ್ಯಾನಸ್ಯೈವ ಹೇತುತಯೋಕ್ತೌ, ಚಕಾರಶ್ಚ ಧಾರಣಾಸಮುಚ್ಚಯಾಯೇತಿ । ತದೇವಂ ಜ್ಞಾನಾನ್ ಮೋಕ್ಷಃ ।*

ಅನುವಾದ: ಅಥವಾ ವೈರಾಗ್ಯ ಮತ್ತು ಧ್ಯಾನಾಭ್ಯಾಸಗಳೆರಡೂ ಧ್ಯಾನದ ಕಾರಣಗಳೆಂದು ಹೇಳಿದೆ. 'ಚ' ಶಬ್ದವು 'ಧಾರಣಾ'ದ ಸಮುಚ್ಚಯಕ್ಕಾಗಿ. ಹೀಗೆ ಜ್ಞಾನದಿಂದ ಮೋಕ್ಷ ಉಂಟಾಗುವುದು.

ವಿವರಣೆ: ಉತ್ತಮಾಧಿಕಾರಿಗಳಿಗೆ ಬಹಿರಂಗವಾದ ಸಾಧನಗಳ ಅಗತ್ಯವಿಲ್ಲ. ಅಂತರಂಗ ಸಾಧನೆಗಳಿಂದ ಸಿದ್ಧಿ ಪಡೆಯಬಲ್ಲರು ಎಂದು ಅಭಿಪ್ರಾಯ.

ಭಾಷ್ಯ: *ಅತಃ ಪರಂ 'ಬಂಧೋ ವಿಪರ್ಯಯಾತ್' (ಸಾಂ.ಸೂ. ೩.೨೪) ಇತ್ಯುಕ್ತೋ ಬಂಧಕಾರಣಂ ವಿಪರ್ಯಯೋ ವ್ಯಾಖ್ಯಾಸ್ಯತೇ । ತತ್ರಾದೌ 'ಬಂಧೋ ವಿಪರ್ಯಯಾತ್' (೩.೨೪) ಎಂದು ಸೂತ್ರಕಾರನು ಹೇಳಿರುವುದರಿಂದ 'ಬಂಧಕಾರಣವು ಅಜ್ಞಾನದಿಂದ' ಎಂದು ವ್ಯಾಖ್ಯಾನ ಮಾಡಿರುವರು. ಮೊದಲು ವಿಪರ್ಯಯದ ಸ್ವರೂಪವನ್ನು ಹೇಳಿದೆ.*

ಸೂತ್ರ: ವಿಪರ್ಯಯಭೇದಾಃ ಪಂಚ ॥ ೩೭ ॥

ಸೂತ್ರಾನುವಾದ: ವಿಪರ್ಯಯದ ಭೇದಗಳು ಐದು.

ಭಾಷ್ಯ: *ಅವಿದ್ಯಾ–ಅಸ್ಮಿತಾ–ರಾಗ–ದ್ವೇಷ–ಅಭಿನಿವೇಶಾಃ ಪಂಚ ಏವ ಉಕ್ತಾಃ। (ಯೋ.ಸೂ. ೨.೩) ಬಂಧಹೇತು ವಿಪರ್ಯಯಸ್ಯಾಂತರಭೇದಾಃ ಇತ್ಯರ್ಥಃ । ತೇನ ಶುಕ್ತ್ಯಾದಿಜ್ಞಾನ ರೂಪಾಣಾಂ ವಿಪರ್ಯಯಾಣಾಂ ಅಸಂಗ್ರಹೇಽಪಿ ನ ಕ್ಷತಿಃ । ತತ್ರಾವಿದ್ಯಾ, 'ಅನಿತ್ಯ–ಅಶುಚಿ–ದುಃಖ–ಅನಾತ್ಮಸು ನಿತ್ಯ–ಶುಚಿ–ಸುಖ–ಆತ್ಮಖ್ಯಾತಿಃ' (ಯೋ.ಸೂ. ೨.೫) ಇತಿ ಯೋಗೇ ಪ್ರೋಕ್ತಾ । ಏವಮಸ್ಮಿತಾಽಪಿ ಆತ್ಮಾನಾತ್ಮನೋರೇಕತಾ–ಪ್ರತ್ಯಯಃ, ಶರೀರಾದ್ಯತಿರಿಕ್ತ ಆತ್ಮಾ ನಾಸ್ತೀತ್ಯೇವಂರೂಪಃ । ಅವಿದ್ಯಾ ತು ನೈವಂರೂಪಾ । ಆತ್ಮನಃ ಶರೀರಾಶರೀರೋಭಯರೂಪತ್ವೇ ಅಪಿ ಶರೀರೇ ಅಹಂಬುದ್ಧ್ಯುಪಪತ್ತೇಃ । ರಾಗದ್ವೇಷೌ ತು ಪ್ರಸಿದ್ಧೌ ಏವ । ಅಭಿನಿವೇಶಶ್ಚ ಮರಣಾದಿತ್ರಾಸ ಇತಿ । ರಾಗಾದೀನಾಂ ವಿಪರ್ಯಯಕಾರ್ಯತಯಾ ವಿಪರ್ಯಯತ್ವಮ್ ।*

ಅನುವಾದ: ಅವಿದ್ಯಾ–ಅಸ್ಮಿತಾ–ರಾಗ–ದ್ವೇಷ ಮತ್ತು ಅಭಿನಿವೇಶ ಈ ಐದು ವಿಪರ್ಯಯ ಭೇದಗಳು. ಇವು ಬಂಧಕ್ಕೆ ಕಾರಣವಾದ ವಿಪರ್ಯಯದ ಒಳಭೇದಗಳು. ಆದ್ದರಿಂದ ಶುಕ್ತ್ಯಾದಿ ಜ್ಞಾನರೂಪದ ವಿಪರ್ಯಯದ ಈ ಸಂಗ್ರಹದಲ್ಲಿಲ್ಲದಿದ್ದರೂ ತೊಂದರೆಯಿಲ್ಲ. ಅವುಗಳಲ್ಲಿ ಅವಿದ್ಯೆಯು, 'ಅನಿತ್ಯ–ಅಶುಚಿ–ದುಃಖ–ಅನಾತ್ಮ' ಈ ಪದಾರ್ಥಗಳಲ್ಲಿ ನಿತ್ಯ–ಶುಚಿ–ಸುಖ–ಆತ್ಮಖ್ಯಾತಿಗಳ ಅನುಭವ' ಎಂದು ಯೋಗವು ಹೇಳಿದೆ. ಹಾಗೆಯೇ 'ಅಸ್ಮಿತಾ' ಸಹ ಆತ್ಮ–ಅನಾತ್ಮಗಳಲ್ಲಿ ಏಕತೆಯನ್ನು ಕಾಣುವುದು, ಶರೀರಾದಿಗಳನ್ನು ಮೀರಿದ ಆತ್ಮನಿಲ್ಲ ಎಂದು ಭಾವಿಸುವುದು ಮುಂತಾದುವು. ಆದರೆ ಅವಿದ್ಯೆಯ ಸ್ವರೂಪ ಹಾಗಿಲ್ಲ. ಆತ್ಮನಲ್ಲಿ ಶರೀರ–ಅಶರೀರ ಉಭಯರೂಪತೆಯೂ ಇದ್ದರೂ ಶರೀರದಲ್ಲಿ 'ನಾನು' ಎಂಬ ಭಾವವನ್ನು ಅದು ಉಂಟುಮಾಡುವುದು. ರಾಗ–ದ್ವೇಷಗಳು ಪ್ರಸಿದ್ಧವಾದ ಭಾವನೆಗಳೇ. ಅಭಿನಿವೇಶವು ಮರಣಾದಿಗಳಿಂದ ಭಯ. ರಾಗಾದಿಗಳು ವಿಪರ್ಯಯಗಳನ್ನು ಉಂಟುಮಾಡುವುದರಿಂದ ವಿಪರ್ಯಯಗಳೆನ್ನುವರು.

ಭಾಷ್ಯ: *ವಿಪರ್ಯಯಸ್ಯ ಸ್ವರೂಪಮುಕ್ತ್ವಾ ತತ್ಕಾರಣಸ್ಯಾಶಕ್ತೇರಪಿ ಸ್ವರೂಪಮಾಹ–*

ಸೂತ್ರ: ಅಶಕ್ತಿರಷ್ಟಾವಿಂಶತಿಧಾ ತು ॥ ೩೮ ॥

ಅನುವಾದ: ವಿಪರ್ಯಯದ ಸ್ವರೂಪವನ್ನು ಹೇಳಿ ಅದಕ್ಕೆ ಕಾರಣಭೂತವಾದ ಅಶಕ್ತಿಯ ಸ್ವರೂಪವನ್ನು ಹೇಳುವರು–

ಸೂತ್ರಾನುವಾದ: ಅಶಕ್ತಿಯು ಹದಿನೆಂಟು ಪ್ರಕಾರಗಳು.

ಭಾಷ್ಯ: *ಏಕಾದಶೇಂದ್ರಿಯವಧಾಃ ಸಹಬುದ್ಧಿವಧೈರಶಕ್ತಿರುದ್ದಿಷ್ಟಾ ।*
ಸಪ್ತದಶವಧು ಬುದ್ಧೇರ್ವಿಪರ್ಯಯಾತ್ ತುಷ್ಟಿಸಿದ್ಧೀನಾಮ್ ॥

ಅನುವಾದ: ಹನ್ನೊಂದು ಇಂದ್ರಿಯವಧೆಗಳು ಮತ್ತು ಬುದ್ಧಿವಧೆಯನ್ನು ಸೇರಿ ಅಶಕ್ತಿ ಎನ್ನುತ್ತಾರೆ. ಬುದ್ಧಿವಧೆಗಳು ಹದಿನೇಳು ಬಗೆ. ತುಷ್ಟಿ ಮತ್ತು ಸಿದ್ಧಿಗಳು ವಿಪರ್ಯಯವಾದಾಗ ಬುದ್ಧಿಯ ವಧೆಯಲ್ಲಿ ಸೇರುತ್ತವೆ.

ವಿವರಣೆ: ವಧೆ ಎಂದರೆ ಶಕ್ತಿ ಕುಂಠಿತವಾಗುವುದು.

ಭಾಷ್ಯ: *ಬಾಧಿರ್ಯಂ ಕುಷ್ಠಿತಾಂಧತ್ವಂ ಜಡತಾಽಜಿಘ್ರತಾ ತಥಾ ।*
ಮೂಕತಾ ಕೌಣ್ಯಪಂಗುತ್ವೇ ಕ್ಲೈಬ್ಯೋದಾವರ್ತಮುಗ್ಧತಾಃ ॥

ಅನುವಾದ: ಕಿವುಡು, ಕುಷ್ಠರೋಗ, ಕುರಡು, ಜಡತೆ (ನಾಲಿಗೆಯದು) ವಾಸನೆಯನ್ನು ತಿಳಿಯದಿರುವುದು, ಮೂಕತೆ, ಕೈಗಳ ಜಡತೆ, ಕುಂಟುತನ, ಷಂಡತ್ವ, ಮಲಬದ್ಧತೆ ಮತ್ತು ಮೌಢ್ಯ ಇವಿಷ್ಟೂ ಇಂದ್ರಿಯವಧಗಳು.

ಭಾಷ್ಯ: *ಇತ್ಯೇಕಾದಶೇಂದ್ರಿಯಾಣಾಂ ಏಕಾದಶಾ ಶಕ್ತಯಃ ಸ್ವರಶ್ಚ ಬುದ್ಧೇಃ ಸಪ್ತದಶಾ ಶಕ್ತಯಃ । ಯಥಾ ವಕ್ಷ್ಯಮಾಣಾನಾಂ ನವತುಷ್ಟೀನಾಂ ವಿಘಾತಾ ನವ, ತಥಾ ವಕ್ಷ್ಯಮಾಣಾನಾಂ ಅಷ್ಟಸಿದ್ಧೀನಾಂ ಚ ವಿಘಾತಾ ಅಷ್ಟೌ ಇತಿ ಮಿಲಿತ್ವಾ ಚೇಮಾಃ ಸ್ವತಃಪರತಶ್ಚ ಅಷ್ಟಾವಿಂಶತಿ ಬುದ್ಧೇಃ ಅಶಕ್ತಯಃ ಇತ್ಯರ್ಥಃ । ತು ಶಬ್ದಃ ಏಷಾಂ ವಿಶೇಷ–ಪ್ರಸಿದ್ಧಿಖ್ಯಾಪನಾರ್ಥಃ ।*

ಅನುವಾದ: ಹೀಗೆ ಹನ್ನೊಂದು ಇಂದ್ರಿಯಗಳಿಗೆ ಹನ್ನೊಂದು ಅಶಕ್ತಿಗಳು. ಸ್ವತಃ ಬುದ್ಧಿಗೆ ಹದಿನೇಳು ಅಶಕ್ತಿಗಳು. ಇನ್ನು ಮುಂದೆ ಹೇಳುವಂತೆ ಒಂಬತ್ತು ತುಷ್ಟಿಗಳಿಗೆ ವಿಘಾತಗಳು ಒಂಬತ್ತು, ಹಾಗೆಯೇ ಮುಂದೆ ಹೇಳುವಂತೆ ಎಂಟು ಸಿದ್ಧಿಗಳಿಗೆ ಎಂಟು ವಿಘಾತಗಳು, ಒಟ್ಟು ಸ್ವತಃ ಮತ್ತು ಪರತಃ ಬುದ್ಧಿಯ ಇಪ್ಪತ್ತೆಂಟು ಅಶಕ್ತಿಗಳು ಎಂದರ್ಥ. 'ತು' ಶಬ್ದವು ಇವುಗಳ ವಿಶೇಷ ಪ್ರಸಿದ್ಧಿಯನ್ನು ತಿಳಿಸಲು ಬಳಸಲ್ಪಟ್ಟಿದೆ.

ಭಾಷ್ಯ: *ಯಯೋರ್ವಿಘಾತೇ ಬುದ್ಧಿಶಕ್ತೀ ತೇ ತುಷ್ಟಿಸಿದ್ಧೀ ಸೂತ್ರದ್ವಯೇನ ಆಹ–*

ಸೂತ್ರ: ತುಷ್ಟಿರ್ನವಧಾ ॥ ೩೯ ॥

ಅನುವಾದ: ಯಾವುದನ್ನು ಅಡಗಿಸುವುದರಿಂದ ಬುದ್ಧಿಯ ಎರಡು ಅಶಕ್ತಿಗಳಾದ ತುಷ್ಟಿ, ಸಿದ್ಧಿಗಳನ್ನು ಎರಡು ಸೂತ್ರಗಳಿಂದ ಹೇಳಿದೆ.

ಸೂತ್ರಾನುವಾದ: ತುಷ್ಟಿಯು ಒಂಬತ್ತು ಬಗೆ.

ಭಾಷ್ಯ: *ಸ್ವಯಮೇವ ನವಧಾತ್ವಂ ವಕ್ಷ್ಯತಿ ।*

ವಿವರಣೆ: ತುಷ್ಟಿ ಎಂದರೆ ಸಂತೋಷ. ಸಾಧನೆಯ ಮಾರ್ಗದಲ್ಲಿ ಸಾಧಿಸಿದೆ ಎಂಬ ಸಂತೋಷ ಮೂಡಿದರೆ ಸಾಧನೆಗೆ ಬಾಧಕವಾಗುತ್ತದೆ.

ಸೂತ್ರ: ಸಿದ್ಧಿರಷ್ಟಧಾ ॥ ೪೦ ॥

ಭಾಷ್ಯ: *ಇದನ್ನೂ ಮುಂದೆ ತಿಳಿಸುವರು.*

ವಿವರಣೆ: ಸಾಧನೆಯ ಹಾದಿಯಲ್ಲಿ ಸಿದ್ಧಿ ಆಗಿಯೇ ಹೋಯಿತೆಂದು ಸಿದ್ಧಿಯಾಗುವ ಮುನ್ನವೇ ತಿಳಿಯುವುದು ಬಾಧಕವು.

ಸೂತ್ರ: ಅವಾಂತರಭೇದಾಃ ಪೂರ್ವವತ್ ॥ ೪೧ ॥

ಭಾಷ್ಯ: *ಉಕ್ತಾನಾಂ ವಿಪರ್ಯಯಾಶಕ್ತಿ ತುಷ್ಟಿಸಿದ್ಧೀನಾಂ ವಿಶೇಷಜಿಜ್ಞಾಸಾಯಾಂ ಕ್ರಮೇಣ ಸೂತ್ರಚತುಷ್ಟಯಂ ಪ್ರವರ್ತತೇ ।*

ಅನುವಾದ: ಮೊದಲು ವರ್ಣಿಸಿರುವ ವಿಪರ್ಯಯ–ಅಶಕ್ತಿ–ತುಷ್ಟಿ–ಸಿದ್ಧಿ ಇವುಗಳನ್ನು ವಿಶೇಷವಾಗಿ ತಿಳಿಯುವ ಕುತೂಹಲಕ್ಕೆ ಕ್ರಮೇಣ ನಾಲ್ಕು ಸೂತ್ರಗಳನ್ನು ಹೇಳಿದೆ–

ಸೂತ್ರಾನುವಾದ: ನಡುವೆ ಬರುವ ಪ್ರಕಾರಗಳು ಪೂರ್ವಾಚಾರ್ಯರು ಹೇಳಿದಂತೆ.

ಭಾಷ್ಯ: *ವಿಪರ್ಯಯಸ್ಯ ಅವಾಂತರಭೇದಾಃ ಯೇ ಸಾಮಾನ್ಯತಃ ಪಂಚೋಕ್ತಾಸ್ತೇ ಪೂರ್ವವತ್ ಪೂರ್ವಾಚಾರ್ಯೈಃ ಯಥೋಕ್ತಾಃ ತಥೈವ ವಿಶಿಷ್ಯ ಅವಧಾರ್ಯಾಃ । ವಿಸ್ತರಭಯಾನ್ನೇಹೋಚ್ಯಂತೇ ಇತ್ಯರ್ಥಃ । ತೇ ಚ ಅವಿದ್ಯಾದಯಃ ಮಯಾಪಿ ಸಾಮಾನ್ಯತಃ ಏವ ವ್ಯಾಖ್ಯಾತಾಃ ಪಂಚೇತಿ । ವಿಶೇಷತಸ್ತು ದ್ವಾಷಷ್ಟಿ ಭೇದಾಃ । ತದುಕ್ತಂ ಕಾರಿಕಾಯಾಮ್।*

ಭೇದಸ್ತಮಸೋಽಷ್ಟವಿಧೋ ಮೋಹಸ್ಯ ಚ ದಶವಿಧೋ ಮಹಾಮೋಹಃ।
ತಾಮಿಸ್ರೋಽಷ್ಟಾದಶಧಾ ತಥಾ ಭವತ್ಯಂಧತಾಮಿಸಃ ॥ ಇತಿ ಚ ।

(ಸಾಂ.ಕಾ. ೪೮)

ಅನುವಾದ: ವಿಪರ್ಯಯದ ಪ್ರಕಾರಗಳು ಸಾಮಾನ್ಯವಾಗಿ ಐದೆಂದು ಹೇಳಲ್ಪಟ್ಟಿದೆ. ಆದರೆ ಪೂರ್ವಾಚಾರ್ಯರು ಏನು ಹೇಳಿರುವರೋ ಅದನ್ನೇ ವಿಶೇಷವಾಗಿ ತಿಳಿಯಬೇಕು. ದೀರ್ಘವಾದೀತೆಂಬ ಭಯದಿಂದ ಅವುಗಳನ್ನು ಇಲ್ಲಿ ಹೇಳಿಲ್ಲ. ನಾನೂ ಸಹ ಈ ಅವಿದ್ಯಾದಿಗಳು ಸಾಮಾನ್ಯವಾಗಿ ಐದೆಂದೇ ಹೇಳಿದ್ದೇನೆ. ವಿಶೇಷವಾಗಿರುವುವು ಅರವತ್ತೆರಡು ಭೇದಗಳು. ಅದನ್ನೇ ಕಾರಿಕೆಯಲ್ಲಿ ಹೇಳಿದೆ.

(ಅವಿದ್ಯೆ) ತಮಸ್ಸುಗಳು ಎಂಟು ಬಗೆ ಹಾಗೂ ಮೋಹ (ಅಸ್ಮಿತಾ) ಎಂಟು ಬಗೆ, ಮಹಾಮೋಹ (ರಾಗ) ಹತ್ತು ಬಗೆ, ತಾಮಿಸ್ರ (ದ್ವೇಷ) ಹದಿನೆಂಟು ಬಗೆ. ಹಾಗೆಯೇ ಅಂಧತಾಮಿಸ್ರವೂ ಹದಿನೆಂಟು ಬಗೆ. (ಒಟ್ಟು ಅರವತ್ತೆರಡು ಬಗೆಗಳು.)

ಭಾಷ್ಯ: *ಅಸ್ಯಾಯಮರ್ಥಃ । ಅಷ್ಟಸ್ವವ್ಯಕ್ತಮಹದಹಂಕಾರಪಂಚತನ್ಮಾತ್ರೇಷು ಪ್ರಕೃತಿಷು ಅನಾತ್ಮಸ್ವಾತ್ಮಬುದ್ಧಿರವಿದ್ಯಾ ತಮೋಽಷ್ಟಧಾ ಭವತಿ । ಕಾರ್ಯಕಾರಣಾಭೇದೇನ ಕೇವಲವಿಕೃತಿಷು ಆತ್ಮಬುದ್ಧೇರಪಿ ಅತ್ರ ಅಂತರ್ಭಾವಃ । ಏವಮವಿದ್ಯಾಯಾ ವಿಷಯಭೇದೇನ ಅಷ್ಟವಿಧತ್ವಾತ್ ತತ್ಸಮಾನವಿಷಯಕಸ್ಯ ಅಸ್ಮಿತಾಖ್ಯಸ್ಯ ಮೋಹಸ್ಯ ಅಷವಿಧತ್ವಮ್ । ದಿವ್ಯಾದಿವ್ಯಭೇದೇನ ಶಬ್ದಾದೀನಾಂ ವಿಷಯಾಣಾಂ । ದಶತ್ವಾತ್ ತದ್ವಿಷಯಕೋ ರಾಗಾಖ್ಯೋ ಮಹಾಮೋಹೋ ದಶವಿಧಃ ।*

ಅವಿದ್ಯಾಽಸ್ಮಿತಯೋರಷ್ಟೌ ಯೇ ವಿಷಯಾ ಯೇ ರಾಗಸ್ಯ ದಶವಿಷಯಾ ತದ್ವಿಘಾತಕೇಷು ಅಷ್ಟಾದಶಸು ಅಷ್ಟಾದಶಧಾ ತಾಮಿಸ್ರಾಖ್ಯೋ ದ್ವೇಷಃ। ಏವಂ ತೇಷಾಂ ಅಷ್ಟಾದಶಾನಾಂ ವಿನಾಶಾದಿ ದರ್ಶನಾದಷ್ಟಾದಶ–ಧಾಂಧತಾಮಿಸ್ರಾಖ್ಯೋಽಭಿನಿವೇಶೋ ಭಯಮಿತಿ । ಏತೇಷಾಂ ಚ ತಮ ಆದಿಸಂಜ್ಞಾ ತದ್ಧೇತುತ್ವಾದಿತಿ ।

ಅನುವಾದ: ಇದರ ಅರ್ಥ ಹೀಗಿದೆ: ಅವ್ಯಕ್ತ, ಮಹತ್, ಅಹಂಕಾರ, ಪಂಚತನ್ಮಾತ್ರಗಳು ಇವುಗಳನ್ನು ಪ್ರಕೃತಿಗಳಲ್ಲಿ ಅನಾತ್ಮರೂಪವಾದರೂ ಆತ್ಮಬುದ್ಧಿಯನ್ನಿಡುವುದು ಅವಿದ್ಯೆ ಅಥವಾ ತಮಸ್ಸು ಎಂಟು ವಿಧಗಳಲ್ಲಿ ತೋರುತ್ತದೆ. ಕಾರ್ಯ ಕಾರಣಗಳ ಅಭೇದದಿಂದ ಕೇವಲ ವಿಕಾರಗಳಲ್ಲಿ ಆತ್ಮಭಾವವನ್ನು ಸೇರಿಸಲಾಗಿದೆ. ಹೀಗೆಯೇ ವಿಷಯಭೇದದ ಕಾರಣ ಎಂಟು ಪ್ರಕಾರಗಳನ್ನು ಹೊಂದಿರುವುದರಿಂದ ಅದಕ್ಕೆ ಸಮಾನವಾದ ವಿಷಯವುಳ್ಳ ಅಸ್ಮಿತಾ ಎಂಬ ಮೋಹವೂ ಎಂಟು ಬಗೆ. ದಿವ್ಯ ಮತ್ತು ಅದಿವ್ಯ ಭೇದದ ಕಾರಣ ಶಬ್ದಾದಿ ವಿಷಯಗಳು ಹತ್ತು ಬಗೆಯಾಗಿರುವುದರಿಂದ ಅದೇ ವಿಷಯವಿರುವುದರಿಂದ ರಾಗವೆಂಬ ಮಹಾಮೋಹವು ಹತ್ತು ಬಗೆ. ಅವಿದ್ಯಾ ಮತ್ತು ಅಸ್ಮಿತಾಗಳ ವಿಷಯಗಳು ಎಂಟು ಬಗೆ. ಹಾಗೆಯೇ ರಾಗದ ಹತ್ತು ವಿಷಯಗಳು; ಹಾಗೆಯೇ ಅದನ್ನು ಹಾಳುಮಾಡುವ ಹದಿನೆಂಟು ವಿಷಯಗಳು ತಾಮಿಸ್ರವೆಂದು ಕರೆಯಲ್ಪಡುವ ದ್ವೇಷಭಾವ, ಹೀಗೆ ಆ ಹದಿನೆಂಟರ ವಿನಾಶಾದಿ ದರ್ಶನದಿಂದ ಹದಿನೆಂಟು ಬಗೆಯ ಅಂಧತಾಮಿಸ್ರ ಎಂಬ ಅಭಿನಿವೇಶ ಅಥವಾ ಭಯ. ಇವುಗಳ ತಮಸ್ಸೇ ಮೊದಲಾದ ಸಂಜ್ಞೆಯು ಅದಕ್ಕೆ ಕಾರಣವಾಗಿ ಇರುವುದರಿಂದ ಕೊಡಲ್ಪಟ್ಟಿದೆ.

ಸೂತ್ರ: ಏವಮಿತರಸ್ಯಾಃ ॥ ೪೨ ॥

ಸೂತ್ರಾನುವಾದ: ಇದೇ ಪ್ರಕಾರ ಇನ್ನೊಂದರ (ಭೇದಗಳನ್ನು ತಿಳಿಯಬೇಕು)

ಭಾಷ್ಯ: *ಏವಂ ಪೂರ್ವವದೇವೇತರಸ್ಯಾ ಅಶಕ್ತೇಃ ಅಪಿ ಅವಾಂತರಭೇದಾಃ ಅಷ್ಟಾವಿಂಶತಿರ್ವಿಶೇಷತೋಽವಗಂತವ್ಯಾಃ ಇತ್ಯರ್ಥಃ । ಅಶಕ್ತಿರಷ್ಟಾವಿಂಶತಿಧಾ ಇತ್ಯೇತಸ್ಮಿನ್ನೇವ (ಸೂತ್ರ ೩೮) ಸೂತ್ರೇ ಅಷ್ಟಾವಿಂಶತಿಧಾತ್ವಂ ಮಯಾ ವ್ಯಾಖ್ಯಾತಮ್ ॥೪೨॥*

ಅನುವಾದ: ಇದೇ ಪ್ರಕಾರವಾಗಿ ಮೊದಲೇ ಹೇಳಿದ (ವಿಪರ್ಯಯ) ರೀತಿಯಲ್ಲಿ ಅಶಕ್ತಿಯೂ ಇಪ್ಪತ್ತೆಂಟು ಬಗೆಯೆಂದು ವಿಶೇಷವಾಗಿ ತಿಳಿಯಬೇಕು ಎಂದರ್ಥ. ಅಶಕ್ತಿಯೂ ಇಪ್ಪತ್ತೆಂಟು ಬಗೆಯೆಂದು ಇದೇ ಸೂತ್ರದಲ್ಲಿ (೩.೩೮) ಇಪ್ಪತ್ತೆಂಟು ಬಗೆಯ ವಿಷಯವನ್ನು ವ್ಯಾಖ್ಯಾನ ಮಾಡಿದ್ದೇನೆ.

ಸೂತ್ರ: ಆಧ್ಯಾತ್ಮಿಕಾದಿ ಭೇದಾನ್ನವಧಾ ತುಷ್ಟಿಃ ॥ ೪೩ ॥

ಸೂತ್ರಾನುವಾದ: ತುಷ್ಟಿಯು ಆಧ್ಯಾತ್ಮಿಕಾದಿ ಒಂಬತ್ತು ಬಗೆಯದು.

ಭಾಷ್ಯ: *ಇದಂ ಸೂತ್ರಂ ಕಾರಿಕಯಾ ವ್ಯಾಖ್ಯಾತಮ್ । ಆಧ್ಯಾತ್ಮಿಕ್ಯಶ್ಚತಸ್ರಃ ಪ್ರಕೃತ್ಯುಪಾದಾನಕಾಲಭಾಗ್ಯಾಖ್ಯಾಃ । ಬಾಹ್ಯಾ ವಿಷಯೋಪರಮಾತ್ ಪಂಚನವ ತುಷ್ಟಯೋಽಭಿಮತಾಃ ॥ (ಸಾಂ.ಕಾ. ೫೦) ಇತಿ ।*

ಅಸ್ಯಾಯಮರ್ಥಃ । ಆತ್ಮಾನಂ ತುಷ್ಟಿಮತಃ ಸಂಘಾತಮಧಿಕೃತ್ಯ ವರ್ತಂತ ಇತ್ಯಾಧ್ಯಾತ್ಮಿಕ್ಯಸ್ತುಷ್ಟಯಃ ಚತಸ್ರಃ । ತತ್ರ ಪ್ರಕೃತ್ಯಾಖ್ಯಾ ತುಷ್ಟಿರ್ಯಥಾ– ಸಾಕ್ಷಾತ್ಕಾರಪರ್ಯಂತಃ ಪರಿಣಾಮಃ ಸರ್ವೋಽಪಿ ಪ್ರಕೃತೇರೇವ । ತಂ ಚ ಪ್ರಕೃತಿರೇವ ಕರೋತ್ಯಹಂ ತು ಕೂಟಸ್ಥಃ ಪೂರ್ಣ ಇತ್ಯಾತ್ಮಭಾವನಾತ್ ಪರಿತೋಷಃ । ಇಯಂ ತುಷ್ಟಿರಂಭ ಇತ್ಯುಚ್ಯತೇ ।

ಅನುವಾದ: ಈ ಸೂತ್ರದ ವ್ಯಾಖ್ಯಾನವನ್ನು ಕಾರಿಕೆಯು ಮಾಡಿದೆ. ಆಧ್ಯಾತ್ಮಿಕ ತುಷ್ಟಿಗಳು ನಾಲ್ಕು. ಪ್ರಕೃತಿ, ಉಪಾದಾನ, ಕಾಲ ಮತ್ತು ಭಾಗ್ಯ. ಬಾಹ್ಯತುಷ್ಟಿಗಳು ವಿಷಯಗಳಿಂದ ಹಿಂದೆಗೆದುದರಿಂದ ಹದಿನಾಲ್ಕು ಎಂದು ಪರಿಗಣಿಸಲ್ಪಟ್ಟಿವೆ.

ಇದರ ಅರ್ಥ ಹೀಗೆ: ಆತ್ಮನ ತುಷ್ಟಿಯು ದೇಹವನ್ನು ಒಳಗೊಂಡಿದ್ದು ಎಂಬುದು ಆಧ್ಯಾತ್ಮಿಕ್ಯ ತುಷ್ಟಿ. ಇದು ನಾಲ್ಕು ಬಗೆ. ಅದರಲ್ಲಿ ಪ್ರಕೃತಿ ಎಂಬ ತುಷ್ಟಿಯು– ಸಾಕ್ಷಾತ್ಕಾರವಾಗುವವರೆಗೆ ಎಲ್ಲ ಪರಿಣಾಮಗಳೂ ಪ್ರಕೃತಿಯದೇ. ಆ ಪ್ರಕೃತಿಯೇ ನಾನು ಕೂಟಸ್ಥನು, ನಾನು ಪೂರ್ಣ ಎಂಬೀ ಆತ್ಮಭಾವನೆಗಳಿಂದ ಪರಿತೋಷವೇ ಪ್ರಕೃತಿತುಷ್ಟಿ. ಈ ತುಷ್ಟಿಯನ್ನು ಅಂಭ ಎಂದೂ ಹೇಳುವರು.

ಭಾಷ್ಯ: *ತತಶ್ಚ ಪ್ರವ್ರಜ್ಯೋಪಾದಾನೇನ ಯಾ ತುಷ್ಟಿಃ ಸೋಪಾದಾನಾಖ್ಯಾ ಸಲಿಲಮಿತ್ಯುಚ್ಯತೇ ।*

ಅನುವಾದ: ಅನಂತರ ಸಂನ್ಯಾಸವನ್ನು ಸ್ವೀಕರಿಸುವುದರಿಂದ ಉಂಟಾಗುವ ತುಷ್ಟಿಯು 'ಸೋಪಾದಾನಾತುಷ್ಟಿಯೆಂದೂ' 'ಸಲಿಲ'ವೆಂಬ ಮತ್ತೊಂದು ಹೆಸರಿನಿಂದಲೂ ಕರೆಯಲ್ಪಡುವುದು.

ಭಾಷ್ಯ: *ತತಶ್ಚ ಪ್ರವ್ರಜ್ಯಾಯಾಂ ಬಹುಕಾಲಂ ಸಮಾಧ್ಯನುಷ್ಠಾನೇನ ಯಾ ತುಷ್ಟಿಃ ಸಾ ಕಾಲಾಖ್ಯಾ ತುಷ್ಟಿರೋಘ ಇತ್ಯುಚ್ಯತೇ ।*

ಅನುವಾದ: ಅನಂತರ ಸಂನ್ಯಾಸವನ್ನು ಗ್ರಹಿಸಿ ಬಹಳಕಾಲ ಸಮಾಧಿಯನ್ನು ಅನುಷ್ಠಾನ ಮಾಡುವುದರಿಂದ ತುಷ್ಟಿಯನ್ನು ಕಾಲ ಎಂದೂ ಓಘ ಎಂದೂ ಕರೆಯುವರು.

ಭಾಷ್ಯ: *ತತಶ್ಚ ಪ್ರಜ್ಞಾನಪರಮಕಾಷ್ಠಾರೂಪೇ ಧರ್ಮಮೇಘಸಮಾಧೌ ಸತಿ ಯಾ ತುಷ್ಟಿಃ ಸಾ ಭಾಗ್ಯಾಖ್ಯಾ ವೃಷ್ಟಿರಿತ್ಯುಚ್ಯತೇ ಇತಿ ಚತಸ್ರಃ ಆಧ್ಯಾತ್ಮಿಕ್ಯಃ।*

ಅನುವಾದ: ಪ್ರಜ್ಞಾನದ ಪರಾಕಾಷ್ಠಾರೂಪದ 'ಧರ್ಮಮೇಘ' ಸಮಾಧಿಯಿಂದ (ದೊರೆಯುವ ಸಂತೋಷವನ್ನು) ಭಾಗ್ಯ ಎಂದೂ ವೃಷ್ಟಿ ಎಂದೂ ಕರೆಯುವರು.

ವಿವರಣೆ: 'ಅಂಭ, ಓಘ, ಸಲಿಲ, ವೃಷ್ಟಿ' ಈ ತುಷ್ಟಿಗಳನ್ನು ಆಧ್ಯಾತ್ಮಿಕ್ಯ ಎಂದು ಕರೆದಿದ್ದಾರೆ. ಏಕೆಂದರೆ ಇವುಗಳು 'ಆತ್ಮ'ನಿಂದ ಉಂಟಾಗುವುದು. ಬಾಹ್ಯ ತುಷ್ಟಿಗಳು ಐದು. ಇವು ಇಂದ್ರಿಯಗಳಿಂದ ಉಂಟಾಗುವುವು.

ಭಾಷ್ಯ: *ಬಾಹ್ಯಾಃ ಪಂಚತುಷ್ಟಯಃ ಬಾಹ್ಯವಿಷಯೇಷು ಪಂಚಸು ಶಬ್ದಾದಿಷು ಅರ್ಜನ, ರಕ್ಷಣ, ಕ್ಷಯ, ಭೋಗ, ಹಿಂಸಾದಿ ದೋಷನಿಮಿತ್ತೋ ಪರಮಾಜ್ಞಾಯಂತೇ । ತಾಶ್ಚ ತುಷ್ಟಯಃ ಯಥಾಕ್ರಮಂ ಪಾರಂ–ಸುಪಾರಂ–ಪಾರಪಾರಂ, ಅನುತ್ತಮಾಂಭಃ ಉತ್ತಮಾಂಭ ಇತಿ ಪರಿಭಾಷಿತಾ ಇತಿ ।*

ಅನುವಾದ: ಬಾಹ್ಯತುಷ್ಟಿಗಳು ಐದು, ಬಾಹ್ಯ ವಿಷಯಗಳಾದ ಐದರಲ್ಲಿ ಎಂದರೆ ಶಬ್ದಾದಿ ಐದು ವಿಷಯಗಳಲ್ಲಿ ಅರ್ಜನ, ರಕ್ಷಣ, ಕ್ಷಯ, ಭೋಗ, ಹಿಂಸಾ ಮುಂತಾದ ದೋಷನಿಮಿತ್ತಗಳನ್ನು ಹತೋಟಿಯಲ್ಲಿಡಲು ಜಾಗೃತವಾಗುತ್ತದೆ. ಈ ಬಾಹ್ಯತುಷ್ಟಿಗಳನ್ನು ಕ್ರಮವಾಗಿ ಪಾರ, ಸುಪಾರ, ಪಾರಪಾರ, ಅನುತ್ತಮಾಂಭ ಮತ್ತು ಉತ್ತಮಾಂಭ ಎಂದು ಪರಿಭಾಷೆ ನೀಡಲಾಗಿದೆ.

ಭಾಷ್ಯ: *ಕಶ್ಚಿತ್ತು ಇಮಾಂ ಕಾರಿಕಾಂ ಅನ್ಯಥಾ ವ್ಯಾಖ್ಯಾತವಾನ್ । ತದ್ಯಥಾ–ವಿವೇಕಸಾಕ್ಷಾತ್ಕಾರೋಽಪಿ ಪ್ರಕೃತಿಪರಿಣಾಮ ಏವ ಇತ್ಯಲಂ ಧ್ಯಾನಾಭ್ಯಾಸೇನೇತ್ಯೇವಂ ದೃಷ್ಟ್ವಾ ಯಾ ಧ್ಯಾನಾದಿನಿವೃತ್ತೌ ತುಷ್ಟಿಃ ಸಾ ಪ್ರಕೃತ್ಯಾಖ್ಯಾ ।*

ಅನುವಾದ: ಒಬ್ಬ ವಿದ್ವಾಂಸರು ಈ ಕಾರಿಕೆಯನ್ನು ಬೇರೆಯ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಹೇಗೆಂದರೆ– ವಿವೇಕಸಾಕ್ಷಾತ್ಕರವೂ ಸಹ ಪ್ರಕೃತಿಯ ಪರಿಣಾಮವೇ, ಆದ್ದರಿಂದ ಧ್ಯಾನಾಭ್ಯಾಸವೇ ಬೇಕಾಗಿಲ್ಲ ಎಂಬ ದೃಷ್ಟಿಯಿಂದ ಧ್ಯಾನಾದಿಗಳ ನಿವೃತ್ತಿಯಿಂದ ಸಂತೋಷಪಡುವುದೇ ಪ್ರಕೃತಿ ಎಂಬ ತುಷ್ಟಿ ಎಂದಿದ್ದಾರೆ.

ವಿವರಣೆ: ಈ ಅಭಿಪ್ರಾಯವನ್ನು ವಾಚಸ್ಪತಿ ಮಿಶ್ರರು ವ್ಯಕ್ತಪಡಿಸಿದ್ದಾರೆ.

ಭಾಷ್ಯ: *ಪ್ರವ್ರಜ್ಯೋಪಾದಾನೇನೈವ ಮೋಕ್ಷೋ ಭವಿಷ್ಯತಿ, ಕಿಂ ಧ್ಯಾನಾದಿನೇತಿ ಯಾ ತುಷ್ಟಿಃ ಸೋಪಾದಾನಾಖ್ಯಾ ।*

ಅನುವಾದ: ಸಂನ್ಯಾಸವನ್ನು ಸ್ವೀಕರಿಸುವುದರಿಂದಲೇ ಮೋಕ್ಷವುಂಟಾಗುವುದು. ಇನ್ನು ಧ್ಯಾನಾದಿಗಳೇಕೆ ಎಂದು ಸಂತುಷ್ಟರಾಗುವುದನ್ನು 'ಉಪಾದಾನ' ಎನ್ನುವರು.

ಭಾಷ್ಯ: *ಕೃತಸಂನ್ಯಾಸಸ್ಯಾಪಿ ಕಾಲೇನೈವ ಮೋಕ್ಷೋ ಭವಿಷ್ಯತಿ ಅಲಂ ಉದ್ವೇಗೇನೇತಿ ಯಾ ತುಷ್ಟಿಃ ಸಾ ಕಾಲಾಖ್ಯಾ ।*

ಅನುವಾದ: ಸಂನ್ಯಾಸಗ್ರಹಣದಿಂದಲೇ ಸಮಯ ಬಂದಾಗ ಮೋಕ್ಷ ಉಂಟಾಗುವುದು, ಇನ್ನೇಕೆ ಉದ್ವೇಗ ಎಂಬ ಈ ತುಷ್ಟಿಯನ್ನು ಕಾಲ ಎನ್ನುವರು.

ಭಾಷ್ಯ: *ಭಾಗ್ಯಾದೇವ ಮೋಕ್ಷೋ ಭವಿಷ್ಯತಿ, ನ ಮೋಕ್ಷಶಾಸ್ತ್ರೋಕ್ತೈಃ ಸಾಧನೈಃ ಏವಂ ಕುತರ್ಕೇಣ ಯಾ ತುಷ್ಟಿಃ ಸಾ ಭಾಗ್ಯಾಖ್ಯಾ ಇತ್ಯಾದಿಃ ಅರ್ಥ ಇತಿ ।*

ಅನುವಾದ: ಭಾಗ್ಯದಿಂದಲೇ ಮೋಕ್ಷ ಉಂಟಾಗುವುದು, ಮೋಕ್ಷ ಶಾಸ್ತ್ರಗಳಲ್ಲಿ ಹೇಳಿರುವ ಸಾಧನಗಳಿಂದಲ್ಲ, ಹೀಗೆ ಕುತರ್ಕ ಮಾಡುವುದರಿಂದಲೇ ಸಂತೋಷಪಡುವುದನ್ನು

'ಭಾಗ್ಯ' ಎನ್ನುವರು ಎಂದರ್ಥ.

ಭಾಷ್ಯ: *ತನ್ನ 'ತದ್ವ್ಯಾಖ್ಯಾತತುಷ್ಟೀನಾಂ ಅಭಾವಸ್ಯ ಜ್ಞಾನಾದ್ಯನುಕೂಲತ್ವೇನ ಅಶಕ್ತಿಪರಿಭಾಷಾನೌಚಿತ್ಯಾದಿತಿ ।*

ಅನುವಾದ: ಅದು ಸರಿಯಲ್ಲ. ಆ ವ್ಯಾಖ್ಯಾನ ಮಾಡಿದ ತುಷ್ಟಿಗಳಲ್ಲಿ ಅಭಾವ, ಜ್ಞಾನ ಇವುಗಳು ಅನುಕೂಲವಾಗಿದ್ದಲ್ಲಿ ಅದನ್ನು ಅಶಕ್ತಿ ಎನ್ನುವುದು ಉಚಿತವಲ್ಲ.

ಸೂತ್ರ: ಊಹಾದಿಭಿಃ ಸಿದ್ಧಿಃ ॥ ೪೪ ॥

ವಿವರಣೆ: ಅನಿರುದ್ಧನು ಈ ಸೂತ್ರವನ್ನು 'ಊಹಾದಿಭಿರ್ಸಿದ್ಧಿರಷ್ಟಧಾ' ಎಂದು ಬರೆದಿದ್ದಾನೆ.

ಸೂತ್ರಾನುವಾದ: ಊಹ ಮುಂತಾದ ಭೇದಗಳಿಂದ ಸಿದ್ಧಿ(ಯಾಗುತ್ತದೆ).

ಭಾಷ್ಯ: *ಊಹಾದಿಭೇದೈಃ ಸಿದ್ಧಿರಷ್ಟಧಾ ಭವತೀತ್ಯರ್ಥಃ । ಇದಮಪಿ ಸೂತ್ರಂ ಕಾರಿಕಯಾ ವ್ಯಾಖ್ಯಾತಮ್ ।*

ಊಹಃ ಶಬ್ದೋಽಧ್ಯಯಯನಂ ದುಃಖವಿಘಾತಸ್ತ್ರಯಃ ಸುಹೃತ್ಪ್ರಾಪ್ತಿಃ।
ದಾನಂ ಚ ಸಿದ್ಧಯೋಽಷ್ಟೌ ಸಿದ್ಧೇಃ ಪೂರ್ವೋಂಕುಶಸ್ತ್ರಿವಿಧಃ ॥
(ಸಾಂ.ಕಾ. ೫೭)

ಅನುವಾದ: ಊಹಾದಿಭೇದಗಳಿಂದ ಸಿದ್ಧಿಯು ಎಂಟು ಬಗೆಯಾಗಿರುತ್ತದೆ. ಈ ಸೂತ್ರವನ್ನು ಕಾರಿಕೆಯ ಮೂಲಕ ವ್ಯಾಖ್ಯಾನ ಮಾಡಲಾಗಿದೆ. ಆ ಎಂಟು ಬಗೆಗಳು ಹೀಗಿವೆ: (೧) ಊಹ (೨) ಶಬ್ದ (೩) ಅಧ್ಯಯನ (೪) (ಆಧ್ಯಾತ್ಮಿಕ) ದುಃಖವಿಘಾತ (೫) (ಆಧಿದೈವಿಕ) ದುಃಖವಿಘಾತ (೬) (ಆಧಿಭೌತಿಕ) ದುಃಖವಿಘಾತ (೭) ಸುಹೃತ್ಪ್ರಾಪ್ತಿ (೮) ದಾನ.

ಭಾಷ್ಯ: *ಅಸ್ಯಾಯಮರ್ಥಃ । ಅತ್ರ ಆಧ್ಯಾತ್ಮಿಕಾದಿ ದುಃಖತ್ರಯ ಪ್ರತಿಯೋಗಿಕ-ತ್ವಾತ್ ತ್ರಯೋದುಃಖವಿಘಾತಾ ಮುಖ್ಯಸಿದ್ಧಯಃ । ಇತರಾಸ್ತು ತತ್ಸಾಧನತ್ವಾತ್ ಗೌಣ್ಯಃ ಸಿದ್ಧಯಃ ।*

ಅನುವಾದ: ಅದರ ಅರ್ಥ ಹೀಗಿದೆ. ಅದರಲ್ಲಿ ಆಧ್ಯಾತ್ಮಿಕಾದಿದುಃಖತ್ರಯಗಳು ಪ್ರತಿಯೋಗಿಯಾಗಿ ಇರುವುದರಿಂದ ಮೂರು ದುಃಖವಿಘಾತಗಳು ಮುಖ್ಯಸಿದ್ಧಯಃ। ಇತರ ಸಿದ್ಧಿಗಳಾದರೋ ಆ ಸಿದ್ಧಿಗಳಿಗೆ ಸಾಧನವಾಗಿರುವುದರಿಂದ ಗೌಣವಾಗಿರುತ್ತದೆ.

ಭಾಷ್ಯ: *ತತ್ರ ಊಹೋ ಯಥಾ ಉಪದೇಶಾದಿಕಂ ವಿನೈವ ಪ್ರಾಗ್ಭವೀಯಾ-ಭ್ಯಾಸವಶಾತ್ ತತ್ತ್ವಸ್ಯ ಸ್ವಯಮೂಹನಮಿತಿ ।*

ಅನುವಾದ: ಯಾರಿಂದಲೂ ಉಪದೇಶ ಪಡೆಯದೆ ಹಿಂದಿನ ಜನ್ಮದಲ್ಲಿಯ ಅಭ್ಯಾಸವಶನಾಗಿ (ಆತ್ಮ)ತತ್ತ್ವವನ್ನು 'ಊಹೆ' ಮಾಡುತ್ತಾನೆ.

ಭಾಷ್ಯ: *ಶಬ್ದಸ್ತು ಯಥಾ ಅನ್ಯದೀಯಪಾಠಮಾಕರ್ಣ್ಯ ಸ್ವಯಂ ವಾ ಶಾಸ್ತ್ರಮಾಕಲಯ್ಯ ಯಜ್ಜ್ಞಾನಂ ಜಾಯತೇತದಿತಿ ।*

ಅನುವಾದ: 'ಶಬ್ದ'ವೆಂದರೆ ಬೇರೆಯವರ ಪಾಠವನ್ನು ಕೇಳಿ ತಾನೇ ಅಥವಾ ಶಾಸ್ತ್ರಗಳನ್ನು ಸಂಗ್ರಹಿಸಿದಾಗ ಯಾವ ಜ್ಞಾನವುಂಟಾಗುವುದೋ ಅದನ್ನು ಶಬ್ದವೆನ್ನುವರು.

ಭಾಷ್ಯ: *ಅಧ್ಯಯನಂ ಚ ಯಥಾ ಶಿಷ್ಯಾಚಾರ್ಯಭಾವೇನ ಶಾಸ್ತ್ರಾಧ್ಯಯನಾಜ್ಜ್ಞಾನಮಿತಿ ।*

ಅನುವಾದ: 'ಅಧ್ಯಯನ'ವೆಂದರೆ ಶಿಷ್ಯ–ಆಚಾರ್ಯ ಎಂಬ ಭಾವದಿಂದ ಶಾಸ್ತ್ರದ ಅಧ್ಯಯನದಿಂದ ಜ್ಞಾನ ಸಂಪಾದನೆಯೇ (ಸಿದ್ಧಿ ಎಂದುಕೊಳ್ಳುವರು).

ಭಾಷ್ಯ: *ಸುಹೃತ್ಪ್ರಾಪ್ತಿರ್ಯಥಾ ಸ್ವಯಮುಪದೇಶಾರ್ಥಂ ಗೃಹಮಾಗತಾತ್ ಪರಮಕಾರುಣಿಕಾತ್ ಜ್ಞಾನಲಾಭ ಇತಿ ।*

ಅನುವಾದ: 'ಸುಹೃತ್ಪ್ರಾಪ್ತಿ' ಎಂದರೆ ತಾನೇ ಉಪದೇಶ ಮಾಡಲು ಮನೆಗೆ ಬಂದ ಪರಮಕಾರುಣಿಕನಿಂದ ಜ್ಞಾನವನ್ನು ಪಡೆಯುವುದು.

ಭಾಷ್ಯ: *ದಾನಂ ಚ ಯಥಾ ಧನಾದಿದಾನೇನ ಪರಿತೋಷಿತಾತ್ ಜ್ಞಾನಲಾಭಃ ಇತಿ ।*

ಅನುವಾದ: ಧನಾದಿದಾನದಿಂದ ಸಂತೋಷಗೊಳಿಸಲ್ಪಟ್ಟವನಿಂದ ಪಡೆದ ಜ್ಞಾನ.

ಭಾಷ್ಯ: *ಏಷು ಚ ಪೂರ್ವಸ್ತ್ರಿವಿಧ ಊಹಶಬ್ದಾಧ್ಯಯನರೂಪೋ ಮುಖ್ಯಸಿದ್ಧೇರಂಕುಶ ಆಕರ್ಷಕಃ ಸುಹೃತ್ಪ್ರಾಪ್ತಿದಾನಯೋಃ ಊಹಾದಿತ್ರಯಾಪೇಕ್ಷಯಾ ಮಂದಸಾಧನತ್ವಪ್ರತಿಪಾದನಾಯ ಇದಮುಕ್ತಮ್ ।*

ಅನುವಾದ: ಇವುಗಳಲ್ಲಿ ಮೊದಲ ಮೂರು ವಿಧಗಳು ಊಹ, ಶಬ್ದ, ಅಧ್ಯಯನಗಳು ಮುಖ್ಯಸಿದ್ಧಿಗೆ ಅಂಕುಶ ಎಂದರೆ ಆಕರ್ಷಕಗಳು. ಸುಹೃತ್ಪ್ರಾಪ್ತಿ, ದಾನಗಳು ಊಹಾದಿಗಳಿಗಿಂತ ಮಂದಸಾಧನ ಪ್ರತಿಪಾದಕಗಳೆಂದು ಹೀಗೆ ಹೇಳಿದೆ.

ಭಾಷ್ಯ: *ಕಶ್ಚಿತ್ತ್ವೇತಾಸಾಂ ಅಷ್ಟಸಿದ್ಧೀನಾಂ ಅಂಕುಶೋ ನಿವಾರಕಃ ಪೂರ್ವ–ಸ್ತ್ರಿವಿಧೋ ವಿಪರ್ಯಯಾಶಕ್ತಿತುಷ್ಟಿರೂಪೋ ಭವತಿ ಬಂಧಕತ್ವಾದಿತಿ ವ್ಯಾಚಷ್ಟೇ ।*

ಅನುವಾದ: ಒಬ್ಬ (ವ್ಯಾಖ್ಯಾಕಾರನು) ಈ ಎಂಟು ಸಿದ್ಧಿಗಳ ಅಂಕುಶ ಎಂದರೆ ನಿವಾರಕವು ವಿಪರ್ಯಯ, ಅಶಕ್ತಿ, ತುಷ್ಟಿರೂಪವಾಗಿರುತ್ತದೆ ಎಂದರೆ ಬಂಧಕತ್ವ ವಾದ್ದರಿಂದ ಎಂದು ಹೇಳಿದ್ದಾರೆ.

ಭಾಷ್ಯ: *ತನ್ನ ತುಷ್ಟ್ಯಭಾವಸ್ಯ ಅಶಕ್ತಿತಯಾ ಬಾಧಿರ್ಯಾದಿವತ್ ಸಿದ್ಧಿವಿರೋಧಿ–ತಾಲಾಭೇನ ತುಷ್ಟ್ಯತುಷ್ಟ್ಯೋಃ ಸಿದ್ಧಿವಿರೋಧಿತ್ವ ಅಸಂಭವಾತ್ ।*

ಅನುವಾದ: ತುಷ್ಟ್ಯಭಾವವು ಅಶಕ್ತಿರೂಪವಾದ್ದರಿಂದ ಬಾಧಿರ್ಯ ಮುಂತಾದುವಕ್ಕೆ ಸಮವಾಗಿ ಸಿದ್ಧಿವಿರೋಧತೆಯುಂಟಾಗುವುದರಿಂದ ತುಷ್ಟಿ–ಅತುಷ್ಟಿಗಳು ಸಿದ್ಧಿವಿರೋಧತ್ವ ಉಂಟಾಗಲಾರದು.

ವಿವರಣೆ: 'ಕಶ್ಚಿತ್' ಎಂಬುದು ವಾಚಸ್ಪತಿಮಿಶ್ರನಿಗೆ ಅನ್ವಯಿಸುತ್ತದೆ. ಇವನ ಅಭಿಪ್ರಾಯ ವಿಜ್ಞಾನಭಿಕ್ಷುವಿಗೆ ಒಪ್ಪಿಗೆಯಿಲ್ಲ.

ಭಾಷ್ಯ: *ನನು ಊಹಾದಿಭಿರೇವ ಕಥಂ ಸಿದ್ಧಿರುಚ್ಯತೇ । ಮಂತ್ರತಪಸ್, ಸಮಾಧ್ಯಾದಿಭಿರಪ್ಯಣಿಮಾದಿ ಅಷ್ಟಸಿದ್ಧೇಃ ಸರ್ವಶಾಸ್ತ್ರಸಿದ್ಧತ್ವಾತ್ ಇತಿ, ತತ್ರಾಹ ।*

ಅನುವಾದ: ಊಹಾದಿ ದ್ವಾರಾ ಸಿದ್ಧಿಯುಂಟಾಗುತ್ತದೆ ಎಂದು ಹೇಗೆ ಹೇಳುವಿರಿ? ಮಂತ್ರ, ತಪಸ್ಸು, ಸಮಾಧಿಗಳ ಮೂಲಕ ಅಣಿಮಾದಿ ಅಷ್ಟಸಿದ್ಧಿಗಳನ್ನು ಪಡೆಯ ಬಹುದೆಂದು ಶಾಸ್ತ್ರಗಳಲ್ಲಿ ಹೇಳಿದೆಯಲ್ಲ. ಅದನ್ನು ಕುರಿತು ಹೀಗೆ ಹೇಳಿದೆ.

ಸೂತ್ರ: ನೇತರಾದಿತರಹಾನೇನ ವಿನಾ ॥ ೪೫ ॥

ಸೂತ್ರಾನುವಾದ: ಬೇರೆಯದರಿಂದ (ಊಹಾದಿಗಳಿಂದ) ಬೇರೆಯದನ್ನು (ವಿಪರ್ಯ-ಯಾದಿಗಳನ್ನು) ಹೋಗಲಾಡಿಸಿದ ಹೊರತು (ಇಷ್ಟಸಿದ್ಧಿ) ಆಗುವುದಿಲ್ಲ.

ಭಾಷ್ಯ: *ಇತರಾದೂಹನಾದಿಪಂಚಕಭಿನ್ನಾತ್ ತಪ ಆದೇಸ್ತಾತ್ತ್ವಿಕೀ ನ ಸಿದ್ಧಿಃ। ಕುತಃ? ಇತರಹಾನೇನವಿನಾ । ಯತಃ ಸಾ ಸಿದ್ಧಿಃ ಇತರಸ್ಯ ವಿಪರ್ಯಯಸ್ಯ ಹಾನಂ ವಿನೈವ ಭವತ್ಯತಃ ಸಂಸಾರಾಪರಿಪಂಥಿತ್ವಾತ್ ಸಾ ಸಿದ್ಧ್ಯಾಭಾಸ ಏವ, ನ ತು ತಾತ್ತ್ವಿಕೀ ಸಿದ್ಧಿಃ ಇತ್ಯರ್ಥಃ । ತಥಾ ಚೋಕ್ತಂ ಯೋಗಸೂತ್ರೇಣ 'ತೇ ಸಮಾಧೌ ಉಪಸರ್ಗಾ ವ್ಯುತ್ಥಾನೇ ಸಿದ್ಧಯಃ' (ಯೋ.ಸೂ. ೩.೧೭) ಇತಿ ।*

ಅನುವಾದ: ಊಹನಾದಿ ಐದರಿಂದ ಭಿನ್ನವಾದ ತಪಸ್ಸೇ ಮೊದಲಾದುವುಗಳಿಂದ ತಾತ್ತ್ವಿಕವಾದ ಸಿದ್ಧಿಯಾಗದು. ಏಕೆ? ಇತರ (ಸಿದ್ಧಿ-ವಿಪರ್ಯ-ಯಾದಿಗಳಿಗಿಂತ) ಬೇರೆಯಾಗಿ ದೂರ ಮಾಡಲ್ಪಟ್ಟು ಇರುವುದು. ಏಕೆಂದರೆ ಸಿದ್ಧಿಯು ಬೇರೆಯ ವಿಪರ್ಯಯವನ್ನು ತ್ಯಜಿಸದೆ ಇರುತ್ತದೆ; ಸಂಸಾರವು ಬಾಧಕವಾಗದೆ ಇರುವುದರಿಂದ ಅದು ಕೇವಲ ಸಿದ್ಧ್ಯಾಭ್ಯಾಸವಷ್ಟೆ, ತಾತ್ತ್ವಿಕೀ ಸಿದ್ಧಿಯಲ್ಲ. ಇದನ್ನೇ ಯೋಗಸೂತ್ರದಲ್ಲಿ ಹೀಗೆ ಹೇಳಿದೆ– ಆ ಸಿದ್ಧಿಗಳು ಸಮಾಧಿಯಲ್ಲಿ ಪ್ರತಿಬಂಧಕಗಳು; ಜಾಗೃತವಾದಾಗ ಸಿದ್ಧಿಗಳಾಗಿಬಿಡುತ್ತವೆ.

ಭಾಷ್ಯ: *ತದೇವಂ ಜ್ಞಾನಾನ್ಮುಕ್ತಿಃ (ಸಾಂ.ಸೂ. ೩.೨೩) ಇತ್ಯಾರಭ್ಯ ವಿಸ್ತರತೋ ಗುಣರೂಪಃ ಪ್ರತ್ಯಯಸರ್ಗಃ ಸಕಾರ್ಯಬಂಧೋ ಮೋಕ್ಷರೂಪ-ಪುರುಷಾರ್ಥೇನ ಸಹೋಕ್ತಃ । ಏತೌ ಚ ಬುದ್ಧಿತದ್ಗುಣರೂಪೌ ಸರ್ಗೌ ಪ್ರವಾಹರೂಪೇಣ ಅನ್ಯೋನ್ಯಹೇತೂ ಬೀಜಾಂಕುರವತ್ । ತಥಾ ಚ ಕಾರಿಕಾ–*

ನ ವಿನಾ ಭಾವೈರ್ಲಿಂಗಂ ನ ವಿನಾ ಲಿಂಗೇನ ಭಾವನಿರ್ವೃತಿಃ ।
ಲಿಂಗಾಖ್ಯೋ ಭಾವಾಖ್ಯಸ್ತಸ್ಮಾದ್ದ್ವಿವಿಧಃ ಪ್ರವರ್ತತೇ ಸರ್ಗಃ ॥
(ಸಾಂ.ಕಾ. ೫೨)

ಅನುವಾದ: ಹೀಗೆ ಜ್ಞಾನಾನ್ಮುಕ್ತಿಃ ಎಂದು ಆರಂಭ ಮಾಡಿ ವಿಸ್ತಾರವಾಗಿ ಬುದ್ಧಿಗುಣ ರೂಪದ ಪ್ರತ್ಯಯಸರ್ಗವನ್ನು ಬಂಧದೊಡನೆ ಮತ್ತು ಮೋಕ್ಷರೂಪವಾದ ಪುರುಷಾರ್ಥದೊಡನೆ ತಿಳಿಸಲಾಗಿದೆ. ಬುದ್ಧಿ ಮತ್ತು ಅದರ ಗುಣರೂಪಗಳೆರಡೂ ಸೃಷ್ಟಿಗಳು ಪ್ರವಾಹರೂಪದಲ್ಲಿ ಬೀಜಾಂಕುರರೂಪದಲ್ಲಿ ಪರಸ್ಪರ ಕಾರಣಗಳಾಗಿರುತ್ತವೆ. ಕಾರಿಕೆಯು ಅದನ್ನು ಹೀಗೆ ಹೇಳಿದೆ–

(ಧರ್ಮಾದಿ) ಎಂಟು ಭಾವಗಳಿಲ್ಲದೆ ಲಿಂಗದ ಸರ್ಗವಾಗದು. ಲಿಂಗವಿಲ್ಲದೆ ಭಾವ ಉಂಟಾಗದು. ಭಾವವೆಂಬ ಮತ್ತು ಲಿಂಗವೆಂಬ ಎರಡನ್ನೂ ಒಳಗೊಂಡು ಸೃಷ್ಟಿಯಾಗುವುದು.

ವಿವರಣೆ: ಭಾವಾಖ್ಯ ಎಂದರೆ ಭಾವವೆಂಬ ಧರ್ಮಾದಿಬುದ್ಧಿಸರ್ಗ. ಲಿಂಗಾಖ್ಯ ಎಂದರೆ ಶರೀರಾದಿ ತನ್ಮಾತ್ರಸರ್ಗ.

ಭಾಷ್ಯ: *ಭಾವೋ ವಾಸನರೂಪಾ ಬುದ್ಧೇಃ ಜ್ಞಾನಾದಿಗುಣಾ ಲಿಂಗಂ ಮಹತ್ತತ್ತ್ವಂ ಬುದ್ಧಿರಿತಿ । ಸಮಷ್ಟಿಸರ್ಗಃ ಪ್ರತ್ಯಯಸರ್ಗಶ್ಚ ಸಮಾಪ್ತಃ ।*

ಅನುವಾದ: ಭಾವವೆಂದರೆ 'ವಾಸನಾ' ರೂಪದಿಂದ ಇರುವ ಬುದ್ಧಿಯ ಜ್ಞಾನಾದಿ ಗುಣಗಳು. ಲಿಂಗವೆಂದರೆ ಮಹತ್ತತ್ತ್ವ ಎಂದರೆ ಬುದ್ಧಿ. ಸಮಷ್ಟಿಸರ್ಗವೂ ಪ್ರತ್ಯಯಸರ್ಗವೂ ಸಮಾಪ್ತವಾದುವು.

ಭಾಷ್ಯ: *ಸಾಂಪ್ರತಂ ವ್ಯಕ್ತಿಭೇದಃ ಕರ್ಮವಿಶೇಷಾದಿತಿ (ಸಾಂ.ಸೂ. ೩.೧೦) ಸಂಕ್ಷೇಪಾದುಕ್ತಾಃ ವ್ಯಷ್ಟಿಸೃಷ್ಟಿರ್ವಿಸ್ತರತಃ ಪ್ರತಿಪಾದ್ಯತೇ ।*

ಅನುವಾದ: ಕರ್ಮಭೇದದಿಂದ ವ್ಯಕ್ತಿಭೇದವುಂಟಾಗುತ್ತದೆ (ಸಾಂ.ಸೂ. ೩.೧೦) ಎಂಬುದನ್ನು ಸಂಕ್ಷೇಪವಾಗಿ ವಿವರಿಸಿದ್ದೇವೆ. ಈಗ ಅದೇ ವ್ಯಷ್ಟಿಸೃಷ್ಟಿಯನ್ನು ವಿಸ್ತಾರವಾಗಿ ಪ್ರತಿಪಾದಿಸುತ್ತೇವೆ.

ಸೂತ್ರ: ದೈವಾದಿಪ್ರಭೇದಾ ॥ ೪೬ ॥

ಸೂತ್ರಾನುವಾದ: ದೈವಾದಿಪ್ರಭೇದಗಳನ್ನು (ಸೃಷ್ಟಿಯು ಒಳಗೊಂಡಿದೆ.)

ಭಾಷ್ಯ: *ದೈವಾದಿಃ ಪ್ರಭೇದೋಽವಾಂತರಭೇದೋ ಯಸ್ಯಾಃ ಸಾ ತಥಾ ಸೃಷ್ಟಿರಿತಿ ಶೇಷಃ । ತದೇತತ್ ಕಾರಿಕಯಾ ವ್ಯಾಖ್ಯಾತಮ್ ।*

ಅನುವಾದ: ದೈವವೇ ಮೊದಲಾದ ಅವಾಂತರಭೇದಗಳನ್ನುಳ್ಳದ್ದು 'ಸೃಷ್ಟಿ'. ಇದನ್ನು ಕಾರಿಕೆಯಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಭಾಷ್ಯ: *ಅಷ್ಟವಿಕಲ್ಪೋ ದೈವಃ ತೈರ್ಯಗ್ಯೋನಶ್ಚ ಪಂಚಧಾ ಭವತಿ ।*
ಮಾನುಷ್ಯಶ್ಚೈಕವಿಧಃ ಸಮಾಸತೋ ಭೌತಿಕಃ ಸರ್ಗಃ ॥
(ಸಾಂ.ಕಾ. ೫೩) ಇತಿ ।

ಅನುವಾದ: ದೇವತೆಗಳ ಸೃಷ್ಟಿ ಎಂಟು ಬಗೆ. ಪಶು–ಪಕ್ಷಿಗಳ ಸೃಷ್ಟಿ ಐದು ಪ್ರಕಾರಗಳು. ಮನುಷ್ಯರ ಸೃಷ್ಟಿ ಒಂದೇ ಪ್ರಕಾರದ್ದು. ಇದಿಷ್ಟೂ ಸಂಕ್ಷೇಪವಾಗಿ ಭೌತಿಕ ಶರೀರಗಳ ಸೃಷ್ಟಿ ಎಂದು ಹೇಳಿದೆ.

ಭಾಷ್ಯ: *ಬ್ರಾಹ್ಮಪ್ರಾಜಾಪತ್ಯೈಂದ್ರಪೈತ್ರಗಾಂಧರ್ವಯಕ್ಷರಾಕ್ಷಸಪೈಶಾಚಾ ಇತ್ಯಷ್ಟವಿಧೋ ದೈವಃ ಸರ್ಗಃ । ಪಶುಮೃಗಪಕ್ಷಿಸರೀಸೃಪಸ್ಥಾವರಾ ಇತಿ ತೈರ್ಯಗ್ಯೋನಃ ಪಂಚವಿಧಃ । ಭೌತಿಕೋ ಭೂತಾನಾಂ ವ್ಯಷ್ಟಿಪ್ರಾಣಿನಾಂ ವಿರಾಜಃ ಸಕಾಶಾತ್ ಸರ್ಗ ಇತ್ಯರ್ಥಃ ।*

ಅನುವಾದ: ಬ್ರಾಹ್ಮ, ಪ್ರಾಜಾಪತ್ಯ, ಐಂದ್ರ, ಪೈತ್ರ, ಗಾಂಧರ್ವ, ಯಾಕ್ಷ, ರಾಕ್ಷಸ, ಪೈಶಾಚ –ಈ ಎಂಟೂ ದೈವಸೃಷ್ಟಿಯ ಪ್ರಕಾರಗಳು. ಪಶು, ಮೃಗ, ಪಕ್ಷಿ, ಸರೀಸೃಪ, ಸ್ಥಾವರ –ಈ ಐದೂ ತಿರ್ಯಕ್ ಸೃಷ್ಟಿ. (ಮನುಷ್ಯಸರ್ಗ ಒಂದೇ ಪ್ರಕಾರದ್ದು). ಈ ಭೌತಿಕ ಸೃಷ್ಟಿ ಪ್ರಾಣಿಗಳ ವ್ಯಷ್ಟಿರೂಪದ್ದು. ವಿರಾಟ್‌ನ ಮೂಲದಿಂದ ಈ ಸೃಷ್ಟಿಯಾಯಿತು ಎಂದು ಅರ್ಥ.

ಭಾಷ್ಯ: *ಅವಾಂತರಸೃಷ್ಟೇರಪ್ಯುಕ್ತಾಯಾಃ ಪುರುಷಾರ್ಥತ್ವಮಾಹ ।*

ಸೂತ್ರ: ಆ ಬ್ರಹ್ಮಸ್ತಂಬಪರ್ಯಂತಂ ತತ್ಕೃತೇ ಸೃಷ್ಟಿರಾವಿವೇಕಾತ್ ॥ ೪೭ ॥

ಅನುವಾದ: ನಡುವೆ ಆಗುವ ಸೃಷ್ಟಿಯ ಪುರುಷಾರ್ಥತ್ವವನ್ನು ಹೇಳಲಾಗಿದೆ.

ಸೂತ್ರಾನುವಾದ: ಬ್ರಹ್ಮನಿಂದ ಹಿಡಿದು ಕಂಬದವರೆಗೆ ಸೃಷ್ಟಿಯು ಪುರುಷನ ಸಲುವಾಗಿ ವಿವೇಕಜ್ಞಾನವುಂಟಾಗುವವರೆಗೆ ಮುಂದುವರೆಯುವುದು.

ಭಾಷ್ಯ: *ಚತುರ್ಮುಖಮಾರಭ್ಯ ಸ್ಥಾವರಾಂತಾ ವ್ಯಷ್ಟಿಸೃಷ್ಟಿರಪಿ ವಿರಾಟ್‌ಸೃಷ್ಟಿ–ವದೇವ ಪುರುಷಾರ್ಥಾ ಭವತಿ । ತತ್ತತ್ಪುರುಷಾಣಾಂ ವಿವೇಕಖ್ಯಾತಿ ಪರ್ಯಂತಂ ಇತ್ಯರ್ಥಃ ।*

ಅನುವಾದ: ಚತುರ್ಮುಖ ಬ್ರಹ್ಮನಿಂದ ಹಿಡಿದು ಸ್ಥಾವರಗಳವರೆಗೆ ವ್ಯಷ್ಟಿಸೃಷ್ಟಿಯೂ ವಿರಾಟ್ ಸೃಷ್ಟಿಯಂತೆ ಪುರುಷನ ಸಲುವಾಗಿಯೇ ಆಗುತ್ತದೆ. ಎಂದರೆ ಆಯಾ ಪುರುಷರಿಗೆ ವಿವೇಕಖ್ಯಾತಿ ಉಂಟಾಗುವವರೆಗೂ ಆಗುತ್ತದೆ.

ಭಾಷ್ಯ: *ವ್ಯಷ್ಟಿಸೃಷ್ಟಾವಪಿ ವಿಭಾಗಮಾಹ ಸೂತ್ರತ್ರಯೇಣ–*

ಸೂತ್ರ: ಊರ್ಧ್ವಂ ಸತ್ತ್ವವಿಶಾಲಾ ॥ ೪೮ ॥

ಅನುವಾದ: ಮುಂದೆ ಮೂರು ಸೂತ್ರಗಳಿಂದ ವ್ಯಷ್ಟಿಸೃಷ್ಟಿಯಾದರೂ ವಿಭಾಗವನ್ನು ಹೇಳಿದೆ.

ಸೂತ್ರಾನುವಾದ: ಸತ್ತ್ವಪ್ರಧಾನವಾದ ಸೃಷ್ಟಿಯು ಮೇಲಿರುತ್ತದೆ.

ಭಾಷ್ಯ: *ಊರ್ಧ್ವಂ ಭೂರ್ಲೋಕಾದುಪರಿ ಸೃಷ್ಟಿಃ ಸತ್ತ್ವಾಧಿಕಾ ಭವತಿ ಇತ್ಯರ್ಥಃ।*

ಅನುವಾದ: ಊರ್ಧ್ವಂ ಎಂದರೆ ಭೂರ್ಲೋಕದ ಮೇಲ್ಭಾಗದಲ್ಲಿರುವ ಸೃಷ್ಟಿಯು ಸತ್ತ್ವಗುಣಪ್ರಧಾನವಾಗಿರುತ್ತದೆ.

ಸೂತ್ರ: ತಮೋವಿಶಾಲಾ ಮೂಲತಃ ॥ ೪೯ ॥

ಸೂತ್ರಾನುವಾದ: ತಮಃ ಪ್ರಧಾನವಾದ ಸೃಷ್ಟಿಯು (ಭೂಲೋಕದ) ಕೆಳಭಾಗದಲ್ಲಿರುತ್ತದೆ.

ಭಾಷ್ಯ: *ಮೂಲತಃ ಭೂರ್ಲೋಕಾದಧಃ ಇತ್ಯರ್ಥಃ ।*

ಅನುವಾದ: ಮೂಲತಃ ಎಂದರೆ ಭೂರ್ಲೋಕದ ಕೆಳಗೆ (ತಮಃ ಪ್ರಧಾನವಾದ ಲೋಕವಿರುತ್ತದೆ) ಎಂದರ್ಥ.

ಸೂತ್ರ: ಮಧ್ಯೇ ರಜೋ ವಿಶಾಲಾ ॥ ೫೦ ॥

ಸೂತ್ರಾನುವಾದ: ನಡುವೆ ರಜೋಗುಣಪ್ರಧಾನವಾದ (ಭೂರ್ಲೋಕ) ಇರುತ್ತದೆ.

ಭಾಷ್ಯ: *ಮಧ್ಯೆ ಭೂರ್ಲೋಕೇ ಇತ್ಯರ್ಥಃ ॥೫೦॥*

ಅನುವಾದ: ಮಧ್ಯದಲ್ಲಿ ಭೂರ್ಲೋಕವು (ರಜೋಗುಣಪ್ರಧಾನವಾದ) ಸೃಷ್ಟಿಯಾಗಿರುತ್ತದೆ.

ಭಾಷ್ಯ: *ನನ್ವೇಕಸ್ಯಾ ಏವ ಪ್ರಕೃತೇಃ ಕೇನ ನಿಮಿತ್ತೇನ ಸತ್ತ್ವಾದಿವಿಶಾಲತಯಾ ವಿಚಿತ್ರಾಃ ಸೃಷ್ಟಯಃ ಇತ್ಯಾಕಾಂಕ್ಷಾಯಾಂ ಆಹ–*

ಅನುವಾದ: ಪ್ರಕೃತಿಯು ಒಂದೇ ಆಗಿರುವಾಗ ಸತ್ತ್ವಾದಿಗಳು ಪ್ರಧಾನವಾಗಿರುವ ವಿಚಿತ್ರವಾದ ಸೃಷ್ಟಿಗಳ ಕಾರಣವೇನು? ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ಕರ್ಮವೈಚಿತ್ರ್ಯಾತ್ ಪ್ರಧಾನಚೇಷ್ಟಾ ಗರ್ಭದಾಸವತ್ ॥ ೫೧ ॥

ಸೂತ್ರಾನುವಾದ: ಹುಟ್ಟಿದಂದಿನಿಂದಲೇ ದಾಸನಾಗಿರುವಂತೆ ಕರ್ಮಗಳ ವಿಚಿತ್ರತೆ ತಕ್ಕಂತೆ ಪ್ರಕೃತಿಯು ಪ್ರವೃತ್ತವಾಗುವುದು.

ಭಾಷ್ಯ: *ವಿಚಿತ್ರಕರ್ಮನಿಮಿತ್ತಾದೇವ ಯಥೋಕ್ತಾ ಪ್ರಧಾನಸ್ಯ ಚೇಷ್ಟಾ ಕಾರ್ಯ–ವೈಚಿತ್ರ್ಯರೂಪಾ ಭವತಿ । ವೈಚಿತ್ರ್ಯೇ ದೃಷ್ಟಾಂತೋ ಗರ್ಭದಾಸವದಿತಿ । ಯಥಾ ಗರ್ಭಾವಸ್ಥಾಮಾರಭ್ಯ ಯೋ ದಾಸಃ ತಸ್ಯ ಭೃತ್ಯವಾಸನಾಪಾಟವೇನ ನಾನಾಪ್ರಕಾರಾ ಚೇಷ್ಟಾ ಪರಿಚರ್ಯ್ಯಾ ಸ್ವಾಮ್ಯರ್ಥೇ ಭವತಿ ತದ್ವದಿತ್ಯರ್ಥಃ ।*

ಅನುವಾದ: ವಿಚಿತ್ರವಾದ ಕರ್ಮಗಳ ನಿಮಿತ್ತದಿಂದಲೇ ಪ್ರಕೃತಿಯು ಮೇಲೆ ಹೇಳಿದಂತೆ ಪ್ರವೃತ್ತವಾಗುವುದು ಮತ್ತು ಅದರ ಕಾರ್ಯವು ವಿಚಿತ್ರತೆಯಿಂದ ಕೂಡಿರುತ್ತದೆ. ಈ ವೈಚಿತ್ರ್ಯವನ್ನು ಗರ್ಭದಾಸನಂತೆ ಎಂದು ಹೋಲಿಸಲಾಗಿದೆ. ಹೇಗೆ ಗರ್ಭಾವಸ್ಥೆಯಿಂದಲೇ ಯಾರು ದಾಸನಾಗಿರುವನೋ ಅವನಲ್ಲಿ (ಸಂಸ್ಕಾರದಿಂದ) ಭೃತ್ಯವಾಸನೆಯು ಪ್ರಬಲವಾಗಿರುವ ಕಾರಣ ನಾನಾ ಪ್ರಕಾರದಲ್ಲಿ ಒಡೆಯನ ಸಲುವಾಗಿ ಚಟುವಟಿಕೆಗಳೂ ಮತ್ತು ಪರಿಚರ್ಯೆಯೂ ಕಾಣುವುದೋ ಅದೇ ರೀತಿಯಲ್ಲಿ ಎಂದರ್ಥ.

ವಿವರಣೆ: ಸೃಷ್ಟಿಯ ಉದ್ದೇಶವೇ 'ಪುರುಷ'ರ ಸೇವೆಗಾಗಿ ಎಂಬುದು ವ್ಯಕ್ತಪಡುತ್ತದೆ.

ಜಡವಿರುವುದು ಚೇತನದ ಸೇವೆಗಾಗಿ ಎಂಬ ತತ್ತ್ವ ಸಾಂಖ್ಯರದ್ದು.

ಭಾಷ್ಯ: *ನನು ಚೇದೂರ್ಧ್ವಂ ಸತ್ತ್ವವಿಶಾಲಾ ಸೃಷ್ಟಿರಸ್ತಿ ತರ್ಹಿ ತತ ಏವ ಕೃತಾರ್ಥತ್ವಾತ್ ಪುರುಷಸ್ಯ ಕಿಂ ಮೋಕ್ಷೇಣ ಇತಿ– ತತ್ರಾಹ ।*

ಅನುವಾದ: ಒಂದು ವೇಳೆ (ಭೂರ್ಲೋಕದ) ಮೇಲೆ ಸತ್ತ್ವಪ್ರಧಾನವಾದ ಸೃಷ್ಟಿ ಇರಬೇಕಾದರೆ ಪುರುಷನು ಅದರಿಂದಲೇ ಕೃತಾರ್ಥನಾಗಬಹುದಲ್ಲ, ಇನ್ನು ಮೋಕ್ಷವೇಕೆ? ಎಂಬುದಕ್ಕೆ ಹೀಗೆ ಹೇಳಿದೆ–

ಸೂತ್ರ: ಆವೃತ್ತಿಸ್ತತ್ರಾಪ್ಯುತ್ತರೋತ್ತರಯೋನಿಯೋಗಾದ್ಧೇಯಃ ॥ ೫೨ ॥

ಸೂತ್ರಾನುವಾದ: ಉತ್ತರೋತ್ತರ ಜನ್ಮಗಳಲ್ಲಿಯೂ ಮತ್ತೆ ಹಿಂದಿರುಗಬೇಕಾಗುವುದು. ಆದ್ದರಿಂದ ಅದನ್ನೂ ತಿರಸ್ಕರಿಸಬೇಕು.

ಭಾಷ್ಯ: *ತತ್ರಾಪಿ ಊರ್ಧ್ವಗತಾವಪಿ ಸತ್ಯಮಾವೃತ್ತಿರಸ್ತ್ಯತ ಉತ್ತರೋತ್ತರ ಯೋನಿಯೋಗಾತ್ ಅಧೋಽಧಃ ಯೋನಿಜನ್ಮನಃ ಸೋಽಪಿ ಲೋಕೋ ಹೇಯ ಇತ್ಯರ್ಥಃ । ಕಿಂ ಚ ।*

ಅನುವಾದ: ಅದರಲ್ಲೂ ಮೇಲೆ ಹೋದರೂ ಸಹ ಖಂಡಿತವಾಗಿಯೂ ಹಿಂದಿರುಗಿ ಹೋಗಬೇಕಾಗುವುದು. ಉತ್ತರೋತ್ತರ ಯೋನಿಯ ಸಂಬಂಧದಿಂದ ಕೆಳಗಿನ ಯೋನಿಗಳಲ್ಲಿ ಜನ್ಮಪಡೆಯುವವನಿಗೆ ಆ ಲೋಕವೂ ಹೇಯವೆನಿಸುವುದು. ಅಲ್ಲದೆ–

ವಿವರಣೆ: ಮೋಕ್ಷವೆಂದರೆ ಮತ್ತೆ ಜನ್ಮವೆತ್ತದಿರುವುದು ಎಂದು ಅಭಿಪ್ರಾಯ.

ಸೂತ್ರ: ಸಮಾನಂ ಜರಾಮರಣಾದಿಜಂ ದುಃಖಮ್ ॥ ೫೩ ॥

ಸೂತ್ರಾನುವಾದ: ಮುಪ್ಪು ಮತ್ತು ಸಾವುಗಳಿಂದ ದುಃಖ ಎಲ್ಲರಿಗೂ ಒಂದೇ.

ಭಾಷ್ಯ: *ಊರ್ಧ್ವಾಧೋಗತಾನಾಂ ಬ್ರಹ್ಮಾದಿಸ್ಥಾವರಾಂತಾನಾಂ ಸರ್ವೇಷಾಂ ಏವ ಜರಾಮರಣಾದಿಜಂ ದುಃಖಂ ಸಾಧಾರಣಮತೋಽಪಿ ಹೇಯಃ।*

ಅನುವಾದ: ಮೇಲಿನ ಲೋಕಕ್ಕಾಗಲಿ ಕೆಳಗಿನ ಲೋಕಕ್ಕಾಗಲಿ ಹೋದ ಎಲ್ಲ ಬ್ರಹ್ಮಾದಿ–ಸ್ಥಾವರಾಂತ ಜನ್ಮಗಳಿಗೆ ಜರಾ–ಮರಣಗಳಿಂದ ಉಂಟಾಗುವ ದುಃಖವು ಸಾಧಾರಣವಾದುದು; ಆದ್ದರಿಂದ ಅದು ಹೇಯವಾದುದು.

ಭಾಷ್ಯ: *ಕಿಂ ಬಹುನಾ ಕಾರಣೇ ಲಯಾದಪಿ ನ ಕೃತಕೃತ್ಯತೇತ್ಯಾಹ–*

ಅನುವಾದ: ಹೆಚ್ಚೇನು ಹೇಳುವುದು? ಕಾರಣವಾದ ಪ್ರಕೃತಿಯೇ ಲಯವಾದರೂ ಕೃತಾರ್ಥತೆಯು ಲಭಿಸದು. ಅದನ್ನೇ ಹೇಳಿದ್ದಾರೆ.

ಸೂತ್ರ: ನ ಕಾರಣಲಯಾತ್ ಕೃತಕೃತ್ಯತಾ ಮಗ್ನವದುತ್ಥಾನಮ್ ॥ ೫೪ ॥

ಸೂತ್ರಾನುವಾದ: ಮೂಲಕಾರಣವು ಲಯವಾದರೂ ಕೃತಕೃತ್ಯತೆ ಇಲ್ಲದೆ ನೀರಿನಲ್ಲಿ ಮುಳುಗಿದವನು ಮತ್ತೆ ಎದ್ದಂತೆ.

ಭಾಷ್ಯ: *ವಿವೇಕಜ್ಞಾನಾಭಾವೇ ಯದಾ ಮಹದಾದಿಷು ವೈರಾಗ್ಯಂ ಪ್ರಕೃತ್ಯು-ಪಾಸನಯಾ ಭವತಿ ತದಾ ಪ್ರಕೃತೌ ಲಯೋ ಭವತಿ, 'ವೈರಾಗ್ಯಾತ್ ಪ್ರಕೃತಿಲಯಃ' (ಸಾಂ.ಕಾ. ೪೫) ಇತಿ ವಚನಾತ್ । ತಸ್ಮಾತ್ ಕಾರಣಲಯಾದಪಿ ನ ಕೃತಕೃತ್ಯತಾಽಸ್ತಿ, ಮಗ್ನವದ್ ಉತ್ಥಾನಾತ್ । ಯಥಾ ಜಲೇ ಮಗ್ನಃ ಪುರುಷಃ ಪುನರುತ್ತಿಷ್ಠತಿ, ಏವಮೇವ ಪ್ರಕೃತಿಲೀನಾಃ ಪುರುಷಾಃ ಪುನರಾವಿರ್ಭವಂತಿ । ಸಂಸ್ಕಾರಾದೇಃ ಅಕ್ಷಯೇಣ ಪುನಾ ರಾಗಾಭಿವ್ಯಕ್ತೇಃ ವಿವೇಕಖ್ಯಾತಿಂ ವಿನಾ ದೋಷದಾಹಾನುಪಪತ್ತೇಃ ಇತ್ಯರ್ಥಃ ।*

ಅನುವಾದ: ವಿವೇಕಜ್ಞಾನವಿಲ್ಲದಿರುವಾಗ ಮಹದಾದಿಗಳಲ್ಲಿ ಪ್ರಕೃತಿಯ ಉಪಾಸನೆಯಿಂದ ವೈರಾಗ್ಯವುಂಟಾದಾಗ ಪ್ರಕೃತಿಯಲ್ಲಿ ಲಯವಾಗಿಬಿಡುವುದು, 'ವೈರಾಗ್ಯದಿಂದ ಪ್ರಕೃತಿಯಲ್ಲಿ ಲಯ' ಎಂಬ ವಚನ(ಕಾರಿಕೆ)ದ ಇರುವುದು. ಆದ್ದರಿಂದ ಕಾರಣದ ಲಯವಾದರೂ ಕೃತಕೃತ್ಯತೆಯು ಆಗದು ಏಕೆಂದರೆ ಮುಳುಗಿದವನು ಮತ್ತೆ ಮೇಲೆದ್ದು ಬಂದಂತೆ. ಹೇಗೆ ನೀರಿನಲ್ಲಿ ಮುಳುಗಿದವನು ಮತ್ತೆ ಮೇಲೇಳುವಂತೆ ಪ್ರಕೃತಿಯಲ್ಲಿ ಲೀನವಾದವರು ಮತ್ತೆ ಈಶ್ವರಭಾವದಿಂದ ಪ್ರಕಟವಾಗುವರು. ಸಂಸ್ಕಾರಾದಿಗಳು ಕ್ಷಯವಾಗದ ಕಾರಣ ಮತ್ತೆ ರಾಗಾದಿಗಳು ಜಾಗೃತವಾಗುವುದರಿಂದ ವಿವೇಕಖ್ಯಾತಿಯಿಲ್ಲದೆ ದೋಷಗಳು ನಾಶವಾಗದೆ ಉಳಿಯುವುವು.

ಭಾಷ್ಯ: *ನನು ಕಾರಣಂ ಕೇನಾಽಪಿ ನ ಕಾರ್ಯತೇಽತಃ ಸ್ವತಂತ್ರಾ ಕಥಂ ಸ್ವೋಪಾಸಕಸ್ಯ ದುಃಖನಿದಾನಮುತ್ಥಾನಂ ಪುನಃ ಕರೋತಿ–ತತ್ರಾಹ–*

ಅನುವಾದ: ಮೂಲಕಾರಣವಾದ (ಪ್ರಕೃತಿಯು) ಯಾರಿಂದಲೂ ಉತ್ಪನ್ನವಾದುದಲ್ಲ. ಆದ್ದರಿಂದ ಸ್ವತಂತ್ರವಾದ ಅದು ತನ್ನ ಉಪಾಸಕನನ್ನು ಮತ್ತೆ ದುಃಖಗಳಿಗೆ ಮೂಲವಾದ ಮತ್ತೆ ಮೇಲೇಳುವುದನ್ನು ಹೇಗೆ ಮಾಡುವುದು? ಅದಕ್ಕೆ ಹೇಳಿದ್ದಾರೆ–

ಸೂತ್ರ: ಅಕಾರ್ಯತ್ವೇಽಪಿ ತದ್ಯೋಗಃ ಪಾರತಂತ್ರ್ಯಾತ್ ॥ ೫೫ ॥

ಸೂತ್ರಾನುವಾದ: ಪ್ರಕೃತಿಯು ಬೇರೆಯದರಿಂದ ಕಾರ್ಯಪ್ರವೃತ್ತವಾಗದಿದ್ದರೂ ಪರಾಧೀನವಾದ್ದರಿಂದ ಮತ್ತೆ ಮೇಲೇಳುವುದು ಸರಿಯಾದುದೇ.

ಭಾಷ್ಯ: *ಪ್ರಕೃತೇರಕಾರ್ಯತ್ವೇಽಪಿ ಅಪ್ರೇರ್ಯತ್ವೇಽಪಿ ಅನ್ಯೇಚ್ಛಾಧೀನತ್ವೇಽಪಿ ತದ್ಯೋಗಃ ಪುನರುತ್ಥಾನೌಚಿತ್ಯಂ ತಲ್ಲೀನಸ್ಯ । ಕುತಃ? ಪಾರವಶ್ಯಾತ್ ಪುರುಷಾರ್ಥತಂತ್ರತ್ವಾತ್ । ವಿವೇಕಖ್ಯಾತಿರೂಪ ಪುರುಷಾರ್ಥವಶೇನ ಪ್ರಕೃತ್ಯಾ ಪುನರುತ್ಥಾಪ್ಯತೇ ಸ್ವಲೀನ ಇತ್ಯರ್ಥಃ । ಪುರುಷಾರ್ಥಾದಯಶ್ಚ ಪ್ರಕೃತೇರ್ನ ಪ್ರೇರಕಾಃ, ಕಿಂತು ಪ್ರವೃತ್ತಿಸ್ವಭಾವಾಯಾಃ ಪ್ರವೃತ್ತೌ ನಿಮಿತ್ತಾಸೀತಿ ನ ಸ್ವಾತಂತ್ರ್ಯಕ್ಷತಿಃ । ತಥಾ ಚ ಯೋಗಸೂತ್ರಮ್ 'ನಿಮಿತ್ತಮಪ್ರಯೋಜಕಂ ಪ್ರಕೃತೀನಾಂ ವರಣಭೇದಸ್ತು ತತಃ ಕ್ಷೇತ್ರಿಕವತ್' ಇತಿ । (ಯೋ.ಸೂ. ೩.೪)(ವರಣಭೇದಃ ಪ್ರತಿಬಂಧನಿವೃತ್ತಿಃ)*

ಅನುವಾದ: ಪ್ರಕೃತಿಯಲ್ಲಿ ಅಕಾರ್ಯತ್ವವಿರಬಹುದು, ಅಪ್ರೇರ್ಯತ್ವವಿರಬಹುದು, ಅನ್ಯೇಚ್ಛಾಧೀನತ್ವವಿರಬಹುದು, ಅದರಲ್ಲಿ ಲೀನನಾದವನನ್ನು ಮೇಲೆತ್ತುವುದು ಉಚಿತವೇ ಏಕೆ? ಅದು ಪರಾಧೀನವಾಗಿರುವುದರಿಂದಲೂ ಪುರುಷಾರ್ಥವನ್ನು ನೆರವೇರಿಸಬೇಕಾಗಿರುವುದರಿಂದಲೂ (ಪುನರುತ್ಥಾನ ಮಾಡಬಹುದು.) ವಿವೇಕಖ್ಯಾತಿ ಎಂಬ ಪುರುಷಾರ್ಥಕ್ಕೆ ಒಳಗಾಗಿ ಪ್ರಕೃತಿಯು ತನ್ನಲ್ಲಿ ಲೀನವಾದವನ್ನು ಪುನರುತ್ಥಾನ ಮಾಡುತ್ತದೆ. ಪುರುಷಾರ್ಥಾದಿಗಳೂ ಪ್ರಕೃತಿಗೆ ಪ್ರೇರಕಗಳಲ್ಲ. ಆದರೆ ಪ್ರವೃತ್ತಿಯು ಪ್ರಕೃತಿಯ ಸ್ವಭಾವ. ಅದು ಪ್ರವೃತ್ತವಾಗಲು ಪುರುಷಾರ್ಥಗಳು ನಿಮಿತ್ತಮಾತ್ರಗಳು. ಆದ್ದರಿಂದ ಪ್ರಕೃತಿಯ ಸ್ವಾತಂತ್ರ್ಯಕ್ಕೆ ಹಾನಿಯುಂಟಾಗದು. ಹಾಗೆಯೇ ಯೋಗಸೂತ್ರವು ಹೀಗೆ ಹೇಳಿದೆ– 'ಪ್ರಕೃತಿಯನ್ನು ನಿಮಿತ್ತವೂ ಅಪ್ರಯೋಜಕವೂ ಆದ ಕಾರಣವು ಪ್ರವೃತ್ತಗೊಳಿಸುವುದು, ಆದರೆ ಪ್ರತಿಬಂಧವನ್ನು ಹೋಗಲಾಡಿಸುವುದು ಹೇಗೆಂದರೆ ಕೃಷಿಕನು ನೀರು ತಡೆಯುವ ಭಾಗವನ್ನು ಹೋಗಲಾಡಿಸಿ ಪ್ರವಾಹವನ್ನು ಬಿಡುವಂತೆ.'

ಭಾಷ್ಯ: *ಪ್ರಕೃತಿಲಯಾತ್ ಪುರುಷಸ್ಯೋತ್ಥಾನೇ ಪ್ರಮಾಣಮಪ್ಯಾಹ ।*

ಸೂತ್ರ: ಸ ಹಿ ಸರ್ವವಿತ್ ಸರ್ವಕರ್ತಾ ॥ ೫೬ ॥

ಅನುವಾದ: ಪ್ರಕೃತಿಯಲ್ಲಿ ಲಯವಾಗುವುದರಿಂದ ಮತ್ತೆ ಪುರುಷನು ಮೇಲೇಳಲು ಪ್ರಮಾಣವನ್ನು ಹೇಳಿದೆ–

ಸೂತ್ರಾನುವಾದ: ಏಕೆಂದರೆ (ಪುರುಷನು) ಎಲ್ಲವನ್ನೂ ತಿಳಿದವನು, ಎಲ್ಲವನ್ನೂ ಮಾಡುವವನು.

ಭಾಷ್ಯ: *ಸ ಹಿ ಪೂರ್ವಸರ್ಗೇ ಕಾರಣಲೀನಃ ಸರ್ಗಾಂತರೇ ಸರ್ವವಿತ್ ಸರ್ವಕರ್ತಾ ಈಶ್ವರಾದಿ ಪುರುಷೋ ಭವತಿ । ಪ್ರಕೃತಿಲಯೇ ತಸ್ಯೈವ ಪ್ರಕೃತಿಪದಪ್ರಾಪ್ತ್ಯೌಚಿತ್ಯಾತ್ । 'ತದೇವ ಸಕ್ತಃ ಸಹ ಕರ್ಮಣೈತಿ ಲಿಂಗಂ ಮನೋ ಯತ್ರ ನಿಷಿಕ್ತಮಸ್ಯ । (ಬೃ.ಉ. ೪.೪.೬) ಇತ್ಯಾದಿ ಶ್ರುತೇರಿತ್ಯರ್ಥಃ ।*

ಅನುವಾದ: ಹಿಂದಿನ ಸರ್ಗದಲ್ಲಿ ಅದೇ ಕಾರಣಲೀನವಾಗಿ ಮತ್ತೊಂದು ಸರ್ಗದಲ್ಲಿ ಎಲ್ಲ ತಿಳಿದವನು, ಎಲ್ಲ ಮಾಡುವವನು, ಒಡೆಯನೂ ಆದ ಪುರುಷನು ಆಗುವನು. ಪ್ರಕೃತಿಯಲ್ಲಿ ಲೀನನಾದಾಗ ಅವನೇ ಪ್ರಕೃತಿಯ ರೂಪವೆಂದು ತಿಳಿಯುವುದು ಉಚಿತವಾಗುವುದು.

ಭಾಷ್ಯ: *ನನ್ವೇವಮೀಶ್ವರಪ್ರತಿಷೇಧಾನುಪಪತ್ತಿಸ್ತತ್ರಾಹ ॥೫೭॥*

ಸೂತ್ರ: ಈದೃಶೇಶ್ವರಸಿದ್ಧಿಃ ಸಿದ್ಧಾ ॥ ೫೭ ॥

ಅನುವಾದ: ಈಶ್ವರನ ಪ್ರತಿಷೇಧವನ್ನು ಈ ರೀತಿಯಲ್ಲಿ ಸಿದ್ಧಿಸುವುದು ಸಾಧ್ಯವಾಗದು. ಇದಕ್ಕೆ ಉತ್ತರವಾಗಿ ಹೀಗೆ ಹೇಳಿದೆ–

ಸೂತ್ರಾನುವಾದ: ಹೀಗೆ ಈಶ್ವರನ ಅಸ್ತಿತ್ವವನ್ನು ಸಾಧಿಸಿದ್ದಾಗಿದೆ.

ಭಾಷ್ಯ: *ಪ್ರಕೃತಿಲೀನಸ್ಯ ಜನ್ಯೇಶ್ವರಸ್ಯ ಸಿದ್ಧಿಃ, 'ಯಃ ಸರ್ವಜ್ಞಃ ಸರ್ವವಿದ್ಯಸ್ಯ ಜ್ಞಾನಮಯಂ ತಪಃ' (ಮುಂ.ಉ. ೧.೧.೯) ಇತ್ಯಾದಿ ಶ್ರುತಿಭ್ಯಃ ಸರ್ವಸಮ್ಮತೈವ, ನಿತ್ಯೇಶ್ವರಸ್ಯೈವ ವಿವಾದಾಸ್ಪದತ್ವಾತ್ ಇತ್ಯರ್ಥಃ । ಸೂತ್ರದ್ವಯಮಿದಂ ವ್ಯಾಖ್ಯಾಯ ಪಾರವಶ್ಯಮಪಿ ಪ್ರತಿಪಾದಯತಿ, 'ಸ ಹಿ' ಇತಿ ಸೂತ್ರೇಣ । ಸ ಹಿ ಪರಃ ಪುರುಷಸಾಮಾನ್ಯಂ ಸರ್ವಜ್ಞಾನಶಕ್ತಿಮತ್ ಸರ್ವಕರ್ತೃತಾಮಚ್ಛ ।*

ಅನುವಾದ: ಪ್ರಕೃತಿಲೀನ ಎಂದರೆ ಜನ್ಯೇಶ್ವರನ ಸಿದ್ಧಿಯು, 'ಯಾರು ಸರ್ವಜ್ಞನೋ, ಎಲ್ಲವನ್ನೂ ತಿಳಿದಿರುವವನೋ ಯಾರ ತಪಸ್ಸು ಜ್ಞಾನಮಯವೋ' ಮುಂತಾದ ಶ್ರುತಿಗಳಿಂದ ಸಿದ್ಧವಾಗುತ್ತದೆ ಏಕೆಂದರೆ ವಿವಾದದ ವಿಷಯ ನಿತ್ಯೇಶ್ವರನನ್ನು ಕುರಿತದ್ದು. ಈ ಎರಡು ಸೂತ್ರಗಳನ್ನು ವ್ಯಾಖ್ಯಾನ ಮಾಡಿ ಪರವಶತೆಯನ್ನೂ 'ಸ ಹಿ' ಎಂಬ ಸೂತ್ರದಿಂದ ಪ್ರತಿಪಾದಿಸುತ್ತಾರೆ.

ಭಾಷ್ಯ: *ಅಯಸ್ಕಾಂತವತ್ ಸನ್ನಿಧಿಮಾತ್ರೇಣ ಪ್ರೇರಕತ್ವಾದಿತ್ಯರ್ಥಃ । ತದಾ ಚಾಸಮಾಪ್ತಾರ್ಥಪುರುಷಸಾನ್ನಿಧ್ಯಾತ್ ತದರ್ಥಂ ಅನ್ಯೇಚ್ಛಾಽನ-ಧೀನಾಯಾ ಅಪಿ ಪ್ರಕೃತೇಃ ಪ್ರವೃತ್ತಿರಾವಶ್ಯಕೀತಿ ।*

ಅನುವಾದ: ಅಯಸ್ಕಾಂತದಂತೆ ಸಮೀಪದಲ್ಲಿ ಇರುವುದರಿಂದಲೇ ಪ್ರೇರಣೆಯನ್ನು ನೀಡುತ್ತದೆ ಎಂದರ್ಥ. ಆಗ ಅಸಮಾಪ್ತವಾದ ಉದ್ದೇಶವುಳ್ಳ ಪುರುಷನ ಸಾನ್ನಿಧ್ಯಮಾತ್ರದಿಂದಲೇ ಅವನ ಸಲುವಾಗಿ ಇತರರ ಇಚ್ಛೆಗೆ ಅಧೀನವಾದ ಪ್ರಕೃತಿಗೆ ಪ್ರವೃತ್ತಿಯಲ್ಲಿ ತೊಡಗುವುದು ಆವಶ್ಯಕವಾಗುವುದು.

ಭಾಷ್ಯ: *ನನ್ವೇವಮೀಶ್ವರಪ್ರತಿಷೇಧವಿರೋಧಃ ತತ್ರಾಹ– ಈದೃಶೇಶ್ವರಸಿದ್ಧಿಃ ಸಿದ್ಧಾ । ಸಾನ್ನಿಧ್ಯಮಾತ್ರೇಣ ಈಶ್ವರಸ್ಯ ಸಿದ್ಧಿಸ್ತು ಶ್ರುತಿಸ್ಮೃತಿಷು ಸರ್ವಸಮ್ಮತೇತ್ಯರ್ಥಃ ।*

ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ ।
ಈಶಾನೋ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ ॥
(ಕಠ ೨.೧.೧೨)

ಸೃಜತೇ ಚ ಗುಣಾನ್ ಸರ್ವಾನ್ ಕ್ಷೇತ್ರಜ್ಞಸ್ತ್ವನುಪಶ್ಯತಿ ।
ಗುಣಾನ್ ವಿಕ್ರಿಯತೇ ಸರ್ವಾನ್ ಉದಾಸೀನವದೀಶ್ವರಃ ॥ (ಅಜ್ಞಾತ)

ಅನುವಾದ: ಇದರಿಂದ (ಸಾಂಖ್ಯದ ತತ್ತ್ವವಾದ) ಈಶ್ವರನ ಪ್ರತಿಷೇಧವನ್ನು ಅಲ್ಲಗಳೆದಂತಾಗುವುದು. ಸಾನ್ನಿಧ್ಯಮಾತ್ರದಿಂದಲೇ ಈಶ್ವರನ ಸಿದ್ಧಿಯು ಶ್ರುತಿಸ್ಮೃತಿಗಳಲ್ಲಿ ಒಪ್ಪಿರುವ ವಿಷಯ.

ಪುರುಷನು ಅಂಗುಷ್ಠಮಾತ್ರದಷ್ಟು ಗಾತ್ರವುಳ್ಳವನು ದೇಹದ ಮಧ್ಯಭಾಗದಲ್ಲಿರುವನು. ಭೂತಭವಿಷ್ಯತ್ತುಗಳಿಗೆ ಒಡೆಯನು (ಅವನನ್ನು ಅರಿತವನು) ಇನ್ನು ಹೆದರುವುದಿಲ್ಲ.

ಪ್ರಕೃತಿಯು ಎಲ್ಲ ಗುಣಗಳನ್ನೂ ಸೃಷ್ಟಿಸುತ್ತದೆ. ಅದನ್ನು ಅರಿತ (ಪುರುಷನು) ಗಮನಿಸುತ್ತಾನೆ. ಈಶ್ವರನು ಉದಾಸೀನನಾಗಿ ಇರುವಂತೆ ಎಲ್ಲ ಗುಣಗಳನ್ನೂ ವಿಕೃತಿಗೊಳಿಸುತ್ತಾನೆ.

ಭಾಷ್ಯ: *ದ್ವಿತೀಯಾಧ್ಯಾಯಾದಿಮಾರಭ್ಯ ಏತಾವತ್ ಪರ್ಯಂತಂ ಸೂತ್ರವ್ಯೂಹೈಃ ಪ್ರಧಾನಸೃಷ್ಟಿಃ ಸಮಾಪಿತಾ । ಇತಃ ಪರಂ ಮೋಕ್ಷೋಪಪತ್ತ್ಯರ್ಥಂ ಪ್ರಧಾನಸೃಷ್ಟಿಜ್ಞಾನಿಪುರುಷಂಪ್ರತಿ ಅತ್ಯಂತನಿವೃತ್ತಿಃ ಅತ್ಯಂತಲಯಾಖ್ಯಾ ವಕ್ತವ್ಯಾ, ತದುಪಪತ್ತ್ಯರ್ಥಂ ಆದೌ ಪ್ರಧಾನಸೃಷ್ಟೇಃ ಪ್ರಯೋಜನಂ ದ್ವಿತೀಯಾಧ್ಯಾಯಸ್ಯಾದಿಸೂತ್ರೇ ದಿಙ್ಮಾತ್ರೇಣೋಕ್ತಂ ವಿಸ್ತರತಃ ಪ್ರತಿಪಾದಯತಿ ।*

ಅನುವಾದ: ದ್ವಿತೀಯ ಅಧ್ಯಾಯದ ಆರಂಭದಿಂದ ಇಲ್ಲಿಯವರೆಗೆ ಸೂತ್ರಗಳ ಸಮೂಹದಿಂದ ಪ್ರಧಾನಸೃಷ್ಟಿಯು ಸಮಾಪ್ತವಾಗಿದೆ. ಇನ್ನು ಮುಂದೆ ಮೋಕ್ಷವನ್ನು ಪಡೆಯಲು ಪ್ರಧಾನಸೃಷ್ಟಿಯನ್ನು ತಿಳಿದಿರುವ ಪುರುಷನನ್ನು ಕುರಿತು ಅತ್ಯಂತ ಲಯವೆಂಬ ಅತ್ಯಂತ ನಿವೃತ್ತಿಯನ್ನು ತಿಳಿಸಬೇಕಾಗಿದೆ. ಅದನ್ನು ಪಡೆಯುವ ಸಲುವಾಗಿ ಮೊದಲು ಪ್ರಧಾನಸೃಷ್ಟಿಯ ಪ್ರಯೋಜನವನ್ನು ದ್ವಿತೀಯಾಧ್ಯಾಯದ ಮೊದಲ ಸೂತ್ರದಲ್ಲಿ ಸಂಕ್ಷೇಪವಾಗಿ ತಿಳಿಸಲಾಗಿತ್ತು, ಅದನ್ನು ಈಗ ವಿಸ್ತಾರವಾಗಿ ಪ್ರತಿಪಾದಿಸಲಾಗುತ್ತದೆ.

ಸೂತ್ರ: ಪ್ರಧಾನಸೃಷ್ಟಿಃ ಪರಾರ್ಥಂ ಸ್ವತೋಽಪ್ಯಭೋಕ್ತೃತ್ವಾದುಷ್ಟ್ರ–ಕುಂಕುಮವತ್ ॥ ೫೮ ॥

ಸೂತ್ರಾನುವಾದ: ಪ್ರಕೃತಿಯು ನಿರ್ಮಿಸಿದ (ಪರಿಣಾಮಗೊಂಡ) ಸೃಷ್ಟಿಯು ತನ್ನದೇ ಆದರೂ ಅದು ಬೇರೆಯವರ ಸಲುವಾಗಿ ಏಕೆಂದರೆ ಅದು ಭೋಕ್ತೃವಲ್ಲದ ಕಾರಣ; ಅದು ಒಂಟೆಯು ಹೊರುವ ಕೇಸರಿಯಂತೆ.

ಭಾಷ್ಯ: *ಪ್ರಧಾನಸ್ಯ ಸ್ವತ ಏವ ಸೃಷ್ಟಿರ್ಯದ್ಯಪಿ ತಥಾಪಿ ಪರಾರ್ಥಮನ್ಯಸ್ಯ ಭೋಗಾಽಪವರ್ಗಾರ್ಥಮ್ । ಯಥಾ ಉಷ್ಟ್ರಸ್ಯ ಕುಂಕುಮವಹನಮ್ ಸ್ವಾಮ್ಯರ್ಥಮ್ । ಕುತಃ? ಅಭೋಕ್ತೃತ್ವಾದಚೇತನತ್ವೇನ ಭೋಗಾಪ–ವರ್ಗಾಸಂಭವಾದಿತ್ಯರ್ಥಃ ।*

ಅನುವಾದ: ಪ್ರಕೃತಿಯ ಸೃಷ್ಟಿಯು ತಾನಾಗಿಯೇ ಉಂಟಾದರೂ ಅದು ಬೇರೆಯವರ ಸಲುವಾಗಿ ಅರ್ಥಾತ್ ಬೇರೆಯವರ ಭೋಗ–ಅಪವರ್ಗಗಳ ಸಲುವಾಗಿ, ಹೇಗೆಂದರೆ ಒಂಟೆಯು ತನ್ನ ಒಡೆಯನ ಸಲುವಾಗಿ ಕೇಸರಿಯನ್ನು ಹೊರುವಂತೆ. ಏಕೆ? ಅಚೇತನವಾದ್ದರಿಂದ ಅದು ಅನುಭವಿಸಲಾರದು; ಎಂದರೆ, ಭೋಗ ಅಪವರ್ಗಗಳು ಅದಕ್ಕೆ ಸಂಭವಿಸದು.

ಭಾಷ್ಯ: *ನನು ವಿಮುಕ್ತ ಮೋಕ್ಷಾರ್ಥಂ ಸ್ವಾರ್ಥಂ ವಾ (ಸಾಂ.ಸೂ. ೨.೧) ಇತ್ಯನೇನ ಸ್ವಾರ್ಥಾಪಿ ಸೃಷ್ಟಿರುಕ್ತಾ ಇತಿ ಚೇತ್ । ಸತ್ಯಮ್ ।*

ಅನುವಾದ: 'ಪ್ರಧಾನವು ಪುರುಷನ ಮೋಕ್ಷಕ್ಕಾಗಲಿ ಭೋಗಕ್ಕಾಗಲಿ ಪ್ರವೃತ್ತವಾಗುವುದು' ಎಂದಮೇಲೆ ಸೃಷ್ಟಿಯು ಸ್ವಾರ್ಥಕ್ಕಾಗಿಯೂ ಇರುವುದು ಎಂದಾಯಿತು. ಅದು ನಿಜ.

ಭಾಷ್ಯ: *ತಥಾಪಿ ಪುರುಷಾರ್ಥತಾಂ ವಿನಾ ಸ್ವಾರ್ಥತಾಽಪಿ ನ ಸಿದ್ಧ್ಯತಿ । ಸ್ವಾರ್ಥೋ ಹಿ ಪ್ರಧಾನಸ್ಯ ಕೃತಭೋಗಾಪವರ್ಗಾತ್ ಪುರುಷಾತ್ ಆತ್ಮವಿಮೋಕ್ಷಣಮಿತಿ ।*

ಅನುವಾದ: ಆದರೂ ಪುರುಷಾರ್ಥವಿಲ್ಲದೆ ಸ್ವಾರ್ಥತೆಯೂ ಸಿದ್ಧಿಸದು. ಸ್ವಾರ್ಥವೇ ಆದರೂ ಪ್ರಧಾನವು ಪುರುಷನಿಗೆ ಭೋಗಾಪವರ್ಗವನ್ನು ಒದಗಿಸಿ ತನ್ನನ್ನು ಅವನಿಂದ ಬಿಡುಗಡೆ ಮಾಡುವುದೇ ಉದ್ದೇಶ.

ಭಾಷ್ಯ: *ನನು ಭೃತ್ಯ ತುಲ್ಯಾ ಚೇತ್ ಪ್ರಕೃತಿಸ್ತರ್ಹಿ ಕಥಂ ಸ್ವಾಮಿನೋ ದುಃಖಾರ್ಥಮಪಿ ಪ್ರವರ್ತತೇ ಇತಿ ಚೇನ್ನ । ಸುಖಾರ್ಥಪ್ರವೃತ್ತ್ಯೈವ ನಾಂತರೀಯಕ–ದುಃಖಸಂಭವಾತ್ ಭೃತ್ಯತುಲ್ಯತ್ವಾದ್ವಾ ಇತಿ ।*

ಅನುವಾದ: ಪ್ರಕೃತಿಯು ಸೇವಕನಂತಿದ್ದರೆ ತನ್ನ ಒಡೆಯನ ದುಃಖವನ್ನೂ ಭೋಗಿಸುವಂತೆ ಏಕೆ ಮಾಡುವುದು? ಹಾಗಲ್ಲ. ಸುಖವನ್ನು ನೀಡಲು ಪ್ರವೃತ್ತವಾಗಲು ಸ್ವಲ್ಪ ದುಃಖದ ಅನುಭವವೂ ಅನಿವಾರ್ಯವಾದುದಲ್ಲ ಅಥವಾ ದುಷ್ಟಭೃತ್ಯನೆಂದೇ ನೀವು ತಿಳಿಯಬಹುದು.

ಭಾಷ್ಯ: *ನನು ಪ್ರಧಾನಸ್ಯಾಚೇತನಸ್ಯ ಸ್ವತಃ ಸ್ರಷ್ಟೃತ್ವಮೇವ ನೋಪಪದ್ಯತೇ ರಥಾದೇಃ ಪರಪ್ರಯತ್ನೇನೈವ ಪ್ರವೃತ್ತಿದರ್ಶನಾದಿತಿ । ತತ್ರಾಹ–*

ಅನುವಾದ: ಅಚೇತನವಾದ ಪ್ರಧಾನಕ್ಕೆ ಸ್ವತಃ (ಪ್ರವೃತ್ತಿಯು) ಸ್ರಷ್ಟೃತ್ವವು ಇರಲು ಸಾಧ್ಯವಿಲ್ಲ; ರಥಾದಿಗಳು ಪರಪ್ರವೃತ್ತಿಯಿಂದಲೇ ಪ್ರವೃತ್ತವಾಗುವುದನ್ನು ನಾವು ನೋಡಿದ್ದೇವೆ. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಅಚೇತನತ್ವೇಽಪಿ ಕ್ಷೀರವಚ್ಚೇಷ್ಟಿತಂ ಪ್ರಧಾನಸ್ಯ ॥ ೫೯ ॥

ಸೂತ್ರಾನುವಾದ: ಪ್ರಧಾನವು ಜಡವಾದರೂ ಹಾಲಿನಂತೆ ಪ್ರವೃತ್ತವಾಗುವುದು.

ಭಾಷ್ಯ: *ಯಥಾ ಕ್ಷೀರಂ ಪುರುಷಪ್ರಯತ್ನನೈರಪೇಕ್ಷ್ಯೇಣ ಸ್ವಯಮೇವ ದಧಿರೂಪೇಣ ಪರಿಣಮತೇ, ಏವಮಚೇತನತ್ವೇ ಅಪಿ ಪರಪ್ರಯತ್ನಂ ವಿನಾಪಿ ಮಹದಾದಿರೂಪಪರಿಣಾಮಃ ಪ್ರಧಾನಸ್ಯ ಭವತೀತ್ಯರ್ಥಃ । 'ಧೇನುವದ್ವತ್ಸಾಯ' (೨.೩೭) ಇತ್ಯನೇನ ಸೂತ್ರೇಣ ಅಸ್ಯ ನ ಪೌನರುಕ್ತ್ಯಮ್ । ತತ್ರ ಕರಣಪ್ರವೃತ್ತೇರೇವ ವಿಚಾರಿತತ್ವಾತ್ ಧೇನೂನಾಂ ಚೇತನತ್ವಾಚ್ಚ । ಇತಿ ।*

ಅನುವಾದ: ಹೇಗೆ ಹಾಲು ಪುರುಷಪ್ರಯತ್ನವಿಲ್ಲದೆ ತಾನಾಗಿಯೇ ಮೊಸರಿನ ರೂಪವನ್ನು ತಾಳುವುದೋ, ಹಾಗೆಯೇ ಅಚೇತನವಾದರೂ ಸಹ ಪ್ರಕೃತಿಯು ಬೇರೆಯವರ ಪ್ರಯತ್ನವಿಲ್ಲದೆ ಮಹದಾದಿರೂಪದಲ್ಲಿ ಪರಿಣಾಮ ಹೊಂದುತ್ತದೆ. 'ಧೇನುವು

ಕರುವಿಗಾಗಿ' ಎಂಬ ಸೂತ್ರದಂತೆ; ಇಲ್ಲಿ ಪುನರುಕ್ತಿಯ ದೋಷವಿಲ್ಲ. ಇಲ್ಲಿ ಸಾಧನದ ಪ್ರವೃತ್ತಿಯುನ್ನು ಕುರಿತು ಹೇಳಿರುವುದರಿಂದಲೂ ಹಸುವು ಚೇತನವಾಗಿರುವುದರಿಂದಲೂ (ಪುನರುಕ್ತಿಯಿಲ್ಲ).

ವಿವರಣೆ: ಇಲ್ಲಿ ನೀಡಿರುವ ದೃಷ್ಟಾಂತವೇನೆಂದರೆ ಚೇತನದ ಉಪಸ್ಥಿತಿಯಲ್ಲಿ ಅಚೇತನವು ಪ್ರವೃತ್ತವಾಗುವುದು ಎಂದು. ಅಚೇತನವಾದ ಹಾಲು ಕರುವಿನ ಪೋಷಣೆಗಾದರೂ ಚೇತನವಾದ ಹಸುವಿನ ಪ್ರೇರಣೆಯಿಂದ ಬರುತ್ತದೆ.

ಸೂತ್ರ: ಕರ್ಮವದ್‌ದೃಷ್ಟೇರ್ವಾ ಕಾಲಾದೇಃ ॥ ೬೦ ॥

ಭಾಷ್ಯ: *ದೃಷ್ಟಾಂತಾಂತರ ಪ್ರದರ್ಶನಪೂರ್ವಕಂ ಉಕ್ತಾರ್ಥಹೇತುಮಾಹ ।*

ಅನುವಾದ: ಮೇಲೆ ಹೇಳಿದ ಅಭಿಪ್ರಾಯವನ್ನು ದೃಷ್ಟಾಂತದ ಮೂಲಕ ಕಾರಣದೊಡನೆ ಹೇಳಿದೆ–

ಸೂತ್ರಾನುವಾದ: ಅಥವಾ ಕಾಲಾದಿಗಳ ಅನುಸಾರ ಕ್ರಿಯೆಗಳಂತೆ (ಪ್ರಕೃತಿಯು ಪ್ರವೃತ್ತವಾಗುವುದನ್ನು) ನೋಡಿರುವಂತೆ.

ಭಾಷ್ಯ: *ಕಾಲಾದೇಃ ಕರ್ಮವದ್ವಾ ಸ್ವತಃ ಪ್ರಧಾನಸ್ಯ ಚೇಷ್ಟಿತಂ ಸಿದ್ಧ್ಯತಿ, ದೃಷ್ಟತ್ವಾತ್। ಅಥ ಏಕೋ ಗಚ್ಛತಿ ಋತುರಿತರಶ್ಚ ಪ್ರವರ್ತತೇ ಇತ್ಯಾದಿರೂಪಂ ಕಾಲಾದಿಕರ್ಮ ಸ್ವತ ಏವ ಭವತಿ ಏವಂ ಪ್ರಧಾನಸ್ಯಾಪಿ ಚೇಷ್ಟಾ ಸ್ಯಾತ್ । ಕಲ್ಪನಾಯಾಃ ದೃಷ್ಟಾನುಸಾರಿತ್ವಾತ್ ಇತ್ಯರ್ಥಃ ।*

ಅನುವಾದ: ಕಾಲಾದಿಗಳಂತೆ ಕರ್ಮ ಎಂಬಂತೆ ಪ್ರಧಾನದ ಪ್ರವೃತ್ತಿಯು ತೋರುವುದು. ಒಂದು ಋತು ಕಳೆದಂತೆಯೇ ಮತ್ತೊಂದು ಸಿದ್ಧವಾಗುವಂತೆ ಪ್ರಕೃತಿಯ ಪ್ರವೃತ್ತಿಯೂ ಉಂಟಾಗುತ್ತದೆ ಎಂಬುದು ಒಂದು ಋತುವು ಕಳೆದಂತೆಯೇ ಇನ್ನೊಂದು ಸಿದ್ಧವಾಗುತ್ತದೆ ಎಂಬ ಈ ರೂಪದ ಕಾಲಾದಿಕರ್ಮವು ತಾನಾಗಿಯೇ ಉಂಟಾಗುವುದು. ಹಾಗೆಯೇ ಪ್ರಧಾನದ ಪ್ರವೃತ್ತಿಯೂ ಇರುವುದು. ಕಲ್ಪನೆಗಳು ನೋಡಿದ ವಿಷಯಗಳನ್ನು ಅನುಸರಿಸುತ್ತವೆ. ಆದ್ದರಿಂದ ಕಲ್ಪನೆಗಳನ್ನು ಮಾಡಬಹುದು.

ಭಾಷ್ಯ: *ನನು ತಥಾಪಿ ಮಮೇದಂ ಭೋಗಾದಿಸಾಧನಮಿತಿ ಪ್ರತಿಸಂಧಾನಾ–ಭಾವಾನ್ಮೂಢಾಯಾಃ ಪ್ರಕೃತೇಃ ಕದಾಚಿತ್ ಪ್ರವೃತ್ತಿರಪಿ ನ ಸ್ಯಾದ್ ವಿಪರೀತಾ ಚ ಪ್ರವೃತ್ತಿಃ ಸ್ಯಾತ್ । ತತ್ರಾಹ–*

ಅನುವಾದ: ಹಾಗಿದ್ದರೂ ಇದು ನನ್ನ ಭೋಗದ ಸಾಧನವೆಂದು ಪ್ರತಿಸಂಧಾನ ಮಾಡಿಕೊಂಡು ಮೂಢವಾದರೂ ಪ್ರಕೃತಿಯು ಯಾವಾಗಲಾದರೂ ಪ್ರವೃತ್ತವಾಗದೆ ಇರಬಹುದಲ್ಲವೆ? ಯಾವಾಗಲಾದರೂ ಆ ವಿಪರೀತ ಭಾವನೆ ಬರಬಹುದಲ್ಲ. ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ಸ್ವಭಾವಾಚ್ಚೇಷ್ಟಿತಂ ಅನಭಿಸಂಧಾನಾತ್ ಭೃತ್ಯವತ್ ॥ ೬೧ ॥

ಸೂತ್ರಾನುವಾದ: ತಾನಾಗಿಯೇ ತೀರ್ಮಾನಿಸಲು ಸಾಧ್ಯವಾಗದೆ ಇರುವುದರಿಂದ ಸೇವಕನಂತೆ ಸ್ವಾಭಾವಿಕವಾಗಿ (ಪ್ರಕೃತಿಯು) ಪ್ರವೃತ್ತವಾಗುವುದು.

ಭಾಷ್ಯ: *ಯಥಾ ಪ್ರಕೃಷ್ಟಭೃತ್ಯಸ್ಯ ಸ್ವಭಾವಾತ್ ಸಂಸ್ಕಾರಾದೇವ ಪ್ರತಿನಿಯತಾ ಆವಶ್ಯ ಕೀ ಚ ಸ್ವಾಮಿಸೇವಾ ಪ್ರವರ್ತತೇ, ನ ತು ಸ್ವಭೋಗಾಭಿಪ್ರಾಯೇಣ, ತಥೈವ ಪ್ರಕೃತೇಶ್ಚೇಷ್ಟಿತಂ ಸಂಸ್ಕಾರಾದೇವ ಇತ್ಯರ್ಥಃ ।*

ಅನುವಾದ: ಹೇಗೆ ಬುದ್ಧಿವಂತನಾದ ಭೃತ್ಯನು ಸ್ವಭಾವದಿಂದ ಅರ್ಥಾತ್ ಸಂಸ್ಕಾರ ದಿಂದಲೇ ವ್ಯವಸ್ಥಿತವಾಗಿಯೂ ಅವಶ್ಯಕವಾಗಿಯೂ ಸ್ವಾಮಿಸೇವೆಯಲ್ಲಿ ಪ್ರವೃತ್ತನಾಗು ವನೋ ಮತ್ತು ಅದರಲ್ಲಿ ತನ್ನ ಭೋಗದ ಅಭಿಪ್ರಾಯವನ್ನು ಹೊಂದಿರುವುದಿಲ್ಲವೋ ಹಾಗೆಯೇ ಪ್ರಕೃತಿಯು ಸಂಸ್ಕಾರದಿಂದಲೇ ಕಾರ್ಯಪ್ರವೃತ್ತವಾಗುವುದು ಎಂದರ್ಥ.

ಸೂತ್ರ: ಕರ್ಮಕೃಷ್ಟೇಃ ವಾ ಅನಾದಿತಃ ॥ ೬೨ ॥

ಸೂತ್ರಾನುವಾದ: ಅನಾದಿಕಾಲದಿಂದಲೂ ಕರ್ಮಗಳ ಪ್ರಭಾವದಿಂದಲಾಗಲಿ (ಪ್ರಕೃತಿಯು ಪ್ರವೃತ್ತವಾಗುವುದು).

ಭಾಷ್ಯ: *ವಾ ಶಬ್ದಃ ಅತ್ರ ಸಮುಚ್ಚಯೇ । ಯತಃ ಕರ್ಮ ಅನಾದ್ಯತಃ ಕರ್ಮಭಿರಾಕರ್ಷಣಾದಪಿ ಪ್ರಧಾನಸ್ಯ ಆವಶ್ಯಕೀ ವ್ಯವಸ್ಥಿತಾ ಚ ಪ್ರವೃತ್ತಿರಿತ್ಯರ್ಥಃ ।*

ಅನುವಾದ: ಇಲ್ಲಿ 'ವಾ' ಶಬ್ದವು ಸಮುಚ್ಚಯಾರ್ಥದಲ್ಲಿದೆ. ಏಕೆಂದರೆ ಕರ್ಮವು ಅನಾದಿಕಾಲದಿಂದಲೂ ಇರುವುದು. ಕರ್ಮಗಳಿಂದ ಆಕರ್ಷಣೆಗೆ ಒಳಗಾದರೂ (ಅದರಿಂದ ಪ್ರಭಾವಿತರಾದರೂ) ಪ್ರಧಾನವು ಪ್ರವೃತ್ತವಾಗುವುದರ ವ್ಯವಸ್ಥೆಯು ಅವಶ್ಯಕವಾಗುವುದು.

ವಿವರಣೆ: ಪ್ರಕೃತಿಯು ಪ್ರವೃತ್ತವಾಗಲು ಕರ್ಮಗಳ ಪ್ರಭಾವವು ಕಾರಣ. ಇದು ಅನಾದಿಕಾಲದಿಂದ ಬಂದ ಪರಂಪರೆ.

ಭಾಷ್ಯ: *ತದೇವಂ ಪ್ರಧಾನಸ್ಯ ಪರಾರ್ಥತಃ ಸ್ರಷ್ಟೃತ್ವೇ ಸಿದ್ಧೇ ಪರಪ್ರಯೋಜನ– ಸಮಾಪ್ತೌ ಸ್ವತ ಏವ ಪ್ರಧಾನನಿವೃತ್ತ್ಯಾ ಮೋಕ್ಷಃ ಸಿಧ್ಯತೀತ್ಯಾಹ ಪ್ರಘಟ್ಟಕೇನ–*

ಅನುವಾದ: ಹೀಗೆ ಪ್ರಧಾನವು ಸೃಷ್ಟಿಯಲ್ಲಿ ತೊಡಗುವುದು ಪರಾರ್ಥಕ್ಕಾಗಿ ಎಂದು ಸಿದ್ಧವಾಗಿರುವಾಗ ಪರಪ್ರಯೋಜನವು ಪೂರ್ಣವಾಗಿರಲಾಗಿ ತಾನೇ ಪ್ರಧಾನದ ನಿವೃತ್ತಿಯಿಂದ ಮೋಕ್ಷವು ತಾನಾಗಿಯೇ ಸಿದ್ಧವಾಗುವುದು ಎಂದು ಈ ಉಪದೇಶದ ಮೂಲಕ ಹೇಳಿದೆ.

ಸೂತ್ರ: ವಿವಿಕ್ತಬೋಧಾತ್ ಸೃಷ್ಟಿನಿವೃತ್ತಿಃ ಪ್ರಧಾನಸ್ಯ ಸೂದವತ್ ಪಾಕೇ ॥ ೬೩ ॥

ಸೂತ್ರಾನುವಾದ: (ಪ್ರಕೃತಿಯಿಂದ ತಾನು ಭಿನ್ನನೆಂಬ) ವಿವೇಕಜ್ಞಾನವುಂಟಾದಾಗ ನಿರ್ಮಿತವಾದ ಸೃಷ್ಟಿಯು ಸಮಾಪ್ತವಾಗುತ್ತದೆ. ಹೇಗೆಂದರೆ ಅಡಿಗೆ ಮಾಡಿದ ನಂತರ ಪಾಚಕನು ಹಿಂದಿರುಗುವಂತೆ.

ಭಾಷ್ಯ: *ವಿವಿಕ್ತಪುರುಷಜ್ಞಾನಾತ್ ಪರವೈರಾಗ್ಯೇಣ ಪುರುಷಾರ್ಥಸಮಾಪ್ತೌ ಪ್ರಧಾನಸ್ಯ ಸೃಷ್ಟಿರ್ನಿವರ್ತತೇ । ಯಥಾ ಪಾಕೇ ನಿಷ್ಪನ್ನೇ ಪಾಚಕಸ್ಯ ವ್ಯಾಪಾರೋ ನಿವರ್ತತೇ ಇತ್ಯರ್ಥಃ । ಇಯಮೇವ ಆತ್ಯಂತಿಕಪ್ರಲಯ ಇತ್ಯುಚ್ಯತೇ । ತಥಾ ಚ ಶ್ರುತಿಃ– ತಸ್ಯಾಭಿಧ್ಯಾನಾದ್ಯೋಜನಾತ್ ತತ್ತ್ವಭಾವಾತ್ ಭೂಯಶ್ಚಾಂತೇ ವಿಶ್ವಮಾಯಾ ನಿವೃತ್ತಿರಿತಿ ।*

(ಶ್ವೇ.ಉ. ೧.೧೦)

ಅನುವಾದ: ವಿವೇಕಜ್ಞಾನ ಪಡೆದ ಪುರುಷನ ಜ್ಞಾನದ ಕಾರಣ ಪುರುಷಾರ್ಥವು ಸಮಾಪ್ತವಾಗಿರಲು ಪ್ರಧಾನದ ಸೃಷ್ಟಿಯು ಹಿಂದಿರುಗುತ್ತದೆ. ಪಾಚಕನು ಅಡಿಗೆ ಮಾಡಿದ ಮೇಲೆ ಅವನ ಕಾರ್ಯವು ಮುಗಿದು ಹಿಂದಿರುಗುತ್ತಾನೆ. ಇದನ್ನೇ ಆತ್ಯಂತಿಕ ಪ್ರಲಯವೆನ್ನುವರು. ಅದನ್ನು ಶ್ರುತಿಯು ಹೀಗೆನ್ನುತ್ತದೆ. 'ಮತ್ತೆ ಮತ್ತೆ (ಹರನನ್ನು) ಧ್ಯಾನಿಸುವುದರಿಂದಲೂ, ಅವನನ್ನು ಸೇರುವುದರಿಂದಲೂ, ತತ್ತ್ವಜ್ಞಾನದಿಂದಲೂ ಕೊನೆಯಲ್ಲಿ ವಿಶ್ವಮಾಯಾನಿವೃತ್ತಿಯಾಗುವುದು' ಎಂದು.

ಭಾಷ್ಯ: *ನನ್ವೇವಮೇಕಪುರುಷಸ್ಯೋಪಾಧೌ ವಿವೇಕಜ್ಞಾನೋತ್ಪತ್ತ್ಯಾ ಪ್ರಕೃತೇಃ ಸೃಷ್ಟಿನಿವೃತ್ತೌ ಸರ್ವಮುಕ್ತಿಪ್ರಸಂಗ ಇತಿ– ತತ್ರಾಹ.*

ಅನುವಾದ: ಹೀಗೆ ಒಬ್ಬ ಪುರುಷನ ಅಂತಃಕರಣದಲ್ಲಿ ವಿವೇಕಜ್ಞಾನವು ಉತ್ಪನ್ನವಾಗುವುದರಿಂದ ಪ್ರಕೃತಿಯು ಸೃಷ್ಟಿಯಿಂದ ಹಿಂದಿರುಗಿದರೆ ಎಲ್ಲರಿಗೂ ಮುಕ್ತಿ ಬರುವ ಪ್ರಸಂಗ ಬರುವುದು– ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ಇತರ ಇತರವತ್ ತದ್ದೋಷಾತ್ ॥ ೬೪ ॥

ಸೂತ್ರಾನುವಾದ: ಬದ್ಧಪುರುಷನು ಇತರ ಬದ್ಧಪುರುಷರಂತೆ ಪ್ರಧಾನದ ದೋಷದಿಂದ (ಪ್ರಕೃತಿಯೊಡನೆ ಇರುವನು).

ಭಾಷ್ಯ: *ಇತರಸ್ತು ವಿವಿಕ್ತಬೋಧರಹಿತಃ ಇತರವತ್ ಬದ್ಧವದೇವ ಪ್ರಕೃತ್ಯಾ ತಿಷ್ಠತಿ । ಕುತಃ? ತಸ್ಯ ಪ್ರಧಾನಸ್ಯೈವ ತತ್ಪುರುಷಾರ್ಥ– ಅಸಮಾಪನಾಖ್ಯ ದೋಷಾದಿತ್ಯರ್ಥಃ । ತದುಕ್ತಂ ಯೋಗಸೂತ್ರೇ– 'ಕೃತಾರ್ಥಂ ಪ್ರತಿ ನಷ್ಟಮಪ್ಯನಷ್ಟಂ ತದನ್ಯಸಾಧಾರಣತ್ವಾತ್ (೩.೨೨) । ತಥಾ ಚ ಪೂರ್ವಸೂತ್ರೇ ಯಾ ಪ್ರಧಾನನಿವೃತ್ತಿರುಕ್ತಾ ಸಾ ವಿವಿಕ್ತ ಬೋಧ್ದೃಪುರುಷಂ ಪ್ರತ್ಯೇವೇತಿ ಭಾವಃ । 'ವಿಶ್ವಮಾಯಾಶ್ರುತಿಃ' (ಶ್ವೇ.ಉ. ೧.೧೦) ಅಪಿ ಜ್ಞಾನಿನಂ ಪ್ರತ್ಯೇವ ಮಂತವ್ಯಾ । 'ಅಜಾಂ' (ಶ್ವೇ.ಉ. ೪.೫) ಶ್ರುತ್ಯಾ ಏಕವಾಕ್ಯತ್ವಾತ್ ಇತಿ ।*

ಅನುವಾದ: ವಿವೇಕಜ್ಞಾನವನ್ನು ಪಡೆಯದ ಇತರರು ಉಳಿದವರಂತೆ ಬದ್ಧರಾದವರಂತೆ ಇರಬೇಕಾಗುವುದು. ಏಕೆ? ಅವನ ದೋಷದ ಕಾರಣ. ಅವನು ಪ್ರಧಾನವು ಅವನ ಪುರುಷಾರ್ಥವನ್ನು ಪೂರೈಸಿಲ್ಲವೆಂಬ ದೋಷದಿಂದ (ಬದ್ಧನಾಗಿ) ಇರಬೇಕಾಗುವುದು. ಅದನ್ನೇ ಯೋಗಸೂತ್ರದಲ್ಲಿ ಹೇಳಿದೆ– 'ಕೃತಾರ್ಥನಾದ ಪುರುಷನಿಗೆ ಪ್ರಧಾನವು ನಷ್ಟವಾದರೂ ನಷ್ಟವಾಗದಂತೆ ನೋಡಿಕೊಳ್ಳುವುದು. ಏಕೆಂದರೆ ಅದು ಎಲ್ಲರಿಗೂ ಸಮಾನ. ಹಾಗೆಯೇ ಹಿಂದಿನ ಸೂತ್ರದಲ್ಲಿ ಪ್ರಧಾನ ನಿವೃತ್ತಿಯಾಗುವುದೆಂದು ಹೇಳಿದ್ದು ವಿವೇಕಜ್ಞಾನವುಳ್ಳ ಪುರುಷನನ್ನು ಕುರಿತು ಹೇಳಿದ್ದೆಂದು ಭಾವ. ವಿಶ್ವಮಾಯಾಶ್ರುತಿ ಎಂದರೆ ಶ್ವೇತಾಶ್ವತರೋಪನಿಷತ್ತೂ ಸಹ ಜ್ಞಾನಿಯನ್ನು ಕುರಿತು ಹೇಳಿದ್ದೇ ಎಂದು ತಿಳಿಯಬೇಕು.(ಶ್ವೇ.ಉ. ೧.೧೦) 'ಅಜಾಂ' ಎಂಬುದೂ (ಶ್ವೇ.ಉ. ೪.೫) ಆ ಶ್ರುತಿಯ ವಾಕ್ಯವೂ ಏಕವಾಕ್ಯವೆಂದೇ ಭಾವಿಸಬೇಕು.

ವಿವರಣೆ: 'ಏಕವಾಕ್ಯತಾ' ಎಂದರೆ ವಿಶೇಷವಾದ ಒಂದೇ ಅರ್ಥವನ್ನು ನೀಡುವ ವಾಕ್ಯ.

ಭಾಷ್ಯ: *ಸೃಷ್ಟಿನಿವೃತ್ತೇಃ ಫಲಮಾಹ ।*

ಸೂತ್ರ: ದ್ವಯೋರೇಕತರಸ್ಯ ವಾ ಔದಾಸೀನ್ಯಮಪವರ್ಗಃ ॥ ೬೫ ॥

ಸೂತ್ರಾನುವಾದ: ಎರಡರಲ್ಲಿ ಯಾವುದಾದರೂ ಒಂದರ ಅಥವಾ ಎರಡೂ ಪರಸ್ಪರ ಒಂದರ ಬಗ್ಗೆ ಇನ್ನೊಂದರ ಔದಾಸೀನ್ಯವೇ ಅಪವರ್ಗ.

ಭಾಷ್ಯ: *ದ್ವಯೋಃ ಪ್ರಧಾನಪುರುಷಯೋಃ ಏವ ಔದಾಸೀನ್ಯಂ ಏಕಾಕಿತಾ । ಪರಸ್ಪರವಿಯೋಗ ಇತಿ ಯಾವತ್ । ಸೋಽಪವರ್ಗಃ । ಅಥವಾ ಪುರುಷಸ್ಯೈವ ಕೈವಲ್ಯಮ್ । ಅಹಂ ಮುಕ್ತಃ ಸ್ಯಾಂ ಇತ್ಯೇವ ಪುರುಷಾರ್ಥತಾದರ್ಶನಾತ್ ಇತ್ಯರ್ಥಃ ।*

ಅನುವಾದ: ಎರಡರಲ್ಲೂ ಎಂದರೆ ಪ್ರಧಾನ–ಪುರುಷರಿಬ್ಬರಲ್ಲಿ, ಔದಾಸೀನ್ಯ ಎಂದರೆ ಏಕಾಕಿತೆ ಅಥವಾ ಬೇರೆಯಾಗಿರುವಿಕೆ. ಪರಸ್ಪರ ವಿಯೋಗ ಎಂದರ್ಥ. ಅದೇ ಅಪವರ್ಗ, ಅಥವಾ ಪುರುಷನಿಗೇ ಕೇವಲಭಾವ. 'ನಾನು ಮುಕ್ತನಾದೇನು' ಎಂದು ಪುರುಷಾರ್ಥ ಸ್ಥಿತಿಯ ದರ್ಶನವನ್ನು ಪಡೆಯುವುದು.

ಭಾಷ್ಯ: *ನನ್ವೇಕ ಪುರುಷಮುಕ್ತಾವೇವ ವಿವೇಕಾಕಾರವೃತ್ತ್ಯಾ ವಿರಕ್ತಾ ಪ್ರಕೃತಿಃ ಕಥಮನ್ಯಪುರುಷಾರ್ಥಂ ಪುನಃ ಸೃಷ್ಟೌ ಪ್ರವರ್ತತಾಮ್ । ನ ಚ ಪ್ರಕೃತೇರಂಶಭೇದಾನ್ನೈಷ ದೋಷ ಇತಿ ವಾಚ್ಯಮ್ । ಮುಕ್ತಪುರು–ಷೋಪಕರಣೈಃ ಅಪಿ ಪೃಥಿವ್ಯಾದಿಭಿಃ ಅನ್ಯಸ್ಯ ಭೋಗ್ಯಸೃಷ್ಟಿದರ್ಶನಾದಿತಿ । ತತ್ರಾಹ–*

ಅನುವಾದ: ಒಬ್ಬ ಪುರುಷನ ಮುಕ್ತಿಯನ್ನುಂಟುಮಾಡಿ ವಿವೇಕ– ಆಕಾರದ ವೃತ್ತಿಯಿಂದ ವಿರಕ್ತವಾದ ಪ್ರಕೃತಿಯು ಬೇರೆಯ ಪುರುಷನ ಸಲುವಾಗಿ ಮತ್ತೆ ಸೃಷ್ಟಿಯಲ್ಲಿ ಏಕೆ ತೊಡಗುವುದು? ಅಂಶಭೇದ ಎಂದರೆ ಸ್ವಲ್ಪ ಅಂಶದಿಂದ ವಿರಕ್ತ ಮತ್ತು

ಸ್ವಲ್ಪ ಅಂಶದಿಂದ ಪ್ರವೃತ್ತವಾಗುವುದರಿಂದ ದೋಷವಿಲ್ಲ ಎಂದು ಹೇಳಲಾಗದು. ಏಕೆಂದರೆ ಮುಕ್ತಪುರುಷನ ಉಪಕರಣಗಳಾದ ಭೂಮಿ ಮುಂತಾದುವುಗಳಿಂದ ಇತರ ಪುರುಷರಿಗೆ ಭೋಗ್ಯಸೃಷ್ಟಿ ತೋರುವುದು. ಅದನ್ನು ಕುರಿತು ಹೀಗೆ ಹೇಳಿದ್ದಾರೆ–

ಸೂತ್ರ: ಅನ್ಯಸೃಷ್ಟ್ಯುಪರಾಗೇಽಪಿ ನ ವಿರಜ್ಯತೇ, ಪ್ರಬುದ್ಧರಜ್ಜು–ತತ್ತ್ವಸ್ಯೇವೋರಗಃ ॥ ೬೬ ॥

ಸೂತ್ರಾನುವಾದ: ಹಗ್ಗವನ್ನು ಕಂಡು ಅದರ ನಿಜವಾದ ಸ್ವರೂಪವನ್ನು ಕಂಡವನು ಹಾವಿನ ಭ್ರಮೆಯನ್ನು ಕಳೆದುಕೊಳ್ಳುವನು. ಹಾಗೆ ಇದ್ದರೂ ಭ್ರಮೆಯಲ್ಲಿ ಇರುವವರ ಸಲುವಾಗಿ ಪ್ರಕೃತಿಯು ಸೃಷ್ಟಿಯ ರಚನೆಯಲ್ಲಿ ಉದಾಸೀನವಾಗದು.

ಭಾಷ್ಯ: *ಏವಂ ವಿಧಂ ರಜ್ಜು ಸರ್ಪಾದಿದೃಷ್ಟಾಂತಾನಾಂ ಆಶಯಂ ಅಬುದ್ಧ್ವಾ ಏವ ಅಬುಧಾಃ ಕೇಚಿದ್ವೇದಾಂತಿಬ್ರುವಾಃ ಪ್ರಕೃತೇರತ್ಯಂತ– ತುಚ್ಛತ್ವಂ ಮನೋಮಾತ್ರತ್ವಂ ವಾ ತುಲಯಂತಿ । ಏತೇನ ಪ್ರಕೃತಿಸತ್ಯತಾವಾದಿ–ಸಾಂಖ್ಯೋಕ್ತದೃಷ್ಟಾಂತೇನ ಶ್ರುತಿಸ್ಮೃತ್ಯರ್ಥಾನ್‌ಬೋಧನೀಯಾಃ ನ ಕೇವಲಂ ದೃಷ್ಟಾಂತವತ್ತ್ವೇನ ಅಯಮರ್ಥಃ ಸಿಧ್ಯತಿ ।*

ಅನುವಾದ: ಹೀಗೆ ಹಗ್ಗ–ಹಾವುಗಳೇ ಮೊದಲಾದ ದೃಷ್ಟಾಂತಗಳ ಆಶಯವನ್ನು ಅರಿಯದೆ ವೇದಾಂತಿಗಳೆಂದು ಹೇಳಿಕೊಳ್ಳುವವರು ಪ್ರಕೃತಿಯ ತುಚ್ಛತ್ವವನ್ನೂ ಅಥವಾ ಮನಸ್ಸಿನ ಕಲ್ಪನೆಯನ್ನೂ ಹೋಲಿಸುತ್ತಾರೆ. ಇದರಿಂದ ಪ್ರಕೃತಿಸತ್ಯತೆಯನ್ನು ಹೇಳುವ ಸಾಂಖ್ಯದಲ್ಲಿ ಹೇಳಿರುವ ದೃಷ್ಟಾಂತದೊಡನೆ ಶ್ರುತಿಸ್ಮೃತಿಗಳ ವಾಕ್ಯಗಳನ್ನು ಅರ್ಥಮಾಡಿಕೊಳ್ಳಬೇಕು. ದೃಷ್ಟಾಂತದಿಂದಷ್ಟೇ ಅರ್ಥವು ಸಿದ್ಧಿಸದು.

ವಿವರಣೆ: ವೇದಾಂತಿಗಳು ನೀಡುವ ಭ್ರಮೆಯ ದೃಷ್ಟಾಂತ ಸಾಂಖ್ಯರಿಗೆ ಒಪ್ಪಿಗೆಯಿಲ್ಲ. ಸಾಂಖ್ಯರು 'ಪ್ರಕೃತಿಸತ್ಯತಾವಾದಿಗಳು'. ಪ್ರಕೃತಿ–ಪುರುಷರ ಭಿನ್ನತೆಯನ್ನು ಅರಿತ ನಂತರ ವಿವೇಕಜ್ಞಾನ ಉಂಟಾಗುವುದು.

ಸೂತ್ರ: ಕರ್ಮನಿಮಿತ್ತಯೋಗಾಚ್ಚ ॥ ೬೭ ॥

ಸೂತ್ರಾನುವಾದ: ಮತ್ತು ಕರ್ಮದ ಕಾರಣಗಳ ಸಂಬಂಧದಿಂದಲೂ (ಪ್ರಕೃತಿಯು ಪ್ರವೃತ್ತವಾಗುವುದು).

ಭಾಷ್ಯ: *ನೇತಿ । ಸೃಷ್ಟೌ ನಿಮಿತ್ತಂ ಯತ್ ಕರ್ಮ ತಸ್ಯ ಸಂಬಂಧಾದಪಿ ಅನ್ಯಪುರುಷಾರ್ಥಂ ಸೃಜತೀತ್ಯರ್ಥಃ ।*

ಅನುವಾದ: ಹಾಗಲ್ಲ. ಸೃಷ್ಟಿಗೆ ನಿಮಿತ್ತಭೂತವಾದ ಕರ್ಮಕ್ಕೆ ಸಂಬಂಧಪಟ್ಟಂತೆಯೂ ಇತರರ ಪುರುಷಾರ್ಥಕ್ಕಾಗಿ ಪ್ರಕೃತಿಯು ಪ್ರವೃತ್ತವಾಗುವುದು.

ಭಾಷ್ಯ: *ನನು ಸರ್ವೇಷಾಂ ಪುರುಷಾಣಾಂ ಅಪ್ರಾರ್ಥಕತಯಾ ನೈರಪೇಕ್ಷ್ಯ–ವಿಶೇಷೇಽಪಿ ಕಂಚಿತ್ ಪ್ರತ್ಯೇವ ಪ್ರಧಾನಂ ಪ್ರವರ್ತತೇ, ಕಂಚಿತ್ ಪ್ರತಿ*

ನಿವರ್ತತೇ ಇತ್ಯತ್ರ ಕಿಂ ನಿಯಾಮಕಮ್ । ನ ಚ ಕರ್ಮ-ನಿಯಾಮಕಮ್ । ಕಸ್ಯ ಪುರುಷಸ್ಯ ಕಿಂ ಕರ್ಮೇತ್ಯತ್ರ ನಿಯಾಮ-ಕಾಭಾವಾದಿತಿ । ಕತ್ರಹ-

ಅನುವಾದ: ಎಲ್ಲ ಪುರುಷರು ಪ್ರಾರ್ಥನೆ ಮಾಡದಿದ್ದರೂ ನಿರಪೇಕ್ಷತೆಯಿಂದ ವಿಶೇಷವಿಲ್ಲದೆ ಒಬ್ಬ ಪುರುಷನಲ್ಲಿ ಪ್ರಧಾನವು ಪ್ರವೃತ್ತವಾಗುವುದು ಮತ್ತೊಬ್ಬನಲ್ಲಿ ಪ್ರವೃತ್ತವಾಗುವುದಿಲ್ಲ ಎಂಬುದರಲ್ಲಿ ನಿಯಮವೇನು? ಕರ್ಮವೆಂದು ನಿರ್ಧರಿಸುವುದು ಕಷ್ಟ. ಯಾವ ಪುರುಷನಿಗೆ ಯಾವ ಕರ್ಮ ಎಂಬ ವಿಷಯದಲ್ಲಿ ನಿಯಾಮಕವಿಲ್ಲ. ಅದಕ್ಕೆ ಹೇಳಿದೆ-

ಸೂತ್ರ: ನೈರಪೇಕ್ಷ್ಯೇಽಪಿ ಪ್ರಕೃತ್ಯುಪಕಾರೇಽವಿವೇಕೋ ನಿಮಿತ್ತಮ್ ॥ ೬೮ ॥

ಸೂತ್ರಾನುವಾದ: ನಿರಪೇಕ್ಷವಾದರೂ ಪ್ರಕೃತಿಯು ಮಾಡುವ ಉಪಕಾರಕ್ಕೆ ಅವಿವೇಕವೇ ಕಾರಣ.

ಭಾಷ್ಯ: *ಪುರುಷಾಣಾಂ ನೈರಪೇಕ್ಷ್ಯೇಽಪ್ಯಯಂ ಮೇ ಸ್ವಾಮೀ ಅಯಂ ಏವ ಅಹಂ ಇತ್ಯವಿವೇಕಾದೇವ ಪ್ರಕೃತಿಃ ಸೃಷ್ಟ್ಯಾದಿಭಿಃ ಪುರುಷಾನ್ ಉಪಕರೋತಿ ಇತ್ಯರ್ಥಃ । ತಥಾ ಚ ಯಸ್ಮೈ ಪುರುಷಾಯ ಆತ್ಮಾನಂ ಅವಿವಿಚ್ಯ ದರ್ಶಯಿತುಂ ವಾಸನಾ ವರ್ತತೇ ತಂ ಪ್ರತ್ಯೇವ ಪ್ರಧಾನಂ ಪ್ರವರ್ತತೇ ಇತ್ಯೇವ ನಿಯಾಮಕಮಿತಿ ಭಾವಃ ।*

ಅನುವಾದ: ಪುರುಷರು ನಿರಪೇಕ್ಷವಾಗಿದ್ದರೂ ಪ್ರಕೃತಿಯು ಸೃಷ್ಟ್ಯಾದಿಗಳಿಂದ 'ಇವನು ನನ್ನ ಒಡೆಯ', 'ಇವನೇ ನಾನು' ಎಂಬ ಅವಿವೇಕದಿಂದ ಪುರುಷರ ಉಪಕಾರವನ್ನು ಮಾಡುತ್ತದೆ, ಎಂದರ್ಥ. ಹಾಗೆಯೇ ತನ್ನನ್ನು ಯಾವ ಪುರುಷನ ಸಲುವಾಗಿ ಪೂರ್ಣವಾಗಿ ತೋರ್ಪಡಿಸಲು 'ವಾಸನಾ' ಇರುವುದೋ ಪ್ರಧಾನವು ಅವನನ್ನೇ ಕುರಿತು ಪ್ರವೃತ್ತವಾಗುವುದು ಎಂಬುದೇ ನಿಯಾಮಕವು ಎಂದು ಭಾವ.

ಭಾಷ್ಯ: *ಪ್ರವೃತ್ತಿಸ್ವಭಾವತ್ವಾತ್ ಕಥಂ ವಿವೇಕೇಽಪಿ ನಿವೃತ್ತಿಃ ಉಪಪದ್ಯತಾಂ, ತತ್ರಾಹ-*

ಸೂತ್ರ: ನರ್ತಕೀವತ್ ಪ್ರವೃತ್ತಸ್ಯಾಪಿ ನಿವೃತ್ತಿಶ್ಚಾರಿತಾರ್ಥ್ಯಾತ್ ॥೬೯॥

ಅನುವಾದ: ಪ್ರವೃತ್ತವಾಗುವುದು ಅದರ ಸ್ವಭಾವವಾದ್ದರಿಂದ (ಪುರುಷನ) ವಿವೇಕ ಜ್ಞಾನವುಂಟಾದ ಮೇಲೂ ಇದರ ನಿವೃತ್ತಿ ಹೇಗೆ ಸಾಧ್ಯ?

ಸೂತ್ರಾನುವಾದ: ನರ್ತಕಿಯಂತೆ ಪ್ರವೃತ್ತಳಾದರೂ ಪ್ರಕೃತಿಯು ಕಾರ್ಯವು ಕೈಗೂಡಿದ ಮೇಲೆ ಕಾರ್ಯನಿವೃತ್ತಳಾಗುವಳು.

ಭಾಷ್ಯ: *ಪುರುಷಾರ್ಥಮೇವ ಪ್ರಧಾನಸ್ಯ ಪ್ರವೃತ್ತಿಸ್ವಭಾವಃ ನ ತು ಸಾಮಾನ್ಯೇನ। ಅತಃ ಪ್ರವೃತ್ತಸ್ಯಾಪಿ ಪ್ರಧಾನಸ್ಯ ಪುರುಷಾರ್ಥಸಮಾಪ್ತಿರೂಪ-*

ಚರಿತಾರ್ಥತ್ವೇ ಸತಿ ನಿವೃತ್ತಿರ್ಯುಕ್ತಾ । ಯಥಾ ಪರಿಷದ್ಭ್ಯೋ ನೃತ್ಯದರ್ಶನಾರ್ಥಂ ಪ್ರವೃತ್ತಾಯಾಃ ನರ್ತಕ್ಯಾಸ್ತತ್ಸಿದ್ಧೌ ನಿವೃತ್ತಿರಿತ್ಯರ್ಥಃ।

ಅನುವಾದ: ಪುರುಷಾರ್ಥವೇ ಪ್ರಧಾನದ ಪ್ರವೃತ್ತಿಯ ಸ್ವಭಾವ, ಸಾಮಾನ್ಯ ರೂಪದಿಂದಲ್ಲ. ಆದ್ದರಿಂದ ಪ್ರಧಾನವು ಪ್ರವೃತ್ತವಾದರೂ ಪುರುಷಾರ್ಥವು ಕೈಗೂಡಿತೆಂದು ಕೃತಾರ್ಥವಾದ ನಂತರ ಅದು ಹಿಂದೆಗೆಯುವುದು ಉಚಿತವೇ. ಸಭಿಕರ ಮುಂದೆ ನೃತ್ಯ ಪ್ರದರ್ಶನಕ್ಕಾಗಿ ಪ್ರವೃತ್ತಳಾದ ನರ್ತಕಿಯು ಅದು ನೆರವೇರಿದ ಮೇಲೆ ಹಿಂದಿರುಗುವಂತೆ ಎಂದರ್ಥ.

ವಿವರಣೆ: ವಿವೇಕಜ್ಞಾನ ಬಂದವರಿಗೆ ಪ್ರಕೃತಿಯು, ನೃತ್ಯ ಮುಗಿದ ನರ್ತಕಿಯಂತೆ, ಹಿಂದಿರುಗುವುದು.

ಭಾಷ್ಯ: *ನಿವೃತ್ತೌ ಹೇತ್ವಂತರಮಾಹ–* ಹಿಂದಿರುಗಲು ಮತ್ತೊಂದು ಕಾರಣವನ್ನು ಹೇಳಿದೆ.

ಸೂತ್ರ: ದೋಷಬೋಧೇಽಪಿ ನೋಪಸರ್ಪಣಂ ಪ್ರಧಾನಸ್ಯ ಕುಲವಧೂವತ್ ॥ ೭೦ ॥

ಸೂತ್ರಾನುವಾದ: (ಪ್ರಕೃತಿಯ) ದೋಷಗಳನ್ನು ಅರಿತರೂ ಪ್ರಧಾನವು, ಪ್ರವೃತ್ತವಾಗದೆ ಕುಲವಧುವಿನಂತೆ ಹಿಂದಿರುಗಿಬಿಡುವುದು.

ಭಾಷ್ಯ: *ಸವಿಕಾರಾಯ ಮೌಢ್ಯೇನ ಚಿರಂ ಭುಕ್ತ್ವಾ ಗುಣಾತ್ಮನಾ ।*
ಪ್ರಕೃತಿರ್ಜ್ಞಾತದೋಷೇಯಂ ಲಜ್ಜಯೇವ ನಿವರ್ತತೇ ॥
(ನಾರದೀಯಪುರಾಣ)

ಏತದೇವೋಕ್ತಂ ಕಾರಿಕಯಾಪಿ ।
ಪ್ರಕೃತೇಃ ಸುಕುಮಾರತರಂ ನ ಕಿಂಚಿದಸ್ತೀತಿ ಮೇ ಮತಿರ್ಭವತಿ।
ಯಾ ದೃಷ್ಟಾಸ್ಮೀತಿ ಪುನರ್ನ ದರ್ಶನಮುಪೈತಿ ಪುರುಷಸ್ಯ ॥
(ಸಾಂ.ಕಾ. ೬೧)

ಅನುವಾದ: ಗುಣಗಳಿಂದ ಕೂಡಿ, ಪರಿಣಾಮ ಹೊಂದುತ್ತಿದ್ದರೂ ಮೌಢ್ಯದಿಂದ ಬಹಳ ಕಾಲ ಅನುಭವಿಸಿ ದೋಷದಿಂದ ಕೂಡಿದ ಪ್ರಕೃತಿಯು (ವಿವೇಕಜ್ಞಾನ ಪಡೆದ ಪುರುಷನಿಂದ) ನಾಚಿಕೆಯಿಂದಲೋ ಎಂಬಂತೆ ಹಿಂದಿರುಗುವಳು.

ಇದನ್ನೇ ಕಾರಿಕೆಯಲ್ಲಿ ಹೀಗೆ ಹೇಳಿದೆ– 'ಪ್ರಕೃತಿಯಷ್ಟು ಸುಕುಮಾರವಾದ ವಸ್ತು ಬೇರೊಂದಿಲ್ಲ ಎಂದು ನನ್ನ ಭಾವನೆ. ಅವಳು (ಪುರುಷನಿಂದ) ನೋಡಲ್ಪಟ್ಟೆ ಎಂದು ಮತ್ತೆ ಪುರುಷನ ದೃಷ್ಟಿಗೆ ಬರುವುದಿಲ್ಲ.'

ಭಾಷ್ಯ: *ನನು ಪುರುಷಾರ್ಥಂ ಚೇತ್ ಪ್ರಧಾನವೃತ್ತಿಃ ತರ್ಹಿ ಬಂಧಮೋಕ್ಷಾಭ್ಯಾಂ ಪುರುಷಸ್ಯ ಪರಿಣಾಮಾಪತ್ತಿರಿತಿ । ತತ್ರಾಹ–*

ಅನುವಾದ: ಪ್ರಕೃತಿಯ ಪ್ರವೃತ್ತಿಯು ಪುರುಷನ ಸಲುವಾಗಿಯೇ ಆಗುವುದಾದರೆ ಬಂಧಮೋಕ್ಷಗಳೆರಡೂ ಪುರುಷನಲ್ಲಿ ಪರಿಣಾಮವೆಂದು ಹೇಳಬಹುದಲ್ಲವೆ? ಅದಕ್ಕೆ ಹೇಳಿದ್ದಾರೆ–

ಸೂತ್ರ: ನೈಕಾಂತತೋ ಬಂಧಮೋಕ್ಷೌ ಪುರುಷಸ್ಯಾವಿವೇಕಾದೃತೇ ॥ ೭೧ ॥

ಸೂತ್ರಾನುವಾದ: ಅವಿವೇಕವಿಲ್ಲದೆ ಪುರುಷನ ಬಂಧಮೋಕ್ಷಗಳು ಶಾಶ್ವತವಾಗಿ ಇರುವುದಿಲ್ಲ.

ಭಾಷ್ಯ: *ದುಃಖಯೋಗವಿಯೋಗರೂಪೌ ಬಂಧಮೋಕ್ಷೌ ಪುರುಷಸ್ಯ ನೈಕಾಂತತಸ್ತತ್ವತಃ, ಕಿಂತು ಚತುರ್ಥಸೂರ್ಥವಕ್ಷ್ಯಮಾಣ– ಪ್ರಕಾರೇಣ ಅವಿವೇಕಾದೇವೇತ್ಯರ್ಥಃ ।*

ಅನುವಾದ: ದುಃಖದ ಯೋಗವಾಗಲಿ, ದುಃಖದ ವಿಯೋಗವಾಗಲಿ ಬಂಧಮೋಕ್ಷಗಳು ನಿಜವಾಗಿಯೂ ಇರುವುದಿಲ್ಲ. ಆದರೆ ನಾಲ್ಕನೆಯ ಸೂತ್ರದಲ್ಲಿ ಮುಂದೆ ಹೇಳುವಂತೆ ಅವಿವೇಕದಿಂದಲೇ ಉಂಟಾಗುತ್ತದೆ.

ಭಾಷ್ಯ: *ಪರಮಾರ್ಥತಸ್ತು ಯಥೋಕ್ತೌ ಬಂಧಮೋಕ್ಷೌ ಪ್ರಕೃತೇರೇವೇತ್ಯಾಹ ।*

ಸೂತ್ರ: ಪ್ರಕೃತೇರಾಂಜಸ್ಯಾತ್ ಸಸಂಗತ್ವಾತ್ ಪಶುವತ್ ॥ ೭೨ ॥

ಸೂತ್ರಾನುವಾದ: ಪಶುವಿನಂತೆ ಸಂಗಸಹಿತವಾಗಿರುವ ಕಾರಣ ಯಥಾರ್ಥವಾಗಿ ಪ್ರಕೃತಿಗೇ ಬಂಧಮೋಕ್ಷಗಳು ಉಂಟಾಗುತ್ತವೆ.

ಭಾಷ್ಯ: *ಪ್ರಕೃತೇರೇವ ತತ್ತ್ವತಃ ದುಃಖೇನ ಬಂಧಮೋಕ್ಷೌ ಸಸಂಗತ್ವಾತ್ ದುಃಖ– ಸಾಧನೈರ್ಧರ್ಮಾದಿಭಿರ್ಲಿಪ್ತತ್ವಾತ್ । ಯಥಾ ಪಶುಃ ರಜ್ಜ್ವಾ ಲಿಪ್ತತಯಾ ಬಂಧಮೋಕ್ಷಭೋಗೀ ತದ್ವದಿತ್ಯರ್ಥಃ । ಏತದುಕ್ತಂ ಕಾರಿಕಯಾ ।*

ತಸ್ಮಾನ್ನ ಬಧ್ಯತೇಽದ್ಧಾ ನ ಮುಚ್ಯತೇ ನಾಪಿ ಸಂಸರತಿ ಪುರುಷಃ ।
ಸಂಸರತಿ ಬಧ್ಯತೇ ಮುಚ್ಯತೇ ಚ ನಾನಾಶ್ರಯಾ ಪ್ರಕೃತಿಃ ॥ (ಸಾಂ.ಕಾ. ೬೨)

'ದ್ವಯೋರೇಕತರಸ್ಯ ಔದಾಸೀನ್ಯಮಪವರ್ಗಃ' ಇತಿ ಸೂತ್ರೇ ಚ ಪುರುಷಸ್ಯ ಅಪವರ್ಗಃ ಉಕ್ತಃ ಸ ಪ್ರತಿಬಿಂಬರೂಪಸ್ಯ ಮಿಥ್ಯಾದುಃಖಸ್ಯ ವಿಯೋಗ ಏವ ಇತಿ ।

ಅನುವಾದ: ವಸ್ತುತಃ ಪ್ರಕೃತಿಯೇ ದುಃಖದ ಕಾರಣ ಬಂಧಮೋಕ್ಷಗಳನ್ನು ಹೊಂದುವುದು, ಅದು ಸಸಂಗವಾದ್ದರಿಂದ, ಎಂದರೆ ದುಃಖಸಾಧನಗಳಾದ ಧರ್ಮಾ–ಧರ್ಮ ಗಳೊಡನೆ ಸೇರಿಹೋಗಿರುವುದರಿಂದ. ಹೇಗೆ ಪಶುವು ಹಗ್ಗಕ್ಕೆ ಕಟ್ಟಿಹಾಕಲ್ಪಟ್ಟಿರು ವುದರಿಂದ ಬಂಧಮೋಕ್ಷಗಳಿಗೆ ಭಾಗಿಯಾಗುವುದೋ ಹಾಗೆ ಎಂದರ್ಥ. ಇದನ್ನೇ ಕಾರಿಕೆಯಲ್ಲಿ ಹೀಗೆ ಹೇಳಿದೆ–

'ಆದ್ದರಿಂದ ಪುರುಷನು ಬದ್ಧನಾಗುವುದಿಲ್ಲ, ಯಥಾರ್ಥವಾಗಿ ಬಿಡುಗಡೆಯನ್ನೂ ಪಡೆಯುವುದಿಲ್ಲ. ಸಂಸಾರವನ್ನು ಹೊಂದುವುದಿಲ್ಲ. ಆದರೆ ಸಂಸಾರವನ್ನು ಹೊಂದುವುದು, ಬದ್ಧನಾಗುವುದು ಮತ್ತು ಮುಕ್ತನಾಗುವುದು ಪ್ರಕೃತಿಯೇ, ಏಕೆಂದರೆ ಅದು ನಾನಾ ವಸ್ತುಗಳಿಗೆ ಆಶ್ರಯವಾಗಿದೆ. 'ಎರಡೂ ಬೇರೆ ಬೇರೆಯಾಗಿ ಉದಾಸೀನವಾದರೆ ಅಥವಾ ಒಂದು ಉದಾಸೀನವಾಗಿಬಿಟ್ಟರೆ' ಎಂಬ ಸೂತ್ರದಲ್ಲಿಯೂ ಯಾವ ಪುರುಷನ ಅಪವರ್ಗವನ್ನು ಹೇಳಿದೆಯೋ ಅದು ಪ್ರತಿಬಿಂಬರೂಪವಾದ ಮಿಥ್ಯಾದುಃಖದ ವಿಯೋಗವಷ್ಟೆ.

ವಿವರಣೆ: ಪುರುಷ ಅಪರಿಣಾಮಿಯಾಗಿದ್ದರಿಂದ ಮತ್ತು ವಾಸನಾರಹಿತನಾದ್ದರಿಂದ ಅವನಿಗೆ ಬಂಧ–ಮುಕ್ತಿಗಳು ಉಂಟಾಗುವುದಿಲ್ಲ.

ಭಾಷ್ಯ: *ತತ್ರ ಕೈಃ ಸಾಧನೈರ್ಬಂಧಃ ಕೈರ್ವಾ ಮೋಕ್ಷಃ ಇತ್ಯಾಕಾಂಕ್ಷಾಯಾಂ ಆಹ–*

ಸೂತ್ರ: ಕರ್ಮೈಃ ಸಪ್ತಭಿರಾತ್ಮಾನಂ ಬಧ್ನಾತಿ ಪ್ರಧಾನಂ ಕೋಶಕಾರವತ್ ವಿಮೋಚಯತ್ಯೇಕರೂಪೇಣ– ॥ ೬೩ ॥

ಅನುವಾದ: ಆದರೆ ಯಾವುದರಿಂದ ಬಂಧ ಯಾವುದರಿಂದ ಮೋಕ್ಷ ಎಂಬ ಆಕಾಂಕ್ಷೆಯನ್ನು ಕುರಿತು ಹೇಳಿದೆ.

ಸೂತ್ರಾನುವಾದ: ಪ್ರಕೃತಿಯು ಏಳುರೂಪಗಳಿಂದ ತನ್ನನ್ನು ತಾನೇ ಕಟ್ಟಿಕೊಳ್ಳುತ್ತದೆ ಒಂದು ರೂಪದಿಂದ ಮುಕ್ತವಾಗುತ್ತದೆ, ಕೋಶಕಾರನಂತೆ.

ವಿವರಣೆ: ಕೋಶಕಾರನೆಂದರೆ ರೇಷ್ಮೆಹುಳು.

ಭಾಷ್ಯ: *ಧರ್ಮವೈರಾಗ್ಯೈಶ್ವರ್ಯಾಧರ್ಮಾಜ್ಞಾನಾವೈರಾಗ್ಯಾನೈಶ್ವರ್ಯೈಃ ಸಪ್ತಭೀರೂಪಧರ್ಮೈರ್ದುಖಹೇತುಭಿಃ ಪ್ರಕೃತಿರಾತ್ಮಾನಂ ದುಃಖೇನ ಬಧ್ನಾತಿ, ಕೋಶಕಾರವತ್, ಕೋಶಕಾರಕೃತಿರ್ಯಥಾ ಸ್ವನಿರ್ಮಿತೇನ ಆವಾಸೇನ ಆತ್ಮಾನಂ ಬಧ್ನಾತಿ ತದ್ವತ್ । ಸೈವ ಚ ಪ್ರಕೃತಿರೇಕರೂಪೇಣ ಜ್ಞಾನೇನೈವಾತ್ಮಾನಂ ದುಃಖಾನ್ಮೋಕ್ಷಯಿಷ್ಯತಿ ಇತ್ಯರ್ಥಃ ।*

ಅನುವಾದ: ಧರ್ಮ, ವೈರಾಗ್ಯ, ಐಶ್ವರ್ಯ, ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ ಎಂಬ ಏಳು ರೂಪಗಳ ಎಂದರೆ ದುಃಖಹೇತುಗಳಾದ ಧರ್ಮಗಳಿಂದ ಪ್ರಕೃತಿಯು ತನ್ನನ್ನೇ ಸುತ್ತಿಕೊಳ್ಳುತ್ತದೆ, ರೇಷ್ಮೆಯ ಹುಳುವಿನಂತೆ. ರೇಷ್ಮೆಹುಳುವು ಹೇಗೆ ತಾನೇ ಮಾಡಿದ ಮನೆಯಲ್ಲಿ ತನ್ನನ್ನು ಕಟ್ಟಿಹಾಕಿಕೊಳ್ಳುವುದೋ ಹಾಗೆ, ಅದೇ ಪ್ರಕೃತಿಯು ಏಕರೂಪದಿಂದ ಜ್ಞಾನದಿಂದಲೇ ತನ್ನನ್ನು ದುಃಖದಿಂದ ಬಿಡುಗಡೆ ಮಾಡುವುದು ಎಂದರ್ಥ.

ಭಾಷ್ಯ: *ನನು ಬಂಧಮುಕ್ತೀ ಅವಿವೇಕಾದಿತಿ ಯದುಕ್ತಂ, ತದಯುಕ್ತಮ್ । ಅವಿವೇಕಸ್ಯ ಹೇಯಾನುಪಾದೇಯತ್ವಾತ್ । ಲೋಕೇ ದುಃಖಸ್ಯ ತದಭಾವಸುಖಾದೇರೇವ ಚ ಸ್ವತೋ ಹೇಯೋಪಾದೇಯತ್ವಾತ್ ।*

ಅನ್ಯಥಾ ದೃಷ್ಟಹಾನಿರಿತ್ಯಾಶಂಕ್ಯ ಚತುರ್ಥಸೂತ್ರೋಕ್ತಂ (ಸಾಂ.ಸೂ. ೩.೪) ಸ್ವಯಂ ವಿವೃಣೋತಿ ।

ಅನುವಾದ: ಬಂಧಮುಕ್ತಿಗಳು ಅವಿವೇಕದ ಕಾರಣದಿಂದ ಉಂಟಾಗುವುವು ಎಂದು ಹೇಳಿದ್ದು ಸರಿಯಲ್ಲ. ಅವಿವೇಕವು ಬಿಡಬೇಕಾದುದೂ ಅಲ್ಲ, ಪಡೆಯಬೇಕಾದುದೂ ಅಲ್ಲ. ಲೋಕದಲ್ಲಿ ದುಃಖದ ಅಥವಾ ಅದರ ಅಭಾವವಾದ ಸುಖದ ಬಿಡುವಿಕೆ ಅಥವಾ ಪಡೆಯುವಿಕೆಗಳನ್ನು ತಾನಾಗಿಯೇ ಮಾಡುವುದನ್ನು ನೋಡಿದ್ದೇವೆ. ಹಾಗಿಲ್ಲದಿದ್ದರೆ ನೋಡಿದ್ದನ್ನು ಅಲ್ಲಗಳೆದಂತಾಗುವುದು ಎಂದು ಶಂಕಿಸಿ ನಾಲ್ಕನೆಯ ಸೂತ್ರದಲ್ಲಿ ಹೇಳಿರುವುದನ್ನು ಮತ್ತೆ ವಿವರಿಸುವರು.

ಸೂತ್ರ: ನಿಮಿತ್ತತ್ವಂ ಅವಿವೇಕಸ್ಯ ನ ದೃಷ್ಟಹಾನಿಃ ॥ ೭೪ ॥

ಸೂತ್ರಾನುವಾದ: ಅವಿವೇಕದ ನಿಮಿತ್ತವನ್ನು ಹೇಳಿಯಾಗಿದೆ. ಆದ್ದರಿಂದ ದೃಷ್ಟಹಾನಿಯಾಗಲಾರದು.

ಭಾಷ್ಯ: *ಅವಿವೇಕಸ್ಯ ಪುರುಷೇಷು ಬಂಧಮೋಕ್ಷನಿಮಿತ್ತತ್ವಮೇವ ಪುರಾ (ಸಾಂ.ಸೂ. ೧.೫೫) ಉಕ್ತಂ ನ ತ್ವವಿವೇಕ ಏವ ತಾವಿತಿ ನಾತೋ ದೃಷ್ಟಹಾನಿರಿತಿ ಇತ್ಯರ್ಥಃ । ಏತಚ್ಚ ಪ್ರಥಮಾಧ್ಯಾಯಸೂತ್ರೇಷು (ಸಾಂ.ಸೂ. ೧.೫೫-೫೭) ಸ್ಪಷ್ಟಮ್ ।*

ಅನುವಾದ: ಹಿಂದೆ ಹೇಳಿದ ಸೂತ್ರದಲ್ಲಿ (೧.೫೫) ಪುರುಷರ ಬಂಧಮೋಕ್ಷಗಳಿಗೆ ಅವಿವೇಕವೇ ನಿಮಿತ್ತವೆಂದು ಹೇಳಿದೆ. ಆದರೆ ಬಂಧಮೋಕ್ಷಗಳೇ ಅವಿವೇಕವಲ್ಲ, ಆದ್ದರಿಂದ ದೃಷ್ಟಹಾನಿಗೆ ಅವಕಾಶವಿಲ್ಲ.

ಭಾಷ್ಯ: *ಅವಿವೇಕನಿಮಿತ್ತಾತ್ ಪ್ರಕೃತಿಪುರುಷಯೋಃ ಸಂಯೋಗಃ ತಸ್ಮಾಚ್ಚ ಸಂಯೋಗಾತ್ ಉತ್ಪದ್ಯಮಾನಸ್ಯ ಪ್ರಾಕೃತದುಃಖಸ್ಯ ಪುರುಷೇ ಯಃ ಪ್ರತಿಬಿಂಬಃ ಸ ಏವ ದುಃಖಭೋಗೋ ದುಃಖಸಂಬಂಧಃ ತನ್ನಿವೃತ್ತಿರೇವ ಚ ಮೋಕ್ಷಾಖ್ಯಃ ಪುರುಷಾರ್ಥ ಇತಿ ।*

ಅನುವಾದ: ಅವಿವೇಕದ ನಿಮಿತ್ತದಿಂದ ಪ್ರಕೃತಿ-ಪುರುಷರ ಸಂಯೋಗವು ಆ ಸಂಯೋಗದಿಂದ ಉಂಟಾಗುವ ಪ್ರಾಕೃತದುಃಖದ ಪುರುಷನಲ್ಲಿ ಯಾವ ಪ್ರತಿಬಿಂಬವುಂಟಾಗುವುದೋ ಅದೇ ದುಃಖದ ಭೋಗ, ದುಃಖಸಂಬಂಧದ ನಿವೃತ್ತಿಯೇ ಮೋಕ್ಷವೆಂಬ ಪುರುಷಾರ್ಥವು.

ಭಾಷ್ಯ: *ತದೇವಮಾದಿಸರ್ಗಮಾರಭ್ಯಾತ್ಯಂತಿಕಲಯಪರ್ಯಂತಃ ಅಖಿಲ ಪರಿಣಾಮಃ ಪ್ರಧಾನತದ್ವಿಕಾರಾಣಾಮೇವ । ಪುರುಷಸ್ತು ಕೂಟಸ್ಥ-ಪೂರ್ಣಚಿನ್ಮಾತ್ರ ಏವ ಇತ್ಯಧ್ಯಾಯ ದ್ವಯೇನ ವಿಸ್ತರತೋ ವಿವೇಚಿತಮ್। ತಸ್ಯ ವಿವೇಕಸ್ಯ ನಿಷ್ಪತ್ತ್ಯುಪಾಯೇಷು ಸಾರಭೂತಮಭ್ಯಾಸಮಾಹ ।*

ಅನುವಾದ: ಹೀಗೆ ಆದಿಸರ್ಗದಿಂದ ಆರಂಭಿಸಿ ಆತ್ಯಂತಿಕ ಪ್ರಲಯದವರೆಗೆ ಎಲ್ಲ ಪರಿಣಾಮಗಳೂ ಪ್ರಧಾನ ಮತ್ತು ಅವುಗಳ ವಿಕಾರವಷ್ಟೆ. ಪುರುಷನಾದರೋ ಕೂಟಸ್ಥನೂ, ಚಿನ್ಮಾತ್ರನೂ ಆಗಿರುವನು ಎಂದು ಎರಡು ಅಧ್ಯಾಯಗಳಿಂದ ವಿಸ್ತಾರವಾಗಿ ವಿವೇಚನೆ ಮಾಡಲಾಗಿದೆ. ಅವನ ವಿವೇಕದ ಉತ್ಪತ್ತಿಯ ಉಪಾಯಗಳಲ್ಲಿ ಸಾರಭೂತವಾದ ಅಭ್ಯಾಸವನ್ನು ಕುರಿತು ಹೇಳಿದೆ–

ಸೂತ್ರ: ತತ್ತ್ವಾಭ್ಯಾಸಾನ್ನೇತಿ ನೇತೀತಿ ತ್ಯಾಗಾದ್ವಿವೇಕಸಿದ್ಧಿಃ ॥ ೭೫ ॥

ಸೂತ್ರಾನುವಾದ: ತತ್ತ್ವಗಳನ್ನು ಅಭ್ಯಾಸ ಮಾಡುವುದರಿಂದ ಇದಲ್ಲ, ಇದಲ್ಲ ಎಂಬ ತ್ಯಾಗದ ಭಾವದಿಂದ ವಿವೇಕವು ಸಿದ್ಧಿಸುವುದು.

ಭಾಷ್ಯ: *ಪ್ರಕೃತಿಪರ್ಯಂತೇಷು ಜಡೇಷು ನೇತಿ ನೇತೀತಿ ಅಭಿಮಾನತ್ಯಾಗ–ರೂಪಾತ್ ತತ್ತ್ವಾಭ್ಯಾಸಾತ್ ವಿವೇಕನಿಷ್ಪತ್ತಿರ್ಭವತಿ । ಇತರತ್ ಸರ್ವಂ ಅಭ್ಯಾಸಸ್ಯಾಂಗಮಾತ್ರಮಿತ್ಯರ್ಥಃ । ತಥಾ ಚ ಶ್ರುತಿಃ, 'ಅಥಾತ್ ಆದೇಶೋ ನೇತಿ ನೇತಿ ನ ಹ್ಯೇತಸ್ಮಾದಿತಿ ನೇತ್ಯನ್ಯತ್ಪರಮಸ್ತಿ (ಬೃ.ಉ. ೨.೩.೬), 'ಸ ಏವ ಆತ್ಮಾನೇತಿ ನೇತಿ (ಬೃ.ಉ. ೩.೧.೨೬, ೪.೨.೪) ಇತ್ಯಾದಿರಿತಿ ।*

ಅನುವಾದ: ಪ್ರಕೃತಿಯ ಕೊನೆಯವರೆಗೂ ಇರುವ ಜಡಪದಾರ್ಥಗಳಲ್ಲಿ 'ಇದಲ್ಲ', 'ಇದಲ್ಲ' ಎಂದು ಅಭಿಮಾನವನ್ನು ತ್ಯಾಗ ಮಾಡುವ ರೀತಿಯಲ್ಲಿ ತತ್ತ್ವಾಭ್ಯಾಸದಲ್ಲಿ ತೊಡಗಿದರೆ ವಿವೇಕ ಉತ್ಪನ್ನವಾಗುವುದು. ಇತರ ಎಲ್ಲವೂ ಈ ಅಭ್ಯಾಸದ ಅಂಗಗಳು ಮಾತ್ರ ಶ್ರುತಿಯು ಹೇಳುತ್ತದೆ– 'ಈ ಆದೇಶ 'ನೇತಿ' 'ನೇತಿ' ಎಂಬುದು ಈ ಆದೇಶಕ್ಕೆ ಮೀರಿದ್ದು ಯಾವುದೂ ಇಲ್ಲ'. 'ನೇತಿ' 'ನೇತಿ' ಎಂದು ಹೇಳುವುದೇ ಈ ಆತ್ಮನು; ಮುಂತಾದುವುಗಳು.

ಭಾಷ್ಯ: *'ಅವ್ಯಕ್ತಾದ್ಯೇ ವಿಶೇಷಾಂತೇ ವಿಕಾರೇಽಸ್ಮಿಂಶ್ಚ ವರ್ಣಿತೇ ।*
ಚೇತನಾಚೇತನಾನ್ಯತ್ವಜ್ಞಾನೇನ ಜ್ಞಾನಮುಚ್ಯತೇ ॥

ಅನುವಾದ: ಅವ್ಯಕ್ತದಿಂದ ಪ್ರಾರಂಭಿಸಿ ಮಹಾಭೂತಗಳವರೆಗೆ ವರ್ಣಿಸಲ್ಪಟ್ಟ ಈ ಪರಿಣಾಮಗೊಂಡ ಪ್ರಪಂಚದಲ್ಲಿ ಚೇತನಾಚೇತನಗಳು ಭಿನ್ನವೆಂಬ ಜ್ಞಾನವನ್ನೇ ತತ್ತ್ವಜ್ಞಾನವೆನ್ನುವರು.

ಭಾಷ್ಯ: *ಅಸ್ಥಿಸ್ಥೂಣಂ ಸ್ನಾಯುಯುತಂ ಮಾಂಸಶೋಣಿತಲೇಪನಮ್ ।*
ಚರ್ಮಾವನದ್ಧಂ ದುರ್ಗಂಧಿಪೂರ್ಣಂ ಮೂತ್ರಪುರೀಷಯೋಃ ॥
ಜರಾಶೋಕಸಮಾವಿಷ್ಟಂ ರೋಗಾಯತನಮಾತುರಮ್ ।
ರಜಸ್ವಲಮಸನ್ನಿಷ್ಠಂ ಭೂತಾವಾಸಮಿಮಂ ತ್ಯಜೇತ್ ॥
ನದೀಕೂಲಂ ಯಥಾವೃಕ್ಷೋ ವೃಕ್ಷಂ ವಾ ಶಕುನಿರ್ಯಥಾ ।
ತಥಾ ತ್ಯಜನ್ನಿಮಂ ದೇಹಂ ಕೃಚ್ಛ್ರಾದ್ಗ್ರಾಹಾದ್ವಿಮುಚ್ಯತೇ ॥
ಏತದೇವ ಕಾರಿಕಯಾಪ್ಯುಕ್ತಮ್ । (ಮನು, ೬.೪೬–೪೮)

ಅನುವಾದ: ಮೂಳೆಗಳಿಂದ ತುಂಬಿದ, ಸ್ನಾಯುಗಳಿಂದ ಸೇರಿರುವ, ಮಾಂಸರಕ್ತಗಳ ಲೇಪಿಸಪಟ್ಟ, ಚರ್ಮಗಳಿಂದ ಆವರಿಸಲ್ಪಟ್ಟ, ಮೂತ್ರ–ಪುರೀಷಗಳಿಂದ ದುರ್ಗಂಧವನ್ನು ಸೂಸುವ, ಮುಪ್ಪು–ಶೋಕಗಳಿಂದ ಆವರಿಸಲ್ಪಡುವ, ರೋಗಗಳಿಗೆ ಮನೆಯಾದ, ಗಾಬರಿಯಿಂದ ಕೂಡಿದ, ಕೊಳಕಾದ, ಅನಿತ್ಯವಾದುದನ್ನು ಆಶ್ರಯಿಸಿರುವ, ಮಹಮಾಭೂತಗಳಿಗೆ ಸ್ಥಾನವಾದ ಈ ದೇಹವನ್ನು ತ್ಯಜಿಸಬೇಕು. ಮರವು ನದಿಯ ದಡವನ್ನು ಬಿಟ್ಟುಹೋದ, ಒಂದು ಮರದಿಂದ ಇನ್ನೊಂದು ಮರಕ್ಕೆ ಹೋಗುವ ಶಕುನಿಪಕ್ಷಿಯಂತೆ ಅದನ್ನು ಒಂದು ವೃಕ್ಷದಿಂದ ಮತ್ತೊಂದು ವೃಕ್ಷಕ್ಕೆ ಹೋಗುವ, ಹಕ್ಕಿಯು ಮರದಿಂದ ಮರಕ್ಕೆ ಹಾರಿಹೋಗುವಂತೆ, ಹಾಗೆಯೇ ಮನುಷ್ಯನು ತನ್ನ ದೇಹವನ್ನು ತ್ಯಜಿಸಿ ದುಃಖಮಯವಾದ ಬಂಧದಿಂದ ಮುಕ್ತನಾಗುವನು. ಇದನ್ನೇ ಕಾರಿಕೆಯಲ್ಲಿ ಹೇಳಿದೆ–

ಭಾಷ್ಯ: *ಏವಂ ತತ್ತ್ವಾಭ್ಯಾಸಾನ್ನಾಸ್ಮಿ ನ ಮೇ ನಾಹಂ ಇತ್ಯಪರಿಶೇಷಮ್ ।*
ಅವಿಪರ್ಯಯಾದ್ವಿಶುದ್ಧಂ ಕೇವಲಮುತ್ಪದ್ಯತೇ ಜ್ಞಾನಮ್ ॥
(ಸಾಂ.ಕಾ. ೬೪)

ಅನುವಾದ: ಹೀಗೆ ತತ್ತ್ವಜ್ಞಾನದ ಅಭ್ಯಾಸವನ್ನು ಮಾಡುತ್ತಾ, 'ಆತ್ಮನು ನಾನು ಕರ್ತೃವಲ್ಲ, ನನ್ನದಿಲ್ಲ, ನಾನಲ್ಲ ಎಂಬ ಸಂಪೂರ್ಣವಾದ, ಸಂದೇಹಕ್ಕೆಡೆಯಿಲ್ಲದೆ ಶುದ್ಧವಾದ ಕೇವಲವಾದ ಜ್ಞಾನವು ಉಂಟಾಗುತ್ತದೆ.

ಭಾಷ್ಯ: *ನಾಸ್ಮೀತ್ಯಾತ್ಮನಃ ಕರ್ತೃತ್ವನಿಷೇಧಃ । ನ ಮೇ ಇತಿ ಸಂಗನಿಷೇಧಃ । ನಾಹಮಿತಿ ತಾದಾತ್ಮ್ಯನಿಷೇಧಃ । ಕೇವಲಮಿತ್ಯಸ್ಯ ವಿವರಣಮ್, ಅವಿಪರ್ಯಯಾದ್ವಿಶುದ್ಧಮಿತಿ । ಅತಃ ಅಂತರಾ ವಿಪರ್ಯಯೇಣ ವಿಪ್ಲುತಮಿತ್ಯರ್ಥಃ । ಇದಮೇವ ಕೇವಲತ್ವಂ ಸಿದ್ಧಿಶಬ್ದೇನ ಸೂತ್ರೇ ಪ್ರೋಕ್ತಮ್ । ವಿವೇಕಖ್ಯಾತಿರವಿಪ್ಲವಾ ಹಾನೋಪಾಯಃ । (೨.೨೬) ಇತಿ ಯೋಗಸೂತ್ರೇಣ ಏತಾದೃಶಜ್ಞಾನಸ್ಯೈವ ಮೋಕ್ಷಹೇತುತ್ವಸಿದ್ಧಿರಿತಿ ।*

ಅನುವಾದ: 'ನಾಸ್ಮಿ' ಎಂದರೆ 'ನಾನು ಕರ್ತೃವಲ್ಲ' ಎಂದು ಕರ್ತೃತ್ವವನ್ನು ಅಲ್ಲಗಳೆಯುವುದು. 'ನ ಮೇ' ಎಂದರೆ ಸಂಗವನ್ನು ಅಲ್ಲಗಳೆಯುವುದು. 'ನಾಹಮ್' ಎಂದರೆ ತಾದಾತ್ಮ್ಯವನ್ನು ನಿಷೇಧಿಸುವುದು. 'ಕೇವಲಂ' ಎಂಬುದರ ವಿವರಣೆ, ಯಾವುದೇ ಸಂದೇಹಕ್ಕೆಡೆಯಿಲ್ಲದೆ ಪರಿಶುದ್ಧವಾದ ಎಂದರ್ಥ. ಇದೇ ಕೇವಲತ್ವವನ್ನೇ ಸಿದ್ಧಿಶಬ್ದದಿಂದ ಸೂತ್ರದಲ್ಲಿ ಹೇಳಿದೆ. 'ನಿಶ್ಚಲವಾದ ವಿವೇಕಖ್ಯಾತಿ'ಯೇ 'ತ್ಯಾಗದ ಉಪಾಯ' ಎಂದು ಯೋಗಸೂತ್ರದಿಂದ ತಿಳಿದು, 'ಅಂತಹ ಜ್ಞಾನದಿಂದಲೇ ಮೋಕ್ಷದ ಸಾಧನೆಯು ಸಿದ್ಧಿಸುವುದು' ಎಂದು ತಿಳಿಯುವುದು.

ಭಾಷ್ಯ: *ವಿವೇಕಸಿದ್ಧೌ ವಿಶೇಷಮಾಹ– ವಿವೇಕಸಿದ್ಧಿಯ ವಿಶೇಷವನ್ನು ಹೇಳಿದೆ–*

ಸೂತ್ರ: ಅಧಿಕಾರಿಪ್ರಭೇದಾನ್ನ ನಿಯಮಃ ॥ ೭೬ ॥

ಸೂತ್ರಾನುವಾದ: ಅಧಿಕಾರಿಗಳಲ್ಲಿ ಭೇದಗಳಿರುವ ಕಾರಣ ನಿಯಮವಿಲ್ಲ.

ಭಾಷ್ಯ: *ಮಂದಾದ್ಯಧಿಕಾರಿಭೇದಸತ್ತ್ವಾತ್ ಅಭ್ಯಾಸೇ ಕ್ರಿಯಮಾಣೇ ಅಪಿ ಅಸ್ಮಿನ್ನೇವ ಜನ್ಮನಿ ವಿವೇಕನಿಷ್ಪತ್ತಿರ್ಭವತೀತಿ ನಿಯಮೋ ನಾಸ್ತೀತಿ ಅರ್ಥಃ। ಅತ ಉತ್ತಮಾಧಿಕಾರಂ ಅಭ್ಯಾಸಪಾಟವೇನ ಆತ್ಮನಃ ಸಂಪಾದಯೇದಿತಿ ಭಾವಃ ।*

ಅನುವಾದ: ಮಂದಾದಿ ಅಧಿಕಾರಿಗಳ ಭೇದವಿರುವುದರಿಂದ ಅಭ್ಯಾಸ ಮಾಡುವಾಗಲೂ ಈ ಜನ್ಮದಲ್ಲಿಯೇ ವಿವೇಕವು ಲಭಿಸುವುದು ಎಂಬ ನಿಯಮವೇನಿಲ್ಲ. ಆದ್ದರಿಂದ ಉತ್ತಮ ಅಧಿಕಾರವನ್ನು ತಮ್ಮ ಅಭ್ಯಾಸಚಾತುರ್ಯದಿಂದ ಪಡೆಯಬಹುದು ಎಂದು ಭಾವ.

ಭಾಷ್ಯ: *ವಿವೇಕನಿಷ್ಪತ್ತ್ಯೈವ ನಿಸ್ತಾರಃ, ನಾನ್ಯಥೇತ್ಯಾಹ ।*

ಸೂತ್ರ: ಬಾಧಿತಾನುವೃತ್ತ್ಯಾ ಮಧ್ಯವಿವೇಕತೋऽಪ್ಯುಪಭೋಗಃ ॥ ೭೭ ॥

ಅನುವಾದ: ವಿವೇಕವನ್ನು ಪಡೆಯುವುದರಿಂದಲೇ ಕೊನೆ ಮುಟ್ಟಬಹುದು. ಬೇರೆಯ ರೀತಿಯಿಂದಲ್ಲ.

ಸೂತ್ರಾನುವಾದ: ಮಧ್ಯಮ ವಿವೇಕದಿಂದಲೂ ದುಃಖಾದಿಗಳು ಮತ್ತೆ ಹಿಂದಿರುಗಿ ಬರುವುದರಿಂದಲೂ ಭೋಗವುಂಟಾಗುವುದು.

ಭಾಷ್ಯ: *ಸಕೃತ್ ಸಂಪ್ರಜ್ಞಾತಯೋಗೇನ ಆತ್ಮಸಾಕ್ಷಾತ್ಕಾರೋತ್ತರಂ ಮಧ್ಯವಿವೇಕಾವಸ್ಥಃ ಮಧ್ಯಮವಿವೇಕೇ ಅಪಿ ಸತಿ ಪುರುಷೇ ಬಾಧಿತಾನಾಮಪಿ ದುಃಖಾದೀನಾಮ್ ಪ್ರಾರಬ್ಧವಶಾತ್ ಪ್ರತಿಬಿಂಬರೂಪೇಣ ಪುರುಷಃ ಅನುವೃತ್ತ್ಯಾ ಭೋಗೋ ಭವತೀತ್ಯರ್ಥಃ ।*

ಅನುವಾದ: ಒಮ್ಮೆ ಸಂಪ್ರಜ್ಞಾತ ಯೋಗದಿಂದ ಆತ್ಮಸಾಕ್ಷಾತ್ಕಾರದ ನಂತರ ಮಧ್ಯ ವಿವೇಕಾವಸ್ಥಃ ಎಂದರೆ ಮಧ್ಯಮವಿವೇಕದಲ್ಲಿ ಪುರುಷನಿರುವಾಗ ಬಾಧಿತವಾದ ದುಃಖಾದಿಗಳನ್ನು ಪ್ರಾರಬ್ಧವಶಾತ್ ಪ್ರತಿಬಿಂಬ ರೂಪದಿಂದ ಹಿಂದಿರುಗಿ ಬರುವುದರಿಂದ ಭೋಗವುಂಟಾಗುತ್ತದೆ ಎಂದು ಅರ್ಥ.

ವಿವರಣೆ: ಸಂಪ್ರಜ್ಞಾತಯೋಗದ ಅರ್ಥವನ್ನು ೩.೩೧ರ ಅಡಿಯಲ್ಲಿ ವಿವರಿಸಲಾಗಿದೆ. ನೋಡಿ ಪುಟ ೪೦೩.

ಭಾಷ್ಯ: *ವಿವೇಕನಿಷ್ಪತ್ತಿಶ್ಚಾಪುನರುತ್ಥಾನಾತ್ ಅಸಂಪ್ರಜ್ಞಾತಾದೇವ ಭವತೀತಿ ಅತಸ್ತಸ್ಯಾಂ ಸತ್ಯಾಂ ನ ಭೋಗೋऽಸ್ತೀತಿ ಪ್ರತಿಪಾದಯಿತುಂ ಮಧ್ಯವಿವೇಕತಃ ಇತ್ಯುಕ್ತಮ್ । ಮಂದವಿವೇಕಸ್ತು ಸಾಕ್ಷಾತ್ಕಾರಾತ್ ಪೂರ್ವಂ ಶ್ರವಣ–ಮನನಧ್ಯಾನಮಾತ್ರರೂಪ ಇತಿ ವಿಭಾಗಃ ।*

ಅನುವಾದ: ವಿವೇಕವನ್ನು ಪಡೆಯುವುದಾದರೋ ಮತ್ತೆ ತೋರಿ ಬರದಿರುವುದರಿಂದ ಅಸಂಪ್ರಜ್ಞಾತದಿಂದಲೇ ಉಂಟಾಗುವುದು. ಆದ್ದರಿಂದ ಆ ವಿವೇಕನಿಷ್ಪತ್ತಿಯು ಉಂಟಾದಾಗ ಭೋಗವು ಇರದು ಎಂದು ಪ್ರತಿಪಾದಿಸಲು 'ಮಧ್ಯವಿವೇಕತಃ'

ಎಂದು ಸೂತ್ರಕಾರನು ಹೇಳಿದ್ದಾನೆ. ಮಂದವಿವೇಕವಾದರೋ ಸಾಕ್ಷಾತ್ಕಾರಕ್ಕೆ ಮೊದಲೇ ಶ್ರವಣ-ಮನನ-ಧ್ಯಾನರೂಪವಾಗಿ ಇರುತ್ತದೆ ಎಂದು (ವಿವೇಕದ) ವಿಭಾಗವು.

ಸೂತ್ರ: ಜೀವನ್ಮುಕ್ತಶ್ಚ ॥ ೭೮ ॥

ಸೂತ್ರಾನುವಾದ: ಬದುಕಿರುವಾಗಲೇ ಮುಕ್ತನೂ ಸಹ (ಆಗುವನು).

ಭಾಷ್ಯ: *ಜೀವನ್ಮುಕ್ತೋಽಪಿ ಮಧ್ಯವಿವೇಕಾವಸ್ಥ ಏವ ಭವತೀತ್ಯರ್ಥಃ । ಜೀವನ್ಮುಕ್ತೇ ಪ್ರಮಾಣಮಾಹ-*

ಅನುವಾದ: ಮಧ್ಯವಿವೇಕದ ಅವಸ್ಥೆಯಲ್ಲಿದ್ದರೂ ಜೀವನ್ಮುಕ್ತನಾಗುವನು ಎಂದರ್ಥ. ಜೀವನ್ಮುಕ್ತನಾಗಿರಲು ಪ್ರಮಾಣವನ್ನು ಹೇಳಲಾಗಿದೆ.

ಸೂತ್ರ: ಉಪದೇಶ್ಯ-ಉಪದೇಷ್ಟೃತ್ವಾತ್ ತತ್ಸಿದ್ಧಿಃ ॥ ೭೯ ॥

ಭಾಷ್ಯ: *ಶಾಸ್ತ್ರೇಷು ವಿವೇಕವಿಷಯೇ ಗುರುಶಿಷ್ಯಭಾವಶ್ರವಣಾತ್ ಜೀವನ್ಮುಕ್ತಿಸಿದ್ಧಿಃ ಇತ್ಯರ್ಥಃ । ಜೀವನ್ಮುಕ್ತಸ್ಯೈವ ಉಪದೇಷ್ಟೃತ್ವಸಂಭವಾದಿತಿ ।*

ಅನುವಾದ: ಶಾಸ್ತ್ರಗಳಲ್ಲಿ ವಿವೇಕದ ವಿಷಯವಾಗಿ ಗುರುಶಿಷ್ಯಭಾವದ ಶ್ರವಣದಿಂದ ಜೀವನ್ಮುಕ್ತನಾಗುವ ಸಿದ್ಧಿಯಾಗುವುದು. ಏಕೆಂದರೆ ಜೀವನ್ಮುಕ್ತನಾದವನೇ ಉಪದೇಶ ಮಾಡಬಲ್ಲ ಜ್ಞಾನಿಯಾಗಬಲ್ಲ.

ವಿವರಣೆ: ತತ್ತ್ವವನ್ನು ಬಲ್ಲ ಋಷಿಗಳ ಮಾತೇ ಶಾಸ್ತ್ರ.

ಸೂತ್ರ: ಶ್ರುತಿಶ್ಚ ॥ ೮೦ ॥

ಸೂತ್ರಾನುವಾದ: ಶ್ರುತಿಯೂ ಜೀವನ್ಮುಕ್ತನ (ಅಸ್ತಿತ್ವಕ್ಕೆ ಪ್ರಮಾಣ)

ಭಾಷ್ಯ: *ದೀಕ್ಷಯೈವ ನರೋ ಮುಚ್ಯೇತ್ ತಿಷ್ಠೇನ್ಮುಕ್ತೋಽಪಿ ವಿಗ್ರಹೇ ।*
ಕುಲಾಲ ಚಕ್ರಮಧ್ಯಸ್ಥೋ ವಿಚ್ಛಿನ್ನೋಽಪಿ ಭ್ರಮೇದ್ ಘಟಃ ॥
ಅಜ್ಞಾತಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ । (ಬೃ.ಉ. ೪.೪೬)

ಅನುವಾದ: ದೀಕ್ಷೆಯನ್ನು ಪಡೆದ ಮಾತ್ರಕ್ಕೆ ಮನುಷ್ಯನು ಮುಕ್ತನಾಗುವನು ಮತ್ತು ಮುಕ್ತನಾದರೂ ತನ್ನ ಶರೀರವನ್ನು ಹೊಂದಿರುವನು. ಕುಂಬಾರನ ಚಕ್ರವು ಘಟವು ಬೇರೆಯಾದರೂ ತಿರುಗುತ್ತಿರುವಂತೆ ಅದು ಜೀವಂತವಾಗಿ ಉಳಿಯುವುದು.

ಭಾಷ್ಯ: *ನಾರದೀಯಸ್ಮೃತಿರಪಿ* – ನಾರದೀಯ ಸ್ಮೃತಿಯೂ ಸಹ

ಪೂರ್ವಾಭ್ಯಾಸಬಲಾತ್ಕಾರ್ಯೇ ನ ಲೋಕೋ ನ ಚ ವೈದಿಕಃ ।
ಅಪುಣ್ಯಪಾಪಃ ಸರ್ವಾತ್ಮಾ ಜೀವನ್ಮುಕ್ತಃ ಸ ಉಚ್ಯತೇ ॥

ಅನುವಾದ: ಪೂರ್ವಾಭ್ಯಾಸದಿಂದ ಕಾರ್ಯದಲ್ಲಿ ತೊಡಗಿದ್ದರೂ ಲೋಕದ ರೀತಿಯನ್ನು ಪಾಲಿಸದೆ, ವೈದಿಕ ಕರ್ಮಗಳನ್ನು ಅನುಸರಿಸದೆ, ಪುಣ್ಯಾಪಾಪಗಳಿಲ್ಲದೆ ಮತ್ತು ಸರ್ವಾತ್ಮನಾಗಿ ಇರುವವನನ್ನೇ ಜೀವನ್ಮುಕ್ತನೆನ್ನುವರು.

ಭಾಷ್ಯ: *ನನು ಶ್ರವಣಮಾತ್ರೇಣ ಅಪಿ ಉಪದೇಷ್ಟೃತ್ವಂ ಸ್ಯಾತ್ । ತತ್ರಾಹ ।*

ಅನುವಾದ: ಕೇವಲ ಕೇಳುವಷ್ಟರಿಂದಲೇ ಉಪದೇಶ ಮಾಡಲು ಹೇಗೆ ಅರ್ಹತೆ ದೊರೆಯುವುದು? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಇತರಥಾಂಧಪರಂಪರಾ ॥ ೮೧ ॥

ಸೂತ್ರಾನುವಾದ: ಹಾಗಿಲ್ಲದಿದ್ದರೆ ಅಂಧಪರಂಪರೆ ಉಂಟಾಗುವುದು.

ಭಾಷ್ಯ: *ಇತರಥಾ ಮಂದವಿವೇಕಸ್ಯಾಪ್ಯುಪ ದೃಷ್ಟೃತ್ವೇ ಅಂಧಪರಂಪರಾ–ಪತ್ತಿರಿತ್ಯರ್ಥಃ । ಸಾಮಗ್ರ್ಯೇಣ ಆತ್ಮತತ್ತ್ವಮಜ್ಞಾತ್ವಾ ಚೇದುಪದಿಶೇತ್ ಕಸ್ಮಿಂಶ್ಚಿದಂಶೇ ಸ್ವಭ್ರಮೇಣ ಶಿಷ್ಯಮಪಿ ಭ್ರಾಂತೀಕುರ್ಯಾತ್ । ಸೋಽಪ್ಯನ್ಯಂ ಸೋಽಪ್ಯನ್ಯಂ ಇತ್ಯೇವಂ ಅಂಧಪರಂಪರಾ ಇತಿ ।*

ಅನುವಾದ: ಹಾಗಿಲ್ಲದಿದ್ದಲ್ಲಿ ಮಂದವಿವೇಕಿಗೂ ಉಪದೇಶ ನೀಡುವ ಅರ್ಹತೆ ದೊರೆತಲ್ಲಿ ಆಗ ಅಂಧಪರಂಪರೆಯು ಸಂಭವಿಸುವುದು ಎಂದರ್ಥ. ಆತ್ಮತತ್ತ್ವವನ್ನು ಸಂಪೂರ್ಣವಾಗಿ ಅರಿಯದೆ ಉಪದೇಶ ಮಾಡಿದಲ್ಲಿ ತನ್ನ ಭ್ರಮೆಯ ಕಾರಣ ಕೊನೆಗೆ ಶಿಷ್ಯನನ್ನೂ ಭ್ರಾಂತಿಗೀಡುಮಾಡುವನು. ಅವನು (ಆ ಶಿಷ್ಯನು) ಇನ್ನೊಬ್ಬನನ್ನು, ಇನ್ನೊಬ್ಬನು ಮತ್ತೊಬ್ಬನನ್ನು ಹೀಗೆ ಅಂಧಪರಂಪರೆಯುಂಟಾಗುವುದು.

ಭಾಷ್ಯ: *ನನು ಜ್ಞಾನೇನ ಕರ್ಮಕ್ಷಯೇ ಸತಿ ಕಥಂ ಜೀವನಂ ಸ್ಯಾತ್ । ತತ್ರಾಹ ।*

ಸೂತ್ರ: ಚಕ್ರಭ್ರಮಣವತ್ ಧೃತಶರೀರಃ ॥ ೮೨ ॥

ಸೂತ್ರಾನುವಾದ: ಕುಂಬಾರನ ಚಕ್ರವು ತಿರುಗುವಂತೆ (ಜೀವನ್ಮುಕ್ತನು) ಶರೀರವನ್ನು ಧರಿಸಿರುತ್ತಾನೆ.

ಭಾಷ್ಯ: *ಕುಲಾಲಕರ್ಮನಿವೃತ್ತಾವಪಿ ಪೂರ್ವಕರ್ಮವೇಗಾತ್ ಸ್ವಯಮೇವ ಕಿಯತ್ ಕಾಲಂ ಚಕ್ರಂ ಭ್ರಮತಿ, ಏವಂ ಜ್ಞಾನೋತ್ತರಂ ಕರ್ಮಾನುತ್ಪತ್ತೇ ಅಪಿ ಪ್ರಾರಬ್ಧಕರ್ಮವೇಗೇನ ಚೇಷ್ಟಮಾನಂ ಶರೀರಂ ಧೃತ್ವಾ ಜೀವನ್ಮುಕ್ತಸ್ತಿಷ್ಠತೀತ್ಯರ್ಥಃ ।*

ಅನುವಾದ: ಕುಂಬಾರನ ಕಾರ್ಯವು ನಿಂತರೂ ಹಿಂದೆ ಮಾಡಿದ ಕರ್ಮದ ಫಲವಾಗಿ ತಾನಾಗಿಯೇ ಚಕ್ರವು ಕೆಲವುಕಾಲ ತಿರುಗುತ್ತಿರುತ್ತದೆ; ಹಾಗೆಯೇ ಜ್ಞಾನೋದಯದ ನಂತರವೂ ಕರ್ಮವು ಉಂಟಾಗದಿದ್ದರೂ ಪ್ರಾರಬ್ಧಕರ್ಮದ ಬಲದಿಂದ ಚಟುವಟಿಕೆಯಲ್ಲಿ ತೊಡಗಿರುವ ದೇಹವನ್ನು ಉಳಿಸಿಕೊಂಡು ಜೀವನ್ಮುಕ್ತನಿರುವನು ಎಂದರ್ಥ.

ಭಾಷ್ಯ: *ನನು ಜ್ಞಾನಹೇತುಸಂಪ್ರಜ್ಞಾತಯೋಗೇ ನ ಭೋಗಾದಿವಾಸನಾಕ್ಷಯೇ ಕಥಂ ಶರೀರಧಾರಣಮ್ । ನ ಚ ಯೋಗಸ್ಯ ಸಂಸ್ಕಾರಾಭಿಭಾವಕತ್ವೇ ಕಿಂ ಮಾನಮಿತಿ ವಾಚ್ಯಮ್ । 'ವ್ಯುತ್ಥಾನನಿರೋಧಸಂಸ್ಕಾರಯೋಃ ಅಭಿಭವಪ್ರಾದುರ್ಭಾವೌ ನಿರೋಧಲಕ್ಷಣಚಿತ್ತಾನ್ವಯಃ*

ನಿರೋಧಪರಿಣಾಮಃ। (ಯೋ.ಸೂ. ೩೯) ಇತಿ ಯೋಗಸೂತ್ರಸ್ತತ್ಸಿದ್ಧೇಃ । ಚಿರಕಾಲೀನಸ್ಯ ವಿಷಯಾಂತರಾವೇಶಸ್ಯ ವಿಷಯಾಂತರಸಂಸ್ಕಾರಾಭಿಭಾವಕತಯಾ ಲೋಕೇಽಪ್ಯನುಭವಾಚ್ಚ ಇತಿ – ತತ್ರಾಹ ।

ಅನುವಾದ: ವಿವೇಕಜ್ಞಾನಕ್ಕೆ ಹೇತುಭೂತವಾದ ಸಂಪ್ರಜ್ಞಾತಯೋಗದಿಂದ ಭೋಗಾದಿ 'ವಾಸನಾ'ಗಳು ಕಡಿಮೆಯಾದಾಗ ಶರೀರಧಾರಣೆಯು ಆಗುವುದಾದರೂ ಹೇಗೆ? ಅಲ್ಲದೆ ಯೋಗವು ಸಂಸ್ಕಾರವನ್ನು ಹೋಗಲಾಡಿಸುತ್ತದೆ ಎಂಬುದಕ್ಕೆ ಪ್ರಮಾಣವೇನು? ಉತ್ಪತ್ತಿಯ ಸಂಸ್ಕಾರ ಮತ್ತು ನಿರೋಧಸಂಸ್ಕಾರಗಳು ಹಾಳಾಗುವುದು ಮತ್ತು ಹುಟ್ಟುವುದು ಎಂದರೆ, ನಿರೋಧಲಕ್ಷಣದ ಧಾರಣೆಯನ್ನು ಮಾಡುವ ಚಿತ್ತದ ಪರಿವರ್ತನೆಯನ್ನು 'ನಿರೋಧ ಪರಿಣಾಮ'ವೆನ್ನುವರು. ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ಸಂಸ್ಕಾರಲೇಶತಸ್ತತ್ಸಿದ್ಧಿಃ ॥ ೮೩ ॥

ಸೂತ್ರಾನುವಾದ: ಸಂಸ್ಕಾರಲೇಶದಿಂದ (ದೇಹಧಾರಣೆಯು) ಸಿದ್ಧವಾಗುವುದು.

ಭಾಷ್ಯ: *ಶರೀರಧಾರಣಹೇತವಃ ಯೇ ವಿಷಯಸಂಸ್ಕಾರಾಃ ತೇಷಾಂ ಅಲ್ಪಾವಶೇಷಾತ್ ತಸ್ಯ ಶರೀರಧಾರಣಸ್ಯ ಸಿದ್ಧಿರಿತ್ಯರ್ಥಃ । ಅತ್ರ ಚ ಅವಿದ್ಯಾ ಸಂಸ್ಕಾರ–ಲೇಶಸ್ಯ ಸತ್ತಾ ನಾಪೇಕ್ಷ್ಯತೇ । ಅವಿದ್ಯಾಯಾಃ ಜನ್ಮಾದಿರೂಪಕರ್ಮ–ವಿಪಾಕಾಽಽರಂಭಮಾತ್ರೇ ಹೇತುತ್ವಾತ್ । ಯೋಗಭಾಷ್ಯೇ ವ್ಯಾಸೈಃ ತಥಾ ವ್ಯಾಖ್ಯಾತತ್ವಾತ್, ವೀತರಾಗಜನ್ಮದರ್ಶನಾತ್ ಇತಿ ನ್ಯಾಯಾಚ್ಚ (ಯೋ.ಸೂ. ೩.೧.೨೫) ನ ತು ಪ್ರಾರಬ್ಧ ಫಲಕಕರ್ಮಭೋಗೇಽಪಿ ಇತಿ । ಯತ್ರ ಚ ನಿಯಮೇನ ಅವಿದ್ಯಾಪೇಕ್ಷ್ಯತೇ ಸ ಪ್ರಯಾಸವಿಶೇಷ–ರೂಪೋ ಭೋಗೋ ಮೂಢೇಷ್ವೇವಾಸ್ತಿ । ಜೀವನ್ಮುಕ್ತಾನಾಂ ತು ಭೋಗಾಭಾಸ ಏವೇತಿ ಪ್ರಾಗುಕ್ತಮ್ ।*

ಅನುವಾದ: ಶರೀರಧಾರಣಕ್ಕೆ ಕಾರಣಭೂತವಾದ ವಿಷಯಸಂಸ್ಕಾರಗಳ ಸ್ವಲ್ಪ ಅವಶೇಷ ವಿದ್ದಲ್ಲಿ ಶರೀರಧಾರಣವು ಸಿದ್ಧಿಸುವುದು ಎಂದರ್ಥ. ಈ ವಿಷಯದಲ್ಲಿ ಅವಿದ್ಯೆಯ ಸಂಸ್ಕಾರದ ಉಳಿವು ಅಗತ್ಯವಿಲ್ಲ. ಏಕೆಂದರೆ ಅವಿದ್ಯೆಯಾದರೋ ಜನ್ಮಾದಿರೂಪವಾದ ಕರ್ಮವಿಪಾಕದ ಆರಂಭಮಾತ್ರಕ್ಕೆ ಕಾರಣವಾಗಿರುವುದು. ಯೋಗಭಾಷ್ಯದಲ್ಲಿ ವ್ಯಾಸರು ಹಾಗೆಯೇ ವ್ಯಾಖ್ಯಾನ ಮಾಡಿರುವರು. ಅಲ್ಲದೆ ರಾಗವನ್ನು ಕಳೆದುಕೊಂಡವರಿಗೆ ಜನ್ಮವು ಕಾಣದು ಎಂಬ ನ್ಯಾಯವೂ ಇರುವುದು. ಪ್ರಾರಬ್ಧದ ಫಲವನ್ನು ಕೊಡುವ ಕರ್ಮದ ಭೋಗದಲ್ಲಿಯೂ ಕಾರಣವಿರದು. ಎಲ್ಲಿ ನಿಯಮಪೂರ್ವಕವಾಗಿ ಅವಿದ್ಯೆಯ ಅಗತ್ಯವಿರುವುದೋ ಅಲ್ಲಿ ವಿಶೇಷಪ್ರಯತ್ನದ ರೂಪದ ಭೋಗವು ಮೂಢರಲ್ಲಿ ಮಾತ್ರ ಕಾಣುವುದು. ಜೀವನ್ಮುಕ್ತರಿಗೆ ಭೋಗಾಭಾಸವಷ್ಟೆ ಇರುವುದು ಎಂದು ಮೊದಲೇ ಹೇಳಿದೆ.

ಭಾಷ್ಯ: *ಯತ್ತು ಕಶ್ಚಿದವಿದ್ಯಾ ಸಂಸ್ಕಾರಲೇಶೋಽಪಿ ಜೀವನ್ಮುಕ್ತಸ್ಯ ತಿಷ್ಠತೀತ್ಯಾಹ, ತನ್ನ– ಧರ್ಮಾಧರ್ಮೋತ್ಪತ್ತಿಪ್ರಸಂಗಾತ್, ಅಂಧಪರಂಪರಾಪ್ರಸಂಗಾತ್,*

ಅವಿದ್ಯಾ ಸಂಸ್ಕಾರಲೇಶಸತ್ತಾಕಲ್ಪನೇ ಪ್ರಯೋಜನಾಭಾವಾಚ್ಚ । ಏತಚ್ಚ ಬ್ರಹ್ಮಮೀಮಾಂಸಾಭಾಷ್ಯೇ (೪.೧) ಪ್ರಪಂಚಿತಮಿತಿ ।

ಅನುವಾದ: ಜೀವನ್ಮುಕ್ತನಲ್ಲಿ ಅವಿದ್ಯಾಸಂಸ್ಕಾರದ ಉಳಿವು ಸ್ವಲ್ಪವಿರುತ್ತದೆ ಎಂಬ ಅಭಿಪ್ರಾಯ ಸರಿಯಲ್ಲ. ಆಗ ಧರ್ಮ–ಅಧರ್ಮಗಳ ಉತ್ಪತ್ತಿಯ ಪ್ರಸಂಗ ಬರುವುದು, ಅಂಥ ಪರಂಪರೆಯ ಪ್ರಸಂಗ ಬರುವುದು, ಅವಿದ್ಯಾಸಂಸ್ಕಾರದ ಲೇಶವನ್ನು ಕಲ್ಪಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಇದನ್ನು ಬ್ರಹ್ಮಮೀಮಾಂಸಾಭಾಷ್ಯದಲ್ಲಿ (೪.೧) ವಿವರಿಸಲಾಗಿದೆ.

ವಿವರಣೆ: ಜೀವನ್ಮುಕ್ತನಲ್ಲಿ ಅವಿದ್ಯೆಯ ಅಂಶ ಇರುವುದು ಎಂದು ವೇದಾಂತಿಗಳ ಅಭಿಪ್ರಾಯ.

ಭಾಷ್ಯ: *ಶಾಸ್ತ್ರ ವಾಕ್ಯಾರ್ಥಮುಪಸಂಹರತಿ–*

ಸೂತ್ರ: ವಿವೇಕಾನ್ನಿಃಶೇಷದುಃಖನಿವೃತ್ತೌ ಕೃತಕೃತ್ಯತಾ ನೇತರಾನ್ನೇತರಾತ್ ॥ ೮೪ ॥

ಅನುವಾದ: ಶಾಸ್ತ್ರವಾಕ್ಯಾರ್ಥವನ್ನು ಉಪಸಂಹಾರ ಮಾಡುವರು.

ಸೂತ್ರಾನುವಾದ: ವಿವೇಕಜ್ಞಾನದಿಂದ ನಿಃಶೇಷವಾಗಿ ದುಃಖವು ಹೋಗಿರಲು ಪೂರ್ಣವಾದ ಸಫಲತೆಯನ್ನು ಪಡೆಯಬಹುದು. ಬೇರೆಯ ದಾರಿಯಿಲ್ಲ.

ಭಾಷ್ಯ: *ಉಕ್ತಾಯಾ ವಿವೇಕಸಿದ್ಧಿತಃ ಪರವೈರಾಗ್ಯದ್ವಾರಾ ಸರ್ವವೃತ್ತಿನಿರೋಧೇನ ಯದಾ ನಿಃಶೇಷತೋ ಬಾಧಿತ–ಅಬಾಧಿತ–ಸಾಧಾರಣ್ಯೇನ ಅಖಿಲದುಃಖಂ ನಿವರ್ತತೇ ತದೈವ ಪುರುಷಃ ಕೃತಕೃತ್ಯೋ ಭವತಿ। ನೇತರಾಜ್ಜೀವನ್ಮುಕ್ತ್ಯಾದೇಃ ಅಪೀತ್ಯರ್ಥಃ, ನೇತರಾದಿತಿ ವೀಪ್ಸಾ ಅಧ್ಯಾಯಸಮಾಪ್ತೌ ।*

ಅನುವಾದ: ಮೇಲೆ ಹೇಳಿದ ವಿವೇಕಸಿದ್ಧಿಯಿಂದ ಅತ್ಯಂತ ವೈರಾಗ್ಯದ ಮೂಲಕ ಎಲ್ಲ ವೃತ್ತಿಗಳನ್ನೂ ನಿರೋಧಿಸಿ, ತಡೆದ–ತಡೆಯಲಾಗದ ಅಂತಹ ಸಾಧಾರಣವಾದ ಎಲ್ಲ ದುಃಖಗಳೂ ನಿವಾರಣೆಯಾಗುತ್ತವೆ; ಆಗಲೇ ಪುರುಷನು ಕೃತಕೃತ್ಯನಾಗುವನು. ಬೇರೆಯ ರೀತಿಯ ಜೀವನ್ಮುಕ್ತ್ಯಾದಿ ಇತರ ಉಪಾಯಗಳಿಂದಲ್ಲ.

ಭಾಷ್ಯ: *ಅತ್ಯಂತಲಯಪರ್ಯಂತಃ ಕಾರ್ಯೋಽವ್ಯಕ್ತಸ್ಯಾತ್ಮನಃ ।*
ಪ್ರೋಕ್ತ ಏವಂ ವಿವೇಕೋಽತ್ರ ಪರವೈರಾಗ್ಯಸಾಧನಮ್ ॥

ಅನುವಾದ: ಕೊನೆಯ ಲಯದವರೆಗೆ ಎಲ್ಲ ಕಾರ್ಯಗಳೂ ಅವ್ಯಕ್ತದ್ದೇ ಹೊರತು ಆತ್ಮದ್ದಲ್ಲ. ಅತ್ಯಂತ ವೈರಾಗ್ಯಕ್ಕೆ ಸಾಧನವಾದ ವಿವೇಕವು ಇಲ್ಲಿ ಹೀಗೆ ಹೇಳಲ್ಪಟ್ಟಿದೆ.

ಇತಿಶ್ರೀ ವಿಜ್ಞಾನಭಿಕ್ಷುನಿರ್ಮಿತೇ ಕಾಪಿಲಸಾಂಖ್ಯಪ್ರವಚನಸ್ಯ ಭಾಷ್ಯೇ
ವೈರಾಗ್ಯಾಧ್ಯಾಯಸ್ತೃತೀಯಃ

ಎಂದು ಶ್ರೀ ವಿಜ್ಞಾನಭಿಕ್ಷುವು ನಿರ್ಮಿಸಿದ ಕಾಪಿಲಸಾಂಖ್ಯಪ್ರವಚನದ ಭಾಷ್ಯದಲ್ಲಿ
ವೈರಾಗ್ಯಾಧ್ಯಾಯವೆಂಬ ಮೂರನೆಯ ಅಧ್ಯಾಯವು

ಅಥ ಚತುರ್ಥಃ ಅಧ್ಯಾಯಃ

ಆಖ್ಯಾಯಿಕಾ ಎಂಬ ನಾಲ್ಕನೆಯ ಅಧ್ಯಾಯ

ಭಾಷ್ಯ: *ಶಾಸ್ತ್ರಸಿದ್ಧಾಖ್ಯಾಯಿಕಾಜಾತಸುಖೇನೇದಾನೀಂ ವಿವೇಕಜ್ಞಾನಸಾಧನಾನಿ ಪ್ರದರ್ಶನೀಯಾನಿ ಇತ್ಯೇತದರ್ಥಂ ಚತುರ್ಥಾಧ್ಯಾಯ ಆರಭ್ಯತೇ।*

ಅನುವಾದ: ಶಾಸ್ತ್ರ ಪ್ರಸಿದ್ಧವಾದ ಆಖ್ಯಾಯಿಕೆಗಳ ಮೂಲಕ ವಿವೇಕಜ್ಞಾನಕ್ಕೆ ಸಾಧನಗಳನ್ನು ವ್ಯಕ್ತಪಡಿಸಬೇಕು ಎಂಬ ಉದ್ದೇಶದಿಂದ ನಾಲ್ಕನೆಯ ಅಧ್ಯಾಯ ಆರಂಭಿಸಲಾಗಿದೆ.

ಸೂತ್ರ: ರಾಜಪುತ್ರವತ್ ತತ್ತ್ವೋಪದೇಶಾತ್ ॥ ೧ ॥

ಸೂತ್ರಾನುವಾದ: ರಾಜಪುತ್ರನಿಗೆ ಸಮಾನವಾದ ಉಪದೇಶದಿಂದ (ವಿವೇಕಜ್ಞಾನ ಉಂಟಾಗುವುದು)

ಭಾಷ್ಯ: *ಪೂರ್ವಪಾದಶೇಷಸೂತ್ರಸ್ಥ ವಿವೇಕೋಽನುವರ್ತತೇ । ರಾಜಪುತ್ರಸ್ಯೇವ ತತ್ತ್ವೋಪದೇಶಾತ್ ವಿವೇಕಃ ಜಾಯತೇ ಇತ್ಯರ್ಥ: ।*

ಅನುವಾದ: ಪೂರ್ವ ಅಧ್ಯಾಯದ ಕೊನೆಯ ಸೂತ್ರದಲ್ಲಿರುವ 'ವಿವೇಕ' ಪದವನ್ನು ಮುಂದುವರಿಸಲಾಗಿದೆ. ರಾಜಪುತ್ರನಂತೆ ತತ್ತ್ವದ ಉಪದೇಶದಿಂದ ವಿವೇಕವು ಉಂಟಾಗುವುದು.

ಭಾಷ್ಯ: *ಅತ್ರೇಯಮಾಖ್ಯಾಯಿಕಾ–ಕಶ್ಚಿದ್ರಾಜಪುತ್ರೋ ಗಂಡರ್ಕ್ಷಜನ್ಮನಾ ಪುರಾನ್ನಿಃಸಾರಿತಃ ಶಬರೇಣ ಕೇನಚಿತ್ ಪೋಷಿತೋಽಹಂ ಶಬರ ಇತ್ಯಭಿಮನ್ಯಮಾನ ಆಸ್ತೇಽ । ತಂ ಜೀವಂತಂ ಜ್ಞಾತ್ವಾ ಕಶ್ಚಿದಮಾತ್ಯಃ ಪ್ರಬೋಧಯತಿ–ನ ತ್ವಂ ಶಬರೋ, ರಾಜಪುತ್ರೋಽಸೀತಿ ಸ ಯಥಾ ಝುಟಿತ್ಯೇವ ಚಂಡಾಲತ್ವಮಭಿಮಾನತ್ವಂ ತ್ಯಕ್ತ್ವಾ ತಾತ್ತ್ವಿಕಂ ರಾಜಭಾವಮವಲಂಬತೇ ರಾಜಾಹಮಸ್ಮೀತಿ । ಏವಂ ಏವ ಆದಿಪುರುಷಾತ್ ಪರಿಪೂರ್ಣಚಿನ್ಮಾತ್ರೇಣ ಅಭಿವ್ಯಕ್ತಾದ್ ಉತ್ಪನ್ನಸ್ತ್ವಂ ತಸ್ಯಾಂಶ ಇತಿ ಕಾರುಣಿಕೋಪದೇಶಾತ್ ಪ್ರಕೃತ್ಯಭಿಮಾನಂ ತ್ಯಕ್ತ್ವಾ*

ಬ್ರಹ್ಮಪುತ್ರಾದಹಮಪಿ ಬ್ರಹ್ಮೈವ ನ ತು ತದ್ವಿಲಕ್ಷಣಃ ಸಂಸಾರೀತ್ಯೇವಂ ಸ್ವಸ್ವರೂಪಮವಲಂಬತೇ ಇತ್ಯರ್ಥಃ ।

ಅನುವಾದ: ಈ ಸಂದರ್ಭದಲ್ಲಿ ಒಂದು ಆಖ್ಯಾಯಿಕೆಯಿದೆ. ಒಬ್ಬ ರಾಜಪುತ್ರನು ಗಂಡನಕ್ಷತ್ರದಲ್ಲಿ ಹುಟ್ಟಿ ಆ ಕಾರಣದಿಂದ ರಾಜ್ಯದಿಂದ ಅಟ್ಟಲ್ಪಟ್ಟನು. ಅನಂತರ ಒಬ್ಬ ಶಬರನಿಂದ ಪೋಷಿತನಾಗಿ ನಾನು ಶಬರ ಎಂಬ ಅಭಿಮಾನದಿಂದ ಕೂಡಿದ್ದನು. ಅವನಿನ್ನೂ ಬದುಕಿರುವನೆಂದು ತಿಳಿದು ಒಬ್ಬ ಅಮಾತ್ಯನು ಅವನನ್ನು ಎಚ್ಚರಿಸಿದನು. 'ನೀನು ಶಬರನಲ್ಲ, ರಾಜಪುತ್ರನು' ಎಂದನು. ಅವನು ಕೂಡಲೆ ತಾನು ಚಂಡಾಲನೆಂಬ ಅಭಿಮಾನವನ್ನು ಬಿಟ್ಟು ಯಥಾರ್ಥವಾಗಿ ರಾಜಭಾವವನ್ನು ಕಳೆದನು, 'ನಾನು ರಾಜನೇ ಆಗಿದ್ದೇನೆ' ಎಂದು. ಹಾಗೆಯೇ 'ಪರಿಪೂರ್ಣ ಚಿನ್ಮಾತ್ರರೂಪನಾಗಿ ಅಭಿವ್ಯಕ್ತ ಆದ(ಬ್ರಹ್ಮನ) ಆದಿ ಪುರುಷನಿಂದ ನೀನು ಹುಟ್ಟಿರುವೆ, ನೀನು ಅವನ ಅಂಶ ಎಂದು ಕಾರುಣಿಕನ ಉಪದೇಶದಿಂದ ಪ್ರಕೃತಿಯಲ್ಲಿರುವ ಅಭಿಮಾನವನ್ನು ತೊರೆದು 'ಬ್ರಹ್ಮಪುತ್ರನಾದ ಕಾರಣ ನಾನೂ ಬ್ರಹ್ಮನೇ ಆಗಿರುವೆ, ಅದಕ್ಕಿಂತ ಬೇರೆಯಾದ ಸಂಸಾರಿಯಲ್ಲ,' ಎಂದು ತನ್ನ ಸ್ವರೂಪವನ್ನೇ ಆಶ್ರಯಿಸುತ್ತಾನೆ.

ಭಾಷ್ಯ: *ತಥಾ ಚ ಗಾರುಡೇ–*

ಯಥೈಕಹೇಮಮಣಿನಾ ಸರ್ವಂ ಹೇಮಮಯಂ ಜಗತ್ । ತಥೈವ ಜಾತಮೀಶೇನ ಜಾತೇನಾಪ್ಯಖಿಲಂ ಭವೇತ್ ॥ (ಜಾತಮೀಶೇನ ಜಾತೇನ ಎಂಬುದಕ್ಕೆ ಬದಲಾಗಿ 'ಜಾತಮೀಶೇನ ಜ್ಞಾತೇನ ಎಂಬ ಪಾಠಾಂತರವುಂಟು.)

ಗ್ರಹಾವಿಷ್ಟೋ ದ್ವಿಜಃ ಕಶ್ಚಿತ್ ಶೂದ್ರೋಽಹಮಿತಿ ಮನ್ಯತೇ । ಗ್ರಹನಾಶಾದ್ ಪುನಃ ಸ್ವೀಯಂ ಬ್ರಾಹ್ಮಣ್ಯಂ ಮನ್ಯತೇ ಯಥಾ ॥ ಮಾಯಾವಿಷ್ಟಸ್ತಥಾ ಜೀವೋ ದೇಹೋಽಹಮಿತಿ ಮನ್ಯತೇ । ಮಾಯಾನಾಶಾತ್ ಪುನಃ ಸ್ವೀಯಂ ರೂಪಂ ಬ್ರಹ್ಮಾಸ್ಮಿ ಮನ್ಯತೇ ॥

ಅನುವಾದ: ಒಂದು ಚಿನ್ನದ ಮಣಿಯನ್ನು ತಿಳಿದ ನಂತರ ಸಂಪೂರ್ಣ ಜಗತ್ತು ಸುವರ್ಣಮಯವಾಗಿರುವ ಜ್ಞಾನ ಉಂಟಾಗುವುದು. ಭೂತಗ್ರಹಕ್ಕೆ ಗುರಿಯಾದ ದ್ವಿಜನು ನಾನು ಶೂದ್ರನೆಂದೇ ತಿಳಿಯುತ್ತಾನೆ. ಆದರೆ ಆ ಗ್ರಹದಿಂದ ಬಿಡುಗಡೆ ಪಡೆದು ತಾನು ಬ್ರಾಹ್ಮಣನೆಂದು ತಿಳಿಯುತ್ತಾನೆ. ಮಾಯೆಯಿಂದ ಆವಿಷ್ಟನಾದವನು ತಾನು ಕೇವಲ ದೇಹವೆಂದೇ ತಿಳಿಯುತ್ತಾನೆ. ಮಾಯೆಯು ನಾಶವಾದ ನಂತರ ತನ್ನ ರೂಪವನ್ನು 'ನಾನು ಬ್ರಹ್ಮ' ಎಂದೇ ತಿಳಿಯುತ್ತಾನೆ.

ಭಾಷ್ಯ: *ಸ್ತ್ರೀಶೂದ್ರಾದಯೋಽಪಿ ಬ್ರಾಹ್ಮಣೇನ ಬ್ರಾಹ್ಮಣಸ್ಯ ಶ್ರುತ್ವಾ ಕೃತಾರ್ಥಾಃ ಸ್ಯುಃ ಇತ್ಯೇತದರ್ಥಂ ಆಖ್ಯಾಯಿಕಾಂತರಂ ದರ್ಶಯತಿ ।*

ಅನುವಾದ: ಸ್ತ್ರೀ ಶೂದ್ರಾದಿಗಳೂ ಸಹ ಬ್ರಾಹ್ಮಣನ ಮೂಲಕ ಬ್ರಾಹ್ಮಣನು ಉಪದೇಶವನ್ನು ಕೇಳಿ ಕೃತಾರ್ಥರಾಗುವರು ಎಂದು ಈ ಅರ್ಥವನ್ನು ಬೇರೆಯ ಆಖ್ಯಾಯಿಕೆಯಿಂದ ತಿಳಿಯಪಡಿಸುತ್ತಾರೆ.

ಸೂತ್ರ: ಪಿಶಾಚವದನ್ಯಾರ್ಥೋಽಪದೇಶೇಽಪಿ ॥ ೨ ॥

ಸೂತ್ರಾನುವಾದ: ಪಿಶಾಚಿಯಂತೆ ಬೇರೆಯವನಿಗೆ ಉಪದೇಶ ಮಾಡಿದಾಗ (ಅದು ಮೂರನೆಯವನಿಗೂ ತಲುಪುತ್ತದೆ).

ಭಾಷ್ಯ: *ಅರ್ಜುನಾರ್ಥಂ ಶ್ರೀ ಕೃಷ್ಣೇನ ತತ್ವೋಪದೇಶೇ ಕ್ರಿಯಮಾಣೇಽಪಿ ಸಮೀಪಸ್ಥಸ್ಯ ಪಿಶಾಚಸ್ಯ ವಿವೇಕಜ್ಞಾನಂ ಜಾತಮೇವಂ ಅನ್ಯೇಷಾಮಪಿ ಭವೇದಿತ್ಯರ್ಥಃ ।*

ಅನುವಾದ: ಅರ್ಜುನನ ಸಲುವಾಗಿ ಶ್ರೀಕೃಷ್ಣನು ಉಪದೇಶ ಮಾಡುವಾಗ ಬಳಿಯಲ್ಲಿದ್ದ ಪಿಶಾಚಿಗೂ ವಿವೇಕಜ್ಞಾನವುಂಟಾಯಿತು. ಹಾಗೆಯೇ ಇತರರಿಗೂ ಆಗುವುದು ಸಾಧ್ಯ ಎಂದರ್ಥ.

ಭಾಷ್ಯ: *ಯದಿ ಚ ಸಕೃದುಪದೇಶಾತ್ ಜ್ಞಾನಂ ನ ಜಾಯತೇ ತದಾ ಉಪದೇಶಾವೃತ್ತಿರಪಿ ಕರ್ತವ್ಯೇತಿ ಇತಿಹಾಸಾಂತರೇಣಾಹ ।*

ಅನುವಾದ: ಒಂದು ವೇಳೆ ಒಮ್ಮೆ ಉಪದೇಶ ಮಾಡಿ ಜ್ಞಾನ ಉಂಟಾಗದಿದ್ದರೆ ಉಪದೇಶ ವನ್ನು ಮತ್ತೆ ಮತ್ತೆ ಮಾಡಬೇಕು ಎಂದು ಇತಿಹಾಸದ ಮೂಲಕ ತಿಳಿಸುತ್ತಾರೆ.

ಸೂತ್ರ: ಆವೃತ್ತಿರಸಕೃದುಪದೇಶಾತ್ ॥ ೩ ॥

ಸೂತ್ರಾನುವಾದ: ಮತ್ತೆ ಮತ್ತೆ ಉಪದೇಶವನ್ನು ಮಾಡುವುದರಿಂದ

ಭಾಷ್ಯ: *ಉಪದೇಶಾವೃತ್ತಿರಪಿ ಕರ್ತವ್ಯಾ । ಛಾಂದೋಗ್ಯಾದೌ ಶ್ವೇತಕೇತ್ವಾದಿಕಂ ಪ್ರತಿ ಆರುಣಿಪ್ರಭೃತೀನಾಂ ಅಸಕೃದುಪದೇಶೇತಿಹಾಸಾದಿತ್ಯರ್ಥಃ ।*

ಅನುವಾದ: ಉಪದೇಶವನ್ನು ಪದೇ ಪದೇ ಮಾಡಬೇಕು. ಛಾಂದೋಗ್ಯಾದಿಗಳಲ್ಲಿ ಶ್ವೇತಕೇತ್ವಾದಿ ಗಳನ್ನು ಆರುಣಿ ಮೊದಲಾದವರು ಪದೇ ಪದೇ ಉಪದೇಶ ಮಾಡಿದ ಇತಿಹಾಸವಿದೆ.

ಭಾಷ್ಯ: *ವೈರಾಗ್ಯಾರ್ಥಂ ನಿದರ್ಶಪೂರ್ವಕಮಾತ್ಮಸಂಘಾತಸ್ಯ ಭಂಗುರತ್ವಾದಿಕಂ ಪ್ರತಿಪಾದಯತಿ.*

ಅನುವಾದ: ವೈರಾಗ್ಯದ ಸಲುವಾಗಿ ನಿದರ್ಶನದೊಡನೆ ಆತ್ಮಸಂಘಾತದ ನಶ್ವರತೆಯನ್ನು ಪ್ರತಿಪಾದಿಸುತ್ತಾರೆ.

ಸೂತ್ರ: ಪಿತಾಪುತ್ರವದುಭಯೋರ್ದೃಷ್ಟತ್ವಾತ್ ॥ ೪ ॥

ಅನುವಾದ: ಪಿತಾ-ಪುತ್ರರಂತೆ ಇಬ್ಬರೂ (ಜನನ-ಮರಣಗಳನ್ನು) ನೋಡಿ ಮಗನಲ್ಲಿ (ವೈರಾಗ್ಯವುಂಟಾಗುವಂತೆ).

ಭಾಷ್ಯ: *ಸ್ವಸ್ಯ ಪಿತಾಪುತ್ರಯೋರಿವಾತ್ಮನೋಽಪಿ ಮರಣೋತ್ಪತ್ತ್ಯೋಃ ದೃಷ್ಟತ್ವಾತ್ ಅನುಮಿತತ್ವಾತ್ ವೈರಾಗ್ಯೇಣ ವಿವೇಕೋ ಭವತೀತ್ಯರ್ಥಃ ।*

ಅನುವಾದ: ಪಿತಾ–ಪುತ್ರರಂತೆ ತಮ್ಮ ಮೃತ್ಯು ಮತ್ತು ಜನ್ಮಗಳನ್ನು ನೋಡುವುದರಿಂದ ಅಂದರೆ ಅನುಮಾನ ಮಾಡುವುದರಿಂದ ವೈರಾಗ್ಯ ಉಂಟಾಗಿ ವಿವೇಕಜ್ಞಾನ ಉಂಟಾಗುವುದು.

ವಿವರಣೆ: (ನೋಡಿ: ಮಹಾಭಾರತ. ಅ.೧೬೪.)

ಭಾಷ್ಯ: *ಇತಃ ಪರಮುತ್ಪನ್ನಜ್ಞಾನಸ್ಯ ವಿರಕ್ತಸ್ಯ ಚ ಜ್ಞಾನನಿಷ್ಪತ್ತ್ಯಂಗಾನ್ಯಾಖ್ಯಾಯಿಕೋಕ್ತ । ದೃಷ್ಟಾಂತೈರ್ದರ್ಶಯತಿ ।*

ಅನುವಾದ: ವಿವೇಕ ಜ್ಞಾನದಿಂದ ತುಂಬಿದ ವಿರಕ್ತನಿಗೆ ಜ್ಞಾನನಿಷ್ಪನ್ನವಾದಾಗ ಅದರ ಅಂಗಗಳನ್ನು ಆಖ್ಯಾಯಿಕೆಗಳಲ್ಲಿ ಉಕ್ತವಾದ ದೃಷ್ಟಾಂತಗಳಿಂದ ತಿಳಿಯಪಡಿಸುತ್ತಾರೆ.

ಸೂತ್ರ: ಶ್ಯೇನವತ್ ಸುಖದುಃಖೀ ತ್ಯಾಗವಿಯೋಗಾಭ್ಯಾಮ್ ॥ ೫ ॥

ಸೂತ್ರಾನುವಾದ: ಗಿಡುಗದಂತೆ ತ್ಯಾಗವಿಯೋಗಗಳಿಂದ ಸುಖಿಯೂ ದುಃಖಿಯೂ ಆಗುವನು.

ಭಾಷ್ಯ: *ಪರಿಗ್ರಹೋ ನ ಕರ್ತವ್ಯೋ ಯತೋ ದ್ರವ್ಯಾಣಾಂ ತ್ಯಾಗೇನ ಲೋಕಃ ಸುಖೀ ವಿಯೋಗೇನ ದುಃಖೀ ಭವತಿ ಶ್ಯೇನವದಿತ್ಯರ್ಥಃ । ಶ್ಯೇನೋ ಹಿ ಸಾಮಿಷಃ ಕೇನಾಪಿ ಅಪಹತ್ಯ ಆಮಿಷಾದ್ವಿಯೋಜ್ಯ ದುಃಖೀಕ್ರಿಯತೇ। ಸ್ವಯಂ ಚೇತ್ತ್ಯಜತಿ ತದಾ ದುಃಖಾತ್ ವಿಮುಚ್ಯತೇ ।*

ಅನುವಾದ: ಪರಿಗ್ರಹವನ್ನು ಮಾಡಬಾರದು ಏಕೆಂದರೆ ದ್ರವ್ಯಗಳನ್ನು ತ್ಯಾಗ ಮಾಡುವುದರಿಂದ ಲೋಕವು ಸುಖಿಯಾಗುವುದು; ವಿಯೋಗದಿಂದ ದುಃಖಿಯಾಗುವುದು, ಗಿಡಗದಂತೆ. ಗಿಡುಗವೊಂದು ಮಾಂಸದೊಡನೆ ಇರುವಾಗ ಬೇರೆಯ ಪಕ್ಷಿಯಿಂದ ಆಕ್ರಮಿಸಲ್ಪಟ್ಟು ಮಾಂಸವನ್ನು ಕಳೆದುಕೊಂಡು ದುಃಖಿಯಾಗುವುದು. ಆದರೆ ತಾನಾಗಿಯೇ ಅದನ್ನು ತ್ಯಜಿಸಿದರೆ ದುಃಖದಿಂದ ದೂರವಾಗುವುದು.

ಭಾಷ್ಯ: *ತದುಕ್ತಮ್*

ಸಾಮಿಷಂ ಕುರರಂ ಜಘ್ನುರ್ಬಲಿನೋಽನ್ಯೇ ನಿರಾಮಿಷಾಃ ।ತದಾಮಿಷಂ ಪರಿತ್ಯಜ್ಯ ಸ ಸುಖಂ ಸಮವಿಂದತ ॥ (ಭಾಗ ೧೧.೯.೨)ಇತಿ

ಅನುವಾದ: ಮಾಂಸವನ್ನು ಪಡೆಯದ ಬಲಶಾಲಿಗಳಾದ ಇತರ ಕುರರಪಕ್ಷಿಗಳು ಮಾಂಸದ ತುಂಡನ್ನು ಹೊಂದಿದ್ದ ಗಿಡಗವನ್ನು ಆಕ್ರಮಣ ಮಾಡಿದುವು. ಆ ಮಾಂಸವನ್ನು ಬಿಟ್ಟುಕೊಟ್ಟು ಅದು ಸುಖದ ಅನುಭವ ಪಡೆಯಿತು.

ಭಾಷ್ಯ: *ನದೀಕೂಲಂ ಯಥಾವೃಕ್ಷೋ ವೃಕ್ಷಂ ವಾ ಶಕುನಿರ್ಯಥಾ । ತಥಾ ತ್ಯಜನ್ನಿಮಂ ದೇಹಂ ಕೃಚ್ಛಾದ್ ಗ್ರಾಹಾದ್ವಿಮುಚ್ಯತೇ ॥ (ಮನು.೬.೭೮) ಇತಿ*

ಅನುವಾದ: ನದಿಯ ದಂಡೆಯ ಮೇಲಿನ ವೃಕ್ಷವು (ಉರುಳಿಹೋಗುವುದೋ), ವೃಕ್ಷವನ್ನು ಬಿಟ್ಟು ಹಕ್ಕಿಯು ಹೇಗೆ ಹಾರಿಹೋಗುವುದೋ ಹಾಗೆಯೇ ಈ ದೇಹವನ್ನು ಬಿಟ್ಟು ಕಷ್ಟದಿಂದ ಬಿಡುಗಡೆ ಪಡೆದು ಹೋಗುತ್ತದೆ.

ಸೂತ್ರ: ಅಹಿನಿರ್ಲ್ವಯನೀವತ್ ॥ ೬ ॥

ಸೂತ್ರಾನುವಾದ: ಸರ್ಪದ ಪೊರೆಯಂತೆ (ತ್ಯಾಗದಲ್ಲಿ ತೊಡಗಬೇಕು.)

ಭಾಷ್ಯ: *ಯಥಾ ಹಿ ಜೀರ್ಣಾಂ ತ್ವಚಂ ಪರಿತ್ಯಜತ್ಯನಾಯಾಸೇನ ಹೇಯಬುದ್ಧ್ಯಾ ತಥೈವಮುಮುಕ್ಷುಃ ಪ್ರಕೃತಿಂ ಬಹುಕಾಲೋಪಭುಕ್ತಾಂ ಜೀರ್ಣಾಂ ಹೇಯಬುದ್ಧ್ಯಾ ತ್ಯಜೇದಿತ್ಯರ್ಥಃ । ತದುಕ್ತಮ್ ಜೀರ್ಣಾಂ ತ್ವಚಮಿವೋರಗ (ಕೂ.ಪು.೨.೩೬.೪೦) ಇತಿ ।*

ಅನುವಾದ: ಹೇಗೆ ಜೀರ್ಣವಾದ ಚರ್ಮವನ್ನು ಅನಾಯಾಸವಾಗಿ ಬಿಟ್ಟು ತ್ಯಾಜ್ಯ ಬುದ್ಧಿಯಿಂದಿರುವುದೋ ಹಾಗೆಯೇ ಮುಮುಕ್ಷುವು ಬಹಳಕಾಲ ಉಪಭೋಗಿಸಿದ ಪ್ರಕೃತಿಯನ್ನು ಮುಮುಕ್ಷುವು ಬಹಳಕಾಲ ಮುಮುಕ್ಷುವಾದವನು ತ್ಯಾಜ್ಯ ಬುದ್ಧಿಯಿಂದ ತ್ಯಜಿಸಬೇಕು. ಅದನ್ನು ಹೇಳಿದೆ–'ಸರ್ಪವು ಜೀರ್ಣವಾದ ಚರ್ಮವನ್ನು(ತೊರೆಯುವಂತೆ)' ಎಂದು.

ಭಾಷ್ಯ: *ತ್ಯಕ್ತಂ ಚ ಪ್ರಕೃತ್ಯಾದಿಕಂ ಪುನರ್ನಸ್ವೀಕುರ್ಯಾದಿತ್ಯತ್ರಾಹ ।*

ಸೂತ್ರ: ಭಿನ್ನ ಹಸ್ತವದ್ವಾ ॥ ೭ ॥

ಸೂತ್ರಾನುವಾದ: ಅಥವಾ ಕತ್ತರಿಸಲ್ಪಟ್ಟ ಕೈನಂತೆ (ಮತ್ತೆ ತೆಗೆದು ಕೊಳ್ಳಲಾಗದು)

ಭಾಷ್ಯ: *ಯಥಾ ಭಿನ್ನಂ ಹಸ್ತಂ ಪುನಃ ಕೋಽಪಿ ನಾದತ್ತೇ ತಥೈವೈತತ್ ತ್ಯಕ್ತಂ ಪುನರ್ನಾಭಿಮನ್ಯೇತ ಇತ್ಯರ್ಥಃ । ವಾ ಶಬ್ದೋಽಪ್ಯರ್ಥೇ ।*

ಅನುವಾದ: ಹೇಗೆ ಕತ್ತರಿಸಿಹೋದ ಕೈಯನ್ನು ಮತ್ತೆ ಯಾರೂ ತೆಗೆದುಕೊಳ್ಳುವುದಿಲ್ಲವೋ ಹಾಗೆಯೇ ಬಿಟ್ಟು ಹೋದ ಪ್ರಕೃತಿಯನ್ನು ಮತ್ತೆ ಸ್ವೀಕರಿಸುವುದಿಲ್ಲ.

ಸೂತ್ರ: ಅಸಾಧನಾನುಚಿಂತನಂ ಬಂಧಾಯ ಭರತವತ್ ॥ ೮ ॥

ಸೂತ್ರಾನುವಾದ: (ಜ್ಞಾನದ ಹೊರತಾಗಿ) ಇಲ್ಲದ ಸಾಧನಗಳನ್ನು ಆಲೋಚಿಸುವುದು ಬಂದವನ್ನಷ್ಟೆ ತರುವುದು, ಭರತನಂತೆ.

ಭಾಷ್ಯ: *ವಿವೇಕಸ್ಯ ಯದಂತರಂಗಸಾಧನಂ ನ ಭವತಿ ಸ ಚೇದ್ಧರ್ಮೋಽಪಿ ಸ್ಯಾತ್ ತಥಾಪಿ ತದನುಚಿಂತನಂ ತದನುಷ್ಠಾನೇ ಚಿತ್ತಸ್ಯ ತಾತ್ಪರ್ಯಂ ನ ಕರ್ತವ್ಯಂ, ಯತಸ್ತದ್ಬಂಧಾಯ ಭವತಿ ವಿವೇಕವಿಸ್ಮಾರಕತಯಾ ಭರತವತ್ । ಯಥಾ ಭರತಸ್ಯ ರಾಜರ್ಷೇಃ ಧರ್ಮ್ಯಮಪಿ ದೀನಾನಾಥಹರಿಣಶಾವಕಸ್ಯ ಪೋಷಣಮಿತ್ಯರ್ಥಃ । ತಥಾ ಚ ಜಡಭರತಂ ಪ್ರಕೃತ್ಯ ವಿಷ್ಣುಪುರಾಣೇ–*

ಚಪಲಂ ಚಪಲೇ ತಸ್ಮಿನ್ ದೂರಗಂ ದೂರಗಾಮಿನಿ । ಆಸೀಚ್ಚೇತಃ ಸಮಾಸಕ್ತಂ ತಸ್ಮಿನ್ ಹರಿಣಪೋತಕೇ ॥ ಇತಿ ೮)

ಅನುವಾದ: ವಿವೇಕದ ಯಾವ ಅಂತರಂಗ ಸಾಧನವು ಯಾರಿಗೆ ಉಂಟಾಗುವುದಿಲ್ಲವೋ ಅವನು ಧರ್ಮರೂಪವನ್ನು ಹೊಂದಿದ್ದರೂ ಅದನ್ನು ಮತ್ತೆ ಮತ್ತೆ ಚಿಂತಿಸುವುದು ಮತ್ತು ಅನುಷ್ಠಾನವನ್ನು ಚಿತ್ತದಲ್ಲಿ ಮಾಡುವುದು ಸರಿಯಲ್ಲ. ಏಕೆಂದರೆ ಅದು ಬಂಧವನ್ನುಂಟು ಮಾಡುವುದು, ವಿವೇಕವನ್ನು ಮರೆಸಿಬಿಡುವುದು; ಭರತನಂತೆ. 'ಆ ಜಿಂಕೆಯ ಮರಿಯು ಚಂಚಲವಾಗಿರುವಾಗ ಅವನ ಮನಸ್ಸೂ ಚಂಚಲವಾಗಿತ್ತು. ಅದು ದೂರ ಹೋದಾಗ ಅವನೂ ದೂರದ ವರೆಗೆ ಓಡುತ್ತಿದ್ದನು. ಭರತನ ಚಿತ್ತವು ಹೀಗೆ ಹರಿಣಪೋತಕದಲ್ಲಿ ಸಮಾಸಕ್ತವಾಗಿತ್ತು.'

ಸೂತ್ರ: ಬಹುಭಿರ್ಯೋಗೇ ವಿರೋಧೋರಾಗಾದಿಭಿಃ ಕುಮಾರೀಶಂಖವತ್ ॥ ೯ ॥

ಸೂತ್ರಾನುವಾದ: ಅನೇಕ ಜನಗಳ ಸಂಪರ್ಕವಾದಾಗ ರಾಗಾದಿಗಳಿಂದ ಕಲಹ ಉಂಟಾಗುವುದು.

ಭಾಷ್ಯ: *ಬಹುಭಿಃ ಸಂಗೋ ನಕಾರ್ಯಃ । ಬಹುಭಿಃ ಸಂಗೇ ಹಿ ರಾಗಾದಿ ಅಭಿವ್ಯಕ್ತ್ಯಾ ಕಲಹೋ ಭವತಿ ಯೋಗಭ್ರಂಶಕಃ । ಯಥಾ ಕುಮಾರೀಹಸ್ತಶಂಖಾನಾಮನ್ಯೋನ್ಯಸಂಗೇನ ಝಣತ್ಕಾರೋ ಭವತೀತ್ಯರ್ಥಃ ।*

ಅನುವಾದ: ಅನೇಕರೊಡನೆ ಸಂಪರ್ಕ ಬೆಳಸಬಾರದು. ಅನೇಕರೊಡನೆ ಸಂಗ ಬೆಳಸಿದಲ್ಲಿ ರಾಗಾದಿಗಳ ಅಭಿವ್ಯಕ್ತಿಯಿಂದ ಯೋಗಕ್ಕೆ ನಷ್ಟವುಂಟುಮಾಡುವ ಕಲಹಾದಿಗಳು ಉಂಟಾಗುತ್ತವೆ, ಹೇಗೆಂದರೆ ಕುಮಾರಿಯ ಕೈಯಲ್ಲಿ ಧರಿಸಿರುವ ಶಂಖದ ಬಳೆಗಳು ಪರಸ್ಪರ ಸಂಪರ್ಕದಿಂದ ಝಣತ್ಕಾರವುಂಟಾಗುವುದು.

ವಿವರಣೆ: ಬಳೆಗಳ ಸದ್ದು ಯೋಗಸಾಧನೆಗೆ ಅಡ್ಡಿ ಉಂಟುಮಾಡುವುದು.

ಸೂತ್ರ: ದ್ವಾಭ್ಯಾಮಪಿ ತಥೈವ ॥ ೧೦ ॥

ಸೂತ್ರಾನುವಾದ: ಇಬ್ಬರಿದ್ದರೂ ಹಾಗೆಯೇ (ಯೋಗಭ್ರಷ್ಟರಾಗಬಹುದು).

ಭಾಷ್ಯ: *ದ್ವಾಭ್ಯಾಂ ಯೋಗೇಽಪಿ ತಥೈವ ವಿರೋಧೋ ಭವತ್ಯತ ಏಕಾಕಿನೈವ ಸ್ಥಾತವ್ಯಮಿತ್ಯರ್ಥಃ ।*

ಅನುವಾದ: ಇಬ್ಬರೂ ಕೂಡಿದಾಗಲೂ ಸಹ ಹಾಗೆಯೇ ವಿರೋಧವು ಉಂಟಾಗುವುದು. ಆದ್ದರಿಂದ ಏಕಾಕಿಯಾಗಿಯೇ ಉಳಿಯಬೇಕು ಎಂದರ್ಥ.

ಭಾಷ್ಯ: *ವಾಸೇ ಬಹೂನಾಂ ಕಲಹೋ ಭವೇದ್ವಾರ್ತಾ ದ್ವಯೋರಪಿ । ಏಕ ಏವ ಚರೇತ್ ತಸ್ಮಾತ್ ಕುಮಾರ್ಯಾ ಇವ ಕಂಕಣಮ್ ॥ (ಭಾಗ–೧೧.೯.೧೦)*

ಅನುವಾದ: ಅನೇಕರು ಒಟ್ಟಿಗೆ ಇರುವಾಗ ಕಲಹವಾದೀತು. ಇಬ್ಬರು ಇದ್ದರೂ ಮಾತುಗಳನ್ನಾಡುವರು. ಆದ್ದರಿಂದ (ಯೋಗಸಾಧನೆಗೆ) ಒಬ್ಬನೇ ಇರಬೇಕು; ಹೇಗೆಂದರೆ ಕುಮಾರಿಯ ಕೈ ಬಳೆಯಂತೆ.

ಭಾಷ್ಯ: *ಆಶಾವೈವಶ್ಯವಿರಸೇ ಚಿತ್ತೇ ಸಂತೋಷವರ್ಜಿತೇ । ಮ್ಲಾನೇ ವಕ್ತ್ರಮಿವಾದರ್ಶೇನ ಜ್ಞಾನಂ ಪ್ರತಿಬಿಂಬತಿ ॥ ಯೋ.ವಾ.೨.೧೫.೯ ಇತಿ ವಚನಾನ್ನಿರಾಶತಾ ಯೋಗಿನಾನುಷ್ಠೇಯೇತ್ಯಾಹ ।*

ಅನುವಾದ: ಆಶೆಗಳಿಗೆ ಅಧೀನರಾಗಿ ವಿರಸವುಂಟಾಗಿ ಸಂತೋಷವನ್ನು ಕಳೆದುಕೊಂಡು ಚಿತ್ತದಲ್ಲಿ ಜ್ಞಾನವು ಪ್ರತಿಬಿಂಬಿತವಾಗದು. ಹೇಗೆಂದರೆ ಮಲಿನವಾದ ಕನ್ನಡಿಯಲ್ಲಿ ಮುಖದ ಪ್ರತಿ ಬಿಂಬ ಕಾಣದು. ಎಂಬ ಈ ಮಾತಿನಿಂದ ನಿರಾಶೆಯನ್ನು ಯೋಗಿಯು ಹೊಂದಬಾರದು, ಎಂದು ಹೇಳಿದೆ.

ಸೂತ್ರ: ನಿರಾಶಃ ಸುಖೀ ಪಿಂಗಲಾವತ್ ॥ ೧೧ ॥

ಸೂತ್ರಾನುವಾದ: ನಿರಾಶನಾದ ವ್ಯಕ್ತಿಯು (ಆಶೆಯನ್ನು ಬಿಟ್ಟವನು) ಸುಖಿಯಾಗಿರುವನು, ಪಿಂಗಳೆಯಂತೆ.

ಭಾಷ್ಯ: *ಆಶಾಂ ತ್ಯಕ್ತ್ವಾ ಪುರುಷಃ ಸಂತೋಷಾಖ್ಯಸುಖವಾನ್ಭೂಯಾತ್ ಪಿಂಗಲಾವತ್ । ಯಥಾ ಪಿಂಗಲಾ ನಾಮ ವೇಶ್ಯಾ ಕಾಂತಾರ್ಥಿನೀ ಕಾಂತಮಲಬ್ಧ್ವಾ ನಿರ್ವಿಣ್ಣಾಸತೀ ವಿಹಾಯಾಶಾಂ ಸುಖಿನೀ ಬಭೂವ ತದ್ವದಿತ್ಯರ್ಥಃ । ತದುಕ್ತಮ್ ।*

ಅನುವಾದ: ಆಶೆಯನ್ನು ತೊರೆದು ಪುರುಷನು ಸಂತೋಷವೆಂಬ ಸುಖವನ್ನು ಪಡೆಯಬೇಕು, ಪಿಂಗಳೆಯಂತೆ; ಹೇಗೆಂದರೆ, ಪಿಂಗಲಾ ಎಂಬ ವೇಶ್ಯೆಯು ಕಾಂತನಿಗಾಗಿ ಹುಡುಕುತ್ತಾ ಕಾಂತನನ್ನು ಪಡೆಯದೆ ಬೇಸರ ಪಟ್ಟುಕೊಂಡು ಆಶೆಯನ್ನು ತೊರೆದು ಸುಖಿಯಾದಳು, ಆ ರೀತಿಯಾಗಿ ಎಂದರ್ಥ. ಅದನ್ನೇ ಹೇಳಿದೆ.

ಭಾಷ್ಯ: *ಆಶಾ ಹಿ ಪರಮಂ ದುಃಖಂ ನೈರಾಶ್ಯಂ ಪರಮಂ ಸುಖಮ್ । ಯಥಾ ಸಂಛಿದ್ಯ ಕಾಂತಾಶಾಂ ಸುಖಂ ಸುಷ್ವಾಪ ಪಿಂಗಲಾ ॥ಭಾ.೧೧.೮.೪೪॥*

ಅನುವಾದ: ಆಶೆಯೇ ಪರಮ ದುಃಖ. ಆಶೆಯಿಲ್ಲದಿರುವುದು ಪರಮ ಸುಖ. ಕಾಂತನ ಆಶೆಯನ್ನು ತೊರೆದು ಪಿಂಗಳೆಯು ಸುಖವಾಗಿ ನಿದ್ರಿಸಿದಳು ಎಂಬಂತೆ.

ಭಾಷ್ಯ: *ನನ್ವಾಶಾನಿವೃತ್ತ್ಯಾ ದುಃಖನಿವೃತ್ತಿಃ ಸ್ಯಾತ್ । ಸುಖಂ ತು ಕುತಃ? ಸಾಧನಾನುಭಾವಾದಿತಿ। ಉಚ್ಯತೇ । ಚಿತ್ತಸ್ಯ ಸತ್ತ್ವಪ್ರಾಧಾನ್ಯೇನ ಸ್ವಾಭಾವಿಕಂ ಯತ್ ಸುಖಂ ಆಶಯಾ ವಿಹಿತಂ ತಿಷ್ಠತಿ ತದೇವ ಆಶಾವಿಗಮೇ ಲಬ್ಧವೃತ್ತಿಕಂ ಭವತಿ । ತೇಜಃ ಪ್ರತಿಬದ್ಧಜಲಶೈತ್ಯವದಿತಿ ನ ತತ್ರ ಸಾಧನಾಪೇಕ್ಷಾ । ಏತದೇವ ಚಾರ್ಥೇ ಸುಖಮಿತ್ಯುಚ್ಯತ ಇತಿ।*

ಅನುವಾದ: ಆಶೆಯ ನಿವೃತ್ತಿಯಿಂದ ದುಃಖನಿವೃತ್ತಿಯಾದೀತು. ಆದರೆ ಸುಖವೆಲ್ಲಿ ಬಂತು? ಅದಕ್ಕೆ ಸಾಧನೆಯೇನಿಲ್ಲ? ಅದಕ್ಕೆ ಹೀಗೆ ಹೇಳಿದೆ–ಚಿತ್ತದಲ್ಲಿ ಸತ್ತ್ವವು ಪ್ರಧಾನವಾದಾಗ ಸ್ವಾಭಾವಿಕವಾಗಿಯೇ ಯಾವ ಸುಖವು ಆವರಿಸಲ್ಪಟ್ಟಿರುವುದೋ ಅದು ಆ ಆಶೆಯು ಹೊರಟು ಹೋದಮೇಲೆ ಸ್ವಾಭಾವಿಕ ಸ್ವರೂಪವನ್ನು ಪಡೆಯುವುದು. ಶಾಖದಿಂದ ಹಿಡಿಯಲ್ಪಟ್ಟಿದ್ದ ನೀರು ಮತ್ತೂ ತಣ್ಣಗಾಗುವಂತೆ, ಅದಕ್ಕೆ ಸಾಧನದ ಅಪೇಕ್ಷೆಯಿಲ್ಲ. ಈ ಅರ್ಥದಲ್ಲಿಯೇ ಸುಖವಿರುವುದು ಎಂದು ಹೇಳಲಾಗಿದೆ.

ಭಾಷ್ಯ: *ಯೋಗಪ್ರತಿಬಂಧಕತ್ವಾದಾರಂಭೇಽಪಿ ಭೋಗಾರ್ಥಂ ನ ಕರ್ತವ್ಯೋಽನ್ಯಥೈವ ತದುಪಪತ್ತೇರಿತ್ಯಾಹ ।*

ಅನುವಾದ: ಯೋಗಸಾಧನೆಗೆ ಪ್ರತಿಬಂಧಕವಾದ ಕಾರಣ ಭೋಗದ ಸಲುವಾಗಿ ಯಾವ ಪ್ರಯತ್ನವನ್ನೂ ಮಾಡಬಾರದು. ಅನ್ಯಥಾ (ಭೋಗಪ್ರಾಪ್ತಿಯು) ಉಂಟಾಗುವುದು. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಅನಾರಂಭೇಽಪಿ ಪರಗೃಹೇ ಸುಖೀ ಸರ್ಪವತ್ ॥ ೧೨ ॥

ಸೂತ್ರಾನುವಾದ: (ಭೋಗಪ್ರಾಪ್ತಿಗೆ) ಪ್ರವೃತ್ತನಾಗದಿದ್ದರೂ ಬೇರೆಯ ಮನೆಯಲ್ಲಿ ಸುಖಿಯಾಗಿರುವನು, ಸರ್ಪದಂತೆ.

ಭಾಷ್ಯ: *ತದುಕ್ತಮ್ ।*

ಗೃಹಾರಂಭೋ ಹಿ ದುಃಖಾಯ ನ ಸುಖಾಯ ಕಥಂ ಚ ನ ।
ಸರ್ಪಃ ಪರಕೃತಂ ವೇಶ್ಮ ಪ್ರವಿಶ್ಯ ಸುಖಮೇಧತೇ ॥
(ಮ.ಭಾ.ಶಂ.ಪ೧೭೮.೧೦)

ಶಾಸ್ತ್ರೇಭ್ಯೋ ಗುರುಭ್ಯಶ್ಚ ಸಾರ ಏವ ಗ್ರಾಹ್ಯೋಽನ್ಯಥಾ ಅಭ್ಯುಪಗಮವಾದಾದಿಭಿರಂಶತೋಽಸಾರಭಾಗೇಽನ್ಯೋನ್ಯ–ವಿರೋಧೇನ ಅರ್ಥಬಾಹುಲ್ಯೇನ ಚೈಕಾಗ್ರತಾಯಾ ಅಸಂಭವಾದಿತ್ಯಾಹ।

ಅನುವಾದ: ಮನೆಯನ್ನು ಕಟ್ಟುವುದು ಕೇವಲ ದುಃಖಕ್ಕಾಗಿ, ಸುಖಕ್ಕಾಗಿಯಂತೂ ಇಲ್ಲವೇ ಇಲ್ಲ. ಸರ್ಪವು ಇತರರು ಮಾಡಿದ ಮನೆಯನ್ನು ಪ್ರವೇಶಿಸಿ ಸುಖವನ್ನು ಪಡೆಯುವುದು. ಶಾಸ್ತ್ರಗಳಿಂದಲೂ ಗುರುಗಳಿಂದಲೂ ಸಾರಭಾಗವನ್ನು ಸ್ವೀಕರಿಸ ಬೇಕು ಹಾಗಿಲ್ಲದಿದ್ದಲ್ಲಿ ಇತರ ಸಿದ್ಧಾಂತಗಳನ್ನು ಸ್ವೀಕರಿಸಿ ವಾದಮಾಡುವುದರಿಂದ ಅಂಶತಃ ಅಸಾರ ಭಾಗದಲ್ಲಿ ಪರಸ್ಪರ ವಿರೋಧದಿಂದ, ಅರ್ಥಬಾಹುಳ್ಯದಿಂದ ಸಂಭವಿಸದು. ಇದನ್ನು ಮುಂದೆ ಹೇಳಿದೆ.

ಸೂತ್ರ: ಬಹುಶಾಸ್ತ್ರಗುರೂಪಾಸನೇಽಪಿ ಸಾರಾದಾನಂ ಷಟ್ಪದವತ್ ॥ ೧೩ ॥

ಸೂತ್ರಾನುವಾದ: ಅನೇಕ ಶಾಸ್ತ್ರಗಳ ಅಭ್ಯಾಸ ಮತ್ತು ಗುರುಗಳ ಉಪಾಸನೆ ಮಾಡಿದರೂ ಸಾರವನ್ನು ತೆಗೆದುಕೊಳ್ಳುವುದು ಜೇನು ಹುಳುವಿನಂತೆ.

ಭಾಷ್ಯ: *ಕರ್ತವ್ಯಮಿತಿ ಶೇಷಃ । ಅನ್ಯತ್ ಸುಗಮಮ್ । ತದುಕ್ತಮ್ ।*

ಅನುವಾದ: (ಸಾರಾದಾನವನ್ನು) ಮಾಡಬೇಕು ಎಂಬುದು ಉಳಿದ ಭಾಗ ಬೇರೆಯದೆಲ್ಲ ಸುಲಭ. ಅದನ್ನೇ ಹೇಳಿದ್ದಾರೆ.

ಭಾಷ್ಯ: *ಅಣುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯಃ ಕುಶಲೋ ನರಃ । ಸರ್ವತಃ ಸಾರಮಾದದ್ಯಾತ್ ಪುಷ್ಪೇಭ್ಯ ಇವ ಷಟ್ಪದಃ ॥ ಭಾಗವತ ಮಾರ್ಕಂಡೇಯ ಪುರಾಣೇಚ ।*

ಸಾರಭೂತಮುಪಾಸೀತ ಜ್ಞಾನಂ ಯತ್ ಸ್ವಾರ್ಥಸಾಧಕಮ್ । ಜ್ಞಾನಾನಾಂ ಬಹುತಾ ಯೈಷಾ ಯೋಗವಿಘ್ನಕರೀಹಿ ಸಾ ॥ ಇದಂ ಜ್ಞೇಯಮಿದಂ ಜ್ಞೇಯಮಿತಿ ಯಸ್ತೃಷಿತಶ್ಚರೇತ್ । ಅಸೌ ಕಲ್ಪಸಹಸ್ರೇಷು ನೈವ ಜ್ಞಾನಮವಾಪ್ನುಯಾತ್ ॥ ಮಾ.ಪು.೪೧.೩೮-೩೯

ಅನುವಾದ: ಹೂಗಳಿಂದ ದುಂಬಿಗಳು (ಸಾರವನ್ನು ತೆಗೆದುಕೊಳ್ಳುವಂತೆ) ಚಿಕ್ಕದಾದ ಹಾಗೂ ದೊಡ್ಡದಾದ ಶಾಸ್ತ್ರಗಳಿಂದ, ಎಲ್ಲ ರೀತಿಗಳಿಂದಲೂ ಕುಶಲವಾದ ಪುರುಷನು ಸಾರವನ್ನು ತೆಗೆದುಕೊಳ್ಳಬೇಕು. ತನ್ನ ಉದ್ದೇಶವನ್ನು ಸಾಧಿಸಬಲ್ಲ ಜ್ಞಾನವನ್ನು ಸಾರಭೂತವಾಗಿ ಪಡೆಯಬೇಕು. ಜ್ಞಾನದ ಅಧಿಕತೆ ಎಷ್ಟಿದೆ ಎಂದರೆ ನಾವು ಏಕಾಗ್ರತೆಯಿಂದ ಮನಸ್ಸಿಡುವುದನ್ನು ಅಡ್ಡಿ ಮಾಡಿಬಿಡುತ್ತದೆ. ಇದನ್ನು ತಿಳಿಯಬೇಕು, ಇದನ್ನು ತಿಳಿಯಬೇಕು ಎಂದ ಯಾರು ಆಸಕ್ತರಾಗಿ ಹುಡುಕುವರೋ ಅವರು ಸಾವಿರ ಕಲ್ಪಗಳಾದರೂ ಜ್ಞಾನವನ್ನು ಪಡೆಯಲಾರರು.

ಭಾಷ್ಯ: *ಸಾಧನಾನಂತರಂ ಯಥಾ ತಥಾ ಭವತು, ಏಕಾಗ್ರತಯಾ ಏವ ಸಮಾಧಿಪಾಲನದ್ವಾರಾ, ವಿವೇಕಸಾಕ್ಷಾತ್ಕಾರೋ ನಿಷ್ಪಾದನೀಯ ಇತ್ಯಾಹ.*

ಸೂತ್ರ: ಇಷುಕಾರವನ್ನೈಕ ಚಿತ್ತಸ್ಯ ಸಮಾಧಿಹಾನಿಃ ॥ ೧೪ ॥

ಅನುವಾದ: ಸಾಧನೆಯ ನಂತರ ಹೇಗಾದರೂ ಇರಲಿ ಚಿತ್ತವನ್ನು ಏಕಾಗ್ರವಾಗಿರಿಸಿಕೊಂಡು ಸಮಾಧಿಯನ್ನು ಕಾಪಾಡಿಕೊಳ್ಳುವುದರ ಮೂಲಕ ವಿವೇಕಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ.

ಸೂತ್ರಾನುವಾದ: ಬಾಣವನ್ನು ಸಿದ್ಧಮಾಡುವವನಂತೆ ಏಕಾಗ್ರಚಿತ್ತನಾಗಿರುವವನ ಏಕಾಗ್ರತೆಗೆ ಚ್ಯುತಿ ಬರುವುದಿಲ್ಲ.

ಭಾಷ್ಯ: *ಯಥಾ ಶರನಿರ್ಮಾಣಾಯ ಏಕಚಿತ್ತಸ್ಯ ಇಷುಕಾರಸ್ಯ ಪಾರ್ಶ್ವೇ ರಾಜ್ಞೋಃ ಗಮನೇನಾಪಿ ನ ವೃತ್ತ್ಯಂತರನಿರೋಧೋ ಹೀಯತೇ ಏವಮೇಕಾಗ್ರಚಿತ್ತಸ್ಯ ಸರ್ವಥಾಽಪಿ ನ ಸಮಾಧಿಹಾನಿಃ ವೃತ್ತ್ಯಂತರ ನಿರೋಧಕ್ಷತಿರ್ಭವತಿ । ತತಶ್ಚ ವಿಷಯಾಂತರಸಂಚಾರಾಭಾವೇ ಧ್ಯೇಯಸಾಕ್ಷಾತ್ಕಾರೋಽಪಿ ಅವಶ್ಯಂ ಭವತಿ ಇತ್ಯೇಕಾಗ್ರತಾಂ ಕಾರ್ಯಾದಿತ್ಯರ್ಥಃ । ತದುಕ್ತಮ್।*

ಅನುವಾದ: ಬಾಣವನ್ನು ನಿರ್ಮಿಸುವುದರಲ್ಲಿ ಒಂದೇ ಮನಸ್ಸಿಟ್ಟ ಬಾಣ ಮಾಡುವವನಿಗೆ ಪಕ್ಕದಲ್ಲಿ ರಾಜನೇ ಹೋದರೂ ತನ್ನ ಮನಸ್ಸಿನ ವೃತ್ತಿಯ ಮೇಲೆ ಹತೋಟಿಯನ್ನು ಕಳೆದುಕೊಳ್ಳುವುದಿಲ್ಲವೊ ಹಾಗೆಯೇ ಏಕಾಗ್ರಚಿತ್ತನಾದವನಿಗೆ ಯಾವುದೇ ರೀತಿಯಲ್ಲೂ ಅವನ ಸಮಾಧಿಗೆ ಹಾನಿಯಾಗಲಿ, ಮನಸ್ಸಿನ ಮೇಲೆ ಹತೋಟಿಯನ್ನು ಕಳೆದುಕೊಳ್ಳುವುದಾಗಲಿ ಆಗದು. ಅನಂತರ ಬೇರೆಯ ವಿಷಯಗಳು ಮನಸ್ಸಿನಲ್ಲಿ ಸಂಚಾರವಾಗದ ಕಾರಣ ತನ್ನ ಗುರಿಯು ಸಾಕ್ಷಾತ್ಕಾರವೂ ಸಹ ಅವಶ್ಯವಾಗಿ ಆಗುವುದು ಎಂದು ಏಕಾಗ್ರತೆಯನ್ನು ಮಾಡಬೇಕೆಂದು ಅರ್ಥ. ಅದನ್ನೇ ಹೇಳಿದೆ.

ಭಾಷ್ಯ: *ತದೈವಮಾತ್ಮನ್ಯವರುದ್ಧಚಿತ್ತೋ ನ ವೇದ ಕಿಂಚಿದ್ಬಹಿರಂತರಂ ವಾ । ಯಥೇಷುಕಾರೋ ನೃಪತಿಂವ್ರಜಂತಂ ಇಷೌ ಗತಾತ್ಮಾವನ ದದರ್ಶಪಾರ್ಶ್ವೇ ॥ ಭಾಗ.೧೧.೯.೧೩)*

ಅನುವಾದ: ಆಗ ತನ್ನಲ್ಲಿಯೇ ಚಿತ್ತವನ್ನು ತಡೆದಿಟ್ಟು ಕೊಂಡ ಅವನು ಹೊರಗಾಗಲಿ, ಮನಸ್ಸಿನಲ್ಲಾಗಲಿ ಬೇರೆ ಏನನ್ನೂ ಅರಿಯದವನಾದನು. ಹೇಗೆಂದರೆ ಇಷುಕಾರನು ಬಾಣದಲ್ಲಿಯೇ ಏಕಾಗ್ರಚಿತ್ತನಾಗಿ ಪಕ್ಕದಲ್ಲಿಯೇ ಹಾದುಹೋದ ರಾಜನನ್ನೂ ಗಮನಿಸಲಿಲ್ಲ.

ಭಾಷ್ಯ: *ಸತ್ಯಾಂ ಶಕ್ತೌ ಜ್ಞಾನಬಲಾತ್ ಶಾಸ್ತ್ರಕೃತನಿಯಮೋ ವೃಥಾ ಲಂಘ್ಯತೇ । ತದಾ ಜ್ಞಾನವಿಪ್ಲುತ್ತ್ಯಾನರ್ಥಕ್ಯಂ ಯೋಗಿನೋ ಭವತೀತ್ಯಾಹ ।*

ಅನುವಾದ: ದೇಹದಲ್ಲಿ ಶಕ್ತಿಯಿದ್ದರೂ ಜ್ಞಾನದ ಬಲದಿಂದ ಶಾಸ್ತ್ರಗಳಲ್ಲಿನ ನಿಯಮಗಳ ಉಲ್ಲಂಘನೆ ಮಾಡಿದಲ್ಲಿ ಜ್ಞಾನವು ದೊರೆಯದೆ ಯೋಗಿಯ ಪ್ರಯತ್ನಗಳೆಲ್ಲ ವ್ಯರ್ಥವಾಗುತ್ತವೆ. ಅದನ್ನೇ ಹೇಳಿದ್ದಾರೆ.

ಸೂತ್ರ: ಕೃತನಿಯಮಲಂಘನಾದಾನರ್ಥಕ್ಯಂ ಲೋಕವತ್ ॥ ೧೫ ॥

ಸೂತ್ರಾನುವಾದ: ಲೋಕದಲ್ಲಿ (ಸಂಭವಿಸುವಂತೆ) ಅಂಗೀಕರಿಸಿದ ನಿಯಮಗಳ ಉಲ್ಲಂಘನೆಯಿಂದ ಸಫಲತೆಯು ದೊರೆಯದು.

ಭಾಷ್ಯ: *ಯಃ ಶಾಸ್ತ್ರೇಷು ಕೃತಃ ಯೋಗಿನಾಂ ನಿಯಮಃ ತಸ್ಯೋಲ್ಲಂಘನೇ ಜ್ಞಾನೇನಿಷ್ಪತ್ತ್ಯಾಖ್ಯೋಽರ್ಥೋ ನ ಭವತಿ ಲೋಕವತ್ । ಯಥಾ ಲೋಕೇ ಭೈಷಜ್ಯಾದೌ ವಿಹಿತಪಥ್ಯಾದೀನಾಂ ಭೈಷಜ್ಯಾದೇರ್ವಿಹಿತಪಥ್ಯಾದೀನಾಂ ಲಂಘನೇ ತತ್ತತ್ಸಿದ್ಧಿರ್ನ ಭವತಿ, ತದ್ವದತ್ಯರ್ಥಃ। ಅಶಕ್ತ್ಯಾ ಜ್ಞಾನರಕ್ಷಾರ್ಥಂ ವಾ ಲಂಘನೇ ತು ನ ಜ್ಞಾನ ಪ್ರತಿಬಂಧಃ ।*

ಅನುವಾದ: ಯೋಗಿಗಳಿಗಾಗಿ ಶಾಸ್ತ್ರಗಳಲ್ಲಿ ಮಾಡಿರುವ ನಿಯಮವನ್ನು ಉಲ್ಲಂಘಿಸಿದಾಗ ಜ್ಞಾನನಿಷ್ಪತ್ತಿ ಎಂಬ ಫಲವು ಉಂಟಾಗದು, ಲೋಕದಲ್ಲಿ ನಡೆಯುವಂತೆ ಲೋಕದಲ್ಲಿ ಔಷಧಿ ಮುಂತಾದುವುಗಳಲ್ಲಿ ವಿಧಿಸಲ್ಪಟ್ಟ ಪಥ್ಯಾದಿಗಳನ್ನು ಉಲ್ಲಂಘನೆ ಮಾಡಿದಾಗ

ಆಯಾ ಸಿದ್ಧಿಗಳು ಉಂಟಾಗುವುದಿಲ್ಲ; ಅದರಂತೆಯೇ ಎಂದರ್ಥ. ಯಾವುದಾದರೂ ಅಶಕ್ತಿಯ ಕಾರಣ ಅಥವಾ ಜ್ಞಾನದ ರಕ್ಷಣೆಗಾಗಿ ನಿಯಮಗಳನ್ನು ಉಲ್ಲಂಘಿಸಿದರೆ ಜ್ಞಾನಕ್ಕೆ ಪ್ರತಿಬಂಧವು ಬಾರದು.

ಭಾಷ್ಯ: *ಅಪೇತವ್ರತಕರ್ಮಾ ತು ಕೇವಲಂ ಬ್ರಹ್ಮಣಿ ಸ್ಥಿತಃ । ಬ್ರಹ್ಮಭೂತಶ್ಚರನ್ ಲೋಕೇ ಬ್ರಹ್ಮಚಾರೀತಿ ಕಥ್ಯತೇ ॥ (ಮ.ಭಾ.ಅ.ಮೇ.ಸ.೨೬.೧೬)*

ಇತಿ ಮೋಕ್ಷಧರ್ಮಾದಿಭ್ಯಃ ವಸಿಷ್ಠಾದಿಸ್ಮೃತಿಭ್ಯಶ್ಚ । ಅತ ಏವ ವಿಷ್ಣುಪುರಾಣಾದೌ ವೃಥಾ ಕರ್ಮತ್ಯಾಗಿನ ಏವ ಪಾಷಂಡತಯಾ ನಿಂದಿತಾಃ 'ಪುಂಸಾಂ ಜಟಾಧಾರಣಂ ಮೌಢ್ಯವತಾಂ ವೃಥೈವ' ಇತಿ ಆದಿನೇತಿ।

ಅನುವಾದ: ವ್ರತಾದಿ ಕರ್ಮಗಳನ್ನು ತೊರೆದು ಕೇವಲ ಬ್ರಹ್ಮನಲ್ಲಿ ಇರುವ ಲೋಕದಲ್ಲಿ ಬ್ರಹ್ಮನ ರೂಪದಲ್ಲಿ ಓಡಾಡುತ್ತಿರುವವನು ಬ್ರಹ್ಮಚಾರಿಯೆಂದು ಹೇಳಲ್ಪಡುವನು.

ಹೀಗೆ ಮೋಕ್ಷದರ್ಮಾದಿಗಳಿಂದ ವಸಿಷ್ಠಾದಿಸ್ಮೃತಿಗಳಿಂದ (ತೆಗೆದುಕೊಳ್ಳಲ್ಪಟ್ಟಿದೆ). ಆದ್ದರಿಂದಲೇ ವಿಷ್ಣುಪುರಾಣಾದಿಗಳಲ್ಲಿ ವೃಥಾ ಕರ್ಮಯೋಗಿಗಳು ಪಾಷಂಡರೆಂದು ನಿಂದಿಸಲ್ಪಟ್ಟಿದ್ದಾರೆ. ಬೋಳುತಲೆಯ ಜನರು ಜಟೆಯನ್ನು ಧರಿಸುವುದು ನಿಷ್ಪ್ರಯೋಜಕ' ಮುಂತಾದುವುಗಳಲ್ಲಿ ಹೇಳಿದೆ.

ವಿವರಣೆ: ಈ ಸಂದರ್ಭದಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾಗಿರುವ ನಂದಲಾಲ್ ಸಿನ್ಹರ ಗ್ರಂಥ 'The Sankhya Plilosophy'ಯಲ್ಲಿ ಇನ್ನೆರಡು ಶ್ಲೋಕಗಳನ್ನು ಸೇರಿಸಲಾಗಿದೆ. F F Hall ಎಂಬುವರು ಪ್ರಕಟಿಸಿರುವ ಗ್ರಂಥದಲ್ಲಿ ಈ ಎರಡು ಶ್ಲೋಕಗಳನ್ನು ಭಾಷ್ಯದಲ್ಲಿ ಸೇರಿಸಿಲ್ಲ. ಅದರಂತೆ ಇಲ್ಲಿ ಆ ಎರಡು ಶ್ಲೋಕಗಳನ್ನು ಸೇರಿಸಲಾಗಿಲ್ಲ.

ಭಾಷ್ಯ: *ನಿಯಮವಿಸ್ಮರಣೇಽಪಿ ಆನರ್ಥಕ್ಯಮಾಹ।*

ಅನುವಾದ: ನಿಯಮಗಳನ್ನು ಮರೆಯುವುದರಿಂದಲೂ ಅನರ್ಥವುಂಟಾಗುವುದು.

ಸೂತ್ರ: ತದ್ವಿಸ್ಮರಣೇಽಪಿ ಭೇಕೀವತ್ ॥ ೧೬ ॥

ಸೂತ್ರಾನುವಾದ: ನಿಯಮವನ್ನು ಮರೆಯುವುದರಿಂದಲೂ (ಅಸಫಲತೆ), ಕಪ್ಪೆಯಂತೆ.

ಭಾಷ್ಯ: *ಸುಗಮಮ್ । ಭೇಕ್ಯಾಶ್ಚೇಯಮಾಖ್ಯಾಯಿಕಾ ಕಶ್ಚಿದ್ ರಾಜಾ ಮೃಗಯಾಂ ಗತೇ ವಿಪಿನೇ ಸುಂದರೀಂ ಕನ್ಯಾಂ ದದರ್ಶ । ಸಾ ಚ ರಾಜಾ ಭಾರ್ಯಾಭಾವಾಯ ಪ್ರಾರ್ಥಿತಾ ಸಮಯಂ ಚಕ್ರೇ । 'ಯದಾ ಮಹ್ಯಂ ತ್ವಯಾ ಜಲಂ ಪ್ರದರ್ಶ್ಯತೇ ತದಾ ಮಯಾಗಂತವ್ಯಂ' ಇತಿ । ಏಕದಾತು ಕ್ರೀಡಯಾ ಪರಿಶ್ರಾಂತಾ ರಾಜಾನಂ ಪಪ್ರಚ್ಛ ಕುತ್ರ ಜಲಂ ಇತಿ। ರಾಜಾಪಿ ಸಮಯಂ ವಿಸ್ಮೃತ್ಯ ಜಲಂ ಅದರ್ಶಯತ್ ತತಃ ಸಾ ಭೇಕರಾಜದುಹಿತಾ*

ಕಾಮರೂಪಿಣೀ ಭೇಕೀ ಭೂತ್ವಾ ಜಲಂ ವಿವೇಶ । ತತಶ್ಚ ರಾಜಾ ಜಾಲಾದಿಭಿಃ ಅನ್ವಿಷ್ಯಾಪಿ ನ ತಾಮವಿಂದತ್ ॥ಇತಿ॥

ಅನುವಾದ: ಸುಲಭ. ಆ ಕಪ್ಪೆಯನ್ನು ಕುರಿತ ಕಥೆ ಹೀಗಿದೆ.

'ಒಬ್ಬ ದೊರೆಯು ಒಮ್ಮೆ ಬೇಟೆಗೆ ಹೋದಾಗ ಕಾಡಿನಲ್ಲಿ ಒಬ್ಬ ಸುಂದರಿಯಾದ ಕನ್ಯೆಯನ್ನು ಕಂಡನು. ಅವಳೂ ರಾಜನಿಂದ 'ನೀನು ನನ್ನನ್ನು ಮದುವೆಯಾಗು' ಎಂದು ಪ್ರಾರ್ಥಿಸಲ್ಪಟ್ಟಳು. ಆಗ ಅವಳೊಂದು ಷರತ್ತನ್ನು ಹಾಕಿದಳು. 'ನೀನು ನನಗೆ ನೀರನ್ನು ತೋರಿಸಿದಲ್ಲಿ ನಾನು ಹೋಗಬೇಕಾಗುವುದು' ಎಂದಳು. ಒಮ್ಮೆ ಕ್ರೀಡೆಯಲ್ಲಿ ಶ್ರಾಂತಳಾದ ಅವಳು 'ನೀರೆಲ್ಲಿದೆ?' ಎಂದು ರಾಜನ್ನು ಕೇಳಿದಳು. ರಾಜನೂ ಸಹ ಷರತ್ತನ್ನು ಮರೆತು ನೀರನ್ನು ತೋರಿಸಿ ಬಿಟ್ಟನು. ಆಗ ಆ ಕಪ್ಪೆಗಳ ಒಡೆಯನ ಮಗಳಾದ, ಕಾಮರೂಪಿಣಿಯಾದ ಅವಳು ಕಪ್ಪೆಯಾಗಿ ಮಾರ್ಪಟ್ಟಳು ಮತ್ತು ನೀರನ್ನು ಪ್ರವೇಶಿಸಿದಳು. ಆಗ ರಾಜನು ಅವಳನ್ನು ಜಾಲಾದಿಗಳಿಂದ ಅವಳನ್ನು ಹುಡುಕಿದರೂ ಅವಳು ದೊರೆಯಲಿಲ್ಲ. ಎಂದು

ಭಾಷ್ಯ: *ಶ್ರವಣವತ್ ಗುರುವಾಕ್ಯಮೀಮಾಂಸಾಯಾಃ ಅಪಿ ಆವಶ್ಯಕತ್ವೇ ಇತಿಹಾಸಮಾಹ ।*

ಅನುವಾದ: (ಗುರೂಪದೇಶವನ್ನು) ಕೇಳುವುದರ ಜೊತೆಗೆ ಗುರುಗಳ ಮಾತಿನ ಚರ್ಚೆಯನ್ನು ಮಾಡಬೇಕು ಎಂಬುದನ್ನು ಕುರಿತು ಒಂದು ಇತಿಹಾಸವನ್ನು ಹೇಳುವರು.

ಸೂತ್ರ: ನೋಪದೇಶಶ್ರವಣೇಽಪಿ ಕೃತಕೃತ್ಯತಾ ಪರಾಮರ್ಶಾದೃತೇ ವಿರೋಚನವತ್ ॥ ೧೭ ॥

ಸೂತ್ರಾನುವಾದ: ಉಪದೇಶವನ್ನು ಕೇಳಿದರೂ ಸಹ ಮನನ ಮಾಡದೆಯೇ ಸಫಲತೆಯು ದೊರೆಯದು, ವಿರೋಚನನಂತೆ

ಭಾಷ್ಯ: *ಪರಾಮರ್ಶೋ ಗುರುವಾಕ್ಯತಾತ್ಪರ್ಯ ನಿರ್ಣಾಯಕೋ ವಿಚಾರಃ । ತಂ ವಿನಾ ಉಪದೇಶವಾಕ್ಯಸ್ಮರಣೇಽಪಿ ತತ್ತ್ವಜ್ಞಾನ ನಿಯಮೋ ನಾಸ್ತಿ । ಪ್ರಜಾಪತೇರುಪದೇಶಶ್ರವಣೇಽಪಿ ಇಂದ್ರ–ವಿರೋಚನಯೋರ್ಮಧ್ಯೇ (ಛಾಂ.೮.೭.೮) ವಿರೋಚನ ಪರಾಮರ್ಶಾಭಾವೇನ ಭ್ರಾಂತತತ್ತ್ವಶ್ರುತೇರಿತ್ಯರ್ಥಃ । ಅತಃ ಗುರೂಪದಿಷ್ಟಸ್ಯ ಮನನಮಪಿ ಕಾರ್ಯಮೇವ ಇತಿ । ದೃಶ್ಯತೇ ಚೇದಾನೀಂ ಅಪಿ ಏಕಸ್ಯೈವ ತತ್ತ್ವಮಸ್ಯುಪದೇಶಸ್ಯ ನಾನಾರೂಪೈಃ ಅರ್ಥೈಃ ಸಂಭಾವನಾ । ಅಖಂಡತ್ವಮವೈಧರ್ಮ್ಯಲಕ್ಷಣಾಭೇದಃ ಅವಿಭಾಗಶ್ಚೇತಿ ।*

ಅನುವಾದ: ಪರಾಮರ್ಶವೆಂದರೆ ಗುರುವಾಕ್ಯದ ತಾತ್ಪರ್ಯವನ್ನು ಅರಿಯಲು ಮಾಡಬೇಕಾದ ಚಿಂತನೆ. ಅದಿಲ್ಲದೆ ಉಪದೇಶ ವಾಕ್ಯವನ್ನು ಕೇಳಿದಾಗಲೂ ತತ್ತ್ವಜ್ಞಾನವಾಗಬೇಕೆಂಬುದೇನಿಲ್ಲ. ಪ್ರಜಾಪತಿಯ ಉಪದೇಶವನ್ನು ಕೇಳಿದ ಮೇಲೂ

ಇಂದ್ರ ಮತ್ತು ವಿರೋಚನರ ನಡುವೆ ಪರಾಮರ್ಶವಾಗದ ಕಾರಣ ವಿರೋಚನನು ಭ್ರಾಂತಿಗೆ ಗುರಿಯಾದನೆಂದು ಕೇಳಿದ್ದೇವೆ. ಆದ್ದರಿಂದ ಗುರುವು ಉಪದೇಶ ಮಾಡಿದ್ದನ್ನು ಪರಾಮರ್ಶೆ ಮಾಡುವುದು ಅಗತ್ಯ. ಈಗಲೂ ಸಹ ತತ್ವಮಸಿ ಎಂಬ ಉಪದೇಶವು ಒಂದೇ ಆದರೂ ಆ ಉಪದೇಶವನ್ನು ನಾನಾರೀತಿಗಳಲ್ಲಿ ಅರ್ಥವನ್ನು ಮಾಡಬಹುದು. ಅಖಂಡತ್ವ, ವೈಧರ್ಮ್ಯವಿಲ್ಲದಿರುವಿಕೆ ಮತ್ತು ಅವಿಭಾಗವನ್ನು ಕಾಣುತ್ತೇವೆ.

ಭಾಷ್ಯ: *ಅತ ಏವ ಚ ಪರಾಮರ್ಶೋ ದೃಶ್ಯತೇ ಇತ್ಯಾಹ ।*

ಅನುವಾದ: ಆದ್ದರಿಂದ ಪರಾಮರ್ಶವು ಕಂಡುಬರುತ್ತದೆ ಎಂದು ಹೇಳಿದೆ.

ಸೂತ್ರ: ದೃಷ್ಟಸ್ತಯೋರಿಂದ್ರಸ್ಯ ॥ ೧೮ ॥

ಸೂತ್ರಾನುವಾದ: ಅವರಿಬ್ಬರಲ್ಲಿ (ಇಂದ್ರ–ವಿರೋಚನರಲ್ಲಿ) ಇಂದ್ರನಿಗೆ (ಆತ್ಮಜ್ಞಾನ ವುಂಟಾಯಿತು) ಎಂದು ಕಂಡುಬಂದಿತು.

ಭಾಷ್ಯ: *ತಚ್ಛಬ್ದೇನೋಕ್ತೋಚ್ಯಮಾನಯೋಃ ಪರಾಮರ್ಶಃ । ತಯೋರಿಂದ್ರ ವಿರೋಚನಯೋರ್ಮಧ್ಯೇ ಪರಾಮರ್ಶಃ ಇಂದ್ರಸ್ಯ ದೃಷ್ಟಶ್ಚೇತ್ಯರ್ಥಃ ।*

ಅನುವಾದ: 'ತತ್' ಶಬ್ದದಿಂದ ಹಿಂದಿನಸೂತ್ರದಲ್ಲಿ ಹೇಳಿದ ಮತ್ತು ಪ್ರಸ್ತುತ ಸೂತ್ರದಲ್ಲಿರುವ ಪರಾಮರ್ಶ ಮಾಡಲ್ಪಟ್ಟಿದೆ. ಅವರಿಬ್ಬರಲ್ಲಿ ಎಂದರೆ ಇಂದ್ರ ವಿರೋಚನರಲ್ಲಿ ಇಂದ್ರನ ಪರಾಮರ್ಶ ಗೋಚರವಾಗುವುದು.

ಭಾಷ್ಯ: *ಸಂಯಗ್ ಜ್ಞಾನಾರ್ಥಿನಾ ಚ ಗುರುಸೇವಾ ಬಹುಕಾಲಂ ಕರ್ತವ್ಯೇತ್ಯಾಹ ।*

ಅನುವಾದ: ಒಳ್ಳೆಯ ಜ್ಞಾನವನ್ನು ಬಯಸುವವನು ಗುರುಸೇವೆಯನ್ನು ಬಹುಕಾಲ ಮಾಡಬೇಕು. ಎಂದು ಹೇಳಿದೆ.

ಸೂತ್ರ: ಪ್ರಣತಿಬ್ರಹ್ಮಚರ್ಯೋಪಸರ್ಪಣಾನಿ ಕೃತ್ವಾ ಸಿದ್ಧಿಃ ಬಹುಕಾಲಾತ್ ತದ್ವತ್ ॥ ೧೯ ॥

ಸೂತ್ರಾನುವಾದ: ಗುರುವಿಗೆ ಪ್ರಣಾಮ, ಬ್ರಹ್ಮಚರ್ಯ ಮತ್ತು ಗುರುಗಳ ಸಮೀಪದಲ್ಲಿರುವುದು ಇವುಗಳನ್ನು ಮಾಡಿ ಬಹಳಕಾಲದ ನಂತರ ಸಿದ್ಧಿಯು ಕೈಗೂಡುವುದು, ಇಂದ್ರನಂತೆ.

ಭಾಷ್ಯ: *ತದ್ವದಿಂದ್ರಸ್ಯೇವಾನ್ಯಸ್ಯಾಪಿ ಗುರೌ ಪ್ರಣತಿವೇದಾಧ್ಯಯನಸೇವಾದೀನ್ ಕೃತ್ವೈವ ಸಿದ್ಧಿಸ್ತತ್ತ್ವಾರ್ಥಸ್ಫೂರ್ತಿರ್ಭವತಿ, ನಾನ್ಯಥೇತಿ ಅರ್ಥಃ ।*
ತಥಾ ಚ ಶ್ರುತಿಃ ।

ಯಸ್ಯ ದೇಹೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥ಇತಿ॥

ಅನುವಾದ: ಇಂದ್ರನಂತೆಯೇ ಬೇರೆಯ ವ್ಯಕ್ತಿಗೂ ಗುರುಗಳಿಗೆ ನಮನ, ವೇದಾಧ್ಯಯನ ಮತ್ತು ಸೇವೆ ಮಾಡಿಯೇ ಸಿದ್ಧಿ, ತತ್ವಾರ್ಥವು ಸ್ಫುರಣವಾಗುವುದು ಮತ್ತು ಉಂಟಾಗುವುದು, ಬೇರೆಯ ರೀತಿಯಿಂದಲ್ಲ ಎಂದರ್ಥ. ಶ್ರುತಿಯೂ ಹೀಗೆ ಹೇಳುತ್ತದೆ– ಯಾರು ಪರಮಾತ್ಮನಲ್ಲಿ ಅಗಾಧವಾದ ಭಕ್ತಿಯನ್ನಿಟ್ಟಿರುವನೋ ಅಷ್ಟೇ ಭಕ್ತಿಯನ್ನು ಗುರುವಿನಲ್ಲಿಯೂ ಹೊಂದಿರುವನೋ, ಅಂತಹ ಮಹಾತ್ಮನ (ಹೃದಯದಲ್ಲಿ) ಗುರುವು ಹೇಳಿದ ಎಲ್ಲ ಶಾಸ್ತ್ರಾರ್ಥಗಳೂ ಬೆಳಗುತ್ತವೆ.

ಸೂತ್ರ: ನ ಕಾಲನಿಯಮೋ ವಾಮದೇವವತ್ ॥ ೨೦ ॥

ಸೂತ್ರಾನುವಾದ: (ಆತ್ಮಜ್ಞಾನಕ್ಕೆ) ಕಾಲದ ನಿಯಮವಿರದು, ವಾಮದೇವನಂತೆ.

ಭಾಷ್ಯ: *ಐಹಿಕಸಾಧನಾದೇವ ಭವತೀತ್ಯಾದಿಜ್ಞಾನೋದಯೇ ಕಾಲನಿಯಮೋ ನಾಸ್ತಿ, ವಾಮದೇವವತ್ । ವಾಮದೇವಸ್ಯ ಜನ್ಮಾಂತರೀಯಸಾಧನೇಭ್ಯೋ ಗರ್ಭೇಽಪಿ ಯಥಾ ಜ್ಞಾನೋದಯಸ್ತಥಾನ್ಯಸ್ಯಾಪೀತ್ಯರ್ಥಃ । ತಥಾ ಚ ಶ್ರುತಿಃ – 'ತದ್ಧೈತತ್ ಪಶ್ಯನ್ನೃಷಿರ್ವಾಮದೇವಃ ಪ್ರತಿಪೇದೇಽಹಂ ಮನುಃ ಅಭವಂ, ಸೂರ್ಯಶ್ಚ, ತದಿದಮಪ್ಯೇತರ್ಹಿ ಯ ಏವಂ ವೇದಾಽಹಂ ಬ್ರಹ್ಮಾಸ್ಮೀತಿ ಸ ಇದಂ ಸರ್ವಂ ಭವತಿ' (ಬೃ.೧.೪.೧೦)–ಇತ್ಯಾದಿರಿತಿ। ಅಹಂ ಮಮರಭವಂ ಇತ್ಯಾದಿಕಂ ಅವೈದರ್ಮ್ಯಲಕ್ಷಣಾಭೇದ–ಪರಂ, ಸರ್ವವ್ಯಾಪಕತಾಖ್ಯ ಬ್ರಹ್ಮತಾಪರಂ ವಾ ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ' ಇತ್ಯಾದಿ ಸ್ಮರಣಾತ್ ।(ಗೀತಾ.೧೧.೪೦) । ಸ ಇದಂ ಸರ್ವಂ ಭವತೀತಿ ತು ಔಪಾಧಿಕಪರಿಚ್ಛೇದಸ್ಯ ಅತ್ಯಂತೋಚ್ಛೇದಪರಮಿತಿ ।*

ಅನುವಾದ: ಐಹಿಕಸಾಧನದಿಂದಲೇ ಆತ್ಮಜ್ಞಾನವುಂಟಾಗುವುದು, ಎಂಬ ಕಾಲನಿಯಮ ವೇನಿಲ್ಲ, ವಾಮದೇವನಂತೆ; ವಾಮದೇವನಿಗಾದರೋ ಜನ್ಮಾಂತರಗಳ ಸಾಧನೆಯಿಂದ ಅವನು ಗರ್ಭದಲ್ಲಿರುವಾಗಲೇ ಜ್ಞಾನೋದಯವಾದಂತೆ ಹಾಗೆಯೇ ಇತರರಿಗೂ ಅದು ಸಾಧ್ಯ. ಶ್ರುತಿಯು ಹೀಗೆ ಹೇಳಿದೆ–'ಋಷಿಯಾದ ವಾಮದೇವನು ನೆನಪು ಮಾಡಿಕೊಂಡನು, ನಾನು ಮನುವಾಗಿದ್ದೆ. ಸೂರ್ಯನೂ ಆಗಿದ್ದೆ. ಹಾಗೇಯೇ ಯಾರು 'ನಾನು ಬ್ರಹ್ಮನು' ಎಂದು ತಿಳಿಯುವನೋ ಅವನು ಇದೆಲ್ಲವೂ ಆಗುವನು. ನಾನು ಮನುವಾಗಿದ್ದೆನು, ಮುಂತಾದ ಅಭೇದ ಧರ್ಮವನ್ನು ಹೊಂದಿರುವ ಅಥವಾ ಎಲ್ಲವನ್ನೂ ವ್ಯಾಪಿಸುವ ಬ್ರಹ್ಮಪದವನ್ನು ಈ ಸ್ಮೃತಿಯಂತೆ ನೆನಪು ಮಾಡಿಕೊಳ್ಳುವನು. 'ನೀನು ಎಲ್ಲವನ್ನೂ ಸೇರುವೆ, ಆದ್ದರಿಂದ ನೀನೇ ಎಲ್ಲವಾಗಿರುವೆ. ಎಂದು ಸ್ಮರಿಸಿಕೊಳ್ಳುವುದರಿಂದ ಎಲ್ಲ ಉಪಾಧಿಗಳ ಆವರಣವನ್ನು ಪೂರ್ಣವಾಗಿ ಹೋಗಲಾಡಿಸಬಲ್ಲರು.

ಭಾಷ್ಯ: *ನನು ಸಗುಣೋಪಾಸನಾಯಾ ಅಪಿ ಜ್ಞಾನಹೇತುತ್ವಶ್ರವಣಾತ್ ತತ ಏವ ಜ್ಞಾನಂ ಭವಿಷ್ಯತಿ, ಕಿಮರ್ಥಂ ದುಷ್ಕರಸೂಕ್ಷ್ಮಯೋಗಚರ್ಯೇತಿ? ತತ್ರಾಹ –*

ಅನುವಾದ: ಜ್ಞಾನವನ್ನು ಪಡೆಯಲು ಸಗುಣೋಪಾಸನೆಯಿಂದಲೂ ಸಾಧ್ಯ ಎಂದು ಕೇಳಿರುವುದರಿಂದ ಅದರಿಂದಲೇ ಜ್ಞಾನ ದೊರೆತೀತು. ಹಾಗಾದರೆ ಈ ದುಷ್ಕರವಾದ ಮತ್ತು ಸೂಕ್ಷ್ಮವಾದ ಯೋಗಚರ್ಯೆ ಏಕೆ? ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ಅಧ್ಯಸ್ತರೂಪೋಪಾಸನಾತ್ ಪಾರಂಪರ್ಯೇಣ ಯಜ್ಞೋಪಾಸಕಾನಾಂ ಇವ ॥ ೨೧ ॥

ಸೂತ್ರಾನುವಾದ: ಅಧ್ಯಾರೋಪಮಾಡಿದ್ದನ್ನು ಉಪಾಸನೆ ಮಾಡುವುದರಿಂದ ಕ್ರಮವಾಗಿ (ಆತ್ಮಜ್ಞಾನ ದೊರೆಯುವುದು); ಯಜ್ಞದ ಉಪಾಸನೆ ಮಾಡುವವರಂತೆ ।

ಭಾಷ್ಯ: *ಸಿದ್ಧಿರಿತ್ಯನುಷಜ್ಯತೇ । ಅಧ್ಯಸ್ತರೂಪೈಃ ಪುರುಷಾಣಾಂ ಬ್ರಹ್ಮವಿಷ್ಣುಹರಾದೀನಾಂ ಉಪಾಸನಾತ್ ಪಾರಂಪರ್ಯೇಣ ಬ್ರಹ್ಮಾದಿ ಲೋಕ ಪ್ರಾಪ್ತಿಕ್ರಮೇಣ ಸತ್ತ್ವಶುದ್ಧಿದ್ವಾರಾ ವಾ ಜ್ಞಾನನಿಷ್ಪತ್ತಿರ್ನ ಸಾಕ್ಷಾತ್। ಯಥಾ ಯಾಜ್ಞಿಕಾನಾಮಿತ್ಯರ್ಥಃ ।*

ಅನುವಾದ: 'ಸಿದ್ಧಿಃ' ಎಂದು ಸೂತ್ರದ ಕೊನೆಯಲ್ಲಿ ಸೇರಿಸಿಕೊಳ್ಳಬೇಕು. ಅಧ್ಯಾಸಗೊಂಡ ರೂಪಗಳಿಂದ ಬ್ರಹ್ಮ–ವಿಷ್ಣು–ಹರರನ್ನು ಜನರು ಉಪಾಸನೆ ಮಾಡುವುದರಿಂದ ಕ್ರಮೇಣ ಬ್ರಹ್ಮಾದಿಲೋಕ ಪ್ರಾಪ್ತಿಯ ಕ್ರಮದಲ್ಲಿ ಅಥವಾ ಸತ್ತ್ವಶುದ್ಧಿಯ ಮೂಲಕ ಸಾಕ್ಷಾತ್ (ಕೂಡಲೆ) ನಿಷ್ಪತ್ತಿಯಾಗದು.

ಭಾಷ್ಯ: *ಬ್ರಹ್ಮಾದಿಲೋಕಪರಂಪರಯಾಪಿ ಜ್ಞಾನನಿಷ್ಪತ್ತೌ ನಾಸ್ತಿ ನಿಯಮ ಇತ್ಯಾಹ.*

ಅನುವಾದ: ಬ್ರಹ್ಮಾದಿ ಲೋಕ ಪರಂಪರೆಯಿಂದಲೂ ಜ್ಞಾನನಿಷ್ಪತ್ತಿಯು ಆಗಬೇಕೆಂಬ ನಿಯಮವಿಲ್ಲ ಎಂದು ಹೇಳಿದ್ದಾರೆ.

ಸೂತ್ರ: ಇತರ ಲಾಭೇಽಪ್ಯಾವೃತ್ತಿಃ ಪಂಚಾಗ್ನಿಯೋಗತೋ ಜನ್ಮಶ್ರುತೇಃ ॥ ೨೨ ॥

ಸೂತ್ರಾನುವಾದ: ಪಂಚಾಗ್ನಿಯೋಗದಿಂದ ಬೇರೆಯ (ಉತ್ತಮ) ಲೋಕಗಳು ದೊರೆತರೂ ಮತ್ತೆ ಹುಟ್ಟುವರು ಎಂದು ಶ್ರುತಿ ಹೇಳುವುದು.

ಭಾಷ್ಯ: *ನಿರ್ಗುಣಾತ್ಮನಃ ಇತರ ಸ್ಯಾಧ್ಯಸ್ತರೂಪಸ್ಯ ಬ್ರಹ್ಮಲೋಕಪರ್ಯಂತಸ್ಯ ಲಾಭೇಪ್ಯಾವೃತ್ತಿರಸ್ತಿ । ಕುತಃ? ದೇವಯಾನಪಥೇನ ಬ್ರಹ್ಮಲೋಕಂ ಗತಸ್ಯಾಪಿ ದ್ಯುಪರ್ಜನ್ಯಧರಾನರಯೋಷಿತ್‌ರೂಪಾಗ್ನಿಪಂಚಕೇ ಪಂಚಾಹುತಿತೋ ಜನ್ಮಶ್ರವಣಾತ್ । ಛಾಂದೋಗ್ಯಪಂಚಮ ಪ್ರಪಾಠಕೇ 'ಅಸೌ ವಾವಲೋಕೇ ಗೌತಮಾಗ್ನಿಃ' (ಛಾಂ.೫.೪.೧) ಇತ್ಯಾದಿನಾ ಇತ್ಯರ್ಥಃ । ಯಚ್ಚ ಬ್ರಹ್ಮಲೋಕಾತ್ ಅನಾವೃತ್ತಿ ವಾಕ್ಯಂ (ವಿ.ಭಾ.೪.೪.೧೭–೨೨) ತತ್ ತತ್ರೈವ ಪ್ರಾಯೇಣ ಉತ್ಪನ್ನಜ್ಞಾನಪುರುಷವಿಷಯಕಮಿತಿ ।*

ಅನುವಾದ: ನಿರ್ಗುಣವಾದ ಆತ್ಮನು ಅಧ್ಯಾಸರೂಪದಲ್ಲಿಬ್ರಹ್ಮಲೋಕದವರೆಗೂ ಪಡೆದರೂ ಮತ್ತೆ ಹಿಂದಿರುಗಬೇಕು. ಏಕೆ? ದೇವಯಾನಪಥದಿಂದ ಬ್ರಹ್ಮಲೋಕಕ್ಕೆ ಹೋದರೂ

ದ್ಯು, ಪರ್ಜನ್ಯ, ಧರಾ, ನರ, ಯೋಷಿತ್ (ಸ್ವರ್ಗ, ಮೋಡ, ಭೂಮಿ, ಮನುಷ್ಯ, ಸ್ತ್ರೀ) ಎಂಬ ಐದು ಅಗ್ನಿಗಳಲ್ಲಿ ಐದು ಆಹುತಿಗಳ ಮೂಲಕ ಜನ್ಮವುಂಟಾಗುವುದು ಎಂದು ಕೇಳಿದ್ದೇವೆ. ಛಾಂದೋಗ್ಯದ ಪಂಚಮ ಪ್ರಪಾಠಕದಲ್ಲಿ 'ಆ ಲೋಕವು, ಗೌತಮ, ಅಗ್ನಿಯು' ಮುಂತಾದುವುಗಳಿಂದ ತಿಳಿದು ಬರುತ್ತದೆ. ಅಲ್ಲದೆ ಬ್ರಹ್ಮಲೋಕದಿಂದ ಹಿಂದಿರುಗದಿರುವ ವಾಕ್ಯವನ್ನು (ವಿಜ್ಞಾನಾಮೃತಭಾಷ್ಯ೪೪, ೧೭–೨೨) ಅಲ್ಲಿಯೇ ಸಾಮಾನ್ಯವಾಗಿ ಜ್ಞಾನಿಯಾದ ಪುರುಷನ ವಿಷಯವನ್ನು ಕುರಿತು ಇರಬೇಕು.

ಭಾಷ್ಯ: *ಜ್ಞಾನನಿಷ್ಪತ್ತಿರ್ವಿರಕ್ತಸ್ಯೈವ ಇತ್ಯತ್ರ ನಿದರ್ಶನಮಾಹ–*

ಸೂತ್ರ: ವಿರಕ್ತಸ್ಯ ಹೇಯಹಾನಮುಪಾದೇಯೋಪಾದಾನಂ ಹಂಸಕ್ಷೀರವತ್ ॥ ೨೩ ॥

ಅನುವಾದ: ಜ್ಞಾನನಿಷ್ಪತ್ತಿಯು ವಿರಕ್ತಪುರುಷನಲ್ಲಿ ಮಾತ್ರ ಸಾಧ್ಯ ಎಂಬುದಕ್ಕೆ ದೃಷ್ಟಾಂತವನ್ನು ನೀಡಲಾಗಿದೆ.

ಸೂತ್ರಾನುವಾದ: ತ್ಯಜಿಸಬೇಕಾದ್ದನ್ನು ತ್ಯಜಿಸುವುದು, ಸ್ವೀಕರಿಸಬೇಕಾದ್ದನ್ನು ಸ್ವೀಕರಿಸುವುದು ವಿರಕ್ತನಿಗೆ ಮಾತ್ರ ಸಾಧ್ಯ, ಹಂಸಕ್ಷೀರದಂತೆ.

ಭಾಷ್ಯ: *ವಿರಕ್ತಸ್ಯೈವ ಹೇಯಾನಾಂ ಪ್ರಕೃತ್ಯಾದೀನಾಂ ಹಾನಂ ಉಪಾದೇಯಸ್ಯ ಚಾತ್ಮನಃ ಉಪಾದಾನಂ ಭವತಿ । ಯಥಾ ದುಗ್ಧಜಲಯೋರೇಕೀಭಾವಾಪನ್ನಯೋರ್ಮಧ್ಯೇಽಸಾರಜಲತ್ಯಾಗೇನ ಸಾರಭೂತಕ್ಷೀರೋಪಾದಾನಂ ಹಂಸಸ್ಯೈವ, ನ ತು ಕಾಕಾದೇರಿತ್ಯರ್ಥಃ।*

ಅನುವಾದ: ವಿರಕ್ತನಾದ ಪುರುಷನು ತ್ಯಾಜ್ಯವಸ್ತುಗಳಾದ ಪ್ರಕೃತಿಯೇ ಮುಂತಾದ ಜಡವಸ್ತುಗಳನ್ನು ತ್ಯಜಿಸುವುದು ಮತ್ತು ಗ್ರಾಹ್ಯವಾದ ವಸ್ತುಗಳನ್ನು ಗ್ರಹಿಸುವುದು ಮಾಡುವನು. ಹೇಗೆ ಒಂದೇ ರೀತಿಯಿರುವ ಹಾಲುನೀರುಗಳ ನಡುವೆ ಸಾರವಿಲ್ಲದ ನೀರನ್ನು ಬಿಟ್ಟು ಸಾರವುಳ್ಳ ಹಾಲನ್ನು ಸೇವಿಸುವುದು ಹಂಸವೊಂದಕ್ಕೇ ಸಾಧ್ಯ, ಕಾಗೆ ಮುಂತಾದುವುಗಳಿಗಲ್ಲ.

ಭಾಷ್ಯ: *ಸಿದ್ಧಪುರುಷಸಂಗಾದಪ್ಯೇತದುಭಯಂ ಭವತೀತ್ಯಾಹ ।*

ಸೂತ್ರ: ಲಬ್ಧಾತಿಶಯಯೋಗಾದ್ವಾ ತದ್ವತ್ ॥ ೨೪ ॥

ಅನುವಾದ: ಸಿದ್ಧಪುರುಷರ ಸಂಗದಿಂದಲೂ ಇವೆರಡೂ ಉಂಟಾಗುತ್ತವೆ ಎಂದು ಹೇಳಿದೆ.

ಸೂತ್ರಾನುವಾದ: ಯೋಗಸಾಧನೆಯಿಂದ ಅತಿಶಯ ಸ್ಥಾನ ಪಡೆದವರ ಸಂಪರ್ಕ ದಿಂದಲೂ ಹಾಗೆಯೇ ಆಗುವುದು.

ಭಾಷ್ಯ: *ಲಬ್ಧಃ ಅತಿಶಯಃ ಪರಾಕಾಷ್ಠಾ ಯೇನ ತತ್ಸಂಗಾದಪ್ಯುಕ್ತಂ ಭವತಿ ಹಂಸವದೇವೇತ್ಯರ್ಥಃ । ಯಥಾ ಅಲರ್ಕಸ್ಯ*

ದತ್ತಾತ್ರೇಯಸಂಗಮಮಾತ್ರಾದೇವ ಸ್ವಯಂ ವಿವೇಕಃ ಪ್ರಾದುರಭೂದಿತ್ಯರ್ಥಃ । (ಮಾರ್ಕ.ಪು.ಅ. ೩೮–೪೩)

ಅನುವಾದ: ಲಬ್ಧಾತಿಶಯವೆಂದರೆ ಯಾರು ಪರಾಕಾಷ್ಠೆಯನ್ನು ಸೇರಿರುವರೋ ಅವರು, ಅವರ ಸಂಪರ್ಕದಿಂದಲೂ ಮೇಲೆ ಹೇಳಿದ (ವಿವೇಕಜ್ಞಾನ)ವನ್ನು ಪಡೆಯುವರು; ಹಂಸದಂತೆ. ಹೇಗೆ ಅಲರ್ಕನು ದತ್ತಾತ್ರೇಯನ ಸಂಪರ್ಕವನ್ನು ಪಡೆದ ಮಾತ್ರದಿಂದಲೇ ತಾನಾಗಿಯೇ ವಿವೇಕವು ಉಂಟಾಯಿತು.

ಭಾಷ್ಯ: *ರಾಗಿಸಂಗೋ ನ ಕಾರ್ಯ ಇತ್ಯಾಹ–*

ಸೂತ್ರ: ನ ಕಾಮಚಾರಿತ್ವಂ ರಾಗೋಪಹತೇ ಶುಕವತ್ ॥೨೫॥

ಅನುವಾದ: (ವಿವೇಕಜ್ಞಾನಾರ್ಥಿಯು) ರಾಗೀಪುರುಷರ ಸಂಪರ್ಕ ಮಾಡಕೂಡದು, ಗಿಣಿಯಂತೆ.

ಭಾಷ್ಯ: *ರಾಗೋಪಹತೇ ಪುರುಷೇ ಕಾಮತಃ ಸಂಗೋ ನ ಕರ್ತವ್ಯಃ । ಶುಕವತ್। ಯಥಾ ಶುಕಪಕ್ಷೀ ಪ್ರಕೃಷ್ಟರೂಪ ಇತಿ ಕೃತ್ವಾ ಕಾಮಚಾರಂ ನ ಕರೋತಿ, ರೂಪಲೋಲುಪೈರ್ಬಂಧನಭಯಾತ್, ತದ್ವದಿತ್ಯರ್ಥಃ।*

ಅನುವಾದ: ರಾಗದಿಂದ ತುಂಬಿರುವ ಪುರುಷನಲ್ಲಿ ಇಷ್ಟಪಟ್ಟು ಸಂಪರ್ಕವನ್ನಿಟ್ಟು ಕೊಳ್ಳಬಾರದು, ಗಿಣಿಯಂತೆ. ಹೇಗೆ ಶುಕಪಕ್ಷಿಯು ಸುಂದರವಾಗಿದ್ದೇನೆಂದು ಭಾವಿಸಿ ಕಾಮಚಾರಿಯಾಗಿರದೋ ರೂಪವನ್ನು ಬಯಸುವವರು ಕಟ್ಟಿಹಾಕಿಯಾರೆಂಬ ಭಯವಿರುವುದೋ, ಅದೇ ರೀತಿಯಾಗಿ (ರಾಗಿಗಳಿಂದ ದೂರವಿರಬೇಕು)

ಭಾಷ್ಯ: *ರಾಗಿಸಂಗೇ ತು ದೋಷಮಾಹ ।*

ಅನುವಾದ: ರಾಗಿಸಂಗದಲ್ಲಿ ಇರುವ ದೋಷವೇನು.?

ಸೂತ್ರ: ಗುಣಯೋಗಾತ್ ಶುಕವತ್ ॥ ೨೬ ॥

ಸೂತ್ರಾನುವಾದ: ಗುಣವಿರುವಾಗ ಬಂಧನವಿರುವುದು ಗಿಣಿಯಂತೆ.

ಭಾಷ್ಯ: *ತೇಷಾಂ ಸಂಗೇ ತು ಗುಣಯೋಗಾತ್ ತದೀಯರಾಗಾದಿಯೋಗಾತ್ ಬದ್ಧಃ ಸ್ಯಾತ್, ಶುಕವದೇವ। ಯಥಾ ಶುಕಪಕ್ಷೀ ವ್ಯಾಧಸ್ಯಗುಣೈಃ ರಜ್ಜುಭಿರ್ಬದ್ಧೋ ಭವತಿ, ತದ್ವದಿತ್ಯರ್ಥಃ । ಅಥವಾ ಗುಣಿತಯಾ ಗುಣಲೋಲುಪೈಃ ಬದ್ಧಃ ಭವತಿ, ಶುಕವದಿತ್ಯರ್ಥಃ । ಅತ್ರೈವೋಕ್ತಂ ಸೌಭರಿಣಾ ।*

ಅನುವಾದ: ರಾಗೀ ಪುರುಷರೊಡನೆ ಸಂಪರ್ಕವಿಡುವುದರಿಂದ ಅವರ ರಾಗಗಳೇ ಮೊದಲಾದವುಗಳಿಂದ ಬದ್ಧರಾದಾರು, ಗಿಣಿಯಂತೆ, ಹೇಗೆ ಶುಕಪಕ್ಷಿಯು ಬೇಟೆಗಾರನ ಬಲೆಯಲ್ಲಿ ಸಿಕ್ಕಿ ಬೀಳುವುದೋ ಹಾಗೆ. ಅಥವಾ ಗುಣವಂತರಾದ

ಕಾರಣ ಗುಣಬಯಸುವವನು ಸಿಕ್ಕಿಬೀಳುವಂತೆ ಮುಮುಕ್ಷುವೂ ಸಿಕ್ಕಿಬೀಳುವನು. ಈ ವಿಷಯದಲ್ಲಿ ಆಚಾರ್ಯರು ಹೀಗೆ ವಿವರಿಸಿದ್ದಾನೆ.

ಭಾಷ್ಯ: *ಸ ಮೇ ಸಮಾಧಿರ್ಜಲವಾಸ ಮಿತ್ರ ಮತ್ಸ್ಯಸ್ಯ ಸಂಗಾತ್ ಸಹಸೈವ ನಷ್ಟಃ। ಪರಿಗ್ರಹಃ ಸಂಗಕೃತೋ ಮಮಾಯಂ ಪರಿಗ್ರಹೋತ್ಥಾಶ್ಚ ಮಹಾವಿಧಿತ್ಸಾಃ ॥ಇತಿ॥ (ವಿ.ಪು.೪.೨.೪೮)*

ಅನುವಾದ: ನೀರಿನಲ್ಲಿ ವಾಸಮಾಡುವ ಮಿತ್ರನಾದ ಮೀನಿನ ಸಹವಾಸದಿಂದ ನನ್ನ ಸಮಾಧಿಯು ನಷ್ಟವಾಯಿತು. ಸಂಪರ್ಕದ ಫಲವಾಗಿ ಸ್ನೇಹ ಉಂಟಾದುದು. ಸಂಪರ್ಕದಿಂದಲೇ ದೊಡ್ಡ ಕೆಲಸ ಮಾಡಬೇಕೆಂಬ ಇಚ್ಛೆಯೂ ಉಂಟಾಗುವುದು.

ಭಾಷ್ಯ: *ವೈರಾಗ್ಯಸ್ಯ ಅಪಿ ಉಪಾಯಂ ಅವಧಾರಯತಿ ದ್ವಾಭ್ಯಾಮ್ ।*

ಅನುವಾದ: ಮುಂದಿನ ಎರಡು ಸೂತ್ರಗಳಿಂದ ವೈರಾಗ್ಯದ ಉಪಾಯವನ್ನು ನಿರ್ಧರಿಸುತ್ತಾರೆ.

ಸೂತ್ರ: ನ ಭೋಗಾದ್ರಾಗಶಾಂತಿರ್ಮುನಿವತ್ ॥ ೨೭ ॥

ಸೂತ್ರಾನುವಾದ: ಭೋಗದಿಂದ ತೀವ್ರಾಸಕ್ತಿಯು ಶಾಂತವಾಗದು, ಮುನಿಯಂತೆ.

ಭಾಷ್ಯ: *ಯಥಾ ಮುನೇಃ ಸೌಭರೇಃ ಭೋಗಾನ್ನ ರಾಗಶಾಂತಿರಭೂತ್ ಏವಂ ಅನ್ಯೇಷಾಮಪಿ ನ ಭವತಿ ಇತ್ಯರ್ಥಃ । ತದುಕ್ತಂ ಸೌಭರಿಣೈವ–*

ಅನುವಾದ: ಹೇಗೆ ಮುನಿಯಾದ ಸೌಭರಿಗೆ ಭೋಗದಿಂದ ರಾಗವು ಶಾಂತವಾಗಲಿಲ್ಲವೋ ಹಾಗೆಯೇ ಇತರರಲ್ಲೂ ಆಗದು ಎಂದರ್ಥ. ಅದನ್ನು ಸೌಭರಿಯೇ ಹೇಳುವನು.

ಭಾಷ್ಯ: *ಆಮೃತ್ಯುತೋ ನೈವ ಮನೋರಥಾನಾಂ ಅಂತೋಽಸ್ತಿ ವಿಜ್ಞಾತಮಿದಂ ಮಯಾದ್ಯ । ಮನೋರಥಾಸಕ್ತಿಪರಸ್ಯ ಚಿತ್ತಂ ನ ಜಾಯತೇವೈ ಪರಮಾರ್ಥಸಂಗಿ ॥ಇತಿ॥ (ವಿ.ಪು.೪.೨.೪೭) ಅಪಿ ತು–*

ಅನುವಾದ: ಮೃತ್ಯುವು ಬರುವವರೆಗೂ ಮನೋರಥಗಳಿಗೆ ಕೊನೆಯಿಲ್ಲ ಎಂದು ನನಗೆ ಇಂದು ಅರಿವಾಗಿದೆ. ಮನೋರಥಗಳಲ್ಲಿಯೇ ಪೂರ್ಣವಾಗಿ ಆಸಕ್ತನಾಗಿರುವವನ ಚಿತ್ತವು ಪರಮಾರ್ಥದತ್ತ ಒಲಿಯದು. ಅಲ್ಲದೆ–

ಸೂತ್ರ: ದೋಷದರ್ಶನಾದುಭಯೋಃ ॥ ೨೮ ॥

ಸೂತ್ರಾನುವಾದ: (ಪ್ರಕೃತಿ ಮತ್ತು ಅದರ ಪರಿಣಾಮ) ಇವೆರಡರಲ್ಲಿ ದೋಷವನ್ನು ಕಾಣುವುದರಿಂದ (ರಾಗಶಾಂತಿಯಾಗುವುದು)

ಭಾಷ್ಯ: *ಉಭಯೋಃ ಪ್ರಕೃತಿ ತತ್ಕಾರ್ಯಯೋಃ ಪರಿಣಾಮಿತ್ವ ದುಃಖಾತ್ಮಕತ್ವಾದಿ ದೋಷದರ್ಶನಾದೇವ ರಾಗಶಾಂತಿರ್ಭವತಿ, ಮುನಿವದ್ ಏವೇತ್ಯರ್ಥಃ। ಸೌಭರೇರ್ಹಿ ಸಂಗದೋಷದರ್ಶನಾತ್ ಏವ ಸಂಗೇ ವೈರಾಗ್ಯಂ ಶ್ರೂಯತೇ ।*

ಅನುವಾದ: ಪ್ರಕೃತಿ ಮತ್ತು ಅದರ ಕಾರ್ಯಗಳು ಎರಡರಲ್ಲೂ ಪರಿಣಾಮಿತ್ವ ಮತ್ತು ದುಃಖಾತ್ಮಕತ್ವಾದಿ ದೋಷಗಳನ್ನು ಕಂಡಿರುವುದರಿಂದ ರಾಗಶಾಂತಿಯಾಗುವುದು; ಮುನಿಯಂತೆ ಎಂದು ಅರ್ಥ. ಸೌಭರಿಯ ಸಂಗದೋಷವನ್ನು ಕಾಣಬಲ್ಲೆವಾದ್ದರಿಂದ ಸಂಗದ ಬಗ್ಗೆ ವೈರಾಗ್ಯವುಂಟಾಗುವುದು ಎಂದು ಕೇಳಿದ್ದೇವೆ.

ಭಾಷ್ಯ: *ದುಃಖಂ ಯದೇವೈಕಶರೀರಜನ್ಮಶತಾರ್ಧಸಂಖ್ಯಂ ತದಿದಂ ಪ್ರಸೂತಮ್ ।*
ಪರಿಗ್ರಹೇಣ ಕ್ಷಿತಿಪಾತ್ರಜಾನಾಂ ಸುತೈರನೇಕೈರ್ಬಹುಲೀಕೃತಂ ತತ್ । ಇತಿ ।
(ವಿ.ಪು.೪.೨.೪೯)

ಅನುವಾದ: ಒಂದು ಶರೀರದಲ್ಲಿ ಜನ್ಮ ಪಡೆಯುವುದೇ ದುಃಖಕ್ಕಾಗಿ ಮತ್ತು ಈಗ ನೂರೈವತ್ತು ಮಕ್ಕಳನ್ನು ಪಡೆದಿದ್ದೇನೆ. ನಾನು ಈ ರಾಜಕುಮಾರಿಯರನ್ನು ವಿವಾಹವಾಗಿ ಅನೇಕ ಮಕ್ಕಳ ಮೂಲಕ ಅದನ್ನು ಹೆಚ್ಚಿಸಿ ಬಿಟ್ಟಿದ್ದೇನೆ.

ಭಾಷ್ಯ: *ಸಂಗಾದಿದೋಷೋಪಹತಸ್ಯೋಪದೇಶಗ್ರಹಣೇ ಅಪಿ ಅನಧಿಕಾರಮಾಹ ।*

ಸೂತ್ರ: ನ ಮಲಿನ ಚೇತಸ್ಯುಪದೇಶ ಬೀಜಪ್ರರೋಹೋಽಜವತ್ ॥ ೨೮ ॥

ಅನುವಾದ: ಸಂಪರ್ಕಾದಿ ದೋಷಗಳಿಂದ ಕಲುಷಿತವಾದ ವ್ಯಕ್ತಿಯ ಉಪದೇಶವನ್ನು ಗ್ರಹಿಸಲು ಅಧಿಕಾರಿಯಾಗಲಾರ.

ಸೂತ್ರಾನುವಾದ: ಮಲಿನವಾದ ಚಿತ್ತದಲ್ಲಿ ಉಪದೇಶಾತ್ಮಕವಾದ ಬೀಜ ಹುಟ್ಟಲಾರದು, ಅಜನಂತೆ.

ಭಾಷ್ಯ: *ಉಪದೇಶರೂಪಂ ಯಜ್ಞಾ ನ ವೃಕ್ಷಸ್ಯ ಬೀಜಂ ತಸ್ಯಾಂಕುರೋಽಪಿ ರಾಗಾದಿಮಲಿನಚಿತ್ತೇ ವಸಿಷ್ಠೇನೋಕ್ತಸ್ಯ ಅಪ್ಯುಪದೇಶಬೀಜಸ್ಯ ನಾಂಕುರ ಉತ್ಪನ್ನ ಇತ್ಯರ್ಥಃ । ಕಿಂ ಬಹುನಾ*

ಅನುವಾದ: ಜ್ಞಾನರೂಪದ ವೃಕ್ಷದ ಉಪದೇಶವೆಂಬ ಬೀಜವು ಅಂಕುರವೂ ರಾಗಾದಿಗಳಿಂದ ಮಲಿನಗೊಂಡ ಚಿತ್ತದಲ್ಲಿ ಬೆಳೆಯದು, ಅಜನಂತೆ। ಅಜನೆಂಬ ದೊರೆಯ ಮನಸ್ಸು ಪತ್ನಿಯ ಶೋಕದಿಂದ ಆವರಿಸಲ್ಪಟ್ಟಾಗ ವಸಿಷ್ಠನು ಹೇಳಿದ ಉಪದೇಸವೂ ಸಹ ಬೀಜಕ್ಕೆ ಅಂಕುರವು ಉತ್ಪನ್ನವಾದಂತೆ (ಫಲಕಾರಿ) ಆಗಲಿಲ್ಲ. ಹೆಚ್ಚೇನು.

ಸೂತ್ರ: ನಾಭಾಸಮಾತ್ರಮಪಿ ಮಲಿನ ದರ್ಪಣವತ್ ॥ ೨೯ ॥

ಸೂತ್ರಾನುವಾದ: ಕೊಳಕಾದ ಕನ್ನಡಿಯಂತೆ ಚಿತ್ತದ ಮೇಲೆ ಆಭಾಸ ಮಾತ್ರವೂ ಆಗದು.

ಭಾಷ್ಯ: *ಆಪಾತಜ್ಞಾನಮಪಿ ಮಲಿನ ಚೇತಸಿ ಉಪದೇಶಾನ್ನ ಜಾಯತೇ ವಿಷಯಾಂತರಸಂಚಾರಾದಿಭಿಃ ಪ್ರತಿಬಂಧಾತ್ । ಯಥಾ ಮಲೈಃ ಪ್ರತಿಬಂಧಾನ್ಮಲಿನದರ್ಪಣೇಽರ್ಥೋ ನ ಪ್ರತಿಬಿಂಬತಿ ತದ್ವದಿತ್ಯರ್ಥಃ ।*

ಅನುವಾದ: ಅಯಥಾರ್ಥಜ್ಞಾನವೂ ಸಹ ಮಲಿನವಾದ ಮನಸ್ಸಿನಲ್ಲಿ ಇತರ ವಿಷಯಗಳೂ ಮೂಡುವುವು ಮತ್ತು ಜ್ಞಾನೋತ್ಪತ್ತಿಗೆ ಪ್ರತಿಬಂಧವುಂಟು ಮಾಡುವುವು. ಹೇಗೆ

ಜ್ಞಾನವು ಪ್ರತಿ ಬಂಧಕ್ಕೊಳಗಾಗಿ ಕೊಳೆಯಿಂದ ಮಲಿನವಾದ ಕನ್ನಡಿಯಲ್ಲಿ ಹೇಗೆ ವಸ್ತುವು ಸರಿಯಾಗಿ ಪ್ರತಿಬಿಂಬಿತವಾಗುವುದಿಲ್ಲವೋ ಹಾಗೆ.

ಭಾಷ್ಯ: *ಯದಿ ವಾ ಕಿಂಚಿಜ್ಜ್ಞಾನಂ ಜಾಯೇತ, ತಥಾಪಿ ಉಪದೇಶಾನುರೂಪಂ ನ ಭವೇದಿತ್ಯಾಹ ।*

ಅನುವಾದ: ಅಥವಾ ಸ್ವಲ್ಪ ಜ್ಞಾನವು ಉಂಟಾದರೂ, ಉಪದೇಶಕ್ಕೆ ಅನುಗುಣವಾಗಿ ಅದು ಇರಲಾರದು ಎಂದು ಹೀಗೆ ಹೇಳಿದ್ದಾರೆ.

ಸೂತ್ರ: ನ ತಜ್ಜಸ್ಯಾಪಿ ತದ್ರೂಪತಾ ಪಂಕಜಮ್ ॥ ೩೧ ॥

ಸೂತ್ರಾನುವಾದ: (ಉಪದೇಶದಿಂದ) ಜ್ಞಾನವುಂಟಾದರೂ ಅದು ಅದಕ್ಕೆ ಅನುಗುಣವಾಗಿ ಇರದು, ಪಂಕಜದಂತೆ.

ಭಾಷ್ಯ: *ತಸ್ಮಾದುಪದೇಶಾಜ್ಜಾತಸ್ಯಾಪಿ ಜ್ಞಾನಸ್ಯ ಉಪದೇಶಾನುರೂಪತಾ ನ ಭವತಿ। ಸಾಮಗ್ರ್ಯೇಣ ಅನವಬೋಧಾತ್, ಪಂಕಜವತ್ । ಯಥಾ ಬೀಜಸ್ಯೋತ್ತಮತ್ವೇಽಪಿ ಪಂಕದೋಷಾತ್ ಬೀಜಾನುರೂಪತಾ ಪಂಕಜಸ್ಯ ನ ಭವತಿ, ತದ್ವದಿತ್ಯರ್ಥಃ । ಪಂಕಜಸ್ಥಾನೀಯಂ ಶಿಷ್ಯಚಿತ್ತಮ್ ।*

ಅನುವಾದ: ಆದ್ದರಿಂದ ಉಪದೇಶದಿಂದ ಜ್ಞಾನವು ಉಂಟಾದರೂ ಉಪದೇಶಕ್ಕೆ ಅನುಗುಣವಾಗಿ ಆಗದು; ಸಮಗ್ರವಾಗಿ ಅರಿವು ದೊರೆಯದ ಕಾರಣ, ಪಂಕಜದಂತೆ ಬೀಜವು ಒಳ್ಳೆಯದಾದರೂ ಕೆಸರಿನಲ್ಲಿ ದೋಷವಿರುವ ಕಾರಣ ಬೀಜಕ್ಕೆ ಅನುಗುಣವಾಗಿ ಪಂಕಜವಿರಲಾರದು, ಅದರಂತೆ ಕೆಸರಿನ (ದೋಷದಂತೆ) ಶಿಷ್ಯನ ಚಿತ್ತವಿರುವುದು.

ಭಾಷ್ಯ: *ನನು ಬ್ರಹ್ಮಲೋಕಾದಿಷ್ವೈಶ್ವರ್ಯೇಣ ಪುರುಷಾರ್ಥತಾಸಿದ್ಧ್ಯಾ ಕಿಮರ್ಥಮೇತಾವತಾ ಪ್ರಯಾಸೇನ ಮೋಕ್ಷಾಯ ಜ್ಞಾನನಿಷ್ಪಾದನಂ, ತತ್ರಾಹ.*

ಅನುವಾದ: ಬ್ರಹ್ಮಲೋಕಾದಿಗಳಲ್ಲಿ ಐಶ್ವರ್ಯವನ್ನು ಪಡೆದಂತೆ ಪುರುಷಾರ್ಥತೆಯು ಸಿದ್ಧವಾಗುವುದರಿಂದ ಇಷ್ಟೊಂದು ಪ್ರಯಾಸದಿಂದ ಮೋಕ್ಷಕ್ಕಾಗಿ ಜ್ಞಾನವನ್ನು ಪಡೆಯುವುದರ ಅಗತ್ಯವೇನು? ಅದಕ್ಕೆ ಹೀಗೆ ಹೇಳಿದ್ದಾರೆ:

ಸೂತ್ರ: ನ ಭೂತಯೋಗೇಽಪಿ ಕೃತಕೃತ್ಯತೋಪಾಸ್ಯಸಿದ್ಧಿವತ್ ಉಪಾಸ್ಯ ಸಿದ್ಧಿವತ್ ॥ ೩೨ ॥

ಸೂತ್ರಾನುವಾದ: ಉಪಾಸನೆಯನ್ನು ಮಾಡಿದವರನ್ನು ಪಡೆದಂತೆ ಮಂಗಳಕರವಾದ ಸ್ಥಾನವನ್ನು ಪಡೆದರೂ ಫಲವನ್ನು ಪಡೆದಂತಾಗದು.

ಭಾಷ್ಯ: *ಐಶ್ವರ್ಯಯೋಗೇಽಪಿ ಕೃತಕೃತ್ಯತಾ ಕೃತಾರ್ಥತಾ ನಾಸ್ತಿ । ಕ್ಷಯಾತಿಶಯದುಃಖೈರನುಗಮಾತ್ ಉಪಾಸ್ಯಸಿದ್ಧಿವತ್ ।*

ಯಥೋಪಾಸ್ಯಾನಾಂ ಬ್ರಹ್ಮಾದೀನಾಂ ಸಿದ್ಧಿಯೋಗೇಽಪಿ ನ ಕೃತಕೃತ್ಯತಾ । ತೇಷಾಮಪಿ ಯೋಗನಿದ್ರಾದೌ ಯೋಗಾಭ್ಯಾಸಶ್ರವಣಾತ್ । ತಥೈವ ತದುಪಾಸನಯಾ ಪ್ರಾಪ್ತತದೈಶ್ವರ್ಯಸ್ಯಾಪೀತ್ಯರ್ಥಃ । ಉಪಾಸ್ಯಸಿದ್ಧಿವದಿತಿ ವೀಪ್ಸಾಽಧ್ಯಾಯಸಮಾಪ್ತೌ ।

ಅನುವಾದ: ಐಶ್ವರ್ಯದ ಪ್ರಾಪ್ತಿಯಾದರೂ 'ಕೃತಕೃತ್ಯತೆ' ಎಂದರೆ ಕೃತಾರ್ಥತೆಯು ಉಂಟಾಗದು. ಏಕೆಂದರೆ ಅದು ಕಡಿಮೆಯಾದಂತೆ ದುಃಖ ಹಿಂಬಾಲಿಸುವುದು (ಉಪಾಸ್ಯ) ದೇವತೆಯು ಸಿದ್ಧವಾದಂತೆ. ಆದರೆ ಉಪಾಸ್ಯರಾದ ಬ್ರಹ್ಮಾದಿಗಳು ಸಿದ್ಧಿಸಿದರೂ ಸಾಫಲ್ಯವಿರದು. ಅವರೂ ಸಹ ಯೋಗನಿದ್ರಾದಿಗಳಲ್ಲಿ ಯೋಗಾಭ್ಯಾಸ ದಲ್ಲಿ ತೊಡಗಿರುತ್ತಾರೆ. ಹಾಗೆಯೇ ಅವರನ್ನು ಉಪಾಸನೆ ಮಾಡುವುದರಿಂದ ಆಯಾ ಐಶ್ವರ್ಯಗಳನ್ನು ಪಡೆಯುವರು ಎಂದರ್ಥ. ಉಪಾಸ್ಯಸಿದ್ಧಿ ಎಂಬ ಪದವನ್ನು ಎರಡು ಬಾರಿ ಹೇಳಿರುವುದು ಅಧ್ಯಾಯದ ಅಂತ್ಯದ ಸೂಚಕವಾಗಿ.

ಭಾಷ್ಯ: *ಅಧ್ಯಾಯತ್ರಿತಯೋಕ್ತಸ್ಯ ವಿವೇಕಸ್ಯಾಂತರಂಗಕಮ್ । ಆಖ್ಯಾಯಿಕಾಭಿಃ ಸಂಪ್ರೋಕ್ತಮತ್ರಾಧ್ಯಾಯೇ ಸಮಾಸತಃ ॥*

ಅನುವಾದ: ಮೊದಲ ಮೂರು ಅಧ್ಯಾಯಗಳಲ್ಲಿ ಹೇಳಿರುವ ವಿವೇಕಜ್ಞಾನದ ಅಂತರಂಗ ಸಾಧನವನ್ನು ಆಖ್ಯಾಯಿಕೆಗಳಿಮದ ಈ ಅಧ್ಯಾಯದಲ್ಲಿ ಸಂಕ್ಷೇಪವಾಗಿ ಹೇಳಲಾಗಿದೆ.

ಇದು ಶ್ರೀ ವಿಜ್ಞಾನಭಿಕ್ಷುವು ರಚಿಸಿದ ಕಪಿಲಸಾಂಖ್ಯಪ್ರವಚನದ ಭಾಷ್ಯದಲ್ಲಿ ಆಖ್ಯಾಯಿಕೆಯೆಂಬ ನಾಲ್ಕನೆಯ ಅಧ್ಯಾಯವು

ಅಥ ಪಂಚಮಃ ಅಧ್ಯಾಯಃ

ಪರಪಕ್ಷನಿರ್ಣಯವೆಂಬ ಐದನೆಯ ಅಧ್ಯಾಯ

ಭಾಷ್ಯ: *ಸ್ವಶಾಸ್ತ್ರಸಿದ್ಧಾಂತಃ ಪರ್ಯಾಪ್ತಃ । ಇತಃ ಪರಂ ಸ್ವಶಾಸ್ತ್ರೇ ಪರೇಶಾಂ ಪೂರ್ವಪಕ್ಷಾನಪಾಕರ್ತುಂ ಪಂಚಮಾಧ್ಯಾಯ ಆರಭ್ಯತೇ । ತತ್ರ ಆದೌ ಆದಿಸೂತ್ರೇಽರ್ಥಶಬ್ದೇನ(ಸಾಂ.ಸೂ.೧.೧) ಯನ್ಮಂಗಲಂ ಕೃತಂ ತದ್ ವ್ಯರ್ಥಂ ಇತಿ ಆಕ್ಷೇಪಂ ಸಮಾಧತ್ತೇ. ।*

ಅನುವಾದ: ಸ್ವಶಾಸ್ತ್ರದ (ಸಾಂಖ್ಯಶಾಸ್ತ್ರದ) ಸಿದ್ಧಾಂತವು ಪೂರ್ಣವಾಗಿದೆ. ಇನ್ನು ಮುಂದೆ ನಮ್ಮ ಶಾಸ್ತ್ರದಲ್ಲಿ ಇತರರ ಪೂರ್ವಪಕ್ಷಗಳನ್ನು ನಿರಾಕರಿಸಲು ಐದನೆಯ ಅಧ್ಯಾಯ ಆರಂಭಿಸಲ್ಪಟ್ಟಿದೆ. ಅದರಲ್ಲಿ ಮೊದಲು ಮೊದಲ ಸೂತ್ರದಲ್ಲಿ ಅಥ ಶಬ್ದದಿಂದ ಮಾಡಿದ ಮಂಗಳವು ವ್ಯರ್ಥವೆಂಬ ಆಕ್ಷೇಪದ ಸಮಾಧಾನವನ್ನು ಹೇಳುವರು.

ಸೂತ್ರ: ಮಂಗಳಾಚರಣಂ ಶಿಷ್ಟಾಚಾರಾತ್ ಫಲದರ್ಶನಾತ್ ಶ್ರುತಿತಶ್ಚೇತಿ ॥ ೧ ॥

ಅನುವಾದ: ಮಂಗಳಾಚರಣೆಯು (ಅವಶ್ಯಕ) ಶಿಷ್ಟಾಚಾರದ ಕಾರಣ, ಫಲ ಕೊಡುವುದೆಂದು, ಶ್ರುತಿ (ಪ್ರಮಾಣ)ದಿಂದಲೂ (ಮಾಡಲ್ಪಟ್ಟಿದೆ).

ಭಾಷ್ಯ: *ಮಂಗಲಾಚರಣಂ ಯತ್ ಕೃತಂ ತಸ್ಯೈತ್ರೈಃ ಪ್ರಮಾಣೈಃ ಕರ್ತವ್ಯತಾಸಿದ್ಧಿರಿತ್ಯರ್ಥಃ । ಇತಿ ಶಬ್ದೋ ಹೇತ್ವಂತರಾಕಾಂಕ್ಷಾನಿರಾಸಾರ್ಥಃ।*

ಅನುವಾದ: ಮಂಗಲಾಚರಣೆಗೆ ಈ ಪ್ರಮಾಣಗಳಿಂದ ಮಾಡಲೇಬೇಕೆಂಬ ವಿಷಯವು ಪ್ರಮಾಣಗಳಿಂದ ಸಿದ್ಧವಾಗುತ್ತದೆ. ಇತಿ ಶಬ್ದವು ಬೇರೆಯ ಕಾರಣವನ್ನು ನಿರಾಕರಿಸಲು ಹೇಳಲ್ಪಟ್ಟಿದೆ.

ಭಾಷ್ಯ: *ಈಶ್ವರಾಸಿದ್ಧೇಃ ಇತಿ ಯದುಕ್ತಂ (ಸಾಂ.ಸೂ.೧.೯೨) ತತ್ರ ಉಪಪದ್ಯತೇ, ಕರ್ಮಫಲದಾತೃತಯಾ ತತ್ಸಿದ್ಧೇರಿತಿ ಯೇ ಪೂರ್ವಪಕ್ಷಿಣಃ ತಾನ್ನಿರಾಕರೋತಿ ।*

ಅನುವಾದ: ಈಶ್ವರಾಸಿದ್ಧೇಃ ಸೂತ್ರದಲ್ಲಿ ಹೇಳಿರುವುದು ದೊರೆಯದು, 'ಕರ್ಮಫಲವನ್ನು ನೀಡುವುದರಿಂದ ಅದು ಸಿದ್ಧವಾಗುವುದರಿಂದ ಎಂದು ಪೂರ್ವಪಕ್ಷಿಯ ಈ ಆಕ್ಷೇಪವನ್ನು ನಿರಾಕರಿಸಲಾಗಿದೆ.

ಸೂತ್ರ: ನೇಶ್ವರಾಧಿಷ್ಠಿತೇ ಫಲನಿಷ್ಪತ್ತಿಃ ಕರ್ಮಣಾ ತತ್ಸಿದ್ಧೇಃ ॥ ೨ ॥

ಸೂತ್ರಾನುವಾದ: ಈಶ್ವರನು ಅಧಿಷ್ಠಾನವಾದ್ದರಿಂದ ಫಲಪ್ರಾಪ್ತಿಯು ಕರ್ಮದಿಂದ ಸಿದ್ಧಿಸದು–(ಏಕೆಂದರೆ) ಕರ್ಮದಿಂದಲೇ ಫಲಸಿದ್ಧಿಯಾಗುವುದು.

ವಿವರಣೆ: ಕರ್ಮ ಮತ್ತು ಫಲ ಇವುಗಳಲ್ಲಿ ಕಾರ್ಯಕಾರಣ ಭಾವವಿರುವುದರಿಂದ ಈಶ್ವರನು ಅವುಗಳಿಗೆ ಅಧಿಷ್ಠಾತೃವಲ್ಲ.

ಭಾಷ್ಯ: *ಈಶ್ವರಾಧಿಷ್ಠಿತೇ ಕಾರಣೇ ಕರ್ಮಫಲರೂಪ ಪರಿಣಾಮಸ್ಯ ನಿವೃತ್ತಿರ್ನ ಯುಕ್ತಾ । ಆವಶ್ಯಕೇನ ಕರ್ಮಣೈವ ಫಲನಿಷ್ಪತ್ತಿಸಂಭವಾದಿತ್ಯರ್ಥಃ॥*

ಅನುವಾದ: ಈಶ್ವರನ ಆಶ್ರಯದಲ್ಲಿ ಕಾರಣವಿರುವುದರಿಂದ ಕರ್ಮಕ್ಕೆ ಫಲರೂಪದ ಪರಿಣಾಮದ ನಿಷ್ಪತ್ತಿಯಾಗದು. ಆವಶ್ಯಕವಾದ ಕರ್ಮದಿಂದಲೇ ಫಲನಿಷ್ಪತ್ತಿ ಸಂಭವಿಸುವುದು ಸಾಧ್ಯ.

ವಿವರಣೆ: ಫಲ ಪ್ರಾಪ್ತಿಗೆ ಕರ್ಮವೊಂದೇ ಕಾರಣ, ಈಶ್ವರನಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಭಾಷ್ಯ: *ಈಶ್ವರಸ್ಯ ಫಲದಾತೃತ್ವಮಪಿ ನ ಘಟತೇ ಇತಿ ।*

ಸೂತ್ರ: ಸ್ವೋಪಕಾರಾದಧಿಷ್ಠಾನಂ ಲೋಕವತ್ ॥ ೩ ॥

ಅನುವಾದ: ಈಶ್ವರನು ಫಲವನ್ನು ನೀಡುವವನು ಆಗಲಾರ ಎಂಬುದನ್ನು ಸೂತ್ರಗಳಿಂದ ಹೇಳಲಾಗಿದೆ.

ಸೂತ್ರಾನುವಾದ: ತನ್ನ ಪ್ರಯೋಜನಕ್ಕಾಗಿ ಈಶ್ವರನು ಅಧಿಷ್ಠಾತೃವಾಗಿರುವವನು; ಲೋಕದಂತೆ.

ಭಾಷ್ಯ: *ಈಶ್ವರಾಧಿಷ್ಠಾತೃತ್ವೇ ಸ್ವೋಪಾಕಾರಾರ್ಥಮೇವ ಸ್ಯಾದಿತ್ಯರ್ಥಃ ।*

ಅನುವಾದ: ಈಶ್ವರನು ಜಗತ್ತಿನ ಅಧಿಷ್ಠಾತೃವಾಗಿರುವುದು ತನ್ನ ಪ್ರಯೋಜನಕ್ಕಾಗಿಯೇ ಆದೀತು ಎಂದು ಅರ್ಥ.

ಭಾಷ್ಯ: *ಭವತ್ವೀಶ್ವರಸ್ಯಾಪ್ಯುಪಕಾರಃ ಕಾ ಕ್ಷತಿರಿತ್ಯಾಶಂಕ್ಯಾಹ ।*

ಅನುವಾದ: ಇರಲಿ, ಈಶ್ವರನಿಗೂ ಪ್ರಯೋಜನವಾದೀತು, ಇದರಿಂದ ಆಗುವ ಹಾನಿ ಏನು? ಎಂದು ಯೋಚಿಸಿ ಹೇಳುತ್ತಾರೆ.

ಸೂತ್ರ: ಲೌಕಿಕೇಶ್ವರವದಿತರಥಾ ॥ ೪ ॥

ಸೂತ್ರಾನುವಾದ: ಹಾಗಿಲ್ಲದಿದ್ದಲ್ಲಿ ಲೌಕಿಕವಾದ ಒಡೆತನವನ್ನು (ರಾಜರುಗಳಂತೆ) ಹೊಂದುವನು.

ಭಾಷ್ಯ: *ಈಶ್ವರಸ್ಯಾಪ್ಯುಪಕಾರಸ್ವೀಕಾರೇ ಲೌಕಿಕೇಶ್ವರವದೇವ ಸೋಽಪಿ ಸಂಸಾರೀ ಸ್ಯಾತ್ । ಅಪೂರ್ಣಕಾಮತಯಾ ದುಃಖಾದಿಪ್ರಸಾಂಗಾದಿತ್ಯರ್ಥಃ ।*

ಅನುವಾದ: ಈಶ್ವರನಿಂದಾಗುವ ಉಪಕಾರವನ್ನು ಒಪ್ಪಿದಲ್ಲಿ ಲೌಕಿಕವಾದ ಈಶ್ವರನಂತೆ ಅವನೂ ಸಹ ಸಂಸಾರಿಯಾಗಿ ಬಿಡುವನು. ಅವನ ಆಶೆಗಳು ಪೂರೈಸದೆ ದುಃಖಾದಿ ಪ್ರಸಂಗಗಳು ಒದಗುವುವು.

ವಿವರಣೆ: 'ಲೌಕಿಕ ಈಶ್ವರ' ಎಂದರೆ ಸಂಸಾರಿಗಳಾದ ರಾಜ–ಮಹಾರಾಜರಂತೆ.

ಭಾಷ್ಯ: *ತಥೈವ ಭವತ್ವಿತ್ಯಾಶಂಕ್ಯಾಹ ।*

ಸೂತ್ರ: **ಪಾರಿಭಾಷಿಕೋ ವಾ ॥ ೫ ॥**

ಅನುವಾದ: ಮೇಲೆ ಹೇಳಿದಂತೆಯೇ ಆಗಲಿ ಎಂದರೆ ಸೂತ್ರಕಾರರು ಹೇಳುವರು.

ಸೂತ್ರಾನುವಾದ: ಅಥವಾ (ರಾಜನಿಗೆ ಸಲ್ಲುವ) ಪರಿಭಾಷೆಯಂತಾಗುವುದು.

ಭಾಷ್ಯ: *ಸಂಸಾರಸತ್ವೇಽಪಿ ಚೇದೀಶ್ವರಸ್ತರ್ಹಿ ಸರ್ಗಾದ್ಯುತ್ಪನ್ನಪುರುಷೇ ಪರಿಭಾಷಾಮಾತ್ರಮಸ್ಮಾಕಮಿವ ಭವತಾಮಪಿ ಸ್ಯಾತ್ । ಸಂಪಾರಿತ್ವ ಅಪ್ರತಿಹತೇಚ್ಛತ್ವಯೋರ್ವಿರೋಧಾನ್ನಿತ್ಯೈಶ್ವರ್ಯಾನುಪಪತ್ತೇರಿತ್ಯರ್ಥಃ ।*

ಅನುವಾದ: ಸಂಸಾರವಿದ್ದರೂ ಈಶ್ವರನೆಂದರೆ ಸೃಷ್ಟಿಯಲ್ಲಿ ಹುಟ್ಟಿದ ಪುರುಷನಲ್ಲಿ ಪರಿಭಾಷೆಗೆ ಅನ್ವಯಿಸುವಂತೆ (ಕಾಲ್ಪನಿಕ) ನಮ್ಮಂತೆ ನಿಮ್ಮಂತೆ ಸಾಮಾನ್ಯ ಈಶ್ವರನಾಗುವನು. ಸಂಸಾರಿತ್ವ ಅದಕ್ಕೆ ವಿರುದ್ಧವಾದ ಮತ್ತು ಹತೋಟಿಯಲ್ಲಿಲ್ಲದ ಇಚ್ಛೆಯೂ ಇದ್ದು ನಿತ್ಯವಾದ ಈಶ್ವರತ್ವವು ದೊರೆಯದಾಗುವುದು.

ಭಾಷ್ಯ: *ಈಶ್ವರಸ್ಯಾಧಿಷ್ಠಾತೃತ್ವೇ ಬಾಧಕಾಂತರಮಾಹ ।*

ಸೂತ್ರ: **ನ ರಾಗಾದೃತೇ ತತ್ಸಿದ್ಧಿಃ ಪ್ರತಿನಿಯತಕಾರಣತ್ವಾತ್ ॥ ೬ ॥**

ಅನುವಾದ: ಈಶ್ವರನನ್ನು ಅಧಿಷ್ಠಾತೃವೆನ್ನಲು ಇತರ ಬಾಧಕಗಳನ್ನು ಹೇಳಿದ್ದಾರೆ.

ಸೂತ್ರಾನುವಾದ: ರಾಗಾದಿಗಳು ಇಲ್ಲದಿದ್ದರೂ ಅದರ ಸಿದ್ಧಿಯು ಆಗದು. ಏಕೆಂದರೆ ಎಲ್ಲ ಪ್ರವೃತ್ತಿಗೂ ಅನಿವಾರ್ಯವಾಗಿ (ರಾಗವೇ) ಕಾರಣ.

ಭಾಷ್ಯ: *ಕಿಂಚ ರಾಗಂ ವಿನಾ ನ ಅಧಿಷ್ಠಾತೃತ್ವಂ ಸಿದ್ಧ್ಯತಿ । ಪ್ರವೃತ್ತೌ ರಾಗಸ್ಯ ಪ್ರತಿನಿಯತಕಾರಣತ್ವಾದಿತ್ಯರ್ಥಃ । ಉಪಕಾರಃ ಇಷ್ಟಾರ್ಥಸಿದ್ಧಿಃ, ರಾಗಸ್ತೂತ್ಕಟೇಚ್ಛಾ ಇತಿ ನ ಪೌನರುಕ್ತ್ಯಮ್ ।*

ಅನುವಾದ: ಅಲ್ಲದೆ ರಾಗವಿಲ್ಲದೆ ಅಧಿಷ್ಠಾತೃತ್ವವು ಸಿದ್ಧಿಸದು. ಪ್ರವೃತ್ತಿಗೆ ರಾಗವು ಅನಿವಾರ್ಯವಾಗಿ ಇರಲೇಬೇಕು ಎಂದರ್ಥ. ಉಪಕಾರವು ಇಷ್ಟಾರ್ಥಸಿದ್ಧಿಯು, ರಾಗವಾದರೋ ಉತ್ಕಟವಾದ ಬಯಕೆ, ಆದ್ದರಿಂದ ಪುನರುಕ್ತಿಯಾಗದು.

ಭಾಷ್ಯ: *ನನ್ವೇವಮಸ್ತು ರಾಗೋಽಪೀಶ್ವರೇ । ತತ್ರಾಹ ।*

ಸೂತ್ರ: ತದ್ಯೋಗೇಽಪಿ ನ ನಿತ್ಯಮುಕ್ತಃ ॥ ೭ ॥

ಅನುವಾದ: ಈಶ್ವರನಲ್ಲಿಯೂ ರಾಗವಿದೆಯೆಂದರೆ ಅದಕ್ಕೆ ಹೀಗೆ ಹೇಳಿದೆ–

ಸೂತ್ರಾನುವಾದ: (ಈಶ್ವರನಲ್ಲಿ) ರಾಗವಿದ್ದಲ್ಲಿ ಅವನನ್ನು ನಿತ್ಯಮುಕ್ತನೆನ್ನಲಾಗದು.

ಭಾಷ್ಯ: *ರಾಗಯೋಗೇಽಪಿ ಸ್ವೀಕ್ರಿಯಮಾಣೇ ಸ ನಿತ್ಯಮುಕ್ತೋ ನ ಸ್ಯಾತ್ । ತತಶ್ಚ ತೇ ಸಿದ್ಧಾಂತಹಾನಿರಿತ್ಯರ್ಥಃ ।*

ಅನುವಾದ: ಈಶ್ವರನಲ್ಲಿ ರಾಗವಿದೆಯೆಂದು ಒಪ್ಪಿದರೂ ಅವನು 'ನಿತ್ಯಮುಕ್ತ'ನಾಗಲು ಸಾಧ್ಯವಿಲ್ಲ. ಆಗ ನಿಮ್ಮ ಸಿದ್ಧಾಂತಹಾನಿಯುಂಟಾಗುವುದು.

ಭಾಷ್ಯ: *ಕಿಂಚ ಪ್ರಕೃತಿಂ ಪ್ರತ್ಯೈಶ್ವರ್ಯಂ ಪ್ರಕೃತಿಪರಿಣಾಮಭೂತೇಚ್ಛಾದಿನಾ ನ ಸಂಭವತಿ, ಅನ್ಯೋಽನ್ಯಾಶ್ರಯಾತ್ । ನಿತ್ಯೇಚ್ಛಾದಿಕಂ ಚ ಪ್ರಕೃತೌ ನ ಯುಕ್ತಂ, ಶ್ರುತಿಸ್ಮೃತಿಸಿದ್ಧಸಾಮ್ಯಾವಸ್ಥಾನುಪಪತ್ತೇಃ । ಅತಃ ಪ್ರಕಾರದ್ವಯಮವಶಿಷ್ಯತೇ । ತದ್ಯಥಾ, ಐಶ್ವರ್ಯಂ ಕಿಂ ಪ್ರಧಾನಶಕ್ತಿತ್ವೇನಾಸ್ಮದಭಿಮತಾಗಾಮೀಚ್ಛಾದೀನಾಂ ಸಾಕ್ಷಾದೇವ ಚೇತನ ಸಂಬಂಧಾತ್ ? ಕಿಂ ವಾಽಯಸ್ಕಾಂತಮಣಿವತ್ ಸನ್ನಿಧಿಸತ್ತಾಮಾತ್ರೇಣ ಪ್ರೇರಕತ್ವಾದಿತಿ ।*

ಅನುವಾದ: ಅಲ್ಲದೆ ಪ್ರಕೃತಿಯಲ್ಲಿ (ಚೇತನದ) ಐಶ್ವರ್ಯವು (ಈಶ್ವರತ್ವವು) ಪ್ರಕೃತಿಯಲ್ಲೇ ಪರಿಣಾಮವಾಗುವ ಇಚ್ಛಾದಿಗಳಿಂದ ನೆರವೇರದು. ಏಕೆಂದರೆ ಇದರಲ್ಲಿ ಅನ್ಯೋನ್ಯಾಶ್ರಯದೋಷವುಂಟಾಗುವುದು. ಪ್ರಕೃತಿಯಲ್ಲಿ ನಿತ್ಯ ಇಚ್ಛಾದಿಗಳುಂಟಾಗುವುದೆಂಬುದು ಸರಿಯಲ್ಲ, ಏಕೆಂದರೆ ಶ್ರುತಿ–ಸ್ಮೃತಿಗಳಲ್ಲಿ ಸಿದ್ಧವಾದ ಸಾಮ್ಯಾವಸ್ಥೆಯು ಉಂಟಾಗದು. ಆದ್ದರಿಂದ ಎರಡು ಪ್ರಕಾರಗಳು ಮಾತ್ರ ಉಳಿಯುತ್ತವೆ. ಹೇಗೆಂದರೆ, 'ನಮ್ಮ ಇಚ್ಛೆಗಳೇ ಮುಂತಾದುವು ಪ್ರಧಾನಶಕ್ತಿಯಾದ ಕಾರಣ ಐಶ್ವರ್ಯವು ಈಶ್ವರತ್ವವು ಸಾಕ್ಷಾತ್ ಚೇತನ ಸಂಬಂಧದಿಂದ ಉಂಟಾಗುವುದೆ? ಅಥವಾ ಆಯಸ್ಕಾಂತಮಣಿಯ ಸಾಮೀಪ್ಯದಂತೆ ಪ್ರೇರಣೆಯಿಂದಷ್ಟೇ ಈಶ್ವರತ್ವವು ಸಂಭವಿಸುವುದೆ?

ವಿವರಣೆ: ಪ್ರಕೃತಿಯಿಂದ ಇಚ್ಛೆಯು ಉಂಟಾಗುವುದೆ? ಅಥವಾ ಇಚ್ಛೆಯಿಂದ ಪ್ರಕೃತಿಯು ಪ್ರವೃತ್ತವಾಗುವುದೆ? ಇಲ್ಲಿ ಅನ್ಯೋನ್ಯಾಶ್ರಯ ದೋಷವಿರುವುದು.

ಈಶ್ವರತ್ವವು ಪ್ರಕೃತಿಯ ಗುಣಗಳೆಂದು ಒಪ್ಪಿರುವ ಇಚ್ಛೆಯಿಂದ ಉಂಟಾಗುವಾಗ ಚೇತನದ ಸಂಬಂಧದಿಂದಲೇ, ಚೇತನದ ಪ್ರೇರಣೆಯಿಂದಲೇ ಎಂದು ಪ್ರಶ್ನೆ.

ಭಾಷ್ಯ: *ತತ್ರಾದ್ಯಂ ಪಕ್ಷಂ ದೂಷಯತಿ ।*

ಸೂತ್ರ: ಪ್ರಧಾನಶಕ್ತಿಯೋಗಾಚ್ಚೇತ್ ಸಂಗಾಪತ್ತಿಃ ॥ ೮ ॥

ಅನುವಾದ: ಮೊದಲು ಪಕ್ಷವನ್ನು ದೂಷಿಸುತ್ತಾರೆ.

ಸೂತ್ರಾನುವಾದ: ಪ್ರಧಾನಶಕ್ತಿಯು (ಚೇತನದ) ಸಂಬಂಧವನ್ನು ಪಡೆದಾಗ (ಚೇತನಕ್ಕೆ) ಸಂಪರ್ಕದ ಆಪತ್ತುಂಟಾಗುವುದು.

ಭಾಷ್ಯ: *ಪ್ರಧಾನಶಕ್ತೇರಿಚ್ಛಾದೇಃ ಪುರುಷೇ ಯೋಗಾತ್ ಪುರುಷಸ್ಯ ಅಪಿ ಧರ್ಮಸಂಗಾಪತ್ತಿಃ । ತಥಾ ಚ 'ಸ ಯತ್ ತತ್ರ ಪಶ್ಯತಿ ಅನನ್ವಾಗತಸ್ತೇನ ಭವತ್ಯಸಂಗೋ ಹ್ಯಯಂ ಪುರುಷಃ (ಬೃ.ಉ.೪.೩.೧೬), ಇತ್ಯಾದಿ ಶ್ರುತಿ ವಿರೋಧಃ ಅಂತ್ಯೇ ತು ಆಹ । ಇತ್ಯರ್ಥಃ ।*

ಅನುವಾದ: ಪ್ರಧಾನದ ಶಕ್ತಿಯ ಇಚ್ಛಾದಿಗಳಿಂದ ಪುರುಷನಿಗೆ ಸಂಪರ್ಕ ಉಂಟಾದಾಗ ಧರ್ಮದ ಸಂಬಂಧದ ಆಪತ್ತು ಒದಗುವುದು. ಹಾಗೆಯೇ, 'ಅವನು ಅಲ್ಲಿ ಏನನ್ನು ಕಾಣುವನೋ, ಅದರೊಳಗೆ ಸೇರಲಾರದು, ಏಕೆಂದರೆ ಪುರುಷನು ಸಂಗರಹಿತನಾಗಿರುವನು.' ಕೊನೆಯಲ್ಲಿ ಹೀಗೆ ಹೇಳಿದೆ.

ಸೂತ್ರ: ಸತ್ತಾಮಾತ್ರಾಚ್ಚೇತ್ ಸರ್ವೈಶ್ವರ್ಯಮ್ ॥ ೯ ॥

ಸೂತ್ರಾನುವಾದ: ಕೇವಲ ಸತ್ತಾ ಮಾತ್ರದಿಂದಲೇ ಎಲ್ಲರೂ ಐಶ್ವರ್ಯವಂತರಾಗಿ ಬಿಡುವರು.

ಭಾಷ್ಯ: *ಅಯಸ್ಕಾಂತಮ್ ಸನ್ನಿಧಿಸತ್ತಾಮಾತ್ರೇಣ ಚೇಚ್ಚೇತನೈಶ್ವರ್ಯಂ, ತರ್ಹಿ ಸರ್ವೇಷಾಮೇವ ತತ್ತತ್ಸರ್ಗೇಷು ಭೋಕ್ತೃಣಾಂ ಪುಂಸಾಂ ಅವಿಶೇಷೇಣ ಐಶ್ವರ್ಯಮಸ್ಮದಭಿಪ್ರೇತಮೇವ ಸಿದ್ಧಮ್ । ಅಖಿಲಭೋಕ್ತೃಸಂಯೋಗಾ ದೇವ ಪ್ರಧಾನೇನ ಮಹದಾದಿಸರ್ಜನಾತ್ ಇತಿ । ತತಶ್ಚೈಕ ಏವೇಶ್ವರ ಇತಿ ಭವತ್‌ಸಿದ್ಧಾಂತಹಾನಿರಿತ್ಯರ್ಥಃ ।*

ಅನುವಾದ: ಅಯಸ್ಕಾಂತದಂತೆ ಸನ್ನಿಧಿರೂಪದ ಸತ್ತಾಮಾತ್ರದಿಂದ ಚೇತನಕ್ಕೆ ಒಡೆತನವು ಬಂದರೆ, ಆಗ ಎಲ್ಲವೂ ಆಯಾ ಸೃಷ್ಟಿಯಲ್ಲಿ ಭೋಕ್ತೃಗಳಿಗೆ (ಪುರುಷರಿಗೆ) ಸಮಾನರೂಪದ ರೀತಿಯಲ್ಲಿ ಈಶ್ವರತ್ವವು ಇದ್ದಲ್ಲಿ ನಾವು ಹೇಳಿದಂತೆಯೇ ಆಯಿತು. ಎಲ್ಲ ಭೋಕ್ತೃಗಳ ಸಂಯೋಗದಿಂದಲೇ ಪ್ರಧಾನವು ಮಹದಾದಿಗಳಾಗಿ ಪರಿಣಮಿಸುತ್ತದೆ. ಅನಂತರ ಒಬ್ಬನೇ ಈಶ್ವರ ಎಂದು ತಮ್ಮ ಸಿದ್ಧಾಂತವು ಹಾನಿಗೊಳಗಾಗುವುದು ಎಂದರ್ಥ.

ವಿವರಣೆ: ಈಶ್ವರನನ್ನು ಉಪಾದಾನಕಾರಣವಾದ ಸೃಷ್ಟಿಕರ್ತನೆಂದು ಭಾವಿಸಿದಲ್ಲಿ ಅವನು ಪರಿಣಾಮಿಯಾಗಬೇಕಾಗುವುದು. ಆಗ ಅವನು ಜಡಪ್ರಕೃತಿ ಆಗಿ ಬಿಡುವನು. ಚೇತನನು ಅಪರಿಣಾಮಿ. ಆದ್ದರಿಂದ ಅದು ಸಾಧ್ಯವಿಲ್ಲ.

ಭಾಷ್ಯ: *ಸ್ಯಾದೇತತ್ । ಈಶ್ವರಸಾಧಕ ಪ್ರಮಾಣ ವಿರೋಧೇನ ತೇ ಅಸತ್ತರ್ಕಾ ಏವ, ಅನ್ಯದೈವಂ ವಿಧಾಸತ್ತರ್ಕಸಹಸ್ರೈಃ ಪ್ರಧಾನಮಪಿ ಬಾಧಿತುಂ ಶಕ್ಯತ ಇತಿ । ತತ್ರಾಹ*

ಅನುವಾದ: ಹಾಗೆಯೇ ಇರಲಿ ಈಶ್ವರನನ್ನು ಸಾಧಿಸಬಲ್ಲ ಪ್ರಮಾಣಗಳ ವಿರೋಧದ ಕಾರಣ ನಿಮ್ಮ ತರ್ಕವೆಲ್ಲ ಬುಡವಿಲ್ಲದ್ದು, ಹೀಗೆ ಈ ವಿಧವಾದ ಸಾವಿರಾರು ಅಸತ್ತರ್ಕಗಳಿಂದ ಪ್ರಕೃತಿಯನ್ನು ಅಲ್ಲಗಳೆಯುವುದೂ ಅಸಾಧ್ಯ. ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ಪ್ರಮಾಣಭಾವಾನ್ನ ತತ್ಸಿದ್ಧಿಃ ॥ ೧೦ ॥

ಸೂತ್ರಾನುವಾದ: ಪ್ರಮಾಣಗಳ ಅಭಾವದಿಂದ (ಚೇತನವು ಪರಿಣಾಮವಾಗುವುದನ್ನು) ಸಿದ್ಧಿಸಲಾಗದು.

ಭಾಷ್ಯ: *ತತ್ಸಿದ್ಧಿರ್ನಿತ್ಯೇಶ್ವರೇ ತಾವತ್ ಪ್ರತ್ಯಕ್ಷಂ ನಾಸ್ತೀತಿ ಅನುಮಾನಶಬ್ದೌ ಏವ ಪ್ರಮಾಣೇ ವಕ್ತವ್ಯೇ । ತೇ ಚ ನ ಸಂಭವತಃ ಇತ್ಯರ್ಥಃ ।*

ಅನುವಾದ: ಆ ನಿತ್ಯೇಶ್ವರನನ್ನು ಸಾಧಿಸುವುದಕ್ಕೆ ಪ್ರತ್ಯಕ್ಷ ಪ್ರಮಾಣವಿಲ್ಲ. ಅನುಮಾನ ಮತ್ತು ಶಬ್ದ ಪ್ರಮಾಣಗಳೂ ಹೇಳಲಾಗದು, ಅವೂ ಕೂಡ ಸಂಭವವಿಲ್ಲ, ಎಂದರ್ಥ.

ಭಾಷ್ಯ: *ಅಸಂಭವಮೇವ ಪ್ರತಿಪಾದಯತಿಸೂತ್ರಾಭ್ಯಾಮ್ ।*

ಸೂತ್ರ: ಸಂಬಂಧಾಭಾವಾನ್ನಾನುಮಾನಮ್ ॥ ೧೧ ॥

ಅನುವಾದ: ಎರಡು ಸೂತ್ರಗಳ ಮೂಲಕ ಅದು ಅಸಂಭವ ಎಂಬುದನ್ನೇ ಪ್ರತಿಪಾದಿಸುತ್ತಾರೆ.

ಸೂತ್ರಾನುವಾದ: ವ್ಯಾಪ್ತಿಯಲ್ಲದ ಕಾರಣ ಅನುಮಾನವೂ ಸಾಧ್ಯವಾಗದು.

ಭಾಷ್ಯ: *ಸಮಬಂಧೋ ವ್ಯಾಪ್ತಿಃ । ಅಭಾವೋಽಸಿದ್ಧಿಃ । ತಥಾ ಚ ಸಕರ್ತೃಕಂ ಕಾರ್ಯತ್ವಾದಿತಿ ಅನುಮಾನೇಷು ಅಪ್ರಯೋಜಕತ್ವೇನ ವ್ಯಾಪ್ಯತ್ವಾಸಿದ್ಧ್ಯಾ ನೇಶ್ವರೇಽನುಮಾನಮಿತ್ಯರ್ಥಃ ।*

ಅನುವಾದ: ಸಂಬಂಧವೆಂದರೆ ವ್ಯಾಪ್ತಿ. ಅಭಾವವೆಂದರೆ ಅಸಿದ್ಧಿ. ಹಾಗೆಯೇ ಮಹದಾದಿಗಳು ಕರ್ತೃವಿನ ಕಾರ್ಯವಾದ್ದರಿಮದ ಅನುಮಾನಗಳಲ್ಲಿ ಅಪ್ರಯೋಜಕವಾಗಿ ವ್ಯಾಪ್ಯತ್ವವು ಅಸಿದ್ಧವಾದ್ದರಿಮದ ಈಶ್ವರನಲ್ಲಿ ಅನುಮಾನ ಸಾಧ್ಯವಿಲ್ಲ.

ವಿವರಣೆ: ವ್ಯಾಪ್ಯ–ವ್ಯಾಪಕಭಾವವನ್ನು ಉಂಟುಮಾಡುವ ವ್ಯಾಪ್ತಿಯನ್ನು ಸಂಬಂಧ ವೆಂದಿದ್ದಾರೆ. ಮಹದಾದಿ ಕಾರ್ಯಗಳು ಚೇತನದಿಂದ ಉಂಟಾಗದ ಕಾರಣ ವ್ಯಾಪ್ತಿಯು ಅಪ್ರಯೋಜಕವಾಗುವುದು.

ಭಾಷ್ಯ: *ನಾಪಿ ಶಬ್ದ ಇತ್ಯಾಹ* – ಶಬ್ದಪ್ರಮಾಣವೂ ಸಾಧ್ಯವಿಲ್ಲ ಎಂದಿದ್ದಾರೆ.

ಸೂತ್ರ: ಶ್ರುತಿರಪಿ ಪ್ರಧಾನಕಾರ್ಯತ್ವಸ್ಯ ॥ ೧೨ ॥

ಸೂತ್ರಾನುವಾದ: ಶ್ರುತಿಯೂ ಸಹ ಪ್ರಧಾನಕಾರ್ಯವನ್ನು (ಸಮರ್ಥನೆ ಮಾಡುವುದು)

ಭಾಷ್ಯ: *ಪ್ರಪಂಚೇ ಪ್ರಧಾನಕಾರ್ಯತ್ವಸ್ಯೈವ ಶ್ರುತಿರಸ್ತಿ । ನ ಚೇತನಕಾರಣತ್ವೇ । ಯಥಾ –*

ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಸೃಜಮಾನಾಂ
'ತದೇವಂ ತರ್ಹ್ಯವ್ಯಾಕೃತಮಾಸೀತ್ (ಶ್ವೇ.ಉ.೪,೫) ಸರೂಪಾಃ ।

ತನ್ನಾಮರೂಪಾಭ್ಯಾಂ ವ್ಯಾಕ್ರಿಯತೇ' । (ಬೃ.ಉ.೧.೪.೭.)
ಇತ್ಯಾದಿರಿತ್ಯರ್ಥಃ

ಅನುವಾದ: ಜಗತ್ತಿನಲ್ಲಿ ಪ್ರಧಾನವು ಪರಿಣಾಮವಾಗುವುದಷ್ಟೆ ಶ್ರುತಿಗಳಲ್ಲಿ ಕಾಣುವುದು, ಚೇತನವು ಕಾರಣವೆಂಬುದಿಲ್ಲ. ಹೇಗೆಂದರೆ, 'ತನ್ನಂತೆಯೇ ಇರುವ ಅನೇಕ ಕೆಂಪು, ಬಿಳಿ, ಕಪ್ಪು ವರ್ಣದ ಮರಿಗಳನ್ನು (ಭೂತಗಳನ್ನು) ಸೃಷ್ಟಿಸುವ ಒಂದು ಕುರಿಯನ್ನು (ಪ್ರಕೃತಿಯನ್ನು) (ಅಜವೊಂದು ಸೇವಿಸುವುದು) (ಶ್ವೇ.ಉ)

ಈ (ಜಗತ್ತು) ಆಗ (ಸೃಷ್ಟಿಗೆ ಮೊದಲು) ತೋರ್ಪಟ್ಟಿರಲಿಲ್ಲ (ನಂತರ) ನಾಮರೂಪ ಗಳೊಂದಿಗೆ ತೋರ್ಪಡುತ್ತದೆ (ಬೃ.ಉ) ಹೀಗೆ (ಅನೇಕ ಪ್ರಮಾಣಗಳೆಂದು) ಕಾಣಬಹುದು ಎಂದರ್ಥ.

ವಿವರಣೆ: ಬಿಳಿ, ಕೆಂಪು, ಕಪ್ಪು ಬಣ್ಣಗಳು ಮೂರು ಗುಣಗಳನ್ನು ಸೂಚಿಸುತ್ತವೆ. ಪ್ರಜಾಃ ಎಂದರೆ ಭೂತಗಳನ್ನು, ಅಜಾ ಎಂದರೆ ಜನ್ಮವಿಲ್ಲದ ಪ್ರಕೃತಿ.

ಭಾಷ್ಯ: *ಯಾ ಚ ತದೈಕ್ಷತ ಬಹುಸ್ಯಾಂ ಇತ್ಯಾದಿಃ ಚೇತನಕಾರಣಾಶ್ರುತಿಃ । (ಛಾಂ.ಉ.೬.೨.೩) ಸಾ ಸರ್ಗಾದಾವುಪಪನ್ನಸ್ಯ ಮಹತ್ತತ್ತ್ವೋಪಾಧಿಕಸ್ಯ ಮಹಾಪುರುಷಸ್ಯ ಜನ್ಮಜ್ಞಾನಪರಾ । ಕಿಂ ವಾ ಬಹುಭವನಾನುರೋಧಾತ್ ಪ್ರಧಾನಮೇವ ಕೂಲಂ ಪಿಪತಿಷತೀತಿವೆವತ್ ಗೌಣೀ । ಅನ್ಯಥಾ 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ (ಶ್ವೇ.ಉ.೬.೧೧) ಇತ್ಯಾದಿ ಶ್ರುತ್ಯುಕ್ತ ಪರಿಣಾಮಿತ್ವಸ್ಯ ಪುರುಷೇಽನುಪಪತ್ತೇರಿತಿ ।*

ಅನುವಾದ: ಶ್ರುತಿವಾಕ್ಯವಾದ 'ಅವನು ನೋಡಿದನು' ನಾನು ಬಹಳವಾಗಿ ಮೈದೋರುವೆನು! ಎಂಬು ಚೇತನವೇ (ಸೃಷ್ಟಿಗೆ) ಕಾರಣವೆಂಬ ಶ್ರುತಿಯು. ಆ ಶ್ರುತಿಯು ಸ್ವರ್ಗಾದಿಗಳಲ್ಲಿ ಉತ್ಪನ್ನವಾದ ಮಹತ್ ತತ್ತ್ವದ ಉಪಾಧಿಯನ್ನುಳ್ಳ ಮಹಾಪುರುಷನ ಜನ್ಯಜ್ಞಾನವನ್ನು ಕುರಿತದ್ದಾಗಿದೆ. ಅಥವಾ ಅನೇಕ ರೂಪದಲ್ಲಿ ಹುಟ್ಟುವ ಅನುರೋಧದಿಂದ ಪ್ರಧಾನವೇ, 'ದಡವು ಬೀಳಬಯಸುವುದು' ಎಂಬ ಮಾತಿನಂತೆ ಗೌಣಾರ್ಥದಲ್ಲಿ ಬಳಸಲ್ಪಟ್ಟಿದೆ. ಹಾಗಿಲ್ಲದಿದ್ದಲ್ಲಿ 'ಸಾಕ್ಷಿಯೂ, ಚೇತನನೂ, ಕೇವಲನೂ ಮತ್ತು ನಿರ್ಗುಣನೂ' ಇತ್ಯಾದಿ ಹೇಳಲ್ಪಟ್ಟ ಅಪರಿಣಾಮಿತ್ವದ ಪುರುಷನೇ ದೊರೆಯಲಾರನು.

ಭಾಷ್ಯ: *ಅಯಂ ಚೇಶ್ವರ ಪ್ರತಿಷೇಧಃ ಐಶ್ವರ್ಯೇ ವೈರಾಗ್ಯಾರ್ಥಂ ಈಶ್ವರಜ್ಞಾನಂ ವಿನಾಽಪಿ ಮೋಕ್ಷಪ್ರತಿಪಾದನಾರ್ಥಂ ಚ ಪ್ರೌಢಿವಾದ ಮಾತ್ರಮಿತಿ ಪ್ರಾಗೇವ (ಸೂ.ಭಾ.೧.೯೨) ವ್ಯಾಖ್ಯಾತಮ್ । ಅನ್ಯಥಾ ಜೀವವ್ಯಾವೃತ್ತಸ್ಯೇಶ್ವರನಿತ್ಯತ್ವಾದೇರ್ಗೌಣತ್ವಕಲ್ಪನಾ ಗೌರವಮ್ । ಔಪಾಧಿಕಾನಾಂ ನಿತ್ಯಜ್ಞಾನೇಚ್ಛಾದೀನಾಂ ಮಹದಾದಿಪರಿಣಾಮಾನಾಂ ಚ ಅಂಗೀಕಾರೇಣ ಕೌಟಸ್ಥ್ಯಾದ್ಯುಪಪತ್ತೇಃ ಇತ್ಯಾದಿಕಂ ಬ್ರಹ್ಮಮೀಮಾಂಸಾಯಾಂ (ವಿಜ್ಞಾ, ಭಾ. ೧.೧.೪–೬) ದ್ರಷ್ಟವ್ಯಮಿತಿ ।*

ಅನುವಾದ: ಈ ಈಶ್ವರಪ್ರತಿಷೇಧವು ಈಶ್ವರಭಾವದಲ್ಲಿ ವೈರಾಗ್ಯಕ್ಕಾಗಿ ಮತ್ತು ಈಶ್ವರಜ್ಞಾನ ವಿಲ್ಲದೆ ಮೋಕ್ಷ ಪ್ರತಿಪಾದನೆಗಾಗಿ ಎಂಬ ಧೈರ್ಯದ ವಾದವನ್ನು ಹಿಂದೆಯೇ ಮಂಡಿಸಿದ್ದೇವೆ. ಹಾಗಿಲ್ಲದಿದ್ದಲ್ಲಿ ಜೀವವನ್ನು ಹೊರತಾಗಿ ಈಶ್ವರನು ನಿತ್ಯ ಎಂಬ ವಾದ ಮುಂತಾದುವು ಗೌಣಾರ್ಥದಲ್ಲಿ ಪ್ರಯುಕ್ತವಾಗಿ ಅತ್ಯುಕ್ತಿಯಾಗುವುದು. ಉಪಾಧಿಗಳಿಂದ ಉಂಟಾದ ನಿತ್ಯಜ್ಞಾನ, ನಿತ್ಯೇಚ್ಛಾದಿಗಳು ಮತ್ತು ಮಹದಾದಿ ಪರಿಣಾಮಗಳನ್ನು ಅಂಗೀಕರಿಸುವುದರಿಂದ ಪುರುಷನಲ್ಲಿ ಕೂಟಸ್ಥ ಮುಂತಾದ ಗುಣಗಳು ಕಂಡುಬರುವುದರಿಂದ ಈ ಎಲ್ಲ ಅಂಶಗಳನ್ನು ಬ್ರಹ್ಮಮೀಮಾಂಸೆಯಲ್ಲಿ ನೋಡಬಹುದು.

ವಿವರಣೆ: 'ಈಶ್ವರಾಸಿದ್ಧೇಃ । (೧.೯೨) ಎಂಬ ಸೂತ್ರವನ್ನು ಗಮನಿಸಬೇಕು. ಈಶ್ವರನು ಜಗತ್ತಿಗೆ ಉಪಾದಾನಕಾರಣನಲ್ಲ. ಸಹಿ ಸರ್ವವಿತ್ ಸರ್ವಕರ್ತಾ । ಮತ್ತು ಈದೃಶೇಶ್ವರ ಸಿದ್ಧಿಃ ಸಿದ್ಧಾ । (೩. ೫೬. ೫೭.) ಸೂತ್ರಗಳೂ ಗಮನಾರ್ಶ

ಭಾಷ್ಯ: *'ನಾವಿದ್ಯಾತೋ ಬಂಧ' ಇತಿ (೧. ೨೦) ಯತ್ ಸಿದ್ಧಾಂತಿತಂ ಪ್ರಥಮಪಾದೇ, ತತ್ರ ಪರಮತಂ ವಿಸ್ತರತಃ ಪ್ರಘಟ್ಟಕೇನ ದೂಷಯತಿ ।*

ಅನುವಾದ: ಅವಿದ್ಯೆಯಿಂದ ಬಂಧವಿಲ್ಲ ಎಂಬ ಸಿದ್ಧಾಂತವನ್ನು ಪ್ರಥಮಪಾದದಲ್ಲಿ ಪ್ರತಿಪಾದಿಸಿದೆ. ಈ ವಿಷಯದಲ್ಲಿ ಪರಮತವನ್ನು ವಿಸ್ತಾರವಾಗಿ ಉಪದೇಶ ಗಳೊಂದಿಗೆ ದೂಷಿಸುವರು.

ಸೂತ್ರ: ನಾವಿದ್ಯಾಶಕ್ತಿಯೋಗೋ ನಿಃಸಂಗಸ್ಯ ॥ ೧೩ ॥

ಸೂತ್ರಾನುವಾದ: ಸಂಗವಿಲ್ಲದ (ಪರಮೇಶ್ವರನಿಗೆ) ಅವಿದ್ಯೆಯ ಶಕ್ತಿಯ ಪ್ರಭಾವವಿರದು.

ಭಾಷ್ಯ: *ಪರೇ ಪ್ರಾಹುಃ – ಪ್ರಧಾನಂ ನಾಸ್ತಿ, ಕಿಂತು ಜ್ಞಾನನಾಶೀ ಅನಾದ್ಯವಿದ್ಯಾऽऽಖ್ಯ ಶಕ್ತಿಶ್ಚೇತನೇ ತಿಷ್ಠತಿ । ತತ ಏವ ಚೇತನಸ್ಯ ಬಂಧಸ್ತನ್ನಾಶೇ ಚ ಮೋಕ್ಷಃ ಇತಿ। ತತ್ರ ಇದಮುಚ್ಯತೇ ।*

ಅನುವಾದ: ಇತರರು ಹೇಳುವರು–'ಪ್ರಧಾನವು ಇಲ್ಲ. ಆದರೆ ಜ್ಞಾನವನ್ನು ನಾಶಮಾಡುವ ಅನಾದಿಯಾದ ಅವಿದ್ಯೆಯೆಂಬ ಶಕ್ತಿಯು ಚೇತನದಲ್ಲಿರುತ್ತದೆ. ಅದರಿಂದಲೇ ಚೇತನಕ್ಕೆ ಬಂಧವುಂಟಾಗುವುದು. ಅದನ್ನು ನಾಶಪಡಿಸುವುದರಿಂದ ಮೋಕ್ಷ ಉಂಟಾಗುತ್ತದೆ.' ಎಂದು ಆ ವಿಷಯದಲ್ಲಿ ಹೀಗೆ ಹೇಳುವರು.

ಭಾಷ್ಯ: *'ನಿಃಸಂಗತಯಾ ಚೇತನಸ್ಯ ಅವಿದ್ಯಾಶಕ್ತಿಯೋಗಃ ಸಾಕ್ಷಾನ್ನ ಸಂಭವತೀತಿ । ಅವಿದ್ಯಾ ಹಿ ಅನ್ಯಸ್ಮಿನ್ ತದಾಕಾರತಾ । ಸಾ ಚ ವಿಕಾರ ವಿಶೇಷಃ ಅಧಿಕಾರಹೇತುಸಂಯೋಗರೂಪಂ ಸಂಗಂ ವಿನಾ ನ ಸಂಭವತೀತ್ಯರ್ಥಃ।*

ಅನುವಾದ: ಚೇತನವು ಸಂಗವಿಲ್ಲದ ಕಾರಣ ಅವಿದ್ಯಾಶಕ್ತಿಯ ಸಂಬಂಧವು ಸಾಕ್ಷಾತ್ತಾಗಿ ಗೋಚರಿಸದು. ಅವಿದ್ಯೆಯಂದರೆ ಆಯಾ ವಸ್ತುವಿನ ಆಕಾರವನ್ನು ಬೇರೊಂದರಲ್ಲಿ ಕಾಣುವುದು. ಅದೂ ಸಹ ವಿಕಾರ–ವಿಶೇಷಕ್ಕೆ ಯೋಗ್ಯ ಕಾರಣದ ಸಂಯೋಗವುಳ್ಳ ರೂಪದ ಸಂಪರ್ಕ ಇಲ್ಲದೇ ಇದ್ದರೆ ಸಾಧ್ಯವಿಲ್ಲ.

ವಿವರಣೆ: ಚೇತನನು ಸಂಗರಹಿತನು. ಸೃಷ್ಟಿಕಾರ್ಯದಲ್ಲಿ ಅವನು ಕೇವಲ ಅಧಿಷ್ಠಾತೃ ಅಥವಾ ನಿಮಿತ್ತ.

ಭಾಷ್ಯ: *ನನ್ವವಿದ್ಯಾವಶಾದೇವ ಅವಿದ್ಯಾಯೋಗೋ ವಕ್ತವ್ಯಃ, ತಥಾ ಚ ಅಪಾರಮಾರ್ಥಿಕತ್ವಾತ್ ನ ತಯಾ ಸಂಗ ಇತಿ ತತ್ರಾಹ*

ಅನುವಾದ: ಅವಿದ್ಯೆಯ ಪ್ರಭಾವದಿಂದ ಅವಿದ್ಯೆಯ ಯೋಗವುಂಟಾಗುವುದೆ? ಹಾಗೆಯೇ ಅಪಾರಮಾರ್ಥಿಕವಾಗಿರುವ ಕಾರಣ ಅದರೊಡನೆ ಸಂಪರ್ಕ ಎಂದೂ ಸಾಧ್ಯವಾಗದು. ಅದಕ್ಕೆ ಸೂತ್ರಕಾರರು ಹೇಳುವರು.

ಸೂತ್ರ: ತದ್ಯೋಗೇ ತತ್ಸಿದ್ಧೌ ಅನ್ಯೋನ್ಯಾಶ್ರಯತ್ವಮ್ ॥ ೧೪ ॥

ಸೂತ್ರಾನುವಾದ: ಅವಿದ್ಯೆಯ ಸಂಬಂಧದಿಂದ ಅವಿದ್ಯೆಯನ್ನು ಸಿದ್ಧಪಡಿಸುವುದು ಅನ್ಯೋನ್ಯಾಶ್ರಯ (ದೋಷಕ್ಕೆ ಗುರಿಯಾಗುವುದು).

ಭಾಷ್ಯ: *ಅವಿದ್ಯಾಯೋಗಾದ್ ಅವಿದ್ಯಾಸಿದ್ಧೌ ಚ ಅನ್ಯೋನ್ಯಾಶ್ರಯತ್ವಂ ಆತ್ಮಾಶ್ರಯತ್ವಮ್ । ಅನವಸ್ಥಾ ವಾ ಇತಿಶೇಷಃ ।*

ಅನುವಾದ: ಅವಿದ್ಯೆಯ ಸಂಬಂಧದಿಂದ ಅವಿದ್ಯೆಯು ಸಿದ್ಧವಾದಲ್ಲಿ ಅನ್ಯೋನ್ಯಾಶ್ರಯತ್ವವೂ, ಆತ್ಮಾಶ್ರಯವೂ ಮತ್ತು ಅನವಸ್ಥಾ ಮೂರೂ ದೋಷಗಳುಂಟಾಗುವುವು.

ವಿವರಣೆ: ಅವಿದ್ಯೆಯಿಂದ ಅವಿದ್ಯೆಯು ಸಿದ್ಧವಾಗುವುದು. ಸಿದ್ಧವಾದ ಅವಿದ್ಯೆಯಿಂದ ಅವಿದ್ಯೆಯುಂಟಾಗುವುದು. ಇದು ಅನ್ಯೋನ್ಯಾಶ್ರಯ ದೋಷ. ಚೇತನದಲ್ಲಿ ಅವಿದ್ಯೆಯ ವಿಕಾರವುಂಟು ಮಾಡಲು ಅವಿದ್ಯೆಯು ಬೇಕು. ಈ ಅವಿದ್ಯೆಯನ್ನುಂಟು ಮಾಡಲು ಮತ್ತೊಂದು ಅವಿದ್ಯೆಯು ಬೇಕು. ಹೀಗೆ ಅನವಸ್ಥಾ ದೋಷ ಉಂಟಾಗುವುದು. ಅವಿದ್ಯೆಯು ಅವಿದ್ಯೆಯ ಶಕ್ತಿಗಾಗಿ ತನ್ನನ್ನೇ ಆಶ್ರಯಿಸಬೇಕು. ಹೀಗೆ ಆತ್ಮಾಶ್ರಯವುಂಟಾಗುವುದು.

ಭಾಷ್ಯ: *ನನು ಬೀಜಾಂಕುರವದನವಸ್ಥಾನದೋಷಾಯ ಇತಿ ಆಶಂಕ್ಯಾಹ ।*

ಅನುವಾದ: ಬೀಜಾಂಕುರದ ಅವಸ್ಥೆಯಂತೆ ಅನವಸ್ಥಾದೋಷ ಉಂಟಾಗದಲ್ಲವೆ? ಎಂಬುದಕ್ಕೆ ಹೀಗೆ ಹೇಳಿದೆ.

ಸೂತ್ರ: ನ ಬೀಜಾಂಕುರವತ್ ಸಾದಿಸಂಸಾರಶ್ರುತೇಃ ॥ ೧೫ ॥

ಸೂತ್ರಾನುವಾದ: ಬೀಜ ಮತ್ತು ಮೊಳಕೆಗಳಂತೆ ಅಲ್ಲ. ಏಕೆಂದರೆ ಸಂಸಾರವು ಆದಿಯುಳ್ಳದ್ದೆಂದು ಶ್ರುತಿಗಳು ಹೇಳುತ್ತವೆ.

ಭಾಷ್ಯ: *ಬೀಜಾಂಕುರವದನವಸ್ಥಾ ನ ಸಂಭವತಿ, ಪುರುಷಾಣಾಂ ಸಂಸಾರಸ್ಯ ಅವಿದ್ಯಾದಿ ಅಖಿಲಾನರ್ಥರೂಪಸ್ಯ ಸಾದಿತ್ವಶ್ರುತೇಃ । ಪ್ರಲಯಸುಷುಪ್ತ್ಯಾದೌ ಅಭಾವಶ್ರವಣಾದಿತ್ಯರ್ಥಃ । 'ವಿಜ್ಞಾನಘನ ಏವೈತೇಭ್ಯೋ ಭೂತೇಭ್ಯಃ ಸಮುತ್ಥಾಯ ತಾನ್ಯೇವಾನುವಿನಶ್ಯತಿ'*

(ಬೃ. ಉ.೨.೪.೧೨) ಇತ್ಯಾದಿ ಶ್ರುತಿಭಿಃ ಹಿ ಪ್ರಲಯಾದೌ ಬುದ್ಧಿವೃತ್ತಿ ಅಭಾವೇನ ತದೌಪಾಧಿಕ-ಅವಿದ್ಯಾ-ವಿದ್ಯಾ-ಆದಿ-ಅಖಿಲಸಂಸಾರಶೂನ್ಯಂ ಚಿನ್ಮಾತ್ರತ್ವಂ ಪುರುಷಾಣಾಂ ಸಿದ್ಧಮಿತಿ । ತಸ್ಮಾತ್ ಅವಿದ್ಯಾಪಿ ಆವಿದ್ಯಕೇತಿ ವಾಙ್ಮಾತ್ರಮ್ ।

ಅನುವಾದ: ಬೀಜಾಂಕುರದಂತೆ ಅನವಸ್ಥಾ ದೋಷವುಂಟಾಗದು. ಏಕೆಂದರೆ ಪುರುಷರಿಗೆ ಸಂಸಾರದ ಅವಿದ್ಯೆಯೇ ಮೊದಲಾಗಿ ಎಲ್ಲ ಅನರ್ಥರೂಪದ ಪ್ರಾರಂಭವುಂಟೆಂದು ಶ್ರುತಿಯು ಹೇಳುತ್ತದೆ. ಪ್ರಲಯ-ಸುಷುಪ್ತಿ ಮೊದಲಾದವುಗಳಲ್ಲಿ ಅವಿದ್ಯೆಯ ಅಭಾವವನ್ನು ಕಾಣಬಹುದು. 'ವಿಜ್ಞಾನ-ಘನನು ಈ ಭೂತಗಳಿಂದ ಮೇಲೆದ್ದು ಅವುಗಳಲ್ಲಿಯೇ ಕೊನೆ ಕಾಣುವುದು' ಮುಂತಾದ ಶ್ರುತಿವಾಕ್ಯಗಳಿಂದ ಪ್ರಲಯದ ಆದಿಯಲ್ಲಿ ಬುದ್ಧಿವೃತ್ತಿಯ ಅಭಾವದ ಕಾರಣ ಅದರ ಉಪಾಧಿಗಳಾದ ಅವಿದ್ಯೆ ವಿದ್ಯೆ ಮುಂತಾದ ಅಖಿಲ ಸಂಸಾರಶೂನ್ಯವಾದ ಚಿನ್ಮಾತ್ರವು ಪುರುಷರಲ್ಲಿ ಇರುತ್ತದೆ ಎಂದು ಸಿದ್ಧವಾಗುತ್ತದೆ. ಆದ್ದರಿಂದ ಅವಿದ್ಯೆಯೂ ಸಹ ಅವಿದ್ಯೆಯಿಂದ ಉಂಟಾಗುತ್ತದೆ ಎಂಬುದು ಕೇವಲ ಉಕ್ತಿಯಷ್ಟೆ.

ಭಾಷ್ಯ: *ನನು ಅಸ್ಮಾಕಂ ಅವಿದ್ಯಾ ಪಾರಿಭಾಷಿಕೀ, ನ ತು ಯೋಗೋಕ್ತ ಅನಾತ್ಮನಿ ಆತ್ಮಬುದ್ಧ್ಯಾದಿರೂಪಾ, ತಥಾ ಚ ಭವತಾಂ ಪ್ರಧಾನ ವ ದೇವಾಸ್ಮಾಕಮಪಿ ತಸ್ಯಾ ಅಖಂಡಾನಾದಿತಯಾ ಪುರುಷನಿಷ್ಠತ್ವೇಽಪಿ ನಾಸಂಗತಾಹಾನಿರಿತಿ ಆಶಂಕಾಯಾಂ ಪರಿಕಲ್ಪಿತಂ ಅವಿದ್ಯಾ ಶಬ್ದಾರ್ಥಂ ವಿಕಲ್ಪ್ಯ ದೂಷಯತಿ ।*

ಅನುವಾದ: ನಾವು ಹೇಳುವ ಅವಿದ್ಯೆ ಪಾರಿಭಾಷಿಕವಾದದ್ದು, ಅದು ಯೋಗದಲ್ಲಿ ಹೇಳಿರುವಂತೆ ಅನಾತ್ಮನಲ್ಲಿ ಆತ್ಮಬುದ್ಧಿ ಮುಂತಾದ ರೂಪಗಳನ್ನು (ಅಧ್ಯಾಸ) ಮಾಡುವುದಲ್ಲಿ. ಹಾಗೆಯೇ ನಿಮ್ಮ ಪ್ರಧಾನದಂತೆಯೇ ನಮ್ಮ ಅವಿದ್ಯೆಯೂ ಅಖಂಡವೂ ಅನಾದಿಯೂ ಆದ ಕಾರಣ ಪುರುಷನಲ್ಲಿರುವುದಾದರೂ ಪುರುಷನೊಡನೆ ಅಸಂಗತೆಯ ಹಾನಿಯೇನೂ ಇರದು, ಎಂದು ಶಂಕೆಯನ್ನು ಹೊಂದಿರುವುದಕ್ಕೆ ಹಾಗೂ ಕಲ್ಪಿಸಲ್ಪಟ್ಟ ಅವಿದ್ಯಾಶಬ್ದದ ಅರ್ಥವನ್ನು ಭ್ರಮಿಸಿರುವುದಕ್ಕೆ ಅದನ್ನು ದೂಷಿಸುವರು.

ಸೂತ್ರ: ವಿದ್ಯಾತೋಽನ್ಯತ್ವೇ ಬ್ರಹ್ಮಬಾಧಪ್ರಸಂಗಃ ॥ ೧೬ ॥

ಸೂತ್ರಾನುವಾದ: (ಅವಿದ್ಯೆಯು) ವಿದ್ಯೆಯಿಂದ ಭಿನ್ನವೆಂದು ಭಾವಿಸಿದರೆ ಬ್ರಹ್ಮಬಾಧೆಯ ಪ್ರಸಂಗವುಂಟಾಗುವುದು.

ಭಾಷ್ಯ: *ಯದಿ ವಿದ್ಯಾನ್ಯತ್ವಮೇವ ಅವಿದ್ಯಾಶಬ್ದಾರ್ಥಸ್ತರ್ಹಿ ತಸ್ಯ ಜ್ಞಾನನಾಶ್ಯತಯಾ ಬ್ರಹ್ಮಣಃ ಆತ್ಮನೋಽಪಿ ಬಾಧಃ ನಾಶಃ ಪ್ರಸಜ್ಯತೇ ವಿದ್ಯಾಭಿನ್ನತ್ವಾದಿತ್ಯರ್ಥಃ।*

ಅನುವಾದ: ಒಂದು ವೇಳೆ ವಿದ್ಯೆಗೆ ಭಿನ್ನವಾಗಿ ಬೇರೊಂದು 'ಅವಿದ್ಯೆ'ಯೆಂಬ ತತ್ತ್ವವಿದೆಯೆಂದು ಭಾವಿಸಿದರೆ ಆಗ ಜ್ಞಾನನಾಶದ ಕಾರಣ ಬ್ರಹ್ಮನ ಎಂದರೆ

ಆತ್ಮದ, ಬಾಧ ಎಂದರೆ ನಾಶವು, ಸಂಭವಿಸುವುದು. ಏಕೆಂದರೆ ನೀವು ಅವಿದ್ಯೆಯನ್ನು ವಿದ್ಯೆಗಿಂತ ಭಿನ್ನವೆಂದು ಭಾವಿಸುವಿರಿ.

ಸೂತ್ರ: ಅಬಾಧೇ ನೈಷ್ಫಲ್ಯಮ್ ॥ ೧೭ ॥

ಸೂತ್ರಾನುವಾದ: (ವಿದ್ಯೆಯು ಅವಿದ್ಯೆಯನ್ನು) ನಾಶಮಾಡದಿದ್ದರೆ (ವಿದ್ಯೆಯು) ನಿಷ್ಫಲವಾಗುವುದು.

ಭಾಷ್ಯ: *ಯದಿ ತು ಅವಿದ್ಯಾರೂಪಮಪಿ ವಿದ್ಯಯಾ ನ ಬಾಧ್ಯೇತ ತರ್ಹಿ ವಿದ್ಯಾವೈಫಲ್ಯಮ್ । ಅವಿದ್ಯಾನಿವರ್ತಕತ್ವಾಭಾವಾದಿತ್ಯರ್ಥಃ ।*

ಅನುವಾದ: ಒಂದು ವೇಳೆ ಅವಿದ್ಯೆಯ ರೂಪವೂ ಸಹ ವಿದ್ಯೆಯಿಂದ ಬಾಧಿಸಲ್ಪಡದಿದ್ದರೆ ವಿದ್ಯೆಯು ವಿಫಲವಾದಂತೆಯೇ. ಅವಿದ್ಯೆಯನ್ನು ಹೋಗಲಾಡಿಸಬಲ್ಲ ಗುಣವು ಇಲ್ಲದಿರುವುದರಿಂದ.

ವಿವರಣೆ: ಅವಿದ್ಯೆಗೆ ಸ್ವತಂತ್ರ ಅಸ್ತಿತ್ವ ಇರುವುದಿಲ್ಲ ಎಂದು ಭಾವ.

ಭಾಷ್ಯ: *ಪಕ್ಷಾಂತರಂ ದೂಷಯತಿ ।*

ಸೂತ್ರ: ವಿದ್ಯಾಬಾಧತ್ವೇ ಜಗತೋಽಪ್ಯೇವಮ್ ॥ ೧೮ ॥

ಅನುವಾದ: ಇನ್ನೊಂದು ಪಕ್ಷವನ್ನೂ ದೂಷಿಸುವರು.

ಸೂತ್ರಾನುವಾದ: ವಿದ್ಯೆಯು (ಅವಿದ್ಯೆಯನ್ನು) ನಾಶಮಾಡುವುದಾದರೆ ಜಗತ್ತು ಸಹ ಹೀಗೆಯೇ ನಾಶವಾಗಬೇಕಾಗುವುದು.

ಭಾಷ್ಯ: *ಯದಿ ಪುನರ್ವಿದ್ಯಯಾ ಚೇತನೇ ಬಾಧ್ಯತ್ವಮೇವ ಅವಿದ್ಯಾತ್ವಮುಚ್ಯತೇ ತಥಾ ಸತಿ ಜಗತಿ ಪ್ರಕೃತಿ ಮಹದಾದ್ಯಖಿಲ ಪ್ರಪಂಚಸ್ಯ ಅಪಿ ಏವಮವಿದ್ಯಾತ್ವಂ ಸ್ಯಾತ್ ।'ಅಥಾತ ಆದೇಶೋ ನೇತಿ ನೇತಿ' (ಬೃ.ಉ.೨.೩.೬.) 'ಅಸ್ಥೂಲಮನಣು' (ಬೃ.ಉ.೩.೮.೮.) ಇತ್ಯಾದಿ ಶ್ರುತಿಭಿಃ ಮಿಥ್ಯಾಜ್ಞಾನಸ್ಯೇವ ಪ್ರಕೃತ್ಯಾದೇರಪಿ ಆತ್ಮನಿ ಬಾಧತ್ವಾತ್ ಇತ್ಯರ್ಥಃ । ತಥಾ ಚ ಅಖಿಲಪ್ರಪಂಚಸ್ಯ ಏವ ಅವಿದ್ಯಾತ್ವೇ ಸತಿ ಏಕಸ್ಯ ಜ್ಞಾನೇನ ಅವಿದ್ಯಾನಾಶಾದನ್ಯೈರಪಿ ಪ್ರಪಂಚೋ ನ ದೃಶ್ಯೇತೇತಿ ಭಾವಃ । ವಿದ್ಯಾನಾಶ್ಯತ್ವಂ ಚ ಅವಿದ್ಯಮಾನಂ ವಕ್ತುಂ ನ ಶಕ್ಯತೇ । ವಿದ್ಯಾನಾಶ್ಯತ್ವೇನ ವಿದ್ಯಾನಾಶ್ಯಗ್ರಹಾಸಂಭವಾದಾತ್ಮಾಶ್ರಯಾದಿತಿ ।*

ಅನುವಾದ: ಒಂದು ವೇಳೆ ವಿದ್ಯೆಯಿಂದ ಚೇತನದಲ್ಲಿ ಆಗುವ ಬಾಧ್ಯತ್ವವನ್ನೇ ಅವಿದ್ಯೆ ಎನ್ನುವಿರಾದರೆ ಹಾಗಾದಲ್ಲಿ ಪ್ರಕೃತಿ ಮಹತ್ ಆದಿ ಪ್ರಪಂಚವೆನ್ನುವ ಜಗತ್ತಿನಲ್ಲಿ ಎಲ್ಲವೂ ಅವಿದ್ಯೆ ಎನಿಸಿಕೊಳ್ಳುತ್ತದೆ. 'ಇನ್ನು ಇದೇ ಆದೇಶವು, ಅದಲ್ಲ, ಅದಲ್ಲ', 'ದೊಡ್ಡದೂ ಅಲ್ಲ, ಅಣುವೂ ಅಲ್ಲ' ಮುಂತಾದ ಶ್ರುತಿಗಳು ಮಿಥ್ಯಾಜ್ಞಾನದಂತೆ ಪ್ರಕೃತ್ಯಾದಿಗಳು ಆತ್ಮನಲ್ಲಿ ಬಾಧಿತವಾಗುತ್ತವೆ. ಹಾಗೆಯೇ ಸಮಸ್ತ ಜಗತ್ತು ಅವಿದ್ಯೆಯಾದಲ್ಲಿ ಒಬ್ಬನ ಜ್ಞಾನದಿಂದ ಅವಿದ್ಯೆ ನಾಶವಾಗುವುದರಿಂದ ಇತರರಿಗೂ

ಪ್ರಪಂಚದ ದರ್ಶನವಾಗದು. ಅವಿದ್ಯೆಯು ವಿದ್ಯೆಯಿಂದ ನಾಶವಾಗುವುದು' ಎಂದು ಹೇಳುವುದೂ ಸಾಧ್ಯವಾಗದು. ವಿದ್ಯೆಯು ನಾಶಮಾಡುವುದು ಎಂದು ತಿಳಿಯಲು ವಿದ್ಯೆಯು ನಾಶಮಾಡುವುದು ಎಂಬ ಅರಿವೇ ಇರದು. ಇಲ್ಲಿ ಆತ್ಮಾಶ್ರಯ ದೋಷವುಂಟಾಗುವುದು.

ವಿವರಣೆ: ವಿದ್ಯೆಯು ನಾಶಮಾಡುವುದು ಎಂದು ತಿಳಿಯಲು ವಿದ್ಯೆಯು ನಾಶಮಾಡುವ ಅವಿದ್ಯೆಯೇ ಇರದು.

ಸೂತ್ರ: ತದ್ರೂಪತ್ವೇ ಸಾದಿವತ್ ॥ ೧೯ ॥

ಸೂತ್ರಾನುವಾದ: (ಜಗತ್ತು ಅವಿದ್ಯೆಯ) ರೂಪವಾದಲ್ಲಿ ಅದಕ್ಕೆ ಆದಿ ಇರುವುದು.

ಭಾಷ್ಯ: *ಭವತು ವಾ ಯಥಾಕಥಂಚಿತ್ ವಿದ್ಯಾಬಾಧ್ಯತ್ವಮೇವ ಅವಿದ್ಯಾತ್ವಮ್ । ತಥಾಪಿ ತಾದೃಶವಸ್ತುನಃ ಸಾದಿತ್ವಮೇವ ಪುರುಷೇಷು, ನ ತು ಅನಾದಿತ್ವಂ ಸಂಭವತಿ । 'ವಿಜ್ಞಾನಘನ ಏವ' (ಬೃ.ಉ.೧.೪.೧೨) ಇತ್ಯಾದಿ ಉಕ್ತಶ್ರುತಿಭಿಃ ಪ್ರಲಯಾದೌ ಪುರುಷಸ್ಯ ಚಿನ್ಮಾತ್ರತ್ವಸಿದ್ಧೇರಿತಿ।*

ಅನುವಾದ: ಅದು ಹೇಗಾದರೂ ಇರಲಿ ಅವಿದ್ಯೆಯು ವಿದ್ಯೆಯಿಂದ ನಾಶವಾಗುವುದು ಎಂದುಕೊಂಡರೂ ಪುರುಷರಲ್ಲಿ ಆ ರೀತಿಯ ವಸ್ತುವು ಆದಿಯನ್ನು ಹೊಂದಿರಲೇ ಬೇಕು ಮತ್ತು ಅನಾದಿತ್ವವು ಸಂಭವಿಸದು. ಏಕೆಂದರೆ ಅವನು ವಿಜ್ಞಾನಮಾತ್ರ ನಾಗಿದ್ದನು (ವಿಜ್ಞಾನಘನ ಏವ) ಎಂಬ ಶ್ರುತಿವಾಕ್ಯಗಳಿಂದ ಪ್ರಳಯಾದಿಗಳಲ್ಲಿ ಪುರುಷನು ಚಿನ್ಮಾತ್ರನಷ್ಟೇ ಆಗಿದ್ದನು ಎಂದು ಸಿದ್ಧವಾಗುವುದು.

ಭಾಷ್ಯ: *ಅಸ್ಮನ್ಮತೇ ಚ ಪ್ರಲಯೇ ಪುರುಷಸ್ಯ ಅಸಂಸಾರಿತ್ವೇಽಪಿ ಸ್ವತಂತ್ರ ನಿತ್ಯ ಪ್ರಧಾನಸಂಯೋಗಾತ್ ಪುನರ್ಬಂಧ ಉಪಪಾದಿತಃ । ತಥಾ ಪ್ರಧಾನ ಸಂಯೋಗೇಽಪಿ ಪ್ರಾಗ್‌ಭವೀಯ ವಿವೇಕ ಏವ ವಾಸನಾದೃಷ್ಟಾದಿ। ದ್ವಾರಾ ನಿಮಿತ್ತಮಿತ್ಯಪ್ಯುಕ್ತಮ್ । 'ತಸ್ಮಾದ್ಯೋಗದರ್ಶನೋಕ್ತಾದನ್ಯಾ ನಾಸ್ತ್ಯವಿದ್ಯಾ' (ಯೋ.ಸೂ.೫.೫.) । ಸಾ ಚ ಬುದ್ಧಿಧರ್ಮ ಏವ ನ ಪುರುಷಧರ್ಮ ಇತಿ ಸಿದ್ಧಮ್ ।*

ಅನುವಾದ: ನಮ್ಮ ಅಭಿಪ್ರಾಯದಲ್ಲಿ ಪ್ರಲಯಕಾಲದಲ್ಲಿ ಪುರುಷನು ಅಸಂಸಾರಿಯಾದರೂ ಸ್ವತಂತ್ರ ಮತ್ತು ನಿತ್ಯವೂ ಆದ ಪ್ರಕೃತಿಯ ಸಂಯೋಗದಿಂದ ಮತ್ತೆ ಬಂಧಕ್ಕೆ ಗುರಿಯಾಗುವನು ಎಂದು ಪ್ರತಿಪಾದಿಸಿದ್ದೇವೆ. ಹಾಗೆ ಪ್ರಕೃತಿಯೊಡನೆ ಸಂಯೋಗ ವಾದರೂ ಪೂರ್ವಜನ್ಮದ ಅವಿವೇಕವೇ ವಾಸನಾ ಮತ್ತು ಅದೃಷ್ಟದ ಮೂಲಕ ನಿಮಿತ್ತವಾಗುವುದೆಂದೂ ಹೇಳಿದ್ದೇವೆ. ಆದ್ದರಿಂದ ಯೋಗದಲ್ಲಿ ಪ್ರತಿಪಾದಿತ ವಾಗಿರುವ ಅವಿದ್ಯೆಯ ಹೊರತಾಗಿ ಬೇರೆ ಅವಿದ್ಯೆಯು ಇಲ್ಲ. ಅದೂ ಸಹ ಬುದ್ಧಿಧರ್ಮವೇ ಹೊರತು ಪುರುಷಧರ್ಮವಲ್ಲ ಎಂಬುದು ಸಿದ್ಧವಾದಂತೆ.

ಭಾಷ್ಯ: *ಅತ್ರೈವಾಧ್ಯಾಯೇ ಕರ್ಮನಿಮಿತ್ತಾ ಪ್ರಧಾನಪ್ರವೃತ್ತಿರಿತಿ ಯದುಕ್ತಂ, ತತ್ರ ಪರಪೂರ್ವಪಕ್ಷಂ ಸಮಾಧತ್ತೇ ಪ್ರಘಟ್ಟಕೇನ ।*

ಅನುವಾದ: ಈ ಅಧ್ಯಾಯದಲ್ಲೇ ಪ್ರಧಾನದ ಪ್ರವೃತ್ತಿಗೆ ಕರ್ಮವೇ ನಿಮಿತ್ತವೆಂದು ಹೇಳಿರುವುದನ್ನು ಅದರ ಪೂರ್ವಪಕ್ಷವನ್ನು ಈ ಸೂತ್ರದಿಂದ ಸಮಾಧಾನ ನೀಡುತ್ತಾರೆ.

ವಿವರಣೆ: ಪ್ರಘಟ್ಟಕ ಎಂದರೆ ಉಪದೇಶ

ಸೂತ್ರ: ನ ಧರ್ಮಾಪಲಾಪಃ ಪ್ರಕೃತಿಕಾರ್ಯವೈಚಿತ್ರ್ಯಾತ್ ॥ ೨೦ ॥

ಸೂತ್ರಾನುವಾದ: ಪ್ರಕೃತಿಕಾರ್ಯದ ವೈಚಿತ್ರ್ಯದ ಕಾರಣ ಧರ್ಮದ ಉಪೇಕ್ಷೆಯನ್ನು ಮಾಡುತ್ತಿಲ್ಲ.

ಭಾಷ್ಯ: *ಅಪ್ರತ್ಯಕ್ಷತಯಾ ಧರ್ಮಾಪಲಾಪೋ ನ ಸಂಭವತಿ । ಪ್ರಕೃತಿ ಕಾರ್ಯೇಷು ವೈಚಿತ್ರ್ಯಾನ್ಯಥಾನುಪಪತ್ತ್ಯಾ ತಸ್ಯ ಅನುಮಾನಾದಿತ್ಯರ್ಥಃ । ಪ್ರಮಾಣಾಂತರಮಾಹ ।*

ಅನುವಾದ: ಪ್ರತ್ಯಕ್ಷವಲ್ಲದ ಕಾರಣ ಧರ್ಮದ ಉಪೇಕ್ಷೆ ಮಾಡಲಾಗದು. ಹಾಗಿಲ್ಲದಿದ್ದಲ್ಲಿ ಪ್ರಕೃತಿಯ ಕಾರ್ಯದಲ್ಲಿ ವೈಚಿತ್ರ್ಯವಿರಲಾರದು, ಅವುಗಳನ್ನು (ಧರ್ಮ–ಅಧರ್ಮ ಗಳನ್ನು) ಅನುಮಾನ ಮಾಡಬಹುದು. ಇನ್ನೊಂದು ಪ್ರಮಾಣವನ್ನು ಹೇಳುತ್ತಾರೆ.

ಸೂತ್ರ: ಶ್ರುತಿಲಿಂಗಾದಿಭಿಸ್ತತ್ಸಿದ್ಧಿಃ ॥ ೨೧ ॥

ಸೂತ್ರಾನುವಾದ: ಶ್ರುತಿ ಮತ್ತು ಲಿಂಗಾದಿಗಳಿಂದ (ಧರ್ಮ–ಅಧರ್ಮಗಳು) ಸಿದ್ಧವಾಗುತ್ತವೆ.

ಭಾಷ್ಯ: *'ಪುಣ್ಯೋ ವೈ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ' ಇತ್ಯಾದಿ ಶ್ರುತೇಃ (ಬೃ.ಉ.೩. ೨. ೧೩) 'ಸ್ವರ್ಗಕಾಮೋಽಶ್ವಮೇಧೇನ ಯಜೇತ' (ಆ. ಶ್ರಾ. ಸೂ. ೧೦. ೬. ೧) ಇತಿ ವಿಧ್ಯಾದಿರೂಪಾಲ್ಲಿಂಗಾದ್ಯೋಗಿ ಪ್ರತ್ಯಕ್ಷಾಭಿಃ ಚ ತತ್ಸಿದ್ಧಿರಿತ್ಯರ್ಥಃ ।*

ಅನುವಾದ: (ಪ್ರತಿಯೊಬ್ಬ ವ್ಯಕ್ತಿಯೂ) 'ಪುಣ್ಯಕರ್ಮದಿಂದ ಪುಣ್ಯವಂತನಾಗುತ್ತಾನೆ, ಪಾಪಕರ್ಮದಿಂದ ಪಾಪಿಯಾಗುವನು.' 'ಸ್ವರ್ಗವನ್ನು ಬಯಸುವವನು ಅಶ್ವಮೇಧಯಾಗವನ್ನು ಮಾಡಬೇಕು' ಮುಂತಾಗಿ ವಿಧಿರೂಪವು ಅನುಮಾನದಿಂದ ಅಥವಾ ಯೋಗಿಪ್ರತ್ಯಕ್ಷ ಮುಂತಾದವುಗಳಿಂದ ಅದರ ಸಿದ್ಧಿಯಾಗುವುದು.

ಭಾಷ್ಯ: *ಪ್ರತ್ಯಕ್ಷಾಭಾವಾದ್ ಧರ್ಮಾಸಿದ್ಧಿರಿತಿ ಪರಸ್ಯ ಹೇತುಂ ಆಭಾಸೀಕರೋತಿ।*

ಅನುವಾದ: (ಧರ್ಮಾಧರ್ಮಗಳು) ಪ್ರತ್ಯಕ್ಷವಲ್ಲದ ಕಾರಣ ಧರ್ಮವೇ ಇಲ್ಲವೆಂದ ಮೇಲೆ ಹೇತ್ವಾಭಾಸವಾಗುವುದು (ಪೂರ್ವಪಕ್ಷಿ)

ಸೂತ್ರ: ನ ನಿಯಮಃ ಪ್ರಮಾಣಾಂತರಾವಕಾಶಾತ್ ॥ ೨೨ ॥

ಸೂತ್ರಾನುವಾದ: ಅನ್ಯ ಪ್ರಮಾಣಗಳಿಗೆ ಅವಕಾಶವಿರುವುದರಿಂದ ಕಾಣಬರದ ವಸ್ತುಗಳು ಇಲ್ಲವೆನ್ನಲಾಗದು.

ಭಾಷ್ಯ: *ಪ್ರತ್ಯಕ್ಷಾಭಾವಾದ್ವಸ್ತ್ವಭಾವ ಇತಿ ನಿಯಮೋನಾಸ್ತಿ । ಪ್ರಮಾಣಾಂತರೇಣಾಪಿ ವಸ್ತೂನಾಂ ವಿಷಯೀಕರಣಾದಿತ್ಯರ್ಥಃ ।*

ಅನುವಾದ: ಯಾವ ವಸ್ತುವು ಪ್ರತ್ಯಕ್ಷವಾಗಿ ಗೋಚರವಾಗದೋ ಆ ವಸ್ತುವು ಇಲ್ಲವೆಂಬ ನಿಯಮವೇನೂ ಇಲ್ಲ. ಬೇರೆಯ ಪ್ರಮಾಣಗಳಿಂದ ವಸ್ತುಗಳನ್ನು ವಿಷಯೀಕರಿಸುವುದು ಸಾಧ್ಯ, ಎಂದರ್ಥ.

ಭಾಷ್ಯ: *ಧರ್ಮವದಧರ್ಮಮಪಿ ಸಾಧಯತಿ ।*

ಸೂತ್ರ: ಉಭಯತ್ರಾಪ್ಯೇವಮ್ ॥ ೨೩ ॥

ಅನುವಾದ: ಧರ್ಮದಂತೆ ಅಧರ್ಮವನ್ನು ಸಾಧಿಸುತ್ತಾರೆ.

ಸೂತ್ರಾನುವಾದ: ಎರಡರಲ್ಲೂ ಸಮವಾಗಿರುತ್ತದೆ.

ಭಾಷ್ಯ: *ಧರ್ಮವದಧರ್ಮೇಽಪಿ ಏವಂ ಪ್ರಮಾಣಾನಿ ಇತ್ಯರ್ಥಃ ।*

ಅನುವಾದ: (ಉಭಯತ್ರ) ಎಂದರೆ ಧರ್ಮದಂತೆ ಅಧರ್ಮದಲ್ಲಿಯೂ ಪ್ರಮಾಣಗಳು (ಸಿದ್ಧಗೊಳಿಸುತ್ತವೆ).

ಸೂತ್ರ: ಅರ್ಥಾತ್ ಸಿದ್ಧಿಶ್ಚೇತ್ ಸಮಾನಮುಭಯೋಃ ॥ ೨೪ ॥

ಸೂತ್ರಾನುವಾದ: ಯಾವುದಾದರೂ ವಿಷಯದಲ್ಲಿ ಸಿದ್ಧಿಯುಂಟಾದಲ್ಲಿ ಅದು ಸಮಾನವಾಗಿ (ಧರ್ಮ ಮತ್ತು ಅಧರ್ಮಗಳೆರಡಕ್ಕೂ) ಅನ್ವಯಿಸುವುದು.

ಭಾಷ್ಯ: *ನನು ವಿಧ್ಯನ್ಯಥಾನುಪಪತ್ತಿರೂಪಯಾ ಅರ್ಥಾಪತ್ತ್ಯಾ ಧರ್ಮಸಿದ್ಧಿಃ ನಾಸ್ತ್ಯಧರ್ಮ ಇತಿ ಕಥಂ ಶ್ರೌತಲಿಂಗಾತಿದೇಶೋಽಧರ್ಮಃ ।*

ಅನುವಾದ: ವಿಧಿಯನ್ನು ಬೇರೊಂದು ರೀತಿಯಲ್ಲಿ ಅರ್ಥಮಾಡಿಕೊಳ್ಳದಿರುವಾಗ ಅರ್ಥಾಪತ್ತಿಯಿಂದ ಧರ್ಮಸಿದ್ಧಿಸುವುದು, ಆಗ ಅಲ್ಲಿ ಅಧರ್ಮವಿಲ್ಲ ಎಂದಾಗುವುದು. ಆದ್ದರಿಂದ ಶ್ರುತಿಯ ಕಾರಣ ಅಧರ್ಮವನ್ನು ಅತಿದೇಶವೆಂದು ಹೇಗೆ ಹೇಳುವುದು?

ವಿವರಣೆ: ಅತಿದೇಶವೆಂದರೆ ಒಂದರ ಧರ್ಮವನ್ನು ಇನ್ನೊಂದರಲ್ಲಿ ಹೇಳುವುದು.

ಭಾಷ್ಯ: *ಇತಿ ಚೇನ್ನೇತ್ಯಾಹ–ಯತಃ ಸಮಾನಮುಭಯೋಃ ಧರ್ಮಾಧರ್ಮಾಯೋಃ ಲಿಂಗಮಸ್ತಿ, 'ಪರದಾರಾನ್ನ ಗಚ್ಛೇತ್' ಇತಿ ನಿಷೇಧವಿಧ್ಯಾದೇಃ ಏವ ಅಧರ್ಮಲಿಂಗತ್ವಾದಿತ್ಯರ್ಥಃ ।*

ವಿವರಣೆ: ಅಲ್ಲ, ಹಾಗಲ್ಲ. ಎರಡರಲ್ಲೂ ಧರ್ಮಾಧರ್ಮಗಳಲ್ಲಿ ಸಮಾನವಾದ ಲಿಂಗವಿದೆ. 'ಪರಸ್ತ್ರೀಯರ ಬಳಿ ಹೋಗಬಾರದು' ಎಂದು ಮುಂತಾದ ನಿಷೇಧ–ವಿಧಿಗಳಿಗಾಗಿಯೇ ಅಧರ್ಮದ ಹೇತುವನ್ನು ಹೇಳಿದ್ದಾರೆ ಎಂದರ್ಥ.

ವಿವರಣೆ: ಇಲ್ಲಿ ಅರ್ಥಾಪತ್ತಿಯಿಂದ ವಿಧಿ–ನಿಷೇಧಗಳನ್ನು ಗ್ರಹಿಸಬಹುದು.

ಭಾಷ್ಯ: *ನನು ಧರ್ಮಾದಿಕಂ ಚೇತ್ ಸ್ವೀಕೃತಂ ತರ್ಹಿ ಪುರುಷಾಣಾಂ ಧರ್ಮಾದಿಮತ್ತ್ವೇನ ಪರಿಣಾಮದ್ಯಾಪತ್ತಿರಿತ್ಯಾಶಂಕಾಂ ಪರಿಹರತಿ ।*

ಅನುವಾದ: ಧರ್ಮಾದಿಗಳನ್ನು (ನಿಮಿತ್ತವೆಂದು) ಭಾವಿಸಿದಲ್ಲಿ ಆಗ ಪುರುಷರಲ್ಲಿ ಧರ್ಮಾದಿಗಳಿರುವುದರಿಂದ ಪರಿಣಾಮವೇ ಮೊದಲಾದುವು ಸಂಭವಿಸುವುದಿಲ್ಲವೆ? ಎಂಬ ಶಂಕೆಯನ್ನು ಪರಿಹರಿಸುವರು.

ಸೂತ್ರ: ಅಂತಃಕರಣಧರ್ಮತ್ವಂ ಧರ್ಮಾದೀನಾಮ್ ॥ ೨೫ ॥

ಸೂತ್ರಾನುವಾದ: ಧರ್ಮ–ಅಧರ್ಮ ಮುಂತಾದುವು ಅಂತಃಕರಣದ (ಬುದ್ಧಿಯ) ಧರ್ಮಗಳು (ಪರಿಣಾಮಗಳು)

ಭಾಷ್ಯ: *ಆದಿಶಬ್ದೇನ ವೈಶೇಷಿಕಶಾಸ್ತ್ರೋಕ್ತಾಃ ಸರ್ವೇ ಆತ್ಮವಿಶೇಷಗುಣಾಃ ಗೃಹ್ಯಂತೇ। ನ ಚೈವಂ ಪ್ರಲಯೇ ಅಂತಃಕರಣಾಭಾವಾತ್ ಧರ್ಮಾದಿಕಂ ಕ್ವ ತಿಷ್ಠತು ಇತಿ ವಾಚ್ಯಮ್ । ಆಕಾಶವದಂತಃಕರಣಸ್ಯಾತ್ಯಂತ – ವಿನಾಶಾಭಾವಾತ್ । ಅಂತಃಕರಣಂ ಹಿ ಕಾರ್ಯ । ಕಾರಣೋಭಯರೂಪಮಿತಿ ಪ್ರಾಗೇವ ವ್ಯಾಖ್ಯಾತಮ್ । ಅತಃ ಕಾರಣಾವಸ್ಥೇ ಪ್ರಕೃತ್ಯಂಶ ವಿಶೇಷೇಽನ್ತಃಕರಣೇ ಧರ್ಮಾಧರ್ಮ ಸಂಸ್ಕಾರಾದಿಕಂ ತಿಷ್ಠತೀತಿ ।*

ಅನುವಾದ: 'ಆದಿ' ಶಬ್ದದಿಂದ ವೈಶೇಷಿಕಶಾಸ್ತ್ರದಲ್ಲಿ ಹೇಳಿರುವ ಎಲ್ಲಾ ಆತ್ಮ ವಿಶೇಷಗುಣಗಳನ್ನು ಅಂಗೀಕರಿಸಲಾಗಿದೆ. ಹೀಗೆ ಪ್ರಲಯದಲ್ಲಿಯೂ ಅಂತಃಕರಣವು ಇಲ್ಲದ ಕಾರಣ ಧರ್ಮಾದಿಗಳು ಎಲ್ಲಿ ನಿಲ್ಲುತ್ತವೆ ಎಂಬುದನ್ನು ಹೇಳಬೇಕು. ಅಂತಃಕರಣವು ಆಕಾಶದಂತೆ ಅತ್ಯಂತವಾಗಿ ವಿನಾಶವಾಗಲಾರದು. ಅಂತಃಕರಣವು ಕಾರ್ಯ–ಕಾರಣ ಎರಡೂ ರೂಪವುಳ್ಳದ್ದೆಂದು ಮೊದಲೇ ಹೇಳಲಾಗಿದೆ. ಆದ್ದರಿಂದ ಅಂತಃಕರಣವು ಪ್ರಕೃತಿಯ ಅಂಶವಾಗಿ ವಿಶೇಷರೂಪದಲ್ಲಿರುವಾಗ ಧರ್ಮಾಧರ್ಮ ಸಂಸ್ಕಾರಗಳು ಮೊದಲಾಗಿ ಎಲ್ಲವೂ ಅದರಲ್ಲಿ ಉಳಿಯುತ್ತವೆ.

ಭಾಷ್ಯ: *ಸ್ಯಾದೇತತ್ । ಪ್ರಕೃತಿಕಾರ್ಯವೈಚಿತ್ರ್ಯಾತ್ ಶ್ರುತ್ಯಾದೇಶ್ಚ ಧರ್ಮಾದಿಸಿದ್ಧಿರಿತಿ ಯದುಕ್ತಂ ತದಯುಕ್ತಮ್ । ತ್ರಿಗುಣಾತ್ಮಕ ಪ್ರಕೃತೇಃ ತತ್ಕಾರ್ಯಾಣಾಂ ಚ ಭವತಾಂ ಶ್ರುತ್ಯೈವಬಾಧಾತ್ । 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' (ಶ್ವೇ. ಉ. ೬. ೧೧) 'ಅಥಾತ ಆದೇಶೋ ನೇತಿ ನೇತಿ' (ಬೃ.ಉ.೨.೩.೬.), ಅಶಬ್ದಂ ಅಸ್ಪರ್ಶಮರೂಪಮವ್ಯಯಂ ತಥಾ ನಿತ್ಯಮಗಂಧವಚ್ಚ (ಕ.ಉ.೧.೩.೧೫.) ಇತ್ಯಾದಿನಾ । 'ನ ನಿರೋಧೋ ನ ಚೋತ್ಪತ್ತಿಃ' 'ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ' (ಛಾಂ.೧.೧.೪.) ಇತ್ಯಾದಿನಾ ಚೇತಿ । ತದೇತತ್ ಪರಿಹರತಿ ।*

ಅನುವಾದ: ಹಾಗೆಯೇ ಆಗಲಿ. ಪ್ರಕೃತಿಯ ಕಾರ್ಯವೈಚಿತ್ರ್ಯದ ಕಾರಣ ಮತ್ತು ಶ್ರುತ್ಯಾದಿ ವಚನಗಳ ಆಧಾರದ ಮೇಲೆ ಧರ್ಮಾದಿಗಳು ಸಿದ್ಧಿಸುತ್ತವೆ ಎಂದು

ಹೇಳುವುದು ಸರಿಯಲ್ಲ. ತ್ರಿಗುಣಾತ್ಮಕವಾದ ಪ್ರಕೃತಿ ಮತ್ತು ಅದರ ಕಾರ್ಯಗಳು ತಮ್ಮ ಶ್ರುತಿವಚನಗಳಿಂದಲೇ ಅಲ್ಲಗಳೆಯಲ್ಪಟ್ಟಿದೆ. 'ಸಾಕ್ಷಿಯೂ, ಚೇತನ ಸ್ವರೂಪನೂ, ಕೇವಲನೂ ಮತ್ತು ಗುಣರಹಿತನು, 'ಇನ್ನು ನೇತಿ ನೇತಿ ಎಂದು (ಬ್ರಹ್ಮನನ್ನು) ನಿರ್ದೇಶಿಸಿದೆ', ಶಬ್ದವಿಲ್ಲದ, ಸ್ಪರ್ಶವಿಲ್ಲದ, ರೂಪವಿಲ್ಲದ ಅವಿನಾಶಿಯಾದ ಅವನು ರಸವಿಲ್ಲದ, ಗಂಧವಿಲ್ಲದ, ನಿತ್ಯನಾದವನು, 'ನಿರೋಧವೂ ಇಲ್ಲ, ಉತ್ಪತ್ತಿಯೂ ಇಲ್ಲದವನು,' 'ವಿಕಾರವೆಂದು ಕೇವಲ ಮಾತಿನಲ್ಲಿ ಹೇಳುವರು ಆದರೆ ಸತ್ಯವೆಂದರೆ ಅದೆಲ್ಲ ಮಣ್ಣೆ!' ಈ ಅಭಿಪ್ರಾಯವನ್ನು ಹೋಗಲಾಡಿಸುತ್ತಾರೆ.

ಸೂತ್ರ: ಗುಣಾದೀನಾಂ ಚ ನಾತ್ಯಂತ ಬಾಧಃ ॥ ೨೬ ॥

ಸೂತ್ರಾನುವಾದ: ಅಲ್ಲದೆ ಗುಣಾದಿಗಳಿಗೂ ಅತ್ಯಂತ ಬಾಧವೇನಿಲ್ಲ.

ಭಾಷ್ಯ: *ಗುಣಾದೀನಾಂ ಸತ್ತ್ವಾದೀನಾಂ ತದ್ಧರ್ಮಾಣಾಂ ಚ ಸುಖಾದೀನಾಂ, ತತ್ಕಾರ್ಯಾಣಾಂ ಮಹದಾದೀನಾಂ ಸ್ವರೂಪತಃ ನಾಸ್ತಿ ಬಾಧಃ । ಕಿಂ ತು ಸಂಸರ್ಗತಏವ ಚೇತನೇ ಬಾಧಃ ಅಯಸ್ಯೌಷ್ಣ್ಯ ಬಾಧವತ್ । ತಥಾ ಕಾಲತ ಏವ ಅವಸ್ಥಾದಿಭಿಃ ಬಾಧೋ ಗುಣಾದ್ಯಖಿಲ ಪರಿಣಾಮಿನ ಇತ್ಯರ್ಥಃ ।*

ಅನುವಾದ: ಸತ್ತ್ವವೇ ಮೊದಲಾದ ಗುಣಗಳೂ ಮತ್ತು ಅವುಗಳ ಧರ್ಮಗಳಾದ ಸುಖಾದಿಗಳ ಮತ್ತು ಅವುಗಳಿಂದುಂಟಾಗುವ ಕಾರ್ಯಗಳಾದ ಮಹದಾದಿಗಳಲ್ಲಿ ಸ್ವರೂಪತಃ ಯಾವ ಬಾಧವೂ ಇಲ್ಲ. ಆದರೆ ಸಂಸರ್ಗದಿಂದಲೇ ಚೇತನದಲ್ಲಿ ಬಾಧವುಂಟಾಗುವುದು, ಕಬ್ಬಿಣದಲ್ಲಿ ಉಷ್ಣತೆಯ ಬಾಧವುಂಟಾದಂತೆ ಹಾಗೆಯೇ ಕಾಲದ ಕಾರಣ ಅವಸ್ಥಾದಿಗಳ ಮೂಲಕ ಗುಣಾದಿ ಸಮಸ್ತ ಪರಿಣಾಮಗೊಳ್ಳುವ ಪದಾರ್ಥಗಳ ಬಾಧ ಉಂಟಾಗುವುದು. ಕಬ್ಬಿಣದಲ್ಲಿ ಉಷ್ಣತೆಯು ಬಾಧೆವುಂಟಾದಂತೆ. ಹಾಗೆಯೇ ಕಾಲದ ಕಾರಣ ಅವಸ್ಥಾದಿಗಳ ಮೂಲಕ ಗುಣಾದಿ ಸಮಸ್ತ ಪರಿಣಾಮಗೊಳ್ಳುವ ಪದಾರ್ಥಗಳ ಬಾಧಲುಂಟಾಗುವುದು.

ಭಾಷ್ಯ: *ಕುತಃ ಪುನಃ ಸ್ವರೂಪತ ಏವ ಬಾಧೋ ನ ಭವತಿ, ಸ್ವಪ್ನಮನೋರಥಾದಿವದಿತ್ಯಾಕಾಂಕ್ಷಾಯಾಮಾಹ ।*

ಅನುವಾದ: ಸ್ವಪ್ನ, ಮನೋರಥಗಳಂತೆ ಗುಣಗಳಾಗಲಿ ಅವುಗಳ ಕಾರ್ಯಗಳಾಗಲಿ ಸ್ವರೂಪತಃ ಅವುಗಳಿಗೆ ಬಾಧವೇಕೆ ಆಗದು? ಎಂಬ ಆಕಾಂಕ್ಷೆಯನ್ನು ನಿವಾರಿಸುವರು.

ಸೂತ್ರ: ಪಂಚಾವಯವಯೋಗಾತ್ ಸುಖಸಂವಿತ್ತಿಃ ॥ ೨೭ ॥

ಸೂತ್ರಾನುವಾದ: (ಅನುಮಾನದ) ಐದು ಅಂಗಗಳ ಯೋಗದಿಂದ ಸುಖಸಂಪತ್ತನ್ನು (ಅನುಮಾನ ಮಾಡಬಹುದು.)

ಭಾಷ್ಯ: *ಅತ್ರ ವಿಶಿಷ್ಯ ಪಕ್ಷೀಕರಣಾಯ ವಿವಾದವಿಷಯೈಕದೇಶಸ್ಯ ಸುಖಮಾತ್ರಸ್ಯ ಗ್ರಹಣಂ ಸರ್ವವಿಷಯೋಪಲಕ್ಷಕಮ್ । ಸುಖಾದಿಸಂವಿತ್ತಿರಿತಿ ಪಾಠಸ್ತು*

ಸಮೀಚೀನಃ । ಪಂಚಾವಯವಾಶ್ಚ ನ್ಯಾಯಸ್ಯ ಪ್ರತಿಜ್ಞಾಹೇತೂದಾಹರಣೋಪನಯನಿಗಮನಾನಿ । ತೇಷಾಂ ಯೋಗಾನ್ಮೇಲನಾತ್ ಸುಖಾದ್ಯಖಿಲಪದಾರ್ಥಸಿದ್ಧಿರಿತ್ಯರ್ಥಃ । ಪ್ರಯೋಗಶ್ಚಾಯಮ್ – ಸುಖಂ ಸತ್ ಅರ್ಥಕ್ರಿಯಾಕಾರಿತ್ವಾತ್ । ಯದ್ಯದರ್ಥಕ್ರಿಯಾಕಾರಿ ತತ್ ಸತ್, ಯಥಾ ಚೇತನಃ । ಪುಲಕಾದಿ ರೂಪಾರ್ಥಕ್ರಿಯಾಕಾರಿ ಚ ಸುಖಂ, ತಸ್ಮಾತ್ ಸದಿತಿ । ಚೇತನಾ । ನಾಂ ಚ ಅವಿಕಾರಿತ್ವೇಽಪಿ ವಿಷಯಪ್ರಕಾಶ ಏವ ಅರ್ಥಕ್ರಿಯೇತಿ । ನಾಸ್ತಿಕಂ ಪ್ರತಿ ಚ ವ್ಯತಿರೇಕ್ಯನುಮಾನಂ ಕರ್ತವ್ಯಮ್ । ತತ್ರ ಚ ಶಶಶೃಂಗಾದಿರ್ದೃಷ್ಟಾಂತಃ ।

ಅನುವಾದ: ಇಲ್ಲಿ ವಿಶೇಷವಾಗಿ 'ಪಕ್ಷ'ವಾಗಿಟ್ಟುಕೊಳ್ಳಲು ವಿವಾದವಿಷಯದ ಏಕದೇಶವಾದ ಸುಖವೊಂದನ್ನೇ ತೆಗೆದುಕೊಳ್ಳುವುದು ಎಲ್ಲ ವಿಷಯಗಳನ್ನೂ ತೆಗೆದುಕೊಂಡಂತೆ. ಸೂತ್ರಪಾಠದಲ್ಲಿ 'ಸುಖಸಂವಿತ್ತಿ' ಎಂಬುದರ ಬದಲು 'ಸುಖಾದಿಸಂವಿತ್ತಿಃ' ಎಂದಿದ್ದರೆ ಚೆನ್ನಾಗಿತ್ತು. ನ್ಯಾಯದ ಐದು ಅನುಮಾನಾಂಗಗಳು ಪ್ರತಿಜ್ಞಾ, ಹೇತು, ಉದಾಹರಣ, ಉಪನಯ ಮತ್ತು ನಿಗಮನಗಳು. ಅವುಗಳು 'ಯೋಗಾತ್' ಎಂದರೆ ಸೇರುವುದರಿಂದ ಸುಖಾದಿ ಅಖಿಲ ಪದಾರ್ಥಗಳ ಸಿದ್ಧಿಯಾಗುವುದು. ಪ್ರಯೋಗವು ಹೀಗಿರುವುದು:

ಪ್ರತಿಜ್ಞೆ – ಸುಖವು ಇರುವುದು.

ಹೇತು – ಅರ್ಥಕ್ರಿಯಾಕಾರಿತ್ವವಿರುವುದರಿಂದ

ಉದಾಹರಣ: ಯಾವುದು ಅರ್ಥವನ್ನು ಕ್ರಿಯೆಯನ್ನೂ ಉಂಟು ಮಾಡುವುದೋ ಅದು ಸತ್; ಚೇತನದಂತೆ.

ಉಪನಯ: ಪುಲಕವೇ ಮೊದಲಾದ ಅರ್ಥಕ್ರಿಯಾಕಾರಿಯಾದುದು ಸುಖ.

ನಿಗಮನ: ಆದ್ದರಿಂದ (ಸುಖವೂ) ಸತ್ (ಇರುವುದು)

ಚೇತನಗಳು ಅವಿಕಾರಿಗಳಾಗಿದ್ದರೂ 'ವಿಷಯಪ್ರಕಾಶ'ವೇ ಅವುಗಳ ಅರ್ಥಕ್ರಿಯಾ ಕಾರಿತ್ವವು. ನಾಸ್ತಿಕನ ಬಗ್ಗೆ ವ್ಯತಿರೇಕಿ ಅನುಮಾನ ಮಾಡಬೇಕು. ಅದರಲ್ಲಿ ಶಶಶೃಂಗವೇ ಮೊದಲಾದವು ದೃಷ್ಟಾಂತಗಳು.

ವಿವರಣೆ: ವ್ಯಾಖ್ಯಾನಕಾರನಾದ ನಾಗೇಶಭಟ್ಟನು 'ಸುಖಾದಿ ಸಂವಿತ್ತಿಃ' ಎಂದೇ ಬರೆದಿದ್ದಾನೆ.

ಭಾಷ್ಯ: *ಪ್ರತ್ಯಕ್ಷಾತಿರಿಕ್ತಂ ಪ್ರಮಾಣಮೇವ ನ ಭವತಿ, ವ್ಯಾಪ್ಯತ್ವಾದಿ ಅಸಿದ್ಧೇರಿತಿ ಚಾರ್ವಾಕಃ ಪುನಃ ಶಂಕತೇ ।*

ಅನುವಾದ: ಪ್ರತ್ಯಕ್ಷವನ್ನು ಬಿಟ್ಟು ಪ್ರಮಾಣವೇ ಇಲ್ಲ, ವ್ಯಾಪ್ಯತ್ವವು ಸಿದ್ಧವಾಗದು (ಎಂಬ ದೋಷದ ಕಾರಣ) ಚಾರ್ವಾಕನು ಮತ್ತೆ ಶಂಕಿಸುತ್ತಾನೆ.

ಸೂತ್ರ: ನ ಸಕೃದ್ಗ್ರಹಣಾತ್ ಸಂಬಂಧಸಿದ್ಧಿಃ ॥ ೨೮ ॥

ಸೂತ್ರಾನುವಾದ: ಒಮ್ಮೆ ನೋಡಿದ ಮಾತ್ರಕ್ಕೆ ವ್ಯಾಪ್ಯತ್ವದ ಸಂಬಂಧ ಸಿದ್ಧಿಸದು.

ಭಾಷ್ಯ: *ಸಕೃತ್ ಸಹಚಾರಗ್ರಹಣಾತ್ ಸಂಬಂಧೋ ವ್ಯಾಪ್ತಿರ್ನಸಿಧ್ಯತಿ । ಭೂಯಸ್ತ್ವಂ ಚಾನನುಗತಮ್ । ಅತೋ ವ್ಯಾಪ್ತಿಗ್ರಹಾಸಂಭವಾತ್ ನ ಅನುಮಾನೇನ ಅರ್ಥಸಿದ್ಧಿರಿತ್ಯರ್ಥಃ ।*

ಅನುವಾದ: ಒಮ್ಮೆ ಜೊತೆಯಲ್ಲಿ ಗ್ರಹಿಸಿದ ಕಾರಣ (ಸಂಬಂಧ) ವ್ಯಾಪ್ತಿಯು ಸಿದ್ಧಿಸದು. ಅದರೊಡನೆ ಅಧಿಕತೆಯು ಗೊತ್ತಾಗದು. ವ್ಯಾಪ್ತಿಯನ್ನು ತಿಳಿಯದೆ ಅನುಮಾನ ದಿಂದ ಅರ್ಥಸಿದ್ಧಿ ಆಗುವುದಿಲ್ಲ.

ಭಾಷ್ಯ: *ಸಮಾಧತ್ತೇ । ಸಮಾಧಾನ ಮಾಡುವನು.*

ಸೂತ್ರ: ನಿಯತಧರ್ಮಸಾಹಿತ್ಯಮುಭಯೋರೇಕತರಸ್ಯ ವಾ ವ್ಯಾಪ್ತಿಃ ॥೨೯॥

ಸೂತ್ರಾನುವಾದ: ನಿಯತಧರ್ಮವಾದ ರೂಪದಲ್ಲಿ ಧರ್ಮಗಳು ಒಟ್ಟಿಗೇ ಇರುವುದು ವ್ಯಾಪ್ತಿ; ಎರಡರಲ್ಲೂ ಧರ್ಮಗಳು ಒಟ್ಟಿಗೇ ಇರಬಹುದು ಅಥವಾ ಯಾವುದಾದರೂ ಒಂದರಲ್ಲಿ ಇರಬಹುದು.

ಭಾಷ್ಯ: *ಧರ್ಮಸಾಹಿತ್ಯಂ ಧರ್ಮತಾಯಾಂ ಸಾಹಿತ್ಯಮ್ । ಸಹಚಾರ ಇತಿ ಯಾವತ್ । ತಥಾ ಚೋಭಯೋಃ ಸಾಧ್ಯಸಾಧನಯೋಃ ಏಕಿತರಸ್ಯ ಸಾಧನಮಾತ್ರಸ್ಯ ವಾ ನಿಯತಃ ಅವ್ಯಭಿಚಾರಿತೋ ಯಃ ಸಹಚರಃ ಸ ವ್ಯಾಪ್ತಿರಿತ್ಯರ್ಥಃ । ಉಭಯೋರಿತಿ ಸಮವ್ಯಾಪ್ತಿಪಕ್ಷೇ ಪ್ರೋಕ್ತಂ, ನಿಯಮಶ್ಚಾನುಕೂಲತರ್ಕೇಣ ಗ್ರಾಹ್ಯ ಇತಿ ನ ವ್ಯಾಪ್ತಿ ಗ್ರಹಾಸಂಭವ ಇತ ಭಾವಃ ।*

ಅನುವಾದ: 'ಧರ್ಮಸಾಹಿತ್ಯ'ವೆಂದರೆ ಧರ್ಮತೆಯಲ್ಲಿ ಸಾಹಿತ್ಯ ಎಂದರೆ ಸಹಚಾರವೆಂದರ್ಥ. ವ್ಯಾಪ್ತಿಯೆಂದರೆ ಸಾಧ್ಯಸಾಧನಗಳಲ್ಲಿ ಸಾಧನ ಒಂದರಲ್ಲಾಗಲಿ ಅಥವಾ ಎರಡರಲ್ಲೂ ನಿಯತರೂಪದಲ್ಲಿ ಎಂದರೆ ಅವ್ಯಭಿಚಾರಿತರೂಪದಲ್ಲಿ ಯಾವುದು ಸಹಚಾರವಾಗಿರು ವುದೋ ಅದನ್ನು ವ್ಯಾಪ್ತಿಯೆನ್ನುವರು. ಎರಡೂ (ಉಭಯೋಃ) ಸಮವ್ಯಾಪ್ತಿ ಯಾದಲ್ಲಿ ಎಂಬುದನ್ನೂ ಹೇಳಿದ್ದಾರೆ. ನಿಯಮವೂ ಸಹ ಅನುಕೂಲತರ್ಕದಿಂದ ತೆಗೆದುಕೊಳ್ಳಬೇಕು ಎಂದು.

ವಿವರಣೆ: ಸಾಧನ ಮತ್ತು ಸಾಧ್ಯಗಳ ನಿಯತಸಾಹಚರ್ಯವನ್ನು ವ್ಯಾಪ್ತಿ ಎನ್ನುತ್ತಾರೆ. ಸಮವ್ಯಾಪ್ತಿಯೆಂದರೆ ಸಾಧನ, ಸಾಧ್ಯಗಳು ಎರಡೂ ಪರಸ್ಪರ ನಿಯತಸಾಹಚರ್ಯ ಹೊಂದಿರುತ್ತವೆ. 'ಅಸಮವ್ಯಾಪ್ತಿ'ಯಲ್ಲಿ ಒಂದೇ ಧರ್ಮದ ಸಾಹಚರ್ಯವಿರುತ್ತದೆ. ಧೂಮ ಮತ್ತು ಅಗ್ನಿಯ ಸಂಬಂಧ ಅಸಮವ್ಯಾಪ್ತಿ (ವಿಷಮವ್ಯಾಪ್ತಿ). ಧೂಮವಿರು ವೆಡೆಯೆಲ್ಲ ಅಗ್ನಿ ಇರುತ್ತದೆ. ಆದರೆ ಅಗ್ನಿ ಇರುವೆಡೆಯೆಲ್ಲ ಧೂಮ ಇರಬೇಕೆಂದಿಲ್ಲ.

ಭಾಷ್ಯ: *ವ್ಯಾಪ್ತಿರ್ವಕ್ಷ್ಯಮಾಣಶಕ್ತ್ಯಾದಿರೂಪಂ ಪದಾರ್ಥಾಂತರಂ ನ ಭವತಿ ಇತ್ಯಾಹ.*

ಸೂತ್ರ: ನ ತತ್ತ್ವಾಂತರಂ ವಸ್ತುಕಲ್ಪನಾಪ್ರಸಕ್ತೇಃ ॥ ೩೦ ॥

ಅನುವಾದ: ಮುಂದೆ ಹೇಳುವ ಶಕ್ತ್ಯಾದಿರೂಪದ ವ್ಯಾಪ್ತಿಯೆಂಬ ಬೇರೊಂದು ಪದಾರ್ಥವಿಲ್ಲ.

ಸೂತ್ರಾನುವಾದ: (ವ್ಯಾಪ್ತಿ) ಎಂಬ ಬೇರೊಂದು ತತ್ತ್ವವಿಲ್ಲ. ಅದರಿಂದ (ವೃಥಾ) ಬೇರೊಂದು ವಸ್ತುವನ್ನು ಕಲ್ಪಸಬೇಕಾಗುವುದು.

ಭಾಷ್ಯ: *ನಿಯತಧರ್ಮಸಾಹಿತ್ಯಾತಿರಿಕ್ತಾ ವ್ಯಾಪ್ತಿರ್ನ ಭವತಿ । ವ್ಯಾಪ್ತಿತ್ವಾಶ್ರಯಸ್ಯ ವಸ್ತುನೋಽಪಿ ಕಲ್ಪನಾಪ್ರಸಂಗಾತ್ । ಅಸ್ಮಾಭಿಃ ತು ಸಿದ್ಧವಸ್ತುನಃ ಏವ ವ್ಯಾಪ್ತಿತ್ವಮಾತ್ರಂ ಕ್ಲಪ್ತಮಿತ್ಯರ್ಥಃ ।*

ಅನುವಾದ: ನಿಯಮಪೂರ್ವಕವಾಗಿ ಧರ್ಮದೊಡನೆ ಸೇರುವುದನ್ನು ಮೀರಿ ವ್ಯಾಪ್ತಿ ಇರುವುದಿಲ್ಲ. ಏಕೆಂದರೆ ವ್ಯಾಪ್ತಿತ್ವಾಶ್ರಯದಲ್ಲಿ ವಸ್ತುವನ್ನೂ ಕಲ್ಪಿಸಬೇಕಾಗುವುದು. ಆದರೆ ಸಿದ್ಧವಸ್ತುವಿನ ವ್ಯಾಪ್ತಿತ್ವವನ್ನು ಮಾತ್ರ ಕಲ್ಪಿಸಿದ್ದೇವೆ.

ವಿವರಣೆ: ಅವ್ಯಭಿಚಾರಿಯಾದ ಸಾಹಚರ್ಯವಿರುವ ವ್ಯಾಪ್ತಿಯನ್ನು ಮಾತ್ರ ನಾವು ಅಂಗೀಕರಿಸಿದ್ದೇವೆ ಎಂದರ್ಥ.

ಭಾಷ್ಯ: *ಪರಮತಮಾಹ* – ಬೇರೆಯವರ ಅಭಿಪ್ರಾಯವನ್ನು ಹೇಳಿದ್ದಾರೆ.

ಸೂತ್ರ: ನಿಜಶಕ್ತ್ಯುದ್ಭವಮಿತ್ಯಾಚಾರ್ಯಾಃ ॥ ೩೧ ॥

ಸೂತ್ರಾನುವಾದ: ತನ್ನ ಶಕ್ತಿಯಿಂದ ಉದ್ಭವವಾದ (ಶಕ್ತಿವಿಶೇಷವನ್ನು) ಕೆಲವು ಆಚಾರ್ಯರು (ವ್ಯಾಪ್ತಿ ಎನ್ನುವರು).

ಭಾಷ್ಯ: *ಅಪರೇ ತ್ವಾಚಾರ್ಯಾ ವ್ಯಾಪ್ಯಸ್ಯ ಸ್ವಶಕ್ತಿಜನ್ಯಂ ಶಕ್ತಿವಿಶೇಷರೂಪಂ ತತ್ತ್ವಾಂತರಮೇವ ವ್ಯಾಪ್ತಿರಿತ್ಯಾಹುಃ । ನಿಜಶಕ್ತಿಮಾತ್ರಂ ತು ಯಾವದ್ದ್ರವ್ಯಸ್ಥಾಯಿತಯಾ ನ ವ್ಯಾಪ್ತಿಃ । ದೇಶಾಂತರಗತಸ್ಯ ಧೂಮಸ್ಯಾಪಿ ಸಾ ಶಕ್ತಿರ್ನಾಶ್ಯತೇ ಇತಿ ನೋಕ್ತಲಕ್ಷಣೇಽತಿವ್ಯಾಪ್ತಿಃ । ಸ್ವಮತೇತು ಉತ್ಪತ್ತಿಕಾಲಾವಚ್ಛಿನ್ನತ್ವೇ ಧೂಮೋ ವಿಶೇಷಣೀಯ ಇತಿ ಭಾವಃ ।*

ಅನುವಾದ: ಇತರ ಆಚಾರ್ಯರು, 'ವ್ಯಾಪ್ಯದ ತನ್ನ ಶಕ್ತಿಯಿಂದಲೇ ಉಂಟಾದ ವಿಶೇಷಶಕ್ತಿರೂಪದ ಬೇರೊಂದು ತತ್ತ್ವವನ್ನು ವ್ಯಾಪ್ತಿ ಎಂದು ಹೇಳುವರು. ತನ್ನ ಶಕ್ತಿಯಷ್ಟನ್ನೇ ವ್ಯಾಪ್ತಿ (ದ್ರವ್ಯದ ನಿಜಶಕ್ತಿ) ಎಲ್ಲಿಯವರೆಗೆ ದ್ರವ್ಯವಿರುವುದೋ ಅಲ್ಲಿಯವರೆಗೂ ಉಳಿದಿರುವುದು. ಬೇರೊಂದು ಸ್ಥಳಕ್ಕೆ ಹೋದಾಗ ಧೂಮವು ಅಗ್ನಿಯಿಂದ ಅವ್ಯಾಪ್ಯವಾಗಿಬಿಡುವುದು. ದೇಶಾಂತರಕ್ಕೆ ಹೋಗುವುದರಿಂದ ಆ ಶಕ್ತಿಯು ನಾಶವಾಗಿ ಬಿಡುವುದು ಎಂದು ನಾವು ಹೇಳಿದ ಲಕ್ಷಣವು ಅತಿವ್ಯಾಪ್ತಿ ಆಗಲಾರದು. ನಮ್ಮ ಅಭಿಪ್ರಾಯದಲ್ಲಿ ಉತ್ಪತ್ತಿಕಾಲಕ್ಕೆ ಒಳಪಟ್ಟೇ ಧೂಮವು ವಿಶೇಷಣವಾಗ ಬಲ್ಲದು ಎಂದು ಭಾವ.

ಸೂತ್ರ: ಆಧೇಯಶಕ್ತಿಯೋಗ ಇತಿ ಪಂಚಶಿಖಃ ॥ ೩೨ ॥

ಸೂತ್ರಾನುವಾದ: ಆಧಾರವನ್ನು ಆಶ್ರಯಿಸಿರುವ ಶಕ್ತಿಯನ್ನೇ (ವ್ಯಾಪ್ತಿ) ಎನ್ನುವರು ಎಂದು ಪಂಚಶಿಖರ ಅಭಿಪ್ರಾಯ.

ಭಾಷ್ಯ: *ಬುದ್ಧ್ಯಾದಿಷು ಪ್ರಕೃತ್ಯಾದಿವ್ಯಾಪ್ಯತಾವ್ಯವಹಾರಾದಾಧಾರತಾ–ಶಕ್ತಿರ್ವ್ಯಾಪಕತಾ ಆಧೇಯತಾಶಕ್ತಿಮತ್ತ್ವಂ ಚ ವ್ಯಾಪ್ಯತ್ವಮಿತಿ ಪಂಚಶಿಖ ಇತ್ಯರ್ಥಃ ।*

ಅನುವಾದ: ಬುದ್ಧ್ಯಾದಿ ಪದಾರ್ಥಗಳಲ್ಲಿ ಪ್ರಕೃತ್ಯಾದಿ ವ್ಯಾಪ್ಯತಾ ವ್ಯವಹಾರವಿರುವುದರಿಂದ ಆಧಾರತಾಶಕ್ತಿಯು ಇರುವುದು. ಆಧೇಯತಾ ಶಕ್ತಿಯು ವ್ಯಾಪಕತೆಯಲ್ಲಿ ಇರುವುದು.

ವಿವರಣೆ: ವ್ಯಾಪಕತೆಯಿಂದ ನಿರೂಪಿತವಾದ ಆಧೇಯಶಕ್ತಿಯು ವ್ಯಾಪ್ಯತ್ವದಲ್ಲಿ ಅಡಗಿದೆಯೆಂದು ಅಭಿಪ್ರಾಯ.

ಭಾಷ್ಯ: *ನನ್ವಾಧೇಯಶಕ್ತಿಃ ಕಿಮರ್ಥಂ ಕಲ್ಪ್ಯತೇ, ವ್ಯಾಪ್ಯಸ್ಯ ವಸ್ತುನಃ ಸ್ವರೂಪಶಕ್ತಿರೇವ ವ್ಯಾಪ್ತಿರಸ್ತು । ತತ್ರಾಹ –*

ಅನುವಾದ: ಆಧೇಯಶಕ್ತಿಯನ್ನು ಏಕೆ ಕಲ್ಪಿಸುವಿರಿ? ವ್ಯಾಪ್ಯವಸ್ತುವಿನ ಸ್ವರೂಪಶಕ್ತಿಯನ್ನು ವ್ಯಾಪ್ತಿಯೆಂದು ಏಕೆ ಹೇಳಬಾರದು? ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ನ ಸ್ವರೂಪಶಕ್ತಿರ್ನಿಯಮಃ ಪುನರ್ವಾದಪ್ರಸಕ್ತೇಃ ॥ ೩೩ ॥

ಅನುವಾದ: (ವ್ಯಾಪ್ಯ ವಸ್ತುವಿನ) ಸ್ವರೂಪಶಕ್ತಿಯೇ ವ್ಯಾಪ್ತಿಯಲ್ಲ. ಆಗ (ಹಾಗೆ ಹೇಳಿದರೆ) ಪುನರುಕ್ತಿಯಾಗುವುದು.

ಭಾಷ್ಯ: *ಸ್ವರೂಪಶಕ್ತಿಸ್ತು ನಿಯಮೋ ವ್ಯಾಪ್ತಿರ್ನಭವತಿ ಪೌನರುಕ್ತ್ಯಪ್ರಸಂಗಾತ್। ಘಟಃ ಕಲಶ ಇತಿವತ್ ಬುದ್ಧಿವ್ಯಾಪ್ಯಾ ಇತ್ಯತ್ರಾಪಿ ಅರ್ಥಾಭೇದೇನ ಇತ್ಯರ್ಥಃ । ಸ್ವರೂಪಮಿತಿ ವಕ್ತವ್ಯೇ ಶಕ್ತಿಪದೋಪಾದನಂ ವ್ಯಾಪ್ತೇರ್ವ್ಯಾಪ್ಯಧರ್ಮತಾ ಉಪಪಾದನಾ ।*

ಅನುವಾದ: ನಿಯಮಃ ಎಂದರೆ ವ್ಯಾಪ್ತಿ. ಸ್ವರೂಪಶಕ್ತಿಯನ್ನೇ ವ್ಯಾಪ್ತಿ ಎನ್ನುವುದು ಸರಿಯಲ್ಲ. ಅದರಿಂದ ಪುನರುಕ್ತಿದೋಷ ಉಂಟಾಗುವುದು; ಘಟ ಮತ್ತು ಕಲಶ (ಸಮಾನಾರ್ಥಕಗಳು) ಪದಗಳಂತೆ; ಹಾಗೆಯೇ ಬುದ್ಧಿ ಮತ್ತು ವ್ಯಾಪ್ಯ ಎಂಬಲ್ಲಿಯೂ ಅರ್ಥಗಳಲ್ಲಿ ಭೇದವಿರದು. ಸ್ವರೂಪವೆಂದು ಹೇಳುವುದರ ಬದಲಾಗಿ (ಸ್ವರೂಪ) ಶಕ್ತಿ ಪದವನ್ನು ಬಳಸಿರುವುದು ವ್ಯಾಪ್ತಿಗೆ ವ್ಯಾಪ್ಯ ಧರ್ಮವನ್ನು ಪಡೆಯುವುದಕ್ಕಾಗಿ.

ವಿವರಣೆ: ವ್ಯಾಪ್ತದಲ್ಲಿ ವ್ಯಾಪ್ಯಧರ್ಮತೆಯ ಗುಣವನ್ನು ಸೂಚಿಸುವುದಕ್ಕಾಗಿ ಸ್ವರೂಪಶಕ್ತಿ ಎಂದು ಹೇಳಲಾಗಿದೆ.

ಭಾಷ್ಯ: *ಪೌನರುಕ್ತ್ಯಂ ಸ್ವಯಮೇವ ವಿವೃಣೋತಿ ।*

ಸೂತ್ರ: ವಿಶೇಷಣಾನರ್ಥಕ್ಯಪ್ರಸಕ್ತೇಃ ॥ ೩೪ ॥

ಅನುವಾದ: ಪುನರುಕ್ತಿ ಪದದ ವಿವರಣೆಯನ್ನು ತಾವೇ ಕೊಡುವರು.

ಸೂತ್ರಾನುವಾದ: ವಿಶೇಷಣದ ಪ್ರಯೋಗವು ವ್ಯರ್ಥವಾಗುವುದರಿಂದ.

ಭಾಷ್ಯ: *ಪೂರ್ವಸೂತ್ರ ಏವ ವ್ಯಾಖ್ಯಾತಪ್ರಾಯಮಿದಮ್ । ದೂಷಣಾಂತರಮಾಹ ।*

ಅನುವಾದ: ಈ ಸೂತ್ರದ ವ್ಯಾಖ್ಯಾನವು ಪೂರ್ವಸೂತ್ರದಂತೆಯೇ ಆದಂತಿದೆ. ಇನ್ನೊಂದು ದೂಷಣೆಯನ್ನು ಹೇಳುವರು.

ಸೂತ್ರ: ಪಲ್ಲವಾದಿಷು ಅನುಪಪತ್ತೇಶ್ಚ ॥ ೩೫ ॥

ಸೂತ್ರಾನುವಾದ: ಅಲ್ಲದೆ ಪಲ್ಲವವೇ (ಚಿಗುರು) ಮುಂತಾದುವುಗಳಲ್ಲಿ (ಸ್ವರೂಪಶಕ್ತಿಯೇ ವ್ಯಾಪ್ತಿಯಲ್ಲವೆಂಬುದು) ಸರಿಹೋಗುವುದಿಲ್ಲ.

ಭಾಷ್ಯ: *ಪಲ್ಲವಾದಿಷು ವೃಕ್ಷಾದಿವ್ಯಾಪ್ಯತಾ ಅಸ್ತಿ । ಸ್ವರೂಪಶಕ್ತಿಮಾತ್ರಂತು ತಸ್ಯ ಲಕ್ಷಣಂ ನ ಸಂಭವತಿ, ಭಿನ್ನಪಲ್ಲವೇಽಪಿ ಸ್ವರೂಪಶಕ್ತೇಃ ಅನಪಾಯೇನ ತದಾನೀಮಪಿ ವ್ಯಾಪ್ಯತಾಪತ್ತೇಃ ಇತ್ಯರ್ಥಃ । ಆಧೇಯಶಕ್ತಿಷು ಭೇದಕಾಲೇ ವಿನಷ್ಟಾ ಇತಿ ನ ತದಾನೀಂ ವ್ಯಾಪ್ತಿರಿತಿ ಭಾವಃ ।*

ಅನುವಾದ: ಪಲ್ಲವಾದಿಗಳಲ್ಲಿ ವೃಕ್ಷಾದಿಗಳ ವ್ಯಾಪ್ಯತೆ ಇರುತ್ತದೆ. ಸ್ವರೂಪಶಕ್ತಿಯಾದರೋ ಅದರ ಲಕ್ಷಣವಾಗಲಾರದು, ಚಿಗುರುಗಳನ್ನು ಕತ್ತರಿಸಿದರೂ ಸ್ವರೂಪಶಕ್ತಿಯೆಂದು ಹೇಳಿದರೆ ಆಗಲೂ ವ್ಯಾಪ್ಯತೆಯು ಉಂಟಾಗುವುದು. ಆಧೇಯಶಕ್ತಿಯಾದರೋ ಭೇದದ ಕಾಲದಲ್ಲಿ ವಿನಷ್ಟವಾಯಿತೆಂದು ಆಗ ವ್ಯಾಪ್ತಿಯಿರದು ಎಂದು ಭಾವ.

ಭಾಷ್ಯ: *ನನು ಕಿಂ ಪಂಚಶಿಖೇನ ನಿಜಶಕ್ತ್ಯುದ್ಭವೋ ವ್ಯಾಪ್ತಿರೇವ ನೋಚ್ಯತೇ, ತರ್ಹಿ ಧೂಮಸ್ಯ ವಹ್ನ್ಯಾಧೇಯತ್ವಾಭಾವಾದ್ವಹ್ನ್ಯವ್ಯಾಪ್ಯತಾಪತ್ತಿರಿತಿ । ತತ್ರಾಹ –*

ಅನುವಾದ: ಪಂಚಶಿಖಾಚಾರ್ಯರು ನಿಜಶಕ್ತಿಯಿಂದ ಉಂಟಾದ ವ್ಯಾಪ್ತಿಯನ್ನೇ ಹೇಳಿಲ್ಲ. ಹಾಗಾದರೆ ಸ್ವರೂಪಶಕ್ತಿಯ ಹೊಗೆಯು ಬೆಂಕಿಗೆ ಆಧೇಯವಲ್ಲದ ಕಾರಣ ವಹ್ನಿಯ ವ್ಯಾಪ್ಯವಾಗಲಾರದು. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಆಧೇಯಶಕ್ತಿಸಿದ್ಧೌ ನಿಜಶಕ್ತಿಯೋಗಃ ಸಮಾನನ್ಯಾಯಾತ್ ॥ ೩೬ ॥

ಸೂತ್ರಾನುವಾದ: ಆಧೇಯಶಕ್ತಿಯು ಸಿದ್ಧವಾದಮೇಲೆ ಅದೇ ಸಾಮ್ಯದ ಮೇಲೆ ನಿಜಶಕ್ತಿಯ ವ್ಯಾಪ್ತಿತ್ವ ಸಿದ್ಧವಾಗುವುದು.

ಭಾಷ್ಯ: *ಆಧೇಯಶಕ್ತೇರ್ವ್ಯಾಪ್ತಿತ್ವಸಿದ್ಧೌ ನಿಜಶಕ್ತ್ಯುದ್ಭವೋಽಪಿ ವ್ಯಾಪ್ತಿತ್ವೇನ ಸಿದ್ಧ ಏವ, ಸಮಾನನ್ಯಾಯಾತ್ ಯುಕ್ತಿ ಸಾಮ್ಯಾದಿತ್ಯರ್ಥಃ । ಅನನುಗಮಸ್ತು*

ನಾನಾರ್ಥಶಬ್ದವತ್ ನ ದೋಷಾಯ । ಏವಂ ಸ್ವಮತೇऽಪಿ ನಾನಾವಿಧಸಹಚಾರಾ ಏವ ವ್ಯಾಪ್ತಯೋ ಬೋಧ್ಯಾಃ । ನ ಚೈವಮಪ್ಯನುಮಿತಿ ಹೇತುತ್ವೇ ವ್ಯಾಪ್ತೀನಾಮನನುಗಮಃ ಸ್ಯಾದಿತಿ ವಾಚ್ಯಮ್ । ತೃಣಾರಣಿಮಣಿ–ಆದಿವತ್ ಕಾರ್ಯಗತ ವೈಜಾತ್ಯಾದಿ ಉಪಪತ್ತೀರಿತಿ। ಪಂಚಾವಯವಯೋಗಾತ್ ಗುಣಾದಿಸಿದ್ಧಿರಿತಿ ಯದುಕ್ತಂ ತದುಪಪಾದನಾಯ ವ್ಯಾಪ್ತಿಃ ನಿರ್ವಚನೇನ ಅನುಮಾನಪ್ರಾಮಾಣ್ಯೇ ಬಾಧಕಮಪಾಸ್ತಮ್ ।

ಅನುವಾದ: ಆಧೇಯಶಕ್ತಿಯು ವ್ಯಾಪ್ತಿ ಎಂದು ಹೇಳಿದರೆ ನಿಜಶಕ್ತ್ಯುದ್ಭವವೂ ಸಹ ವ್ಯಾಪ್ತಿ ಎಂದು ಸಿದ್ಧವಾದಂತೆಯೇ. ಏಕೆಂದರೆ ಆಧೇಯಶಕ್ತಿಯು ವ್ಯಾಪ್ತಿಯೆಂದು ಹೇಳಲು ಬೇಕಾದ ಯುಕ್ತಿಯನ್ನು (ನಿಜಶಕ್ತಿಗೆ) ಸಮಾನವಾಗಿ ಬಳಸಬಹುದು. ಅನೇಕ ಅರ್ಥಗಳನ್ನುಳ್ಳ ಶಬ್ದದಂತೆ ಹೊಂದಿಕೆ ಆಗದಿರುವುದು ದೋಷವೇನಲ್ಲ. ಹಾಗೆಯೇ ನಮ್ಮ ಅಭಿಪ್ರಾಯದಲ್ಲಿ ನಾನಾವಿಧವಾದ ಸಹಚಾರಗಳೇ (ದೋಷರಹಿತವಾದ ಹೇತುಗಳು) ವ್ಯಾಪ್ತಿಗಳೆಂದು ತಿಳಿಯಬೇಕು. ಹೀಗೆ ಅನುಮಿತಿಗೆ ಹೇತುವಾಗುವುದರಿಂದ ವ್ಯಾಪ್ತಿಗಳಿಗೆ ಒಪ್ಪಿಗೆಯಾಗದಿರುವುದು ಸಂಭವಿಸುವುದು ಎಂದು ಹೇಳಬೇಕು. ತೃಣ, ಅರಣಿ, ಮಣಿ ಮುಂತಾದುವುಗಳಂತೆ ವಿಜಾತೀಯ ವಾದುವುಗಳು ಕಾರ್ಯದಲ್ಲಿ ಸೇರಿರುವಂತೆ ಉಂಟಾಗುವುದು. ಐದು ಅಂಗಗಳು ಸೇರಿ ಗುಣಾದಿಗಳು ಸಿದ್ಧಿಸುವಂತೆ ಹೇಳಿರುವುದು ಅದನ್ನು ಪಡೆಯಲು ವ್ಯಾಪ್ತಿಯ ನಿರ್ವಚನದಿಂದ ಅನುಮಾನಪ್ರಮಾಣದ ಬಾಧಕವನ್ನು ಹೋಗಲಾಡಿಸಿದೆ.

ವಿವರಣೆ: ಗುಣಾದಿಗಳು ಪಂಚಾವಯವದಿಂದ ಸಿದ್ಧಿಸುತ್ತವೆ ನೋಡಿ –(೫.೨೭)

ವ್ಯಾಪ್ಯ–ವ್ಯಾಪಕಗಳ ಸಂಬಂಧ ವ್ಯಾಪ್ತಿ. ವ್ಯಾಪ್ತಿಯೇ ಎಲ್ಲ ಅನುಮಾನಗಳಿಗೆ ಮೂಲ. ಹೇತುವಿನ ಸಹಜಶಕ್ತಿಯೇ ಆಧೇಯಶಕ್ತಿ.

ಭಾಷ್ಯ: *ಇದಾನೀಂ ಪಂಚಾವಯವರೂಪಶಬ್ದಸ್ಯ ಜ್ಞಾನಜನಕೋಪಪತ್ತಯೇ ಶಬ್ದಶಕ್ತ್ಯಾದಿ ನಿರ್ವಚನೇನ ತದನುಪಪತ್ತಿರೂಪಂ ಶಬ್ದಪ್ರಾಮಾಣ್ಯೇ ಪರೇಷಾಂ ಬಾಧಕಮಪಾಸ್ಯಸ್ತೇ ।*

ಅನುವಾದ: ಈಗ ಪಂಚಾವಯವರೂಪದ ಜ್ಞಾನವನ್ನುಂಟು ಮಾಡುವುದನ್ನು ಪಡೆಯಲು ಶಬ್ದಶಕ್ತಿಯೇ ಮೊದಲಾದುವುಗಳನ್ನು ನಿರ್ವಚನ ಮಾಡುವುದರಿಂದ ಶಬ್ದಪ್ರಾಮಾಣ್ಯದಲ್ಲಿ ಅದು ದೊರೆಯುವುದೆಂಬ, ಇತರರು ಹೇಳುವ, ಬಾಧಕವನ್ನು ನಿರಸನಗೊಳಿಸುವರು.

ಸೂತ್ರ: ವಾಚ್ಯವಾಚಕಭಾವಃ ಸಂಬಂಧಃ ಶಬ್ದಾರ್ಥಯೋಃ ॥ ೩೭ ॥

ಸೂತ್ರಾನುವಾದ: ಶಬ್ದಾರ್ಥಗಳ ಪರಸ್ಪರ ವಾಚ್ಯ–ವಾಚಕಭಾವದ ಸಂಬಂಧವಿರುವುದು

ಭಾಷ್ಯ: *ಅರ್ಥೇ ವಾಚ್ಯತಾಖ್ಯಾಶಕ್ತಿಃ ಶಬ್ದೇ ವಾಚಕತಾಖ್ಯಾಶಕ್ತಿಃ ಅಸ್ತಿ ಸೈವ*

ತಯೋಃ ಸಂಬಂಧಃ ಅನುಯೋಗಿತಾವತ್ । ತದ್ ಜ್ಞಾನಾತ್ ಶಬ್ದೇನ ಅರ್ಥೋಽಪಸ್ಥಿತಿರಿತ್ಯರ್ಥಃ ।

ಅನುವಾದ: ಅರ್ಥದಲ್ಲಿ ವಾಚ್ಯತೆ ಎಂಬ ಶಕ್ತಿ ಇರುತ್ತದೆ; ಶಬ್ದದಲ್ಲಿ ವಾಚಕತೆ ಎಂಬ ಶಕ್ತಿ ಇರುತ್ತದೆ. ಅದೇ ಅವೆರಡರ ಸಂಬಂಧ ಅನುಯೋಗಿಯಂತೆ ಇರುತ್ತದೆ. ಆ ಜ್ಞಾನದ ಮೂಲಕ ಶಬ್ದದಿಂದ ಅರ್ಥವು ಉಂಟಾಗುತ್ತದೆ.

ಭಾಷ್ಯ: *ಶಕ್ತಿ ಗ್ರಾಹಕಾಣ್ಯಾಹ । ಈ ಶಕ್ತಿಯನ್ನು ಗ್ರಹಿಸುವುದನ್ನು ಹೇಳುವರು.*

ಸೂತ್ರ: ತ್ರಿಭಿಃ ಸಂಬಂಧಸಿದ್ಧಿಃ ॥ ೩೮ ॥

ಸೂತ್ರಾನುವಾದ: ಸಂಬಂಧಸಿದ್ಧಿಯು (ಸಂಬಂಧದ ನಿಧಾರವು) ಮೂರು ಸಾಧನಗಳಿಂದ ಉಂಟಾಗುವುದು.

ಭಾಷ್ಯ: *ಆಪ್ತೋಪದೇಶೋ–ವೃದ್ಧವ್ಯವಹಾರ–ಪ್ರಸಿದ್ಧಪದಸಾಮಾನಾಧಿಕರಣ್ಯ ಇತ್ಯೇತೈಃ ತ್ರಿಭಿರುಕ್ತಸಂಬಂಧೋ ಗೃಹ್ಯತೇ ಇತ್ಯರ್ಥಃ ।*

ಅನುವಾದ: ೧. ಆಪ್ತೋಪದೇಶ ೨. ವೃದ್ಧವ್ಯವಹಾರ ೩. ಪ್ರಸಿದ್ಧಪದ ಸಾಮಾನಾಧಿಕರಣ್ಯ ಎಂಬ ಈ ಮೂರರಿಂದ ಮೇಲೆ ಹೇಳಿದ ಸಂಬಂಧ ಉಂಟಾಗುವುದು.

ವಿವರಣೆ: 'ಆಪ್ತ'ನ ಲಕ್ಷಣ– 'ಆಪ್ತಸ್ತು ಯಥಾರ್ಥವಕ್ತಾ'

ಸೂತ್ರ: ನ ಕಾರ್ಯೇ ನಿಯಮ ಉಭಯಥಾ ದರ್ಶನಾತ್ ॥ ೩೯ ॥

ಸೂತ್ರಾನುವಾದ: ಎರಡು ಬಗೆಯಲ್ಲಿಯೂ (ಅರ್ಥಬೋಧಕತೆಯು) ಕಾಣಬರುವುದರಿಂದ (ವಿಧಿವಾಕ್ಯದಲ್ಲಿಯೇ) ಶಬ್ದಾರ್ಥಸಂಬಂಧವುಂಟು ಇಲ್ಲದಿದ್ದಲ್ಲಿ ಇಲ್ಲ ಎಂಬ ನಿಯಮವೇನೂ ಇಲ್ಲ.

ಭಾಷ್ಯ: *ಸ ಚ ಶಕ್ತಿಗ್ರಹಃ ಕಾರ್ಯ ಏವ ಭವತೀತಿ ನಿಯಮೋ ನಾಸ್ತಿ ಲೋಕೇ ಕಾರ್ಯವದಕಾರ್ಯೇಽಪಿ ವೃದ್ಧವ್ಯವಹಾರದರ್ಶನಾತ್ ಇತ್ಯರ್ಥಃ । ಯಥಾ ಹಿ ಗಾಮಾನಯ ಇತ್ಯಾದಿ ಕಾರ್ಯಪರವಾಕ್ಯಾತ್ ವೃದ್ಧಸ್ಯ ಗವಾನಯನಾದಿವ್ಯವಹಾರೋ ದೃಶ್ಯತೇ ಇತಿ, ಸಿದ್ಧಾರ್ಥ–ಶಬ್ದಪ್ರಾಮಾಣ್ಯಸಿದ್ಧೌ ಚ ವಿವೇಕೇ ವೇದಾಂತಪ್ರಾಮಾಣ್ಯಂ ಸಿದ್ಧಮಿತ್ಯಾಶಯಃ ।*

ಅನುವಾದ: ಕಾರ್ಯದಲ್ಲಷ್ಟೇ ಶಕ್ತಿಯನ್ನು ಗ್ರಹಿಸುವುದಾಗುವುದು ಎಂಬ ನಿಯಮವೇನಿಲ್ಲ; ಏಕೆಂದರೆ ಲೋಕದಲ್ಲಿ ಕಾರ್ಯದಂತೆ ಅಕಾರ್ಯದಲ್ಲೂ ವೃದ್ಧವ್ಯವಹಾರವನ್ನು ಕಾಣಬಹುದು ಎಂದರ್ಥ. ಹೇಗೆಂದರೆ 'ಹಸುವನ್ನು ಕರೆದು ತಾ' ಮುಂತಾದ ಕಾರ್ಯಪರವಾದ ವಾಕ್ಯದಿಂದ ವೃದ್ಧನು ಹಸುವನ್ನು ಕರೆದು ತರುವುದನ್ನು ಕಾಣಬಹುದು. ಸಿದ್ಧಾರ್ಥಶಬ್ದದ ಪ್ರಾಮಾಣ್ಯವು ಸಿದ್ಧವಾಗಿರುವಾಗ ವಿವೇಕಜ್ಞಾನದಲ್ಲಿ ವೇದಾಂತದ ಪ್ರಾಮಾಣ್ಯವು ಸಿದ್ಧವಾಗುವುದು.

ವಿವರಣೆ: ವೇದಗಳಲ್ಲಿ ಕರ್ಮಕಾಂಡ ಮತ್ತು ಜ್ಞಾನಕಾಂಡ ಎಂಬ ಎರಡು ಬಗೆಗಳನ್ನು ಪರಿಗಣಿಸಿರುವುದರಿಂದ ಕರ್ಮಕಾಂಡವು ಸಾಧ್ಯಪರವೆಂದೂ ಜ್ಞಾನಕಾಂಡವು ಸಿದ್ಧಪರವೆಂದೂ ಹೇಳಲಾಗಿದೆ. ಆದರೂ ಭಾಷ್ಯಕಾರರ ಅಭಿಪ್ರಾಯದಲ್ಲಿ ಸಾಧ್ಯಪರ ವಾಕ್ಯಗಳೂ ಸಹ ಸಿದ್ಧಪರವಾಗಬಲ್ಲವು. ಅದರಲ್ಲಿ ಶಕ್ತಿಗ್ರಹವಿರುತ್ತದೆ.

ಭಾಷ್ಯ: *ನನು ಭವತು ಲೋಕೇ ಸಿದ್ಧೇ ಶಕ್ತಿಗ್ರಹೋಽರ್ಥಪ್ರತ್ಯಯಾದಿ ದರ್ಶನಾತ್ ವೇದೇ ತು ಕಥಂ ಭವಿಷ್ಯತ್ಯಕಾರ್ಯಬೋಧನವೈಯರ್ಥ್ಯಾತ್ ಇತಿ । ತತ್ರಾಹ.*

ಅನುವಾದ: ಇರಲಿ, ಲೋಕದಲ್ಲಿ ಸಿದ್ಧಾರ್ಥಕ ಶಬ್ದಗಳು ಶಕ್ತಿಪರವಾಗಿರಬಹುದು. ಆದರೆ ವೇದಗಳಲ್ಲಿ ಅದು ಹೇಗೆ ಸಂಭವಿಸುವುದು.

ವಿವರಣೆ: ವೇದ ಪ್ರತಿಪಾದಿತ ಅರ್ಥಗಳು ಅಲೌಕಿಕವಾದ್ದರಿಂದ ಅವು ಹೇಗೆ ಕಾರ್ಯಪರಕಗಳಾಗುವುವು? ಅದಕ್ಕೆ ಹೀಗೆ ಹೇಳುವರು.

ಸೂತ್ರ: ಲೋಕೇ ವ್ಯುತ್ಪನ್ನಸ್ಯ ವೇದಾರ್ಥಪ್ರತೀತಿಃ ॥ ೪೦ ॥

ಸೂತ್ರಾನುವಾದ: ಲೋಕವ್ಯವಹಾರದಲ್ಲಿ ಪಳಗಿದವನಿಗೆ ವೇದಾರ್ಥಜ್ಞಾನವು ಉಂಟಾಗುವುದು.

ಭಾಷ್ಯ: *ಲೋಕೇ ಶಬ್ದಶಕ್ತಿವ್ಯುತ್ಪನ್ನಸ್ವ ಪುರುಷಸ್ಯ ತದನುಸಾರೇಣ ಏವ ವೇದಾರ್ಥಪ್ರತೀತಿಃ । ನ ಹಿ ಲೋಕೇ ಶಕ್ತಿರ್ಭಿನ್ನಾ ವೇದೇ ಚ ಭಿನ್ನಾ, ಯ ಏವ ಲೌಕಿಕಾಸ್ತ ಏವ ವೈದಿಕಾ ಇತಿ ನ್ಯಾಯಾತ್ । ಅತಃ ಲೋಕೇ ಸಿದ್ಧಾರ್ಥಪರತ್ವಸಿದ್ಧೌ ವೇದೇಽಪಿ ತತ್ ಸಿದ್ಧ್ಯತೀತ್ಯರ್ಥಃ । ಅತ್ರ ಶಂಕತೇ ।*

ಅನುವಾದ: ಲೋಕ ವ್ಯವಹಾರದಲ್ಲಿ ಶಬ್ದಶಕ್ತಿಯಲ್ಲಿ ನಿಷ್ಣಾತನಾದ ವ್ಯಕ್ತಿಯು ಅದೇ ರೀತಿಯಾಗಿ ವೇದಾರ್ಥವನ್ನು ತಿಳಿಯಬಲ್ಲನು. ಲೋಕ ವ್ಯವಹಾರವೇ ಬೇರೆ, ವೇದಗಳಿಗೇ ಬೇರೆ ಶಬ್ದ ಶಕ್ತಿಗಳು ಎಂದು ಹೇಳಲಾಗದು. ಆದ್ದರಿಂದ ಲೋಕವ್ಯವಹಾರದಲ್ಲಿ ಸಿದ್ಧಾರ್ಥಪರತ್ವವಿದ್ದಲ್ಲಿ ವೇದಗಳಲ್ಲಿಯೂ ಅದು ಸಿದ್ಧಿಸುತ್ತದೆ ಎಂದರ್ಥ. ಅದರ ಬಗ್ಗೆ ಶಂಕೆ ಹೀಗೆ–

ಭಾಷ್ಯ: *ನನು ತ್ರಿಭಿರಾಪ್ತೋಪದೇಶಾದಿಭಿರ್ವೇದಶಬ್ದೇನ ಶಕ್ತಿಗ್ರಹಃ ಸಂಭವತಿ । ವೇದಸ್ಯಾಪೌರುಷೇಯತ್ವೇನ ತದರ್ಥೇಷು ಆಪ್ತೋಪದೇಶ ಅಸಂಭವಾತ್। ತಥಾ ವೇದಾರ್ಥಸ್ಯ ಅತೀಂದ್ರಿಯತಯಾ ತತ್ರ ವೃದ್ಧವ್ಯವಹಾರಸ್ಯ ಪ್ರಸಿದ್ಧಪದಸಾಮಾನಾಧಿಕರಣ್ಯಸ್ಯ ಚ ಗ್ರಹೀತುಂ ಅಶಕ್ಯತ್ವಾದಿತ್ಯರ್ಥಃ । ತತ್ರ ಅತೀಂದ್ರಿಯಾರ್ಥತ್ವಮಾದೌ ಅಪಾಕರೋತಿ ।*

ಅನುವಾದ: ಮೂರು ಉಪಾಯಗಳಿಂದ ಎಂದರೆ ಆಪ್ತೋಪದೇಶಾದಿಗಳಿಂದ ವೇದಶಬ್ದದ ಶಕ್ತಿಗ್ರಹವಾಗುವುದು (ಎಂದು ನೀವು ಹೇಳಿದಿರಾ) ೫.೩೮ ವೇದವು ಅಪೌರುಷೇಯ ವಾದ್ದರಿಂದ ಅದರ ಅರ್ಥಗಳಲ್ಲಿ ಆಪ್ತ ಉಪದೇಶವು ಅಡಗಿರುವುದಿಲ್ಲ. ಹಾಗೆಯೇ ವೇದಾರ್ಥಗಳು ಅತೀಂದ್ರಿಯವಾದ್ದರಿಂದ ಅದರಲ್ಲಿ ವೃದ್ಧವ್ಯವಹಾರ ಹಾಗೂ

ಪ್ರಸಿದ್ಧಪದಗಳ ಸಾಮೀಪ್ಯವನ್ನೂ ಗ್ರಹಿಸುವುದು ಸಾಧ್ಯವಾಗದು ಎಂದರ್ಥ. ಅದರಲ್ಲಿ ಮೊದಲು ಅತೀಂದ್ರಿಯಾರ್ಥತ್ವವನ್ನು ನಿರಾಕರಿಸುವರು.

ಸೂತ್ರ: ನ ಯಜ್ಞಾದೇಃ ಸ್ವರೂಪತೋ ಧರ್ಮತ್ವಂ ವೈಶಿಷ್ಟ್ಯಾತ್ ॥ ೪೨॥

ಸೂತ್ರಾನುವಾದ: (ನ) ಅದು ಸರಿಯಲ್ಲ. ವಿಶಿಷ್ಟವಾದ್ದರಿಂದ ಯಜ್ಞಾದಿಗಳಲ್ಲಿ ಸ್ವರೂಪದಿಂದಲೇ ಧರ್ಮವಿರುವುದು.

ಭಾಷ್ಯ: *ಯದುಕ್ತಂ ತನ್ನ । ಯತೋ ದೇವತೋದ್ದೇಶ್ಯಕದ್ರವ್ಯತ್ಯಾಗಾದಿ ರೂಪಸ್ಯ ಯಜ್ಞದಾನಾದೇಃ ಸ್ವರೂಪತಃ ಏವ ಧರ್ಮತ್ವಂ ವೇದ ವಿಹಿತತ್ವಂ, ವೈಶಿಷ್ಟ್ಯಾತ್ ಪ್ರಕೃಷ್ಟಫಲಕತ್ವಾತ್ । ಯಜ್ಞಾದಿಕಂ ಚ ಇಚ್ಛಾದಿ ರೂಪತ್ವಾತ್ ನಾತೀಂದ್ರಿಯಮ್ ।*

ಅನುವಾದ: ನಿಮ್ಮ ಶಂಕೆ ಸರಿಯಲ್ಲ. ದೇವತೆಗಳನ್ನು ಉದ್ದೇಶಿಸಿ ದ್ರವ್ಯತ್ಯಾಗದ ರೀತಿಯ ಯಜ್ಞ, ದಾನಾದಿಗಳು ಸ್ವರೂಪದಲ್ಲಿಯೇ ಧರ್ಮ ಎಂದರೆ ವೇದವಿಧಿಗೆ ಅನುಗುಣವಾಗಿರುತ್ತದೆ, ಏಕೆಂದರೆ ಅದು ವಿಶಿಷ್ಟವಾದ (ಅಪೂರ್ವ) ಫಲವನ್ನು ನೀಡುವುದರಿಂದ ಯಜ್ಞಾದಿಗಳು ಇಚ್ಛೆಯೇ ಮುಂತಾದುವುಗಳಿಂದ ಕೂಡಿರುವುದ ರಿಂದ ಅವು ಅತೀಂದ್ರಿಯವಲ್ಲ.

ಭಾಷ್ಯ: *ನ ತು ಯಜ್ಞಾದಿ ವಿಷಯಕಾಪೂರ್ವಸ್ಯ ಧರ್ಮತ್ವಂ, ಯೇನ ವೇದವಿಹಿತಸ್ಯ ಅತೀಂದ್ರಿಯತಾ ಸ್ಯಾತ್ ಇತ್ಯರ್ಥಃ । ನನು ತಥಾಪಿ ದೇವತಾದ್ಯತೀಂದ್ರಿಯಾರ್ಥಘಟಿತತ್ವಮಸ್ತೀತಿ ।*

ಅನುವಾದ: ಯಜ್ಞಾದಿಗಳಿಗೆ ಸಂಬಂಧಿಸಿದ ಅಪೂರ್ವದ ಧರ್ಮತ್ವವು ಇರುವ ಕಾರಣ ವೇದದಲ್ಲಿ ವಿಹಿತವಾಗಿರುವ ಅತೀಂದ್ರಿಯತೆಯು ಇಲ್ಲದಿರಬಹುದು. ಆದರೂ ದೇವತೆಗಳೇ ಮೊದಲಾದ ಅತೀಂದ್ರಿಯದ ವಿಷಯಗಳಿಗೆ ಸೇರಿರುವುದ ರಿಂದ ಅತೀಂದ್ರಿಯವೆನ್ನಲು ಏನು ಅಡಚಣೆ?

ಭಾಷ್ಯ: *ಇತಿ ಚೇನ್ನ । ಅತೀಂದ್ರಿಯೇಷ್ವಪಿ ಪದಾರ್ಥತಾವಚ್ಛೇದಕೇನ ಸಾಮಾನ್ಯರೂಪೇಣ ಪ್ರತೀತೇರ್ವಕ್ಷ್ಯಮಾಣತ್ವಾತ್ ಇತಿ ।*

ಅನುವಾದ: ಅದು ಹಾಗಲ್ಲ. ಅತೀಂದ್ರಿಯಗಳಲ್ಲಿಯೂ ಪದಾರ್ಥತ್ವದ ಸಾಮಾನ್ಯರೂಪದಲ್ಲಿ ಪ್ರತೀತವಾಗುವುದರಿಂದ; ಇದನ್ನು ಮುಂದೆ ಹೇಳಿದೆ.

ಭಾಷ್ಯ: *ಯಥೋಕ್ತಂ ಅಪೌರುಷೇಯತ್ತ್ವೇವ ಆಪ್ತೋಪದೇಶಾಭಾವ ಇತಿ, ತದಪಿ ನಿರಾಕರೋತಿ ।*

ಅನುವಾದ: ಇನ್ನು ನೀವು ಹೇಳಿದ ಅಪೌರುಷೇಯತ್ವದಿಂದ ಆಪ್ತೋಪದೇಶವು ಇರಲಾರದು ಎಂಬುದನ್ನು ನಿರಾಕರಿಸುತ್ತಾರೆ.

ಸೂತ್ರ: ನಿಜಶಕ್ತಿರ್ವ್ಯುತ್ಪತ್ತ್ಯಾ ವ್ಯವಚ್ಛಿದ್ಯತೇ ॥ ೪೩ ॥

ಸೂತ್ರಾನುವಾದ: ಸ್ವಾಭಾವಿಕ ಶಬ್ದಶಕ್ತಿಯು ಅರ್ಥವ್ಯಕ್ತಿಯಿಂದ ನಿರ್ದೇಶಿಸಲ್ಪಡುತ್ತದೆ.

ಭಾಷ್ಯ: *ಅಪೌರುಷೇಯತ್ವೇಽಪಿ ವೇದಾನಾಂ ಸ್ವಾಭಾವಿಕೀಯೋಽರ್ಥೇಷು ಶಕ್ತಿರಸ್ತಿ ಸೈವ ಆಪ್ತೈ ರ್ವೃದ್ಧಪರಂಪರಾಭಿಃ ವ್ಯುತ್ಪತ್ತ್ಯಾ ಅಸ್ಯ ಶಬ್ದಸ್ಯಾಯಮರ್ಥ ಇತ್ಯೇವಂರೂಪಾ ವ್ಯವಚ್ಛಿದ್ಯತೇ, ಶಿಷ್ಯೇಭ್ಯೋ ಅರ್ಥಾಂತರಾತ್ ವ್ಯಾವರ್ತ್ಯೋಪದಿಶ್ಯತೇ, ನ ತ್ವಾಧುನಿಕಶಬ್ದವತ್ ಸ್ವಯಂ ಸಂಕೇತ್ಯತೇ ಪೌರುಷೇಯತ್ವಾಪೇಕ್ಷಾ ಸ್ಯಾದಿತ್ಯಾರ್ಥಃ ।*

ಅನುವಾದ: ವೇದವು ಅಪೌರುಷೇಯವಾದರೂ ವೇದಗಳ ಸ್ವಾಭಾವಿಕವಾದ ಶಕ್ತಿಯು ಅರ್ಥಗಳಲ್ಲಿರುವುದು. ಅದೇ ಶಬ್ದಶಕ್ತಿಯು ಆಪ್ತರಾದ ವೃದ್ಧರು ತಮ್ಮ ಪರಂಪರಾಗತ ವಾದ ಜ್ಞಾನದಿಂದ ಈ ಶಬ್ದಕ್ಕೆ ಈ ಅರ್ಥ ಎಂಬ ರೀತಿಯಲ್ಲಿ 'ವ್ಯವಚ್ಛಿದ್ಯತೇ' ಎಂದರೆ ಶಿಷ್ಯರಿಗೆ ಅರ್ಥಾಂತರಗಳನ್ನು ಹೋಗಲಾಡಿಸಿಕೊಂಡು ಉಪದೇಶವನ್ನು ಮಾಡುವರು. ಆಧುನಿಕಶಬ್ದದಂತೆ ತಾವೇ ತೋರುವ ಸಂಕೇತಗಳನ್ನು ಬಳಸುವುದಿಲ್ಲ. ಅದರಿಂದ ಪೌರುಷೇಯತ್ವದ ಅಪೇಕ್ಷೆ ಉಂಟಾಗದು.

ಭಾಷ್ಯ: *ನನು ತಥಾಪಿ ಅತೀಂದ್ರಿಯದೇವತಾಫಲಾದಿಷು ಕಥಂ ಶಕ್ತಿಗ್ರಹೋ ವೈದಿಕಪದಾನಾಂ ಸ್ಯಾತ್ । ತತ್ರಾಹ–*

ಅನುವಾದ: ಹಾಗಾದರೆ, ಹಾಗಿದ್ದರೂ ಅತೀಂದ್ರಿಯವಾದ ದೇವತೆಗಳು, ಫಲಗಳು ಮುಂತಾದುವುಗಳಲ್ಲಿ ಹೇಗೆ ವೈದಿಕಪದಗಳ ಶಕ್ತಿಗ್ರಹವು ಇದ್ದೀತು? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಯೋಗ್ಯಾಯೋಗ್ಯೇಷು ಪ್ರತೀತಿಜನಕತ್ವಾತ್ ತತ್ಸಿದ್ಧಿಃ ॥ ೪೪ ॥

ಸೂತ್ರಾನುವಾದ: ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷಗಳಲ್ಲಿ ಜ್ಞಾನವುಂಟುಮಾಡಲು ಶಕ್ತಿಗ್ರಹವು ಸಮರ್ಥವಾಗಿದೆ.

ಭಾಷ್ಯ: *ಪ್ರತ್ಯಕ್ಷಾಪ್ರತ್ಯಕ್ಷೇಷು ಪದಾರ್ಥೇಷು ಸಾಮಾನ್ಯಧರ್ಮಪುರಸ್ಕಾರೇಣ ತತ್ಸಿದ್ಧಿಃ ಶಕ್ತಿಗ್ರಾಹೋ ಭವತಿ । ಸಾಧಾರಣ್ಯೇನ ಪದಾನಾಂ ಪ್ರತೀತಿಜನಕತ್ವಸ್ಯಾನುಭವಸಿದ್ಧತ್ವಾತ್ । ವಿಶೇಷಸ್ತು ಅತೀಂದ್ರಿಯೋ ಅಪೂರ್ವ ಏವ ವಾಕ್ಯಾರ್ಥ: । ನ ಚ ತಸ್ಯ ಗ್ರಹಣಂ ಪ್ರಾಗಪೇಕ್ಷತೇ ನ ಇತ್ಯರ್ಥಃ ।*

ಅನುವಾದ: ಪ್ರತ್ಯಕ್ಷವಾದ ಮತ್ತು ಅಪ್ರತ್ಯಕ್ಷವಾದ ಪದಾರ್ಥಗಳಲ್ಲಿ ಸಾಮಾನ್ಯಧರ್ಮದ ಮೂಲಕವೇ ಶಕ್ತಿಗ್ರಹದ ಸಿದ್ಧಿಯಾಗುವುದು. ಸಾಧಾರಣವಾಗಿ ಪದಗಳು ಪ್ರತೀತಿ ಯನ್ನುಂಟುಮಾಡುವ ಸಾಮರ್ಥ್ಯ ಅನುಭವ ಸಿದ್ಧವಾದುದು. ವಿಶೇಷವೆಂದರೆ ಅತೀಂದ್ರಿಯವಾದ ಅಪೂರ್ವವೇ ವಾಕ್ಯಾರ್ಥರೂಪವಾದುದು. ಅದನ್ನು ತಿಳಿದುಕೊಳ್ಳಲು ಮೊದಲೇ ಅಪೇಕ್ಷೆಪಡಲಾಗದು.

ಭಾಷ್ಯ: *ಶಬ್ದಪ್ರಾಮಾಣ್ಯ ಪ್ರಸಂಗೇನೈವ ಶಬ್ದಗತಂ ವಿಶೇಷಂ ಅವಧಾರಯತಿ ।*

ಸೂತ್ರ: ನ ನಿತ್ಯತ್ವಂ ವೇದಾನಾಂ ಕಾರ್ಯತ್ವಶ್ರುತೇಃ ॥ ೪೫ ॥

ಅನುವಾದ: ಶಬ್ದಪ್ರಮಾಣದ ಪ್ರಸಂಗದಿಂದಲೇ ಶಬ್ದದ ವಿಶೇಷತೆಯನ್ನು ದೃಢಪಡಿಸುವರು.

ಸೂತ್ರಾನುವಾದ: ವೇದಗಳ ನಿತ್ಯತ್ವವು ಇರಲಾರದು, ಏಕೆಂದರೆ ಅವುಗಳಲ್ಲಿ ಕಾರ್ಯತೆ ಇದೆ ಎಂಬುದು ತಿಳಿಯುವುದು.

ಭಾಷ್ಯ: *'ಸ ತಪೋಽತಪ್ಯತ ತಸ್ಮಾತ್ ತಪಸ್ತಪನಾತ್ ತ್ರಯೋ ವೇದಾ ಅಜಾಯಂತ (ಶ.ಬ್ರಾ.ನ.೧೧.೫.೮.೩, ೬೧೧, ೧, ೮) ಇತ್ಯಾದಿ ಶ್ರುತಿರ್ವೇದಾನಾಂ ನ ನಿತ್ಯತ್ವಮಿತ್ಯರ್ಥಃ । ವೇದನಿತ್ಯತಾ ವಾಕ್ಯಾನಿ ಚ ಸಜಾತೀಯಾನುಪೂರ್ವೀ ಪ್ರವಾಹಾನುಚ್ಛೇದಪರಾಣಿ ।*

ಅನುವಾದ: 'ಅವನು ತಪಸ್ಸನ್ನು ಮಾಡಿದನು ಹಾಗೆ ಮಾಡಿದ್ದರಿಂದ ಮೂರು ವೇದಗಳು ಉಂಟಾದುವು.' ಮುಂತಾದ ಶ್ರುತಿಯಿಂದ ವೇದಗಳು ನಿತ್ಯವಲ್ಲವೆಂಬುದು ತಿಳಿದು ಬರುತ್ತದೆ. ವೇದಗಳು ನಿತ್ಯವೆಂಬ ವಾಕ್ಯಗಳು ಸಜಾತೀಯವಾದುಗಳನ್ನು ಮುಂದುವರೆಸಿಕೊಂಡು ಹೋಗುವ ಪ್ರವಾಹಗಳು ತಡೆಯಿಲ್ಲದಂತೆ ಹರಿಯುವುವು.

ಭಾಷ್ಯ: *ತತ್ ಕಿಂ ಪೌರುಷೇಯಾ ವೇದಾಃ? ನೇತ್ಯಾಹ ।*

ಅನುವಾದ: ಹಾಗಾದರೆ ವೇದಗಳು ಪೌರುಷೇಯವೇ? ಇಲ್ಲ ಎಂದು ಹೇಳಿದ್ದಾರೆ

ಸೂತ್ರ: ನ ಪೌರುಷೇಯತ್ವಂ ತತ್ಕರ್ತುಃ ಪುರುಷಸ್ಯಾಭಾವಾತ್ ॥ ೪೬ ॥

ಸೂತ್ರಾನುವಾದ: ಅದನ್ನು ರಚಿಸಿದ ಪುರುಷನಿಲ್ಲದ ಕಾರಣ (ವೇದಗಳು) ಅಪೌರುಷೇಯ.

ಭಾಷ್ಯ: *ಅಪರಃ ಕರ್ತಾ ಭವತ್ವಿತ್ಯಾಕಾಂಕ್ಷಾಯಾಮಾಹ ।*

ಸೂತ್ರ: ನ ಮುಕ್ತಾಮುಕ್ತಯೋರಯೋಗ್ಯತ್ವಾತ್ ॥ ೪೭ ॥

ಅನುವಾದ: (ಈಶ್ವರನು ವೇದಗಳನ್ನು ರಚಿಸದಿದ್ದಲ್ಲಿ) ಯಾರಾದರೂ ಪುರುಷರು ವೇದಗಳನ್ನು ರಚಿಸಿದರೆ?

ಸೂತ್ರಾನುವಾದ: ಮುಕ್ತನಾಗಲಿ, ಅಮುಕ್ತನಾಗಲಿ ಯೋಗ್ಯತೆಯಿಲ್ಲದ ಕಾರಣ ವೇದಗಳ ಕರ್ತೃವಾಗಲಾರ.

ಭಾಷ್ಯ: *ಜೀವನ್ಮುಕ್ತಧುರೀಣೋ ವಿಷ್ಣುರ್ವಿಶುದ್ಧಸತ್ವತಯಾ ನಿರತಿಗಯಸರ್ವಜ್ಞೋಽಪಿ ವೀತರಾಗತ್ವಾತ್ ಸಹಪ್ರಶಾಖವೇದನಿರ್ಮಾಣ ಯೋಗ್ಯಃ । ಅಮುಕ್ತಸ್ಸರ್ವಜ್ಞಾತ್ವಾದೇವ ಅಯೋಗ್ಯ ಇತ್ಯರ್ಥಃ ।*

ಅನುವಾದ: ಜೀವನ್ಮುಕ್ತರಲ್ಲಿ ಅತ್ಯಂತ ಶ್ರೇಷ್ಠನಾದ ವಿಷ್ಣುವು ವಿಶುದ್ಧಸತ್ತ್ವದಿಂದ ಸಂಪನ್ನವಾಗಿರುವುದರಿಂದ ನಿರತಿಶಯ ಸರ್ವಜ್ಞನಾದರೂ ರಾಗವಿಲ್ಲದ ಕಾರಣ ಸಾವಿರ ಶಾಖೆಗಳಿಂದ ಕೂಡಿದ ವೇದಗಳ ರಚನೆಗಳನ್ನು ಮಾಡಿರಲಾರ.

ಅಮುಕ್ತನಾದರೋ ಅಸವಜ್ಞನಾದ ಕಾರಣ (ಸರ್ವಜ್ಞನಲ್ಲದಿರುವುದರಿಂದ) ಅಯೋಗ್ಯನಾಗಿರುವನು ಎಂದರ್ಥ.

ಭಾಷ್ಯ: *ನನ್ವೇವಮಪೌರುಷೇಯತ್ವಾನ್ನಿತ್ಯತ್ವಮೇವಾಗತಂ, ತತ್ರಾಹ*

ಸೂತ್ರ: ನಾಪೌರುಷೇಯತ್ವಾನ್ನಿತ್ಯತ್ವಮಂಕುರಾದಿವತ್ ॥ ೪೮ ॥

ಅನುವಾದ: ಹೀಗೆ ಅಪೌರುಷೇಯತ್ವದ ಕಾರಣ ವೇದಗಳಿಗೆ ನಿತ್ಯತ್ವವಿಲ್ಲವೆಂಬುದನ್ನು ಒಪ್ಪಬೇಕಾಗುವುದು.

ಭಾಷ್ಯ: *ನನು ಅಂಕುರಾದಿಷು ಅಪಿ ಕಾರ್ಯತ್ವೇನ ಘಟಾದಿವತ್ ಪೌರುಷೇಯತ್ವಮನುಮೇಯಮ್ ।*

ಅನುವಾದ: ಅಂಕುರಾದಿಗಳಂತೆ ಕಾರ್ಯವಾದ್ದರಿಂದ ಘಟಾದಿಗಳಂತೆ ಪೌರುಷೇಯತ್ವವನ್ನು ಅನುಮಾನ ಮಾಡಬಹುದಲ್ಲವೆ?

ಸೂತ್ರ: ತೇಷಾಮಪಿ ತದ್ಯೋಗೇ ದೃಷ್ಟಬಾಧಾದಿಪ್ರಸಕ್ತಿಃ ॥ ೪೯ ॥

ಸೂತ್ರಾನುವಾದ: ಅಂಕುರಾದಿಗಳಲ್ಲೂ ಅನುಮಾನಮಾಡಿದಲ್ಲಿ ದೃಷ್ಟವಾದದ್ದಕ್ಕೆ ಬಾಧವುಂಟಾಗುವುದು (ದೃಷ್ಟವಾದುದಕ್ಕೆ ಪಕ್ಷದಲ್ಲಿ ಸಾಧ್ಯದ ಅಭಾವ ವುಂಟಾಗುವುದು).

ಭಾಷ್ಯ: *ಯತ್ ಪೌರುಷೇಯಂ ತಚ್ಛರೀರಜನ್ಯಮಿತಿ ವ್ಯಾಪ್ತಿಃ ಲೋಕೇ ದೃಷ್ಟಾ । ತಸ್ಯಾ ಬಾಧಾದಿರೇವಂ ಸತಿ ಸ್ಯಾದಿತ್ಯರ್ಥಃ ।*

ಅನುವಾದ: ಯಾವುದು ಪೌರುಷೇಯವೋ ಅದು ಶರೀರಜನ್ಯ ಎಂದು ವ್ಯಾಪ್ತಿ ಇರುವುದು. ಅದರ ವಿರೋಧವು ಆಗ ಉಂಟಾಗುವುದು.

ವಿವರಣೆ: ವನಾದಿಗಳಲ್ಲಿ ಚಿಗುರು ಮೂಡುವುದಕ್ಕೆ ಪುರುಷಪ್ರಯತ್ನವೇನೂ ಇರದು. ಅದನ್ನು ಪೌರುಷೇಯವೆಂದರೆ ದೃಷ್ಟಹಾನಿ ಮತ್ತು ಅದೃಷ್ಟಕಲ್ಪನಾ ಸಂಭವಿಸುವುದು.

ಭಾಷ್ಯ: *ನನ್ವಾದಿ ಪುರುಷೋಚ್ಚರಿತತ್ವಾದ್ವೇದಾ ಅಪಿ ಪೌರುಷೇಯಾ ಏವೇತ್ಯಾಹ ।*

ಸೂತ್ರ: ಯಸ್ಮಿನ್ನದೃಷ್ಟೇಽಪಿ ಕೃತಬುದ್ಧಿರುಪಜಾಯತೇ ತತ್ ಪೌರುಷೇಯಮ್ ॥ ೫೦ ॥

ಸೂತ್ರಾನುವಾದ: ಯಾವುದು ಅದೃಷ್ಟವಾದರೂ ಅದು ಹೀಗಿರಬೇಕು ಎಂದು ಬುದ್ಧಿಯುಂಟಾಗುವುದೇ ಪೌರುಷೇಯವೆನ್ನುವರು.

ಭಾಷ್ಯ: *ದೃಷ್ಟ ಇವಾದೃಷ್ಟೇಽಪಿ ಯಸ್ಮಿನ್ ವಸ್ತುನಿ ಕೃತಬುದ್ಧಿಃ ಬುದ್ಧಿಪೂರ್ವಕತ್ವ ಬುದ್ಧಿರ್ಜಾಯತೇ ತದೈವ ಪೌರುಷೇಯಮಿತಿ ವ್ಯವಹ್ರಿಯತೇ ಇತ್ಯರ್ಥಃ। ಏತದುಕ್ತಂ ಭವತಿ । ನ ಪುರುಷೋಚ್ಚರಿತತಾಮಾತ್ರೇಣ ಪೌರುಷೇಯತ್ವಮ್, ಶ್ವಾಸಪ್ರಶ್ವಾಸಯೋಃ ಸುಷುಪ್ತಿಕಾಲೀನಯೋಃ*

ಪೌರುಷೇಯತ್ವವ್ಯವಹಾರಾಭಾವಾತ್, ಕಿಂತು ಬುದ್ಧಿಪೂರ್ವಕತ್ವೇನ । ವೇದಾಸ್ತು ನಿಶ್ವಾಸವತ್ ಏವ ಅದೃಷ್ಟವಶಾತ್ ಅಬುದ್ಧಿಪೂರ್ವಕಾ ಏವ ಸ್ವಯಂಭುವಃ ಸಕಾಶಾತ್ ಸ್ವಯಂ ಭವಂತಿ । ಅತೋ ನ ತೇ ಪೌರುಷೇಯಾಃ ।'ತಥಾ ಚ ಶ್ರುತಿಃ–' ತಸ್ಯೈತಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ ಯದೃಗ್ವೇದ' (ಬೃ.ಉ.೪.೫.೧೧) ಇತ್ಯಾದಿರಿತಿ ।

ಅನುವಾದ: ದೃಷ್ಟವಸ್ತುವಿನಂತೆ ಅದೃಷ್ಟವಸ್ತುವಿನಲ್ಲಿಯೂ (ಕೃತಬುದ್ಧಿಃ) ಬುದ್ಧಿಹರಿಸಿದಾಗ ಉಂಟಾಗುವ ಬುದ್ಧಿಯನ್ನು ಪೌರುಷೇಯವೆಂದು ವ್ಯವಹಾರವುಂಟು. ಇದರ ಅಭಿಪ್ರಾಯ ಹೀಗಿದೆ. ಪುರುಷನದೆಂದು ಹೇಳಿದ ಮಾತ್ರಕ್ಕೆ ಪೌರುಷೇಯವಾಗ ಲಾರದು. ಸುಷುಪ್ತಿಯ ಅವಸ್ಥೆಯಲ್ಲಿ ಶ್ವಾಸ–ಪ್ರಶ್ವಾಸಗಳನ್ನು ಪೌರುಷೇಯ ಎನ್ನಲಾಗದು; ಆದರೂ ಅದೂ ಬುದ್ಧಿಪೂರ್ವಕವಾಗಿಯೇ ನಡೆಯುವುದು. ವೇದಗಳಾದರೋ ನಿಶ್ವಾಸದಂತೆಯೇ ಅದೃಷ್ಟವಶಾತ್ ಬುದ್ಧಿಪೂರ್ವಕವಾಗಿ ಬ್ರಹ್ಮನಿಂದ ತಾನಾಗಿಯೇ ಹೊರಬಂದಿವೆ. ಆದ್ದರಿಂದ ಅವುಗಳು ಪೌರುಷೇಯವಲ್ಲ. ಶ್ರುತಿಯು ಹೀಗೆ ಹೇಳುತ್ತದೆ– 'ಆ ಮಹಾನ್‌ಭೂತದ (ಬ್ರಹ್ಮನ) ನಿಶ್ವಾಸವೇ ಈ ಋಗ್ವೇದವು.' ಮುಂತಾದುವುಗಳು.

ಭಾಷ್ಯ: *ನನು ಏವಂ ಯಥಾರ್ಥವಾಕ್ಯಾರ್ಥಜ್ಞಾನಪೂರ್ವಕತ್ವಾತ್ ಶುಕವಾಕ್ಯಸ್ಯೇವ ವೇದಾನಾಮಪಿ ಪ್ರಾಮಾಣ್ಯಂ ನ ಸ್ಯಾತ್, ತತ್ರಾಹ–*

ಅನುವಾದ: ಯಥಾರ್ಥವಾದ ವಾಕ್ಯಗಳ ಅರ್ಥವನ್ನು ತಿಳಿದು (ಶಬ್ದ ಪ್ರಮಾಣವಾದಲ್ಲಿ) ಗಿಣಿಗಳು ಹೇಳುವ ವೇದಗಳೂ ಸಹ ಪ್ರಮಾಣವಾಗಲಾರದಲ್ಲವೆ? ಅದಕ್ಕೆ ಹೀಗೆ ಹೇಳುವರು.

ಸೂತ್ರ: ನಿಜಶಕ್ತ್ಯಭಿವ್ಯಕ್ತೇಃ ಸ್ವತಃ ಪ್ರಾಮಾಣ್ಯಮ್ ॥ ೫೧ ॥

ಸೂತ್ರಾನುವಾದ: ತಮ್ಮ ಸಹಜಶಕ್ತಿಯಿಂದ ಅರ್ಥಬೋಧನ ಮಾಡುವುದರಿಂದ (ವೇದಗಳು) ಸ್ವತಃ ಪ್ರಮಾಣಗಳು.

ಭಾಷ್ಯ: *ವೇದಾನಾಂ ನಿಜಾ ಸ್ವಾಭಾವಿಕೀ ಯಾ ಯಥಾರ್ಥಜ್ಞಾನಜನನಶಕ್ತಿಃ ತಸ್ಯಾ ಮಂತ್ರಾಯುರ್ವೇದಾದೌ ಅಭಿವ್ಯಕ್ತೇಃ ಉಪಲಂಭಾತ್ ಅಖಿಲವೇದಾನಾಮೇವ ಸ್ವತ ಏವ ಪ್ರಾಮಾಣ್ಯಂ ಸಿದ್ಧ್ಯತಿ, ನ ವಕ್ತೃಯಥಾರ್ಥಜ್ಞಾನ ಮೂಲಕತ್ವಾದಿನೇತ್ಯರ್ಥಃ । ತಥಾ ಚ ನ್ಯಾಯಸೂತ್ರಮ್, 'ಮಂತ್ರಾಯುರ್ವೇದ ಪ್ರಾಮಾಣ್ಯವಚ್ಚ ತತ್ಪ್ರಾಮಾಣ್ಯಮಿತಿ' । (೨.೧.೩). ಗುಣಾದೀನಾಂ ಚ ನಾತ್ಯಂತಬಾಧ ಇತಿ ಪ್ರತಿಜ್ಞಾಯಾಂ ನ್ಯಾಯೇನ ಸುಖಾದಿಸಿದ್ಧೇರಿತ್ಯೇಕೋ ಹೇತುರುಪನ್ಯಸ್ತಃ, ಪ್ರಪಂಚಿತಶ್ಚ।*

ಅನುವಾದ: ವೇದಗಳಲ್ಲಿ '(ನಿಜಾ)' ಸ್ವಾಭಾವಿಕವಾದ ಯಥಾರ್ಥಜ್ಞಾನವನ್ನು ಉಂಟುಮಾಡುವ ಶಕ್ತಿ ಇರುತ್ತದೆ. ಮಂತ್ರಾಯುರ್ವೇದ ಮುಂತಾದುವುಗಳ ಅರ್ಥದ ಅಭಿವ್ಯಕ್ತಿ

ಸ್ವತಃ ತಿಳಿಯುವಂತೆ ಎಲ್ಲ ವೇದಗಳದ್ದೂ ತಾನಾಗಿಯೇ ಪ್ರಾಮಾಣ್ಯವು ಸಿದ್ಧವಾಗುವುದು. ವಕ್ತೃವಿನ ಯಥಾರ್ಥಜ್ಞಾನದ ಮೂಲಕ ಮುಂತಾದುವುಗಳಿಂದ ಅಲ್ಲ ಎಂದರ್ಥ. ಹಾಗೆಯೇ ನ್ಯಾಯಸೂತ್ರವೂ ಇರುವುದು. 'ಅದರ ಪ್ರಾಮಾಣ್ಯವು ಮಂತ್ರಾಯುರ್ವೇದದ ಪ್ರಾಮಾಣ್ಯದಂತೆ' 'ಗುಣಾದಿಗಳಿಗೆ ಅತ್ಯಂತ ವಿರೋಧವಾಗದು (೫.೨೬) ಎಂದು ಪ್ರತಿಜ್ಞೆಯಲ್ಲಿ 'ನ್ಯಾಯದಿಂದ ಸುಖಾದಿಗಳು ಸಿದ್ಧಿಸುವುವು' ಎಂಬ ಹೇತುವು ಹೇಳಲ್ಪಟ್ಟಿದೆ, ಅಲ್ಲದೆ ಅದನ್ನು ವಿವರಿಸಿದೆ.

ಭಾಷ್ಯ: *ಸಾಂಪ್ರತಂ ತಸ್ಯಾಮೇವ ಹೇತ್ವಂತರಮಾಹ ।*

ಸೂತ್ರ: ನಾಸತಃ ಖ್ಯಾನಂ ನೃಶೃಂಗವತ್ ॥ ೫೨ ॥

ಅನುವಾದ: ಈಗ ಅದರಲ್ಲೇ (ಪ್ರತಿಜ್ಞೆಯಲ್ಲಿ) ಬೇರೆ ಹೇತುಗಳನ್ನು ಹೇಳಿದ್ದಾರೆ.

ಸೂತ್ರಾನುವಾದ: ಅಸತ್ತಿನ ಜ್ಞಾನ ಮನುಷ್ಯನ ಕೊಂಬುಗಳಂತೆ (ಎಂದರೆ, ಇರಲಾರದು) ವಿವರಣೆ (ಸಾಂಖ್ಯರು ಸದಸತ್‌ಖ್ಯಾತಿಯನ್ನು ಒಪ್ಪುವರು)

ಭಾಷ್ಯ: *ಆಸ್ತಾಂ ತಾವತ್ ಪಂಚಾವಯವೇನ ಸುಖಾದಿಸಿದ್ಧಿಃ । ಜ್ಞಾನಮಾತ್ರಾದಪಿ ತತ್ಸಿದ್ಧಿಃ । ಅತ್ಯಂತಾಸತ್ತ್ವೇ ಸುಖಾದೀನಾಂ ಜ್ಞಾನಮೇವ ನೋಪಪದ್ಯತೇ । ನರಶೃಂಗಾದೀನಾಂ ಅಭಾನಾದಿತ್ಯರ್ಥಃ । ತಥಾ ಚ ಬ್ರಹ್ಮಸೂತ್ರಂ– ನಾಭಾವ ಉಪಲಬ್ಧೇರಿತಿ' (೨.೨.೨೮) ಶುಕ್ತಿ–ರಜತ–ಸ್ವಪ್ನ– ಮನೋರಥಾದೌ ಚ ಮನಃ ಪರಿಣಾಮರೂಪ ಏವಾರ್ಥಃ ಪ್ರತೀಯತೇ, 'ನಾತ್ಯಂತಾಸನ್ನಿತಿ.' ವಕ್ಷ್ಯತಿ*

ಅನುವಾದ: ಐದು ಅವಯವಗಳಿಂದ ಸುಖಾದಿ ಸಿದ್ಧಿಯು ಹಾಗಿರಲಿ. ಜ್ಞಾನಮಾತ್ರದಿಂದಲೇ ಅದರ ಸಿದ್ಧಿಯಾಗುವುದು. ಸಂಪೂರ್ಣವಾಗಿ ಅಸತ್ ಆಗಿದ್ದರೆ ಸುಖಾದಿ ಪದಾರ್ಥಗಳ ಜ್ಞಾನವೇ ಉಂಟಾಗುವುದಿಲ್ಲ. ಏಕೆಂದರೆ ಮನುಷ್ಯನ ಕೊಂಬಿನಂತೆ ಅವು (ಇಲ್ಲದ ವಸ್ತುಗಳಾದ್ದರಿಂದ) ಅದರ ಪ್ರತೀತಿಯುಂಟಾಗದು. ಹಾಗೆಯೇ ಬ್ರಹ್ಮಸೂತ್ರವು ಹೀಗಿದೆ– 'ಅಭಾವವಿಲ್ಲದ ಕಾರಣ ಅರ್ಥದ ಪ್ರತೀತಿಯಾಗುವುದು'; ಶುಕ್ತಿ, ರಜತ, ಸ್ವಪ್ನ, ಮನೋರಥಗಳಲ್ಲಿ ಮನಸ್ಸಿನ ಪರಿಣಾಮರೂಪವೇ ತೋರುತ್ತದೆ; ಅಸತ್ತಾಗಿರುವುದು ಎಂದೂ ಗೋಚರವಾಗದು.

ಭಾಷ್ಯ: *ನನ್ವೇವಂ ಗುಣಾದಿರತ್ಯಂತಂ ಸನ್ನೇವ ಭವತು । ತಥಾ ಚ ನಾತ್ಯಂತ ಬಾಧ ಇತಿ ಅಂತಪದವೈಯರ್ಥ್ಯಮಿತಿ । ತತ್ರಾಹ ।*

ಅನುವಾದ: ಹೀಗೆ ಗುಣಾದಿಗಳು ಅತ್ಯಂತ ಸತ್ ಆಗಿರಲಿ. ಆದರೂ 'ಅತ್ಯಂತ ಬಾಧ' ಎಂಬಲ್ಲಿ 'ಅತ್ಯಂತ' ಎಂಬುದು ವ್ಯರ್ಥ. ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ನ ಸತೋ ಬಾಧದರ್ಶನಮ್ ॥ ೫೩ ॥

ಸೂತ್ರಾನುವಾದ: ಇರುವ ವಸ್ತುವನ್ನು ತೋರುತ್ತಿದೆ ಎಂದೂ ಹೇಳಲಾಗದು. ಏಕೆಂದರೆ ಅದಕ್ಕೆ ಬಾಧ ಕಂಡುಬರುವುದು.

ಭಾಷ್ಯ: *ಅತ್ಯಂತಸತೋಽಪಿ ಗುಣಾದೇರ್ಭಾನಂ ನ ಯುಕ್ತಮ್, ವಿನಾಶಾದಿ ಕಾಲೇ ಬಾಧದರ್ಶನಾತ್ । ಚೈತನ್ಯೇ ಭಾಸಮಾನಸ್ಯ ಜಗತಃ ಚೈತನ್ಯೇ ಏವ ಬಾಧದರ್ಶನಾತ್ ಚ । 'ಅಥಾತ ಆದೇಶೋ ನೇತಿ' (ಬೃ.ಉ.೨.೩.೬), 'ನೇಹನಾನಾಸ್ತಿ ಕಿಂಚನ' (ಬೃ.೪.೪.೧೯), 'ಯತ್ರ ದೇವಾ ನ ದೇವಾ ಮಾತಾ ನ ಮಾತಾ' (ಬ್ರಹ್ಮೋ.೨) ಶ್ರುತಿ ಭಿರ್ನ್ಯಾಯೈಶ್ಚ ಇತ್ಯರ್ಥಃ ।*

ಅನುವಾದ: ಅತ್ಯಂತ ಸತ್ ಆಗಿದ್ದರೂ ಗುಣಾದಿಗಳು ತೋರಿದಷ್ಟಕ್ಕೆ ಸರಿಯಲ್ಲ. ವಿನಾಶಾದಿ ಕಾಲದಲ್ಲಿ ಅದರ ಪ್ರತೀತಿಯು ನಿವೃತ್ತವಾಗುವುದು. 'ಇನ್ನು ಇದೇ ಆದೇಶ, ನೇತಿ–ನೇತಿ', 'ಇಲ್ಲಿ ಯಾವುದೂ ಬಗೆ ಬಗೆಯಾಗಿರದು,' 'ಅಲ್ಲಿ ದೇವತೆಗಳು ದೇವತೆಗಳಲ್ಲ, ತಾಯಿಯು ತಾಯಿಯಲ್ಲ' ಮುಂತಾದ ಶ್ರುತಿಗಳು ಮತ್ತು ನ್ಯಾಯಗಳ ಕಾರಣ (ಗುಣಾದಿಗಳು ತೋರುವುದಿಲ್ಲ.)

ಭಾಷ್ಯ: *ನನು ಏವಮಪಿ ಸದಸದ್‌ಭ್ಯಾಂ ಭಿನ್ನಮಪಿ ಜಗದ್ ಭವತು । ತಥಾಪಿ ಅತ್ಯಂತ ಬಾಧಪ್ರತಿಷೇಧೋಪಪತ್ತಿರಿತಿ । ತತ್ರಾಹ ।*

ಅನುವಾದ: ಆದರೂ ಸದ್ ಅಸದ್‌ಗಳಿಗಿಂತ ಭಿನ್ನವಾಗಿ ಜಗತ್ತು ಏಕೆ ಇರಬಾರದು. ಹಾಗಿದ್ದರೂ ಅತ್ಯಂತ ಬಾಧವನ್ನು ಪ್ರತಿಷೇಧ ಮಾಡಿರುವುದು ಸರಿಯಲ್ಲ. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ನಾನಿರ್ವಚನೀಯಸ್ಯ ತದಭಾವಾತ್ ॥ ೫೪ ॥

ಸೂತ್ರಾನುವಾದ: (ಭ್ರಮೆಗೆ) ಅನಿರ್ವಚನೀಯ (ಖ್ಯಾತಿ) ಎನ್ನುವುದೂ ಸರಿಯಲ್ಲ. (ಏಕೆಂದರೆ) ಆ ಬಗೆಯದು ಇಲ್ಲವೇ ಇಲ್ಲ.

ಭಾಷ್ಯ: *ಸತ್ತ್ವೇನ ಅಸತ್ತ್ವೇನ ಚ ಅನಿವರ್ಚನೀಯಂ ತಾದೃಶಸ್ಯಾಪಿ ಭಾನಂ ನ ಘಟತೇ, ತದ ಭಾವಾತ್ । ಸದಸದ್ಭಿನ್ನವಸ್ತ್ವಪ್ರಸಿದ್ಧೇಃ ಇತ್ಯರ್ಥಃ । ದೃಷ್ಟಾನುಸಾರೇಣೈವ ಕಲ್ಪನಾಯಾ ಔಚಿತ್ಯಾದಿತಿ ಭಾವಃ । ನನ್ವೇವಂ ಕಿಮನ್ಯಥಾಖ್ಯಾತಿರೇವೇಷ್ಟಾ । ನೇತ್ಯಾಹ ।*

ಅನುವಾದ: ಸತ್ತ್ವದಿಂದ ಮತ್ತು ಅಸತ್ತ್ವದಿಂದ ಅನಿರ್ವಚನೀಯ ಎಂಬುದೂ ಸಹ ತೋರಲಾಗದು, ಅದು ಇಲ್ಲದ ಕಾರಣ ಸದಸದ್ಭಿನ್ನ ವಸ್ತುವಿನ ಅಸ್ತಿತ್ವವೇ ಇಲ್ಲ ಎಂದರ್ಥ. ಕಂಡ ರೀತಿಯಲ್ಲಿಯೇ ಕಲ್ಪನೆ ಮಾಡುವುದರಲ್ಲಿಯೇ ಔಚಿತ್ಯವಿರುವುದು. ಹಾಗಾದರೆ ಅನ್ಯಥಾಖ್ಯಾತಿಯೇ ಸಾಧುವೆಂದು ಒಪ್ಪುವಿರೋ; ಇಲ್ಲ ಎಂದು ಹೇಳುವರು.

ಸೂತ್ರ: ನಾನ್ಯಥಾಖ್ಯಾತಿಃ ಸ್ವವಚೋವ್ಯಾಘಾತಾತ್ ॥ ೫೫ ॥

ಸೂತ್ರಾನುವಾದ: ನಾವು ಹೇಳಿದ್ದಕ್ಕೆ ವಿರೋಧವಾದ್ದರಿಂದ ಅನ್ಯಥಾಖ್ಯಾತಿಯೂ ಅಲ್ಲ.

ಭಾಷ್ಯ: *ಅನ್ಯದ್ವಸ್ತ್ವನ್ಯರೂಪೇಣ ಭಾಸತೇ ಇತ್ಯಪಿ ನ ಯುಕ್ತಮ್, ಸ್ವವಚೋಽವ್ಯಾಘಾತಾತ್ । ಅನ್ಯತ್ರ ಅನ್ಯರೂಪಸ್ಯ ನೃಶೃಂಗತುಲ್ಯರೂಪತ್ವಂ ಅನ್ಯಥಾ ಶಬ್ದೇನ ಉಚ್ಯತೇಽನ್ಯಥಾ ತಸ್ಯ ಭಾವಮುಚ್ಯತೇ ಇತಿ ಸ್ವವಚಃ ಏವ ವ್ಯಾ ಹತಮ್ । ಅಸತೋ ಭಾನಸಂಭವಸ್ಯ ಅನ್ಯಥಾ ಖ್ಯಾತಿವಾದಿಭಿಃ ಅಪಿ ವಚನಾದಿತ್ಯರ್ಥಃ । ಪುರೋವರ್ತಿನಿ ಅಸತ್ತ್ವೇಽನ್ಯತ್ರ ತತ್ಸತ್ತಾಯಾಃ ಭಾನಾಪ್ರಯೋಜಕತ್ವಮಿತಿ ಭಾವಃ । ನ ಚ ಸರ್ವತ್ರಾಸತೋ ಭಾನೇ ಸಾಮಗ್ರೀ ನ ಸಂಭವತಿ, ಸನ್ನಿಕರ್ಷಾದಿ ಅಭಾವಾತ್ ಇತ್ಯತಃ ಕ್ವಚಿತ್ ಸತ್ತಾಮಾತ್ರಮಪೇಕ್ಷ್ಯತ ಇತಿ ವಾಚ್ಯಮ್। ಅನಾದಿವಾಸನಾಧಾರಾಯಾಃ ಏವ ಭ್ರಮಹೇತುತ್ವಸಂಭವಾದಿತಿ ।*

ಅನುವಾದ: ಯಾವುದೋ ವಸ್ತು ಯಾವುದೋ ರೀತಿಯಲ್ಲಿ ತೋರುವುದು ಎಂಬುದೂ ಸರಿಯಲ್ಲ; ನಮ್ಮ ಮಾತನ್ನೇ ನಾವು ಆಗ ವಿರೋಧಿಸಿದಂತೆ ಆಗುವುದು. ಬೇರೆಯಡೆ ಬೇರೆಯ ರೂಪದ ಜ್ಞಾನವಾದರೋ ಮನುಷ್ಯರ ಕೊಂಬಿನಂತೆ 'ಅನ್ಯಥಾ' ಎಂಬ ಶಬ್ದದಿಂದ ಹೇಳುವರು, 'ಅನ್ಯಥಾ' ಎಂದು ಹೇಳಿ ಅದರ ತೋರಿಕೆಯನ್ನು ಹೇಳಿ ತಮ್ಮ ಮಾತನ್ನು ತಾವೇ ಅಲ್ಲಗಳೆದಿದ್ದಾರೆ. ಅಸತ್ ತೋರದ ಕಾರಣ ಅನ್ಯಥಾ ಖ್ಯಾತಿವಾದಿಗಳೂ ಹಾಗೆಯೇ ಹೇಳುವರು. ಮುಂದೆ ಇರುವ ಅಸತ್ತನ್ನು ಬೇರೊಂದೆಡೆ ಇರುವ 'ಸತ್ತಾ' ತೋರಿಬರುತ್ತದೆ ಎಂಬುದು ಅಪ್ರಯೋಜಕವಾದುದು, ಎಂದು ಭಾವ. ಎಲ್ಲೆಡೆಯಲ್ಲಿಯೂ ಅಸತ್ತು ತೋರಿ ಬಂದಲ್ಲಿ ಸಾಮಗ್ರಿಯ ಸಂಭವವಿಲ್ಲ. ಏಕೆಂದರೆ ಸನ್ನಿಕರ್ಷವೇ ಮೊದಲಾದವುಗಳು ಇರುವುದಿಲ್ಲ; ಆದ್ದರಿಂದ ಬೇರೊಂದೆಡೆ ಸತ್ತಾ ಇರಬೇಕೆಂದು ಅಪೇಕ್ಷೆ ಬರುತ್ತದೆ; ಅನಾದಿಕಾಲದ 'ವಾಸನಾ' ಧಾರೆಯದೇ ಭ್ರಮೆಗೆ ಕಾರಣವಾಗಿ ಸಂಭವಿಸುವುದು.

ಭಾಷ್ಯ: *'ನಾತ್ಯಂತಬಾಧ' (೫.೨೬) ಇತಿ ಪೂರ್ವೋಕ್ತಂ ವಿವೃಣ್ವಾನಃ ಸ್ವಸಿದ್ಧಾಂತಂ ಉಪಸಂಹರತಿ ।*

ಸೂತ್ರ: ಸದಸತ್‌ಖ್ಯಾತಿಬಾಧಾಬಾಧಾತ್ ॥ ೫೬ ॥

ಅನುವಾದ: 'ಅತ್ಯಂತ ಬಾಧವಿಲ್ಲವೆಂಬ' ಮೊದಲೇ ಹೇಳಿದ (೫–೨೬) ವಿಷಯವನ್ನು ವಿವರಿಸುತ್ತಾ ತನ್ನ ಸಿದ್ಧಾಂತವನ್ನು ತಿಳಿಸುವರು.

ಸೂತ್ರಾನುವಾದ: ಬಾಧದ ಅಭಾವದ ಕಾರಣ ಸದಸತ್‌ಖ್ಯಾತಿಯನ್ನು (ಒಪ್ಪಬೇಕು)

ವಿವರಣೆ: ರಜ್ಜು–ಸರ್ಪಗಳ ಭ್ರಮೆಯುಂಟಾದಾಗ ಸರ್ಪದಲ್ಲಿ ಅಸತ್ತೂ ರಜ್ಜುವಿನಲ್ಲಿ ಸತ್ತೂ ಇರುವ 'ಖ್ಯಾತಿ'ಯುಂಟಾಗುವುದು.

ಭಾಷ್ಯ: *ಸದಸತ್ ಖ್ಯಾತಿರೇವ ಸರ್ವೇಷಾಂ ಗುಣಾದೀನಾಮ್ । ಕುತಃ? ಬಾಧಾಬಾಧಾತ್ । ತತ್ರ ಸ್ವರೂಪೇಣ ಅಬಾಧಃ ಸರ್ವವಸ್ತೂನಾಂ ನಿತ್ಯತ್ವಾತ್ । ಸಂಸರ್ಗತತು ಬಾಧಃ ಸರ್ವವಸ್ತೂನಾಂ ಚೈತನ್ಯೇಽಸ್ತಿ ।*

ಯಥಾ ಪಟಾದಿಷು ಲೌಹಿತ್ಯಾದೇಸ್ತದ್ವತ್ । ತಥಾವಸ್ಥಾಭಿರಪಿ ಬಾಧೋಽಖಿಲ ಪರಿಣಾಮಿನಾಂ ಕಾಲಾದಿಷ್ವಿತ್ಯರ್ಥಃ । ಬಾಧಶ್ಚ ಪ್ರತಿಪನ್ನಧರ್ಮಿಣಿ ನಿಷೇಧಬುದ್ಧಿವಿಷಯತ್ವಮ್ । ಅಸತ್ತ್ವಂ ತು ಅಭಾವಃ । ಸೋಽಪ್ಯಧಿಕರಣಸ್ವರೂಪ ಇತಿ। ನ ಚ ಸದಸತ್ತ್ವಯೋರ್ವಿರೋಧ ಇತಿ ವಾಚ್ಯಮ್ । ಪ್ರಕಾರಭೇದೇನಾವಿರೋಧಾತ್ । ಯಥಾ ಲೌಹಿತ್ಯಂ ಬಿಂಬರೂಪೇಣ ಸತ್, ಸ್ಫಟಿಕಗತಪ್ರತಿಬಿಂಬರೂಪೇಣ ಚ ಅಸದಿತಿ ದೃಷ್ಟಮ್ । ಯಥಾ ವಾ ರಜತಂ ವಣಿಗ್ವೀಥೀಸ್ಥರೂಪೇಣ ಸತ್, ಶುಕ್ತ್ಯಧ್ಯಸ್ತರೂಪೇಣ ಅಸತ್, ತಥೈವ ಸರ್ವಂ ಜಗತ್ ಸ್ವರೂಪತಃ ಸತ್, ಚೈತನ್ಯಾದೌ ಅಧ್ಯಸ್ತರೂಪೇಣ ಚ ಅಸದಿತಿ । ತದುಕ್ತಮ್ ।

೧. ಅರ್ಥೇಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ । ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥

ಏವಮೇವ ಅವಸ್ಥಾಭೇದೇನಾಪಿ ಸದಸತ್ತ್ವಮವಿರುದ್ಧಮ್ । ಯಥಾ ಹಿ ವೃಕ್ಷಾದಿಃ ಪ್ರರೂಢಾದ್ಯವಸ್ಥಾಭಿಃ ಸನ್ನಪಿ ಅಂಕುರಾದಿ ಅವಸ್ಥಾಭಿರಸನ್ ಭವತಿ, ತಥೈವ ಪ್ರಕೃತ್ಯಾದಿಕಂ ಸದಸದಾತ್ಮಕಮಿತಿ ತದುಕ್ತಮ್ ।

೨. ಅವ್ಯಕ್ತಂ ಕಾರಣಂ ಯತ್ ತನ್ನಿತ್ಯಂ ಸದಸದಾತ್ಮಕಮ್ । ಪ್ರಧಾನಂ ಪ್ರಕೃತಿಶ್ಚೇತಿ ಯದಾಹುಸ್ತತ್ವಚಿಂತಕಾಃ । (ವಿ. ಪು. ೧.೨.೯)

೩. ನಿತ್ಯದಾಹ್ಯಂಗಭೂತಾನಿ ಭವಂತಿ ನ ಭವಂತಿ ಚ । ಕಾಲೇನಾಲಕ್ಷ್ಯವೇಗೇನ ಸೂಕ್ಷ್ಮತ್ವಾತ್ತನ್ನ ದೃಶ್ಯತೇ ॥ ಏತಚ್ಚ ಅಸ್ಮಾಭಿಃ ಬ್ರಹ್ಮಮೀಮಾಂಸಾಭಾಷ್ಯೇ ಭಾಗವತ (೧೧.೨೨.೪೨) ಚ ಪ್ರಪಂಚಿತಮಿತಿ ದಿಕ್ ।

ಅನುವಾದ: ಎಲ್ಲಾ ಗುಣಾದಿಗಳಿಗೂ ಸದಸತ್‌ಖ್ಯಾತಿಯೇ ಉಂಟಾಗುವುದು ಏಕೆ? ಬಾಧ ಮತ್ತು ಅಭಾಧ ಎರಡೂ ಇರುವುದರಿಂದ ಅದರಲ್ಲಿ ಸ್ವರೂಪದಲ್ಲಿ ಅಭಾಧೆ, ಏಕೆಂದರೆ ಎಲ್ಲ ವಸ್ತುಗಳೂ ನಿತ್ಯ. ಎಲ್ಲ ವಸ್ತುಗಳ ಚೈತನ್ಯದಲ್ಲಿ ಸಂಸರ್ಗದಿಂದ ಬಾಧವುಂಟಾಗುವುದು, ಹೇಗೆ ವಸ್ತ್ರಾದಿಗಳಲ್ಲಿ ಕೆಂಪು ಬಣ್ಣ ಉಂಟಾಗುವುದೋ ಹಾಗೆ; ಅದೇ ರೀತಿಯಾಗಿ ಅವಸ್ಥೆಗಳಿಗೆ ಅನುಗುಣವಾಗಿ ಎಲ್ಲ ಪರಿಣಾಮಿ ಪದಾರ್ಥಗಳಿಗೂ ಕಾಲಾದಿಗಳಲ್ಲಿ ಭಾಧವುಂಟಾಗುವುದು. ಬಾಧವೆಂದರೆ ಗಮನಿಸಿದ ಧರ್ಮವುಳ್ಳ ಪದಾರ್ಥದಲ್ಲಿ ನಿಷೇಧಬುದ್ಧಿಯ ವಿಷಯತೆಯನ್ನು ಉಂಟು ಮಾಡುವುದು. ಅಸತ್ತ್ವವೆಂದರೆ ಅಭಾವ; ಅದೂ ಸಹ ಅಧಿಕರಣಸ್ವರೂಪದ್ದೇ ಸತ್‌ಗೂ ಅಸತ್‌ಗೂ ಯಾವ ವಿರೋಧವೂ ಇಲ್ಲ. ಪ್ರಕಾರಭೇದದಿಂದ ಯಾವ ವಿರೋಧವೂ ಬರದು. ಹೇಗೆಂದರೆ ಕೆಂಪುಬಣ್ಣವು ಬಿಂಬರೂಪದಲ್ಲಿ ಸತ್ ಆಗಿರುವುದು, ಆದರೆ ಸ್ಫಟಿಕದಲ್ಲಿರುವ ಪ್ರತಿಬಿಂಬರೂಪದ ಅಸತ್ ಎಂಬುದು ತಿಳಿಯುವುದು. ಹೇಗೆ ಬೆಳ್ಳಿಯು ಪೇಟೆಯ ಬೀದಿಯ ಬೆಳ್ಳಿ 'ಸತ್,' ಕಪ್ಪೆಚಿಪ್ಪಿನ ಮೇಲೆ ಅಧ್ಯಾರೋಪ ಮಾಡಿದ್ದು ಅಸತ್, ಹಾಗೆಯೇ ಜಗತ್ತೆಲ್ಲ ಸ್ವರೂಪದಲ್ಲಿ ಸತ್ ಮತ್ತು ಚೇತನದ ಮೇಲೆ ಅಧ್ಯಾರೋಪಗೊಂಡ ಭಾಗ ಅಸತ್ ।

೧. (ಶ್ಲೋಕ) ಪದಾರ್ಥವು ಇಲ್ಲದಿದ್ದರೂ ಸಂಸಾರದಲ್ಲಿರುವುದು ಹೋಗದು; ವಿಷಯಗಳನ್ನೇ ಧ್ಯಾನಮಾಡುವವನಿಗೆ ಸ್ವಪ್ನದ ಅನರ್ಥಗಳೂ ಅನುಭವಕ್ಕೆ ಬರುವಂತೆ. ಹೀಗೆಯೇ ಅವಸ್ಥಾಭೇದದಿಂದಲೂ ಸತ್ ಮತ್ತು ಅಸತ್‌ಗಳು ಪರಸ್ಪರ ವಿರುದ್ಧವಲ್ಲ. ಹೇಗೆ ಮರವು ಚನ್ನಾಗಿ ಬೆಳೆದನಂತರ ಸತ್ ಆಗಿದ್ದರೂ ಅಂಕುರಾದಿ ಅವಸ್ಥೆಗಳಲ್ಲಿ 'ಅಸತ್' ಆಗಿಯೇ ಇರುತ್ತದೆ. ಹಾಗೆಯೇ ಪ್ರಕೃತ್ಯಾದಿ ಪದಾರ್ಥಗಳು ಸದಸದಾತ್ಮಕವಾಗಿರುತ್ತವೆ.

೨. (ಶ್ಲೋಕ) ಅವ್ಯಕ್ತವೆಂಬ ಕಾರಣವು ಯಾವಾಗಲೂ ಸದಸದಾತ್ಮಕವಾಗಿ ಇರುತ್ತದೆ. ಅದನ್ನು ತತ್ತ್ವಚಿಂತಕರು ಪ್ರಕೃತಿ ಎಂದೂ ಪ್ರಧಾನ ಎಂದೂ ಕರೆಯುವರು.

೩. (ಶ್ಲೋಕ) ಯಾವಾಗಲೂ ಪದಾರ್ಥಗಳು ಇರುವುದೂ ಉಂಟು, ಇಲ್ಲದಿರುವುದು ಉಂಟು. ಗೋಚರವಾಗದ ಕಾಲದವೇಗದಲ್ಲಿ ಅವು ಸೂಕ್ಷ್ಮವಾದ ಕಾರಣ ಕಣ್ಣಿಗೆ ಬೀಳುವುದಿಲ್ಲ.

ವಿವರಣೆ: ಮೂಲರೂಪದ ಪದಾರ್ಥವೇ ಬೇರೆ, ಅದು ಪ್ರಕಟವಾಗಿ ಗ್ರಹಿಸಲ್ಪಟ್ಟದ್ದೇ ಬೇರೆ ಎಂಬ ಸ್ಥಿತಿ ಬಂದಾಗ ಮೂಲಪದಾರ್ಥದ ಸ್ವರೂಪಕ್ಕೆ ಬಾಧೆಯುಂಟಾಗಿ (ತಳ್ಳಿಹಾಕುವುದು). ಅದೇ ಧರ್ಮಗಳು ಆರೋಪವಾದ ಬೇರೊಂದು ವಸ್ತು ತೋರುವುದು.

ಭಾಷ್ಯ: *ಅಯಂ ವಿಚಾರಃ ಪರ್ಯಾಪ್ತಃ, ಇದಾನೀಂ ಶಬ್ದ ವಿಚಾರಃ ಪ್ರಸಂಗಾಗತಃ ಆಗಂತುಕಯಾಂತೇ ಪ್ರಸ್ತೂಯತೇ ।*

ಅನುವಾದ: ಈ ವಿಚಾರ ಸಾಕಷ್ಟಾಗಿದೆ, ಈಗ ಶಬ್ದವಿಚಾರ ಪ್ರಾಸಂಗಿಕವಾಗಿ ಬಂದಿರುವುದರಿಂದ ಪ್ರಸ್ತುತಪಡಿಸುವರು.

ಸೂತ್ರ: ಪ್ರತೀತ್ಯಪ್ರತೀತಿಭ್ಯಾಂ ನ ಸ್ಫೋಟಾತ್ಮಕಃ ಶಬ್ದಃ ॥ ೫೭ ॥

ಸೂತ್ರಾನುವಾದ: ಶಬ್ದವು ಸ್ಫೋಟಾತ್ಮಕವಲ್ಲ. ಅದಕ್ಕೆ ಕಾರಣ ಪ್ರತೀತಿ–ಅಪ್ರತೀತಿಗಳು.

ವಿವರಣೆ: ಕ್ರಮವಾಗಿ ಯಾವುದು ತಿಳುವಳಿಕೆಗೆ ಬರುವುದೋ ಅದು ಪ್ರತೀತಿ ಮತ್ತು ಕ್ರಮರಹಿತವಾದುದು ಅಪ್ರತೀತಿ.

ಭಾಷ್ಯ: *ಪ್ರತ್ಯೇಕವರ್ಣೇಭ್ಯೋಽತಿರಿಕ್ತಂ ಕಲಶ ಇತ್ಯಾದಿರೂಪಂ ಅಖಂಡಂ ಏಕಪದಂ ಸ್ಫೋಟ ಇತಿ ಯೋಗೈರಭ್ಯುಗಮ್ಯತೇ । ಕಂಬುಗ್ರೀವಾದ್ಯವಯವೇಭ್ಯೋಽತಿರಿಕ್ತೋ ಘಟಾದ್ಯವಯವೀವ । ಸ ಚ ಶಬ್ದವಿಶೇಷಃ ಪದಾರ್ಥ್ಯೋಽರ್ಥಸ್ಫುಟೀಕರಣಾತ್ ಸ್ಫೋಟ ಇತ್ಯುಚ್ಯತೇ।*

ಸ ಶಬ್ದೋಽಪ್ರಾಮಾಣಿಕಃ । ಕುತಃ? ಪ್ರತೀತ್ಯಪ್ರತೀತಿಭ್ಯಾಮ್ । ಸ ಶಬ್ದಃ ಕಿಂ ಪ್ರತೀಯತೇ, ನ ವಾ? ಆದ್ಯೇ ಯೇನ ವರ್ಣಸಮುದಾಯೇನ ಆನುಪೂರ್ವೀವಿಶೇಷವಿಶಿಷ್ಟೇನ ಸೋಽಭಿವ್ಯಜ್ಯತೇ, ತಸ್ಯೈವಾರ್ಥಪ್ರತ್ಯಾಯಕಮಸ್ತು, ಕಿಮಂತರ್ಗಡುನಾ ತೇನ? ಅಂತ್ಯೇ

ತ್ವಜ್ಞಾತಸ್ಫೋಟಸ್ಯ ನಾಸ್ತ್ಯರ್ಥಪ್ರತ್ಯಾಯನಶಕ್ತಿರಿತಿ ವ್ಯರ್ಥಾ ಸ್ಫೋಟಕಲ್ಪನಾ ಇತ್ಯರ್ಥಃ ।

ಅನುವಾದ: 'ಕಲಶ' ಎಂಬ ಪದದಲ್ಲಿ ಪ್ರತ್ಯೇಕವರ್ಣಗಳನ್ನು ಮೀರಿದ ಅಖಂಡವಾದ ಒಂದು ಪದವನ್ನು ಸ್ಫೋಟವೆಂದು ಯೋಗದರ್ಶನವು ಹೇಳುತ್ತದೆ. 'ಶಂಖದಂತೆ ಕತ್ತುಳ್ಳವನು' ಮುಂತಾದುವುಗಳಲ್ಲಿ ಅವಯವಗಳನ್ನು ಮೀರಿ ಘಟವಾಗಿ ಅವಯುವಿಯು ಅಭಿವ್ಯಕ್ತವಾಗುವುದು. ಆ ಪದವೆಂಬ ಶಬ್ದವಿಶೇಷವು ಅರ್ಥವನ್ನು ಸ್ಪಷ್ಟಪಡಿಸುವುದರಿಂದ ಸ್ಫೋಟ ಎನ್ನಿಸಿಕೊಳ್ಳುತ್ತದೆ.

ಆದರೆ ಆ ಶಬ್ದವು ಪ್ರಮಾಣರಹಿತವಾದುದು. ಏಕೆ? ಪ್ರತೀತಿ–ಅಪ್ರತೀತಿಗಳ ಕಾರಣದಿಂದ ಆ ಶಬ್ದವು ತಿಳಿಯಲು ಸಾಧ್ಯವೆ ಅಥವಾ ತಿಳಿಯಲು ಸಾಧ್ಯವಿಲ್ಲವೆ? ಮೊದಲ (ಕಾರಣವಾದರೆ) ಕ್ರಮವಾಗಿ ಬರುವ ವೈಶಿಷ್ಟ್ಯದಿಂದ ಅದು ಅಭಿವ್ಯಕ್ತವಾಗುತ್ತದೆ, ಆಗ ಅದೇ ಅರ್ಥವನ್ನು ತಿಳಿಸುವುದು ಎಂದಾಗಲಿ, ನಡುವೆ ವ್ಯವಧಾನದ ಮಾತೇಕೆ? ಅಪ್ರತೀತಿಯಾದಲ್ಲಿ ಶಬ್ದಾರ್ಥವನ್ನು ತಿಳಿಸುವ ಶಕ್ತಿಯಿದೆ ಎಂಬುದು ವ್ಯರ್ಥವಾಗುವುದು, ಅಜ್ಞಾತವಾದ ಸ್ಫೋಟಕಲ್ಪನೆಯೇಕೆ?

ಭಾಷ್ಯ: *ಪೂರ್ವಂ ವೇದಾನಾಂ ನಿತ್ಯತ್ವಂ ಪ್ರತಿಷಿದ್ಧಮಿದಾನೀಂ ವರ್ಣನಿತ್ಯತ್ವಮಪಿ ಪ್ರತಿಷೇಧತಿ ।*

ಸೂತ್ರ: ನ ಶಬ್ದನಿತ್ಯತ್ವಂ ಕಾರ್ಯತಾಪ್ರತೀತೇಃ ॥ ೫೮ ॥

ಅನುವಾದ: ಹಿಂದೆ ವೇದಗಳ ನಿತ್ಯತ್ವವನ್ನು ಅಲ್ಲಗಳೆದಿರಿ, ಈಗ ವರ್ಣನಿತ್ಯತ್ವವನ್ನು ಪ್ರತಿಷೇಧಿಸುತ್ತೀರಿ.

ಸೂತ್ರಾನುವಾದ: ಶಬ್ದದ ನಿತ್ಯತ್ವವನ್ನು ಹೇಳಲಾಗದು, ಏಕೆಂದರೆ ಕಾರ್ಯತೆಯ ಪ್ರತೀತಿಯುಂಟಾಗುವುದು/

ಭಾಷ್ಯ: *ಸ ಏವಾಯಂ ಗಕಾರ ಇತ್ಯಾದಿ ಪ್ರತ್ಯಭಿಜ್ಞಾಬಲಾದ್ವರ್ಣನಿತ್ಯತ್ವಂ ನ ಯುಕ್ತಮ್ । ಉತ್ಪನ್ನೋ ಗಕಾರ ಇತ್ಯಾದಿ ಪ್ರತ್ಯಯೇ ನ ಅನಿತ್ಯತ್ವಾಸಿದ್ಧೇರಿತ್ಯರ್ಥಃ । ಪ್ರತ್ಯಭಿಜ್ಞಾ ಚ ತಜ್ಜಾತೀಯತಾವಿಷಯಿಣೀ । ಅನ್ಯಥಾ ಘಟಾದೇರಪಿ ಪ್ರತ್ಯಭಿಜ್ಞಯಾ ನಿತ್ಯತಾಪತ್ತೇರಿತಿ ।*

ಅನುವಾದ: ಇದು ಅದೇ ಗಕಾರ ಮುಂತಾದ ನೆನಪಿನ ಬಲದಿಂದ ವರ್ಣವು ನಿತ್ಯವೆನ್ನಲಾಗದು ಏಕೆಂದರೆ ಗಕಾರವು ಉತ್ಪನ್ನವಾಯಿತು ಎಂಬ ಆಧಾರದ ಮೇಲೆ ಅದರ ಅನಿತ್ಯತ್ವವು ಸಿದ್ಧವಾಗುವುದು. ಅದೇ ಎಂಬ ನೆನಪೂ ಸಹ ಅದರ ಜಾತಿಯನ್ನು ಕುರಿತದ್ದಾಗಿರುತ್ತದೆ ಹಾಗಿಲ್ಲದಿದ್ದಲ್ಲಿ ಘಟಾದಿಗಳ ನೆನಪಿನಿಂದ ಅದೂ ನಿತ್ಯವೆನ್ನಬೇಕಾಗುತ್ತದೆ.

ಸೂತ್ರ: ಪೂರ್ವಸಿದ್ಧಸತ್ತ್ವಸ್ಯಾಭಿವ್ಯಕ್ತಿರ್ದೀಪೇನೇವ ಘಟಸ್ಯ ॥ ೫೯ ॥

ಸೂತ್ರಾನುವಾದ: ಮೊದಲೇ ಇರುವ ಸತ್ತ್ವದ ಅಭಿವ್ಯಕ್ತಿಯಾಗುವುದು, ದೀಪದಿಂದ ಘಟವನ್ನು ನೋಡಿದಂತೆ ।

ಭಾಷ್ಯ: *ನನು ಪೂರ್ವಸಿದ್ಧಸತ್ತಾಕಸ್ಯೈವ ಶಬ್ದಸ್ಯ ಧ್ವನ್ಯಾಭಿಃ ಅಭಿವ್ಯಕ್ತಿಃ ತನ್ಮಾತ್ರಮುತ್ಪತ್ತಿಃ ಪ್ರತೀತೇರ್ವಿಷಯಃ । ಅಭಿವ್ಯಕ್ತೇ ದೃಷ್ಟಾಂತಃ, ದೀಪೇನೇವ ಘಟಸ್ಯ ।*

ಅನುವಾದ: ಮೊದಲೇ ಸಿದ್ಧವಾದ ಸತ್ತಾದ ಶಬ್ದವು ಧ್ವನಿ ಮುಂತಾದುವುಗಳಿಂದ ಅದರ ತನ್ಮಾತ್ರವಷ್ಟೇ ಉತ್ಪತ್ತಿ–ಪ್ರತೀತಿಗಳ ವಿಷಯವಾಗುವುದು. ಹೀಗೆ ಅಭಿವ್ಯಕ್ತ ವಾಗುವುದಕ್ಕೆ ದೃಷ್ಟಾಂತವೆಂದರೆ ದೀಪದಿಮದ ಘಟವು ಗೋಚರವಾಗುವಂತೆ;

ವಿವರಣೆ: ಮೀಮಾಂಸಕರು ಶಬ್ದನಿತ್ಯತ್ವವನ್ನು ಪ್ರತಿಪಾದಿಸುತ್ತಾರೆ.

ಭಾಷ್ಯ: ಪರಿಹರತಿ – (ಆ ಸಂದೇಹವನ್ನು) ಹೋಗಲಾಡಿಸುತ್ತಾರೆ.

ಸೂತ್ರ: ಸತ್ಕಾರ್ಯಸಿದ್ಧಾಂತಶ್ಚೇತ್ ಸಿದ್ಧಸಾಧನಮ್ ॥ ೬೦ ॥

ಸೂತ್ರಾನುವಾದ: ಸತ್ಕಾರ್ಯಸಿದ್ಧಾಂತವನ್ನು (ಹೇಳುವಿರಾದರೆ) ಅದು ಸಿದ್ಧಸಾಧನ (ದೋಷವಾಗುವುದು).

ಭಾಷ್ಯ: *ಅಭಿವ್ಯಕ್ತಿರ್ಯದ್ಯನಾಗತಾವಸ್ಥಾತ್ಯಾಗೇನ ವರ್ತಮಾನಾವಸ್ಥಾಲಾಭ ಇತ್ಯುಚ್ಯತೇ ತದಾ ಸತ್ಕಾರ್ಯಸಿದ್ಧಾಂತಃ । ತಾದೃಶನಿತ್ಯತ್ವಂ ಚ ಸರ್ವಕಾರ್ಯಾಣಾಮೇವೇತಿ ಸಿದ್ಧಸಾಧನಮಿತ್ಯರ್ಥಃ । ಯದಿ ಚ ವರ್ತಮಾನತಯಾ ಸತ ಏವ ಜ್ಞಾನಮಾತ್ರರೂಪಿಣೀ ಅಭಿವ್ಯಕ್ತಿಃ ಉಚ್ಯತೇ ತದಾ ಘಟಾದೀನಾಮಪಿ ನಿತ್ಯತಾಪತ್ತಿಃ । ಕಾರಣ ವ್ಯಾಪಾರೇಣ ಜ್ಞಾನಸ್ಯೈವೋತ್ಪತ್ತಿಪ್ರತೀತಿವಿಷಯತ್ವೌಚಿತ್ಯಾತ್ ಇತಿ ಭಾವಃ ।*

ಅನುವಾದ: ಅಭಿವ್ಯಕ್ತಿಯೆಂದರೆ ಇನ್ನೂ ತೋರದ ಸ್ಥಿತಿಯನ್ನು ಬಿಟ್ಟು ವರ್ತಮಾನಾವಸ್ಥೆ ಯನ್ನು ಪಡೆಯುವುದು ಎನ್ನುವರು. ಅಲ್ಲಿಗೆ (ಸಾಂಖ್ಯರ) ಸತ್ಕಾರ್ಯಸಿದ್ಧಾಂತವನ್ನೇ (ಒಪ್ಪಿದಂತಾಯಿತು). ಆ ರೀತಿಯಾದ ನಿತ್ಯತ್ವವು ಎಲ್ಲ ಕಾರ್ಯವಸ್ತುಗಳಲ್ಲಿಯೂ ಇರುವುದರಿಂದ (ನಿಮ್ಮ ಪ್ರಯತ್ನ) ಸಿದ್ಧಸಾಧನದಂತಾಯಿತು. ಒಂದು ವೇಳೆ ಸತ್ ಅನ್ನೇ ವರ್ತಮಾನಕಾಲದ ಜ್ಞಾನವೆಂದು ತಿಳಿದಲ್ಲಿ ಅದೇ 'ಅಭಿವ್ಯಕ್ತಿ' ಎನಿಸುವುದು. ಆಗ ಘಟಾದಿಗಳೂ ಸಹ ನಿತ್ಯವೆಂದು ಹೇಳಬೇಕಾಗುತ್ತದೆ. ಕಾರಣದ ವ್ಯಾಪಾರದಿಂದಲೇ ಜ್ಞಾನದ ಉತ್ಪತ್ತಿ ಎಂಬ ಪ್ರತೀತಿಯೇ ವಿಷಯವಾಗುವುದು ಔಚಿತ್ಯ ಹೊಂದಿರುತ್ತದೆ ಎಂದು ಭಾವ.

ಭಾಷ್ಯ: *ಆತ್ಮಾಽದ್ವೈತೇ ಪೂರ್ವಾನುಕ್ತಮಪಿ ಬಾಧಕಮುಪನ್ಯಸನೀಯಂ ಇತ್ಯೇಕದರ್ಥಂ ಅದ್ವೈತನಿರಾಸಃ ಪುನರಾರಭ್ಯತೇ ।*

ಅನುವಾದ: ಆತ್ಮವು ಅದ್ವೈತ ಎಂಬುದನ್ನು ಮೊದಲೇ ಹೇಳದಿದ್ದರೂ ಬಾಧಕವನ್ನು ತಿಳಿಸಬೇಕೆಂದು ಅದರ ಸಲುವಾಗಿ ಆತ್ಮವು ಅದ್ವೈತ ಎಂಬುದನ್ನು ನಿರಾಕರಿಸಲು

ಮತ್ತೆ ಆರಂಭಿಸುತ್ತೇವೆ.

ಸೂತ್ರ: ನಾದ್ವೈತಮಾತ್ಮನೋ ಲಿಂಗಾತ್ ತದ್ಭೇದಪ್ರತೀತೇಃ ॥ ೬೧ ॥

ಸೂತ್ರಾನುವಾದ: ಆತ್ಮನು ಅದ್ವೈತನಾಗುವುದು ಸಂಭವವಿಲ್ಲ; ಅದರ (ಪರಸ್ಪರ ಭಿನ್ನವಾದ) ಸ್ವರೂಪದಿಂದ ಅದು ಭಿನ್ನವೆಂಬುದು ತೋರುವುದು.

ಭಾಷ್ಯ: *ಯದ್ಯಪ್ಯಾತ್ಮನಾಮನ್ಯೋನ್ಯಂ ಭೇದವಾಕ್ಯವದಭೇದ ವಾಕ್ಯಾನಿ ಸಂತಿ, ತಥಾಪಿ ನಾದ್ವೈತಂ ನಾತ್ಯಂತಮಭೇದಃ । ಅಜಾದಿವಾಕ್ಯಸ್ಥೈಃ ಪ್ರಕೃತಿತ್ಯಾಗಾತ್ಯಾದಿಲಿಂಗೈಃ ಭೇದಸ್ಯೈವಸಿದ್ಧೇಃ ಇತ್ಯರ್ಥಃ । ನ ಹಿ ಅತ್ಯಂತಾಭೇದೇ ತಾನಿ ಲಿಂಗಾನ್ಯುಪಪದ್ಯಂತೇ । ಅಭೇದವಾಕ್ಯಾನಿ ತು ಸಾಮ್ಯಾದಿಶ್ರುತ್ಯೈಕವಾಕ್ಯತಯಾ ವೈಧರ್ಮ್ಯಾದಿಲಕ್ಷಣಾಭೇದ ಪರತಯಾ ಉಪಪದ್ಯಂತೇ । ಅಭಿಮಾನಾದಿ ನಿವೃತ್ತ್ಯನ್ಯಥಾಽನುಪ–ಪತ್ತ್ಯಾಪಿ ತತ್ಪರತ್ವಾವಧಾರಣಾಚ್ಚ ।*

ಅನುವಾದ: ಆತ್ಮಗಳು ಪರಸ್ಪರ ಭೇದವುಳ್ಳವುಗಳೆಂದು ವಾಕ್ಯಗಳಿದ್ದರೂ ಅವುಗಳು ಭಿನ್ನವಲ್ಲವೆಂಬ ವಾಕ್ಯಗಳೂ ಇವೆ. ಆದರೂ ಅದ್ವೈತವಲ್ಲ ಎಂದರೆ ಅತ್ಯಂತ ಅಭೇದವಲ್ಲ. 'ಅಜಾದಿ' ವಾಕ್ಯಗಳಲ್ಲಿರುವ ಪ್ರಕೃತಿತ್ಯಾಗ ಮತ್ತು ಅತ್ಯಾಗ ಆದಿ ಸಂಕೇತಗಳಿಂದ ಭೇದವು ಸಿದ್ಧವಾಗುವುದು ಎಂದರ್ಥ. ಅತ್ಯಂತ ಅಭೇದವನ್ನೇ ತೆಗೆದುಕೊಂಡಲ್ಲಿ ಆ ಲಿಂಗಗಳು ದೊರೆಯುತ್ತಿರಲಿಲ್ಲ. ಅಭೇದವಾಕ್ಯಗಳಾದರೋ ಸಾಮ್ಯಾದಿಶ್ರುತಿಗಳ ಏಕವಾಕ್ಯದಿಂದ ವೈಧರ್ಮ್ಯಾದಿಲಕ್ಷಣದಲ್ಲಿ ಅಭೇದವೆಂಬುದು ವ್ಯಕ್ತಪಡುತ್ತದೆ. ಅಭಿಮಾನವೇ ಮೊದಲಾದುವನ್ನು ಹೋಗಲಾಡಿಸಲು ಬೇರೆಯ ವಿಧಾನವಿಲ್ಲದ ಕಾರಣ ಮತ್ತು ಅದನ್ನು ಸರಿಯಾಗಿ ಅರಿಯುವಂತಾಗಲಿ ಎಂದು (ಆ ವಾಕ್ಯಗಳಿವೆ).

ವಿವರಣೆ: 'ಅಜಾದಿ ವಾಕ್ಯ'ಗಳು ಎಂದರೆ 'ಅಜಾಮೇಕಾಂ.....' ಎಂಬ ಶ್ವೇತಾಶ್ವ–ತರೋಪನಿಷತ್ತಿನ ವಾಕ್ಯ (೪.೫). 'ಸಾಮ್ಯಾದಿಶ್ರುತ್ಯೈಕವಾಕ್ಯತಯಾ' ಎಂದರೆ ಮುಂಡಕೋಪನಿಷತ್ತಿನಲ್ಲಿ ಹೇಳಿರುವ (೩.೧.೧) 'ನಿರಂಜನಃ ಪರಮಂ ಸಾಮ್ಯಮುಪೈತಿ' (ಸಾಮ್ಯಂ ಎಂಬುದನ್ನು ಸಮತಾಂ ಅದ್ವಯಲಕ್ಷಣಾಂ' ಎಂದು ಶಾಂಕರಭಾಷ್ಯವಿದೆ.) ಎಂಬ ವಾಕ್ಯ.

ಭಾಷ್ಯ: *ಆತ್ಮನಾಮಭೇದೇ ಲಿಂಗಂ ಬಾಧಕಮುಕ್ತಮ್ । 'ಆತ್ಮೈವೇದಂ ಸರ್ವಂ' (ಛಾಂ.ಉ. ೭.೨೫.೨), 'ಬ್ರಹ್ಮೈವೇದಂ ಸರ್ವಮಿತಿ (ನೃ.ತಾ.ಉ. ೨.೧೭) ಶ್ರುತ್ಯಾತ್ಮನೋಽನಾತ್ಮಭಿರದ್ವೈತೇ ತು ಪ್ರತ್ಯಕ್ಷಮಪಿ ಬಾಧಕಮಸ್ತೀತ್ಯಾಹ ।*

ಅನುವಾದ: ಆತ್ಮಗಳಲ್ಲಿ ಅಭೇದವನ್ನು ಹೇಳಲು ಲಿಂಗವೇ ಬಾಧಕ ಎಂದಿದ್ದಾರೆ. 'ಇದೆಲ್ಲವೂ ಆತ್ಮನೇ', 'ಇದೆಲ್ಲವೂ ಬ್ರಹ್ಮನೇ' ಎಂಬ ಶ್ರುತಿವಾಕ್ಯಗಳಿಂದ ಆತ್ಮ–ಅನಾತ್ಮಗಳೊಡನೆ ಏಕತ್ವ ವಿಷಯದಲ್ಲಿ ಬಾಧಕವಿದೆ ಎಂದು ಹೇಳಿದೆ.

ಸೂತ್ರ: ನಾನಾತ್ಮನಾಪಿ ಪ್ರತ್ಯಕ್ಷಬಾಧಾತ್ ॥ ೬೨ ॥

ಸೂತ್ರಾನುವಾದ: ಅನಾತ್ಮರೂಪವಾದ ಅಚೇತನವೂ ಪ್ರತ್ಯಕ್ಷಪ್ರಮಾಣಕ್ಕೆ ಬಾಧಿತವಾಗುವುದರಿಂದ (ಏಕತೆಯು) ಸಾಧ್ಯವಾಗದು.

ಭಾಷ್ಯ: *ಅನಾತ್ಮನಾಪಿ ಭೋಗ್ಯಪ್ರಪಂಚೇನಾತ್ಮನೋ ನಾದ್ವೈತಮ್ । ಪ್ರತ್ಯಕ್ಷೇಣಾಪಿ ಬಾಧಾತ್ । ಆತ್ಮನಃ ಸರ್ವಭೋಗ್ಯಾಭೇದೇ ಘಟಪಟಯೋರಪ್ಯಭೇದಃ ಸ್ಯಾತ್ । ಘಟಾದೇಃ ಪಟಾದ್ಯಭಿನ್ನಾತ್ಮಾಭೇದಾತ್ । ಸ ಚ ಭೇದಗ್ರಾಹಕ ಪ್ರತ್ಯಕ್ಷಬಾಧಿತ ಇತ್ಯರ್ಥಃ ।*

ಅನುವಾದ: ಅಚೇತನವಾದ ಜಡಜಗತ್ತೂ ಆತ್ಮನೊಡನೆ ಅದ್ವೈತವನ್ನು ಹೊಂದಲಾರದು. ಇದು ಪ್ರತ್ಯಕ್ಷಪ್ರಮಾಣಕ್ಕೆ ಬಾಧವಾಗುವುದು. ಆತ್ಮವು ಎಲ್ಲಾ ಭೋಗ್ಯಗಳೊಡನೆ ಅಭೇದವನ್ನು ಕಲ್ಪಿಸಿದಲ್ಲಿ ಘಟಪಟಗಳಲ್ಲಿಯೂ ಅಭೇದವುಂಟಾಗುವುದು, ಏಕೆಂದರೆ ಘಟಾದಿಗಳು ಪಟಾದಿಗಳಲ್ಲಿ ಅಭಿನ್ನವಾದ ಆತ್ಮನಿರುವುದು. ಭೇದವನ್ನು ಗಮನಿಸಬಹುದಾದ ಪ್ರತ್ಯಕ್ಷವೂ ಬಾಧಕ್ಕೆ ಗುರಿಯಾಗುವುದು ಎಂದರ್ಥ.

ಸೂತ್ರ: ನೋಭಾಭ್ಯಾಂ ತೇನೈವ ॥ ೬೩ ॥

ಸೂತ್ರಾನುವಾದ: ಮೇಲೆ ಹೇಳಿದ ಕಾರಣದಿಂದ ಎರಡು ಒಟ್ಟಾಗಿ ಇದ್ದರೂ ಅಭೇದ (ಸಿದ್ಧವಾಗಲಾರದು).

ಭಾಷ್ಯ: *ನನ್ವೇವಮಾತ್ಮೈವೇದಂ ಇತ್ಯಾದಿಶ್ರುತೀವಾಂ ಕಾ ಗತಿರಸ್ತಿ । ತತ್ರಾಹ ।*

ಅನುವಾದ: 'ಇದೆಲ್ಲ ಆತ್ಮವೇ' (ಛಾಂ.ಉ. ೭.೨೫.೨) ಮುಂತಾದ ಶ್ರುತಿಗಳ ಪಾಡೇನು. ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ಅನ್ಯಪರತ್ವಂ ಅವಿವೇಕಾನಾಂ ತತ್ರ ॥ ೬೪ ॥

ಸೂತ್ರಾನುವಾದ: ಅದರಲ್ಲಿ (ಉಕ್ತವಾದ ವೇದೋಕ್ತಿಗಳು) ದ್ವೈತಪರವಲ್ಲವೆಂದು ಭಾವಿಸಿ ಅದ್ವೈತಪರವೆನ್ನುವುದು ಅವಿವೇಕಿಗಳ ಮಾತು.

ಭಾಷ್ಯ: *ಅವಿವೇಕಾನಾಂ ಅವಿವೇಕಪುರುಷಾನ್ ಪ್ರತಿ ತತ್ರಾದ್ವೈತೇ ಅನ್ಯಪರತ್ವಂ ಉಪಾಸನಾರ್ಥಕಾನುವಾದ ಇತ್ಯರ್ಥಃ । ಲೋಕೇಹಿ ಶರೀರಶರೀರಿಣೋಃ ಭೋಗ್ಯಭೋಕ್ತ್ರೋಶ್ಚ ಅವಿವೇಕೇನ ಅಭೇದೋ ವ್ಯವಹ್ರಿಯತೇ ಅಹಂ ಗೌರಃ, ಮಮಾತ್ಮಾ ಭದ್ರಸೇನಃ ಇತ್ಯಾದಿಃ । ಅತಸ್ತಮೇವ ವ್ಯವಹಾರ–ಮನೂದ್ಯ ತಾನೇವ ಪ್ರತಿ ತಥೋಪಾಸನಾಂ ಶ್ರುತಿರ್ವಿದಧಾತಿ ಸತ್ತ್ವಶುಧ್ಯಾದ್ಯರ್ಥಮಿತಿ । ಅತ ಏವ ಪರಮಾರ್ಥ ದಶಾಯಾ–ಮುಪಾಸ್ಯಾನಾಮಾತ್ಮತ್ವಂ ಪ್ರತಿಷೇಧತಿ ಶ್ರುತಿಃ ।*

ಅನುವಾದ: 'ಅವಿವೇಕಾನಾಂ' ಎಂದರೆ ಅವಿವೇಕಿ ಪುರುಷರನ್ನು ಕುರಿತು ತತ್ರ ಎಂದರೆ ಅದ್ವೈತದಲ್ಲಿ ಅನ್ಯಪರತ್ವವಾದ ಉಪಾಸನೆಗಾಗಿ ಹೇಳಿದ್ದಾರೆ ಎಂದರ್ಥ.

ಲೋಕದಲ್ಲಿ ಶರೀರ–ಶರೀರಿಗಳಲ್ಲಿ, ಭೋಗ್ಯ–ಭೋಕ್ತೃಗಳಲ್ಲಿ ಅವಿವೇಕದ ಕಾರಣ ಅಭೇದವನ್ನು ವ್ಯವಹಾರದಲ್ಲಿ ಹೊಂದಿ, 'ನಾನು ಬೆಳ್ಳಗಿದ್ದೇನೆ', 'ಭದ್ರಸೇನನು ನನ್ನ ಆತ್ಮನೇ' ಮುಂತಾಗಿ ತಿಳಿಯುತ್ತಾನೆ. ಆದ್ದರಿಂದ ಅದೇ ವ್ಯವಹಾರವನ್ನು ಉದ್ದೇಶಿಸಿ ಅವರಿಗಾಗಿಯೇ ಶ್ರುತಿಯು ಉಪಾಸನೆಯನ್ನು ಹೇಳಿದೆ. ಅದರಿಂದ ಸತ್ತ್ವಶುದ್ಧಿ–ಯುಂಟಾಗುವುದು. ಆದ್ದರಿಂದಲೇ ಪಾರಮಾರ್ಥಿಕ ಸ್ಥಿತಿಯಲ್ಲಿ ಉಪಾಸನೆಗೆ ಯೋಗ್ಯವಾದ ಪದಾರ್ಥಗಳಲ್ಲಿ ಆತ್ಮತ್ವವನ್ನು ಶ್ರುತಿಯು ಪ್ರತಿಷೇಧಿಸುತ್ತದೆ.

ಭಾಷ್ಯ: *ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ ।*
ತಮೇವ ಬ್ರಹ್ಮ ತಂ ವಿದ್ಧಿ ನೇದಂ ಯದಿದಮುಪಾಸತೇ । (ಕೇನ ೧.೫)

ಅನುವಾದ: ಯಾವುದನ್ನು ಮನಸ್ಸಿನಲ್ಲಿ ತಿಳಿಯಲಾಗದೋ, ಆದರೆ ಯಾವುದರಿಂದ ಮನಸ್ಸನ್ನು ತಿಳಿಯಬಲ್ಲೆವೆಂದು ಹೇಳುವರೋ ಅದನ್ನೇ ಬ್ರಹ್ಮವೆಂದು ತಿಳಿ. ಆದರೆ ಯಾವುದನ್ನು ಜನರು ಉಪಾಸನೆ ಮಾಡುವರೋ ಅದು ಬ್ರಹ್ಮವಲ್ಲ.

ಭಾಷ್ಯ: *ಏಕಾತ್ಮವಾದಿನಾಂ ಜಗದುಪಾದಾನಕಾರಣಮಪಿ ನ ಸಂಭವತೀತ್ಯಾಹ ।*

ಸೂತ್ರ: ನಾತ್ಮಾವಿದ್ಯಾ ನೋಭಯಂ ಜಗದುಪಾದಾನಕಾರಣಂ ನಿಃಸಂಗತ್ವಾತ್ ॥ ೬೫ ॥

ಅನುವಾದ: ಆತ್ಮ ಒಂದೇ ಎಂದು ಹೇಳುವವರು ಜಗತ್ತಿಗೆ ಅದು ಉಪಾದಾನ ಕಾರಣವೆಂದೂ ಏಕೆ ಹೇಳಲಾಗದು.

ಸೂತ್ರಾನುವಾದ: ಆತ್ಮವಾಗಲಿ, ಅವಿದ್ಯೆಯಾಗಲಿ ಅಥವಾ ಎರಡೂ ಒಟ್ಟಿಗೆಯಾಗಲಿ ಜಗತ್ತಿನ ಉಪಾದಾನಕಾರಣವಾಗಲು ಸಾಧ್ಯವಿಲ್ಲ. (ಅಪರಿಣಾಮಿಯಾದ) ಚೇತನವು ಸಂಗರಹಿತವಾದುದು.

ಭಾಷ್ಯ: *ಕೇವಲಂ ಆತ್ಮಾ ಆತ್ಮಾಶ್ರಿತಾ ಯಾಽವಿದ್ಯಾ ಸಮುಚ್ಚಿತಂ ವಾ ಕಪಾಲದ್ವಯವದುಭಯಂ ನ ಜಗದುಪಾದಾನಂ ಸಂಭವತಿ, ಆತ್ಮನೋಽಸಂಗತ್ವಾತ್ । ಸಂಗಾಖ್ಯೋ ಯಃ ಸಂಯೋಗವಿಶೇಷಸ್ತೇನೈವ ದ್ರವ್ಯಾಣಾಂ ವಿಕಾರೋ ಭವತಿ । ಅತೋಽಸಂಗತ್ವಾತ್ ಕೇವಲಸ್ಯ ಆತ್ಮನೋಽದ್ವಿತೀಯಸ್ಯ ನೋಪಾದಾನತ್ವಂ, ನಾವಿದ್ಯಾದ್ವಾರಾಪಿ ಸಂಭವತಿ, ಅಸಂಗತ್ವೇನ ಅವಿದ್ಯಾಯೋಗಸ್ಯ ಪ್ರಾಗೇವ ನಿರಸ್ತತ್ವಾತ್ । ಪ್ರತ್ಯೇಕೋಪಾದಾನತ್ವವತ್ ಏವ ಉಭಯೋಪಾದಾನತ್ವಂ ಅಸಂಗತ್ವಾದೇವ ಅಸಂಭವೀತ್ಯರ್ಥಃ ।*

ಅನುವಾದ: ಕೇವಲ ಆತ್ಮವಾಗಲಿ, ಆತ್ಮಾಶ್ರಿತವಾದ ಅವಿದ್ಯೆಯಾಗಲಿ, ಅಥವಾ ಕಪಾಲದ್ವಯದಂತೆ ಎರಡೂ ಸೇರಿಯಾಗಲಿ ಜಗತ್ತಿಗೆ ಉಪಾದಾನವಾಗುವುದು ಸಾಧ್ಯವಿಲ್ಲ. ಏಕೆಂದರೆ ಆತ್ಮನು ಸಂಗರಹಿತನು. ಸಂಗವೆಂದರೆ ಯಾವ ಸಂಯೋಗ ವಿಶೇಷವಿದೆಯೋ ಅದರಿಂದಲೇ ದ್ರವ್ಯಗಳು ವಿಕಾರ ಹೊಂದುತ್ತವೆ. ಆದ್ದರಿಂದ

ಅಸಂಗದ ಕಾರಣ (ಪರಿಣಾಮ ಹೊಂದದ ಕಾರಣ) ಕೇವಲ ಆತ್ಮನು ಇನ್ನೊಂದರೊಡನೆ ಸೇರದೆ ಉಪಾದಾನಕಾರಣವಾಗಲಾರದು. (ಆತ್ಮಾಶ್ರಯವಿರುವ) ಅವಿದ್ಯೆಯ ಕಾರಣ ಉಂಟಾಗಲಾರದು, ಏಕೆಂದರೆ ಅಸಂಗತ್ವದಿಂದ ಅವಿದ್ಯೆಯು ಸೇರಲಾರದು ಎಂಬುದನ್ನು ನಾವು ಮೊದಲೇ ಅಲ್ಲಗಳೆದಿದ್ದೇವೆ. ಪ್ರತ್ಯೇಕವಾಗಿ ಉಪಾದಾನವಿರುವಂತೆ ಎರಡೂ ಸೇರಿ ಉಪಾದಾನವಾಗುವುದೂ ಪರಿಣಾಮವಿಲ್ಲದ ಕಾರಣ ಸಂಭವಿಸದು.

ಭಾಷ್ಯ: *ಯದಿ ಚಾವಿದ್ಯಾ ದ್ರವ್ಯರೂಪಾ ಪುರುಷಾಶ್ರಿತಾ ಗಗನೇ ವಾಯುವದಿಷ್ಯತೇ, ತದಾತ್ಮಾದ್ವೈತಹಾನಿಃ । ತಥಾ ಪ್ರಕೃತಿರೇವ ಸೇತಿ ಸಿದ್ಧಸಾಧನಂ ಚ ತಾದೃಶಂ ಚಾವಿಭಾಗೇನ ಅದ್ವೈತ ಮಸ್ಮಾಕಮಪಿ ಇಷ್ಟಮೇವ । 'ಸದೇವ ಸೋಮ್ಯೇದಗ್ರಮಗ್ರ ಆಸೀದೇಕಮೇವ ಅದ್ವಿತೀಯಂ ಬ್ರಹ್ಮ' (ಛಾಂ.ಉ. ೬.೨.೧) ಇತ್ಯಾದಿಶ್ರುತ್ಯಾಪಿ ಚಾವಿಭಾಗರೂಪಮೇವಾದ್ವೈತಂ ಪ್ರತಿಪಾದ್ಯತೇ । 'ನ ತು ತದ್ ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯತ್ ಪಶ್ಯೇತ್' (ಬೃ.ಉ. ೪.೨೦೩) ಶ್ರುತ್ಯಂತರಾತ್ । ತಥಾ ಚೋಕ್ತಮ್ ।*

ಆಸೀಜ್ಜ್ಞಾನಮಯೋಽಪ್ಯರ್ಥ ಏಕಮೇವಾವಿಕಲ್ಪಿತಮ್ ।
ತಯೋರೇಕತರೋ ಹ್ಯರ್ಥಃ ಪ್ರಕೃತಿಶ್ಚೋಭಯಾತ್ಮಿಕಾ ॥
ಜ್ಞಾನಂತ್ವನ್ಯತಮೋ ಭಾವಃ ಪುರುಷಃ ಸೋಽಭಿಧೀಯತೇ । ಇತಿ ।

ಅವಿಕಲ್ಪಿತಮ್ ಅವಿಭಕ್ತಮ್ । ತಸ್ಮಾದ್ವೇದಾಂತಾನಾಂ ಅಖಂಡಾತ್ಮಾ-ದ್ವೈತಂ ನಾರ್ಥಃ, ತಥಾಪ್ಯಾಧುನಿಕಾಃ ವೇದಾಂತಿನೋಽತ್ರತ್ಯ ಪೂರ್ವಪಕ್ಷಜಾತಮೇವ ಬ್ರಹ್ಮಮೀಮಾಂಸಾ ಸಿದ್ಧಾಂತೋ ನ ದೃಶ್ಯತೇ। ಅಪಿ ತು ವೇದಾಂತೇಷು ಆಪಾತತಃ ಸಂಭಾವಿತೋಽರ್ಥ ಏವ ನಿರಾಕ್ರಿಯತೇ ಇತಿ ಸ್ಮರ್ತವ್ಯಮ್ । ಏವಮುತ್ತರಸೂತ್ರೇಷ್ವಪಿ ।

ಅನುವಾದ: ಒಂದು ವೇಳೆ ಆಕಾಶದಲ್ಲಿ ವಾಯುವಿನಂತೆ ಅವಿದ್ಯೆಯೂ ದ್ರವ್ಯರೂಪವಾಗಿದ್ದು ಪುರುಷನನ್ನು ಆಶ್ರಯಿಸುವುದಾದರೆ ಆಗ ಆತ್ಮಕ್ಕೆ ಅದ್ವೈತ ಹಾನಿಯುಂಟಾಗುವುದು. ಅಲ್ಲದೆ ಅವಿದ್ಯೆಯು ಪ್ರಕೃತಿ ಎಂದೇ ಹೇಳಿದರೆ ಅದು ಸಿದ್ಧಸಾಧನವಾಗುವುದು. (ಅವಿದ್ಯೆಯೂ ಪ್ರಕೃತಿಯೂ) ಅವಿಭಾಜ್ಯವೆಂದು ಹೇಳಿದಲ್ಲಿ ಆಗ ಆ ಅದ್ವೈತವು ನಾವು ಬಯಸಿದ್ದೇ ಆಯಿತು. 'ಸೋಮ್ಯ', 'ಸತ್' ಪ್ರಾರಂಭದಲ್ಲಿಯೇ ಇತ್ತು, ಒಂದೇ ಆಗಿ ಅದ್ವಿತೀಯವಾಗಿತ್ತು – ಮುಂತಾದ ಶ್ರುತಿಗಳೂ ಅವಿಭಾಜ್ಯವಾದ ಅದ್ವಿತೀಯವಾದವನ್ನೇ ಪ್ರತಿಪಾದಿಸುತ್ತವೆ. 'ಎರಡನೆಯದೆಂಬುದಿಲ್ಲ, ಅನಂತರ ನಾವು ನೋಡುವಂತೆ ವಿಭಕ್ತವಾಗಿ ಕಾಣುವುದು' ಎಂಬುದು ಇನ್ನೊಂದು ಶ್ರುತಿಯು. ಹಾಗೆಯೇ ಹೇಳಿರುವ ಶ್ಲೋಕ 'ಜ್ಞಾನವೂ ಅರ್ಥವೂ ವಿಭಕ್ತವಾಗದೆ ಒಂದೇ ಆಯಿತು. ಅವೆರಡರಲ್ಲಿ ಅರ್ಥವು ಒಂದಾಗಿತ್ತು. ಆದರೆ ಪ್ರಕೃತಿಯು

ಎರಡನ್ನೂ ಹೊಂದಿತ್ತು. ಜ್ಞಾನವಾದರೋ ಮತ್ತೊಂದು ಭಾವವಾಗಿದೆ; ಅದನ್ನು ಪುರುಷ ಎನ್ನುವರು' ಎಂದು.

'ಅವಿಕಲ್ಪಿತಮ್' ಎಂದರೆ 'ಅವಿಭಕ್ತವಾದುದು'. ಆದ್ದರಿಂದ ವೇದಾಂತ ವಾಕ್ಯಗಳ ಅರ್ಥ ಅಖಂಡಾತ್ಮಕವಾದ ಅದ್ವೈತವಲ್ಲ. ಹಾಗಿದ್ದರೂ ಆಧುನಿಕ ವೇದಾಂತಿಗಳು ಈ ಪ್ರಸಂಗದ ಪೂರ್ವಪಕ್ಷದಿಂದ ವೇದಾಂತ ಸಿದ್ಧಾಂತಗಳು ಈ ರೀತಿಯಾಗಿ ತೋರಿದುವೆಂದು ಭಾವಿಸುತ್ತಾರೆ. ಆದರೆ ಆ ಸಿದ್ಧಾಂತವು ಬ್ರಹ್ಮಸೂತ್ರದಲ್ಲಿ ಹೇಳಿಲ್ಲವಾದ್ದರಿಂದ ಅಲ್ಲದೆ ಅದಕ್ಕೆ ವಿರುದ್ಧವಾದ್ದರಿಂದ ನಾವು ಅಲ್ಲಿಯೇ ಇದನ್ನು ನಿರಾಕರಿಸಿದ್ದೇವೆ. ಇಲ್ಲಿಯೂ ಸಹ ಬ್ರಹ್ಮಮೀಮಾಂಸಾಸಿದ್ಧಾಂತಗಳನ್ನು ನಾವು ದೂಷಿಸಿಲ್ಲ. ಆದರೆ ಪರೀಕ್ಷೆ ಮಾಡದೆ ಇರುವ ವೇದಾಂತ ವಾಕ್ಯಗಳ ಸಂಭವಿಸಬಹುದಾದ ಅರ್ಥಗಳನ್ನು ಮಾತ್ರ ನಿರಾಕರಿಸಿದ್ದೇವೆ ಎಂದು ತಿಳಿಯಬೇಕು. ಹೀಗೆಯೇ ಮುಂದಿನ ಸೂತ್ರಗಳನ್ನೂ ಗಮನಿಸಬೇಕು.

ಭಾಷ್ಯ: *ಪ್ರಕಾಶಸ್ವರೂಪ ಏವ ಆತ್ಮಾ ಇತಿ ಸ್ವಯಂ ಸಿದ್ಧಾಂತಿತಮ್ । (ಸೂ. ೧.೧೪೫) 'ತತ್ರ ಸತ್ಯಂ ಜ್ಞಾನಮನಂತಂ ಬ್ರಹ್ಮ' (ಬೃ.ಉ. ೩.೯.೨೮) ಇತಿ ಶ್ರುತೇಃ ಆನಂದೋಽಪಿ ಆತ್ಮನಃ ಸ್ವರೂಪಮಿತಿ ಪೂರ್ವಪಕ್ಷಂ ನಿರಾಕರೋತಿ ।*

ಸೂತ್ರ: ನೈಕಸ್ಯಾನಂದ ಚಿದ್ರೂಪತ್ವೇ ದ್ವಯೋರ್ಭೇದಾತ್ ॥ ೬೬ ॥

ಅನುವಾದ: ಆತ್ಮನು ಪ್ರಕಾಶಸ್ವರೂಪನು ಎಂದು ನಾವೇ ಸಿದ್ಧಾಂತ ಮಾಡಿದ್ದೇವೆ. ಅದರಲ್ಲಿ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂದು ಶ್ರುತಿಯು (ಬೃ.ಉ. ೩.೯.೨೮) ಹೇಳಿರುವ ಆನಂದವೂ ಆತ್ಮನ ಸ್ವರೂಪವೆಂದು ಪೂರ್ವಪಕ್ಷವನ್ನು ನಿರಾಕರಿಸುವರು.

ಸೂತ್ರಾನುವಾದ: ಒಂದು ಆತ್ಮನಿಗೆ 'ಆನಂದ' ಹಾಗೂ 'ಚಿದ್ರೂಪತ್ವ' ಎರಡೂ ಸಂಭವಿಸಲಾರದು. ಏಕೆಂದರೆ ಅವೆರಡರಲ್ಲೂ ಭೇದವುಂಟು.

ಭಾಷ್ಯ: *ಏಕಧರ್ಮಿಣಃ ಆನಂದಚೈತನ್ಯೋಭಯರೂಪತ್ವಂ ನ ಭವತಿ । ದುಃಖಜ್ಞಾನಕಾಲೇ ಸುಖಾನನುಭವೇನ ಸುಖಜ್ಞಾನಯೋರ್ಭೇದಾ–ದಿತ್ಯರ್ಥಃ । ನ ಚ ಜ್ಞಾನವಿಶೇಷಃ ಸುಖಮಿತಿ ವಕ್ತುಂ ಶಕ್ಯತೇ । ಆತ್ಮಸ್ವರೂಪಜ್ಞಾನಸ್ಯ ಅಖಂಡತ್ವಾತ್ । ಅತ ಏವ ಚೈತನ್ಯಾನುಭವಕಾಲೇ ಸುಖಸ್ಯ ಆವರಣಮಪಿ ವಕ್ತುಂ ನ ಶಕ್ಯತೇ । ಅಖಂಡತ್ವೇನ ಆನಂದಾವರಣೇ ದುಃಖಂ ಜಾನಾಮೀತ್ಯನುಪಪತ್ತೇಃ । ನ ಹ್ಯಾತ್ಮನೋಂಽಶಭೇದಃ ಅಸ್ತಿ ಯೇನ ಆನಂದಾಂಶಾವರಣೇಽಪಿ ಚೈತನ್ಯಾಂಶೋ ಭಾಯಾದಿತಿ ।*

ನ ಚ ಶ್ರುತಿಬಲೇನೈತೇಽಸತ್ತರ್ಕಾ ಇತಿ ವಾಚ್ಯಮ್ । 'ನಾನಂದಂ ನ ನಿರಾನಂದಂ' ಇತ್ಯಾದಿ ಶ್ರುತ್ಯಾ (ಮಹೋಪನಿ ೫.೭೮), 'ಅದುಃಖಂ

ಅಸುಖಂ ಬ್ರಹ್ಮಭೂತಭವ್ಯಭವಾತ್ಮಕಂ' ಇತ್ಯಾದಿ ಸ್ಮೃತ್ಯಾ ಚ ಆನಂದಭಾವಸ್ಯಾಪಿ ಪ್ರತಿಪಾದಿತತ್ತ್ವೇನ ತರ್ಕಸ್ಯೈವ ಅತ್ರ ಆದರ್ತವ್ಯತ್ವಾತ್ । ಇತಿ ।

ಅನುವಾದ: ಒಂದೇ ಧರ್ಮವುಳ್ಳ (ಆತ್ಮನಲ್ಲಿ) ಆನಂದ ಮತ್ತು ಚೈತನ್ಯ ಎರಡು ರೂಪಗಳು ಇರುವುದು ಸಾಧ್ಯವಿಲ್ಲ. ದುಃಖದ ಅನುಭವದ ಕಾಲದಲ್ಲಿ ಸುಖವನ್ನು ಅನುಭವಿಸುವುದು ಸಾಧ್ಯವಿಲ್ಲದಿರುವಾಗ ಸುಖ ಮತ್ತು ಜ್ಞಾನ ಭಿನ್ನ ಭಿನ್ನ ಪದಾರ್ಥಗಳು. ವಿಶಿಷ್ಟವಾದ ಸುಖವೇ ಎಂದು ಹೇಳುವುದೂ ಸಾಧ್ಯವಾಗದು. ಏಕೆಂದರೆ ಆತ್ಮಜ್ಞಾನದ ಸ್ವರೂಪವು ಅಖಂಡವಾದುದು. ಆದ್ದರಿಂದ ಚೈತನ್ಯಾನುಭವದ ಕಾಲದಲ್ಲಿ ಸುಖವು ಆವರಿಸಿದೆ ಎಂದೂ ಹೇಳಲಾಗುವುದಿಲ್ಲ. ಅಖಂಡವಾಗಿ ಆನಂದವು ಆವರಿಸಿರುವಾಗ 'ದುಃಖವನ್ನು ಅನುಭವಿಸುತ್ತೇನೆ' ಎಂಬುದು ಉಂಟಾಗದು. ಆನಂದಾಂಶದ ಆವರಣವಿದ್ದರೂ ಚೈತನ್ಯಾಂಶವು ತೋರಿಬರುವುದು ಎಂದು ಹೇಳಲು ಆತ್ಮನಿಗೆ ಅಂಶಗಳೆಂಬ ಭೇದವಿಲ್ಲ.

ಶ್ರುತಿಯ ಆಧಾರದ ಮೇಲೆ, ಮೇಲೆ ಹೇಳಿದ ತರ್ಕಗಳು 'ಅಸತ್' ಎನ್ನಲಾಗದು. ಏಕೆಂದರೆ, 'ಆನಂದವೂ ಅಲ್ಲ ನಿರಾನಂದವೂ ಅಲ್ಲ' ಎಂಬ ಶ್ರುತಿವಚನದಂತೆಯೂ, 'ದುಃಖವಲ್ಲದ, ಸುಖವಲ್ಲದ ಬ್ರಹ್ಮನು ಭೂತ, ಭವಿಷತ್ತು ಮತ್ತು ಇರುವಂತಹುದು' ಮುಂತಾದ ಸ್ಮೃತಿ ವಚನಗಳಿಂದಲೂ ಆನಂದದ ಅಭಾವವನ್ನು ಪ್ರತಿಪಾದಿಸಿರುವುದರಿಂದ ಇಲ್ಲಿ ತರ್ಕವನ್ನು ಆದರಿಸಬೇಕಾಗುವುದು.

ಭಾಷ್ಯ: *ನನ್ವೇವಮಾನಂದರೂಪತಾಶ್ರುತೇಃ ಕಾಗತಿಸ್ತತ್ರಾಹ–*

ಸೂತ್ರ: ದುಃಖನಿವೃತ್ತೇರ್ಗೌಣಃ ॥ ೬೭ ॥

ಅನುವಾದ: ಹೀಗೆ ಆನಂದರೂಪವನ್ನು ತಿಳಿಸುವ ಶ್ರುತಿಗಳಿಗೆ ಏನು ಸ್ಥಾನ ನೀಡಿದಂತಾಯಿತು?

ಸೂತ್ರಾನುವಾದ: ದುಃಖನಿವೃತ್ತಿ ಎಂಬುದಕ್ಕಿಂತ (ಆತ್ಮಾನಂದ ಸ್ವರೂಪದ ವರ್ಣನೆಯು) ಗೌಣವಾದುದು.

ಭಾಷ್ಯ: *ದುಃಖನಿವೃತ್ತ್ಯಾತ್ಮನಿ ಶ್ರೌತ ಆನಂದಶಬ್ದೋ ಗೌಣ ಇತ್ಯರ್ಥಃ । ತದುಕ್ತಮ್ । 'ಸುಖಂ ದುಃಖಸುಖಾತ್ಯಯಃ' ಇತಿ । ನ ನಿರಾನಂದಮಿತಿ ಶ್ರುತಿಸ್ತು ಔಪಾಧಿಕಾನಂದಪರಾ ಸತ್ಯಸಂಕಲ್ಪತ್ವಾದಿಶ್ರುತಿವದಿತಿ । ಯತ್ತು ನಿರುಪಾಧಿಪ್ರಿಯತ್ವೇನ ಆತ್ಮನಃ ಸುಖರೂಪತ್ವಾನುಮಾನಂ ಕಶ್ಚಿದಾಹ। ತನ್ನ । ದುಃಖಾಭಾವರೂಪತಯಾಪಿ ಪ್ರೇಮೋಪಪತ್ತೇಃ । ಸುಖತ್ವಾದಿವದಾತ್ಮತ್ವಸ್ಯಾಪಿ ಪ್ರೇಮಪ್ರಯೋಜಕತ್ವಾಚ್ಚ । ಅನ್ಯಥಾ ಪರಸುಖೇऽಪಿ ಪ್ರೇಮಾಪತ್ತೇರಿತಿ ।*

ಅನುವಾದ: ದುಃಖನಿವೃತ್ತಿಯಿಂದ ಆತ್ಮನಲ್ಲಿ ಶ್ರುತಿವಚನದಂತೆ ಆನಂದ ಶಬ್ದವು ಗೌಣ ಎಂದೇ ಅರ್ಥ. ಅದನ್ನೇ ಹೀಗೆ ಹೇಳಿದೆ– 'ದುಃಖ(ವಿಷಯ) ಸುಖಗಳು

ಕಳೆದಾಗ ಸುಖವಿರುತ್ತದೆ. 'ನ ನಿರಾನಂದಂ' ಎಂಬ ಶ್ರುತಿಯಾದರೋ ಸತ್ಯಸಂಕಲ್ಪವೇ ಮುಂತಾದ ಶ್ರುತಿಗಳಂತೆ ಉಪಾಧಿಯಿಂದುಂಟಾದ ಆನಂದವನ್ನುಂಟುಮಾಡುವುದು. ನಿರುಪಾಧಿಕವಾದ ಆತ್ಮವು ಪ್ರಿಯವಾದ ಕಾರಣ ಸುಖರೂಪವುಳ್ಳದ್ದು ಎಂದು ಒಬ್ಬರು ಹೇಳಿದ್ದಾರೆ. ಅದು ಸರಿಯಲ್ಲ. ದುಃಖಾಭಾವ ರೀತಿಯಿಂದಲೂ ಪ್ರೀತಿಯುಂಟಾಗಬಹುದು. ಏಕೆಂದರೆ ಸುಖತ್ವವೇ ಮೊದಲಾದುವಕ್ಕೆ ಸಮಾನವಾದ ಆತ್ಮತ್ವವೂ ಪ್ರೇಮಪ್ರಯೋಜಕ ವಾಗಬಲ್ಲದು. ಹಾಗಿಲ್ಲದಿದ್ದಲ್ಲಿ ಇತರರ ಸುಖದಿಂದಲೂ ಪ್ರೇಮವುಂಟಾಗಬಹುದಲ್ಲವೆ?

ವಿವರಣೆ: ಆನಂದ ಮುಕ್ತಸ್ಥಿತಿಯಲ್ಲ ಹಾಗೂ ವ್ಯಾವಹಾರಿಕವಾಗಿ ದೊರೆಯಬಹುದು. ಮೇಲೆ ವರ್ಣಿಸಿರುವ ಸನ್ನಿವೇಶದಲ್ಲಿ ವ್ಯಾವಹಾರಿಕ ಆನಂದ ಗೌಣವಾದುದು.

ಭಾಷ್ಯ: *ಗೌಣಪ್ರಯೋಗೇ ಬೀಜಮಾಹ–*

ಸೂತ್ರ: ವಿಮುಕ್ತಿಪ್ರಶಂಸಾ ಮಂದಾನಾಮ್ ॥ ೬೮ ॥

ಅನುವಾದ: ಗೌಣಪ್ರಯೋಗದ ಕಾರಣವನ್ನು ಹೇಳುವರು.

ಸೂತ್ರಾನುವಾದ: ಮೋಕ್ಷವನ್ನು ಕುರಿತ ಪ್ರಶಂಸೆಯೆಲ್ಲ ಅಜ್ಞಾನಿಗಳ ಸಲುವಾಗಿ ಮಾಡಿರುವರು.

ಭಾಷ್ಯ: *ಮಂದಾನಜ್ಞಾನ್ ಪ್ರತಿ ದುಃಖನಿವೃತ್ತಿರೂಪಾಂ ಅಸ್ವರೂಪಮುಕ್ತಿಂ ಸುಖತ್ವೇನ ಶ್ರುತಿಃ ಪ್ರರೋಚನಾರ್ಥಮಿತ್ಯರ್ಥಃ ।*

ಅನುವಾದ: ಅಜ್ಞಾನಿಗಳಿಗಾಗಿ ದುಃಖವನ್ನು ಹೋಗಲಾಡಿಸುವ ರೂಪವುಳ್ಳ ಆತ್ಮಸ್ವರೂಪ ಮುಕ್ತಿಯನ್ನು ಸುಖವೆಂದು ಶ್ರುತಿಯು ಪ್ರಶಂಸಿಸಿರುವುದು ಪ್ರವೃತ್ತಿಯುಂಟು ಮಾಡಲು ಹೇಳಿರುವುದು.

ವಿವರಣೆ: ಶ್ರುತಿಗಳು ಮೋಕ್ಷವನ್ನು ಆನಂದದಾಯಕವೆಂದು ಹೇಳಿರುವುದು ಅಜ್ಞಾನಿಗಳು ಅದರತ್ತ ಒಲವನ್ನು ಹೊಂದಲಿ ಎಂದರು.

ಭಾಷ್ಯ: *ಅಂತಃಕರಣೋಪಪತ್ತೇಃ ಪೂರ್ವೋಕ್ತಾಯಾಃ ಆಂಜಸ್ಯೇನ ಉಪಪತ್ತಯೇ ಮನೋವೈಭವ ಪೂರ್ವಪಕ್ಷಮಪಾಕರೋತಿ ।*

ಸೂತ್ರ: ನ ವ್ಯಾಪಕತ್ತ್ವಂ ಮನಸಃ ಕರಣತ್ವಾದಿಂದ್ರಿಯತ್ವಾತ್ ವಾ ವಾಸ್ಯಾದಿವ ಚ್ಚಕ್ಷುರಾದಿವತ್ ॥ ೬೯ ॥

ಸೂತ್ರಾನುವಾದ: ಮನಸ್ಸಿನ ವಿಭುತ್ವವನ್ನು ಸ್ವೀಕರಿಸಲಾಗದು, ಏಕೆಂದರೆ ಅದೊಂದು ಸಾಧನವಾಗಿದೆ (ಬಡಗಿಯ ಹರಿತವಾದ) ಸಾಧನದಂತೆ ಅಥವಾ ಕಣ್ಣು ಮುಂತಾದ ಇಂದ್ರಿಯಗಳಂತೆ.

ಭಾಷ್ಯ: *ಮನಸೋಽಂತಃಕರಣಸಾಮಾನ್ಯಸ್ಯ ನ ವಿಭುತ್ವಮ್, ಕರಣತ್ವಾತ್, ವಾಸ್ಯಾದಿವತ್ । ವಾ ಶಬ್ದೋ ವ್ಯವಸ್ಥಿತವಿಕಲ್ಪೇ । ಇಂದ್ರಿಯತ್ವಾದಪ್ಯಂತಃಕರಣ। ವಿಶೇಷಸ್ಯ ತೃತೀಯಸ್ಯ ನ ವಿಭುತ್ವಂ*

ಇತ್ಯರ್ಥಃ । ದೇಹವ್ಯಾಪಿ ಜ್ಞಾನಾದಿಕಂ ತು ಮಧ್ಯಮಪರಿಮಾಣೇವ ಏವ ಉಪಪದ್ಯತ ಇತಿ ।

ಅನುವಾದ: ಅಂತಃಕರಣ ಸಾಮಾನ್ಯವಾಗಿರುವ ಮನಸ್ಸು ವಿಭುವಲ್ಲ. ಅದೊಂದು ಸಾಧನವಾಗಿರುವುದರಿಂದ, ಬಡಗಿಯ ಸಾಧನದಂತೆ. ವಾ ಶಬ್ದವು ವ್ಯವಸ್ಥಿತವಾದ ಐಚ್ಛಿಕಾರ್ಥದ ಶಬ್ದ. ಇಂದ್ರಿಯವಾದರೂ ವಿಶೇಷ ಅಂತಃಕರಣ ವಿಶೇಷದ, ಮೂರನೆಯ ಸೃಷ್ಟಿಯಾದ ಮನಸ್ಸು ವಿಭುವಲ್ಲ. ದೇಹವನ್ನೇ ಜ್ಞಾನಾದಿಗಳು ವ್ಯಾಪಿಸುವುದರಿಂದ ಮಧ್ಯಮ ಪರಿಮಾಣದಿಂದ ದೊರೆಯುತ್ತವೆ.

ವಿವರಣೆ: ಮಧ್ಯಮ ಪರಿಮಾಣ ಎಂದರೆ 'ಅಣುವೂ ಅಲ್ಲ, ವಿಭುವೂ ಅಲ್ಲ'.

ಭಾಷ್ಯ: *ಅತ್ರಾಪ್ರಯೋಜಕತ್ವಶಂಕಾಯಾಮನುಕೂಲತರ್ಕಮಾಹ ।*

ಸೂತ್ರ: ಸಕ್ರಿಯತ್ವಾತ್ ಗತಿಶ್ರುತೇಃ ॥ ೭೦ ॥

ಅನುವಾದ: ಈ ಅಪ್ರಯೋಜಕ ಶಂಕೆಯಲ್ಲಿರುವ ಅನುಕೂಲ ತರ್ಕವನ್ನು ಹೇಳಿದ್ದಾರೆ.

ಸೂತ್ರಾನುವಾದ: ಗತಿಯನ್ನು (ಹೇಳುವ ಶ್ರುತಿಗಳು) ಸಕ್ರಿಯತ್ವವನ್ನು ತಿಳಿಸುವುದರಿಂದ.

ಭಾಷ್ಯ: *ಆತ್ಮನೋ ಲೋಕಾಂತರಗಮನಶ್ರವಣೇನ ತದುಪಾಧಿಭೂತಸ್ಯ ಅಂತಃಕರಣಸ್ಯ ಸಕ್ರಿಯತ್ವಸಿದ್ಧೇಃ ನ ವಿಭುತ್ವಂ ಸಂಭವತೀತ್ಯರ್ಥಃ ।*

ಅನುವಾದ: ಜೀವಾತ್ಮನು ಲೋಕಾಂತರಕ್ಕೆ ಹೋಗುವುದನ್ನು ಕೇಳಿರುವುದರಿಂದ ಅದರ ಉಪಾಧಿಭೂತವಾದ ಅಂತಃಕರಣದ ಸಕ್ರಿಯತ್ವವು ಸಿದ್ಧವಾಗಿರುವುದು. ಆದ್ದರಿಂದ ಅದು ವಿಭುವೆಂಬುದು ಸಿದ್ಧವಾಗದು.

ಭಾಷ್ಯ: *ಕಾರ್ಯತ್ವೋಪಪತ್ತಯೇ ಮನಸಃ ನಿರವಯವತ್ವಮಪಿ ನಿರಾಕರೋತಿ ।*

ಅನುವಾದ: ಅದರ ಕಾರ್ಯತ್ವದ ಉಪಪತ್ತಿಗೆ ಮನಸ್ಸಿನ ನಿರವಯವತ್ವವನ್ನೂ ನಿರಾಕರಿಸುತ್ತಾರೆ.

ಸೂತ್ರ: ನ ನಿರ್ಭಾಗತ್ವಂ ತದ್ಯೋಗಾತ್ ಘಟವತ್ ॥ ೭೧ ॥

ಸೂತ್ರಾನುವಾದ: ಗಡಿಗೆಯ (ಅವಯವಗಳ) ಸಂಬಂಧದಂತೆ (ಮನಸ್ಸು) ಭಾಗಗಳಿಲ್ಲದೆ ಇಲ್ಲ.

ಭಾಷ್ಯ: *ತಚ್ಛಬ್ದಃ ಪೂರ್ವಸೂತ್ರಸ್ಥೇಂದ್ರಿಯಂ ಪರಾಮೃಶತಿ । ಮನಸೋ ನ ನಿರವಯವತ್ವಮ್ । ಅನೇಕೇಂದ್ರಿಯೇಷ್ವೇಕದಾ ಯೋಗಾತ್ । ಕಿಂತು ಘಟವನ್ಮಧ್ಯಮ ಪರಿಮಾಣಂ ಸಾವಯವಂ ಇತ್ಯರ್ಥಃ । ಕಾರಣಾವಸ್ಥಂ ಚ ಅಂತಃಕರಣಮಣ್ವೇವೇತಿ ಬೋಧ್ಯಮ್ ।*

ಅನುವಾದ: ತತ್ ಎಂದರೆ ಪೂರ್ವಸೂತ್ರದಲ್ಲಿ ನೀಡಿದ್ದ ಇಂದ್ರಿಯ ಪದದ ಪರಾಮರ್ಶೆ ಮಾಡಲಾಗಿದೆ. ಮನಸ್ಸು ನಿರವಯವವೆಂದು ಎಂದೂ ಹೇಳಲಾಗದು. ಏಕೆಂದರೆ ಅನೇಕ ಇಂದ್ರಿಯಗಳೊಡನೆ ಒಮ್ಮೆಲೇ ಸಂಬಂಧ ಹೊಂದಿರುವುದರಿಂದ. ಆದರೆ

ಘಟದಂತೆ ಮಧ್ಯಮ ಪರಿಮಾಣ ಹೊಂದಿ ಸಾವಯವವಾಗಿರುತ್ತದೆ. ಕಾರಣಾವಸ್ಥೆಯಲ್ಲಿ ಮನಸ್ಸು (ಅಂತಃಕರಣವು) ಅಣು ಪರಿಮಾಣದ್ದಾಗಿರುತ್ತದೆ.

ವಿವರಣೆ: ಮೂರು ಗುಣಗಳಿಂದ ಕೂಡಿದ ಮನಸ್ಸು ಸೂಕ್ಷ್ಮವಾಗಿರುತ್ತದೆ ಎಂದರ್ಥ. (ನೋಡಿ ಸೂತ್ರ ೩.೧೪)

ಭಾಷ್ಯ: *ಮನಃ ಕಾಲಾದೀನಾಂ ನಿತ್ಯತ್ವಂ ಪ್ರತಿಷೇಧತಿ ।*

ಸೂತ್ರ: ಪ್ರಕೃತಿ–ಪುರುಷಯೋರನ್ಯತ್ ಸರ್ವಮನಿತ್ಯಮ್ ॥ ೭೨ ॥

ಅನುವಾದ: ಮನಸ್ಸು, ಕಾಲ ಮುಂತಾದುವುಗಳ ನಿತ್ಯತ್ವವನ್ನು ಅಲ್ಲಗಳೆಯುತ್ತಾರೆ.

ಸೂತ್ರಾನುವಾದ: ಪ್ರಕೃತಿ–ಪುರುಷರನ್ನು ಬಿಟ್ಟು ಉಳಿದೆಲ್ಲವೂ ಅನಿತ್ಯವೇ.

ಭಾಷ್ಯ: *ಸುಗಮಮ್ । ಕಾರಣಾವಸ್ಥಂ ಚ ಅಂತಃಕರಣಾಕಾಶಾದಿಕಂ ಪ್ರಕೃತಿ–ರೇವೋಚ್ಯತೇ । ನ ತು ಮನ ಆದಿಕಂ ವ್ಯವಸಾಯಾದಿ ಅಸಾಧಾರಣ–ಧರ್ಮಾಭಾವಾತ್ ।*

ಅನುವಾದ: ಸುಲಭವಾಗಿದೆ. ಕಾರಣದ ಸ್ಥಿತಿಯಲ್ಲಿ ಇರುವ ಅಂತಃಕರಣ ಮತ್ತು ಆಕಾಶಗಳು ಪ್ರಕೃತಿಯೆಂದೇ ಹೇಳಲ್ಪಡುತ್ತವೆಯೇ ಹೊರತು ಮನಸ್ಸು ಮುಂತಾದುವುಗಳಲ್ಲಿ ನಿರ್ಧಾರ ಮುಂತಾದ ಅಸಾಧಾರಣವಾದ ಧರ್ಮದ ಅಭಾವದಿಂದಲ್ಲ.

ಭಾಷ್ಯ: *ನನು, ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್।*
ಅಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್ ॥ (ಶ್ವೇ.ಉ. ೪.೧೦)
ಇತ್ಯಾದಿಶ್ರುತಿಭಿಃ ಪುಂಪ್ರಕೃತ್ಯೋರಪಿ ಸಾವಯವತ್ವಾದನಿತ್ಯತ್ವಮಿತಿ । ತತ್ರಾಹ ।

ಅನುವಾದ: ಮಾಯೆಯನ್ನು ಪ್ರಕೃತಿಯೆಂದು ತಿಳಿ. 'ಮಾಯಿ'ಯೇ ಮಹೇಶ್ವರನೆಂದು ತಿಳಿ. ಅವನ ಅವಯವಗಳಿಂದ ಈ ಸಮಸ್ತ ಜಗತ್ತೆಲ್ಲ ವ್ಯಾಪ್ತವಾಗಿದೆಯೆಂದು ತಿಳಿ. ಈ ಮುಂತಾದ ಶ್ರುತಿಗಳಿಂದ ಪುರುಷ, ಪ್ರಕೃತಿಗಳೂ ಸಹ ಸಾವಯವವಾದ್ದರಿಂದ ಅವೂ ಸಹ ಅನಿತ್ಯವಾಗಬಹುದಲ್ಲವೆ? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ನ ಭಾಗಲಾಭೋ ಭೋಗಿನೋ ನಿರ್ಭಾಗಶ್ರುತೇಃ ॥ ೭೩ ॥

ಸೂತ್ರಾನುವಾದ: ಭೋಕ್ತೃವಾದ ಪುರುಷನಿಗೆ (ಮತ್ತು ಭೋಗ್ಯವಾದ ಪ್ರಕೃತಿಗೆ) ಅವಯವಗಳುಂಟಾಗುವುದು ಸಾಧ್ಯವಿಲ್ಲ. ಏಕೆಂದರೆ ಅವು ನಿರವಯವಗಳೆಂದು ಶ್ರುತಿಗಳು ಹೇಳುತ್ತವೆ.

ವಿವರಣೆ: ಈ ಸೂತ್ರದಲ್ಲಿ 'ಭಾಗಲಾಭೋಽಭಾಗಿನಃ' ಎಂಬ ಪಾಠಾಂತರವಿದೆ.

ಭಾಷ್ಯ: *ಭೋಗಿನಃ ಪುರುಷಸ್ಯ ಪ್ರಧಾನಸ್ಯ ಚ ಅವಯವೋ ನ ಯುಜ್ಯತೇ।*
ನಿರವಯವತ್ವ ಶ್ರುತೇಃ ।
ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಮ್ ।' (ಶ್ವೇ.ಉ. ೬.೧೯)

ಇತ್ಯಾದಿನಾ ಇತ್ಯರ್ಥಃ । ಉಕ್ತಶ್ರುತಿಶ್ಚ ಆಕಾಶಜಲಯೋರಿವ ಪಿತಾಪುತ್ರಚೇತನಯೋರಿವ ಚ ವಿಭಾಗಮಾತ್ರೇಣ ಅಂಶಾಂಶಿಭಾವಂ ಬೋಧಯತೀತಿ ।

ಅನುವಾದ: ಭೋಗಿಯಾದ ಪುರುಷನ ಹಾಗೂ ಪ್ರಧಾನದ ಅವಯವಗಳು ಯುಕ್ತವಲ್ಲ. ಅದಕ್ಕೆ ನಿರವಯವತ್ವ ಶ್ರುತಿಯುಂಟು–

'ನಿರವಯವನೂ, ನಿಷ್ಕ್ರಿಯನೂ, ಶಾಂತನೂ ದೋಷರಹಿತನೂ, ಕಳಂಕರಹಿತನೂ (ಪುರುಷನನ್ನು ಮರೆಹೋಗುತ್ತೇನೆ), ಮುಂತಾದುವು ಹೇಳುವಂತೆ ಎಂದರ್ಥ. ಮೇಲೆ ಹೇಳಿದ ಶ್ರುತಿಯೂ ಸಹ ಆಕಾಶ ಮತ್ತು ನೀರುಗಳಂತೆ, ತಂದೆ–ಮಗನ ಚೇತನಗಳಂತೆ ಅವಿಭಕ್ತ ರೂಪದಲ್ಲಿ ಅಂಶ–ಅಂಶಿಗಳಂತೆ ಇರುವುದನ್ನು ಬೋಧಿಸುತ್ತವೆ.

ಭಾಷ್ಯ: *ದುಃಖನಿವೃತ್ತಿರ್ಮೋಕ್ಷ ಇತ್ಯುಕ್ತಮ್ । ತದವಧಾರಣಾಯ ತತ್ರ ಮೋಕ್ಷೇ ಪರೇಷಾಂ ಮತಾನಿ ನಿರಾಕರೋತಿ ।*

ಅನುವಾದ: ದುಃಖನಿವೃತ್ತಿಯೇ ಮೋಕ್ಷವೆಂದು ಹೇಳಿದೆ. ಅದನ್ನು ಸರಿಯಾಗಿ ಅರಿಯಲು ಮೋಕ್ಷದ ವಿಷಯದಲ್ಲಿ ಇತರರ ಅಭಿಪ್ರಾಯಗಳನ್ನು ಅಲ್ಲಗಳೆಯುತ್ತಾರೆ.

ಸೂತ್ರ: ನಾನಂದಾಭಿವ್ಯಕ್ತಿರ್ಮುಕ್ತಿರ್ನಿರ್ಧರ್ಮತ್ವಾತ್ ॥ ೭೪ ॥

ಸೂತ್ರಾನುವಾದ: ಆನಂದದ ಅಭಿವ್ಯಕ್ತಿಯು ಮೋಕ್ಷವಾಗಲಾರದು, ಏಕೆಂದರೆ ಅದು ಧರ್ಮರಹಿತವಾದುದು.

ಭಾಷ್ಯ: *ಆತ್ಮನಿ ಆನಂದರೂಪೋಽಭಿವ್ಯಕ್ತಿರೂಪಶ್ಚ ಧರ್ಮೋ ನಾಸ್ತಿ । ಸ್ವರೂಪಂ ಚ ನಿತ್ಯಮೇವೇತಿ ನ ಸಾಧನಸಾಧ್ಯಮ್ । ಅತೋಃ ನಾನಂದ ಅಭಿವ್ಯಕ್ತಿರ್ಮೋಕ್ಷ ಇತ್ಯರ್ಥಃ ।*

ಅನುವಾದ: ಆತ್ಮನಲ್ಲಿ ಆನಂದರೂಪವಾಗಲಿ ಅಭಿವ್ಯಕ್ತಿರೂಪವಾಗಲಿ ಇರುವ ಧರ್ಮ ತೋರದು. ಸ್ವರೂಪವೂ ನಿತ್ಯವೇ ಎಂಬುದು ಸಾಧನ ಸಾಧ್ಯವಾಗುವುದು. ಆದ್ದರಿಂದ ಆನಂದಾಭಿವ್ಯಕ್ತಿಯು ಮೋಕ್ಷವಾಗಲಾರದು ಎಂದರ್ಥ.

ಸೂತ್ರ: ನ ವಿಶೇಷಗುಣೋಚ್ಛಿತ್ತಿಸ್ತದ್ವತ್ ॥ ೭೫ ॥

ಸೂತ್ರಾನುವಾದ: ವಿಶೇಷಗುಣಗಳ ನಾಶವಷ್ಟೇ ಮುಕ್ತಿಯಲ್ಲ; ಹಿಂದೆಯೇ ಹೇಳಿದಂತೆ.

ಭಾಷ್ಯ: *ಅಶೇಷವಿಶೇಷಗುಣೋಚ್ಛೇದೋಽಪಿ ನ ಮುಕ್ತಿಃ । ತದ್ವತ್ । ನಿರ್ಧರ್ಮತ್ವಾದೇವ ಇತ್ಯರ್ಥಃ । ನನು ತರ್ಹಿ ದುಃಖನಿವೃತ್ತಿರೇವ ಕಥಂ ಮೋಕ್ಷ ಉಕ್ತಃ, ದುಃಖಭಾವಸ್ಯಾಪಿ ಧರ್ಮತ್ವಾದಿತಿ ಚೇನ್ನ । ಅಸ್ಮಾಭಿರ್ಭೋಗ್ಯತಾಸಂಬಂಧೇನೈವ ದುಃಖಾಭಾವಸ್ಯ ಪುರುಷಾರ್ಥತಾವಚನಾದಿತಿ ।*

ಅನುವಾದ: ಸಂಪೂರ್ಣವಾದ (ಆತ್ಮ) ವಿಶೇಷ ಗುಣಗಳ ನಿರ್ಮೂಲನವೇ ಮುಕ್ತಿಯಲ್ಲ. ಹಿಂದೆಯೇ ಹೇಳಿದಂತೆ, ಎಂದರೆ, ಧರ್ಮರಹಿತವಾಗಿರುವ ಕಾರಣ ಎಂದರ್ಥ. ಹಾಗಾದರೆ ದುಃಖನಿವೃತ್ತಿಯಷ್ಟೇ ಮೋಕ್ಷವೆಂದು ಹೇಗೆ ಹೇಳುವಿರಿ? ಏಕೆಂದರೆ ದುಃಖಾಭಾವವಿದ್ದರೂ ಧರ್ಮವನ್ನು ಹೊಂದಿರುವುದಲ್ಲವೆ? ಹಾಗಲ್ಲ. ನಮ್ಮ ಅಭಿಪ್ರಾಯದಲ್ಲಿ ಭೋಗ್ಯ ಸ್ಥಿತಿಯ ಸಂಬಂಧದಿಂದ ದುಃಖಾಭಾವವೇ ಪುರುಷಾರ್ಥ ದೊರೆಯುವುದು ಎಂದು ಹೇಳಲಾಗಿದೆ.

ಭಾಷ್ಯ: *ನಾಸ್ತಿಕಸ್ಯೈವ ಮುಕ್ತ್ಯಂತರಂ ದೂಷಯತಿ ।*

ಸೂತ್ರ: ನ ಸರ್ವೋಚ್ಛಿತ್ತಿರಪುರುಷಾರ್ಥತ್ವಾದಿದೋಷಾತ್ ॥ ೭೮ ॥

ಅನುವಾದ: ನಾಸ್ತಿಕನ (ಅಭಿಪ್ರಾಯದಲ್ಲಿ) ಬೇರೆಯ ಮುಕ್ತ ಸ್ಥಿತಿಯನ್ನು ದೂಷಿಸುತ್ತಾರೆ.

ಸೂತ್ರಾನುವಾದ: ಸಂಪೂರ್ಣ ನಾಶವಾದರೆ ಮೋಕ್ಷವಾಗದು, ಪುರುಷಾರ್ಥತ್ವದ ಅಭಾವ ಮುಂತಾದ ದೋಷಗಳ ಕಾರಣ.

ಭಾಷ್ಯ: *ಜ್ಞಾನರೂಪಸ್ಯಾತ್ಮನಃ ಸಾಮಗ್ರ್ಯೇಣೈವೋಚ್ಛಿತ್ತಿರಪಿ ನ ಮೋಕ್ಷಃ ।*
ಆತ್ಮನಾಶಸ್ಯ ಲೋಕೇ ಪುರುಷಾರ್ಥತ್ವಾದರ್ಶನಾದಿಭ್ಯ ಇತ್ಯರ್ಥಃ ।

ಅನುವಾದ: ಜ್ಞಾನರೂಪದ ಆತ್ಮನೂ ಸೇರಿ ಸಮಗ್ರವಾಗಿ ಉಚ್ಛಿತ್ತಿಯೂ ಸಹ ಮೋಕ್ಷವಾಗಲಾರದು. ಆತ್ಮನ ನಾಶವೆಂದರೆ ಪುರುಷಾರ್ಥವೆಂದು ಎಲ್ಲೂ ನೋಡಿಲ್ಲ.

ವಿವರಣೆ: ಆತ್ಮನಾಶ ಮತ್ತು ಅಪುರುಷಾರ್ಥತೆಗಳು ದೋಷಗಳು.

ಸೂತ್ರ: ಏವಂ ಶೂನ್ಯಮಪಿ ॥ ೭೯ ॥

ಸೂತ್ರಾನುವಾದ: ಹೀಗೆ (ಶೂನ್ಯವಾದಿಗಳೂ ಹೇಳುವ) ಶೂನ್ಯವೂ (ಮುಕ್ತಿಯಲ್ಲ).

ಭಾಷ್ಯ: *ಜ್ಞಾನೇ ಜ್ಞೇಯಾತ್ಮಕಾಖಿಲಪ್ರಪಂಚನಾಶೋಽಪ್ಯೇವಂ*
ಆತ್ಮನಾಶೇನ ಅಪುರುಷಾರ್ಥತ್ವಾನ್ನ ಮೋಕ್ಷ ಇತ್ಯರ್ಥಃ ।

ಅನುವಾದ: ಹೇಗೆ ಜ್ಞಾನ ನಾಶವಾದಲ್ಲಿ ತಿಳಿಯಬಹುದಾದ ಸಮಸ್ತ ಪ್ರಪಂಚನಾಶವೂ ಸಹ ಆಗಿಬಿಡುವುದೋ ಹಾಗೆಯೇ ಆತ್ಮ ನಾಶದಿಂದ ಪುರುಷಾರ್ಥವೂ ಕಣ್ಮರೆಯಾಗಿ ಮೋಕ್ಷ ದೊರೆಯಲಾರದು ಎಂದರ್ಥ.

ಸೂತ್ರ: ಸಂಯೋಗಾಶ್ಚ ವಿಯೋಗಾಂತಾ ಇತಿ ನ ದೇಶಾದಿಲಾಭೋಽಪಿ ॥ ೮೦ ॥

ಸೂತ್ರಾನುವಾದ: ಸಂಯೋಗಗಳು ವಿಯೋಗಗಳಲ್ಲಿ ಕೊನೆಗೊಳ್ಳುತ್ತವೆ, ಆದ್ದರಿಂದ ಬೇರೆ ದೇಶಾದಿಗಳನ್ನು ಪಡೆಯುವುದೂ ಮೋಕ್ಷವಲ್ಲ.

ಭಾಷ್ಯ: *ಪ್ರಕೃಷ್ಟ ದೇಶಧನಾಂಗನಾದಿಸ್ವಾಮ್ಯಮಪಿ ನ ಮೋಕ್ಷಃ ।*
ಯತಃ – ಸಂಯೋಗಾಶ್ಚ ವಿಯೋಗಾಂತಾಃ ಮರಣಾಂತಂ ಚ

ಜೀವನಮ್ । (ಮ.ಭಾ.ಸ್ತ್ರೀ.ಪ. ೨.೩)
ಇತಿ ಶ್ರೂಯತೇ ಇತ್ಯರ್ಥಃ ।
ತಥಾ ಚ ವಿನಾಶಿತ್ವಾತ್ ಸ್ವಾಮ್ಯಂ ನ ಮುಕ್ತಿರಿತಿ ।

ಅನುವಾದ: (ಪ್ರಕೃಷ್ಟವಾದ) ಉತ್ತಮವಾದ ದೇಶ, ಧನ, ಅಂಗನೆ ಮುಂತಾದುವುಗಳಿಗೆ ಒಡೆತನವೂ ಮೋಕ್ಷವೆನ್ನಲಾಗದು. ಏಕೆಂದರೆ, ಸಂಯೋಗಗಳು ವಿಯೋಗಗಳಲ್ಲಿ ಕೊನೆಗೊಳ್ಳುತ್ತವೆ. ಜೀವನವು ಮರಣದಲ್ಲಿ ಮುಕ್ತಾಯಗೊಳ್ಳುತ್ತದೆ. (ಸಂಯೋಗಾಶ್ಚ ವಿಯೋಗಾಂತಾಃ) ಎಂಬುದು ತಿಳಿದದ್ದೇ, ಎಂದು ಅರ್ಥ. ಹಾಗೆಯೇ ವಿನಾಶವಾಗುವ ಕಾರಣ ಸ್ವಾಮ್ಯವು ಮುಕ್ತಿ ಎನ್ನಲಾಗದು.

ಸೂತ್ರ: ನ ಭಾಗಿಯೋಗೋ ಭಾಗಸ್ಯ ॥ ೮೧ ॥

ಸೂತ್ರಾನುವಾದ: ಅಂಶವು ಅಂಶಿಯೊಡನೆ ಸಂಬಂಧ ಹೊಂದಿದರೂ ಮುಕ್ತಿಯಲ್ಲ. (ಅನಿರುದ್ಧನು ಭಾಗಿಯೋಗೋऽಭಾಗಸ್ಯ । ಎಂದು ಪಾಠಾಂತರ ಸ್ವೀಕರಿಸಿದ್ದಾನೆ.)

ಭಾಷ್ಯ: *ಭಾಗಸ್ಯಾಂಶಸ್ಯ ಜೀವಸ್ಯ ಭಾಗಿಸಿ ಅಂಶಿನಿ ಪರಮಾತ್ಮನಿ ಲಯೋ ನ ಮೋಕ್ಷಃ । ಸಂಯೋಗಾ ಹಿ ವಿಯೋಗಾಂತಾ ಇತ್ಯುಕ್ತಹೇತೋಃ ಈಶ್ವರಾನಭ್ಯುಗಮಾಚ್ಚ । ತಥಾ ಸ್ವಲಯಸ್ಯ ಅಪುರುಷಾರ್ಥತ್ವಾಚ್ಚ ಇತ್ಯರ್ಥಃ ।*

ಅನುವಾದ: 'ಭಾಗಸ್ಯ' ಎಂದರೆ ಅಂಶವಾದ ಜೀವನು 'ಅಂಶಿನಿ' ಎಂದರೆ ಪರಮಾತ್ಮನಲ್ಲಿ ಲಯವು ಮೋಕ್ಷವಲ್ಲ; ಏಕೆಂದರೆ ಸಂಯೋಗವಾಗುವುದು ವಿಯೋಗದಲ್ಲಿ ಕೊನೆಗೊಳ್ಳುವುದು ಎಂದು ಹೇಳಿರುವ ಕಾರಣ. ಹಾಗೂ (ಸ್ವಯಂಪೂರ್ಣನಾದ) ಈಶ್ವರನಲ್ಲಿ ಸೇರುವುದು ಎಂದಿರುವ ಕಾರಣ. ಹಾಗೆಯೇ ತನ್ನಲ್ಲಿ ತಾನು ಲಯವಾಗುವುದು ಅಪುರುಷಾರ್ಥವಾಗುವುದು, ಎಂದರ್ಥ.

ಸೂತ್ರ: ನಾಣಿಮಾದಿಯೋಗೋऽಪ್ಯವಶ್ಯಂಭಾವಿತ್ವಾತ್ ತದುಚ್ಛಿತ್ತೇರಿತರ–ಯೋಗಾತ್ ॥ ೮೨ ॥

ಸೂತ್ರಾನುವಾದ: ಅಣಿಮಾದಿ ಐಶ್ವರ್ಯವನ್ನು ಪಡೆಯುವುದೂ ಕೂಡ ಮೋಕ್ಷವಾಗಲಾರದು. ಏಕೆಂದರೆ ಅದೂ ಖಂಡಿತವಾಗಿ ನಾಶವಾಗುವಂತಹುದು, ಇತರ ಐಶ್ವರ್ಯಗಳನ್ನು ಗಳಿಸಿದಂತೆ.

ಭಾಷ್ಯ: *ಅಣಿಮಾದ್ಯೈಶ್ವರ್ಯಸಂಬಂಧೋऽಪಿ ನ ಮುಕ್ತಿಃ । ಐಶ್ವರ್ಯಾಂತರ–ಸಂಬಂಧವದೇವ ತಸ್ಯಾಪಿ ಉಚ್ಛೇದನಿಯಮಾತ್ ಇತ್ಯರ್ಥಃ ।*

ಅನುವಾದ: ಅಣಿಮಾದಿ ಐಶ್ವರ್ಯವೂ ಸಂಬಂಧ ಹೊಂದಿದಾಗ ಮುಕ್ತಿಯನ್ನು ನೀಡದು. ಐಶ್ವರ್ಯಾಂತರ ಸಂಬಂಧದಂತೆ ಅದೂ ಸಹ ಉಚ್ಛೇದವಾಗುವುದು ನಿಶ್ಚಯ, ಎಂದರ್ಥ.

ವಿವರಣೆ: ಎಂಟು ಬಗೆಯ ಐಶ್ವರ್ಯ– ಅಣಿಮಾ, ಲಘಿಮಾ, ಮಹಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ –ಇವೂ ಸಹ ಶಾಶ್ವತವಲ್ಲ ಎಂದು ಅಭಿಪ್ರಾಯ.

ಸೂತ್ರ: ನೇಂದ್ರಾದಿಪದಯೋಗೋ ತದ್ವತ್ ॥ ೮೩ ॥

ಸೂತ್ರಾನುವಾದ: ಇಂದ್ರಾದಿ ಪದಗಳನ್ನು ಪಡೆಯುವುದೂ ಮುಕ್ತಿಯಲ್ಲ. ಅದೇ ರೀತಿಯಾಗಿ (ಹಿಂದಿನ ಸೂತ್ರದಲ್ಲಿ ಹೇಳಿದಂತೆ).

ಭಾಷ್ಯ: *ಇಂದ್ರಾದ್ಯೈಶ್ವರ್ಯಲಾಭೋಽಪಿ ನ ಮುಕ್ತಿರಿತರೈಶ್ವರ್ಯವತ್ । ಕ್ಷಯಿಷ್ಣುತ್ವಾದಿತ್ಯರ್ಥಃ ।*

ಅನುವಾದ: ಇಂದ್ರಾದಿ ಪದಗಳನ್ನು ಪಡೆದಾಗಲೂ ಅದು ಕ್ಷೀಣವಾಗುವುದು ನಿಶ್ಚಯವಾದ್ದರಿಂದ (ಮುಕ್ತಿಯಲ್ಲ).

ಭಾಷ್ಯ: *ಇಂದ್ರಿಯಾಣಾಮಾಹಂಕಾರಿತ್ವಂ ಯದುಕ್ತಂ, ತತ್ರ ಪರವಿಪ್ರತಿಪತ್ತಿಂ ನಿರಾಕರೋತಿ ।*

ಸೂತ್ರ: ನ ಭೂತಪ್ರಕೃತಿತ್ವಮಿಂದ್ರಿಯಾಣಾಮಾಹಂಕಾರಿಕತ್ವಶ್ರುತೇಃ ॥ ೮೪ ॥

ಅನುವಾದ: ಇಂದ್ರಿಯಗಳು ಅಹಂಕಾರದಿಂದ ಹುಟ್ಟಿದುವು ಎಂಬುದಕ್ಕೆ ಅದರ ವಿರುದ್ಧವಾದ ತತ್ತ್ವಗಳನ್ನು ನಿರಾಕರಿಸುತ್ತಾರೆ.

ಸೂತ್ರಾನುವಾದ: ಇಂದ್ರಿಯಗಳು ಭೂತಪ್ರಕೃತಿಯಿಂದ ಉಂಟಾದುವಲ್ಲ. ಏಕೆಂದರೆ ಅವು ಅಹಂಕಾರದಿಂದ ಜನಿಸಿದುವು ಎಂದು ಕೇಳಿದ್ದೇವೆ.

ಭಾಷ್ಯ: *ಸುಗಮಾ ಯೋಜನಾ । ಪೂರ್ವಂ ಚೈತದ್ ವ್ಯಾಖ್ಯಾತಮ್ ।*

ಅನುವಾದ: ಅರ್ಥವು ಸ್ಪಷ್ಟವಾಗಿದೆ. ಹಿಂದೆಯೇ (೨.೧೦) ವ್ಯಾಖ್ಯಾನ ಮಾಡಲಾಗಿದೆ.

ಭಾಷ್ಯ: *ಶಕ್ತ್ಯಾದಿಕಮಪಿ ತತ್ತ್ವಮಸ್ತೀತ್ಯಾಶಯೇನ ಪರೇಷಾಂ ಪರಾರ್ಥಪ್ರತಿ–ನಿಯಮಂ ತನ್ಮಾತ್ರಜ್ಞಾನಾನ್ಮುಕ್ತಿಂ ಚ ನಿರಾಕರೋತಿ ।*

ಅನುವಾದ: ಶಕ್ತ್ಯಾದಿಗಳೂ ಸಹ ತತ್ತ್ವಗಳೇ ಎಂದು ಭಾವಿಸಿ ಇತರರು ಪದಾರ್ಥಗಳನ್ನು ನಿಯಮಕ್ಕೊಳಪಡಿಸುವುದು ಸರಿಯಲ್ಲ. ಅಷ್ಟೇ ಜ್ಞಾನದಿಂದ ಮುಕ್ತಿ ದೊರೆಯುವುದೆಂದು ಹೇಳಲಾಗದು ಎಂದು ಅದನ್ನು ನಿರಾಕರಿಸುತ್ತಾರೆ.

ಸೂತ್ರ: ನ ಷಟ್ ಪದಾರ್ಥನಿಯಮಃ ತದ್ಬೋಧಾನ್ಮುಕ್ತಿಃ ॥ ೮೫ ॥

ಸೂತ್ರಾನುವಾದ: ಆರೇ ಪದಾರ್ಥಗಳಿವೆಯೆಂದು ನಿಯಮವೇನಿಲ್ಲ. ಅವುಗಳನ್ನು ಅರಿತವರು ಮುಕ್ತಿಯನ್ನು ಪಡೆಯುವರೆಂದೂ ಇಲ್ಲ.

ಭಾಷ್ಯ: *ದ್ರವ್ಯಗುಣಕರ್ಮಸಾಮಾನ್ಯವಿಶೇಷಸಮವಾಯಾಃ ಏವ ಪದಾರ್ಥಾಃ ಇತಿ ವೈಶೇಷಿಕಾಣಾಂ ನಿಯಮಃ, ಯಶ್ಚ ತಜ್‌ಜ್ಞಾನಾನ್ಮೋಕ್ಷ ಇತ್ಯಭ್ಯುಪಗಮಃ, ಸೋಽಪ್ರಾಮಾಣಿಕಃ, ಶಕ್ತ್ಯಾದಿ ಅತಿರೇಕಾತ್ । ಪೃಥಿವ್ಯಾದಿನವದ್ರವ್ಯೇಭ್ಯಃ*

ಪ್ರಕೃತೇರತಿರೇಕಾಚ್ಚ ಇತ್ಯರ್ಥಃ । ಗಂಧಾದಿ ಮತ್ತ್ವೇನೈವ ಹಿ ಪೃಥಿವ್ಯಾದಿವ್ಯವಹಾರಃ । ಗಂಧಾದಿಶ್ಚ ಸಾಮ್ಯಾವಸ್ಥಾಯಾಂ ನಾಸ್ತಿ । ಅತಃ ಪೃಥ್ವೀತ್ವಾದಿಜಾತಿರಪಿ ಘಟಾದಿವತ್ ಕಾರ್ಯಮಾತ್ರ-ವೃತ್ತಿರಿತಿ । ತದುಕ್ತಮ್ ।

ಅನುವಾದ: ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯಗಳೇ ಪದಾರ್ಥಗಳು ಎಂದು ವೈಶೇಷಿಕರು ನಿಯಮ ಮಾಡಿರುವುದು ಮತ್ತು ಅದರ ಜ್ಞಾನದಿಂದ ಮೋಕ್ಷವುಂಟಾಗುವುದು ಎಂದು ಒಪ್ಪಿರುವುದು ಪ್ರಮಾಣಕ್ಕೆ ಹೊಂದದು. ಏಕೆಂದರೆ 'ಶಕ್ತಿ'ಯೇ ಮೊದಲಾದ ಇತರ ಪದಾರ್ಥಗಳೂ ಉಂಟು. ಪೃಥಿವಿಯೇ ಮೊದಲಾದ ಒಂಬತ್ತು ದ್ರವ್ಯಗಳಲ್ಲದೆ 'ಪ್ರಕೃತಿ' ಎಂಬುದೂ ಉಂಟು. ಗಂಧವೇ ಮೊದಲಾದುವುಗಳನ್ನು ಹೊಂದಿರುವುದು ಭೂಮಿ ಎಂದು ವ್ಯಾವಹಾರಿಕವಾಗಿ ಹೇಳುವರು. ಆದರೆ ಗಂಧಾದಿಗಳು ಸಾಮ್ಯಾವಸ್ಥೆಯಲ್ಲಿ ಇರುವುದಿಲ್ಲ. ಆದ್ದರಿಂದ ಪೃಥ್ವಿಯೇ ಮೊದಲಾದ ಜಾತಿಯೂ ಸಹ ಘಟತ್ವ ಮುಂತಾದುವುಗಳಂತೆ ಕಾರ್ಯಮಾತ್ರ ವೃತ್ತಿಗಳು. ಅದನ್ನು ಹೀಗೆ ಹೇಳಿದ್ದಾರೆ-

ಭಾಷ್ಯ: *ನಾಹೋ ನ ರಾತ್ರಿರ್ನ ನಭೋ ನ ಭೂಮಿಃ*
ನಾಸ್ತೀತ್ತಮೋ ಜ್ಯೋತಿರಭೂನ್ನ ಚಾನ್ಯತ್ ।
ಶಬ್ದಾದಿಬುದ್ಧ್ಯಾದ್ಯುಪಲಂಭಮೇಕಮ್
ಪ್ರಾಧಾನಿಕಂ ಬ್ರಹ್ಮ ಪುಮಾಂಸ್ತದಾಸೀತ್ ॥ ಇತಿ ॥
(ವಿ.ಪು. ೧.೨.೨೩)

ಅನುವಾದ: (ಪ್ರಲಯ ಕಾಲದಲ್ಲಿ) ಹಗಲಿರಲಿಲ್ಲ, ರಾತ್ರಿಯಿರಲಿಲ್ಲ, ಆಕಾಶವಿರಲಿಲ್ಲ, ಭೂಮಿಯಿರಲಿಲ್ಲ, ಕತ್ತಲೆಯಿರಲಿಲ್ಲ, ಬೆಳಕಿರಲಿಲ್ಲ, ಮತ್ತೇನೂ ಇರಲಿಲ್ಲ. ಅಲ್ಲದೆ ಶಬ್ದಕ್ಕೆ, ಬುದ್ಧಿಗೆ ಮುಂತಾದುವುಗಳಿಗೆ ಪ್ರಧಾನ ಬ್ರಹ್ಮ ಹಾಗೂ ಪುರುಷ ಮಾತ್ರ ಇದ್ದರು, ಎಂದು ಹೇಳಿದೆ.

ಸೂತ್ರ: ಷೋಡಶಾದಿಷ್ವಪ್ಯೇವಮ್ ॥ ೮೬ ॥

ಸೂತ್ರಾನುವಾದ: ಹೀಗೆಯೇ (ವೈಶೇಷಿಕರಂತೆ) ಹದಿನಾರು (ಪದಾರ್ಥಗಳನ್ನು ಹೇಳುವ ನ್ಯಾಯಶಾಸ್ತ್ರಕ್ಕೂ) ಅನ್ವಯಿಸುತ್ತದೆ.

ಭಾಷ್ಯ: *ನ್ಯಾಯಪಾಶುಪತಾದಿಮತೇಷು ಷೋಡಶಾದಿಷ್ವಪಿ ನ ನಿಯಮಃ । ನ ವಾ ತನ್ಮಾತ್ರಜ್ಞಾನಾನ್ಮುಕ್ತಿಃ । ಉಕ್ತರೂಪೇಣ ಪದಾರ್ಥಾಧಿಕ್ಯಾತ್ ಇತ್ಯರ್ಥಃ। ಅಸ್ಮನ್ಮತೇ ತು ನಿತ್ಯಂ ಪದಾರ್ಥದ್ವಯಮೇವ । ನಿತ್ಯಾನಿತ್ಯ-ಸಾಧಾರಣಾಸ್ತು ಪದಾರ್ಥಾಃ ಪಂಚವಿಂಶತಿರೇವೇತಿ ನಿಯಮಃ । ಪಂಚವಿಂಶತಿದ್ರವ್ಯೇಷು ಏವ ಗುಣಕರ್ಮಸಾಮಾನ್ಯಶಕ್ತ್ಯಾದೀನಾಂ ಅಂತರ್ಭಾವ ಇತಿ ।*

ಅನುವಾದ: ನ್ಯಾಯ–ಪಾಶುಪತಾದಿಗಳ ಅಭಿಪ್ರಾಯದಲ್ಲಿ ಹದಿನಾರು ಪದಾರ್ಥಗಳೆಂಬುದೂ ನಿಯಮವಾಗಲಾರದು, ಅದಷ್ಟನ್ನು ತಿಳಿದ ಮಾತ್ರಕ್ಕೇ ಮುಕ್ತಿಯಾಗಲಾರದು, ಮೊದಲೇ ಹೇಳಿದಂತೆ ಅಧಿಕವಾದ ಪದಾರ್ಥಗಳು ಕಂಡುಬಂದಿರುವುದರಿಂದ. ನಮ್ಮ ಅಭಿಪ್ರಾಯದಲ್ಲಾದರೋ ಯಾವಾಗಲೂ ಎರಡೇ ಪದಾರ್ಥಗಳು. ನಿತ್ಯ–ಅನಿತ್ಯ ಮತ್ತು ಸಾಧಾರಣ ಪದಾರ್ಥಗಳಾದರೋ ಇಪ್ಪತ್ತೈದು ಮಾತ್ರ ಎಂದು ನಿಯಮ. ಇಪ್ಪತ್ತೈದು ದ್ರವ್ಯಗಳಲ್ಲಿ ಗುಣ, ಕರ್ಮ, ಸಾಮಾನ್ಯ ಮತ್ತು ಶಕ್ತಿ ಮುಂತಾದುವು ಸೇರಿಹೋಗುತ್ತವೆ.

ಭಾಷ್ಯ: *ಪಂಚಭೂತಾನಾಂ ಪೂರ್ವೋಕ್ತಕಾರ್ಯತ್ವೋಪಪತ್ತ್ಯರ್ಥಂ ವೈಶೇಷಿಕಾದ್ಯಭ್ಯುಪಗತಂ ಪಾರ್ಥಿವಾದ್ಯಣುನಿತ್ಯತ್ವಮಪಾಕರೋತಿ ।*

ಅನುವಾದ: ಪಂಚಭೂತಗಳು ಮೊದಲೇ ಹೇಳಿದಂತೆ ಕಾರ್ಯಗಳೆಂದು ಹೇಳಲು ವೈಶೇಷಿಕರು ಮೊದಲಾದವರು ಸ್ವೀಕರಿಸಿರುವ ಪೃಥ್ವಿಯೇ ಮೊದಲಾದುವುಗಳ ಅಣುನಿತ್ಯತ್ವವನ್ನು ಅಲ್ಲಗಳೆಯುತ್ತಾರೆ.

ಸೂತ್ರ: ನಾಣುನಿತ್ಯತಾ ತತ್ಕಾರ್ಯತ್ವಶ್ರುತೇಃ ॥ ೮೭ ॥

ಸೂತ್ರಾನುವಾದ: ಅಣುವು ಕಾರ್ಯವಾದ್ದರಿಂದ ನಿತ್ಯವಲ್ಲವೆಂಬುದನ್ನು ಶ್ರುತಿಗಳು ಹೇಳುತ್ತವೆ.

ಭಾಷ್ಯ: *ಪೃಥಿವ್ಯಾದ್ಯಣೂನಾಂ ನಿತ್ಯತಾ ನಾಸ್ತಿ । ತೇಷಾಮಣೂನಾಮಪಿ ಕಾರ್ಯತ್ವಶ್ರುತೇರಿತ್ಯರ್ಥಃ । ಯದ್ಯಪ್ಯಸ್ಮಾಭಿಃ ನಾ ಶ್ರುತಿರ್ನದೃಶ್ಯತೇ ಕಾಲಲುಪ್ತತ್ವಾದಿನಾ, ತಥಾಪ್ಯಾಚಾರ್ಯವಾಕ್ಯಾನ್ಮನುಸ್ಮರಣಾಚ್ಚ ಅನುಮೇಯಾ ।*

ಅನುವಾದ: ಪೃಥಿವ್ಯಾದಿ ಅಣುಗಳಿಗೆ ನಿತ್ಯತ್ವವಿಲ್ಲ. ಏಕೆಂದರೆ ಆ ಅಣುಗಳೂ ಕಾರ್ಯವೆಂದು ಶ್ರುತಿಗಳು ಹೇಳುತ್ತವೆ. ನಾವು ಆ ಶ್ರುತಿ ಕಾಲ ಕಳೆದಂತೆ ಅದರಲ್ಲಿ ಕಣ್ಮರೆಯಾಗಿರುವುದರಿಂದ ಅದನ್ನು ಕಾಣಲಾರೆವು. ಆದರೂ ಆಚಾರ್ಯರ ಮಾತಿನಂತೆ ಮತ್ತು ಮನುಸ್ಮೃತಿಯಿಂದ ಅನುಮಾನಿಸಬಹುದು.

ಭಾಷ್ಯ: *ಯಥಾ ಮನುಃ, ಅಣ್ವ್ಯೋ ಮಾತ್ರಾ ವಿನಾಶಿನ್ಯೋ ದಶಾರ್ಧಾನಾಂ ಚ ಯಾಃ ಸ್ಮೃತಾಃ । ತಾಭಿಃ ಸಾರ್ಧಮಿದಂ ಸರ್ವಂ ಸಂಭವತ್ಯನುಪೂರ್ವಶಃ ॥ (ಮನು ೧.೨೭)*

ದಶಾರ್ಧಾನಾಂ ಪೃಥಿವ್ಯಾದಿ ಪಂಚಭೂತಾನಾಮ್ । ನ ಚ ಅತ್ರ ವಾಕ್ಯೇ ಅಣುಶಬ್ದೇನ ದ್ವ್ಯಣುಕಾದ್ಯೇವ ಗ್ರಾಹ್ಯಮಿತಿ ವಾಚ್ಯಮ್ । ಸಂಕೋಚೇ ಪ್ರಮಾಣಾಭಾವಾದಿತಿ । ಅತ್ರ ಅಣುಶಬ್ದೋ ಭೂತಪರ–ಮಾಣುಪರ ಏವ । ವೈಶೇಷಿಕಾದ್ಯಭಿಮತಂ ಚ ತಸ್ಯ ನಿತ್ಯತ್ವಮನೇನ ಸೂತ್ರೇಣ ನಿರಾಕ್ರಿಯತೇ । ನ ತು ಅಣುಪರಿಮಾಣದ್ರವ್ಯಸಾಮಾನ್ಯಸ್ಯ ನಿತ್ಯತ್ವಮ್ । ರಜೋಗುಣಸ್ಯ ಚಾಂಚಲ್ಯಾನುರೋಧೇನ ಅಣುತ್ವಸಿದ್ಧೇಃ ।

ಮಧ್ಯಮಪರಿಮಾಣತ್ವೇ ನಿತ್ಯತ್ವಸ್ಯ ವಿಭುತ್ವೇ ಚ ಕ್ರಿಯಾಯಾಃ ಅನುಪಪತ್ತೇರಿತಿ ।

ಅನುವಾದ: ಪೃಥಿವ್ಯಾದಿ ಪಂಚಮಹಾಭೂತಗಳು ವಿನಾಶಿಗಳಾದ ಅಣುಮಾತ್ರಗಳು. ಅವುಗಳೊಡನೆ ಒಂದೊಂದಾಗಿ ಒಂದಾದ ಮೇಲೊಂದು ಉಂಟಾಗುತ್ತವೆ.

ವಿವರಣೆ: ದಶಾರ್ಧ ಎಂದರೆ ಹತ್ತರ ಅರ್ಧ ಐದು, ಪಂಚಮಹಾಭೂತಗಳು. 'ದಶಾರ್ಧಾನಾಂ' ಎಂದರೆ ಪೃಥಿವ್ಯಾದಿ ಪಂಚಮಹಾಭೂತಗಳು ಎಂದರ್ಥ.

ಅನುವಾದ: ಈ ವಾಕ್ಯದಲ್ಲಿ ಅಣುಶಬ್ದದ ಪ್ರಯೋಗ ದ್ವ್ಯಣುಕಾದಿಗಳನ್ನೇ ತೆಗೆದುಕೊಳ್ಳಬೇಕೆಂದು ತಿಳಿಯಬೇಕು. ಏಕೆಂದರೆ ಸಂಕೋಚನದಿಂದ ಪ್ರಮಾಣವು ದೊರೆಯದು. ಇಲ್ಲಿ ಅಣು ಎಂದರೆ ಭೂತಪರಮಾಣು–ಗಳೆಂದೇ ತಿಳಿಯಬೇಕು. ವೈಶೇಷಿಕಾದಿಗಳ ಅಭಿಮತದಂತೆ ಇರುವ ನಿತ್ಯತ್ವಕಲ್ಪನೆಯನ್ನು ಈ ಸೂತ್ರದ ಮೂಲಕ ನಿರಾಕರಿಸಲಾಗಿದೆ. ಅಣುಪರಿಮಾಣದ ದ್ರವ್ಯ 'ಸಾಮಾನ್ಯ'ವು ನಿತ್ಯವಾಗಿರಲಾರದು. ರಜೋಗುಣವು ಚಂಚಲವಾಗಿರುವುದರಿಂದ ಅಣುತ್ವವು ಸಿದ್ಧವಾಗುವುದು. ಮಧ್ಯಮ ಪರಿಮಾಣದಲ್ಲಿ ನಿತ್ಯತ್ವವನ್ನೂ, ವಿಭುತ್ವದಲ್ಲಿ ಕ್ರಿಯೆಯನ್ನೂ ಕಾಣಲಾರೆವು.

ವಿವರಣೆ: ಸಾಮಾನ್ಯವೆಂದರೆ ಘಟತ್ವ, ಗೋತ್ವ ಮುಂತಾದ ಜಾತಿ.

ಭಾಷ್ಯ: *ನನು ನಿರವಯವಸ್ಯ ಪರಮಾಣೋಃ ಕಥಂ ಕಾರ್ಯತ್ವಂ ಘಟತೇ? ತತ್ರಾಹ–*

ಸೂತ್ರ: ನ ನಿರ್ಭಾಗತ್ವಂ ಕಾರ್ಯತ್ವಾತ್ ॥ ೮೮ ॥

ಸೂತ್ರಾನುವಾದ: (ಪರಮಾಣುವು) ನಿರವಯವವಲ್ಲ ಏಕೆಂದರೆ ಅದು ಕಾರ್ಯವಾಗಿದೆ.

ಭಾಷ್ಯ: *ಶ್ರುತಿಸಿದ್ಧಕಾರ್ಯತ್ವಾನ್ಯಥಾನುಪಪತ್ತ್ಯಾ ಪೃಥಿವ್ಯಾದ್ಯಣೂನಾಂ ನ ನಿರವಯತ್ವಮ್ ಇತ್ಯರ್ಥಃ । ಅತ ಏವ ತನ್ಮಾತ್ರಾಖ್ಯಸೂಕ್ಷ್ಮದ್ರವ್ಯಾಣ್ಯೇವ ಪಾರ್ಥಿವಾದ್ಯಣೂನಾಂ ಅವಯವಾ ಇತಿ ಪಾತಂಜಲಭಾಷ್ಯೇ ವ್ಯಾಸದೇವೈಃ ಪ್ರತಿಪಾದಿತಮ್ । ಪೃಥ್ವೀಪರಮಾಣುರ್ಜಲಪರಮಾಣು–ರಿತ್ಯಾದಿವ್ಯವಹಾರಸ್ತು ಪೃಥಿವ್ಯಾದೀನಾಂ ಅಪಕರ್ಷಕಾಷ್ಠಾ ಅಭಿಪ್ರಾಯೇಣೈವ । ಅತಃ ಪ್ರಕೃತಿಪರ್ಯಂತಮಣುತ್ವೇಽಪಿ ನ ಕ್ಷತಿರಿತಿ । ಯದ್ಯಪಿ ತನ್ಮಾತ್ರೇಷ್ವಪಿ ಗಂಧಾದ್ಯಸ್ತಿ, ತಥಾಪಿ ತಸ್ಯ ಅಪ್ರತ್ಯಕ್ಷತಯಾ ನ ಪೃಥ್ವೀತ್ವಾದಿನಿಯಾಮಕತ್ವಮ್ । ವ್ಯಂಗ್ಯಗಂಧಾದೇರೇವ ಪೃಥಿವೀತ್ವಾದಿಸಿದ್ಧೇಃ । ಅತೋ ನ ತನ್ಮಾತ್ರಾಣಿ ಪೃಥಿವ್ಯಾದಯಃ । ತೇಷು ಚ ಸೂಕ್ಷ್ಮಭೂತವ್ಯವಹಾರೋ ಭೂತಸಾಕ್ಷಾತ್ಕಾರಣತ್ವಾದಿ–ನೈವೇತ್ಯಪಿ ಬೋಧ್ಯಮ್ ।*

ಅನುವಾದ: ಶ್ರುತಿಯಲ್ಲಿ ಸಿದ್ಧವಾದ ಕಾರ್ಯತ್ವವನ್ನು ಬಿಟ್ಟು ಬೇರೆ ಇಲ್ಲದ ಕಾರಣ ಪೃಥಿವ್ಯಾದಿ ಅಣುಗಳು ಅವಯವಗಳನ್ನು ಹೊಂದಿರುವುವು, ನಿರವಯವಗಳಲ್ಲ.

ಆದ್ದರಿಂದಲೇ ತನ್ಮಾತ್ರಗಳೆಂಬ ಸೂಕ್ಷ್ಮದ್ರವ್ಯಗಳೇ ಪಾರ್ಥಿವ ಅಣುಗಳ ಅವಯವಗಳೆಂದು ಪಾತಂಜಲಭಾಷ್ಯದಲ್ಲಿ ವ್ಯಾಸದೇವರು ಪ್ರತಿಪಾದಿಸಿದ್ದಾರೆ. ಪೃಥಿವೀಪರಮಾಣು, ಜಲಪರಮಾಣು ಇತ್ಯಾದಿ ವ್ಯವಹಾರಗಳು ಅಪಕರ್ಷದ ಅಂತ್ಯಗಳು ಎಂಬ ಅಭಿಪ್ರಾಯಗಳಿಂದಲೇ ಹೇಳಿದ್ದಾರೆ. ಆದ್ದರಿಂದ ಪ್ರಕೃತಿಯವರೆಗೆ ಅಣುತ್ವವಿದ್ದರೂ ಯಾವ ನಷ್ಟವಿಲ್ಲ. ಗಂಧಾದಿಗಳು ತನ್ಮಾತ್ರಗಳಲ್ಲಿದ್ದರೂ ಅದು ಗೋಚರವಾಗದ ಕಾರಣ ಪೃಥಿವ್ಯಾದಿಗಳನ್ನು ಅದು ನಿಯಮದಲ್ಲಿಡಲಾರದು. ಗೋಚರವಾಗುವ ಗಂಧಾದಿಗಳಿಂದ ಪೃಥಿವೀತ್ಯಾದಿಗಳು ಸಿದ್ಧವಾಗುವುವು. ಆದ್ದರಿಂದ ತನ್ಮಾತ್ರಗಳೂ ಪೃಥಿವ್ಯಾದಿರೂಪಗಳಲ್ಲ. ಅವುಗಳಲ್ಲಿಯೂ ಸೂಕ್ಷ್ಮಭೂತವೆಂಬ ವ್ಯವಹಾರದಿಂದ ಭೂತಸಾಕ್ಷಾತ್ಕಾರದ ಕಾರಣವೆಂದೂ ಮುಂತಾಗಿ ತಿಳಿಯಬೇಕು.

ಭಾಷ್ಯ: *ಪ್ರಕೃತಿ–ಪುರುಷಸಾಕ್ಷಾತ್ಕಾರೋ ನ ಸಂಭವತಿ ರೂಪಸ್ಯ ದ್ರವ್ಯಸಾಕ್ಷಾತ್ಕಾರಹೇತುತ್ವಾತ್ ಇತಿ ನಾಸ್ತಿಕಾಪೇಕ್ಷಂ ನಿರಾಕರೋತಿ ।*

ಅನುವಾದ: ರೂಪವು ದ್ರವ್ಯಸಾಕ್ಷಾತ್ಕಾರಕ್ಕೆ ಹೇತುವಾದ್ದರಿಂದ ಪುರುಷನ ಸಾಕ್ಷಾತ್ಕಾರವು ಸಂಭವಿಸುವುದಿಲ್ಲ ಎಂಬ ನಾಸ್ತಿಕರ ವಾದವನ್ನು ಅಲ್ಲಗಳೆಯುತ್ತಾರೆ.

ಸೂತ್ರ: **ನ ರೂಪನಿಬಂಧನಾತ್ ಪ್ರತ್ಯಕ್ಷನಿಯಮಃ ॥ ೮೯ ॥**

ಸೂತ್ರಾನುವಾದ: ರೂಪದ ಕಾರಣ ಪ್ರತ್ಯಕ್ಷವಾಗುವುದೆಂಬ ನಿಯಮವಿಲ್ಲ.

ಭಾಷ್ಯ: *ರೂಪಾದೇವನಿಮಿತ್ತಾತ್ ಪ್ರತ್ಯಕ್ಷತೇತಿ ನಿಯಮೋ ನಾಸ್ತಿ । ಧರ್ಮಾದಿನಾಽಪಿ ಸಾಕ್ಷಾತ್ಕಾರಸಂಭವಾತ್ ಇತ್ಯರ್ಥಃ । ವ್ಯಂಜಕ–ಅನಿಯಮಸ್ಯ ಅಂಜನಾದೌ ದೃಷ್ಟತ್ವೇನ ಅದೋಷತ್ವಾತ್ । ಅತಃ ಬಹಿರ್ದ್ರವ್ಯಲೌಕಿಕ–ಪ್ರತ್ಯಕ್ಷಂ ಪ್ರತ್ಯೇವೋದ್ಭೂತರೂಪಂ ವ್ಯಂಜಕಮಿತಿ ಭಾವಃ ।*

ಅನುವಾದ: ರೂಪದ ನಿಮಿತ್ತದಿಂದಲೇ ಪ್ರತ್ಯಕ್ಷತೆಯು ಉಂಟಾಗುವುದು ಎಂದು ನಿಯಮವಿಲ್ಲ. ಧರ್ಮಾದಿಗಳಿಂದಲೂ ಸಾಕ್ಷಾತ್ಕಾರವುಂಟಾಗುವ ಸಂಭವವಿರುತ್ತದೆ. ವ್ಯಂಜಕದ ನಿಯಮವಿಲ್ಲದಿರುವಿಕೆಯು ಅಂಜನಾದಿಗಳಲ್ಲಿ ಕಾಣುವುದರಿಂದ ದೋಷವಿರದು. ಆದ್ದರಿಂದ ಹೊರಗಿನ ದ್ರವ್ಯಗಳ ಲೌಕಿಕಪ್ರತ್ಯಕ್ಷವೇ ಉದ್ಭೂತ ರೂಪದ ವ್ಯಂಜಕವೆಂದು ತಿಳಿಯಬೇಕು ಎಂದು ಭಾವ.

ಭಾಷ್ಯ: *ನನ್ವೇವಂ ಕಿಮಣುಪರಿಮಾಣವಸ್ತ್ವಸ್ತಿ, ನ ವಾ ಇತಿ ಆಕಾಂಕ್ಷಾಯಾಂ ಪರಿಮಾಣನಿರ್ಣಯಂ ಕರೋತಿ ।*

ಅನುವಾದ: ಹಾಗೆ ನೋಡಿದರೆ ಅಣುಪರಿಮಾಣದ ವಸ್ತುವೂ ಇರುವುದೆ? ಅಥವಾ ಇಲ್ಲವೆ? ಎಂಬ ಆಕಾಂಕ್ಷೆಗೆ ಪರಿಮಾಣನಿರ್ಣಯವನ್ನು ಮಾಡುವರು.

ಸೂತ್ರ: **ನ ಪರಿಮಾಣಚಾತುರ್ವಿಧ್ಯಂ ದ್ವಾಭ್ಯಾಂ ತದ್ಯೋಗಮ್ ॥ ೯೦ ॥**

ಸೂತ್ರಾನುವಾದ: ಪರಿಮಾಣಗಳು ನಾಲ್ಕು ಬಗೆಯಲ್ಲ, ಎರಡರಲ್ಲೇ ಅದನ್ನು ಕಾಣಬಹುದು.

ಭಾಷ್ಯ: *ಅಣುಮಹದ್ದೀರ್ಘಂ ಹ್ರಸ್ವಮಿತಿ ಪರಿಮಾಣಚತುರ್ವಿಧಂ ನಾಸ್ತಿ । ದ್ವೈವಿಧ್ಯಂ ತು ವರ್ತತ ಏವ । ದ್ವಾಭ್ಯಾಂ ತದ್ಯೋಗಾತ್ । ದ್ವಾಭ್ಯಾಮೇವ ಅಣುಮಹತ್ವರಿಮಾಣಾಭ್ಯಾಂ ಚಾತುರ್ವಿಧ್ಯ-ಸಂಭವಾದಿತ್ಯರ್ಥಃ । ಮಹತ್ಪರಿಮಾಣಸ್ಯಾವಾಂತರಭೇದಾವೇವ ಹ್ರಸ್ವದೀರ್ಘಾ । ಅನ್ಯಥಾ ವಕ್ರಾದಿರೂಪೈಃ ಪರಿಮಾಣಾನಂತ್ಯ-ಪ್ರಸಂಗಾದಿತಿ । ತತ್ರಾಸ್ಮನ್ನಯೇ ಅಣುಪರಿಮಾಣಮಾಕಾಶಸ್ಯ ಕಾರಣಂ ಗುಣವಿಶೇಷಂ ವರ್ಜಯಿತ್ವಾ ಭೂತೇಂದ್ರಿಯಾಣಾಂ ಮೂಲಕಾರಣೇಷು ಸತ್ತ್ವಾದಿಗುಣೇಷು ಮಂತವ್ಯಮ್ । ಅನ್ಯತ್ರ ಯಥಾಯೋಗ್ಯಂ ಮಧ್ಯಮಾದಿಪರಮಮಹತ್ತ್ವಾಂತಪರಿಮಾಣಾನಿ । ತಾನಿ ಚ ಮಹತ್ತ್ವಸ್ಯೈವಾಂತರಭೇದಾ ಇತಿ ।*

ಅನುವಾದ: ಅಣು, ಮಹತ್, ದೀರ್ಘ ಮತ್ತು ಹ್ರಸ್ವ ಎಂದು ನಾಲ್ಕು ಪ್ರಕಾರದ ಪರಿಮಾಣುಗಳು ಇಲ್ಲ. ಎರಡು ಬಗೆಯಷ್ಟೇ ಇರುವುದು. ಕೇವಲ ಎರಡರಿಂದಲೇ ಅದು ಸಾಧ್ಯ. ಏಕೆಂದರೆ ಅಣುಪರಿಮಾಣ ಮತ್ತು ಮಹತ್‌ಪರಿಮಾಣಗಳಿಂದ ನಾಲ್ಕು ಬಗೆಯ ಪರಿಮಾಣಗಳನ್ನು ಕಾಣಬಹುದು. ಹ್ರಸ್ವ ಮತ್ತು ದೀರ್ಘ ಪರಿಮಾಣಗಳು ಮಹತ್ ಪರಿಮಾಣದ ಅವಾಂತರಭೇದಗಳು. ಇಲ್ಲದಿದ್ದಲ್ಲಿ ವಕ್ರವೇ ಮುಂತಾದ ರೂಪಗಳು ಬೇರೆಯ ರೂಪಗಳೆಂದು ಸ್ವೀಕರಿಸಿದಲ್ಲಿ ಪರಿಮಾಣಗಳು ಅನಂತವಾಗಿಬಿಡುವುದು. ಆದ್ದರಿಂದ ನಮ್ಮ ಅಭಿಪ್ರಾಯದಂತೆ ಆಕಾಶಕ್ಕೆ ಕಾರಣವಾದ ಗುಣವಿಶೇಷವನ್ನು ಬಿಟ್ಟು ಭೂತಗಳಿಗೆ ಮತ್ತು ಇಂದ್ರಿಯಗಳಿಗೆ ಮೂಲ ಕಾರಣಗಳೆನಿಸಿದ ಸತ್ತ್ವಾದಿಗುಣಗಳಲ್ಲಿ ಅಣುಪರಿಮಾಣವನ್ನೇ ಅಂಗೀಕರಿಸಬೇಕು. ಬೇರೆಯೆಡೆ ಯಥಾ ಯೋಗ್ಯವಾಗಿ ಮಧ್ಯಮ ಪರಿಮಾಣದಿಂದ ಪರಮಮಹತ್ತ್ವದ ವರೆಗೆ ಪರಿಮಾಣಗಳಿರುತ್ತವೆ. ಅವೂ ಸಹ ಮಹತ್ತ್ವದ ಅವಾಂತರಭೇದಗಳನ್ನು ಸ್ವೀಕರಿಸಬೇಕು.

ವಿವರಣೆ: ಹ್ರಸ್ವ ಮತ್ತು ದೀರ್ಘ ಪರಿಮಾಣಗಳು ಮಹತ್ತಿನಲ್ಲಿ ಸೇರಿಹೋಗುವುದರಿಂದ ಅಣು ಮತ್ತು ಮಹತ್ ಪರಿಮಾಣಗಳು ಉಳಿಯುತ್ತವೆ. ಆದ್ದರಿಂದ ಅಣುವನ್ನು ಬಿಟ್ಟು ಮಧ್ಯಮ ಪರಿಮಾಣದಿಂದ ಮಹತ್ ಪರಿಮಾಣದವರೆಗೆ 'ಯಥಾಯೋಗ್ಯ' ಪರಿಮಾಣಗಳಾಗುತ್ತವೆ.

ಭಾಷ್ಯ: *ಪುರುಷೈಕತ್ವಂ ಸಾಮಾನ್ಯೇನೇತಿ ಕಂಠತ ಏವೋಕ್ತಂ, ಪ್ರಕೃತೇಃ ಏಕತ್ವಂ ಸಾಮಾನ್ಯೇನೇತ್ಯರ್ಥಾದುಕ್ತಮ್ । ತದರ್ಥಂ ಸಾಮಾನ್ಯೇಷು ನಾಸ್ತಿಕಪ್ರತಿಪತ್ತಿಂ ನಿರಾಕರೋತಿ ।*

ಅನುವಾದ: ಪುರುಷನ ಏಕತ್ವವನ್ನು 'ಸಾಮಾನ್ಯ'ವೆಂದು ಹಿಂದೆಯೇ ಸ್ಪಷ್ಟವಾಗಿ ಹೇಳಿದ್ದೇವೆ. ಆದ್ದರಿಂದ ಪ್ರಕೃತಿಯ ಏಕತ್ವವನ್ನೂ 'ಸಾಮಾನ್ಯ' ಎಂಬ ಅರ್ಥದಲ್ಲಿ ಹೇಳಿದೆ. ಅದಕ್ಕಾಗಿ ಸಾಮಾನ್ಯದ ವಿಷಯದಲ್ಲಿ ನಾಸ್ತಿಕರ ವಿರೋಧವನ್ನು ನಿರಾಕರಿಸಲಾಗಿದೆ.

ಸೂತ್ರ: ಅನಿತ್ಯತ್ವೇऽಪಿ ಸ್ಥಿರತಾಯೋಗಾತ್ ಪ್ರತ್ಯಭಿಜ್ಞಾನಂ ಸಾಮಾನ್ಯಸ್ಯ ॥ ೯೧ ॥

ಸೂತ್ರಾನುವಾದ: (ವ್ಯಕ್ತಿಯು) ಅನಿತ್ಯವಾದರೂ (ಸ್ವಲ್ಪಕಾಲ) ಸ್ಥಿರವಾಗಿದ್ದರೂ ಗುರುತು ಸಿಗುವುದನ್ನು ಸಾಮಾನ್ಯವೆನ್ನುವರು.

ಭಾಷ್ಯ: *ವ್ಯಕ್ತೀನಾಮನಿತ್ಯತ್ವೇऽಪಿ ಸ ಏವ ಅಯಂ ಘಟ ಇತಿ ಸ್ಥಿರತಾಯೋಗೇನ ಯತ್ ಪ್ರತ್ಯಭಿಜ್ಞಾನಂ ತತ್ ಸಾಮಾನ್ಯಸ್ಯ । ಸಾಮಾನ್ಯ ವಿಷಯಕಮೇವ ತತ್ ಪ್ರತ್ಯಭಿಜ್ಞಾನಂ ಇತ್ಯರ್ಥಃ ।*

ಅನುವಾದ: ವ್ಯಕ್ತಿಗಳು ಅನಿತ್ಯವಾದರೂ ಅದೇ ಈ ಘಟ ಎಂಬುದಾಗಿ ಸ್ಥಿರತೆಯ ಯೋಗದಿಂದ ಯಾವುದನ್ನು ಗುರುತಿಸುವರೋ ಅದನ್ನು ಸಾಮಾನ್ಯವೆನ್ನುವರು. ಸಾಮಾನ್ಯ ವಿಷಯಗಳಿಂದ ಕೂಡಿದ ವಸ್ತುವನ್ನು ಗುರುತಿಸುವುದನ್ನು 'ಸಾಮಾನ್ಯ'ದ ಲಕ್ಷಣವೆನ್ನುವರು ಎಂದರ್ಥ.

ಭಾಷ್ಯ: *ತಸ್ಮಾನ್ನ ಸಾಮಾನ್ಯಪಲೇಪೋ ಯುಕ್ತ ಇತಿ ।*

ಸೂತ್ರ: ನ ತದಪಲಾಪಸ್ತಸ್ಮಾತ್ ॥ ೯೨ ॥

ಅನುವಾದ: ಆದ್ದರಿಂದ ಸಾಮಾನ್ಯದ ತಪ್ಪು ಲಕ್ಷಣ ಕೊಡುವುದು ಸರಿಯಲ್ಲ.

ಸೂತ್ರಾನುವಾದ: ಆದ್ದರಿಂದ 'ಸಾಮಾನ್ಯ'ದ 'ತಪ್ಪು ಲಕ್ಷಣ' (ಪ್ರತ್ಯಭಿಜ್ಞೆಯು ಆಗುವುದರಿಂದ) ಕೊಡುವುದು ಸರಿಯಲ್ಲ.

ಭಾಷ್ಯ: *ಸುಗಮಮ್ । ಸ್ಪಷ್ಟವಾಗಿದೆ.*

ನನು ಅತದ್ವ್ಯಾವೃತ್ತಿರೂಪೇಣ ಅಭಾವೇನೈವ ಪ್ರತ್ಯಭಿಜ್ಞೋಪ–ಪಾದನೀಯಾ ಸೈವ ಚ ಸಾಮಾನ್ಯಶಬ್ದಾರ್ಥೋऽಸ್ತು । ತತ್ರಾಹ–

ಅನುವಾದ: ಇಲ್ಲದ್ದನ್ನು ತೆಗೆದುಹಾಕಿದ ರೂಪದ ಅಭಾವದಿಂದಲೇ ಗುರುತನ್ನು ಪಡೆಯಬೇಕು. ಆದ್ದರಿಂದ ಅದನ್ನೇ 'ಸಾಮಾನ್ಯ' ಶಬ್ದದ ಅರ್ಥವೆನ್ನಬಹುದು. ಅದಕ್ಕೆ ಹೀಗೆ ಹೇಳಿದೆ.

ಸೂತ್ರ: ನಾನ್ಯನಿವೃತ್ತಿರೂಪತ್ವಂ ಭಾವಪ್ರತೀತೇಃ ॥ ೯೩ ॥

ಸೂತ್ರಾನುವಾದ: ಬೇರೆಯದನ್ನು ತೆಗೆದುಹಾಕುವುದಷ್ಟೇ (ಸಾಮಾನ್ಯ)ವಲ್ಲ. ಏಕೆಂದರೆ, ಸಾಮಾನ್ಯವು ಭಾವರೂಪದಲ್ಲಿ ತೋರುವುದೇ (ಹೊರತು ಅಭಾವದಿಂದಲ್ಲ).

ಭಾಷ್ಯ: *ಸ ಏವಾಯಮಿತಿ ಭಾವಪ್ರತ್ಯಯ ಅನಿವೃತ್ತಿರೂಪತ್ವಂ ನ ಸಾಮಾನ್ಯಸ್ಯ ಇತ್ಯರ್ಥಃ । ಅನ್ಯಥಾ ಹಿ ನಾಯಂ ಘಟಃ ಇತ್ಯೇವ ಪ್ರತೀಯೇತ । ಕಿಂಚ ಅನ್ಯವ್ಯಾವೃತ್ತಿಶಬ್ದಸ್ಯ ಅಘಟ ವ್ಯಾವೃತ್ತಿರಿತ್ಯರ್ಥೋ ವಾಚ್ಯಃ । ತತ್ರಾಘಟತ್ವಂ ಘಟಸಾಮಾನ್ಯ ಭಿನ್ನತ್ವಂ ಇತಿ ಸಾಮಾನ್ಯಾಭ್ಯುಪಗಮಃ ಆಪತಿತಃ ಇತಿ ।*

ಅನುವಾದ: 'ಅದೇ ಇದು' ಎಂದು ಭಾವಪ್ರತ್ಯಯವನ್ನು ಹೋಗಲಾಡಿಸದೇ ಇರುವುದೇ ಸಾಮಾನ್ಯವಲ್ಲ. ಹಾಗಿಲ್ಲದಿದ್ದಲ್ಲಿ ಇದು ಆ ಘಟವಲ್ಲ ಎಂದೇ ತಿಳಿದುಬರುವುದು. ಅಲ್ಲದೆ 'ಅನ್ಯವ್ಯಾವೃತ್ತಿ' ಎಂದರೆ ಘಟವಲ್ಲವೆಂಬ ಭಾವನೆಯನ್ನು ತೆಗೆದುಹಾಕುವುದು. ಆಗ ಅಘಟತ್ವವೆಂದರೆ ಘಟಸಾಮಾನ್ಯಕ್ಕೆ ಭಿನ್ನವೆಂದು ಸಾಮಾನ್ಯವನ್ನೇ ಸ್ವೀಕರಿಸಿದಂತಾಗುವುದು.

ವಿವರಣೆ: ಬೌದ್ಧರಲ್ಲಿ 'ಅಪೋಹ' ಎಂಬ ವಾದವಿದೆ. ಅದರ ಪ್ರಕಾರ ನೀಲವೆಂದರೆ ನೀಲವಲ್ಲದ್ದನ್ನೆಲ್ಲ ಬಿಡುವುದು. ಆದರೆ ಸಾಂಖ್ಯರ ಪ್ರಕಾರ ಅದು ಸರಿಯಲ್ಲ. ಏಕೆಂದರೆ ಅದರಲ್ಲಿ 'ಭಾವ'ದ ಕಲ್ಪನೆ ಬರುವುದಿಲ್ಲ. ಗೋವಿನಲ್ಲಿ ಗೋತ್ವ ಸಾಮಾನ್ಯ ಧರ್ಮ. ಇಲ್ಲಿ 'ಅಭಾವ'ದ ಕಲ್ಪನೆ ಬಾರದು. 'ಸೋಽಯಂ ಘಟಃ' ಎಂಬುದು ಗುರುತಿಸುವ ನೆನಪಷ್ಟೆ.

ಭಾಷ್ಯ: *ನನು ಸಾದೃಶ್ಯನಿಬಂಧನಾ ಪ್ರತ್ಯಭಿಜ್ಞಾ ಭವಿಷ್ಯತಿ । ತತ್ರಾಹ–*

ಸೂತ್ರ: ನ ತತ್ತ್ವಾಂತರಂ ಸಾದೃಶ್ಯಂ ಪ್ರತ್ಯಕ್ಷೋಪಲಬ್ಧೇಃ ॥ ೯೪ ॥

ಅನುವಾದ: ('ಅತದ್ವ್ಯಾವೃತ್ತಿ'ಯ ಬದಲಾಗಿ) ಸಾದೃಶ್ಯದ ಆಧಾರದಿಂದ ನೆನಪುಂಟಾಗ ಬಹುದಲ್ಲವೆ?

ಸೂತ್ರಾನುವಾದ: ಸಾದೃಶ್ಯವೆಂಬುದು ಬೇರೆಯ ತತ್ತ್ವವಲ್ಲ, ಆ ಸಮಾನತೆಯು ಪ್ರತ್ಯಕ್ಷವಾಗಿಯೇ ಗೋಚರವಾಗುವುದಿಲ್ಲವೆ?

ಭಾಷ್ಯ: *ಭೂಯೋಽವಯವಾದಿಸಾಮಾನ್ಯಾದತಿರಿಕ್ತಂ ನ ಸಾದೃಶ್ಯಮಸ್ತಿ ಪ್ರತ್ಯಕ್ಷತ ಏವ ಸಾಮಾನ್ಯರೂಪತಯೋಪಲಂಭಾದಿತ್ಯರ್ಥಃ ।*

ಅನುವಾದ: ಮತ್ತೆ ಅವಯವಾದಿ ಸಾಮಾನ್ಯವನ್ನು ಮೀರಿ ಸಾದೃಶ್ಯವೇನೂ ಇರದು. ಏಕೆಂದರೆ ಪ್ರತ್ಯಕ್ಷವಾಗಿಯೇ 'ಸಾಮಾನ್ಯ'ದ ರೀತಿಯಲ್ಲಿ ಅದು ದೊರೆಯುವುದು ಎಂದರ್ಥ.

ಭಾಷ್ಯ: *ನನು ಸ್ವಾಭಾವಿಕೀ ಶಕ್ತಿರೇವ ಸಾದೃಶ್ಯಮಸ್ತು, ನ ತು ತತ್ ಸಾಮಾನ್ಯ ಮಿತ್ಯಾಶಂಕಾಂ ಅಪಾಕರೋತಿ ।*

ಸೂತ್ರ: ನಿಜಶಕ್ತ್ಯಭಿವ್ಯಕ್ತಿರ್ವಾ ವೈಶಿಷ್ಟ್ಯಾತ್ತದುಪಲಬ್ಧೇಃ ॥ ೯೫ ॥

ಅನುವಾದ: ಸ್ವಾಭಾವಿಕವಾದ ಶಕ್ತಿಯೇ ಸಾದೃಶ್ಯವಾಗಬಹುದಲ್ಲ, ಆಗ ಅದು ಸಾಮಾನ್ಯ ವಾಗಲಾರದಲ್ಲವೆ? ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

ಸೂತ್ರಾನುವಾದ: ತನ್ನ ಸ್ವಾಭಾವಿಕಶಕ್ತಿಯ ಅಭಿವ್ಯಕ್ತಿಯಾಗಲಿ ಅದು ಸಾದೃಶ್ಯವಾಗಲಾರದು. ಏಕೆಂದರೆ ಅದು ಉಂಟಾಗುವುದು (ಸಾದೃಶ್ಯಕ್ಕಿಂತ) ಭಿನ್ನವಾದ ಕಾರಣ.

ಭಾಷ್ಯ: *ವಸ್ತುನಃ ಸ್ವಾಭಾವಿಕಶಕ್ತಿ ವಿಶೇಷೋತ್ಪಾದೋಽಪಿ ನ ಸಾದೃಶ್ಯಂ ಶಕ್ತ್ಯುಪಲಬ್ಧಿತಃ ಸಾದೃಶ್ಯೋಪಲಬ್ಧೇಃ ವಿಲಕ್ಷಣತ್ವಾತ್ । ಶಕ್ತಿಜ್ಞಾನಂ ಹಿ*

ನಾನ್ಯಧರ್ಮಿಜ್ಞಾನಸಾಪೇಕ್ಷಮ್ । ಸಾದೃಶ್ಯಜ್ಞಾನಂ ಪುನಃ ಪ್ರತಿಯೋಗಿಜ್ಞಾನಮಪೇಕ್ಷತೇ, ಅಭಾವಜ್ಞಾನವದಿತಿ ಜ್ಞಾನಯೋಃ ವೈಲಕ್ಷಣ್ಯಮಿತ್ಯರ್ಥಃ । ಕಿಂಚ ಧರ್ಮಿಣಃ ಶಕ್ತಿಸಾಮಾನ್ಯಂ ನ ಸಾದೃಶ್ಯಮ್ । ಬಾಲ್ಯಾವಸ್ಥಾಯಾಮಪಿ ಯುವಸಾದೃಶ್ಯಾಪತ್ತೇಃ । ಕಿಂತು ಯುವಾದಿಕಾಲೀನಃ ಶಕ್ತಿವಿಶೇಷೋ ಯುವಾದಿಸಾದೃಶ್ಯಮಿತಿ ವಕ್ತವ್ಯಮ್ । ತಥಾ ಚ ಪ್ರತಿವ್ಯಕ್ತ್ಯನಂತಶಕ್ತಿಕಲ್ಪನಾಪೇಕ್ಷಯಾ ಸರ್ವವ್ಯಕ್ತಿಸಾಧಾರಣೈಕಸಾಮಾನ್ಯಕಲ್ಪನೈವ ಯುಕ್ತೇತಿ ।

ಅನುವಾದ: ಪದಾರ್ಥದ ಸ್ವಾಭಾವಿಕವಾದ ಶಕ್ತಿವಿಶೇಷದ ತೋರುವಿಕೆಯು ಸಾದೃಶ್ಯವಲ್ಲ; ಶಕ್ತಿಯ ಉಪಲಬ್ಧಿಯಿಂದ ಸಾದೃಶ್ಯದ ಉಪಲಬ್ಧಿಯು ಭಿನ್ನವಾದುದು. ಶಕ್ತಿಜ್ಞಾನವು ಬೇರೆಯ ಧರ್ಮಿಗಳ ಜ್ಞಾನವನ್ನು ಅಪೇಕ್ಷಿಸುವುದಿಲ್ಲ. ಸಾದೃಶ್ಯಜ್ಞಾನವು ಮತ್ತೆ ಪ್ರತಿಯೋಗಿಜ್ಞಾನವನ್ನು ಅಪೇಕ್ಷಿಸುವುದು, ಅಭಾವಜ್ಞಾನದಂತೆ ಸಾದೃಶ್ಯಜ್ಞಾನವೂ ವಸ್ತುಶಕ್ತಿಯ ಜ್ಞಾನವೂ ಭಿನ್ನವಾದುವು. ಅಲ್ಲದೆ ಧರ್ಮಿಯ (ಧರ್ಮವುಳ್ಳ ಪದಾರ್ಥ) ಶಕ್ತಿಸಾಮಾನ್ಯವೂ ಸಾದೃಶ್ಯವಲ್ಲ. ಬಾಲ್ಯಾವಸ್ಥೆಯಲ್ಲೂ ಯುವಾವಸ್ಥೆಗೆ ಸಾದೃಶ್ಯವನ್ನು ಕಾಣಬಹುದು. ಆದರೆ ಯುವಾದಿ ಕಾಲದ ಶಕ್ತಿವಿಶೇಷವೂ ಯುವಸಾದೃಶ್ಯವಾಗಬಹುದು. ಆದರೆ ಪ್ರತಿವ್ಯಕ್ತಿಗೂ ಎಂದರೆ ಅನಂತಶಕ್ತಿಯ ಕಲ್ಪನೆಯಾಗಬೇಕಾಗುವುದು. ಆದ್ದರಿಂದ ಸರ್ವವ್ಯಕ್ತಿಸಾಧಾರಣವಾದ ಒಂದೇ ಸಾಮಾನ್ಯದ ಕಲ್ಪನೆಯೇ ಸರಿಯಾದುದು.

ಭಾಷ್ಯ: *ನನು ತಥಾಪಿ ಘಟಾದಿಸಂಜ್ಞಕತ್ವಮೇವ ಘಟಾದಿವ್ಯಕ್ತೀನಾಂ ಸಾದೃಶ್ಯಂ ಅಸ್ತು ।*

ಸೂತ್ರ: ನ ಸಂಜ್ಞಾಸಂಜ್ಞಿಸಂಬಂಧೋಽಪಿ ॥ ೯೬ ॥

ಅನುವಾದ: ಹಾಗಿದ್ದರೂ ಘಟಾದಿಸಂಜ್ಞಕತ್ವವೇ ಘಟಾದಿವ್ಯಕ್ತಿಗಳ ಸಾದೃಶ್ಯವಾಗ ಬಹುದಲ್ಲವೆ? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರಾನುವಾದ: ಹೆಸರು ಮತ್ತು ಹೆಸರುಳ್ಳದ್ದು ಎಂಬ ಸಂಬಂಧವೂ ಸಹ (ಸಾದೃಶ್ಯವನ್ನುಂಟು)ಮಾಡುವುದಿಲ್ಲ.

ಭಾಷ್ಯ: *ಯಥೋಕ್ತಃ ಸಂಜ್ಞಾಸಂಜ್ಞಿನೋಃ ಸಂಬಂಧೋಽಪಿ ನ ಸಾದೃಶ್ಯಮ್। ವೈಶಿಷ್ಟ್ಯಾತ್ ತದುಪಲಬ್ಧೇರೇವ ಇತ್ಯರ್ಥಃ । ಸಂಜ್ಞಾಸಂಜ್ಞಿಭಾವಂ ಅಜಾನತೋಽಪಿ ಸಾದೃಶ್ಯಜ್ಞಾನಾದಿತಿ । ಅಪಿ ಚ–*

ಅನುವಾದ: ಮೇಲೆ ಹೇಳಿದ ಸಂಜ್ಞಾಸಂಜ್ಞಿ ಸಂಬಂಧವೂ ಸಹ ಸಾದೃಶ್ಯವಾಗಲಾರದು. ಏಕೆಂದರೆ ಅವೆರಡೂ ಒಂದಕ್ಕೊಂದು ಭಿನ್ನವಾಗಿರುವುವು; ಸಂಬಂಧದ ಜ್ಞಾನ ಬೇರೆ, ಸಾದೃಶ್ಯದ ಜ್ಞಾನ ಬೇರೆ. ಪದಾರ್ಥಗಳ ಹೆಸರನ್ನು ತಿಳಿಯದಿದ್ದರೂ ವ್ಯಕ್ತಿಯು ಸಾದೃಶ್ಯವನ್ನು ತಿಳಿಯಬಲ್ಲನು. ಅಲ್ಲದೆ–

ಸೂತ್ರ: **ನ ಸಂಬಂಧನಿತ್ಯತೋಭಯಾನಿತ್ಯತ್ವಾತ್ ॥ ೯೭ ॥**

ಸೂತ್ರಾನುವಾದ: ಎರಡೂ ಸಹ (ಹೆಸರು–ಹೆಸರುಳ್ಳದ್ದು) ಅನಿತ್ಯವಾದ್ದರಿಂದ ಇವುಗಳ ಸಂಬಂಧ ಅನಿತ್ಯ.

ಭಾಷ್ಯ: *ಸಂಜ್ಞಾಸಂಜ್ಞಿನೋಃ ಅನಿತ್ಯತ್ವಾತ್ ತತ್ಸಂಬಂಧಸ್ಯಾಪಿ ನ ನಿತ್ಯತಾ । ಅತಃ ಕಥಂ ತೇನ ಅತೀತವಸ್ತುಸಾದೃಶ್ಯಂ ವರ್ತಮಾನವಸ್ತುನಿ ಸ್ಯಾದಿತ್ಯರ್ಥಃ ।*

ಅನುವಾದ: ಸಂಜ್ಞಾ ಮತ್ತು ಸಂಜ್ಞಿಗಳೆರಡೂ ಅನಿತ್ಯವಾದ್ದರಿಂದ ಅವುಗಳ ಸಂಬಂಧವೂ ಅನಿತ್ಯವಾಗಿಬಿಡುವುದು. ಆದ್ದರಿಂದ ಕಳೆದುಹೋದ ವಸ್ತುವಿನೊಡನೆ ವರ್ತಮಾನ ವಸ್ತುವಿನ ಸಾದೃಶ್ಯ ಆಗುವುದಾದರೂ ಹೇಗೆ?

ಭಾಷ್ಯ: *ನನು ಸಂಬಂಧ್ಯನಿತ್ಯತ್ವೇಽಪಿ ಸಂಬಂಧೋ ನಿತ್ಯಃ ಸ್ಯಾತ್ ಕಿಮತ್ರ ಬಾಧಕಮ್ । ತತ್ರಾಹ ।*

ಅನುವಾದ: ಸಂಬಂಧಿಯು ಅನಿತ್ಯವಾದಲ್ಲಿ ಸಂಬಂಧವು ನಿತ್ಯವಿರಬಹುದು. ಅದು ಹೇಗೆ ಬಾಧಕವಾಗುವುದು? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: **ನಾತಃ ಸಂಬಂಧೋ ಧರ್ಮಿಗ್ರಾಹಕಪ್ರಮಾಣಬಾಧಾತ್ ॥ ೯೮ ॥**

ಸೂತ್ರಾನುವಾದ: ಧರ್ಮಿಗ್ರಾಹಕಪ್ರಮಾಣದ ಬಾಧೆಯುಂಟಾಗುವುದು. ಆದ್ದರಿಂದ ಸಂಬಂಧವು ನಿತ್ಯವಾಗಲಾರದು.

ವಿವರಣೆ: ಧರ್ಮವನ್ನುಳ್ಳ ವಸ್ತುವನ್ನು ಗ್ರಹಿಸಬೇಕಾದ ಪ್ರಮಾಣಕ್ಕೆ ಸಂಬಂಧವನ್ನು ನಿತ್ಯವೆಂದು ಪರಿಗಣಿಸಲಾಗದು ಎಂದರ್ಥ.

ಭಾಷ್ಯ: *ಕಾದಾಚಿತ್ಕವಿಭಾಗೇ ಸತ್ಯೇವ ಸಂಬಂಧಃ ಸಿದ್ಧ್ಯತಿ । ಅನ್ಯಥಾ ವಕ್ಷ್ಯಮಾಣಸ್ವರೂಪೇಣೈವ ಉಪಪತ್ತೌ ಸಂಬಂಧಕಲ್ಪನಾನವಕಾಶಾತ್। ಸ ಚ ಕಾದಾಚಿತ್ಕೋ ವಿಭಾಗೋ ನ ಸಂಬಂಧನಿತ್ಯತ್ವೇ ಸಂಭವತಿ । ಅತಃ ಸಂಬಂಧಗ್ರಾಹಕಪ್ರಮಾಣೇನೈವ ಬಾಧಾನ್ನ ನಿತ್ಯಃ ಸಂಬಂಧಃ ಇತ್ಯರ್ಥಃ ।*

ಅನುವಾದ: ಒಮ್ಮೊಮ್ಮೆ ಪದಾರ್ಥಗಳಲ್ಲಿ ವಿಭಾಗವಾದಾಗಲೇ ಅವುಗಳಲ್ಲಿ ಸಂಬಂಧ ಉಂಟಾಗುವುದು. ಹಾಗಿಲ್ಲದಿದ್ದಲ್ಲಿ ಮುಂದೆ ಹೇಳುವಂತಹ (ಸೂತ್ರ ೫.೧೦೦) ಸ್ವರೂಪದಲ್ಲಿ ದೊರೆತಾಗ ಸಂಬಂಧದ ಕಲ್ಪನೆಯ ಅವಕಾಶವೆಲ್ಲಿ? ಒಮ್ಮೊಮ್ಮೆ ಆಗುವ ವಿಭಾಗದ ಸಂಬಂಧವನ್ನು ನಿತ್ಯವೆನ್ನಲಾಗದು. ಆದ್ದರಿಂದ ಸಂಬಂಧವನ್ನು ಗ್ರಹಿಸುವ ಪ್ರಮಾಣಕ್ಕೆ ಬಾಧವುಂಟಾಗಿ ಸಂಬಂಧವು ನಿತ್ಯ ಎನ್ನಲಾಗದು.

ಭಾಷ್ಯ: *ನನ್ವೇವಂ ನಿತ್ಯಯೋರ್ಗುಣಗುಣಿನೋರ್ನಿತ್ಯಃ ಸಮವಾಯಃ ನೋಪಪದ್ಯೇತ । ತತ್ರಾಹ ।*

ಸೂತ್ರ: **ನ ಸಮವಾಯೋಽಸ್ತಿ ಪ್ರಮಾಣಾಭಾವಾತ್ ॥ ೯೯ ॥**

ಅನುವಾದ: ಹೀಗೆಯೇ ನಿತ್ವವಾದ ಗುಣ-ಗುಣಿ ಪದಾರ್ಥಗಳಲ್ಲಿರುವ ಸಂಬಂಧ ನಿತ್ಯವಾದ ಸಮವಾಯವಾಗಲಾರದು. ಅದಕ್ಕೆ ಹೀಗೆ ಹೇಳಿದೆ.

ಸೂತ್ರಾನುವಾದ: ಸಮವಾಯ ಎಂಬ ಸಂಬಂಧವೇ ಇಲ್ಲ, ಏಕೆಂದರೆ ಅದಕ್ಕೆ ಪ್ರಮಾಣವಿಲ್ಲ.

ಭಾಷ್ಯ: *ಸುಗಮಮ್ ।*

ಅನುವಾದ: ಸುಲಭವಾಗಿದೆ.

ಭಾಷ್ಯ: *ನನು ವೈಶಿಷ್ಟ್ಯ ಪ್ರತ್ಯಕ್ಷಂ ವಿಶಿಷ್ಟಬುದ್ಧ್ಯನ್ಯಥಾನುಪಪತ್ತಿಶ್ಚ ಪ್ರಮಾಣಮ್ । ತತ್ರಾಹ ।*

ಅನುವಾದ: ವೈಶಿಷ್ಟ್ಯದ ಪ್ರತ್ಯಕ್ಷ ಮತ್ತು ವಿಶಿಷ್ಟವಾದ ಬುದ್ಧಿಯು ಭಿನ್ನವಾಗಿ ದೊರೆಯದಿರುವುದೂ ಪ್ರಮಾಣ. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಉಭಯತ್ರಾಪ್ಯನ್ಯಥಾಸಿದ್ಧೇಃ ನ ಪ್ರತ್ಯಕ್ಷಮನುಮಾನಂ ವಾ ॥ ೧೦೦ ॥

ಸೂತ್ರಾನುವಾದ: ಪ್ರತ್ಯಕ್ಷ ಅಥವಾ ಅನುಮಾನಗಳಿಂದ ಸಮವಾಯವನ್ನು ಸಿದ್ಧಿಸುವುದು ಅನ್ಯಥಾಸಿದ್ಧಿಯಾಗುವುದರಿಂದ ಪ್ರತ್ಯಕ್ಷವಾಗಲಿ ಅನುಮಾನವಾಗಲಿ ಅದರ ಅಸ್ತಿತ್ವಕ್ಕೆ ಪ್ರಮಾಣವಾಗಲಾರವು.

ಭಾಷ್ಯ: *ಉಭಯತ್ರಾಪಿ ವೈಶಿಷ್ಟ್ಯ ಪ್ರತ್ಯಕ್ಷೇ ತದನುಮಾನೇ ಚ ಸ್ವರೂಪೇಣೈ-ವಾನ್ಯಥಾಸಿದ್ಧೇ ನ ತದುಭಯಂ ಸಮವಾಯೇ ಪ್ರಮಾಣಂ ಇತ್ಯರ್ಥಃ। ಅಯಂ ಭಾವಃ – ಯಥಾ ಸಮವಾಯವೈಶಿಷ್ಟ್ಯ ಬುದ್ಧಿಃ ಸಮವಾಯಸ್ವರೂಪೇಣೈವೇಷ್ಯತೇ, ಅನವಸ್ಥಾಭಯಾದಿತಿ । ತತ್ರ ಪ್ರತ್ಯಕ್ಷಾನುಮಾನೇ ಅನ್ಯಥಾಸಿದ್ಧೇ । ಏವಂ ಗುಣಗುಣಿಪ್ರಭೃತೀನಾಂ ವಿಶಿಷ್ಟಬುದ್ಧಿರಪಿ ಗುಣಾದಿಸ್ವರೂಪೇಣೈವೇಷ್ಯತಾಮ್ । ಅತಸ್ತತ್ರಾಪಿ ಪ್ರತ್ಯಕ್ಷಾನುಮಾನೇ ಅನ್ಯಥಾಸಿದ್ಧೇ ಇತಿ ।*

ಅನುವಾದ: ಎರಡೂ ಕಡೆಗಳಲ್ಲಿ ವೈಶಿಷ್ಟ್ಯ ಪ್ರತ್ಯಕ್ಷ ಅಥವಾ ಅನುಮಾನದಲ್ಲಿ ಸ್ವರೂಪ ದಿಂದಲೇ ಅನ್ಯಥಾ ಸಿದ್ಧಿಯಾಗುವುದರಿಂದ ಅವೆರಡೂ ಸಮವಾಯಕ್ಕೆ ಪ್ರಮಾಣ ವಾಗಲಾರವು ಎಂದರ್ಥ. ಅಭಿಪ್ರಾಯವೇನೆಂದರೆ, ಸಮವಾಯವಿಶಿಷ್ಟತೆಯಿಂದ ಕೂಡಿದ ಬುದ್ಧಿಯು ಸಮವಾಯಸ್ವರೂಪದಿಂದಲೇ ಇರಬೇಕು. ಇಲ್ಲದಿದ್ದರೆ ಅನವಸ್ಥಾದೋಷವುಂಟಾಗುವುದೆಂಬ ಭಯವಿರುವುದು. ಅದರಲ್ಲಿ ಪ್ರತ್ಯಕ್ಷ-ಅನುಮಾನಗಳು ಅನ್ಯಥಾಸಿದ್ಧವಾಗುವುವು. ಹೀಗೆ ಗುಣ-ಗುಣಿ ಮುಂತಾದುವುಗಳ ವಿಶಿಷ್ಟಬುದ್ಧಿಯೂ ಸಹ ಗುಣಾದಿ ಸ್ವರೂಪದಿಂದಲೇ ಆಗಲಿ. ಆದ್ದರಿಂದ ಅದರಲ್ಲಿಯೂ ಪ್ರತ್ಯಕ್ಷಾನುಮಾನಗಳೆರಡೂ ಅನ್ಯಥಾ ಸಿದ್ಧವಾಗುವುವು.

ವಿವರಣೆ: ಸಿಹಿಯಾದ ಹಣ್ಣು, ಎಂಬ ಪದಗಳಲ್ಲಿ ಸಿಹಿ, ಹಣ್ಣು, ವಿಶೇಷಣ ವಿಶೇಷ್ಯಗಳು ಪ್ರತ್ಯಕ್ಷವಾಗಿ ತೋರುತ್ತವೆ. ದಂಡೀ ಪುರುಷಃ ಎಂಬ ಪದಗಳಲ್ಲಿ ವಿಶೇಷಣ, ವಿಶೇಷ್ಯಗಳು ಮತ್ತು ಸಂಯೋಗ-ಸಂಬಂಧ (ದಂಡ ಮತ್ತು ಪುರುಷ) ಕಂಡು

ಬರುವುದರಿಂದ ಇವು ಅನುಮಾನವಾಗಬಲ್ಲವು. ಆದರೆ ಪ್ರತ್ಯಕ್ಷ ಮತ್ತು ಅನುಮಾನಗಳಿಂದ ಸಮವಾಯವು ಸಿದ್ಧವಾಗದು ಏಕೆಂದರೆ ಅವುಗಳಲ್ಲಿ ಸ್ವರೂಪ ಸಂಬಂಧವಿರುವುದು. ನೀಲೋ ಘಟಃ ಎಂದರೆ ಸಮವಾಯ ಸಂಬಂಧ ಯಾವುದಕ್ಕೆ, ನೀಲಕ್ಕೆ ಅಥವಾ ಘಟಕ್ಕೆ? ಅದಕ್ಕೆ ಬೇರೊಂದು 'ಸಮವಾಯ' ಕಲ್ಪಿಸಬೇಕಾಗುವುದು. ಈ ಸಮವಾಯವನ್ನು ಹೊಂದಿಸಲು ಬೇರೊಂದು ಸಮವಾಯ ಬೇಕಾಗುವುದು. ಹೀಗೆ ಇದು ಅನವಸ್ಥಾದೋಷಕ್ಕೆ ಗುರಿಯಾಗುವುದು.

ಭಾಷ್ಯ: *ನನ್ವೇವಂ ಸಂಯೋಗೋಽಪಿ ನ ಸಿದ್ಧ್ಯತಿ । ಭೂತಲಾದೌ ಘಟಾದಿ-ಪ್ರತ್ಯಯಸ್ಯಾಪಿ ಸ್ವರೂಪೇಣೈವ ಅನ್ಯಥಾ ಸಿದ್ಧೇರಿತಿ ಚೇನ್ನ । ವಿಯೋಗಕಾಲೇಽಪಿ ಭೂತಲಘಟಯೋಃ ಸ್ವರೂಪತಾವಸ್ಥ್ಯೇನ ವಿಶಿಷ್ಟಬುದ್ಧಿಪ್ರಸಂಗಾತ್ । ಸಮವಾಯಸ್ಥಲೇ ಚ ಸಮವೇತಸ್ಯ ಕದಾಪಿ ಸ್ವಾಶ್ರಯವಿಯೋಗೋನಾಸ್ತೀತಿ, ನಾಯಂದೋಷಃ ।*

ಅನುವಾದ: ಹೀಗೆ ಸಂಯೋಗವೂ ಸಹ ಸಿದ್ಧಿಸದು. ಭೂತಲದಲ್ಲಿ ಘಟಾದಿಗಳ ಪ್ರತೀತಿಯಾದರೂ ಅದು ಸ್ವರೂಪದಿಂದಲೆ, ಅದೂ ಅನ್ಯಥಾಸಿದ್ಧಿಯೆ? ಹಾಗಲ್ಲ ಅವು ಬೇರೆಯಾದಾಗಲೂ ಭೂತಲ ಮತ್ತು ಘಟಗಳಲ್ಲಿ ಸ್ವರೂಪದ ಅವಸ್ಥೆಯಲ್ಲಿಯೇ ವಿಶಿಷ್ಟಬುದ್ಧಿಯನ್ನು ಉಂಟು ಮಾಡುವುದು. ಸಮವಾಯದ ಸ್ಥಲದಲ್ಲಿ ಸಮವೇತವಾದುದು ತನ್ನ ಆಶ್ರಯದಿಂದ ಬೇರೆಯಾಗಲು ಸಾಧ್ಯವೇ ಇಲ್ಲ, ಆದ್ದರಿಂದ ಅದೇನೂ ದೋಷವಲ್ಲ.

ಭಾಷ್ಯ: *ಕಶ್ಚಿತ್ತು ತಾದಾತ್ಮ್ಯಸಂಬಂಧೇನಾತ್ರ ಸಮವಾಯಸ್ಯ ಅನ್ಯಥಾಸಿದ್ಧಿಮಾಹ, ತನ್ನ, ಶಬ್ದಮಾತ್ರಭೇದಾತ್ । ತಾದಾತ್ಮ್ಯಂ ಹ್ಯತ್ರ ನಾತ್ಯಂತಂ ವಕ್ತವ್ಯಮ್। ಗುಣವಿಯೋಗೇಽಪಿ ಗುಣಿಸತ್ತ್ವಾತ್, ವೈಶಿಷ್ಟ್ಯಪ್ರತ್ಯಯಾಚ್ಚ । ಕಿಂತು ಭೇದಾಭೇದಬುದ್ಧಿನಿಯಾಮಕಃ ಸಂಬಂಧವಿಶೇಷ ಏವಾಗತ್ಯಾ ವಕ್ತವ್ಯಃ। ತಥಾ ಚ ತಸ್ಯ ಸಮವಾಯ ಇತಿ ವಾ ತಾದಾತ್ಮ್ಯಮಿತಿವಾ ನಾಮಮಾತ್ರಂ ಭಿನ್ನಮ್ । ಸಂಬಂಧಿದ್ವಯಾತಿರಿಕ್ತಃ ಸಂಬಂಧಸ್ತು ಸಿದ್ಧ ಏವೇತಿ । ಯದಿ ಚ ತಾದಾತ್ಮ್ಯಂ ಸ್ವರೂಪಮೇವೋಚ್ಯತೇ ತದಸ್ಮಾಭಿರಪಿ ತದೇವೋಕ್ತಮಿತಿ ಶಬ್ದಮಾತ್ರೇ ಭೇದ ಇತಿ ।*

ಅನುವಾದ: ಇನ್ನೊಬ್ಬರು ತಾದಾತ್ಮ್ಯಸಂಬಂಧದಿಂದ ಸಮವಾಯು ಅನ್ಯಥಾ ಸಿದ್ಧವೆಂದಿದ್ದಾರೆ; ಅದು ಸರಿಯಲ್ಲ, ಶಬ್ದದಲ್ಲಿ ಮಾತ್ರ ಅದು ಬೇರೆ ಅಷ್ಟೆ. ಇದರಲ್ಲಿ ತಾದಾತ್ಮ್ಯವೇನೂ ಇಲ್ಲ. ಏಕೆಂದರೆ ಗುಣವು ಬೇರೆಯಾದರೂ ಗುಣಿಯು ಉಳಿದು ಕೊಳ್ಳುತ್ತದೆ, ವಿಶಿಷ್ಟತೆಯ ಅರಿವೂ ಇರುತ್ತದೆ. ಆದರೆ ಭೇದಾ-ಭೇದ ಬುದ್ಧಿಯನ್ನು ನಿಯಾಮಕ ಮಾಡುವ ವಿಶೇಷಸಂಬಂಧವನ್ನು ಹೇಳಲೇಬೇಕಾಗುವುದು. ಹಾಗೆಯೇ ಅದನ್ನು ಸಮವಾಯವೆಂದಾಗಲಿ ತಾದಾತ್ಮ್ಯವೆಂದಾಗಲಿ ಕೇವಲ ಹೆಸರಿನಲ್ಲಿ ಭಿನ್ನತೆಯಿದೆ. ಎರಡು ಸಂಬಂಧಿಗಳಲ್ಲದೆ ಸಂಬಂಧವಾದರೋ ಸಿದ್ಧವಾದುದೇ-

ತಾದಾತ್ಮ್ಯವನ್ನು ಸ್ವರೂಪವೇ ಎನ್ನುವಿರಾದರೆ ಅದನ್ನು ನಾವೂ ಸಹ ಅದನ್ನೇ ಹೇಳಿದ್ದೇವೆ, ಶಬ್ದಗಳ ಭಿನ್ನತೆಯಷ್ಟೆ.

ವಿವರಣೆ: ತಾದಾತ್ಮ್ಯವನ್ನು ಸ್ವರೂಪವೆಂದರೆ ಅದಕ್ಕೆ ನಮ್ಮ ಒಪ್ಪಿಗೆಯುಂಟು.

ಭಾಷ್ಯ: *ಪ್ರಕೃತೇಃ ಕ್ಷೋಭಾತ್ ಪ್ರಕೃತಿಪುರುಷಸಂಯೋಗಃ ತಸ್ಮಾತ್ ಸೃಷ್ಟಿರಿತಿ ಸಿದ್ಧಾಂತಃ । ತತ್ರಾಯಂ ನಾಸ್ತಿಕಾನಾಮಾಕ್ಷೇಪಃ – ನಾಸ್ತಿ ಕ್ಷೋಭಾಖ್ಯಾ ಕಸ್ಯಾಪಿ ಕ್ರಿಯಾ, ಸರ್ವಂ ವಸ್ತುಕ್ಷಣಿಕಂ ಯತ್ರೋತ್ಪದ್ಯತೇ ತತ್ರೈವ ವಿನಶ್ಯತೀತಿ ನ ದೇಶಾಂತರಸಂಯೋಗೋನ್ನೇಯಾಕ್ರಿಯಾ ಸಿಧ್ಯತೀತಿ । ತತ್ರಾಹ –*

ಅನುವಾದ: ಪ್ರಕೃತಿಯ ಕ್ಷೋಭದಿಂದ ಪ್ರಕೃತಿ–ಪುರುಷರ ಸಂಯೋಗವಾಗುವುದು, ಅದರಿಂದ ಸೃಷ್ಟಿಯಾಗುವುದು ಎಂಬುದು ಸಿದ್ಧಾಂತ. ಈ ವಿಷಯದಲ್ಲಿ ನಾಸ್ತಿಕರು ಹೀಗೆ ಆಕ್ಷೇಪವನ್ನು ಮಾಡಿದ್ದಾರೆ– ಕ್ಷೋಭೆಯೆಂಬ ಯಾವುದೇ ಕ್ರಿಯೆಯಿಲ್ಲ. ಎಲ್ಲ ವಸ್ತುಗಳೂ ಕ್ಷಣಿಕ, ಎಲ್ಲಿ ವಸ್ತುವು ಉತ್ಪನ್ನವಾಗುವುದೋ ಅಲ್ಲಿಯೇ ನಾಶವೂ ಆಗಿಬಿಡುವುದು. ಆದ್ದರಿಂದ ದೇಶಾಂತರ ಸಂಯೋಗದಿಂದ ಅನುಮಾನಿಸಲ್ಪಡುವ ಕ್ರಿಯೆಯ ಸಿದ್ಧಿಯು ಸಾಧ್ಯವಾಗಲಾರದು. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ನಾನುಮೇಯತ್ವಮೇವ ಕ್ರಿಯಾಯಾ ನೇದಿಷ್ಠಸ್ಯ ತತ್ತದ್ವತೋಃ ಏವ ಅಪರೋಕ್ಷಪ್ರತೀತೇಃ ॥ ೧೦೧ ॥

ಸೂತ್ರಾನುವಾದ: ಕ್ರಿಯೆಯು ಅನುಮಾನದಿಂದಲೇ ತಿಳಿಯಲ್ಪಡಬೇಕು ಎಂಬುದಿಲ್ಲ. ಏಕೆಂದರೆ ಸಮೀಪದಲ್ಲಿರುವ ದರ್ಶಕನಿಗೆ ಕ್ರಿಯೆ ಮತ್ತು ಕ್ರಿಯಾವಾನ್ ಪ್ರತ್ಯಕ್ಷಪ್ರತೀತಿಯಾಗುವುದು.

ಭಾಷ್ಯ: *ನ ದೇಶಾಂತರ ಸಂಯೋಗಾದಿನಾ ಕ್ರಿಯಾಯಾಃ ಅನುಮೇಯತ್ವಮೇವ । ಯತೋ ನೇದಿಷ್ಠಸ್ಯ ನಿಕಟಸ್ಥಸ್ಯ ದ್ರಷ್ಟುಃ ಕ್ರಿಯಾಕ್ರಿಯಾವತೋಃ ಪ್ರತ್ಯಕ್ಷೇಣಾಪಿ ಪ್ರತೀತಿರಸ್ತಿ ವೃಕ್ಷಶ್ಚಲತೀತ್ಯಾದಿರಿತ್ಯರ್ಥಃ ।*

ಅನುವಾದ: ಒಂದು ಪ್ರದೇಶದಿಂದ ಬೇರೊಂದು ಪ್ರದೇಶಕ್ಕೆ ಸಂಯೋಗಾದಿಗಳಿಂದ ಕ್ರಿಯೆಯನ್ನು ಅನುಮಾನ ಮಾಡಬಹುದು ಎಂಬುದು ಸರಿಯಲ್ಲ. ಏಕೆಂದರೆ 'ನೇದಿಷ್ಠಸ್ಯ' ಎಂದರೆ ಅತ್ಯಂತ ಸಮೀಪದಲ್ಲಿರುವ ದರ್ಶಕನಿಗೆ ಕ್ರಿಯೆ ಮತ್ತು ಕ್ರಿಯಾವಾನ್ ಎರಡೂ ಪ್ರತ್ಯಕ್ಷದಿಂದ ಅರಿಯಲು ಸಾಧ್ಯ. 'ವೃಕ್ಷವು ಚಲಿಸುತ್ತದೆ' ಎಂಬುದೂ ಪ್ರತ್ಯಕ್ಷದಿಂದಲೇ ತಿಳಿಯಬಹುದು.

ಭಾಷ್ಯ: *ತೃತೀಯಾಧ್ಯಾಯೇ ಶರೀರಸ್ಯ ಪಾಂಚಭೌತಿಕತ್ವಾದಿರೂಪೈಃ ಮತಭೇದಾ ಏವೋಕ್ತಾ ನ ತು ವಿಶೇಷೋಽವಧೃತಃ । ಅತ್ರ ಅಪರಪಕ್ಷಂ ಪ್ರತಿಷೇಧತಿ ।*

ಅನುವಾದ: ಮೂರನೆಯ ಅಧ್ಯಾಯದಲ್ಲಿ ಶರೀರವು ಐದು ಭೂತಗಳಿಂದ ಕೂಡಿರುವುದನ್ನು ಕುರಿತು ಅಭಿಪ್ರಾಯಗಳನ್ನು ಒಪ್ಪಿರುವುದನ್ನೂ, ಒಪ್ಪದಿರುವುದನ್ನೂ ಹೇಳಲಾಗಿದೆ; ಅಲ್ಲಿ ವಿಶೇಷ ಅಭಿಪ್ರಾಯವನ್ನು ನೀಡಿಲ್ಲ. ಇಲ್ಲಿ ಈ ವಿಷಯದಲ್ಲಿ ಪರಪಕ್ಷವನ್ನು ಖಂಡಿಸಲಾಗಿದೆ.

ಸೂತ್ರ: ನ ಪಾಂಚಭೌತಿಕಂ ಶರೀರಂ ಬಹೂನಾಂ ಉಪಾದಾನಾಯೋಗಾತ್ ॥ ೧೦೨ ॥

ಸೂತ್ರಾನುವಾದ: ಶರೀರವು ಪಾಂಚಭೌತಿಕವಾದುದಲ್ಲ, ಏಕೆಂದರೆ ವಿಜಾತೀಯವಾದ ಪದಾರ್ಥಗಳು ಉಪಾದಾನವಾಗಿಲ್ಲದ ಕಾರಣ.

ಭಾಷ್ಯ: *ಬಹೂನಾಂ ಭಿನ್ನವಿಜಾತೀಯಾನಾಂ ಚೋಪಾದಾನತ್ವಂ ಘಟಪಟಾದಿಸ್ಥಲೇ ನ ದೃಷ್ಟಮಿತಿ ಸಜಾತೀಯಮೇವೋಪಾದಾನಮ್। ಇತರಚ್ಚ ಭೂತಚತುಷ್ಟಯಂ ಉಪಷ್ಟಂಭಕಮಿತ್ಯಾಶಯೇನ ಪಾಂಚಭೌತಿಕವ್ಯವಹಾರಃ । ಏಕೋಪಾದಾನಕತ್ವೇಽಪಿ ಪೃಥ್ವೀ ಏವ ಉಪಾದಾನಂ ಸರ್ವಶರೀರಸ್ಯ ಇತಿ ವಕ್ಷ್ಯತಿ ।*

ಅನುವಾದ: ಅನೇಕ ಭಿನ್ನಜಾತಿಯ ಪದಾರ್ಥಗಳ ಉಪಾದಾನತ್ವವು ಘಟ–ವಸ್ತ್ರ ಮುಂತಾದ ಸ್ಥಳಗಳಲ್ಲಿ ಕಾಣಬರದು, ಸಜಾತೀಯ ವಸ್ತುಗಳನ್ನು ಉಪಾದಾನವಾಗಿ ಹೊಂದಿರುವ ಕಾರಣ. ಒಂದನ್ನೇ ಉಪಾದಾನವಾಗಿ ಹೊಂದಿರುವ ಕಾರಣ ಸಮಸ್ತ ಶರೀರಕ್ಕೆ ಪೃಥಿವಿಯೊಂದೇ ಉಪಾದಾನವೆಂದು ಹೇಳುತ್ತಾರೆ.

ಭಾಷ್ಯ: *ಸ್ಥೂಲಮೇವ ಶರೀರಮಿತಿ ಕೇಚಿತ್ । ತನ್ನಿರಾಕರೋತಿ –*

ಅನುವಾದ: ಕೆಲವರು 'ಸ್ಥೂಲಶರೀರವೊಂದೇ' ಎಂದು ಹೇಳುವರು. ಅದನ್ನು ನಿರಾಕರಿಸುತ್ತಾರೆ.

ವಿವರಣೆ: ಸ್ಥೂಲಶರೀರವೊಂದೇ, ಸೂಕ್ಷ್ಮಶರೀರವಿಲ್ಲ ಎಂದು ವಾದಿಸುತ್ತಾರೆ.

ಸೂತ್ರ: ನ ಸ್ಥೂಲಮಿತಿ ನಿಯಮ ಆತಿವಾಹಿಕಸ್ಯಾಪಿ ವಿದ್ಯಮಾನತ್ವಾತ್ ॥ ೧೦೩ ॥

ಸೂತ್ರಾನುವಾದ: ಶರೀರವು ಸ್ಥೂಲವಾಗಿರಬೇಕೆಂಬ ನಿಯಮವಿಲ್ಲ, ಪರಲೋಕಕ್ಕೆ ಹೋಗುವ ಶರೀರವೂ ಇರುವುದರಿಂದ ಸೂಕ್ಷ್ಮಶರೀರವೂ ಇರಬೇಕು.

ಭಾಷ್ಯ: *ಇಂದ್ರಿಯಾಶ್ರಯತ್ವಂ ಶರೀರತ್ವಮ್ ।*
ಯನ್ಮೂರ್ತ್ಯವಯವಾಃ ಸೂಕ್ಷ್ಮಾಸ್ತಸ್ಯೇಮಾನಿ ಆಶ್ರಯಂತಿ ಷಟ್ ।
ತಸ್ಮಾಚ್ಛರೀರಮಿತ್ಯಾಹುಸ್ತಸ್ಯ ಮೂರ್ತಿಂ ಮನೀಷಿಣಃ ॥ (ಮನು ೧.೧೭)

ಅನುವಾದ: ಇಂದ್ರಿಯಗಳಿಗೆ ಆಶ್ರಯವಾದುದೇ ಶರೀರ. ಯಾವ ಮೂರ್ತಿಯನ್ನು ಸೂಕ್ಷ್ಮವಾದ ಅವಯವಗಳಾದ ಈ ಆರು ಇಂದ್ರಿಯಗಳು ಆಶ್ರಯಿಸಿರುವುವೋ ಆ ಕಾರಣದಿಂದ ಅಂತಹ ಮೂರ್ತಿಯನ್ನು ಪಂಡಿತರು ಶರೀರವೆನ್ನುವರು.

ಭಾಷ್ಯ: *ಇತಿ ಮನುವಾಕ್ಯಾತ್ । ಏತಾದೃಶಂ ಚ ಶರೀರಂ ಸ್ಥೂಲಂ ಪ್ರತ್ಯಕ್ಷಮೇವೇತಿ ನ ನಿಯಮಃ । ಕುತಃ । ಆತಿವಾಹಿಕಸ್ಯ ಅಪ್ರತ್ಯಕ್ಷತಯಾ ಸೂಕ್ಷ್ಮಸ್ಯ ಭೌತಿಕಸ್ಯ ಶರೀರಾಂತರಸ್ಯಾಪಿ ಸತ್ತ್ವಾದಿತ್ಯರ್ಥಃ ।*

ಲೋಕಾಲ್ಲೋಕಾಂತರಂ ಲಿಂಗದೇಹಮತಿವಾಹಯತಿ ಇತಿ ಆತಿ–ವಾಹಿಕಮ್ । ಭೂತಾಶ್ರಯತಾ ವಿನಾ ಚಿತ್ರಾದಿವತ್ ಗಮನಾಭಾವಸ್ಯ ಪ್ರಾಗೇವೋಕ್ತತ್ವಾತ್ । ಇದಂ ಚ ಸೂತ್ರಂ ತಸ್ಯೈವ ಸ್ಪಷ್ಟೀಕರಣ। ಮಾತ್ರಾರ್ಥಮ್ । ಲಿಂಗಸ್ಯ ಶರೀರತ್ವಂ ಭೋಗಾಶ್ರಯತಯಾ ಪುರುಷಪ್ರತಿಬಿಂಬಾಶ್ರಯತಯಾ ವೇತಿ ಬೋಧ್ಯಮ್ । ಆತಿವಾಹಿಕ–ಶರೀರೇ ಚ ಪ್ರಮಾಣಮ್ ।

ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ । (ಕ.ಉ. ೧.೬.೧೭)

'ಅಂಗುಷ್ಠಮಾತ್ರಂ ಪುರುಷಂ ನಿಶ್ಚಕರ್ಷ ಬಲಾದ್ಯಮಃ । (ಮ.ಭಾ.ವ.ದ. ೨೯೭.೧೭) ಇತಿ ಶ್ರುತಿಸ್ಮೃತೀ । ನ ಹಿ ಲಿಂಗಶರೀರಸ್ಯ ಸಕಲಶರೀರ–ವ್ಯಾಪಿತಃ ಸ್ವತಃ ಅಂಗುಷ್ಠಮಾತ್ರಂ ಸಂಭವತಿ । ಅತ್ರ ಆಧಾರಸ್ಯಾಂಗುಷ್ಠ–ಮಾತ್ರ ಅರ್ಥಾತ್ ಸಿದ್ಧ್ಯತಿ । ಯಥಾ ದೀಪಸ್ಯ ಸರ್ವಗೃಹವ್ಯಾಪಿತ್ವೇಽಪಿ ಕಲಿಕಾಕಾರತ್ವಂ ತೈಲವರ್ತ್ಯಾದಿ ಸೂಕ್ಷ್ಮಾಂಶಸ್ಯ ದಶೋಪರಿ ಸಂಪಿಂಡಿತಸ್ಯ ಪಾರ್ಥಿವಭಾಗಸ್ಯ ಕಲಿಕಾಕಾರತಯಾ, ತಥೈವ ಲಿಂಗದೇಹಸ್ಯ ದೇಹವ್ಯಾಪಿತ್ವೇಽಪಿ ಅಂಗುಷ್ಠಪರಿಮಾಣತ್ವಂ ಸೂಕ್ಷ್ಮಭೂತಸ್ಯಾಂಗುಷ್ಠ–ಪರಿಮಾಣತ್ವೇನ ಅನುಮೇಯಮಿತಿ ।

ಅನುವಾದ: ಎಂದು ಮನುವಾಕ್ಯವಿರುವುದರಿಂದ, ಇಂತಹ ಶರೀರವು ಸ್ಥೂಲವೂ ಮತ್ತು ಪ್ರತ್ಯಕ್ಷವೂ ಇರಬೇಕೆಂಬ ನಿಯಮವಿಲ್ಲ. ಏಕೆ? ಪರಲೋಕಕ್ಕೆ ಹೋಗುವ ಶರೀರವು ಪ್ರತ್ಯಕ್ಷವಲ್ಲ; ಸೂಕ್ಷ್ಮವಾದ ಶರೀರದೊಳಗಿನದಾದರೂ ಅದು ಜೀವವೇ.

ಲೋಕದಿಂದ ಲೋಕಾಂತರಕ್ಕೆ ಲಿಂಗದೇಹವನ್ನು ಕೊಂಡೊಯ್ಯುವುದರಿಂದ (ಸೂಕ್ಷ್ಮ ಶರೀರಕ್ಕೆ) 'ಆತಿವಾಹಿಕ' ಎಂದು ಹೇಳುವರು. ಭೂತಾಶ್ರಯವಿಲ್ಲದೇ ಚಿತ್ರಾದಿಗಳಂತೆ ಚಲನೆಯಿಲ್ಲದೆ ಇರುವುದು ಎಂದು ಹಿಂದೆಯೇ ಹೇಳಿದ್ದೇವೆ. ಈ ಸೂತ್ರವೂ ಸಹ ಅದನ್ನು ಮತ್ತಷ್ಟು ಸ್ಪಷ್ಟಪಡಿಸಲು ಹೇಳಲ್ಪಟ್ಟಿದೆ; ಲಿಂಗದ ಶರೀರವು ಭೋಗಕ್ಕೆ ಆಶ್ರಯವಾಗಿರುವುದರಿಂದ ಅಥವಾ ಪುರುಷನ ಪ್ರತಿಬಿಂಬಕ್ಕೆ ಆಶ್ರಯವಾಗಿರು ವುದರಿಂದ ಎಂದು ತಿಳಿಯಬೇಕು. ಆತಿವಾಹಿಕ ಶರೀರಕ್ಕೆ ಪ್ರಮಾಣವು ಹೀಗಿದೆ–

'ಅಂತರಾತ್ಮನಾದ ಪುರುಷನು ಅಂಗುಷ್ಠಮಾತ್ರದಷ್ಟಿದ್ದಾನೆ. ಇವನು ಜನಗಳ ಹೃದಯದಲ್ಲಿ ಯಾವಾಗಲೂ ಇರುವನು. (ಕಠೋಪನಿಷತ್ತು)

'ಅಂಗುಷ್ಠಮಾತ್ರದ ಪುರುಷನನ್ನು ಯಮನು ಬಲವಂತವಾಗಿ ಸೆಳೆದುಬಿಟ್ಟನು (ಮಹಾಭಾರತ) ಎಂದು ಶ್ರುತಿ, ಸ್ಮೃತಿಗಳು ಹೇಳುತ್ತವೆ. ಲಿಂಗಶರೀರದ (ಪರಿಮಾಣ)

ಸಮಸ್ತ ಶರೀರವನ್ನು ವ್ಯಾಪಿಸಿರುವಂತಿರುವಾಗ ತಾನು ಅಂಗುಷ್ಠಮಾತ್ರವಿದ್ದರೆ ಸಾಧ್ಯವಾಗದು. ಆದ್ದರಿಂದ ಅದರ ಆಧಾರ ಅಂಗುಷ್ಠಪರಿಮಾಣದಷ್ಟಿರಬಹುದು ಎಂಬುದು ಅರ್ಥದಿಂದ (ಅರ್ಥಾಪತ್ತಿಯಿಂದ) ಸಿದ್ಧವಾಗುತ್ತದೆ. ಹೇಗೆ ದೀಪವು ಇಡೀ ಮನೆಯನ್ನು ವ್ಯಾಪಿಸಿದರೂ ಅದು ಮೊಗ್ಗಿನಂತೆ ಇರುವುದರಿಂದ ಎಣ್ಣೆ, ಬತ್ತಿ ಮುಂತಾದ ಸೂಕ್ಷ್ಮಾಂಶದ ದಶೆಯ ಮೇಲೆ ಸೇರಿ ದಪ್ಪನಾದ ಮೊಗ್ಗಿನ ರೂಪದ, ಅದೇ ರೀತಿ ಲಿಂಗದೇಹವು ದೇಹವನ್ನೆಲ್ಲ ವ್ಯಾಪಿಸುವಾಗಲೂ ಇರುವ ಅಂಗುಷ್ಠಪರಿಮಾಣದ ಸ್ಥಿತಿಯನ್ನು ಸೂಕ್ಷ್ಮಭೂತದ ಅಂಗುಷ್ಠಪರಿಮಾಣವೆಂದು ಅನುಮಾನ ಮಾಡಬಹುದು.

ವಿವರಣೆ: ಆತಿವಾಹಿಕಶರೀರವೆಂದರೆ ಸ್ಥೂಲಶರೀರವನ್ನು ಬಿಟ್ಟ ನಂತರ ಜೀವನು ಲೋಕಾಂತರವನ್ನು ಪ್ರವೇಶಿಸುವವರೆಗೆ ಇರುವ ಸೂಕ್ಷ್ಮ ಶರೀರ.

ಭಾಷ್ಯ: *ಗೋಲಕೇಭ್ಯೋಽತಿರಿಕ್ತಾನೀಂದ್ರಿಯಾಣಿ ಪ್ರಾಗುಕ್ತಾನಿ. ತದುಪಪಾದನಾಯ ಇಂದ್ರಿಯಾಣಾಂ ಅಪ್ರಾಪ್ತಪ್ರಕಾಶಕತ್ವಂ ನಿರಾಕರೋತಿ ।*

ಅನುವಾದ: ಇಂದ್ರಿಯಗಳು ಕಣ್ಣಿನ ಪಾಪೆ ಮುಂತಾದುವುಗಳಿಗಿಂತ ಭಿನ್ನವೆಂದು ಮೊದಲೇ ಹೇಳಲಾಗಿದೆ. ಅದನ್ನು ಸಮರ್ಥಿಸಲು ಇಂದ್ರಿಯಗಳು ಪ್ರಕಾಶವನ್ನು ಪಡೆಯದಿರುವುದನ್ನು ನಿರಾಕರಿಸುವರು.

ಸೂತ್ರ: ನಾಪ್ರಾಪ್ತಪ್ರಕಾಶಕತ್ವಮಿಂದ್ರಿಯಾಣಾಂ ಅಪ್ರಾಪ್ತೇಃ ಸರ್ವಪ್ರಾಪ್ತೇರ್ವಾ ॥ ೧೦೪ ॥

ಸೂತ್ರಾನುವಾದ: ಇಂದ್ರಿಯಗಳು (ತಮಗೆ ಸಂಬಂಧಿಸದ ವಸ್ತುಗಳನ್ನು) ಪ್ರಕಾಶಕ್ಕೆ ತರುವುದಿಲ್ಲ ಏಕೆಂದರೆ (ಅವುಗಳೊಡನೆ) ಸಂಬಂಧ ಇಲ್ಲದ ಪ್ರಯುಕ್ತ ಅಥವಾ ಎಲ್ಲ ವಸ್ತುಗಳೊಂದಿಗೂ (ಅಸಂಬದ್ಧ ವಸ್ತುಗಳಿಗೂ) ಜ್ಞಾನ ಉಂಟುಮಾಡ ಬೇಕಾಗುವುದು.

ಭಾಷ್ಯ: *ಸ್ವಾಸಂಬದ್ಧಾರ್ಥಾನೀಂದ್ರಿಯಾಣಿ ನ ಪ್ರಕಾಶಯಂತಿ, ಅಪ್ರಾಪ್ತೇಃ । ಪ್ರದೀಪಾದೀನಾಂ ಅಪ್ರಾಪ್ತಪ್ರಕಾಶಕತ್ವದರ್ಶನಾತ್ । ಅಪ್ರಾಪ್ತಪ್ರಕಾಶಕತ್ವೇ ವ್ಯವಹಿತಾದಿಸರ್ವವಸ್ತು ಪ್ರಕಾಶಕತ್ವಪ್ರಸಂಗಾಚ್ಚ ಇತ್ಯರ್ಥಃ । ಅತೋ ದೂರಸ್ಥಸೂರ್ಯಾದಿ ಸಂಬಂಧಾರ್ಥಂ ಗೋಲಕಾತಿರಿಕ್ತಮಿಂದ್ರಿಯ-ಮಿತಿ ಭಾವಃ । ಕರಣಾನಾಂ ಚಾರ್ಥಪ್ರಕಾಶಕತ್ವಂ ಪುರುಷೇಽರ್ಥ-ಸಮರ್ಪಣದ್ವಾರೈವ, ಸ್ವತೋ ಜಡತ್ವಾತ್ ದರ್ಪಣಸ್ಯ ಮುಖಪ್ರಕಾಶ-ಕತ್ವವತ್ । ಅಥವಾ ಅರ್ಥಪ್ರತಿಬಿಂಬೋದ್ಗ್ರಹಣಂ ಏವ ಅರ್ಥಪ್ರಕಾಶಕತ್ವಮಿತಿ ।*

ಅನುವಾದ: ತನಗೆ ಸಂಬಂಧಿಸದ ವಸ್ತುಗಳ ಪ್ರಕಾಶನವನ್ನು ಇಂದ್ರಿಯಗಳು ಎಂದೂ ಮಾಡಲಾರವು. ಏಕೆಂದರೆ (ಆ ವಸ್ತುಗಳ) ಸಂಬಂಧ ಇರದು. ದೀಪದ ಬೆಳಕು

ವಸ್ತುಗಳ ಸಮೀಪಕ್ಕೆ ಹೋಗದಿರುವಾಗ ಅದು ಇಂದ್ರಿಯದ ಗಮನಕ್ಕೆ ಬಾರದು. ಅಸಂಬದ್ಧವಸ್ತುವಿನ ಜ್ಞಾನ ಪಡೆಯುವುದರಲ್ಲಿ ಮರೆಯಾದ ಎಲ್ಲ ವಸ್ತುಗಳ ಜ್ಞಾನವುಂಟಾಗ ಬೇಕಾಗುವ ಸಂದರ್ಭ ಬರುವುದು. ಆದ್ದರಿಂದ ದೂರವಿರುವ ಸೂರ್ಯಾದಿಗಳ ಸಂಬಂಧವನ್ನು ಪಡೆಯಲು ಇಂದ್ರಿಯವು ಕಣ್ಣಿನ ಪಾಪೆ ಮುಂತಾದುವುಗಳಿಂದ ಭಿನ್ನವಾಗಿರಬೇಕು ಎಂದು ಭಾವ. ಇಂದ್ರಿಯಗಳು ಪದಾರ್ಥಗಳ ಜ್ಞಾನ ಪಡೆಯಲು ಪುರುಷನಲ್ಲಿ ಪದಾರ್ಥಗಳ ಸಮರ್ಪಣೆ ಮೂಲಕ ಸಾಧ್ಯ; ತಾನೇ ಜಡವಾದ್ದರಿಂದ ಕನ್ನಡಿಯು ಮುಖವನ್ನು ಪ್ರಕಾಶಗೊಳಿಸುವಂತೆ ಎಂದು ತಿಳಿಯಬೇಕು. ಅಥವಾ ಪದಾರ್ಥದ ಪ್ರತಿಬಿಂಬವನ್ನು ಸರಿಯಾಗಿ ಗ್ರಹಿಸುವುದೇ ಅರ್ಥಪ್ರಕಾಶಕತ್ವ (ವಸ್ತುವಿನ ಜ್ಞಾನ).

ಭಾಷ್ಯ: *ನನ್ವೇವಂ ಚಕ್ಷುಷಃ ತೈಜಸತ್ತ್ವಮೇವ ಯುಕ್ತಮ್, ತೇಜಸ ಏವ ಕಿರಣರೂಪೇಣ ಆಶುದೂರಾಪಸರ್ಪಣದರ್ಶನಾತ್ ಇತಿ ಶಂಕಾಂ ನಿರಾಕರೋತಿ ।*

ಅನುವಾದ: ಹೀಗೆ ಕಣ್ಣೇ ತೈಜಸವೆಂದು ಏಕೆ ಹೇಳಬಾರದು? ತೇಜಸ್ಸೇ ಕಿರಣರೂಪದಲ್ಲಿ ಕೂಡಲೇ ದೂರಹೋಗಿ ನೋಡುವುದಲ್ಲವೆ? ಎಂಬ ಈ ಶಂಕೆಯನ್ನು ಹೋಗಲಾಡಿಸುತ್ತಾರೆ.

ಸೂತ್ರ: ನ ತೇಜೋಽಪಸರ್ಪಣಾತ್ತೈಜಸಂ ಚಕ್ಷುರ್ವೃತ್ತಿತಃ ತತ್ಸಿದ್ಧೇಃ ॥ ೧೦೫ ॥

ಸೂತ್ರಾನುವಾದ: ತೇಜಸ್ಸು ಹೊರಗೆ ಹೋಗುವುದರಿಂದ ಕಣ್ಣನ್ನು ತೈಜಸವೆಂದೇ ಹೇಳುವುದು ಸರಿಯಲ್ಲ. ಕಣ್ಣಿನ ವೃತ್ತಿಯಿಂದಲೇ (ದೂರದ ವಸ್ತುವನ್ನು ಗ್ರಹಿಸುವುದು) ಸಾಧ್ಯವಾಗುವುದು.

ಭಾಷ್ಯ: *ತೇಜಸೋಽಪಸರ್ಪಣಂ ದೃಷ್ಟಮಿತಿ ಕೃತ್ವಾ ತೈಜಸಂ ಚಕ್ಷುರ್ನ ವಾಚ್ಯಮ್। ಕುತಃ? ಅತೈಜಸತ್ವೇಽಪಿ ಪ್ರಾಣವದೇವ ವೃತ್ತಿಭೇದೇನ ಅಪಸರ್ಪಣೋಪಪತ್ತೇರಿತ್ಯರ್ಥಃ । ಯಥಾ ಹಿ ಪ್ರಾಣಃ ಶರೀರಂ ಅಸಂತ್ಯಜ್ಯೈವ ನಾಸಾಗ್ರಾದ್ಬಹಿಃ ಕಿಯದ್ದೂರಂ ಪ್ರಾಣನಾಽಽಖ್ಯವೃತ್ತ್ಯಾ ಅಪಸರತಿ । ಏವಮೇವ ಅತೈಜಸದ್ರವ್ಯಮಪಿ ಚಕ್ಷುಃ ದೇಹಂ ಅಸಂತ್ಯಜ್ಯಾಪಿ ವೃತ್ತ್ಯಾಖ್ಯ ಪರಿಣಾಮವಿಶೇಷೇಣ ಝುಟಿತ್ಯೇವ ದೂರಸ್ಥಂ ಸೂರ್ಯಾದಿಕಂ ಪ್ರತ್ಯಪಸರೇದಿತಿ ।*

ಅನುವಾದ: ತೇಜಸ್ಸು (ಚಕ್ಷುವಿನಿಂದ ಪದಾರ್ಥದ ಕಡೆಗೆ) ಹೋಗುವುದು ಎಂದು ಕಾಣವುದು ಎಂದು ಭಾವಿಸಿ ಚಕ್ಷುಸ್ಸು ತೈಜಸವೆಂದು ತಿಳಿಯುವುದು ಸರಿಯಲ್ಲ ಏಕೆ? ಅದು ತೈಜಸವಲ್ಲದಿದ್ದರೂ ಪ್ರಾಣದಂತೆ ವೃತ್ತಿಭೇದದಿಂದ ಚಲಿಸುವಂತೆ ತೋರುವುದು ಎಂದರ್ಥ. ಹೇಗೆಂದರೆ– ಶರೀರದಿಂದ ಹೋಗದಿದ್ದರೂ ಪ್ರಾಣವು ಮೂಗಿನ ಅಂಚಿನ ಹೊರಗೆ ಸ್ವಲ್ಪದೂರ 'ಪ್ರಾಣನ'ವೆಂಬ ವೃತ್ತಿಯಿಂದ ಚಲಿಸುತ್ತದೆ. ಹಾಗೆಯೇ ಅತೈಜಸದ್ರವ್ಯವೂ ಸಹ ಅತೈಜಸದ್ರವ್ಯಾತ್ಮಕವಾದ ಚಕ್ಷುರಿಂದ್ರಿಯವು

ದೇಹವನ್ನು ಬಿಡದೆಯೇ ವೃತ್ತಿ ಎಂಬ ಪರಿಣಾಮವಿಶೇಷದಿಂದ ಕೂಡಲೆ ದೂರವಿರುವ ಸೂರ್ಯಾದಿಗಳನ್ನು ಕುರಿತು ಚಲಿಸುವುದು ಎಂದರ್ಥ.

ಭಾಷ್ಯ: *ನನು ಏವ ಭೂತವೃತ್ತೌ ಕಿಂ ಪ್ರಮಾಣಂ, ತತ್ರಾಹ–*

ಅನುವಾದ: ಹಾಗಾದರೆ ಹೀಗೆ ಹೇಳಲು ಏನು ಪ್ರಮಾಣ? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಪ್ರಾಪ್ತಾರ್ಥಪ್ರಕಾಶಲಿಂಗಾತ್ ವೃತ್ತಿಸಿದ್ಧಿಃ ॥ ೧೦೬ ॥

ಸೂತ್ರಾನುವಾದ: ದೊರೆತ ವಸ್ತುವಿನ ಜ್ಞಾನವೆಂಬ ಲಿಂಗದಿಂದಲೇ (ಇಂದ್ರಿಯ) ವೃತ್ತಿಯ ಅಸ್ತಿತ್ವ ತಿಳಿಯುವುದು.

ಭಾಷ್ಯ: *ಸುಗಮಮ್ ।*

ಅನುವಾದ: ಸುಲಭವಾಗಿದೆ.

ಭಾಷ್ಯ: *ದೇಹಮಪರಿತ್ಯಜ್ಯಾಪಿ ಗಮನೋಪಪತ್ತಯೇ ವೃತ್ತೇಃ ಸ್ವರೂಪಂ ದರ್ಶಯತಿ ।*

ಅನುವಾದ: ದೇಹವನ್ನು ತ್ಯಜಿಸದೆಯೇ ಹೋಗುವುದನ್ನು ತಿಳಿಯಲು ವೃತ್ತಿಯ ಸ್ವರೂಪವನ್ನು ತಿಳಿಸುವರು.

ಸೂತ್ರ: ಭಾಗಗುಣಾಭ್ಯಾಂ ತತ್ತ್ವಾಂತರಂ ವೃತ್ತಿಃ ಸಂಬಂಧಾರ್ಥಂ ಸರ್ಪತೀತಿ ॥ ೧೦೭ ॥

ಸೂತ್ರಾನುವಾದ: ವೃತ್ತಿಯು ಭಾಗ ಮತ್ತು ಗುಣಗಳಿಗಿಂತ ಭಿನ್ನವಾದ ಪದಾರ್ಥವಾಗಿದೆ, ಎಂದು, ಏಕೆಂದರೆ (ಇಂದ್ರಿಯ–ವಿಷಯಗಳ) ಸಂಬಂಧಕ್ಕಾಗಿ (ಇಂದ್ರಿಯವು ವಿಷಯದತ್ತ) ಹೋಗುವುದು.

ಭಾಷ್ಯ: *ಸಂಬಂಧಾರ್ಥಂ ಸರ್ಪತೀತಿ ಹೇತೋಃ ಚಕ್ಷುರಾದೇಃ ಭಾಗಃ ವಿಸ್ಫುಲಿಂಗವತ್ ವಿಭಕ್ತಾಂಶೋ ರೂಪಾದಿವತ್ ಗುಣಶ್ಚ ನ ವೃತ್ತಿಃ, ಕಿಂತು ತದೇಕದೇಶಭೂತಾ ಭಾಗಗುಣಾಭ್ಯಾಂ ಭಿನ್ನಾವೃತ್ತಿಃ । ವಿಭಾಗೇ ಹಿ ಸತಿ ತದ್ದ್ವಾರಾ ಚಕ್ಷುಷಃ ಸೂರ್ಯಾದಿಸಂಬಂಧೋ ನ ಘಟತೇ । ಗುಣತ್ವೇ ಚ ಸರ್ಪಣಾಖ್ಯಕ್ರಿಯಾನುಪಪತ್ತೇಃ ಇತ್ಯರ್ಥಃ। ಏತೇನ ಬುದ್ಧಿವೃತ್ತಿರಪಿ ಪ್ರದೀಪಶಿಖಾವತ್ ದ್ರವ್ಯರೂಪ ಏವ ಪರಿಣಾಮಃ ಸ್ವಚ್ಛತಯಾ ಅರ್ಥಾಕಾರತೋದ್ಗ್ರಾಹೀ ನಿರ್ಮಲವಸ್ತ್ರವತ್ ಇತಿ ಸಿದ್ಧಮ್ ।*

ಅನುವಾದ: (ವಸ್ತುವಿನ) ಸಂಬಂಧವನ್ನು ಕಲ್ಪಿಸಿಕೊಳ್ಳಲು ಚಲಿಸುವುದು ಎಂಬ ಕಾರಣದಿಂದ ಚಕ್ಷುರಾದಿಭಾಗಗಳು ಕಿಡಿಗಳಂತೆ ತನ್ನ ಭಾಗಗಳನ್ನು ರೂಪಾದಿಗಳಂತೆ ಗುಣವೂ ವೃತ್ತಿಗಳಾಗಲಾರವು. ಆದರೆ ಆ ಸ್ಥಳದಲ್ಲಿಯೇ ಇದ್ದು ಭಾಗ ಮತ್ತು ಗುಣಗಳಿಗಿಂತ ಭಿನ್ನವಾಗಿ ವೃತ್ತಿಯಿರುತ್ತದೆ (ವೃತ್ತಿಯ) ವಿಭಾಗವಿರಲಾಗಿ ಅದರ ಮುಖಾಂತರ ಕಣ್ಣಿಗೆ ಸೂರ್ಯಾದಿಸಂಬಂಧವು ಸಂಭವಿಸದು. (ಚಕ್ಷುಸ್ಸನ್ನು)

ಗುಣವೆಂದರೆ ಚಲಿಸುವುದೆಂಬ ಕ್ರಿಯೆಯು ದೊರೆಯದ ಕಾರಣ (ಅದೂ ಸಾಧ್ಯವಿಲ್ಲ). ಆದ್ದರಿಂದ ಬುದ್ಧಿವೃತ್ತಿಯೂ ಸಹ ದೀಪಶಿಖೆಯಂತೆ ದ್ರವ್ಯರೂಪದಲ್ಲಿಯೇ ಪರಿಣಾಮವಾಗುವುದು. ಆದರೆ ನಿರ್ಮಲವಾಗಿ ವಿಷಯದ ಆಕಾರವನ್ನು ಗ್ರಹಿಸುವುದರಲ್ಲಿ ನಿರ್ಮಲವಸ್ತ್ರದಂತೆ ಎಂಬುದು ಸಿದ್ಧವಾಗುವುದು.

ಭಾಷ್ಯ: *ನನ್ವೇವಂ ವೃತ್ತೀನಾಂ ದ್ರವ್ಯತ್ವೇ ಕಥಮಿಚ್ಛಾದಿರೂಪಗುಣೇಷು ವೃತ್ತಿವ್ಯವಹಾರಸ್ತತ್ರಾಹ ।*

ಅನುವಾದ: ಹೀಗೆ ವೃತ್ತಿಯು ದ್ರವ್ಯವಾದರೆ ಹೇಗೆ ಇಚ್ಛಾದಿರೂಪದ ಬುದ್ಧಿಗುಣಗಳಲ್ಲಿ ವೃತ್ತಿವ್ಯವಹಾರವು ಸಾಧ್ಯ? ಅದಕ್ಕೆ ಹೇಳಿದ್ದಾರೆ–

ಸೂತ್ರ: ನ ದ್ರವ್ಯನಿಯಮಸ್ತದ್ಯೋಗಾತ್ ॥ ೧೦೮ ॥

ಸೂತ್ರಾನುವಾದ: (ವೃತ್ತಿಯು) ದ್ರವ್ಯವೆಂಬ ನಿಯಮವೇನಿಲ್ಲ; ಏಕೆಂದರೆ ಅದಕ್ಕೆ ಯೌಗಿಕ ಅರ್ಥ ಉಂಟಾಗುವುದು.

ಭಾಷ್ಯ: *ವೃತ್ತಿರ್ದ್ರವ್ಯಮೇವೇತಿ ನಿಯಮೋ ನಾಸ್ತಿ । ಕುತಃ? ತದ್ಯೋಗಾತ್ । ತತ್ರ ವೃತ್ತೌ ಯೋಗಾರ್ಥಸತ್ತ್ವಾತ್ । 'ವೃತ್ತಿರ್ವರ್ತನಜೀವನೇ' ಇತಿ ಹಿ ಯೌಗಿಕೋಽಯಂ ಶಬ್ದಃ । ಜೀವನಂ ಚ ಸ್ವಸ್ಥಿತಿ ಹೇತುರ್ವ್ಯಾಪಾರಃ । 'ಜೀವ ಬಲಪ್ರಾಣಧಾರಣಯೋಃ' ಇತ್ಯನುಶಾಸನಾತ್, ವೈಶ್ಯವೃತ್ತಿಃ ಶೂದ್ರವೃತ್ತಿಃ ಇತ್ಯಾದಿವ್ಯವಹಾರಾಚ್ಚ। ತತ್ರ ಯಥಾ ದ್ರವ್ಯರೂಪಯಾವೃತ್ತ್ಯಾ ಬುದ್ಧಿರ್ಜೀವತಿ ತಥೇಚ್ಛಾಭಿರಪೀತಿ ತೇಽಪಿ ವೃತ್ತಯಃ । ಸರ್ವವಿರೋಧೇನೈವ ಚಿತ್ತಮರಣಾದಿತ್ಯರ್ಥಃ ।*

ಅನುವಾದ: ವೃತ್ತಿಯು ದ್ರವ್ಯವೇ ಆಗಿರಬೇಕೆಂಬ ನಿಯಮವಿಲ್ಲ. ಏಕೆ? ಏಕೆಂದರೆ ಅದು ಯೌಗಿಕ ಅರ್ಥ. ವೃತ್ತಿಯಲ್ಲಿ ಯೋಗಾರ್ಥವಿರುತ್ತದೆ. ಬುದ್ಧಿಶಬ್ದದ ಅರ್ಥ 'ವರ್ತನ', 'ಜೀವನ' ಎಂದು ಯೌಗಿಕ ಅರ್ಥ. ಜೀವನವೆಂದರೆ ತನ್ನ ಸ್ಥಿತಿಗಾಗಿ ಕಾರಣಭೂತವಾದ ಚಟುವಟಿಕೆ. ಜೀವವೆಂದರೆ ಬಲ ಮತ್ತು ಪ್ರಾಣಧಾರಣೆಗಳೆಂದು ನಿಯಮಿಸಿದ್ದಾರೆ. 'ವೈಶ್ಯವೃತ್ತಿ', 'ಶೂದ್ರವೃತ್ತಿ' ಇತ್ಯಾದಿ ವ್ಯವಹಾರಗಳೂ ಇರುವುವು. ಈ ವ್ಯವಹಾರದಲ್ಲಿ ಹೇಗೆ ದ್ರವ್ಯರೂಪದ ವೃತ್ತಿಯಿಂದ ಬುದ್ಧಿಯು ಜೀವಿಸುತ್ತದೆ ಹಾಗೆಯೇ ಗುಣರೂಪದ ಇಚ್ಛಾದಿ (ಗುಣಗಳಿಂದಲೂ) ಇರುತ್ತವೆ, ಅವೂ ಸಹ ವೃತ್ತಿಗಳೇ. ಎಲ್ಲ ವೃತ್ತಿಗಳನ್ನೂ ನಿರೋಧಿಸುವುದರಿಂದಲೇ ಚಿತ್ತವು ನಾಶವಾಗುವುದು.

ವಿವರಣೆ: ವಿಜ್ಞಾನಭಿಕ್ಷುವು ಇಲ್ಲಿ ವೃತ್ತಿ ಎಂಬ ಪದವನ್ನು ವ್ಯಾಪಾರ ಎಂಬರ್ಥದಲ್ಲಿ ಪ್ರಯೋಗಿಸಿದ್ದಾನೆ.

ಭಾಷ್ಯ: *ಇಂದ್ರಿಯಾಣಾಂ ಭೌತಿಕಸ್ಯಾಪಿ ಶ್ರವಣಾತ್ ಕದಾಚಿಲ್ಲೋಕ ವಿಶೇಷಭೇದೇನ ಶ್ರುತಿವ್ಯವಸ್ಥಾ ಶಂಕ್ಯೇತ । ತತ್ರಾಹ–*

ಅನುವಾದ: ಇಂದ್ರಿಯಗಳು ಭೌತಿಕವಾದದ್ದೆಂದು ಶ್ರುತಿಗಳು ಹೇಳಿದರೂ ಯಾವಾಗಲಾದರೂ ಲೋಕವಿಶೇಷದ ಭೇದದಿಂದ ಶ್ರುತಿಯ ವ್ಯವಸ್ಥೆಯನ್ನು ಕುರಿತು ಶಂಕೆ ಬರಬಹುದೆ? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ನ ದೇಶಭೇದೇಽಪ್ಯನ್ಯೋಪಾದಾನತಾಽಸ್ಮದಾದಿವನ್ನಿಯಮಃ ॥ ೧೦೯ ॥

ಸೂತ್ರಾನುವಾದ: ಬೇರೆ ಬೇರೆ ಸ್ಥಳಗಳಲ್ಲಿಯೂ (ಇಂದ್ರಿಯಗಳಿಗೆ) ಬೇರೆ ಬೇರೆ ಉಪಾದಾನಗಳಿರುವುದಿಲ್ಲ; (ಉಪಾದಾನಗಳೆಲ್ಲ) ನಮ್ಮಂತೆಯೇ ಎಲ್ಲೆಡೆ ಇರುವುದೆಂಬುದು ನಿಯಮ.

ಭಾಷ್ಯ: *ನ ಬ್ರಹ್ಮಲೋಕಾದಿದೇಶಭೇದತೋಽಪೀಂದ್ರಿಯಾಣಾಂ ಅಹಂಕಾರಾತಿರಿಕ್ತೋ ಪಾದಾನಕತ್ವಂ, ಕಿಂತು ಅಸ್ಮದಾದೀನಾಂ ಭೂಲೋಕಸ್ಥಾನಮಿವ ಸರ್ವೇಷಾಮೇವ ಆಹಂಕಾರಿಕತ್ವನಿಯಮಃ । ದೇಶಭೇದೇನ ಏಕಸ್ಯೈವ ಲಿಂಗಶರೀರಸ್ಯ ಸಂಚಾರಮಾತ್ರಶ್ರವಣಾತ್ ಇತ್ಯರ್ಥಃ ।*

ಅನುವಾದ: (ಭೂಲೋಕಕ್ಕೆ) ಬ್ರಹ್ಮಲೋಕಾದಿಸ್ಥಳಗಳು ಬೇರೆಯಾಗಿರುವುದರಿಂದ ಇಂದ್ರಿಯಗಳಿಗೆ ಅಹಂಕಾರವನ್ನು ಬಿಟ್ಟು ಬೇರೆ ಉಪಾದಾನ ಕಾರಣವಿರದು. ಆದರೆ ನಮ್ಮಂತೆ ಭೂಲೋಕದಲ್ಲಿರುವವರೆಲ್ಲರಿಗೂ ಅಹಂಕಾರದ ಉಪಾದಾನತ್ವವೇ ನಿಯಮ. ದೇಶಭೇದದಿಂದ ಒಂದೇ ಲಿಂಗಶರೀರದ ಸಂಚಾರವಿರುವುದೆಂದು ಕೇಳಿದ್ದೇವೆ.

ಭಾಷ್ಯ: *ನನ್ವೇವಂ ಭೌತಿಕತ್ವಶ್ರುತಿಃ ಕಥಮುಪಪದ್ಯತಾಮ್? ತತ್ರಾಹ ।*

ಸೂತ್ರ: ನಿಮಿತ್ತವ್ಯಪದೇಶಾತ್ತದ್ವ್ಯಪದೇಶಃ ॥ ೧೧೦ ॥

ಸೂತ್ರಾನುವಾದ: ನಿಮಿತ್ತದ ಪ್ರಾಧಾನ್ಯದ ಕಾರಣ (ಭೌತಿಕಪ್ರಧಾನವಾದ) (ಉಪಾದಾನತ್ವವನ್ನು) ಹೇಳಲಾಗಿದೆ.

ಭಾಷ್ಯ: *ನಿಮಿತ್ತೇಽಪಿ ಪ್ರಾಧಾನ್ಯವಿವಕ್ಷಯೋಪಾದಾನತ್ವವ್ಯಪದೇಶೋ ಭವತಿ । ಯಥಾ ಇಂಧನಾದಗ್ನಿರಿತಿ । ಅತಃ ಭೂತೋಪಾದಾನತ್ವವ್ಯಪದೇಶ ಇತ್ಯರ್ಥಃ । ತೇಜ ಆದಿ ಭೂತೋಪಷ್ಟಂಭೇನೈವ ಹಿ ತದನುಗತಾ-ಹರಿಕಾರಾತ್ ಚಕ್ಷುರಾದೀಂದ್ರಿಯಾಣಿ ಸಂಭವಂತಿ । ಯಥಾ ಪಾರ್ಥಿವೋಪಷ್ಟಂಭೇನ ತದನುಗತಾತ್ ತೇಜಸೋಽಗ್ನಿರ್ಭವತೀತಿ । 'ಅನ್ನಮಯಂ ಹಿ ಸೋಮ್ಯ ಮನಃ' (ಛಾಂ.ಉ. ೬.೫.೪) ಇತ್ಯಾದಿಶ್ರುತಿಸ್ತದುಕ್ತಯುಕ್ತಿಶ್ಚಾತ್ರ ಪ್ರಮಾಣಮ್ ।*

ಅನುವಾದ: ನಿಮಿತ್ತದಲ್ಲಿಯೂ ಪ್ರಾಧಾನ್ಯವನ್ನು ತಿಳಿಸುವ ಉದ್ದೇಶದಿಂದ ಉಪಾದಾನದ ಮುಖ್ಯತೆಯು ಇರುತ್ತದೆ; ಹೇಗೆ ಕಟ್ಟಿಗೆಯಿಂದ ಅಗ್ನಿಯು ಹೆಚ್ಚುವುದೋ ಹಾಗೆ. ಆದ್ದರಿಂದ ಭೂತೋಪಾದಾನತ್ವಕ್ಕೂ ಪ್ರಾಧಾನ್ಯವನ್ನು ನೀಡಲಾಗಿದೆ. ತೇಜಸ್ಸೇ

ಮೊದಲಾದ ಭೂತಗಳ ಆಶ್ರಯದಿಂದಲೇ ಬೆಳೆದಂತೆ ಅಹಂಕಾರದಿಂದ ಚಕ್ಷುರಾದಿ ಇಂದ್ರಿಯಗಳು ಉಂಟಾಗುತ್ತವೆ. ಹೇಗೆ ಪಾರ್ಥಿವ ಉಪಷ್ಟಂಭದಿಂದ ಅಗ್ನಿಯು ಉಂಟಾಗುತ್ತದೆ.

'ಸೋಮ್ಯ, ಮನಸ್ಸು ಅನ್ನಮಯವಾದುದು' ಮುಂತಾದ ಶ್ರುತಿಯೂ ಮತ್ತು ಅದನ್ನು ಹೇಳಿದ ಯುಕ್ತಿಯೂ ಪ್ರಮಾಣವು.

ವಿವರಣೆ: ಬೆಂಕಿ ಉರಿಯುವಾಗ ಸುಡುವುದು ಅಗ್ನಿ, ಅಗ್ನಿ ಹೆಚ್ಚಲು ಕಟ್ಟಿಗೆ ನಿಮಿತ್ತ; ಕಟ್ಟಿಗೆ ಸ್ವತಃ ಸುಡುವುದಿಲ್ಲ. ಹಾಗೆಯೇ ಇಂದ್ರಿಯಗಳು ಕೆಲಸ ಮಾಡಲು ಸಹಕಾರಿಯಾದುವು ಭೂತಗಳು. ಆದರೆ ಅವುಗಳಿಗೆ ಮೂಲ ಅಹಂಕಾರ.

ಭಾಷ್ಯ: *ಸ್ಥೂಲಶರೀರಗತಂ ವಿಶೇಷಂ ಪ್ರಸಂಗಾದವಧಾರಯತಿ ।*

ಸೂತ್ರ: ಊಷ್ಮಜಾಂಡಜಜರಾಯುಜೋದ್ಭಿಜ್ಜಸಾಂಕಲ್ಪಿಕಸಾಂಸಿದ್ಧಿಕಂ ಚೇತಿ ನ ನಿಯಮಃ ॥ ೧೧೧ ॥

ಅನುವಾದ: ಸ್ಥೂಲಶರೀರದಲ್ಲಿರುವ ವಿಶೇಷದ ನಿರ್ಧಾರವನ್ನು ಪ್ರಾಸಂಗಿಕವಾಗಿ ಹೇಳುವರು.

ಸೂತ್ರಾನುವಾದ: ಊಷ್ಮಜ, ಅಂಡಜ, ಜರಾಯುಜ, ಉದ್ಭಿಜ್ಜ, ಸಾಂಕಲ್ಪಿಕ, ಸಾಂಸಿದ್ಧಿಕ ಎಂದು ಆರು ಬಗೆಯ ಶರೀರಗಳಿವೆ. (ವೈಶೇಷಿಕರು ಹೇಳುವ) ನಾಲ್ಕೇ ಬಗೆ ಎಂಬ ನಿಯಮವೇನಿಲ್ಲ.

ವಿವರಣೆ: ಅಂಡಜ–ಮೊಟ್ಟೆಯಿಂದ ಹುಟ್ಟಿದ್ದು (ಹಕ್ಕಿ ಮುಂತಾದುವು), ಊಷ್ಮಜ–ಆವಿಯಿಂದ ಹುಟ್ಟಿದ್ದು, ಜರಾಯುಜ–ಗರ್ಭಕೋಶದಿಂದ ಜನಿಸಿದ್ದು, ಉದ್ಭಿಜ್ಜ–ಮೊಳಕೆ ಹೊರಟು ಹುಟ್ಟಿದ್ದು, ಸಾಂಕಲ್ಪಿಕ–ಸಂಕಲ್ಪದಿಂದ ಹುಟ್ಟಿದ್ದು, ಸಾಂಸಿದ್ಧಿಕ–ಕೃತಕವಾಗಿ ಜನಿಸಿದ್ದು. ಊಷ್ಮಜದಲ್ಲಿ ಸ್ವೇದಜವು ಸೇರಿಹೋಗುತ್ತದೆ.

ಭಾಷ್ಯ: *ತತ್ರ ಊಷ್ಮಕಾಃ ದಂದಶೂಕಾದಯಃ । ಅಂಡಜಾಃ ಪಕ್ಷಿ ಸರ್ಪಾದಯಃ। ಜರಾಯುಜಾ ಮನುಷ್ಯಾದಯಃ । ಉದ್ಭಿಜ್ಜಾಃ ವೃಕ್ಷಾದಯಃ । ಸಂಕಲ್ಪಜಾಃ ಸನಕಾದಯಃ । ಸಾಂಸಿದ್ಧಿಕಾಃ ಮಂತ್ರತಪ–ಆದಿಸಿದ್ಧಿಜಾಃ। ಯಥಾ ರಕ್ತಬೀಜಶರೀರೋತ್ಪನ್ನ ಶರೀರಾದಯಃ ।*

ಅನುವಾದ: ಊಷ್ಮಕಗಳು ಸೊಳ್ಳೆ ಮುಂತಾದುವು, ಅಂಡಜಗಳು ಪಕ್ಷಿ–ಸರ್ಪಾದಿಗಳು, ಜರಾಯುಜಗಳು ಮನುಷ್ಯಾದಿಗಳು, ಉದ್ಭಿಜ್ಜಾಃ ಎಂದರೆ ವೃಕ್ಷಾದಿಗಳು, ಸಂಕಲ್ಪಜರು ಸನಕಾದಿಗಳು, ಸಾಂಸಿದ್ಧಿಕಾಃ ಮಂತ್ರತಪಾದಿ ಸಿದ್ಧಿಗಳಿಂದ ಹುಟ್ಟಿದವರು, ಹೇಗೆಂದರೆ ರಕ್ತಬೀಜದ ಶರೀರದಿಂದ ಉತ್ಪನ್ನವಾದ ಶರೀರವುಳ್ಳವರು.

ಭಾಷ್ಯ: *ಶರೀರಸ್ಯ ಏಕಮಾತ್ರಭೂತೋಪಾದಾನಕತ್ವಂ ಪೂರ್ವೋಕ್ತಂ ಅನೇನೈವ ಪ್ರಸಂಗೇನ ವಿಶಿಷ್ಯಾಹ–*

ಸೂತ್ರ: ಸರ್ವೇಷು ಪೃಥಿವ್ಯುಪಾದಾನಮಸಾಧಾರಣ್ಯಾತ್ ತದ್ವ್ಯಪದೇಶಃ ಪೂರ್ವವತ್ ॥ ೧೧೨ ॥

ಅನುವಾದ: ಶರೀರಕ್ಕೆ ಏಕಮಾತ್ರ ಉಪಾದಾನವಾದುದು (ಪೃಥ್ವೀ)ಭೂತ, ಪಂಚಮಹಾ ಭೂತಗಳಲ್ಲ ಎಂಬುದನ್ನು ಹೇಳಿ ಆಗಿದೆ, ಅದನ್ನೇ ಪ್ರಸಂಗವಶಾತ್ ವಿಶೇಷವಾಗಿ ಹೇಳಲಾಗಿದೆ.

ಸೂತ್ರಾನುವಾದ: ಎಲ್ಲ ಬಗೆಯ ಶರೀರಗಳಿಗೂ ಪೃಥ್ವೀಭೂತವೇ ಉಪಾದಾನ ಕಾರಣವಾಗಿರುವುದು, ಅದು ಅಸಾಧಾರಣಕಾರಣವಾದ್ದರಿಂದ. ಹಿಂದಿನಂತೆಯೇ ಅದರ ವ್ಯವಹಾರವು ಇರುವುದೆಂದು ತಿಳಿಯಬೇಕು.

ಭಾಷ್ಯ: *ಸರ್ವೇಷು ಶರೀರೇಷು ಪೃಥಿವ್ಯೇವ ಉಪಾದಾನಮ್ ಅಸಾಧಾರಣ್ಯಾತ್। ಆಧಿಕ್ಯಾದಿಭಿರುತ್ಕರ್ಷಾತ್ । ಅತ್ರಾಪಿ ಶರೀರಂ ಪಂಚಚತುರಾದಿ–ಭೌತಿಕತ್ವವ್ಯಪದೇಶಃ ಪೂರ್ವವತ್ । ಇಂದ್ರಿಯಾಣಾಂ ಭೌತಿಕತ್ವವತ್ ಉಪಷ್ಟಂಭಕಮಾತ್ರೇಣೇತ್ಯರ್ಥಃ ।*

ಅನುವಾದ: ಎಲ್ಲಾ ಶರೀರಗಳಿಗೂ ಪೃಥಿವಿಯೊಂದೇ ಉಪಾದಾನವಾದುದು. ಏಕೆಂದರೆ ಅದು ಅಸಾಧಾರಣ ಕಾರಣವು; ಎಂದರೆ (ಪೃಥಿವೀ ಭೂತದ) ಆಧಿಕ್ಯದಿಂದಲೇ ಶರೀರವು ಬೆಳೆಯುವುದು. ಇಲ್ಲೂ ಸಹ ಶರೀರವು ಐದು ಅಥವಾ ನಾಲ್ಕು ಭೌತಿಕತ್ವದಿಂದ ಮೊದಲೇ ಹೇಳಿದಂತೆ ಕೂಡಿದೆ. ಇಂದ್ರಿಯಗಳು ಭೌತಿಕವೆನ್ನಲು ಇವು ಉಪಷ್ಟಂಭಕಗಳಾಗಿವೆ.

ಭಾಷ್ಯ: *ನನು ಪ್ರಾಣಸ್ಯ ಶರೀರೇ ಪ್ರಾಧಾನ್ಯಾತ್ ಪ್ರಾಣ ಏವ ದೇಹಾರಂಭಕೋಽಸ್ತು, ತತ್ರಾಹ–*

ಸೂತ್ರ: ನ ದೇಹಾರಂಭಕಸ್ಯ ಪ್ರಾಣತ್ವಮಿಂದ್ರಿಯಶಕ್ತಿತಃ ತತ್ಸಿದ್ಧೇಃ ॥ ೧೧೩ ॥

ಅನುವಾದ: ಶರೀರದಲ್ಲಿ ಪ್ರಾಣವೇ ಪ್ರಧಾನವಾಗಿರುವುದರಿಂದ ಪ್ರಾಣವೇ ಶರೀರದ ಉತ್ಪತ್ತಿಗೆ ಕಾರಣವೇಕಾಗಬಾರದು?

ಸೂತ್ರಾನುವಾದ: ಶರೀರದ ಆರಂಭಕ್ಕೆ ಕಾರಣ ಪ್ರಾಣವಾಗಲಾರದು, ಏಕೆಂದರೆ ಇಂದ್ರಿಯಗಳ ಶಕ್ತಿಯಿಂದಲೇ ಪ್ರಾಣವಿರುವುದು.

ಭಾಷ್ಯ: *ಪ್ರಾಣೋ ನ ದೇಹಾರಂಭಕಃ । ಇಂದ್ರಿಯಂ ವಿನಾ ಪ್ರಾಣಾನವಸ್ಥಾನೇನ ಅನ್ವಯವ್ಯತಿರೇಕಾಭ್ಯಾಂ ಇಂದ್ರಿಯಾಣಾಂ ಶಕ್ತಿವಿಶೇಷಾತ್ ಏವ ಪ್ರಾಣಸಿದ್ಧೇಃ ಪ್ರಾಣೋತ್ಪತ್ತೇಃ ಇತ್ಯರ್ಥಃ । ಅಯಂ ಭಾವಃ ಕರಣ–ವೃತ್ತಿರೂಪಃ ಪ್ರಾಣಃ ಕರಣವಿಯೋಗೇ ನ ತಿಷ್ಠತಿ । ಅತಃ ಮೃತದೇಹೇ ಕರಣಾಭಾವೇನ ಪ್ರಾಣಾಭಾವಾನ್ನ ಪ್ರಾಣೋ ದೇಹಾರಂಭಕಃ ಇತಿ ।*

ಅನುವಾದ: ಪ್ರಾಣವು ದೇಹದ ಉತ್ಪತ್ತಿಗೆ ಕಾರಣವಲ್ಲ. ಇಂದ್ರಿಯವಿಲ್ಲದೆ ಪ್ರಾಣವು ಉಳಿಯಲಾರದಾದ್ದರಿಂದ ಅನ್ವಯವ್ಯತಿರೇಕಗಳ ಬಲದಿಂದ ಇಂದ್ರಿಯಗಳ ಶಕ್ತಿ

ವಿಶೇಷದಿಂದಲೇ ಪ್ರಾಣವು ಸಿದ್ಧವಾಗುವುದರಿಂದ ಎಂದರ್ಥ. ಅಭಿಪ್ರಾಯ ವೇನೆಂದರೆ– ಕರಣವೃತ್ತಿ ರೂಪದ ಪ್ರಾಣವು ಕರಣವಿಲ್ಲದಿರುವಾಗ ಇರದು. ಆದ್ದರಿಂದಲೇ ಮೃತದೇಹದಲ್ಲಿ ಕರಣಗಳ ಅಭಾವದಿಂದ ಪ್ರಾಣವೂ ಇರದು, (ಆದ್ದರಿಂದ) ಪ್ರಾಣವು ದೇಹದ ಉತ್ಪತ್ತಿಗೆ ಕಾರಣವಲ್ಲ.

ವಿವರಣೆ: ಅನ್ವಯ–ವ್ಯತಿರೇಕಗಳೆಂದರೆ, ಕಾರಣವಿರುವಾಗ ಕಾರ್ಯವಿರುವುದು ಮತ್ತು ಕಾರಣವಿಲ್ಲದಿರುವಾಗ ಕಾರ್ಯವೂ ಇಲ್ಲದಿರುವುದು.

ಭಾಷ್ಯ: *ನನ್ವೇವಂ ಪ್ರಾಣಸ್ಯ ದೇಹಾಕಾರಣತ್ವೇ ಪ್ರಾಣಂ ವಿನಾಪಿ ದೇಹ ಉತ್ಪದ್ಯೇತ, ತತ್ರಾಹ–*

ಸೂತ್ರ: ಭೋಕ್ತುರಧಿಷ್ಠಾನಾತ್ ಭೋಗಾಯತನನಿರ್ಮಾಣಮನ್ಯಥಾ ಪೂತಿ ಭಾವ ಪ್ರಸಂಗಾತ್ ॥ ೧೧೪ ॥

ಅನುವಾದ: ಹೀಗೆ ಪ್ರಾಣವು ದೇಹಕ್ಕೆ ಕಾರಣವಲ್ಲದಿದ್ದರೆ ಪ್ರಾಣವಿಲ್ಲದೆಯೇ ದೇಹವು ಉಂಟಾಗಬಹುದಲ್ಲವೆ? ಅದಕ್ಕೆ ಹೀಗೆ ಹೇಳಿದ್ದಾರೆ–

ಸೂತ್ರಾನುವಾದ: (ಭೋಗಿಯಾದ) ಪ್ರಾಣಿಯ (ಜೀವದ) ಆಶ್ರಯವಾಗಿರುವುದರಿಂದ ಭೋಗಾಯತನವಾದ ಶರೀರದ ನಿರ್ಮಾಣವಾಗುವುದು. ಇಲ್ಲದಿದ್ದರೆ ದೇಹವನ್ನುಂಟು ಮಾಡುವ ವಸ್ತುಗಳ ದುರ್ಗಂಧ ಮೂಡಿಬರುವುದು.

ಭಾಷ್ಯ: *ಭೋಕ್ತುಃ ಪ್ರಾಣಿನೋಽಧಿಷ್ಠಾನಾತ್ ವ್ಯಾಪಾರಾದೇವ ಭೋಗಾಯತನಸ್ಯ ಶರೀರಸ್ಯ ನಿರ್ಮಾಣಂ ಭವತಿ । ಅನ್ಯಥಾ ಪ್ರಾಣವ್ಯಾಪಾರಾಭಾವೇ ಶುಕ್ರಶೋಣಿತಯೋಃ ಪೂತಿಭಾವಪ್ರಸಂಗಾನ್ಮೃತದೇಹವದಿತ್ಯರ್ಥಃ । ತಥಾ ಚ ರಸಸಂಚಾರಾದಿ ವ್ಯಾಪಾರವಿಶೇಷೈಃ ಪ್ರಾಣೋ ದೇಹಸ್ಯ ನಿಮಿತ್ತ–ಕಾರಣಂ ಧಾರಕತ್ವಾದಿತಿ ಭಾವಃ ।*

ಅನುವಾದ: ಭೋಗಿಯಾದ ಪ್ರಾಣಿಯ ಆಶ್ರಯದಲ್ಲಿ ನಡೆಯುವ ಚಟುವಟಿಕೆ ಗಳಿಂದಲೇ ಭೋಗಗಳ ನೆಲೆಯಾದ ಶರೀರದ ನಿರ್ಮಾಣವಾಗುತ್ತದೆ. ಇಲ್ಲದಿದ್ದಲ್ಲಿ ಪ್ರಾಣವ್ಯಾಪಾರದ ಅಭಾವದಲ್ಲಿ ಶುಕ್ರಶೋಣಿತಗಳ ದುರ್ಗಂಧದ ಪ್ರಸಂಗದಿಂದ; ಮೃತದೇಹದಂತೆ, ಎಂದರ್ಥ. ಹಾಗೆಯೇ ರಸಗಳ ಸಂಚಾರವೇ ಮೊದಲಾದ ವಿಶೇಷ ಚಟುವಟಿಕೆ ಗಳಿಂದ ಪ್ರಾಣವು ದೇಹದ ನಿಮಿತ್ತ ಕಾರಣ ಏಕೆಂದರೆ ಅದು ದೇಹವನ್ನು ಧಾರಣೆ ಮಾಡುತ್ತಿರುತ್ತದೆ.

ಭಾಷ್ಯ: *ನನು ಪ್ರಾಣಸ್ಯೈವಾಧಿಷ್ಠಾನತ್ವಂ ಸಂಭವತಿ ವ್ಯಾಪಾರವತ್ತ್ವಾತ್, ನ ಪ್ರಾಣಿನಃ ಕೂಟಸ್ಥತ್ವಾತ್, ನಿರ್ವ್ಯಾಪಾರಸ್ಯಾಧಿಷ್ಠಾನೇ ಪ್ರಯೋಜನಾ–ಭಾವಾಚ್ಚ । ತತ್ರಾಹ ।*

ಸೂತ್ರ: ಭೃತ್ಯದ್ವಾರಾ ಸ್ವಾಮ್ಯಧಿಷ್ಠಿತಿರ್ನೈಕಾಂತಾತ್ ॥ ೧೧೫ ॥

ಅನುವಾದ: (ಜೀವಿಸಲು) ಪ್ರಾಣದ ಆಧಾರವೇ ಆಗಿರುವುದು. ಏಕೆಂದರೆ ಅದು ಕಾರ್ಯದಲ್ಲಿ ತೊಡಗಿರುವುದು ಆದರೆ ಪ್ರಾಣವುಳ್ಳ ಜೀವವು (ಪ್ರಾಣಿಯು) ನಿತ್ಯವಾದುದು ಆದ್ದರಿಂದ ವ್ಯಾಪಾರಶೂನ್ಯವಾದುದು ಮತ್ತು ಚಟುವಟಿಕೆಯಿಲ್ಲದ ಪ್ರಾಣಿಯು ಪ್ರಯೋಜನವಿಲ್ಲದೆ ಇರುತ್ತದೆಯಲ್ಲವೆ? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರಾನುವಾದ: ಸೇವಕನ ಮೂಲಕ ಸ್ವಾಮಿಯ ಮೇಲ್ವಿಚಾರಣೆಯು ನೇರವಾಗಿ ನಡೆಯದು.

ವಿವರಣೆ: ಇಲ್ಲಿ ಜೀವಾತ್ಮನೇ ಒಡೆಯ, ಅವನ ಸಂಯೋಗದಿಂದ ಪ್ರಾಣವು ಭೃತ್ಯನಂತೆ ಶರೀರದ ನಿರ್ಮಾಣದಲ್ಲಿ ತೊಡಗುತ್ತದೆ.

ಭಾಷ್ಯ: *ದೇಹನಿರ್ಮಾಣೇ ವ್ಯಾಪಾರರೂಪಕಮಧಿಷ್ಠಾನಂ ಸ್ವಾಮಿನಃ ಚೇತನಸ್ಯ ಏಕಾಂತಾತ್ ಸಾಕ್ಷಾನ್ನಾಸ್ತಿ, ಕಿಂತು ಪ್ರಾಣರೂಪಭೃತ್ಯದ್ವಾರಾ । ಯಥಾ ರಾಜ್ಞಃ ಪುರನಿರ್ಮಾಣೇ ಇತ್ಯರ್ಥಃ । ತಥಾ ಚ ಪ್ರಾಣಸ್ಯಾಧಿಷ್ಠಾತೃತ್ವಂ ಸಾಕ್ಷಾತ್ ಪುರುಷಸ್ಯ ಅಧಿಷ್ಠಾತೃತ್ವಂ ಪ್ರಾಣಸಂಯೋಗಮಾತ್ರೇಣೇತಿ ಸಿದ್ಧಮ್ । ಕುಲಾಲಾದೀನಾಂ ಘಟಾದಿನಿರ್ಮಾಣೇಷ್ವೇಪ್ಯೇವಮ್ । ವಿಶೇಷಸ್ತ್ವಯಮ್– ತತ್ರ ಚೇತನಸ್ಯ ಬುದ್ಧ್ಯಾದೇಃ ಚ ಅಪಿ ಉಪಯೋಗೋಽಸ್ತಿ ಬುದ್ಧಿಪೂರ್ವಕಸೃಷ್ಟಿತ್ವಾದಿತಿ । ಯದ್ಯಪಿ ಪ್ರಾಣಾಧಿಷ್ಠಾನಾದೇವ ದೇಹನಿರ್ಮಾಣಂ, ತಥಾಪಿ ಪ್ರಾಣದ್ವಾರಾ ಪ್ರಾಣಿಸಂಯೋಗೋಽಪ್ಯಪೇಕ್ಷ್ಯತೇ । ಪುರುಷಾರ್ಥಮೇವ ಪ್ರಾಣೇನ ದೇಹನಿರ್ಮಾಣಾದಿತ್ಯಾಶಯೇನ ಭೋಕ್ತುಃ ಅಧಿಷ್ಠಾನಾದಿತ್ಯುಕ್ತಮ್।*

ಅನುವಾದ: ದೇಹವನ್ನು ನಿರ್ಮಾಣ ಮಾಡುವುದರಲ್ಲಿ ಚಟುವಟಿಕೆಯ ರೂಪದ ಅಧಿಷ್ಠಾನವು ಒಡೆಯನಾದ ಚೇತನದಲ್ಲಿ ಸಾಕ್ಷಾತ್ತಾಗಿ ಕಾಣದು. ಆದರೆ ಪ್ರಾಣರೂಪ ಭೃತ್ಯನ ಮೂಲಕ ಪ್ರತೀತವಾಗುವುದು; ರಾಜನು ನಗರದ ನಿರ್ಮಾಣ ಮಾಡಿದಂತೆ ಎಂದರ್ಥ. ಹಾಗೆಯೇ ಪ್ರಾಣದ ಮೇಲ್ವಿಚಾರಣೆಯು ಸಾಕ್ಷಾತ್ತಾಗಿ ಪ್ರಾಣಸಂಯೋಗದ ಫಲವಾಗಿ ಪುರುಷನ ಮೇಲ್ವಿಚಾರಣೆಯೇ ಎಂಬುದು ಸಿದ್ಧವಾದುದು. ಕುಂಬಾರನು ಘಟವನ್ನು ನಿರ್ಮಾಣ ಮಾಡುವಾಗಲೂ ಹೀಗೆಯೇ. ವಿಶೇಷವೇನೆಂದರೆ, ಅದರಲ್ಲಿ ಚೇತನವು ಬುದ್ಧ್ಯಾದಿಗಳಲ್ಲಿಯೂ ಉಪಯೋಗವಿರುತ್ತದೆ. ಏಕೆಂದರೆ ಬುದ್ಧಿಯ ಸಹಾಯದಿಂದ ಸೃಷ್ಟಿ ಯಾಗುವುದು. ದೇಹದ ನಿರ್ಮಾಣವು ಪ್ರಾಣದ ಕಾರ್ಯದಿಂದಲೇ ಉಂಟಾದರೂ ಪ್ರಾಣವು ಪ್ರಾಣಿಯೊಡನೆ ಸೇರಬೇಕಾದದ್ದು ಆವಶ್ಯಕ. ಪುರುಷನ ಸಲುವಾಗಿಯೇ ಪ್ರಾಣವು ದೇಹನಿರ್ಮಾಣದಲ್ಲಿ ತೊಡಗುವುದರಿಂದ ಆ ಉದ್ದೇಶದಿಂದ ಭೋಕ್ತೃವಿನ ಅಧಿಷ್ಠಾನದಿಂದ ಎಂದು ಹೇಳಲಾಗಿದೆ.

ಭಾಷ್ಯ: *ವಿಮುಕ್ತಮೋಕ್ಷಾರ್ಥಂ ಪ್ರಧಾನಸ್ಯೇತ್ಯುಕ್ತಂ ಪ್ರಾಕ್ । ತತ್ರ ಕಥಮಾತ್ಮಾ ನಿತ್ಯಮುಕ್ತೋ ಬಂಧದರ್ಶನಾದಿತಿ ಪರೇಷಾಂ ಆಕ್ಷೇಪೇ ನಿತ್ಯಮುಕ್ತಿಮುಪಪಾದಯಿತುಂ ಆಹ ।*

ಅನುವಾದ: ಮೋಕ್ಷದ ಸಲುವಾಗಿ ಪ್ರಧಾನದ (ಪ್ರವೃತ್ತಿ) ಇರುತ್ತಿದೆ. ಅಲ್ಲಿ ಆತ್ಮನು ಬದ್ಧನಾಗಿ ಕಾಣುವಾಗ ನಿತ್ಯಮುಕ್ತನಾಗಿರುವನಂತೆ ಕಾಣುವನು? ಎಂದು ಇತರರ ಆಕ್ಷೇಪಕ್ಕೆ ನಿತ್ಯಮುಕ್ತಿಯನ್ನು ವಿವರಿಸಲು ಹೇಗೆ ಹೇಳಿದ್ದಾರೆ.

ಸೂತ್ರ: ಸಮಾಧಿಸುಷುಪ್ತಿಮೋಕ್ಷೇಷು ಬ್ರಹ್ಮರೂಪತಾ ॥ ೧೧೬ ॥

ಸೂತ್ರಾನುವಾದ: ಸಮಾಧಿ, ಸುಷುಪ್ತಿಯಂತೆ ಮೋಕ್ಷದಲ್ಲಿಯೂ 'ಬ್ರಹ್ಮರೂಪತಾ' ಉಂಟಾಗುವುದು.

ಭಾಷ್ಯ: *ಸಮಾಧಿರಸಂಪ್ರಜ್ಞಾತಾವಸ್ಥಾ । ಸುಷುಪ್ತಿರತ್ರ ಸಮಗ್ರಸುಷುಪ್ತಿಃ । ಮೋಕ್ಷಶ್ಚ ವಿದೇಹಕೈವಲ್ಯಮ್ । ಆಸ್ವವಸ್ಥಾಸು ಪುರುಷಾಣಾಂ ಬ್ರಹ್ಮರೂಪತಾ ಬುದ್ಧಿವೃತ್ತಿವಿಲಯತಃ ತದೌಪಾಧಿಕ ಪರಿಚ್ಛೇದವಿಗಮೇನ ಸ್ವಸ್ವರೂಪಪೂರ್ಣತಯಾ ಅವಸ್ಥಾನಮ್ । ಯಥಾ ಘಟಧ್ವಂಸೇ ಘಟಾಕಾಶಸ್ಯ ಪೂರ್ಣತಾ ಇತ್ಯರ್ಥಃ । ತದೇತದುಕ್ತಮ್– 'ತನ್ನಿವೃತ್ತೌ ಉಪಶಾಕೋಪರಾಗಃ ಸ್ವಸ್ಥಃ' ಇತಿ । ತಥಾ ಚ ಬ್ರಹ್ಮತ್ವಮೇವ ಪುರುಷಾಣಾಂ ಸ್ವಭಾವೋ ನೈಮಿತ್ತಿಕಸ್ವಭಾವಾತ್, ಸ್ಫಟಿಕಸ್ಯ ಶೌಕ್ಲ್ಯಮಿವ। ಬುದ್ಧಿವೃತ್ತಿಸಂಬಂಧಕಾಲೇ ತು ಪರಿಚ್ಛಿನ್ನ ಚಿದ್ರೂಪತ್ವೇನಾಭಿವ್ಯಕ್ತ್ಯಾ ಪರಿಚ್ಛೇದಾಭಿಮಾನಃ, ತಥಾ ವೃತ್ತಿಪ್ರತಿಬಿಂಬವಶಾತ್ ದುಃಖಾದಿಮಾಲಿನ್ಯಮಿವ ಚ ಭವತೀತಿ ತತ್ಸರ್ವಮೌಪಾಧಿಕಮೇವ। ಉಪಾಧ್ಯಾಖ್ಯನಿಮಿತ್ತಾನ್ವಯವ್ಯತಿರೇಕಾನುವಿಧಾನಾತ್ ಸ್ಫಟಿಕ–ಲೌಹಿತ್ಯವದಿತಿ ಭಾವಃ । ತತ್ರ ಚ ಯೋಗಸೂತ್ರಂ 'ವೃತ್ತಿಸಾರೂಪ್ಯಮಿತರತ್ರೇತಿ' । ಅಸ್ಮಚ್ಛಾಸ್ತ್ರೇ ಚ ಬ್ರಹ್ಮಶಬ್ದ ಔಪಾಧಿಕಪರಿಚ್ಛೇದಮಾಲಿನ್ಯಾದಿರಹಿತ ಪರಿಪೂರ್ಣಚೇತನ ಸಾಮಾನ್ಯವಾಚೀ, ನ ತು ಬ್ರಹ್ಮಮೀಮಾಂಸಾಯಾಮಿವ ಐಶ್ವರ್ಯ ಉಪಲಕ್ಷಿತ ಪುರುಷಮಾತ್ರ ವಾ ಚೇತಿ ವಿವೇಕ್ತವ್ಯಮ್ ।*

ಅನುವಾದ: ಸಮಾಧಿಯು (ಬಾಹ್ಯವಿಷಯಗಳಲ್ಲಿ) ಎಚ್ಚರವಿಲ್ಲದ ಸ್ಥಿತಿ. ಸುಷುಪ್ತಿ ಎಂದರೆ ಸಂಪೂರ್ಣವಾಗಿ ಸುಷುಪ್ತಿಯಲ್ಲಿರುವುದು. ಮೋಕ್ಷವು ಶರೀರವಿಲ್ಲದ ಕೇವಲಭಾವ. ಈ ಅವಸ್ಥೆಗಳಲ್ಲಿ ಪುರುಷರು ಬ್ರಹ್ಮರೂಪವನ್ನು ತಾಳುವುದು ಎಂದರೆ ಬುದ್ಧಿಗಳ ವೃತ್ತಿಗಳು ಕಣ್ಮರೆಯಾಗುವುವು. ಅದರಿಂದ ಉಪಾಧಿಗಳ ಆವರಣವು ಕಳೆದುಹೋಗು ವುದರಿಂದ ಪೂರ್ಣವಾಗಿ ತನ್ನ ನಿಜವಾದ ಸ್ವರೂಪದಲ್ಲಿ ಉಳಿಯುವುದು; ಹೇಗೆಂದರೆ ಘಟವು ಧ್ವಂಸವಾದ ಮೇಲೆ ಘಟಾಕಾಶವು ಪೂರ್ಣವಾಗಿಬಿಡುವುದು. ಅದನ್ನೇ ಹೀಗೆ ಹೇಳಿದ್ದಾರೆ. (ಸೂ. ೨.೩೪) (ಇಂದ್ರಿಯಗಳು) ತಡೆಯಲ್ಪಟ್ಟಾಗ ವಿಷಯಗಳ ಪ್ರಭಾವಕ್ಕೆ ಮಣಿಯದೆ ಶಾಂತನಾಗುವನು ಮತ್ತು ತನ್ನ ನಿಜಸ್ವರೂಪದಲ್ಲಿರುವನು. ಹಾಗೆಯೇ ಬ್ರಹ್ಮತ್ವವೇ ಪುರುಷರ ನಿಜರೂಪ ಏಕೆಂದರೆ ಅದನ್ನು ಪಡೆಯಲು ನಿಮಿತ್ತದ ಅಗತ್ಯವಿಲ್ಲ, ಸ್ಫಟಿಕದ ಶುಕ್ಲವರ್ಣದಂತೆ. ಬುದ್ಧಿವೃತ್ತಿಯ

ಸಂಬಂಧಕಾಲದಲ್ಲಿ ಚಿದ್ರೂಪವನ್ನು ವಿಶದಪಡಿಸಿರುವುದರಿಂದ ಅಭಿವ್ಯಕ್ತಿಯಿಂದ ಪರಿಮಿತಿಯ ಅಭಿಮಾನವಿರುತ್ತದೆ. ಹಾಗೆಯೇ ವೃತ್ತಿಯು ಪ್ರತಿಬಿಂಬಿತವಾಗುವುದರಿಂದ ದುಃಖಾದಿಮಾಲಿನ್ಯವು ಇರುವಂತೆಯೂ ಆಗುವುದು. ಆದ್ದರಿಂದ ಎಲ್ಲವೂ ಉಪಾಧಿಸಹಿತವಾಗಿಯೇ ಇರುತ್ತದೆ. ಉಪಾಧಿ ಎಂಬ ನಿಮಿತ್ತದ ಅನ್ವಯ-ವ್ಯತಿರೇಕಗಳು ಅನ್ವಯಿಸುವುದರಿಂದ ಸ್ಫಟಿಕದಲ್ಲಿ ಕೆಂಪುಬಣ್ಣವಿರುವಂತೆ ಎಂದು ಭಾವ. ಹಾಗೆಯೇ ಯೋಗಸೂತ್ರವಿರುವುದು– ಬೇರೆಯೆಡೆ ವೃತ್ತಿಯು ಸಮಾನವಾಗಿ ಇರುವುದು. ನಮ್ಮ ಶಾಸ್ತ್ರದಲ್ಲಾದರೋ ಬ್ರಹ್ಮಶಬ್ದವು ಉಪಾಧಿಯ ಅಳತೆಯೆಂಬ ಮಾಲಿನ್ಯ ಮುಂತಾದುವು ಇಲ್ಲದಿರುವ ಕಾರಣ ಪೂರ್ಣವಾದ ಸಾಮಾನ್ಯ ಚೇತನವನ್ನು ಸೂಚಿಸುತ್ತದೆ; ಬ್ರಹ್ಮಮೀಮಾಂಸೆಯಲ್ಲಿರುವಂತೆ ಐಶ್ವರ್ಯವನ್ನೊಳಗೊಂಡ ಪುರುಷಮಾತ್ರನನ್ನು ತಿಳಿಸುವುದಲ್ಲ ಎಂದು ತಿಳಿಯಬೇಕು.

ಭಾಷ್ಯ: *ಅತ್ರೈತೇಶ್ಲೋಕಾಃ ಶಿಷ್ಯವ್ಯುತ್ಪತ್ತ್ಯರ್ಥಂ ಉಚ್ಯಂತೇ ।*
ಚಿದಾಕಾಶೇಽನಭಿವ್ಯಕ್ತೇ ನಾನಾಕಾರೈರಿತಸ್ತತಃ ।
ಧೀರಟಂತೀ ಸಹ ವ್ಯಕ್ತ್ವಾ ಅಟಂತೀಂ ದರ್ಶಯೇಚ್ಚಿತಿಮ್ ॥
ವಸ್ತುತಸ್ತು ಸದಾ ಪೂರ್ಣಂ ಏಕರೂಪಂ ಚ ಚಿನ್ನಭಃ ।
ವೃತ್ತಿಶೂನ್ಯ ಪ್ರದೇಶೇಷು ದೃಶ್ಯಾಭಾವಾನ್ನ ಪಶ್ಯತಿ ॥
ಚಕ್ಷುಷಾ ರೂಪವತ್ಪುಂಸೋ ದೃಶ್ಯಾ ವೃತ್ತಿರ್ಹಿ ನೇತರತ್ ।
ಸಮಾಧ್ಯಾದೌ ಚ ಸಾ ನಾಸ್ತೀತ್ಯತಃ ಪೂರ್ಣಃ ಪುಮಾಂಸ್ತದಾ ।

ಅನುವಾದ: ತೋರಿಬರದ ಚಿದಾಕಾಶದಲ್ಲಿ ವಿವಿಧ ಆಕಾರಗಳನ್ನು ಬುದ್ಧಿವೃತ್ತಿಯು ಅತ್ತಿತ್ತ ಚಲಿಸುತ್ತಾ ವ್ಯಕ್ತವಾಗುತ್ತಾ ಓಡಾಡುತ್ತಿರುವ ಪುರುಷನನ್ನು ತೋರಿಸುತ್ತದೆ. ನಿಜವಾಗಿಯೂ ಚಿದಾಕಾಶವು ಯಾವಾಗಲೂ ಪೂರ್ಣವೂ, ಏಕರೂಪೂ ಆಗಿರುತ್ತದೆ. ವೃತ್ತಿಯಿಲ್ಲದ ಪ್ರದೇಶಗಳಲ್ಲಿ ದೃಶ್ಯದ ಅಭಾವದಿಂದ ನೋಡಲಾಗದು. ಚಕ್ಷುರಿಂದ್ರಿಯಕ್ಕೆ ರೂಪವಿರುವಂತೆ ಪುರುಷನಿಗೆ ವೃತ್ತಿಯು ದೃಶ್ಯವಾಗಿರುವುದು, ಬೇರೇನೂ ಇರದು. ಸಮಾಧಿ ಮುಂತಾದುವುಗಳಲ್ಲಿ ವೃತ್ತಿ ಇರದು; ಮತ್ತು, ಆಗ ಪುರುಷನು ಪೂರ್ಣರೂಪನಾಗಿರುವನು.

ಭಾಷ್ಯ: *ತರ್ಹಿ ಕಃ ಸುಷುಪ್ತಿಸಮಾಧಿಭ್ಯಾಂ ಮೋಕ್ಷಸ್ಯ ವಿಶೇಷಸ್ತತ್ರಾಹ ।*

ಸೂತ್ರ: ದ್ವಯೋಃ ಸಬೀಜಮನ್ಯತ್ರ ತದ್ಧತಿಃ ॥ ೧೧೭ ॥

ಅನುವಾದ: ಸಮಾಧಿ-ಸುಷುಪ್ತಿಗಳಲ್ಲಿ ಇರುವ ಭಿನ್ನತೆಯಾದರೂ ಏನು? ಇದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರಾನುವಾದ: ಸುಷುಪ್ತಿ ಮತ್ತು ಸಮಾಧಿಗಳಲ್ಲಿ ಬೀಜಸಹಿತ ಇರುತ್ತವೆ. ಆದರೆ ಬೇರೆ ಕಡೆ ಆ ಬೀಜ ನಾಶವಾಗಿಬಿಡುವುದು.

ಭಾಷ್ಯ: *ದ್ವಯೋಃ ಸಮಾಧಿಸುಷುಪ್ತ್ಯೋಃ ಸಬೀಜಂ ಬಂಧಬೀಜಸಹಿತಂ ಬ್ರಹ್ಮತ್ವಮನ್ಯತ್ರ ಮೋಕ್ಷೇ ಬೀಜಸ್ಯಾಭಾವಃ ಇತಿ ವಿಶೇಷ ಇತ್ಯರ್ಥಃ ।*

ನನು ಚೇತ್ ಸಮಾಧ್ಯಾದೌ ಬಂಧಬೀಜಮಸ್ತಿ, ತರ್ಹಿ ತೇನೈವ ಪರಿಚ್ಛೇದಾತ್ ಕಥಂ ಬ್ರಹ್ಮತ್ವಮ್ ।

ಇತಿ ಚೇನ್ನ । ಬಂಧಬೀಜಸ್ಯ ಕರ್ಮಾದೇಸ್ತತ್ರೇದಾನೀಮುಪಾಧಾವೇವ ಅವಸ್ಥಾನಾತ್ ನ ತು ಚೇತನೇಷು, ಪುರುಷೇ ಚ ತೇಷಾಂ ಅಪ್ರತಿಬಿಂಬನಾದಿತಿ । ಜಾಗ್ರದಾದ್ಯವಸ್ಥಾಯಾಂ ತು ಬುದ್ಧಿವೃತ್ತಿ–ಪ್ರತಿಬಿಂಬವಶಾದ್ ಔಪಾಧಿಕೋ ಬಂಧ ಇತ್ಯಸಕೃದಾವೇದಿತಮ್ ।

ಅನುವಾದ: ಎರಡರಲ್ಲಿ ಎಂದರೆ ಸಮಾಧಿ–ಸುಷುಪ್ತಿಗಳಲ್ಲಿ ಸಬೀಜಂ ಎಂದರೆ ಬಂಧಬೀಜದೊಡನೆ (ಬಂಧದ ಕಾರಣದೊಡನೆ) ಬ್ರಹ್ಮತ್ವವಿರುತ್ತದೆ. ಆದರೆ ಬೇರೆ ಕಡೆ (ಮೋಕ್ಷದಲ್ಲಿ) ಬೀಜದ ಅಭಾವವಿರುತ್ತದೆ, ಇದೇ ವಿಶೇಷ; ಎಂದರ್ಥ.

ವಿವರಣೆ: ಬೀಜ ಎಂದರೆ ಕಾರಣ ಎಂದರ್ಥ.

ಅನುವಾದ: ಸಮಾಧಿಯೇ ಮೊದಲಾದ ಅವಸ್ಥೆಗಳಲ್ಲಿ ಬಂಧಬೀಜವು ಇದ್ದರೆ ಅದರಿಂದಲೇ ಮೋಕ್ಷಸ್ವರೂಪವಿದ್ದರೆ ಅದರಿಂದ ಬ್ರಹ್ಮರೂಪವು ಆಗುವುದಾದರೂ ಹೇಗೆ?

ಹಾಗಲ್ಲ. ಕರ್ಮಾದಿಗಳಿಂದ ಬಂಧದ ಬೀಜವು ಉಂಟಾದರೆ ಆಗ ಉಪಾಧಿಯಲ್ಲಿಯೇ ಉಳಿಯುವುದರಿಂದ ಚೇತನದಲ್ಲಿರದು. ಏಕೆಂದರೆ ಪುರುಷನಲ್ಲಿ ಅವು ಪ್ರತಿಬಿಂಬಿತವಾಗುವುದಿಲ್ಲ. ಜಾಗ್ರತವೇ ಮೊದಲಾದ ಅವಸ್ಥೆಗಳಲ್ಲಿ ಬುದ್ಧಿವೃತ್ತಿಯ ಪ್ರತಿಬಿಂಬವಶಾತ್ ಬಂಧ ಔಪಾಧಿಕವಾಗಿರುತ್ತದೆ ಎಂದು ಅನೇಕ ಬಾರಿ ಹೇಳಿದ್ದೇವೆ.

ಭಾಷ್ಯ: *ನನು ಪಾತಂಜಲೇ ತದ್ಭಾಷ್ಯೇ ಚ ಅಸಂಪ್ರಜ್ಞಾತಯೋಗೋ ತದ್ಬೀಜ ಇತಿ ಉಕ್ತಃ, ಅತ್ರ ಕಥಂ ಸಬೀಜ ಇತ್ಯುಚ್ಯತ ಇತಿ ಚೇನ್ನ । ಅಸಂಪ್ರಜ್ಞಾತೇ ಕ್ರಮೇಣ ಬೀಜಕ್ಷಯೋ ಭವತೀತ್ಯಾಶಯೇನೈವ ತತ್ರ ನಿರ್ಬೀಜತ್ವವಚನಾತ್ । ಅನ್ಯಥಾ ಸರ್ವಾಸಾಮೇವ ಅಸಂಪ್ರಜ್ಞಾತವ್ಯಕ್ತೀನಾಂ ನಿರ್ಬೀಜತ್ವೇ ವ್ಯುತ್ಥಾನಾನುಪಪತ್ತೇಃ ।*

ಅನುವಾದ: ಪತಂಜಲಿ ಯೋಗಸೂತ್ರದಲ್ಲಿ ಮತ್ತು ಅದರ ಮೇಲಿನ ಭಾಷ್ಯದಲ್ಲಿ ಅಸಂಪ್ರಜ್ಞಾತಯೋಗವು ಬೀಜರಹಿತವಾದುದು ಎಂದು ಹೇಳಿದೆ. ಇಲ್ಲಿ ಅದನ್ನೇ ಸಬೀಜವೆಂದು ಹೇಗೆ ಹೇಳುವಿರಿ? ಹಾಗಲ್ಲ. ಅಸಂಪ್ರಜ್ಞಾತದಲ್ಲಿ ಕ್ರಮೇಣ ಬೀಜಕ್ಷಯವು ಉಂಟಾಗುವುದು ಎಂಬ ಆಶಯದಿಂದಲೇ ಅದರಲ್ಲಿ ನಿರ್ಬೀಜತ್ವವನ್ನು ಹೇಳಲಾಗಿದೆ. ಹಾಗಿಲ್ಲದಿದ್ದಲ್ಲಿ ಎಲ್ಲಾ ಅಸಂಪ್ರಜ್ಞಾತವ್ಯಕ್ತಿಗಳಲ್ಲಿಯೂ ನಿರ್ಬೀಜತ್ವವಿದ್ದರೆ ಊರ್ಧ್ವಮುಖಸಂಪ್ರಜ್ಞಾತವಾಗುವುದು ಸಾಧ್ಯವಾಗದು.

ಭಾಷ್ಯ: *ನನು ಸಮಾಧಿಸುಷುಪ್ತೀ ದೃಷ್ಟೇ ಸ್ತಃ, ಮೋಕ್ಷೇ ತು ಕಿಂ ಪ್ರಮಾಣಮ್? ಇತಿ ನಾಸ್ತಿಕಾಕ್ಷೇಪಂ ಪರಿಹರತಿ ।*

ಸೂತ್ರ: ದ್ವಯೋರಿವ ತ್ರಯಸ್ಯಾಪಿ ದೃಷ್ಟತ್ವಾನ್ನ ತು ದ್ವೌ ॥ ೧೧೮ ॥

ಅನುವಾದ: ಸಮಾಧಿ ಮತ್ತು ಸುಷುಪ್ತಿಗಳು ಗೋಚರಕ್ಕೆ ಬರುವಂತಹವು. ಆದರೆ ಮೋಕ್ಷವಿದೆಯೆಂಬುದಕ್ಕೆ ಪ್ರಮಾಣವೇನು? ಎಂಬ ನಾಸ್ತಿಕರ ಆಕ್ಷೇಪವನ್ನು ಪರಿಹರಿಸುತ್ತಾರೆ.

ಸೂತ್ರಾನುವಾದ: ಆ ಎರಡು ಅವಸ್ಥೆಗಳಂತೆ ಮೂರನೆಯ ಅವಸ್ಥೆಯನ್ನು ನೋಡಿರುವುದರಿಂದ ಎರಡೇ ಅವಸ್ಥೆಗಳಲ್ಲ.

ಭಾಷ್ಯ: *ಸಮಾಧಿಸುಷುಪ್ತಿದೃಷ್ಟಾಂತೇನ ಮೋಕ್ಷಸ್ಯಾಪಿ ದೃಷ್ಟತ್ವಾತ್ ಅನುಮಿತತ್ವಾನ್ನ ತು ದ್ವೌ ಸುಷುಪ್ತಿಸಮಾಧೀ ಏವ, ಕಿಂತು ಮೋಕ್ಷೋಽಪ್ಯಸ್ತೀತಿ ಅರ್ಥಃ । ಅನುಮಾನಂ ಚೇತ್ಥಮ್– ಸುಷುಪ್ತ್ಯಾದೌ ಯೋ ಬ್ರಹ್ಮಭಾವಸ್ತತ್ತ್ಯಾಗಶ್ಚಿತ್ತಾಗತಾದ್ರಾಗಾದಿದೋಷ–ವಶಾದೇವ ಭವತಿ । ಸ ಚೇದ್ದೋಷೋ ಜ್ಞಾನೇನ ನಾಶಿತಸ್ತರ್ಹಿ ಸುಷುಪ್ತ್ಯಾದಿಸದೃಶಸ್ಯೇವಾವಸ್ಥಾ ಸ್ಥಿರಾ ಭವತಿ, ಸೈವ ಮೋಕ್ಷ ಇತಿ ।*

ಅನುವಾದ: ಸಮಾಧಿಸುಷುಪ್ತಿ ದೃಷ್ಟಾಂತದಿಂದ ಮೋಕ್ಷವೂ ಸಹ ಅನುಮಾನದಿಂದ ತಿಳಿಯಬಹುದು, ಸುಷುಪ್ತಿ ಸಮಾಧಿ ಇವೆರಡೇ ಅಲ್ಲ, ಆದರೆ ಮೋಕ್ಷವೂ ಸಹ ಇರುವುದು ಎಂದು ಅರ್ಥ. ಸುಷುಪ್ತ್ಯಾದಿಗಳಲ್ಲಿ ಯಾವ ಬ್ರಹ್ಮಭಾವವಿರುವುದೋ ಅದು ಚಿತ್ತದಲ್ಲಿರುವ ದೋಷಗಳಾದ ರಾಗಾದಿಗಳ ವಶದ ಕಾರಣದಿಂದಲೇ ಆಗುವುದು. ಆ ದೋಷವು ಜ್ಞಾನದಿಂದ ನಾಶವಾದರೆ ಸುಷುಪ್ತ್ಯಾದಿಗಳಿಗೆ ಸದೃಶವಾದ ಅವಸ್ಥೆಯು ಸ್ಥಿರವಾಗಿ ಆಗುವುದು, ಅದನ್ನೇ ಮೋಕ್ಷವೆನ್ನುವರು.

ಭಾಷ್ಯ: *ನನು ವಾಸನಾಖ್ಯಬೀಜಸತ್ತ್ವೇಽಪಿ ವೈರಾಗ್ಯಾದಿನಾ ವಾಸನಾಕೌಂಠ್ಯಾತ್ ಅರ್ಥಾಕಾರವೃತ್ತಿಃ ಸಮಾಧೌ ಮಾ ಭವತು । ಸುಷುಪ್ತೇ ತು ವಾಸನಾ ಪ್ರಾಬಲ್ಯಾದ್ ಅರ್ಥಜ್ಞಾನಂ ಭವಿಷ್ಯತ್ಯೇವೇತಿ ನ ಸುಷುಪ್ತೌ ಬ್ರಹ್ಮರೂಪತಾ ಯುಕ್ತಾ ಇತಿ – ತತ್ರಾಹ ।*

ಅನುವಾದ: 'ವಾಸನಾ' ಮುಂತಾದ ಕಾರಣಗಳಿದ್ದರೂ ವೈರಾಗ್ಯಾದಿಗಳಿಂದ 'ವಾಸನಾ' ಕುಂಠಿತವಾಗಿ ಬಾಹ್ಯದ ವಿಷಯಾಕಾರವೃತ್ತಿಯು ಸಮಾಧಿಯಲ್ಲಿ ಇರದೇ ಇರಬಹುದು. ಆದರೆ ಸುಷುಪ್ತಿಯಲ್ಲಿ ಬ್ರಹ್ಮರೂಪವು ಹೇಗೆ ಇದ್ದೀತು? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ವಾಸನಯಾ ನ ಸ್ವಾರ್ಥಖ್ಯಾಪನಂ ದೋಷಯೋಗೇಽಪಿ ನ ನಿಮಿತ್ತಸ್ಯ ಪ್ರಧಾನಬಾಧಕತ್ವಮ್ ॥ ೧೨೯ ॥

ಸೂತ್ರಾನುವಾದ: ದೋಷದ ಸಂಬಂಧವಿರುವಾಗ 'ವಾಸನಾ' ಮೂಲಕವೂ ವಿಷಯ ಜ್ಞಾನವು ಸಂಭವಿಸದು; ಏಕೆಂದರೆ, ನಿಮಿತ್ತಭೂತವಾದ ಪ್ರಧಾನವಾದ ಬಾಧಕಕ್ಕೆ ಬಾಧ ಬರದು.

ವಿವರಣೆ: 'ವಾಸನಾ' ಸುಷುಪ್ತಿಗೆ ನಿಮಿತ್ತ. ಅದರಿಂದ ಪ್ರಧಾನವಾದ ನಿದ್ರಾದಿಗಳಿಗೆ ಬಾಧ ಬಾರದು.

ಭಾಷ್ಯ: *ಯಥಾ ವೈರಾಗ್ಯೇ ತಥಾ ನಿದ್ರಾದೋಷಯೋಗೇಽಪಿ ಸತಿ ವಾಸನಯಾ ನ 'ಸ್ವಾರ್ಥಖ್ಯಾಪನಂ' ಸ್ವವಿಷಯಸ್ಮರಣಂ ಭವತಿ । ಯತೋ ನ ನಿಮಿತ್ತಸ್ಯ ಗುಣೀಭೂತಸ್ಯ ಸಂಸ್ಕಾರಸ್ಯ ಬಲವತ್ತರ ನಿದ್ರಾದೋಷ–ಬಾಧಕತ್ವಂ ಸಂಭವತೀತಿ ಅರ್ಥಃ । ಬಲವತ್ತರ ಏವ ಹಿ ದೋಷೋ ವಾಸನಾಂ ದುರ್ಬಲಾಂ ಸ್ವಕಾರ್ಯಕುಂಠಾಂ ಕರೋತಿ ಇತಿ ಭಾವಃ।*

ಅನುವಾದ: ಹೇಗೆ ವೈರಾಗ್ಯವು (ಸಮಾಧಿ ಅವಸ್ಥೆಯಲ್ಲಿ) ಇರುವುದೋ ಹಾಗೆ ನಿದ್ರಾದೋಷದ ಯೋಗದಲ್ಲಿಯೂ 'ವಾಸನಾ'ದಿಂದ ತಮ್ಮ ವಿಷಯದ ಸ್ಮರಣೆಯು ಉಂಟಾಗುವುದಿಲ್ಲ. ಏಕೆಂದರೆ ಗುಣೀಭೂತ ಸಂಸ್ಕಾರವು ಬಲವಾದ ನಿದ್ರಾದೋಷದ ಬಾಧೆಗೆ ಗುರಿಯಾಗುವುದು. ಬಲವತ್ತರವಾದ ದೋಷವು ದುರ್ಬಲವಾದ 'ವಾಸನಾ'ವನ್ನು ತನ್ನ ಕಾರ್ಯದಲ್ಲಿ ಕುಂಠಿತವನ್ನಾಗಿ ಮಾಡಿಬಿಡುವುದು ಎಂದು ಭಾವ.

ವಿವರಣೆ: ಸಮಾಧಿಯಲ್ಲಿ ವೈರಾಗ್ಯವು ವಾಸನಾಗಳನ್ನು ತಡೆಹಿಡಿಯುವುವು. ಸುಷುಪ್ತಿಯಲ್ಲಿ ಬಲವಾದ ನಿದ್ರಾದೋಷವು ವಾಸನಾಗಳನ್ನು ತಡೆಹಿಡಿದಿರುವುದು.

ಭಾಷ್ಯ: *ಸಂಸ್ಕಾರಲೇಶತೋ ಜೀವನ್ಮುಕ್ತಸ್ಯ ಶರೀರಧಾರಣಮಿತಿ ತೃತೀಯಾಧ್ಯಾಯೇ ಪ್ರೋಕ್ತಮ್ । ತತ್ರಾಯಮಾಕ್ಷೇಪಃ– ಜೀವನ್ಮುಕ್ತಸ್ಯ ಶಶ್ವದೇಕಸ್ಮಿನ್ನಪ್ಯರ್ಥೇ ಅಸ್ಮದಾದೀನಾಮಿವ ಭೋಗೋ ದೃಶ್ಯತೇ, ಸೋಽನುಪಪನ್ನಃ । ಪ್ರಥಮಮುತ್ಪಾದ್ಯೈವ ಪೂರ್ವಸಂಸ್ಕಾರನಾಶಾತ್ ಸಂಸ್ಕಾರಾಂತರಸ್ಯ ಚ ಜ್ಞಾನಪ್ರತಿಬಂಧೇನ ಕರ್ಮವದನುಯಾದಿತಿ । ತತ್ರಾಹ ।*

ಅನುವಾದ: ಜೀವನ್ಮುಕ್ತನು ಉಳಿದ ಸಂಸ್ಕಾರದ ಕಾರಣ ಶರೀರವನ್ನು ಧರಿಸಿರಬಹುದೆಂದು ಮೂರನೆಯ ಅಧ್ಯಾಯದಲ್ಲಿ ಹೇಳಲಾಗಿದೆ. ಇಲ್ಲಿ ಅದನ್ನು ಕುರಿತ ಆಕ್ಷೇಪವೊಂದಿದೆ. ಜೀವನ್ಮುಕ್ತನು ಯಾವಾಗಲೂ ನಮ್ಮಗಳಂತೆ ಯಾವುದಾದರೊಂದು ವಿಷಯದಲ್ಲಿ ಭೋಗದಲ್ಲಿರುವುದು ಕಂಡುಬರುವುದು, ಅದು ಸರಿಯೆ. ಆದರೆ ಮೊದಲೇ ಭೋಗವನ್ನು ಉತ್ಪಾದಿಸಿ ಪೂರ್ವಸಂಸ್ಕಾರಗಳೆಲ್ಲ ನಾಶವಾಗಿರುವ ಕಾರಣ ಬೇರೆಯ ಸಂಸ್ಕಾರದ ಉದಯವು ಜ್ಞಾನದಿಂದ ತಡೆಹಿಡಿಯಲ್ಪಟ್ಟ ಕರ್ಮದಂತೆ ಮತ್ತೆ ಉಂಟಾಗದಲ್ಲವೆ? ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಏಕಃ ಸಂಸ್ಕಾರಃ ಕ್ರಿಯಾ ನಿರ್ವರ್ತಕೋ ನ ತು ಪ್ರತಿಕ್ರಿಯಂ ಸಂಸ್ಕಾರಭೇದಾಃ ಬಹುಕಲ್ಪನಾಪ್ರಸಕ್ತೇಃ ॥ ೧೨೦ ॥

ಸೂತ್ರಾನುವಾದ: ಒಂದೇ ಸಂಸ್ಕಾರವು ಕ್ರಿಯೆಯನ್ನು ನೆರವೇರಿಸಬಲ್ಲುದು. ಪ್ರತಿಕ್ರಿಯೆಯನ್ನು ಮಾಡಲು ಭಿನ್ನ ಭಿನ್ನ ಸಂಸ್ಕಾರಗಳು ಬೇಕಾಗಿಲ್ಲ; (ಹಾಗಿಲ್ಲದಿದ್ದಲ್ಲಿ) ಅನೇಕ ಕಲ್ಪನೆಗಳನ್ನು ಮಾಡಬೇಕಾಗುವುದು.

ಭಾಷ್ಯ: *ಯೇನ ಸಂಸ್ಕಾರೇಣ ದೇವಾದಿಶರೀರಭೋಗಃ ಆರಬ್ಧಃ ಸ ಏಕ ಏವ ಸಂಸ್ಕಾರಃ ತಚ್ಛರೀರಸಾಧ್ಯಸ್ಯ ಪ್ರಾರಬ್ಧಭೋಗಸ್ಯ ಸಮಾಪಕಃ । ಸ ಚ*

ಕರ್ಮವದೇವ ಭೋಗಸಮಾಪ್ತಿನಾಶ್ಯಃ ನ ತು ಪ್ರತಿಕ್ರಿಯಂ ಪ್ರತಿಭೋಗ-ವ್ಯಕ್ತಿ ಸಂಸ್ಕಾರನಾನಾತ್ವಮ್ । ಬಹುವ್ಯಕ್ತಿಕಲ್ಪನಾಗೌರವಪ್ರಸಂಗಾತ್ ಇತ್ಯರ್ಥಃ । ಕುಲಾಲಚಕ್ರಭ್ರಮಣಸ್ಥಲೇಽಪ್ಯೇವಂ ವೇಗಾಖ್ಯಃ ಸಂಸ್ಕಾರಃ ಏಕ ಏವ ಭ್ರಮಣಸಮಾಪ್ತಿಪರ್ಯಂತಸ್ಥಾಯೀ ಬೋಧ್ಯಃ ।

ಅನುವಾದ: ಯಾವ ಸಂಸ್ಕಾರದಿಂದ ದೇವಾದಿ ಶರೀರದ ಭೋಗವು ಆರಂಭವಾಗಿದೆಯೋ ಅದೊಂದೇ ಸಂಸ್ಕಾರವು ಆ ಶರೀರದ ಮುಂದೆ ಆಗುವ ಪ್ರಾರಬ್ಧಭೋಗದ ಸಮಾಪನ ಮಾಡುವುದು. ಅದು ಕರ್ಮದಂತೆಯೇ ಭೋಗಸಮಾಪ್ತಿಯಾದ ನಂತರ ನಷ್ಟವಾಗಿಬಿಡುವುದು. 'ಪ್ರತಿಕ್ರಿಯಂ' ಎಂದರೆ ಪ್ರತ್ಯೇಕ ಭೋಗಕ್ರಿಯೆಗೆ ನಾನಾ ಸಂಸ್ಕಾರಗಳ ಅಗತ್ಯ ಬೀಳದು; ಹಾಗೆ ಮಾಡಿದಲ್ಲಿ ಅನೇಕ ಬಗೆಯಲ್ಲಿ ಕಲ್ಪನೆಯ ಆಧಿಕ್ಯವುಂಟಾಗುವ ಪ್ರಸಂಗ ಬರುತ್ತದೆ. ಕುಂಬಾರನ ಚಕ್ರ ತಿರುಗುವ ಸ್ಥಳದಲ್ಲಿಯೂ ಹೀಗೆ ವೇಗವೆಂಬ ಸಂಸ್ಕಾರ ಒಂದೇ ಮತ್ತು ತಿರುಗುವುದು ನಿಲ್ಲುವವರೆಗೂ ಹಾಗೆಯೇ ಇರುತ್ತದೆ ಎಂದು ತಿಳಿಯಬೇಕು.

ಭಾಷ್ಯ: *ಉದ್ಭಿಜ್ಜಂ ಶರೀರಮಸ್ತೀತ್ಯುಕ್ತಮ್ । ತತ್ರ ಬಾಹ್ಯಬುದ್ಧ್ಯಭಾವಾತ್ ಶರೀರತ್ವಂ ನಾಸ್ತೀತಿ ನಾಸ್ತಿಕಾಕ್ಷೇಪಮಪಾಕರೋತಿ ।*

ಅನುವಾದ: ಉದ್ಭಿಜ್ಜ ಎಂಬುದು ಶರೀರವಾಗಿರುತ್ತದೆ ಎಂದಿರಿ. ಅದರಲ್ಲಿ ಬಾಹ್ಯಬುದ್ಧಿಯ ಅಭಾವವಿರುವುದರಿಂದ ಶರೀರತ್ವವೇ ಇಲ್ಲ ಎಂಬ ಆಕ್ಷೇಪವನ್ನು ನಿರಾಕರಿಸುತ್ತಾರೆ.

ಸೂತ್ರ: ನ ಬಾಹ್ಯಬುದ್ಧಿನಿಯಮಃ ॥ ೧೨೧ ॥

ವೃಕ್ಷ-ಗುಲ್ಮ-ಲತಾ-ಔಷಧಿ-ವನಸ್ಪತಿ-ತೃಣ-ವೀರುಧಾದೀನಾಮಪಿ ಭೋಕ್ತೃ ಭೋಗಾಯತನಂ ಪೂರ್ವವತ್ ॥೧೨೨॥

ಸೂತ್ರಾನುವಾದ: (ಶರೀರವೆನ್ನಲು) ಕೇವಲ ಬಾಹ್ಯ ವಿಷಯಗಳ ಜ್ಞಾನವಿರಬೇಕೆಂಬ ನಿಯಮವಿಲ್ಲ.

ವೃಕ್ಷ, ಪೊದೆ, ಲತೆ, ಔಷಧಿಗಳು, ವನಸ್ಪತಿ, ಹುಲ್ಲು, ಬಳ್ಳಿ ಮುಂತಾದ ಶರೀರಗಳೂ ಭೋಕ್ತೃವಿನ ಭೋಗಾಯತನವಾಗಿರುತ್ತವೆ; ಮೊದಲು ಹೇಳಿದಂತೆ (ಮನುಷ್ಯ-ಪಶು ಆದಿಗಳ ಶರೀರಗಳಂತೆ).

ಭಾಷ್ಯ: *ನ ಬಾಹ್ಯಜ್ಞಾನಂ ಯತ್ರಾಸ್ತಿ ತದೇವ ಶರೀರಮಿತಿ ನಿಯಮಃ ಕಿಂತು ವೃಕ್ಷಾದೀನಾಂ ಅಂತಃಸಂಜ್ಞಾನಾಮಪಿ ಭೋಕ್ತೃಭೋಗಾಯತನತ್ವಂ ಮಂತವ್ಯಮ್ । ಯತಃ ಪೂರ್ವವತ್ ಪೂರ್ವೋಕ್ತೋ ಯೋ ಭೋಕ್ತ್ರಧಿಷ್ಠಾನಂ ವಿನಾ ಮನುಷ್ಯಾದಿಶರೀರಸ್ಯ ಪೂತಿಭಾವಸ್ತ ತದ್ವದೇವ ವೃಕ್ಷಾದಿಶರೀರೇಷ್ವಪಿ ವಿನಾ ಮನುಷ್ಯಾದಿ ಶರೀರಸ್ಯ ಪೂತಿಭಾವಃ ತದ್ವದೇವ ವೃಕ್ಷಾದಿಶರೀರೇಷ್ವಪಿ ಶುಷ್ಕತಾದಿಕಮಿತ್ಯರ್ಥಃ । ತಥಾ ಚ ಶ್ರುತಿಃ 'ಅಸ್ಯ ಯದೇಕಾಂ ಶಾಖಾಂ ಜೀವೋ ಜಹಾತ್ಯಥ ಸಾಶುಷ್ಯತಿ'*

(ಛಾಂ. ೬.೧೧.೨) 'ನ ಬ್ರಹ್ಮಬುದ್ಧಿನಿಯಮಃ' ಇತ್ಯಂಶಸ್ಯ ಪೃಥಕ್ ಸೂತ್ರತ್ವೇऽಪಿ ಸೂತ್ರದ್ವಯಮೇಕೀಕೃತ್ಯ ಇತ್ಥಮೇವ ವ್ಯಾಖ್ಯೇಯಮ್। ಸೂತ್ರಭೇದಸ್ತು ದೈರ್ಘ್ಯಭಯಾದಿತಿ ವ್ಯಾಖ್ಯೇಯಮ್ ।

ಅನುವಾದ: ಎಲ್ಲಿ ಬಾಹ್ಯಜ್ಞಾನವು ಇದೆಯೋ ಅದೇ ಶರೀರವೆಂದು ಹೇಳಲಾಗದು ಎಂಬ ನಿಯಮವಿಲ್ಲ. ಆದರೆ ವೃಕ್ಷಾದಿಗಳಲ್ಲಿ ಒಳಗಿನ ಅರಿವು ಇರುವುದಾದರೂ ಭೋಕ್ತೃವಿನ ಭೋಗಾಯತನವಿರುವುದನ್ನು ತಿಳಿಯಬೇಕು. ಏಕೆಂದರೆ 'ಪೂರ್ವವತ್' ಎಂದರೆ ಮೊದಲೇ ಹೇಳಿದಂತೆ ಭೋಕ್ತೃವಿನ ಆಶ್ರಯವಿಲ್ಲದೆ ಮನುಷ್ಯಾದಿ ಶರೀರ ಕೊಳೆತುಹೋಗುವಂತೆ ವೃಕ್ಷಾದಿಶರೀರಗಳಲ್ಲಿಯೂ ಒಣಗಿಹೋಗುವುದೇ ಮೊದಲಾದುವು ಕಾಣುತ್ತವೆ. ಶ್ರುತಿಯೂ ಹೀಗೆ ಹೇಳುತ್ತದೆ, ವೃಕ್ಷದ ಯಾವ ಕೊಂಬೆಯಲ್ಲಿ ಚೇತನಜೀವವು ಹೊರಟುಹೋಗುವುದೋ ಅದು ಒಣಗಿಹೋಗುವುದು (ಛಾಂ. ೬.೧೧.೧೨). 'ನ ಬಾಹ್ಯಬುದ್ಧಿನಿಯಮಃ' 'ಹೊರಗಿನ ವಿಷಯಗಳ ಜ್ಞಾನ ಬೇಕೆಂಬ ನಿಯಮವಿಲ್ಲ' ಎಂಬ ಅಂಶವು ಬೇರೆ ಸೂತ್ರಗಳಲ್ಲಿದ್ದರೂ ಆ ಎರಡು ಸೂತ್ರಗಳನ್ನೂ ಒಂದು ಮಾಡಿ ಹೀಗೆಯೇ ಅರ್ಥ ಮಾಡಬೇಕು. ಸೂತ್ರವನ್ನು ಬೇರೆ ಮಾಡಿರುವುದು ಅದು ದೀರ್ಘವಾದೀತೆಂಬ ಭಯದಿಂದ ಮಾಡಲಾಗಿದೆ.

ಸೂತ್ರ: ಸ್ಮೃತೇಶ್ಚ ॥ ೧೨೩ ॥

ಸೂತ್ರಾನುವಾದ: ಸ್ಮೃತಿಯಿಂದಲೂ (ಪ್ರಮಾಣಿತವಾಗುವುದು)

ಭಾಷ್ಯ: *ಶರೀರಜೈಃ ಕರ್ಮದೋಷೈರ್ಯಾತಿ ಸ್ಥಾವರತಾಂ ನರಃ ।
ವಾಚಿಕೈಃ ಪಕ್ಷಿಮೃಗತಾಂ ಮಾನಸೈರಂತ್ಯಜಾತಿತಾಮ್ ॥
(ಮನು ೧೨.೯) ಇತ್ಯಾದಿ ಸ್ಮೃತೇರಪಿ ವೃಕ್ಷಾದಿಷು ಭೋಕ್ತೃಭೋಗಾಯತನತ್ವಮಿತ್ಯರ್ಥಃ ।*

ಅನುವಾದ: ಮನುಷ್ಯನು ಶರೀರದಿಂದ ಮಾಡುವ ಕರ್ಮದೋಷಗಳಿಂದ ಸ್ಥಾವರ ಶರೀರವನ್ನು ಪಡೆಯುವನು. ಮಾತುಗಳ (ದೋಷದಿಂದ) ಅಂತ್ಯಜಾತಿಯ (ಚಾಂಡಾಲ) ಜನ್ಮವನ್ನು ಪಡೆಯುವನು.

ಭಾಷ್ಯ: *ನನು ವೃಕ್ಷಾದಿಷು ಅಪಿ ಏವಂ ಚೇತನತ್ವೇನ ಧರ್ಮಾಧರ್ಮೋತ್ಪತ್ತಿ । ಪ್ರಸಂಗಸ್ತತ್ರಾಹ ।*

ಸೂತ್ರ: ನ ದೇಹಮಾತ್ರತಃ ಕರ್ಮಾಧಿಕಾರತ್ವಂ ವೈಶಿಷ್ಟ್ಯಶ್ರುತೇಃ ॥ ೧೨೪ ॥

ಸೂತ್ರಾನುವಾದ: ಕೇವಲ ದೇಹದಿಂದಲೇ ಕರ್ಮಾಧಿಕಾರತ್ವವು ದೊರೆಯದು. (ಅದಕ್ಕಾಗಿ) ವಿಶೇಷತೆ (ಇದೆ ಎಂಬುದನ್ನು) ಶ್ರುತಿಯು ಹೇಳಿದೆ.

ಭಾಷ್ಯ: *ನ ದೇಹಮಾತ್ರೇಣ ಧರ್ಮಾಧರ್ಮೋತ್ಪತ್ತಿ ಯೋಗ್ಯತ್ವಂ ಜೀವಸ್ಯ । ಕುತಃ? ವೈಶಿಷ್ಟ್ಯ ಶ್ರುತೇಃ । ಬ್ರಾಹ್ಮಣಾದಿದೇಹವಿಶಿಷ್ಟತ್ವೇನ ಏವ ಅಧಿಕಾರಶ್ರವಣಾದಿತ್ಯರ್ಥಃ ।*

ಅನುವಾದ: ಕೇವಲ ಶರೀರಪ್ರಾಪ್ತಿಯಿಂದ ಜೀವನಿಗೆ ಧರ್ಮಾಧರ್ಮದ ಯೋಗ್ಯತೆಯು ಬರುವುದಿಲ್ಲ. ಏಕೆ? ಅದಕ್ಕಾಗಿ ವಿಶೇಷತೆ ಇರಬೇಕು. ಬ್ರಾಹ್ಮಣರೇ ಮೊದಲಾದ ವಿಶಿಷ್ಟವಾದ ದೇಹವನ್ನು ಹೊಂದಿದಾಗಲೇ (ವಿಧ್ಯುಕ್ತವಾದ ಕರ್ಮಗಳ) ಅಧಿಕಾರಗಳಿಗೆ ಅರ್ಹರೆಂದು ಕೇಳಿದ್ದೇವೆ.

ಭಾಷ್ಯ: *ದೇಹಭೇದೇನೈವ ಧರ್ಮಾಧಿಕಾರಂ ದರ್ಶಯನ್ ದೇಹತ್ರೈವಿಧ್ಯಮಾಹ ।*

ಸೂತ್ರ: ತ್ರಿಧಾ ತ್ರಯಾಣಾಂ ವ್ಯವಸ್ಥಾ ಕರ್ಮದೇಹೋಪಭೋಗದೇಹ ಉಭಯದೇಹಾಃ ॥ ೧೨೫ ॥

ಅನುವಾದ: ಶರೀರಭೇದದಿಂದಲೇ ಕರ್ಮಾಧಿಕಾರವನ್ನು ತಿಳಿಸುತ್ತಾ ದೇಹದ ಮೂರು ಬಗೆಯನ್ನು ಹೇಳಿದ್ದಾರೆ.

ಸೂತ್ರಾನುವಾದ: ಮೂರು ದೇಹಗಳ ಮೂರು ಪ್ರಕಾರಗಳ ವ್ಯವಸ್ಥೆಯನ್ನು ಕರ್ಮದೇಹ, ಉಪಭೋಗ ದೇಹ ಮತ್ತು ಉಭಯದೇಹಗಳೆಂದು ಮಾಡಲಾಗಿದೆ.

ಭಾಷ್ಯ: *ತ್ರಯಾಣಾಂ ಉತ್ತಮಾಧಮಮಧ್ಯಮಾನಾಂ ಸರ್ವಪ್ರಾಣಿನಾಂ ತ್ರಿಪ್ರಕಾರೋ ದೇಹವಿಭಾಗಃ ಕರ್ಮದೇಹ-ಭೋಗದೇಹ-ಉಭಯದೇಹಾ ಇತ್ಯರ್ಥಃ । ತತ್ರ ಕರ್ಮದೇಹಃ ಪರಮರ್ಷೀಣಾಂ, ಭೋಗದೇಹಃ ಇಂದ್ರಾದೀನಾಂ, ಉಭಯದೇಹಶ್ಚ ರಾಜರ್ಷೀಣಾಂ ಇತಿ । ಅತ್ರ ಪ್ರಾಧಾನ್ಯೇನ ತ್ರಿಧಾ ವಿಭಾಗಃ । ಅನ್ಯಥಾ ಸರ್ವಸ್ಯೈವ ಭೋಗದೇಹತ್ವಾಪತ್ತೇಃ ।*

ಅನುವಾದ: ಉತ್ತಮ, ಅಧಮ ಮತ್ತು ಮಧ್ಯಮಗಳ ಎಲ್ಲ ಪ್ರಾಣಿಗಳ ದೇಹಗಳನ್ನು ಮೂರು ಭಾಗಗಳನ್ನಾಗಿ ಮಾಡಲಾಗಿದೆ. (೧) ಕರ್ಮದೇಹ (೨) ಭೋಗದೇಹ (೩) ಉಭಯದೇಹ -ಇವುಗಳಲ್ಲಿ ಕರ್ಮದೇಹವು ಪರಮರ್ಷಿಗಳದ್ದು, ಭೋಗದೇಹವು ಇಂದ್ರಾದಿ ದೇವತೆಗಳದ್ದು, ಉಭಯದೇಹಗಳು ರಾಜರ್ಷಿಗಳದ್ದಾಗಿರುತ್ತದೆ. ಇದರಲ್ಲಿ ಪ್ರಧಾನವಾಗಿ ಮೂರು ವಿಭಾಗಗಳಿವೆ. ಇಲ್ಲದಿದ್ದಲ್ಲಿ ಎಲ್ಲವೂ ಭೋಗದೇಹಗಳೇ ಆಗಿಬಿಡುತ್ತವೆ.

ಭಾಷ್ಯ: *ಚತುರ್ಥಮಪಿ ಶರೀರಮಾಹ ।*

ಸೂತ್ರ: ನ ಕಿಂಚಿದಪ್ಯನುಶಯಿನಃ ॥ ೧೨೬ ॥

ಅನುವಾದ: ನಾಲ್ಕನೆಯ ಶರೀರವನ್ನೂ ಕುರಿತು ಹೇಳುವರು.

ಸೂತ್ರಾನುವಾದ: ವಿರಾಗಿಗಳಿಗೆ ಯಾವ ದೇಹವೂ ಇರದು.

ಭಾಷ್ಯ: *ವಿದ್ಯಾದನುಶಯಂ ದ್ವೇಷ್ಯಂ ಪಶಾತ್ತಾಪಾನುತಾಪಯೋಃ । (ಶಾಶ್ವತಕೋಶ ೩೨೦) ಇತಿ ವಾಕ್ಯಾದನುಶಯೋ ವೈರಾಗ್ಯಮ್ । ವಿರಕ್ತಾನಾಂ*

ಶರೀರಮೇತತ್ತ್ರಯವಿಲಕ್ಷಣಮಿತ್ಯರ್ಥಃ । ಯಥಾ ದತ್ತಾತ್ರೇಯ ಜಡಭರತಾದೀನಾಮಿತಿ ।

ಅನುವಾದ: ಶಾಶ್ವತಕೋಶದ ವಾಕ್ಯದಂತೆ, 'ಅನುಶಯ' ಎಂದರೆ 'ದ್ವೇಷ್ಯ, ಪಶ್ಚಾತ್ತಾಪ, ಬೇಸರ'; ಈ ವಾಕ್ಯದಂತೆ ಅನುಶಯದ ಅರ್ಥ ವೈರಾಗ್ಯ. ವಿರಕ್ತರಿಗೆ ಈ ಶರೀರವು ಬೇರೆ ಮೂರು ಶರೀರಗಳಿಗೆ ವಿಲಕ್ಷಣವಾದುದು. (ವಿರಕ್ತರಲ್ಲಿ) ದತ್ತಾತ್ರೇಯ, ಜಡಭರತ ಮುಂತಾದವರು ಎಂದು ತಿಳಿಯಬೇಕು.

ಭಾಷ್ಯ: *ಉಕ್ತಸ್ಯ ಈಶ್ವರಭಾವಸ್ಯ ಸ್ಥಾಪನಾಯ ಪರಾಭ್ಯುಪಗತಂ ಜ್ಞಾನೇಚ್ಛಾ–ಕೃತ್ಯಾದಿನಿತ್ಯತ್ವಂ ಪ್ರತಿಷೇಧತಿ ।*

ಸೂತ್ರ: ನ ಬುದ್ಧ್ಯಾದಿ ನಿತ್ಯತ್ವಮಾಶ್ರಯ ವಿಶೇಷೇಽಪಿ ವಹ್ನಿವತ್ ॥ ೧೨೭ ॥

ಸೂತ್ರಾನುವಾದ: ವಿಶೇಷವಾದ ಆಶ್ರಯವಿದ್ದರೂ ಬುದ್ಧ್ಯಾದಿಗಳು ನಿತ್ಯವಾಗಿ ಇರುವುದಿಲ್ಲ; ಬೆಂಕಿಯಂತೆ.

ಭಾಷ್ಯ: *ಬುದ್ಧಿರತ್ರ ಅಧ್ಯಯವಯಾಖ್ಯಾ ವೃತ್ತಿಃ । ತಥಾ ಚ ಜ್ಞಾನೇಚ್ಛಾ/ಕೃತ್ಯಾದೀನಾಮಾಶ್ರಯವಿಶೇಷೇ ಪರೈರೀಶ್ವರೋಪಾಧಿತಯಾಭ್ಯುಪಗಮೇ ಅಪಿ ನಿತ್ಯತ್ವಂ ನಾಸ್ತಿ । ಅಸ್ಮದಾದಿಬುದ್ಧಿದೃಷ್ಟಾಂತೇನ ಸರ್ವೇಷಾಂ ಏವ ಬುದ್ಧೀಚ್ಛಾದೀನಾಂ ಅನಿತ್ಯತ್ವಾನುಮಾನಾತ್ । ಯಥಾ ಲೌಕಿಕವಹ್ನಿದೃಷ್ಟಾಂತೇನಾವರಣತೇಜಸೋಽಪ್ಯನಿತ್ಯತ್ವಾನುಮಾನಮಿತ್ಯರ್ಥಃ ।*

ಅನುವಾದ: ಬುದ್ಧಿಯು ಇಲ್ಲಿ ನಿರ್ಧಾರ ತೆಗೆದುಕೊಳ್ಳುವ ವೃತ್ತಿಯುಳ್ಳದ್ದು. ಹಾಗೆಯೇ ಜ್ಞಾನ, ಇಚ್ಛೆ, ಕೃತಿ ಮುಂತಾದುವುಗಳಿಗೆ ವಿಶೇಷವಾದ ಆಶ್ರಯವಾದುದನ್ನು ಇತರರು ಈಶ್ವರನ ಉಪಾಧಿ ಎಂಬ ರೂಪವನ್ನು ಸ್ವೀಕರಿಸಿದ್ದರೂ ನಿತ್ಯತ್ವವೆಂಬುದಿಲ್ಲ. ನಮ್ಮದೇ ಮೊದಲಾದ ಬುದ್ಧಿ ದೃಷ್ಟಾಂತದಿಂದ ಎಲ್ಲರ ಬುದ್ಧಿ, ಇಚ್ಛೆ ಮುಂತಾದುವು ಅನುಮಾನ ಪ್ರಮಾಣದಿಂದ ಅನಿತ್ಯವೆಂದು ಹೇಳಬಹುದು. ಹೇಗೆ ಲೌಕಿಕ ಅಗ್ನಿಯದೃಷ್ಟಾಂತದಿಂದ ಆವರಿಸುವ ತೇಜಸ್ಸೂ ಸಹ ಅನಿತ್ಯವೆಂಬ ಅನುಮಾನಕ್ಕೆ ಆಸ್ಪದವಾಗುತ್ತದೆ.

ಭಾಷ್ಯ: *ಆಸ್ತಾಂ ತಾವದ್ ಜ್ಞಾನೇಚ್ಛಾದೇರ್ನಿತ್ಯತ್ವಂ, ತದಾಶ್ರಯ–ಈಶ್ವರೋಪಾಧಿರೇವಾಸಿದ್ಧ ಈಶ್ವರಸ್ಯಾಸಿದ್ಧೇರಿತ್ಯತ ಆಹ ।*

ಅನುವಾದ: ಜ್ಞಾನ, ಇಚ್ಛೆ ಮುಂತಾದುವು ನಿತ್ಯವೆಂಬುದು ಹಾಗಿರಲಿ, ಅದಕ್ಕೆ ಆಶ್ರಯವಾದ ಈಶ್ವರೋಪಾಧಿಯೇ ಅಸಿದ್ಧವಾದುದು, ಈಶ್ವರನನ್ನೇ ಅಸಿದ್ಧನೆನ್ನಲಾಗಿದೆಯಲ್ಲವೆ ಎಂಬುದಕ್ಕೆ ಹೇಳಿದ್ದಾರೆ.

ಸೂತ್ರ: ಆಶ್ರಯಾಸಿದ್ಧೇಃ ॥ ೧೨೮ ॥

ಸೂತ್ರಾನುವಾದ: (ಅವುಗಳಿಗೆ) ಆಶ್ರಯನಾದ (ಈಶ್ವರನೇ) ಸಿದ್ಧವಾಗಿಲ್ಲ.

ಭಾಷ್ಯ: *ಸುಗಮಮ್ ।*

ಅನುವಾದ: ಸುಲಭವಾಗಿದೆ.

ಭಾಷ್ಯ: *ನನ್ವೇವಂ ಬ್ರಹ್ಮಾಂಡಾದಿಸರ್ಜನಸಮರ್ಥಂ ಸರ್ವಜ್ಞತ್ವಾದಿಕಂ ಕಥಂ ಜನ್ಯಂ ಸಂಭಾಷ್ಯೇತಾಽಪಿ, ಲೋಕೇ ತಪ ಆದಿಭಿರೇವಂ ಐಶ್ವರ್ಯಾ-ದರ್ಶನಾತ್ ಇತಿ, ತತ್ರಾಹ-*

ಸೂತ್ರ: ಯೋಗಸಿದ್ಧಯೋಽಪ್ಯೌಷಧಾದಿಸಿದ್ಧಿವನ್ನಾಪಲಪನೀಯಾಃ ॥ ೧೨೯ ॥

ಅನುವಾದ: ಬ್ರಹ್ಮಾಂಡಾದಿ ಸೃಷ್ಟಿಸಮರ್ಥವಾದ, ಸರ್ವಜ್ಞತ್ವವನ್ನು ಹೊಂದಿರುವ ಗುಣಗಳುಳ್ಳವನಿಗೆ ಕಾರ್ಯತೆಯು ಸಂಭವಿಸುವುದು ಹೇಗೆ? ಏಕೆಂದರೆ, ಲೋಕದಲ್ಲಿ ತಪಸ್ಸೇ ಮುಂತಾದುವುಗಳಿಂದ ಈ ಬಗೆಯ ಐಶ್ವರ್ಯವು ಕಾಣಬರದು.

ಸೂತ್ರಾನುವಾದ: ಯೋಗಸಿದ್ಧಿಯೂ ಔಷಧಾದಿಗಳ ಸಿದ್ಧಿಯಂತೆ ಪ್ರಾಪ್ತವಾಗುವುದರಿಂದ ಅದನ್ನು ತಿರಸ್ಕರಿಸಬಾರದು.

ಭಾಷ್ಯ: *ಪುರುಷಸಿದ್ಧಿ ಪ್ರತಿಕೂಲತಯಾ ಭೂತಚೈತನ್ಯವಾದಿನಂ ಪ್ರತ್ಯಾಚಷ್ಟೇ ।*

ಸೂತ್ರ: ನ ಭೂತಚೈತನ್ಯಂ ಪ್ರತ್ಯೇಕಾದೃಷ್ಟೇಃ ಸಾಂಹಿತ್ಯೇಽಪಿ ಚ ಸಾಂಹಿತ್ಯೇಪಿ ಚ ॥ ೧೩೦ ॥

ಅನುವಾದ: ಪುರುಷನ ಸಿದ್ಧಿಗೆ ಪ್ರತಿಕೂಲವಾದ್ದರಿಂದ ಭೂತಚೈತನ್ಯವಾದವನ್ನು ಖಂಡಿಸುವರು.

ಸೂತ್ರಾನುವಾದ: ಭೂತಗಳಲ್ಲಿ ಚೈತನ್ಯವನ್ನು ಕಾಣುವುದು ಸಾಧ್ಯವಿಲ್ಲ. ಏಕೆಂದರೆ ಅವು ಪ್ರತ್ಯೇಕವಾಗಿ ಗೋಚರವಾಗುವುದಿಲ್ಲ; ಅಲ್ಲದೆ ಒಟ್ಟಾಗಿ (ಚೈತನ್ಯವನ್ನು) ಕಾಣುವುದಾದರೂ ಹೇಗೆ?

ಭಾಷ್ಯ: *ಸಂಹತಭಾವಾವಸ್ಥಾಯಮಪಿ ಪಂಚಭೂತೇಷು ಚೈತನ್ಯಂ ನಾಸ್ತಿ । ವಿಭಾಗಕಾಲೇ ಪ್ರತ್ಯೇಕಂ ಚೈತನ್ಯಾದೃಷ್ಟೇರಿತ್ಯರ್ಥಃ । ತೃತೀಯಾಧ್ಯಾಯೇ ಚೇದಂ ಸ್ವಸಿದ್ಧಾಂತವಿಧಯೋಕ್ತಮ್ । ಅತ್ರ ಚ ಪರಮತನಿರಾಕರಣಾ-ಯೇತಿ ನ ಪೌನರುಕ್ತ್ಯಂ ದೋಷಾಯೇತಿ । ವೀಪ್ಸಾಧ್ಯಾಯಸಮಾಪ್ತೌ ।*

ಸ್ವಸಿದ್ಧಾಂತವಿರುದ್ಧಾರ್ಥಭಾಷಿಣೋ ಯೇ ಕುವಾದಿನಃ ।
ಪಂಚಮೇ ತಾನ್ ನಿರಾಕೃತ್ಯ ಸ್ವಸಿದ್ಧಾಂತೋ ದೃಢೀಕೃತಃ ॥

ಅನುವಾದ: ಒಟ್ಟಿಗೆ ಸೇರಿದ ಅವಸ್ಥೆಯಲ್ಲೂ ಪಂಚಭೂತಗಳಲ್ಲಿ ಚೈತನ್ಯವಿರದು. (ಪಂಚಭೂತಗಳ) ವಿಭಾಗ ಕಾಲದಲ್ಲಿ ಪ್ರತ್ಯೇಕವಾಗಿ (ಅಣುಗಳವರೆಗೂ) ಚೈತನ್ಯವು ಗೋಚರಿಸದು. ಮೂರನೆಯ ಅಧ್ಯಾಯದಲ್ಲಿಯೂ ಸಹ ಸ್ವಸಿದ್ಧಾಂತದ ರೂಪದಲ್ಲಿ ಹೇಳಿದ್ದಾಗಿದೆ. ಇಲ್ಲಿ ಪರಮತವನ್ನು ನಿರಾಕರಿಸಲು ಹೇಳಿದೆ, ಪುನರುಕ್ತಿಯ ದೋಷವಿಲ್ಲ.

ದ್ವಿರಾವೃತ್ತಿಯಾದ ಸಾಹಿತ್ಯೇಽಪಿ ಚ 'ಸಾಹಿತ್ಯೇಽಪಿ ಚ' ಅಧ್ಯಾಯದ ಮುಕ್ತಾಯವನ್ನು ಸೂಚಿಸುತ್ತದೆ.

ಯಾರು ನಮ್ಮ ಸಿದ್ಧಾಂತದ ವಿರುದ್ಧ ಯಾವ ಕುವಾದಿಗಳು ಮಾತನಾಡುತ್ತಿದ್ದರೋ ಅವರನ್ನು ಐದನೆಯ ಅಧ್ಯಾಯದಲ್ಲಿ ನಿರಾಕರಿಸಿ ನಮ್ಮ ಸಿದ್ಧಾಂತವನ್ನು ದೃಢೀಕರಿಸಿದ್ದೇವೆ.

ಇಲ್ಲಿಗೆ ಶ್ರೀವಿಜ್ಞಾನಭಿಕ್ಷುವಿರಚಿತ ಸಾಂಖ್ಯಪ್ರವಚನ ಭಾಷ್ಯದ
ಐದನೆಯ ಅಧ್ಯಾಯವು ಸಮಾಪ್ತವಾಯಿತು

ಅಥ ಷಷ್ಠಃ ಅಧ್ಯಾಯಃ

ತಂತ್ರಾಧ್ಯಾಯವೆಂಬ ಆರನೆಯ ಅಧ್ಯಾಯ

ಭಾಷ್ಯ: *ಅಧ್ಯಾಯ ಚತುಷ್ಕೇಣ ಸಮಸ್ತಶಾಸ್ತ್ರಾರ್ಥಂ ಪ್ರತಿಜ್ಞಾಯ ಪಂಚಮಾಧ್ಯಾಯೇ ಪರಪಕ್ಷನಿರಾಕರಣೇನ ಪ್ರಸಾಧ್ಯೇದಾನೀಂ ತಮೇವ ಸಾರಭೂತಶಾಸ್ತ್ರಾರ್ಥಂ ಷಷ್ಠಾಧ್ಯಾಯೇನ ಸಂಕಲಯನ್ ಉಪಸಂಹರತಿ । ಉಕ್ತಾರ್ಥಾನಾಂ ಹಿ ಪುನಸ್ತಂತ್ರಾಖ್ಯೇ ವಿಸ್ತರೇ ಕೃತೇ ಶಿಷ್ಯಾಣಾಮಸಂದಿಗ್ಧಾವಿಪರ್ಯಸ್ತಃ ದೃಢಪರಃ ಬೋಧ ಉತ್ಪದ್ಯತ ಇತ್ಯರ್ಥ ಸ್ಥೂಣಾನಿಖನನನ್ಯಾಯಾದನುಕ್ತಯುಕ್ತ್ಯಾದಿ ಉಪನ್ಯಾಸಾಚ್ಚ ನಾತ್ರ ಪೌನರುಕ್ತ್ಯಂ ದೋಷಾಯ ।*

ಅನುವಾದ: ಆ ನಾಲ್ಕು ಅಧ್ಯಾಯಗಳಲ್ಲಿ ಸಮಸ್ತಶಾಸ್ತ್ರಾರ್ಥದ ಪ್ರತಿಜ್ಞೆ ಮಾಡಿ, ಪಂಚಮಾಧ್ಯಾಯದಲ್ಲಿ ಪರಪಕ್ಷವನ್ನು ನಿರಾಕರಣೆಯಿಂದ ಅಂದಗೊಳಿಸಿದ್ದಾರೆ. ಈಗ ಅದೇ ಸಾರಭೂತವಾದ ಶಾಸ್ತ್ರಾರ್ಥವನ್ನು ಆರನೆಯ ಅಧ್ಯಾಯದಲ್ಲಿ ಸಂಕಲನೆ ಮಾಡಿ ಉಪಸಂಹಾರ. ಮಾಡುತ್ತಾರೆ ಹೇಳಿದ ವಿಷಯಗಳನ್ನು ಮತ್ತೆ ತಂತ್ರವೆಂಬ ಈ ಅಧ್ಯಾಯದಲ್ಲಿ ವಿಸ್ತರಿಸುತ್ತಾ ಹೇಳಿದರೆ ಶಿಷ್ಯರಿಗೆ ಸಂದೇಹವಿಲ್ಲ ದಂತೆ, ಯಥಾರ್ಥವಾಗಿ, ದೃಢವಾಗಿ (ಶಾಸ್ತ್ರದ) ಅರಿವಾಗುತ್ತದೆ. ಆದ್ದರಿಂದ ಸ್ಥೂಣಾ ನಿಖನನನ್ಯಾಯದಂತೆ ಇನ್ನೂ ಹೇಳದ ಯುಕ್ತ್ಯಾದಿಗಳನ್ನು ತಿಳಿಸಬೇಕಾಗಿರು ವುದು ಪುನರುಕ್ತಿಯ ದೋಷಕ್ಕೆ ಪಾತ್ರವಾಗದು.

ವಿವರಣೆ: ಸ್ಥೂಣಾನಿಖನನನ್ಯಾಯವೆಂದರೆ ಮನೆಯ ಮುಂದಿನ ಕಂಬವನ್ನು ಅಲುಗಾಡಿಸಿ ಅಲುಗಾಡಿಸಿ ಕುಟ್ಟಿ ನೆಡುವುದು, ತರ್ಕ ಮಾಡುತ್ತಾ ಮಾಡುತ್ತಾ ಸಿದ್ಧಾಂತವನ್ನು ಮಂಡಿಸುವುದು ಎಂಬುದಕ್ಕೆ ಈ ನ್ಯಾಯವನ್ನು ಹೇಳುವರು.

ಸೂತ್ರ: ಅಸ್ತ್ಯಾತ್ಮಾ ನಾಸ್ತಿತ್ವಸಾಧನಾಭಾವಾತ್ ॥ ೧ ॥

ಸೂತ್ರಾನುವಾದ: ಚೇತನವು ಇರುವುದು; ಅದು ಇಲ್ಲವೆಂದು ಹೇಳಲು ಸಾರ್ಥಕವಾದ ಪ್ರಮಾಣಗಳಿಲ್ಲ.

ಭಾಷ್ಯ: *ಜಾನಾಮಿ ಇತ್ಯೇವಂ ಪ್ರತೀಯಮಾನತಯಾ ಪುರುಷಃ ಸಾಮಾನ್ಯತಃ ಸಿದ್ಧ ಏವಾಸ್ತಿ ಬಾಧಕಪ್ರಮಾಣಾಭಾವಾತ್ । ಅತಃ ತದ್ವಿವೇಕಮಾತ್ರಂ ಕರ್ತವ್ಯಮಿತ್ಯರ್ಥಃ ।*

ಅನುವಾದ: 'ನಾನು ತಿಳಿಯುತ್ತೇನೆ' ಎಂದು ಮುಂತಾಗಿ ತಿಳಿಯುವುದರಿಂದ ಪುರುಷನು ಸಾಮಾನ್ಯವಾಗಿ (ನನ್ನ ಅಸ್ತಿತ್ವ) ಸಿದ್ಧವಾದುದೇ, ಇದಕ್ಕೆ ಬಾಧಕ ಪ್ರಮಾಣ ಯಾವುದೂ ಇಲ್ಲ. ಆದ್ದರಿಂದ ಆ ವಿಷಯದಲ್ಲಿ ವಿಚಾರ ಮಾಡಬೇಕಷ್ಟೆ.

ಭಾಷ್ಯ: *ತತ್ರ ವಿವೇಕೇ ಪ್ರಮಾಣದ್ವಯಮಾಹ ಸೂತ್ರಾಭ್ಯಾಮ್ ।*

ಸೂತ್ರ: ದೇಹಾದಿ ವ್ಯತಿರಿಕ್ತೋಽಸೌ ವೈಚಿತ್ರ್ಯಾತ್ ॥ ೨ ॥

ಅನುವಾದ: ಆ ವಿಷಯದಲ್ಲಿ ವಿಚಾರ ಮಾಡುವ ಎರಡು ಪ್ರಮಾಣಗಳನ್ನು ಎರಡು ಸೂತ್ರಗಳಿಂದ ಹೇಳಲಾಗಿದೆ.

ಸೂತ್ರಾರ್ಥ: ಈ ಆತ್ಮನು ದೇಹಾದಿಗಳಿಗಿಂತ ಭಿನ್ನವಾದುದು, ಏಕೆಂದರೆ ಅದು ವಿಲಕ್ಷಣವಾದುದು.

ಭಾಷ್ಯ: *ಅಸಾವಾತ್ಮಾ ದ್ರಷ್ಟಾ ದೇಹಾದಿಪ್ರಕೃತ್ಯಂತೇಭ್ಯೋಽತ್ಯಂತಂ ಭಿನ್ನೋ ವೈಚಿತ್ರ್ಯಾತ್ । ಪರಿಣಾಮಿತ್ವಾಪರಿಣಾಮಿತ್ವಾದಿವೈಧರ್ಮ್ಯಾತ್ ಇತ್ಯರ್ಥಃ । ಪ್ರಕೃತ್ಯಾದಯಸ್ತಾವತ್ ಪ್ರತ್ಯಕ್ಷಾನುಮಾನಾಗಮೈಃ ಪರಿಣಾಮಿತಯೈವ ಸಿದ್ಧಾಃ, ಪುರುಷಸ್ಯಾಪರಿಣಾಮಿತ್ವಂ ತು ಸದಾ ಜ್ಞಾತವಿಷಯತ್ವಾದನುಮೀಯತೇ । ತಥಾಹಿ– ಯಥಾ ಚಕ್ಷುಷೋ ರೂಪಮೇವ ವಿಷಯೋ ನ ಸನ್ನಿಕರ್ಷಸಾಮ್ಯೇಽಪಿ ರಸಾದಿರೇವಂ ಪುರುಷಸ್ಯ ಸ್ವಬುದ್ಧಿರೇವ ವೃತ್ತಿರೇವ ವಿಷಯಃ ನ ತು ಸನ್ನಿಕರ್ಷಸಾಮ್ಯೇಽಪಿ ಅನ್ಯದಸ್ತು ಇತಿ ಫಲಬಲಾತ್ ಕ್ಲಪ್ತಮ್ । ಬುದ್ಧಿವೃತ್ತ್ಯಾರೂಢತಯೈವತ್ವನ್ಯದ್ಭೋಗ್ಯಂ ಭವತಿ ಪುರುಷಸ್ಯ ನ ಸ್ವತಃ । ಸರ್ವದಾ ಸರ್ವಭಾನಾಪತ್ತೇಃ । ತಾಶ್ಚ ಬುದ್ಧಿವೃತ್ತಯಃ ನಾಜ್ಞಾತಾಸ್ತಿಷ್ಠಂತಿ ಜ್ಞಾನೇಚ್ಛಾಸುಖಾದೀನಾಂ ಅಜ್ಞಾತಸತ್ತಾಸ್ವೀಕಾರೇ ತೇಷ್ವಪಿ ಘಟಾದಾವಿವ ಸಂಶಯಾತ್ದಿ ಪ್ರಸಂಗಾತ್ 'ಅಹಂ ಜಾನಾಮಿ ನ ವಾ', 'ಸುಖೀ ನ ವಾ' ಇತ್ಯಾದಿ ರೂಪೇಣ । ಅತಸ್ತೇಷಾಂ ಸದಾ ಜ್ಞಾತತ್ವಾತ್ ತದ್ದ್ರಷ್ಟಾ ಚೇತನೋಽಪರಿಣಾಮೀತ್ಯಾಯಾತಮ್ । ಚೇತನಸ್ಯ ಪರಿಣಾಮಿತ್ವೇ ಕದಾಚಿತ್ ಆಂಧ್ಯಪರಿಣಾಮೇನ ಸತ್ಯಾ ಅಪಿ ಬುದ್ಧಿವೃತ್ತೇಃ ಆದರ್ಶನೇನ ಸಂಶಯಾದ್ಯಾಪತ್ತೇರಿತಿ । ಏವಂ ಪಾರಾರ್ಥ್ಯ ಅಪಾರಾರ್ಥಾದಿಕಂ ಅಪಿ ಪೂರ್ವೋಕ್ತಂ ವೈಧರ್ಮ್ಯಜಾತಂ ಬೋಧ್ಯಮ್ ।*

ಅನುವಾದ: ಈ ಆತ್ಮನು ದ್ರಷ್ಟಾ, ದೇಹವೇ ಮೊದಲಾಗಿ ಪ್ರಕೃತಿಯವರೆಗೆ ಅತ್ಯಂತ ಭಿನ್ನವಾಗಿರುವನು, ವೈಚಿತ್ರ್ಯದ ಕಾರಣ; ಪರಿಣಾಮಿತ್ವ ಅಪರಿಣಾಮಿತ್ವಗಳೆಂಬ

ವೈಧರ್ಮ್ಯದ ಕಾರಣ ಎಂದರ್ಥ. ಪ್ರಕೃತ್ಯಾದಿಗಳಾದರೋ ಪ್ರತ್ಯಕ್ಷ, ಅನುಮಾನ, ಆಗಮಗಳಿಂದ ಪರಿಣಾಮಿಗಳಾದ ಕಾರಣ ಸಿದ್ಧವಾದಂತೆಯೇ, ಆದರೆ ಪುರುಷನ ಅಪರಿಣಾಮಿತ್ವವು ಯಾವಾಗಲೂ ತಿಳಿದ ವಿಷಯವಾದದ್ದರಿಂದ ಅನುಮಾನ ಮಾಡಬಹುದು. ಹಾಗೆಯೇ– ಹೇಗೆ ಕಣ್ಣಿಗೆ ರೂಪವೇ ವಿಷಯವೇ ಹೊರತು ಸಮೀಪವಾಗಿರುವುದು ಸಮನಾದರೂ ರಸವನ್ನು ಅದು ಗ್ರಹಿಸುವುದಿಲ್ಲ. ಪುರುಷನಲ್ಲಿ ಅವನ ಬುದ್ಧಿವೃತ್ತಿಯೇ ವಿಷಯವಾಗಬಲ್ಲುದು, ಸಾಮೀಪ್ಯವು ಸಮಾನವಾಗಿ ಇದ್ದರೂ ಜ್ಞಾನದ ವಿಷಯವಾಗಿ ಇರುವುದನ್ನು ಫಲದ ಬಲದಿಂದ ತಿಳಿಯಬಲ್ಲನೇ ಹೊರತು ಬೇರೆಯ ವಿಷಯವನ್ನಲ್ಲ. ಬುದ್ಧಿವೃತ್ತಿಯಿಂದ ತೋರಿಬರುವುದೇ ಪುರುಷನ ಅನುಭವಕ್ಕೆ ಬರುವುದೇ ಹೊರತು ತಾನಾಗಿಯೇ ಬರುವುದಿಲ್ಲ. ಇಲ್ಲದಿದ್ದರೆ ಯಾವಾಗಲೂ ಎಲ್ಲವೂ ಪುರುಷನಿಗೆ ಗೋಚರವಾಗುವ ಸಂಭವ ಬರುವುದು. ಆ ಬುದ್ಧಿವೃತ್ತಿಗಳೂ ಅಜ್ಞಾತವಾಗಿಯೇ ಉಳಿಯುವುದಿಲ್ಲ. ಜ್ಞಾನ, ಇಚ್ಛಾ, ಸುಖ ಮುಂತಾದುವುಗಳು ತಿಳಿಯಲಾಗದ 'ಸತ್ತಾ'ಗಳು ಎಂದು ಅಂಗೀಕರಿಸಿ ದಲ್ಲಿ ಘಟಾದಿಗಳಲ್ಲಿ ಆಗುವಂತೆ ಅವುಗಳಲ್ಲಿ 'ನಾನು ತಿಳಿಯುತ್ತಿದ್ದೇನೆಯೇ', 'ನಾನು ಸುಖಿಯೇ ಅಲ್ಲವೇ' ಇತ್ಯಾದಿ ಅನುಭವವಾಗಿ ಸಂದೇಹವುಂಟಾಗಿ ಬಿಡುತ್ತದೆ. ಆದ್ದರಿಂದ ನೋಡುವ ಚೇತನವು ಪರಿಣಾಮ ಹೊಂದದು ಎಂಬುದು ತಿಳಿದುಬರುವುದು. ಚೇತನವು ಪರಿಣಾಮಿ ಆದಲ್ಲಿ ಯಾವಾಗಲಾದರೂ ಅಂಧತ್ವದ ಪರಿಣಾಮದಿಂದ ಬುದ್ಧಿವೃತ್ತಿಯು ಇದ್ದರೂ ಬುದ್ಧಿವೃತ್ತಿಯು ಕಾಣದೆ ಸಂಶಯಾದಿಗಳು ಉಂಟಾಗುವುವು. ಹಾಗೆಯೇ ಪರಾರ್ಥಕ್ಕಾಗಿ ಅಪರಾರ್ಥಕ್ಕಾಗಿ ಮುಂತಾದುವೂ ಮೊದಲು ಹೇಳಿದಂತೆ ವೈಧರ್ಮ್ಯದಿಂದ ಉಂಟಾದುದು ಎಂದು ತಿಳಿಯಬೇಕು.

ಸೂತ್ರ: ಷಷ್ಠೀವ್ಯಪದೇಶಾದಪಿ ॥ ೩ ॥

ಸೂತ್ರಾನುವಾದ: ಷಷ್ಠೀ ವಿಭಕ್ತಿಯ ವ್ಯವಹಾರದಿಂದಲೂ (ಆತ್ಮವು ಬೇರೆಯೆಂದು ತಿಳಿಯಬೇಕು)

ಭಾಷ್ಯ: *'ಮಮ ಇದಂ ಶರೀರಂ', 'ಮಮ ಇಯಂ ಬುದ್ಧಿಃ' ಇತ್ಯಾದೇಃ ವಿದುಷಾಂ ಷಷ್ಠೀವ್ಯಪದೇಶಾದಪಿ ದೇಹಾದಿಭ್ಯ ಆತ್ಮಾ ಭಿನ್ನಃ । ಅತ್ಯಂತಾಭೇದೇ ಷಷ್ಠ್ಯನುಪಪತ್ತೇಃ ಇತ್ಯರ್ಥಃ । ತದುಕ್ತಂ ವಿಷ್ಣುಪುರಾಣೇ–*

ತ್ವಂ ಕಿಮೇತಚ್ಛಿರಃ ಕಿಂತು ಶಿರಸ್ತವ ತಥೋದರಮ್ ।
ಕಿಮು ಪಾದಾದಿಕಂ ತ್ವಂ ವೈ ತವೈತದ್ಧಿ ಮಹೀಪತೇ ॥
ಸಮಸ್ತಾವಯವೇಭ್ಯಸ್ತ್ವಂ ಪೃಥಗ್ಭೂಯ ವ್ಯವಸ್ಥಿತಃ ।
ಕೋಽಹಮಿತ್ಯತ್ರ ನಿಪುಣೋ ಭೂತ್ವಾ ಚಿಂತಯ ಪಾರ್ಥಿವ ॥

(ವಿ.ಪು. ೨.೧೩. ೯೮–೯೯)

ಅನುವಾದ: 'ಇದು ನನ್ನ ಶರೀರ', 'ಇದು ನನ್ನ ಬುದ್ಧಿ' ಇತ್ಯಾದಿ ವಾಕ್ಯಗಳಲ್ಲಿ ಷಷ್ಠೀ ಪ್ರಯೋಗದಿಂದಲೂ ಆತ್ಮವು ದೇಹಕ್ಕಿಂತ ಭಿನ್ನವೆಂದು ಸಿದ್ಧವಾಗುವುದು. ಅವೆರಡೂ ಭಿನ್ನವಾಗಿ ಇರುವುದರಿಂದಲೇ ಷಷ್ಠೀ ವಿಭಕ್ತಿಯ ಬಳಕೆಯಿರುವುದು. ಅದನ್ನೇ ವಿಷ್ಣು ಪುರಾಣದಲ್ಲಿ ಹೇಳಲಾಗಿದೆ.

'ಎಲೈ ದೊರೆಯೇ, ಈ ತಲೆಯು ನೀನೋ ಅಥವಾ ಈ ತಲೆ ನಿನ್ನದೋ? ಈ ಉದರ, ಪಾದಗಳು ನೀನೋ ಅಥವಾ ಇವುಗಳು ನಿನ್ನವೊ? ಎಲ್ಲ ಅವಯವ ಗಳಿಗಿಂತ ಬೇರೆಯಾಗಿ ನೀನಿರುವೆ? ನಾನು ಯಾರು ಎಂಬುದನ್ನು ಚೆನ್ನಾಗಿ ಅಲೋಚನೆ ಮಾಡು'.

ಭಾಷ್ಯ: *ನ ಚ ಸ್ಥೂಲೋಽಹಮಿತ್ಯಾದಿರಪಿ ವಿದ್ವದ್ವ್ಯಪದೇಶೋಽಸ್ತಿ ಇತಿ ವಾಚ್ಯಮ್ । ಶ್ರುತ್ಯಾ ಬಾಧಿತತಯಾ, ಮಮಾತ್ಮಾ ಭದ್ರಸೇನ ಇತಿವತ್ ಗೌಣತ್ವೇನೈವ ತದುಪಪತ್ತೇರಿತಿ ।*

ಅನುವಾದ: 'ನಾನು ಸ್ಥೂಲವಾಗಿದ್ದೇನೆ', ಮುಂತಾದುವೂ ಸಹ ವಿದ್ವಾಂಸರು ಬಳಸುವರಲ್ಲವೆ ಎಂದು ಹೇಳಿದರೆ ಅದನ್ನು ಶ್ರುತಿಗಳು ವಿರೋಧಿಸಿವೆಯಾದ್ದರಿಂದ ಅದನ್ನು ನನ್ನ ಆತ್ಮನು ಭದ್ರಸೇನನೇ ಎಂದು ಮುಂತಾಗಿ ಗೌಣವಾಗಿಯೇ ಬಳಸುವುದಿಲ್ಲವೆ; ಹಾಗೆ.

ಭಾಷ್ಯ: *ನನು 'ಪುರುಷಸ್ಯ ಚೈತನ್ಯಂ', 'ರಾಹೋಃಶಿರಃ', 'ಶಿಲಾಪುತ್ರಸ್ಯ ಶರೀರಂ' ಇತ್ಯಾದಿ ವ್ಯಪದೇಶವದಯಮಪಿ ಭವತು ತತ್ರಾಹ–*

ಅನುವಾದ: 'ಪುರುಷನ ಚೈತನ್ಯ', 'ರಾಹುವಿನ ಕಲೆ', 'ಶಿಲಾಪುತ್ರನ ಶರೀರ' ಮುಂತಾದ ವ್ಯವಹಾರದಂತೆ ಇದೂ ಸಹ ಹಾಗೆಯೇ ಏಕಿರಬಾರದು, ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ನ ಶಿಲಾಪುತ್ರವದ್ಧರ್ಮಿ ಗ್ರಾಹಕ ಮಾನಬಾಧಾತ್ ॥ ೪ ॥

ಸೂತ್ರಾನುವಾದ: 'ಶಿಲಾಪುತ್ರನ ಶರೀರ' ಎಂಬಂತೆ ಧರ್ಮಿಗ್ರಾಹಕದ ಪ್ರಮಾಣಕ್ಕೆ ಬಾಧ ಉಂಟಾಗುವುದು ಎಂಬುದಿಲ್ಲ. ಶರೀರಂ ವಿವರಣೆ ಶಿಲಾಪುತ್ರ ಎಂದರೆ ಅರೆಯುವ ಕಲ್ಲು.

ಭಾಷ್ಯ: *ಶಿಲಾಪುತ್ರಸ್ಯ ಶರೀರಂ ಇತ್ಯಾದಿವದಯಂ ಷಷ್ಠೀವ್ಯಪದೇಶೋ ನ ಭವತಿ, ಶಿಲಾಪುತ್ರಾದಿ ಸ್ಥಲೇ ಧರ್ಮಿಗ್ರಾಹಕಪ್ರಮಾಣೇನ ಬಾಧಾದಿವಿಕಲ್ಪಮಾತ್ರಮ್ । ಮಮ ಶರೀರಮಿತಿ ವ್ಯಪದೇಶೇ ತು ಪ್ರಮಾಣಬಾಧೋ ನಾಸ್ತಿ । ದೇಹಾತ್ಮತಾಯಾ ಏವ ಬಾಧಾದಿತ್ಯರ್ಥಃ । ಯಸ್ತು ಶಾಸ್ತ್ರೇಷು ಮಮಕಾರ ಪ್ರತಿಷೇಧಃ ಸ ಸ್ವಾಮ್ಯಸ್ಯ ಅನಿತ್ಯತಯಾ ವಾಚಾರಂಭಣ ಮಾತ್ರತ್ವೇನ ಅಸತ್ಯಾಪರ ಏವೇತಿ ಭಾವಃ ।*

ಪುರುಷಸ್ಯ ಚೈತನ್ಯಮಿತ್ಯತ್ರಾಪ್ಯಸ್ತಿ ಧರ್ಮಿಗ್ರಾಹಕ ಮಾನಬಾಧಃ । ಅನವಸ್ಥಾಭಯೇನ ಲಾಘವಾಚ್ಚ ದೇಹಾದಿವ್ಯತಿರಿಕ್ತತಯಾತ್ಮಸಿದ್ಧೌ ಚೈತನ್ಯಸ್ವರೂಪತಾವಗಾಹನಾದಿತಿ ।

ಅನುವಾದ: 'ಶಿಲಾಪುತ್ರನ ಶರೀರ' ಮುಂತಾದ ವಾಕ್ಯಗಳಂತೆ ಇಲ್ಲಿ ಷಷ್ಠೀ ಪ್ರಯೋಗವು ಇಲ್ಲ; ಶಿಲಾಪುತ್ರಾದಿ ಸ್ಥಳಗಳಲ್ಲಿ ಗುಣಿಯನ್ನು ಗ್ರಹಿಸುವ ಪ್ರಮಾಣದಿಂದ ಬಾಧವು ಭ್ರಾಂತಿಯಷ್ಟೆ. ಆದರೆ 'ನನ್ನ ಶರೀರ' ಎಂಬ ವ್ಯವಹಾರದಲ್ಲಿ ಪ್ರಮಾಣಕ್ಕೆ ಬಾಧವಿಲ್ಲ. ಇದರಲ್ಲಿ ದೇಹಾತ್ಮತೆಯೇ ಬಾಧಾದಿಗಳೆಂದು ಅರ್ಥ. ಶಾಸ್ತ್ರಗಳಲ್ಲಿ ಮಮಕಾರದ ಪ್ರತಿಷೇಧವಿರುವುದು. ಅದರಲ್ಲಿ ಒಡೆತನದ ಅನಿತ್ಯತೆಯನ್ನು ಕೇವಲ ಮಾತುಗಳ ಮೂಲಕ ತಿಳಿಸಿ ಅದರ ಅಸತ್ಯತೆಯನ್ನು ವಿಸ್ತರಿಸುವುದೇ ಆಗಿದೆ ಎಂದು ಭಾವ.

ಪುರುಷನ ಚೈತನ್ಯ ಎಂಬ ವಿಷಯದಲ್ಲೂ ಧರ್ಮಿಯನ್ನು ಗ್ರಹಿಸುವ ಪ್ರಮಾಣಕ್ಕೆ ಬಾಧವುಂಟಾಗುತ್ತದೆ. ಅನವಸ್ಥಾ ದೋಷವುಂಟೆಂಬ ಮತ್ತು ಸುಲಭಗೊಳಿಸಬೇಕೆಂಬ ಆತ್ಮವು ದೇಹಾದಿಗಳಿಂದ ಭಿನ್ನವಾಗಿರುವುದೆಂಬುದು ಸಿದ್ಧವಾಗಿರುವಾಗ ಅದು ಕೇವಲ ಚೈತನ್ಯ ಸ್ವರೂಪವೆಂಬುದು ಸ್ಪಷ್ಟಪಡುತ್ತದೆ.

ಭಾಷ್ಯ: *ದೇಹಾದಿವ್ಯತಿರಿಕ್ತತಯಾ ಪುರುಷಮವಧಾರ್ಯ ತನ್ಮುಕ್ತಿಂ ಅವಧಾರಯತಿ।*

ಸೂತ್ರ: ಅತ್ಯಂತ ದುಃಖನಿವೃತ್ತ್ಯಾ ಕೃತಕೃತ್ಯತಾ ॥ ೫ ॥

ಅನುವಾದ: ದೇಹಾದಿಗಳಿಗೆ ಭಿನ್ನವಾಗಿರುವವನು ಪುರುಷನೆಂದು ನಿರ್ಧರಿಸಿ ಅವನ ಮುಕ್ತಿಯನ್ನು ನಿರ್ಧರಿಸುತ್ತಾರೆ.

ಸೂತ್ರಾನುವಾದ: ದುಃಖವನ್ನು ಆತ್ಯಂತಿಕವಾಗಿ ಹೋಗಲಾಡಿಸುವುದರಿಂದ ಸಫಲತೆಯು ದೊರೆಯುವುದು.

ಭಾಷ್ಯ: *ಸುಗಮಮ್ ।*

ನನು ದುಃಖನಿವೃತ್ತ್ಯಾ ಸುಖಸ್ಯಾಪಿ ನಿವರ್ತನಾತ್ ತುಲ್ಯಾಯವ್ಯಯತ್ವೇನ ನ ಸಾ ಪುರುಷಾರ್ಥಮಿತಿ । ತತ್ರಾಹ ।

ಅನುವಾದ: (ಸೂತ್ರದ ಅರ್ಥ) ಸುಲಭವಾಗಿದೆ.

ದುಃಖ ನಿವೃತ್ತಿಯಿಂದ ಸುಖವೂ ಸಹ ನಿವರ್ತಿಸುವುದರಿಂದ ಸಮಾನವಾದ ಆಗಮನ-ನಿವೃತ್ತಿಗಳಿಂದ ಅದು ಪುರುಷಾರ್ಥವಾಗಲಾರದು ಅಲ್ಲವೆ. ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರ: ಯಥಾ ದುಃಖಾತ್ ಕ್ಲೇಶಃ ಪುರುಷಸ್ಯ ನ ತಥಾ ಸುಖಾದ್ ಅಭಿಲಾಷಃ ॥ ೬ ॥

ಸೂತ್ರಾನುವಾದ: ಹೇಗೆ ದುಃಖದಿಂದ ಕ್ಲೇಶವು ಪುರುಷನಿಗೆ ಉಂಟಾಗುವುದೋ ಹಾಗೆಯೇ ಸುಖದ ವಿಷಯದಲ್ಲಿಯೂ ಆಸಕ್ತಿ ಇರದು.

ಭಾಷ್ಯ: *ವಿಷಯವಿಧಯಾ ಹೇತುತಾಯಾಂ ಪಂಚಮ್ಯೌ । ಕ್ಲೇಶಶ್ಚ ಅತ್ರ ದ್ವೇಷಃ । ಯಥಾ ದುಃಖೇ ದ್ವೇಷೋ ಬಲವತ್ತರಃ, ನೈವಂ ಸುಖೇ ಅಭಿಲಾಷಃ*

ಬಲವತ್ತರಃ ಅಪಿ ತು ತದಪೇಕ್ಷಯಾ ದುರ್ಬಲ ಇತ್ಯರ್ಥಃ । ತಥಾ ಚ ಸುಖಾಭಿಲಾಷಂ ಬಾಧಿತ್ವಾಪಿ ದುಃಖದ್ವೇಷೋ ದುಃಖನಿವೃತ್ತಾವೇವೇಚ್ಛಾಂ ಜನಯತೀತಿ ನ ತುಲ್ಯ ಆಯವ್ಯಯತ್ವಮಿತಿ । ತದುಕ್ತಮ್ ।

'ಅಭ್ಯರ್ಥನಾಭಂಗಭಯೇನ ಸಾಧುರ್ಮಾಧ್ಯಸ್ಥ್ಯಂ
ಇಷ್ಟೇಽಪಿ ಅವಲಂಬಿತೇಽರ್ಥೇ । ಇತಿ (ಕು.ಸಂ. ೧.೫೨)
ಯಾತು ನರಕಾದಿ ದುಃಖದರ್ಶನೇಽಪಿ ಕ್ಷುದ್ರಸುಖಪ್ರವೃತ್ತಿಃ ಸಾ
ರಾಗಾದಿದೋಷವಶಾದೇವೇತಿ ।

ಅನುವಾದ: (ಸುಖ–ದುಃಖ ಪದಗಳಿಗೆ) ಪಂಚಮೀ ಪ್ರಯೋಗವು ಹೇತುವಾಗಿರುವ ವಿಷಯದ ಅರ್ಥದಲ್ಲಿ ಬಳಸಲಾಗಿದೆ. ಕ್ಲೇಶವೆಂದರೆ ಇಲ್ಲಿ ದ್ವೇಷವೆಂದರ್ಥ. ದುಃಖದಲ್ಲಿ ದ್ವೇಷವು ಬಲವತ್ತರವಾಗಿ ಇರುವಂತೆ ಸುಖದಲ್ಲಿ ಅಷ್ಟು ಬಲವತ್ತರವಾದ ಅಭಿಲಾಷೆ ಇರದು, ಮತ್ತೇನೆಂದರೆ, ಅದಕ್ಕೆ ಹೋಲಿಸಿದಲ್ಲಿ ದುರ್ಬಲವಾಗಿರುತ್ತದೆ. ಹಾಗೆಯೇ ಸುಖದ ಅಭಿಲಾಷೆಯನ್ನು ಒತ್ತಿಗಿಟ್ಟು ದುಃಖದ ಮೇಲಿನ ದ್ವೇಷವು ದುಃಖದಿಂದ ನಿವೃತ್ತಿಯನ್ನು ಹೊಂದಲು ಇಚ್ಛೆಯನ್ನು ಉಂಟುಮಾಡುತ್ತದೆ; ಹೀಗೆ ಆಯವ್ಯಯಗಳು ಸಮಾನವಾಗಿರುತ್ತವೆ.

'ಬೇಡಿದ್ದನ್ನು ತಿರಸ್ಕರಿಸುವದೆಂಬ ಭಯದಿಂದ ಒಳ್ಳೆಯ ವ್ಯಕ್ತಿಯು ಬಯಸಿದ ವಸ್ತುವಿನಲ್ಲಿಯೂ ಮಧ್ಯಸ್ಥನನ್ನು ಹೊಂದಿ ಹೋಗುತ್ತಾನೆ. ನರಕಾದಿ ದುಃಖ ದರ್ಶನವಾದರೂ ಸಹ ಹೀನವಾದ ಸುಖಪ್ರವೃತ್ತಿಯು ರಾಗಾದಿ ದೋಷದ ಕಾರಣದಿಂದಲೇ ಉಂಟಾಗುತ್ತದೆ.

ಭಾಷ್ಯ: *ಸುಖಾಪೇಕ್ಷಯಾ ದುಃಖಸ್ಯ ಬಹುಲತ್ವಾದಪಿ ದುಃಖನಿವೃತ್ತಿರೇವ ಪುರುಷಾರ್ಥ ಇತ್ಯಾಹ–*

ಸೂತ್ರ: ಕುತ್ರಾಪಿ ಕೋಽಪಿ ಸುಖೀತಿ ॥ ೭ ॥

ಅನುವಾದ: ಸುಖಕ್ಕಿಂತ ದುಃಖವು ಹೆಚ್ಚಾಗಿರುವುದರಿಂದ ದುಃಖನಿವೃತ್ತಿಯೇ ಪುರುಷಾರ್ಥವೆಂದಿದ್ದಾರೆ.

ಸೂತ್ರಾನುವಾದ: ಏಕೆಂದರೆ ಎಲ್ಲಿಯೋ ಯಾವ ವ್ಯಕ್ತಿಯೋ ಸುಖಿಯಾಗಿ ಕಾಣುವನು.

ಭಾಷ್ಯ: *ಅನಂತತೃಣವೃಕ್ಷಪಶುಪಕ್ಷಿಮನುಷ್ಯಾದಿಮಧ್ಯೇ ಸ್ವಲ್ಪೋ ಮನುಷ್ಯದೇವಾದಿರೇವ ಸುಖೀಭವತೀತ್ಯರ್ಥಃ । ಇತಿ ಹೇತೌ ।*

ಅನುವಾದ: ಅನಂತ ತೃಣ–ವೃಕ್ಷ ಪಶು–ಪಕ್ಷಿ–ಮನುಷ್ಯಾದಿಗಳ ನಡುವೆ ಕೆಲವೇ ಮನುಷ್ಯ–ದೇವತೆಗಳಾದಿಯಾಗಿ ಸುಖಿಯಾಗಿರುವರು.

ಭಾಷ್ಯ: *ತದಪಿ ಕಾದಾಚಿತ್ಕಂ ಕ್ವಾಚಿತ್ಕಸುಖಂ ಮಧುವಿಷ ಸಂಯುಕ್ತಾನ್ನಾದಿವತ್ ವಿಚಾರಕಾಣಾಂ ಹೇಯಮೇವ ಇತ್ಯಾಹ–*

ಅನುವಾದ: ಯಾವಾಗಲೋ ಎಲ್ಲೋ ಇರುವ ಸುಖವನ್ನೂ ಸಹ ಜೇನು–ವಿಷಗಳು ಸೇರಿದ ಅನ್ನದಂತೆ ಆಲೋಚಿಸಬಲ್ಲ ವ್ಯಕ್ತಿಗಳು ತ್ಯಾಗ ಮಾಡಬೇಕೆಂದು ಹೇಳಿದೆ.

ಸೂತ್ರ: ತದಪಿ ದುಃಖಶಬಲಮಿತಿ ದುಃಖಪಕ್ಷೇ ನಿಕ್ಷಿಪಂತೇ ವಿವೇಚಕಾಃ ॥ ೮ ॥

ಸೂತ್ರಾನುವಾದ: ಆ ಸುಖವನ್ನು ಸಹ ದುಃಖಮಿಶ್ರಿತವಾದುದೆಂದು ಅದನ್ನು ದುಃಖಪಕ್ಷದಲ್ಲಿಯೇ ವಿಚಾರವಂತರು ದೂರ ಮಾಡುವರು.

ಭಾಷ್ಯ: *ತದಪಿ ಪೂರ್ವ ಸೂತ್ರೋಕ್ತಂ ಸುಖಮಪಿ ದುಃಖಮಿಶ್ರಿತಮತೋ ದುಃಖ ಕೋಟಾ ಸುಖದುಃಖ । ವಿವೇಚಕಾಃ ನಿಕ್ಷಿಪಂತೇ ಇತ್ಯರ್ಥಃ । ತದುಕ್ತಂ ಯೋಗಸೂತ್ರೇಣ 'ಪರಿಣಾಮತಾಪಸಂಸ್ಕಾರದುಃಖೈಃ ಗುಣವೃತ್ತಿವಿರೋಧಾಚ್ಚ ಸರ್ವಮೇವ ದುಃಖಂ ವಿವೇಕಿನಃ' । (೨.೧೫) ಇತಿ – ಯದ್ಯತ್ ಪ್ರೀತಿಕರಂ ಪುಂಸಾಂ ವಸ್ತು ಮೈತ್ರೇಯ ಜಾಯತೇ । ತದೇವ ದುಃಖವೃಕ್ಷಸ್ಯ ಬೀಜತ್ವಮುಪಗಚ್ಛತಿ । (ವಿ.ಪು. ೬.೫.೫೫)*

ಅನುವಾದ: ಹಿಂದಿನ ಸೂತ್ರದಲ್ಲಿ ಹೇಳಿದ ಸುಖವೂ ಸಹ ದುಃಖಮಿಶ್ರಿತವಾದರೂ ದುಃಖಕೋಟಿಯಲ್ಲಿ ಸುಖದುಃಖದ ಚಿಂತನೆ ಮಾಡುವವರು ಸೇರಿಸಿ ಬಿಡುವರು ಎಂದರ್ಥ. ಅದನ್ನೇ ಯೋಗಸೂತ್ರದಲ್ಲಿ ಹೀಗೆ ಹೇಳಿರುವರು 'ವಿಚಾರವಂತರು ಎಲ್ಲವನ್ನೂ ದುಃಖಮಯವೆಂದು ಪರಿಗಣಿಸುವರು, (ಏಕೆಂದರೆ) ದುಃಖವು ಪರಿಣಾಮದಿಂದ, ತೀವ್ರ ನೋವಿನಿಂದ, ಸಂಸ್ಕಾರಗಳಿಂದ ಹಾಗೂ ತಮ್ಮ ತಮ್ಮ ಗುಣಗಳಿಂದ ಹಾಗೂ ವಿರುದ್ಧವಾದ ವೃತ್ತಿಗಳಿಂದ ಉಂಟಾಗುವುದು.

ಎಲೈ ಮೈತ್ರೇಯ, ಯಾವ ವಸ್ತು ಪುರುಷರಿಗೆ ಪ್ರೀತಿಕರವಾಗಿ ಹುಟ್ಟುವುದೋ ಅದೇ ದುಃಖವೃಕ್ಷಕ್ಕೆ ಬೀಜವಾಗಿ ಪರಿಣಮಿಸುವುದು.

ಭಾಷ್ಯ: *ಕೇವಲಾ ದುಃಖನಿವೃತ್ತಿರ್ನ ಪುರುಷಾರ್ಥಃ, ಕಿಂತು ಸುಖೋಪರಕ್ತೇತಿ ಮತಮಪಾಕರೋತಿ ।*

ಅನುವಾದ: ಕೇವಲ ದುಃಖನಿವೃತ್ತಿಯೇ ಪುರುಷಾರ್ಥವಲ್ಲ. ಆದರೆ ಕೇವಲ ಸುಖದಲ್ಲಿ ರುವುದೇ (ಪುರುಷಾರ್ಥವೆಂಬುದನ್ನು) ಅಭಿಪ್ರಾಯವನ್ನು ಹೋಗಲಾಡಿಸುತ್ತಾರೆ.

ಸೂತ್ರ: ಸುಖಲಾಭಾಭಾವಾದಪುರುಷಾರ್ಥತ್ವಮಿತಿ ಚೇನ್ನ ದ್ವೈವಿಧ್ಯಾತ್ ॥ ೯ ॥

ಸೂತ್ರಾನುವಾದ: ಸುಖ ಲಾಭದ ಅಭಾವದಿಂದ ಪುರುಷಾರ್ಥವಿರದು ಎಂದರೆ ಸರಿಯಲ್ಲ, ಮೋಕ್ಷದಲ್ಲಿ ಎರಡೂ ಇವೆ.

ಭಾಷ್ಯ: *ಸುಖಲಾಭಾಭಾವಾನ್ಮೋಕ್ಷಾಖ್ಯ ದುಃಖಾಭಾವಸ್ಯಾ ಪುರುಷಾರ್ಥಂ ಇತಿ ಚೇನ್ನ । ಪುರುಷಾರ್ಥಸ್ಯ ದ್ವೈವಿಧ್ಯಾತ್ ದ್ವಿಪ್ರಕಾರತ್ವಾತ್ ।*

ಸುಖತ್ವ ದುಃಖಾಭಾವತ್ವಾಭ್ಯಾಂ ಇತ್ಯರ್ಥಃ । ಸುಖೀ ಸ್ಯಾಂ, ದುಃಖೀ ನ ಸ್ಯಾಂ ಇತಿ ಹಿ ಪೃಥಗೇವ ಲೋಕಾನಾಂ ಪ್ರಾರ್ಥನಾ ದೃಶ್ಯತ ಇತಿ ।

ಅನುವಾದ: ಸುಖಾಭಾವದ ಮೂಲಕ ಮೋಕ್ಷವೆಂಬ ದುಃಖಾಭಾವವನ್ನು ಅಪುರುಷಾರ್ಥವೆನ್ನಲಾಗದು. ಏಕೆಂದರೆ ಪುರುಷಾರ್ಥವು ಎರಡು ಬಗೆಯಾಗಿ ಬಿಡುತ್ತದೆ. ಸುಖತ್ವ ಮತ್ತು ದುಃಖದ ಅಭಾವತ್ವ ಇವೆರಡರ ಕಾರಣ (ದ್ವೈವಿಧ್ಯವಿರುತ್ತದೆ). ಸುಖಿಯಾದೇನು, ದುಃಖಿಯಾಗಬಾರದು ಎಂದು ಬೇರೆ ಬೇರೆಯಾಗಿಯೇ ಜನಗಳು ಪ್ರಾರ್ಥನೆ ಮಾಡುವುದನ್ನು ಕಂಡಿದ್ದೇವೆ.

ಭಾಷ್ಯ: *ಶಂಕತೇ– ಶಂಕಿಸುವರು*

ಸೂತ್ರ: ನಿರ್ಗುಣತ್ವಮಾತ್ಮನೋಽಸಂಗತ್ವಾದಿಶ್ರುತೇಃ ॥ ೧೦ ॥

ಸೂತ್ರಾನುವಾದ: ಅಸಂಗತ್ವಾದಿಗಳನ್ನು ಹೇಳುವ ಶ್ರುತಿಯ ಕಾರಣ ಆತ್ಮನು ನಿರ್ಗುಣನೆಂದು ತಿಳಿದುಬರುತ್ತದೆ.

ಭಾಷ್ಯ: *ನನ್ವಾತ್ಮನೋ ನಿರ್ಗುಣತ್ವಂ ಸುಖದುಃಖಮೋಹಾದಿ ಅಖಿಲ–ಗುಣಶೂನ್ಯತ್ವಂ ನಿತ್ಯಮೇವ ಸಿದ್ಧಂ ಅಸಂಗತ್ವಶ್ರುತೇಃ, ವಿಕಾರಹೇತು ಸಂಯೋಗಾಭಾವಶ್ರವಣಾತ್ । ತಂ ವಿನಾ ಚ ಗುಣಾಖ್ಯವಿಕಾರಾಸಂಭವಾತ್ । ಅತೋ ದುಃಖನಿವೃತ್ತಿರಪಿ ಪುರುಷಾರ್ಥೋ ಘಟತೇ ಇತ್ಯರ್ಥಃ ।*

ಅನುವಾದ: ಸುಖ–ದುಃಖ ಮೋಹಾದಿ ಎಲ್ಲ ಗುಣಗಳೂ ಎಂದೂ ಇಲ್ಲದಿರುವ ಕಾರಣ ಆತ್ಮನು ನಿರ್ಗುಣ ಎಂಬುದು ಶ್ರುತಿಯು ಹೇಳಿರುವ ಅಸಂಗತ್ವವಿರುವುದರಿಂದ ಸಿದ್ಧವಾಗುವುದು; ವಿಕಾರವನ್ನುಂಟು ಮಾಡುವ ಕಾರಣದ ಸಂಯೋಗವಿಲ್ಲದ್ದು ಆತ್ಮ ಎಂದು ಕೇಳಿದ್ದೇವೆ. ಅದಿಲ್ಲದೆ ಗುಣವೆಂಬ ವಿಕಾರವುಂಟಾಗಲಾರದು– ಆದ್ದರಿಂದ ದುಃಖ ನಿವೃತ್ತಿಯೂ ಪುರುಷಾರ್ಥವಾಗಲಾರದಲ್ಲವೆ? ಎಂದು ಅರ್ಥ.

ಭಾಷ್ಯ: *ನನು ಸಂಯೋಗಂ ವಿನಾ ಸ್ವಯಮೇವ ವಿಕಾರೋ ಭವತ್ವಿತಿ ಚೇನ್ನ ।*
ದಾಹಾಯ ನಾನಲೋ ವಹ್ನೇ–ರ್ನಾಪಃ ಕ್ಲೇದಾಯ ಚಾಂಭಸಃ ।
ತದ್ದ್ರವ್ಯಮೇವ ತದ್ದ್ರವ್ಯವಿಕಾರಾಯ ನ ವೈ ಯತಃ ॥
ಕಿಂಚ ಸ್ವಯಂ ವಿಕಾರಿತ್ವೇ ಮೋಕ್ಷೋ ನೈವೋಪಪದ್ಯತೇ ।
ಸ್ವಯಂ ಮೋಹವಿಕಾರೇಣ ಪುನರ್ಬಂಧಪ್ರಸಂಗತಃ ॥

ಸಂಯೋಗವಿಲ್ಲದೆ ತಾನಾಗಿಯೇ ವಿಕಾರವುಂಟಾದಲ್ಲಿ ಎಂದರೆ

ಅನುವಾದ: ಬೆಂಕಿಯು ಬೆಂಕಿಯನ್ನೇ ಸುಡಲಾರದು. ನೀರು ನೀರನ್ನೇ ನೆನೆಸಲಾರದು. ಯಾವುದೇ ದ್ರವ್ಯ ತನ್ನನ್ನೇ ವಿಕಾರವನ್ನುಂಟು ಮಾಡಿಕೊಳ್ಳಲಾರದು. ಅಲ್ಲದೆ ತಾನೇ ವಿಕಾರವಾಗುವಲ್ಲಿ ಮೋಕ್ಷ ದೊರೆಯಲಾರದು. ತಾನೇ ಮೋಹವಿಕಾರದಿಂದ ಬಂಧವು ಮತ್ತೆ ಉಂಟಾಗುವ ಪ್ರಸಂಗ ಬರುತ್ತದೆ.

ಭಾಷ್ಯ: *ತಥಾ ಚೋಕ್ತಂ ಕೌರ್ಮೇ ಯದ್ಯಾತ್ಮಾ ಮಲಿನೋಽಸ್ವಚ್ಛೋ ವಿಕಾರೀ ಸ್ಯಾತ್ ಸ್ವಭಾವತಃ । ನ ಹಿ ತಸ್ಯ ಭವೇನ್ಮುಕ್ತಿಃ ಜನ್ಮಾಂತರಶತೈರಪಿ । (೨.೨.೧೨-೧೩)*

ಅನುವಾದ: ಕೂರ್ಮ ಪುರಾಣದಲ್ಲಿಯೂ ಹೀಗೆ ಹೇಳಿದೆ- ಸ್ವಭಾವತಃ ಆತ್ಮನು ಮಲಿನನೂ, ಅಸ್ವಚ್ಛನೂ, ವಿಕಾರಿಯೂ ಆದಲ್ಲಿ ನೂರಾರು ಜನ್ಮಗಳಿಂದಲೂ ಅಂತಹ ಆತ್ಮನಿಗೆ ಮುಕ್ತಿ ದೊರೆಯದು.

ಭಾಷ್ಯ: *ಸಮಾಧತ್ತೇ ।*

ಅನುವಾದ: ಸಮಾಧಾನ ಹೇಳುವರು.

ಸೂತ್ರ: ಪರಧರ್ಮತ್ವೇಽಪಿ ತತ್ಸಿದ್ಧಿರವಿವೇಕಾತ್ ॥ ೧೧ ॥

ಸೂತ್ರಾನುವಾದ: (ವಿಕಾರಗಳು) ಬೇರೆಯ ಪದಾರ್ಥದ ಧರ್ಮವಾದರೂ ಅವಿವೇಕದ ಕಾರಣ (ಆ ಧರ್ಮವು) ತನ್ನದೆಂದು ತಿಳಿಯುವುದು.

ಭಾಷ್ಯ: *ಸುಖದುಃಖಾದಿ ಗುಣಾನಾಂ ಚಿತ್ತಧರ್ಮತ್ವೇಽಪಿ ತತ್ರಾತ್ಮನಿ ಸಿದ್ಧಿಃ ಪ್ರತಿಬಿಂಬರೂಪೇಣಾವಸ್ಥಿತಿಃ ಅವಿವೇಕಾನ್ನಿಮಿತ್ತಾತ್, ಪ್ರಕೃತಿಪುರುಷ ಸಂಯೋಗದ್ವಾರಾ ಇತ್ಯರ್ಥಃ । ಏತಚ್ಚ ಪ್ರಥಮಾಧ್ಯಾಯೇ (ಸಾಂ.ಪೂ. ೧.೧೫೫) ಪ್ರತಿಪಾದಿತಮ್ । ನಿಮಿತ್ತತ್ವಮವಿವೇಕಸ್ಯ ನ ದೃಷ್ಟಹಾನಿಃ (ಸಾಂ.ಸೂ. ೩.೭೪) ಇತಿ ತೃತೀಯಾಧ್ಯಾಯಸೂತ್ರೇ ಚೇತಿ । ತಥಾ ಚ ಸ್ಫಟಿಕೇ ಲೌಹಿತ್ಯಮಿವ ಪುರುಷಪ್ರತಿಬಿಂಬರೂಪೇಣ ದುಃಖಸತ್ತ್ವಾತ್ ತನ್ನಿವೃತ್ತಿರೇವ ಪುರುಷಾರ್ಥಃ । ಪ್ರತಿಬಿಂಬರೂಪೇಣೈವ ಭೋಗತಯಾ ಪ್ರತಿಬಿಂಬರೂಪೇಣೈವ ದುಃಖಸ್ಯ ಹೇತುತ್ವಾದಿತಿ ।*

ಅನುವಾದ: ಸುಖದುಃಖಾದಿಗಳೆಂಬ ಧರ್ಮವು ಚಿತ್ತ ಧರ್ಮವಾದರೂ (ಪುರುಷನ) ಅವಿವೇಕದ ಕಾರಣ ಪ್ರತಿಬಿಂಬರೂಪದಲ್ಲಿ ಆತ್ಮನಲ್ಲಿ ಇರುವುದು. ಏಕೆಂದರೆ ಪ್ರಕೃತಿ-ಪುರುಷ ಸಂಯೋಗದ ಮೂಲಕ ಎಂದು ಅರ್ಥ. ಇದೇ ಪ್ರಥಮಾಧ್ಯಾಯ ದಲ್ಲಿ (೧.೫೫) ಪ್ರತಿಪಾದಿಸಲ್ಪಟ್ಟಿದೆ. ಅವಿವೇಕದ ನಿಮಿತ್ತದಿಂದ ಫಲದ ರೂಪ ಕಾಣದೆ ಇರುವುದಿಲ್ಲ.

ಹಾಗೆಯೇ ಸ್ಫಟಿಕದಲ್ಲಿ ಕೆಂಪುಬಣ್ಣ ಇರುವಂತೆ ಪುರುಷನಲ್ಲಿ ಪ್ರತಿಬಿಂಬರೂಪದಲ್ಲಿ ದುಃಖವಿರುವುದರಿಂದ ಅದನ್ನು ಹೋಗಲಾಡಿಸುವುದೇ ಪುರುಷಾರ್ಥವು. ಪ್ರತಿಬಿಂಬದ ಮೂಲಕ ದುಃಖದ ಸಂಬಂಧವಿರುವುದರಿಂದ ಭೋಗದ ರೀತಿಯಲ್ಲಿ ಪ್ರತಿಬಿಂಬರೂಪದಿಂದಲೇ ದುಃಖವನ್ನು ಹೋಗಲಾಡಿಸಬೇಕಾಗುವುದು.

ಭಾಷ್ಯ: *ಅವಿವೇಕಮೂಲಃ ಪುರುಷೇ ಗುಣಬಂಧೋ ಅವಿವೇಕಸ್ತು ಕಿಮೂಲಕ ಇತ್ಯಾಕಾಂಕ್ಷಾಯಾಮಾಹ ।*

ಸೂತ್ರ: **ಅನಾದಿರವಿವೇಕೋಽನ್ಯಥಾ ದೋಷದ್ವಯಪ್ರಸಕ್ತೇಃ ॥ ೧೨ ॥**

ಅನುವಾದ: ಪುರುಷನಲ್ಲಿ ಗುಣಗಳ ಸಂಬಂಧ ಅವಿವೇಕದಿಂದ ಉಂಟಾಗುವುದು. ಆದರೆ ಈ ಅವಿವೇಕಕ್ಕೆ ಮೂಲ ಯಾವುದು ಎಂಬ ಆಕಾಂಕ್ಷೆಗೆ ಹೀಗೆ ಹೇಳಿದ್ದಾರೆ–

ಸೂತ್ರಾನುವಾದ: ಅವಿವೇಕವು ಅನಾದಿ. ಹಾಗಿಲ್ಲದಿದ್ದರೆ ಎರಡು ದೋಷಗಳು ಉಂಟಾಗುವುವು.

ಭಾಷ್ಯ: *ಅಗೃಹೀತಾ ಸಂಸರ್ಗಕಮುಭಯವಿಷಯಕಜ್ಞಾನಮವಿವೇಕಃ । ಸ ಚ ಪ್ರವಾಹರೂಪೇಣಾನಾದಿಶ್ಚಿತ್ತಧರ್ಮಃ ಪ್ರಲಯೇ ವಾಸನಾರೂಪೇಣ ತಿಷ್ಠತಿ । ಅನ್ಯಥಾ ತಸ್ಯ ಸಾದಿತ್ವೇ ದೋಷದ್ವಯಪ್ರಸಂಗಾತ್ । ಸಾದಿತ್ವೇ ಸ್ವತ ಏವೋತ್ಪಾದೇ, ಮುಕ್ತಸ್ಯಾಪಿ ಬಂಧಾಪತ್ತಿಃ । ಕರ್ಮಾದಿಜನ್ಯತ್ವೇ ಚ ಕರ್ಮಾದಿಕಂ ಪ್ರತ್ಯಪಿ ಕಾರಣತ್ವೇನ ಅವಿವೇಕಾಂತರಾನ್ವೇಷಣೇಽನವಸ್ಥಾ ಇತ್ಯರ್ಥಃ ।*

ಅನುವಾದ: ಅವಿವೇಕವೆಂದರೆ, ಎರಡೂ (ಎಂದರೆ ಪ್ರಕೃತಿ–ಪುರುಷರು) ವಿಷಯಗಳನ್ನು ಕುರಿತು ಅವು ಸಂಬಂಧವಿಲ್ಲದವು ಎಂಬ ಜ್ಞಾನವನ್ನು ಪಡೆಯದಿರುವುದೇ ಅವಿವೇಕ. ಅದು ಪ್ರವಾಹ ರೂಪದಲ್ಲಿ ಅನಾದಿಯಾಗಿರುವ ಚಿತ್ತಧರ್ಮ. ಪ್ರಲಯ ಕಾಲದಲ್ಲಿ ಸಹ ವಾಸನಾ ರೂಪದಲ್ಲಿ ಇರುತ್ತದೆ. ಹಾಗಿಲ್ಲದೆ ಅದು ಆದಿಯಿಂದ ಕೂಡಿದ್ದು ಎಂದು ಭಾವಿಸಿದಲ್ಲಿ ಎರಡು ದೋಷಗಳು ಉಂಟಾಗುವುವು. ಅದು ಸಾದಿಯಾದಲ್ಲಿ ತಾನಾಗಿಯೇ ಉತ್ಪನ್ನವಾಗಿ ಮುಕ್ತನನ್ನೂ ಬಂಧಕ್ಕೀಡು ಮಾಡುವ ಪ್ರಸಂಗ ಒದಗುವುದು. ಕರ್ಮಾದಿಗಳಿಂದ ಹುಟ್ಟುವುದು ಎಂದರೆ ಕರ್ಮಾದಿಗಳ ವಿಷಯದಲ್ಲಿಯೂ ಕಾರಣವಾಗುವುದರಿಂದ ಅವಿವೇಕದ ಅನ್ವೇಷಣೆಯಲ್ಲಿ ಅನವಸ್ಥಾದೋಷ ಉಂಟಾಗುವುದು.

ವಿವರಣೆ: ಅವಿವೇಕವು ಕರ್ಮದಿಂದ ಹುಟ್ಟುವುದಾದರೆ ಅನಂತರ ಅವಿವೇಕದಿಂದ ಕರ್ಮವು ಹುಟ್ಟುವುದು. ಹೀಗೆ ಅನವಸ್ಥಾ ದೋಷವುಂಟಾಗುವುದು.

ಭಾಷ್ಯ: *ಅಯಂ ಚಾವಿವೇಕಃ ವೃತ್ತಿರೂಪಃ ಪ್ರತಿಬಿಂಬಾತ್ಮನಾ ಪುರುಷಧರ್ಮ ಇವ ಭವತೀತ್ಯತಃ ಪುರುಷಸ್ಯ ಬಂಧ । ಪ್ರಯೋಜಕ ಇತಿ ಪ್ರಾಗೇವೋಕ್ತಂ (೧.೧೫೫) ವಕ್ಷ್ಯತೇ (೬.೧೬, ೬೮)*

ಅನುವಾದ: ಈ ಅವಿವೇಕವು ವೃತ್ತಿರೂಪವಾದುದು ಮತ್ತು ಪ್ರತಿಬಿಂಬದ ರೂಪದಲ್ಲಿ ಪುರುಷನ ಧರ್ಮವೆಂಬಂತೆ ಇರುವುದು. ಆದ್ದರಿಂದ ಪುರುಷನಿಗೆ ಬಂಧವುಂಟು ಮಾಡುವುದರಲ್ಲಿ ತೊಡಗುವುದು ಎಂದು ಮೊದಲೇ ಹೇಳಿದ್ದೇವೆ, ಅಲ್ಲದೆ ಮುಂದೆಯೂ ಹೇಳಲಾಗುವುದು.

ಭಾಷ್ಯ: *ನನು ಚೇತ್ ಅನಾದಿಃ ತರ್ಹಿ ನಿತ್ಯಃ ಸ್ಯಾದಿತಿ, ತತ್ರಾಹ*

ಸೂತ್ರ: **ನ ನಿತ್ಯಃ ಸ್ಯಾದಾತ್ಮವದನ್ಯಥಾನುಚ್ಛಿತ್ತಿಃ ॥ ೧೩ ॥**

ಅನುವಾದ: (ಅವಿವೇಕವು) ಅನಾದಿಯಾದಲ್ಲಿ ಅದು ನಿತ್ಯವಾಗಿಬಿಡುವುದಲ್ಲವೆ?

ಸೂತ್ರಾನುವಾದ: ಆತ್ಮದಂತೆ (ಅವಿವೇಕವು) ನಿತ್ಯವಲ್ಲ. ಇಲ್ಲದಿದ್ದಲ್ಲಿ ಅವಿವೇಕವನ್ನು ನಾಶಮಾಡುವುದು (ಅಸಾಧ್ಯವಾಗುತ್ತಿತ್ತು).

ಭಾಷ್ಯ: *ಆತ್ಮವದ್ ನಿತ್ಯೋऽಖಂಡ–ಅನಾದಿರ್ನ ಭವತಿ, ಕಿಂತು ಪ್ರವಾಹ ರೂಪೇಣಾನಾದಿಃ । ಅನ್ಯಥಾನಾದಿಭಾವಸ್ಯ ಉಚ್ಛೇದಾನುಪಪತ್ತೇಃ ಇತ್ಯರ್ಥಃ।*

ಅನುವಾದ: ಆತ್ಮದಂತೆ (ಅವಿವೇಕವು) ಅನಾದಿಯೂ, ಅನಂತವೂ ಆಗಿರುವುದಿಲ್ಲ. ಆದರೆ ಪ್ರವಾಹರೂಪದಿಂದ ಅನಾದಿ ಎನಿಸಿಕೊಳ್ಳುತ್ತದೆ. ಇಲ್ಲದಿದ್ದರೆ ಅನಾದಿಭಾವದ ನಾಶವಾಗುವುದು ಅಸಾಧ್ಯವಾಗುವುದು.

ಭಾಷ್ಯ: *ಬಂಧಕಾರಣಮುಕ್ತ್ವಾ ಮೋಕ್ಷಕಾರಣಮಾಹ ।*

ಸೂತ್ರ: ಪ್ರತಿನಿಯತಕಾರಣನಾಶ್ಯತ್ವಮಸ್ಯ ಧ್ವಾಂತವತ್ ॥ ೧೪ ॥

ಅನುವಾದ: (ಪುರುಷನ) ಬಂಧಕಾರಣವನ್ನು ಹೇಳಿ ಅದರಿಂದ ಮೋಕ್ಷ ಕಾರಣವನ್ನು ಹೇಳಿದ್ದಾರೆ.

ಸೂತ್ರಾನುವಾದ: ಕತ್ತಲೆಯಂತೆ ಅವಿವೇಕವೂ ವಿರುದ್ಧವಾದ ನಿಯತಕಾರಣದಿಂದ ನಾಶವಾಗುತ್ತದೆ.

ವಿವರಣೆ: ಪ್ರತಿನಿಯತವೆಂದರೆ ಮೊದಲೇ ನಿರ್ಧರಿಸಲ್ಪಟ್ಟ ಎಂದರ್ಥ.

ಭಾಷ್ಯ: *ಅಸ್ಯ ಬಂಧಕಾರಣಸ್ಯ ಅವಿವೇಕಸ್ಯ ಶುಕ್ತಿರಜತಾದಿಸ್ಥಲೇ ಪ್ರತಿನಿಯತಂ ಯನ್ನಾಶಕಾರಣಂ ವಿವೇಕಸ್ತನ್ನಾಶ್ಯತ್ವಂ ತಮೋವತ್ । ಅಂಧಕಾರೋ ಹಿ ಪ್ರತಿನಿಯತೇನ ಆಲೋಕೇನೈವ ನಾಶ್ಯತೇ, ನಾನ್ಯಸಾಧನೇನೇತ್ಯರ್ಥಃ । ತದುಕ್ತಂ ವಿಷ್ಣುಪುರಾಣೇ*

ಅನುವಾದ: ಬಂಧವುಂಟುಮಾಡಲು ಕಾರಣವಾದ ಈ ಅವಿವೇಕವು ಶುಕ್ತಿ–ರಜತಗಳ ಸ್ಥಳದಲ್ಲಿ ಹೇಗೆ ಅವಿವೇಕವಿರುತ್ತದೆಯೋ ಅದನ್ನು ನಾಶಮಾಡಲು ವಿವೇಕವು ಕಾರಣ ಎಂದರೆ 'ನಾಶ್ಯತ್ವ'ವು ಕತ್ತಲೆಯನ್ನು (ಹೋಗಲಾಡಿಸುವಂತೆ) ಹೋಗಲಾಡಿಸುವುದು. ಅಂಧಕಾರವಾದರೋ ವಿರುದ್ಧವಾದ ಬೆಳಕು ಬಂದಕೂಡಲೇ ನಾಶವಾಗುವುದು, ಅದಕ್ಕೆ ಬೇರೆ ಸಾಧನದ ಅಗತ್ಯವಿಲ್ಲ. ಅದನ್ನೇ ವಿಷ್ಣುಪುರಾಣದಲ್ಲಿ ಹೇಳಿದೆ.

ಭಾಷ್ಯ: *ಅಂಧಂತಮಃ ಇವಾಜ್ಞಾನಂ ದೀಪವಚ್ಚೇಂದ್ರಿಯೋದ್ಭವಮ್ ।*
ಯಥಾ ಸೂರ್ಯಸ್ತಥಾ ಜ್ಞಾನಂ ಯದ್ವಿಪ್ರರ್ಷೇ ವಿವೇಕಜಮ್ ॥

ವಿ.ಪು. ೬.೫.೩೨

ಅನುವಾದ: ಕಗ್ಗತ್ತಲು ಇರುವಂತೆ ಅಜ್ಞಾನ. ಶಾಸ್ತ್ರದಿಂದುಂಟಾದ (ಇಂದ್ರಿಯೋದ್ಭವ) ಜ್ಞಾನವು ದೀಪದಂತೆ ಹೋಗಲಾಡಿಸುವುದು. ಎಲೈ ವಿಪ್ರರ್ಷೇ, ವಿವೇಕದಿಂದುಂಟಾದ ಜ್ಞಾನವು ಸೂರ್ಯನಂತೆ ಬೆಳಗುವುದು.

ಭಾಷ್ಯ: *ವಿವೇಕೇನೈವಾವಿವೇಕೋ ನಾಶ್ಯತೇ ಇತಿ ಪ್ರತಿನಿಯತಸ್ಯ ಗ್ರಾಹಕಮಪ್ಯಾಹ–*

ಸೂತ್ರ: ಅತ್ರಾಪಿ ಪ್ರತಿನಿಯಮೋಽನ್ವಯವ್ಯತಿರೇಕಾತ್ ॥ ೧೫ ॥

ಅನುವಾದ: ವಿವೇಕದಿಂದಲೇ ಅವಿವೇಕವು ನಾಶವಾಡಲ್ಪಡುತ್ತದೆ ಎಂಬ ಪ್ರತಿನಿಯಮವನ್ನು ತಿಳಿಯುವ ಬಗೆಯನ್ನು ಹೇಳುವರು.

ಸೂತ್ರಾನುವಾದ: ಇಲ್ಲಿಯೂ ಸಹ ಪ್ರತಿನಿಯಮವನ್ನು ಅನ್ವಯ ವ್ಯತಿರೇಕಗಳಿಂದ ತಿಳಿಯಬಹುದು.

ವಿವರಣೆ: ವಿವೇಕದಿಂದ ಅವಿವೇಕವು ನಾಶವಾಗುವುದೆಂಬುದನ್ನು ಸಾಮಾನ್ಯ ನಿಯವಾದ ನಾಶ್ಯ–ನಾಶಕ ಭಾವದ ಮೂಲಕ ತಿಳಿಯಬಹುದು.

ಭಾಷ್ಯ: *ಧ್ವಾಂತಾಲೋಕಯೋರಿವ ಪ್ರಕೃತೇಽಪಿ ಪ್ರತಿನಿಯಮಃ ಶುಕ್ತಿರಜತಾದಿಷು ಅನ್ವಯವ್ಯತಿರೇಕಾಭ್ಯಾಂ ಏವ ಗ್ರಾಹ್ಯ ಇತ್ಯರ್ಥಃ । ಅಥವಾ ಏವಂ ವ್ಯಾಖ್ಯೇಯಮ್ । ನನು ವಿವೇಕಸ್ಯಾಪಿ ಪ್ರತಿನಿಯತಂ ಕಾರಣಮ್? ತತ್ರಾಹ – ಅತ್ರಾಪಿ ವಿವೇಕೇಽಪಿ ಕಾರಣನಿಯಮೇ ಅನ್ವಯವ್ಯತಿರೇಕಾಭ್ಯಾಂ ಸಿದ್ಧಃ । ಶ್ರವಣ ಮನನನಿದಿಧ್ಯಾಸನ–ರೂಪಮೇವ ಕಾರಣಂ, ನ ತು ಕರ್ಮಾದೀತಿ । ಕರ್ಮಾದಿಕಂ ತು ಬಹಿರಂಗಮೇವೇತ್ಯರ್ಥಃ ।*

ಅನುವಾದ: ಕತ್ತಲೆ ಮತ್ತು ಬೆಳಕುಗಳಂತೆ ಈ ಸಂದರ್ಭದಲ್ಲಿಯೂ ಪ್ರತಿನಿಯಮವನ್ನು ಕಪ್ಪೆಚಿಪ್ಪು ಮತ್ತು ಬೆಳ್ಳಿಗಳಲ್ಲಿ ಅನ್ವಯವ್ಯತಿರೇಕಗಳ ಮೂಲಕ ತಿಳಿಯಬೇಕು. ಅಥವಾ ಹೀಗೆ ವ್ಯಾಖ್ಯಾನ ಮಾಡಬೇಕು. ವಿವೇಕಕ್ಕೂ ಪ್ರತಿನಿಯತವಾದ ಕಾರಣ ವಿರುವುದೆ? ಅದಕ್ಕೆ ಹೇಳಿದ್ದಾರೆ– ಇಲ್ಲಿಯೂ ವಿವೇಕವಿದ್ದರೂ ಕಾರಣನಿಯಮವು ಅನ್ವಯವ್ಯತಿರೇಕಗಳಿಂದಲೇ ಸಿದ್ಧವಾಗಿದೆ. ಶ್ರವಣ, ಮನನ, ನಿದಿಧ್ಯಾಸನ ರೂಪವೊಂದೇ ಕಾರಣ, ಕರ್ಮಾದಿಗಳಲ್ಲ. ಕರ್ಮಾದಿಗಳೆಲ್ಲ ಬಹಿರಂಗವಾದುದಷ್ಟೆ.

ಭಾಷ್ಯ: *ಬಂಧಸ್ಯ ಸ್ವಾಭಾವಿಕತ್ವಾದಿಕಂ ನ ಸಂಭವತೀತಿ ಪ್ರಥಮಪಾದೋಕ್ತಂ ಸ್ಮಾರಯತಿ ।*

ಅನುವಾದ: ಬಂಧವು ಸ್ವಾಭಾವಿಕವಾಗಿರುವುದಿಲ್ಲ ಎಂದು ಮೊದಲ ಪಾದದಲ್ಲಿ ಹೇಳಿದ್ದನ್ನು ನೆನಪು ಮಾಡುವರು.

ಸೂತ್ರ: ಪ್ರಕಾರಾಂತರಾಸಂಭವಾದವಿವೇಕಃ ಬಂಧಃ ॥ ೧೭ ॥

ಸೂತ್ರಾನುವಾದ: ಕೇವಲ ಅವಿವೇಕವೇ ಬಂಧಕ್ಕೆ ಕಾರಣ, ಏಕೆಂದರೆ ಅದಕ್ಕೆ ಬೇರೆ ಕಾರಣವಿಲ್ಲ.

ಭಾಷ್ಯ: *ಬಂಧೋಽತ್ರ ದುಃಖಯೋಗಾಖ್ಯಬಂಧಕಾರಣಮ್ । ಶೇಷಂ ಸುಗಮಮ್ ।*

ಅನುವಾದ: ಇಲ್ಲಿ ಬಂಧ ಶಬ್ದವು 'ಬಂಧಕ್ಕೆ ಕಾರಣವಾಗಿದೆ' ಎಂಬರ್ಥದಲ್ಲಿ ಬಳಸಲ್ಪಟ್ಟಿದೆ. ಅದು ದುಃಖದ ಸಂಬಂಧದಿಂದ ಉಂಟಾಗುತ್ತದೆ. ಉಳಿದದ್ದು ಸುಲಭ.

ಭಾಷ್ಯ: *ನನು ಮುಕ್ತೇರಪಿ ಕಾರ್ಯತಯಾ ವಿನಾಶಾಪತ್ತ್ಯಾ ಪುನರ್ಬಂಧಃ ।ಸ್ಯಾದಿತಿ, ತತ್ರಾಹ ।*

ಸೂತ್ರ: ನ ಮುಕ್ತಸ್ಯ ಪುನರ್ಬಂಧಯೋಗೋಽಪಿ ಅನಾವೃತ್ತಿಶ್ರುತೇಃ ॥ ೧೭ ॥

ಅನುವಾದ: ಮುಕ್ತಿಯೂ ಸಹ ಕಾರ್ಯವಾದ್ದರಿಂದ ಬಂಧವು ವಿನಾಶವುಂಟಾಗುವುದರಿಂದ ಮತ್ತೆ ಬಂಧವು ಉಂಟಾಗುವುದಲ್ಲವೆ?

ಸೂತ್ರಾನುವಾದ: ಮತ್ತೆ ಬಾರದೆಂಬ ಶ್ರುತಿಯ ಕಾರಣ ಮುಕ್ತಿ ಪಡೆದವನಿಗೆ ಮತ್ತೆ ಬಂಧಯೋಗವು ಉಂಟಾಗದು.

ಭಾಷ್ಯ: *ಭಾವಕಾರ್ಯಸ್ಯೈವ ವಿನಾಶಿತಯಾ ಮೋಕ್ಷಸ್ಯ ನಾಶೋ ನಾಸ್ತಿ । 'ನ ಸ ಪುನರಾವರ್ತತೇ' ಇತಿ (ಛಾಂ. ೮-೧೫-೧೯) ಶ್ರುತೇರಿತ್ಯರ್ಥಃ । ಅಪಿಶಬ್ದಃ ಪೂರ್ವಸೂಕ್ತೋಕ್ತಾರ್ಥ ಸಮುಚ್ಚಯೇ ।*

ಅನುವಾದ: ರೂಪವುಳ್ಳ ಕಾರ್ಯವು ವಿನಾಶವಾಗುವುದರಿಂದ ಮೋಕ್ಷವು ನಾಶವಾಗದು. 'ಅದು ಮತ್ತೆ ಹಿಂದಿರುಗದು'. ಅಪಿಶಬ್ದವು ಹಿಂದೆ ಹೇಳಿದ ಅರ್ಥಗಳ ಸಮುಚ್ಚಯದಿಂದಲೂ ಎಂಬ ಅರ್ಥವುಳ್ಳದ್ದು.

ಸೂತ್ರ: ಅಪುರುಷಾರ್ಥತ್ವಮನ್ಯಥಾ ॥ ೧೮ ॥

ಸೂತ್ರಾನುವಾದ: ಹಾಗಿಲ್ಲದಿದ್ದಲ್ಲಿ– ಅದನ್ನು ಪುರುಷಾರ್ಥವೆಂದು ಹೇಳಲಾಗದು.

ಭಾಷ್ಯ: *ಅನ್ಯಥಾ ಮುಕ್ತಸ್ಯಾಪಿ ಪುನರ್ಬಂಧೇ ಪ್ರಲಯವತ್ ಏವ ಮೋಕ್ಷಸ್ಯಾಪುರುಷಾರ್ಥತ್ವಂ, ಪರಮಪುರುಷಾರ್ಥತ್ವಾಭಾವೋ ವಾ ಸ್ವಾದಿತ್ಯರ್ಥಃ ।*

ಅನುವಾದ: ಹಾಗಿಲ್ಲದಿದ್ದಲ್ಲಿ ಮುಕ್ತನಿಗೂ ಮತ್ತೆ ಬಂಧ ಉಂಟಾಗುವುದು. ಪ್ರಳಯದಂತೆ ಮೋಕ್ಷವೂ ಅಪುರುಷಾರ್ಥವೆನಿಸಿಕೊಳ್ಳುವುದು, ಅಥವಾ ಪರಮ ಪುರುಷಾರ್ಥದ ಅಭಾವವೂ ಸಂಭವಿಸುವುದು.

ಭಾಷ್ಯ: *ಅಪುರುಷಾರ್ಥತ್ವೇ ಹೇತುಮಾಹ–*

ಸೂತ್ರ: ಅವಿಶೇಷಾಪತ್ತಿರುಭಯೋಃ ॥ ೧೯ ॥

ಅನುವಾದ: ಅದು ಅಪುರುಷಾರ್ಥವೆನ್ನಲು ಕಾರಣವೇನು?

ಸೂತ್ರಾನುವಾದ: (ಮುಕ್ತನಿಗೆ ಮತ್ತೆ ಬಂಧವುಂಟಾಗುವುದಾದರೆ) ಮೋಕ್ಷವೂ ಮತ್ತು ಬಂಧವೂ ಸಮಾನವಾಗಿ ಬಿಡುವುವು.

ಭಾಷ್ಯ: *ಭಾವಿಬಂಧತ್ವಸಾಮ್ಯೇನ ಉಭಯೋಃ ಮುಕ್ತಬದ್ಧಯೋಃ ವಿಶೇಷೋ ನ ಸ್ಯಾತ್ । ತತಶ್ಚಾಪುರುಷಾರ್ಥತ್ವಮಿತ್ಯರ್ಥಃ ।*

ಅನುವಾದ: ಮುಂದೆ ಸಂಭವಿಸಬಹುದಾದ ಸಾಮ್ಯದ ಕಾರಣ ಮುಕ್ತ ಮತ್ತು ಬದ್ಧ ಇಬ್ಬರಲ್ಲೂ ವಿಶೇಷವಿರಲಾರದು. ಅನಂತರ ಮೋಕ್ಷವೂ ಅಪುರುಷಾರ್ಥವಾಗಿ ಬಿಡುವುದು.

ಭಾಷ್ಯ: *ನನ್ವೇವಂ ಬದ್ಧಮುಕ್ತಯೋಃ ವಿಶೇಷಾಭ್ಯುಪಗಮೇ ನಿತ್ಯಮುಕ್ತತ್ವಂ ಕಥಮುಚ್ಯತೇ? ತತ್ರಾಹ ।*

ಅನುವಾದ: ಹೀಗೆ ಬದ್ಧ ಮತ್ತು ಮುಕ್ತರಲ್ಲಿ ಭಿನ್ನತೆಯನ್ನು ಒಪ್ಪಿದಲ್ಲಿ ನಿತ್ಯಮುಕ್ತತ್ವವನ್ನು ಹೇಗೆ ಹೇಳುವುದು? ಅದಕ್ಕೆ ಹೀಗೆ ಹೇಳುವರು.

ಸೂತ್ರ: ಮುಕ್ತಿರಂತರಾಯಧ್ವಸ್ತೇರ್ನ ಪರಃ ॥ ೨೦ ॥

ಸೂತ್ರಾನುವಾದ: ಮುಕ್ತಿಯು (ನಡುವೆ ಬರುವ) ಅಡ್ಡಿಗಳನ್ನು ನಿವಾರಿಸಿಕೊಳ್ಳುವುದಷ್ಟೇ ಹೊರತು ಮತ್ತೇನಲ್ಲ.

ಭಾಷ್ಯ: *ವಕ್ಷ್ಯಮಾಣಾಂತರಾಯಸ್ಯ ಧ್ವಂಸಾತಿರಿಕ್ತಃ ಪದಾರ್ಥೋ ನ ಮುಕ್ತಿರಿತ್ಯರ್ಥಃ । ಯಥಾ ಹಿ ಸ್ವಭಾವ ಶುಕ್ಲಸ್ಯ ಸ್ಫಟಿಕಸ್ಯ ಜಪೋಪಾಧಿನಿಮಿತ್ತಂ ರಕ್ತತ್ವಂ ಶೌಕ್ಲ್ಯಾವರಕರೂಪಂ ವಿಘ್ನಮಾತ್ರಂ, ನ ತು ಜಪೋಪಾಧೇಯೇನ ಶೌಕ್ಲಂ ನಶ್ಯತಿ, ಜಪಾಪಾಯೇ ಚೋತ್ಪದ್ಯತೇ । ತಥೈವ ಸ್ವಭಾವಃ ನಿರ್ದುಃಖಸ್ಯ ಆತ್ಮನೋ ಬುದ್ಧ್ಯುಪಾಧಿಕಂ ದುಃಖಪ್ರತಿಬಿಂಬಂ ತದಾವರಕರೂಪಂ ವಿಘ್ನಮಾತ್ರಂ, ನ ತು ಬುದ್ಧ್ಯುಪಧಾನೇನ ದುಃಖಂ ಜಾಯತೇ, ತದಪಾಯೇ ಚ ನಶ್ಯತೀತಿ । ಅತೋ ನಿತ್ಯಮುಕ್ತ ಆತ್ಮಾ ಬಂಧಮೋಕ್ಷಾ ತು ವ್ಯಾವಹಾರಿಕೌ ಇತ್ಯವಿರೋಧ ಇತಿ ।*

ಅನುವಾದ: ಮುಂದೆ ಹೇಳುವ ಅಡ್ಡಿಯ ಧ್ವಂಸವನ್ನು ಬಿಟ್ಟು ಬೇರೆ ಯಾವುದೂ ಮುಕ್ತಿಯಾಗಲಾರದು ಎಂದರ್ಥ. ಹೇಗೆ ಸ್ವಾಭಾವಿಕವಾಗಿ ಬಿಳಿಯಬಣ್ಣ ಹೊಂದಿರುವ ಸ್ಫಟಿಕದ ಕೆಂಪು ಬಣ್ಣ ದಾಸವಾಳದ ಉಪಾದಿಯ ನಿಮಿತ್ತ ಸ್ವಾಭಾವಿಕ ಬಿಳಿಯ ಬಣ್ಣವನ್ನು ಆವರಣರೂಪವಾದ ವಿಘ್ನವಷ್ಟೆ, ದಾಸವಾಳದ ಸಾನ್ನಿಧ್ಯದಿಂದ ಬಿಳಿಯಬಣ್ಣ ನಾಶವಾಗದು, ದಾಸವಾಳವು ಬೇರೆಯಾದಾಗ ಮತ್ತೆ ಬಿಳಿಯಬಣ್ಣ ಬರುವುದು. ಹಾಗೆಯೇ ಸ್ವಾಭಾವಿಕವಾಗಿ ದುಃಖರಹಿತವಾದ ಆತ್ಮನ ಬುದ್ಧಿಯೆಂಬ ಉಪಾಧಿಯು ಅದಕ್ಕೆ ಆವರಣ ರೂಪವಾದ ವಿಘ್ನವಷ್ಟೆ; ಬುದ್ಧಿಯ ಸಾಮೀಪ್ಯದಿಂದ ದುಃಖ ಹುಟ್ಟುವುದಿಲ್ಲ, ಅದನ್ನು ಸರಿಸಿದ ಮೇಲೆ ದುಃಖ ನಾಶವಾಗದು. ಆದ್ದರಿಂದ ಆತ್ಮನು ನಿತ್ಯಮುಕ್ತನು, ಬಂಧಮೋಕ್ಷಗಳು ಕೇವಲ ವ್ಯಾವಹಾರಿಕವಾದವು ಎಂದು ಹೇಳುವುದರಲ್ಲಿ ವಿರೋಧವಿಲ್ಲ.

ಭಾಷ್ಯ: *ನನ್ವೇವಂ ಬಂಧಮೋಕ್ಷಯೋರ್ಮಿಥ್ಯಾತ್ವೇ ಮೋಕ್ಷಸ್ಯ ಪುರುಷಾರ್ಥತಾಪ್ರತಿಪಾದಕಶ್ರುತ್ಯಾದಿ ವಿರೋಧ ಇತ್ಯಾಹ–*

ಸೂತ್ರ: ತತ್ರಾಪ್ಯವಿರೋಧಃ ॥ ೨೧ ॥

ಅನುವಾದ: ಹೀಗೆ (ಆತ್ಮನಿಗೆ) ಬಂಧ ಮೋಕ್ಷಗಳು ಮಿಥ್ಯೆಯೆಂದು ತಿಳಿದಲ್ಲಿ ಮೋಕ್ಷವನ್ನು ಪುರುಷಾರ್ಥವೆಂದು ಪ್ರತಿಪಾದಿಸುವ ಶ್ರುತ್ಯಾದಿಗಳಿಗೆ ವಿರೋಧವಾಗುವುದಿಲ್ಲವೆ?

ಸೂತ್ರಾರ್ಥ: ಹಾಗಿದ್ದರೂ ವಿರೋಧವೇನಿಲ್ಲ.

ಭಾಷ್ಯ: *ತತ್ರಾಪ್ಯಂತರಾಯ ಧ್ವಂಸಸ್ಯ ಮೋಕ್ಷತ್ವೇಽಪಿ ಪುರುಷಾರ್ಥತ್ವ ಅವಿರೋಧ ಇತ್ಯರ್ಥಃ । ದುಃಖಯೋಗವಿಯೋಗೌ ಏವ ಹಿ ಪುರುಷೇ ಕಲ್ಪಿತೇ, ನ ತು ದುಃಖ ಭೋಗೋಽಪಿ । ಭೋಗಶ್ಚ ಪ್ರತಿಬಿಂಬರೂಪೇಣ ದುಃಖಸಂಬಂಧ ಇತ್ಯತಃ ಪ್ರತಿಬಿಂಬರೂಪೇಣ ದುಃಖನಿವೃತ್ತಿರ್ಯಥಾರ್ಥೈವ ಪುರುಷಾರ್ಥಃ । ಸ ಏವ ಅಂತರಾಯಧ್ವಂಸಃ । ತಾದೃಶಶ್ಚ ಮೋಕ್ಷೋ ಯಥಾರ್ಥ ಏವೇತಿ ಭಾವಃ।*

ಅನುವಾದ: ಅಲ್ಲಿಯೂ ಅಡ್ಡಿಯನ್ನು ಧ್ವಂಸ ಮಾಡಿದರೆ ಮೋಕ್ಷವು ಸಾಧ್ಯವಾದರೂ ಪುರುಷಾರ್ಥತೆಗೆ ವಿರೋಧವೇನಿಲ್ಲ. ದುಃಖದ ಉಂಟಾಗುವುದು ಅಥವಾ ನಿವಾರಣೆಯಾಗುವುದು ಪುರುಷನಲ್ಲಿ ಕಲ್ಪನೆ ಮಾಡಿರುವುದಷ್ಟೆ. ಭೋಗವೂ ಸಹ ಪ್ರತಿಬಿಂಬರೂಪದಲ್ಲಿ ದುಃಖದ ಸಂಬಂಧವಾಗುವುದು. ಆದ್ದರಿಂದ ಪ್ರತಿಬಿಂಬರೂಪದಲ್ಲಿ ಇರುವ ದುಃಖದ ನಿವೃತ್ತಿಯೇ ಯಥಾರ್ಥವಾದ ಸಂಬಂಧ. ಅದೇ ಅಡ್ಡಿಯನ್ನು ಹೋಗಲಾಡಿಸುವುದು. ಅಂತಹ ಮೋಕ್ಷವೇ ಯಥಾರ್ಥವಾದುದು ಎಂದು ಭಾವ.

ಭಾಷ್ಯ: *ನನ್ವಂತರಾಯಧ್ವಂಸಮಾತ್ರಂ ಚೇನ್ಮುಕ್ತಿಸ್ತರ್ಹಿ ಶ್ರವಣಮಾತ್ರೇಣ ಏವ ತತ್ಸಿದ್ಧಿಃ ಸ್ಯಾತ್ ಅಜ್ಞಾನಪ್ರತಿಬದ್ಧಕಂಠಚಾಮೀಕರಸಿದ್ಧಿವತ್ ಇತಿ । ತತ್ರಾಹ ।*

ಅನುವಾದ: ಅಡ್ಡಿಯ ಧ್ವಂಸವಷ್ಟೇ ಮುಕ್ತಿ ಎನ್ನುವುದಾದರೆ ಕೇವಲ ಕೇಳುವುದರಿಂದಲೇ ಅದು ಸಿದ್ಧವಾಗಬೇಕು, ಹಾಗಾದಲ್ಲಿ ಮರೆತು ಕತ್ತಿಗೆ ಕಟ್ಟಿದ ಚಿನ್ನದಹಾರವನ್ನು ನೆನಪು ಮಾಡಿಕೊಂಡಂತೆ ಆಗುವುದು (ಇದಕ್ಕೆ ಸಾಧನೆ ಏಕೆ?). ಅದಕ್ಕೆ ಹೀಗೆ ಹೇಳುವರು–

ಸೂತ್ರ: ಅಧಿಕಾರಿತ್ರೈವಿಧ್ಯಾನ್ನ ನಿಯಮಃ ॥ ೨೨ ॥

ಸೂತ್ರಾನುವಾದ: ಮೂರು ಬಗೆಯ ಅಧಿಕಾರಿಗಳು ಇರುವುದರಿಂದ (ಕೂಡಲೆ) ಮೋಕ್ಷ ದೊರೆಯುವುದೆಂಬ ನಿಯಮವಿಲ್ಲ.

ಭಾಷ್ಯ: *ಉತ್ತಮ–ಮಧ್ಯಮ–ಅಧಮಾಃ ತ್ರಿವಿಧಾಃ ಜ್ಞಾನಾಧಿಕಾರಿಣಃ । ತೇನ ಶ್ರವಣಮಾತ್ರಾನಂತರಮೇವ ಮಾನಸ ಸಾಕ್ಷಾತ್ಕಾರಃ ಸರ್ವೇಷಾಂ ಇತಿ ನ*

ನಿಯಮಃ ಇತ್ಯರ್ಥಃ । ಅತಃ ಮಂದಾಧಿಕಾರ ದೋಷಾತ್ ವಿರೋಚನಾದೀನಾಂ ಶ್ರವಣಮಾತ್ರಾತ್ ಚಿತ್ತವಿಲಾಯನಕ್ಷಮಂ ಮಾನಸಜ್ಞಾನಂ ನೋತ್ಪನ್ನಮ್ । ನ ತು ಶ್ರವಣಸ್ಯ ಜ್ಞಾನಜನನಸಾಮರ್ಥ್ಯಾದಿತಿ ।

ಅನುವಾದ: ಉತ್ತಮ, ಮಧ್ಯಮ ಮತ್ತು ಅಧಮ ಎಂದು ಜ್ಞಾನಕ್ಕೆ ಅಧಿಕಾರವುಳ್ಳವರಲ್ಲಿ ಮೂರು ಬಗೆ. ಅದರಿಂದ ಎಲ್ಲರಿಗೂ ಕೇವಲ ಕೇಳುವುದರಿಂದಲೇ ಸಾಕ್ಷಾತ್ಕಾರವಾಗಲಾಗುವುದು ಎಂಬ ನಿಯಮವೇನಿಲ್ಲ. ಆದ್ದರಿಂದ ಮಂದಾಧಿಕಾರ ದೋಷದ ಪರಿಣಾಮವಾಗಿ ವಿರೋಚನನೇ ಮೊದಲಾದವರು ಕೇಳುವುದಷ್ಟರಿಂದಲೇ ಚಿತ್ತವನ್ನು ತನ್ಮಯಗೊಳಿಸಲು ಸಮರ್ಥವಾಗಿರುವ ಮಾನಸಜ್ಞಾನವು ಉತ್ಪನ್ನವಾಗದು. ಕೇಳುವುದಕ್ಕೆ ಜ್ಞಾನಜನನದ ಸಾಮರ್ಥ್ಯ ಕಳೆದುಕೊಳ್ಳುವನು ಎಂಬ ಅಭಿಪ್ರಾಯವಲ್ಲ.

ಭಾಷ್ಯ: *ನ ಕೇವಲಂ ಶ್ರವಣಮಾತ್ರಂ ಜ್ಞಾನೇ, ದೃಷ್ಟಕಾರಣಂ ಅನ್ಯದಪೀತ್ಯಾಹ–*

ಸೂತ್ರ: ದಾರ್ಢ್ಯಾರ್ಥಮುತ್ತರೋತ್ತರಮ್ ॥ ೨೩ ॥

ಅನುವಾದ: ಕೇವಲ ಕೇಳುವುದಷ್ಟರಿಂದಲೇ ಜ್ಞಾನವೆಂಬುದು ದೃಷ್ಟಕಾರಣವೆನ್ನಲಾಗದು.

ಸೂತ್ರಾನುವಾದ: (ಜ್ಞಾನವನ್ನು) ದೃಢವಾಗಳಿಸುವುದಕ್ಕಾಗಿಯೇ ಶ್ರವಣದ ನಂತರದ (ಮನನ, ನಿದಿಧ್ಯಾಸನಗಳನ್ನು) ಮಾಡಬೇಕು.

ಭಾಷ್ಯ: *ಶ್ರವಣಾದುತ್ತರೇಷಾಂ ಮನನ, ನಿದಿಧ್ಯಾಸನಾದೀನಾಂ ಅಂತರಾಯಧ್ವಂಸಸ್ಯ ಆತ್ಯಂತಿಕತ್ವರೂಪದಾರ್ಢ್ಯಾರ್ಥಂ ನಿಯಮ ಇತಿ ಅನುಷಜ್ಯತೇ ।*

ಅನುವಾದ: ಶ್ರವಣದ ನಂತರದ ಮನನ, ನಿದಿಧ್ಯಾಸನಾದಿಗಳೆಂಬುದರಿಂದ ಅಡ್ಡಿಗಳನ್ನು ನಾಶಮಾಡುವುದನ್ನು ಸಂಪೂರ್ಣವಾಗಿ ದೃಢಪಡಿಸಲು ನಿಯಮವೆಂದು ಸಂಬಂಧ ಉಂಟಾಗುವುದು.

ವಿವರಣೆ: ವಿವೇಕ ಜ್ಞಾನವುಂಟಾಗಲು ಮನನ, ನಿದಿಧ್ಯಾಸನ ನಿಯಮದಿಂದ ದೃಢಪಡಿಸಿ ವಿಘ್ನಗಳ ನಿವಾರಣೆ ಮಾಡಿಕೊಳ್ಳಬೇಕು ಎಂದರ್ಥ.

ಭಾಷ್ಯ: *ಉತ್ತರಾಣ್ಯೇವ –ಸಾಧನಾನ್ಯಾಹ*

ಸೂತ್ರ: ಸ್ಥಿರ ಸುಖಮಾಸನಮಿತಿ ನ ನಿಯಮಃ ॥ ೨೪ ॥

ಅನುವಾದ: ಮುಂದೆ ತೆಗೆದುಕೊಳ್ಳಬೇಕಾದ ಸಾಧನಗಳನ್ನು ಹೇಳಿದ್ದಾರೆ–

ಸೂತ್ರಾನುವಾದ: ಸ್ಥಿರವೂ ಸುಖಕರವೂ ಆಗಿರುವುದೇ ಆಸನ. ಅದು ಹೀಗೇ ಇರಬೇಕೆಂಬ ನಿಯಮವಿಲ್ಲ.

ಭಾಷ್ಯ: *ಆಸನೇ ಪದ್ಮಾಸನಾದಿನಿಯಮಃ ನಾಸ್ತಿ । ಯತಃ ಸ್ಥಿರಂ ಸುಖಂ ಚ ಯತ್ ತದೇವ ಆಸನಮಿತ್ಯರ್ಥಃ ।*

ಅನುವಾದ: ಆಸನದಲ್ಲಿ ಪದ್ಮಾಸನಾದಿ ನಿಯಮವಿಲ್ಲ. ಯಾವುದು ಸ್ಥಿರವೂ ಸುಖಕರವೂ ಆಗಿದೆಯೋ ಅದೇ ಆಸನ ಎಂದರ್ಥ. ಇದನ್ನು ಸಾಧನೆಯಲ್ಲಿ ತೊಡಗಿಸುವುದೇ ಧ್ಯಾನ ಎಂದು ಮುಂದೆ ಹೇಳುವರು.

ಭಾಷ್ಯ: *ಮುಖ್ಯ ಸಾಧನಮಾಹ ।*

ಅನುವಾದ: ಮುಖ್ಯವಾದ ಸಾಧನವನ್ನು ಹೇಳುವರು.

ಸೂತ್ರ: ಧ್ಯಾನಂ ನಿರ್ವಿಷಯಂ ಮನಃ ॥೨೫॥

ಭಾಷ್ಯ: *ವೃತ್ತಿಶೂನ್ಯಂ ಯದಂತಃಕರಣಂ ಭವತಿ ತದೇವ ಧ್ಯಾನಂ. ಯೋಗಶ್ಚಿತ್ತ ವೃತ್ತಿನಿರೋಧರೂಪ ಇತ್ಯರ್ಥಃ । ಏತತ್ಸಾಧನತ್ವೇನ ಧ್ಯಾನಸ್ಯ ವಕ್ಷ್ಯಮಾಣತ್ವಾದಿತಿ ।*

ಸೂತ್ರಾನುವಾದ: ಚಿತ್ತವು ವಿಷಯರಹಿತವಾಗಿರುವದೇ ಧ್ಯಾನ

ಅನುವಾದ: ಅಂತಃಕರಣವು ವೃತ್ತಿಶೂನ್ಯವಾದ ಸ್ಥಿತಿಯಲ್ಲಿರುವುದನ್ನೇ ಧ್ಯಾನವೆನ್ನುವರು. ಯೋಗವೆಂದರೆ ಚಿತ್ತವೃತ್ತಿಯನ್ನು ತಡೆಯುವುದು, ಧ್ಯಾನವು ಆ ರೀತಿಯಾದ (ಸಾಧನ), ಧ್ಯಾನದ ಈ ಸಾಧನೆಯನ್ನು ಮುಂದೆ ಹೇಳಲಾಗುವುದು.

ಭಾಷ್ಯ: *ನನು ಯೋಗಾಯೋಗಯೋಃ ಪುರುಷಸ್ಯ ಏಕರೂಪತ್ವಾತ್ ಕಿಂ ಯೋಗೇನೇತ್ಯಾಶಂಕ್ಯ ಸಮಾಧತ್ತೇ–*

ಅನುವಾದ: ಯೋಗ ಮತ್ತು ಭೋಗಗಳಲ್ಲಿ ಪುರುಷನು ಒಂದೇ ರೂಪನಾಗಿರುವುದರಿಂದ ಯೋಗದಿಂದ ಆಗಬೇಕಾದುದೇನು ಎಂದು ಶಂಕೆ ಬಂದಾಗ ಸಮಾಧಾನ ಹೇಳುವರು.

ಸೂತ್ರ: ಉಭಯಥಾಪ್ಯ ವಿಶೇಷಶ್ಚೇನ್ನೈವ ಮುಪರಾಗನಿರೋಧಾತ್ ವಿಶೇಷಃ ॥೨೬॥

ಸೂತ್ರಾನುವಾದ: ಎರಡು ರೀತಿಗಳಲ್ಲಿಯೂ (ಯೋಗ ಅಯೋಗಗಳಲ್ಲಿ) ಅಂತರವಿಲ್ಲ ದಿರುವುದು ಸರಿಯಲ್ಲ. ಹೀಗೆ ಪ್ರತಿಬಿಂಬಿತವಾದ ಬಣ್ಣದ ನಿರೋಧದಿಂದ ವಿಶೇಷದ ಅನುಭವ ಉಂಟಾಗುತ್ತದೆ.

ವಿವರಣೆ: ಉಪರಾಗವೆಂದರೆ ಸಮೀಪದಲ್ಲಿರುವ ವಸ್ತುವಿನಿಂದ ಪ್ರತಿಬಿಂಬಿತವಾದ ಗುಣ.

ಭಾಷ್ಯ: *ಉಪರಾಗನಿರೋಧಾದ್ವೃತ್ತಿ। ಪ್ರತಿಬಿಂಬಾಪಗಮಾದ್ಯೋಗಾವಸ್ಥಾಯಾಂ ಅಯೋಗಾವಸ್ಥಾತೋ ವಿಶೇಷಃ ಪುರುಷಸ್ಯ ಸಿದ್ಧಾಂತದಲಾರ್ಥಃ । ಶೇಷಂ ವ್ಯಾಖ್ಯಾತಪ್ರಾಯಮ್ ।*

ಅನುವಾದ: ಪ್ರತಿಬಿಂಬಿತವಾದ ಬಣ್ಣದ ಹತೋಟಿಯಿಂದ ವೃತ್ತಿ ಪ್ರತಿಬಿಂಬವು ದೂರ ಸರಿಯುವುದರಿಂದ ಯೋಗಾವಸ್ಥೆಯಲ್ಲಿ ಅಯೋಗಾವಸ್ಥೆಗೆ ಭಿನ್ನವಾಗಿರುವುದು ಪುರುಷನದು ಎಂದು ಸಿದ್ಧಾಂತಪಕ್ಷದವರ ಹೇಳಿಕೆ. ಉಳಿದಿದ್ದು ವ್ಯಾಖ್ಯಾನ ಮಾಡಿದಂತೆಯೇ ಆಗಿದೆ.

ಭಾಷ್ಯ: *ನನು ನಿಃಸಂಗೇ ಕಥಮುಪರಾಗಸ್ತತ್ರಾಹ–*

ಸೂತ್ರ: ನಿಃಸಂಗೇಽಪ್ಯುಪರಾಗೋಽವಿವೇಕಾತ್ ॥ ೨೭ ॥

ಅನುವಾದ: (ಪುರುಷನು) ನಿಃಸಂಗನಾದರೂ ಅವನಲ್ಲಿ ಬಣ್ಣವು ಪ್ರತಿಬಿಂಬಿತವಾಗುವುದು (ಆಸಕ್ತಿಯುಂಟಾಗುವುದು)

ಸೂತ್ರಾನುವಾದ: (ಪುರುಷನು) ನಿಃಸಂಗನಾದರೂ ಬಣ್ಣವು ಪ್ರತಿಬಿಂಬಿತವಾಗುವುದು (ವಿಷಯಗಳಲ್ಲಿ ಆಸಕ್ತಿಯು,) ಅವಿವೇಕದಿಂದ ಉಂಟಾಗುವುದು.

ಭಾಷ್ಯ: *ನಿಃಸಂಗೇ ಯದ್ಯಪಿ ಪಾರಮಾರ್ಥಿಕ ಉಪರಾಗೋ ನಾಸ್ತಿ, ತಥಾಪಿ ಉಪರಾಗ ಇವ ಭವತೀತಿ ಕೃತ್ವಾ ಪ್ರತಿಬಿಂಬ ಏವ ಉಪರಾಗ ಇತಿ ವ್ಯವಹ್ರಿಯತೇ ಉಪರಾಗ ವಿವೇಕಿಭಿರಿತ್ಯರ್ಥಃ ।*

ಅನುವಾದ: ಸಂಗರಹಿತನಾದರೂ (ಪುರುಷನಲ್ಲಿ) ಪಾರಮಾರ್ಥಿಕವಾಗಿ (ನಿಜವಾಗಿಯೂ) ಉಪರಾಗವಿಲ್ಲದಿದ್ದರೂ, ಉಪರಾಗದಂತೆ ಇರುವ ಪ್ರತಿಬಿಂಬವೇ ಉಪರಾಗ ಎಂದು ಉಪರಾಗದಲ್ಲಿ ಪರಿಶ್ರಮವುಳ್ಳವರು ವ್ಯವಹರಿಸುತ್ತಾರೆ.

ವಿವರಣೆ: ಪುರುಷನು ಪ್ರಕೃತಿಯ ಸಂಪರ್ಕಕ್ಕೆ ಬಂದು ಭೋಗಾವಸ್ಥೆಯಲ್ಲಿರುವುದು ವಿಷಯೋಪರಾಗ.

ಭಾಷ್ಯ: *ಏತದೇವ ವಿವೃಣೋತಿ ।*

ಅನುವಾದ: ಅದನ್ನೇ ವಿವರಿಸುತ್ತಾರೆ.

ಸೂತ್ರ: ಜಪಾಸ್ಫಟಿಕಯೋರಿವ ನೋಪರಾಗಃ ಕಿಂತ್ವಭಿಮಾನಃ ॥ ೨೮ ॥

ಸೂತ್ರಾನುವಾದ: ದಾಸವಾಳ ಮತ್ತು ಸ್ಫಟಿಕಗಳಿರುವಂತೆ ಉಪರಾಗವಿರುವುದಿಲ್ಲ. ಆದರೆ ಅದೇ ತಾನೆಂಬ ತಪ್ಪು ಕಲ್ಪನೆ.

ಭಾಷ್ಯ: *ಯಥಾ ಜಪಾಸ್ಫಟಿಕಯೋಃ ಸೋಪರಾಗಃ, ಕಿಂತು ಜಪಾಪ್ರತಿಬಿಂಬವಶಾದುಪರಾಗಾಭಿಮಾನಮಾತ್ರಂ, ರಕ್ತಃ ಸ್ಫಟಿಕಃ ಇತಿ । ತಥೈವ ಬುದ್ಧಿಪುರುಷಯೋರ್ನೋಪರಾಗಃ ಕಿಂತು ಬುದ್ಧಿಪ್ರತಿಬಿಂಬವಶಾದುಪರಾಗಾಭಿಮಾನೋಽವಿವೇಕವಶಾದಿತ್ಯರ್ಥಃ । ಅತ ಉಪರಾಗತುಲ್ಯತಯಾ ವೃತ್ತಿಪ್ರತಿಬಿಂಬ ಏವ ಪುರುಷೋಪ–ರಾಗ ಇತಿ ಸೂತ್ರದ್ವಯ ಪರ್ಯವಸಿತೋಽರ್ಥಃ । ಸ ಏವ ಚ ದುಃಖಾತ್ಮಕವೃತ್ತೇಃ ಉಪರಾಗೋ ದುಃಖನಿವೃತ್ತ್ಯಾಖ್ಯಮೋಕ್ಷಸ್ಯ ಅಂತರಾಯಸ್ತಸ್ಯ ಚ ಧ್ವಂಸಶ್ಚಿತ್ತಲಯಾತ್ । ಸೋಽಪಿ ಚ ಚಿತ್ತವೃತ್ತಿನಿರೋಧಾಖ್ಯೇನ ಅಸಂಪ್ರಜ್ಞಾತಯೋಗೇನ ಇತ್ಯತಃ ಯೋಗಾದೇವಾಂತರಾಯಧ್ವಂಸಃ ಭವತೀತಿ ಯೋಗಶಾಸ್ತ್ರಸ್ಯಾಪಿ ಸಿದ್ಧಾಂತಃ ।*

ಅನುವಾದ: ಹೇಗೆ ದಾಸವಾಳ ಮತ್ತು ಸ್ಫಟಿಕಗಳ ನಡುವೆ ನಿಜವಾದ ಉಪರಾಗವಿರದೋ, ಆದರೆ ದಾಸವಾಳದ ಪ್ರತಿಬಿಂಬದ ಕಾರಣ ಪ್ರತಿಬಿಂಬದಲ್ಲಿ ಬಣ್ಣ ಮೂಡುವುದೋ ಹಾಗೆ ಕೇವಲ ಆ ಬಣ್ಣದ ತಪ್ಪು ಕಲ್ಪನೆ ಬರುವುದು ಸ್ಫಟಿಕವು ಕೆಂಪು ವರ್ಣದಂತೆ ಕಾಣುವುದು. ಅದೇ ರೀತಿಯಾಗಿ ಬುದ್ಧಿಪುರುಷರಲ್ಲಿ ಉಪರಾಗವಿರುತ್ತದೆ. ಆದರೆ, ಬುದ್ಧಿಯ ಪ್ರತಿಬಿಂಬದ ಕಾರಣ ಉಪರಾಗದ ತಪ್ಪು ಕಲ್ಪನೆ ಅವಿವೇಕದ ಕಾರಣ ಉಂಟಾಗುತ್ತದೆ ಎಂದರ್ಥ. ಆದ್ದರಿಂದ ಉಪರಾಗವು ಸಮಾನವಾಗಿರುವುದರಿಂದ ವೃತ್ತಿಯ ಪ್ರತಿಬಿಂಬವೇ 'ಪುರುಷೋಪರಾಗ' ಎಂದು ಈ ಎರಡು ಸೂತ್ರಗಳಿಂದ ನಿರ್ಧರಿಸಲ್ಪಟ್ಟ ಅರ್ಥ. ಅದೇ ದುಃಖಾತ್ಮಕವಾದ ವೃತ್ತಿಯ ಉಪರಾಗ, ದುಃಖ ನಿವೃತ್ತಿಯೆಂಬ ಮೋಕ್ಷಕ್ಕೆ ಅಡ್ಡಿಯಾಗಿರುವುದು ಮತ್ತು ಚಿತ್ತವು ಲಯವಾಗುವುದರಿಂದ ಧ್ವಂಸವಾಗಿಬಿಡುವುದು. ಅದೂ ಸಹ 'ಚಿತ್ತವೃತ್ತಿನಿರೋಧ' ಎಂಬ ಅಸಂಪ್ರಜ್ಞಾತಯೋಗದಿಂದ ಆಗುವುದು. ಆದ್ದರಿಂದ ಯೋಗದಿಂದಲೇ ಈ ಅಡ್ಡಿಯು ಧ್ವಂಸವಾಗುವುದು ಎಂದು ಯೋಗಶಾಸ್ತ್ರದ ಸಿದ್ಧಾಂತವೂ ಇರುವುದು.

ಭಾಷ್ಯ: *ಧ್ಯಾನಂ ನಿರ್ವಿಷಯಂ ಮನ ಇತಿ ಯೋಗ ಉಕ್ತಸ್ತಸ್ಯ ಸಾಧನಾನ್ಯಾಚಕ್ಷಣ ಏವ ಯಥೋಕ್ತೋಪರಾಗಸ್ಯ ನಿರೋಧೋಪಯಂ ಆಹ–*

ಸೂತ್ರ: ಧ್ಯಾನಧಾರಣಾಭ್ಯಾಸವೈರಾಗ್ಯಾಧಿಭಿಸ್ತನ್ನಿರೋಧಃ ॥ ೨೯ ॥

ಅನುವಾದ: (ಧ್ಯಾನಂ ನಿರ್ವಿಷಯಂ ಮನಃ) 'ಚಿತ್ತವನ್ನು ವಿಷಯರಹಿತವನ್ನಾಗಿಟ್ಟು ಕೊಳ್ಳುವುದೇ ಧ್ಯಾನ ಎಂಬ ಯೋಗವನ್ನು ಸಾಧಿಸಲು ಬೇಕಾದ ಸಾಧನಗಳನ್ನು ಹೇಳುತ್ತಾ ಉಪರಾಗದ ನಿರೋಧದ ಉಪಾಯವನ್ನು ಹೇಳಿದೆ–

ಸೂತ್ರಾನುವಾದ: ಧ್ಯಾನ, ಧಾರಣಾ, ಅಭ್ಯಾಸ, ವೈರಾಗ್ಯ ಮುಂತಾದುವುಗಳಿಂದ (ಉಪರಾಗವನ್ನು) ನಿರೋಧಿಸಬಹುದು.

ಭಾಷ್ಯ: *ಸಮಾಧಿದ್ವಾರಾ ಧ್ಯಾನಂ, ಯೋಗಸ್ಯ ಕಾರಣಂ, ಧ್ಯಾನಸ್ಯ ಚ ಕಾರಣಂ ಧಾರಣಾ, ತಸ್ಯಾಶ್ಚ ಕಾರಣಂ ಅಭ್ಯಾಸಃ ಚಿತ್ತಸ್ಥೈರ್ಯ ಸಾಧನಾನುಷ್ಠಾನಮ್, ಅಭ್ಯಾಸಸ್ಯಾಪಿ ಕಾರಣಂ ವಿಷಯವೈರಾಗ್ಯಂ, ತಸ್ಯಾಪಿ ದೋಷದರ್ಶನಯಮನಿಮಾದಿಕಂ ಇತಿ, ಪಾತಂಜಲೋಕ್ತ ಕ್ರಿಯಯಾ ತನ್ನಿರೋಧ ಉಪರಾಗನಿರೋಧೋ ಭವತಿ । ಚಿತ್ತವೃತ್ತಿನಿರೋಧಾಖ್ಯಯೋಗದ್ವಾರೇತ್ಯರ್ಥಃ ।*

ಅನುವಾದ: ಸಮಾಧಿಯ ಮೂಲಕ ಧ್ಯಾನವು ಯೋಗಕ್ಕೆ ಕಾರಣ, ಧ್ಯಾನಕ್ಕೆ ಧಾರಣಾಕಾರಣ, ಧಾರಣಾಗೆ ಅಭ್ಯಾಸ ಕಾರಣ; ಅಭ್ಯಾಸವೆಂದರೆ ಚಿತ್ತವನ್ನು ದೃಢವಾಗಿಡಬಲ್ಲ ಸಾಧನೆಗಳನ್ನು ಅನುಷ್ಠಾನ ಮಾಡುವುದು, ಅಭ್ಯಾಸಕ್ಕೆ ವಿಷಯವೈರಾಗ್ಯವೇ ಕಾರಣ, ಅದಕ್ಕೂ ಸಹ ದೋಷದರ್ಶನ, ಯಮ, ನಿಯಮ, ಮುಂತಾದುವು ಎಂಬ ಈ ಪತಂಜಲಿಯಿಂದ ಉಕ್ತವಾದ ಪ್ರಕ್ರಿಯೆಯಿಂದ ಅದರ ನಿರೋಧ

ಎಂದರೆ ಉಪರಾಗ ನಿರೋಧ ಉಂಟಾಗುವುದು. ಚಿತ್ತವೃತ್ತಿನಿರೋಧದ ಮೂಲಕ (ಉಪರಾಗದ) ನಿರೋಧವು ಸಿದ್ಧಿಸುವುದು.

ಭಾಷ್ಯ: *ಚಿತ್ತನಿಷ್ಠಧ್ಯಾನಾದಿನಾ ಪುರುಷಸ್ಯೋಽ ಪರಾಗನಿರೋಧೋ ಪೂರ್ವಾಚಾರ್ಯಸಿದ್ಧಂ ದ್ವಾರಂ ದರ್ಶಯತಿ ।*

ಸೂತ್ರ: ಲಯವಿಕ್ಷೇಪಯೋರ್ವ್ಯಾವೃತ್ತ್ಯೇತ್ಯಾಚಾರ್ಯಾಃ ॥ ೩೦ ॥

ಅನುವಾದ: ಮನಸ್ಸಿನಲ್ಲಿ ನೆಲೆಯೂರಿದ ಧ್ಯಾನಾದಿಗಳಿಂದ ಪುರುಷನಿಗೆ ಉಪರಾಗದ ನಿರೋಧವುಂಟಾಗುವುದೆಂಬ ಪೂರ್ವಾಚಾರ್ಯರು ಸಿದ್ಧಮಾಡಿದ ಸಾಧನವನ್ನು ತಿಳಿಸುವರು.

ಸೂತ್ರಾನುವಾದ: (ನಿದ್ರೆಯ ರೂಪದ) ಲಯ ಮತ್ತು (ಎಚ್ಚರ ರೂಪದ) ವಿಕ್ಷೇಪ ಇವುಗಳನ್ನು ಹೋಗಲಾಡಿಸಿಕೊಂಡ (ಪುರುಷನಿಗೆ ಉಪರಾಗ ನಿರೋಧವುಂಟಾಗುವುದೆಂದು) ಹಿಂದಿನ ಆಚಾರ್ಯರು ಹೇಳಿದ್ದಾರೆ.

ಭಾಷ್ಯ: *ಧ್ಯಾನಾದಿನಾ ಚಿತ್ತಸ್ಯ ನಿದ್ರಾವೃತ್ತೇಃ ಪ್ರಮಾಣಾದಿವೃತ್ತೇಶ್ಚ ನಿವೃತ್ತ್ಯಾ ಪುರುಷಸ್ಯಾಪಿ ವೃತ್ತ್ಯುಪರಾಗನಿರೋಧೋ ಭವತಿ । ಬಿಂಬನಿರೋಧೋ ಪ್ರತಿಬಿಂಬಸ್ಯಾಪಿ ನಿರೋಧಾದಿತಿ ಪೂರ್ವಾಚಾರ್ಯಾಃ ಆಹುರಿತ್ಯರ್ಥಃ । ಯಥಾ ಪತಂಜಲಿಃ 'ಯೋಗಶ್ಚಿತ್ತವೃತ್ತಿನಿರೋಧಃ' । ತದಾ ದ್ರಷ್ಟುಃ ಸ್ವರೂಪೇಽವಸ್ಥಾನಮ್, 'ವೃತ್ತಿಸಾರೂಪ್ಯಮಿತರತ್ರ' ಇತಿ ಸೂತ್ರತ್ರಯೇಣೈತದೇವಾಹ । ತಥಾ ।*

ನಿತ್ಯಃ ಸರ್ವತ್ರಗೋಹ್ಯಾತ್ಮಾ ಬುದ್ಧಿಸನ್ನಿಧಿಮತ್ತಯಾ ।
ಯಥಾ ಯಥಾ ಭವೇದ್ ಬುದ್ಧಿಃ ಆತ್ಮಾ ತದ್ವದಿಹೇಷ್ಯತೇ ॥
ಇತ್ಯಾದಿ ಸ್ಮೃತಯೋಽಪಿ ಏತದಾಹುರಿತಿ । ತದೇವಮಸಂಪ್ರಜ್ಞಾತ । ಯೋಗಾದೇವ ಮೋಕ್ಷಾಂತರಾಯ ಧ್ವಂಸ ಇತಿ ಪ್ರಘಟ್ಟಕಾರ್ಥಃ ।

ಅನುವಾದ: ಧ್ಯಾನಾದಿಗಳಿಂದ ಮನಸ್ಸು ನಿದ್ರೆಯ ವೃತ್ತಿಯಿಂದ ಅಥವಾ ಪ್ರಮಾಣಾದಿ ವೃತ್ತಿಯಿಂದ ನಿವೃತ್ತಿ ಪಡೆದ ಪುರುಷನಿಗೂ ವೃತ್ತ್ಯುಪರಾಗದ ನಿರೋಧವು ಉಂಟಾಗುವುದು. ಬಿಂಬವನ್ನು ನಿರೋಧಿಸಿದಲ್ಲಿ ಪ್ರತಿಬಿಂಬವೂ ನಿರುದ್ಧವಾಗುವುದು ಎಂದು ಪೂರ್ವಾಚಾರ್ಯರು ಹೇಳಿದ್ದಾರೆ ಎಂದರ್ಥ. ಪತಂಜಲಿಯು ಹೇಳಿರುವಂತೆ 'ಚಿತ್ತವೃತ್ತಿಯನ್ನು ನಿರೋಧಿಸುವುದೇ ಯೋಗ', 'ಅನಂತರ ದ್ರಷ್ಟೃವು ತನ್ನ ಸ್ವರೂಪದಲ್ಲಿಯೇ ಉಳಿಯುವನು', 'ಬೇರೆಯ ಕಡೆ ವೃತ್ತಿಯಲ್ಲಿ ಒಂದೇ ರೀತಿಯಾಗುವುದು. ಹೀಗೆ ಮೂರು ಸೂತ್ರಗಳಿಂದ ಈ ವಿಷಯವನ್ನೇ ಹೇಳಿದೆ.

ಆತ್ಮನು ಸರ್ವಗತನೂ, ನಿತ್ಯನೂ ಆಗಿರುವನು. ಬುದ್ಧಿಯು ಸಮೀಪದಲ್ಲಿರುವ ಕಾರಣ ಹೇಗೆ ಹೇಗೆ ಬುದ್ಧಿಯ ವೃತ್ತಿಯು ಇರುವುದೋ ಹಾಗೆಲ್ಲ ಆತ್ಮವೂ ಸಹ ಇರುವಂತೆ ತೋರುತ್ತದೆ ಇತ್ಯಾದಿಯಾಗಿ ಸ್ಮೃತಿಗಳೂ ಸಹ ಹೇಳಿವೆ. ಆದ್ದರಿಂದ

ಅಸಂಪ್ರಜ್ಞಾತ ಯೋಗದಿಂದಲೇ ಮೋಕ್ಷದ ಅಡ್ಡಿಯಾದುವುಗಳನ್ನು ಧ್ವಂಸ ಮಾಡಿಬಿಡುತ್ತದೆ ಎಂದು ಉಪದೇಶದ ಮಾತಿದೆ.

ಭಾಷ್ಯ: *ಧ್ಯಾನಾದೌ ಗುಹಾದಿ ಸ್ಥಾನನಿಯಮಃ ನಾಸ್ತೀತ್ಯಾಹ ।*

ಸೂತ್ರ: ನ ಸ್ಥಾನನಿಯಮಶ್ಚಿತ್ತಪ್ರಸಾದಾತ್ ॥ ೩೧ ॥

ಅನುವಾದ: ಧ್ಯಾನಾದಿ ಸಾಧನಗಳಿಗೆ ಗುಹೆಯೇ ಮೊದಲಾದ ಸ್ಥಳಗಳು ಇರಬೇಕೆಂಬ ನಿಯಮವಿಲ್ಲ ಎಂಬುದನ್ನು ಹೇಳಿದ್ದಾರೆ.

ಸೂತ್ರಾನುವಾದ: (ಯೋಗಾಭ್ಯಾಸಕ್ಕೆ) ಸ್ಥಾನಾದಿ ನಿಯಮಗಳಿಲ್ಲ. (ಅದು) ಚಿತ್ತ ಪ್ರಸಾದದಿಂದಲೇ ದೊರೆಯುವುದು.

ಭಾಷ್ಯ: *ಚಿತ್ತಪ್ರಸಾದಾದೇವ ಧ್ಯಾನಾದಿಕಮ್ । ಅತಸ್ತತ್ರ ಚ ಗುಹಾದಿಸ್ಥಾನನಿಯಮ ಇತ್ಯರ್ಥಃ । ಶಾಸ್ತ್ರಂ ತ್ವೌತ್ಸರ್ಗಿಕಾಭಿಪ್ರಾಯೇಣ ಏವ ಅರಣ್ಯಗಿರಿಗುಹಾದಿಸ್ಥಾನಂ ಯೋಗಸ್ಯೋದ್ದಿಷ್ಟಮಿತಿ । ಅತಃ ಏವ ಬ್ರಹ್ಮಸೂತ್ರಮಪಿ, 'ಯತ್ರೈಕಾಗ್ರತಾ ತತ್ರ ಅವಿಶೇಷಾತ್ (೪.೧.೧೧) ಇತಿ ।*

ಅನುವಾದ: ಚಿತ್ತದ ಪ್ರಸನ್ನತೆಯೇ ಧ್ಯಾನಾದಿಗಳನ್ನು ಸಾಧಿಸಲು ಪ್ರಯೋಜಕ. ಆದ್ದರಿಂದ ಅದಕ್ಕಾಗಿ ಗುಹಾದಿಸ್ಥಾನಗಳು ಇರಬೇಕು ಎಂಬ ನಿಯಮವಿಲ್ಲ. ಆದ್ದರಿಂದಲೇ ಬ್ರಹ್ಮಸೂತ್ರವೂ ಸಹ 'ಎಲ್ಲಿ ಏಕಾಗ್ರತೆಯುಂಟೋ ಅಲ್ಲಿ ಧ್ಯಾನವಿರುವುದು (ಸಂಧ್ಯಾದಿಗಳಂತೆ ಅದಕ್ಕೆ ನಿಯಮವೇನಿಲ್ಲ)' ಎಂದು ಹೇಳಿರುವುದು.

ಭಾಷ್ಯ: *ಸಮಾಪ್ತೋ ಮೋಕ್ಷವಿಚಾರಃ । ಇದಾನೀಂ ಪುರುಷಾ ಪರಿಣಾಮಿತ್ವಾಯ ಜಗತ್ಕಾರಣಂ ವಿಚಾರಯತಿ ।*

ಸೂತ್ರ: ಪ್ರಕೃತೇರಾದ್ಯೋಪಾದಾನತಾನ್ಯೇಷಾಂ ಕಾರ್ಯತ್ವಶ್ರುತೇಃ ॥ ೩೨ ॥

ಅನುವಾದ: ಮೋಕ್ಷ ವಿಚಾರವು ಸಮಾಪ್ತವಾಗಿದೆ. ಈಗ ಪುರುಷನು ಅಪರಿಣಾಮಿ ಎಂಬುದಕ್ಕೆ ಜಗತ್ಕಾರಣವನ್ನು ವಿಚಾರ ಮಾಡುವರು.

ಸೂತ್ರಾನುವಾದ: ಪ್ರಕೃತಿಯೇ ಎಲ್ಲಕ್ಕೂ ಮೊದಲ ಉಪಾದಾನ ಕಾರಣ, ಉಳಿದವು ಕಾರ್ಯಗಳು ಎಂದು ಶ್ರುತಿಯು ಹೇಳುತ್ತದೆ.

ಭಾಷ್ಯ: *ಮಹದಾದೀನಾಂ ಕಾರ್ಯತ್ವಶ್ರವಣಾತ್ ತೇಷಾಂ ಮೂಲ। ಕಾರಣತಯಾ ಪ್ರಕೃತಿಃ ಸಿದ್ಧ್ಯತೀತ್ಯರ್ಥಃ ।*

ಅನುವಾದ: ಮಹತ್ತತ್ವವೇ ಮೊದಲಾದುವುಗಳ ಕಾರ್ಯತ್ವವನ್ನು ಕೇಳಿರುವುದರಿಂದ ಅವಕ್ಕೆಲ್ಲ ಮೂಲಕಾರಣವಾದ ಪ್ರಕೃತಿಯು ಸಿದ್ಧವಾಗುತ್ತದೆ.

ಭಾಷ್ಯ: *ಪುರುಷ ಏವ ಉಪಾದಾನಂ ಭವತು – ತತ್ರಾಹ*

(ಪ್ರಕೃತಿಯಂತೆ) ಪುರುಷನೂ (ಸೃಷ್ಟಿಗೆ) ಉಪಾದಾನ ಕಾರಣವಾಗಿ ಏಕಾಗಬಾರದು?

ಸೂತ್ರ: ನಿತ್ಯತ್ವೇऽಪಿ ನಾತ್ಮನೋ ಯೋಗತ್ವಾಭಾವಾತ್ ॥ ೩೩ ॥

ಸೂತ್ರಾನುವಾದ: ನಿತ್ಯವಾದರೂ ಪುರುಷನು (ಉಪಾದಾನ ಕಾರಣವಾಗಲಾರನು) ಏಕೆಂದರೆ ಅವನಿಗೆ ಯೋಗ್ಯತೆ ಇಲ್ಲ.

ಭಾಷ್ಯ: *ಗುಣವತ್ತ್ವಂ ಸಂಗಿತ್ವಂ ಚೋಪಾದಾನಯೋಗ್ಯತಾ । ತಯೋಃ ಅಭಾವಾತ್ ಪುರುಷಸ್ಯ ನಿತ್ಯತ್ವೇ ಅಪಿ ನೋಪಾದಾನತ್ವಂ ಇತ್ಯರ್ಥಃ ।*

ಅನುವಾದ: ಗುಣವತ್ತ್ವ ಮತ್ತು ಸಂಗವನ್ನು ಹೊಂದಿರುವುದು ಉಪಾದಾನಕ್ಕೆ ಯೋಗ್ಯತೆಯನ್ನು ಉಂಟುಮಾಡುವುವು. ಅವೆರಡೂ ಇಲ್ಲದಿರುವಾಗ ಪುರುಷನು ನಿತ್ಯನಾದರೂ ಉಪಾದಾನನಾಗಲಾರನು.

ಭಾಷ್ಯ: *ನನು 'ಬಹ್ವೀಃಪ್ರಜಾಃ ಪುರುಷಾತ್ ಸಂಪ್ರಸೂತಾಃ (ಮುಂ.ಉ. ೨.೧.೫) ಇತ್ಯಾದಿ ಶ್ರುತೇಃ ಪುರುಷಸ್ಯ ಕಾರಣತ್ವಾವಗಮಾತ್ ವಿವರ್ತಾದಿವಾದು ಆಶ್ರಯಣೀಯಾಃ ಇತ್ಯಾಶಂಕ್ಯ ಆಹ ।*

ಸೂತ್ರ: ಶ್ರುತಿ ವಿರೋಧಾನ್ನ ಕುತರ್ಕಾಪಸದಸ್ಯ ಆತ್ಮಲಾಭಃ ॥ ೩೪ ॥

ಅನುವಾದ: ಶ್ರುತಿಯ ವಚನದಂತೆ, 'ಅನೇಕ ಸಂತತಿಗಳು ಪುರುಷನಿಂದ ಜನಿಸಿದುವು. ಪುರುಷನೇ ಕಾರಣನೆಂದು ತಿಳಿದುಬರುವುದರಿಂದ ವಿವರ್ತಾದಿ ವಾದಗಳನ್ನು ಆಶ್ರಯಿಸಬೇಕಲ್ಲವೆ? ಈ ಶಂಕೆಗೆ ಉತ್ತರ ನೀಡಿದೆ–

ಸೂತ್ರಾನುವಾದ: ಶ್ರುತಿಯನ್ನು ವಿರೋಧಿಸಿದುದರಿಂದ ಕುತರ್ಕ ಮಾಡುವ ಅಧಮವ್ಯಕ್ತಿಗೆ ಆತ್ಮಸಾಕ್ಷಾತ್ಕಾರವಾಗಲಾರದು.

ಭಾಷ್ಯ: *ಪುರುಷ ಕಾರಣತಾಯಾಂ ಯೇ ಯೇ ಪಕ್ಷಾಃ ಸಂಭಾವಿತಾಸ್ತೇ ಸರ್ವೇ ಶ್ರುತಿವಿರುದ್ಧಾ ಇತ್ಯತಸ್ತದಭ್ಯುಗಂತ್ರೂಣಾಂ ಕುತಾರ್ಕಿಕಾದಿ ಅಧಮಾನಾಂ ಆತ್ಮಸ್ವರೂಪಜ್ಞಾನಂ ನಭವತೀತ್ಯರ್ಥಃ । ಏತೇನ ಆತ್ಮನಿ ಸುಖದುಃಖಾದಿಗುಣೋಪಾದಾನತ್ವವಾದಿನೋऽಪಿ ಕುತಾರ್ಕಿಕಾ ಏವ । ತೇಷಾಮಪ್ಯಾತ್ಮಯಥಾರ್ಥಜ್ಞಾನಂ ನಾಸ್ತೀತ್ಯವಗಂತವ್ಯಮ್ । ಆತ್ಮಕಾರಣತಾಶ್ರುತಯಶ್ಚ ಶಕ್ತಿಶಕ್ತಿಮದಭೇದೇನ ಉಪಾಸನಾರ್ಥಾ ಏವ । ಅಜಾಮೇಕಾಮಿತ್ಯಾದಿ ಶ್ರುತಿಭಿಃ (ಶ್ವೇ.ಉ. ೪.೫) ಪ್ರಧಾನ । ಕಾರಣತಾಸಿದ್ಧೇಃ । ಯದಿ ಚಾಕಾಶಸ್ಯ ಅಭ್ರಾದ್ಯದಿಷ್ಠಾನಕಾರಣತ್ವಂ ಉಚ್ಯತೇ ತದಾ ತನ್ನ ನಿರಾಕುರ್ಮಃ । ಪರಿಣಾಮಸ್ಯೈವ ಪ್ರತಿಷೇಧಾದಿತಿ ।*

ಅನುವಾದ: (ಜಗತ್ಸೃಷ್ಟಿಗೆ) ಪುರುಷನೇ ಕಾರಣ ಎಂದು ಯಾವ ಯಾವ ಪಕ್ಷದವರು ಸಾಧ್ಯತೆಯನ್ನು ಹೇಳುವರೋ ಅವರೆಲ್ಲ ಶ್ರುತಿ ವಿರುದ್ಧರು. ಆದ್ದರಿಂದ ಅದನ್ನು ಅನುಸರಿಸುವವರು ಕುತಾರ್ಕಿಕರೂ ಅಧಮರು; ಅವರಿಗೆ ಆತ್ಮವು ದೊರಕದು.

ಇದರಿಂದ ಆತ್ಮನಲ್ಲಿ ಸುಖದುಃಖಾದಿ ಗುಣೋಪಾದಾನತ್ವವನ್ನು ವಾದಿಸುವವರು ಕುತಾರ್ಕಿಕರೇ ಸರಿ. ಅವರಿಗೆ ಆತ್ಮನ ಬಗ್ಗೆ ಯಥಾರ್ಥ ಜ್ಞಾನವಿಲ್ಲವೆಂಬುದನ್ನು ತಿಳಿಯಬೇಕು. ಆತ್ಮಕಾರಣತೆಯ ಶ್ರುತಿಗಳೂ ಸಹ ಶಕ್ತಿ ಮತ್ತು ಶಕ್ತಿಯುಳ್ಳದ್ದು ಎಂಬ ಭೇದವಿಲ್ಲದೆ ಉಪಾಸನೆಗಾಗಿ ಮಾತ್ರ ಇವೆ. ಒಂದು ಆಡನ್ನು..... ಮುಂತಾದ ಶ್ರುತಿಗಳಿಂದ (ಶ್ವೇ.ಉ. ೪.೫). ಪ್ರಧಾನವೇ ಕಾರಣ ಎಂಬುದು ಸಿದ್ಧವಾಗಿರುವುದು. ಆಕಾಶವು ಮೋಡವೇ ಮುಂತಾದುವುಗಳಿಗೆ ಆಶ್ರಯ ಎಂದು ಹೇಳಿದರೆ ಆಗ ನಾವು ಅದನ್ನು ನಿರಾಕರಿಸುವುದಿಲ್ಲ. ನಾವು ಕೇವಲ ಪರಿಣಾಮವನ್ನು ಮಾತ್ರ ನಿಷೇಧಿಸುತ್ತೇವೆ.

ವಿವರಣೆ: ಆಕಾಶವು ಮೇಘಾದಿಗಳಿಗೆ ಆಶ್ರಯ ನೀಡುತ್ತದೆ. ಆದರೆ ಅವುಗಳಿಗೆ ಉಪಾದಾನ ಕಾರಣವಲ್ಲ. ಪುರುಷನಿಗೆ ಹಾಗೆಯೇ ಪರಿಣಾಮವಿಲ್ಲ ಎಂಬುದು ಮುಖ್ಯತತ್ತ್ವ.

ಭಾಷ್ಯ: *ಸ್ಥಾವರ ಜಂಗಮಾದಿಷು ಪರಂಪರಯಾ ಕಾರಣತ್ವೇಽಪಿ ತೇಷು ಪ್ರಧಾನಸ್ಯಾನುಮಾನಾದುಪಾದಾನತ್ವಮಕ್ಷತಮ್ । ಯಥಾ ಅಂಕುರಾದಿದ್ವಾರಕತ್ವೇಽಪಿ ಸ್ಥಾವರಾದಿಷು ಪಾರ್ಥಿವಾದ್ಯಣೂನಾಂ ಅನುಗಮಾತ್ ಉಪಾದಾನತ್ವಮಿತ್ಯರ್ಥಃ ।*

ಅನುವಾದ: ಸ್ಥಾವರಾದಿಗಳಲ್ಲಿ ಪರಂಪರೆಯಿಂದ ಕಾರಣತ್ವ ಇದ್ದರೂ ಅವುಗಳಲ್ಲಿ ಪ್ರಧಾನವನ್ನು ಅನುಮಾನ ಮಾಡಬಹುದಾದ್ದರಿಂದ ಉಪಾದಾನಕ್ಕೆ ಚ್ಯುತಿ ಬರುವುದಿಲ್ಲ. ಹೇಗೆ ಅಂಕುರವೇ ಮುಂತಾದುವುಗಳ ಮೂಲಕವೇ ಸ್ಥಾವರಾದಿಗಳಲ್ಲಿ ಪೃಥಿವಿಯೇ ಮೊದಲಾದುವುಗಳ ಅಣುಗಳು ಸೇರುವುದರಿಂದ ಉಪಾದಾನತ್ವ ವಿರುತ್ತದೆ ಎಂದರ್ಥ.

ಭಾಷ್ಯ: *ಅಣುನ್ಯಾಯೇನ ಪ್ರಕೃತೇರ್ವ್ಯಾಪಕತ್ವೇ ಪ್ರಮಾಣಮಾಹ ।*

ಅನುವಾದ: ಅಣು ನ್ಯಾಯದಿಂದ ಪ್ರಕೃತಿಯು ಹೇಗೆ ವ್ಯಾಪಕವಾಗುವುದು ಎಂಬುದರ ಪ್ರಮಾಣವನ್ನು ಹೇಳಿದ್ದಾರೆ.

ಸೂತ್ರ: ಸರ್ವತ್ರ ಕಾರ್ಯದರ್ಶನಾದ್ವಿಭುತ್ವಮ್ ॥ ೩೬ ॥

ಸೂತ್ರಾನುವಾದ: ಎಲ್ಲ ಕಡೆಯಲ್ಲಿಯೂ ಕಾರ್ಯವನ್ನೇ ಕಾಣಬಹುದಾದ್ದರಿಂದ (ಉಪಾದಾನ ಕಾರಣವು) ವಿಭುವೆಂದು ತಿಳಿಯಬಹುದು.

ಭಾಷ್ಯ: *ಅವ್ಯವಸ್ಥಯಾ ಸರ್ವತ್ರ ವಿಕಾರದರ್ಶನಾತ್ ಪ್ರಧಾನಸ್ಯ ವಿಭುತ್ವಮ್ । ಯಥ ಅಣೋರ್ಘಟಾದಿವ್ಯಾಪಿತ್ವಮಿತ್ಯರ್ಥಃ । ಏತಚ್ಚ ಪ್ರಾಗೇವ ವ್ಯಾಖ್ಯಾತಮ್ ।*

ಅನುವಾದ: ಎಲ್ಲ ಕಡೆಯಲ್ಲಿಯೂ ವಿಕಾರಭೂತವಾದ (ಕಾರ್ಯದ) ಪದಾರ್ಥಗಳು ಕಾಣುವುದರಿಂದ ವ್ಯವಸ್ಥೆಯ ನಿಯಮವಿಲ್ಲದೇ ಇರುವ ಕಾರಣ ಪ್ರಧಾನವು ವಿಭುವಾಗಿರುವುದು ತಿಳಿಯುವುದು; ಘಟವನ್ನೆಲ್ಲ ಅಣುವು ವ್ಯಾಪಿಸಿರುವುದು ಗೋಚರವಾಗಿರುವಂತೆ ಎಂದು. ಇದನ್ನು ಮೊದಲೇ ವ್ಯಾಖ್ಯಾನ ಮಾಡಲಾಗಿದೆ.

ಭಾಷ್ಯ: *ನನು ಪರಿಚ್ಛಿನ್ನತ್ವೇಽಪಿ ಯತ್ರ ಕಾರ್ಯಮುತ್ಪದ್ಯತೇ ತತ್ರ ಗಚ್ಛತೀತಿ ವಕ್ತವ್ಯಮ್ । ತತ್ರಾಹ–*

ಅನುವಾದ: ನಿಗದಿತವಾದರೂ ಎಲ್ಲಿ ಕಾರ್ಯವು ಉತ್ಪನ್ನವಾಗುವುದೋ ಅಲ್ಲಿ 'ಹೋಗುತ್ತದೆ' ಎಂದು ಹೇಳಬೇಕು.

ಸೂತ್ರ: ಗತಿಯೋಗೇಪ್ಯಾದ್ಯ ಕಾರಣತಾಹಾನಿರಣುತ್ವಮ್ ॥ ೩೭ ॥

ಸೂತ್ರಾನುವಾದ: ಗಮನಕ್ರಿಯೆಯಿದ್ದರೂ ಅಣುವಿನಂತೆ (ಪ್ರಕೃತಿಯಲ್ಲಿ) ಮೂಲಕಾರಣವು ಹಾನಿಗೊಳಗಾಗದು.

ಭಾಷ್ಯ: *ಗತಿಸ್ವೀಕಾರೇಽಪಿ ಪರಿಚ್ಛಿನ್ನತಯಾ ಮೂಲಕಾರಣತ್ವಾಭಾವಃ ಪಾರ್ಥಿವಾದಿ ಅಣುದೃಷ್ಟಾಂತೇನೇತ್ಯರ್ಥಃ ಅಥವಾ ಇತ್ಥಂ ವ್ಯಾಖ್ಯೇಯಮ್ । ನನು ತ್ರಿಗುಣಾತ್ಮಕ ಪ್ರಧಾನಸ್ಯ ಅನ್ಯೋನ್ಯ ಸಂಯೋಗಾರ್ಥಂ ಶ್ರುತಿಸ್ಮೃತಿಷು ಕ್ರಿಯಾ ಕ್ಷೋಭಾಖ್ಯಾ ಶ್ರೂಯತೇ, ಕ್ರಿಯಾವತ್ತ್ವಾಚ್ಚ ತಂತ್ವಾದಿದೃಷ್ಟಾಂತೇ ಮೂಲಕಾರಣತ್ವಾಭಾವ ಇತ್ಯಾಶಂಕ್ಯ ಪರಿಹರತಿ । ಗತಿಯೋಗೇಽ ಪ್ಯಾದ್ಯಕಾರಣತಾಽಹಾನಿರಣುವತ್ । ಗತಿಃ ಕ್ರಿಯಾ ತತ್ಸತ್ವೇಽಪಿ ಮೂಲಕಾರಣತಾಯಾ ಅಹಾನಿರ್ಯಥಾ ಪಾರ್ಥಿವಾದ್ಯಣೂನಾಮಿತ್ಯರ್ಥಃ ।*

ಅನುವಾದ: ಗತಿಯನ್ನು ಸ್ವೀಕರಿಸಿದರೂ ನಿಯತವಾದ್ದರಿಂದ ಮೂಲಕಾರಣತ್ವದ ಅಭಾವವು ಪೃಥ್ವಿಯ ಅಣುದೃಷ್ಟಾಂತದಿಂದ ನೀಡಲ್ಪಟ್ಟಿದೆ. ಅಥವಾ ಹೀಗೆ ವ್ಯಾಖ್ಯಾನ ಮಾಡಬಹುದು. ತ್ರಿಗುಣಾತ್ಮಕವಾದ ಪ್ರಧಾನದಲ್ಲಿ ಅನ್ಯೋನ್ಯ ಸಂಯೋಗಕ್ಕಾಗಿ ಶ್ರುತಿಸ್ಮೃತಿಗಳಲ್ಲಿ ಕ್ಷೋಭೆಯೆಂಬ ಕ್ರಿಯೆಯನ್ನು ಹೇಳಲಾಗಿದೆ. ಆದ್ದರಿಂದ ಕ್ರಿಯೆಯಲ್ಲಿ ತೊಡಗುವುದರಿಂದ ತಂತುವೇ ಮೊದಲಾದ ದೃಷ್ಟಾಂತದ ಮೂಲಕ ಮೂಲಕಾರಣತ್ವದ ಅಭಾವವನ್ನು ಒಪ್ಪಬೇಕು ಎಂಬ ಶಂಕೆಯನ್ನು ಪರಿಹರಿಸುವರು.

ಗತಿಯೋಗವಿದ್ದರೂ ಆದ್ಯಕಾರಣದ ಹಾನಿಯಿಲ್ಲದಿರುವುದನ್ನು ಅಣುವಿನ (ಹಾನಿಯಿಲ್ಲದಿರುವಂತೆ) ಹೇಳಲಾಗಿದೆ. ಗತಿ ಎಂಬುದು ಕ್ರಿಯೆ, ಅದು ಇರುವಾಗಲೂ ಮೂಲಕಾರಣದ ಹಾನಿಯಿಲ್ಲದಿರುವುದು, (ವೈಶೇಷಿಕಮತದಲ್ಲಿ) ಪಾರ್ಥಿವ ಅಣುಗಳಂತೆ ಎಂದರ್ಥ.

ಭಾಷ್ಯ: *ನನು ಪೃಥಿವ್ಯಾದೀನಾಂ ನವಾನಾಮೇವ ದ್ರವ್ಯಾಣಾಂ ದರ್ಶನಾತ್ ಕಥಂ ಪೃಥಿವೀತ್ವಾದಿ ಶೂನ್ಯಂ ಪ್ರಧಾನಾಖ್ಯಂ ದ್ರವ್ಯಂ ಘಟೇತ । ನ ಚ ಪ್ರಧಾನಂ ದ್ರವ್ಯಮೇವಮಾಽಸ್ತ್ವಿತಿ ವಾಚ್ಯಮ್ । ಸಂಯೋಗ ವಿಭಾಗಪರಿಣಾಮಾದಿಭಿಃ ದ್ರವ್ಯತ್ವಸಿದ್ಧೇರಿತಿ – ತತ್ರಾಹ ।*

ಅನುವಾದ: ಪೃಥಿವಿಯೇ ಮೊದಲಾದ ದ್ರವ್ಯಗಳ ದರ್ಶನದಿಂದ ಪೃಥಿವೀತ್ವವೇ ಇಲ್ಲದ ಪ್ರಧಾನವೆಂಬ ದ್ರವ್ಯವು ಉಂಟಾಗುವುದು. ಪ್ರಧಾನವೆಂಬ ದ್ರವ್ಯವೇ ಇಲ್ಲವೆಂದು ಹೇಳಬೇಕು–ಸಂಯೋಗ, ವಿಭಾಗ, ಪರಿಣಾಮಾದಿಗಳ ಕಾರಣ ದ್ರವ್ಯತ್ವವು ಸಿದ್ಧವಾಗುವುದು. ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ಪ್ರಸಿದ್ಧಾಧಿಕ್ಯಂ ಪ್ರಧಾನಸ್ಯ ನ ನಿಯಮಃ ॥ ೩೮ ॥

ಸೂತ್ರಾನುವಾದ: (ಪೃಥಿವ್ಯಾದಿಗಳಿಗಿಂತ) ಹೆಚ್ಚು ಪ್ರಸಿದ್ಧವಾದ್ದರಿಂದ (ಹೆಚ್ಚು ದ್ರವ್ಯಗಳನ್ನು ಹೊಂದಿರುವುದರಿಂದ) ಪ್ರಧಾನಕ್ಕೆ ಆ ನಿಯಮವು ಅನ್ವಯಿಸುವುದಿಲ್ಲ.

ಭಾಷ್ಯ: *ಪ್ರಸಿದ್ಧನವದ್ರವ್ಯಾಧಿಕ್ಯಮೇವ ಪ್ರಧಾನಸ್ಯಾತೋ ನವೈವ ದ್ರವ್ಯಾಣೀತಿ ನ ನಿಯಮ ಇತ್ಯರ್ಥಃ । ಅಷ್ಟಾನಾಮೇವ ಕಾರ್ಯತ್ವಶ್ರವಣಂ ಚಾತ್ರ ತರ್ಕ ಇತಿ ಭಾವಃ ।*

ಅನುವಾದ: ಪ್ರಧಾನವು ಪ್ರಸಿದ್ಧವಾದ ಒಂಬತ್ತು ದ್ರವ್ಯಗಳನ್ನು ಮೀರಿ ಇರುವುದರಿಂದ ದ್ರವ್ಯಗಳು ಒಂಬತ್ತೇ ಎಂದು ಹೇಳಲಾಗುವುದಿಲ್ಲ. ಎಂಟೇ ಕಾರ್ಯಗಳೆಂದು ಕೇಳುವುದೂ ತರ್ಕವೆಂದು ಭಾವ.

ಭಾಷ್ಯ: *ಕಿಂ ಸತ್ತ್ವಾದಯೋ ಗುಣಾ ಏವ ಪ್ರಕೃತಿರಥವಾ ಗುಣತ್ರಯ ರೂಪದ್ರವ್ಯಾಧಾರಭೂತಾ ಪ್ರಕೃತಿರಿತಿ ಸಂಶಯೇಽವಧಾರಯತಿ ।*

ಅನುವಾದ: ಸತ್ತ್ವಾದಿ ಗುಣಗಳೇ ಪ್ರಕೃತಿಯೇ ಅಥವಾ ಗುಣತ್ರಯರೂಪದ ದ್ರವ್ಯಗಳಿಗೆ ಆಧಾರವಾಗಿರುವುದೇ ಪ್ರಕೃತಿಯೇ ಎಂಬ ಸಂಶಯವನ್ನು ನಿವಾರಿಸುವರು.

ಸೂತ್ರ: ಸತ್ತ್ವಾದೀನಾಮತದ್ಧರ್ಮತ್ವಂ ತದ್ರೂಪತ್ವಾತ್ ॥ ೩೯ ॥

ಸೂತ್ರಾನುವಾದ: ಸತ್ತ್ವಾದಿಗಳು (ಪ್ರಕೃತಿಯ) ಧರ್ಮಗಳು ಅಲ್ಲ; ಅವು (ಪ್ರಕೃತಿಯ) ಸ್ವರೂಪವೇ ಆಗಿರುವುದರಿಂದ

ಭಾಷ್ಯ: *ಸತ್ತ್ವಾದಿಗುಣಾನಾಂ ಪ್ರಕೃತಿಧರ್ಮತ್ವಂ ನಾಸ್ತಿ, ಪ್ರಕೃತಿ ಸ್ವರೂಪತ್ವಾದಿತ್ಯರ್ಥಃ । ಯದ್ಯಪಿ ಶ್ರುತಿಸ್ಮೃತಿಷು ಉಭಯಮೇವ ಶ್ರೂಯತೇ, ತಥಾಪಿ ತರ್ಕತಃ ಸ್ವರೂಪತ್ವಮೇವಾವಧಾರ್ಯತೇ, ನ ತು ಧರ್ಮತ್ವಮ್ । ತಥಾ ಹಿ – ಸತ್ತ್ವಾದಿತ್ರಯಂ ಕಿಂ ಪ್ರಕೃತೇಃ ಕಾರ್ಯರೂಪೋ ಧರ್ಮೋ ಅಥವಾ ಆಕಾಶಸ್ಯ ವಾಯುವತ್ ಸಂಯೋಗಮಾತ್ರೇಣ ನಿತ್ಯ ಏವ ಧರ್ಮಃ ಸ್ಯಾತ್। ಆದ್ಯೇಽಏಕಸ್ಯಾ ಏವ ಪ್ರಕೃತೇರ್ದ್ರವ್ಯಾಂತರಸಂಗಂ ವಿನಾ ವಿಚಿತ್ರಗುಣತ್ರಯೋತ್ಪತ್ತಿಃ । – ಅಸಂಭವಃ, ದೃಷ್ಟವಿರುದ್ಧಕಲ್ಪನಾವೈಯರ್ಥ್ಯಮಿತಿ । ಸತ್ತ್ವಾದೀನಾಂ ಪ್ರಕೃತಿಕಾರ್ಯತ್ವಾದಿವಚನಾನಿ ಚಾಂಶತಃ ಪ್ರಕಾಶಾದಿ–ಕಾರ್ಯೋಪಹಿತತಯಾ ಅಭಿವ್ಯಕ್ತ್ಯಾದಿಕಮೇವ ಬೋಧಯಂತಿ । ಯಥಾ ಪೃಥ್ವೀತೋ ದ್ವೀಪೋತ್ಪತ್ತಿರಿತಿ ।*

ಅನುವಾದ: ಸತ್ತ್ವಾದಿಗುಣಗಳು ಪ್ರಕೃತಿಯ ಧರ್ಮವೆಂದು ಹೇಳಲಾಗದು. ಏಕೆಂದರೆ ಅವು ಪ್ರಕೃತಿಯ ಸ್ವರೂಪವೇ ಆಗಿವೆ. ಶ್ರುತಿಸ್ಮೃತಿಗಳಲ್ಲಿ ಎರಡನ್ನೂ ಹೇಳಿರುವರಾದರೂ ತಾರ್ಕಿಕವಾಗಿ ಸ್ವರೂಪತ್ವವನ್ನಷ್ಟೇ ಒಪ್ಪಿದ್ದಾರೆ, ಧರ್ಮತ್ವವನ್ನಲ್ಲ. ಹಾಗೆಯೇ ಸತ್ತ್ವಾದಿತ್ರಯವು ಪ್ರಕೃತಿಯಲ್ಲಿ ಕಾರ್ಯರೂಪವಾದ ಧರ್ಮವೇ ಅಥವಾ ಆಕಾಶದಲ್ಲಿ ವಾಯುವಿನಂತೆ ಸಂಯೋಗ ಮಾತ್ರದಿಂದ ನಿತ್ಯವಾದ ಧರ್ಮವೆ? ಮೊದಲ ಪಕ್ಷದಲ್ಲಿ ಕೇವಲ ಪ್ರಕೃತಿಯ ಕಾರ್ಯರೂಪ ಧರ್ಮವೆ ಅಥವಾ ಆಕಾಶದಲ್ಲಿ ಗಾಳಿಯಂತೆ ಸಂಯೋಗಮಾತ್ರದಿಂದ ನಿತ್ಯವೇ ಆದ ಧರ್ಮವೆ? ಮೊದಲನೆಯದಾದರೆ ಪ್ರಕೃತಿ ಒಂದರಿಂದಲೇ ಬೇರೊಂದು ಧರ್ಮದ ಸಂಗವಿಲ್ಲದೆ ವಿಚಿತ್ರಗುಣತ್ರಯದ ಉತ್ಪತ್ತಿಯಾಗುವುದು ಸಂಭವವಿಲ್ಲ, ಕಂಡಿರುವುದಕ್ಕೆ ವಿರುದ್ಧವಾದದ್ದು ಮತ್ತು ಕಲ್ಪನೆಗೆ ಒಪ್ಪುವಂತಹುದಲ್ಲ. ಕೊನೆಗೆ ನಿತ್ಯವಾದ ಸತ್ತ್ವಾದಿಗಳಿಂದ ಗುಣಗಳ ಪರಸ್ಪರ ಸಂಗದಿಂದ ವಿಚಿತ್ರವಾದ ಸಕಲ ಕಾರ್ಯೋತ್ಪತ್ತಿಯು ಉಂಟಾದಲ್ಲಿ ಆಗ ಅದನ್ನು ಮೀರಿದ ಪ್ರಕೃತಿಯ ಕಲ್ಪನೆಯು ವ್ಯರ್ಥವಾಗಿಬಿಡುವುದು.

ಸತ್ತ್ವಾದಿಗಳಿಂದ ಪ್ರಕೃತಿಯು ಕಾರ್ಯವೆಂಬ ಮಾತುಗಳು ಆಂಶಿಕವಾಗಿ ಪ್ರಕಾಶಾದಿ ಕಾರ್ಯಗಳಿಂದ ಕೂಡಿರುವುದರಿಂದ ಅವುಗಳ ಅಭಿವ್ಯಕ್ತಿಯನ್ನು ಮಾತ್ರ ಬೋಧಿಸುತ್ತವೆ; ಹೇಗೆಂದರೆ ಪೃಥಿವಿಯಿಂದ ದ್ವೀಪವು ಉತ್ಪತ್ತಿಯಾಗುವುದು ಎಂಬಂತೆ.

ಭಾಷ್ಯ: *ಪ್ರಧಾನಪ್ರವೃತ್ತೇಃ ಪ್ರಯೋಜನಮವಧಾರಯತಿ, ನಿಷ್ಪ್ರಯೋಜನ ಪ್ರವೃತ್ತ್ಯಾಭ್ಯುಪಗಮೇ ಮೋಕ್ಷಾನುಪಪತ್ತೇರಿತಿ ।*

ಸೂತ್ರ: ಅನುಪಭೋಗೇऽಪಿ ಪುಮರ್ಥಂ ಸೃಷ್ಟಿಃ ಪ್ರಧಾನಸ್ಯ ಉಷ್ಟ್ರಕುಂಕುಮವಹನವತ್ ॥ ೪೦ ॥

ಅನುವಾದ: ಪ್ರಧಾನದ ಪ್ರವೃತ್ತಿಯ ಉದ್ದೇಶವನ್ನು ನಿರ್ಧರಿಸುತ್ತಾರೆ; ಏಕೆಂದರೆ ಉದ್ದೇಶವಿಲ್ಲದೆ ಇರುವ ಪ್ರವೃತ್ತಿಯಿಂದ ಮೋಕ್ಷ ದೊರೆಯದು ಎಂಬ ಕಾರಣವಿದೆ.

ಸೂತ್ರಾನುವಾದ: ಉಪಭೋಗವು ಇಲ್ಲದಿದ್ದರೂ ಚೇತನ ಪುರುಷನಿಗಾಗಿ ಪ್ರಕೃತಿಯು ಸೃಷ್ಟಿಯಲ್ಲಿ ತೊಡಗುವುದು, ಒಂಟೆಯ ಮೇಲೆ ಹೊರಿಸಿದ ಕೇಸರಿಯಂತೆ–

ಭಾಷ್ಯ: *ತೃತೀಯಾಧ್ಯಾಯಸ್ಥೇ ಪ್ರಧಾನಸೃಷ್ಟಿಃ ಪರಾರ್ಥೇ ಇತ್ಯಾದಿ ಸೂತ್ರೇ (೩.೫೮) ವ್ಯಾಖ್ಯಾತಮಿದಮ್ ।*

ಅನುವಾದ: ಮೂರನೆಯ ಅಧ್ಯಾಯದಲ್ಲಿರುವ 'ಪ್ರಧಾನಸೃಷ್ಟಿಃಪರಾರ್ಥೇ' ಇತ್ಯಾದಿ ಸೂತ್ರದಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಭಾಷ್ಯ: *ವಿಚಿತ್ರಸೃಷ್ಟೌ ನಿಮಿತ್ತಕಾರಣಮಾಹ ।*

ಸೂತ್ರ: ಕರ್ಮವೈಚಿತ್ರ್ಯಾತ್ ಸೃಷ್ಟಿವೈಚಿತ್ರ್ಯಮ್ ॥ ೪೧ ॥

ಅನುವಾದ: ಸೃಷ್ಟಿಯು (ಸಮಾನರೂಪವಾಗಿರದೆ) ವಿಚಿತ್ರವಾಗಿರಲು ಇರುವ ನಿಮಿತ್ತ ಕಾರಣವನ್ನು ಹೇಳುವರು.

ಸೂತ್ರಾನುವಾದ: ಕರ್ಮವೈಚಿತ್ರ್ಯದ ಕಾರಣ ಸೃಷ್ಟಿಯಲ್ಲಿ ವೈಚಿತ್ರವಿರುವುದು.

ಭಾಷ್ಯ: *ಕರ್ಮ ಧರ್ಮಾಧರ್ಮೌ । ಸುಗಮಮನ್ಯತ್ ।*

ಅನುವಾದ: ಕರ್ಮವೆಂದರೆ ಧರ್ಮಾಧರ್ಮಗಳು. ಉಳಿದ ಭಾಗ ಸುಲಭವಾಗಿದೆ.

ಭಾಷ್ಯ: *ನನು ಭವತು ಪ್ರಧಾನಾತ್ ಸೃಷ್ಟಿಃ, ಪ್ರಲಯಸ್ತು ಕಸ್ಮಾತ್?*
ನ ಹ್ಯೇಕಸ್ಮಾತ್ ಕಾರಣಾತ್ ವಿರುದ್ಧ ಕಾರ್ಯದ್ವಯಂ ಘಟತೇ । ತತ್ರಹ ।

ಅನುವಾದ: ಪ್ರಕೃತಿಯಿಂದ ಸೃಷ್ಟಿಯಾಗುವುದೆಂದು ಒಪ್ಪೋಣ. ಪ್ರಲಯವು ಏತರಿಂದ? ಆದರೆ ಒಂದೇ ಕಾರಣದಿಂದ ಎರಡು ವಿರುದ್ಧವಾದ ಕಾರ್ಯಗಳು ನಡೆಯುವುವು?

ವಿವರಣೆ: ಪ್ರಕೃತಿಯು ಒಂದೇ ಆಗಿರುವಾಗ ಸೃಷ್ಟಿಯೂ ಪ್ರಲಯವೂ ಹೇಗೆ ನಡೆಯುವುವು?

ಸೂತ್ರ: ಸಾಮ್ಯವೈಷಮ್ಯಾಭ್ಯಾಂ ಕಾರ್ಯದ್ವಯಮ್ ॥ ೪೨ ॥

ಸೂತ್ರಾನುವಾದ: ಎರಡು ಕಾರ್ಯಗಳೂ (ಸತ್ತ್ವಾದಿಗುಣಗಳ) ಸಾಮ್ಯ ವೈಷಮ್ಯಗಳ ಕಾರಣ ಉಂಟಾಗುತ್ತವೆ.

ಭಾಷ್ಯ: *ಸತ್ತ್ವಾದಿಗುಣತ್ರಯಂ ಪ್ರಧಾನಮ್ । ತೇಷಾಂ ಚ ವೈಷಮ್ಯಂ ನ್ಯೂನಾತಿರಿಕ್ತಭಾವೇನ ಸಂಹನನಮ್ । ತದಭಾವಃ ಸಾಮ್ಯಮ್ । ತಾಭ್ಯಾಂ ಹೇತುಭ್ಯಾಂ ಏಕಸ್ಮಾದೇವ ಸೃಷ್ಟಿಪ್ರಲಯರೂಪಂ ವಿರುದ್ಧಕಾರ್ಯದ್ವಯಂ ಭವತೀತ್ಯರ್ಥಃ । ಸ್ಥಿತಿಸ್ತು ಸೃಷ್ಟಿಮಧ್ಯೇ ಪ್ರವಿಷ್ಟಾ ಇತ್ಯಾಶಯೇನ ತತ್ಕಾರಣತ್ವಂ ಪ್ರಧಾನಸ್ಯ ನ ಪೃಥಗ್ವಿಚಾರಿತಮ್ ।*

ಅನುವಾದ: ಸತ್ತ್ವಾದಿ ಗುಣತ್ರಯವೇ ಪ್ರಧಾನವು. ಅವುಗಳ 'ವೈಷಮ್ಯ'ವೆಂದರೆ ಹೆಚ್ಚು ಕಡಿಮೆಯಾಗುವ ಭಾವದಿಂದ ಸೇರಿಹೋಗುವುದು. (ಸಂವಹನ). ಅದಿಲ್ಲದಿರುವುದೇ ಸಾಮ್ಯ. ಈ ಎರಡು ಕಾರಣಗಳಿಂದ ಒಂದೇ ಮೂಲದಿಂದ ಸೃಷ್ಟಿ–ಪ್ರಲಯ ರೂಪವಾದ ವಿರುದ್ಧ ಕಾರ್ಯಗಳು ಉಂಟಾಗುತ್ತವೆ ಎಂದರ್ಥ. ಸ್ಥಿತಿಯಾದರೋ ಸೃಷ್ಟಿಯಲ್ಲಿಯೇ ಸೇರಿಹೋಗುವುದು ಎಂಬ ಉದ್ದೇಶದಿಂದ ಅದಕ್ಕೆ ಪ್ರಧಾನವೇ ಕಾರಣವೆಂದು ಬೇರೆಯಾಗಿ ವಿಚಾರ ಮಾಡಿಲ್ಲ.

ಭಾಷ್ಯ: *ನನು ಪ್ರಧಾನಸ್ಯ ಸೃಷ್ಟಿಸ್ವಾಭಾವ್ಯಾತ್ ಜ್ಞಾನೋತ್ತರಂ ಅಪಿ ಸಂಸಾರಃ ಸ್ಯಾತ್, ತತ್ರಾಹ–*

ಸೂತ್ರ: ವಿಮುಕ್ತಬೋಧಾನ್ನ ಸೃಷ್ಟಿಃ ಪ್ರಧಾನಸ್ಯ ಲೋಕವತ್ ॥ ೪೩ ॥

ಅನುವಾದ: ಪ್ರಧಾನವು ಸೃಷ್ಟಿಯನ್ನು ಸ್ವಾಭಾವಿಕವಾಗಿಯೇ ಮುಂದುವರಿಸಿದರೆ ಜ್ಞಾನ ಉಂಟಾದ ನಂತರವೂ ಸಂಸಾರವು ಇರುವುದೆ? ಅದಕ್ಕೆ ಹೀಗೆ ಹೇಳಿದೆ–

ಸೂತ್ರಾನುವಾದ: ಮುಕ್ತನಾದವನಿಗೆ ಜ್ಞಾನವುಂಟಾಗಿರುವ ಕಾರಣ ಪ್ರಧಾನವು (ಅವನ ಪಾಲಿಗೆ) ಸೃಷ್ಟಿಯನ್ನು ಮಾಡದು, ಲೋಕದಲ್ಲಿ ನಡೆಯುವಂತೆ.

ಭಾಷ್ಯ: *ವಿಮುಕ್ತತಯಾ ಪುರುಷಸಾಕ್ಷಾತ್ಕಾರಾದ್ ಹೇತೋಃ ಪ್ರಧಾನಸ್ಯ ತತ್ಪುರುಷಾರ್ಥಂ ಪುನಃ ಸೃಷ್ಟಿರ್ನಭವತಿ, ಕೃತಾರ್ಥತ್ವಾತ್, ಲೋಕವತ್ । ಯಥಾ ಲೋಕೇ ಅಮಾತ್ಯಾದಯಃ ರಾಜ್ಞೋಽರ್ಥಂ ಸಂಪಾದ್ಯ ಕೃತಾರ್ಥಾಃ ಸಂತಃ ನ ಪುನಃ ರಾಜಾರ್ಥಂ ಪ್ರವರ್ತಂತೇ ತಥೈವ ಪ್ರಧಾನಮಿತ್ಯರ್ಥಃ । ವಿಮುಕ್ತಮೋಕ್ಷಾರ್ಥಂ ಹಿ ಪ್ರಧಾನಪ್ರವೃತ್ತಿರಿತ್ಯುಕ್ತಮ್ ಸ ಚ ಜ್ಞಾನಾನ್ನಿಷ್ಪನ್ನ ಇತಿ ಭಾವಃ ।*

ಅನುವಾದ: ಪುರುಷ ಸಾಕ್ಷಾತ್ಕಾರದಿಂದ ವಿಮುಕ್ತನಾದ ಕಾರಣ ಅಂತಹ ಪುರುಷನ ಸಲುವಾಗಿ ಪ್ರಕೃತಿಯು ಸೃಷ್ಟಿಯಲ್ಲಿ ತೊಡಗದು, ತನ್ನ ಉದ್ದೇಶ ಪೂರೈಸಿದ ಕಾರಣ, ಲೋಕದಲ್ಲಿ ಸಂಭವಿಸುವಂತೆ; ಹೇಗೆ ಲೋಕದಲ್ಲಿ ಮಂತ್ರಿಗಳೇ ಮೊದಲಾದವರು ರಾಜನ ಸಲುವಾಗಿ ಕಾರ್ಯವನ್ನು ಪೂರೈಸಿ ಕೃತಾರ್ಥರಾಗಿ ರಾಜನ ಸಲುವಾಗಿ ಮತ್ತೆ ಆ ಕಾರ್ಯದಲ್ಲಿ ತೊಡಗುವುದಿಲ್ಲವೋ ಹಾಗೆಯೇ ಪ್ರಕೃತಿಯೂ ಸಹ ತೊಡಗದು. ವಿಮುಕ್ತ ಪುರುಷನನ್ನಾಗಿ ಮಾಡಲು ಪ್ರಧಾನವು ಪ್ರವೃತ್ತಿಯಲ್ಲಿ ತೊಡಗುವುದು, ಆ ಮೋಕ್ಷವು ವಿವೇಕಜ್ಞಾನದಿಂದ ದೊರೆಯುತ್ತದೆ ಎಂದು ಭಾವ.

ಭಾಷ್ಯ: *ನನು ಪ್ರಧಾನಸ್ಯ ಸೃಷ್ಟ್ಯುಪರಮೋ ನಾಸ್ತಿ, ಅಜ್ಞಾನಾಂ ಸಂಸಾರದರ್ಶನಾತ್ । ತಥಾ ಚ ಪ್ರಧಾನಸೃಷ್ಟ್ಯಾ ಮುಕ್ತಸ್ಯಾಪಿ ಪುನರ್ಬಂಧಃ ಸ್ಯಾತ್ ।*

ಅನುವಾದ: ಪ್ರಕೃತಿಗೆ ಸೃಷ್ಟಿಯಿಂದ ತಡೆಯೇ ಇಲ್ಲವಲ್ಲವೆ, ಏಕೆಂದರೆ ಅಜ್ಞರಿಗೆ ಸಂಸಾರವು ಯಾವಾಗಲೂ ಇರುವುದು. ಹಾಗೆಯೇ ಪ್ರಧಾನ ಸೃಷ್ಟಿಯಿಂದ ಮುಕ್ತನಿಗೂ ಮತ್ತೆ ಬಂಧವುಂಟಾಗುವುದಿಲ್ಲವೆ; ಅದಕ್ಕೆ ಹೀಗೆ ಹೇಳಿದೆ–

ಸೂತ್ರ: ಅನ್ಯೋಪಸರ್ಪಣೇಽಪಿ ಮುಕ್ತೋಪಭೋಗೋ ನಿಮಿತ್ತಾ–ಭಾವಾತ್ ॥ ೪೪ ॥

ಸೂತ್ರಾನುವಾದ: (ಪ್ರಧಾನವು) ಬೇರೆಯದರ ಬಳಿಗೆ ಹೋಗುವಾಗಲೂ (ಪ್ರವೃತ್ತವಾದಾಗ) ಮುಕ್ತರಿಗೆ ಉಪಭೋಗವಿರದು, ಅದಕ್ಕೆ ನಿಮಿತ್ತವಾದ (ಅವಿವೇಕವು) ಇಲ್ಲದಿರುವುದರಿಂದ.

ಭಾಷ್ಯ: *ಕಾರ್ಯಕಾರಣ ಸಂಘಾತಾದಿಸೃಷ್ಟ್ಯಾ ಅನ್ಯಾನ್ ಪ್ರಧಾನಸ್ಯೋಪಸರ್ಪಣೇಽಪಿ ನ ಮುಕ್ತಸ್ಯೋಪಭೋಗೋ ಭವತಿ ನಿಮಿತ್ತಾಭಾವಾತ್ । ಉಪಭೋಗೇ ನಿಮಿತ್ತಾನಾಂ ಸ್ವೋಪಾಧಿ। ಸಂಯೋಗ ವಿಶೇಷತತ್ಕಾರಣಾವಿವೇಕಾದೀನಾಮಭಾವಾದಿತ್ಯರ್ಥಃ । ಇದಮೇವ ಮುಕ್ತಂ ಪ್ರತಿ ಪ್ರಧಾನಸೃಷ್ಟ್ಯುಪರಮೋ ಯತ್ ತದ್ಭೋಗಹೇತೋಃ ಸ್ವೋಪಾಧಿಪರಿಣಾಮವಿಶೇಷಸ್ಯ ಜನ್ಮಾಖ್ಯಸ್ಯ ಅನುತ್ಪಾದನಮಿತಿ ।*

ಅನುವಾದ: ಕಾರ್ಯ–ಕಾರಣಗಳು ಕೂಡಿ ಬರುವುದರಿಂದಾಗುವ ಸೃಷ್ಟಿಯಿಂದ ಅಜ್ಞರ ಸಲುವಾಗಿ ಪ್ರಧಾನವು ತೋರಿಬಂದರೂ (ಪ್ರವೃತ್ತವಾದಾಗಲೂ) ಮುಕ್ತನಿಗೆ ಉಪಭೋಗವಿರದು. ಉಪಭೋಗದಲ್ಲಿ ನಿಮಿತ್ತವಾದ (ಅವಿವೇಕ) ಉಪಾಧಿಭೂತವಾಗಿ ಸಂಯೋಗ ವಿಶೇಷವಾದ ಕಾರಣ (ಮುಕ್ತನಿಗೆ) ಅಂತಹ ಅವಿವೇಕಾದಿಗಳು ಇಲ್ಲದಿರುವುದರಿಂದ (ಉಪಭೋಗವಿರದು) ಇದೇ ಮುಕ್ತನ ಬಗ್ಗೆ ಪ್ರಧಾನಸೃಷ್ಟಿಯು ಹಿಂದೆಗೆಯುವುದು. ಅವನ ಭೋಗಕ್ಕಾಗಿ ಪ್ರಕೃತಿಯ ಉಪಾಧಿಯ ವಿಶೇಷ ಪರಿಣಾಮವಾದ ಜನ್ಮವೆಂಬುದು ಮತ್ತೆ ಉಂಟಾಗಲಾರದು.

ಭಾಷ್ಯ: *ನನ್ವಿಯಂ ವ್ಯವಸ್ಥಾ ತದಾ ಘಟೇತ ಯದಿ ಪುರುಷ–ಬಹುತ್ವಂ ಸ್ಯಾತ್, ತದೇವ ತು ಆತ್ಮಾದ್ವೈತಶ್ರುತಿಬಾಧಿತಮಿತಿ ಆಶಂಕ್ಯ ತತ್ರಾಹ–*

ಅನುವಾದ: ಈ ವ್ಯವಸ್ಥೆಯು ಪುರುಷಗಳು ಬಹಳವಿರುವಾಗ ಸಂಭವಿಸಬಹುದು. ಆದರೆ ಆತ್ಮವು ಒಂದೇ ಎಂದು ಹೇಳುವ ಶ್ರುತಿಯು ಬಾಧಿತವಾಗುವುದು ಎಂದು ಆಶಂಕಿಸಿ ಹೀಗೆ ಹೇಳುವರು–

ಸೂತ್ರ: ಪುರುಷಬಹುತ್ವಂ ವ್ಯವಸ್ಥಾತಃ ॥ ೪೫ ॥

ಸೂತ್ರಾನುವಾದ: ವ್ಯವಸ್ಥೆಯಂತೆ ಪುರುಷರು ಅನೇಕರು.

ವಿವರಣೆ: ವ್ಯವಸ್ಥಾ ಎಂದರೆ ಶ್ರುತಿ ಪ್ರತಿಪಾದಿತ ರೀತಿಯಲ್ಲಿ.

ಭಾಷ್ಯ: *ಯೇ ತದ್ವಿದುರಮೃತಾಸ್ತೇ ಭವಂತ್ಯಥೇತರೇ ದುಃಖಮೇವಾಪಿಯಂತಿ (ಶ್ವೇ.ಉ. ೩.೧೦) ಇತ್ಯಾದಿ ಶ್ರುತ್ಯುಕ್ತಬಂಧಮೋಕ್ಷವ್ಯವಸ್ಥಾತ ಏವ ಪುರುಷಬಹುತ್ವಂ ಸಿಧ್ಯತೀತ್ಯರ್ಥಃ ।*

ಅನುವಾದ: ಯಾರು ಅದನ್ನು ಅರಿತಿರುವರೋ ಅವರು ಮೃತಿರಹಿತರಾಗುವರು. ಆದರೆ ಇದನ್ನು ಅರಿಯದವರು ದುಃಖವನ್ನೇ ಪಡೆಯುವರು.

ಭಾಷ್ಯ: *ನನೂಪಾಧಿಭೇದಾತ್ ಬಂಧಮೋಕ್ಷವ್ಯವಸ್ಥಾ, ತತ್ರಾಹ–*

ಸೂತ್ರ: ಉಪಾಧಿಶ್ಚೇತ್ ತತ್ಸಿದ್ಧೌ ಪುನರ್ದ್ವೈತಮ್ ॥ ೪೬ ॥

ಅನುವಾದ: ಉಪಾಧಿಭೇದದ ಕಾರಣ ಬಂಧಮೋಕ್ಷದ ವ್ಯವಸ್ಥೆ ಆಗುವುದು, ಅಲ್ಲವೆ– ಅದಕ್ಕೆ ಹೀಗೆ ಹೇಳಿದ್ದಾರೆ.

ಸೂತ್ರಾನುವಾದ: (ಬಂಧ ಮೋಕ್ಷಾದಿ ವ್ಯವಸ್ಥೆಯು) ಉಪಾಧಿಯಾದರೆ ಅದನ್ನು ಸಾಧಿಸಲು ಮತ್ತೆ ದ್ವೈತವನ್ನೇ ತೆಗೆದುಕೊಳ್ಳಬೇಕಾಗುವುದು.

ಭಾಷ್ಯ: *ಉಪಾಧಿಶ್ಚೇತ್ ಸ್ವೀಕ್ರಿಯತೇ ತರ್ಹಿ ಉಪಾಧಿಸಿದ್ಧ್ಯೈವ ಪುನರದ್ವೈತಭಂಗಃ ಇತ್ಯರ್ಥಃ । ವಸ್ತುತಸ್ತು ಉಪಾಧಿಭೇದೇಽಪಿ ವ್ಯವಸ್ಥಾ ನ ಸಂಭವತೀತಿ ಪ್ರಥಮಾಧ್ಯಾಯೇ ಏವ ಪ್ರಪಂಚಿತಮ್ ।*

ಅನುವಾದ: ಉಪಾಧಿಯನ್ನು ಸ್ವೀಕರಿಸಿದರೆ ಆಗ ಉಪಾಧಿಯನ್ನು ಮೊದಲು ಸಾಧಿಸಬೇಕು. ಉಪಾಧಿಯನ್ನು ಸ್ವೀಕರಿಸಿದಲ್ಲಿ ಅದ್ವೈತವು ಭಂಗವಾಗುವುದು. ನಿಜವಾಗಿ ನೋಡಿದರೆ ಉಪಾಧಿಭೇದವಿದ್ದರೂ (ಬಂಧ–ಮೋಕ್ಷಾದಿಗಳು) ವ್ಯವಸ್ಥೆಯು ಸಂಭವಿಸದು. ಈ ಮಾತನ್ನು ಪ್ರಥಮಾಧ್ಯಾಯದಲ್ಲಿಯೇ ಹೇಳಲಾಗಿದೆ. (೧, ೧೪೨–೫೨)

ಭಾಷ್ಯ: *ನನು ಉಪಾಧಯೋಽಪಿ ಅವಿದ್ಯಕಾ ಇತಿ ನ ತೈರದ್ವೈತ ಭಂಗಃ ಇತ್ಯಾಶಂಕಾಯಾಮಾಹ ।*

ಸೂತ್ರ: ದ್ವಾಭ್ಯಾಮಪಿ ಪ್ರಾಮಾಣ್ಯವಿರೋಧಃ ॥ ೪೭ ॥

ಅನುವಾದ: ಉಪಾಧಿಗಳೂ ಅವಿದ್ಯೆಯ ಮೂಲದವು. ಅದರಿಂದ ಅದ್ವೈತದ ಭಂಗವೇನೂ ಆಗದು ಎಂಬ ಶಂಕೆಗೆ ಹೀಗೆ ಹೇಳಿದ್ದಾರೆ.

ಸೂತ್ರಾನುವಾದ: ಎರಡನ್ನೂ (ಅವಿದ್ಯಾ ಮತ್ತು ಆತ್ಮ) ಒಪ್ಪಿದಾಗ ಪ್ರಮಾಣಕ್ಕೆ ವಿರೋಧವಾಗುವುದು.

ಭಾಷ್ಯ: *ಪುರುಷಃ ಅವಿದ್ಯೇತಿ ದ್ವಾಭ್ಯಾಮಪಿ ಅಂಗೀಕೃತಾಭ್ಯಾಂ ಅದ್ವೈತಪ್ರಮಾಣಸ್ಯ ಶ್ರುತೇರ್ವಿರೋಧಃ ತದವಸ್ಥ ಏವ ಇತ್ಯರ್ಥಃ ।*

ಅನುವಾದ: ಪುರುಷ ಮತ್ತು ಅವಿದ್ಯಾ ಎರಡನ್ನೂ ಅಂಗೀಕರಿಸಿದಲ್ಲಿ ಅದ್ವೈತದ ಪ್ರಮಾಣಕ್ಕೆ ಶ್ರುತಿಯ ವಿರೋಧವಿರುವುದು ಮತ್ತು ಅದೇ ಸ್ಥಿತಿಯಲ್ಲಿಯೇ ಉಳಿಯುವುದು.

ಭಾಷ್ಯ: *ಅಪರಮಪಿ ದೂಷಣದ್ವಯಮಾಹ ।*

ಸೂತ್ರ: ದ್ವಾಭ್ಯಾಮಪ್ಯವಿರೋಧಾನ್ನ ಪೂರ್ವಮುತ್ತರಂ ಚ ಸಾಧಕಾಭಾವಾತ್ ॥ ೪೮ ॥

ಅನುವಾದ: ಇನ್ನೆರಡು ದೂಷಣೆಗಳನ್ನೂ ಹೇಳುವರು.

ಸೂತ್ರಾನುವಾದ: (ಪುರುಷ–ಅವಿದ್ಯೆ) ಎರಡನ್ನೂ ಸ್ವೀಕರಿಸಿದರೂ ಪರಸ್ಪರ ವಿರೋಧವಿಲ್ಲದ ಕಾರಣ ಪೂರ್ವ ಮತ್ತು ಉತ್ತರ ಪಕ್ಷಗಳನ್ನು ತೆಗೆದುಕೊಳ್ಳಲಾಗದು; ಏಕೆಂದರೆ ಅದಕ್ಕೆ ಸಾಧಕವಾದ ಪ್ರಮಾಣಗಳಿಲ್ಲ.

ಭಾಷ್ಯ: *ದ್ವಾಭ್ಯಾಮಪ್ಯಂಗೀಕೃತಾಭ್ಯಾಂ ಹೇತುಭ್ಯಾಂ ಪೂರ್ವಂ ಪೂರ್ವಪಕ್ಷೋ ಭವತಾಂ ನ ಘಟತೇ । ಅಸ್ಮಾಭಿರಪಿ ಪ್ರಕೃತಿಃ ಪುರುಷಶ್ಚೇತಿ ದ್ವಯೋರೇವಾಂಗೀಕಾರಾತ್ । ವಿಕಾರಸ್ಯ ಅನಿತ್ಯತಯಾ ವಾಚಾರಂಭಣಮಾತ್ರತಾಯಾಃ ಅಸ್ಮಾಭಿರಪಿ ಇಷ್ಟತ್ವಾತ್ । ನನು ಪುರುಷನಾನಾತ್ವಸ್ವೀಕಾರಾತ್ ಚ ಅಸ್ತ್ಯೇವ ಅಸ್ಮದ್ವಿರೋಧ ಇತ್ಯಾಶಂಕ್ಯ ದೂಷಣಾಂತರ ಮಾಹ – ಉತ್ತರಂ ಚ ಇತ್ಯಾದಿನಾ । ಅದ್ವೈತವಾದಿನಾಂ ಉತ್ತರಂ ಸಿದ್ಧಾಂತಶ್ಚ ನ ಘಟತೇ, ಆತ್ಮಸಾಧಕಪ್ರಮಾಣಸ್ಯಾಭಾವಾತ್ । ತದಂಗೀಕಾರೇ ಚ ತೇನೈವಾದ್ವೈತಹಾನಿರಿತಿ ಜಿತಂ ನೈರಾತ್ಮ್ಯವಾದಿಭಿರಿತ್ಯರ್ಥಃ ।*

ಅನುವಾದ: (ಪುರುಷ–ಅವಿದ್ಯಾ) ಎರಡನ್ನೂ ಅಂಗೀಕರಿಸಿದ ಕಾರಣಗಳಿಂದ ಮೊದಲು ನಿಮ್ಮ ಪೂರ್ವಪಕ್ಷವು ಸಮಂಜಸವಾಗಿರದು. ಏಕೆಂದರೆ ನಾವು ಪ್ರಕೃತಿ ಮತ್ತು ಪುರುಷ ಎರಡನ್ನೂ ಅಂಗೀಕರಿಸಿರುತ್ತೇವೆ. ವಿಕಾರಗಳು ಅನಿತ್ಯವಾದ ಕಾರಣ ಕೇವಲ ಮಾತುಗಳಿಂದ ನಾವೂ ಕೂಡ ಅದನ್ನು ಬಯಸುತ್ತೇವೆ. ಪುರುಷರು ಹಲವಾರು ಎಂಬುದನ್ನು ಸ್ವೀಕರಿಸಿರುವುದರಿಂದ ಮತ್ತು ಪ್ರಕೃತಿಯು ನಿತ್ಯ ಎಂಬುದನ್ನು ಒಪ್ಪಿರುವುದರಿಂದ ನಮ್ಮ ವಿರೋಧವು ಇನ್ನೂ ಹಾಗೆಯೇ ಇದೆ ಎಂಬುದನ್ನು ಆಶಂಕಿಸಿ ಇನ್ನೊಂದು ದೂಷಣೆಯನ್ನು ಹೇಳುವರು– ಉತ್ತರಂ ಚ ಮುಂತಾಗಿ.

ಅದ್ವೈತವಾದಿಗಳ ಉತ್ತರ ಮತ್ತು ಸಿದ್ಧಾಂತವೂ ಸರಿ ಹೋಗದು, ಏಕೆಂದರೆ ಆತ್ಮವನ್ನು ಸಾಧಿಸುವ ಯಾವುದೇ ಪ್ರಮಾಣವಿಲ್ಲ. ಅದನ್ನು ಅಂಗೀಕರಿಸಿದಲ್ಲಿ ಅದರಿಂದಲೇ ಅದ್ವೈತಕ್ಕೆ ಹಾನಿ ಬರುವುದು; ಹೀಗೆ ಹೇಳಿ ನೈರಾತ್ಮವಾದಿಗಳು (ಚಾರ್ವಾಕರು) ಗೆದ್ದಂತಾಗುವುದು.

ಭಾಷ್ಯ: *ನನು ಸ್ವಪ್ರಕಾಶತ ಆತ್ಮಾ ಸೇತ್ಸ್ಯತಿ – ತತ್ರಾಹ –*

ಸೂತ್ರ: ಪ್ರಕಾಶತತ್ಸಿದ್ಧೌ ಕರ್ಮಕರ್ತೃವಿರೋಧಃ ॥ ೪೯ ॥

ಅನುವಾದ: (ಆತ್ಮದ ಸಿದ್ಧಿಗೆ ಪ್ರಮಾಣವೇಕೆ?) ಆತ್ಮವು ಸ್ವಪ್ರಕಾಶವಾದ್ದರಿಂದ ತಾನಾಗಿಯೇ ಸಿದ್ಧಿಸುವುದಿಲ್ಲವೆ? ಅದಕ್ಕೆ ಹೀಗೆ ಹೇಳಿದೆ–

ಸೂತ್ರಾನುವಾದ: ಸ್ವಪ್ರಕಾಶ ಹೊಂದಿರುವುದರಿಂದ (ಆತ್ಮನ ಅಸ್ತಿತ್ವವನ್ನು) ಸಿದ್ಧಿಸುವುದರಿಂದ ಕರ್ಮ–ಕರ್ತೃಗಳಿಗೆ ವಿರೋಧವುಂಟಾಗುವುದು.

ಭಾಷ್ಯ: *ಚೈತನ್ಯರೂಪಪ್ರಕಾಶತಃ ಚೈತನ್ಯಸಿದ್ಧೌ ಕರ್ಮಕರ್ತೃವಿರೋಧಃ ಇತ್ಯರ್ಥಃ । ಪ್ರಕಾಶ್ಯ–ಪ್ರಕಾಶಸಂಬಂಧೇ ಹಿ ಪ್ರಕಾಶನಮಾಲೋಕಾದಿಷು ದೃಷ್ಟಮ್ । ಸ್ವಸ್ಯ ಸಾಕ್ಷಾತ್ ಸ್ವಸ್ಮಿನ್ ಸಂಬಂಧಃ ಚ ವಿರುದ್ಧ ಇತಿ । ಅಸ್ಮನ್ಮತೇ ತು ಬುದ್ಧಿ । ವೃತ್ತ್ಯಾಖ್ಯ ಪ್ರಮಾಣಾಂಗೀಕಾರಾತ್ ತದ್ದ್ವಾರಾ ಪ್ರತಿಬಿಂಬರೂಪಸ್ಯ ಸ್ವಸ್ಯ ಬಿಂಬರೂಪೇ ಸ್ವಸ್ಮಿನ್ ಸಂಬಂಧೋ ಘಟತೇ । ಯಥಾ ಸೂರ್ಯೇ ಜಲದ್ವಾರಾ ಪ್ರತಿಬಿಂಬರೂಪ ಸಂಬಂಧ ಇತಿ ಭಾವಃ । ಆತ್ಮನಃ ಸ್ವಪ್ರಕಾಶತ್ವಶ್ರುತಿಃ (ಕಠ. ೨.೭–೧೫) ತು ಅನನ್ಯೋಪಾಧಿಕ ಪ್ರಕಾಶಾದಿಪರಾ ಬೋಧ್ಯಾ ।*

ಅನುವಾದ: ಚೈತನ್ಯರೂಪ ಪ್ರಕಾಶದಿಂದ ಚೈತನ್ಯಸಿದ್ಧಿಯಾದಲ್ಲಿ ಕರ್ಮ, ಕರ್ತೃಗಳಿಗೆ ವಿರೋಧ ಬರುವುದು. ಪ್ರಕಾಶ್ಯ ಮತ್ತು ಪ್ರಕಾಶಕ ಸಂಬಂಧದಲ್ಲಿ ಪ್ರಕಾಶವು ಬೆಳಕು ಬೀರುವುದಕ್ಕೆ ಸಂಬಂಧಿಸಿದ್ದು, ಆದರೆ ತನ್ನ ಬೆಳಕನ್ನು ತಾನೇ ಬೆಳಗುವುದು ಎಂಬ ಸಂಬಂಧವು ವಿರುದ್ಧವಾದುದು. ನಮ್ಮ ಅಭಿಪ್ರಾಯದಲ್ಲಿ ಬುದ್ಧಿವೃತ್ತಿಯೆಂಬ ಪ್ರಮಾಣವನ್ನು ಅಂಗೀಕರಿಸಿರುವುದರಿಂದ ಅದರ ಮೂಲಕ ಪ್ರತಿಬಿಂಬರೂಪದ ತನ್ನ ಬಿಂಬರೂಪದಲ್ಲಿ ಸಂಬಂಧವು ಉಂಟಾಗಲಾರದು. ಹೇಗೆಂದರೆ ಸೂರ್ಯನಲ್ಲಿ

ನೀರಿನ ಮೂಲಕ ಪ್ರತಿಬಿಂಬರೂಪದಲ್ಲಿರುವುದಕ್ಕೆ ಸಂಬಂಧ ಉಂಟಾದಂತೆ ಎಂದು ಭಾವ. ಆತ್ಮನು ಸ್ವಪ್ರಕಾಶನು ಎಂಬ ಶ್ರುತಿಯು ಬೇರೆಯ ಉಪಾಧಿಯಿಲ್ಲದೆ ಪ್ರಕಾಶವುಳ್ಳದ್ದು ಎಂದು ತಿಳಿಯಬೇಕು.

ಭಾಷ್ಯ: *ನನು ನಾಸ್ತಿ ಕರ್ಮ–ಕರ್ತೃ ವಿರೋಧಃ । ಸ್ವನಿಷ್ಠಪ್ರಕಾಶ । ಧರ್ಮದ್ವಾರಾ ಸ್ವಸ್ಯ ಸ್ವಸಂಬಂಧಸಂಭವಾತ್, ಯಥಾ ವೈಶೇಷಿಕಾಣಾಂ ಸ್ವನಿಷ್ಠಜ್ಞಾನದ್ವಾರಾ ಸ್ವಸ್ಯ ಸ್ವಯಂ ವಿಷಯ ಇತಿ ತತ್ರಾಹ–*

ಅನುವಾದ: ಸ್ವಪ್ರಕಾಶ–ಸ್ವಪ್ರಕಾಶಿತ ಇವುಗಳಲ್ಲಿ ಕರ್ತೃ–ಕರ್ಮ ವಿರೋಧವಿಲ್ಲ. ಏಕೆಂದರೆ ತನ್ನಲ್ಲಿರುವ ಪ್ರಕಾಶದ ಮೂಲಕ ತಾನೇ ಸಂಬಂಧ ಹೊಂದಿರುವ ಸಂಭವವಿರುವುದು. ಹೇಗೆಂದರೆ, ವೈಶೇಷಿಕರು ತನ್ನಲ್ಲಿರುವ ಜ್ಞಾನದ್ವಾರಾ ತನಗೆ ತಾನೇ ವಿಷಯವಾಗುವುದು– ಅದಕ್ಕೆ ಹೀಗೆ ಹೇಳಿರುವರು.

ಸೂತ್ರ: ಜಡವ್ಯಾವೃತ್ತೋ ಜಡಂ ಪ್ರಕಾಶಯತಿ ಚಿದ್ರೂಪಃ ॥ ೫೦ ॥

ಸೂತ್ರಾನುವಾದ: ಜಡಪದಾರ್ಥದಿಂದ ಬೇರೆಯಾದ ಆತ್ಮನು ಜಡವಸ್ತುವನ್ನು ಪ್ರಕಾಶಿಸುವನು.

ಭಾಷ್ಯ: *ಚೇತನೇ ಪ್ರಕಾಶರೂಪಧರ್ಮಃ ಸೂರ್ಯಾದಿಷ್ವಿವ ನಾಸ್ತಿ, ಕಿಂತು ಚಿತ್ಸ್ವರೂಪ ಏವ ಪದಾರ್ಥೋ ಜಡಂ ಪ್ರಕಾಶಯತಿ । ಯತೋ ಜಡವ್ಯಾವೃತ್ತಿ ಮಾತ್ರೇಣ ಚಿದಿತ್ಯುಚ್ಯತೇ, ನ ತು ಜಡವಿಲಕ್ಷಣ ಧರ್ಮವತ್ತಯಾ ಇತ್ಯರ್ಥಃ । ಅತ ಏವ ನಿರ್ಧರ್ಮತಯಾ, 'ಸ ಏಷ ನೇತಿ ನೇತಿ' (ಬೃ.ಉ. ೩.೯.೨೬) ಇತ್ಯೇವ ಶ್ರುತ್ಯೋಪದಿಷ್ಯತೇ, ನ ತು ವಿಧಿಮುಖತಯಾ ಇತಿ ।*

ಅನುವಾದ: ಚೇತನದಲ್ಲಿರುವ ಪ್ರಕಾಶರೂಪವಾದ ಧರ್ಮವು ಸೂರ್ಯನೇ ಮುಂತಾದುವುಗಳಲ್ಲಿ ಇರುವಂತೆ ಇಲ್ಲ, ಆದರೆ ಚಿತ್ ಸ್ವರೂಪ ಮಾತ್ರ ಪದಾರ್ಥವಾಗಿ ಜಡವಸ್ತುವನ್ನು ಬೆಳಗುತ್ತದೆ. ಆದರೆ ಅದು ಜಡಪದಾರ್ಥದಿಂದ ಸರ್ವಥಾ ಭಿನ್ನವಾಗಿರುತ್ತದೆ. ಆದ್ದರಿಂದ ಅದನ್ನು ಚಿತ್ತೆನ್ನುವರು, ಆದರೆ ಜಡವಿಲಕ್ಷಣವಾದ ಧರ್ಮವನ್ನು ಹೊಂದಿರುವುದರಿಂದ ಹಾಗೆ ಹೇಳುವುದಿಲ್ಲ. ಆದ್ದರಿಂದಲೇ ಧರ್ಮರಹಿತವಾದ್ದರಿಂದ 'ಅದೇ ನೇತಿ ನೇತಿ' ಎಂದು ಶ್ರುತಿಯು ಉಪದೇಶಿಸುತ್ತದೆ. ವಿಧಿಯ ಉದ್ದೇಶದಿಂದಲ್ಲ.

ಭಾಷ್ಯ: *ತಥಾ ಚ ಸ್ಮೃತಿರಿತಿ–*

ಇದಂ ತದಿತಿ ನಿರ್ದೇಷ್ಟುಂ ಗುರುಣಾಪಿ ನ ಶಕ್ಯತೇ ।

ಜಡವ್ಯಾವೃತ್ತಾವಿತಿ ಪಾಠೇಽಪಿ ಹೇತೌ ಸಪ್ತಮ್ಯಾಂ ಅಯಮೇವಾರ್ಥಃ ಅಸ್ಮಿಂಶ್ಚ ಸೂತ್ರೇ ಜಡಮೇವ ಪ್ರಕಾಶಯತಿ ಚಿದ್ರೂಪೋ ನ ತು ಆತ್ಮಾನಮಿತಿ ನಾರ್ಥಃ । ತಥಾ ಸತಿ ಹಿ ತಸ್ಯಾಜ್ಞೇಯತ್ವೇನ

ಸಾಧಕಾಭಾವರೂಪಂ ಬಾಧಕಂ ಪರೇಷೂಪನ್ಯಾಸಾನರ್ಹಂ ಸ್ವಸ್ಯಾಪಿ ತುಲ್ಯನ್ಯಾಯತ್ವಾದಿತಿ ।

ಅನುವಾದ: ಹಾಗೆಯೇ ಸ್ಮೃತಿಯೂ ಹೇಳುವುದು. 'ಇದೇ ಅದೆಂದು ತೋರಿಸಲು (ಜ್ಞಾನಿಯಾದ) ಗುರುವಿಗೂ ಸಹ ಸಾಧ್ಯವಾಗದು'. ಈ ಸೂತ್ರದಲ್ಲಿ 'ಜಡಕ್ಕಿಂತ ಭಿನ್ನವಾಗಿ' ಎಂದರೆ ಜಡವ್ಯಾವೃತ್ತಃ ಎಂಬ ಪಾಠಕ್ಕೆ ಬದಲಾಗಿ ಜಡವ್ಯಾವೃತ್ತೌ ಎಂದು ತೆಗೆದುಕೊಂಡಲ್ಲಿ ಸಪ್ತಮೀ ವಿಭಕ್ತಿಯಲ್ಲಿ ಅದೇ ಅರ್ಥ ಉಂಟಾಗುವುದು. ಆಗ ಆ ಸೂತ್ರದ ಅರ್ಥ 'ಜಡವನ್ನೇ ಬೆಳಗುವುದು' ಎಂದೇ ಹೊರತು, ಚಿದ್ರೂಪವಾದ ಚೇತನವು ತನ್ನನ್ನೇ ಪ್ರಕಾಶಿಸುವುದು ಎಂದಲ್ಲ. ಹಾಗಿರುವಾಗ ಚೇತನವು ಅಜ್ಞೇಯವಾದಲ್ಲಿ ಸಾಧಕಾಭಾವರೂಪವೆಂಬ ಬಾಧಕವನ್ನು ಇತರರ ಬಳಿಗೆ ತರಬೇಕಾಗುವುದು. ಆಗ ಸ್ವಪಕ್ಷವೂ ಪರಪಕ್ಷವೂ ಒಂದೇ ಆಗಿ ಬಿಡುವುದು.

ವಿವರಣೆ: ಚೇತನವನ್ನು ತಿಳಿಯುವುದು ಸಾಧ್ಯವಿಲ್ಲ ಎಂದರೆ ಅದಕ್ಕೆ ಸಾಧಕವಿಲ್ಲ. ಸಾಧಕವಿಲ್ಲದಿರುವಾಗ ಪರಪಕ್ಷದವರು ಬಾಧಕವನ್ನು ತೆಗೆದುಕೊಳ್ಳದಿರುವುದೂ ಸಾಧ್ಯವಿಲ್ಲ. ಆಗ ಸ್ವಪಕ್ಷ ಮತ್ತು ಪರಪಕ್ಷ ಎರಡೂ ಸಮಾನವಾಗುವುವು.

ಭಾಷ್ಯ: *ನನ್ವೇವಂ ಪ್ರಮಾಣಾದ್ಯನುರೋಧೇನ ದ್ವೈತಸಿದ್ಧೌ ಅದ್ವೈತಶ್ರುತೇಃ ಕಾಗತಿಸ್ತತ್ರಾಹ ।*

ಸೂತ್ರ: ನ ಶ್ರುತಿವಿರೋಧೋ ರಾಗಿಣಾಂ ವೈರಾಗ್ಯಾಯ ತತ್ಸಿದ್ಧೇಃ ॥ ೫೧ ॥

ಅನುವಾದ: ಹೀಗೆ ಪ್ರಮಾಣಗಳು ಅನುರೋಧದಿಂದ (ಆತ್ಮವು) ದ್ವೈತವು ಸಿದ್ಧವಾದರೆ ಅದ್ವೈತವನ್ನು ಹೇಳುವ ಶ್ರುತಿಯ ಗತಿಯೇನು?

ಸೂತ್ರಾನುವಾದ: ಶ್ರುತಿವಿರೋಧವೇನಿಲ್ಲ. ವಿಷಯಾಸಕ್ತರಿಗೆ ವೈರಾಗ್ಯವನ್ನು ಬೋಧಿಸಲು (ಶ್ರುತಿವಾಕ್ಯಗಳು ಪ್ರತಿಪಾದಿಸುತ್ತವೆ).

ಭಾಷ್ಯ: *ಅದ್ವೈತಶ್ರುತಿವಿರೋಧಸ್ತು ನಾಸ್ತಿ । ರಾಗಿಣಾಂ ಪುರುಷಾತಿರಿಕ್ತೇ ವೈರಾಗ್ಯಾಯೈವ ಶ್ರುತಿಭಿರದ್ವೈತಸಾಧನಾತ್ । ಪುರುಷಜ್ಞಾನೇ ಏವ ದ್ವೈತಭಾವಜ್ಞಾನೇ ಸ್ವತಂತ್ರಫಲಾಂತರಾಶ್ರವಣಾತ್ । ತಚ್ಚ ವೈರಾಗ್ಯಂ ಸದದ್ವೈತೇನೈವ ಉಪಪದ್ಯತೇ । ಸತ್ತ್ವಂ ಚ ಕೂಟಸ್ಥತ್ವಂ ಇತ್ಯರ್ಥಃ । ಅತ ಏವ ಶ್ರುತಿರಪಿ ಸದ್ವೈತಮೇವ ಛಾಂದೋಗ್ಯೇ ಪ್ರತಿಪಾದಿತವತೀತಿ ಭಾವಃ ।*

ಅನುವಾದ: ಅದ್ವೈತ ಶ್ರುತಿಗೆ ವಿರೋಧವೇನೂ ಇಲ್ಲ. ಆತ್ಮವನ್ನು ಬಿಟ್ಟು ವಿಷಯಾಸಕ್ತ ಪುರುಷರಿಗೆ ವೈರಾಗ್ಯವನ್ನುಂಟು ಮಾಡಲು ಶ್ರುತಿಗಳು ಅದ್ವೈತ ಸಾಧನೆಯಿಂದ ತಿಳಿಸುತ್ತವೆ. ಪುರುಷಜ್ಞಾನದಲ್ಲಿ ಇರುವಂತೆ ದ್ವೈತಭಾವ ಜ್ಞಾನದಲ್ಲಿಯೂ ಫಲವು ಬೇರೆ ಎಂದು ಕೇಳಿಬಂದಿಲ್ಲ. ಆ ವೈರಾಗ್ಯವು ಸದ್ರೂಪವಾದ ಅದ್ವೈತದಿಂದಲೇ ದೊರೆಯುತ್ತದೆ. ಸತ್ತ್ವ ಎಂದರೆ ಕೂಟಸ್ಥವಾದುದು ಎಂದರ್ಥ. ಆದ್ದರಿಂದಲೇ

ಶ್ರುತಿಯೂ ಸಹ ಸದ್ರೂಪವಾದ ಅದ್ವೈತವನ್ನೇ ಛಾಂದೋಗ್ಯೋಪನಿಷತ್ತಿನಲ್ಲಿ ಪ್ರತಿಪಾದಿಸಿದೆ ಎಂದರ್ಥ.

ಭಾಷ್ಯ: *ನ ಕೇವಲಂ ಉಕ್ತಯುಕ್ತ್ಯೈವ ಅದ್ವೈತವಾದಿನೋ ಹೇಯಾಃ ಅಪಿ ತು ಜಗದಸತ್ಯತಾಗ್ರಾಹಕ ಪ್ರಮಾಣಾಭಾವೇನಾಪೀತ್ಯಾಹ–*

ಸೂತ್ರ: ಜಗತ್ಸತ್ಯತ್ವಮದುಷ್ಟ ಕಾರಣಜನ್ಯತ್ವಾತ್ ಬಾಧಕಾಭಾವಾತ್ ॥ ೫೨ ॥

ಅನುವಾದ: ಕೇವಲ ಮೇಲೆ ಹೇಳಿದ ಯುಕ್ತಿಯಿಂದಲೇ ಅದ್ವೈತ ವಾದಿಗಳು ಉಪೇಕ್ಷೆಗೆ ಅರ್ಹರಲ್ಲದೆ ಜಗತ್ತು ಅಸತ್ಯವೆಂಬುದನ್ನು ಪ್ರಮಾಣವಿಲ್ಲದೆಯೂ ಸಹ ಹೇಳಿದ್ದಾರೆಂಬುದಕ್ಕೂ ಅರ್ಹರು.

ಸೂತ್ರಾನುವಾದ: ಜಗತ್ತೆಲ್ಲ ಸತ್ಯ. ಏಕೆಂದರೆ ದೋಷರಹಿತ ಕಾರಣಗಳಿಂದ ಜಗತ್ತು ಹುಟ್ಟಿದೆ. (ಅದು ಸತ್ಯವೆಂಬುದಕ್ಕೆ) ಬಾಧಕವಾದ ಪ್ರಮಾಣಗಳಿಲ್ಲ.

ಭಾಷ್ಯ: *ನಿದ್ರಾದಿದೋಷದುಷ್ಟಾಂತಃಕರಣಾऽऽದಿಜನ್ಯತ್ವೇನ ಸ್ವಾಪ್ನ ವಿಷಯಶಂಖಪೀತಿಮಾದೀನಾಮಸತ್ಯತ್ವಂ ಲೋಕೇ ದೃಷ್ಟಮ್ । ತಚ್ಚ ಮಹದಾದಿಪ್ರಪಂಚೇ ನಾಸ್ತಿ । ತತ್ಕಾರಣಸ್ಯ ಪ್ರಕೃತೇಃ ಹಿರಣ್ಯಗರ್ಭಬುದ್ಧೇಶ್ಚಾದುಷ್ಟತ್ವಾತ್ 'ಯಥಾಪೂರ್ವಮಕಲ್ಪಯತ್' (ಋ.ವೇ. ೧೦.೧೯೦.೩) ಇತಿ ಶ್ರವಣಾತ್ । ನನು 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಶ್ರುತ್ಯಾ (ಬೃ. ೪.೪.೧೯) ಬಾಧಿತತ್ವೇನ ಅವಿದ್ಯಾದಿನಾಮಾ ಕಶ್ಚನಾನಾದಿರ್ದೋಷಃ ಕಲ್ಪನೀಯಸ್ತತ್ರಾಹ ಬಾಧಕಾಭಾವಾದಿತಿ । ಅಯಂಭಾವಃ 'ನೇಹ ನಾನಾಸ್ತಿ ಕಿಂಚನ' ಇತ್ಯಾದಿಶ್ರುತಯೋ ಯಾಃ ಪರೈಃ ಪ್ರಪಂಚಬಾಧಕತಯಾ ಅಭಿಪ್ರೇಯಂತೇ ತಾಃ ಪ್ರಕರಣಾನುಸಾರೇಣ ವಿಭಾಗಾದಿ ಪ್ರತಿಷೇಧಿಕಾ ಏವ, ನ ತು ಪ್ರಪಂಚಾತ್ಯಂತತುಚ್ಛತಾಪರಾಃ ಸ್ವಸ್ಯಾಪಿ ಬಾಧಾಪತ್ತ್ಯಾ ಸ್ವಾರ್ಥಾಸಾಧಕತ್ವಪ್ರಸಂಗಾತ್ । ನಹಿ ಸ್ವಪ್ನಕಾಲೀನಶಬ್ದಸ್ಯ ಬಾಧೇ ತಜ್ ಜ್ಞಾಪಿತೋऽಪ್ಯರ್ಥಃ ಪುನರ್ನ ಸಂದಿಹ್ಯತೇ ಇತ್ಯರ್ಥಃ । ತಸ್ಮಾದಾತ್ಮಾವಿಘಾತಕತಯಾ ಶ್ರುತಯಃ ನ ಪ್ರಪಂಚಸ್ಯ ಅತ್ಯಂತಾಬಾಧಪರಾ ಇತಿ ।*

ಅನುವಾದ: ನಿದ್ರೆಯೇ ಮೊದಲಾದುವುಗಳಿಂದ ದೂಷಿತವಾದ ಅಂತಃಕರಣಗಳಿಂದ ಜನ್ಯವಾದ್ದರಿಂದ ಸ್ವಪ್ನದ ವಿಷಯಗಳಾದ ಶಂಖದ ಹಳದಿಯ ಬಣ್ಣವೇ ಮೊದಲಾದುವುಗಳಿಂದ ಲೋಕದಲ್ಲಿ ಅಸತ್ಯತ್ವವು ಕಂಡುಬರುತ್ತದೆ. ಅದೂ ಸಹ ಮಹತ್ತತ್ತ್ವಾದಿ ಪ್ರಪಂಚದಲ್ಲಿ ಇರುವುದಿಲ್ಲ. ಅದಕ್ಕೆ ಕಾರಣವಾದ ಹಿರಣ್ಯಗರ್ಭನ ಬುದ್ಧಿಯೆನಿಸಿದ ಪ್ರಕೃತಿಯು ದೂಷಿತವಾಗದ ಕಾರಣ 'ಮೊದಲಿನಂತೆಯೇ ಸಿದ್ಧಮಾಡಿದನು' ಎಂಬುದನ್ನು ಕೇಳಿದ್ದೇವೆ. 'ಬಗೆ ಬಗೆಯಾಗಿ ಯಾವುದೂ ಇಲ್ಲಿ ಇರದು' ಎಂಬ ಶ್ರುತಿಗೆ ಬಾಧಕವಾದುದರಿಂದ ಅವಿದ್ಯೆಯೆಂಬ ಹೆಸರಿನ

ಅನಾದಿಯಾದ ದೋಷವು ಕಲ್ಪನೀಯವಾಗುವುದು. ಆದ್ದರಿಂದ 'ಬಾಧಕಾಭಾವಾತ್' ಎಂದು (ಸೂತ್ರದಲ್ಲಿ) ಹೇಳಿದೆ. ಅಭಿಪ್ರಾಯವೇನೆಂದರೆ, 'ವಿವಿಧ ರೀತಿಯಲ್ಲಿ ಇಲ್ಲಿ ಅದು ಇರದು' ಮುಂತಾದ ಶ್ರುತಿಗಳು ಪ್ರಪಂಚಕ್ಕೆ ಬಾಧಕ ಎಂದು ಪ್ರತಿಪಕ್ಷದವರು ಅಭಿಪ್ರಾಯಪಡುವರೋ ಆ ಪ್ರಕಾರಕ್ಕೆ ಅನುಸಾರವಾಗಿ ಪುರುಷನನ್ನು ವಿಭಾಗಾದಿಗಳಿಂದ ಪ್ರತಿಷೇಧಿಸುವುದಷ್ಟೇ ಹೊರತು ಸೃಷ್ಟಿಯು ಸಂಪೂರ್ಣವಾಗಿ ಇಲ್ಲ ಎಂಬುದನ್ನು ಹೇಳುವುದಿಲ್ಲ. ಏಕೆಂದರೆ ತಮ್ಮ ಸಿದ್ಧಾಂತಕ್ಕೆ ಬಾಧಕವುಂಟಾಗಿ ಅದನ್ನು ಸಾಧಿಸುವುದು ಸಾಧ್ಯವಾಗದುದರಿಂದ. ಸ್ವಪ್ನಕಾಲದ ಶಬ್ದಕ್ಕೆ ಬಾಧವುಂಟಾದಾಗ ಅದರಿಂದ ನೆನಪು ಮಾಡಲ್ಪಟ್ಟ ಅರ್ಥವು ಮತ್ತೆ ಸಂದೇಹಕ್ಕೆ ಗುರಿಯಾಗುವುದಿಲ್ಲ. ಆದ್ದರಿಂದ ಆತ್ಮವನ್ನು ಅಲ್ಲಗಳೆಯುವ ಪ್ರಸಂಗ ಬಾರದಿರಲೆಂದು ಶ್ರುತಿಗಳು ಸೃಷ್ಟಿಯ ಬಾಧಕವಾಗುವಂತೆ ಇರುವುದಿಲ್ಲ.

ಭಾಷ್ಯ: *'ತತ್ರ ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಶ್ರುತೇಃ ಬ್ರಹ್ಮವಿಭಕ್ತಂ ವಿಷಯಕಂ ಕಿಮಪಿ ನಾಸ್ತೀತ್ಯರ್ಥಃ ಸರ್ವಂ ಸಮಾಪ್ನೋಷಿ ತತೋऽಸಿ ಸರ್ವ (ಗೀತಾ ೧೧-೪೦) ಇತ್ಯಾದಿ ಸ್ಮೃತ್ಯೈಕವಾಕ್ಯತ್ವಾತ್ । 'ವಾಚಾರಂಭಣಂ ವಿಕಾರನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ (ಛಾಂ. ೬.೧.೪) ಇತ್ಯಾದಿಶ್ರುತೇಸ್ತು ನಿತ್ಯತಾರೂಪ ಪಾರಮಾರ್ಥಿಕಸತ್ತಾವಿರಹೋऽರ್ಥಃ, ಅನ್ಯಥಾ ಮೃತ್ತಿಕಾದೃಷ್ಟಾಂತಾಸಿದ್ಧೇಃ। ನ ಹಿ ಲೋಕೇ ಮೃತ್ತಿಕಾವಿಕಾರಾಣಾಂ ಅತ್ಯಂತ ತುಚ್ಛತ್ವಂ ಸಿದ್ಧಂ ಯೇನ ದೃಷ್ಟಾಂತತಾ ಸ್ಯಾದಿತಿ ।*

ಅನುವಾದ: 'ನೇಹ ನಾನಾಸ್ತಿ ಕಿಂಚನ', ಎಂಬ ಶೃತಿವಚನದ ಅರ್ಥ 'ಬ್ರಹ್ಮನಿಂದ ಭಿನ್ನವಾದುದು ಯಾವುದೂ ಇಲ್ಲ' ಎಂದು. ಏಕೆಂದರೆ 'ನೀನು ಎಲ್ಲವನ್ನೂ ವ್ಯಾಪಿಸಿರುವೆ, ಆದ್ದರಿಂದ ನೀನು ಸರ್ವರೂಪನು' ಮುಂತಾಗಿ (ಶ್ರುತಿಯೊಡನೆ) ಸ್ಮೃತಿಯು ಏಕವಾಕ್ಯವಾಗಿ ಹೇಳಿದೆ. ವಿಕಾರವು ಕೇವಲ ಮಾತಿನಿಂದಾದ ಹೆಸರಷ್ಟೆ, ಸತ್ಯವೆಂದರೆ ಮಣ್ಣಷ್ಟೇ (ವಿಕಾರವೆಲ್ಲ ಕೇವಲ ಮಾತಿನಲ್ಲಿರುವುದು, ಮಡಕೆಯನ್ನು ಮಾಡುವಾಗ ಮಣ್ಣೊಂದೇ ಸತ್ಯ) ಮುಂತಾದ ಶ್ರುತಿಗಳಲ್ಲಿ ನಿತ್ಯತಾರೂಪವಾದ ಪಾರಮಾರ್ಥಿಕ ಸತ್ತಾ ಇರುವುದಿಲ್ಲ ಎಂದು ಅರ್ಥ, ಇಲ್ಲದಿದ್ದರೆ ಮೃತ್ತಿಕೆಯ ದೃಷ್ಟಾಂತ ಸಿದ್ಧವಾಗದು. ಲೋಕದಲ್ಲಿ ಮೃತ್ತಿಕೆಯ ವಿಕಾರಗಳು ಶೂನ್ಯವಲ್ಲ, ಅದರಿಂದ ದೃಷ್ಟಾಂತದ ಉದ್ದೇಶ ಸರಿಹೋಗದು.

ಭಾಷ್ಯ: *ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನಚ ಸಾಧಕಃ । ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥ (ಮಾಂ.ಕಾ. ೨೩೨) ಇತ್ಯಾದಿ ಶ್ರುತೇಃ ತು ಆತ್ಮಾತಿರಿಕ್ತಸ್ಯ ಕೂಟಸ್ಥನಿತ್ಯತಾರೂಪಾತಿಪರಮಾರ್ಥಸತ್ತಾವಿರಹೋऽರ್ಥಃ । ಕಿಂ ಚಾತ್ಮನೋ ನಿರೋಧಾದ್ಯಭಾವೋऽರ್ಥಃ ಅನ್ಯಥಾ ಏತಾದೃಶಜ್ಞಾನಸ್ಯ ಮೋಕ್ಷಫಲಕತ್ವಪ್ರತಿಪಾದನವಿರೋಧಾತ್ । ನ ಹಿ ಮೋಕ್ಷೋ ಮಿಥ್ಯೇತಿ*

ಪ್ರತಿಪಾದ್ಯ ಮೋಕ್ಷಸ್ಯ ಫಲತ್ವಂ ಅಪ್ರಮತ್ತಃ ಪ್ರತಿಪಾದಯತೀತಿ । ಯಾಶ್ಚಾತ್ಮೈಕ್ಯಶ್ರುತಯಃ ತಾಸ್ತು ಪ್ರಥಮಾಧ್ಯಾಯೇ (೧. ೧೪೯–೧೫೪) ಏವ ವ್ಯಾಖ್ಯಾತಾಃ ಬ್ರಹ್ಮಮೀಮಾಂಸಾ ಭಾಷ್ಯೇ ಚೈತಾ ಅನ್ಯಾಶ್ಚ ಶ್ರುತಯಃ ಅಸ್ಮಾಭಿರ್ವ್ಯಾಖ್ಯಾತಾಃ ಇತಿ ದಿಕ್ ।

ಅನುವಾದ: ನಿರೋಧವಿಲ್ಲ, ಉತ್ಪತ್ತಿಯಿಲ್ಲ, ಬಂಧವಿಲ್ಲ, ಸಾಧಕವಿಲ್ಲ, ಮುಮುಕ್ಷುವಿಲ್ಲ, ಮುಕ್ತನೂ ಇಲ್ಲ, ಇದೇ ಪರಮಾರ್ಥತೆ ಮುಂತಾದ ಶ್ರುತಿಗಳಿಂದ ಆತ್ಮನನ್ನು ಮೀರಿದ ಕೂಟಸ್ಥನಾಗಿ, ನಿತ್ಯತಾರೂಪವಾದ ಅತಿಪರಮಾರ್ಥ ಸತ್ತಾ ಶೂನ್ಯವಾದುದು ಎಂದು ತಿಳಿಯುವುದು. ಅಲ್ಲದೆ ಆತ್ಮನನ್ನು ಅಲ್ಲಗಳೆಯುವುದು ಇರದು ಹಾಗಿಲ್ಲದಿದ್ದಲ್ಲಿ ಇಂತಹ ಜ್ಞಾನವು ಮೋಕ್ಷಫಲವನ್ನು ನೀಡುವ ಪ್ರತಿಪಾದನೆಯನ್ನು ವಿರೋಧಿಸಿದಂತಾಗುವುದು. ಅದನ್ನೇ ಮೋಕ್ಷವು ಮಿಥ್ಯಾ ಎಂದು ಪ್ರತಿಪಾದಿಸಿ ಮೋಕ್ಷದ ಫಲವನ್ನು ಬುದ್ಧಿ ಇರುವ ಯಾರೂ ಹೇಳಲಾರರು. ಆತ್ಮೈಕ್ಯ ಶ್ರುತಿಗಳನ್ನು ನಾವು ಪ್ರಥಮಾಧ್ಯಾಯದಲ್ಲಿಯೇ (೧.೧೪೯–೧೫೪) ವ್ಯಾಖ್ಯಾನ ಮಾಡಿದ್ದೇವೆ. ಬ್ರಹ್ಮಮೀಮಾಂಸಾ ಭಾಷ್ಯದಲ್ಲಿ ಇವುಗಳನ್ನು ಮತ್ತು ಇತರ ವಿಷಯಗಳನ್ನು ವ್ಯಾಖ್ಯಾನ ಮಾಡಿದ್ದೇವೆ ಎಂದು ಮುಗಿಸೋಣ.

ಭಾಷ್ಯ: *ನ ಕೇವಲಂ ವರ್ತಮಾನದಶಾಯಾಂ ಏವ ಪ್ರಪಂಚಃ ಸನ್ನಪಿ ತು ಸದೈವೇತ್ಯಾಹ–*

ಅನುವಾದ: ಕೇವಲ ವರ್ತಮಾನದ ಸ್ಥಿತಿಯಲ್ಲಿ ಪ್ರಪಂಚವು ಸತ್ಯವೋ ಅಥವಾ ಯಾವಾಗಲೂ ಸತ್ಯವೋ?

ಸೂತ್ರ: ಪ್ರಕಾರಾಂತರಾಸಂಭವಾತ್ ಸದುತ್ಪತ್ತಿಃ ॥ ೫೩ ॥

ಸೂತ್ರಾನುವಾದ: ಬೇರೆಯ ಪ್ರಕಾರದಲ್ಲಿರುವುದು ಅಸಾಧ್ಯವಾದುದರಿಂದ ಸತ್ ಉತ್ಪತ್ತಿಯಾಗುವುದು–

ಭಾಷ್ಯ: *ಪೂರ್ವೋಕ್ತಯುಕ್ತಿಭಿಃ ಅಸದುತ್ಪಾದಾಸಂಭವಾತ್ ಸೂಕ್ಷ್ಮರೂಪೇಣ ಸದೇವೋತ್ಪದ್ಯತೇಽಭಿವ್ಯಕ್ತಂ ಭವತೀತ್ಯರ್ಥಃ ।*

ಅನುವಾದ: ಮೊದಲು ಹೇಳಿದ ಯುಕ್ತಿಗಳಿಂದ 'ಅಸತ್' ಉತ್ಪನ್ನವಾಗುವುದು ಅಸಂಭವ ವಾದ್ದರಿಂದ ಸೂಕ್ಷ್ಮರೂಪದಲ್ಲಿ ಸತ್ ಮಾತ್ರವೇ ಉತ್ಪನ್ನವಾಗುವುದು ಎಂದರೆ ಅಭಿವ್ಯಕ್ತವಾಗುವುದು.

ಭಾಷ್ಯ: *ಕರ್ತೃತ್ವಭೋಕ್ತೃತ್ವಯೋಃ ವೈಯಧಿಕರಣ್ಯೇಽಪಿ ವ್ಯವಸ್ಥಾಮುಪಪಾದಯತಿ ಸೂತ್ರಾಭ್ಯಾಮ್ ।*

ಸೂತ್ರ: ಅಹಂಕಾರಃ ಕರ್ತಾ ನ ಪುರುಷಃ ॥ ೫೪ ॥

ಅನುವಾದ: ಕರ್ತೃತ್ವ–ಭೋಕ್ತೃತ್ವಗಳೆರಡರಲ್ಲಿ ವಿವಿಧ ವ್ಯಕ್ತಿಗಳಲ್ಲಿದ್ದರೂ ಸೂತ್ರಗಳಿಂದ ಅವುಗಳ ವ್ಯವಸ್ಥೆಯನ್ನು ಉಪಪಾದಿಸುವರು.

ಸೂತ್ರಾನುವಾದ: ಅಹಂಕಾರವು ಕರ್ತೃವಿನ ಭಾವನೆಯನ್ನುಂಟು ಮಾಡುವುದು, ಪುರುಷನಲ್ಲ.

ಭಾಷ್ಯ: *ಅಭಿಮಾನವೃತ್ತಿಕಮಂತಃಕರಣಂ ಅಹಂಕಾರಃ । ಸ ಏವ ಕೃತಿಮಾನ್ । ಅಭಿಮಾನೋತ್ತರಮೇವ ಪ್ರಾಯಶಃ ಪ್ರವೃತ್ತಿ ದರ್ಶನಾತ್ । ನ ತು ಪುರುಷಃ, ಅಪರಿಣಾಮಿತ್ವಾದಿತ್ಯರ್ಥಃ । ಪೂರ್ವಂ ಚ ಧರ್ಮಾದಿಕಂ ಬುದ್ಧೇರಿತಿ (ಸೂ ೫.೨೫) ಯದುಕ್ತಂ ತದೇಕಸ್ಯೈವಾಂತಃಕರಣಸ್ಯ ವೃತ್ತಿಮಾತ್ರ ಭೇದಾಶಯೇನ ।*

ಅನುವಾದ: ಅಭಿಮಾನ ವೃತ್ತಿಯುಳ್ಳ ಅಂತಃಕರಣವನ್ನು ಅಹಂಕಾರವೆನ್ನುವರು. ಅವನೇ ನಿಜವಾದ ಕರ್ತೃ. ಅಭಿಮಾನದ ನಂತರ ಅದರ ಪ್ರವೃತ್ತಿಯು ಗೋಚರವಾಗುವುದು. ಆದರೆ ಪುರುಷನಲ್ಲ ಏಕೆಂದರೆ ಅದು ಪರಿಣಾಮಿಯಲ್ಲ. ಹಿಂದೆಯೇ 'ಧರ್ಮಾದಿಕಂ ಬುದ್ಧೇಃ' ಎಂಬ ಸೂತ್ರವು ಹೇಳಿರುವಂತೆ ಒಂದೇ ಅಂತಃಕರಣದ ವೃತ್ತಿಮಾತ್ರದಲ್ಲಿ ಭೇದವುಂಟಾಗುವುದು.

ಸೂತ್ರ: ಚಿದವಸಾನಾ ಭುಕ್ತಿಸ್ತತ್ಕರ್ಮಾರ್ಜಿತತ್ವಾತ್ ॥ ೫೫ ॥

ಸೂತ್ರಾನುವಾದ: ಚೇತನವು ಮಾಡಿದ ಕರ್ಮಗಳ ಫಲವಾಗಿ ಚೇತನದವರೆಗೆ ಮಾತ್ರ ಭೋಗವು ಕೊನೆಗೊಳ್ಳುವುದು.

ಭಾಷ್ಯ: *ಅಹಂಕಾರಸ್ಯ ಕರ್ತೃತ್ವೇಽಪಿ ಭೋಗಃ ಚಿತ್ಯೇವ ಪರ್ಯವಸನ್ನೋಭವತಿ । ಅಹಂಕಾರಸ್ಯ ಸಂಹತತ್ವೇನ ಪರಾರ್ಥತ್ವಾತ್ । ನನು ಏವಂ ಅನ್ಯನಿಷ್ಠಕರ್ಮಣಾ ಅನ್ಯಸ್ಯ ಭೋಗೇ ಪುರುಷವಿಶೇಷನಿಯಮೋ ನ ಸ್ಯಾತ್, ತತ್ರಾಹ ತತ್ಕರ್ಮಾರ್ಜಿತತ್ವಾತ್ ಇತಿ । ಅಹಂಕಾರೇಣಾಸಂಚಿತಂ ತಸ್ಯಾಚ್ಚಿತಃ ಯತ್ ಕರ್ಮತಜ್ಜನ್ಯತ್ವಾತ್ ಭೋಗಸ್ಯೇತ್ಯರ್ಥಃ । ತಥಾ ಚ ಯೋಽಹಂಕಾರೋ ಯಂ ಪುರುಷಾ ಆದಾಯ ಅಚೇತನೇಽಹಂ ಮಮೇತಿ ವೃತ್ತಿಂ ಕರೋತಿ ತಸ್ಯ ಅಹಂಕಾರಸ್ಯ ಕರ್ಮ ತಸ್ಯಾತ್ಮನ ಉಚ್ಯತೇ । ತೇನೈವ ಚ ಕರ್ಮಣಾ ತತ್ರ ಆತ್ಮನಿ ಭೋಗೋಽರ್ಜ್ಯತೇ ಇತಿ ನಾತಿ । ಪ್ರಸಂಗಃ ಇತ್ಯಾಶಯಃ ।*

ಅನುವಾದ: ಅಹಂಕಾರವು ಕರ್ತೃವಾದರೂ ಭೋಗವು ಮಾತ್ರ ಚೇತನದಲ್ಲಿ ಪರ್ಯವಸನ ವಾಗುತ್ತದೆ. ಏಕೆಂದರೆ ಅಹಂಕಾರವು ಜೊತೆಗೂಡಿದಾಗ ಪರಾರ್ಥಕ್ಕಾಗುತ್ತದೆ. ಹೀಗೆ ಯಾರ ಸಲುವಾಗಿಯೋ ಕರ್ಮಮಾಡಿ ಯಾರದೋ ಭೋಗವೆಂದರೆ ಪುರುಷ ವಿಶೇಷದ ನಿಯಮವು ಇರದು. ಅದಕ್ಕೆ ಹೀಗೆ ಹೇಳಿದೆ– ಅದರ (ಅಹಂಕಾರದ) ಕರ್ಮವನ್ನು ಅರ್ಜಿಸಿದ ಕಾರಣ, ಅಹಂಕಾರದಿಂದ ಗಳಿಸಿದ ಅದರ ಚೇತನದ ಕರ್ಮವು ಅದನ್ನು ಅನುಭವಿಸಲೆಂದೇ ಹುಟ್ಟಿರುವುದು ಎಂದರ್ಥ. ಹಾಗೆಯೇ ಯಾವ ಅಹಂಕಾರವು ಯಾವ ಪುರುಷನನ್ನು ತೆಗೆದುಕೊಂಡು ಅಚೇತನದಲ್ಲಿ ನಾನು, ನನ್ನ ಎಂಬ ವೃತ್ತಿಯನ್ನು ಮಾಡುವುದೋ ಅಂತಹ

ಅಹಂಕಾರದ ಕರ್ಮ ಆ ಪುರುಷನಿಗೆ ಸಂಬಂಧಿಸಿದ್ದೆಂದು ಹೇಳುವರು. ಆ ಕರ್ಮದಿಂದಲೇ ಆ ಪುರುಷನಿಗೆ ಭೋಗವುಂಟಾಗುವುದು ಎಂಬುದನ್ನು ಸ್ವೀಕರಿಸುವುದು ಅಧಿಕ ಪ್ರಸಂಗವೇನಾಗಲಾರದು ಎಂಬುದು ಅವರ ಅಭಿಪ್ರಾಯ.

ಭಾಷ್ಯ: *ಬ್ರಹ್ಮಲೋಕಾಂತಗತಿಭಿರ್ನಾಸ್ತಿ ನಿಷ್ಕೃತಿರಿತಿ ಪೂರ್ವೋಕ್ತೇ ಕಾರಣಂ ದರ್ಶಯತಿ ।*

ಸೂತ್ರ: ಚಂದ್ರಾದಿಲೋಕೇऽಪ್ಯಾವೃತ್ತಿರ್ನಿಮಿತ್ತಸದ್ಭಾವಾತ್ ॥ ೫೬ ॥

ಅನುವಾದ: ಬ್ರಹ್ಮಲೋಕದವರೆಗೆ ಹೋಗುವುದರಿಂದಲೂ ಬಿಡುಗಡೆಯಿರದು ಎಂದು ಮೊದಲು ಹೇಳಿರುವುದಕ್ಕೆ ಕಾರಣವನ್ನು ತಿಳಿಸುವರು.

ಸೂತ್ರಾನುವಾದ: ಚಂದ್ರಾದಿ ಲೋಕದಲ್ಲಿಯೂ ಹಿಂದಿರುಗಿ ಬರಬೇಕಾದದ್ದು (ಅವಿವೇಕವೆಂಬ) ನಿಮಿತ್ತವಿರುವುದರಿಂದ.

ಭಾಷ್ಯ: *ನಿಮಿತ್ತಂ ಅವಿವೇಕಕರ್ಮಾದಿಕಮ್ । ಸುಗಮಮನ್ಯತ್ ।*

ಅನುವಾದ: ಅದಕ್ಕೆ ಕಾರಣ ಅವಿವೇಕ, ಕರ್ಮ ಮುಂತಾದುವು ಉಳಿದ ಭಾಗ ಸುಲಭ.

ಭಾಷ್ಯ: *ನನು ತತ್ತಲ್ಲೋಕವಾಸಿಜನೋಪದೇಶಾದನಾವೃತ್ತಿಃ ಸ್ಯಾತ್, ತತ್ರಾಹ ।*

ಸೂತ್ರ: ಲೋಕಸ್ಯ ನೋಪದೇಶಾತ್ ಸಿದ್ಧಿಃ ಪೂರ್ವವತ್ ॥ ೫೭ ॥

ಅನುವಾದ: ಆಯಾ ಲೋಕಗಳಲ್ಲಿ ವಾಸಿಸುವ ಜನರಿಂದ ಕೇವಲ ಉಪದೇಶವು ಆದರೂ ಮತ್ತೆ ಸಿದ್ಧಿಯಾಗದು, ಮೊದಲಿನ ಲೋಕದಂತೆ.

ಭಾಷ್ಯ: *ಯಥಾ ಪೂರ್ವಸ್ಯ ಮನುಷ್ಯಲೋಕಸ್ಯ ಉಪದೇಶಮಾತ್ರಾತ್ ನ ಸಿದ್ಧಿಃ ಜ್ಞಾನನಿಷ್ಪತ್ತಿರೇವಂ ತತ್ತಲ್ಲೋಕಸ್ಥಲೋಕಸ್ಯೋಪದೇಶಮಾತ್ರಾತ್ತದ್ಗತಾನಾಂ ಜ್ಞಾನನಿಷ್ಪತ್ತಿಃ ನ ನಿಯಮೇನ ಭವತೀತ್ಯರ್ಥಃ ।*

ಅನುವಾದ: ಹೇಗೆ ಮೊದಲು ಮನುಷ್ಯಲೋಕದವರ ಉಪದೇಶದಿಂದ ಮಾತ್ರವೇ 'ಸಿದ್ಧಿ'ಯು ಎಂದರೆ ಜ್ಞಾನವನ್ನು ಗಳಿಸುವುದು ಸಾಧ್ಯವಾಗದೋ ಹಾಗೆಯೇ ಆಯಾ ಲೋಕಗಳಲ್ಲಿರುವುದರಿಂದ ಉಪದೇಶ ಪಡೆದ ಮಾತ್ರಕ್ಕೆ ಅಲ್ಲಿರುವವರಿಗೆ ಎಂದಿಗೂ ಜ್ಞಾನವುಂಟಾಗುವುದೆಂದು ಹೇಳಲಾಗುವುದಿಲ್ಲ.

ಭಾಷ್ಯ: *ನನ್ವೇವಂ ಬ್ರಹ್ಮಲೋಕಾದನಾವೃತ್ತಿರಿತಿ ಶ್ರುತೇಃ ಕಾ ಗತಿಃ ತತ್ರಾಹ*

ಸೂತ್ರ: ಪಾರಂಪರ್ಯೇಣ ತತ್ಸಿದ್ಧೌ ವಿಮುಕ್ತಿಶ್ರುತಿಃ ॥ ೫೮ ॥

ಅನುವಾದ: ಹೀಗೆ 'ಬ್ರಹ್ಮಲೋಕದಿಂದ ಹಿಂದಿರುಗುವುದಿಲ್ಲ' ಎಂಬ ಶ್ರುತಿವಚನದ ಗತಿಯೇನು?

ಸೂತ್ರಾನುವಾದ: ಪರಂಪರೆಯಿಂದ ಅದು ಸಿದ್ಧವಾದಾಗ ಮುಕ್ತಿ ದೊರೆಯುವುದೆಂದು ಶ್ರುತಿ ಇರುವುದು.

ಭಾಷ್ಯ: *ಬ್ರಹ್ಮಲೋಕವಿಗತಾನಾಂ ಶ್ರವಣಮನನಾದಿ ಪರಂಪರಯಾ ಪ್ರಾಯಶೋ ಜ್ಞಾನಸಿದ್ಧೌ ಸತ್ಯಾಂ ವಿಮುಕ್ತಿಶ್ರವಣಂ, ನ ತು ಸಾಕ್ಷಾದ್ಗತಿಮಾತ್ರೇಣೇತ್ಯರ್ಥಃ । ಪ್ರಾಯಿಕತ್ವಾದನ್ಯಲೋಕಾದ್ ವಿಶೇಷ ಇತಿ ।*

ಅನುವಾದ: ಬ್ರಹ್ಮಲೋಕಕ್ಕೆ ಹೋದವರು ಶ್ರವಣ, ಮನನಾದಿಗಳ ಪರಂಪರೆಯಿಂದ ಬಹುಶಃ ಜ್ಞಾನಸಿದ್ಧಿಯು ಉಂಟಾದಲ್ಲಿ ಮುಕ್ತಿ ಲಭಿಸುವುದೆಂದು ಶ್ರುತಿವಚನ ವಿರುವುದು, ಕೇವಲ ಅಲ್ಲಿಗೆ ಹೋದಮಾತ್ರಕ್ಕೆ ವಿವೇಕ ಜ್ಞಾನ ದೊರೆಯದು. ಬ್ರಹ್ಮಲೋಕಾದಿಗಳ ವಿಶೇಷವೆಂದರೆ ಅದು ಬೇರೆಯ ಸ್ಥಳವೆಂದಷ್ಟೆ.

ಭಾಷ್ಯ: *ಪರಿಪೂರ್ಣತ್ವೇಽಪಿ ಆತ್ಮನೋ ಗತಿಶ್ರುತಿಮುಪಪಾದಯತಿ ।*

ಸೂತ್ರ: ಗತಿಶ್ರುತೇಶ್ಚ ವ್ಯಾಪಕತ್ವೇಽಪ್ಯುಪಾಧಿಯೋಗಾದ್ಭೋಗದೇಶಕಾಲ ಲಾಭಃ ವ್ಯೋಮವತ್ ॥ ೫೯ ॥

ಅನುವಾದ: ಆತ್ಮನು ಪರಿಪೂರ್ಣನಾದರೂ ಅವನ ಗತಿ (ಮತ್ತು ಅಗತಿ)ಗಳನ್ನು ಕೇಳಿದ್ದೇವೆ. ಅದನ್ನು ಸೂತ್ರಕಾರರು ಹೇಳುತ್ತಾರೆ.

ಸೂತ್ರಾನುವಾದ: ಆತ್ಮನು ವ್ಯಾಪಕನಾಗಿದ್ದರೂ ಗತಿಯಿದೆ ಎಂಬುದನ್ನು ಕೇಳಿರುವುದರಿಂದ ಭೋಗದೇಶ ಮತ್ತು ಭೋಗಕಾಲವನ್ನು ಪಡೆಯುವ ಉಪಾಧಿಯೋಗದಿಂದ ಆಕಾಶದಂತೆ ದೊರೆಯುವುದು.

ಭಾಷ್ಯ: *ವ್ಯಾಪಕತ್ವೇಽಪ್ಯಾತ್ಮನೋ ಗತಿಶ್ರವಣಾನುರೋಧೇನ ಭೋಗದೇಶಸ್ಯ ಕಾಲವಶಾಲ್ಲಾಭಃ ಸಿದ್ಧ್ಯತಿ । ವ್ಯೋಮವತ್ ಉಪಾಧಿಯೋಗೇನ ಇತ್ಯರ್ಥಃ । ಯಥಾಹಿ ಆಕಾಶಸ್ಯ ಪೂರ್ಣತ್ವೇ ಅಪಿ ದೇಶವಿಶೇಷಗತಿಃ ಘಟಾದ್ಯುಪಾಧಿಯೋಗಾತ್ ವ್ಯವಹ್ರಿಯತೇ ತಥೈವೇತಿ ।*

ಅನುವಾದ: ವ್ಯಾಪಕವಾದರೂ ಆತ್ಮವು ಗತಿಯುಳ್ಳದ್ದು ಎಂದು ಕೇಳಿದ ಹಿನ್ನೆಲೆಯಲ್ಲಿ ಭೋಗದೇಶವು ಕಾಲವಶಾತ್ ದೊರೆಯುವುದೆಂದು ಸಿದ್ಧವಾಗುವುದು. ವ್ಯೋಮವತ್ ಎಂದರೆ ಉಪಾಧಿಯೋಗದಿಂದ ಎಂದರ್ಥ. ಹೇಗೆ ಆಕಾಶವು ಪೂರ್ಣವಾದರೂ ದೇಶವಿಶೇಷದಲ್ಲಿ ಗತಿಯು ಘಟಾದಿ ಉಪಾಧಿಯೋಗದಿಂದ ವ್ಯವಹರಿಸುವರೋ ಹಾಗೆ.

ಭಾಷ್ಯ: *ತಥಾ ಚ ಶ್ರುತಿಃ*

ಘಟಸಂವೃತಮಾಕಾಶಂ ನೀಯಮಾನೇ ಘಟೇ ಯಥಾ ।
ಘಟೋ ನೀಯೇತ ನಾಕಾಶಂ ತದ್ವಜ್ಜೀವೋ ನಭೋಪಮಃ ॥

(ಬ್ರಹ್ಮಬಿಂದು ಉಪನಿಷತ್ ೧೩)

ಅನುವಾದ: ಘಟವನ್ನು ಆವರಿಸಿರುವ ಆಕಾಶವು ಘಟವನ್ನು ಬೇರೊಂದೆಡೆ ಒಯ್ದಾಗ ಅದು ಆಕಾಶವನ್ನು ಒಯ್ಯುವುದಿಲ್ಲವಷ್ಟೆ. ಹಾಗೆಯೇ ಜೀವಾತ್ಮನು ಎಲ್ಲಿಯೂ ಹೋಗುವುದಿಲ್ಲ, ಅವನು ಆಕಾಶದಂತೆ.

ವಿವರಣೆ: ಶರೀರದ ಚಲನೆಯನ್ನೇ ಆತ್ಮದ ಚಲನೆಯೆಂದು ತಿಳಿಯುತ್ತೇವೆ. ಆತ್ಮನ ಕಾಲ, ದೇಶಗಳು ಅವನ ಉಪಾಧಿಯಿಂದ ಉಂಟಾಗುವುವು.

ಭಾಷ್ಯ: *ಭೋಕ್ತುಃ ಅಧಿಷ್ಠಾನಾತ್ ಭೋಗಾಯತ್ನನಿರ್ಮಾಣಮಿತಿ । (ಸೂತ್ರ ೫.೨೪) ಯದುಕ್ತಂ ತತ್ ಪ್ರಪಂಚಯತಿ ಸೂತ್ರಾಭ್ಯಾಮ್ ।*

ಅನುವಾದ: 'ಭೋಗಕ್ಕೆ ನೆಲೆಯಾದ ದೇಹವು ಭೋಕ್ತೃವಿನ ಅಧೀಕ್ಷಣೆಯಲ್ಲಿರುತ್ತದೆ' ಎಂಬ ಹಿಂದೆ ಹೇಳಿದ ವಿಷಯವನ್ನು ಮುಂದಿನ ಎರಡು ಸೂತ್ರಗಳಲ್ಲಿ ವರ್ಣಿಸಲಾಗಿದೆ.

ಸೂತ್ರ: ಅನಧಿಷ್ಠತಸ್ಯ ಪೂತಿಭಾವಪ್ರಸಂಗಾನ್ನ ತತ್ಸಿದ್ಧಿಃ ॥ ೬೦ ॥

ಸೂತ್ರಾನುವಾದ: (ಪುರುಷನ) ಅಧಿಷ್ಠಾನವಿಲ್ಲದ ದೇಹವು ಕೊಳೆತು ಹೋಗುವ ಪ್ರಸಂಗ ಬರುವುದರಿಂದ ಶರೀರವು ಸಿದ್ಧಿಸದು.

ಭಾಷ್ಯ: *ಭೋಕ್ತ್ರನಧಿಷ್ಠಿತಸ್ಯ ಶುಕ್ರಾದೇಃ ಪೂತಿಭಾವ ಪ್ರಸಂಗಾತ್ ನ ಪೂರ್ವೋಕ್ತ ಭೋಗಾಯತನಸಿದ್ಧಿರಿತ್ಯರ್ಥಃ ।*

ಅನುವಾದ: ಭೋಕ್ತೃ (ಚೇತನ)ವಿನ ಆದೇಶದಂತೆ ನಡೆಯುವುದು ಇಲ್ಲದಿರುವಾಗ ಶುಕ್ರ ಆದಿಗಳು ಕೊಳೆಯುವುದರಿಂದ ದೇಹದ ಪೂರ್ವೋಕ್ತವಾದ ಭೋಗದ ಬೀಡಾದ ದೇಹದ ಸಿದ್ಧಿಯಾಗುವುದಿಲ್ಲ.

ಭಾಷ್ಯ: *ನನ್ವಧಿಷ್ಠಿತಂ ವಿನೈವಾದೃಷ್ಟದ್ವಾರಾ ಭೋಕ್ತೃಭ್ಯೋ ಭೋಗಾಯತನನಿರ್ಮಾಣಂ ಭವತು, ತತ್ರಾಹ–*

ಅನುವಾದ: ಅಧಿಷ್ಠಾನವೇ ಇಲ್ಲದೆ ಅದೃಷ್ಟದ್ವಾರಾ ಭೋಕ್ತೃಗಳಿಂದ ಭೋಗದ ಬೀಡನ್ನು ಏಕೆ ನಿರ್ಮಾಣ ಮಾಡಬಾರದು. ಅದಕ್ಕೆ ಹೀಗೆ ಹೇಳಿದ್ದಾರೆ–

ಸೂತ್ರ: ಅದೃಷ್ಟದ್ವಾರಾ ಚೇದಸಂಬದ್ಧಸ್ಯ ತದಸಂಭವಾತ್ ಜಲಾದಿವತ್ ಅಂಕುರೇ ॥ ೬೧ ॥

ಸೂತ್ರಾನುವಾದ: ಅದೃಷ್ಟದ ಮುಖಾಂತರವಾದರೋ (ದೇಹ ನಿರ್ಮಾಣವನ್ನು ಒಪ್ಪಿದರೆ) ಸಂಬಂಧವಿಲ್ಲದ (ತತ್ವಗಳು) ಅಸಂಭವವಾದುದರಿಂದ, ಅಂಕುರದ ನಿರ್ಮಾಣದಲ್ಲಿ ಜಲಾದಿಗಳಿದ್ದಂತೆ.

ವಿವರಣೆ: ಅದೃಷ್ಟದಿಂದ ದೇಹ ನಿರ್ಮಾಣವಾಯಿತೆಂದುಕೊಂಡರೆ ಅದಕ್ಕೂ (ಬೀಜದಿಂದ ಹುಟ್ಟುವ) ದೇಹಕ್ಕೂ ಏನು ಸಂಬಂಧ. ಗಿಡ ಚಿಗುರಲು ಜಲಾದಿಗಳು ಸಹಕಾರಿಯಷ್ಟೆ.

ಭಾಷ್ಯ: *ಶುಕ್ರಾದೌ ಸಾಕ್ಷಾದಸಂಬದ್ಧಸ್ಯ ಅದೃಷ್ಟಸ್ಯ ಶರೀರಾದಿ–ನಿರ್ಮಾಣೇ ಭೋಕ್ತೃ ದ್ವಾರತ್ವಾಸಂಭವಾತ್ ಬೀಜಾಸಂಬದ್ಧಾನ್ ಜಲಾದೀನಾಮಂಕುರೋತ್ಪತ್ತೌ ಕರ್ಷಕಾದಿ ದ್ವಾರತ್ವವತ್ ಇತ್ಯರ್ಥಃ । ಅತಃ ಸ್ವಾಶ್ರಯಸಂಯೋಗಸಂಬಂಧೇನ ಏವ ಅದೃಷ್ಟಸಂಬಂಧಃ*

ಶುಕ್ರಾದಿಷು ವಕ್ತವ್ಯಃ । ತಥಾ ಚ ಸಿದ್ಧಮದೃಷ್ಟವತ್ ಆತ್ಮಸಂಯೋಗ ರೂಪೇಣ ಅಧಿಷ್ಠಾನಸ್ಯ ಭೋಗೋಪಕರಣ ನಿರ್ಮಾಣಹೇತುತ್ವಮಿತಿ ಭಾವಃ।

ಅನುವಾದ: ಶರೀರಾದಿಗಳ ನಿರ್ಮಾಣದಲ್ಲಿ ಶುಕ್ರ ಮುಂತಾದುವುಗಳೊಡನೆ ಸಾಕ್ಷಾತ್ತಾಗಿ ಸಂಬಂಧವಿಲ್ಲದ ಅದೃಷ್ಟವು ಭೋಕ್ತೃ ದ್ವಾರತ್ವಕ್ಕೆ (ನಿರ್ಮಾಣವು) ಅಸಂಭವವಾದ್ದರಿಂದ, ಬೀಜಗಳಿಗೆ ಸಂಬಂಧಪಟ್ಟ ಜಲಾದಿಗಳು ಅಂಕುರವಾಗಲು ರೈತರೇ ಮೊದಲಾದವರ ಮೂಲಕ ಬೆಳೆಯಲು ಸಹಾಯ ಮಾಡುವಂತೆ, ಎಂದರ್ಥ. ಆದ್ದರಿಂದ ತನ್ನ ಆಶ್ರಯದ ಸಂಯೋಗ ಸಂಬಂಧದಿಂದಲೇ ಅದೃಷ್ಟ ಸಂಬಂಧವು ಶುಕ್ರಾದಿಗಳಲ್ಲಿ ಹೇಳಬೇಕು. ಹಾಗೆಯೇ ಅದೃಷ್ಟದಂತೆ ಆತ್ಮಸಂಯೋಗ ರೂಪದಿಂದ ಭೋಗೋಪಕರಣಗಳ ನಿರ್ಮಾಣವು ಆಗಬೇಕಾದ ನಿಮಿತ್ತವೂ ಸಿದ್ಧವಾದಂತಾಯಿತು.

ವಿವರಣೆ: ಭೋಗೋಪಕರಣಗಳು ಎಂದರೆ ಶರೀರ. ಅದೃಷ್ಟವು ಕೇವಲ ನಿಮಿತ್ತ ಕಾರಣ, ಉಪಾದಾನ ಕಾರಣವಾಗಲಾರದು

ಭಾಷ್ಯ: *ವೈಶೇಷಿಕಾದಿನಯೇನಾದೃಷ್ಟಸ್ಯ ಸಂಬಂಧ ಘಟಕತಯಾ ಆತ್ಮನೋಽಧಿಷ್ಠಾತೃತ್ವಂ ಸ್ಥಾಪಿತಮ್ , ಸ್ವಸಿದ್ಧಾಂತೇ ತು ಅದೃಷ್ಟಾದೀನಾಂ ಆತ್ಮಧರ್ಮತ್ವಾಭಾವಾತ್ ತದ್‌ದ್ವಾರಾ ಭೋಕ್ತುಃ ಹೇತುತ್ವಮೇವ ನ ಸಂಭವತೀತ್ಯಾಹ–*

ಅನುವಾದ: ವೈಶೇಷಿಕಾದಿಗಳ ಪ್ರಕಾರದಂತೆ ಅದೃಷ್ಟವು ಕೇವಲ ಸಂಬಂಧವುಂಟು ಮಾಡುವುದು ಮತ್ತು ಆತ್ಮನು ಅಧಿಷ್ಠಾತೃ ಎಂದು ಹೇಳುತ್ತಾರೆ. ನಮ್ಮ ಸಿದ್ಧಾಂತದಂತೆ ಅದೃಷ್ಟವು ಆತ್ಮನ ಧರ್ಮದಲ್ಲದ ಕಾರಣ ಅದರ ಮುಖಾಂತರ ಭೋಕ್ತೃವಿನ ಕಾರಣವೆಂಬುದು ಸಂಭವಿಸದು ಎಂದು ಹೇಳಿರುವರು.

ಸೂತ್ರ: ನಿರ್ಗುಣತ್ವಾತ್ ತದಸಂಭವಾತ್ ಅಹಂಕಾರಧರ್ಮಾಹ್ಯೇತೇ ।

ಸೂತ್ರಾನುವಾದ: (ಜೀವಾತ್ಮನು) ನಿರ್ಗುಣನಾದ್ದರಿಂದ ಅದು (ಅದೃಷ್ಟವು) ಅದಕ್ಕೆ ಅದರಿಂದ ಹುಟ್ಟಲು ಸಾಧ್ಯವಿಲ್ಲದ್ದುದರಿಂದ ಧರ್ಮಾಧರ್ಮಾದಿಗಳು ಕೇವಲ ಅಹಂಕಾರಕ್ಕೆ ಸೇರಿದವು.

ಭಾಷ್ಯ: *ಭೋಕ್ತುರ್ನಿರ್ಗುರ್ಣತ್ವೇನ ಅದೃಷ್ಟಾಸಂಭವಾಚ್ಚ ನ ಅದೃಷ್ಟ ದ್ವಾರಕತ್ವಮ್ । ಹಿ ಯಸ್ಮಾದೇತೇಽದೃಷ್ಟಾದಯಃ ಅಹಂಕಾರಸ್ಯ ಅಂತಃಕರಣಸಾಮಾನ್ಯಸ್ಯ ಏವ ಧರ್ಮಾ ಇತ್ಯರ್ಥಃ । ತಥಾ ಚಾಸ್ಮನ್ಮತೇ ದ್ವಾರನೈರಪೇಕ್ಷ್ಯೇಣ ಸಂಯೋಗಮಾತ್ರೇಣ ಸಾಕ್ಷಾದೇವ ಭೋಕ್ತುರಧಿಷ್ಠಾನಂ ಸಿದ್ಧ್ಯತೀತಿ ಭಾವಃ।*

ಅನುವಾದ: ಭೋಕ್ತೃವು ನಿರ್ಗುಣವಾದ್ದರಿಂದ ಅದೃಷ್ಟವು (ಧರ್ಮಾಧರ್ಮ) ಸಂಪರ್ಕ ಹೊಂದದು. ಆದ್ದರಿಂದ ಆತ್ಮನ ಅಧಿಷ್ಠಾತೃತ್ವವನ್ನು ಅದೃಷ್ಟದಿಂದಾಯಿತೆಂದು ಹೇಳಲಾಗದು. ಏಕೆಂದರೆ ಈ ಅದೃಷ್ಟಾದಿಗಳು ಅಹಂಕಾರದ ಎಂದರೆ ಅಂತಃಕರಣ ಸಾಮಾನ್ಯದ ಧರ್ಮಗಳು. ಹಾಗೆಯೇ ನಮ್ಮ ಅಭಿಪ್ರಾಯದಲ್ಲಿ ಧರ್ಮಾಧರ್ಮಾದಿ

ದ್ವಾರಗಳ ಅಗತ್ಯವಿಲ್ಲ, ಕೇವಲ ಸಂಯೋಗದಿಂದಲೇ ಸಾಕ್ಷಾತ್ತಾಗಿ ಭೋಕ್ತೃವಿಗೆ ಅಧಿಷ್ಠಾನವು ಸಿದ್ಧವಾಗುವುದು ಎಂದು ಭಾವ.

ಭಾಷ್ಯ: *ನನು ಚೇತ್ ಪುರುಷೋ ವ್ಯಾಪಕಸ್ತರ್ಹಿ ।*
ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ ।
ಭಾಗೋ ಜೀವಃ ಸ ವಿಜ್ಞೇಯಃ ಸ ಚಾನಂತ್ಯಾಯ ಕಲ್ಪತೇ ॥ ಶ್ವೇ. ೫.೯

ಅನುವಾದ: ಪುರುಷನು ವ್ಯಾಪಕನಾಗಿದ್ದಲ್ಲಿ, 'ಕೂದಲಿನ ಅಂಚಿನ ನೂರನೆಯ ಭಾಗದ ನೂರನೆಯ ಭಾಗವೆಂದು ಕಲ್ಪಿಸಲ್ಪಟ್ಟ ಒಂದು ಭಾಗಕ್ಕೆ ಸಮವಾದ ಜೀವವು ಅನಂತವೆಂದು ಪರಿಗಣಿಸಲ್ಪಟ್ಟಿದೆ'.

ಭಾಷ್ಯ: *ಇತಿ ಶ್ರುತಿ ಪ್ರತಿಪಾದಿತಂ ಜೀವಪರಿಚ್ಛಿನ್ನತ್ವಮನುಪಪನ್ನಮ್, ತಥಾ ಈಶ್ವರಪ್ರತಿಷೇಧಾತ್ ಪುರುಷಾಣಾಂ ಚ ಏಕರೂಪ್ಯಾತ್ ಜೀವಾತ್ಮ । ಪರಮಾತ್ಮವಿಭಾಗೋಽಪಿ ಶಾಸ್ತ್ರೀಯೋಽನುಪಪನ್ನ ಇತಿ, ತಾಮಿಮಾಮಾಶಂಕಾಂ ಪರಿಹರ್ತುಮಾಹ–*

ಅನುವಾದ: ಹೀಗೆ ಶ್ರುತಿಯು ಪ್ರತಿಪಾದಿಸಿರುವ 'ಜೀವವು ಪರಿಚ್ಛಿನ್ನವೆಂಬುದು ಸರಿಯಲ್ಲ'. ಈಶ್ವರನನ್ನು ಅಲ್ಲಗಳೆಯುವುದರಿಂದ ಪುರುಷರೆಲ್ಲ ಒಂದೇ ರೂಪದವರು (ಶಾಸ್ತ್ರದಲ್ಲಿ ಹೇಳಿರುವ) ಜೀವಾತ್ಮ ಪರಮಾತ್ಮ ಭೇದವು ಸರಿಯಲ್ಲ. ಇಂತಹ ಶಂಕೆಯನ್ನು ಪರಿಹರಿಸಲು ಸೂತ್ರಕಾರರು ಹೇಳುವರು.

ಸೂತ್ರ: 'ವಿಶಿಷ್ಟಸ್ಯ ಜೀವತ್ವಮನ್ಯ ವ್ಯತಿರೇಕಾತ್ ॥ ೬೩ ॥

ಸೂತ್ರಾನುವಾದ: ವಿಶೇಷವಾದ (ಬುದ್ಧ್ಯಾದಿಗಳಿಂದ ಕೂಡಿದ) ಆತ್ಮನನ್ನು ಜೀವವೆನ್ನುವರು. ಇದಕ್ಕೆ ಅನ್ವಯ–ವ್ಯತಿರೇಕಗಳು ಕಾರಣ.

ಭಾಷ್ಯ: *'ಜೀವಬಲಪ್ರಾಣನಯೋ'ರಿತಿ ವ್ಯುತ್ಪತ್ತ್ಯಾ ಜೀವತ್ವಂ ಪ್ರಾಣಿತ್ವಮ್ । ತಚ್ಚಾಹಂಕಾರವಿಶಿಷ್ಟಪುರುಷಸ್ಯ ಧರ್ಮಃ, ನ ತು ಕೇವಲ ಪುರುಷಸ್ಯ ಕುತಃ? ಅನ್ವಯ ವ್ಯತಿರೇಕಾತ್ । ಅಹಂಕಾರವತಾಂ ಏವ ಸಾಮರ್ಥ್ಯ ಅತಿಶಯ ಪ್ರಾಣಧಾರಣಯೋಃ ದರ್ಶನಾತ್ । ತಚ್ಛೂನ್ಯಾನಾಂ ಚ ಚಿತ್ತವೃತ್ತಿನಿರೋಧಸ್ಯೈವ ದರ್ಶನಾತ್ । ಪ್ರವೃತ್ತಿ ಹೇತುರಾಗೋತ್ಪಾದಕಸ್ಯ ಅಹಂಕಾರಸ್ಯಾಭಾವಾದಿತ್ಯರ್ಥಃ । ತಥಾ ಚ ಅಂತಃಕರಣೋಪಾಧಿಕಂ ಜೀವಸ್ಯ ಪರಿಚ್ಛಿನ್ನತ್ವಂ ಪರಮಾತ್ಮಾ ಸ್ಯಾತ್ ಕೇವಲಪುರುಷಾದ್ಭಿನ್ನತ್ವಂ ಚೇತಿಭಾವಃ ।*

ಅನುವಾದ: ಜೀವಬಲಪ್ರಾಣನಯೋಃ । (ಧಾ.ಪಾ. ೧೫.೫೪) ಜೀವ ಧಾತುವಿನ ಅರ್ಥ 'ಬಲ' ಮತ್ತು 'ಪ್ರಾಣ'ಗಳನ್ನು ಹೊಂದಿರುವುದು ಎಂಬ ವ್ಯುತ್ಪತ್ತಿಯಂತೆ ಜೀವತ್ವ ಎಂದರೆ 'ಪ್ರಾಣತ್ವ'. ಅದು ಅಹಂಕಾರದಿಂದ ಕೂಡಿದ ಪುರುಷನ ವಿಶಿಷ್ಟಧರ್ಮ, ಕೇವಲ ಪುರುಷನಷ್ಟೇ ಅಲ್ಲ, ಏಕೆ? ಅನ್ವಯ ವ್ಯತಿರೇಕಗಳು

ಇರುವುದರಿಂದ. ಅಹಂಕಾರವುಳ್ಳವರಲ್ಲಿ ಮಾತ್ರ ಅತಿಶಯವಾದ ಸಾಮರ್ಥ್ಯ ಮತ್ತು ಪ್ರಾಣಧಾರಣೆ ಎರಡನ್ನೂ ಕಾಣಬಹುದು. ಅದಿಲ್ಲದಿದ್ದಲ್ಲಿ ಚಿತ್ತವೃತ್ತಿಯನ್ನು ನಿರೋಧಿಸಿರುವುದು ತಿಳಿಯುವುದು. ಪ್ರವೃತ್ತಿಗೆ ಕಾರಣಭೂತವಾದ ರಾಗವನ್ನುಂಟು ಮಾಡುವ ಅಹಂಕಾರವು ಅವರಲ್ಲಿ ಇರುವುದಿಲ್ಲ. ಹಾಗೆಯೇ ಅಂತಃಕರಣೋಪಾಧಿಕ ವಾದ ಜೀವದ ಪರಿಚ್ಛಿನ್ನತ್ವವು ಪರಮಾತ್ಮನೆಂಬ ಕೇವಲ ಪುರುಷನಿಗಿಂತ ಭಿನ್ನವಾದುದು ಎಂದು ಭಾವ.

ಭಾಷ್ಯ: *ಅನೇನ ಸೂತ್ರೇಣ ವಿಶಿಷ್ಟಸ್ಯ ಭೋಕ್ತೃತ್ವಂ ವಾ*
ತ್ವಮಹಂಪ್ರತ್ಯಯಗೋಚರತ್ವಮ್ ವಾ ನೋಕ್ತಮ್, ಸಾಕ್ಷಾತ್
ಕಾರರೂಪಸ್ಯ ಭೋಗಸ್ಯ ಅಹಂಕಾರಧರ್ಮತ್ವಾಭಾವಾತ್ ।
ತ್ವಮಹಂ ಧರ್ಮಿಪುರಸ್ಕಾರೇಣ ವಿವೇಕಾನುಪಪತ್ತೇಶ್ಚ ।

ಅನುವಾದ: ಈ ಸೂತ್ರದ ಮೂಲಕ ವಿಶಿಷ್ಟವಾದ (ಆತ್ಮದ) ಭೋಕ್ತೃತ್ವ ಅಥವಾ ನೀನು–ನಾನು ಎಂಬುದು ತೋರುವುದು, ಇವು ಇಲ್ಲಿ ಹೇಳಿಲ್ಲ. ಸಾಕ್ಷಾತ್ಕಾರರೂಪದ ಅನುಭವ ಅಹಂಕಾರದ ಧರ್ಮವಲ್ಲ. ನೀನು–ನಾನೆಂಬ ಧರ್ಮಿಗಳನ್ನಿಟ್ಟುಕೊಂಡು ವಿವೇಕದ ಉದಯವೂ ಆಗದು.

ಭಾಷ್ಯ: *ಕಿಂತು*

ಯದಾತ್ಮಭೇದವಿಜ್ಞಾನಂ ಜೀವಾತ್ಮ ಪರಮಾತ್ಮನೋಃ ।
ಭವೇತ್ ಸದಾ ಮುನಿಶ್ರೇಷ್ಠಾಃ ಪಾಶಚ್ಛೇದೋ ಭವಿಷ್ಯತಿ ॥
ಆತ್ಮಾನಂ ದ್ವಿವಿಧಂ ಪ್ರಾಹುಃ ಪರಾಪರವಿಭೇದತಃ ।
ಪರಸ್ತು ನಿರ್ಗುಣಃ ಪ್ರೋಕ್ತಃ ಅಹಂಕಾರಯುತೋಽಪರಃ ॥

(ಬೃ.ಹ. ನಾರ ೩೧. ೬೧, ೫೭)

ಅನುವಾದ: ಜೀವಾತ್ಮ–ಪರಮಾತ್ಮರ ನಡುವೆ ಅಭೇದದ ಜ್ಞಾನ ಉಂಟಾದಾಗ, ಎಲೈ ಮುನಿಶ್ರೇಷ್ಠರೆ, ಪಾಶಚ್ಛೇದವಾಗುವುದು.

ಪರ, ಅಪರ ಎಂಬ ಎರಡು ಭೇದಗಳಿಂದ ಆತ್ಮನನ್ನು ಹೇಳುವರು. 'ಪರ' ಆತ್ಮನು ನಿರ್ಗುಣನೆನ್ನುವರು, ಅಪರನು ಅಹಂಕಾರದಿಂದ ಕೂಡಿರುವುನು ಎನ್ನುವರು.

ಭಾಷ್ಯ: *ಇತ್ಯಾದಿ ವಾಕ್ಯಶತೋಕ್ತೋ ಜೀವಾತ್ಮಪರಮಾತ್ಮವಿಭಾಗ*
ಏವ ಪ್ರದರ್ಶಿತಃ । ತತ್ರ ಜೀವತಾಯಾಮಹಂಕಾರ ಉಪಲಕ್ಷಣಮೇವೇತಿ ।

ಅನುವಾದ: ಹೀಗೆ ನೂರಾರು ವಾಕ್ಯಗಳಿಂದ ಹೇಳಲ್ಪಟ್ಟ ಜೀವಾತ್ಮ ಪರಮಾತ್ಮ ವಿಭಾಗವನ್ನು ತೋರಿಸಿಕೊಡಲಾಗಿದೆ. ಅದರಲ್ಲಿ ಜೀವದ ಅವಸ್ಥೆಯಲ್ಲಿ ಅಹಂಕಾರವೆಂದು ಸೂಚಿಸಲ್ಪಟ್ಟಿದೆ.

ಭಾಷ್ಯ: *ಇದಾನೀಂ ಮಹದಹಂಕಾರಯೋಃ ಕಾರ್ಯಭೇದಂ*
ಪ್ರತಿಪಿಪಾದಯಿಷುಃ ಆದೌ ಅಹಂಕಾರಕಾರ್ಯಮಾಹ ।

ಸೂತ್ರ: ಅಹಂಕಾರಕರ್ತ್ರಧೀನಾ ಕಾರ್ಯಸಿದ್ಧಿರ್ನೇಶ್ವರಾಧೀನಾ ಪ್ರಮಾಣಾಭಾವಾತ್ ॥ ೬೪ ॥

ಅನುವಾದ: ಈಗ ಮಹತ್ತು ಮತ್ತು ಅಹಂಕಾರಗಳ ಕಾರ್ಯಭೇದವನ್ನು ಪ್ರತಿಪಾದಿಸಲು ಇಚ್ಛಿಸಿ ಮೊದಲು ಅಹಂಕಾರವನ್ನು ಕುರಿತು ಹೇಳುವರು.

ಸೂತ್ರಾನುವಾದ: ಅಹಂಕಾರ ರೂಪವಾದ ಕರ್ತೃವಿನ ಅಧೀನದಲ್ಲಿ ಕಾರ್ಯಮಾತ್ರವು ಸಿದ್ಧಿಸುವುದು, ಈಶ್ವರನ ಅಧೀನವಾಗಿ ಅಲ್ಲ, ಏಕೆಂದರೆ ಅದಕ್ಕೆ ಪ್ರಮಾಣವಿಲ್ಲ.

ಭಾಷ್ಯ: *ಅಹಂಕಾರರೂಪೋ ಯಃ ಕರ್ತಾ ತದಧೀನೈವ ಕಾರ್ಯಸಿದ್ಧಿಃ ಸೃಷ್ಟಿಸಂಹಾರ ನಿಷ್ಪತ್ತಿರ್ಭವತಿ, ತಾದೃಶಬಲಸ್ಯ ಅಹಂಕಾರಕಾರ್ಯತ್ವಾತ್ । ಅನಹಂಕೃತೇಷು ತತ್ಸಾಮರ್ಥ್ಯಾದರ್ಶನಾತ್ । ನ ತು ವೈಶೇಷಿಕಾದಿ ಉಕ್ತಾನಹಂಕೃತ ಪರಮೇಶ್ವರಾಧೀನಾ । ಅನಹಂಕೃತಸ್ರಷ್ಟೃತೇ ನಿತ್ಯೇಶ್ವರೇ ಚ ಪ್ರಮಾಣಾಭಾವಾದಿತ್ಯರ್ಥಃ । 'ಅಹಂ ಬಹು ಸ್ಯಾಂ ಪ್ರಜಾಯೇಯ' ಇತಿ (ತೈ.ಉ. ೨.೩.೧, ಛಾಂ.ಉ. ೬.೨.೩) ಹಿ ಅಹಂಕಾರಪೂರ್ವಿಕೈವ ಸೃಷ್ಟಿಃ ಶ್ರೂಯತೇ । ತತ್ರ ಅಹಂಶಬ್ದಸ್ಯ ಅನುಕರಣಮಾತ್ರತ್ವೇ ಪ್ರಮಾಣಾಭಾವಃ ಇತಿ । ಅನೇನ ಸೂತ್ರೇಣ ಅಹಂಕಾರೋಪಾಧಿಕಂ ಬ್ರಹ್ಮರುದ್ರಯೋಃ ಸೃಷ್ಟಿಸಂಹಾರಕರ್ತೃತ್ವಂ ಶ್ರುತಿಸ್ಮೃತಿಸಿದ್ಧಮಪಿ ಪ್ರತಿಪಾದಿತಮ್ ।*

ಅನುವಾದ: ಅಹಂಕಾರ ರೂಪನಾದ ಕರ್ತೃವಿನ ಅಧೀನದಲ್ಲಿ ಕಾರ್ಯಸಿದ್ಧಿಯು ಇರುವುದು ಎಂದರೆ ಸೃಷ್ಟಿ ಸಂಹಾರಗಳು ಉಂಟಾಗುವುವು. ಏಕೆಂದರೆ ಅಹಂಕಾರದ ಕಾರ್ಯವೇ ಬಲವನ್ನುಂಟು ಮಾಡುವುದು. ಅಹಂಕಾರ ಇಲ್ಲದಿರುವ (ಜೀವಾತ್ಮರಲ್ಲಿ) ಆ ಸಾಮರ್ಥ್ಯವು ಕಾಣಬರದು. ವೈಶೇಷಿಕಾದಿಗಳಲ್ಲಿ ಉಕ್ತವಾದ ಅಹಂಕಾರರಹಿತವಾದ ಪರಮೇಶ್ವರನ ಅಧೀನವಾಗಿ ಕಾರ್ಯಸಿದ್ಧಿಯು ಇರದು. ಅಹಂಕಾರವಿಲ್ಲದ ಸೃಷ್ಟಿಯ ಕರ್ತೃವಾದ ನಿತ್ಯೇಶ್ವರನ ವಿಷಯದಲ್ಲಿ ಪ್ರಮಾಣವಿಲ್ಲ ಎಂದರ್ಥ. 'ನಾನು ಬಹಳವಾಗುತ್ತೇವೆ, ನಾನು ಸೃಷ್ಟಿಯಲ್ಲಿ ತೊಡಗುವೆನು' (ಛಾಂ. ೬.೨.೩) ಎಂಬುದರಲ್ಲಿ ಅಹಂಕಾರ ಪೂರ್ವಕವಾಗಿಯೇ ಸೃಷ್ಟಿಯುಂಟಾಗುವುದು' ಎಂದು ತಿಳಿದುಬರುವುದು. ಅದರಲ್ಲಿ ಅಹಂ ಶಬ್ದವನ್ನು ಅನುಕರಣ ಮಾತ್ರವೆಂದರೆ ಅದಕ್ಕೆ ಪ್ರಮಾಣವಿಲ್ಲ. ಈ ಸೂತ್ರದಿಂದ ಅಹಂಕಾರ–ಉಪಾಧಿಯುಳ್ಳ ಬ್ರಹ್ಮರುದ್ರರ ಸೃಷ್ಟಿ–ಸಂಹಾರ ಕರ್ತೃತ್ವಶ್ರುತಿ–ಸ್ಮೃತಿಗಳಲ್ಲಿ ಪ್ರತಿಪಾದಿತವಾಗಿದೆ.

ಭಾಷ್ಯ: *ನನು ಭವತ್ವಹಂಕಾರೋಽನ್ಯೇಷಾಂ ಕರ್ತಾ, ಅಹಂಕಾರಸ್ಯ ತು ಕಃ ಕರ್ತಾ? ತತ್ರಾಹ ।*

ಸೂತ್ರ: ಅದೃಷ್ಟೋದ್ಭೂತಿವತ್ ಸಮಾನತ್ವಮ್ ॥ ೬೫ ॥

ಅನುವಾದ: ಅಹಂಕಾರವು ಇತರ ಕಾರ್ಯಗಳಿಗೆ ಕರ್ತನಿರಬಹುದು, ಆದರೆ ಅಹಂಕಾರಕ್ಕೆ ಕರ್ತೃವು ಯಾರು? ಎಂಬುದಕ್ಕೆ ಹೇಳಿದ್ದಾರೆ–

ಸೂತ್ರಾನುವಾದ: ಅದೃಷ್ಟವು ತೋರಿ ಬರುವಂತೆ ಅಹಂಕಾರವೂ (ತೋರಿ ಬರುವುದು), ಇದರಲ್ಲಿ ಎರಡೂ ಸಮಾನವಾಗಿವೆ.

ಭಾಷ್ಯ: *ಯಥಾ ಸರ್ಗಾದಿಷು ಪ್ರಕೃತಿಕ್ಷೋಭಕಕರ್ಮ ಅಭಿವ್ಯಕ್ತಿಃ ಕಾಲವಿಶೇಷಮಾತ್ರಾದ್ ಭವತಿ, ತದುದ್ಬೋಧಕಕರ್ಮಾಂತರಸ್ಯ ಕಲ್ಪನೇऽನವಸ್ಥಾ ಪ್ರಸಂಗಾತ್ । ತಥೈವಾಹಂಕಾರಃ ಕಾಲಮಾತ್ರ ನಿಮಿತ್ತಾದೇವ ಜಾಯತೇ, ನ ತು ತಸ್ಯಾಪಿ ಕರ್ತ್ರಂತರಮಸ್ತೀತಿ ಸಮಾನತ್ವಮಾವಯೋಃ ಇತ್ಯರ್ಥಃ ।*

ಅನುವಾದ: ಸೃಷ್ಟಿಯ ಆರಂಭದಲ್ಲಿ ಪ್ರಕೃತಿಯಲ್ಲಿ ಕ್ಷೋಭಮಾಡುವ ಕರ್ಮದ ಅಭಿವ್ಯಕ್ತಿಯು 'ಕಾಲ ವಿಶೇಷ'ದ ಕಾರಣ ಉಂಟಾಗುವುದು. ಏಕೆಂದರೆ (ಅಭಿವ್ಯಕ್ತಿಯನ್ನು) ತಿಳಿಸುವ ಬೇರೆಯ ಕರ್ಮಗಳನ್ನು ಕಲ್ಪಿಸಬೇಕಾಗುವುದು, (ಹೀಗೆ) ಅನವಸ್ಥಾ ದೋಷವುಂಟಾಗುವುದು. ಹಾಗೆಯೇ ಅಹಂಕಾರವು ಕಾಲಮಾತ್ರನ ನಿಮಿತ್ತದಿಂದಲೇ ಉಂಟಾಗುವುದು. ಅದಕ್ಕೂ ಸಹ ಬೇರೆ ಕರ್ತೃವಿಲ್ಲ; ಆದ್ದರಿಂದ ಇವೆರಡರಲ್ಲೂ ಸಮಾನತೆಯುಂಟು.

ಸೂತ್ರ: ಮಹತೋऽನ್ಯತ್ ॥ ೬೬ ॥

ಸೂತ್ರಾನುವಾದ: ಅಹಂಕಾರ ಕಾರ್ಯದಿಂದ ಭಿನ್ನವಾದದ್ದು ಮಹತ್ತಿನಿಂದ ಉಂಟಾಗುವುದು.

ಭಾಷ್ಯ: *ಅಹಂಕಾರ ಕಾರ್ಯಾತ್ ಸೃಷ್ಟ್ಯಾದೇಃ ಯದನ್ಯತ್ ಪಾಲನಾದಿಕಂ ತನ್ಮಹತ್ತತ್ತ್ವಾದ್ ಭವತಿ । ವಿಶುದ್ಧಸತ್ತ್ವತಯಾ ಅಭಿಮಾನರಾಗಾದಿ ಅಭಾವೇನ ಪರಾನುಗ್ರಹಮಾತ್ರಪ್ರಯೋಜನತ್ವಾತ್ ಇತ್ಯರ್ಥಃ ।*

ಅನುವಾದ: ಅಹಂಕಾರ ಕಾರ್ಯವಾದ ಸೃಷ್ಟಿಯಾದಿಯಲ್ಲದೆ ಬೇರೆ ಪಾಲನಾದಿಗಳು ಮಹತ್ತತ್ವದಿಂದ ಉಂಟಾಗುವುದು. ವಿಶುದ್ಧ ಸತ್ತ್ವದಿಂದ ಅಭಿಮಾನ, ರಾಗಾದಿಗಳು ಇರುವುದಿಲ್ಲ. ಏಕೆಂದರೆ ಅದು ಪರಾದಿಗಳನ್ನು ಅನುಗ್ರಹಿಸುವುದಷ್ಟೆ, ಅದರ ಪ್ರಯೋಜನವಾಗಿರುತ್ತದೆ.

ಭಾಷ್ಯ: *ಅನೇನ ಚ ಸೂತ್ರೇಣ ಮಹತ್ತತ್ತ್ವೋಪಾಧಿಕಂ ವಿಷ್ಣೋಃ ಪಾಲಕತ್ವಮುಪಪಾದಿತಮ್ । ಮಹತ್ತತ್ತ್ವೋಪಾಧಿಕತ್ವಾತ್ ತು ವಿಷ್ಣುಃ ಮಹಾನ್ ಪರಮೇಶ್ವರೋ ಬ್ರಹ್ಮೇತಿ ಗೀಯತೇ । ತದುಕ್ತಮ್ ।*

ಅನುವಾದ: ಈ ಸೂತ್ರದಿಂದ ವಿಷ್ಣುವು ಮಹತ್ತತ್ತ್ವವನ್ನು ಉಳ್ಳವನಾದ್ದರಿಂದ ಪಾಲಕತ್ವವನ್ನೂ ಹೇಳಲಾಗಿದೆ. ಮಹತ್ತತ್ವವನ್ನು ಉಪಾಧಿಯುಳ್ಳವನಾದ್ದರಿಂದ ವಿಷ್ಣುವನ್ನು ಮಹಾನ್ ಎಂದೂ ಪರಮೇಶ್ವರನೆಂದೂ ಬ್ರಹ್ಮನೆಂದೂ ಕರೆಯುವರು. ಅದನ್ನೇ ಹೇಳಿರುವರು–

ಯದಾಹುರ್ವಾಸುದೇವಾಖ್ಯಂ ಚಿತ್ತಂ ಮಹದಾತ್ಮಕಮ್ ।
ಅತ್ರ ಶಾಸ್ತ್ರೇ ಕಾರಣಬ್ರಹ್ಮ ತು ಪುರುಷ (ಭಾಗ ೩.೬.೭೧)

ಸಾಮಾನ್ಯಂ ನಿರ್ಗುಣಮೇವೇಷ್ಯತೇ, ಈಶ್ವರಾನಭ್ಯುಮನಮಾತ್ ।
ತತ್ರ ಚ ಕಾರಣಶಬ್ದಃ ಸ್ವಶಕ್ತಿಪ್ರಕೃತ್ಯುಪಾಧಿಕೋ ವಾ ನಿಮಿತ್ತಕಾರಣತಾಪರೋ ವಾ
ಪುರುಷಾರ್ಥಸ್ಯ ಪ್ರಕೃತಿಪ್ರವರ್ತಕತ್ವಾದಿತಿ ಮಂತವ್ಯಮ್ ।

ಭಾಷ್ಯ: *ಅವಿವೇಕನಿಮಿತ್ತಕಃ ಪ್ರಕೃತಿಪುರುಷಯೋಃ ಭೋಗಭೋಕ್ತೃಭಾವ ಇತಿ (೧.೫೫) ಪ್ರಾಗುಕ್ತಮ್ । ತತ್ರ ಅವಿವೇಕ ಏವ ಕಿನ್ನಿಮಿತ್ತಕಃ? ಇತ್ಯಾಕಾಂಕ್ಷಾಯಾಂ ಅವಿವೇಕಧಾರಾಕಲ್ಪನೇ ಅನವಸ್ಥಾಪತ್ತಿರಿತ್ಯಾಶಂಕಾಯಾಃ ಪ್ರಾಮಾಣಿಕತ್ವೇನ ಪರಿಹಾರಃ ಸರ್ವವಾದಿಸಾಧಾರಣ ಇತ್ಯಾಹ ।*

ಅನುವಾದ: ಅವಿವೇಕದ ನಿಮಿತ್ತದಿಂದ ಪ್ರಕೃತಿ–ಪುರುಷರಲ್ಲಿ ಭೋಗ್ಯ ಮತ್ತು ಭೋಕ್ತೃಭಾವಗಳು ಇರುತ್ತವೆ ಎಂದು ಮೊದಲೇ ಹೇಳಿದ್ದೇವೆ. ಈ ಅವಿವೇಕವು ಯಾವ ಕಾರಣಕ್ಕಾಗಿ ಸರಣಿಯು ಇದೆಯೆಂದು ಕಲ್ಪಿಸಿದಲ್ಲಿ ಅನವಸ್ಥಾ ದೋಷವುಂಟಾಗಿ ತಡೆಯಿಲ್ಲದಂತಾಗುವುದು ಎಂದು ಶಂಕಿಸಿದಲ್ಲಿ ಪ್ರಾಮಾಣಿಕವಾಗಿ ಪರಿಹಾರವನ್ನು ಎಲ್ಲ ವಾದಿಗಳಿಗೂ ಸಾಧಾರಣವಾದದ್ದನ್ನು ಹೇಳಿದೆ.

ಸೂತ್ರ: ಕರ್ಮನಿಮಿತ್ತಃ ಪ್ರಕೃತೇಃ ಸ್ವಸ್ವಾಮಿಭಾವೋಽಪಿ ಅನಾದಿರ್ಬೀಜಾಂಕುರವತ್ ॥ ೬೭ ॥

ಸೂತ್ರಾನುವಾದ: ಪ್ರಕೃತಿಯ ಸ್ವಸ್ವಾಮಿಭಾವವು ಕರ್ಮನಿಮಿತ್ತವಾಗಿ ಉಂಟಾಗುವುದು. ಆದರೂ ಅದು ಅನಾದಿಯಾದುದು, ಬೀಜ–ಅಂಕುರಗಳಂತೆ.

ಭಾಷ್ಯ: *ಯೇಷಾಂ ಸಾಂಖ್ಯೈಕದೇಶಿನಾಂ ಪ್ರಕೃತೇಃ ಪುರುಷಸ್ಯ ಚ ಸ್ವಸ್ವಾಮಿಭಾವೋ ಭೋಗ್ಯಭೋಕ್ತೃಭಾವಃ ಕರ್ಮನಿಮಿತ್ತಕಸ್ತನ್ಮತೇಽಪಿ ಸ ಪ್ರವಾಹರೂಪೇಣಾನಾದಿರೇವ, ಬೀಜಾಂಕುರವತ್ ಪ್ರಾಮಾಣಿಕತ್ವಾದಿತ್ಯರ್ಥಃ । ಆಕಸ್ಮಿಕತ್ವೇ ಮುಕ್ತಸ್ಯಾಪಿ ಪುನರ್ಭೋಗಾಪತ್ತೇರಿತಿ ।*

ಅನುವಾದ: ಸಾಂಖ್ಯದ ಪಂಥದವರು ಪ್ರಕೃತಿಗೂ ಪುರುಷನಿಗೂ ಸ್ವಸ್ವಾಮಿಭಾವವು ಎಂದರೆ ಭೋಗ್ಯ–ಭೋಕ್ತೃ ಭಾವವು ಕರ್ಮದ ನಿಮಿತ್ತದ ಕಾರಣ ಎಂದಿದ್ದಾರೆ. ಅವರ ಅಭಿಪ್ರಾಯದಲ್ಲಿಯೂ ಪ್ರವಾಹರೂಪದಲ್ಲಿ ಅನಾದಿಯೇ, ಬೀಜಾಂಕುರದಂತೆ, ಪ್ರಮಾಣಪೂರ್ಣವಾಗಿದೆ. ಆಕಸ್ಮಿಕವಾದಲ್ಲಿ ಮುಕ್ತನಾದವನಿಗೆ ಮತ್ತೆ ಭೋಗವುಂಟಾಗುವುದರ ಸಂಭವವಿರುತ್ತದೆ.

ಭಾಷ್ಯ: *ಅವಿವೇಕ ನಿಮಿತ್ತಕತ್ವಮತೇಽಪಿ ಏತದನಾದಿತ್ವಂ ಸಮಾನಮಿತ್ಯಾಹ ।*

ಸೂತ್ರ: ಅವಿವೇಕನಿಮಿತ್ತೋ ವಾ ಪಂಚಶಿಖಃ ॥ ೬೮ ॥

ಅನುವಾದ: ಅವಿವೇಕ ನಿಮಿತ್ತಕತ್ವವಿದ್ದರೂ ಈ ಅನಾದಿ ಪ್ರವಾಹಕ್ಕೆ ಸಮಾನವಾದುದು.

ಸೂತ್ರಾನುವಾದ: ಅಥವಾ ಈ ಸ್ವ-ಸ್ವಾಮಿಭಾವವು ಅವಿವೇಕನಿಮಿತ್ತದಿಂದ ಉಂಟಾದುದು ಎಂದು ಪಂಚಶಿಖರ ಅಭಿಪ್ರಾಯ.

ಭಾಷ್ಯ: *ಅವಿವೇಕನಿಮಿತ್ತೋ ವಾ ಸ್ವಸ್ವಾಮಿಭಾವ ಇತಿ ಪಂಚಶಿಖ ಆಹ । ತನ್ಮತೇಽಪ್ಯನಾದಿರಿತ್ಯರ್ಥಃ । ಏತದೇವ ಸ್ವಮತಃ ಪ್ರಾಗುಕ್ತತ್ವಾತ್ । ಅವಿವೇಕಶ್ಚ ಪ್ರಲಯೇಽಪಿ ಕರ್ಮವದೇವಾಸ್ತಿ ವಾಸನಾರೂಪೇಣ ಇತಿ । ವಿವೇಕಪ್ರಾಗಭಾವೋಽವಿವೇಕಃ ಇತಿ ಮತೇ ಬೀಜಾಂಕುರವತ್ ಅನಾದಿತ್ವಂ ನ ಘಟತೇ । ಅಖಂಡಪ್ರಾಗಭಾವಸ್ಯೈವ ಅಖಿಲಭೋಗಹೇತುತ್ವಾತ್ ।*

ಅನುವಾದ: ಪಂಚಶಿಖಾಚಾರ್ಯರು ಸ್ವ-ಸ್ವಾಮಿಭಾವವೆಂಬುದು ಅವಿವೇಕ ದಿಂದುಂಟಾಗುವುದು ಎಂದಿದ್ದಾರೆ. ಅವರ ಅಭಿಪ್ರಾಯದಲ್ಲಿ ಅವಿವೇಕವೂ ಅನಾದಿಯೇ. ಇದನ್ನು ಅದನ್ನು ಮೊದಲೇ ಹೇಳಿದ್ದರಿಂದ ಇದು ಅವರ ಅಭಿಪ್ರಾಯವೇ. ಅವಿವೇಕವೂ ಸಹ ಪ್ರಲಯಕಾಲದಲ್ಲಿಯೂ ಕರ್ಮದಂತೆಯೇ ವಾಸನಾರೂಪದಲ್ಲಿ ಇರುವುದು. ವಿವೇಕದ ಪ್ರಾಗಭಾವವು ಅವಿವೇಕ ಎಂಬ ಅಭಿಪ್ರಾಯವು ಬೀಜಾಂಕುರದಂತೆ ಅನಾದಿ ಎಂಬುದು ಅವರಿಗೆ ಒಪ್ಪಿಗೆಯಿಲ್ಲ. ಅಖಂಡ ಪ್ರಾಗಭಾವದಲ್ಲಿ ಅಖಿಲ ಭೋಗಹೇತುತ್ವ ಸೇರಿಹೋಗುವುದರಿಂದ.

ಸೂತ್ರ: ಲಿಂಗಶರೀರನಿಮಿತ್ತಕ ಇತಿ ಸದಾನಂದಾಚಾರ್ಯಃ ॥ ೬೯ ॥

ಸೂತ್ರಾನುವಾದ: (ಪ್ರಕೃತಿ-ಪುರುಷರ ಸಂಪರ್ಕ) ಸೂಕ್ಷ್ಮಶರೀರದ ಕಾರಣದಿಂದ ಉಂಟಾಗುತ್ತದೆ ಎಂದು ಸದಾನಂದಾಚಾರ್ಯರು ಹೇಳುತ್ತಾರೆ.

ಭಾಷ್ಯ: *ಸದಾನಂದಾಚಾರ್ಯಾಸ್ತು ಲಿಂಗಶರೀರನಿಮಿತ್ತಕಃ ಪ್ರಕೃತಿಪುರುಷಯೋಃ ಭೋಗ್ಯ-ಭೋಕ್ತೃಭಾವಃ ಇತ್ಯಾಹ-ಲಿಂಗ ಶರೀರದ್ವಾರೈವ ಭೋಗಾದಿತಿ । ತನ್ಮತೇಽಪ್ಯನಾದಿಃ ಸ ಇತ್ಯರ್ಥಃ । ಯದ್ಯಪಿ ಪ್ರಲಯೇ ಲಿಂಗಶರೀರಂ ನಾಸ್ತಿ ತಥಾಪಿ ತತ್ಕಾರಣಂ ಅವಿವೇಕಕರ್ಮಾದಿಕಂ ಪೂರ್ವಸರ್ಗೀಯಲಿಂಗಶರೀರಜನ್ಯಮಸ್ತಿ । ತದ್ದ್ವಾರಾ ಬೀಜಾಂಕುರತುಲ್ಯತ್ವಂ ಸ್ವ-ಸ್ವಾಮಿಭಾವ ಲಿಂಗಶರೀರಯೋಃ ಇತ್ಯಾಶಯಃ ।*

ಅನುವಾದ: ಸದಾನಂದಾಚಾರ್ಯರು, 'ಪ್ರಕೃತಿ-ಪುರುಷರಲ್ಲಿ ಭೋಗ್ಯ-ಭೋಕ್ತೃ ಭಾವವು ಲಿಂಗಶರೀರದ ನಿಮಿತ್ತದಿಂದ ಉಂಟಾಗುವುದು ಎಂದು ಹೇಳಿದ್ದಾರೆ. ಲಿಂಗಶರೀರದ್ವಾರ ಭೋಗ ಉಂಟಾಗುವುದು. ಅವರ ದೃಷ್ಟಿಯಲ್ಲೂ ಇದು ಅನಾದಿಯೇ. ಪ್ರಲಯಕಾಲದಲ್ಲಿ ಲಿಂಗಶರೀರವಿಲ್ಲದಿದ್ದರೂ ಅದಕ್ಕೆ ಅವಿವೇಕ-ಕರ್ಮಾದಿಗಳು ಸೃಷ್ಟಿಗೆ ಮೊದಲೇ ಹುಟ್ಟಿರುತ್ತವೆ. ಅದರ ಮೂಲಕ ಬೀಜಾಂಕುರಕ್ಕೆ ಸಮಾನತೆಯು ಸ್ವ-ಸ್ವಾಮಿಭಾವ ಮತ್ತು ಲಿಂಗಶರೀರಗಳಲ್ಲಿಯೂ ಕಾಣಬಹುದು ಎಂಬುದು ಆಶಯ.

ಭಾಷ್ಯ: *ಶಾಸ್ತ್ರವಾಕ್ಯಾರ್ಥಮುಪಸಂಹರತಿ ।*

ಸೂತ್ರ: ಯದ್ವಾ ತದ್ವಾ ತದುಚ್ಛಿತ್ತಿಃ ಪುರುಷಾರ್ಥಃ ತದುಚ್ಛಿತ್ತಿಃ ಪುರುಷಾರ್ಥಃ ॥ ೭೦ ॥

ಸೂತ್ರಾನುವಾದ: ಹೇಗಾದರೂ ಇರಲಿ, (ಈ ಸ್ವ–ಸ್ವಾಮಿಭಾವವು ಕೊನೆಗೊಳ್ಳುವ ನಿಮಿತ್ತವು) ಪೂರ್ಣವಾಗಿ ನಾಶವಾಗುವುದೇ ಪುರುಷಾರ್ಥ.

ಭಾಷ್ಯ: *ಕರ್ಮನಿಮಿತ್ತೋ ವಾಽವಿವೇಕಾದಿನಿಮಿತ್ತೋ ವಾ ಭವತು ಪ್ರಕೃತಿಪುರುಷಯೋಃ ಭೋಗ್ಯ–ಭೋಕ್ತೃಭಾವಃ । ಸರ್ವಥಾಪಿ ಅನಾದಿತಯಾ ದುರುಚ್ಛೇದ್ಯಸ್ಯ ತಸ್ಯೋಚ್ಛೇದಃ ಪರಮಪುರುಷಾರ್ಥಃ ಇತ್ಯರ್ಥಃ । ತದೇಕದಾದೌ ಪ್ರತಿಜ್ಞಾನಂ 'ತ್ರಿವಿಧದುಃಖಾತ್ಯಂತಿಕನಿವೃತ್ತಿಃ ಅತ್ಯಂತ ಪುರುಷಾರ್ಥಃ ಇತಿ (ಸಾಂ.ಸೂ. ೧.೧)*

ಅನುವಾದ: ಪ್ರಕೃತಿ–ಪುರುಷರಲ್ಲಿ ಭೋಗ್ಯ–ಭೋಕ್ತೃ ಭಾವವು ಕರ್ಮನಿಮಿತ್ತದಿಂದಾಗಲಿ ಅಥವಾ ಅವಿವೇಕಾದಿ ನಿಮಿತ್ತಗಳಿಂದಾಗಲಿ (ಅದು ಅನಾದಿ). ಸಂಪೂರ್ಣವಾಗಿ ಆದಿರಹಿತವಾದ್ದರಿಂದ ಅದನ್ನು ಹೋಗಲಾಡಿಸುವುದು ಕಷ್ಟವಾದ್ದರಿಂದ ಅದನ್ನು ಹೋಗಲಾಡಿಸುವುದೇ ಪರಮಪುರುಷಾರ್ಥವು ಎಂದರ್ಥ. ಅದನ್ನೇ ಪ್ರಾರಂಭದಲ್ಲಿ ಪ್ರತಿಜ್ಞೆ ಮಾಡಲ್ಪಟ್ಟಿದೆ. ಮೂರು ಬಗೆಯ ದುಃಖಗಳನ್ನು ಸಂಪೂರ್ಣವಾಗಿ ಹೋಗಲಾಡಿಸುವುದೇ ಸಂಪೂರ್ಣವಾದ ಪುರುಷಾರ್ಥವು.

ಭಾಷ್ಯ: *ನನ್ವತ್ರ ಸುಖದುಃಖ ಸಾಧಾರಣಭೋಗನಿವೃತ್ತಿಃ ಪುರುಷಾರ್ಥ ಉಚ್ಯತೇ, ತತ್ರ ದುಃಖಮಾತ್ರನಿವೃತ್ತಿರಿತಿ ಕಥಂ ತತ್ರೋಕ್ತಸ್ಯಾತ್ರೋಪಸಂಹಾರಃ ।*

ಅನುವಾದ: ಸುಖದುಃಖ ಸಾಧಾರಣ ಭೋಗದಿಂದ ಬಿಡುಗಡೆಯೇ ಪುರುಷಾರ್ಥ ವೆನ್ನುವರು, ಅದರಲ್ಲಿ ದುಃಖಮಾತ್ರವನ್ನು ಹೋಗಲಾಡಿಸುವುದೇ ಪುರುಷಾರ್ಥ ವೆನ್ನುವಿರಿ, ಇದನ್ನು ಹೇಗೆ ಉಪಸಂಹಾರ ಮಾಡುವಿರಿ?

ಭಾಷ್ಯ: *ಇತಿಚೇನ್ನ । ಶಬ್ದಭೇದೇಽಪಿ ಅರ್ಥಾಭೇದಾತ್ । ಸುಖಂ ಹಿ ತಾವದ್ ದುಃಖಪಕ್ಷೇ ನಿಕ್ಷಿಪ್ತಮಿತಿ ಸುಖಭೋಗಃ ಅಪಿ ದುಃಖಭೋಗ ಏವ । ಸ್ವತೋ ನಿತ್ಯನಿರ್ದುಃಖತ್ವೇನ ಚ ಪ್ರಥಮಸೂತ್ರೇಽಪಿ ಪ್ರತಿಬಿಂಬರೂಪೇಣ ದುಃಖನಿವೃತ್ತಿಃ ವಿವಕ್ಷಿತಾ ಇತ್ಯೇಕ ಏವಾರ್ಥಃ ಉಪಕ್ರಮೋಪಸಂಹಾರಯೋಃ ಇತಿ । ಬಹುಲಾಂಶಸ್ಯ ದ್ವಿರಾವೃತ್ತಿಃ ಶಾಸ್ತ್ರಸಮಾಪ್ತ್ಯರ್ಥಾ ।*

ಅನುವಾದ: ಶಬ್ದಭೇದವಿದ್ದರೂ ಅರ್ಥದಲ್ಲಿ ಯಾವ ಭೇದವೂ ಇಲ್ಲ. ಸುಖವೂ ಸಹ ದುಃಖಪಕ್ಷದಲ್ಲಿ ಹಾಕಿದೆವೆಂದರೆ ಸುಖಪಕ್ಷವೂ ದುಃಖಭೋಗವೆಂದೇ ಅರ್ಥ. ದುಃಖಭೋಗವೂ ಸಹ ಪ್ರತಿಬಿಂಬ ರೂಪದಿಂದ ಪುರುಷನ ಪಾಲಿಗೆ ದುಃಖಸಂಬಂಧವೇ ತಾನೇ ಯಾವಾಗಲೂ ನಿರ್ದುಃಖವಾಗಿರುವುದರಿಂದ ಪ್ರಥಮ

ಸೂತ್ರದಲ್ಲಿಯೂ ಪ್ರತಿಬಿಂಬರೂಪದಷ್ಟರಲ್ಲಿಯೇ ದುಃಖನಿವೃತ್ತಿಯನ್ನು ಹೇಳಲಾಗಿದೆ ಎಂದು ಉಪಕ್ರಮಕ್ಕೂ ಉಪಸಂಹಾರಕ್ಕೂ ಒಂದೇ ಅರ್ಥವನ್ನು ಕಲ್ಪಿಸಲಾಗಿದೆ. ಸೂತ್ರದ ಬಹಳ ಅಂಶಗಳು 'ಉಚ್ಛಿತ್ತಿಃ ಪುರುಷಾರ್ಥಸ್ಯ', 'ಉಚ್ಛಿತ್ತಿಃ ಪುರುಷಾರ್ಥಸ್ಯ' ಎಂದು ದ್ವಿರಾವೃತ್ತಿಯಿಂದ ಸಮಾಪ್ತಿಯನ್ನು ಸೂಚಿಸುತ್ತವೆ.

ಭಾಷ್ಯ: *ಶಾಸ್ತ್ರಮುಖ್ಯಾರ್ಥವಿಸ್ತಾರಸ್ತಂತ್ರಾಖ್ಯೇಽನುಕ್ತ ಪೂರಣೈಃ ।*
ಷಷ್ಠಾಧ್ಯಾಯೇ ಕೃತಃ ಪಶ್ಚಾದ್ವಾಕ್ಯಾರ್ಥಶ್ಚೋಪಸಂಹೃತಃ ॥

ಅನುವಾದ: ತಂತ್ರಾಧ್ಯಾಯವೆಂಬ ಈ ಅಧ್ಯಾಯದಲ್ಲಿ ಸಾಂಖ್ಯಶಾಸ್ತ್ರದ ಮುಖ್ಯಾರ್ಥವಾದ (ದುಃಖನಿವೃತ್ತಿಯ ಸಾಧನಗಳನ್ನು) ವಿಸ್ತಾರವಾಗಿ ಹೇಳದೇ ಬಿಟ್ಟುಹೋದ ಭಾಗಗಳನ್ನು ಸೇರಿಸಿ ಹೇಳಲಾಗಿದೆ. ಅನಂತರ ವಾಕ್ಯಾರ್ಥವನ್ನು ಉಪಸಂಹಾರ ಮಾಡಲಾಗಿದೆ.

ಭಾಷ್ಯ: *ತದಿದಂ ಸಾಂಖ್ಯಶಾಸ್ತ್ರಂ ಕಪಿಲಮೂರ್ತಿರ್ಭಗವಾನ್ ವಿಷ್ಣುಃ ಅಖಿಲ ಲೋಕಹಿತಾಯ ಪ್ರಕಾಶಿತವಾನ್ । ಯತ್ ತತ್ರ ವೇದಾಂತಿಬ್ರುವಃ ಕಶ್ಚಿದಾಹ, ಸಾಂಖ್ಯಪ್ರಣೇತಾ ಕಪಿಲೋ ನ ವಿಷ್ಣುಃ ಕಿಂತು ಅಗ್ನ್ಯವತಾರಃ ಕಪಿಲಾಂತರಮ್–*

'ಅಗ್ನಿಃ ಸ ಕಪಿಲೋ ನಾಮ ಸಾಂಖ್ಯಶಾಸ್ತ್ರಪ್ರವರ್ತಕಃ ಇತಿ ಸ್ಮೃತೇರಿತಿ ತಲ್ಲೋಕವ್ಯಾಮೋಹನಮಾತ್ರಮ್ । (ಮ.ಭಾ. ೨೨೦.೨೧)

ಅನುವಾದ: ಈ ಸಾಂಖ್ಯಶಾಸ್ತ್ರವನ್ನು ಕಪಿಲಮೂರ್ತಿಯಾದ ವಿಷ್ಣುವು ಜಗತ್ತಿನ ಎಲ್ಲರ ಹಿತಕ್ಕಾಗಿ ಪ್ರಕಾಶಿಸಿದ್ದಾನೆ. ವೇದಾಂತಿಯೆಂದು ಹೇಳಿಕೊಳ್ಳುವ ಒಬ್ಬಾತ ಹೇಳಿದ್ದಾನೆ; ಸಾಂಖ್ಯವನ್ನು ರಚಿಸಿದವನು ವಿಷ್ಣುವಲ್ಲ. ಆದರೆ ಅಗ್ನಿ–ಅವತಾರದ ಬೇರೊಬ್ಬ ಕಪಿಲನು ಎಂದು. 'ಅಗ್ನಿಯೇ ಕಪಿಲನೆಂಬ ಸಾಂಖ್ಯಶಾಸ್ತ್ರ ಪ್ರವರ್ತಕನು' ಎಂದು ಸ್ಮೃತಿಯಿದೆ (ಎಂದಿದ್ದಾನೆ). ಆದರೆ ಅದು ಲೋಕದ ಭ್ರಮೆಯಷ್ಟೆ. (ಮ.ಭಾ.ಏ.ಪ. ೨೨೦–೨೧)

ಭಾಷ್ಯ: *ಏತನ್ಮೇ ಜನ್ಮ ಲೋಕೇಽಸ್ಮಿನ್ ಮುಮುಕ್ಷೂಣಾಂ ಪ್ರಸಂಖ್ಯಾನಾಯ ತತ್ತ್ವಾನಾಂ ಸಮ್ಮತಾಯಾತ್ಮದರ್ಶನಮ್ ದುರಾಶಯಾತ್ । ಇತ್ಯಾದಿಸ್ಮೃತಿಷು ವಿಷ್ಣ್ವವತಾರಸ್ಯ ದೇವಹೂತಿಪುತ್ರಸ್ಯೈವ ಸಾಂಖ್ಯೋಪದೇಷ್ಟೃತ್ವಾವಗಮಾತ್, ಕಪಿಲದ್ವಯ ಕಲ್ಪನಾಗೌರವಾಚ್ಚ । ತತ್ರ ಚಾಗ್ನಿಶಬ್ದೋ ಅಗ್ನ್ಯಾಖ್ಯಶಕ್ತ್ಯಾವೇಶಾದೇವ ಪ್ರಯುಕ್ತಃ । ಯಥಾ 'ಕಾಲೋಽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ' । ಇತಿ ಶ್ರೀಕೃಷ್ಣವಾಕ್ಯೇ ಕಾಲಶಕ್ತ್ಯಾವೇಶಾದೇವ ಕಾಲಶಬ್ದಃ । ಅನ್ಯಥಾ ವಿಶ್ವರೂಪಪ್ರದರ್ಶಕಸ್ಯ ಕೃಷ್ಣಸ್ಯಾಪಿ ವಿಷ್ಣ್ವವತಾರಕೃಷ್ಣಾತ್ ಭೇದಾಪತ್ತೇರಿತಿ ದಿಕ್ ।*

ಅನುವಾದ: 'ಮೋಕ್ಷವನ್ನು ಬಯಸುವವರ ಬಲವಂತದಿಂದ ನಾನು ಈ ಲೋಕದಲ್ಲಿ ಜನ್ಮತಳೆದಿದ್ದೇನೆ. ಇದು ತತ್ತ್ವಗಳನ್ನು ಪ್ರಚಾರಮಾಡಲು ಮತ್ತು ದಾರ್ಶನಿಕರ

ಒಪ್ಪಿಗೆಯನ್ನು ಪಡೆದು ನನ್ನನ್ನು ಪ್ರಕಟಗೊಳಿಸುತ್ತೇನೆ. ಇತ್ಯಾದಿ ಸ್ಮೃತಿಗಳಲ್ಲಿ ವಿಷ್ಣುವಿನ ಅವತಾರವಾದ ದೇವಹೂತಿಪುತ್ರನಾಗಿ ಸಾಂಖ್ಯೋಪದೇಶವನ್ನು ಮಾಡಿದ್ದಾನೆ; ಕಪಿಲದ್ವಯರಿದ್ದಾರೆಂಬ ಕಲ್ಪನೆ ಅತಿಶಯವಾದುದು. ಅಲ್ಲಿ ಅಗ್ನಿಶಬ್ದವು ಅಗ್ನಿಯೆಂಬ ಶಕ್ತಿಯ ಆವೇಶವಶಾತ್ ಪ್ರಯುಕ್ತವಾಗಿರುವುದು. 'ಲೋಕಕ್ಷಯವನ್ನುಂಟು ಮಾಡುವ ಕಾಲನಾಗಿ ಬೆಳೆದಿರುವೆನು' ಎಂಬ ಶ್ರೀಕೃಷ್ಣನ ವಾಕ್ಯದಲ್ಲಿ ಕಾಲಶಕ್ತಿಯ ಆವೇಶದಿಂದಲೇ ಎಂಬರ್ಥದಲ್ಲಿ ಕಾಲಪದವನ್ನು ಬಳಸಲಾಗಿದೆ. ಹಾಗಿಲ್ಲದಿದ್ದಲ್ಲಿ ವಿಶ್ವರೂಪವನ್ನು ಪ್ರದರ್ಶಿಸುವ ಕೃಷ್ಣನೂ ಸಹ ವಿಷ್ಣ್ವವತಾರನಾದ ಕೃಷ್ಣನಿಂದ ಭಿನ್ನನಾಗಿ ಬಿಡುವನು.

ಭಾಷ್ಯ: *ಸಾಂಖ್ಯಕುಲ್ಯಾಃ ಸಮಾಪೂರ್ಯ ವೇದಾಂತಮಥಿತಾಮೃತೈಃ ।*
ಕಪಿಲರ್ಷಿಜ್ಞಾನಯಜ್ಞಃ ಋಷೀನಾಪಾಯಯತ್ ಪುರಾ ॥ ೧ ॥
ತದ್ವಚಃ ಶ್ರದ್ಧಯಾ ತಸ್ಮಿನ್ ಗುರೌ ಚ ಸ್ಥಿರಭಾವತಃ ।
ತತ್ಪ್ರಸಾದಲವೇನೇದಂ ತಚ್ಛಾಸ್ತ್ರಂ ವಿವೃತಂ ಮಯಾ ॥ ೨ ॥

ಅನುವಾದ: ಸಾಂಖತತ್ತ್ವಗಳೆಂಬ ತೊರೆಗಳಲ್ಲಿ ವೇದಾಂತವನ್ನು ಕಡೆದು ಹುಟ್ಟಿದ ಅಮೃತದಿಂದ ತುಂಬಿ ಕಪಿಲನು ಜ್ಞಾನಯಜ್ಞದಿಂದ ಋಷಿಗಳಿಗೆ ಅಮೃತಪಾನ ಮಾಡಿಸಿದನು. ಅವರ ಮಾತಿನಲ್ಲಿ ಶ್ರದ್ಧೆಯಿಟ್ಟು ಆ ಗುರುವಿನಲ್ಲಿ ಭಕ್ತಿಯಿಂದ ಸ್ಥಿರಭಾವನೆ ಮೂಡಿಸಿ ಅವರ ಅನುಗ್ರಹದಿಂದ ಆ ಶಾಸ್ತ್ರವು ನನ್ನಿಂದ ವಿವರಿಸಲ್ಪಟ್ಟಿದೆ.

ಹೀಗೆ ಶ್ರೀ ಸಾಂಖ್ಯಾಚಾರ್ಯ ವಿಜ್ಞಾನಭಿಕ್ಷು ವಿರಚಿತವಾದ ಕಪಿಲನ ಸಾಂಖ್ಯ ಪ್ರವಚನದ ಭಾಷ್ಯದಲ್ಲಿ ತಂತ್ರಾಧ್ಯಾಯವೆಂಬ ಆರನೆಯ ಅಧ್ಯಾಯ ಮುಗಿಯಿತು

ಅನುಬಂಧಗಳು

ಅನುಬಂಧ ೧

ಅಕಾರಾದಿ ಸಾಂಖ್ಯಸೂತ್ರ ಸೂಚೀ

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ಕರ್ಮನಿಮಿತ್ತಃ ಪ್ರಕೃತೇಃ ಸ್ವಸ್ವಾಮಿಭಾವೋಽಪ್ಯನಾದಿಬೀಜಾಂಕುರವತ್	೬	೬೭
ಕರ್ಮನಿಮಿತ್ತಯೋಗಾಚ್ಚ	೩	೬೭
ಕರ್ಮವದ್ ದೃಷ್ಟೇರ್ವಾ ಕಾಲಾದೇಃ	೩	೬೦
ಕರ್ಮವೈಚಿತ್ರ್ಯಾತ್ ಪ್ರಧಾನಚೇಷ್ಟಾ ಗರ್ಭದಾಸವತ್	೩	೫೧
ಕರ್ಮವೈಚಿತ್ರ್ಯಾತ್ ಸೃಷ್ಟಿವೈಚಿತ್ರ್ಯಮ್	೬	೪೧
ಕರ್ಮಾಕೃಷ್ಟೇರ್ವಾನಾದಿತಃ	೩	೬೨
ಕರ್ಮೇಂದ್ರಿಯಬುದ್ಧೀಂದ್ರಿಯೈರಾಂತರಮೇಕಾದಶಕಂ	೨	೧೯
ಕಾಮ್ಯೇಽಕಾಮ್ಯೇಽಪಿ ಸಾಧ್ಯತ್ವಾವಿಶೇಷಾತ್	೧	೮೫
ಕಾರಣಭಾವಾಚ್ಚ	೧	೧೧೮
ಕಾರ್ಯತಸ್ತತ್ಸಿದ್ಧೇಃ	೨	೬
ಕಾರ್ಯದರ್ಶನಾತ್ತದುಪಲಬ್ಧೇಃ	೧	೧೧೦
ಕಾರ್ಯಾತ್ ಕಾರಣಾನುಮಾನಂ ತತ್ಸಾಹಿತ್ಯಾತ್	೧	೧೩೫
ಕುತ್ರಾಪಿ ಕೋಽಪಿ ಸುಖೀತಿ	೬	೭
ಕುಸುಮವಚ್ಚ ಮಣಿಃ	೨	೩೨
ಕೃತನಿಯಮಲಂಘನಾದಾನರ್ಥಕ್ಯಂ ಲೋಕವತ್	೪	೧೫
ಕೈವಲ್ಯಾರ್ಥಂ ಪ್ರವೃತ್ತೇಶ್ಚ	೧	೧೪೪
ಕ್ರಮಶೋಽಕ್ರಮಶಶ್ಚೇಂದ್ರಿಯ ವೃತ್ತಿಃ	೨	೩೨
ಗತಿಯೋಗೇಽಪ್ಯಾದ್ಯಕಾರಣತಾಽಹಾನಿರಣುವತ್	೬	೩೭
ಗತಿಶ್ರುತಿರಪ್ಯುಪಾಧಿಯೋಗಾದಾಕಾಶವತ್	೧	೫೧
ಗತಿಶ್ರುತೇಶ್ಚ ವ್ಯಾಪಕತ್ವೇಽಪ್ಯುಪಾಧಿಯೋಗದೇಶಕಾಲಲಾಭೋ ವ್ಯೋಮವತ್	೬	೫೯
ಗುಣಪರಿಣಾಮಭೇದಾನ್ನಾನಾತ್ವಮವಸ್ಥಾವತ್	೨	೨೭
ಗುಣಯೋಗಾದ್ ಬದ್ಧಃ ಶುಕವತ್	೪	೨೬
ಗುಣಾದೀನಾಂಚ ನಾತ್ಯಂತಬಾಧಃ	೫	೨೬
ಚಕ್ರಭ್ರಮಣವದ್ ಧೃತಶರೀರಃ	೩	೮೨
ಚಂದ್ರಾದಿಲೋಕೇಽಪ್ಯಾವೃತ್ತಿರ್ನಿಮಿತ್ತಸದ್ಭಾವಾತ್	೬	೫೬
ಚರಮೋಽಹಂಕಾರ	೧	೭೨
ಚಾತುರ್ಭೌತಿಕಮಿತ್ಯೇಕೇ	೩	೧೮
ಚಿದವಸಾನಾ ಭುಕ್ತಿಸ್ತತ್ಕರ್ಮಾರ್ಜಿತತ್ವಾತ್	೬	೫೫
ಚಿದವಸಾನೋಭೋಗಃ	೧	೧೦೪

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ತದ್ಯೋಗೇ ತತ್ಸಿದ್ಧಾವನ್ಯೋನ್ಯಾಶ್ರಯತ್ವಮ್	೫	೧೪
ತದ್ಯೋಗೇಽಪಿ ನ ನಿತ್ಯಮುಕ್ತಃ	೫	೭
ತದ್ಯೋಗೇಪ್ಯವಿವೇಕಾನ್ನ ಸಮಾನತ್ವಂ	೧	೫೫
ತದ್ರೂಪತ್ವೇ ಸಾದಿತ್ವಮ್	೫	೧೯
ತದ್ವಿಸ್ಮರಣೇಽಪಿಭೇಕೀವತ್	೪	೧೬
ತನ್ನಿವೃತ್ತಾವುಪಶಾಂತೋಪರಾಗಃ ಸ್ವಸ್ಥ	೨	೩೪
ತಮೋವಿಶಾಲಾ ಮೂಲತಃ	೩	೪೯
ತಯೋರನ್ಯತ್ವೇ ತುಚ್ಛತ್ವಮ್	೧	೧೩೪
ತಸ್ಮಾಚ್ಛರೀರಸ್ಯ	೩	೨
ತುಷ್ಟಿರ್ನವಧಾ	೩	೩೯
ತೇನಾಂತಃ ಕರಣಸ್ಯ	೧	೬೪
ತೇಷಾಮಪಿ ತದ್ಯೋಗೇ ದೃಷ್ಟಬಾಧಾದಿ ಪ್ರಸಕ್ತಿಃ	೫	೪೯
ತ್ರಯಾಣಾಂ ಸ್ವಾಲಕ್ಷಣ್ಯಮ್	೨	೩೦
ತ್ರಿಗುಣಾಚೇತನತ್ವಾದಿ ದ್ವಯೋಃ	೧	೧೨೬
ತ್ರಿಗುಣಾದಿ ವಿಪರ್ಯಯಾತ್	೧	೧೪೧
ತ್ರಿಧಾ ತ್ರಯಾಣಾಂ ವ್ಯವಸ್ಥಾ ಕರ್ಮದೇಹೋಪಭೋಗದೇಹೋಭಯದೇಹಾಃ	೫	೧೨೫
ತ್ರಿಭಿಃ ಸಂಬಂಧಸಿದ್ಧಿಃ	೫	೩೮
ತ್ರಿವಿಧವಿರೋಧಾಪತ್ತೇಶ್ಚ	೧	೧೧೩
ದಾರ್ಢ್ಯಾರ್ಥಮುತ್ತರೇಷಾಮ್	೬	೨೩
ದಿಕ್ಕಾಲಾವಾಕಾಶಾದಿಭ್ಯಃ	೫	೬೭
ದುಃಖಾದ್ದುಃಖಂ ಜಲಾಭಿಷೇಕವನ್ನ ಜಾಡ್ಯವಿಮೋಕಃ	೧	೮೪
ದೃಷ್ಟಸ್ತಯೋರಿಂದ್ರಸ್ಯ	೪	೧೮
ದೃಷ್ಟಾಂತಾಸಿದ್ಧೇಶ್ಚ	೧	೩೭
ದೇವತಾಲಯಶ್ರುತಿರ್ನಾರಂಭಕಸ್ಯ	೨	೨೧
ದೇಹಾದಿವ್ಯತಿರಿಕ್ತೋಽಸೌ ವೈಚಿತ್ರ್ಯಾತ್	೬	೨
ದೇಹಾದಿಭೇದಾಃ	೩	೪೬
ದೋಷದರ್ಶನಾದುಭಯೋಃ	೪	೨೮
ದೋಷಬೋಧೇಽಪಿ ನೋಪಸರ್ಪಣಮ್ ಪ್ರಧಾನಸ್ಯ ಕುಲವಧೂವತ್	೩	೭೦
ದ್ರಷ್ಟೃತ್ವಾದಿರಾತ್ಮನಃ ಕರಣತ್ವಮಿಂದ್ರಿಯಾಣಾಮ್	೨	೨೯

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ನ ತೇಜೋಪಸರ್ಪಣಾತ್ ತೈಜಸಮ್ ಚಕ್ಷುರ್ವೃತ್ತಿತಸ್ತತ್ಸಿದ್ಧೇಃ	೫	೧೦೫
ನ ತ್ರಿಭಿರಪೌರುಷೇಯತ್ವಾದ್‌ವೇದಸ್ಯ ತದರ್ಥಸ್ಯಾಪಿ ಅತೀಂದ್ರಿಯತ್ವಾತ್	೫	೪೧
ನ ದೃಷ್ಟಾತ್ತತ್ಸಿದ್ಧಿರ್ನಿವೃತ್ತೇಽಪ್ಯನುವೃತ್ತಿದರ್ಶನಾತ್	೧	೨
ನ ದೇಶಭೇದೇಪ್ಯನ್ಯೋಪಾದಾನತಾಽಸ್ಮದಾದಿವನ್ನಿಯಮಃ	೫	೧೦೯
ನ ದೇಶಯೋಗತೋಽಪ್ಯಸ್ಮಾತ್	೧	೧೩
ನ ದೇಹಮಾತ್ರತಃ ಕರ್ಮಾಧಿಕಾರಿತ್ವಂ ವೈಶಿಷ್ಟ್ಯಶ್ರುತೇಃ	೫	೧೨೪
ನ ದೇಹಾರಂಭಕಸ್ಯ ಪ್ರಾಣತ್ವಮಿಂದ್ರಿಯ ಶಕ್ತಿತಸ್ತತ್ಸಿದ್ಧೇಃ	೫	೧೧೩
ನ ದ್ರವ್ಯನಿಯಮಸ್ತದ್ಯೋಗಾತ್	೫	೧೦೮
ನ ದ್ವಯೋರೇಕಕಾಲಯೋಗಾದುಪಕಾರ್ಯೋಪಕಾರಕಭಾವಃ	೧	೩೧
ನ ಧರ್ಮಾಪಲಾಪಃ ಪ್ರಕೃತಿಕಾರ್ಯವೈಚಿತ್ರ್ಯಾತ್	೫	೨೦
ನ ನಿತ್ಯತ್ವಂ ವೇದಾನಾಂ ಕಾರ್ಯತ್ವಶ್ರುತೇಃ	೫	೪೫
ನ ನಿತ್ಯಶುದ್ಧಬುದ್ಧಮುಕ್ತಸ್ವಭಾವಸ್ಯ ತದ್ಯೋಗಸ್ತದ್ಯೋಗಾದೃತೇ	೧	೧೯
ನ ನಿತ್ಯಃ ಸ್ಯಾದಾತ್ಮವದನ್ಯಥಾನುಚ್ಛಿತ್ತಿಃ	೬	೧೩
ನ ನಿಯಮಃ ಪ್ರಮಾಣಾಂತದವಕಾಶಾತ್	೫	೨೨
ನ ನಿರ್ಭಾಗತ್ವಂ ತದ್ಯೋಗಾದ್ ಘಟವತ್	೫	೨೧
ನ ನಿರ್ಭಾಗತ್ವಂ ಕಾರ್ಯತ್ವಾತ್	೫	೮೮
ನ ಪರಿಮಾಣಚಾತುರ್ವಿಧ್ಯಂ ದ್ವಾಭ್ಯಾಂ ತದ್ಯೋಗಾತ್	೫	೯೦
ನ ಪಾಂಚಭೌತಿಕಂ ಶರೀರಂ ಬಹೂನಾಮುಖಪಾದಾನಾಯೋಗಾತ್	೫	೧೦೨
ನ ಪೌರುಷೇಯತ್ವಂ ತತ್ಕರ್ತುಃ ಪುರುಷಸ್ಯಾಭಾವಾತ್	೫	೪೬
ನ ಪ್ರತ್ಯಭಿಜ್ಞಾಬಾಧಾತ್	೧	೩೫
ನ ಬಾಹ್ಯಬುದ್ಧಿನಿಯಮಃ	೫	೧೨೧
ನ ಬಾಹ್ಯಾಭ್ಯಂತರಯೋರುಪರಜ್ಯೋಪರಂ ಜಕಭಾವೋಽಪಿ ದೇಶವ್ಯವಧಾನಾತ್ ಸ್ರುಘ್ನಸ್ಥಪಾಟಲಿಪುತ್ರಸ್ಥಯೋರಿವ	೧	೨೮
ನ ಬೀಜಾಂಕುರವತ್ ಸಾದಿಸಂಸಾರಶ್ರುತೇಃ	೫	೧೫
ನ ಬುದ್ಧ್ಯಾದಿನಿತ್ಯತ್ವಮಾಶ್ರಯವಿಶೇಷೇಽಪಿ ವಹ್ನಿವತ್	೫	೧೨೭
ನ ಭಾಗಲಾಭೋ ಭೋಗಿನೋ ನಿರ್ಭಾಗತ್ವಶ್ರುತೇಃ	೫	೭೩
ನ ಭಾಗಿಯೋಗೋ ಭಾಗಸ್ಯ	೫	೮೧
ನ ಭಾವೇಭಾಗಯೋಗಶ್ಚೇತ್	೧	೧೧೯
ನ ಭೂತಚೈತನ್ಯಂ ಪ್ರತ್ಯೇಕಾದ್‌ದೃಷ್ಟೇಃ ಸಾಂಹಿತ್ಯೇಽಪಿ ಚ	೫	೧೩೦

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ನ ಭೂತಯೋಗೋಽಪಿ ಕೃತಕೃತ್ಯತೋಪಾಸ್ಯ ಸಿದ್ಧಿವದುಪಾಸ್ಯಸಿದ್ಧಿವತ್	೪	೩೨
ನ ಭೋಗಾದ್ರಾಗಶಾಂತಿರ್ಮುನಿವತ್	೪	೨೭
ನ ಮಲಿನಚೇತಸ್ಯುಪದೇಶಬೀಜಪ್ರರೋಹೋಽಜವತ್	೪	೨೯
ನ ಮುಕ್ತಸ್ಯ ಪುನರ್ಬಂಧಯೋಗೋಽಪ್ಯನಾವೃತ್ತಿಶ್ರುತೇಃ	೬	೧೭
ನ ಮುಕ್ತಾಮುಕ್ತಯೋರಯೋಗ್ಯತ್ವಾತ್	೫	೪೭
ನ ಯಜ್ಞಾದೇಃ ಸ್ವರೂಪತೋ ಧರ್ಮತ್ವಂ ವೈಶಿಷ್ಟ್ಯಾತ್	೫	೪೨
ನ ರಾಗಾದೃತೇ ತತ್ಸಿದ್ಧಿಃ ಪ್ರತಿನಿಯತಕಾರಣತ್ವಾತ್	೫	೩
ನ ರೂಪನಿಬಂಧನಾತ್ ಪ್ರತ್ಯಕ್ಷನಿಯಮಃ	೫	೮೯
ನ ನರ್ತಕೀವತ್ ಪ್ರವೃತ್ತಸ್ಯಾಪಿ ನಿವೃತ್ತಿಶ್ಚರಿತಾರ್ಥ್ಯಾತ್	೩	೬೯
ನ ವಯಂ ಷಟ್ಪದಾರ್ಥವಾದಿನೋ ವೈಶೇಷಿಕಾದಿವತ್	೧	೨೫
ನ ವಿಜ್ಞಾನಮಾತ್ರಂ ಬಾಹ್ಯಪ್ರತೀತೇಃ	೧	೪೨
ನ ವಿಶೇಷಗುಣೋಚ್ಛಿತ್ತಿಸ್ತದ್ವತ್	೫	೭೫
ನ ವ್ಯಾಪಕತ್ವಂ ಮನಸಃ ಕರಣತ್ವಾದಿಂದ್ರಿಯತ್ವಾತ್ ವಾ ವಾಸ್ಯಾದಿವಚ್ಚಕ್ಷುರಾದಿವತ್	೫	೬೯
ನ ಶಬ್ದನಿತ್ಯತ್ವಂ ಕಾರ್ಯತಾಪ್ರತೀತೇಃ	೫	೫೮
ನ ಶಿಲಾಪುತ್ರವದ್ಧರ್ಮಿಗ್ರಾಹಕಮಾನಬಾಧಾತ್	೬	೪
ನ ಶ್ರವಣಮಾತ್ರಾತ್ತತ್ಸಿದ್ಧಿರನಾದಿವಾಸನಾಯಾ ಬಲವತ್ತ್ವಾತ್	೨	೩
ನ ಶ್ರುತಿವಿರೋಧೋ ರಾಗಿಣಾಂ ವೈರಾಗ್ಯಾಯ ತತ್ಸಿದ್ಧೇಃ	೬	೫೧
ನ ಷಟ್ಪದಾರ್ಥನಿಯಮಸ್ತದ್ಬೋಧಾನ್ಮುಕ್ತಿಃ	೫	೮೫
ನ ಸಕೃದ್ಗ್ರಹಣಾತ್ ಸಂಬಂಧಸಿದ್ಧಿಃ	೫	೨೮
ನ ಸಂಜ್ಞಾ–ಸಂಜ್ಞಿ ಸಂಬಂಧೋಽಪಿ	೫	೯೬
ನ ಸತೋ ಬಾಧದರ್ಶನಾತ್	೫	೫೩
ನ ಸಂಬಂಧನಿತ್ಯತೋಭಯಾನಿತ್ವಾತ್ ನ ಸ್ಥೂಲಮಿತಿ ನಿಯಮ ಆತಿವಾಹಿಕಸ್ಯಾಪಿ ವಿದ್ಯಮಾನತ್ವಾತ್	೫	೯೭
ನ ಸಮವಾಯೋಽಸ್ತಿ ಪ್ರಮಾಣಾಭಾವಾತ್	೫	೯೯
ಸರ್ವೋಚ್ಛಿರಪುರುಷಾರ್ಥತ್ವಾದಿದೋಷಾತ್	೫	೭೮
ನ ಸಾಂಸಿದ್ಧಿಕಂ ಚೈತನ್ಯಂ ಪ್ರತ್ಯೇಕಾದೃಷ್ಟೇಃ	೩	೨೦
ನ ಸ್ಥಾನನಿಯವಶ್ಚಿತ್ತಪ್ರಸಾದಾತ್	೬	೩೧
ನ ಸ್ಥೂಲಮಿತಿನಿಯಮ ಆತಿವಾಹಿಕಸ್ಯಾಪಿ ವಿದ್ಯಮಾನತ್ವಾತ್	೫	೧೦೩
ನ ಸ್ವಭಾವತೋ ಬದ್ಧಸ್ಯ ಮೋಕ್ಷಸಾಧನೋಪದೇಶವಿಧಿಃ	೧	೭

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ನಾವಿದ್ಯಾತೋಽಪ್ಯವಸ್ತುನಾ ಬಂಧಯೋಗಾತ್	೧	೨೦
ನಾವಿದ್ಯಾಶಕ್ತಿಯೋಗೇ ನಿಃಸಂಗಸ್ಯ	೫	೧೩
ನಾಶಃ ಕಾರಣಲಯಃ	೧	೧೨೧
ನಾಶಕ್ಯೋಪದೇಶವಿಧಿರುಪದಿಷ್ಟೇಪ್ಯನುಪದೇಶಃ	೧	೯
ನಾಸತಃ ಖ್ಯಾನಂ ನೃಶೃಂಗವತ್	೫	೫೨
ನಾಸತೊತ್ಪಾದೋ ನೃಶೃಂಗವತ್	೧	೧೧೪
ನಾಸ್ತಿಹಿ ಸ್ಥಿರ ಏಕಾತ್ಮಾಯೋ ಗರ್ಭಾಧಾನಾದಿನಾ ಸಂಸ್ಕ್ರಿಯತೇ	೧	೩೩
ನಿಜಶಕ್ತ್ಯಭಿವ್ಯಕ್ತಿರ್ವಾ ವೈಶಿಷ್ಟ್ಯಾತ್ತದುಪಲಬ್ಧೇಃ	೫	೯೫
ನಿಜಮುಕ್ತಸ್ಯ ಬಂಧಧ್ವಂಸಮಾತ್ರಂ ಪರಂ ನ ಸಮಾನತ್ವಮ್	೧	೮೬
ನಿಜಶಕ್ತಿರ್ವ್ಯುತ್ಪತ್ತ್ಯಾ ವ್ಯವಚ್ಛಿದ್ಯತೇ	೫	೮೩
ನಿಜಶಕ್ತ್ಯಭಿವ್ಯಕ್ತೇಃ ಸ್ವತಃ ಪ್ರಾಮಾಣ್ಯಮ್	೫	೫೧
ನಿಜಶಕ್ತ್ಯುದ್ಭವಮಿತ್ಯಾಚಾರ್ಯಾಃ	೫	೩೧
ನಿತ್ಯತ್ವೇಽಪಿ ನಾತ್ಮನೋ ಯೋಗ್ಯತ್ವಾಭಾವಾತ್	೬	೩೩
ನಿತ್ಯಮುಕ್ತತ್ವಮ್	೧	೧೬೨
ನಿಮಿತ್ತತ್ವ ಮವಿವೇಕಸ್ಯೇತಿ ನ ದೃಷ್ಟಹಾನಿಃ	೩	೭೪
ನಿಮಿತ್ತವ್ಯಪದೇಶಾತ್ತದ್ವ್ಯಪದೇಶಃ	೫	೧೧೦
ನಿಯತಕಾರಣತ್ವಾನ್ನ ಸಮುಚ್ಚಯವಿಕಲ್ಪೌ	೩	೨೫
ನಿಯತಕಾರಣಾತ್ತದುಚ್ಛಿತ್ತಿರ್ಧ್ವಾಂತವತ್	೧	೫೬
ನಿಯತಧರ್ಮಸಾಹಿತ್ಯಮುಭಯೋರೇಕತರಸ್ಯ ವಾ ವ್ಯಾಪ್ತಿಃ	೫	೨೯
ನಿರಾಶಃ ಸುಖೀ ಪಿಂಗಲವತ್	೪	೧೧
ನಿರೋಧಶ್ಛರ್ದಿವಿಧಾರಣಾಭ್ಯಾಮ್	೩	೩೩
ನಿರ್ಗುಣತ್ವಮಾತ್ಮನೋಽಸಂಗತ್ವಾದಿಶ್ರುತೇಃ	೬	೧೦
ನಿರ್ಗುಣತ್ವಾತ್ ತದಸಂಭವಾದಹಂಕಾರಧರ್ಮಾ ಹ್ಯೇತೇ	೬	೬೨
ನಿರ್ಗುಣತ್ವಾನ್ನ ಚಿದ್ಧರ್ಮಾ	೧	೧೪೬
ನಿರ್ಗುಣತ್ವಾದಿಶ್ರುತಿ ವಿರೋಧಶ್ಚೇತಿ	೧	೫೪
ನಿಷ್ಕ್ರಿಯಸ್ಯ ತದಸಂಭವಾತ್	೧	೪೯
ನಿಃಸಂಗೋಽಪ್ಯುಪರಾಗೋಽವಿವೇಕಾತ್	೬	೨೭
ನೇತರಾದಿತರಹಾನೇನ ವಿನಾ	೩	೪೫
ನೇಂದ್ರಾದಿಪದಯೋಗೋಽಪಿ ತದ್ವತ್	೫	೮೩
ನೇಶ್ವರಾಧಿಷ್ಠತೇ ಫಲನಿಷ್ಪತ್ತಿಃ ಕರ್ಮಣಾ ತತ್ಸಿದ್ಧೇಃ	೫	೨

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ನೈಕಸ್ಯಾನಂದಚಿದ್ರೂಪತ್ವೇ ದ್ವಯೋರ್ಭೇದಾತ್	೫	೬೬
ನೈಕಾಂತತೋ ಬಂಧಮೋಕ್ಷೌ ಪುರುಷಸ್ಯಾವಿವೇಕಾದೃತೇ	೩	೭೧
ನೈರಪೇಕ್ಷ್ಯೇಽಪಿ ಪ್ರಕೃತ್ಯುಪರಾಗೇಽವಿವೇಕೋನಿಮಿತ್ತಂ	೩	೬೮
ನೌಪದೇಶಶ್ರವಣೇಽಪಿ ಕೃತಕೃತ್ಯತಾ ಪರಾಮರ್ಶಾದೃತೇ ವಿರೋಚನವತ್	೪	೧೭
ನೋಭಯಂ ಚ ತತ್ವಾಖ್ಯಾನೇ	೧	೧೦೭
ನೋಭಾಭ್ಯಾಂ ತೇನೈವ	೫	೬೩
ಪಂಚಾವಯವಯೋಗಾತ್ ಸುಖಸಂವಿತ್ತಿಃ	೫	೨೭
ಪರಧರ್ಮತ್ವೇಽಪಿ ತತ್ಸಿದ್ಧಿರವಿವೇಕಾತ್	೬	೧೧
ಪರಿಚ್ಛಿನ್ನಂ ನ ಸರ್ವೋಪಾದಾನಮ್	೧	೭೬
ಪರಿಮಾಣಾತ್	೧	೧೩೦
ಪಲ್ಲವಾದಿಷ್ವನುಪಪತ್ತೇಶ್ಚ	೫	೩೫
ಪಾಂಚಭೌತಿಕೋ ದೇಹಃ	೩	೧೭
ಪಾರಂಪರ್ಯತೋಽನ್ವೇಷಣಾ ಬೀಜಾಂಕುರವತ್	೧	೧೨೨
ಪಾರಂಪರ್ಯೇಣ ತತ್ಸಿದ್ಧೌ ವಿಮುಕ್ತಿಶ್ರುತೇಃ	೬	೫೮
ಪಾರಾರಂಪರ್ಯೇಪಿ ಪ್ರಧಾನಾನುವೃತ್ತಿರಣುವತ್	೬	೩೫
ಪಾರಂಪರ್ಯೇಪ್ಯೇಕತ್ರ ಪರಿನಿಷ್ಠೇತಿ ಸಂಜ್ಞಾಮಾತ್ರಂ	೧	೬೮
ಪಾರಿಭಾಷಿಕಾ ವಾ	೫	೫
ಪಿತಾಪುತ್ರವದುಭಯೋರ್ದೃಷ್ಟತ್ವಾತ್	೪	೪
ಪಿಶಾಚವದನ್ಯಾರ್ಥೋಪದೇಶೇಽಪಿ	೪	೨
ಪುತ್ರಕರ್ಮವದಿತಿ ಚೇತ್	೧	೩೨
ಪುರುಷಬಹುತ್ವಂ ವ್ಯವಸ್ಥಾತಃ	೫	೪೫
ಪುರುಷಾರ್ಥಂ ಕರಣೋದ್ಭವೋಪ್ಯದೃಷ್ಟೋಲ್ಲಾಸಾತ್	೨	೩೬
ಪುರುಷಾರ್ಥಂ ಸಂಸೃತಿರ್ಲಿಂಗಾನಾಂ ಸೂಪಕಾರವತ್ ರಾಜ್ಞಃ	೩	೧೬
ಪೂರ್ವಭಾವಿತ್ವೇ ದ್ವಯೋರೇಕತರಸ್ಯ ಹಾನೇಽನ್ಯತರಯೋಗಃ	೧	೭೫
ಪೂರ್ವಭಾವಮಾತ್ರೇ ನ ನಿಯಮಃ	೧	೪೧
ಪೂರ್ವಸಿದ್ಧಸತ್ತ್ವಸ್ಯಾಭಿವ್ಯಕ್ತಿರ್ದೀಪೇನೇವ ಘಟಸ್ಯ	೫	೫೯
ಪೂರ್ವಾಪಾಯೇ ಉತ್ತರಾಯೋಗಾತ್	೧	೩೯
ಪೂರ್ವೋತ್ಪತ್ತೇಸ್ತತ್ಕಾರ್ಯತ್ವಂ ಭೋಗಾದೇಕಸ್ಯ ನೇತರಸ್ಯ	೩	೮
ಪ್ರಕಾರಾಂತರಾಸಂಭವಾದವಿವೇಕ ಏವ ಬಂಧಃ	೬	೧೬
ಪ್ರಕಾರಾಂತರಸಂಭವಾತ್ ಸದುತ್ಪತ್ತಿಃ	೬	೫೩

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ಪ್ರಕಾಶತಸ್ತತ್ಸಿದ್ಧೌ ಕರ್ಮಕರ್ತೃವಿರೋಧಃ	೬	೪೯
ಪ್ರಕೃತಿನಿಬಂಧನಾಚ್ಚೇನ್ನ ತಸ್ಯಾ ಅಪಿ ಪಾರತಂತ್ರ್ಯಮ್	೧	೧೮
ಪ್ರಕೃತಿಪುರುಷಯೋರನ್ಯತ್ ಸರ್ವಮನಿತ್ಯಮ್	೫	೭೨
ಪ್ರಕೃತಿವಾಸ್ತವೇ ಚ ಪುರುಷಸ್ಯಾಧ್ಯಾಸಸಿದ್ಧಿಃ	೨	೫
ಪ್ರಕೃತಿರಾಂಜಸ್ಯಾತ್ ಸಸಂಗತ್ವಾತ್ ಪಶುವತ್	೩	೭೨
ಪ್ರಕೃತೇರಾದ್ಯೋಪಾದಾನತಾನ್ಯೇಷಾಂ ಕಾರ್ಯತ್ವಶ್ರುತೇಃ	೬	೩೨
ಪ್ರಣತಿ ಬ್ರಹ್ಮಚರ್ಯೋಪಸರ್ಪಣಾನಿ ಕೃತ್ವಾ ಸಿದ್ಧಿರ್ಬಹುಕಾಲಾತ್ ತದ್ವತ್	೪	೧೯
ಪ್ರತಿನಿಯತಕಾರಣನಾಶ್ಯತ್ವಮಸ್ಯಧ್ವಾಂತವತ್	೬	೧೪
ಪ್ರತಿಬಂಧ ದೃಶಃ ಪ್ರತಿಬದ್ಧಜ್ಞಾನಮಾನಮ್	೧	೧೦೦
ಪ್ರತೀತ್ಯಪ್ರತೀತಿಭ್ಯಾಂ ನ ಸ್ಫೋಟಾತ್ಮಕಃ ಶಬ್ದಃ	೫	೫೭
ಪ್ರಧಾನಶಕ್ತಿಯೋಗಾಚ್ಚೇತ್ ಸಂಗಾಪತ್ತಿಃ	೫	೮
ಪ್ರಧಾನಸೃಷ್ಟಿಃ ಪರಾರ್ಥಂ ಸ್ವೋಪ್ಯಭೋಕ್ತೃತ್ವಾತ್ ಉಷ್ಟ್ರಕುಂಕುಮವಹನವತ್	೩	೫೮
ಪ್ರಧಾನಾವಿವೇಕಾದನ್ಯಾವಿವೇಕಸ್ಯ ತದ್ಧಾನೇ ಹಾನಮ್	೧	೫೭
ಪ್ರಪಂಚಮರಣಾದ್ಯಭಾವಶ್ಚ	೩	೭೧
ಪ್ರಮಾಣಾಭಾವಾನ್ನ ತತ್ಸಿದ್ಧಿಃ	೫	೧೦
ಪ್ರಸಿದ್ಧಾಧಿಕ್ಯಂ ಪ್ರಧಾನಸ್ಯ ನ ನಿಯಮಃ	೬	೩೮
ಪ್ರಾತ್ಯಹಿಕಕ್ಷುತ್ ಪ್ರತೀಕಾರವತ್ ತತ್ಪ್ರತೀಕಾರಚೇಷ್ಟನಾತ್ ಪುರುಷಾರ್ಥತ್ವಮ್	೧	೩
ಪ್ರಾಪ್ತಾರ್ಥಪ್ರಕಾಶಲಿಂಗಾದ್ವೃತ್ತಿಸಿದ್ಧಿಃ	೫	೧೦೬
ಪ್ರೀತ್ಯಪ್ರೀತಿವಿಷಾದಾದ್ಯೈರ್ಗುಣಾನಾಮನ್ಯೋನ್ಯಂವೈಧರ್ಮ್ಯಂ	೧	೧೨೭
ಬಂಧೋ ವಿಪರ್ಯಯಾತ್	೩	೨೪
ಬಹುಭಿರ್ಯೋಗೇ ವಿರೋಧೋ ರಾಗಾದಿಭಿಃ ಕುಮಾರೀಶಂಖವತ್	೪	೯
ಬಹುಭೃತ್ಯವದ್ವಾ ಪ್ರತ್ಯೇಕಮ್	೨	೪
ಬಹುಶಾಸ್ತ್ರ ಗುರುರುಪಾಸನೇಽಪಿಸಾರಾದಾನಂ ಷಟ್ಪದವತ್	೪	೧೩
ಬಾಧಿಕಾನುವೃತ್ತ್ಯಾ ಮಧ್ಯವಿವೇಕತೋಽಪ್ಯುಪಭೋಗಃ	೩	೭೭
ಬಾಹ್ಯಾಭ್ಯಾಂತರಾಭ್ಯಾಂ ತೈಶ್ಚ ಅಹಂಕಾರಸ್ಯ ಭಾವನೋಪಚಯಾ ಚ್ಛುದ್ಧಸ್ಯ ಸರ್ವಂ ಪ್ರಕೃತಿವತ್	೧	೬೩
ಭಾಗಗುಣಾಭ್ಯಾಂ ತತ್ತ್ವಾಂತರಂ ವೃತ್ತಿಃ ಸಂಬಂಧಾರ್ಥಂ ಸರ್ಪತೀತಿ	೫	೧೦೭

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ಭಾವನೋಪಚಯಾಚ್ಛುದ್ಧಸ್ಯ ಸರ್ವಂಪ್ರಕೃತಿವತ್	೩	೨೯
ಭಾವೇ ತದ್ಯೋಗೇನ ತತ್ಸಿದ್ಧಿರಭಾವೇ ತದಭಾವಾತ್ ಕುತಸ್ತರಾಂ ತತ್ಸಿದ್ಧಿಃ	೧	೮೦
ಭೃತ್ಯದ್ವಾರಾ ಸ್ವಾಮ್ಯಾಧಿಷ್ಠಿತರ್ನೈಕಾಂತಾತ್	೫	೧೧೫
ಭೋಕ್ತೂರಧಿಷ್ಠಾನಾದ್ ಭೋಗಾಯತನನಿರ್ಮಾಣಮನ್ಯಥಾ ಪೂತಿಭಾವಪ್ರಸಂಗಾತ್	೫	೧೧೪
ಭೋಕ್ತೃಭಾವಾತ್	೧	೧೪೩
ಮಂಗಲಾಚರಣಂ ಶಿಷ್ಟಾಚಾರಾತ್ ಫಲದರ್ಶನಾತ್ ಶ್ರುತಿತಶ್ಚೇತಿ	೫	೧
ಮದಶಕ್ತಿವಚ್ಚೇತ್ ಪ್ರತ್ಯೇಕಪರಿದೃಷ್ಟೇ ಸಾಕ್ಷ್ಯಾತ್ ಸಾಂಹತ್ಯೇ ತದುದ್ಭವಃ	೩	೨೨
ಮಧ್ಯೇ ರಜೋವಿಶಾಲಾ	೩	೫೦
ಮಹತೋಽನ್ಯತ್	೬	೬೬
ಮಹದಾಖ್ಯಂ ಆದ್ಯಂ ಕಾರ್ಯಂ ತನ್ಮನಃ	೧	೭೧
ಮಹದಾದಿಕ್ರಮಣೇ ಪಂಚಭೂತಾನಾಂ	೨	೧೦
ಮಹದುಪರಾಗಾದ್ ವಿಪರೀತಮ್	೨	೧೫
ಮಾತಾ–ಪಿತೃಜಂ ಸ್ಥೂಲಂ ಪ್ರಾಯಶಃ ಇತರನ್ನ ತಥಾ	೩	೭
ಮುಕ್ತಬದ್ಧಯೋಃ ಅಂತರಾಭಾವಾನ್ನ ತತ್ಸಿದ್ಧಿಃ	೧	೯೩
ಮುಕ್ತಾತ್ಮನಃ ಪ್ರಶಂಗಾ ಉಪಾಸಾಸಿದ್ಧಿಸ್ಯ ವಾ	೧	೯೫
ಮುಕ್ತಿರಂತರಂತರಾಯಧ್ವಸ್ತೇರ್ನ ಪರಃ	೬	೨೦
ಮೂರ್ತತ್ವಾದ್‌ಘಟಾದಿವತ್ಸ ಮಾನಧರ್ಮಪತ್ತೌ ಅಪಸಿದ್ಧಾಂತಃ	೧	೫೦
ಮೂರ್ತತ್ವೇಽಪಿ ನ ಸಂಘಾತಯೋಗಾತ್ ತರಣಿವತ್	೩	೧೩
ಮೂಲೇಮೂಲಾಭಾವಾದಮೂಲಂ ಮೂಲಮ್	೧	೬೭
ಯತ್ಸಂಬದ್ಧಂ ಸತ್ತದಾಕಾರೋಲ್ಲೇಖಿ ವಿಜ್ಞಾನಂ ತತ್ಪ್ರತ್ಯಕ್ಷಮ್	೧	೮೯
ಯಥಾ ದುಃಖಂ ಕ್ಲೇಶಃ ಪುರುಷಸ್ಯ ನ ತಥಾ ಸುಖಾದಭಿಲಾಷಃ	೬	೬
ಯಸ್ಮಿನ್ನದೃಷ್ಟೇಽಪಿ ಕೃತಬುದ್ಧಿರುಪಜಾಯತೇ ತತ್ ಪೌರುಷೇಯಮ್	೬	೭೦
ಯುಕ್ತಿತೋಽಪಿ ನ ಬಾಧ್ಯತೇ ದಿಙ್ಮೂಢವದಪರೋಕ್ಷಾದೃತೇ	೧	೫೯
ಯುಗಪಜ್ಜಾಯಮಾನಯೋರ್ನ ಕಾರ್ಯಕಾರಣಭಾವಃ	೧	೩೮
ಯೋಗಸಿದ್ಧಯೋಪ್ಯೌಷಧಾದಿ ಸಿದ್ಧಿವನ್ನಾಪಾಲನೀಯಾಃ	೫	೧೨೯
ಯೋಗಿನಾಮಬಾಹ್ಯಪ್ರತ್ಯಕ್ಷತ್ವಾನ್ನದೋಷಃ	೧	೯೦
ಯೋಗ್ಯಾಯೋಗ್ಯೇಷು ಪ್ರತೀತಿಜನಕತವಾತ್ ತತ್ಸಿದ್ಧಿಃ	೫	೪೪

ಸೂತ್ರ	ಅಧ್ಯಾಯ	ಸೂತ್ರ ಸಂಖ್ಯೆ
ಸಾತ್ತ್ವಿಕಮೇಕಾದಶಕಂ ಪ್ರವರ್ತತೇ ವೈಕೃತಾದಹಂಕಾರಾತ್	೨	೧೮
ಸಾಮಾನ್ಯತೋದೃಷ್ಟಾದುಭಯಸಿದ್ಧಿಃ	೧	೧೦೩
ಸಾಮಾನ್ಯಕರಣವೃತ್ತಿಃ ಪ್ರಾಣಾದ್ಯವಯವಾಃ ಪಂಚ	೨	೩೧
ಸಾಮಾನ್ಯೇನ ವಿವಾದಾಭಾವಾದ್ ಧರ್ಮವನ್ನ ಸಾಧನಮ್	೧	೧೩೮
ಸಾಮ್ಯವೈಷಮ್ಯಾಭ್ಯಾಂ ಕಾರ್ಯದ್ವಯಮ್	೬	೪೨
ಸಿದ್ಧರೂಪಬೋದ್ಧೃತ್ವಾದ್ ವಾಕ್ಯಾರ್ಥೋಪದೇಶಃ	೧	೯೮
ಸಿದ್ಧಿರಷ್ಟಧಾ	೩	೪೦
ಸುಖಲಾಭಾऽಭಾವಾದಪುರುಷಾರ್ಥತ್ವಮಿತಿ ಚೇನ್ನ ದ್ವೈವಿಧ್ಯಾತ್	೬	೯
ಸುಷುಪ್ತ್ಯಾದ್ಯಸಾಕ್ಷಿತ್ವಮ್	೧	೧೪೮
ಸೌಕ್ಷ್ಮ್ಯಾತ್ತದುಪಲಬ್ಧಿಃ	೧	೧೦೯
ಸ್ಥಿರಕಾರ್ಯಾಸಿದ್ಧೇಃ ಕ್ಷಣಿಕತ್ವಮ್	೧	೩೪
ಸ್ಥಿರಸುಖಮಾಸನಮಿತಿ ನ ನಿಯಮಃ	೬	೨೪
ಸ್ಥಿರಸುಖಮಾಸನಮ್	೩	೩೪
ಸ್ಥೂಲಾತ್ಪಂಚತನ್ಮಾತ್ರಸ್ಯ	೧	೬೨
ಸ್ಮೃತೇಶ್ಚ	೫	೧೨೩
ಸ್ಮೃತ್ಯನುಮಾನಾಚ್ಚ	೨	೪೩
ಸ್ವಕರ್ಮಸ್ವಾಶ್ರಮವಿಹಿತ ಕರ್ಮಾನುಷ್ಠಾನಮ್	೩	೩೫
ಸ್ವಪ್ನ ಜಾಗರಾಭ್ಯಾಮಿವ ಮಾಯಿಕಾಮಾಯಿಕಾಭ್ಯಾಂ ನೋಭಯೋರ್ಮುಕ್ತಿಃ ಪುರುಷಸ್ಯ	೩	೨೬
ಸ್ವಭಾವಸ್ಯಾನಪಾಯಿತ್ವಾದನನುಷ್ಠಾನಲಕ್ಷಣಂ ಅಪ್ರಾಮಾಣ್ಯಮ್	೧	೮
ಸ್ವಭಾವಾಚ್ಚೇಷ್ಟಿತಂ ಅನಭಿಸಂಧಾನಾದ್ಭೃತ್ಯಮ್	೩	೬೧
ಸ್ವೋಪಕಾರಾದಧಿಷ್ಠಾನಂ ಲೋಕವತ್	೫	೩
ಹೇತುಮದನಿತ್ಯಂ ಸಕ್ರಿಯಮನೇಕಮಾಶ್ರಿತಂ ಲಿಂಗಮ್	೧	೧೨೪

ಅನುಬಂಧ ೨

ಪಾರಿಭಾಷಿಕ ಶಬ್ದಗಳು

ಅಖಂಡೋಪಾಧಿ	: ಅನಿರ್ವಚನೀಯವಾದ ಧರ್ಮ
ಅಧಿಗಮ	: ಜ್ಞಾನ
ಅಧಿಷ್ಠಾನ	: ಆಶ್ರಯ
ಅಧ್ಯಾಸ	: ಅಯಥಾರ್ಥಜ್ಞಾನ
ಅನವಸ್ಥಾ	: ಒಂದು ತರ್ಕದೋಷ, ಅನ್ವಯ ಮುಗಿಯದ ಹಂತ
ಅನಿರ್ವಚನೀಯ	: ಇದಮಿತ್ಥಂ ಎಂದು ನಿರ್ಣಯಿಸಲಾಗದ್ದು
ಅನುಯೋಗಿ	: ವಿಶೇಷವಾದ ಸಂಯೋಗಸಂಬಂಧ. ಘಟಾಭಾವಕ್ಕೆ ಭೂತಲವು ಅನುಯೋಗಿ
ಅಂಧತಾಮಿಸ್ರ	: ಮೈಮರೆತು ಜೀವನದಲ್ಲಿ ತೊಡಗುವುದು
ಅನ್ಯಥಾಖ್ಯಾತಿ	: ಯಥಾರ್ಥವಲ್ಲದ ಅನುಭವ
ಅನ್ಯಥಾಸಿದ್ಧ	: ಬೇರೆಯ ರೀತಿಯಲ್ಲಿ ದೃಢಪಡಿಸುವುದು
ಅಪವರ್ಗ	: ಅತ್ಯಂತ ದುಃಖ ನಿವೃತ್ತಿ
ಅಪಸಿದ್ಧಾಂತ	: ಸಿದ್ಧಾಂತಕ್ಕೆ ನಿಯಮವಿಲ್ಲದೆ ಹೇಳುವುದು
ಅಪೃಥಕ್‌ಸಿದ್ಧಿ	: ಭಿನ್ನವಾಗದ ಸಂಬಂಧ
ಅಪೇಕ್ಷಾಬುದ್ಧಿ	: ಸಮೂಹದಲ್ಲಿ ಒಂದೊಂದಾಗಿ ಅರಿಯುವುದು
ಅಭ್ಯುಪಗಮ	: ಪರೀಕ್ಷಿಸಿ ದೃಢ ಪಡಿಸಿಕೊಳ್ಳುವುದು
ಅವಿವೇಕ	: ಮಿಥ್ಯಾಜ್ಞಾನ
ಅವಿದ್ಯಾ	: ಜ್ಞಾನಾಭಾವ
ಅವ್ಯಭಿಚಾರ	: ಸಾಧ್ಯದ ಅಭಾವವಿಲ್ಲದಿರುವುದು
ಅಸತ್	: ವಸ್ತುವಿಲ್ಲದಿರುವಿಕೆ
ಅವ್ಯಕ್ತ	: ಸೂಕ್ಷ್ಮವಾದ ಮೂಲಕಾರಣ
ಅಸಂಪ್ರಜ್ಞಾತ	: ಯಥಾರ್ಥಜ್ಞಾನಕ್ಕೆ ವಿಷಯವಲ್ಲದ್ದು
ಆರಂಭವಾದ	: ಕಾರಣದಿಂದ ಕಾರ್ಯ ಉಂಟಾಗುವುದೆಂಬ ಭಾವ
ಇಂದ್ರಿಯವೃತ್ತಿ	: ಇಂದ್ರಿಯ ವ್ಯಾಪಾರ
ಉಪದೇಶ	: ಅನುಶಾಸನ
ಉಪಾದಾನ	: ಮೂಲದ್ರವ್ಯ
ಉಪಾಧಿ	: ವಿಶೇಷಣ, ಧರ್ಮ

ಉಪಾಸನಾ	: ಆರಾಧನೆ
ಕರಣ	: ಇಂದ್ರಿಯ
ಕರ್ಮವಿಶೇಷ	: ಭೋಗಹೇತುಗಳಾದ ಕರ್ಮಗಳು
ಕಾರಣ	: ಕಾರ್ಯವನ್ನುಂಟುಮಾಡುವ ದ್ರವ್ಯ
ಖ್ಯಾತಿ	: (ಐದು ಬಗೆಯಲ್ಲಿ) ತಿಳಿಯುವ ಪ್ರಕಾರಗಳು
ಚಿತ್ತವೃತ್ತಿ	: ವಿಷಯವನ್ನು ಗ್ರಹಿಸುವ ಮನಸ್ಸಿನ ವ್ಯಾಪಾರ
ಚೇತನ	: ಜಡವಲ್ಲದ್ದು, ಚೈತನ್ಯವುಳ್ಳದ್ದು
ತಮಸ್	: ತಮೋಗುಣ
ತನ್ಮಾತ್ರ	: ಪಂಚಭೂತಗಳ ಸೂಕ್ಷ್ಮರೂಪಗಳು
ತಾದಾತ್ಮ್ಯ	: ಅಭೇದ
ತೈಜಸ ಧರ್ಮ	: ತಮೋಗುಣ
ನಿಮಿತ್ತ	: ನಿಯತಕಾರಣ
ನಿರ್ವಿಕಲ್ಪಕ	: ವೈಶಿಷ್ಟ್ಯಗಳನ್ನು ಗ್ರಹಿಸದ ಜ್ಞಾನ
ಪದಾರ್ಥ	: ಶಬ್ದದಿಂದ ನಿರೂಪಿಸಲ್ಪಟ್ಟ ವಸ್ತು
ಪರಿಣಾಮ	: ದ್ರವ್ಯವು ತನ್ನ ಮೊದಲ ಸ್ವರೂಪವನ್ನು ಕಳೆದು ಬೇರೊಂದನ್ನು ಪಡೆಯುವುದು
ಪುರುಷಾರ್ಥ	: ಪುರುಷನ ಗುರಿ
ಪ್ರಕೃತಿ	: ಸತ್ತ್ವಾದಿಗುಣಗಳ ಸಾಮ್ಯಾವಸ್ಥೆ
ಪ್ರಚಯ	: ಸಡಿಲವಾದ ಸಂಯೋಗ
ಪ್ರತಿಯೋಗಿ	: ವಸ್ತುವಿನ ಅಭಾವಕ್ಕೆ ವಿರುದ್ಧವಾದ ಕಲ್ಪನೆ
ಪ್ರತ್ಯಭಿಜ್ಞಾನ	: ಕಳೆದುಹೋದ ಅವಸ್ಥೆಯನ್ನು ಮತ್ತೆ ಗ್ರಹಿಸುವುದು
ಪ್ರಧಾನ	: ಮೂಲ ಪ್ರಕೃತಿ
ಪ್ರಮಾ	: ವಸ್ತುಗಳ ಯಥಾರ್ಥ ಜ್ಞಾನ
ಪ್ರಮಾಣ	: ವಸ್ತುಗಳನ್ನು ಸರಿಯಾಗಿ ಅರಿಯುವ ಜ್ಞಾನ
ಪ್ರಮೇಯ	: ಯಥಾರ್ಥವಾಗಿ ಅರಿಯಬಹುದಾದ ವಸ್ತುಗಳು
ಬಂಧ	: ಅವಿದ್ಯೆಯಿಂದುಂಟಾಗುವ ಸಾಂಸಾರಿಕ ಬಂಧನ
ಬಾಧಾ	: ನಿಷೇಧ
ಬುದ್ಧಿ	: ಮಹತ್ತತ್ತ್ವ, ನಿರ್ಧಾರ ತೆಗೆದುಕೊಳ್ಳುವ ಅಂತಃಕರಣ
ಭೋಕ್ತಾ	: ಅವಿದ್ಯೆಯಿಂದ ಆರೋಪಿತನಾದ ಪುರುಷ
ಮೂಲ ಪ್ರಕೃತಿ	: ಪ್ರಕೃತಿಯ ಅವಿಕಾರಿಯಾದ ಅವಸ್ಥೆ
ಲಿಂಗ	: ಹೇತುವೇ ಮೊದಲಾದ ಧರ್ಮವುಳ್ಳದ್ದು
ಲಿಂಗಶರೀರ	: ಸೂಕ್ಷ್ಮಶರೀರ
ವಾಸನಾ	: ಸ್ಮೃತಿಗೆ ಕಾರಣವಾದ ಸಂಸ್ಕಾರ
ವಿಪಕ್ಷ	: ಸಾಧ್ಯದ ಅಭಾವವುಳ್ಳದ್ದು

ವಿಪರ್ಯಯ	: ತಪ್ಪುಗ್ರಹಿಕೆ (ಇದು ಐದು ಬಗೆ)
ವೃತ್ತಿ	: ಇಂದ್ರಿಯಾದಿಗಳ ವ್ಯಾಪಾರ
ವ್ಯಾಪ್ತಿ	: ವಿಶೇಷವಾದ ಸಂಬಂಧದಿಂದ ಕೂಡಿರುವುದು, ಸಾಹಚರ್ಯ ನಿಯಮ
ವ್ಯಪದೇಶ	: ಶಬ್ದಪ್ರಯೋಗ, ತಿಳಿಸುವುದು
ವ್ಯಾಪಕತ್ವ	: ಧೂಮದಿಂದ ಅಗ್ನಿಯಿದೆ ಎಂದು ಮುಂತಾಗಿ ತಿಳಿಸುವ ಬಗೆ
ಶಕ್ತಿ	: ಶಬ್ದದಲ್ಲಿ ಅಡಗಿರುವ ಮುಖ್ಯವೃತ್ತಿ
ಸಂಘಾತ	: ಒಡಸಿರುವುದು
ಸತ್ವ	: ಲಘುವೂ ಪ್ರಕಾಶಕವೂ ಆದ ಗುಣ
ಸಹಕಾರಿತ್ವ	: ಬೇರೆಯಾಗಿದ್ದು ಸಹಾಯ ಮಾಡುವ ವಸ್ತು
ಸವಿಕಲ್ಪಕ	: ವೈಶಿಷ್ಟ್ಯಗಳನ್ನು ಗ್ರಹಿಸಬಲ್ಲ ಜ್ಞಾನ
ಸಾಂಸಿದ್ಧಿಕ	: ಸ್ವಾಭಾವಿಕವಾದುದು
ಸ್ಫೋಟ	: ಪದದಲ್ಲಿ ವರ್ಣೋಚ್ಚಾರಣೆಯ ಪ್ರಾಧಾನ್ಯ
ಹೇತು	: ನೆನಪನ್ನುಂಟುಮಾಡುವುದು

ಅನುಬಂಧ ೩

ಸಾಂಖ್ಯಶಾಸ್ತ್ರದ ಅಧ್ಯಯನಕ್ಕೆ ಉಪಯುಕ್ತವಾದ ಗ್ರಂಥಗಳು

1. Simha, Nandalal - **'The Sankhya Philosophy'**, Munshiram Manoharlal Publications, Pvt. Ltd., Allahabad, 1915.
2. Mulgavkar, Gajanana Sastri - **'Sānkhyadarśanam'**, Chowkhamba Samskrit Samsthan, Varanasi, 2009.
3. Dasgupta, S.N. - **'History of Indian Philosophy'**, Vol. III, Cambridge University, 1940.
4. Garbe, Richard - **'The Sānkhya Philosophy'**, Trans. R.D. Vadekar, Poona.
5. Keith, A.B. - **'The Sānkhya System'**, Oxford University Press, London, 1918.
6. Chakravarthi, P. - **'Origin and Development of Sankhya System of Thought'**, Metropolitan Printing and Publishing House, Calcutta, 1951.
7. Bhattacharya, K.C. - **'Studies in Philosophy'**, Ed. by Gopinath Bhattacharya, Progressive Publishers, Calcutta, 1956.
8. Sastry, Suryanarayana - **'Sānkhya Kārikā'**, University of Madras, Madras, 1935.
9. Sharma, Haradatta - 'Tattvakaumudi', Oriental Book Agency, Poona, 1934.
10. Pandurangi, K.T. - **'Sānkhyakārikā'**, (Ed.) Dvaita Vedanta Studies and Research Foundation, Bangalore, 2012.
11. Rao, Ramakrishna K.B. - **Theism in Preclassical Sankhya**, Prasaranga, University of Mysore, Mysore, 1966.

ಪ್ರಸಾರಾಂಗದ ಪ್ರಕಟಣೆಗಳು

ಪ್ರಾಚ್ಯಗ್ರಂಥ ಅನುವಾದ ಮಾಲೆ (ಕನ್ನಡ)

೧. **ಆಚಾರ್ಯ ಭರ್ತೃಹರಿ ಪ್ರಣೀತ ವಾಕ್ಯಪದೀಯ**; ಅನು: ವಿದ್ವಾನ್ ಎನ್. ರಂಗನಾಥಶರ್ಮಾ; ಪುಟಗಳು: ೩೨೮; ಬೆಲೆ: **ರೂ. ೨೫೦/–**

೨. **ಆಚಾರ್ಯ ಮಹಿಮಭಟ್ಟ ಪ್ರಣೀತ ವ್ಯಕ್ತಿವಿವೇಕ**; ಅನು: ವಿದ್ವಾನ್ ಎಚ್.ವಿ. ನಾಗರಾಜರಾವ್; ಪುಟಗಳು: ೫೨೦; ಬೆಲೆ: **ರೂ. ೩೫೦/–**

೩. **ಧ್ವನ್ಯಾಲೋಕ ಮತ್ತು ಲೋಚನ**; ಅನು: ಪ್ರೊ. ಎಂ.ಎ. ಹೆಗಡೆ; ಪುಟಗಳು: ೫೬೦; ಬೆಲೆ: **ರೂ. ೪೦೦/–**

೪. **ಶ್ರೀಸೋಮೇಶ್ವರಭೂಪತಿ ವಿರಚಿತ ಮಾನಸೋಲ್ಲಾಸ** (೫ ಸಂಪುಟಗಳು); ಸಂ.: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ; ಬೆಲೆ: **ರೂ. ೨೧೦೦/–**(೫ ಸಂಪುಟಗಳು ಸೇರಿ)

ಕರ್ನಾಟಕ ಸಾರಸ್ವತೋಪಾಸಕರು (ಸಂಸ್ಕೃತ)

೧. **ಜಗ್ಗು ಶಿಂಗರಾರ್ಯಃ**; ಲೇ: ಡಾ. ಎಚ್.ಆರ್. ವಿಶ್ವಾಸ್; ಪುಟಗಳು: ೮೪; ಬೆಲೆ: **ರೂ. ೫೦/–**

೨. **ಪಡಮುನ್ನೂರು ನಾರಾಯಣಾಚಾರ್ಯಃ**; ಲೇ: ಪದ್ಮಶ್ರೀ ಡಾ. ಬನ್ನಂಜೆ ಗೋವಿಂದಾಚಾರ್ಯ; ಪುಟಗಳು: ೫೮; ಬೆಲೆ: **ರೂ. ೫೦/–**

೩. **ಮಂಡಿಕಲ್ ರಾಮಶಾಸ್ತ್ರಿ**; ಲೇ: ವಿದ್ವಾನ್ ವಿ. ಗಂಗಾಧರ ಭಟ್ಟ; ಪುಟಗಳು: ೩೦; ಬೆಲೆ: **ರೂ. ೫೦/–**

೪. **ಬಸವಪ್ಪಶಾಸ್ತ್ರಿ**; ಲೇ: ವಿದ್ವಾನ್ ಎಚ್.ವಿ. ನಾಗರಾಜರಾವ್; ಪುಟಗಳು: ೮೦; ಬೆಲೆ: **ರೂ. ೫೦/–**

೫. **ಹಾನಗಲ್ ಶ್ರೀ ವಿರೂಪಾಕ್ಷಶಾಸ್ತ್ರಿ**; ಲೇ: ಡಾ. ಹಿತ್ಲಹಳ್ಳಿ ಸೂರ್ಯನಾರಾಯಣ ನಾಗೇಂದ್ರ ಭಟ್ಟ; ಪುಟಗಳು: ೭೫; ಬೆಲೆ: **ರೂ. ೫೦/–**

ಸಂಸ್ಥಾಪನಾ ವಿಶೇಷೋಪನ್ಯಾಸ ಪುಸ್ತಕಮಾಲೆ

೧. **ಭಾರತೀಯ ಮನಶ್ಶಾಸ್ತ್ರಸ್ಯ ಮೂಲತತ್ವಾನಿ**; ಲೇ: ಪದ್ಮಶ್ರೀ ಡಾ. ಬನ್ನಂಜೆ ಗೋವಿಂದಾಚಾರ್ಯ; ಪುಟಗಳು: ೧೬; ಬೆಲೆ: **ರೂ. ೧೦/–**

೨. **ನಾಟ್ಯಶಾಸ್ತ್ರಗೌರವಮ್**; ಲೇ: ಆಚಾರ್ಯ ರಾಧಾವಲ್ಲಭ ತ್ರಿಪಾಠಿ; ಪುಟಗಳು: ೨೮; ಬೆಲೆ: **ರೂ. ೧೦/–**

ಪ್ರಾಚ್ಯಪ್ರಬಂಧಮಾಲೆ

೧. **ಭಾಷಾತಂತ್ರಮ್**; ಲೇ: ಡಾ. ಆರ್. ಶಾಮಶಾಸ್ತ್ರಿ; ಸಂ.: ಪ್ರೊ. ಶ್ರೀನಿವಾಸ ವರಖೇಡಿ; ಪುಟಗಳು: ೩೨; ಬೆಲೆ: **ರೂ. ೨೦/–**